ಆದಿಕವಿ ಶ್ರೀವಾಲ್ಮೀಕಿಮಹಾಮುನಿವಿರಚಿತ

ರಾಮಾಯಣ

ಬಾಲಕಾಂಡ

ಕನ್ನಡ ಅನುವಾದ ಸಹಿತ

ಕಾಕಪಕ್ಷಧರಂ ದೇವಂ ವನಮಾಲಾವಿಭೂಷಿತಮ್ । ಶ್ರೀರಾಮಂ ಬಾಲಕಂ ಧ್ಯಾಯೇತ್ ಬಾಲಕಾಂಡೇ ಮುನಿಪ್ರಿಯಂ ॥

ವಾಲ್ಮೀಕಿರಾಮಾಯಣ

ಬಾಲಕಾಂಡ

ಕನ್ನಡ ಅನುವಾದಸಹಿತ

ಸಮಗ್ರ ವಾಲ್ಮೀಕಿರಾಮಾಯಣ ಕನ್ನಡ ಅನುವಾದ ಯೋಜನೆ

ಅನುಗ್ರಹ

ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು

ಶ್ರೀಮದುತ್ತರಾದಿಮಠ

ಸಂಪಾದಕರು

ಡಾ. ವಿದ್ವಾನ್ ಸತ್ಯಧ್ಯಾನಾಚಾರ್ಯ ಕಟ್ಟಿ

ಅಧ್ಯಕ್ಷರು, ದ್ವೈತವೇದಾಂತ ಪ್ರತಿಷ್ಠಾನ

ಅನುವಾದಕರು

ಪಂ. ಹಯವದನ ಪುರಾಣಿಕರು

ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರು

This Volume is published with the grant from Govt. of Karnataka

ಪ್ರಕಾಶಕರು

ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನ ಪ್ರತಿಷ್ಠಾನ

(ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದೆ)

ಬೆಂಗಳೂರು-560 004.

ವಾಲ್ಮೀಕಿರಾಮಾಯಣ

ಬಾಲಕಾಂಡ

ಕನ್ನಡ ಅನುವಾದಸಹಿತ

ಸಮಗ್ರ ವಾಲ್ಮೀಕಿರಾಮಾಯಣ ಕನ್ನಡ ಅನುವಾದ ಯೋಜನೆ

ಅನುಗ್ರಹ

ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು

ಶ್ರೀಮದುತ್ತರಾದಿಮಠ

ಸಂಪಾದಕರು

ಡಾ. ವಿದ್ವಾನ್ ಸತ್ಯಧ್ಯಾನಾಚಾರ್ಯ ಕಟ್ಟಿ

ಅಧ್ಯಕ್ಷರು, ದ್ವೈತವೇದಾಂತ ಪ್ರತಿಷ್ಠಾನ

ಅನುವಾದಕರು

ಪಂ. ಹಯವದನ ಪುರಾಣಿಕರು

ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರು

This Volume is published with the grant from Govt. of Karnataka

ಪ್ರಕಾಶಕರು

ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನ ಪ್ರತಿಷ್ಠಾನ

(ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದೆ)

ಬೆಂಗಳೂರು-560 004.

ವಾಲ್ಮೀಕಿರಾಮಾಯಣ

ಬಾಲಕಾಂಡ

ಕನ್ನಡ ಅನುವಾದಸಹಿತ

ಸಮಗ್ರ ವಾಲ್ಮೀಕಿರಾಮಾಯಣ ಕನ್ನಡ ಅನುವಾದ ಯೋಜನೆ

ಅನುಗ್ರಹ

ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು

ಶ್ರೀಮದುತ್ತರಾದಿಮಠ

ಸಂಪಾದಕರು

ಡಾ. ವಿದ್ವಾನ್ ಸತ್ಯಧ್ಯಾನಾಚಾರ್ಯ ಕಟ್ಟಿ

ಅಧ್ಯಕ್ಷರು, ದ್ವೈತವೇದಾಂತ ಪ್ರತಿಷ್ಠಾನ

ಅನುವಾದಕರು

ಪಂ. ಹಯವದನ ಪುರಾಣಿಕರು

ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರು

This Volume is published with the grant from Govt. of Karnataka

ಪ್ರಕಾಶಕರು

ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನ ಪ್ರತಿಷ್ಠಾನ

(ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದೆ)

ಬೆಂಗಳೂರು-560 004.

Vālmiki Rāmāyaṇa - Bālakāṇḍa

Published by	**Dvaita Vedanta Studies & Research Foundation** No.11, Uttaradi Matha Compound, Basavanagudi, Bengaluru-560 004. Phone : **080 - 7968 9974** email : dvfbangalore@gmail.com

Edition	Year	Copies	Total
First	2023	1,000	1,000

No. of pages : xcviii + 500

©	Publisher
Price.	**Rs. 2000/- (set of 10 books)**
Cover Design by	K M Sheshagiri

Copies can be had from

Dvaita Vedanta Studies and Research Foundation

No.11, Uttaradi Matha Compound,
Basavanagudi, Bengaluru-560 004.
Phone : 080-79689974

★ ಸಮಗ್ರ ವಾಲ್ಮೀಕಿರಾಮಾಯಣ ★

ಕನ್ನಡ ಅನುವಾದ ಯೋಜನೆಯ ಕಾರ್ಯಕಾರಿ ಸಮಿತಿ

ಅಧ್ಯಕ್ಷರು	ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ
ಸದಸ್ಯರು	ಡಾ. ಕಾಂತೇಶಾಚಾರ್ಯ ಕದರಮಂಡಲಗಿ
	ಡಾ. ಎ.ಬಿ.ಶ್ಯಾಮಾಚಾರ್ಯ
	ಡಾ. ಎಸ್.ಆರ್.ಪಾಂಡುರಂಗಿ

Typeset and Printed at : **VAGARTHA**
Hanumantha Nagar Bangalore 19. Ph.22427677

॥ ಶ್ರೀಃ ॥

॥ ಶ್ರೀಮೂಲರಾಮದಿಗ್ವಿಜಯರಾಮವೇದವ್ಯಾಸಾಃ ವಿಜಯಂತೇ ॥



ಯದನುಗ್ರಹತಃ ಸರ್ವದಿಗ್ವಿಜಯೋ ಭವತೀಪ್ಸಿತಃ ।
ನಮಾಮ್ಯಹಂ ದಿಗ್ವಿಜಯರಾಮಂ ಪೂರ್ಣಧಿಯಾऽರ್ಚಿತಮ್ ॥

ವಂದೇ ಮಂದೇತರಾನಂದಂ ದಶಸ್ಯಂದನನಂದನಮ್ ।
ಶುಭಲೀಲಜಗನ್ಮೂಲರಾಮಂ ಪೂರ್ಣಧಿಯಾऽರ್ಚಿತಮ್ ॥

॥ ಶ್ರೀದಿಗ್ವಿಜಯರಾಮೋ ವಿಜಯತೇ ॥

ಶ್ರೀಮಜ್ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನ

ಶ್ರೀಮದುತ್ತರಾದಿಮಠಾಧೀಶರಾದ

ಶ್ರೀ 1008 ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರ

ಅನುಗ್ರಹ ಸಂದೇಶ

ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥

ಸರ್ವೋತ್ತಮನಾದ ಶ್ರೀರಾಮಚಂದ್ರನ ಗುಣಗಳನ್ನು ವರ್ಣನೆ ಮಾಡುವುದಕ್ಕೋಸ್ಕರ ಹೊರಟದ್ದು ಶ್ರೀವಾಲ್ಮೀಕಿ ರಾಮಾಯಣ.

'ಕೋऽನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್।'

ಸಕಲಜಗತ್ತಿನಲ್ಲಿ ಗುಣಪರಿಪೂರ್ಣನಾದ ವ್ಯಕ್ತಿ ಯಾರು ? ಎಂಬ ಚಿಂತನೆ ಬಂದಾಗ, **''ಆ ಗುಣಪೂರ್ಣನಾದ ವ್ಯಕ್ತಿ ಶ್ರೀರಾಮಚಂದ್ರನೇ''** ಎಂಬುದಾಗಿ ನಾರದರು ವಾಲ್ಮೀಕಿ ಮಹರ್ಷಿಗಳಿಗೆ ಉಪದೇಶ ಮಾಡುತ್ತಾರೆ. ಅಂತಹ ಉಪದೇಶಕ್ಕನುಗುಣವಾಗಿ ಶ್ರೀರಾಮಚಂದ್ರನ ಮಹಿಮೆಯನ್ನು ಬ್ರಹ್ಮದೇವರ ವಿಶೇಷ ಅನುಗ್ರಹದಿಂದ ವಾಲ್ಮೀಕಿ ಮಹರ್ಷಿಗಳು ೨೪ ಸಾವಿರ ಶ್ಲೋಕಗಳಲ್ಲಿ ಅತ್ಯಂತ ವಿಸ್ತೃತವಾಗಿ ನಿರೂಪಣೆ ಮಾಡಿದ್ದಾರೆ.

ಒಬ್ಬ ಆದರ್ಶ ಪುತ್ರನಾಗಿ ಹೇಗಿರಬೇಕು, ಒಬ್ಬ ಆದರ್ಶ ತಂದೆಯಾಗಿ, ಒಬ್ಬ ಆದರ್ಶ ಪತಿಯಾಗಿ, ಒಬ್ಬ ಆದರ್ಶ ರಾಜನಾಗಿ, ಒಬ್ಬ ಆದರ್ಶ ಮಿತ್ರನಾಗಿ, ಒಬ್ಬ ಆದರ್ಶ ಶತ್ರುವಾಗಿ ಕೂಡ ಹೇಗಿರಬೇಕು ಎಂದು ಜಗತ್ತಿಗೆ ತೋರಿಸಿಕೊಟ್ಟ ಮಹಾನುಭಾವ ಪ್ರಭು ಶ್ರೀರಾಮಚಂದ್ರ. ಅಂತಹ ಶ್ರೀರಾಮಚಂದ್ರನ ಅದ್ಭುತವಾದ ವರ್ಣನೆಯನ್ನು ವಾಲ್ಮೀಕಿ ರಾಮಾಯಣ ಮಾಡುತ್ತದೆ.

ಅದರಂತೆ ಒಬ್ಬ ಸ್ತ್ರೀ ಯಾವ ರೀತಿ ಇರಬೇಕು ಅನ್ನುವುದನ್ನು ಆದರ್ಶ ಪತಿವ್ರತಾಸ್ತ್ರೀಯ ಪಾತ್ರದಲ್ಲಿ ಸೀತಾದೇವಿಯ ದಿವ್ಯವಾದ ಚರಿತ್ರೆಯನ್ನು ನಿರೂಪಣೆ ಮಾಡಿದೆ ವಾಲ್ಮೀಕಿ ರಾಮಾಯಣ. ಯಾವುದೇ ತರಹದ ಸುಖದ ಅಪೇಕ್ಷೆಪಡದಂತೆ, ಮದುವೆಯಾದ ಕೆಲವೇ ದಿನಗಳಲ್ಲಿ ವನವಾಸಕ್ಕೆ ಹೋಗುವಂತಹ ಪ್ರಸಂಗ ಬಂದರೂ ಸಹ, ಮನಸ್ಸಿನಲ್ಲಿ ಸ್ವಲ್ಪವೂ ವ್ಯಗ್ರತೆ ಇಲ್ಲದಂತೆ, ಧೈರ್ಯದಿಂದ, ಸ್ಥೈರ್ಯದಿಂದ, ತಾನು ವನಕ್ಕೆ ಹೋಗುವ ಅಗತ್ಯ ಇಲ್ಲದಿದ್ದರೂ ಸಹ ವನಕ್ಕೆ ಹೋಗುವ ನಿರ್ಧಾರವನ್ನು ತೆಗೆದುಕೊಂಡು, ಒಬ್ಬ ಆದರ್ಶ ಪತಿವ್ರತಾಸ್ತ್ರೀ ಹೇಗಿರಬೇಕು ಎನ್ನುವುದನ್ನು ಜಗತ್ತಿಗೆ ಸಾರಿತೋರಿಸಿದವಳು ಮಹಾತಾಯಿ ಸೀತಾದೇವಿ. ಅಂತಹ ಸೀತೆಯ ಆದರ್ಶವನ್ನು ಜಗತ್ತಿಗೆ ತೋರಿಸಿಕೊಟ್ಟದ್ದು ಶ್ರೀರಾಮಾಯಣ.

ಒಬ್ಬ ತಮ್ಮ ತನ್ನ ಅಣ್ಣನ ಸೇವೆಯನ್ನು ಹೇಗೆ ಮಾಡಬೇಕು, ತನ್ನಲ್ಲಿ ಎಷ್ಟೇ ಶಕ್ತಿಯಿದ್ದರೂ ಗುಣಗಳಿದ್ದರೂ ಸಹ ತಾನು ತನಗಿಂತಲೂ ಹಿರಿಯರನ್ನು ದೊಡ್ಡವರನ್ನು ಗೌರವದಿಂದ ಆದರದಿಂದ ವಿನಯದಿಂದ ಹೇಗೆ ಸೇವೆ ಮಾಡಬೇಕು, ಹೇಗೆ ಅನುವರ್ತಿಯಾಗಿರಬೇಕು, ಅದರಿಂದಲೇ ಕುಟುಂಬ–ರಾಜ್ಯ –ಸಮಾಜ ಎಲ್ಲವೂ ಸುಖವಾಗಿರಲು ಸಾಧ್ಯ, ಕಿರಿಯರು ಹಿರಿಯರಿಗೆ ಆದರ–ಗೌರವಗಳನ್ನು ತೋರಿಸದಿದ್ದರೆ, ವಿನಯದಿಂದ ಅವರ ಜೊತೆ ವರ್ತನೆ ಮಾಡದೇ ಎದುರು ಮಾತನಾಡಿ ತನ್ನದೇ ಆದ ಪ್ರತಿಷ್ಠೆಯನ್ನು ತೋರಿಸಿಕೊಳ್ಳಬೇಕು ಎಂಬ ಅಪೇಕ್ಷೆಯನ್ನು ಇಟ್ಟುಕೊಂಡಾಗ ಕಲಹ ಸಹಜವಾಗಿಯೇ ಬಂದು ಕುಟುಂಬಕ್ಕೂ ರಾಜ್ಯಕ್ಕೂ ಸಮಾಜಕ್ಕೂ ದೊಡ್ಡ ಹಾನಿಯಾಗುವುದರಲ್ಲಿ ಯಾವ ಸಂಶಯವಿಲ್ಲ ಅನ್ನುವುದನ್ನು ರಾಮಾಯಣ ಲಕ್ಷ್ಮಣನ ಪಾತ್ರದಿಂದ ತಿಳಿಸಿಕೊಟ್ಟಿದೆ.

ವಾಲ್ಮೀಕಿರಾಮಾಯಣ ಲಕ್ಷ್ಮಣನ ವೈರಾಗ್ಯದ ಬಗ್ಗೆ ಬಹಳ ಸುಂದರವಾಗಿ ತಿಳಿಸಿಕೊಡುತ್ತದೆ –

ನಾಹಂ ಜಾನಾಮಿ ಕೇಯೂರೇ ನಾಹಂ ಜಾನಾಮಿ ಕುಂಡಲೇ ।
ನೂಪುರೇ ತ್ವಭಿಜಾನಾಮಿ ನಿತ್ಯಂ ಪಾದಾಭಿವಂದನಾತ್ ॥

ಇದು ಲಕ್ಷ್ಮಣನ ವೈರಾಗ್ಯದ ಅದ್ಭುತವಾದ ರೂಪ. ಲಕ್ಷ್ಮಣ ನಿತ್ಯದಲ್ಲಿಯೂ ಶ್ರೀರಾಮನ, ಸೀತಾದೇವಿಯ ಪರಿಪರಿಯಾದ ಸೇವೆಯನ್ನು ಮಾಡಿದರೂ ಸಹ, ಸೀತಾದೇವಿಯನ್ನು ಎಂದಿಗೂ ತಲೆ ಎತ್ತಿ ನೋಡಿದವನಲ್ಲ. ಅಂತೆಯೇ ಅವಳ ಕರ್ಣಾಭರಣಗಳನ್ನಾಗಲೀ ಮೂಗುತಿಯನ್ನಾಗಲೀ ಭುಜಾಭರಣಗಳನ್ನಾಗಲೀ ನೋಡಿಯೇ ಇಲ್ಲ. ನಿತ್ಯದಲ್ಲಿ ಪಾದಗಳಿಗೆ ನಮಸ್ಕರಿಸುವಾಗ ಕೇವಲ ಗೆಜ್ಜೆಗಳನ್ನು ಮಾತ್ರ ನೋಡುವ ಒಂದು ಅದ್ಭುತವಾದ ವೈರಾಗ್ಯ ಹೊಂದಿದ್ದ ಲಕ್ಷ್ಮಣ ಎಂಬುದಾಗಿ ವಾಲ್ಮೀಕಿಗಳು ನಮಗೆ ತಿಳಿಸಿಕೊಡುತ್ತಾರೆ.

ಈ ಮೂಲಕ ಒಬ್ಬ ಪುರುಷ ಪರಸ್ತ್ರೀ ಜೊತೆಗೆ ಯಾವ ರೀತಿಯಾಗಿ ವ್ಯವಹಾರವನ್ನು ಮಾಡಬೇಕು, ಯಾವ ರೀತಿ ತನ್ನ ದೃಷ್ಟಿಯನ್ನು ಇಟ್ಟುಕೊಳ್ಳಬೇಕು ಎನ್ನುವುದನ್ನು ತೋರಿಸಿಕೊಟ್ಟಿದ್ದಾನೆ ಪರಮವಿರಕ್ತಶಿಖಾಮಣಿಯಾದ ಲಕ್ಷ್ಮಣ. ಅಂತಹ ಒಂದು ಆದರ್ಶವನ್ನು ವಾಲ್ಮೀಕಿರಾಮಾಯಣ ನಮಗೆ ತಿಳಿಸಿಕೊಡುತ್ತದೆ. ಇಂತಹ ಒಂದು ಅದ್ಭುತವಾದ ಆದರ್ಶವನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದೇ ಆದರೆ, ಸಂಯಮದಿಂದ ಜೀವನವನ್ನು ನಡೆಸಿದರೆ, ಬಾಳು ಬಂಗಾರವಾಗುತ್ತದೆ. ಎಲ್ಲರೂ ನೆಮ್ಮದಿಯಿಂದ, ಸಮಾಧಾನದಿಂದ, ಶುದ್ಧಚಾರಿತ್ರ್ಯ ಸಂಪನ್ನರಾಗಿದ್ದು, ಧರ್ಮವನ್ನು ಮಾಡಿ, ಶ್ರೇಷ್ಠವಾದಂತಹ ಜ್ಞಾನವನ್ನು ಪಡೆಯಬಹುದು. ಇದು ವಾಲ್ಮೀಕಿರಾಮಾಯಣದ ಬಹುದೊಡ್ಡ ಲಾಭ.

ಇನ್ನು ಭರತ. **''ಭರತೋ ಭಕ್ತಿಭರಿತಃ''** ಎನ್ನುತ್ತಾರೆ ನಾರಾಯಣಪಂಡಿತಾಚಾರ್ಯರು. ಭರತ ಶ್ರೀರಾಮನ ಆದೇಶದಂತೆ ಶ್ರೀರಾಮನಿಂದ ದೂರವಿದ್ದರೂ ಸಹ, ಮನಸ್ಸಿನಲ್ಲಿಯೇ ಶ್ರೀರಾಮನ ಧ್ಯಾನವನ್ನು ಮಾಡುತ್ತ, ಶ್ರೀರಾಮನ ಪಾದುಕೆಯನ್ನು ಪೂಜಿಸುತ್ತ, ಪಾದುಕೆಯನ್ನೇ ಸಿಂಹಾಸನದ ಮೇಲೆ ಇಟ್ಟು **''ತಾನು ಅದರ ದಾಸ''** ಎನ್ನುವ ರೀತಿಯಲ್ಲಿ ರಾಜ್ಯವನ್ನು ಆಳಿದ.

ಜೀವನದಲ್ಲಿ ನಾವು ಯಾವುದೇ ತರಹದ ಅಧಿಕಾರವನ್ನು ಮಾಡಬಹುದು, ರಾಜ್ಯವನ್ನು ಆಳಬಹುದು, ಅನೇಕ ಜನರಿಗೆ ಉಪಕಾರವನ್ನು ಮಾಡಬಹುದು, ಸಹಾಯ ಮಾಡಬಹುದು. ಅದೇನಿದ್ದರೂ ಸಹ **''ದೇವರ ಅನುಗ್ರಹದಿಂದ ಆದದ್ದು. ದೇವರೇ ನಮ್ಮಲ್ಲಿ ನಿಂತು ಅಧಿಕಾರವನ್ನು ಮಾಡುವುದು, ಮಾಡಿಸುವುದು, ರಾಜ್ಯವನ್ನು ಆಳಿಸುವುದು. ದೇವರೇ ರಾಜ, ನಾವು ಅವನ ದಾಸರು''**

ಅನ್ನುವ ಭಾವನೆಯೇ ನಮ್ಮಲ್ಲಿ ಇರಬೇಕು ಎಂಬ ಸಂದೇಶವನ್ನು ಭರತ ನಮಗೆಲ್ಲ ತಿಳಿಸಿಕೊಟ್ಟಿದ್ದಾನೆ. ಅಂತಹ ಭರತನ ದಿವ್ಯವಾದ ಸಂದೇಶವನ್ನು ಜೀವನದಲ್ಲಿ ನಾವು ಅಳವಡಿಸಿಕೊಳ್ಳಬೇಕು. ಯಾವುದೇ ಒಂದು ಸಣ್ಣಕಾರ್ಯ ಅಥವಾ ದೊಡ್ಡ ಕಾರ್ಯವನ್ನು ಮಾಡಬೇಕಿದ್ದರೂ **"ದೇವರು ನಮ್ಮಲ್ಲಿ ನಿಂತು ಮಾಡಿ ಮಾಡಿಸುತ್ತಾನೆ. ನಾವು ಅವನ ಅಧೀನರಾಗಿ ಮಾಡುತ್ತೇವೆ"** ಎಂಬ ಅನುಸಂಧಾನ ಇರಬೇಕು ಎಂಬುದನ್ನು ಸಾಂಕೇತಿಕವಾಗಿ ಪಾದುಕಾಸಾಮ್ರಾಜ್ಯದ ಅಡಿಯಲ್ಲಿ ತಾನು ಸೇವೆ ಮಾಡುವ ಮೂಲಕ ನಮಗೆಲ್ಲ ತಿಳಿಸಿಕೊಟ್ಟಿದ್ದಾನೆ ಭರತ.

ಇನ್ನು ಹನುಮಂತ. ಜೀವೋತ್ತಮನಾದ ಹನುಮಂತ. ಪರಮಾತ್ಮನ ಪ್ರಧಾನಾಂಗರಾಗಿ ಇರುವಂತಹ ಹನುಮಂತದೇವರು. ಅದ್ಭುತವಾದ ಜ್ಞಾನ, ಅಸಾಧಾರಣವಾದ ದೃಢವಾದ ಅಚಂಚಲವಾದ ಭಕ್ತಿ, ನಿಷ್ಕಾಮಭಕ್ತಿ– ಹನುಮಂತದೇವರದ್ದು. ಹನುಮಂತದೇವರು ಎಂತಹ ಜ್ಞಾನವನ್ನು ಪಡೆದು–ಕೊಂಡಿದ್ದರು ಎಂದು ಲಕ್ಷ್ಮಣನ ಮಾತಿನಲ್ಲಿ ವಾಲ್ಮೀಕಿ ಋಷಿಗಳು ತಿಳಿಸಿ–ಕೊಡುತ್ತಾರೆ –

ನಾನೃಗ್ವೇದವಿನೀತಸ್ಯ ನಾಯಜುರ್ವೇದಧಾರಿಣಃ ।
ನ ಸಾಮವೇದವಿದುಷಃ ಶಕ್ಯಮೇವಂ ಪ್ರಭಾಷಿತುಮ್ ।
ನೂನಂ ವ್ಯಾಕರಣಂ ಕೃತ್ಸ್ನಮನೇನ ಬಹುಧಾ ಶ್ರುತಮ್ ॥

ಇತ್ಯಾದಿಯಾಗಿ ಋಗ್ವೇದ–ಯಜುರ್ವೇದ–ಸಾಮವೇದ–ಅಥರ್ವವೇದ ಮೊದಲಾದ ಎಲ್ಲ ವೇದಗಳನ್ನು, ವ್ಯಾಕರಣವನ್ನು, ಸಕಲ ಸಚ್ಛಾಸ್ತ್ರಗಳನ್ನು ಕಲತಲಾಮಲಕ ಮಾಡಿಕೊಂಡ ವ್ಯಕ್ತಿ ಮಾತ್ರ ಹೀಗೆ ಮಾತನಾಡಬಹುದು ಎಂಬುದಾಗಿ ಹನುಮಂತದೇವರ ಬಗ್ಗೆ ವಾಲ್ಮೀಕಿ ಋಷಿಗಳು ಹೇಳುತ್ತಾರೆ.

ಶ್ರೀಮದಾಚಾರ್ಯರು ತಮ್ಮ ಮಹಾಭಾರತತಾತ್ಪರ್ಯನಿರ್ಣಯದ ಕೊನೆಯಲ್ಲಿ –

ಯಸ್ತತ್ಪ್ರಸಾದಾದಖಿಲಾಂಶ್ಚ ವೇದಾನ್
ಸಪಂಚರಾತ್ರಾನ್ ಸರಹಸ್ಯಸಂಗ್ರಹಾನ್ ।
ವೇತೇತಿಹಾಸಾಂಶ್ಚ ಪುರಾಣಯುಕ್ತಾನ್
ಯಥಾವದನ್ಯಾ ಅಪಿ ಸರ್ವವಿದ್ಯಾಃ ॥ (೩೨-೧೫೯)

ಸಮಗ್ರ ವೇದಗಳನ್ನು, ಪಂಚರಾತ್ರಾದಿಗಳನ್ನು, ಪುರಾಣಗಳಿಂದ ಸಹಿತವಾದ ಇತಿಹಾಸಗಳನ್ನು ಎಲ್ಲವನ್ನೂ ಸಹ ಆ ಪರಮಾತ್ಮನ ಅನುಗ್ರಹದಿಂದ ತಿಳಿದುಕೊಂಡಿದ್ದೇನೆ ಎಂಬುದಾಗಿ ತಮ್ಮ ಜ್ಞಾನದ ಬಗ್ಗೆ ಹೇಳುತ್ತಾರೆ. ಅಂತಹ ಸಕಲ ಸಚ್ಛಾಸ್ತ್ರಗಳ ಜ್ಞಾನ, ನಿಷ್ಕಾಮವಾದ ಭಕ್ತಿ ಹನುಮಂತದೇವರದ್ದು.

ಹನುಮಂತದೇವರು ಮಾಡಿದಷ್ಟು ಶ್ರೀರಾಮನ ಸೇವೆ ಬೇರೆ ಯಾರೂ ಸಹ ಮಾಡಲಿಲ್ಲ. ಮಾಡಲು ಸಾಧ್ಯವೂ ಇಲ್ಲ. ಅಂತೆಯೇ **''ಪ್ರೇಷ್ಠೋ ನ ರಾಮಸ್ಯ ಬಭೂವ ತಸ್ಮಾತ್''** ಹನುಮಂತದೇವರಷ್ಟು ಪ್ರೀತಿಪಾತ್ರರು ಶ್ರೀರಾಮನಿಗೆ ಬೇರೆ ಯಾರೂ ಇಲ್ಲ.

ಅಷ್ಟು ಶ್ರೀರಾಮಚಂದ್ರನ ಅನಿತರಸಾಧಾರಣವಾದ ಸೇವೆಯನ್ನು ಮಾಡಿಯೂ ಸಹ, ಮೋಕ್ಷವನ್ನೇ ನೀಡಲು ಸಮರ್ಥನಾದ ಶ್ರೀರಾಮ ''ನಿನಗೇನು ಕೊಡಲಿ'' ಎಂದು ಕೇಳಿದಾಗ ಹನುಮಂತದೇವರು ಏನನ್ನೂ ಬಯಸಲಿಲ್ಲ –

ಯಸ್ತೇ ಕಥಾಸೇವಕ ಏವ ಸರ್ವದಾ
ಸದಾ ರತಿಸ್ತ್ವಯ್ಯಚಲೈಕಭಕ್ತಿಃ ।
ಸ ಜೀವಮಾನೋ ನ ಪರಃ ಕಥಂಚಿತ್
ತಜ್ಜೀವನಂ ಮೇಽಸ್ತ್ವಧಿಕಂ ಸಮಸ್ತಾತ್॥ (ಮ.ಭಾ.ತಾ.ನಿ ೮-೨೪೬)

ಪ್ರವರ್ಧತಾಂ ಭಕ್ತಿರಲಂ ಕ್ಷಣೇ ಕ್ಷಣೇ
ತ್ವಯೀಶ ಮೇ ಹ್ಯಾಸವಿವರ್ಜಿತಾ ಸದಾ ।
ಅನುಗ್ರಹಸ್ತೇ ಮಯಿ ಚೈವಮೇವ
ನಿರೂಪಧೌ ತೌ ಮಮ ಸರ್ವಕಾಮಃ॥ (ಮ.ಭಾ.ತಾ.ನಿ ೮-೨೪೭)

''ಸೇವಕತನದ ರುಚಿ ಏನಳಿದ್ಯೋ ದೇವ ಹನುಮರಾಯ ವೈರಾಗ್ಯವನೆ ಬೇಡಿ''

''ವೈರಾಗ್ಯವೇ ಬೇಕು. ನಿನ್ನ ಪಾದಗಳಲ್ಲಿ ಅಚಲವಾದ ಭಕ್ತಿಯೇ ಬೇಕು'' ಎಂದೇ ಕೇಳಿದವರು. ಪ್ರತಿಕ್ಷಣದಲ್ಲಿ ಪ್ರವರ್ಧಮಾನವಾದಂತಹ ಭಗವದ್ಭಕ್ತಿ ಹಾಗೂ ಭಗವಂತನ ಅನುಗ್ರಹ ಇವುಗಳನ್ನೇ ಯಾವಾಗಲೂ ಬೇಡಿದವರು.

ಜ್ಞಾನಭಕ್ತೀ ಹರೇಸ್ತುಷ್ಟಿಂ ವಿನಾ ವಿಷ್ಣೋರಪಿ ಕ್ವಚಿತ್ ।
(ಮ.ಭಾ.ತಾ.ನಿ ೧೮-೩)

ಭಗವಂತನಿಂದಲೂ ಸಹ ಜ್ಞಾನ–ಭಕ್ತಿ–ವಿಷ್ಣುತೃಪ್ತಿ–ವಿರಕ್ತಿ ಇವುಗಳನ್ನು ಬಿಟ್ಟು ಬೇರೆ ಏನನ್ನೂ ಬೇಡದಂತಹ ಮಹಾನುಭಾವರು ಹನುಮಂತದೇವರು, ಭೀಮಸೇನದೇವರು, ಶ್ರೀಮದಾಚಾರ್ಯರು. ಅಂತಹ ನಿಷ್ಕಾಮಭಕ್ತಿಯ ವಿರಾಡ್ರೂಪವನ್ನು ನಾವು ಹನುಮಂತದೇವರಲ್ಲಿ ಕಾಣಬಹುದು. ಅಂತಹ ಹನುಮಂತದೇವರ ದಿವ್ಯವಾದ ಮಹಿಮೆಯನ್ನು ವಾಲ್ಮೀಕಿ ರಾಮಾಯಣ ನಮಗೆ ತಿಳಿಸಿಕೊಡುತ್ತದೆ.

ಹೀಗೆ ಒಂದೊಂದು ಪಾತ್ರಗಳಲ್ಲಿಯೂ ಸಹ ಜೀವನದ ಸಂದೇಶಗಳನ್ನು ತಿಳಿಸಿಕೊಟ್ಟು, ಆ ಎಲ್ಲ ದೇವತೆಗಳ ಮಹಿಮೆಯನ್ನೂ ಸಹ ನಮ್ಮ ಉಪಾಸನೆಗೆ ತಿಳಿಸಿಕೊಟ್ಟು, ಪರಮೋಪಕಾರ ಮಾಡಿದಂತಹ ಶ್ರೇಷ್ಠವಾದ ಗ್ರಂಥ ಅದು ರಾಮಾಯಣ. ಹಯಗ್ರೀವರೂಪದಿಂದ ಪರಮಾತ್ಮನೇ ರಚನೆ ಮಾಡಿದ ಮೂಲರಾಮಾಯಣ. ಶತಕೋಟಿಶ್ಲೋಕವಿಸ್ತೀರ್ಣವಾದದ್ದು. ಅದು ಮೂಲ. ಅದು ಪ್ರಧಾನ. ಅದನ್ನು ಅನುಸರಿಸಿಕೊಂಡು ಬಂದದ್ದು ಮುಂದಿನ ರಾಮಾಯಣಗಳು.

ಬ್ರಹ್ಮದೇವರ ಉಪದೇಶದಂತೆ, ನಾರದರ ಉಪದೇಶದಂತೆ, ಆ ಮೂಲ–ರಾಮಾಯಣದ ಸಾರವನ್ನು ತಿಳಿದು, ವಾಲ್ಮೀಕಿ ಮಹರ್ಷಿಗಳು ರಾಮಾಯಣವನ್ನು ರಚನೆ ಮಾಡಿದ್ದಾರೆ. ಅದರಲ್ಲಿ ಮೇಲ್ನೋಟಕ್ಕೆ ಏನಾದರೂ ಸಮಸ್ಯೆಗಳು ತೋರಿಬಂದರೆ, ಅದಕ್ಕೆ ಸರಿಯಾದ ನಿರ್ಣಯವನ್ನು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಬಹಳ ಸ್ಪಷ್ಟವಾಗಿ ಸಪ್ರಮಾಣವಾಗಿ ನಿರೂಪಣೆ ಮಾಡಿಕೊಟ್ಟಿದ್ದುಂಟು. ಅಂತಹ ಶ್ರೀಮದಾಚಾರ್ಯರ ಮಹಾಭಾರತತಾತ್ಪರ್ಯನಿರ್ಣಯಕ್ಕನುಗುಣವಾಗಿಯೇ ವಾಲ್ಮೀಕಿ ರಾಮಾಯಣವನ್ನು ಅಧ್ಯಯನ ಮಾಡಿ, ಅದರ ಯಥಾರ್ಥವಾದ ಜ್ಞಾನವನ್ನು ನಾವು ಮಾಡಿಕೊಳ್ಳಬೇಕು. ಆಗ ಮಾತ್ರ ನಾವು ಮೂಲರಾಮಾಯಣ–ಕ್ಕನುಗುಣವಾಗಿ ಆ ಶ್ರೀರಾಮಚಂದ್ರನ ಚರಿತ್ರೆಯನ್ನು ತಿಳಿದುಕೊಳ್ಳಲಿಕ್ಕೆ ಸಾಧ್ಯ.

ಅಂತಹ ವಾಲ್ಮೀಕಿ ರಾಮಾಯಣದ ಸಂದೇಶಗಳನ್ನು ಎಲ್ಲರೂ ತಮ್ಮ ಜೀವನ–ದಲ್ಲಿ ಅಳವಡಿಸಿಕೊಳ್ಳಬೇಕು. ಅನ್ನುವುದಕ್ಕಾಗಿ ಎಲ್ಲರಿಗೂ ಅರ್ಥವಾಗುವುದ–ಕ್ಕೋಸ್ಕರ ಸುಲಭವಾದ ಕನ್ನಡ ಭಾಷೆಯಲ್ಲಿ ಸಮಗ್ರ ವಾಲ್ಮೀಕಿ ರಾಮಾಯಣದ ಅನುವಾದ ಮಾಡಿಸಿ ಪ್ರಕಾಶಿಸುವ ಒಂದು ದೊಡ್ಡ ಕಾರ್ಯವನ್ನು ನಮ್ಮ **ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನ ಪ್ರತಿಷ್ಠಾನದ** ವತಿಯಿಂದ

ಮಾಡುತ್ತಿರುವುದು ಸ್ತುತ್ಯವಾಗಿದೆ. ಅನೇಕ ಘನ ಘನ ವಿದ್ವಾಂಸರು ಹಗಲಿರುಳು ಪರಿಶ್ರಮಪಟ್ಟು, ಬಹಳ ಸುಂದರವಾಗಿ, ಎಲ್ಲರಿಗೂ ಅರ್ಥವಾಗುವಂತೆ, ಶ್ರೀಮದಾಚಾರ್ಯರ ಮಹಾಭಾರತತಾತ್ಪರ್ಯನಿರ್ಣಯಕ್ಕನುಗುಣವಾಗಿ ಕನ್ನಡ ಅನುವಾದದ ಕಾರ್ಯವನ್ನು ಮಾಡಿದ್ದಾರೆ. ಇದು ಎಲ್ಲ ಜಿಜ್ಞಾಸುಗಳಿಗೆ ಅತ್ಯುಪ-ಯುಕ್ತವಾಗುವುದರಲ್ಲಿ ಸಂಶಯವಿಲ್ಲ. ಅನುವಾದ ಮಾಡಿದ ಎಲ್ಲ ವಿದ್ವಾಂಸರಿಗೂ ದೇವರು ವಿಶೇಷವಾದ ಅನುಗ್ರಹವನ್ನು ಮಾಡಲಿ. ಇದೇ ತರಹದ ವಾಙ್ಮಯಸೇವೆ, ಹರಿವಾಯುಗುರುಗಳ ಸೇವೆ ಅವರಿಂದ ನಿರಂತರವಾಗಿ ನಡೆಯಲಿ ಎಂಬುದಾಗಿ ಪ್ರಾರ್ಥನೆ ಮಾಡುತ್ತೇವೆ.

ಅದರಂತೆ **ಸಂಶೋಧನ ಪ್ರತಿಷ್ಠಾನದ ಅಧ್ಯಕ್ಷರಾಗಿ,** ಸಂಸ್ಥೆಯ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿರುವ **ಪಂ. ಸತ್ಯಧ್ಯಾನಾಚಾರ್ಯ ಕಟ್ಟಿ** ಅವರು ಸಂಪಾದಕ-ರಾಗಿ, ಎಲ್ಲ ವಿದ್ವಾಂಸರಿಂದ ಅನುವಾದ ಮಾಡಿಸುವ ಜವಾಬ್ದಾರಿಯನ್ನು ಹೊತ್ತು, ವ್ಯವಸ್ಥಿತ- ವಾಗಿ ಅನುವಾದಕೃತಿಗಳು ಪ್ರಕಾಶನವಾಗುವಂತೆ ಕಾರ್ಯ ನಿರ್ವಹಿಸಿದ್ದಾರೆ. ಇದಕ್ಕಾಗಿ ವಿಶೇಷವಾಗಿ ಪರಿಶ್ರಮಪಟ್ಟಿದ್ದಾರೆ.

ಪಂ. ಕಾಂತೇಶಾಚಾರ್ಯರು ಹಾಗೂ **ಶ್ರೀಯುತ ಎಸ್. ಆರ್. ಪಾಂಡುರಂಗಿ** ಅವರು, **ಶ್ರೀಯುತ ಎ. ಬಿ. ಶಾಮಾಚಾರ್** ಅವರು ಈ ಅನುವಾದಕೃತಿಗಳ ಪ್ರಕಾಶನಕ್ಕೆ ವಿಶೇಷವಾದ ಸಹಕಾರವನ್ನು ನೀಡಿದ್ದಾರೆ. ವಿಶೇಷವಾಗಿ ಸೇವೆಯನ್ನು ಮಾಡಿದ್ದಾರೆ.

ಅವರೆಲ್ಲರಿಗೂ ನಮ್ಮ ಉಪಾಸ್ಯಮೂರ್ತಿಗಳಾದ ಶ್ರೀಮೂಲಸೀತಾಸಮೇತ ಶ್ರೀಮೂಲರಾಮ ದಿಗ್ವಿಜಯರಾಮ ವೇದವ್ಯಾಸದೇವರು ಜ್ಞಾನಭಕ್ತಿವೈರಾಗ್ಯ-ಗಳನ್ನು, ಆಯುರಾರೋಗ್ಯಗಳನ್ನು ನೀಡಿ, ಇದೇ ರೀತಿಯಾದ ವಾಙ್ಮಯಸೇವೆ-ಯನ್ನು ವೇದವ್ಯಾಸದೇವರ ಸೇವೆಯನ್ನು ನಿರಂತರವಾಗಿ ಇವರಿಂದ ಮಾಡಿಸಲಿ ಎಂಬುದಾಗಿ ಪ್ರಾರ್ಥನೆ ಮಾಡುತ್ತೇವೆ.



ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು
ಶ್ರೀಉತ್ತರಾದಿಮಠ

॥ ಶ್ರೀದಿಗ್ವಿಜಯರಾಮೋ ವಿಜಯತೇ ॥
॥ ಶ್ರೀಭಾರತೀರಮಣಾಯ ನಮಃ ॥
॥ ಸಮಸ್ತಗುರುಭ್ಯೋ ನಮಃ ॥

ಮುನ್ನುಡಿ

'ಶ್ರೀರಾಮ' ಎಲ್ಲರ ಬದುಕಿಗೆ 'ಅಯನ.' ಆಧಾರ, ಸರ್ವಾಧಾರ. ಅದಕ್ಕೇ ಇದು ರಾಮಾಯಣ. ತಂದೆ ದಶರಥನಿಗೆ, ತಾಯಿ ಕೌಸಲ್ಯಗೆ, ಋಷಿ ವಿಶ್ವಾಮಿತ್ರರಿಗೆ, ಜನಸ್ಥಾನದ ಮುನಿಗಳಿಗೆ, ಶಪಿತ ಅಹಿಲ್ಯೆಗೆ, ಪರಶುರಾಮನಲ್ಲಿಯ ಅತುಲನ ನಾಶಕ್ಕೆ, ಜನಕಮಹಾರಾಜನ ಮಗಳು ಸೀತೆಗೆ, ಪ್ರೀತಿಯ ಭಕ್ತ ಹನುಮಂತನಿಗೆ ರಾಮನೇ ಅಯನ.

ಕಾಡಿನಲ್ಲಿಯ ಜಯಂತ, ಶಬರಿ, ಶರಭಂಗ, ವಿರಾಧ, ಕಬಂಧ, ವಾಲಿ, ಸುಗ್ರೀವ, ವಿಭೀಷಣರ ಉದ್ಧಾರಕ್ಕೆ ರಾಮನೇ ಅಯನ. ಇದು ರಾಮಾಯಣ. ಶ್ರೀರಾಮನ ಚರಿತ್ರೆ. ರಾಮನನ್ನು ರಾಮನೇ ಬಲ್ಲ. ಅದಕ್ಕೇ ಹಯಗ್ರೀವದೇವ ನೂರು ಕೋಟಿ ಶ್ಲೋಕದ ಮೂಲರಾಮಾಯಣ ಬರೆದ. ಅದರ ಸಂಕ್ಷೇಪ ಈ ವಾಲ್ಮೀಕಿಯ ರಾಮಾಯಣ. ತ್ರೇತಾಯುಗದ ಇತಿಹಾಸ. ಮಹಾಭಾರತ ದ್ವಾಪರದ ಇತಿಹಾಸ. ಇವೆರಡು ಭಾರತದ ಕಣ್ಣುಗಳು. ವೇದಗಳ ಸಾರ. ಸಂಸ್ಕೃತಿಯ ಮೂಲಾಧಾರ. ಮನುಕುಲದ ಭಾಷ್ಯ. ತತ್ತ್ವಜ್ಞಾನದ ಆಕರ. ಹರಿಯ ಮಹಿಮೆ. ಸಂಸಾರ ದಾಟಲು ಹರಿಗೋಲು. ''**ರಾಮೋ ವಿಗ್ರಹವಾನ್ ಧರ್ಮಃ**'' 'ರಾಮ' ಧರ್ಮದ ಮೂರ್ತಿ. ಅವನ ಅರಿವು ಧರ್ಮದ ಜ್ಞಾನ. ಆದರ್ಶದ ತಿಳಿವು. ಬದುಕನ್ನು ಅಂದಗೊಳಿಸುವುದು. ಬುದ್ಧಿ ಶುದ್ಧವಾಗುವುದು. ಜೀವನ ಮಂಗಲವಾಗುವುದು.

ವಾಲ್ಮೀಕಿಯ ರಾಮಾಯಣ ಆದಿಕಾವ್ಯ. ಅಪಾರ ರಾಮಾಯಣಸಾಹಿತ್ಯಕ್ಕೆ ಆದಿಬೀಜ. ಸಂಪೂರ್ಣ ವಿಷ್ಣುಸಹಸ್ರನಾಮಕ್ಕೆ ಸಮಾನವಾದದ್ದು ಒಂದು ರಾಮಶಬ್ದ. ''ರಾಮಾಯಣ'' ಅನಂತವೇದ ಪಠಿಸಿದ ಫಲ ನೀಡುವ ಮಹಾಕೃತಿ. ರಾಮಾಯಣ ತಿಳಿಯದವ ಭಾರತೀಯನೇ ಅಲ್ಲ. ಇದು ಸರ್ವರಿಂದ ಸದಾ ಶ್ರವಣೀಯ.

ವಾಲ್ಮೀಕಿರಾಮಾಯಣ ಇದು ಭಕ್ತಿಕಾವ್ಯ. ಭಕ್ತಿಗಾಗಿ, ಭಕ್ತಿಯಿಂದ ಬರೆದದ್ದು. ರಾಮನ ಪ್ರಾಪ್ತಿ ಭಕ್ತಿಯಿಂದಲೇ ಸಾಧ್ಯ. ಭಕ್ತಿ ಇಲ್ಲದೇ ರಾಮನ ಪ್ರಾಪ್ತಿ ಇಲ್ಲ. 'ಭಕ್ತಿ' ಬದುಕಿನ ಮುಖ್ಯಸಾಧನ. ಜ್ಞಾನ ಹಾಗೂ ಪ್ರೀತಿಯ ನೆಲೆಯೇ ಭಕ್ತಿ.

''ಜ್ಞಾನಪೂರ್ವಃ ಪರಃ ಸ್ನೇಹಃ ಭಕ್ತಿಃ'' ''ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋऽಧಿಕಃ । ಸ್ನೇಹಃ ಭಕ್ತಿರಿತಿ ಪ್ರೋಕ್ತಃ'' ಶ್ರೀರಾಮನ ಮಹಿಮಾಜ್ಞಾನ, ಅವನಲ್ಲಿ ಅಪಾರ ಸ್ನೇಹವೇ ಭಕ್ತಿ. ಇದು ವಾಲ್ಮೀಕಿಯ ಧ್ಯೇಯ. ಅದಕ್ಕೆ ರಾಮಾಯಣ ನಿರ್ಮಾಣ. ರಾಮಕಥೆಯ ನಿರ್ಣಯ.

ಗಾಯತ್ರೀವ್ಯಾಖ್ಯಾನ ವಾಲ್ಮೀಕಿರಾಮಾಯಣ

ಓಂಕಾರದ ವ್ಯಾಖ್ಯಾನವೇ ಗಾಯತ್ರಿಯು. ಮೂರುಪಾದ, ಇಪ್ಪತ್ನಾಲ್ಕು ಅಕ್ಷರಗಳ ಗಾಯತ್ರಿ. ಇದು ವೇದಸಾರ. ಗಾಯತ್ರಿಯ ಮೂರು ಪಾದಗಳ ವ್ಯಾಖ್ಯಾನವೇ ಸಾರಭೂತ ಪುರುಷಸೂಕ್ತ. ಪುರುಷಸೂಕ್ತದ ವ್ಯಾಖ್ಯಾನವೇ ಸಂಪೂರ್ಣ ವೇದಗಳು. ಗಾಯತ್ರಿಯ ಸ್ವರೂಪವೇ ಸಮಗ್ರ ವಾಲ್ಮೀಕಿ ರಾಮಾಯಣ.

''ಗಾಯತ್ರ್ಯಾಶ್ಚ ಸ್ವರೂಪಂ ತದ್ರಾಮಾಯಣಮಿತಿ ಸ್ಮೃತಮ್''

ವಾಲ್ಮೀಕಿ ರಾಮಾಯಣದ ಪ್ರಾರಂಭ ''ತ'' ಅಕ್ಷರದಿಂದ ಆಗುವುದು. ಅದು ಗಾಯತ್ರಿಯ ಮೊದಲ ಅಕ್ಷರ. ರಾಮಾಯಣದ ಮೊದಲ ಶ್ಲೋಕ **''ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।''** (ವಾ.ರಾ. ೧-೧-೧) 'ತ' ದಿಂದ ಆರಂಭ. ಇದು ಗಾಯತ್ರೀಮಂತ್ರದ ಮೊದಲ ವರ್ಣದ ಪ್ರತಿನಿಧಿ. ಗಾಯತ್ರಿಯಲ್ಲಿ ಇಪ್ಪತ್ನಾಲ್ಕು ವರ್ಣ. ರಾಮಾಯಣದ ಒಂದೊಂದು ಸಾವಿರ ಶ್ಲೋಕ ಒಂದೊಂದು ಗಾಯತ್ರೀ ಅಕ್ಷರದ ಪ್ರತಿನಿಧಿ. ಇಪ್ಪತ್ನಾಲ್ಕು ಸಾವಿರ ಶ್ಲೋಕ ೨೪ ಅಕ್ಷರಗಳ ಪ್ರತಿನಿಧಿ. ಗಾಯತ್ರಿಯ ಆರಂಭ 'ತ'ದಿಂದ, ಗಾಯತ್ರಿಯ ಸಮಾಪ್ತಿ 'ತ್'ದಿಂದ. ರಾಮಾಯಣದ ಕೊನೆಯ ಶ್ಲೋಕ

''ತತಃ ಸಮಾಗತಾನ್ ಸರ್ವಾನ್ ಸ್ಥಾಪ್ಯ ಲೋಕಗುರುರ್ದಿವಿ ।
ಹೃಷ್ಟೈಃ ಪ್ರಮುದಿತೈರ್ದೇವೈರ್ಜಗಾಮ ತ್ರಿದಿವಂ ಮಹತ್ ॥

–ವಾ.ರಾ.ಉತ್ತರ ೧೧೦-೨೮

ವಾಲ್ಮೀಕಿ ರಾಮಾಯಣದ ಕೊನೆಯ ಶ್ಲೋಕದ ಕೊನೆಯ ಅಕ್ಷರ ''ತ್''.

ರಾಮಾಯಣದ ಮೊದಲ ಅಕ್ಷರ, ಗಾಯತ್ರಿಯ ಮೊದಲ ಅಕ್ಷರ 'ತ'

ರಾಮಾಯಣ ಹಾಗೂ ಗಾಯತ್ರಿಯ ಕೊನೆಯ ಅಕ್ಷರ ''ತ್''. ಎರಡೂ .... (ತತ್) ೨೪ ಸಾವಿರ ಶ್ಲೋಕದ ಸಮಗ್ರಸಾರ, ಪ್ರತಿನಿಧಿಯೇ ''ತತ್''.

ಸಂಪೂರ್ಣ ರಾಮಾಯಣವೇ **'ತತ್'** ಗಾಯತ್ರಿಯ ವ್ಯಾಖ್ಯಾನರೂಪವಾಗಿದೆ. ಗಾಯತ್ರಿಯ ಇಪ್ಪತ್ನಾಲ್ಕು ಅಕ್ಷರಗಳ ವ್ಯಾಖ್ಯಾನವೇ ವಾಲ್ಮೀಕಿ ರಾಮಾಯಣದ ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು. ಗಾಯತ್ರಿಯ ಒಂದೊಂದು ಅಕ್ಷರವನ್ನು ರಾಮಾಯಣದ ಒಂದೊಂದು ಸಾವಿರ ಶ್ಲೋಕಗಳು ವ್ಯಾಖ್ಯಾನಿಸುವವು.

''ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ'' ಇತಿಹಾಸ-ಪುರಾಣಗಳು ಐದನೇ ವೇದ. **'ರಾಮಾಯಣ'** ಇದು ಇತಿಹಾಸ. ಇದು ಪಂಚಮವೇದ.

ಇತಿಹಾಸ, ಪುರಾಣಗಳು ವೇದದ ವಿಶಾಲ ವ್ಯಾಖ್ಯಾನ. ವೇದದ ವಿಸ್ತೃತ ರೂಪ. **''ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್''** ವೇದದ ಅರ್ಥವಿಸ್ತಾರಕ್ಕಾಗಿ, ವ್ಯಾಖ್ಯಾನರೂಪವಾಗಿ, ದೃಷ್ಟಾಂತಸಹಿತವಾದುದೇ ರಾಮಾಯಣವೆಂಬ ಇತಿಹಾಸ.

''ರಾಮಾಯಣಂ ಮಹಾಕಾವ್ಯಂ ಸರ್ವವೇದೇಷು ಸಮ್ಮತಮ್ ।
ಸರ್ವಪಾಪಪ್ರಶಮನಂ ದುಷ್ಟಗ್ರಹನಿವಾರಣಮ್ ॥''

-ವಾ.ರಾ.ಮಾಹಾತ್ಮ್ಯ ೧-೧೯

ಸಮಗ್ರವೇದಸಮ್ಮತವಾದದ್ದು ಈ ರಾಮಾಯಣ ಮಹಾಕಾವ್ಯ. ರಾಮಾಯಣದ ರೂಪದಲ್ಲಿ ವೇದಾರ್ಥಗಳ ಸಂಯೋಜನೆ. ಅಂತೆಯೇ ರಾಮಾಯಣ ಎಲ್ಲ ಪಾಪಪರಿಹಾರಕ. ದುಷ್ಟಗ್ರಹಬಾಧೆನಿವಾರಕ.

ರಾಮಾಯಣ ಸ್ವರೂಪ

ವಾಲ್ಮೀಕಿರಾಮಾಯಣದಲ್ಲಿ ಏಳು ಕಾಂಡಗಳು. ಐದು ನೂರಕ್ಕೂ ಹೆಚ್ಚು ಸರ್ಗಗಳು. ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು. ಇಲ್ಲಿ ಯಾವ ಕಾಂಡವೂ ಪ್ರಕ್ಷಿಪ್ತವಲ್ಲ. ಆಮೇಲೆ ರಚಿಸಿದ್ದೂ ಅಲ್ಲ.

''ಚತುರ್ವಿಂಶತಿ ಸಹಸ್ರಾಣಿ ಶ್ಲೋಕಾನಾಮುಕ್ತವಾನ್ ಋಷಿಃ ।
ತಥಾ ಸರ್ಗಶತಾನ್ ಪಂಚ ಷಟ್‌ಕಾಂಡಾನಿ ತಥೋತ್ತರಮ್ ॥

-ವಾ.ರಾ.ಬಾಲ. ೪-೨

ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು, ಏಳು ಕಾಂಡಗಳು, ಐದು ನೂರಕ್ಕೂ ಹೆಚ್ಚು ಸರ್ಗಗಳು. ಇದು ರಾಮಾಯಣದ ಸ್ವರೂಪ.

ರಾಮಾಯಣದ ಏಳು ಕಾಂಡಗಳು ಆಧ್ಯಾತ್ಮಿಕ ಸಾಧಕನು ಏರುವ ಏಳು ಮೆಟ್ಟಿಲುಗಳು. ಸಾಧನದ ಸೋಪಾನಗಳು. ಸಾಧಿಸಬೇಕಾದ ಗುಣಗಳು. ಇವು ವೇದದ ಏಳು ಸಂದೇಶಗಳು. ಕಾಂಡದ ಬೀಜವೇ ಏಳು ಸಂಖ್ಯಾಕವಾಗಿದೆ. ಕಾಂಡದ ಹೆಸರುಗಳೂ ಏಳು. ಸಂದೇಶ–ಆದೇಶಗಳನ್ನು ಸುಲಭವಾಗಿ, ಸರಳವಾಗಿ ಬಿಂಬಿಸುವವು.

ಸಮಗ್ರ ವಾಲ್ಮೀಕಿ ರಾಮಾಯಣ ಕನ್ನಡ ಅನುವಾದ ಯೋಜನೆಯ ಹಿನ್ನಲೆ

ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಅನೇಕ ದಶಕಗಳಿಂದ ಪ್ರಾಚೀನ–ಅಪ್ರಕಟಿತ ಗ್ರಂಥಗಳ ಪ್ರಕಾಶನಕಾರ್ಯದಲ್ಲಿ ಪರಿಪೂರ್ಣವಾಗಿ ತೊಡಗಿದ್ದು, ಈಗಾಗಲೇ ಸಂಸ್ಕೃತ–ಕನ್ನಡ–ಇಂಗ್ಲೀಷ್ ಮೊದಲಾದ ಭಾಷೆಗಳಲ್ಲಿ ನೂರಕ್ಕೂ ಹೆಚ್ಚು ಗ್ರಂಥಗಳು ಪ್ರಕಟಿತವಾಗಿವೆ. ಪ್ರಕೃತ ಧರ್ಮಪ್ರಚಾರಕಾರ್ಯದ ಪ್ರಧಾನ ಅಂಗವಾಗಿ ಸಮಗ್ರ ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು, ೧೦ ಸಂಪುಟಗಳಲ್ಲಿ ಪೂರ್ಣ ರಾಮಾಣಯದ ಕನ್ನಡ ಅನುವಾದಗಳು ಹೊರಬರುತ್ತಿವೆ.

ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಸಮಗ್ರ ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದ ಯೋಜನೆ ಕೈಗೆತ್ತಿಕೊಳ್ಳಲು ಇದು ಹಿನ್ನಲೆಯಾಗಿದೆ. ಪರಮಪೂಜ್ಯರಾದ, **ಶ್ರೀಮದುತ್ತರಾದಿಮಠಾಧೀಶರಾದ ಶ್ರೀ೧೦೦೮ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರ ಪೀಠಾರೋಹಣ ರಜತಮಹೋತ್ಸವ-ದಲ್ಲಿ ನಾವಿದ್ದೇವೆ.** ಬೆಂಗಳೂರಿನ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮಸೇವಾ-ಮಂಡಲಿಯ ವತಿಯಿಂದ ಪ್ರತಿವರ್ಷ ನಡೆಸುವ ರಾಮಾಯಣ ವಿಶೇಷ ಪ್ರವಚನ ಕಾರ್ಯಕ್ರಮದಲ್ಲಿ ಶ್ರೀಪಾದಂಗಳವರು ೨೫ ವರ್ಷಗಳಿಂದ ಸತತವಾಗಿ ರಾಮಾಯಣಪ್ರವಚನ ನಡೆಸಿಕೊಡುತ್ತಿದ್ದಾರೆ. ಈ ಬಾರಿ ನಡೆಯುತ್ತಿರುವುದು ಶ್ರೀಪಾದಂಗಳವರ ೨೫ನೇ ವರ್ಷದ ರಾಮಾಯಣ ಪ್ರವಚನ. ಮತ್ತು ಶ್ರೀಪಾದಂಗಳವರಿಗೆ ೫೦ ವಸಂತಗಳು ತುಂಬಿದ ಹಿನ್ನಲೆಯಲ್ಲಿ ಸುವರ್ಣ-ಮಹೋತ್ಸವದ ಸಂಭ್ರಮ. ಹೀಗಾಗಿ ಶ್ರೀಪಾದಂಗಳವರ ೫೦ ವಸಂತಗಳ ಸುವರ್ಣಮಹೋತ್ಸವ, ೨೫ನೇ ವರ್ಷದ ರಾಮಾಯಣ ಪ್ರವಚನ ಮತ್ತು ಶ್ರೀಪಾದಂಗಳವರ ೨೫ನೇ ವರ್ಷದ ಪೀಠಾರೋಹಣ ಮಹೋತ್ಸವಗಳ ಸಪಿನೆನಪಿಗಾಗಿ ದ್ವೈತವೇದಾಂತ ಅಧ್ಯಯನ ಸಂಶೋಧನಪ್ರತಿಷ್ಠಾನವು ಸಮಗ್ರ

ರಾಮಾಯಣದ ಕನ್ನಡ ಅನುವಾದ ಯೋಜನೆ ಕೈಗೆತ್ತಿಕೊಂಡು, ಅದರ ಸಂಪೂರ್ಣ ೧೦ ಸಂಪುಟಗಳನ್ನು ಈ ಸಂದರ್ಭದಲ್ಲಿ ಶ್ರೀಪಾದಂಗಳವರ ಮೂಲಕ ಲೋಕಾರ್ಪಣೆ ಮಾಡಿ, ಶ್ರೀರಾಮಚಂದ್ರನಲ್ಲಿ ಸಮರ್ಪಣೆ ಮಾಡುತ್ತಿದೆ.

ಈ ಅನುವಾದಕಾರ್ಯದಲ್ಲಿ ಅನೇಕ ವಿದ್ವಾಂಸರು ಸಂಪೂರ್ಣವಾಗಿ ಸಹಕರಿಸಿ, ತಮ್ಮ ಸುಂದರ ಬರವಣಿಗೆಯಲ್ಲಿ ಕನ್ನಡ ಅನುವಾದ ಮಾಡಿಕೊಟ್ಟಿದ್ದಾರೆ.

೧) ಬಾಲಕಾಂಡ - ಪಂ. ಹಯವದನ ಪುರಾಣಿಕರು

೨) ಅಯೋಧ್ಯಾಕಾಂಡ ಭಾಗ-೧ ಪಂ. ಹಯವದನ ಪುರಾಣಿಕರು

೩) ಅಯೋಧ್ಯಾಕಾಂಡ ಭಾಗ-೨ - ಪಂ. ಹಯವದನ ಪುರಾಣಿಕರು

೪) ಅರಣ್ಯಕಾಂಡ - ಪಂ. ರಾಮವಿಠ್ಠಲಾಚಾರ್ಯ

೫) ಕಿಷ್ಕಿಂಧಾಕಾಂಡ - ಪಂ. ನಾಗರಹಳ್ಳಿ ಶ್ರೀನಿವಾಸಾಚಾರ್ಯ

೬) ಸುಂದರಕಾಂಡ - ಪಂ. ಕೃಷ್ಣಾಚಾರ್ಯ ಬಿದರಹಳ್ಳಿ

೭) ಯುದ್ಧಕಾಂಡ ಭಾಗ-೧ ಪಂ. ಕಾಂತೇಶಾಚಾರ್ಯ ಕದರಮಂಡಲಗಿ

೮) ಯುದ್ಧಕಾಂಡ ಭಾಗ-೨ ಪಂ. ವೇಂಕಟಗಿರೀಶಾಚಾರ್ಯ ಎ. ಎಸ್.

೯) ಉತ್ತರಕಾಂಡ ಭಾಗ-೧ ಪಂ. ವಾದಿರಾಜಾಚಾರ್ಯ ಕರಣಮ್

೧೦) ಉತ್ತರಕಾಂಡ ಭಾಗ-೨ ಪಂ. ಕಮಲಾಪುರ ಗುರುರಾಜಾಚಾರ್ಯ

ಸದಾ ಪಾಠ-ಪ್ರವಚನ-ಸಂಶೋಧನಗಳಲ್ಲಿಯೇ ತಲ್ಲೀನರಾಗಿ, ಬಿಡುವಿಲ್ಲದ ಸಮಯದಲ್ಲಿಯೂ ತಮ್ಮ ಅಮೂಲ್ಯವಾದ ಸಮಯವನ್ನು ನಮಗಾಗಿ ಕೊಟ್ಟು, ವ್ಯಾಖ್ಯಾನಗಳ ವಿಶೇಷ ವಿಚಾರಗಳನ್ನು ಸೇರಿಸಿಕೊಂಡು ಸುಂದರವಾದ ಕನ್ನಡ ಅನಾವಾದ ಮಾಡಿಕೊಟ್ಟಿರುವ ಈ ಎಲ್ಲ ವಿದ್ವಾಂಸರಿಗೆ ಕೃತಜ್ಞತಾಪೂರ್ವಕವಾದ ನಮಸ್ಕಾರಗಳು.

ಬಾಲಕಾಂಡ

ರಾಮಾಯಣದ ಏಳು ಕಾಂಡಗಳಲ್ಲಿ ಬಾಲಕಾಂಡ ಮೊದಲನೇ ಕಾಂಡ. ಇದು ರಾಮಾಯಣದ ಮೊದಲ ಮೆಟ್ಟಿಲು. ಸಾಧಕನಿಗೆ ಮೊದಲ ಸಂದೇಶ. ಮೊದಲು ಮನಸ್ಸು ಬಾಲಕರಂತಿರಲಿ. ಬಾಲಕರ ಮನಸ್ಸು ನಿರ್ವಿಕಾರ. ಸ್ವಚ್ಛ. ರಾಗದ್ವೇಷ-ಗಳಿಲ್ಲ. ಬಾಲಕರು ಅಹಂ ಇಲ್ಲದವರು. ಜ್ಞಾನ-ಮಾನ ಏನಿದ್ದರೂ, ಅಧಿಕಾರ-ಸಂಪತ್ತಿನಿಂದ ಧನಿಗಳಾದರೂ ಮನಸ್ಸು ಬಾಲಕನಂತಿರಲಿ. ಒಳ-ಹೊರ ಒಂದಾ-ಗಿರಲಿ. ರಾಮನ ಜೀವನದಲ್ಲಿ ಬಾಲಕನ ಆದರ್ಶಗಳಿವೆ. ಇವು ಸಾಧಕನ ಪ್ರಥಮಸಿದ್ಧಿ.

ದೇಹ ಹತ್ತುಇಂದ್ರಿಯಗಳ ರಥ. ಮನಸ್ಸು ಕಡಿವಾಣ. ಜೀವ ದಶರಥ. ದೇವರಾಮನನ್ನು ಜೀವ ಪೂಜಿಸುವ. ಅದು ಯಜ್ಞ. ಫಲವೇ ರಾಮ. ''**ಪ್ರಾಪ್ತಿಃ ಸಾಧನಪೂರ್ತಿತಃ**'' ಸಾಧನ ಪೂರ್ಣವಾಗದೇ ಯಾರಿಗೂ ಫಲವಿಲ್ಲ. ಸಾಧನದಿಂದ ಜೀವನಿಗೆ ''ರಾಮ'' ಆರಾಮಪ್ರಾಪ್ತಿ. ತನ್ನ ಬರುವಿಕೆಗೆ ಯಜ್ಞ ಕಾರಣ. ಅದರ ರಕ್ಷಣೆಗೆ ರಾಮ ತೆರಳಿದ. ಒಡೆದ ಮನ ಕೂಡಿಸಿದ. ಅಹಲ್ಯೆ–ಗೌತಮರನ್ನು ಮತ್ತೆ ಒಂದು ಮಾಡಿದ. ಅದರ ಫಲವೆಂಬಂತೆ ಸೀತೆಯನ್ನು ಮದುವೆಯಾದ. ವಿಷ್ಣು ರಾಮ. ಸೀತೆ ಮಹಾಲಕ್ಷ್ಮೀ. ವೇದವು ರಾಮಾಯಣ. ಪ್ರಾಣದೇವ ಹನುಮ. ಶೇಷ ಲಕ್ಷ್ಮಣ. ಇಂದ್ರ ವಾಲಿ. ಸೂರ್ಯ ಸುಗ್ರೀವ. ದೇವ–ದೇವತೆಗಳೆಲ್ಲ ಭುವಿ–ಯಲ್ಲಿ ಬಾಲಕರಾದ ಬಗೆ ಬಾಲಕಾಂಡ. ಅವತಾರ, ಬಾಲ್ಯ, ಮದುವೆಯ ವಾರ್ತೆ. ಇಲ್ಲಿಯ ಹೂರಣ.

ರಾಮನ ಗುರುಕುಲವಾಸ, ಮಂತ್ರಪ್ರಾಪ್ತಿ , ಜನಕನ ಮಗಳು ಜಾನಕಿಯ (ಲಕ್ಷ್ಮೀದೇವಿಯ) ಕೈಹಿಡಿದ. ತಮ್ಮಂದಿರೊಡನೆಯೇ ವಿವಾಹ ಮಾಡಿಕೊಂಡ. ಪಿತೃಸ್ನೇಹ, ಭ್ರಾತೃಸ್ನೇಹ, ಋಷಿಭಕ್ತಿಯ, ಯಜ್ಞಪ್ರೀತಿಯ ಬಾಲಕಾಂಡವಿದು. ರಾಮ ಧರ್ಮದ ಮೂರ್ತಿ. ಕೃತಜ್ಞ. ಧೈರ್ಯ–ಸ್ಥೈರ್ಯಗಳ ಸಾಕಾರ. ಪರಾಕ್ರಮಿ. ಚಾರಿತ್ರ್ಯಸಂಪನ್ನ. ಇವಕ್ಕೆ ರಾಮ ಅಯನ. ಇದು ಬಾಲಕಾಂಡದ ರಾಮಾಯಣ.

ಬಾಲಕಾಂಡದ ಕನ್ನಡ ಅನುವಾದಕರು

ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಕೈಗೆತ್ತಿಕೊಂಡ ಸಮಗ್ರ ವಾಲ್ಮೀಕಿ ರಾಮಾಯಣ ಕನ್ನಡ ಅನುವಾದದ ಬೃಹತ್ಕಾರ್ಯದಲ್ಲಿ ಮೊದಲನೇ ಕಾಂಡವಾದ ಬಾಲಕಾಂಡವನ್ನು ಹಾಗೂ ಎರಡನೇ ಕಾಂಡವಾದ ಅಯೋಧ್ಯಾ–ಕಾಂಡವನ್ನು ಪೂರ್ಣವಾಗಿ ಕನ್ನಡದಲ್ಲಿ ಅನುವಾದಿಸಿಕೊಟ್ಟವರು **ಪಂ.ಹಯವದನ ಪುರಾಣಿಕರು.**

ಇವರು ಪೂರ್ಣಪ್ರಜ್ಞವಿದ್ಯಾಪೀಠದ ಮೊದಲತಂಡದ ವಿದ್ಯಾರ್ಥಿಗಳಾಗಿ, ಪರಮಪೂಜ್ಯ ಪೇಜಾವರಮಠಾಧೀಶರಾದ ಶ್ರೀವಿಶ್ವೇಶತೀರ್ಥರಲ್ಲಿ ಅಧ್ಯಯನ ಮಾಡಿ, ಸುಧಾಮಂಗಳ ನೆರವೇರಿಸಿ ಹೊರಬಂದವರು. ೧೯೭೫ ರಿಂದ ಪೂರ್ಣಪ್ರಜ್ಞವಿದ್ಯಾಪೀಠದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದವರು.

ವ್ಯಾಸಸಾಹಿತ್ಯ ಹಾಗೂ ದಾಸಸಾಹಿತ್ಯ ಎರಡರಲ್ಲಿಯೂ ಅಗಾಧವಾದ

ಪಾಂಡಿತ್ಯವನ್ನು ಪಡೆದಿದ್ದ ಇವರು ಅತ್ಯುತ್ತಮ ಲೇಖಕರು. ಮಾಧ್ವ-ಮಹಾಮಂಡಲದ ಸರ್ವಮೂಲಗ್ರಂಥಗಳ ಕನ್ನಡ ಅನುವಾದ ಯೋಜನೆಯಲ್ಲಿ ಸಮಗ್ರ ಮಹಾಭಾರತತಾತ್ಪರ್ಯನಿರ್ಣಯಕ್ಕೆ, ಸಮಗ್ರ ಭಾಗವತ-ತಾತ್ಪರ್ಯನಿರ್ಣಯಕ್ಕೆ ವಿಸ್ತೃತವಾದ ಕನ್ನಡ ಅನುವಾದ ಬರೆದ ವಿಶೇಷಕೀರ್ತಿ ಇವರದ್ದು. ಸಮಗ್ರ ಭಾಗವತಕ್ಕೆ ಕನ್ನಡ ಅನುವಾದ ಮಾಡಿ ಸುಲಲಿತಭಾಗವತ ಎಂಬ ಕೃತಿಯನ್ನು ಕೊಟ್ಟಿದ್ದಾರೆ. ಋಗ್ಭಾಷ್ಯಕ್ಕೆ ವಿಮರ್ಶಾತ್ಮಕವಾಗಿ ಪೂರ್ಣ ಅನುವಾದ ಮಾಡಿದ್ದರ ಜೊತೆಗೆ ಸಂಪೂರ್ಣ ಹರಿಕಥಾಮೃತಸಾರಕ್ಕೆ ಹಾಗೂ ಲಕ್ಷ್ಮೀಶೋಭಾನ ಕೃತಿಗಳಿಗೆ ವಿಶೇಷರೀತಿಯಲ್ಲಿ ಅನುವಾದ ಮಾಡಿದ ದೊಡ್ಡ ಸಾಧನೆ ಅವರದ್ದು.

ಪೂರ್ಣಪ್ರಜ್ಞ ವಿದ್ಯಾಪೀಠದ ವತಿಯಿಂದ ಕೈಗೊಳ್ಳಲಾದ ಸಮಗ್ರ ನ್ಯಾಯಸುಧಾ ಕನ್ನಡ ಅನುವಾದ ಯೋಜನೆಯಲ್ಲಿ ಪುರಾಣಿಕರದು ಬಹಳ ಮಹತ್ವದ ಪಾತ್ರ. ಎಲ್ಲ ವಿದ್ವಾಂಸರು ತಮಗೆ ನೀಡಿದ ಭಾಗಗಳನ್ನು ಕನ್ನಡದಲ್ಲಿ ಅನುವಾದ ಮಾಡಿ ಕೊಟ್ಟಾಗ ಅದೆಲ್ಲವನ್ನೂ ಸರಿಯಾಗಿ ಅವಲೋಕಿಸಿ, ಅವಶ್ಯಕತೆ ಇದ್ದಲ್ಲಿ ತಿದ್ದುಪಡಿ ಮಾಡಿ, ಪ್ರಧಾನ ಸಂಪಾದಕರಾಗಿ, ಸುಧಾಸೌರಭ ಪ್ರಕಾಶನಕ್ಕೆ ಮುಖ್ಯವಾಗಿ ನೆರವಾದರು.

ಅವರ ಸಾಧನೆಗೆ ರಾಷ್ಟ್ರಪತಿಪ್ರಶಸ್ತಿ ಸಹಿತ ನೂರಾರು ಪ್ರಶಸ್ತಿಗಳು ಅವರಿಗೆ ಸಂದಿವೆ. ಉತ್ತಮ ವಾಕ್ಪಟುತ್ವವನ್ನೂ ಹೊಂದಿದ್ದ ಇವರು ವಿದ್ವತ್ಸಭೆಗಳಲ್ಲಿ ಎಲ್ಲರೂ ತಲೆದೂಗುವಂತೆ ವಿಷಯ ಮಂಡಿಸುತ್ತಿದ್ದರು.

ಇವರು ವಾಲ್ಮೀಕಿ ರಾಮಾಯಣದ ಬಾಲಕಾಂಡ ಹಾಗೂ ಅಯೋಧ್ಯಾ-ಕಾಂಡದ ಸಂಪೂರ್ಣ ಕನ್ನಡ ಅನುವಾದ ಮಾಡಿಕೊಟ್ಟು, ನಮ್ಮ ಸಂಸ್ಥೆಯ ಸಮಗ್ರ ವಾಲ್ಮೀಕಿ ರಾಮಾಯಣ ಕನ್ನಡ ಅನುವಾದ ಬೃಹತ್ಕಾರ್ಯಕ್ಕೆ ವಿಶೇಷ ಸಹಕಾರ ನೀಡಿದ್ದಾರೆ.

ವಿಶೇಷವೆಂದರೆ, ವಿದ್ವಾಂಸರ ಮೂಲಕ ವಾಲ್ಮೀಕಿ ರಾಮಾಯಣಕ್ಕೆ ಕನ್ನಡ ಅನುವಾದ ಮಾಡಿಸಬೇಕು ಎಂದು ಅಂದುಕೊಂಡ ಕೂಡಲೇ ನೆನಪಾದದ್ದು ಪುರಾಣಿಕರು. ಅವರನ್ನು ಸಂಪರ್ಕಿಸಿ ಬಾಲಕಾಂಡದ ಅನುವಾದ ಮಾಡಿಕೊಡ-ಬೇಕೆಂದು ಕೇಳಿಕೊಂಡೆವು. ಆಶ್ಚರ್ಯವೆಂದರೆ, ನಾವು ಅವರನ್ನು ಭೇಟಿಯಾಗಿ ಬಂದ ಹತ್ತುದಿನಗಳಲ್ಲಿಯೇ ಪಂ. ಹಯವದನ ಪುರಾಣಿಕರು ಬಾಲಕಾಂಡದ ಪೂರ್ಣ ಅನುವಾದ ಮಾಡಿ ನಮಗೆ ಕಳಿಸಿಬಿಟ್ಟರು. ಅವರ ಆ ವೇಗದ ಬರವಣಿಗೆ,

ಅವರ ವ್ಯುತ್ಪತ್ತಿ ಇವುಗಳನ್ನು ಕಂಡು ಬಹಳ ಆಶ್ಚರ್ಯಚಕಿತರಾದೆವು. ಅಂತಹ ಅದ್ಭುತ ಬರಹಗಾರರು ಪಂ. ಹಯವದನ ಪುರಾಣಿಕರು.

ಇಂತಹ ಅಪಾರ ಸದ್ಗುಣಗಳ ಗಣಿಗಳಾಗಿದ್ದ ಪಂ. ಹಯವದನ ಪುರಾಣಿಕರು ಇತ್ತೀಚೆಗೆ ದೈವಾಧೀನರಾದದ್ದು ಭಗವಂತನ ಸಂಕಲ್ಪ. ಅವರಿಗೆ ಜನ್ಮಜನ್ಮಾಂತರ-ದಲ್ಲಿಯೂ ಶ್ರೀಮದಾಚಾರ್ಯರ ಶಾಸ್ತ್ರದ ಅಧ್ಯಯನ-ಅಧ್ಯಾಪನ-ಲೇಖನಾದಿ-ಗಳನ್ನು ಮಾಡುವ ಸೌಭಾಗ್ಯವನ್ನು ಭಗವಂತ ಕೊಡಲಿ ಎಂದು ಪ್ರಾರ್ಥಿಸುತ್ತ, ಅವರಿಗೆ ಈ ಸಂದರ್ಭದಲ್ಲಿ ಸ್ಮರಣಪೂರ್ವಕವಾಗಿ ವಿಶೇಷ ನಮನಗಳನ್ನು ಸಲ್ಲಿಸುತ್ತಿದ್ದೇವೆ.

ಕೃತಜ್ಞತೆಗಳು

◆ ಯಾವುದೇ ಒಂದು ಕಾರ್ಯ ಯಶಸ್ವಿಯಾಗಿ ಪೂರ್ಣಗೊಳ್ಳಬೇಕಾದರೆ, ಗುರುಗಳ ಆಶೀರ್ವಾದ ಮುಖ್ಯ ಕಾರಣ. ಇಂದು ನಮ್ಮ ಸಮಗ್ರ ರಾಮಾಯಣ ಕನ್ನಡ ಅನುವಾದ ಯೋಜನೆ ಯಶಸ್ವಿಯಾಗಿ ಪೂರ್ಣಗೊಳ್ಳಲು ಪರಮಪೂಜ್ಯ-ರಾದ, **ಶ್ರೀಮದುತ್ತರಾದಿಮಠಾಧೀಶರಾದ, ಶ್ರೀ ೧೦೦೮ ಶ್ರೀಸತ್ಯಾತ್ಮತೀರ್ಥ-ಶ್ರೀಪಾದಂಗಳವರು** ನಮ್ಮ ಮೇಲೆ ಮಾಡಿದ ಪರಮಾನುಗ್ರಹವೇ ಪ್ರಮುಖ ಕಾರಣ. ನಮ್ಮ ಯೋಜನೆಯ ವಿವರವನ್ನು ತಿಳಿಸಿ ಶ್ರೀಪಾದಂಗಳವರಲ್ಲಿ ಪ್ರಾರ್ಥಿಸಿಕೊಂಡಾಗ, ಶ್ರೀಗಳವರು ಶ್ರೀಮೂಲರಾಮನಲ್ಲಿ ವಿಶೇಷವಾಗಿ ಪ್ರಾರ್ಥಿಸಿ, ಅನುಗ್ರಹಪೂರ್ವಕವಾಗಿ ಮಂತ್ರಾಕ್ಷತೆ ಇತ್ತು ಹರಸಿದರು. ಜೊತೆಗೆ ತಮ್ಮ ಅಮೂಲ್ಯವಾದ ಅನುಗ್ರಹಸಂದೇಶವನ್ನೂ ಕಳಿಸಿ ಪರಮಾನುಗ್ರಹ ಮಾಡಿದ್ದಾರೆ. ಅಂತಹ ಗುರುಗಳಿಗೆ ಭಕ್ತಿಪೂರ್ವಕ ಸಾಷ್ಟಾಂಗ ಪ್ರಣಾಮಗಳು.

◆ ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಅಧ್ಯಯನ-ಸಂಶೋಧನಗಳಿಗೆ ಅತ್ಯುಪಯುಕ್ತವಾದ ನೂರಾರು ಅಪೂರ್ವ ಗ್ರಂಥಗಳನ್ನು ಪ್ರಕಾಶನ ಮಾಡಿ ವಿದ್ವಾಂಸರ, ಸಂಶೋಧಕರ, ವಿದ್ಯಾರ್ಥಿಗಳ, ಜಿಜ್ಞಾಸುಗಳ ಮೆಚ್ಚುಗೆಗೆ ಪಾತ್ರವಾಗಿರುವ ಉತ್ತಮಸಂಸ್ಥೆಯಾಗಿದೆ. ಸಂಸ್ಥೆಯು ಈ ಮಟ್ಟಕ್ಕೆ ಬೆಳೆಯುವುದಕ್ಕೆ ಮುಖ್ಯಕಾರಣ **ಪ್ರೊ. ಕೆ. ಟಿ. ಪಾಂಡುರಂಗಿ** ಅವರು. ಸಂಸ್ಥೆಯನ್ನು ಕಟ್ಟಿ, ಅದರ ಸರ್ವಾಂಗೀಣ ಅಭಿವೃದ್ಧಿಗೆ ಬಹಳ ಪರಿಶ್ರಮವಹಿಸಿ, ಬೆಳೆಸಿ, ಇಂದು ಉನ್ನತಮಟ್ಟಕ್ಕೆ ತಂದು ನಿಲ್ಲಿಸಿದ್ದಾರೆ. ಸಮಗ್ರ ವಾಲ್ಮೀಕಿ ರಾಮಾಯಣಕ್ಕೆ ಕನ್ನಡ ಅನುವಾದ ಮಾಡಿಸಿ ಪ್ರಕಾಶನ ಮಾಡಬೇಕೆಂದು ಅವರು ಇಚ್ಛೆಪಟ್ಟಿದ್ದರು. ಅವರ ಇಚ್ಛೆಗೆ ತಕ್ಕಂತೆ ಇಂದು ಸಮಗ್ರ ವಾಲ್ಮೀಕಿ ರಾಮಾಯಣಕ್ಕೆ

ಅನುವಾದ ಸಿದ್ಧವಾಗಿ ಪ್ರಕಾಶನವಾಗುತ್ತಿದೆ. ಆದರೆ ದೈವಸಂಕಲ್ಪ. ಇಂದು ಆ ಕಾರ್ಯವನ್ನು ನೋಡಿ ಸಂತೋಷಪಡಲು ಅವರು ನಮ್ಮೊಂದಿಗೆ ಇಲ್ಲ. ಆದರೂ ಅವರ ಸಂಕಲ್ಪ ಇಂದು ನೆರವೇರಿದೆ ಎಂಬ ಸಂತೃಪ್ತಿ ನಮಗುಂಟಾಗಿದೆ. ಅಂತಹ ಸಂಸ್ಥೆಯ ರೂವಾರಿಗಳು, ನಮ್ಮೆಲ್ಲರಿಗೆ ಮಾರ್ಗದರ್ಶಕರೂ ಆಗಿದ್ದ **ಪ್ರೊ. ಕೆ. ಟಿ. ಪಾಂಡುರಂಗಿ** ಅವರಿಗೆ ನನ್ನ ವಿಶೇಷ ನಮಸ್ಕಾರಗಳು.

♦ ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಕೈಗೊಂಡಿರುವ ಸಮಗ್ರ ರಾಮಾಯಣ ಕನ್ನಡ ಅನುವಾದ ಯೋಜನೆಯಲ್ಲಿ ನಾಡಿನ ಪ್ರಖ್ಯಾತ ವಿದ್ವಾಂಸರಾದ **ಡಾ. ಜಯತೀರ್ಥಾಚಾರ್ಯ ಮಳಗಿ** ಅವರದ್ದೂ ಬಹಳ ವಿಶೇಷ ಪಾತ್ರವಿದೆ. ಅನೇಕ ವಿದ್ವಾಂಸರಿಂದ ಸಮಗ್ರ ರಾಮಾಯಣಕ್ಕೆ ಕನ್ನಡ ಅನುವಾದ ಮಾಡಿಸಿ ಪ್ರಕಾಶನ ಮಾಡಬೇಕೆಂದು ಸಂಕಲ್ಪಿಸಿದಾಗ, ಸಮಗ್ರ ರಾಮಾಯಣದ ಮುನ್ನುಡಿ ಯಾರು ಬರೆಯಬೇಕು ? ಎಂದು ಪ್ರಶ್ನೆ ಎದುರಾಯಿತು. ಆಗ ನಮಗೆ ನೆನಪಾದದ್ದು ಮಳಗಿ ಜಯತೀರ್ಥಾಚಾರ್ಯರು. ಕಾರಣ ಜಯತೀರ್ಥಾಚಾರ್ಯರು ಅತ್ಯಂತ ಹಿರಿಯ ವಿದ್ವಾಂಸರು. ಅತ್ಯುತ್ತಮ ಲೇಖಕರು. ಸದಾ ಅಧ್ಯಯನಶೀಲರು. ಮಹಾಭಾರತ-ರಾಮಾಯಣಗಳಲ್ಲಿ ಬಹಳ ವಿಶೇಷ ಕೃಷಿ ಮಾಡಿದವರು. ರಾಮಾಯಣದ ಎಲ್ಲ ಭಾಷೆಗಳ ಗ್ರಂಥಗಳನ್ನೂ ಓದಿ ತಿಳಿದವರು. ಮಹಾಭಾರತದ, ರಾಮಾಯಣದ ಪ್ರತಿಯೊಂದು ಪಾತ್ರದ ಬಗ್ಗೆಯೂ ಆಳವಾದ ಅಧ್ಯಯನ-ಜ್ಞಾನ ಅವರದ್ದು. ಅವರು ಬರೆದಿರುವ ಅನೇಕ ಗ್ರಂಥಗಳೇ ಅದಕ್ಕೆ ಸಾಕ್ಷಿ. ಇತಿಹಾಸತಜ್ಞರು. ಈ ಹಿನ್ನಲೆಯಲ್ಲಿ ಸಮಗ್ರ ರಾಮಾಯಣಕ್ಕೆ ಮುನ್ನುಡಿ ಬರೆದುಕೊಡಬೇಕೆಂದು ನಾವು ವಿಜ್ಞಾಪಿಸಿಕೊಂಡಾಗ, ತಮ್ಮ ಈ ಇಳಿವಯಸ್ಸಿನಲ್ಲಿ ವಿಸ್ತಾರವಾದ ಮುನ್ನುಡಿ ಬರೆದುಕೊಟ್ಟು ನಮಗೆ ವಿಶೇಷ ಸಹಕಾರ ನೀಡಿದ್ದಾರೆ. ಅವರ ವಿಸ್ತೃತವಾದ ಮುನ್ನುಡಿಯನ್ನು ಮುಂದೆ ನೀಡಲಾಗಿದೆ. ಎಲ್ಲರೂ ತಪ್ಪದೇ ಓದಲೇಬೇಕು.

ಆದರೆ ದೈವಸಂಕಲ್ಪಕ್ಕೆ ಅನುಸಾರವಾಗಿ ಅವರು ಇತ್ತೀಚೆಗೆ ಇಹಲೋಕ ತ್ಯಜಿಸಿ ಸ್ವರ್ಗವಾಸಿಗಳಾಗಿದ್ದಾರೆ. ಅವರಿಗೂ ನಮಗೂ ಅತ್ಯಂತ ಆತ್ಮೀಯ ಒಡನಾಟ ಇತ್ತು. ಸಂಸ್ಥೆಯ ಮೇಲೆ ಬಹಳ ವಿಶೇಷವಾದ ಅಭಿಮಾನ ಇಟ್ಟುಕೊಂಡಿದ್ದರು.

ತಮ್ಮ ಇಳಿವಯಸ್ಸಿನಲ್ಲಿ ಅನಾರೋಗ್ಯದ ಪರಿಸ್ಥಿತಿಯಲ್ಲಿಯೂ ಸಹ ನಮ್ಮ ಮೇಲಿನ, ಸಂಸ್ಥೆಯ ಮೇಲಿನ ಅಭಿಮಾನದಿಂದ ತಮ್ಮ ವಿಸ್ತೃತವಾದ ಮುನ್ನುಡಿ ಬರೆದುಕೊಟ್ಟಿದ್ದಾರೆ. ಅಂತಹ **ದಿ. ಡಾ. ಜಯತೀರ್ಥಾಚಾರ್ಯ ಮಳಗಿ** ಅವರಿಗೆ ಈ ಸಂದರ್ಭದಲ್ಲಿ ಸ್ಮರಣಪೂರ್ವಕವಾಗಿ ವಿಶೇಷ ನಮಸ್ಕಾರಗಳನ್ನು ಸಲ್ಲಿಸುತ್ತಿದ್ದೇವೆ.

♦ ಸಮಗ್ರ ರಾಮಾಯಣ ಕನ್ನಡ ಅನುವಾದ ಪ್ರಕಾಶನಕಾರ್ಯಕ್ಕೆ **ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನದ** ಎಲ್ಲ ವಿದ್ವಾಂಸರು, ಪದಾಧಿಕಾರಿಗಳು, ಸದಸ್ಯರು ವಿಶೇಷವಾಗಿ ಸಹಕರಿಸಿದ್ದಾರೆ.

♦ ಶೋಧಕೇಂದ್ರದ ಸಂಶೋಧಕರಾದ **ಡಾ. ಕಾಂತೇಶಾಚಾರ್ಯ ಕದರಮಂಡಲಗಿ** ಅವರು ಹಾಗೂ ಸಂಶೋಧನಪ್ರತಿಷ್ಠಾನದ ಕಾರ್ಯದರ್ಶಿಗಳಾದ **ಡಾ.ಎ.ಬಿ. ಶಾಮಾಚಾರ್** ಮತ್ತು ಖಜಾಂಚಿಗಳಾದ **ಡಾ. ಎಸ್. ಆರ್. ಪಾಂಡುರಂಗಿ** ಅವರು ನಮ್ಮ ಈ ಸಮಗ್ರ ರಾಮಾಯಣ ಕನ್ನಡ ಅನುವಾದ ಪ್ರಕಾಶನಕಾರ್ಯಕ್ಕೆ ವಿಶೇಷವಾಗಿ ಸಹಕಾರ ನೀಡಿ, ಯಶಸ್ವಿಗೊಳಿಸಿದ್ದಾರೆ. ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

♦ ಗ್ರಂಥ ಅಂದವಾಗಿ ಹೊರಬರಲು ಅಂದವಾದ ಅಕ್ಷರಜೋಡಣೆ ಹಾಗೂ ಸುಂದರವಾದ ಮುದ್ರಣವೂ ಕಾರಣ. ಶ್ರೀಯುತ ಫಣಿ ಅವರು ಬಹಳ ಪರಿಶ್ರಮಪೂರ್ವಕವಾಗಿ ಅಂದವಾಗಿ ಅಕ್ಷರಜೋಡಣೆ ಮಾಡಿಕೊಟ್ಟಿದ್ದಾರೆ. ಮತ್ತು ವಾಗರ್ಥ ಮುದ್ರಣಾಲಯ ಅವರು ರಾಮಾಯಣದ ಈ ಅನುವಾದ ಕೃತಿಯನ್ನು ಸುಂದರವಾಗಿ ಮುದ್ರಿಸಿ, ಓದುಗರ ಕೈ ಸೇರಿಸಿದ್ದಾರೆ. ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ
ಅಧ್ಯಕ್ಷರು,
ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನ

♦ ♦ ♦

॥ ಶ್ರೀದಿಗ್ವಿಜಯರಾಮೋ ವಿಜಯತೇ ॥
॥ ಶ್ರೀಭಾರತೀರಮಣಾಯ ನಮಃ ॥
॥ ಸಮಸ್ತಗುರುಭ್ಯೋ ನಮಃ ॥

ಸಮಗ್ರ ವಾಲ್ಮೀಕಿರಾಮಾಯಣಕ್ಕೆ ಮುನ್ನುಡಿ

ಜಯತ್ಯಜೋಽಕ್ಷೀಣಸುಖಾತ್ಮಬಿಂಬಃ
ಸ್ವೈಶ್ವರ್ಯಕಾಂತಿಪ್ರತತಃ ಸದೋದಿತಃ ।
ಸ್ವಭಕ್ತಸಂತಾಪದುರಿಷ್ಟಹಂತಾ
ರಾಮಾವತಾರೋ ಹರಿರೀಶಚಂದ್ರಮಾಃ ॥

(ಮ.ಭಾ.ತಾ.ನಿ. ಶ್ರೀಮಧ್ವರು)

ವಿಶಿಷ್ಟಕಾರ್ಯಕ್ಕಾಗಿ ದೇವರು ಮೇಲಿಂದ ಕೆಳಿಗಿಳಿಯುವದು ಅವತರತಿ, ಅವತಾರ. ಹುಟ್ಟಿಲ್ಲದ ಹೆದ್ದೈವ, ನಾಶವಿಲ್ಲದ ಈಶ, ಜ್ಞಾನಾನಂದಮಯ. ಸೌಂದರ್ಯ, ತೇಜಸ್ಸು ಅವನ ಸ್ವರೂಪ. ಎಲ್ಲೆಡೆ ಈ ರಾಮಚಂದ್ರನ ಬೆಳಕು ಸದಾ ಪೂರ್ಣಚಂದ್ರ . ಈ ಚಂದ್ರನ ಕಥೆ ಹಾಲುಹೊಳೆ. ಬೆಳ್ಳಗಿನ ಗಂಗೆ, ಶುದ್ಧ ಜೀವನ, ಭಕ್ತರ ತಾಪ ಕಳೆವ ತಂಪುರೂಪಿ, ಅನಿಷ್ಟ ತರಿಯುವ, ಪಾನಕ್ಕೆ ತುಂಗೆ, ಇಂಪು ನೀಡುವ, ಸಂಸಾರ ಕಳೆವ, ಈ ಹರಿಚಂದ್ರ , ರಾಮಚಂದ್ರ. ನಿತ್ಯವಾದದ್ದು ರಾಮನ ಕೀರ್ತಿಕೌಮುದಿ. ಇದು ರಾಮರೂಪ.

ಪದ್ಮಪುರಾಣದಲ್ಲಿ ವೇದವ್ಯಾಸರು ಶ್ರೀರಾಮನನ್ನು 'ರಾಮಚಂದ್ರ' ಎಂದಿರುವರು. ಪರಶುರಾಮ, ಶ್ರೀರಾಮರು ಒಬ್ಬನೇ ಶ್ರೀಹರಿಯ ಅವತಾರ. ಆದರೆ ಅವತಾರಭೇದ ಉಲ್ಲೇಖಿಸಲು ಅಯೋಧ್ಯೆಯ ರಾಮನನ್ನು 'ಚಂದ್ರ' ಶಬ್ದ ವಿಶೇಷಣದೊಂದಿಗೆ ರಾಮಚಂದ್ರನೆಂದಿರುವರು. ಶ್ರೀರಾಮನ ಅಲೌಕಿಕ ಸೌಂದರ್ಯ, ಲೋಕಪ್ರಿಯತಾ, ಆಹ್ಲಾದಕತ್ತ್ವ, ಸೌಮ್ಯತ್ತ್ವ, ಶಾಂತಸ್ವಭಾವ, ನಿರ್ಮಲತೆ ಮೊದಲಾದ ಗುಣಗಳ ಅನುಸಂಧಾನಕ್ಕೆ 'ಚಂದ್ರ' ವಿಶೇಷಣವನ್ನು ಶ್ರೀಮಧ್ವರು ನೀಡಿದರು. ವಾಲ್ಮೀಕಿಯು ರಾಮಾಯಣದುದ್ದಕ್ಕೂ ಚಂದ್ರನ ಉಪಮೆಯನ್ನು ಶ್ರೀರಾಮನಿಗೆ ಕೊಟ್ಟಿರುವ.

'ರಾಮಂ' ಚಂದ್ರಮಿವೋದಿತಮ್ (ಅಯೋಧ್ಯಾಕಾಂಡ ೪೪-೨೨)

'ರಾಮಮುಖಂ' ಪೂರ್ಣಚಂದ್ರಮಿವೋದಿತಮ್ (ಯುದ್ಧ ೩೩-೩೨)

'ರಾಮಸ್ಯ' ಪೂರ್ಣಚಂದ್ರಾನನಸ್ಯಾಥ (ಅಯೋಧ್ಯಾ ೧–೪೪)
'ರಾಮಃ' ಸೋಮವತ್ಪ್ರಿಯದರ್ಶನಃ (ಬಾಲಕಾಂಡ ೧–೧೮)
'ರಾಮಃ' ಲೋಕಕಾಂತಃ ಶಶೀ ಯಥಾ (ಸುಂದರ ೩೪–೨೮)
'ರಾಮವದನಮ್' ಉದಿತಪೂರ್ಣಚಂದ್ರಕಾಂತಮ್ (ಯುದ್ಧ ೧೧೪–೩೫)
''ರಾಮಚಂದ್ರಮಸಂದೃಷ್ಟ್ವಾ ಗ್ರಸ್ತಂ ರಾವಣರಾಹುಣಾ''
(ಯುದ್ಧ ೬–೧೦೨–೩೨)

ರಾಮನೆಂಬ ಚಂದ್ರನನ್ನು ರಾವಣನೆಂಬ ರಾಹುಗ್ರಹ ಗ್ರಹಿಸಿತು. ಅದನ್ನು ನೋಡಿ ವಾನರರು, ದೇವತೆಗಳು, ಗಾಬರಿಯಾದರಂತೆ. ಶ್ರೀಮಧ್ವರು ವೇದವ್ಯಾಸರನ್ನು ಅಜ್ಞಾನದ ಅಂಧಃಕಾರ ಕಳೆಯುವ ಸೂರ್ಯನಿಗೂ, ಶಾಂತಸ್ವಭಾವದ ರಾಮನನ್ನು ಚಂದ್ರನಿಗೂ, ಗಹನಗಂಭೀರ ವ್ಯಕ್ತಿತ್ವದ ಕೃಷ್ಣನನ್ನು ಸಾಗರಕ್ಕೆ ಹೋಲಿಸಿ ವಂದಿಸಿರುವರು.

ರಾಮ ಅನಂತರೂಪಿ. ಅನಂತಕಾರ್ಯ, ಮಹಿಮೆ ಅಪಾರ, ತತ್ತ್ವ ಅಸಂಖ್ಯ, ಉಪದೇಶ ಅನೇಕ, ರೂಪ ಮನೋಹರ, ಮುದಾಹರ, ಗಹನ ಗಂಭೀರ, ಸರಸ ಸುಂದರ, ಅಂತವಿಲ್ಲದ ಅನಂತಗುಣ. ರಾಮನದು ಮುಗಿಯದ ಕಥೆ, ಮಾಗದ ಕಥೆ, ಶ್ರವಣ ರಮಣೀಯ, ಸದಾ ಸ್ಮರಣೀಯ, ಸರ್ವರಿಂದ ಅನುಕರಣೀಯ, ನಿತ್ಯವರ್ಣನೀಯ, ನಿರಂತರ ಮನನೀಯ, ರಾಮನ ಆದರ್ಶ ಆದರಣೀಯ, ಆಚರಣೀಯ, ಪಾವನಕಾರಕ, ಪಾಪಪರಿಹಾರಕ, ಮಂಗಲದಾಯಕ. ರಾಮನ ಕಥೆ ಹೇಳುವ ಶಬ್ದ, ಹಾಡುವ ವಾಕ್ಯ, ಕೀರ್ತಿ ಸಾರುವ ವರ್ಣ, ತಿಳಿಸುವ ಅಕ್ಷರ, ಎಲ್ಲವೂ ಮನುಕುಲಕೆ ಚೈತನ್ಯದಾಯಕ, ಸ್ಫೂರ್ತಿಪ್ರಚೋದಕ, ಆದರ್ಶಬೋಧಕ, ದೋಷನಿವಾರಕ, ಬಾಳಲು ಬೆನ್ನೆಲುಬು. ಬದುಕಲು ಸ್ಥಿರನೆಲೆದಾಯಕ. ನಿಲ್ಲಲು ಗಟ್ಟಿನೆಲ, ಭವಿಷ್ಯ ಹುಡುಕಲು, ಹಿಡಿಯಲು ಆಧಾರ. ಸಕಲ ಸನ್ನಿವೇಶದಲ್ಲಿ ಜೀವಿಸಲು ಮಹಾಶಕ್ತಿ, ಸಮಸ್ಯೆ ಎದುರಿಸುವ ಯುಕ್ತಿ.

ಸಂಸಾರ ದಾಟಲು ಹರಿಗೋಲು, ಮುನ್ನಡೆಯಲು ಉರುಗೋಲು, ಇದು ರಾಮನ ಕಥೆ, ರಾಮಚರಿತೆ, ರಾಮಾಯಣ ಕೇಳಿದರೆ ಭವ ಹಿಂಗುವುದು. ತಿಳಿದರೆ ಬದುಕು ಅಂದವಾಗುವುದು. ರಾಮಕಥೆ ಜೀವನ ರೂಪಿಸುವುದು, ಆದರ್ಶ ತುಂಬುವುದು, ಆನಂದಪಡಿಸುವುದು, ಬುದ್ಧಿ ಶುದ್ಧವಾಗುವುದು, ವೃದ್ಧಿ ಹೊಂದುವುದು. ಅನುಭವ ಹೆಚ್ಚುವುದು, ಮನದ ಕೊಳೆ ತೊಳೆಯುವುದು, ಜೀವನ ಪಾವನವಾಗುವುದು, ವಿವೇಕ ಬೆಳೆಯುವುದು.

ಶ್ರೀರಾಮನನ್ನು ವರ್ಣಿಸದ ಶಬ್ದಗಳು, ತಿಳಿಸದ ಮಾತುಗಳು, ವರ್ಣಿಸದ ವರ್ಣಗಳು, ಹೇಳದ ವಾಕ್ಯಗಳು, ಪಾಡದ ವರ್ಣಗಳು ಅಮಂಗಲ. ಶಬ್ದ ಒಂದು ಸಂಪತ್ತು, ಊರ್ಜಾ. ಮಹಾಶಕ್ತಿ. ಐವತ್ತೊಂದು ವರ್ಣಗಳಿಗೂ ಅವನೇ ಅಧಿಪತಿ. ''ಅಂ'' ಅಜಯದಿಂದ 'ಕ್ಷಂ' ನೃಸಿಂಹನವರೆಗೆ ವರ್ಣಗಳಿಗೆ ಅವನ ಐವತ್ತೊಂದು ರೂಪಗಳು. ಶಬ್ದಗಳೆಲ್ಲ, ಧ್ವನಿ, ವರ್ಣ, ಅಕ್ಷರ, ವಾಕ್ಯಗಳೆಲ್ಲ ಶ್ರೀರಾಮನ ಸಂಪತ್ತು, ಸ್ವರೂಪ, ಅವನ್ನು ಅವನಿಗೇ ಅರ್ಪಿಸುವುದು ಶಬ್ದಾರಾಧನೆ, ನಾಮಾತ್ಮಕ ಉಪಾಸನೆ.

ಚರಿತಂ ರಘುನಾಥಸ್ಯ ಶತಕೋಟಿಪ್ರವಿಸ್ತರಮ್ ।
ಏಕೈಕಮಕ್ಷರಂ ಪುಂಸಾಂ ಮಹಾಪಾತಕನಾಶನಮ್ ॥

–ಪದ್ಮಪುರಾಣ 5-1-143 ಬೃಹದ್ಧರ್ಮಪುರಾಣ

ಪಠ ರಾಮಾಯಣಂ ವ್ಯಾಸ ಕಾವ್ಯಬೀಜಂ ಸನಾತನಮ್ ।
ಯತ್ರ ರಾಮಚರಿತ್ರಂ ಸ್ಯಾತ್ ತದಹಂ ತತ್ರ ಶಕ್ತಿಮಾನ್ ॥

ಶ್ರೀರಾಮಕಥೆ ಶತಕೋಟಿ ವಿಸ್ತಾರವಾದದ್ದು, ರಾಮಕಥೆಯ ಒಂದೊಂದು ಅಕ್ಷರವೂ ಮಹಾಪಾಪನಾಶಕ. ಪ್ರಪಂಚಕ್ಕೆ ಬೀಜ. 'ರಂ' ಇದು ಅಗ್ನಿ ಬೀಜಾಕ್ಷರ, ಪಾಪಪುರುಷ, ಪಾಪಗಳನ್ನು ಸುಡುವುದು. ಅದಕ್ಕೇ 'ರಾಮ'ಶಬ್ದ, ರಾಮಕಥೆ ಪಾಪವಿನಾಶಕ, ರಾಮಶಬ್ದದಲ್ಲಿ ಅನಂತ ವೇದಗಳ, ನಾಮಗಳ ಸರ್ವಶಕ್ತಿ.

ಶ್ರೀರಾಮ ಮಂಗಲಮಯ. ''ಮಂಗಲ ಭವನ, ಅಮಂಗಲ ಹಾರಿ'' ಎನ್ನುವರು ತುಳಸೀದಾಸರು.

''ಶ್ರೀರಾಮನನ್ನು ತಿಳಿಯದ ಬುದ್ಧಿ, ಪ್ರೀತಿಸದ ಮನಸ್ಸು, ಬಾಗದ ದೇಹ, ಪೂಜಿಸದ ಕೈಗಳು, ಹೇಳದ ಹಾಡದ ಬಾಯಿ, ಕೇಳದ ಕಿವಿ ಅನರ್ಥಕ. ಅಂತಹ ಬದುಕು ವ್ಯರ್ಥ. ಅದೇನು ಸಾರ್ಥಕ? ಸರ್ವಕೊಟ್ಟವ ಶ್ರೀರಾಮ, ಅವನೇ ಸರ್ವತ್ರ ಸರ್ವದಾ ಸರ್ವಾಧಾರ, ಸರ್ವಾಕಾರ, ಸರ್ವಾಶ್ರಯ, ಸರ್ವೋತ್ಪಾದಕ, ಸರ್ವಪಾಲಕ, ಸರ್ವಸಂಹಾರಕ, ಸರ್ವನಿಯಾಮಕ, ಸರ್ವಪ್ರೇರಕ, ಸರ್ವಪ್ರವರ್ತಕ, ಸರ್ವನಿವರ್ತಕ, ಯಥಾಯೋಗ್ಯ ಸರ್ವಜ್ಞಾನಾಜ್ಞಾನ-ಬಂಧಮೋಕ್ಷಪ್ರದ, ಸರ್ವಸತ್ತಾಪ್ರದ, ಸರ್ವಶಬ್ದವಾಚ್ಯ, ಸರ್ವಶಬ್ದಪ್ರವೃತ್ತಿ ನಿಮಿತ್ತ, ಸರ್ವಗುಣಾತಿಪರಿಮಪೂರ್ಣತಮ, ಸರ್ವದೋಷದೂರ, ಸರ್ವಾಚಿಂತ್ಯ, ಸರ್ವೋತ್ತಮ, ಸರ್ವೇಶ್ವರ, ಸರ್ವಾತ್ಯಂತವಿಲಕ್ಷಣ, ಸ್ವಗತಭೇದ ವಿವರ್ಜಿತ'' ಎಂದು ಶ್ರೀರಾಘವೇಂದ್ರರು ರಾಮನನ್ನು ವರ್ಣಿಸಿರುವರು.

ಶ್ರೀರಾಮಕೊಟ್ಟ ಬುದ್ಧಿ ರಾಮನನ್ನು ತಿಳಿಯಲು ಬಳಸಿದರೆ ಅದು ಜ್ಞಾನಯೋಗ, ಹೇಳಲು ಶಬ್ದ ಬಳಸಿದರೆ ಅದು ಶಬ್ದಯೋಗ, ರಾಮನ ಪ್ರೀತಿಗೆ ಮನಸ್ಸು ಬಳಸಿದರೆ ಅದು ಭಕ್ತಿಯೋಗ, ರಾಮನ ಪೂಜೆಗೆ ದೇಹ, ಇಂದ್ರಿಯ ಬಳಸಿದರೆ ಅದು ಕರ್ಮಯೋಗ. ಇವೆಲ್ಲ ಸೇರಿದರೆ ಅದೇ ಜೀವನಯೋಗ, ಸಾರ್ಥಕ ಬದುಕು. ಜೀವನದ ಶ್ರೇಯಸ್ಸು. ಇದು ರಾಮಕಥೆಯ ಆದೇಶ. ವಾಲ್ಮೀಕಿಯ ಸಂದೇಶ, ಶಾಸ್ತ್ರದ ಉಪದೇಶ.

ಶ್ರೀರಾಮಾಯಣ ಶ್ರಾವ್ಯಕಾವ್ಯ, ಭವ್ಯಗಾಥಾ, ದಿವ್ಯಕಥಾ, ಬಹುಬೋಧಕ. ಅಷ್ಟೇ ಬುದ್ಧಿಶೋಧಕ. ಭವತಾರಕ, ಬಾಳಿಗೊಂದು ಭರವಸೆ. ಬದುಕಲು ದಾರಿ, ಸಮಸ್ಯೆಗಳಿಗೆ ಪರಿಹಾರ, ತಿಳಿಯಲು ವೇದಾಂತ, ತತ್ತ್ವಜ್ಞಾನಕ್ಕೆ ಆಕರ. ನೀತಿಯ ಸಾಗರ, ವೇದಗಳಿಗೆ ವ್ಯಾಖ್ಯಾನ, ಸಾಹಿತ್ಯಕ್ಕೆ ಆಧಾರ. ಯಶಸ್ಸಿನ ರಹಸ್ಯ. ರಾಜನೀತಿಗೆ ಸಂವಿಧಾನ, ತಂತ್ರಗಾರಿಕೆಯ ಮೂಲಮಂತ್ರ. ಒಂಟಿಜೀವನಕ್ಕೆ ದೇವರನ್ನು ಗಂಟುಹಾಕುವುದು. ಸರ್ವರಿಗೂ ಧರ್ಮದ ನಂಟು ಜೋಡಿಸುವುದು. ಕರ್ತವ್ಯಕ್ಕೆ ಸ್ಫೂರ್ತಿ ಅಷ್ಟೇ ಸ್ವಚ್ಛಂದತೆಗೆ ಕಡಿವಾಣ. ಜೀವನಕ್ಕೆ ಉತ್ಸಾಹ, ಸಂಸಾರದಲ್ಲಿ ಸೋತವರಿಗೆ ಗೆಲುವಿನ ದಾರಿ. ಬದುಕಿಗೊಂದು ಹಬ್ಬ. ಸಂಸಾರಿಗಳಿಗೆ ಸ್ವರ್ಗ, ಅನುಭವಿಸಲು ಆನಂದ, ಆಸ್ವಾದಿಸಲು ಅಮೃತ. ಬಳಲಿದವರಿಗೆ ಭವೌಷಧಿ. ಜೀವಿಸಲು ಸಂಜೀವಿನಿ, ಸದಾ ಬೇಕೆನಿಸುವ ರಸಾಯನ. ವಿಶ್ವದ ಶಾಶ್ವತಸತ್ಯ. ನಿತ್ಯ, ವೇದ್ಯ, ಹೃದ್ಯ, ಸದಾ ಸಮಕಾಲೀನ ಸಾಹಿತ್ಯ. ಹಳತಾಗುವ ಭಯವಿಲ್ಲ, ಸರ್ವರೊಡನೆ ಸ್ಪಂದಿಸುವ ಸನಾತನ, ನಿತ್ಯನೂತನ.

''ರಾಮೋ ವಿಗ್ರಹವಾನ್ ಧರ್ಮಃ'' ಶ್ರೀರಾಮ ಧರ್ಮದ ಮೂರ್ತಿ. ಧರ್ಮದ ಪ್ರತಿಮೆ, ಹೃದಯದಲ್ಲಿ ಮನದಲ್ಲಿ ರಾಮನ ಸ್ಥಾಪನೆ ಎಂದರೆ ಧರ್ಮ, ನೀತಿಯ ಅರಿವಿನ ಸ್ಥಾಪನೆ, ಪಾಪದ ಮೇಲೆ ಪುಣ್ಯದ ಗೆಲುವು, ಅಧರ್ಮದ ಮೇಲೆ ಧರ್ಮದ ವಿಜಯ, ದುರ್ಗುಣಗಳ ಮೇಲೆ ಸದ್ಗುಣಗಳ ಸವಾರಿ, ತಮೋಗುಣದ ಮೇಲೆ ಸತ್ತ್ವಗುಣದ ಜಯ, ನಾಸ್ತಿಕತೆಯ ಸೋಲು. ಸಾತ್ತ್ವಿಕತೆಯ ಗೆಲುವು, ಇದು ಶ್ರೀರಾಮಕಥಾ.

ಶ್ರೀರಾಮ ಆಳರಿಯದ ಕಡಲು. ''ಸಮುದ್ರ ಇವ ಗಾಂಭೀರ್ಯೇ' (ವಾ.ರಾ.) ಉದ್ದಗಲ ತಿಳಿಯದ ರಾಮಸಾಗರ, ಮುಳುಗಲಾಗದ ಪ್ರವಾಹ. ದಾಟಲಾಗದ ಜಲಧಿ, ಸದಾ ತುಂಬಿ ಸೂಸುವ ಉದಧಿ. ಇಲ್ಲಿ ತಿಳಿದಷ್ಟೂ ತತ್ತ್ವಗಳಿವೆ. ಅರಿತಷ್ಟೂ ವಿಚಾರಗಳಿವೆ. ಏರಿದಷ್ಟೂ ಎತ್ತರವಿದೆ. ''ಧೈರ್ಯೇಣ ಹಿಮವಾನಿವ'' (ವಾ.ರಾ.)

ಧೈರ್ಯದಲ್ಲಿ ಹಿಮಾಲಯದಷ್ಟು ಉನ್ನತ. ಚಳಿಮಳೆಗಳಲ್ಲಿ ನಿರ್ವಿಕಾರ. ಗಟ್ಟಿಯಾದ ಧೈರ್ಯಶಾಲಿ, ಮುಟ್ಟಿದಷ್ಟೂ ಮುಗಿಲಿದೆ, ರಾಮಕಥೆ ಕ್ಷಿತಿಜ, ಮುಟ್ಟಲಾಗದು, ''ಯತೋ ವಾಚೋ ನಿವರ್ತಂತೇ, ಅಪ್ರಾಪ್ಯ ಮನಸಾ ಸಹ'' ಹೇಳಲು ಹೋದ ಮಾತು ಸೋತು ಮರಳುವುದು, ತಿಳಿಯಲು ಹೋದ ಮನಸ್ಸು ತಿಳಿಯಲಾಗದೇ ತಿರುಗಿ ಬರುವುದು, ಇದು ಗುಣಪೂರ್ಣ ರಾಮನ ಪರಿಪೂರ್ಣಕಥೆ. ಇಲ್ಲಿ ಅಗೆದಷ್ಟೂ ಆಳವಿದೆ. ತೆಗೆದಷ್ಟೂ ಮುತ್ತುಗಳಿವೆ. ಹೆಕ್ಕಿದಷ್ಟೂ ಹವಳಗಳಿವೆ. ಚಿಂತಿಸಿದಷ್ಟೂ ತತ್ತ್ವಗಳಿವೆ. ವಿಚಾರಗಳಿವೆ. ಶ್ರೀರಾಮ ನಿಸ್ಸೀಮ, ಅಸೀಮ, ಕಲ್ಲು ಕರಗುವ ರಸಧಾರೆ ಇದೆ. ಬುದ್ಧಿಜೀವಿಗಳು ತಲೆದೂಗುವ ಪ್ರಜ್ಞಾವಂತಿಕೆ ಇದೆ. ''ನ ತತ್ರ ವಾಗ್ ಗಚ್ಛತಿ, ನೋ ಮನೋ ನ ವಿದ್ಮ ನ ವಿಜಾನೀಮಃ'' ರಾಮನನ್ನು ಹೇಳಲು ಮಾತು ಸಾಲದು. ಮನಸ್ಸು ಸಾಗದು, ಹೇಳಲು ಆಗದು, ಶಬ್ದ ಸಮೀಪ ಹೋಗದು, ಎಲ್ಲವೂ ದೂರ ಉಳಿಯುವವು. ಶ್ರೀರಾಮನನ್ನು ಯಾರೂ ಪೂರ್ಣ ತಿಳಿದಿಲ್ಲ. ತಿಳಿಯಲಾರರು. ತಿಳಿಯಲು ಬಾರದು, ತಿಳಿಸುವ ಸಾಧನೆಗಳೇ ಈ ಸೋತಾಗ ಪೂರ್ಣ ತಿಳಿಯುವದೆಂತು?

ಇದು ರಾಮಕಥೆಯ ರಹಸ್ಯ, ಸ್ವಾರಸ್ಯ, ಸತ್ತ್ವ, ಮಹಿತ್ತ್ವ, ಹಿರಿಮೆ ಮಹಿಮೆ, ಗರಿಮೆ ಮೇಲ್ಮೆ.

''**ಬ್ರಹ್ಮಾऽಪಿ ತನ್ನ ಜಾನಾತಿ ಈಷತ್ ಸರ್ವೋ೯ऽಪಿ ಜಾನತೇ**'' (ಗೀ.ಭಾ.)

ರಾಮಾಯಣ ಶತಕೋಟಿ ಶ್ಲೋಕಗಳಿಂದ ವಿಸ್ತಾರವಾದದ್ದು, ಬ್ರಹ್ಮಾದಿಗಳು, ಬೃಹಸ್ಪತ್ಯಾದಿಗಳು ಪೂರ್ಣವಾಗಿ ತಿಳಿಯಲು ಅಸಾಧ್ಯ. ಅಲ್ಪ, ಸ್ವಲ್ಪ ಎಲ್ಲರೂ ತಿಳಿಯಲು ಸಾಧ್ಯ.

ಹಯಗ್ರೀವದೇವರು ರಚಿಸಿದ್ದು ಮೂಲರಾಮಾಯಣ, ಅದು ಸ್ವತಃ ಪ್ರಮಾಣ.

''ಋಗ್ಯಜುಃಸಾಮಥರ್ವಾಶ್ಚ ಭಾರತಂ ಪಂಚರಾತ್ರಕಮ್ ।
ಮೂಲರಾಮಾಯಣಂ ಚೈವ ಶಾಸ್ತ್ರಮಿತ್ಯಭಿಧೀಯತೇ ॥

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಮಹಾಭಾರತ, ಪಂಚರಾತ್ರ, ಶತಕೋಟಿ ಮೂಲರಾಮಾಯಣ ಇವುಗಳು ಮೂಲಮಾತೃಕೆಗಳು. ಸ್ವತಃ ಪ್ರಮಾಣ, ಪರಮಾತ್ಮನಿಂದಲೇ ನಿರ್ಮಿತ. ಇವೇ ಶಾಸ್ತ್ರಗಳು, ತತ್ತ್ವಜ್ಞಾನದ ಆಕರಗಳು. ರಾಮಾಯಣ ಅನಾದಿನಿತ್ಯ. ಸದಾ ಪ್ರಸ್ತುತ. ಸಮಸ್ಪಂದಿ, (ರೆಲಿವೆಂಟ್)

''ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ ।
ತಾವದ್ ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ ॥

ಉತ್ತುಂಗಬೆಟ್ಟಗಳು, ಹರಿಯುವ ನದಿಗಳು, ನಿತ್ಯ ಬೆಳಗುವ ಸೂರ್ಯ–ಚಂದ್ರರು ಇರುವವರೆಗೆ ಲೋಕದಲ್ಲಿ ಶ್ರೀರಾಮಕಥೆ ಜನಜೀವನದಲ್ಲಿ ಜೀವಂತವಾಗಿರುವುದು. ಯುಗಯುಗದಿಂದಿರುವ ಸೂರ್ಯಚಂದ್ರರು ಸನಾತನರು ಅನಾದಿನಿತ್ಯರು, ಅವರು ನಿತ್ಯಬೇಕು. ಹಾಗೆಯೇ ರಾಮಕಥೆ, ಪ್ರಾಚೀನ. ತ್ರೇತಾಯುಗದ ಇತಿಹಾಸ, ಅಷ್ಟೇ ಸಮೀಚೀನ. ಸದಾ ಸರ್ವರಿಗೂ ಬೇಕೇಬೇಕು. ಎಂದೂ ಸೂರ್ಯಚಂದ್ರರಂತೆ. ಬೇಕು ಅಕಾಲಿಕವಾಗುವುದಿಲ್ಲ. ಸದಾ ಸಕಾಲಿಕ. ನಿತ್ಯಪ್ರಸ್ತುತ. ಇದು ಆವಶ್ಯಕ. ಅನಿವಾರ್ಯ. ಬದುಕಿನ ಅವಿಭಾಜ್ಯ, ಲೋಕ–ಜೀವನದಲ್ಲಿ ಸದಾಜೀವಂತ.

ಭಾರತೀಯ ಸಂಸ್ಕೃತಿಯ ಆಧಾರ, ಭಾರತೀಯ ಸಂಸ್ಕೃತಿಯ ಸಾಧನೆ ರಾಮಾಯಣರೂಪದಲ್ಲಿ ಅರಳಿದೆ. ಇದು ಇತಿಹಾಸ ಮಾತ್ರವಲ್ಲ, ನಿತ್ಯಜೀವನದ ಅಭಿವ್ಯಕ್ತಿ. ಎಲ್ಲ ಯುಗಗಳ, ಕಾಲಗಳ, ಗುಣಗಳ, ತತ್ತ್ವಗಳನ್ನೊಳಗೊಂಡದ್ದು, ಅದಕ್ಕೇ ಸಮಕಾಲಿಕವೆನಿಸುವುದು.

ಪರಿಪೂರ್ಣ ತತ್ತ್ವದ ನಿತ್ಯವ್ಯಕ್ತಿ, ಅಭಿವ್ಯಕ್ತಿ, ಆದರೆ ರಾಮನ ರೂಪದಲ್ಲಿ ಮಾನವೀಯಜೀವನದ ಸಂಯೋಗವಿದೆ, ಜೀವನದ ಎಲ್ಲ ಸಮಸ್ಯೆಗಳಿವೆ. ಅವುಗಳ ಪ್ರಭಾವ, ಪರಿಣಾಮ, ಪರಿಹಾರವಿದೆ.

ರಾಮಕಥೆ ಪ್ರತಿಯೊಬ್ಬನಲ್ಲಿ ದೈವೀಗುಣಗಳ ಅಭಿವ್ಯಕ್ತಿ ಮಾಡುವುದು.

ಆ ಯುಗದ ಸಾಹಿತ್ಯದಲ್ಲಿ ಆ ಯುಗದ ಒಳಧ್ವನಿ ಮಾತ್ರ ಕೇಳಿಸುವುದು. ರಾಮಕಥೆಯಂತಹ ಸಾರ್ವಕಾಲಿಕ ಇತಿಹಾಸದಲ್ಲಿ ಸರ್ವಯುಗಗಳ ಧ್ವನಿ ಕೇಳಿಬರುವುದು. ಸರ್ವಕಾಲದ ಸಾರ್ವಭೌಮಸಾಹಿತ್ಯ. ಮಾನವತೆಯ ಜೊತೆಗೆ ಆತ್ಮೀಯತೆ ಸಾಧಿಸಿದ ಸಾಹಿತ್ಯ. ಸದಾಕಾಲ ಎಲ್ಲರ ಹೃದಯಕ್ಕೆ ಹತ್ತಿರವಾದ, ಗುಣದಲ್ಲಿ ಎತ್ತರವಾದ ಸಾಹಿತ್ಯ.

ಶ್ರೀರಾಮಕಥೆಗೆ ಹತ್ತಾರು ಪೈಲುಗಳು. ನೂರಾರು ಮುಖಗಳು. ಅನೇಕ ಬಗೆಯ ಮೈಮಾಟು. ನೀತಿ ನಿಲುವುಗಳು, ರೀತಿ ತತ್ತ್ವಗಳು. ವಿವಿಧ ಭೂಮಿಕೆಗಳು. ತಿಳಿಯಲು ಅಸಾಧ್ಯ ಹೇಳಲು ಅಶಕ್ಯ. ಶಬ್ದಗಳಲ್ಲಿ ಹಿಡಿಯುವುದು ಅಸಂಭವ. ಮಾತಿನಲ್ಲಿ ಕಟ್ಟಲಾಗದು.

ಶ್ರೀರಾಮನ ಕಥೆಯಲ್ಲಿ ಚರಿತ್ರಾಂಶವಿದೆ. ಯಥಾರ್ಥ ಇತಿಹಾಸವಿದೆ. ರಮ್ಯಕಾವ್ಯಾಂಶವಿದೆ. ವಾಸ್ತವ ತತ್ತ್ವವಿದೆ. ಕಲ್ಪನಾಂಶವಿದೆ. ಸಾಹಿತ್ಯವಿದೆ, ಸಂಗೀತವಿದೆ. ತಾಳಲಯಗಳಿವೆ. ವಾಲ್ಮೀಕಿಯ ರಾಮಾಯಣ ಹಾಡುವ ಹಾಡು. ಗಾನ ಮಾಡುವ ಕಾವ್ಯ ಕೇಳಲು ಇಂಪಾದ ಕಾವ್ಯ. ಶ್ರಾವ್ಯ ಭಾವ್ಯ, ಶ್ರವಣ ರಮಣೀಯ ಸಂಗೀತ ಕಾವ್ಯ. ಇದು ವಾಲ್ಮೀಕಿ ರಾಮಾಯಣದ ಅಪೂರ್ವತೆ.

''ಸರ್ವಶ್ರುತಿಮನೋಹರಮ್ (ಬಾಲ ೪-೨೩)
'ಪಾಠ್ಯೇ ಗೇಯೇ ಚ ಮಧುರಮ್' (ಬಾಲ ೪-೮)
'ಕಾವ್ಯಮೇತದಗಾಯತಾಮ್' (ಬಾಲ ೪-೯)
'ಅಗಾಯತಾಂ ಮಾರ್ಗವಿಧಾನಸಂಪದಾ (ಬಾಲ ೪-೩೯)
'ಜಗತುಸ್ತೌ ಸಮಾಹಿತೌ' (ಬಾಲ ೪-೧೮)
'ಇದಂ ಕಾವ್ಯಮಗಾಯತಾಮ್' (ಬಾಲ ೪-೧೪)
'ಮಧುರಂ ತಾವಣಾಯತಾಮ್ ॥ (ಬಾಲ ೪-೧೯)
'ವಿಶ್ರುತಾರ್ಥಮಗಾಯತಾಮ್ । (ಬಾಲ ೪-೨೮)
'ಶ್ರೋತ್ರಾಯ ಮುಖಂ ಗೇಯಮ್' (ಬಾಲ ೪-೨೯)
'ರಾಮಾಯಣಂ ಕಾವ್ಯಂ ಗಾಯೇಥಾಮ್' (ಉತ್ತರ ೯೩-೫)
'ಆಸ್ವಾದ್ಯಾಸ್ವಾದ್ಯ ಗಾಯತಾಮ್'' (ಉತ್ತರ ೯೩-೮)
'ಗೇಯಾ ಮಧುರಯಾ ಗಿರಾ' (ಉತ್ತರ ೯೩-೧೧)
'ಸುಮಧುರಂ ಗಾಯೇಥಾಃ' (ಉತ್ತರ ೯೩-೧೪)
'ಆದಿಪ್ರಭೃತಿ ಗೇಯಮ್' (ಉತ್ತರ ೯೩-೧೫)
'ಸರ್ವಂ ತತ್ರೋಪಗಾಯತಾಮ್' (ಉತ್ತರ ೯೪-೧)
'ಗೇಯೇನ ಸಮಲಂಕೃತಮ್' (ಉತ್ತರ ೯೩-೨)

ಹೀಗೆ ವಾಲ್ಮೀಕಿಯೇ ತನ್ನ ರಾಮಾಯಣವನ್ನು, ಆದಿಯಿಂದ ಕೊನೆಯವರೆಗೆ, ೨೪ ಸಾವಿರ ಶ್ಲೋಕಗಳೂ ಹಾಡುವ ಕಾವ್ಯ. ಲವಕುಶರು ಮಧುರ ಸಂಗೀತದಲ್ಲಿ ಲಯಬದ್ಧವಾಗಿ ಇದನ್ನು ಹಾಡಿದರು.

ನವರಸಗಳ ಸಮರಸವಿದೆ. ಮನಸ್ಸಿನ ವಿವಿಧ ರೂಪಗಳಿವೆ. ಹುದುಗಿದ ಸೂಕ್ಷ್ಮಾಂಶಗಳಿವೆ. ಅಧ್ಯಾತ್ಮದ ಅಪಾರ ಗುಣಗಳಿವೆ. ವೇದಾಂತದ ಪ್ರಮುಖ ಪ್ರಮೇಯಗಳಿವೆ. ಶಾಸ್ತ್ರದ ರಹಸ್ಯಗಳಿವೆ. ರಾಜರ ತೇಜಸ್ಸಿದೆ. ಜ್ಞಾನಿಯ ಗಾಂಭೀರ್ಯವಿದೆ. ಬ್ರಹ್ಮಚಾರಿಯ ಕರ್ತವ್ಯಗಳಿವೆ. ಗೃಹಸ್ಥನ ಧರ್ಮಗಳಿವೆ.

ಜೀವನದ ಆದರ್ಶಗಳಿವೆ. ವಿರಕ್ತನ ನಿಃಸ್ಪೃಹತೆ ಇದೆ. ತಂದೆಯ ಹೊಣೆಗಾರಿಕೆ ಇದೆ. ಮಗನ ಜವಾಬ್ದಾರಿಗಳಿವೆ. ಅಣ್ಣ ತಮ್ಮಂದಿರ ಬಾಂಧವ್ಯವಿದೆ. ಪರಸ್ಪರ ಪ್ರೀತಿ, ವ್ಯವಹಾರಗಳಿವೆ. ವ್ಯಕ್ತಿಜೀವನದ ಸಂದೇಶಗಳಿವೆ. ಕುಟುಂಬಜೀವನದ ಸಮಸ್ಯೆಗಳಿವೆ. ವಿಶ್ವಜೀವನದ ಸಂವಿಧಾನವಿದೆ. ವಿಶ್ವಧರ್ಮದ ನಿಯಮ, ಸಂಯಮಗಳಿವೆ. ಮನುಕುಲದ ಮೌಲ್ಯಗಳಿವೆ. ಜಗತ್ತಿಗೆ ಸಾರ್ವಕಾಲಿಕ ಸಂದೇಶವಿದೆ.

ಧರ್ಮಸೂಕ್ಷ್ಮಗಳ ಬೋಧೆ ಇದೆ. ವಿವೇಕದ ಸ್ವರಗಳಿವೆ. ಜೀವನರಹಸ್ಯದ ಅರಿವಿದೆ. ಭಾವುಕರಿಗೆ ಭಕ್ತಿಯ ಆಲಂಬನವಿದೆ. ಶರಣಾಗತಿಯ ರಹಸ್ಯವಿದೆ. ಸಮರ್ಪಣೆಯ ತತ್ತ್ವವಿದೆ. ಮುಮುಕ್ಷುಗಳಿಗೆ ಆಧ್ಯಾತ್ಮಿಕಜ್ಞಾನವಿದೆ. ಸಾಧನ-ಯಾತ್ರೆಯ ಮಜಲುಗಳಿವೆ.

ಬ್ರಾಹ್ಮಣರ ಆದರ್ಶವಿದೆ. ಕ್ಷತ್ರಿಯರ ಕರ್ತವ್ಯವಿದೆ. ಪತಿ, ಪತ್ನಿಯರ ಮೌಲ್ಯಾದರ್ಶಗಳಿವೆ.

ಅಂತೆಯೇ ಧರ್ಮ+ಸಮಾಜ+ಸಾಹಿತ್ಯ ರಾಮಕಥೆಯಿಂದ ಪ್ರಭಾವಿತವಾಗಿವೆ.

ಭಾರತೀಯ ಸಂಸ್ಕೃತಿಯ ಸಾರ್ವಂಗೀಣ ಚಿತ್ರಣವಿದೆ. ಸಮಂಜಸ ನಿರೂಪಣೆ ಇದೆ. ಸಂಸ್ಕೃತಿಯ ವಿವಿಧ ಆಯಾಮಗಳಿವೆ. ಇವೆಲ್ಲ ರಾಮಾಯಣದಲ್ಲಿ ಇದ್ದಷ್ಟು ಇನ್ನಾವ ಒಂದೇ ಕೃತಿಯಲ್ಲಿ ಸಂಗ್ರಹೀತವಾಗಿಲ್ಲ. ರಾಮಕಥೆ ಭಾರತೀಯ ಸಂಸ್ಕೃತಿಯ ನಿಯಂತ್ರಕ. ಪ್ರಕಾಶಕ, ದೇಶದ ನಾಗರಿಕತೆ, ಜನಜೀವನವನ್ನು ಪ್ರಭಾವಿತಗೊಳಿಸಿದೆ. ಇಂತಹ ಪ್ರಭಾವಕಾರಿ, ಪರಿಣಾಮಕಾರಿ ಕೃತಿ ಜಗದ ಯಾವ ದೇಶದಲ್ಲಿಯೂ ಇಲ್ಲ.

ದೇಶದ ಜನಜೀವನ, ರಾಜಕೀಯ, ಸಾಮಾಜಿಕ ಬದುಕು, ಜಾತಿಮತಗಳು ಯಾವುದರಿಂದ ನಿಯಂತ್ರಿತವಾಗುವವೋ ಅದೇ ಧರ್ಮ. ನೀತಿ ನಿಯಮ, ಸಂಯಮಗಳು, ಜೀವನದ ಆದರ್ಶಗಳು ಇಂದಿಗೂ ರಾಮಚರಿತೆಯ ರಾಮಾಯಣದಿಂದ ನಿಯಂತ್ರಿತ.

ರಾಮಕಥೆ ಮನುಕುಲಪೋಷಕ ರಸಾಯನ. ದೇಶದ ಜನಮಾನಸದ ಮೇಲೆ ಮಾಸದ ಪ್ರಭಾವಕಾರಿ. ಇದು ಬಲ್ಲವರ ಸೊತ್ತೇ ಎಂದೇನಿಲ್ಲ. ಅನಕ್ಷರಸ್ಥರ ಜೀವನದಲ್ಲಿಯೂ ಅವಿಭಾಜ್ಯ ಅಂಗ.

ರಾಮಾಯಣ ಇದು ಸೃಷ್ಟಿಯ ಅದ್ಭುತ. ಪ್ರಪಂಚದಲ್ಲಿ ದೊರೆತ ಮೊಟ್ಟ ಮೊದಲಕಾವ್ಯ. ವಾಲ್ಮೀಕಿ ಆದಿಕವಿ. ರಾಮಕಥೆ ಆದಿಕಾವ್ಯ.

ಶ್ರೀರಾಮ ಜಗದ್ವಂದ್ಯ. ಆರಾಧ್ಯದೈವ, ಔದಾರ್ಯದ ಮೂರ್ತಿ. ಸೌಂದರ್ಯಸಾರ. ಗುಣಪೂರ್ಣ. ಸಾಕ್ಷಾತ್ ಶ್ರೀಹರಿ. ಪರಬ್ರಹ್ಮ. ಪರಮಾತ್ಮಾ.

''ಸೀತಾ ಲಕ್ಷ್ಮೀ ಭವಾನ್ ವಿಷ್ಣುಃ'' (ವಾ.ರಾ.)

ಶ್ರೀರಾಮ ನೀನು ಸಾಕ್ಷಾತ್ ವಿಷ್ಣು, ಮಹಾಲಕ್ಷ್ಮೀ ಸೀತಾದೇವಿ ಎನ್ನುವ ವಾಲ್ಮೀಕಿ.

ಶ್ರೀರಾಮನ ಪ್ರಾಪ್ತಿಯೇ ಜೀವನದ ಗುರಿ. ಬಾಳಿಗೆ ಗರಿ. ಶ್ರೀರಾಮ ಜಗನ್ನಿಯಾಮಕ, ಮಹಾಕಾವ್ಯದ ನಾಯಕ. ಮರ್ಯಾದಾ ಪುರುಷೋತ್ತಮ. ಪತಿತಪಾವನ. ಈ ರಾಮನ ದಿವ್ಯಚರಿತೆಯೇ 'ರಾಮಾಯಣ.'

'ರಾಮಃ ಅಯನಂ' (ಆಶ್ರಯ) ಪ್ರತಿಪಾದ್ಯ ಅದಕ್ಕೇ ಇದು ರಾಮಾಯಣ. 'ರಾಮಸ್ಯ ಅಯನಂ' ರಾಮಾಯಣಂ. ರಾಮನ ಚರಿತ್ರೆ.

'ರಾಮಃ ಅಯ್ಯತೇ ಪ್ರಾಪ್ಯತೇ ಅನೇನ ಇತಿ ರಾಮಾಯಣಮ್' ಯಾವ ವಾಙ್ಮಯದಿಂದ ಶ್ರೀರಾಮನನ್ನು ಹೊಂದಬಹುದೋ ಅದು ರಾಮಾಯಣ. ಶ್ರೀರಾಮ ಪ್ರತಿಪಾದಕ, ಪ್ರಾಪಕ ಅದು ರಾಮಾಯಣ. ಶ್ರೀರಾಮನ ಸರ್ವೋತ್ತಮತ್ತ್ವ, ಸರ್ವಗುಣಪೂರ್ಣತ್ವ ಪ್ರತಿಪಾದಿಸುವ ಆದಿಕಾವ್ಯ ರಾಮಾಯಣ.

ಶ್ರೀರಾಮನ ಚರಿತೆಯೇ ರಾಮಾಯಣ

ಇದು ವಾಲ್ಮೀಕಿಯ ಇಂಗಿತ. ರಾಮನ ಕಥೆಯೇ ರಾಮಾಯಣ, ಪ್ರಮಾಣಗಳು.

'ಯಃ ಪಠೇದ್ ರಾಮಚರಿತಮ್' (ಬಾಲ ೧-೯೮)
'ರಾಮಸ್ಯ ಚರಿತಂ ಕೃತ್ಸ್ನಮ್'' (ಬಾಲ ೨-೩೨)
'ವೃತ್ತಂ ಕಥಯ ವೀರಸ್ಯ' (ಬಾಲ ೨-೩೩)
'ಕುರು ರಾಮಕಥಾಂ ಪುಣ್ಯಾಮ್' (ಬಾಲ ೨-೩೬)
'ರಘುವಂಶಸ್ಯ ಚರಿತಮ್' (ಬಾಲ ೩-೯)
'ರಘುವರಚರಿತಂ ಮುನಿಪ್ರಣೀತಮ್' (ಬಾಲ ೨-೪೩)

'ಪ್ರಾಪ್ತರಾಜ್ಯಸ್ಯ ರಾಮಸ್ಯ + ಚಕಾರ ಚರಿತಂ ಕೃತ್ಸ್ನಮ್ (ಬಾಲ ೪–೧)
'ರಾಮಸ್ಯ ಯೇ ಚೇಮಾಂ ಸಂಹಿತಾಮ್ (ಯುದ್ಧ ೧೩೧–೧೨೪)
'ಚರಿತಂ ರಾಘವಸ್ಯ' (ಉತ್ತರ ೧೧೧–೧೯)
'ರಘುನಾಥಸ್ಯ ಚರಿತಮ್' (ಉತ್ತರ ೧೧೧–೨೧)
'ಶುಶ್ರಾವ ರಾಮಚರಿತಮ್' (ಉತ್ತರ ೭೪–೧೪–೧೬)
'ಕೃತ್ಸ್ನಂ ರಾಮಾಯಣಂ ಕಾವ್ಯಮ್' (ಬಾಲ ೨–೪೧)

ಶ್ರೀರಾಮನ ಕಥೆ, ಸೀತಾದೇವಿಯ ಚರಿತ್ರೆ, ರಾವಣನ ವಧಕಥೆ ಒಳ-ಗೊಂಡದ್ದು 'ರಾಮಾಯಣ.' ಪ್ರಧಾನ ವಿಷಯ ಶ್ರೀರಾಮಕಥಾ. ಅದೇ ರಾಮಾಯಣ.

'ಗಾಯಯಾಶ್ಚ ಸ್ವರೂಪಂ ತದ್ರಾಮಾಯಣಮಿತಿ ಸ್ಮೃತಮ್'

ತ್ರೇತಾಯುಗದ ಇತಿಹಾಸ ರಾಮಾಯಣ. ಆ ಯುಗದ ಸಂಸ್ಕೃತಿ ರಾಮಾಯಣ. ಧರ್ಮ, ನೀತಿ, ನಿಯಮ, ರೀತಿ, ರಾಜನೀತಿ, ಸಮಾಜನೀತಿ, ವ್ಯವಹಾರ, ವಿಚಾರ, ಜೀವನ ಇವು ಬೇರೆಯಾಗಿ ಉಳಿಯಲಿಲ್ಲ. ಸಂಸ್ಕೃತಿಯಲ್ಲಿ ಒಂದಾಗಿ ಬೆಸೆದವು.

ಇವೆಲ್ಲವುಗಳ ಕೇಂದ್ರಬಿಂದು ಶ್ರೀರಾಮ. 'ರಾಜಾ ಕಾಲಸ್ಯ ಕಾರಣಮ್' ಅಂದಿನ ರಾಜನಿಂದಾಗಿ ಸಮಯ, ಪರಿಸ್ಥಿತಿಗಳ ನಿರ್ಮಾಣ. ರಾಮನಿಂದಾಗಿ ರಾಮರಾಜ್ಯ .

'ರಾಮಾಯಣ' ವೇದದ ವ್ಯಾಖ್ಯಾನ. ಸದೃಷ್ಟಾಂತ ವ್ಯಾಖ್ಯಾನ, ವರ್ತಮಾನ ಜೀವನದಲ್ಲಿ ವೇದದ ಸೂತ್ರ , ಶಾಸ್ತ್ರ, ತಂತ್ರವನ್ನು ಕಾಣುವ ಬಗೆ. ವೇದಗಳ, ಉಪನಿಷತ್ತಿನ ಅಂತರಾಳದಲ್ಲಿ ಹುದುಗಿದ ಅಮೂರ್ತತತ್ತ್ವಗಳ ಮೂರ್ತ-ರೂಪವಿದು. ಇದು ಶಾಸ್ತ್ರಕ್ಕೆ ಆದಿಶಾಸ್ತ್ರ. ಕಾವ್ಯಕ್ಕೆ ಆದಿಕಾವ್ಯ . ಸಾಹಿತ್ಯಕ್ಕೆ ಸ್ಫೂರ್ತಿಯ ಸೆಲೆ. ಅನ್ವೇಷಕರಿಗೆ ಮುಖ್ಯ ನೆಲೆ.

'ರಾಮಾಯಣ' ನವರಸದ ಕಾರಂಜಿ. ಬಾಳಿಗೆ ರಸಾಯನ. ಜ್ಞಾನದ ಆಗರ. ಅನುಭವಗಳ ಸಾಗರ.

ನಿತ್ಯಜೀವನದ ಘಟನೆಗಳಿಲ್ಲಿವೆ. ತಕ್ಕ ಪರಿಹಾರವಿದೆ. ಮಾನವಜೀವನದಲ್ಲಿ ನಿತ್ಯ ಘಟಿಸುವ, ಸ್ವಾರ್ಥ, ಲೋಭ, ಮೋಹ, ರಾಗ, ದ್ವೇಷ, ಅಸೂಯೆ, ಆವೇಗ,

ಆವೇಶ, ಸಂಘರ್ಷ, ಸುಖ, ದುಃಖ, ಮನಸ್ಸಿನ ಚಲನೆ ಇಲ್ಲಿದೆ. ಅದಕ್ಕೆ ಪರಿಹಾರವಿದೆ. ಸಾಧನ-ಸಿದ್ಧಿಗಳಿವೆ. ಭಾವನೆ-ಕರ್ತವ್ಯಗಳ ಸಂಘರ್ಷವಿದೆ. ಮೌಲ್ಯಗಳ, ವ್ಯವಹಾರದ ದ್ವಂದ್ವವಿದೆ. ಇದು ಮನುಕುಲದ ಸಾರ್ವಕಾಲಿಕ ಇತಿಹಾಸ, ವಾಲ್ಮೀಕಿ ಎಲ್ಲವನ್ನು ಇಡಿ ಕಿಡಿಯಾಗಿ, ಎಳೆ, ತೊಳೆಯಾಗಿ ಬಿಚ್ಚಿ ಬಿಡಿಸಿದ್ದಾನೆ.

ಶ್ರೀರಾಮ ತಿಳಿಯುವ ವಸ್ತು ಮಾತ್ರವಲ್ಲ. ಅನುಭವದ ವಸ್ತು. ಜ್ಞಾನಕ್ಕೆ ಮಾತ್ರ ವಿಷಯವಲ್ಲ. ಭಕ್ತಿಪ್ರೇಮಗಳಿಗೆ ಆಲಂಬನ. ಸಚ್ಚಿದಾನಂದಮೂರ್ತಿ ಮಾತ್ರವಲ್ಲ. ಶೀಲಸೌಜನ್ಯದ ಸಾಕಾರ. ಮರ್ಯಾದೆ, ಮಿತಿಗಳ ಅಧಿಷ್ಠಾನ. ಮರ್ಯಾದಾ ಪುರುಷೋತ್ತಮ. ಪತಿತಪಾವನ ಶ್ರೀರಾಮ.

ಅಂತೆಯೇ ರಾಮ, ರಾಮಾಯಣ ಸರ್ವರಿಂದ ಶ್ರವಣೀಯ.

''**ನಿತ್ಯಂ ಶೃಣ್ವಂತಿ ಸಂಹೃಷಾಃ ಕಾವ್ಯಂ ರಾಮಾಯಣಂ ದಿವಿ**'' ಎಲ್ಲ ಲೋಕದಲ್ಲಿ ಎಲ್ಲರೂ ಸಂತಸದಿಂದ ನಿತ್ಯ ಕೇಳುವ, ಹೇಳುವ ಕೃತಿ ಇದು.

ಮನುಕುಲಕ್ಕೆ ಸಕಲಪುರುಷಾರ್ಥ ನೀಡುವುದು. ಇದು ವಿಶ್ವದ ಮೇರುಕೃತಿ. ವಿದ್ವಾಂಸನಿಂದ ಸಾಮಾನ್ಯನವರೆಗೆ ಎಲ್ಲರ ಹೃದಯ ಸೂರೆಗೊಂಡ ಕೃತಿ. ಪರಿಮಾಣದಲ್ಲಾಗಲೀ ಪ್ರಮಾಣದಲ್ಲಾಗಲೀ ಸರಿಸಾಟಿ ಇಲ್ಲದ ಕಾವ್ಯ. ಪ್ರಾಚೀನ ಇತಿಹಾಸದ ವಿಶ್ವಕೋಶ.

ರಾಮಾಯಣ ತಿಳಿಯದವ ಭಾರತೀಯನೇ ಅಲ್ಲ. ಆಗಲಾರ.

ಮಾರ್ಮಿಕ ಉಪದೇಶ ರಾಮಾಯಣ. ರಾಮನ ಚರಿತ್ರೆ ಮಾಧ್ಯಮ ಮಾನವೀಯ ಮೌಲ್ಯಗಳನ್ನು ಪ್ರಸ್ತುತಪಡಿಸುವುದು ಗುರಿ. ಭೌತಿಕ ವಿವಾದಗಳಿಂದ, ಸ್ವಾರ್ಥಲೋಭಗಳಿಂದ ಹೊರಬರುವ ಬಗೆ ಇದೆ. ಆಧ್ಯಾತ್ಮಮಾರ್ಗದಲ್ಲಿ ಮುಂದುವರೆಯುವ ಕ್ರಮವಿದೆ.

ವಾಲ್ಮೀಕಿಯ ರಾಮಾಯಣ ಇದು ಭಕ್ತಿಕಾವ್ಯ. ಭಕ್ತಿಗಾಗಿ, ಭಕ್ತಿಯಿಂದ ಬರೆದದ್ದು. ರಾಮನ ಪ್ರಾಪ್ತಿ ಭಕ್ತಿಯಿಂದಲೇ ಸಾಧ್ಯ. ಭಕ್ತಿ ಇಲ್ಲದೇ ರಾಮನ ಪ್ರಾಪ್ತಿ ಇಲ್ಲ. 'ಭಕ್ತಿ' ಬದುಕಿನ ಮುಖ್ಯಸಾಧನ. ಜ್ಞಾನ ಹಾಗೂ ಪ್ರೀತಿಯ ನೆಲೆಯೇ ಭಕ್ತಿ.

'ಜ್ಞಾನಪೂರ್ವಃ ಪರಃ ಸ್ನೇಹಃ ಭಕ್ತಿಃ'' ''ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋऽಧಿಕಃ ಸ್ನೇಹಃ ಭಕ್ತಿರಿತಿ ಪ್ರೋಕ್ತಃ'' ಶ್ರೀರಾಮನ ಮಹಿಮಾಜ್ಞಾನ, ಅವನಲ್ಲಿ ಅಪಾರ ಸ್ನೇಹವೇ ಭಕ್ತಿ. ಇದು ವಾಲ್ಮೀಕಿಯ ಧ್ಯೇಯ. ಅದಕ್ಕೆ ರಾಮಾಯಣ ನಿರ್ಮಾಣ. ರಾಮಕಥೆಯ ನಿರ್ಣಯ.

ಶ್ರೀರಾಮ 'ಭಕ್ತ್ಯೈವ ತುಷ್ಟಿಮಭ್ಯೇತಿ'' 'ಭಕ್ತಿಶ್ಚ ತತ್ಸಾಧನಮ್'' ''ಭಕ್ತಿಸ್ತ್ವೇಕಾ ವಿಮುಕ್ತಯೇ'' ''ಭಕ್ತ್ಯಾಜ್ಞಾನಂ ತತೋ ಭಕ್ತಿಃ'' ''ಭಕ್ತಿಃ ಜನಿತ್ರೀ ಜ್ಞಾನಸ್ಯ'' ಭಕ್ತಿಃ ಮೋಕ್ಷಪ್ರದಾಯಿನೀ'' ರಾಮಾಯಣ ಭಕ್ತಿ ತುಂಬಿದ ಆದಿಕಾವ್ಯ. ಇತಿಹಾಸ ನಿರೂಪಿಸುವ ಕಾವ್ಯ. ಸಾಹಿತ್ಯ ತುಂಬಿದ ಅಮೃತ. ಸವಿಯಲು ರಸಗವಳ.

ಶ್ರೀರಾಮ ದೇಶಕಾಲದ ಇತಿಮಿತಿ ಇಲ್ಲದ ನಿಸ್ಸೀಮ. ಇತಿಮಿತಿ ಉಳ್ಳವರು ಭಕ್ತಿಗೆ ಆಲಂಬನ ವ್ಯಕ್ತಿಯಾಗಲಾರ. ರಾಮ ಸರ್ವತ್ರ ಅಭಿವ್ಯಕ್ತ. ಸಾರ್ವಕಾಲಿಕ. ಸಾರ್ವದೇಶಿಕ. ರಾಮನಿಗೆ ಜನ್ಮವಿಲ್ಲ. ಮರಣವೂ ಇಲ್ಲ. ಸದಾ ವ್ಯಕ್ತ, ಸರ್ವಶಕ್ತ. ಸರ್ವತ್ರಅಭಿವ್ಯಕ್ತ. ಸರ್ವಸಮರ್ಥ. ಕಾವ್ಯದ ನಾಯಕ, ಜಗನ್ನಿಯಾಮಕ. ಆದರ್ಶದ ಪರಾಕಾಷ್ಠಾ.

ಮಾನವನ ಸಹಜ ಸ್ವಭಾವಗಳೇ 'ಪ್ರಕೃತಿ.' ಅವನ್ನು ಸಂಸ್ಕಾರಗೊಳಿಸುವುದು ಸಂಸ್ಕೃತಿ. ಅದು ಸಂಸ್ಕಾರ. ಅದಿಲ್ಲದಿರೆ ಮನುಷ್ಯ ವಿಕೃತ.

ಸಂಸ್ಕೃತಿ ಜೀವನಧರ್ಮ. ವಾಲಿ, ರಾವಣರು ವಿಕೃತಿಪುರುಷರು. ಹನುಮ, ವಿಭೀಷಣರು ಸಂಸ್ಕೃತರು.

ಸಂಸ್ಕೃತಿ ಜೀವನಧರ್ಮ. ಅದು ಅಂತರಂಗದ ಆತ್ಮ. ನಾಗರಿಕತೆ ಇದು ಬಹಿರಂಗದ ರೂಪ.

ಜೀವನ ಧರ್ಮಗಳನ್ನು ನಿರ್ಮಿಸಿ, ನಿರೂಪಿಸುವ ಕಾರ್ಯ ಜಗದೊಡೆಯನಿಂದ ನಿರಂತರ ನಡೆಯುತ್ತಿರುತ್ತದೆ. ಉಚಿತ ಮಾಧ್ಯಮ, ಸಮುಚಿತ ಘಟನೆಗಳ ಮೂಲಕ ಜೀವನಧರ್ಮ ಅಭಿವ್ಯಕ್ತಗೊಳಿಸುವ. ಈ ಮಾಧ್ಯಮ ಅಸಾಧಾರಣವಿರಬೇಕು. ಆಗ ಅದಕ್ಕೆ ಲೋಕ ವಿಶ್ವಾಸವು, ಶಾಸ್ತ್ರೀಯ ಸಮರ್ಥನೆ, ದೊರೆಯುವುದು. ಇದೇ ವಿವಿಧ ಅವತಾರಗಳ ಹಿನ್ನೆಲೆ. ಸಂಸ್ಕೃತಿ ನಿರ್ಮಾಣದ ಅವಶ್ಯಕತೆ.

ಆದರ್ಶಗುಣಗಳ ವಾಹಕನಾಗುವುದು ಅವತಾರ. ಆದರ್ಶಪ್ರಕಟನೆಗೆ ಗುಣಪೂರ್ಣನೇ ಉಚಿತ ಮಾಧ್ಯಮ. ಶ್ರೀಹರಿ ಅವತರಿಸಿ ತನ್ನ ಮಾತು,

ಕೃತಿಗಳಿಂದ ಮಾನವತೆಯನ್ನು ಸಂಸ್ಕರಿಸುವುದೇ ಮುನ್ನೆಲೆ. ಇದು ಯುಗ-ಯುಗದಲ್ಲಿ ಜರುಗುವ ಪ್ರಕ್ರಿಯೆ. ಇದು ನಿರಂತರ ಪ್ರವಾಹ. ಇದು ಯುಗದ ಇತಿಹಾಸ.

ಸಂಸ್ಕೃತಿ ಜೀವನ ಧರ್ಮ. ಅದು ಎರಡು ವಿಧ. ಒಂದು ''ಋತ'' ಇನ್ನೊಂದು ''ಸತ್ಯ.''

''ಋತಂ ಚ ಸತ್ಯಂ ಚ ಅಭಿದ್ಧಾ ತಪಸಾ ಅಧ್ಯಜಾಯತ'' (ಶ್ರುತಿ.) ಋತು, ಸತ್ಯಗಳು ಆಲೋಚನೆ, ಶ್ರಮದಿಂದ ಹುಟ್ಟುವವು.

''ಋತಂ ಯಥಾರ್ಥವಿಜ್ಞಾನಂ, ಸತ್ಯಂ ತತ್ಪೂರ್ವಿಕಾ ಕೃತಿಃ''

''ಋತಂ ತು ಮಾನಸೋ ಧರ್ಮಃ, ಸತ್ಯಂ ತು ತತ್ಪ್ರಯೋಗಗಃ, (ಸರ್ವಮೂಲ, ಶ್ರೀಮಧ್ವರು.)

ಯಥಾರ್ಥವಾದ ಜ್ಞಾನ, ಸರಿಯಾದ ತಿಳುವಳಿಕೆ. ಸತ್ಯವೆಂದರೆ ಸರಿಯಾದ ತಿಳುವಳಿಕೆಗೆ ಅನುಗುಣವಾದ ಆಚರಣೆ. ತಿಳುವಳಿಕೆಗೆ ಅನುಗುಣವಾದ ಕ್ರಿಯೆಗಳು ''ಋತ'' ಸರಿಯಾದ ಜ್ಞಾನ. ಇದು ಮನಸ್ಸಿನ ಧರ್ಮ. 'ಸತ್ಯ'ವೆಂದರೆ ಈ ಅರಿವಿಗೆ ಅನುಗುಣ ಬದುಕು. ಜ್ಞಾನವನ್ನು ಪ್ರಯೋಗದಲ್ಲಿ ತರುವ ಪ್ರಕ್ರಿಯೆ. 'ಮಾತು, ಕೃತಿ' 'ಅರಿವು-ಆಚಾರ' ಜ್ಞಾನ-ಕಾರ್ಯಗಳು, ಒಂದಾಗುವುದೇ, ಒಂದು ಮಾಡಿ ಬಾಳುವುದೇ ಜೀವನಧರ್ಮ. ರಾಮಾಯಣ 'ಋತು ಸತ್ಯಗಳ' ಸಮನ್ವಯದ ರಂಗಸ್ಥಲ. ಶ್ರೀರಾಮನಾರಂಭಿಸಿ ಎಲ್ಲರೂ ಋತು ಸತ್ಯಗಳ ಸಮನ್ವಿತರು. ವಿಘ್ನಗಳ ಮಧ್ಯದಲ್ಲಿ ಸಮನ್ವಯ ಸಾಧಿಸುವುದೇ ರಾಮಾಯಣ. ಋತು ಸತ್ಯಗಳಿಗೆ ರಾಮನೇ ಅಯನ.

ಮನದ ವಿಚಾರ, ಆಡುವ ಮಾಡು, ಮಾಡುವ ಕೃತಿಗಳಲ್ಲಿ ಹೊಂದಾಣಿಕೆ ಇರಬೇಕು. ಈ ಸಮನ್ವಯವೇ ಸಂಸ್ಕೃತಿ. ಈ ಸಮನ್ವಯಕ್ಕೆ ಆಲಂಬನ ಶ್ರೀರಾಮ, ಸೀತೆಯರು. ಇದು ಭಾರತೀಯರು ಬಯಸಿದ ಆದರ್ಶ ಬಾಳು. ದಿವ್ಯ ಬದುಕು. ಮನುಷ್ಯ ಸಹಜ ದೌರ್ಬಲ್ಯಗಳ ಮಧ್ಯದಲ್ಲಿಯೂ ಉಜ್ವಲ ಬೆಳಕಿನಂತೆ ಮುನ್ನಡೆವ ಶ್ರೀರಾಮ.

ರಾಮಾಯಣಕ್ಕೆ ಗಾಯತ್ರಿಯೇ ಬೀಜ

ವೇದಮಾತೆ ಗಾಯತ್ರಿ. 'ಅ'ಕಾರ ಮೂಲ ಅಕ್ಷರ. ಮೂಲವರ್ಣ, ಪ್ರಧಾನ-ವಾಗಿ ಪರಮಾತ್ಮವಾಚಕ.

''ಅಕಾರಃ ಸರ್ವವಾಗಾತ್ಮಾ ಪರಬ್ರಹ್ಮಾಭಿಧಾಯಕಃ'

'ಅ' ಇತಿ ಬ್ರಹ್ಮ

'ಅ'ಕಾರ ಮೂರು ಮೂರು ಅರ್ಥಗಳಿಂದ ಶ್ರೀಹರಿಯನ್ನು ವರ್ಣಿಸುವುದು. 'ಅ' ಶಬ್ದಕ್ಕೆ 'ಅಭಾವ, ಅನ್ಯ, ವಿರುದ್ಧ' ಮೂರು ಅರ್ಥಗಳು. ರಾಮನಲ್ಲಿ ದೋಷಗಳ ಅಭಾವವಿದೆ. ಶ್ರೀರಾಮ ಎಲ್ಲರಿಂದ ಅನ್ಯ, ಭಿನ್ನನಾಗಿರುವ. ರಾಮನಲ್ಲಿ ಜೀವರಲ್ಲಿಯ ಗುಣಗಳಿಂದ ವಿರುದ್ಧವಾದ ಸರ್ವಜ್ಞತ್ವ ಸರ್ವೋತ್ತಮತ್ವ, ನಿರ್ದೋಷತ್ವ ಗುಣಪೂರ್ಣತ್ವಗಳಿವೆ. ಅದಕ್ಕೆ ಶ್ರೀರಾಮ 'ಅ'ದಿಂದ ಪ್ರತಿಪಾದ್ಯ. 'ಅ'ಕಾರದ ವ್ಯಾಖ್ಯಾನವೇ ಓಂಕಾರ. ''ಅ, ಉ, ಮ, ನಾದ, ಬಿಂದು, ಘೋಷ, ಶಾಂತ, ಅತಿಶಾಂತಗಳು. (ಇವು ಎಂಟು ಓಂಕಾರದ ಅರ್ಥ.) ಓಂಕಾರದ ವ್ಯಾಖ್ಯಾನವೇ ಗಾಯತ್ರಿಯು. ಮೂರುಪಾದ, ಇಪ್ಪತ್ನಾಲ್ಕು ಅಕ್ಷರಗಳ ಗಾಯತ್ರಿ. ಇದು ವೇದಸಾರ. ಗಾಯತ್ರಿಯ ಮೂರು ಪಾದಗಳ ವ್ಯಾಖ್ಯಾನವೇ, ಸಾರಭೂತ ಪುರುಷಸೂಕ್ತ. ಪುರುಷಸೂಕ್ತದ ವ್ಯಾಖ್ಯಾನವೇ ಸಂಪೂರ್ಣ ವೇದಗಳು. ಗಾಯತ್ರಿಯ ಸ್ವರೂಪವೇ ಸಮಗ್ರ ವಾಲ್ಮೀಕಿ ರಾಮಾಯಣ.

''ಗಾಯತ್ರ್ಯಾಶ್ಚ ಸ್ವರೂಪಂ ತದ್ರಾಮಾಯಣಮಿತಿ ಸ್ಮೃತಮ್''

ಗಾಯತ್ರಿಯ ಸ್ವರೂಪವೇ ರಾಮಾಯಣ. ವಾಲ್ಮೀಕಿ ರಾಮಾಯಣದ ಪ್ರಾರಂಭ ''ತ'' ಅಕ್ಷರದಿಂದ ಆಗುವುದು. ಅದು ಗಾಯತ್ರಿಯ ಮೊದಲ ಅಕ್ಷರ. ಮೊದಲ ಶ್ಲೋಕ. ''ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ । ವಾ.ರಾ. ೧-೧-೧ 'ತ' ದಿಂದ ಆರಂಭ. ಇದು ಗಾಯತ್ರೀಮಂತ್ರದ ಮೊದಲ ವರ್ಣದ ಪ್ರತಿನಿಧಿ. ಗಾಯತ್ರಿಯಲ್ಲಿ ಇಪ್ಪತ್ನಾಲ್ಕು ವರ್ಣ. ಒಂದೊಂದು ಸಾವಿರ ಶ್ಲೋಕ ಒಂದೊಂದು ಗಾಯತ್ರೀ ಅಕ್ಷರದ ಪ್ರತಿನಿಧಿ. ಇಪ್ಪತ್ನಾಲ್ಕು ಸಾವಿರ ಶ್ಲೋಕ ೨೪ ಅಕ್ಷರಗಳ ಪ್ರತಿನಿಧಿ. ಗಾಯತ್ರಿಯ ಆರಂಭ 'ತ'ದಿಂದ, ಗಾಯತ್ರಿಯ ಸಮಾಪ್ತಿ 'ತ್'ದಿಂದ. ರಾಮಾಯಣದ ಕೊನೆಯ ಶ್ಲೋಕ

''ತತಃ ಸಮಾಗತಾನ್ ಸರ್ವಾನ್ ಸ್ಥಾಪ್ಯ ಲೋಕಗುರುರ್ದಿವಿ ।
ಹೃಷ್ಟೈಃ ಪ್ರಮುದಿತೈರ್ದೇವೈರ್ಜಗಾಮ ತ್ರಿದಿವಂ ಮಹತ್ ॥

–ವಾ.ರಾ.ಉತ್ತರ ೧೧೦-೨೮

ವಾಲ್ಮೀಕಿ ರಾಮಾಯಣದ ಕೊನೆಯ ಶ್ಲೋಕದ ಕೊನೆಯ ಅಕ್ಷರ ''ತ್''.

ರಾಮಾಯಣದ ಮೊದಲ ಅಕ್ಷರ, ಗಾಯತ್ರಿಯ ಮೊದಲ ಅಕ್ಷರ 'ತ'

ರಾಮಾಯಣ ಹಾಗೂ ಗಾಯತ್ರಿಯ ಕೊನೆಯ ಅಕ್ಷರ ''ತ್'' ಎರಡೂ .... (ತತ್) ೨೪ ಸಾವಿರ ಶ್ಲೋಕದ ಸಮಗ್ರಸಾರ, ಪ್ರತಿನಿಧಿಯೇ ''ತತ್'' ಸಂಪೂರ್ಣ ರಾಮಾಯಣವೇ ('ತತ್') ಗಾಯತ್ರಿಯ ರೂಪ ವ್ಯಾಖ್ಯಾನವಾಗಿದೆ.

ಗಾಯತ್ರಿಯ ಇಪ್ಪತ್ನಾಲ್ಕು ಅಕ್ಷರಗಳ ವ್ಯಾಖ್ಯಾನವೇ ವಾಲ್ಮೀಕಿ ರಾಮಾಯಣದ ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು. ಗಾಯತ್ರಿಯ ಒಂದೊಂದು ಅಕ್ಷರಗಳನ್ನು ಒಂದೊಂದು ಸಾವಿರ ಶ್ಲೋಕಗಳು ವ್ಯಾಖ್ಯಾನಿಸುವವು. ಸಾವಿರ ಸಾವಿರ ಶ್ಲೋಕಗಳ ಗುಂಪು, ಗಾಯತ್ರಿಯ ಒಂದೊಂದು ಅಕ್ಷರಗಳಿಂದಲೇ ಪ್ರಾರಂಭವಾಗುವುದು.

(ತ) ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥ ೧ ॥

(ಸ) ಸ ಹತ್ವಾ ರಾಕ್ಷಸಾನ್ ಸರ್ವಾನ್ ಯಜ್ಞಘ್ನಾನ್ ರಘುನಂದನಃ ।
ಋಷಿಭಿಃ ಪೂಜಿತಸ್ತತ್ರ ಯಥೇಂದ್ರೋ ವಿಜಯೇ ಪುರಾ ॥ ೨ ॥

(ವ) ವಿಶ್ವಾಮಿತ್ರಸ್ತು ಧರ್ಮಾತ್ಮಾ ಶ್ರುತ್ವಾ ಜನಕಭಾಷಿತಮ್ ।
ವತ್ಸ! ರಾಮ! ಧನುಃ ಪಶ್ಯ ಇತಿ ರಾಘವಮಬ್ರವೀತ್ ॥ ೩ ॥

(ತು) ತುಷ್ಟಾವಾಸ್ಯಂ ತದಾ ವಂಶ ಪ್ರವಿಶ್ಯ ಸ ವಿಶಾಂಪತೇ ।
ಶಯನೋಯಂ ನರೇಂದ್ರಸ್ಯ ತದಾಸಾದ್ಯವ್ಯತಿಷ್ಠತ ॥ ೪ ॥

(ವ) ವನವಾಸಂ ಹಿ ಸಖ್ಯಾಯ ವಾಸಾಂಸ್ಯಾಭರಣಾನಿ ಚ ।
ಭರ್ತಾರಮನುಗಚ್ಛಂತ್ಯೈ ಸೀತಾಯೈ ಶ್ವಶುರೋ ದದೌ ॥ ೫ ॥

(ರ) ರಾಜಾ ಸತ್ಯಂ ಚ ಧರ್ಮಶ್ಚ ರಾಜಾ ಕುಲವತಾಂ ಕುಲಮ್ ।
ರಾಜಾ ಮಾತಾ ಪಿತಾ ಚೈವ ರಾಜಾ ಹಿತಕರೋ ನೃಣಾಮ್ ॥ ೬ ॥

(ನಿ) ನಿರೀಕ್ಷ್ಯ ಸುಮುಹೂರ್ತಂ ತು ದದರ್ಶ ಭರತೋ ಗುರುಮ್ ।
ಉಟಜೇ ರಾಮಮಾಸೀನಂ ಜಟಾಮಂಡಲಧಾರಿಣಮ್ ॥ ೭ ॥

(ಯ) ಯದಿ ಬುದ್ಧಿಃ ಕೃತಾ ದ್ರಷ್ಟುಮಗಸ್ತ್ಯಂ ತಂ ಮಹಾಮುನಿಮ್ ।
ಅದ್ಯೈವ ಗಮನೇ ಬುದ್ಧಿಂ ರೋಚಯಸ್ವ ಮಹಾಯಶಃ ॥ ೮ ॥

(ಭ) ಭರತಸ್ಯಾರ್ಯಪುತ್ರಸ್ಯ ಶುಶ್ರೂಷಾಂ ವಮ ಚ ಪ್ರಭೋ ।
ಮೃಗರೂಪಮಿದಂ ವ್ಯಕ್ತಂ ವಿಸ್ಮಯಂ ಜನಯಿಷ್ಯತಿ ॥ ೯ ॥

(ಗ) ಗಚ್ಛ ಶೀಘ್ರಮಿತೋ ರಾಮ ಸುಗ್ರೀವಂ ತಂ ಮಹಾಬಲಮ್ ।
ವಯಸ್ಯಂ ತಂ ಕುರು ಕ್ಷಿಪ್ರಮಿತೋ ಗತ್ವಾऽದ್ಯ ರಾಘವ ॥ ೧೦ ॥

(ದೇ) ದೇಶಕಾಲೌ ಭಜಸ್ವಾದ್ಯ ಕ್ಷಮಮಾಣಃ ಪ್ರಿಯಾಪ್ರಿಯೇ ।
ಸುಖದುಃಖಸಹಃ ಕಾಲೇ ಸುಗ್ರೀವ ವಶಗೋ ಭವ ॥ ೧೧ ॥

(ವ) ವಂದ್ಯಾಸ್ತೇ ತು ತಪಃಸಿದ್ಧಾಸ್ತಪಸಾ ವೀತಕಲ್ಮಷಾಃ ।
ಪ್ರಷ್ಟವ್ಯಾ ಚಾಪಿ ಸೀತಾಯಾಃ ಪ್ರವೃತ್ತಿರ್ವಿನಯಾನ್ವಿತೈಃ ॥ ೧೨ ॥

(ಸ) ಸ ನಿರ್ದಿಸ್ಯ ಪುರೀಂ ಶ್ರೇಷ್ಠಾಂ ಲಂಕಾಂ ತಾಂ ಕಾಮರೂಪಿಣೀಮ್ ।
ವಿಕ್ರಮೇಣ ಮಹಾತೇಜಾ ಹನೂಮಾನ್ ಕಪಿಸತ್ತಮಃ ॥ ೧೩ ॥

(ಧ) ಧನ್ಯಾ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ಮಮ ಪಶ್ಯಂತಿ ಯೇ ನಾಥಂ ರಾಮಂ ರಾಜೀವಲೋಚನಮ್॥೧೪

(ಮ) ಮಂಗಲಾಭಿಮುಖೀ ತಸ್ಯ ಸಾ ತದಾऽಸೀನ್ಮಹಾಕವೇಃ ।
ಉಪತಸ್ಥೇ ವಿಶಾಲಾಕ್ಷೀ ಪ್ರಯತಾ ಹವ್ಯವಾಹನಮ್ ॥ ೧೫ ॥

(ಹಿ) ಹಿತಂ ಮಹಾರ್ಥಂ ಮೃದುಹೇತುಸಂಹಿತಂ
ವ್ಯತೀತಕಾಲಾಯತಿ ಸಂಪ್ರತಿಕ್ಷಮಮ್ ।
ನಿಶಮ್ಯ ತದ್ವಾಕ್ಯಮುಪಸ್ಥಿತಜ್ವರಃ
ಪ್ರಸಂಗವಾನ್ ಉತ್ತರಮೇತದಬ್ರವೀತ್ ॥ ೧೬ ॥

(ಧ) ಧರ್ಮಾತ್ಮಾ ರಕ್ಷಸಾಂ ಶ್ರೇಷ್ಠಃ ಸಂಪ್ರಾಪ್ತೋऽಯಂ ವಿಭೀಷಣಃ ।
ಲಂಕೈಶ್ವರ್ಯಂ ಧ್ರುವಂ ಶ್ರೀಮಾನಯಂ ಪ್ರಾಪ್ನೋತ್ಯಕಂಟಕಮ್ ॥
(ಯೋ) ಯೋ ವಜ್ರಪಾತಾಶನಿಸನ್ನಿಪಾತಾತ್–
ನ ಚುಕ್ಷುಭೇ ಚಾಪಿ ಚಚಾಲ ರಾಜಾ ।
ಸ ರಾಮಬಾಣಾಭಿಹತೋ ಭೃಶಾರ್ತಃ
ಚಚಾಲ ಚಾಪಂ ಚ ಮುಮೋಹವೀರಃ ॥ ೧೮ ॥

(ಯ) ಯಸ್ಯ ವಿಕ್ರಮಮಾಸಾದ್ಯ ರಾಕ್ಷಸಾ ನಿಧನಂ ಗತಾಃ ।
ತಂ ಮೇನೇ ರಾಘವಂ ವೀರಂ ನಾರಾಯಣಮನಾಮಯಮ್ ॥ ೧೯

(ನ) ನ ತೇ ದದೃಶಿರೇ ರಾಮಂ ದಹಂತಮರಿವಾಹಿನೀಮ್ ।
ಮೋಹಿತಾ ಪರಮಾಸ್ತ್ರೇಣ ಗಾಂಧರ್ವೇಣ ಮಹಾಮನಾ ॥ ೨೦ ॥

(ಪ್ರ) ಪ್ರಣಮ್ಯ ದೇವತಾಭ್ಯಶ್ಚ ಬ್ರಾಹ್ಮಣೇಭ್ಯಶ್ಚ ಮೈಥಿಲೀ ।
ಬದ್ಧಾಂಜಲಿಪುಟಾ ಚೇದಮುವಾಚಾತಿಸಮೀಪತಃ ॥ ೨೧ ॥

(ಚ) ಚಾಲನಾತ್ ಪರ್ವತಸ್ಯೈವ ಗಣಾ ದೇವಸ್ಯ ಕುಪಿತಾಃ ।
ಚಚಾಲ ಪಾರ್ವತೀ ಚಾಪಿ ತದಾಶ್ಲಿಷ್ಟಾ ಮಹೇಶ್ವರಮ್ ॥ ೨೨ ॥

(ದ) ದಾರಾಃ ಪುತ್ರಾಃ ಪುರಂ ರಾಷ್ಟ್ರಂ ಭೋಗಾಚ್ಛಾದನಭೋಜನಮ್ ।
ಸಹ ಮೇ ವಾಲಿಭಕ್ತಂ ನೌ ಭವಿಷ್ಯತಿ ಹರೀಶ್ವರ ॥ ೨೩ ॥

(ಯಾ) ಯಾಮೇವ ರಾತ್ರಿಂ ಶತ್ರುಘ್ನಃ ಪರ್ಣಶಾಲಾಮುಪಾವಿಶತ್ ।
(ತ) ತಾಮೇವ ರಾತ್ರಿಂ ಸೀತಾಽಪಿ ಪ್ರಸೂತಾ ದ್ವಾರಕದ್ವಯಮ್ ॥೨೪॥

ಇದಂ ರಾಮಾಯಣಂ ಕೃತ್ಸ್ನಂ ಗಾಯತ್ರೀಬೀಜಸಂಯುತಮ್ ।
ಸಕೃತ್ಪಠನಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ॥

ಗಾಯತ್ರಿಯ ಬೀಜ ''ತತ್'' ''ತ''ಕಾರೋ ವಿಘ್ನನಾಶಕಃ. ತಕಾರವು ಸರ್ವ-ವಿಘ್ನಪರಿಹಾರಕ. ''ವಸ್ತುಲಾಭಕರೇಣಾಸ್ತು ತಕಾರಃ ಸೌಖ್ಯದಾಯಕಃ'' 'ತ'ಕಾರ ಸೌಖ್ಯದಾಯಕ. ಇಷ್ಟಪ್ರಾಪ್ತಿಗೆ ಕಾರಣ.

'ಗಾಯಂತಂ ತ್ರಾಯತೇ ಯಸ್ಮಾದ್ ಗಾಯತ್ರೀ ತ್ವಂ ತತಃ ಸ್ಮೃತಾ'' ಗಾಯತ್ರಿಯನ್ನು ಜಪಿಸುವವರನ್ನು ಗಾಯತ್ರಿಯು ಕಾಪಾಡುವುದು. ಅದರಂತೆ ಗಾಯತ್ರಿಯ ಸ್ವರೂಪವಾದ ವಾಲ್ಮೀಕಿ ರಾಮಾಯಣದ ಮನನ, ಪಾಠ, ಪ್ರವಚನ, ಪಾರಾಯಣ, ಧ್ಯಾನ ಮಾಡುವವರನ್ನು ಈ ಗಾಯತ್ರಿಯು ಕೈಹಿಡಿದು ಕಾಪಾಡುವುದು. ಗಾಯತ್ರಿಯಿಂದ ಆಗುವ ಸಕಲವಿಧ ಫಲಗಳೂ ಈ ರಾಮಾಯಣದಿಂದಾಗುವವು.

''ಏಕೈಕಮಕ್ಷರಂ ಪುಂಸಾಂ ಮಹಾಪಾತಕನಾಶನಮ್'' ಈ ರಾಮಾಯಣದ ಒಂದೊಂದು ಅಕ್ಷರವೂ ಗಾಯತ್ರಿಯ ಸ್ವರೂಪ. ವೇದದ ವರ್ಣಗಳು.

ಒಂದೊಂದು ಅಕ್ಷರದ ಪಠಣ, ಪಾಠಣವೂ ಮಹಾ ಮಹಾ ಪಾಪಗಳನ್ನು ನಾಶ ಮಾಡುವದು.

''ಇದಂ ರಾಮಾಯಣಂ ಕೃತ್ಸ್ನಂ ಗಾಯತ್ರೀಬೀಜಸಂಯುತಮ್''
ಪ್ರತಿಶ್ಲೋಕಸಹಸ್ರಾದೌ ಮಂತ್ರವರ್ಣಾಃ ಸಮುದ್ಧೃತಾಃ ॥

ಸಂಪೂರ್ಣ ವಾಲ್ಮೀಕಿ ರಾಮಾಯಣಕ್ಕೆ ಗಾಯತ್ರಿಯೇ ಬೀಜಭೂತ ಮಂತ್ರ. ಪ್ರತಿ ಸಾವಿರಶ್ಲೋಕದ ಪ್ರಾರಂಭಕ್ಕೆ ಗಾಯತ್ರಿಯೇ ಮೊದಲ ಅಕ್ಷರವಾಗಿರುವುದು. ಸಾವಿರ ಶ್ಲೋಕದ ಆದಿ ಅಕ್ಷರ ಸೇರಿಸಿದರೇ ೨೪ ಸಾವಿರಕ್ಕೆ ೨೪ ಗಾಯತ್ರಿಯ ಅಕ್ಷರಗಳು ಸೇರಿ ಗಾಯತ್ರಿಯು ನಿರ್ಮಾಣವಾಗುವುದು.

'ರಾಮಾಯಣ ದ್ರುಮಂ ನೌಮಿ ರಾಮರಕ್ಷಾನವಾಂಕುರಮ್ ।
ಗಾಯತ್ರೀಬೀಜಮಾಮ್ನಾಯಮೂಲಂ ಮೋಕ್ಷಮಹಾಫಲಮ್ ॥

–ಮಂತ್ರರಾಮಾಯಣ

ಗಾಯತ್ರಿಯಲ್ಲಿ ೨೪ ಅಕ್ಷರಗಳು. ಒಂದೊಂದು ಅಕ್ಷರವೂ ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು ಮೊದಲಾದ ೨೪ ರೂಪಗಳನ್ನು ವರ್ಣಿಸುತ್ತದೆ. ೨೪ ಸಾವಿರ ಶ್ಲೋಕಗಳು ೨೪ ಭಗವದ್ರೂಪಗಳ ವ್ಯಾಖ್ಯಾನ, ವರ್ಣನೆ, ವಿವರಣೆಗಳಾಗಿವೆ. ಮಾನವದೇಹದಲ್ಲಿ ೨೪ ತತ್ತ್ವಗಳು, ತತ್ತ್ವಗಳ ಪ್ರಧಾನ ಅಭಿಮಾನಿ, ನಿಯಾಮಕನೇ ಶ್ರೀಹರಿ. ಇಪ್ಪತ್ನಾಲ್ಕು ಅಕ್ಷರಗಳ ಗಾಯತ್ರಿಯ ಮಂತ್ರದಿಂದ ಪ್ರತಿಪಾದ್ಯ. ತತ್ತ್ವೇಶನಾದ ಶ್ರೀಹರಿಯನ್ನು ೨೪ ಅಕ್ಷರದ ಗಾಯತ್ರಿಯಂತೆ, ೨೪ ಸಾವಿರ ರಾಮಾಯಣ ಶ್ಲೋಕಗಳೂ ತಿಳಿಸುವವು. ಆದ್ದರಿಂದ ಗಾಯತ್ರಿಯ ವ್ಯಾಖ್ಯಾನ ವಾಲ್ಮೀಕಿ ರಾಮಾಯಣ. ಇದು ಮೋಕ್ಷದಾಯಕ. ಆಧ್ಯಾತ್ಮಿಕ ಶಾಸ್ತ್ರ.

''ಚತುರ್ವಿಂಶತ್ ಸಹಸ್ರಾಣಿ ಶ್ಲೋಕಾನಾಮುಕ್ತವಾನ್ ಋಷಿಃ'' ಗಾಯತ್ರಿಯ ೨೪ ಅಕ್ಷರಗಳ ವ್ಯಾಖ್ಯಾನ ಋಗ್ವೇದದ ೨೪ ಶಾಖೆಗಳು. (ಚತುರ್ವಿಂಶತಿಧಾ, ಶತಧಾ, ಸಹಸ್ರಧಾ, ದ್ವಾದಶಧಾ ಚ'' ಸಂಪೂರ್ಣ ವೇದದಲ್ಲಿ ಶಾಖೆಗಳಾಗಿ ವ್ಯಾಸರು ವಿಭಜಿಸಿದರು. (ಬ್ರ.ಭಾಷ್ಯ)

ಋಗ್ವೇದದ ಶಾಕಲ, ಬಾಷ್ಕಲಾದಿ ೨೪ ಶಾಖೆಗಳ ವ್ಯಾಖ್ಯಾನ, ವಿಸ್ತಾರವೇ ೨೪ ಸಾವಿರ ಶ್ಲೋಕಗಳ ವಾಲ್ಮೀಕಿ ರಾಮಾಯಣ.

ಸಮಗ್ರ ವೇದರೂಪ – ವಾಲ್ಮೀಕಿ ರಾಮಾಯಣ

''ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ ॥
ತಸ್ಮಾದ್ ರಾಮಾಯಣಂ ದೇವೀ ವೇದ ಏವ ನ ಸಂಶಯಃ ॥''

–ಅಗಸ್ತ್ಯಸಂಹಿತಾ

ವೇದವೇದ್ಯ , ವೇದಪ್ರತಿಪಾದ್ಯ ಶ್ರೀಹರಿ. ಅನಂತ ವೇದಗಳು ಅವನನ್ನೇ ಪ್ರತಿಪಾದಿಸುವವು. ''ವೇದೈಶ್ಚ ಸರ್ವೈಃ ಅಹಮೇವ ವೇದ್ಯಃ'' –ಗೀತಾ, ''ವೇದಾ ಹ್ಯೇವ ಏನಂ ವೇದಯಂತಿ'' ''ಸದಾಗಮೈಕವಿಜ್ಞೇಯಂ'' ''ಸಮಗ್ರ ವೇದ-ಗಳಿಂದ ನಾನೇ ಪ್ರತಿಪಾದ್ಯ'' ಇದು ಗೀತೆಯಲ್ಲಿ ಶ್ರೀಕೃಷ್ಣನ ಮಾತು. ಶ್ರೀಹರಿ-ಯನ್ನು ವೇದಗಳೇ ತಿಳಿಸುವವು. ತೋರಿಸುವವು. ಪ್ರತ್ಯಕ್ಷ, ಅನುಮಾನಗಳಲ್ಲ. ವೇದಗಳಿಂದ ಮಾತ್ರವೇ ಶ್ರೀಹರಿ ತಿಳಿಯಲ್ಪಡುವ. ''ಪ್ರಮಾಣಂ ಪರಮಂ ಶ್ರುತಿಃ'' (ಮನು ೨-೧೩)

ಅಂತಹ ವೇದವೇದ್ಯ, ವೇದಪ್ರತಿಪಾದ್ಯ ವಿಷ್ಣುವೇ ರಾಮನಾಗಿ ದಶರಥನ ಮಗನಾಗಿ ಅವತರಿಸಿದ. ಶಬ್ದಾರ್ಥಗಳ ಸಂಬಂಧ ನಿತ್ಯವಾದದ್ದು. ಅರ್ಥನಾದ ಹರಿ ಅವತರಿಸಿದಾಗ, ಶಬ್ದವೂ ಅವತರಿಸಿತು. 'ಪ್ರಮೇಯ, ಅಭಿಧೇಯಗಳಂತೆ, ಶಬ್ದ ಅರ್ಥಗಳ ಸಂಬಂಧ ಅವಿನಾಭಾವ. ಅದಕ್ಕಾಗಿ ವಿಷ್ಣು ರಾಮನಾದ. ವೇದವೂ ಜನ್ಮತಾಳಿ ರಾಮಾಯಣವಾಯಿತು.

ವಿಷ್ಣು ದಶರಥನ ಮಗನಾಗಿ ಅವತರಿಸಿದ. ವೇದ ವಾಲ್ಮೀಕಿಯಿಂದ ರಾಮಾಯಣವಾಯಿತು. ಆದ್ದರಿಂದ ರಾಮಾಯಣವೂ ವೇದವೇ. ವೇದದ ಸ್ವರೂಪವೇ. ಇದರಲ್ಲಿ ಸಂಶಯವೇ ಇಲ್ಲ.

''ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ'' ಇತಿಹಾಸ ಪುರಾಣ-ಗಳು ಐದನೇ ವೇದ. 'ರಾಮಾಯಣ' ಇದು ಇತಿಹಾಸ. ಇದು ಪಂಚಮವೇದ.

ಇತಿಹಾಸ, ಪುರಾಣಗಳು ವೇದದ ವಿಶಾಲ ವ್ಯಾಖ್ಯಾನ. ವೇದದ ವಿಸ್ತೃತ ರೂಪ.

''ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್'' ವೇದದ ಅರ್ಥವಿಸ್ತಾರಕ್ಕಾಗಿ, ವ್ಯಾಖ್ಯಾನರೂಪವಾಗಿ, ದೃಷ್ಟಾಂತಸಹಿತವಾದುದೇ ರಾಮಾಯಣವೆಂಬ ಇತಿಹಾಸ.

''ರಾಮಾಯಣಂ ಮಹಾಕಾವ್ಯಂ ಸರ್ವವೇದೇಷು ಸಮ್ಮತಮ್ ।
ಸರ್ವಪಾಪಪ್ರಶಮನಂ ದುಷ್ಟಗ್ರಹನಿವಾರಣಮ್ ॥''

–ವಾರಾ.ಮಾಹಾತ್ಮ್ಯ ೧–೧೯

ಸಮಗ್ರವೇದಸಮ್ಮತವಾದದ್ದು ಈ ರಾಮಾಯಣ ಮಹಾಕಾವ್ಯ. ರಾಮಾಯಣದ ರೂಪದಲ್ಲಿ ವೇದಾರ್ಥಗಳ ಸಂಯೋಜನೆ. ಅಂತೆಯೇ ರಾಮಾಯಣ ಎಲ್ಲ ಪಾಪಪರಿಹಾರಕ. ದುಷ್ಟಗ್ರಹಬಾಧೆನಿವಾರಕ. ಅದಕ್ಕಾಗಿಯೇ ವಾಲ್ಮೀಕಿ ವೇದಪರಿಣತರಾದ ಲವಕುಶರಿಂದ ಹಾಡಿಸಿದ.

''ಕುಶೀಲವೌ ತು ಧರ್ಮಜ್ಞೌ ರಾಜಪುತ್ರೌ ಯಶಸ್ವಿನೌ ।
''ಭ್ರಾತರೌ ಸ್ವರಸಂಪನ್ನೌ ದದರ್ಶ ಆಶ್ರಮವಾಸಿನೌ ॥
''ಸತು ಮೇಧಾವಿನೀ ದೃಷ್ಟ್ವಾ ವೇದೇಷು ಪರಿನಿಷ್ಠಿತೌ ।
ವೇದೋಪಬೃಂಹಣಾರ್ಥಾಯ ತಾವಗ್ರಾಹಯತ ಪ್ರಭುಃ ।
ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್ ।
ಪೌಲಸ್ತ್ಯವಧಮಿತ್ಯೇವಂ ಚಕಾರ ಚರಿತವ್ರತಾಃ ॥'' –ವಾ.ರಾ. ೧–೪–೫

ವಾಲ್ಮೀಕಿಯ ಆಶ್ರಮದಲ್ಲಿಯೇ ಹುಟ್ಟಿದವರು, ಸೀತಾದೇವಿಯ ಮಕ್ಕಳಾದ ಲವಕುಶರು, ಯಮಳರು, ಮಹಾಮೇಧಾವಿಗಳು. ಶ್ರೀರಾಮನ ಮಕ್ಕಳು. ವೇದವೇದಾಂಗಗಳಲ್ಲಿ ಪರಿಣಿತರು. ವೇದಾರ್ಥ ಬಲ್ಲವರು. ವೇದದ ಅಂತರಂಗವನ್ನು ವಿಸ್ತಾರಗೊಳಿಸಲು, ವಿಶದವಾಗಿ ನಿರೂಪಿಸಲು ವಾಲ್ಮೀಕಿ ಅವರಿಗೆ ವೇದಸಾರ ರಾಮಾಯಣ ತಿಳಿಸಿದ. ಕಲಿಸಿದ. ಸಂಪೂರ್ಣ ರಾಮಾಯಣವೆಂಬ ಮಹಾಕಾವ್ಯ ಹಿಡಿಸಿದ. ಶ್ರೀರಾಮನ ದಿವ್ಯಕಥೆ, ಸೀತಾದೇವಿಯ ಮಹಾಚರಿತ್ರೆ, ರಾವಣನ ವಧೆಗಳಿಂದ ಕೂಡಿದ ಚಿತ್ರ ಚರಿತ್ರದ ಮಹಾಕಾವ್ಯವಿದು. ಲವಕುಶರು ಧರ್ಮಜ್ಞರು. ಕಿನ್ನರ ಕಂಠ, ಮಧುರಸ್ವರ, ದೇವರು, ವೇದದಲ್ಲಿ ನಿಷ್ಠೆ ಉಳ್ಳವರು. ರಾಜಕುಮಾರರು, ಆಶ್ರಮವಾಸಿಗಳು, ವೇದದ ಅರ್ಥವಿಸ್ತಾರಕ್ಕೆ, ರಾಮಾಯಣದ ಜ್ಞಾನಕ್ಕೆ ಅವರನ್ನೇ ವಾಲ್ಮೀಕಿ ಆಯ್ಕೆ ಮಾಡಿಕೊಂಡ. ರಾಮಾಯಣ ವೇದದ ವ್ಯಾಖ್ಯಾನ. ವಿಸ್ತಾರ. ವೇದಾರ್ಥವಿಸ್ತಾರಕ್ಕಾಗಿಯೇ ರಾಮಾಯಣದ ನಿರ್ಮಿತಿ. ಸಮಗ್ರ ರಾಮಾಯಣ ವೇದಮಂತ್ರಗಳ ಆಧಾರದ ಮೇಲೆ ನಿರ್ಮಿತ. ವರ್ಣಿತವಾಗಿದೆ. ರಾಮಕಥೆಯ ಮೂಲಸ್ರೋತಸ್ಸು (ಸೋರ್ಸ್) ವೈದಿಕಸಾಹಿತ್ಯದ ಮೇಲೆ ಆಧಾರಿತ. ಅವಲಂಬಿತ. ವೈದಿಕಸಾಹಿತ್ಯವೆಂದರೆ ಮಂತ್ರಗಳು, ಸಂಹಿತಾ, ಬ್ರಾಹ್ಮಣ, ಆರಣ್ಯಕ ಹಾಗೂ ಉಪನಿಷತ್ತು, ವಿವಿಧ ಶ್ರುತಿಗಳು ಇವೆಲ್ಲವೂ

ವೈದಿಕಸಾಹಿತ್ಯ. ನಾಲ್ಕು ನಾಲ್ಕು ಭಾಗಗಳಿಂದ ಕೂಡಿದ ನಾಲ್ಕೂ ವೇದಗಳು. ಇವು ಅಪೌರುಷೇಯ ಸಾಹಿತ್ಯ, ನಿರ್ದೋಷವಾದ ಸ್ವತಃ ಪ್ರಮಾಣ.

ಇವುಗಳಲ್ಲಿ ರಾಮಕಥೆಯ ಶ್ರಮಿಕ ವಿಕಾಸವು ಸ್ಪಷ್ಟವಾಗಿ ಕಾಣಸಿಗುವವು. ವ್ಯಷ್ಟಿರೂಪದಿಂದ ಸಮಷ್ಟಿರೂಪದಿಂದ, ಇತಿಯಾಗಿ, ಬಿಡಿಯಾಗಿಯೂ ಘಟನೆ-ಗಳು, ಪಾತ್ರಗಳೂ, ಸನ್ನಿವೇಶಗಳೂ ಉಲ್ಲಿಖಿತವಾಗಿವೆ.

ಜಗತ್ತು ದ್ವಂದ್ವಾತ್ಮಕ. ಮೂರು ವಸ್ತುಗಳು ಸತ್ಯ. ಅನಾದಿನಿತ್ಯ, ಜಗದೊಡೆಯ ಜಗನ್ನಾಥ, ವಿಶಾಲವಾದ ಜಡಜಗತ್ತು, ಜಗತುಂಬಿದ ಅನಂತವಿಧದ ಜೀವ-ರಾಶಿಯು. ಇದು ತ್ರೈತವಾದ.

ಹಗಲಿಗಿಂತ ಮೊದಲು ರಾತ್ರಿ, ರಾತ್ರಿಯ ಮೊದಲು ಹಗಲು, ಬೀಜದಿಂದ ವೃಕ್ಷ, ವೃಕ್ಷದಿಂದ ಬೀಜ, ಅನಿವಾರ್ಯ. ನಿದ್ರೆಗಿಂತ ಮೊದಲು ಎಚ್ಚರ, ಎಚ್ಚರಕ್ಕೆ ಮೊದಲು ನಿದ್ರೆ, ಸೃಷ್ಟಿಗಿಂತ ಮೊದಲು ಪ್ರಲಯ, ಪ್ರಲಯಕ್ಕಿಂತ ಮೊದಲು ಸೃಷ್ಟಿ, ಜನ್ಮಕ್ಕೆ ಮೊದಲು ಕರ್ಮ, ಕರ್ಮಕ್ಕೆ ಮೊದಲು ಜನ್ಮ. ದೇಹ ಇಂದ್ರಿಯ ಮನಸ್ಸಿನ ಪ್ರವೃತ್ತಿಗಳೇ ಕರ್ಮ. ಜಗತ್ತಿನಲ್ಲಿ ಯಾವುದೂ ಆಕಸ್ಮಿಕವಲ್ಲ. ಎಲ್ಲವೂ ಸಕಾರಣ. ಸುನಿಯೋಜಿತ.

''ಕಾರ್ಯಸಕಾರಣ ಸಾಪೇಕ್ಷತ್ವಾತ್'' ಕಾರ್ಯವೆಂದರೇ ''ಅಭೂತ್ವಾ ಭಾವಿತ್ವಂ ಕಾರ್ಯತ್ವಂ'' ಮೊದಲು ಇಲ್ಲದ ರೂಪ, ಗುಣ, ಆಕಾರ ಈ ಪಡೆದರೆ ಅದೇ ಕಾರ್ಯ. ಇಲ್ಲದ್ದು ಆಗುವುದು. ಪ್ರತಿಯೊಂದು ಸೃಷ್ಟಿ, ಹುಟ್ಟು ಕಾರ್ಯ. ಇದಕ್ಕೊಂದು ಕಾರಣ ಇರಲೇಬೇಕು. ಆ ಕಾರಣವು ಜಡವಾಗಲು ಸಾಧ್ಯವಿಲ್ಲ. ಜಡದಲ್ಲಿ ಜ್ಞಾನ, ಇಚ್ಛಾ, (ಮನಸ್ಸು) ಕ್ರಿಯಾಗಳಿರುವುದಿಲ್ಲ. ಇವು ಇದ್ದದ್ದು ಚೇತನರಲ್ಲಿ ಮಾತ್ರ. ಆದರೆ ಅಲ್ಪನಾದ, ಅಸ್ವತಂತ್ರವಾದ, ಅಲ್ಪಜ್ಞಾನ, ಅಲ್ಪಶಕ್ತಿಯುಳ್ಳ ಚೇತನರಿಂದ ಸಾಧ್ಯವಿಲ್ಲ. ''ಅನವಸ್ಥಿತೇಃ ಅಸಂಭವಾಚ್ಚ ನೇತರಃ'' ಬ್ರ.ಸೂ. ಜೀವರಿಗೆ ಜೀವರೇ, ಚೇತನರಿಗೆ ಚೇತನವೇ ನಿರ್ಮಾಪಕ, ನಿರ್ವಾಹಕ-ವೆಂದರೆ, ಆ ಚೇತನರಿಗೆ ಇನ್ನೊಬ್ಬ ನಿರ್ಮಾಪಕ, ಅವರಿಗೆ ಮತ್ತೊಬ್ಬ, ಅವರಿಗೆ ಇನ್ನೊಬ್ಬ, ಇದು ಕೊನೆಯಿಲ್ಲದ ವಿಕಲ್ಪ. ಇದಕ್ಕೆ ''ಅನವಸ್ಥಾ'' ದೋಷವೆನ್ನುವರು. ತನ್ನದೇ ದೇಹ, ಜನ್ಮ, ಮರಣ, ಬುದ್ಧಿ, ಆರೋಗ್ಯ, ಆಯುಷ್ಯದ ಬಗ್ಗೆ ಸ್ವಾತಂತ್ರ್ಯವಿಲ್ಲದ ಜೀವರು ಜಗದ ಜೀವರ, ಸೃಷ್ಟಿಯ ಕಾರಣರಾಗಲಾರರು.

''ಯಚ್ಚ ಜ್ಞಾತುಂ ವಾ, ಸ್ಮರ್ತುಂ ವಾ ನ ಶಕ್ಯಮ್ । ತತ್ ಕಿಂ ಕರ್ತುಂ ಶಕ್ಯತೇ

ವಾ? (ಜಯತೀರ್ಥರು ಗೀ.ಭಾ. ಪ್ರಮೇಯದೀಪಿಕಾ) ಜಗದ ಸೃಷ್ಟಿಯ ರಹಸ್ಯ, ವಿಶಾಲತೆ, ನಿರ್ಮಾಣದ ವಿಧಿ, ವಿಧಾನಗಳನ್ನು ತಿಳಿಯಲಾಗದ ಜೀವರು, ಅದನ್ನು ನೆನಪಿಸಿಕೊಳ್ಳಲಾಗದವರು, ಇದನ್ನು ನಿರ್ಮಾಣ ಮಾಡಲು ಅದೆಂತು ಸಾಧ್ಯ? ಎನ್ನುವರು. ಆದ್ದರಿಂದ ಜಗದ ಸೃಷ್ಟಿ, ಪಾಲನ, ವ್ಯವಸ್ಥೆಯು ಒಬ್ಬ ಸರ್ವ–ಸಮರ್ಥನಾದ, ಸರ್ವಜ್ಞ, ಸರ್ವಶಕ್ತ ಚೇತನನಿಂದಲೇ ಸಾಧ್ಯ, ''ಯತ್ತು ಯುಕ್ತ್ಯಾ ವಿರುದ್ಧ್ಯೇತ ತದೀಶಕೃತಮೇವ ಹಿ'' ಶ್ರೀಮಧ್ವರು.

ವೇದವೇ ರಾಮಾಯಣಕ್ಕೆ ಮೂಲಾಧಾರ. ''ವೇತ್ತಿ ಸರ್ವಂ, ವೇದಯತಿ ಸರ್ವಂ'' ಇತಿ ವೇದಃ. ವಿಶ್ವದ ಎಲ್ಲ ವಿಚಾರಗಳನ್ನು ತನ್ನೊಡಲೊಳಗೆ ತುಂಬಿ–ಕೊಂಡದ್ದು ವೇದ. ಅನಂತ ವಿಚಾರಗಳನ್ನು ತಿಳಿಸುತ್ತದೆ. ಆದ್ದರಿಂದ ವೇದ. ''ಅನುಕ್ತಂ ಪಂಚಭಿಃ ವೇದೈಃ ನ ವಸ್ತ್ವಸ್ತಿ ಕುತಶ್ಚನ'' ಐದು ವೇದಗಳಿಂದ ಹೇಳಲ್ಪಡದೇ ಇರುವ ವಸ್ತುಗಳೇ ಜಗತ್ತಿನಲ್ಲಿ ಇಲ್ಲ.

''ಪ್ರತ್ಯಕ್ಷೇಣ ಅನುಮಾನೇನ ಯಸ್ತು ವಾ ಯೋ ನ ಬುಧ್ಯತೇ।
ಏನಂ ವಿದಂತಿ ವೇದೇನ ತಸ್ಮಾದ್ ವೇದಸ್ಯ ವೇದತಾ ॥

ಪ್ರತ್ಯಕ್ಷ, ಅನುಮಾನಗಳಿಂದ ಯಾವ ಉಪಾಯ, ಯಾವ ಜ್ಞಾನವು ತಿಳಿಯಲು ಸಾಧ್ಯವಿಲ್ಲವೋ ಅದನ್ನು ತಿಳಿಸುವುದೇ ವೇದ. ಅದಕ್ಕೇ (ವಿದ್–ತಿಳಿ) ವೇದ ಎಂದು ಕರೆಯುವರು. ಜ್ಞಾನ–ವಿಜ್ಞಾನಗಳ ಆಕರ, ಆಗರವೇ ವೇದ. ಪಂಚರಾತ್ರ, ರಾಮಾಯಣ, ಮಹಾಭಾರತ, ಹದಿನೆಂಟು ಪುರಾಣ, ಉಪಪುರಾಣ, ಆಗಮ ನಿಗಮಗಳು, ಸ್ಮೃತಿಗಳು, ಸೂತ್ರಗಳು, ಭಗವದ್ಗೀತಾ' ಎಲ್ಲವೂ ವೇದ ಮೂಲಕ, ವೇದಾಧಾರಿತ, ವೇದಾನುಮೋದಿತ ವಾಙ್ಮಯಗಳೇ.

''ನಾನಾಪುರಾಣನಿಗಮಾಗಮಸಮ್ಮತಂ
ಯದ್ರಾಮಾಯಣೇ ನಿಗದಿತಂ ಕ್ವಚಿದನ್ಯತೋಽಪಿ''

ಎಂದು ತುಳಸೀದಾಸರೂ ವೇದ, ನಿಗಮಾಗಮ ಸಮ್ಮತವಾದದ್ದು ''ರಾಮಾಯಣ'' ಎಂದು ವಿವರಿಸಿದ್ದಾರೆ.

''ಚತುರ್ವಿಂಶಸಹಸ್ರಂ ತು ಚತುರ್ವಿಂಶಕ್ಷರೋಜ್ವಲಮ್।
ಆದೌ ಪುನಃ ಸಹಸ್ರಾದೌ ಸರ್ವೋಽಪಿ ನಿಷದಾಕೃತಮ್ ॥

ರಾಮಾಯಣಂ ಮಹಾಪುಣ್ಯಂ ಶ್ರುತಿಸ್ಮೃತ್ಯರ್ಥಸಂಯುತಮ್ (ಸಮ್ಮಿತಮ್) ॥

ವೇದಾಂತಸಾರಂ ಪಾಪಘ್ನಂ ತತ್ತ್ವಜ್ಞಾನಪ್ರದೀಪಕಮ್ ।
ಭುಕ್ತಿಮುಕ್ತಿಪ್ರದಂ ನೃಣಾಂ ಶ್ಲೋಕೈಕಶ್ರವಣಾತ್ ಸಕೃತ್ ॥
ವೇದಮಾತ್ರಪ್ರಸೂತಿತ್ವಾದ್ ಪುತ್ರಪೌತ್ರಪ್ರದಂ ನೃಣಾಮ್ ।
ಸರ್ವಾಭಿಷ್ಟಪ್ರದಂ ನಿತ್ಯಂ ವಿಷ್ಣುಭಕ್ತ್ಯೈಕ ಸಾಧನಮ್ ।
ಜಯಪ್ರದಾ ನೃಪಾನಾಂ ಚ ವಿಷ್ಣುತೇಜೋಪಬೃಂಹಿತಮ್ ।
ಮಹಾಪ್ರಬಂಧಮತ್ಯಂತಂ ಹರೇರಭಿಮತಂ ಮಮ ॥
ತತ್ತ್ವಾರ್ಥವಚನಂ ದಿವ್ಯಂ ಬ್ರಹ್ಮವಾಲ್ಮೀಕಿಸಂಭವಮ್ ।
ಸಂಗ್ರಹೀತಂ ತದಾ ತತ್ತ್ವಂ ಸಾರಂ ರಾಮಾಯಣಾಭಿಧಮ್ ॥

ಆಗ್ನೇಯ, ಬ್ರಹ್ಮಪುರಾಣ

೨೪ ಗಾಯತ್ರಿಯ ಅಕ್ಷರಗಳ ಅರ್ಥ ೨೪ ಸಾವಿರ ಶ್ಲೋಕಗಳು. ಶ್ರುತಿ, ಸ್ಮೃತಿ, ಅರ್ಥದಿಂದ ಕೂಡಿದ್ದು ಈ ರಾಮಾಯಣ. ಪುಣ್ಯಪ್ರದ, ಪಾಪನಾಶಕ, ವೇದಾಂತಸಾರ, ತತ್ತ್ವಜ್ಞಾನವನ್ನು ತಿಳಿಸುವ ಕೃತಿ. ಒಂದೊಂದು ಶ್ಲೋಕವೂ ಶ್ರವಣದಿಂದ ಭುಕ್ತಿ-ಮುಕ್ತಿ ಎರಡನ್ನೂ ನೀಡುವುದು. ವೇದಮಾತಾ ಗಾಯತ್ರಿ-ಯಿಂದ ಹುಟ್ಟಿದ್ದಿದು. ಪುತ್ರ, ಪೌತ್ರ , ಸಂತಾನ, ಸಂಪತ್ತು ಕೊಡುವುದು. ವಿಷ್ಣುಭಕ್ತಿ ಹುಟ್ಟಲು ಮುಖ್ಯಸಾಧನ. ರಾಜರಿಗೆ ಗೆಲವು ತಂದುಕೊಡುವುದು. ವಿಷ್ಣುಸನ್ನಿಧಾನ ಉಳ್ಳದ್ದು ಈ ವಾಲ್ಮೀಕಿ ರಾಮಾಯಣ. ತತ್ತ್ವಜ್ಞಾನದ ಸಕಲ ಅರ್ಥಸಾರ. ವಾಲ್ಮೀಕಿಯಿಂದ ಈ ವೇದಾಂತತತ್ತ್ವದ, ಮಹಾಪ್ರಬಂಧದ ಅವತಾರ. ಶ್ರೀಹರಿಗೆ ಅತಿ ಪ್ರೀತ್ಯಾಸ್ಪದ ಕೃತಿ. ಇದು ಗಾಯತ್ರಿಯ ವ್ಯಾಖ್ಯಾನವಾದ ರಾಮಾಯಣ ಎಂಬುದು ಅಗ್ನಿಪುರಾಣದಲ್ಲಿ ವ್ಯಾಸವಾಣಿ. ವೇದಸಾರ ಸರ್ವಸ್ವ.

''ಯಾವ ವಿಚಾರ, ವಾಸ್ತವತೆ, ಮನುಷ್ಯನ ವಿಚಾರ, ಶಕ್ತಿಗೆ ನಿಲುಕುವು-ದಿಲ್ಲವೋ ಅದೆಲ್ಲವೂ ಈಶಕೃತ, ದೇವನಿರ್ಮಿತ.

''ಕಾರ್ಯರೂಪತ್ವಾತ್ ವಿಶ್ವಸ್ಯ । ಕಾರ್ಯಸ್ಯ ಕಾರಣಸಾಪೇಕ್ಷತ್ವಾತ್, ಅಚೇತನಸ್ಯ , ಅಸ್ವತಂತ್ರಚೇತನಸ್ಯ ಕಾರಣತ್ವ ಅಯೋಗಾದಿತಿ ಸ್ವತಂತ್ರಚೇತನಸ್ಯ ಕಾರಣತ್ವಸಿದ್ಧಿಃ'' (ಶ್ರೀಜಯತೀರ್ಥರ ನ್ಯಾಯದೀಪಿಕಾ.)

ಜಗದ ಕಾರಣನೇ ಶ್ರೀಹರಿ. ಅವನೇ ಪರಬ್ರಹ್ಮ. ವಿಶಾಲವಾದ ಪ್ರಪಂಚ, ಖಗೋಲ, ಸೂರ್ಯಚಂದ್ರ , ಪೃಥ್ವಿ, ವಾಯು, ಆಕಾಶ, ಜಲ ನಿರ್ಮಿಸಿದವ. ಅದ್ಭುತವಾದ, (ಡಿಜೈನ್) ಸುಂದರ ಆಕಾರ, ಯೋಜನೆ, ಪ್ರಯೋಜನೆಗಳಿಂದ

ಕೂಡಿದ ದೇಹ, ರಕ್ತ, ಮಾಂಸ, ಎಲುಬು, ಕೀಲುಗಳು, ಅವುಗಳ ಉಪಯುಕ್ತತೆ, ನಿರ್ಮಿತಿ ಗಮನಿಸಿದರೆ ಇದನ್ನು ನಿರ್ಮಿಸಿದ ದೇವರನ್ನು ತಿಳಿಯುವ ಪ್ರವೃತ್ತಿ ಬೆಳೆಯುವುದು.

''ದಿವ್ಯಂ ಭೌಮಂ ಚಾಂತರಿಕ್ಷಂ ವಿತ್ತಂ ಅಚ್ಯುತನಿರ್ಮಿತಮ್'' (ಭಾಗವತ)

ಆಕಾಶ, ಭೂಮಿ, ಅಂತರಿಕ್ಷ, ಗ್ರಹಗಳೆಂಬ ಎಲ್ಲ ಸಂಪತ್ತನ್ನು ಅಚ್ಯುತ, ಶ್ರೀಹರಿಯೇ ನಿರ್ಮಿಸಿದವನು.

''ಯತೋ ವಾ ಇಮಾನಿ ಭೂತಾನಿ ಜಾಯಂತೇ
ಯೇನ ಜಾತಾನಿ ಜೀವಂತಿ, ಯತ್ ಪ್ರಯಂತಿ, ಅಭಿಸಂವಿಶಂತಿ,

ತದ್ ವಿಜಿಜ್ಞಾಸಸ್ವ, ತದ್ ಬ್ರಹ್ಮೇತಿ (ತೈತ್ತಿರೀಯ ಉಪನಿಷತ್ತು)

'ಯಾರಿಂದ ಈ ಎಲ್ಲ ಜೀವಜಡಾತ್ಮಕ ಪ್ರಪಂಚ ಹುಟ್ಟುವದೋ, ಹುಟ್ಟಿದ, ಸೃಷ್ಟಿಸಿದ ಪ್ರಪಂಚ ಪಾಲಿಸಲ್ಪಡುವದೋ, ಯಾರಿಂದ ನಾಶ ಹೊಂದುವದೋ, ಮೋಕ್ಷ ಪಡೆಯುವದೋ ಅವನೇ ಪರಬ್ರಹ್ಮ. ಅವನ ಜಿಜ್ಞಾಸೆ ಮಾಡಬೇಕು. ಇದು ಮನುಷ್ಯನ ಜೀವನದ ಧ್ಯೇಯ. ಬದುಕಿನ ಕರ್ತವ್ಯ.

''ವಶೀಕೃತವಿಶ್ವಃ ಜಗತ್‌ಸೃಷ್ಟ್ಯಾದಿಕರ್ತಾ ಈಶ್ವರಃ''

'ಜಗತ್ತನ್ನು ತನ್ನ ವಶದಲ್ಲಿ ಇಟ್ಟುಕೊಂಡವನು. ಜಗತ್ತಿನ ಸೃಷ್ಟಿ, ಸ್ಥಿತಿ, ಲಯ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ, ನಿಯಮನ ಮಾಡುವವನೇ ಈಶ್ವರ ಎನ್ನುವರು ಶ್ರೀಜಯತೀರ್ಥರು. ಜೀವರಿಂದಲ್ಲ, ದೇವರಿಂದಲೇ ನಡೆಯುವವ.

''ಓಂ ಹಿತಲಕರಣ, ಅಹಿತಕರಣಾದಿದೋಷಪ್ರಸಕ್ತೇಃ'' ಬ್ರಹ್ಮಸೂತ್ರ.

ಜೀವರೇ ವಿಶ್ವನಿರ್ಮಾಪಕರಾಗಿದ್ದರೇ ಅವರಿಗೇಕೆ ತನ್ನ ಹಿತವನ್ನು ಮಾಡಿಕೊಳ್ಳಲು ಆಗುತ್ತಿಲ್ಲ? ತನ್ನ ಅಹಿತ, ತನ್ನ ಅನಪೇಕ್ಷಿತ, ಅನಿರೀಕ್ಷಿತ ಅಹಿತಗಳನ್ನೇ ಮಾಡಿಕೊಳ್ಳುತ್ತಿರುವರು, ಅದೇಕೆ?

''ಯದಿ ನಾಮ ನ ತಸ್ಯ ವಶೇ ಸಕಲಂ।
ಕಥಮೇವ ತು ನಿತ್ಯಸುಖಂ ನ ಭವೇತ್ ॥ ಶ್ರೀಮಧ್ವರು.

ಈ ಜಗತ್ತು, ನಮ್ಮ ದೇಹ ಬುದ್ಧಿಗಳು ನಮ್ಮ ವಶದಲ್ಲಿಯೇ ಇದ್ದರೇ, ದೇವರ

ವಶದಲ್ಲಿ ಇರುವುದಿಲ್ಲ ಎಂದಾದರೆ ಎಲ್ಲರೂ ಸದಾ ಸುಖಿಗಳಾಗಿಯೇ ಇರಬೇಕಾಗಿದ್ದಿತು. ಆದರೇ ಯಾರೂ ಸುಖಿಗಳಲ್ಲ. ಸುಖದಿಂದ ಇಲ್ಲ. ಸಮಸ್ಯೆಗಳ ಸುಳಿಗಳಲ್ಲಿ ಸಿಲುಕಿದವರೇ. ಅದಕ್ಕೇ ಜಗನ್ನಾಥನೊಬ್ಬ ದೇವರಿರುವ. ಕರ್ಮಾನು-ಸಾರಿ, ಯೋಗ್ಯತಾನುಸಾರಿ ಫಲ ಕೊಡುವ. ಅದಕ್ಕೇ ಎಲ್ಲರ ಜೀವನದಲ್ಲಿ ಏರುಪೇರು.

ದೇವರು ವೇದಸಂವಿಧಾನದ ವಿಧಿ, ನಿಯಮಗಳೆಂಬ 'ವಾಕ್ ತಂತಿ' ಶಬ್ದಗಳ ಹಗ್ಗದಿಂದ ಕಟ್ಟಿ ಹಾಕಿರುವ. ವೇದಗಳು ಜಗತ್ ಸಂಚಾಲಕ ಸೂತ್ರಗಳು. ದೇವರು ಸೂತ್ರಧಾರಿ. ಇದು ಜಗತ್ತಿನ ಸಾರ್ವಕಾಲಿಕ, ಸಾರ್ವಭೌಮ ವ್ಯವಸ್ಥೆ. ''ನಿಷೇಧವಿಧಿ ಪಾತ್ರತ್ವಾತ್ ಸನಾತನ ಇತಿ ಸ್ಮೃತಾಃ'' (-ಗೀತಾ ೨-೨೪)

'ನಾದ' ಎಂದರೆ ವೇದ. (ನಾದೇನ ಸಹಿತಃ ಸನಾದಃ, ಸನಾತನಃ) ಆದ್ದರಿಂದ ಜೀವರು ಸನಾದರು ಸನಾತನರು' ಎನ್ನಿಸುವರು.

''ಅದುಃಖಮಿತರತ್ ಸರ್ವಂ ಜೀವಾ ಏವ ತು ದುಃಖಿನಃ ।
ತೇಷಾಂ ದುಃಖಪ್ರಹಾಣಾಯ ಶ್ರುತಿರೇಷಾ ಪ್ರವರ್ತತೇ ॥

ಜಡಕ್ಕೆ ಅಚೇತನಕ್ಕೆ ದುಃಖವಿಲ್ಲ. ದೇವರಿಗೆ ದುಃಖವಿಲ್ಲ. ಇನ್ನು ದುಃಖ, ದೈನ್ಯತೆಗಳಿದ್ದದ್ದು ಜೀವರಿಗೆ ಮಾತ್ರ. ಅವರ ದುಃಖಪರಿಹಾರಕ್ಕೆ, ಎಲ್ಲ ವಿಧದ ಅರಿವಿಗಾಗಿಯೇ ಈ ವೇದಗಳು ಹೊರಟದ್ದು. ಅಭಿವ್ಯಕ್ತವಾದದ್ದು.

''ವೇದ್ಯತೇ ಅನಯಾ ಇತಿ ವೇದಾಃ''

''ವೇದಾ ಹ್ಯೇವ ಏನಂ ವೇದಾಯಂತೀತಿ ವೇದಾಃ''

''ಭಕ್ತಾನಾಂ ವೇಂ ವಾಂಛಿತಾನ್ ದದಾತೀತಿ ವೇದಾಃ''

''ನಿತ್ಯಾ ವೇದಾಃ ಪುರಾಣಾದ್ಯಾಃ ಶಾಶ್ವತಾ ವಿಷ್ಣುಬುದ್ಧಿಗಾಃ'' -ಬ್ರಹ್ಮಾಂಡ

ಅಂತಹ ಪರಿಪೂರ್ಣ ಬ್ರಹ್ಮನನ್ನು ತಿಳಿಯುವದು, ಜಿಜ್ಞಾಸೆ ಮಾಡುವದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯ. ಅದರಿಂದಲೇ ಸಕಲ ದುಃಖಪರಿಹಾರ. ವಾಲ್ಮೀಕಿ ಮಾಡಿದ್ದು ನೇರವಾಗಿ ರಾಮನ ಜಿಜ್ಞಾಸೆಯಲ್ಲ. ಗುಣಪೂರ್ಣನಾದ, ಪರಿಪೂರ್ಣ ವ್ಯಕ್ತಿ ಯಾರೆಂಬ ಬ್ರಹ್ಮಜಿಜ್ಞಾಸೆ. ಅದಕ್ಕೆ ನಾರದರು, ಬ್ರಹ್ಮದೇವರು ರಾಮನೇ ಗುಣಪೂರ್ಣ. ಅವನ ಜಿಜ್ಞಾಸೆ ಮಾಡಲು. ಅವನನ್ನು ತಿಳಿಯಲು, ತಿಳಿಸಲು ಆದೇಶಿಸಿದರು.

''ತಮೇವಂ ವಿದ್ವಾನ್ ಅಮೃತ ಇಹ ಭವತಿ ।
ನಾನ್ಯಃ ಪಂಥಾ ಅಯನಾಯ ವಿದ್ಯತೇ'' ॥ ತೈ.ಆ.೩೧೨

''ಆತ್ಮಾ ವಾ ಅರೇ ದ್ರಷ್ಟವ್ಯಃ, ಶ್ರೋತವ್ಯಃ ಮಂತವ್ಯಃ
ನಿದಿಧ್ಯಾಸಿತವ್ಯಃ'' ಬೃಹದಾರಣ್ಯಕ ೬–೫೬

ದೇವರನ್ನೇ ತಿಳಿಯಬೇಕು. ಅದರಿಂದಲೇ ದುಃಖಗಳಿಂದ ಬಿಡುಗಡೆ. ದುಃಖಪರಿಹಾರಕ್ಕೆ ಇನ್ನೊಂದು ಉಪಾಯವಿಲ್ಲ. ದೇವರನ್ನು ಕಾಣಬೇಕಾದರೆ, ಮೊದಲು ತಿಳಿಯಬೇಕು, ತಿಳಿದರೆ, ಚೆನ್ನಾಗಿ ತಿಳಿಯಲು ಮನನ, ಚಿಂತನ, ವಿಚಾರ, ವಿಮರ್ಶನ ಮಾಡಬೇಕು. ಆಗಲೇ ಅವನ ಧ್ಯಾನ, ಉಪಾಸನಾ ಸಾಧ್ಯವಾಗುವವು. ''ಬ್ರಹ್ಮಜಿಜ್ಞಾಸೆಯಿಂದ ರಾಮನ ಜ್ಞಾನ. ರಾಮನ ಜ್ಞಾನದ ದೃಢತೆ, ನಿಷ್ಠೆ, ಭಕ್ತಿಗಾಗಿ ವಿಚಾರಪೂರ್ವಕ ಮನನ, ಶ್ರವಣ, ಅವಶ್ಯಕ. ಅದರಿಂದ ರಾಮನಲ್ಲಿ ಪಕ್ವಭಕ್ತಿ . ಭಕ್ತಿಯಿಂದ ಪ್ರಸಾದ, ಅದರಿಂದ ಮೋಕ್ಷ. ಅದಕ್ಕಾಗಿ ವಾಲ್ಮೀಕಿಯು ''ಕೋಽನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವಿರ್ಯವಾನ್'' ಇತ್ಯಾದಿ ೧೬ ಗುಣಗಳ ಸಮಷ್ಟಿಯ ಬ್ರಹ್ಮನನ್ನು ಜಿಜ್ಞಾಸಿಸಿದ. ಆದ್ದರಿಂದ ಇದು ವೇದಜಿಜ್ಞಾಸೆ. ಆದ್ದರಿಂದ ವೇದವೇ ಈ ರಾಮಾಯಣಕ್ಕೆ ಮೂಲಬೀಜ. ರಾಮಾಯಣವು ವೇದದ ಅವತಾರ. ವೇದದ ವ್ಯಾಖ್ಯಾನ. ಉಪನಿಷತ್ತಿನ ರಹಸ್ಯ . ವೇದಾಧಾರಿತ. ವೇದಮೂಲಕ, ವೇದಾರ್ಥವಿಚಾರಕ.

''ವಾಚಾ ವಿರೂಪ ನಿತ್ಯಯಾ'' (ಋಗ್ವೇದ ೮–೭೫–೬) ವೇದಶುದ್ಧವಾಗಿ, ನಿತ್ಯವಾದ ವಾಣಿ ಭಗವಂತನ ಜ್ಞಾನವೆಲ್ಲ ಅಡಕ. ಶಬ್ದಸಂಬಂಧವಿಲ್ಲದ ಜ್ಞಾನವೇ ಇಲ್ಲ. ಜ್ಞಾನಸೂಕ್ಷ್ಮವಾಗಿ ಶಬ್ದದ ಸಂಬಂಧ ಹೊಂದಿರುತ್ತದೆ.

''ನ ಸೋಽಸ್ತಿ ಪ್ರತ್ಯಯೋ ಲೋಕೇ ಯಃ ಶಬ್ದಾನುಗಮಾದೃತೇ
ಅನುವಿದ್ಧಮಿವ ಜ್ಞಾನಂ, ಸರ್ವಂ ಶಬ್ದೇನ ಭಾಸತೇ''

–ವಾಕ್ಯಪದೀಯ ೧–೧೨೩

ಜ್ಞಾನವು ಶಬ್ದದಲ್ಲಿದೆ. ಶಬ್ದದಲ್ಲಿ ಜ್ಞಾನ ತುಂಬಿದೆ. ಶಬ್ದ–ಜ್ಞಾನಗಳ ಸಂಬಂಧವು ನಿತ್ಯವಾದದ್ದು. ಜ್ಞಾನದ ಸಂಬಂಧ ಶಬ್ದಕ್ಕಿದೆ, ಶಬ್ದದ ಸಂಬಂಧ ಜ್ಞಾನಕ್ಕಿದೆ. ವೇದಶಬ್ದಗಳಿಂದಲೇ ಸರ್ವಜ್ಞಾನದ ಅಭಿವ್ಯಕ್ತಿ. ಆದ್ದರಿಂದಲೇ

'ರಾಮಾಯಣಂ ಮಹಾಕಾವ್ಯಂ ವೇದತತ್ತ್ವಾರ್ಥಸಂಯುತಮ್ ।
ಯಸ್ಯ ಪ್ರತ್ಯಕ್ಷರಂ ಪುಣ್ಯಜನಕಂ ಚಿತ್ತಶಾಂತಿದಮ್ ॥

ವೇದದ ಶಬ್ದಗಳೇ, ವೇದದ ಅಕ್ಷರಗಳೇ, ವೇದದ ಸಕಲತತ್ತ್ವಗಳೇ ರಾಮಾಯಣ ಮಹಾಕಾವ್ಯವಾಗಿವೆ. ರಾಮಾಯಣದ ಒಂದೊಂದು ಅಕ್ಷರಗಳೂ ಪುಣ್ಯ ನೀಡುವವು. ಮನಸ್ಸಿಗೆ ಶಾಂತಿ ಸಮಾಧಾನ, ಸಂತೃಪ್ತಿ ನೀಡುವವು.

ಋಗ್ವೇದದಲ್ಲಿ ರಾಮಾಯಣ ಕಥೆಯನ್ನು ಹಾಗೂ ವ್ಯಕ್ತಿಗಳನ್ನು ಉಲ್ಲೇಖಿಸುವ ಮಂತ್ರಗಳು ಒಟ್ಟು ೧೫೭ ಎಂದು ಮಂತ್ರರಾಮಾಯಣದ ಕರ್ತೃ ನೀಲಕಂಠನ ಅಭಿಪ್ರಾಯ. ಎರಡು ಮಂತ್ರಗಳು ವಾಜಸನೇಯ ಸಂಹಿತೆಯವು. ವೇದಕ್ಕೆ ಕನಿಷ್ಠಪಕ್ಷ ಮೂರು ಅರ್ಥಗಳು. ''ತ್ರಯೋಽರ್ಥಾಃ ಸರ್ವವೇದೇಷು'' ಸರ್ವ-ವೇದವೂ ಮೊದಲು ಪರಮಾತ್ಮಪರ. ಆದಿದೈವಿಕ, ಆದಿಭೌತಿಕ, ಆಧ್ಯಾತ್ಮಿಕಪರವೂ ಆಗಿದೆ.

ಋಜ್ಮಂತ್ರದಲ್ಲಿ ರಾಮಾಯಣ

''ಭದ್ರೋ ಭದ್ರಯಾ ಸಚಮಾನ ಆಗಾತ್
ಸ್ವಸಾರಂ ಜಾರೋ ಅಭ್ಯೇತಿ ಪಶ್ಚಾತ್ ।
ಸುಪ್ರಕೇತೈರ್ದ್ಯುಭಿರಗ್ನಿರ್ವಿತಿಷ್ಠನ್
ರುಶದ್ಭಿರ್ವರ್ಣೈರಭಿ ರಾಮ ಮಸ್ಥಾತ್ ॥ -ಋಕ್ ೧೦-೩-೩

ಇಲ್ಲಿಯ ನಾಲ್ಕು ಚರಣಗಳಲ್ಲಿ ರಾಮಕಥೆಯ ವರ್ಣನೆ ಇದೆ. ಮೊದಲ ಚರಣದಲ್ಲಿ ಶ್ರೀರಾಮ ಸೀತೆಯೊಡನೆ ತಪೋವನಕ್ಕೆ ಬಂದದ್ದು. ಎರಡನೇ ಚರಣದಲ್ಲಿ ರಾವಣನಿಂದ ಸೀತೆಯ ಅಪಹರಣ. ಮೂರನೇ ಚರಣದಲ್ಲಿ ಹನುಮಂತನಿಂದ ಲಂಕಾದಹನ. ನಾಲ್ಕನೇ ಚರಣದಲ್ಲಿ ರಾಮರಾವಣರ ಯುದ್ಧ.

ಭದ್ರಃ=ಭಜನೀಯ ಪೂ ರಾಮಭದ್ರ, ರಾಮಚಂದ್ರನು
ಭದ್ರಯಾ=ಸೀತಾದೇವಿಯಿಂದ, ಸಚಮಾನಃ=ಸೇವಿತನಾಗಿ

ಆಗಾತ್=ವನಕ್ಕೆ ಆಗಮಿಸಿದ, ಸ್ವಸಾರಮ್=ಸೀತಾದೇವಿಯನ್ನು ಅಪಹರಿಸಲು, ಜಾರಃ=ಜಾರನಾದ ರಾವಣನು ಪಶ್ಚಾತ್=ರಾಮ, ಲಕ್ಷ್ಮಣರು ಆಶ್ರಮದಲ್ಲಿ ಇರ-ದಿದ್ದಾಗ, ಅಭ್ಯೇತಿ=ಭಿಕ್ಷುವೇಷದಿಂದ ಬಂದನು. ಸೀತೆಯನ್ನು ಅಪಹರಿಸಿದನು.

ಅಗ್ನಿಃ=ರಾವಣಸಂಹಾರದ ನಂತರ ಅಗ್ನಿದೇವರು ಸುಪ್ರಕೇತೈಃ ದ್ಯುಭಿಃ= ಮೂಲಸೀತಾದೇವಿಯ ಜೊತೆಗೆ ರಾಮಮ್ ಅಭಿ=ಶ್ರೀರಾಮನ ಎದುರಿಗೆ ರುಶದ್ಭಿಃ ವರ್ಣೈಃ=ಒಳ್ಳೆಯ ತೇಜಸ್ಸಿನಿಂದ ಕೂಡಿಕೊಂಡು, ಅಸ್ಥಾತ್= ಸಮರ್ಪಿಸಲು ಉಪಸ್ಥಿತನಾದನು.

ತಿಸ್ರೋ ಮಾತೄಸ್ತ್ರೀನ್ ಪಿತೄನ್ ಬಿಭ್ರ-
ದೇಶಃ ಊರ್ಧ್ವತಸ್ಥೌ ನೇಮವಗ್ಲಾಪಯಂತಿ ।
ಮಂತ್ರಯಂತೇ ದಿವೋ ಅಮುಷ್ಯ ಪೃಷ್ಠೇ
ವಿಶ್ವವಿದಂ ವಾಚಮವಿಶ್ವಮಿನ್ವಾಮ್ ॥ -ಋಗ್ವೇದ ೧-೧೬೪-೧೦

ಶ್ರೀರಾಮನು ಕೌಸಲ್ಯಾ, ಸುಮಿತ್ರಾ, ಕೈಕೇಯಿ ಎಂಬ ಮೂವರು ತಾಯಂದಿರನ್ನು ಹಾಗೂ ಜನ್ಮದಾತಾ, ದಶರಥ, ಉಪನಯನ ಕರ್ತಾ (ಮಂತ್ರದಾತಾ, ವಿದ್ಯಾದಾತಾ, ವಿಶ್ವಾಮಿತ್ರರೆಂಬ ಮೂವರು ತಂದೆಯವರನ್ನು ಹೊಂದಿದ್ದಾನೆ. ಪಿತೃಸಮಾನರು ಉಳಿದ ಇಬ್ಬರು. ಇನ್ನೊಂದು ಬಗೆಯಾಗಿಯೂ ಹೇಳಿರುವರು. ಲೋಕಸಿದ್ಧಪಿತಾ ದಶರಥ, ಪುತ್ರೇಷ್ಟಿಯಜ್ಞ ಮಾಡಿಸಿದ ಋಷ್ಯಶೃಂಗ ಹಾಗೂ ಚರು (ಪಾಯಸ) ಪ್ರಸಾದ ನೀಡಿದ ಅಗ್ನಿದೇವರು, ಇವರನ್ನು ಪಾಲಿಸಿದ. ವನವಾಸದ ಶೋಕ, ಆಯಾಸಗಳಿಗೆ ಎಂದಿಗೂ ಒಳಗಾಗಲಿಲ್ಲ. ಸಂಸಾರದಿಂದ ನಿರ್ಲಿಪ್ತ. ಆದರೂ ಸಂಸಾರವನ್ನು ಚೆನ್ನಾಗಿ ಬಲ್ಲವ. ಬ್ರಹ್ಮಾದಿದೇವತೆಗಳು ಮೇರುಶಿಖರದಲ್ಲಿ ಶ್ರೀವಿಷ್ಣುವಿನ ಶ್ರೀರಾಮನ ವಿಶ್ವಜ್ಞತ್ವದ ಬಗ್ಗೆ ವಿಚಾರ ಮಾಡಿದರು.

''ಚತ್ವಾರಿಂಶತ್ ದಶರಥಸ್ಯ ಶೋಣಾ ಸಹಸ್ರಸ್ಯಾಗ್ರೇ-
ಶ್ರೇಣಿಂ ನಯಂತಿ -ಋಗ್ವೇದ ೧-೧೨೬-೩

''ಉಪಮಾ ಶ್ಯಾವಾಃ ಸ್ವನಾಯೇನ ದತ್ತಾ ವಧೂ
ಮಾತೋ ದಶರಥಾಸೋ ಅಸ್ತುಃ''

ಯಜ್ಞದಲ್ಲಿ ದಶರಥನು ಇಪ್ಪತ್ನಾಲ್ಕು ಕೆಂಪು ಕುದುರೆಗಳಿಂದ ಎಳೆಯುವ ರಥ ದಾನ ನೀಡಿದ. ಕರಿಯ ಕಟ್ಟಿಗೆಯ ರಥಗಳಾಗಿದ್ದವು.

ಐತರೇಯಬ್ರಾಹ್ಮಣದ ೭-೨೭-೩೪ರಲ್ಲಿ ಹಾಗೂ ಅಥರ್ವವೇದದಲ್ಲಿಯ ೩-೧೭-೮ರಲ್ಲಿ ಶ್ರೀರಾಮಶಬ್ದ ವರ್ಣಿತವಾಗಿದೆ.

''ರಾಮಃ ಪೃಥುವೈನ್ಯಃ'' -ಋಗ್ವೇದ ೧-೧೧೨

''ಅರ್ವಾಚೀ ಸುಭಗೇ ಭವ ಸೀತೇ ವಂದಾಮಹೇ ತ್ವಾ
ಯಥಾ ನಃ ಸುಭಗಾ ಸಸಿ ಯಥಾನಃ ಸುಫಲಾನಸಿ ॥''-ಋಗ್ವೇದ ೪-೫೭-೬

ಸೌಭಾಗ್ಯವತೀ ಸೀತೆ! ನಾವು ನಿನಗೆ ವಂದಿಸುತ್ತೇವೆ. ನೀನು ನಮಗೆ ಅನುಗ್ರಹಿಸು. ಐಶ್ವರ್ಯ ನೀಡು. ಶತ್ರುಗಳನ್ನು ನಾಶ ಮಾಡು.

''ಇಂದ್ರಃ ಸೀತಾಂ ನಿಗೃಣ್ಹಾತು ತಾಂ ಪೃಷಾನು ಯಚ್ಛತು''

ಶ್ರೀರಾಮ ಸೀತೆಯನ್ನು ಸ್ವೀಕರಿಸಲಿ, ಜನಕರಾಜಾ ವಿಧಿಪೂರ್ವಕ ವಿವಾಹ ಮಾಡಿಕೊಡಲಿ. -ಋಗ್ವೇದ ೪-೫೭-೭

'ಪ್ರತದ್ ದುಃಶೀಮೇ ಪೃಥಾವನೇ ವೆನೇ
ಪ್ರರಾಮೇ ವೋಚ ಮಸುರೇ ಮಘಿವತ್ಸು । -ಋಗ್ವೇದ ೧೦-೯೩-೧೪

ಶ್ರೀರಾಮ, ವೇನರು ಬಲಿಷ್ಠರು. ಅವರನ್ನು ನಾನು ವರ್ಣಿಸುವೆನೆಂದು ಅಂಗಿರಾಋಷಿಗಳು ಹೇಳುವರು. ಹೀಗೆ ವೇದ, ಉಪನಿಷತ್ತು, ಬ್ರಾಹ್ಮಣಗಳಲ್ಲಿ ಶ್ರೀರಾಮಾಯಣದ, ಶ್ರೀರಾಮಕಥೆಯ ಮೂಲ ಬೀಜಗಳು ನೋಡಸಿಗುವುದು. ರಾಮಾಯಣ ವೇದಮೂಲ, ವೇದದ ವಿಸ್ತಾರ ವ್ಯಾಖ್ಯಾನ, ವೇದದ ಅವತಾರ. ವೇದಸ್ವರೂಪ. ಅಂತೆಯೇ ಯುಗಯುಗ ಕಳೆದರೂ ರಾಮಾಯಣ ನಿತ್ಯ-ನೂತನವಾಗಿ, ಜನರ ಜೀವನದಲ್ಲಿ, ಸಂಸ್ಕೃತಿ, ಇತಿಹಾಸದಲ್ಲಿ ಇಂದಿಗೂ ಜೀವಂತವಾಗಿದೆ.

ಋಗ್ವೇದದ ೧೫೭ ಮಂತ್ರಗಳು ಶ್ರೀರಾಮಕಥೆಯ ಆಕರಗಳು.

''ತಾಸಾಮೇಕಋಚಂ ಯಶ್ಚ ಪಠ್ಯತೇ ಭಕ್ತಿತೋ ಮಯಿ ।
ಸಮತ್ಸಾಯುಜ್ಯ ಪಾನವೀಂ ಪ್ರಾಪ್ನೋತಿ ಮುನಿದುರ್ಲಭಾಮ್ ।

ಇಮಾಋಚಃ ಸರ್ವಕಾಮಾರ್ಥದಾಶ್ಚ
ಯೇತೇ ಪಠಂತ್ಯಮಲಾ ಯಾಂತಿ ಮೋಕ್ಷಂ ।

-ರಾಮಪೂರ್ವತಾಪನೀ ಉಪನಿಷತ್ ।

ಯಾರು ವೈದಿಕರಾಮಾಯಣದ ಒಂದೊಂದು ಋಚಗಳನ್ನು ಶ್ರೀರಾಮನಲ್ಲಿ ಭಕ್ತಿಯಿಂದ ಪಠಿಸುವರೋ ಅವರು ಮುನಿಗಳಿಗೂ ದುರ್ಲಭವಾದ ಸಾಯುಜ್ಯ-ಮೋಕ್ಷವನ್ನು ಹೊಂದುವರು. ಈ ವೇದಋಚಗಳು ಎಲ್ಲವಿಧದ ಫಲ ನೀಡುವವು, ನಿರ್ಮಲ ಮೋಕ್ಷ ಪಡೆಯುವರು.

''ಸರ್ವೇ ವೇದಾ ಯತ್ಪದಮಾಮನಂತಿ'' -ಕಠ ೧-೨-೧೫

''ವೇದೈಶ್ಚ ಸರ್ವೈಃ ಅಹಮೇವ ವೇದ್ಯಃ'' ಗೀತಾ ೧೫–೧೫
ಓಂ ತತ್ತು ಸಮನ್ವಯಾತ್'' –ಬ್ರಹ್ಮಸೂತ್ರ ೧–೧–೪

ಎಲ್ಲ ವೇದಗಳೂ ಶ್ರೀವಿಷ್ಣುವನ್ನೇ ಪ್ರತಿಪಾದಿಸುವವು.

ರಾಮಾಯಣದ ಸಪ್ತಕಾಂಡಗಳು

ಋಗ್ವೇದದಲ್ಲಿ ರಾಮಾಯಣದ ಸ್ವರೂಪವರ್ಣನೆ ಕಾಣಬಹುದು.

ಚತ್ವಾರಿ ಶೃಂಗಾಃ ತ್ರಯೋ ಅಸ್ಯ ಪಾದಾಃ ದ್ವೇ ಶೀರ್ಷೇ ಸಪ್ತ ಹಸ್ತಾಸೋ ಅಸ್ಯ ।
ತ್ರಿಧಾ ಬದ್ಧಃ ಋಷಭಃ ರೋರವೀತಿ ಅಹೋ ದೇವೋ ಮತ್ಯಾನಾವಿವೇಶ ॥

–ಋಗ್ವೇದ

ರಾಮಾಯಣದ ನಾಯಕರು ನಾಲ್ಕು ಜನ. ಶೃಂಗದಂತೆ ವಿಶಿಷ್ಟರು. ಶ್ರೀರಾಮ, ಲಕ್ಷ್ಮಣ, ಭರತ ಹಾಗೂ ಶತ್ರುಘ್ನರು. ವಾಲ್ಮೀಕಿ ರಾಮಾಯಣದ ಪ್ರಕಾರ ಚತ್ವಾರಿ ಶೃಂಗರು, ಶ್ರೀರಾಮ, ಸೀತಾದೇವಿ, ಹನುಮಂತ ಹಾಗೂ ರಾವಣರು.

''ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್ ।
ಪೌಲಸ್ತ್ಯವಧಮಿತ್ಯೇವ ಚಕಾರ ಚರಿತವ್ರತಃ ॥ ವಾ.ರಾ.ಬಾ. ೪–೭

ರಾಮಾಯಣಕ್ಕೆ ರಾಮನೇ ಅಯನ. ಇದು ರಾಮಕಥೆ, ಸೀತಾದೇವಿಯ ಚರಿತೆ, ರಾಕ್ಷಸೀಶಕ್ತಿಯಾದ ರಾವಣ, ಸಾತ್ತ್ವಿಕಶಕ್ತಿಯ ಹನುಮಂತರೇ ಇಲ್ಲಿ ಶೃಂಗರು. ಪ್ರಧಾನರು.

ತ್ರಯೋ ಅಸ್ಯ ಪಾದಾಃ 'ಪದ, ಸ್ಥಾ. ರಾಮ ಲಕ್ಷ್ಮಣಾದಿಗಳಿಗೆ ಮೂವರು ತಾಯಂದಿರು. ರಾಮಾಯಣದಲ್ಲಿ ಗುಡಿ ಕಟ್ಟಿಸಿಕೊಂಡ ಶೀರ್ಷರು, ಶಿಖರ–ಪ್ರಾಯರು ಇಬ್ಬರು. ಜಗದೊಡೆಯ ಶ್ರೀರಾಮ. ಜಗದ್ಗುರು ಹನುಮಂತ. ಶ್ರೀರಾಮನನ್ನು ಮುಟ್ಟಲು, ಸಾನ್ನಿಧ್ಯ ಹೊಂದಲು ಏಳು ಕೈಗಳು. ಸಪ್ತಹಸ್ತಗಳು, ಸಪ್ತಕಾಂಡಗಳು. ಏಳು ಮೆಟ್ಟಲೇರಿದರೆ ಶ್ರೀರಾಮ ನಿಲುಕುವ, ದೊರೆಯುವ. ಇಂತಹ ರಾಮನನ್ನು ಜ್ಞಾನದಿಂದ, ಭಕ್ತಿಯಿಂದ, ಸತ್ಕರ್ಮಗಳಿಂದ ''ತ್ರಿಧಾ'' ಮೂರು ಉಪಾಯಗಳಿಂದ ಒಲಿಸಿಕೊಳ್ಳಬಹುದು. ಬಂಧಿಸಬಹುದು. ಶ್ರೀರಾಮ ಜ್ಞಾನಿ. ಅವನು ಸಾರಿಸಾರಿ ಹೇಳುತ್ತಿರುವ. ಮನುಷ್ಯರೇ! ನನ್ನ ಮಾತು ಕೇಳಿರಿ.

''ಭೂಯೋ ಭೂಯೋ ಭಾವಿನೋ ಭೂಮಿಪಾಲಾಃ
ನತ್ವಾ ನತ್ವಾ ಯಾಚತೇ ರಾಮಚಂದ್ರಃ ।
ಸಾಮಾನ್ಯೋಽಯಂ (ಮದ್ಬದ್ಧೋಽಯಂ) ಧರ್ಮಸೇತುರ್ನರಾಣಾಂ
ಕಾಲೇ ಕಾಲೇ ಪಾಲನೀಯೋ ಭವದ್ಭಿಃ ॥

ರಾಜರೇ! ಪ್ರಜಗಳೇ, ನಾನು ನಿಮಗೂ, ಧರ್ಮಕ್ಕೂ ಹೊಂದಿಸುವ ಸೇತುವೆ ಕಟ್ಟಿರುವೆ. ಜೀವನದಲ್ಲಿ ಪ್ರತಿಯೊಬ್ಬರೂ ಪಾಲಿಸಲೇಬೇಕಾದ ನೀತಿ, ನಿಯಮ, ಆದರ್ಶ, ಮರ್ಯಾದೆಗಳ ಕಟ್ಟಳೆ ಕಟ್ಟಿರುವೆ. ನಿಮ್ಮ ಬದುಕಿಗೆ ಧರ್ಮದ ನಿಬಂಧವಾಗುವಂತಹ ಸೇತುವೆ ಕಟ್ಟಿರುವೆ. ಅದನ್ನು ಪಾಲಿಸಿ ರಕ್ಷಿಸಿ,'' ಎಂದು ರಾಮನ ಕೇಳಿಕೆ. ರಾಮಾಯಣದ ಸಪ್ತಸಂದೇಶಗಳು ಇವು.

''ಯಸ್ಮಿನ್ ಧರ್ಮವಿಧಿಃ ಸಾಕ್ಷಾತ್ ಪಾತಿವ್ರತ್ಯಂ ಚಯೇತ್ ಸ್ಥಿತಮ್ ।
ಭ್ರಾತೃಸ್ನೇಹೇ ಮಹಾನ್ ಯತ್ರ ಗುರುಭಕ್ತಿಸ್ತಥೈವ ಚ ॥
ಸ್ವಾಮಿಸೇವಕಯೋರ್ಯತ್ರ ನೀತಿರ್ಮೂರ್ತಿಮತೀ ತಿಲ ।
ಅಧರ್ಮಕರಶಾಸ್ತಿರ್ವೈ ಯತ್ರ ಸಾಕ್ಷಾದ್ ರಘುದ್ವಹಾತ್ ॥

ರಾಮನನ್ನು ತಲುಪಲು ಇವು ಏಳು ಕೈಗಳು.

೧) ಬಹುರೂಪಿಯಾದ ಧರ್ಮದ ವಿಧಿನಿಯಮ, ವಿಧಾನಗಳು.

೨) ಪತಿವ್ರತಾಧರ್ಮದ ಸಾಕ್ಷಾತ್ ಪ್ರಯೋಗ ಪರಿಪಾಲನೆಗಳು

೩) ಅಣ್ಣತಮ್ಮಂದಿರಲ್ಲಿ ಇರುವ, ಇರಬೇಕಾದ ಸ್ನೇಹಪ್ರೀತಿಗಳು

೪) ಹನುಮಂತನಂತಹ ಗುರುಭಕ್ತಿ, ನಿಷ್ಠೆಗಳು

೫) ಸ್ವಾಮಿ, ಸೇವಕರ ಸಂಬಂಧ, ಆದರ್ಶಗಳು.

೬) ಚಾರಿತ್ರ, ನೀತಿ, ಶೀಲ, ಸ್ವಭಾವಗಳು.

೭) ಅಧರ್ಮ, ಅನೀತಿ, ಅತ್ಯಾಚಾರಗಳಿಗೆ ಆಗುವ ಶಿಕ್ಷೆ, ಶಾಸನಗಳು.

ಇವು ರಾಮನಿಂದ ರಾಮಾಯಣದಲ್ಲಿ ತಿಳಿಸಲ್ಪಟ್ಟ ಏಳು ಹಸ್ತಗಳು. ಇವುಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸಿರೆಂದು ರಾಮನ ಆದೇಶ.

ಇವೇ ''ಸಪ್ತಶಿವಾಸು ಮಾತೃಷು'' ಏಳು ಮಂಗಲಕರಕಾಂಡಗಳು. ಇವೇ ರಾಮಾಯಣದ ಮೂಲ ಮಾತೃಕೆಗಳು. ''ತೃತೀಯಮಸ್ಯ'' ವಾಯುದೇವರ

ಮೂರನೇ ಅವತಾರರಾದ ಶ್ರೀಮಧ್ವರು, ಏಳು ಮಾತೃಕೆಗಳ, ಕಾಂಡಗಳ ಸಾರವನ್ನು ಸಂಗ್ರಹಿಸಿರುವರು. ಅದೇ ತಾತ್ಪರ್ಯನಿರ್ಣಯದ ಮೂರರಿಂದ ಒಂಭತ್ತು ಅಧ್ಯಾಯದ, (ಏಳು ಅಧ್ಯಾಯದ) ಮಧ್ವರಾಮಾಯಣ. ಇವು ಮಂಗಲಮಯ ಮೂಲರಾಮಾಯಣ. ಮಧ್ವರಾಮಾಯಣವೂ ಏಳು ಅಧ್ಯಾಯ ಹೊಂದಿದೆ.

ರಾಮಾಯಣದಲ್ಲಿ ಏಳು ಕಾಂಡಗಳು. ಐದು ನೂರಕ್ಕೂ ಹೆಚ್ಚು ಸರ್ಗಗಳು. ಇಲ್ಲಿ ಯಾವ ಕಾಂಡವೂ ಪ್ರಕ್ಷಿಪ್ತವಲ್ಲ. ಆಮೇಲೆ ರಚಿಸಿದ್ದೂ ಅಲ್ಲ.

''ಚತುರ್ವಿಂಶತಿ ಸಹಸ್ರಾಣಿ ಶ್ಲೋಕಾನಾಮುಕ್ತವಾನ್ ಋಷಿಃ ।
ತಥಾ ಸರ್ಗಶತಾನ್ ಪಂಚ ಷಟ್‌ಕಾಂಡಾನಿ ತಥೋತ್ತರಮ್ ॥

–ವಾ.ರಾ.ಬಾಲ. ೪–೨

ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು, ಏಳು ಕಾಂಡಗಳು, ಐದು ನೂರಕ್ಕೂ ಹೆಚ್ಚು ಸರ್ಗಗಳು. ಇದು ರಾಮಾಯಣದ ಸ್ವರೂಪ. ಇವೇ ''ಸಪ್ತ ಶಿವಾಸು ಮಾತೃಗಳು, ''ಸಪ್ತಹಸ್ತಗಳು'' ವೇದದಲ್ಲಿ ನಿರ್ಧಾರಿತ ಕಾಂಡಗಳು. ''ರಾಮ'' ನಾಮದಲ್ಲಿಯೇ ಈ ಏಳು ಕಾಂಡಗಳ ಸಂಖ್ಯೆ ನಿರೂಪಿತವಾಗಿದೆ. ಇವು ಸಂಖ್ಯೆಯಿಂದ ಸಿದ್ಧ. ಪ್ರಸಿದ್ಧ.

''ರಾ,'' ಇದು ಎರಡನೇ ಅಕ್ಷರ (ಯರ) ''ಮ'' ಇದು ಐದನೇ ಅಕ್ಷರ (ಪಫಬಭಮ) ರಾಮ ೫+೨=೭ ಎಂಬುದು ರಾಮನಾಮದಿಂದಲೇ ಸಪ್ತಕಾಂಡಗಳು ಸೂಚಿತವಾಗಿದೆ.

''ಜಯೋ ನಾಮೇತಿಹಾಸೋಽಯಂ'' ಮಹಾಭಾರತ ''ಜಯ''ನಾಮಕ ಇತಿಹಾಸ. ''ಜಯ'' ಶಬ್ದ ೧೮ ಸಂಖ್ಯೆಯನ್ನು ಪರ್ವಗಳ ಸಂಖ್ಯೆಯನ್ನು ಸೂಚಿಸುವುದು. 'ಜ'=೮ (ಕಖಗಘಙ, ಚ, ಛ, ಜ) 'ಯ'=೧, ''ಅಂಕಾನಾಂ ವಾಮತೋ ಗತಿಃ'' ೧+೮=೧೮ ಪರ್ವಗಳು ಸೂಚಿತವಾದಂತೆ ''ರಾಮ''–ನಾಮದಲ್ಲಿಯೇ ಏಳುಕಾಂಡಗಳ ಯುಕ್ತತೆ ಅಭಿವ್ಯಕ್ತವಾಗುವುದು.

'ಜಯ' ಮಹಾಭಾರತ ಪರ್ವಗಳ ಸಂಕೇತ. ಹೆಚ್ಚೂ ಪರ್ವವಿಲ್ಲ, ಕಡಿಮೆಯೂ ಇಲ್ಲ. ಅದರಂತೆ ''ರಾಮ'' ರಾಮಾಯಣ ೭ ಕಾಂಡಗಳ ಸಂಕೇತ. ರಾಮ=ಶಬ್ದದ ಏಳು ಸಂಖ್ಯೆ ವಿಶಿಷ್ಟ ಅರ್ಥಗಳನ್ನು ಹೊಂದಿದೆ. ಸಂಕೇತಗಳನ್ನೂ ಹೊಂದಿದೆ. ದಶಾವತಾರಗಳಲ್ಲಿ ರಾಮನ ಅವತಾರ ಏಳನೆಯ ಅವತಾರ. (ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ಏಳನೆಯದು ರಾಮ) ಶ್ರೀರಾಮನು ಅವತರಿಸಿದ ನಕ್ಷತ್ರವೂ ಏಳನೆಯದಾದ ''ಪುನರ್ವಸು'' ನಕ್ಷತ್ರ.

ಶ್ರೀರಾಮನನ್ನು ಪ್ರತಿಪಾದಿಸುವ ಶಾಸ್ತ್ರಗಳೂ ಏಳು.

''ಋಗ್‌ಯಜುಃಸಾಮಥರ್ವಾಂಶ್ಚ ಭಾರತಂ ಪಂಚರಾತ್ರಕಮ್ ।
ಮೂಲರಾಮಾಯಣಂ ಚೈವ ಶಾಸ್ತ್ರಮಿತ್ಯಭಿಧೀಯತೇ ॥

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಮಹಾಭಾರತ, ಪಂಚರಾತ್ರ , ಮೂಲರಾಮಾಯಣ ಇವೇ ಶಾಸ್ತ್ರಗಳು. ಸ್ವತಃ ಪ್ರಮಾಣಗಳು. ಪರಮಾತ್ಮನನ್ನು ಶಾಸ್ತ್ರ ತಿಳಿಸುವವು. ಸಪ್ತಮಾತೃಗಳು ಮಾತೃಕೆಗಳು.

ಸಮುದ್ರವನ್ನು ನೇರವಾಗಿ ಸೇರುವ ಗಂಗಾ, ಗೋದಾವರಿ, ನರ್ಮದಾದಿ ನದಿಗಳೂ ಸಪ್ತ. ಇವು ಮಹಾನದಿಗಳು. ಮೇರು, ಹಿಮಾಲಯ ಮೊದಲಾದ ಮಹಾಪರ್ವತಗಳೂ ಏಳು. ''ಭೂಃ, ಭುವಃ, ಸ್ವಃ , ಮಹಃ, ಜನಃ, ತಪಃ, ಸತ್ಯಲೋಕಾದಿ ಊರ್ಧ್ವಲೋಕಗಳೂ ಏಳು. ಇವು ಸಪ್ತ . ಇವುಗಳಿಗೆ ಅಧಿಪತಿ ಶ್ರೀರಾಮ.

ಅತಳ, ವಿತಳ, ಸುತಳ, ರಸಾತಳಾದಿ ಅಧೋಲೋಕಗಳೂ ಸಪ್ತ . ''ಸಪ್ತ ಸಪ್ತ'' ಲೋಕಗಳಿಗೆ ಅಧಿಪತಿ ಜಗನ್ನಾಥ ಶ್ರೀರಾಮ.

ಇದು ರೂಪಾತ್ಮಕಪ್ರಪಂಚ. ಇದರ ಒಡೆಯ ಶ್ರೀವಿಷ್ಣುವೇ ಶ್ರೀರಾಮನು. ಇದನ್ನು ತಿಳಿಸುವುದೇ ''ರಾಮ'' ಎಂಬ ಸಪ್ತಸಂಖ್ಯಾವಾಚಕ ನಾಮಪದದ ಸಂಕೇತ, ಸಪ್ತಮುಖಿ.

''ದ್ರವ್ಯ , ಗುಣ, ಕರ್ಮ, ಸಾಮಾನ್ಯ , ವಿಶೇಷ, ಸಮವಾಯ, ಅಭಾವಾದಿ ಏಳು ವಿಶ್ವದಲ್ಲಿ ಇರುವ ಪದಾರ್ಥಗಳು. ಈ ಪೊಡವಿಗೊಡೆಯ ಶ್ರೀರಾಮ. ನಾಮಾತ್ಮಕ ಪ್ರಪಂಚವೂ ಸಪ್ತವಿಧ. ಸಪ್ತಮುಖಿ, ಸಪ್ತಸ್ವರಗಳು. ''ಸರಿಗಮ-ಪದನಿಸ'' ಎಂಬುದಾಗಿ ''ಋಷಭ, ಗಾಂಧಾರಾದಿಗಳು ಏಳು ಸ್ವರಗಳು. ನಾದ ಪ್ರಪಂಚ. ವೇದದಲ್ಲಿ ಮೂಲ ಛಂದಸ್ಸುಗಳು ''ಗಾಯತ್ರೀ, ತ್ರಿಷ್ಟುಪ್, ಅನುಷ್ಟುಪ್, ಬೃಹತೀ, ಪಂಕ್ತಿ , ತ್ರಿಷ್ಟುಪ್, ಜಗತೀ. ಇವು ಪ್ರಧಾನ ಸಪ್ತ ಛಂದಸ್ಸುಗಳು. ವೇದಸ್ವರೂಪಗಳು. ಶ್ರೀರಾಮನ ಪ್ರತಿಪಾದಕಗಳು.

ಶ್ರೀರಾಮ ಕಾಲನಿಯಾಮಕ. ಕಾಲವೂ ಸಪ್ತಭೇದ ಹೊಂದಿದೆ. ಸೋಮವಾರ-ದಿಂದ ರವಿವಾರದ ವರೆಗೆ ವಾರಗಳೂ ಏಳುಭೇದ ಹೊಂದಿವೆ. ಇವೇ ಪ್ರಧಾನ. ಏಳು ಗ್ರಹಗಳು. ರವಿ, ಚಂದ್ರ , ಮಂಗಳ, ಬುಧ, ಗುರು, ಶುಕ್ರ , ಶನಿಗಳು. ಈ

ಸಕಲಗ್ರಹಗಳ ನಿಯಾಮಕ, ಶ್ರೀರಾಮ ಸಕಲಗ್ರಹಬಲ. ಶ್ರೀರಾಮನು ಅವತರಿಸಿದ ವಂಶ ಸೂರ್ಯವಂಶ. ಸೂರ್ಯನು ''ಸಪ್ತ ಯುಂಜಂತಿ ರಥಮೇಕಚಕ್ರಮ್'' ಒಂದೇ ಚಕ್ರದ ಏಳು ಕುದುರೆಗಳನ್ನು ಹೂಡಿದ ರಥದಲ್ಲಿ ಸಂಚರಿಸುವ. ಸಪ್ತಚಕ್ರದ ಸೂರ್ಯನ ವಂಶದಲ್ಲಿ ಜನಿಸಿದವನು ಶ್ರೀರಾಮ.

ಪ್ರತಿಮನ್ವಂತರದಲ್ಲಿ ಋಷಿಗಳು ಪ್ರಧಾನವಾಗಿ ಏಳುಜನ. ಸಪ್ತರ್ಷಿಗಳು. ಕಾಲದಲ್ಲಿ ವ್ಯವಸ್ಥಾಪಕರು. ಸೂರ್ಯನ ಕಿರಣಗಳಲ್ಲಿ ತೋರುವ ವರ್ಣಗಳೂ ಸಪ್ತ.

ಬ್ರಹ್ಮಾಂಡದಂತೆ ಪಿಂಡಾಂಡವೂ ಸಪ್ತಧಾತುಗಳಿಂದ ಕೂಡಿದ್ದು. ಈ ಶರೀರ, ರಕ್ತ, ಮಾಂಸ, ಮಜ್ಜಾ, ಅಸ್ತಿಗಳೇ ಸಪ್ತಧಾತುಗಳು. ಇಂತಹ ಶರೀರಕ್ಕೆ ಬಿಂಬ–ಮೂರುತಿ ಶ್ರೀರಾಮ.

ಮೋಕ್ಷದಾಯಕ ಸನ್ನಿಧಾನವುಳ್ಳ ಕ್ಷೇತ್ರಗಳೂ ಸಪ್ತ. ''ಅಯೋಧ್ಯಾ, ಮಥುರಾ, ಮಾಯಾ, ಕಾಶೀ, ಕಾಂಚೀ, ಅವಂತಿಕಾ, ಪುರೀ, ದ್ವಾರಾವತೀ ಚೈವ ಸಪ್ತೈತೇ ಮೋಕ್ಷದಾಯಕಾಃ'' ಇವು ಶ್ರೀರಾಮನ ಸನ್ನಿಧಿಗಳು. ಮೋಕ್ಷದಾಯಕ ಕ್ಷೇತ್ರಗಳು.

ದೇಹದಲ್ಲಿ ಆಧ್ಯಾತ್ಮಸಾಧಕನು ಕ್ರಮವಾಗಿ ಮೇಲೇರುವ ಚಕ್ರಗಳು ಏಳು. ಇವು ನಾಡೀಕೇಂದ್ರಗಳು. ''ಮೂಲಾಧಾರ, ಸ್ವಾಧಿಷ್ಠಾನ, ಮಣಿಪುರ, ಅನಾಹತ, ವಿಶುದ್ಧ, ಆಜ್ಞಾಚಕ್ರ, ಸಹಸ್ರಾರ'' ಹೀಗೆ ಏಳು ಚಕ್ರಗಳು.

ಹೀಗೆ ವಿಶ್ವವೇ ಏಳು ಸಂಖ್ಯೆಯ ಕೂಟ. ವೈದಿಕ ವಿಶ್ವದ ಪರಿಕಲ್ಪನೆ ಸಪ್ತದಲ್ಲಿದೆ.

ಅದಕ್ಕಾಗಿ ವಾಲ್ಮೀಕಿಯ ರಾಮಾಯಣವೂ ಏಳು ಕಾಂಡಗಳನ್ನು ಹೊಂದಿದೆ. ಏಳು ಕಾಂಡಗಳು ಆಧ್ಯಾತ್ಮಿಕ ಸಾಧಕನು ಏರುವ ಏಳು ಮೆಟ್ಟಿಲುಗಳು. ಸಾಧನದ ಸೋಪಾನಗಳು. ಸಾಧಿಸಬೇಕಾದ ಗುಣಗಳು. ಇವು ವೇದದ ಏಳು ಸಂದೇಶಗಳು. ಕಾಂಡದ ಬೀಜವೇ ಏಳು ಸಂಖ್ಯಾಕವಾಗಿದೆ. ಕಾಂಡದ ಹೆಸರುಗಳೂ ಏಳು ಸಂದೇಶ, ಆದೇಶಗಳನ್ನು ಸುಲಭವಾಗಿ, ಸರಳವಾಗಿ ಬಿಂಬಿಸುವವು.

ರಾಮಾಯಣದಲ್ಲಿ ಏಳು ಕಾಂಡಗಳು. ಸಾತ್ತ್ವಿಕರನ್ನು ಸಾಧನಕ್ಕೆ ಅಣಿಗೊಳಿಸುವ ಸಂದೇಶಗಳು ಏರುವ ಏಣಿಗಳು.

ಸಂಸಾರದ ಸುಳಿಯಲ್ಲಿ ಮನಸ್ಸು ಸದಾ ಕ್ಷುಬ್ಧ, ಈರ್ಷ್ಯೆ, ದ್ವೇಷ, ಮಾತ್ಸರ್ಯ, ಸ್ವಾರ್ಥ, ಲೋಭಗಳು ಮನುಷ್ಯ ಸಹಜ ದೌರ್ಬಲ್ಯಗಳು. ಇವುಗಳ ಮಧ್ಯದಲ್ಲಿ ಮನಸ್ಸು ಅತೃಪ್ತ. ಅಸಮಾಧಾನ. ಅಸ್ಥಿರ. ಇಂತಹ ಸಂದರ್ಭದಲ್ಲಿ ಕ್ಷೋಭೆಯಿಂದ

ಸ್ವಸ್ಥಾ ಮನಸ್ಸಿಗೆ ಬರುವ ಕ್ರಮ ಈ ಕಾಂಡಗಳ ಹೆಸರಿನಲ್ಲಡಗಿದೆ. ಸಾಧಕರ ಶ್ರಮಿಕ ವಿಕಾಸಗಳು. ದ್ವಂದ್ವಾತೀತ ಸ್ಥಿರಮತಿ, ಸ್ಥಿತಪ್ರಜ್ಞನಾಗುವ ಹಂತಗಳು.

ಶ್ರೀರಾಮನ ಸ್ವರೂಪವೇ ರಾಮಾಯಣ. ಅವನ ಬದುಕಿನ ಹಂತಗಳೇ ಕಾಂಡಗಳ ಸಂದೇಶ.

೧) ಬಾಲಕಾಂಡದ ಸಂದೇಶ –

ಭಕ್ತಿಮಾರ್ಗದಲ್ಲಿ ಮುಂದುವರೆಯುವಾಗ ಮೊದಲು ಸಂಪಾದಿಸಬೇಕಾದದ್ದು ಬಾಲಕನಂತಹ ಮನಸ್ಸು. ಬಾಲಕನಾಗುವುದು ಸಾಧಕನ ಮೊದಲಗುರಿ. ಬಾಲಕರ ಮನಸ್ಸು ಮುಗ್ಧವಾದದ್ದು. ನಿರ್ವಿಕಾರ. ಏಕರೂಪ. ಸ್ವಚ್ಛವಾಗಿರುವುದು. 'ಅಂತರಂಗ ಬಹಿರಂಗ' ಎಂದು, ಒಳಹೊರಗೆಂದು ಎರಡಿರುವುದಿಲ್ಲ. ಒಂದೇ ಬಗೆ. ''ಮಾತು, ಕೃತಿ'' ಒಂದೇ ಆಗಿರುವವು. ವಿಕಾರ, ವಾಸನೆಗಳಿರುವುದಿಲ್ಲ. ರಾಗ ದ್ವೇಷಗಳಿರುವುದಿಲ್ಲ. ಇದ್ದರೂ, ಬಂದರೂ ಕ್ಷಣದಲ್ಲಿ ಮರೆತು, ಬೆರೆಯುವ ಗುಣ, ಬಾಲಕರದು. ಭಾಗವತದ ೧೧ನೇ ಸ್ಕಂಧದಲ್ಲಿ ೨೪ ಗುರುಗಳ ಸಂದೇಶವಿದೆ. ಅದರಲ್ಲಿ ಅವಧೂತ ಬಾಲಕರಿಂದ ತಾನು ತಿಳಿದ, ಕಲಿತ ಗುಣಗಳನ್ನು ನಿರೂಪಿಸಿರುವ.

ಜ್ಞಾನ ಬರಲಿ, ಮಾನ ಬರಲಿ, ಧನ, ಧಾನ್ಯ ಸಿಗಲಿ, ಸುಖ ಸಂತಸ ಇರಲಿ, ಆದರೆ ಮನಸ್ಸು ಬಾಲಕನಂತೆ ನಿರ್ವಿಕಾರವಾಗಿರಲಿ.

ಸಂಪತ್ತಿನಿಂದ ಧನಿ, ಮನಸ್ಸಿನಿಂದ ಬಾಲಕನಾಗಬೇಕು. ವಿಕಾರ, ವಾಸನೆ-ಗಳಿರುವುದಿಲ್ಲ. ಗರ್ವವಿಲ್ಲ. ಮಾನ ದೊರೆತಾಗಲೂ ಅಷ್ಟೇ, ಮಾನ ದೊರೆಯ-ದಿದ್ದಾಗಲೂ ಅಷ್ಟೇ ಮನಸ್ಸು ಸಮಾನವಾಗಿರಲಿ. ಸಮತೋಲಿತವಿರಲಿ. ಅಹಂ, ಅಭಿಮಾನ ಬೇಡ.

''ಯೋಗ ಆಧ್ಯಾತ್ಮಿಕಃ ಪುಂಸಾಂ ಮತೋ ನಿಃಶ್ರೇಯಸಾಯ ಮೇ ।
ಅತ್ಯಂತೋಪರತಿರ್ಯತ್ರ ದುಃಖಸ್ಯ ಚ ಸುಖಸ್ಯ ಚ ॥ –ಭಾಗವತ ೩–

ಸುಖ ದುಃಖಗಳು, ಏರು ಪೇರುಗಳು ಪರಿಣಾಮ ಬೀರದಂತೆ ಬಾಳುವುದೇ ''ಆಧ್ಯಾತ್ಮಿಕ ಯೋಗ.'' ಇದೇ ಸಾಧನಮಾರ್ಗ. ಇದೇ ಶ್ರೇಯಸ್ಸಿಗೆ ಸಾಧನ.

ಕಪಟ, ಕಟಿಲತೆ, ಮೋಸ, ವಂಚನೆ ಮಾಡುವ ಜ್ಞಾನ ಬಾಲಕರಲ್ಲಿ ಇರುವುದಿಲ್ಲ. ಸ್ವಾಭಾವಿಕವಾಗಿ ಶುದ್ಧ ಹೃದಯ, ಸ್ವಚ್ಛ ಮನಸ್ಸು, ಸುಳ್ಳು ಗೊತ್ತಿರುವುದಿಲ್ಲ. ಅದು ಆಗಂತುಕ, ಕಲಿಸಿದರೆ ಬರುವುದು.

ಬಾಲಕರ ದೃಷ್ಟಿಯೂ ಶುದ್ಧ, ಯಾರಲ್ಲಿಯೂ ದೋಷ ಕಾಣುವುದಿಲ್ಲ. ದುಷ್ಟತೆ, ವ್ಯಂಗ್ಯ , ಕುಹಕ ಕಾಣದ ಮನಸ್ಸು ಬಾಲಕರದು. ಬಾಲಕರ ಮನಸ್ಸು ಯಾರನ್ನೂ ಕೆಟ್ಟವರಾಗಿ ಕಾಣುವುದಿಲ್ಲ. ದ್ವೇಷ ಇರುವುದಿಲ್ಲ. ಮಕ್ಕಳ ಹೃದಯ ಶುದ್ಧ. ದುಷ್ಟ ಹೃದಯವೂ ಅದನ್ನು ಕಂಡು ಕರಗುವುದು. (''ಹಮ ಭಲಾ ತೋ ಜಗಭಲಾ'') ನಾವು ಒಳ್ಳೆಯವರಾದರೆ, ನಮ್ಮ ಪಾಲಿಗೆ ಜಗತ್ತೂ ಒಳ್ಳೆಯದೇ ಆಗುವುದು. ಒಳ್ಳೆಯವರಾಗಿಯೇ ಕಾಣುವರು. ನಮ್ಮಲ್ಲಿ ದೋಷವಿದ್ದರೆ ಎಲ್ಲರೂ ದೋಷಿಗಳು, ಕಪಟಿಗಳಾಗಿ ಕಾಣುವರು. ನಮ್ಮ ದೃಷ್ಟಿಂತೆ ಭಾವ ಸೃಷಿ.

ದೊಡ್ಡ ದೊಡ್ಡ ಜ್ಞಾನಿಗಳ ಮನಸ್ಸು ಬಾಲಕರಂತೆ ಪಕ್ವವಾಗಿರುವುದು, ಮುಗ್ಧ ಸ್ನಿಗ್ಧವಾಗಿರುವುದು.

''ಮಾತು, ಮನಸ್ಸು, ಕ್ರಿಯೆಗಳು (ಕಾಯೇನ, ವಾಚಾ, ಮನಸಾ) ಒಂದಾಗಿರುವವು, ಹಿಂದೆ ಒಂದು, ಮುಂದೆ ಒಂದು ಎಂಬ ದ್ವಿಮುಖತೆ ಇರುವುದಿಲ್ಲ. ಮಕ್ಕಳಲ್ಲಿ ಕೃತ್ರಿಮತೆ ಇರುವುದಿಲ್ಲ. ಹೀಗೆ ಮನಸ್ಸಿದ್ದರೆ ಮಾತ್ರ ಭಕ್ತಿಯಲ್ಲಿ ಆನಂದದ ಅನುಭವವಾಗುವುದು.

ಮನಸ್ಸಿನಲ್ಲಿ ಯೋಚಿಸಿದಂತೆ ಮಾತನಾಡುವರು, ಮಾತನಾಡಿದಂತೆ ಮಾಡುವರು. ಬಾಲಕರ ವ್ಯವಹಾರ, ಮಾತು ಮಧುರ, ಹೃದಯ ಹಾಲಾಹಲವಾಗಿರುವುದಿಲ್ಲ. ಶ್ರೀರಾಮನ ಬಾಲ್ಯದಲ್ಲಿ ಬಾಲಕರ ಈ ಎಲ್ಲ ಗುಣಗಳ ಸಮಾವೇಶ ಕಾಣಬಹುದು. ಶ್ರೀರಾಮ ಅರಮನೆಯ ಅರಗಿಣಿಯಾಗಿ ಬೆಳೆಯುವಾಗ ವಿಶ್ವಾಮಿತ್ರರು ಕರೆದುಕೊಂಡು ಹೋದರು. ಗುರುಕುಲ ನಿಯಮಕ್ಕೆ ಒಳಗಾದ ಶ್ರೀರಾಮ, ನಿರ್ವಿಕಾರ, ನಿಷ್ಕಾಮವಂತನಾಗಿ ಗುರುಗಳನ್ನು ಹಿಂಬಾಲಿಸಿದ. ರಾಜಕುಮಾರನೆಂಬ 'ಅಹಂ, ಮಮಗಳು ಕಾಡಲಿಲ್ಲ. ಸಿದ್ಧಾಶ್ರಮದ ಋಷಿಮುನಿಗಳಿಗೆ ವಿಧೇಯನಾದ, ಅಷ್ಮದ ಗಜನಾಗಲಿಲ್ಲ.

೨) ಅಯೋಧ್ಯಾಕಾಂಡ

ಮನಸ್ಸು ಬಾಲಕರಂತಾದಾಗ ಬದುಕು ಅಯೋಧ್ಯೆಯಾಗುವುದು. ಮನಸ್ಸು ನಿರ್ವಿಕಾರವಾದಾಗ ಆವೇಶ, ಉದ್ವೇಗ, ಅಪಮಾನ, ಸಮ್ಮಾನಗಳು ವಿಕಾರಗೊಳಿಸ–ಲಾರವು. ಮನಸ್ಸಿನ ಮೇಲೆ ಆಕ್ರಮಣ ಮಾಡಲು ಅಸಮರ್ಥವಾಗುವವು.

''ಯೋದ್ಧುಂ ಯೋಗ್ಯಾ ಯೋಧ್ಯಾ, ನ ಯೋಧ್ಯಾ ಅಯೋಧ್ಯಾ'' ದುರ್ಬಲ ಮನಸ್ಸಿನ ಮೇಲೆ ಕಾಮ, ಕ್ರೋಧ, ಲೋಭಗಳು ಯುದ್ಧ ಮಾಡುವವು.

ಸಮತೋಲಿತ, ವಿವೇಕಪೂರ್ಣ ಮನಸ್ಸಿನ ಮೇಲೆ ಎಂತಹ ಘಟನೆಗಳೂ ಯುದ್ಧ, ಆಕ್ರಮಣ ಮಾಡಲಾರವು. ಮನುಷ್ಯ ಪ್ರಸಂಗದ, ಸನ್ನಿವೇಶಗಳ ಕೈಗೊಂಬೆ. ಸುಖದುಃಖಗಳು ಸಹಜವಾಗಿ ವಿಕೃತಗೊಳಿಸುವವು. ಬಾಲಕನಂತಹ ನಿರಭಿಮಾನಿ, ನಿರ್ಮೋಹ ಮನಸ್ಸಿನ ಮೇಲೆ ಏನೂ ಮಾಡಲಾರವು. ಆಗ ಮನುಷ್ಯ ನಿಜವಾದ ಅರ್ಥದಲ್ಲಿ ''ಅಯೋಧ್ಯ''ನಾಗುವ.

ಸಂಪೂರ್ಣ ರಾಮಾಯಣದಲ್ಲಿ ಯುದ್ಧವೇ ಇಲ್ಲದ ಕಾಂಡವು ''ಅಯೋಧ್ಯಾ'' ಕಾಂಡವು. ಉಳಿದ ಆರೂ ಕಾಂಡಗಳಲ್ಲಿ ಯುದ್ಧಗಳಿವೆ. ಸಂಘರ್ಷವಿದೆ. ಈ ಕಾಂಡದಲ್ಲಿ ಯುದ್ಧವಿಲ್ಲ.

ಕಾಡಿಗೆ ಕಳುಹಿದ ಕೈಕೇಯಿಯನ್ನಾಗಲಿ, ಅವಳಿಗೆ ವರ ನೀಡಿದ ತಂದೆ ದಶರಥನನ್ನಾಗಲಿ, ಸಿಂಹಾಸನದ ಅಧಿಕಾರಿಯಾದ ಭರತನನ್ನಾಗಲಿ ದ್ವೇಷಿಸಲಿಲ್ಲ. ಸಿಂಹಾಸನಕ್ಕಾಗಿ ಸಾಮ್ರಾಜ್ಯದ ಅಧಿಪತಿಯಾಗಲು ಪರಿತಪಿಸಲಿಲ್ಲ. ಆಸೆಪಡಲಿಲ್ಲ. ವಿಕಾರಗೊಳ್ಳಲಿಲ್ಲ. ''ತಾಳ್ಮೆ, ಸಹನೆ, ಸಹಜವಾಗಿದ್ದವು.

ಪಟ್ಟೆ ಪೀತಾಂಬರ ಉಟ್ಟು ಸಿಂಹಾಸನದ ಪಟ್ಟಾಭಿಷೇಕಕ್ಕೆ ಹೊರಟಾಗ ಇದ್ದ ಮುಖಮುದ್ರೆಯೇ ಮುಂದೆ ನಾರು ಮಡಿಯುಟ್ಟು, ಬರಿಗಾಲಿನಿಂದ ಕಾಡಿಗೆ ಹೊರಟಾಗಲೂ ಅದೇ ಮುಗುಳುನಗೆಯ ಮುಖವೇ ಇದ್ದಿತು. ''ವಿಕಾರೋ ನೈವ ಲಕ್ಷಿತಃ'' ಏನೂ ವಿಕಾರವೇ ಇರಲಿಲ್ಲ. ರಾಮ ನಿಜವಾಗಿ ''ಅಯೋಧ್ಯ'ನಾಗಿದ್ದ. ಅರಮನೆಯಲ್ಲಿ ಉಳಿಯಲಿಲ್ಲ. ಕಾಡಿಗೆ ನಡೆದ, 'ಸಂಘರ್ಷ'' ವಾಗ್‌ಯುದ್ಧ, ಬೇಡವೇ ಬೇಡವೆಂದ. ಕೌಸಲ್ಯೆಯ ಮಾತಿನಂತೆ, ಅಪೇಕ್ಷೆಯಂತೆ ಇಲ್ಲಿಯೇ ಉಳಿದಿದ್ದರೇ, ಕೌಸಲ್ಯೆಗೂ ಕೈಕೇಯಿಗೂ, ದಶರಥನಿಗೂ ಕೌಸಲ್ಯೆಗೂ, ಲಕ್ಷ್ಮಣನಿಗೂ ತಂದೆಗೂ, ಭರತನಿಗೂ ಗ್ರಹಯುದ್ಧ, ಮನಸ್ತಾಪ, ಬೆಳೆಯುತ್ತಿದ್ದವು. ಈ ಎಲ್ಲ ಯುದ್ಧ, ಗೃಹಕಲಹ ತಪ್ಪಿಸಲು ರಾಮ ತಾನೇ ಕಾಡಿಗೆ ಹೋದ. ಸಾಧಕ ''ಅಯೋಧ್ಯ'' ನಿರ್ವಿಕಾರನಾದಾಗ ರಾಮ ಅಲ್ಲಿ ವಾಸಿಸುವ.

ಯಾವಾಗ ಮಂಥರೆಯಲ್ಲಿ ಲೋಭ, ಕೈಕೇಯಿಯಲ್ಲಿ ಕ್ರೋಧ, ದಶರಥನಲ್ಲಿ ಕಾಮಗಳ ಆಕ್ರಮಣವಾದಾಗ ಶ್ರೀರಾಮ ಅಲ್ಲಿರದೇ ವನವಾಸಕ್ಕೆ ತೆರಳಿದ. ಅಯೋಧ್ಯನಾಗಿ, ''ಅಯೋಧ್ಯೆ''ಯನ್ನೇ ಬಿಡುವ.

ಕಲಹವಿಲ್ಲ, ವೈರವಿಲ್ಲ, ದ್ವೇಷ, ಮಾತ್ಸರ್ಯಗಳಿಲ್ಲದವನೇ ನಿಜವಾದ ಸಾಧಕ. ಇದು ಅಯೋಧ್ಯನಾಗುವ ಬಗೆ.

''ಭೂತೇಷು ಬದ್ಧವೈರೇಣ ನ ಮನುಷ್ಯಃ ಶಾಂತಿಮೃಚ್ಛತಿ''

ಜೀವನದಲ್ಲಿ ಯಾರೂ ಶತ್ರುಗಳೂ ಅಲ್ಲ, ಮಿತ್ರರೂ ಅಲ್ಲ. ಸ್ವಾರ್ಥ, ರಾಗ, ದ್ವೇಷ ಹುಟ್ಟಿಸುವವು. ಅದಿಲ್ಲದಿರೆ ಮನುಷ್ಯ ಅಯೋಧ್ಯನಾಗುವ. ದ್ವೇಷ, ವೈರತ್ವಗಳಿದ್ದರೆ ಆ ಮನುಷ್ಯ ಎಂದಿಗೂ ಶಾಂತಿ, ಸಮಾಧಾನ ಹೊಂದಲು ಸಾಧ್ಯವಿಲ್ಲ. ದ್ವೇಷದಿಂದ ಮನಸ್ಸು ಸದಾ ಉದ್ವಿಗ್ನವಾಗುವುದು. ಮನಸ್ಸನ್ನು ಹಾಳು ಮಾಡುವವು. ಅದಕ್ಕೇ 'ನಿರ್ವೈರ'ನಾಗು. ಅಯೋಧ್ಯನಾಗುವಿ ಎನ್ನುವದು ಈ ಕಾಂಡ. ಜೀವನದ ಅವಧಿ ಸಣ್ಣದು. ಎಲ್ಲವೂ ಅನಿಶ್ಚಿತ. ಅಂತಹ ಅಲ್ಪ ಅವಕಾಶದಲ್ಲಿ ಏಕೆ ದ್ವೇಷ, ಅಸೂಯೆಗಳು?

''ನಿರ್ವೈರಃ ಸರ್ವಭೂತೇಷು'' –ಗೀತಾ. ಆಗಬೇಕು. ರಾಜ್ಯಾಭಿಷೇಕ, ಸಿಂಹಾಸನ ತಪ್ಪಿದ್ದಕ್ಕೆ ಶ್ರೀರಾಮ ಯಾರನ್ನೂ ದ್ವೇಷಿಸಲಿಲ್ಲ. ಸಿಟ್ಟು ಮಾಡಲಿಲ್ಲ. ಅತೃಪ್ತಿ ಹೊಂದಲಿಲ್ಲ.

ಇಂದ್ರನ ಪೂಜೆ ತಡೆಯುವಾಗ ಗೋಪರಿಗೆ ಹೇಳಿದ ಕೃಷ್ಣನ ಮಾತು.

''ಕರ್ಮಣಾ ಜಾಯತೇ ಜಂತುಃ ಕರ್ಮಣೈವ ವಿಲೀಯತೇ ।
ಸುಖಂ ದುಃಖಂ, ಭಯಂ, ಕ್ಷೇಮಂ ಕರ್ಮಣೈವಾಭಿಪದ್ಯತೇ ॥''

–ಭಾಗ.೧೦

ಪ್ರತಿಯೊಬ್ಬರೂ ಕರ್ಮದ ಫಲಕ್ಕನುಗುಣವಾಗಿ ಅಲ್ಲಲ್ಲಿ ಹುಟ್ಟಿಬರುವರು. ಕರ್ಮಕ್ಕನುಗುಣವಾಗಿ ನಾಶ ಹೊಂದುವರು. ಸುಖ, ದುಃಖ, ಭಯ, ಕ್ಷೇಮ, ವೃದ್ಧಿ, ಹಾನಿಗಳು ಕರ್ಮಕ್ಕನುಗುಣವಾಗಿ ದೊರೆಯುವವು. ಅದಕ್ಕೆ ಇನ್ನೊಬ್ಬರು 'ಹೊಣೆ, ಎನ್ನಬಾರದು. ಯಾವುದೂ ಆಕಸ್ಮಿಕವಲ್ಲ. ಕರ್ಮದಿಂದ ಸುನಿಯೋಜಿತ. ಯಾಕೆ ಇನ್ನೊಬ್ಬರ ದ್ವೇಷವು? ಎನ್ನುವ ಶ್ರೀಕೃಷ್ಣ.

''ಯಥಾ ವೈರಾನುಬಂಧೇನ ಮರ್ತ್ಯಃ ತನ್ಮಯತಾಮಿಯಾತ್'' ಯಾರ ಜೊತೆಗೆ ದ್ವೇಷ, ವೈರ ಬೆಳೆಸಿಕೊಳ್ಳುವೆವೋ ಅವರೇ ಭಾಗ. ಸಪ್ತಮ, ಸದಾ ಕಣ್ಮುಂದೆ ಸುಳಿವರು. ನೆನಪಿಗೆ ಬರುವರು. ದ್ವೇಷಿಗಳ ವೈರಿಗಳ ಸ್ಮರಣೆಯೇ ಸದಾ ಕಾಡುವದು. ದೇವರು ಮರೆಯಾಗುವನು.

ಭಕ್ತಿಯ ಸರಯೂ ನದಿ. ಅದರ ದಡದಲ್ಲಿದ್ದರೆ ದ್ವೇಷ, ವೈರ, ಸ್ವಾರ್ಥದ ಯುದ್ಧಗಳಿರುವುದಿಲ್ಲ. ಪ್ರೀತಿ, ಪ್ರೇಮ ದೊಡ್ಡವರಲ್ಲಿ ಮಾಡಿದರೆ ಶ್ರದ್ಧೆ,

ಭಕ್ತಿಯಾಗುವುದು. ಸಮಾನರಲ್ಲಿಯ ಪ್ರೀತಿ ಸ್ನೇಹವೆನಿಸುವುದು. ಕಿರಿಯರಲ್ಲಿ ಮಾಡಿದ ಪ್ರೀತಿ ಕರುಣೆಯಾಗುವುದು. ತಂದೆ ಮಕ್ಕಳ, ತಾಯಿ ಮಕ್ಕಳ, ಅಣ್ಣ ತಮ್ಮಂದಿರ, ಪತಿ ಪತ್ನಿಯರ, ರಾಜ ಪ್ರಜೆಗಳ, ಸೇವ್ಯ ಸೇವಕರ ಪ್ರೀತಿ ತುಂಬಿದ ಕಾಂಡ ಅಯೋಧ್ಯಾಕಾಂಡ. ರಾಮಲಕ್ಷ್ಮಣರು, ಭರತಶತ್ರುಘ್ನರು, ಪಂಚ-ಪಾಂಡವರು, ಶ್ರೀಕೃಷ್ಣಬಲರಾಮರ ಆದರ್ಶ ಸ್ನೇಹ, ಬಾಂಧವ್ಯ , ಪ್ರೀತಿಗಳು, ಅಯೋಧ್ಯಾಕಾಂಡದ ಸಂದೇಶ. ಪ್ರೀತಿಯುಳ್ಳ ಮನೆ, ಕಲಹವಿಲ್ಲದ ಸ್ನೇಹಗಳು, ಇಂತಹ ಮನೆಯೇ ತೀರ್ಥಕ್ಷೇತ್ರ. ಅದೇ ಅಯೋಧ್ಯಾ .

ಸದ್ಗುಣಗಳ ಗಣಿ ಶ್ರೀರಾಮ, ವಿವೇಕದ ಸ್ವರೂಪ ಲಕ್ಷ್ಮಣ. ವೈರಾಗ್ಯ , ಭಕ್ತಿಯ ಸ್ವರೂಪ ಭರತ, ಸದ್‌ವಿಚಾರದ ಶತ್ರುಘ್ನರ ಮನೆ ಅರಮನೆ. ಅದಕ್ಕೇ ಅದು ಅಯೋಧ್ಯೆಯಾಯಿತು. ಸಂಘರ್ಷ ಕರಗಿತು, ವೈಮನಸ್ಯ ಮರೆಯಾಯಿತು. ಲೋಭ ಅಡಗಿತು, ಸ್ವಾರ್ಥ ಸೋತಿತು. ಅದಕ್ಕೇ ಎಲ್ಲರೂ ಅಯೋಧ್ಯರಾದರು. ಯಾವ ಪರಿಸ್ಥಿತಿಗಳೂ ಮನಸ್ಸನ್ನು ವಿಕಾರಗೊಳಿಸದಿದ್ದರೇ ಆಗ ಜೀವನ ಅಯೋಧ್ಯೆಯಾಗುವುದು. ಬಾಲಕರಂತಹ ಮನಸ್ಸಿನಿಂದ ಅಯೋಧ್ಯನಾಗುವದು ಎರಡನೇ ಮೆಟ್ಟಿಲು.

೩) ಅರಣ್ಯಕಾಂಡ–

ಸಂಯಮಿತ ಜೀವನವೇ ಅರಣ್ಯ . ಮನಸ್ಸಿನ ಶುದ್ಧಿಗಾಗಿ ಏಕಾಂತವಾಸ. ಮನಃಸ್ತಾಪ, ರಾಜ್ಯಲೋಭ, ಸಂಘರ್ಷ ತಪ್ಪಿಸಲು ಶ್ರೀರಾಮನೇ ಕಾಡು ಸೇರಿದ. ಸಾಧನಕ್ಕಾಗಿ ''ವನಂ ಗತೋ ಯದ್ಧರಿಮಾಶ್ರಯೇತ'' ವನ ಸೇರಿ ಹರಿಯ ಉಪಾಸನೆ ಮಾಡಿರಿ.

ಈ ಕಾಂಡದಲ್ಲಿ ಎಲ್ಲರೂ ಆರು ವೈರಿಗಳನ್ನು ಗೆದ್ದರು. ''ತ್ಯಾಗ, ತಾಳ್ಮೆ, ತಪಸ್ಸುಗಳನ್ನಾಚರಿಸಿದರು. ಎಲ್ಲರದೂ ಹದಿನಾಲ್ಕು ವರ್ಷದ ಸಂಯಮದ ಅರಣ್ಯವಾಸ. ಬ್ರಹ್ಮಚರ್ಯದ ಜೀವನ. ಶ್ರೀರಾಮ ಸೀತೆಯರು, ಲಕ್ಷ್ಮಣ ಊರ್ಮಿಳೆಯರು, ಭರತ ಮಾಂಡವಿಯರು ಎಲ್ಲರೂ ತ್ಯಾಗದ ಜೀವನ. ಅಯೋಧ್ಯೆ ಬಿಟ್ಟು ನಂದಿಗ್ರಾಮದಲ್ಲಿ ಹುಲ್ಲು ಗುಡಿಸಲಿನಲ್ಲಿ ಭರತನ ವಾಸ, ಜಟಾಧಾರಿ, ಗಡ್ಡೆಗೆಣಸಿನ ಆಹಾರ. ಶ್ರೀರಾಮ, ಲಕ್ಷ್ಮಣ, ಸೀತೆಯಂತ ನಾರು ಮಡಿ, ''ಚಿರಾಜಿನ ಜಟಾಧಾರಿ''ಯಾಗಿ ಋಷಿತುಲ್ಯ ಜೀವನ. ಕಂದಮೂಲ, ಗಡ್ಡೆಗೆಣಸು, ಹಣ್ಣು ಹಂಪಲುಗಳ ಆಹಾರ. ಹುಲ್ಲುಹಾಸಿಗೆ, ಕಾಡಿನಲ್ಲಿ ವಾಸ, ವನವಾಸ ಒಬ್ಬರಿಗಲ್ಲ. ಎಲ್ಲ ನಾಲ್ಕೂ ಜನರೂ ವನವಾಸ ಮಾಡಿದರು.

ಸಂಯಮದಿಂದ ಶಕ್ತಿ ಸಂಚಯನ ಮಾಡಿಕೊಂಡರು. ಅಣ್ಣತಮ್ಮಂದಿರಲ್ಲಿ ಪರಸ್ಪರ ಪ್ರೀತಿ, ನಿರ್ಲೋಭ, ತ್ಯಾಗಗಳು ಅರಣ್ಯಕಾಂಡದ ಸಂದೇಶಗಳು.

ಯಾರಲ್ಲಿಯೂ ಸ್ವಾರ್ಥವಿಲ್ಲ, ಸಂಘರ್ಷವಿಲ್ಲ. ಪ್ರೀತಿ, ನೀತಿ, ಸಂಯಮಗಳೇ ಜೀವನ.

''ಶೂರಾಸ್ತ ಏವೇಹ ಮನಸ್ಥರಾಗಂ ದೇಹೇಂದ್ರಿಯಾಂಬೋಧಿಂ ಇಮಂ ತರಂತಿ'' ಅವರೇ ನಿಜವಾದ ಶೂರರು. ವೀರರು, ಯಾರು ಈ ಶರೀರದಲ್ಲಿ ಹುಟ್ಟುವ ಮನಸ್ಸಿನ ವಿವಿಧ ಆಸೆಯ, ಆಕಾಂಕ್ಷೆಯ ತರಂಗಗಳನ್ನು, ಮನಸ್ಸಿನ ವಿಕಾರ, ವಾಸನೆಗಳನ್ನು, ತೂರಿ ಬರುವ ತೆರೆಗಳನ್ನು ದಾಡಿದರೆ, ಅದೇ ಪರಾಕ್ರಮ. ಸಂಯಮವೇ ದಾಟುವ ಹರಿಗೋಲು. ವಿಕಾರ ಗೆದ್ದ ಕಾಂಡ 'ಅರಣ್ಯಕಾಂಡ.''

ಆಸೆಗಳು ಪೂರೈಸಿದಷ್ಟೂ ಬೆಳೆಯುವವು. ಸಂಯಮದಿಂದ ತಡೆದರೆ ನಿಲ್ಲುವವು. ಸೋಲುವವು, ನಿಃಸ್ವಾರ್ಥ, ನಿರ್ಲೋಭಿತಾ, ಸ್ನೇಹ, ಪ್ರೀತಿ, ವೈರಾಗ್ಯ, ಸಂತೃಪ್ತಿಗಳೇ ಶಾಂತಿ ಸಮಾಧಾನದ ಸೂತ್ರಗಳು. ಅರಮನೆಗಿಂತ ಅರಣ್ಯವೇ ಸಾಧನಕ್ಕೆ ಶುದ್ಧ ಸ್ಥಳ. ಭಕ್ತಿಗೆ ಏಕಾಂತ ಬೇಕು. ಭಜನೆಗೆ ಲೋಕಾಂತ. ಧ್ಯಾನಕ್ಕೆ ಏಕಾಂತ. ಆಹಾರ, ವಿಹಾರ, ವೇಷ, ಭೂಷ, ಎಲ್ಲವೂ ಸಾತ್ತ್ವಿಕ. ಸರಳ, ಶುದ್ಧ, ಆಡಂಬರ, ಆಢ್ಯತೆ ಇಲ್ಲದ ಸಾದಾ ಜೀವನ. ಸದಾಚಾರದ ಬದುಕು. ಜನನಿಬಿಡತೆಯಿಂದ ದೂರದ, ತ್ಯಾಗದ ಜೀವನ. ದೇಹದ ಆರೋಗ್ಯಕ್ಕೆ ಹಣ್ಣು ಹಂಪಲು. ಮನಸ್ಸಿನ ಆರೋಗ್ಯಕ್ಕಾಗಿ ಅರಣ್ಯವಾಸ. ಏಕಾಂತವಾಸ, ಕೌಟುಂಬಿಕ ಸಂಘರ್ಷದಿಂದ ದೂರ ಉಳಿಯುವ ಉಪಾಯ. 'ಲೋಭ, ಸ್ವಾರ್ಥಗಳಿಂದ ವಾತಾವರಣ ಕಲುಷಿತವಾದಾಗ ತಾನೇ ಬೇರೆ ಕಡೆಗೆ ಏಕಾಂತವಾಸ ಮಾಡಬೇಕು. ಅದಕ್ಕೇ ತೀರ್ಥ, ಕ್ಷೇತ್ರ, ಆಶ್ರಮಗಳ ನಿರ್ಮಾಣ.

ಸ್ವಾರ್ಥಿಗಳು, ಲೋಭಿಗಳ ಜೊತೆ ಮಾತು ಬೆಳೆಸುವುದೂ ಬೇಡ. ಅದಕ್ಕೆ ಶ್ರೀರಾಮ ಸಂಸಾರ, ಕುಟುಂಬವನ್ನು, ರಾಜ್ಯಸಿಂಹಾಸನವನ್ನು ಮನಸ್ಸಿನಿಂದ ತೆಗೆದು ಹಾಕಿದ. ವಿರಕ್ತ ಋಷಿ ಮುನಿಗಳ ಒಡನಾಟ ಬಯಸಿದ. ಶಬರಿ, ಶರಭಂಗ, ಅಗಸ್ತ್ಯ, ಭರದ್ವಾಜ, ಗೌತಮರ ಆಶ್ರಮ ಸಂಚರಿಸಿದ. ಸತ್ಸಂಗವೇ ಸಂಘರ್ಷ ತಪ್ಪಿಸುವ ಉಪಾಯ. ದೇವರಿಗಾಗಿ ಸರ್ವಸ್ವ ತ್ಯಾಗ ಮಾಡಿದ ಋಷಿಮುನಿಗಳ ಮುಂದೆ ತಂದೆಯ ಮಾತಿಗಾಗಿ, ತಾಯಿಯ ಕೋರಿಕೆಗಾಗಿ ರಾಜ್ಯತ್ಯಾಗ ಅದೇನು ಮಹಾ ಎಂದ ಶ್ರೀರಾಮ. ಅರಣ್ಯವಾಸವೆಂದರೆ ಸಜ್ಜನರ, ಸಾಧು ಸಂಗಮ. ಇದು

ಅರಣ್ಯಕಾಂಡದ ಸಂದೇಶ. ರಾಮನ ಹಾಗೂ ಭರತರ ತ್ಯಾಗದ ಪರಾಕಾಷ್ಠೆಯೇ ಅರಣ್ಯಕಾಂಡ.

೪) ಕಿಷ್ಕಿಂಧಾಕಾಂಡ–

ಸಾಧಕನ ಜೀವನದ ನಾಲ್ಕನೇ ಮೆಟ್ಟಿಲು. ಏರುವ ಸೋಪಾನ, ಬಾಲಕನಂತಹ ಶುದ್ಧ ಮನಸ್ಸು ಸಂಪಾದಿಸಿ, ಜೀವನದಲ್ಲಿ ನಿರ್ವಿಕಾರದ ಅಯೋಧ್ಯನಾಗಿ, ತ್ಯಾಗ, ಸಂಯಮದ ಅರಣ್ಯಜೀವನ, ಸತ್ಸಂಗ ಮಾಡಿದ ಬಳಿಕ ಸಾಧಕ ಕಿಷ್ಕಿಂಧನಾಗಬೇಕು. ಜೀವನದಲ್ಲಿ ''ಕಿಂ ಕಿಂ ಧಾ'' ಧಾರಯತಿ (ಡುಧಾಯ್ ಧಾರಣಪೋಷಣಯೋಃ) ''ಯಾವ ಯಾವ ದೋಷಗಳನ್ನು ಬದುಕಿನಲ್ಲಿ ಧರಿಸಬೇಕು. ಸ್ವೀಕರಿಸಬೇಕು. ಯಾವ ಯಾವ ಗುಣಗಳನ್ನು ಬಿಡಬೇಕು. ಗುಣಸ್ವೀಕಾರ, ದೋಷತ್ಯಾಗದ ಸಂದೇಶ ನೀಡುವುದೇ ''ಕಿಂ ಕಿಂ ಧಾ'' ಕಿಷ್ಕಿಂಧಾಕಾಂಡ.

ಹನುಮಂತ ಸ್ವಾಮಿನಿಷ್ಠೆ, ಬ್ರಹ್ಮಚರ್ಯ, ಬಲ, ಬುದ್ಧಿ, ಧೈರ್ಯಗಳ ಸಂಕೇತ. ವಾಲಿ ಲೋಭ, ಅತ್ಯಾಚಾರದ ಸಂಕೇತ. ಹನುಮಂತನಂತಹ ಗುಣ ಸಂಪಾದಿಸಬೇಕು. ವಾಲಿಯಂತಹ ಗುಣಗಳನ್ನಲ್ಲ. ಶಬರಿಯಂತಹ ಗುಣವಿರಲಿ, ಶೂರ್ಪನಖಿಯಂತಹ ಗುಣಗಳನ್ನಲ್ಲ, ಸುಗ್ರೀವನಂತೆ ಪ್ರಯೋಜನಕ್ಕಾಗಿ ಭಕ್ತಿ ಬೇಡ. ಹನುಮನಂತೆ ನಿಷ್ಕಾಮಭಕ್ತಿ ಇರಲಿ. ''ರಾಮಾದಿವತ್ ವರ್ತಿತವ್ಯಂ ನ ರಾವಣಾದಿವತ್.''

ರಾಮನಂತಹ ಜೀವನ, ಆದರ್ಶ, ಗುಣಗಳು ಇರಲಿ. ರಾವಣನಂತಹ ''ಅತ್ಯಾಚಾರ, ದರ್ಪ, ಅಹಂ''ಗಳು ಬೇಡ. ಯಾವ ಗುಣ ಪಡೆಯಬೇಕು, ಯಾವ ಗುಣ ಬಿಡಬೇಕು ಎಂಬ ವಿವೇಕ ತಿಳಿಸುವ ಕಾಂಡ, ''ಕಿಂ, ಕಿಂ, ಧಾ'' ಕಿಷ್ಕಿಂಧಾಕಾಂಡ. ವಾಲಿಯಂತಹ ಗುಣ ಧರಿಸಿದರೆ ಶಿಕ್ಷಿಸುವ, ಹನುಮಂತನಂತಹ ಹರಿಭಕ್ತಿ, ಗುರುಭಕ್ತಿ, ಶೀಲ, ಚಾರಿತ್ರ್ಯವಿದ್ದಾಗ ರಕ್ಷಿಸಿದ, ಹನುಮಂತನಂತಹ ಗುರು ಇದ್ದಾಗ ದೇವರ ಸಂಬಂಧವಾಗುವುದು. ರಾಮನ ಮೈತ್ರಿ, ಅನಿಷ್ಟ ನಿವೃತ್ತಿ, ಇಷ್ಟಪ್ರಾಪ್ತಿಯಾಗುವುದು.

''ಹನುಮನ ನಂಬದ ವಾಲಿಯು ಬಿದ್ದ, ಹನುಮನ ನಂಬಿದ ಸುಗ್ರೀವನು ಗೆದ್ದ'' ಸುಗ್ರೀವ ರಾಮನ ಮೈತ್ರಿ ಮಾಡಿದ. ವಾಲಿ ಕಾಮನ ಮೈತ್ರಿ ಮಾಡಿದ.

ಹನುಮ ''ಕಾಮ ಗೆದ್ದವ ಹರಿಗೆ ಪ್ರೇಮ ಪೂರ್ಣನಾಗುವ. ಎಲ್ಲ ದೃಷ್ಟಿಯಿಂದ 'ನಿಷ್ಕಾಮ' ಇದು ಹನುಮಗುಣ. ರಾತ್ರಿಯಲ್ಲಿ ಲಂಕೆಯ ಅಸ್ತವ್ಯಸ್ತ ರಾವಣ,

ಅವನ ಮಡದಿಯರನ್ನು ಕಂಡರೂ ಹನುಮ ನಿಷ್ಕಾಮನಾಗಿ ಉಳಿದ, 'ಕಾಮ' ರಾವಣ. ಅವನಿಗೆ ಹತ್ತುಮುಖ. ಹತ್ತು ಇಂದ್ರಿಯಗಳಲ್ಲಿ ಕಾಮ ರಾವಣನ ವಾಸ. ರಾಮನ, ಹನುಮನ ಗುಣ ಪಡೆದರೆ ರಾವಣ ಸಾಯುವ. ''ವಾಸುದೇವನ ಗುಣಸಮುದ್ರದೊಳು ಈಸಬಲ್ಲವ ಆಯಾಸವಿಲ್ಲದೇ ಭವ ಸಮುದ್ರವ ದಾಟಬಲ್ಲ'' ''ಸದ್ಗುಣ ಕದ್ದವರ ಅಘವಕದಿವ ನಮ್ಮ ದೇವ ರಾಮ''ನೆನ್ನುವರು ಜಗನ್ನಾಥದಾಸರು. ರಾಮನಿಂದ ಕಾಮಕ್ಷಯ, ಕಿಷ್ಕಿಂಧಾಕಾಂಡ ''ಎಂತಹ ಗುಣ ಪಡೆಯಬೇಕು, ಎಂತಹ ದೋಷ ಬಿಡಬೇಕು'' ಎಂಬುದರ ನಿರ್ಣಯಕ್ಕೆ, ಆತ್ಮಾವಲೋಕನೆಗೆ ಸಾಧಕನನ್ನು ತೊಡಗಿಸುವ ಕಾಂಡ.

೫) ಸುಂದರಕಾಂಡ–

ಇದು ಸಾಧಕನ ಐದನೇ ಮೆಟ್ಟಿಲು. ಪಂಚಮ ಸೋಪಾನ. ''ಕಿಂ ಕಿಂ ಧಾ'' ದೋಷ ಬಿಟ್ಟು, ಗುಣಗಳನ್ನು ಅಳವಡಿಸಿಕೊಂಡವನ ಜೀವನ ಸುಂದರ-ವಾಗುವುದು. ಸುಖಮಯವಾಗುವುದು, ಸಾಧನದ ಸುಖ ಇಲ್ಲಿದೆ. ಸಾಧನದಲ್ಲಿಯೇ ಸುಖವಿದೆ. ಆನಂದವಿದೆ.

ಮಹಾಭಾರತದಲ್ಲಿ ''ವಿರಾಟಪರ್ವ'' ರಾಮಾಯಣದಲ್ಲಿ ಸುಂದರಕಾಂಡ-ಗಳು, ಹರಿಗುರುಗಳ ವಿರಾಟ್‌ದರ್ಶನ ಮಾಡಿಸುವವು. ಹರಿ, ಹನುಮರ 'ಸುಂದರ' ವರ್ಣನೆ ಇದೆ. ರಾಮಭಕ್ತಿ , ಪರೋಪಕಾರ, ರಾಮಪೂಜೆ, ಅರ್ಚನ, ವಂದನ, ದಾಸ್ಯಗಳೆಲ್ಲ ಸಾಧಕನ ಜೀವನದ ಸೌಂದರ್ಯಗಳು.

''ಸುಂದರೇ ಸುಂದರೋ ರಾಮಃ, ಸುಂದರೇ ಸುಂದರೀ ಕಥಾ ।
ಸುಂದರೇ ಸುಂದರೀ ಸೀತಾ, ಸುಂದರೇ ಕಿಂ ನ ಸುಂದರಮ್ ॥''

ರಾಮನ ಹಿರಿಮೆ, ಮಹಿಮೆಗಳ ಸೌಂದರ್ಯ, ಲೋಕಮಾತೆ ಸೀತಾದೇವಿಯ ಸುಂದರ ಕಥಾ, ಹನುಮಗಾಥಾ, ತುಂಬಿದ ಈ ಕಾಂಡದಲ್ಲಿ ಎಲ್ಲವೂ ಸುಂದರ. ಸಾಧಕನು ಸಂಸಾರದಲ್ಲಿ ಧರ್ಮಸಾಧನೆ ಮಾಡುವಾಗ, ಭಕ್ತಿಯಿಂದ ಬಾಳುವಾಗ ಬರುವ ವಿಘ್ನಗಳ ಸಹಜ ಚಿತ್ರಣ ಇಲ್ಲಿದೆ. ಅವುಗಳ ಪರಿಹಾರದ ಉಪಾಯ-ಗಳಿವೆ. ಸಾಧನದ ಸುಖವಿದೆ. ನಿರೀಕ್ಷೆಯಲ್ಲಿಯ ಸುಖ ಫಲ ಪಡೆದ ಮೇಲೆ ಉಳಿಯುವುದಿಲ್ಲ. ಸುಖಕ್ಕೆ 'ಸುಂದರ' ಎಂಬ ಹೆಸರು. ಇಲ್ಲಿ ಎಲ್ಲರಿಗೂ ಸುಖ ದೊರೆತ ಕಾಂಡ. ''ಸಂತೋಷಂ ಜನಯೇತ್ ಪ್ರಾಜ್ಞಃ ತದೈವೇಶ್ವರಪೂಜನಮ್'' ಎಲ್ಲರಿಗೂ ಸುಖ ಸಂತೋಷವಾಗುವಂತೆ ಬಾಳಬೇಕು. ಅದೇ ದೇವರಪೂಜೆ,

ಬುದ್ಧಿವಂತರು ಮಾಡಬೇಕಾದ ಕರ್ತವ್ಯ. ರಾಮನಿಗೆ ಸೀತೆಯ ವಾರ್ತೆ, ಚೂಡಾಮಣಿಯಿಂದ ಸಂತೋಷ, ಸೀತೆಗೆ ರಾಮನ ವಾರ್ತೆ ಸಂದೇಶ, ಉಂಗುರ ತಲುಪಿದ ಸಂತೋಷ. ಸುಗ್ರೀವನಿಗೆ ರಾಮನಿಗೆ ಪ್ರತ್ಯುಪಕಾರ ಮಾಡಿದ ಸಂತೋಷ, ರಾವಣನಿಗೆ ಸಂದೇಶ ನೀಡಿ, ರಾಮಕಾರ್ಯ ಪೂರೈಸಿದ ಸಂತೋಷವು ಹನುಮಂತನಿಗೆ, ಸುಗ್ರೀವಾಜ್ಞೆ ಪರಿಪಾಲಿಸಿದ ಸುಖ ಕಪಿಗಳಿಗೆ. ಸರ್ವರಿಗೂ ಸುಖ ನೀಡಬೇಕು. ಇದು ಸುಂದರ ಜೀವನ. ಸರ್ವರಿಗೂ ಉಪಕಾರದಿಂದ ಈಶ್ವರನು ಸಂತುಷ್ಟನಾಗುವ. 'ದೇವರ ಅನುಗ್ರಹ, ಸ್ವಜನರ ಸಂತೋಷವು ಸಾಧಕನ ಸಾರ್ಥಕ ಬದುಕು.

''ಭ್ರಾತೄಣಾಂ ಬಾಂಧವಾನಾಂ ಚ ಲೋಕಾನಾಂ ಚ ಹಿತೈಷಿಣಾ'' ಅಣ್ಣ-ತಮ್ಮಂದಿರು, ಬಂಧು ಬಾಂಧವರು, ಜಗದ ಜನರ ಹಿತವನ್ನು ಭೀಮ ಸಾಧಿಸುತ್ತಿದ್ದನೆಂದು ತಾತ್ಪರ್ಯನಿರ್ಣಯದ ಮಾತು.

ದೇವರು ಕೊಟ್ಟ ಶಕ್ತಿ ಮೂರು. ಜ್ಞಾನಶಕ್ತಿ, ಇಚ್ಛಾಶಕ್ತಿ, ದೇಹದ ಕ್ರಿಯಾಶಕ್ತಿ.

ಮನಸ್ಸು –	ಬುದ್ಧಿ –	ದೈಹಿಕ ಶಕ್ತಿ.
ಲೋಭ, ಮೋಹ, ಸ್ನೇಹ	ಜ್ಞಾನದ ಪರೀಕ್ಷೆ	ವಿರೋಧಿಸುವ ಶಕ್ತಿಯ
ದಾಕ್ಷಿಣ್ಯಗಳೇ ವಿಘ್ನಗಳು	ವಿಘ್ನಗಳು	ವಿಘ್ನಗಳು
ರಾಜಸ ವಿಘ್ನಗಳು	ಸಾತ್ತ್ವಿಕ ವಿಘ್ನಗಳು	ತಾಮಸ
ವಿಶ್ರಾಂತಿ ಪಡೆಯಿರೆಂಬ-	ಬಯಸಿದ್ದು ಬಾಯಲ್ಲಿ	ನೆರಳು ಹಿಡಿದು
-ಮೈನಾಕ. ಬಂಗಾರಪರ್ವತ	ಬೀಳಲಿ ಎಂಬ ದೇವತೆಗಳ	ಬಾಯಲ್ಲಿ ನುಂಗುವ
	ವರಪಡೆದ ಸುರಸಾ	ಛಾಯಾಗ್ರಹಣದ ಸಿಂಹಿಕಾ
೧) ಮನಸ್ಸಿನ ವಿಘ್ನಗಳನ್ನು	ಯುಕ್ತಿಯಿಂದ ಗೆದ್ದ	ಶಕ್ತಿಯಿಂದ ಗೆದ್ದ
ಪ್ರೀತಿಯಿಂದ ಗೆದ್ದ	ದೇವತೆಗಳ ವರವನ್ನು	ಸಿಂಹಿಕೆಯನ್ನು

ಹೀಗೆ ಮೂರುವಿಧ ಪರೀಕ್ಷೆಗಳನ್ನು ಗೆದ್ದು ರಾಮಕಾರ್ಯಕ್ಕೆ, ರಾಮಪೂಜೆಗೆ, ಬಂದ ವಿಘ್ನಗಳನ್ನು ಪರಿಹರಿಸಿಕೊಂಡ ಹನುಮಂತ. ಸಾಧಕರಿಗೆ ಪರಿವಾರದಿಂದ ವಿಘ್ನ, ಪರೀಕ್ಷೆಗಾಗಿ ವಿಘ್ನ, ವಿರೋಧಿಸುವ ಆಸುರೀ ವಿಘ್ನಗಳು ಸಹಜ. ಪ್ರೀತಿ, ಯುಕ್ತಿ, ಶಕ್ತಿಯಿಂದ ಗೆದ್ದು ಬಾಳಿರೆಂದು ಸುಂದರಕಾಂಡದ ಆಧ್ಯಾತ್ಮಿಕ ಸಂದೇಶ.

ಸಾಧಕೇಶನಾದ ಹನುಮಂತ ಸಾಧನದ ವಿಘ್ನಗಳನ್ನು ಗೆದ್ದದ್ದರಿಂದಲೇ ಸಾಯುಜ್ಯ, ಸಹಭೋಗಗಳು ಶ್ರೀರಾಮನಿಂದ ದೊರೆತವು. ಶ್ರೀರಾಮ ಅದಕ್ಕೇ ಹನುಮಂತನಿಗೆ ಜಗದ್ಗುರುತ್ವ ಪದವಿ ನೀಡಿದ.

ಚೇತನರ ಲಕ್ಷಣ ಮೂರು. ಜ್ಞಾನಶಕ್ತಿ, ಇಚ್ಛಾಶಕ್ತಿ, ಇಂದ್ರಿಯಗಳ ಕ್ರಿಯಾಶಕ್ತಿ. ಜ್ಞಾನಕ್ಕಾಗಿ ಬುದ್ಧಿಯನ್ನು, ಇಚ್ಛೆಗಾಗಿ ಮನಸ್ಸನ್ನು, ಕ್ರಿಯಾ ಕರ್ಮಗಳಿಗಾಗಿ, ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ ದಶರಥಗಳನ್ನು ನೀಡಿದ. ಇವನ್ನು ಸಾಧನಕ್ಕಾಗಿ, ಜೀವನಕ್ಕಾಗಿ ದೇವರು ಪ್ರತಿಯೊಬ್ಬರಿಗೂ ನೀಡಿರುವ. ಇವೆಲ್ಲ ''ಪರಾಂಚಿ ಖಾನಿ'' ಇವೆಲ್ಲ ಬಹಿರ್ಮುಖ. ಹೊರಗಿನ ಆಕರ್ಷಣೆ ಬಹಳ. ಇವನ್ನು ಸಾಧನಕ್ಕಾಗಿ, ಧರ್ಮಕ್ಕಾಗಿ ಬಳಸಿಕೊಳ್ಳಲು ಕಷ್ಟ. ವಿಘ್ನಗಳು ಬಹಳ, ಧಾರ್ಮಿಕರಿಗೆ ಇವು ಮೂರು ಪರೀಕ್ಷೆಗಳಿದ್ದಂತೆ.

೧. ಮೊದಲ ವಿಘ್ನ ಮನಸ್ಸಿನದು. ಹನುಮಂತ ಲಂಕೆಗೆ ಹಾರಿಹೋಗುವಾಗ ಸಮುದ್ರಮಧ್ಯದಿಂದ ಮೈನಾಕ ಪರ್ವತ ಮೇಲಕ್ಕೆ ಎದ್ದ. ಅದು ಬಂಗಾರ-ಪರ್ವತ. ಅವನು ಮೇಲೆದ್ದು ಪ್ರಾರ್ಥಿಸಿದ. ಹನುಮಂತನ ತಂದೆ ಮುಖ್ಯ-ವಾಯುವಿನ ಉಪಕಾರ ನಮಗೆ ಬಹಳಾಗಿದೆ. ಅವನಿಂದ ಬದುಕಿರುವೆವು. ನೀವು ಅವನ ಪುತ್ರರು. ನಮ್ಮಲ್ಲಿ ವಿಶ್ರಾಂತಿ ಪಡೆದು, ಆದರ ಸ್ವೀಕರಿಸಿ ತೆರಳಿರಿ ಎಂದ. ಲೋಭ ಮೋಹಗಳು ಮನಸ್ಸಿನ ವಿಘ್ನಗಳು, ರಾಮಕಾರ್ಯಕ್ಕೆ ಪರಿವಾರದ, ದಾಕ್ಷಿಣ್ಯದ, ಸ್ನೇಹದಿಂದ ವಿಘ್ನಗಳು ಬರುವವು. ಇವು ರಾಜಸ ವಿಘ್ನಗಳು. ಇವುಗಳನ್ನು ಪ್ರೀತಿಯಿಂದ ನಿರಾಕರಿಸಿ ಗೆಲ್ಲಬೇಕು. ನಿಷ್ಠುರನಾಗಲಿಲ್ಲ. ಸ್ನೇಹ, ಸಂಬಂಧ ಕೆಡಿಸಿಕೊಳ್ಳಲಿಲ್ಲ. ಪ್ರೀತಿ ಉಪಾಯದಿಂದ ಗೆದ್ದ. ಇದು ಮೋಹ ಗೆಲ್ಲುವ ವಿಧಾನ. ಇದು ''ಆದಿಭೌತಿಕ'' ವಿಘ್ನ.

೨. ಎರಡನೇ ವಿಘ್ನ ಬುದ್ಧಿಯದು. ಜ್ಞಾನದ ಪರೀಕ್ಷೆ. ಇವು ಸಾತ್ತ್ವಿಕ ವಿಘ್ನಗಳು. ನಾಗಜನನಿ ಸುರಸೆ. ಅವಳಿಗೆ ದೇವತೆಗಳ ವರ. ನೀನು ಬಯಸಿದ್ದೆಲ್ಲ ಬಾಯಲ್ಲಿ ಬಂದು ಬೀಳಲಿ ಎಂದು. ಇದು ಹನುಮನ ಬುದ್ಧಿಯ ಬಲ ಪರೀಕ್ಷೆ-ಗಾಗಿ ದೇವತೆಗಳು ಒಡ್ಡಿದ ವಿಘ್ನ. ಇದು ಆಧಿದೈವಿಕ' ವಿಘ್ನ. ಸುರಸೆ ಹನುಮನನ್ನು ಬಯಸಿದಳು. ಹನುಮ ಅತಿ ದೊಡ್ಡ ರೂಪ ತಾಳಿದ. ಸುರಸೆ ಬಾಯಿ ಅತಿ ದೊಡ್ಡದಾಗಿ ತೆಗೆದಳು. ಹನುಮಂತ ಅತಿ ಚಿಕ್ಕವನಾಗಿ ಬಾಯಿಯಲ್ಲಿ ಪ್ರವೇಶ ಮಾಡಿ, ಕೂಡಲೇ ಹೊರಗೆ ಬಂದ, ತನ್ನ ರಾಮಕಾರ್ಯಕ್ಕೆ ವಿಘ್ನ ಮಾಡಿಕೊಳ್ಳಲಿಲ್ಲ. ದೇವತೆಗಳ ವರವನ್ನೂ ಸತ್ಯಗೊಳಿಸಿದ. ಯುಕ್ತಿಯಿಂದ ಈ ವಿಘ್ನಗಳನ್ನು ಗೆದ್ದ. ವಿಘ್ನಗಳು ಜೀವನದಲ್ಲಿ ಬಂದಾಗ ಹತಾಶನಾಗದೇ, ತಂತ್ರಗಾರಿಕೆಯಿಂದ, ಯುಕ್ತಿಯಿಂದ ಗೆಲ್ಲಬೇಕು ಎಂದು ತೋರಿದ ಹನುಮಂತ.

೩. ವಿರೋಧಿಸುವ ತಾಮಸೀ ವಿಘ್ನಗಳು. ಆಸುರೀ ಶಕ್ತಿಗಳು, ಸಿಂಹಿಕಾ

ಲಂಕೆಯ ರಕ್ಷಕಿ. ಆಕಾಶದಲ್ಲಿ ಯಾರೇ ಬಂದರೂ ಅವರ ನೆರಳು ಹಿಡಿದರೆ ಅವರು ನಿನ್ನ ವಶರಾಗಲಿ. ಅವರನ್ನು ತಿಂದುಹಾಕು ಎಂದು ಬ್ರಹ್ಮದೇವರ ವರ ಅವಳಿಗೆ. ಸಿಂಹಿಕೆ ಆಕಾಶದಲ್ಲಿ ಹಾರುವ ಹನುಮನ ನೆರಳನ್ನು ಹಿಡಿದಳು. ಈ ತಾಮಸೀ ರಾಕ್ಷಸಿಯನ್ನು ಹನುಮಂತ ಶಕ್ತಿಯಿಂದ ಸಂಹರಿಸಿದ, ಕೆಲವು ವಿರೋಧಿಗಳು ಒಡ್ಡುವ ವಿಘ್ನಗಳನ್ನು ಶಕ್ತಿಯಿಂದ ಗೆಲ್ಲಬೇಕೆಂದು ತೋರಿಸಿದ. ಇವರು ಛಾಯಾ-ಗ್ರಹರು, ದೋಷಗ್ರಹಣ ಮಾಡುವವರು. ಹೀಗೆ ಹನುಮಂತ ಮೂರುವಿಧದ ಸಾಂಸಾರಿಕ ವಿಘ್ನಗಳನ್ನು ಜೀವನದ ಪರೀಕ್ಷೆಗಳನ್ನು ಗೆದ್ದು ರಾಮಕಾರ್ಯ ಪೂರೈಸಿದ. ತನ್ನ ಧರ್ಮಕ್ಕೆ, ತಾನು ಮಾಡುವ ರಾಮಪೂಜೆಗೆ ಬರುವ ವಿಘ್ನ ಪರಿಹರಿಸಿಕೊಂಡ.

ಸಾಧಕರಿಗೆ ಪರಿವಾರದ ಸ್ನೇಹ, ದಾಕ್ಷಿಣ್ಯದ ವಿಘ್ನಗಳನ್ನು, ಪರೀಕ್ಷೆಗಾಗಿ ಬರುವ ವಿಘ್ನಗಳನ್ನು , ವಿರೋಧಿಸುವ ಆಸುರೀ ವಿಘ್ನಗಳನ್ನು ಪ್ರೀತಿ, ಯುಕ್ತಿ , ಶಕ್ತಿಯಿಂದ ಗೆದ್ದು ಬಾಳಿರೆಂದು ಸುಂದರಕಾಂಡದ ಆಧ್ಯಾತ್ಮಿಕ ಸಂದೇಶ.

ನಾಲಿಗೆ ಸುರಸಾ. ಅದಕ್ಕೆ ರಸಭರಿತ ಬೇಕು. ಆದರೆ ಅದು ವಶದಲ್ಲಿ ಇರಬೇಕು. ''ಜಿತೇ ರಸೇ ಜಿತಂ ಸರ್ವಂ'' ನಾಲಿಗೆಯನ್ನು ವಶದಲ್ಲಿ ಇಟ್ಟುಕೊಳ್ಳಬೇಕು. ನಾಲಿಗೆಯನ್ನು ಗೆದ್ದರೆ ಎಲ್ಲವನ್ನೂ ಗೆದ್ದಂತೆ. ನಮ್ಮಲ್ಲಿ ದೋಷವನ್ನೇ ಹುಡುಕು-ವವರು, ಹೇಳುವವರು, ಛಾಯಾಗ್ರಹರು. ಅವರನ್ನು ಶಕ್ತಿಯಿಂದ ಎದುರಿಸ-ಬೇಕು.

ಸುಂದರಕಾಂಡ ಇದು ಸಾಧನಾಧ್ಯಾಯ. ಉತ್ತರಕಾಂಡ ಇದು ಫಲಾಧ್ಯಾಯ.

ಏಳು ಕಾಂಡಗಳು ಸಾಧಕನ ಪಯಣ. ಬಾಲಕಾಂಡದಿಂದ ಬಾಲಕನಂತಹ ಮನಸ್ಸು ಪಡೆದು, ನಿರ್ವಿಕಾರದ ಅಯೋಧ್ಯನಾಗಿ, ಸಂಯಮದ ಅರಣ್ಯ ಸೇರಿ, ಕಿಂ ಕಿಂ ಧಾ, ಕಿಷ್ಕಿಂಧೆಯ ಸದ್ಗುಣ ಪಡೆದು, ಸುಂದರವಾದ ಸಾಧನಗಳನ್ನು ಮಾಡಿ, ವಿಘ್ನ ಪರಿಹರಿಸಿಕೊಂಡು, ಕಾಮ, ಕ್ರೋಧ, ಭೋಗಗಳ ಜೊತೆಗೆ ಯುದ್ಧ ಮಾಡಿ, ಹತ್ತು ಇಂದ್ರಿಯಗಳೆಂಬ ದಶಮುಖಗಳನ್ನು ಗೆಲ್ಲಬೇಕು. ಆಗ ''ಉತ್ತರ'' ಪರಮಾತ್ಮ ಅವನನ್ನು ಹೊಂದುವನು (''ಉತ್ತರೋ ಗೋಪತಿರ್ಗೋಪ್ತಾ'' ವಿಷ್ಣುಸಹಸ್ರನಾಮ) ಇದೇ 'ಸಾಲೋಕ್ಯ ,' ಸಾಮೀಪ್ಯ ಮೋಕ್ಷಗಳು. ರಾಮಾಯಣದ ಕಾಂಡಗಳು ಹೇಳುವ ಸಪ್ತಸೋಪಾನಗಳು.

ಮಾಡುವ ಕಾರ್ಯಗಳೆಲ್ಲ ಶ್ರೀರಾಮ ಪೂಜೆ ಎಂದು ಭಾವಿಸಿದರೆ ವಿಘ್ನಗಳು

ತಾವೇ ಪರಿಹಾರವಾಗುವವು. ಕರ್ಮಗಳೆಲ್ಲ ಕರ್ಮಯೋಗವಾಗುವವು. ಸುಂದರಕಾಂಡದಲ್ಲಿ ಜೀವನ ಭಕ್ತಿಮಯವಾಗುವುದು. ಅದಕ್ಕೇ ಯುದ್ಧ-ಕಾಂಡದಲ್ಲಿ ಆರು ವೈರಿಗಳ ನಾಶ. ಇದರಿಂದ ಉತ್ತರದ ಜೀವನ ಮಂಗಲಮಯ.

೬) ಯುದ್ಧಕಾಂಡ–

ಇದು ಸಂಘರ್ಷದ ಕಾಂಡ. ಇಲ್ಲಿ ದ್ವಂದ್ವಯುದ್ಧ. ಸಾತ್ತ್ವಿಕಗುಣ, ತಮೋಗುಣಗಳ, ಬುದ್ಧಿ, ಮನಸ್ಸುಗಳ ಯುದ್ಧ. 'ಮನಸ್ಸು' 'ವಿಕಲ್ಪಾತ್ಮಕ.'' ವಿರುದ್ಧ ವಿಚಾರಗಳನ್ನೇ ಸೃಷ್ಟಿಸುವುದು. 'ಬುದ್ಧಿ' 'ಸಂಕಲ್ಪಾತ್ಮಕ.'' ಸರಿಯಾದ, ವಿವೇಕಪೂರ್ಣ ದೃಷ್ಟಿ ನೀಡುವುದು. ದೇವಗುರು ಬೃಹಸ್ಪತಿ, ಗುರುವಾರದ ಅಧಿಪತಿ. ವಿದ್ಯೆಯ, ಬುದ್ಧಿಯ ನಿಯಾಮಕ. ಶುಕ್ರ ದೈತ್ಯಗುರು. ಶುಕ್ರವಾರದ ಅಧಿಪತಿ. ಮನಸ್ಸಿನ ಒಡೆಯ. ಗುರು ಶುಕ್ರರ ಕಲಹ, ದೇವ ದೈತ್ಯರ ಕಲಹ, ಬುದ್ಧಿ ಮನಸ್ಸಿನ ಸಂಘರ್ಷಗಳೇ ಯುದ್ಧಕಾಂಡ. ಇದು ಎಲ್ಲರ ಜೀವನದಲ್ಲಿ ಸಹಜ. ಈ ತುಮುಲ ಎಲ್ಲರಲ್ಲಿ ಸ್ವಾಭಾವಿಕ. ದೇವರಲ್ಲಿ ವಿಶ್ವಾಸ, ಗುರು ಹನುಮನಲ್ಲಿ ಭಕ್ತಿ ಇದ್ದರೆ ಯುದ್ಧದಲ್ಲಿ ಗೆಲ್ಲಬಹುದು. ಆಸೆ, ಆಕಾಂಕ್ಷೆ, ವಿವೇಕಗಳ ದ್ವಂದ್ವವಿದು. ''ಆರು ವೈರಿಗಳಂಬಿಗಾ ಅವು ಮೀರಿ ಬರುತಲಿವೆ ಅಂಬಿಗಾ'' ''ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ'' ಇವೇ ಮನುಷ್ಯನ ಆರು ವೈರಿಗಳು. ಇವೇ ದಶಮುಖರಾವಣ. ಈ ಆರು ದೋಷಗಳನ್ನು ಗೆಲ್ಲಲು ಆರು ಗುಣಗಳುಳ್ಳ ಭಗವಾನ್ ರಾಮನೇ ಬರಬೇಕು. (ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾತ್)

ಸಮಗ್ರ ಐಶ್ವರ್ಯ, ಶಕ್ತಿ ವೀರ್ಯ, ಶುದ್ಧ ಕೀರ್ತಿ, ತೇಜಸ್ಸು, ಜ್ಞಾನ ವೈರಾಗ್ಯಾದಿ ಆರು ಗುಣವುಳ್ಳ ಭಗವಂತನಿಂದಲೇ ಸಾಧ್ಯ. ರಾಮಭಕ್ತಿಯಿಂದಲೇ ಗೆಲ್ಲಬಹುದು.

ಶ್ರೀರಾಮನಂತಹ ಈ ಗುಣಗಳನ್ನು ಸಂಪಾದಿಸಿದರೆ ಆರು ದೋಷ ಗೆಲ್ಲಬಹುದು. ಅಂತೆಯೇ ದೇವರಲ್ಲಿಯ ಗುಣಗಳನ್ನು ''ಸದ್ಗುಣ ಕದ್ದವರ ಅಘವ ಕದಿವ ನಮ್ಮ ದೇವ'' ಎನ್ನುವರು. ''ವಾಸ್ತುದೇವನ ಗುಣಸಮುದ್ರದೊಳು ಈಸಬಲ್ಲವ ಆಯಾಸವಿಲ್ಲದೇ ಭವಸಮುದ್ರವ ದಾಟಬಲ್ಲ'' ಎನ್ನುವರು ಜಗನ್ನಾಥದಾಸರು.

ತಾರುಣ್ಯದಲ್ಲಿ ಕಾಮ, ಕ್ರೋಧ ಗೆದ್ದವರ ವೃದ್ಧಾಪ್ಯ ಸುಂದರವಾಗಿರುವದು.

ಯೋಗಿ ರಾಮ, ಭೋಗಿ ರಾವಣರ ಯುದ್ಧ. ಇದು ಮಾನಸಿಕ ಸಂಘರ್ಷ. ಹರಿಭಕ್ತಿಯಿಂದ ವಿಕಾರ ನಾಶ. ಸದ್ಗುಣಗಳಿಂದ ವಾಸನಾ ಗೆಲ್ಲಬಹುದು. ಭಕ್ತಿ ಬೆಳೆದಂತೆ ದೋಷಗಳಲ್ಲಿ ವಿರಕ್ತಿ ಬೆಳೆಯುವುದು.

''ತೀರ್ತ್ವಾ ಮೋಹಾರ್ಣವಂ ಹತ್ವಾ ಕಾಮಕ್ರೋಧಾದಿರಾಕ್ಷಸಾನ್ ।
ಶಾಂತಿಸೀತಾಸಮಾಯುಕ್ತಃ ಆತ್ಮಾರಾಮೋ ವಿರಾಜತೇ ॥''

''ರಾಗ ದ್ವೇಷ ಮೋಹಗಳ ಸಮುದ್ರವನ್ನು ದಾಟಿ, ಕಾಮಕ್ರೋಧಾದಿ ರಾಕ್ಷಸರನ್ನು ಕೊಂದು, ಶಾಂತಿ, ಸಂತೃಪ್ತಿ ಎಂಬ ಸೀತಾಳನ್ನು ಹೊಂದಿ ಆತ್ಮಾರಾಮ, ಶ್ರೀರಾಮ ಶೋಭಿಸುವನು.

ಜ್ಞಾನ-ಭಕ್ತಿಗಳ ಜೋಡಿ ಕೂಡಿ ಇರಬೇಕು.

೭) ಉತ್ತರಕಾಂಡ –

ಇದು ಫಲಾಧ್ಯಾಯ. ಅವರವರ ಜ್ಞಾನ, ಭಕ್ತಿ, ಸಾಧನಗಳಿಗೆ ಅನುಗುಣವಾಗಿ ಫಲ ದೊರೆಯುವುದು. ಇದು ಈ ಕಾಂಡದ ಸಂದೇಶ. ನಿಷ್ಕಾಮಸೇವೆ ಮಾಡಿದ ಜೀವೋತ್ತಮ ಹನುಮಂತನಿಗೆ ಶ್ರೀರಾಮ ಜಗದ್ಗುರುತ್ವ ಪದವಿ ನೀಡಿದ. ತ್ಯಾಗಿಯಾದ, ಶ್ರೀರಾಮಭಕ್ತ ಭರತನಿಗೆ ಯುವರಾಜಪಟ್ಟ ನೀಡಿದ. ಸುಗ್ರೀವನಿಗೆ ಕಪಿರಾಜ್ಯದ ರಾಜಪದವಿ, ವಿಭೀಷಣನಿಗೆ ಲಂಕೆಯ ರಾಜಪಟ್ಟ, ಅಂಗದನಿಗೆ ಯುವರಾಜಪಟ್ಟ ನೀಡಿದ. ತಂದೆತಾಯಿ ಎನಿಸಿದವರಿಗೆ ಸದ್ಗತಿ ನೀಡಿದ. ಲಕ್ಷ್ಮಣನ ಭಕ್ತಿಗೆ ಸದಾ ತನ್ನ ಸಾಮೀಪ್ಯ ನೀಡಿದ.

ರಾಮಾಯಣದ ವಿಶಾಲಪರಂಪರೆ

ರಾಮಾಯಣದ ವಾಙ್ಮಯ ಅಪಾರವಾಗಿದೆ. ವೇದ, ಉಪನಿಷತ್ತು, ಇತಿಹಾಸ, ಪುರಾಣ, ಕಾವ್ಯ, ನಾಟಕ, ಚಂಪೂ, ಗದ್ಯ, ಎಲ್ಲ ಪ್ರಾಕೃತ ಭಾಷೆಯಲ್ಲಿ, ಸಾಹಿತ್ಯಕೃತಿಗಳು, ಅನುವಾದಗಳು, ವಿಮರ್ಶೆ, ವ್ಯಾಖ್ಯಾನಗಳು ವಿಶಾಲವಾಗಿ ಬೆಳೆದಿವೆ. ಅದಕ್ಕೇ ಅಮರಕವಿ ಕುಮಾರವ್ಯಾಸ,

''ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ
ಭಾರದಲಿ, ತಿಂತಿಣಿಯ ಚರಿತೆಯಲಿ ಕಾಲಿಡಲು ತೆರಪಿಲ್ಲ''

ರಾಮಾಯಣದ ಮೇಲೆ ಸಾಹಿತ್ಯಕೃತಿ ರಚಿಸಿದ ಕವಿಗಳು ಅಸಂಖ್ಯಾತ.

ರಾಮಾಯಣದ ಪ್ರತಿಯೊಂದು ಅಂಶ, ಘಟನೆ, ವ್ಯಕ್ತಿ, ಸಂದರ್ಭಗಳು ಎಲ್ಲರ ಕೃತಿಗಳಿಗೆ ವಿಷಯಗಳಾಗಿವೆ. ಆಲ್ಲಿ ಕಾಲಿಡಲು ಸ್ಥಳವಿಲ್ಲ. ಹೇಳಲು ವಿಷಯಗಳೇ ಉಳಿದಿಲ್ಲ. ಅಷ್ಟು ಕೃತಿಗಳು ನಿರ್ಮಾಣವಾಗಿವೆ. ಆದಕ್ಕೇ ನಾನು ಮಹಾಭಾರತ–ದಲ್ಲಿ ಪ್ರವೇಶ ಮಾಡುವೆ'' ಎನ್ನುವ. ಪ್ರಾಚೀನಭಾರತದ ಅಪಾರ ವಾಙ್ಮಯದಲ್ಲಿ ಬಹುಪಾಲು ರಾಮಾಯಣವನ್ನಾಧರಿಸಿದ ಕೃತಿಗಳೇ ಹೆಚ್ಚು.

ಅಪೌರುಷೇಯ ವಾಙ್ಮಯ

ವೇದಗಳು, ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳು ವೇದಶಬ್ದದಿಂದ ಕರೆಯಲ್ಪಡುವವು. ಇವು ಅಪೌರುಷೇಯ. ನಿತ್ಯ ವಾಙ್ಮಯ, ಸದಾ ಪರಮಾತ್ಮನ ಬುದ್ಧಿಸ್ಥ. ನಿರ್ದೋಷ. ಇಂತಹ ವೇದಗಳು ಅನಂತ, ಅಪಾರ, ಸ್ವತಃ ಪ್ರಮಾಣ.

''ಅನುಕ್ತಂ ಪಂಚಭಿಃ ವೇದೈಃ ನ ವಸ್ತು ಅಸ್ತಿ ಕುತಶ್ಚನ''

ವೇದದಿಂದ ಹೇಳಲ್ಪಡದೇ ಇರುವ ವಸ್ತು, ವಿಚಾರಗಳೇ ಇಲ್ಲ. ಎಲ್ಲವೂ ವೇದದಲ್ಲಿವೆ. ''ವೇತ್ತಿ ಸರ್ವಂ ವೇದಯತಿ ಸರ್ವಂ ಇತಿ ವೇದಃ'' ಎಲ್ಲ ವಿಚಾರಗಳನ್ನೂ ತನ್ನಲ್ಲಿ ತುಂಬಿಕೊಂಡು, ಎಲ್ಲ ವಿಚಾರಗಳನ್ನೂ ಯಾವುದು ತಿಳಿಸುವುದೋ ಅದಕ್ಕೇ ವೇದ ಎನ್ನುವರು. ಇಂತಹ ಸಂಪೂರ್ಣ ವೇದವು ಶ್ರೀರಾಮನನ್ನು ತಿಳಿಸುವ ಮೊದಲ ವಾಙ್ಮಯ. ''ವೇದೈಶ್ಚ ಸರ್ವೈಃ ಅಹಮೇವ ವೇದ್ಯಃ'' ಗೀತಾ. ಸಂಪೂರ್ಣ ವೇದಗಳಿಂದ ನಾನೇ ತಿಳಿಯಲ್ಪಡುವೆ. ''ವೇದಾ ಹ್ಯೇವ ಏನಂ ವೇದಯಂತಿ'' ನನ್ನನ್ನು ತಿಳಿಸುವ ವಾಙ್ಮಯಗಳೇ ವೇದಗಳು ಎಂಬ ಪರಮಾತ್ಮನ ಮಾತಿನಿಂದ ಸಂಪೂರ್ಣ ವೇದವಾಙ್ಮಯ ರಾಮನ ಚರಿತೆ ತಿಳಿಸುವ ಮೊದಲ ರಾಮಾಯಣ ವಾಙ್ಮಯ. ರಾಮಾಯಣದ ಬೀಜಗಳನ್ನು, ಕಥೆಯನ್ನು ನೇರವಾಗಿ ನಿರೂಪಿಸುವ ವೇದಮಂತ್ರಗಳನ್ನು ನೀಲಕಂಠ ಚತುರ್ಧರ ಸಂಗ್ರಹಿಸಿ ನಿರೂಪಿಸಿದ್ದಾರೆ.

ಆ ಸಂಗ್ರಹಕ್ಕೆ ''ಮಂತ್ರರಾಮಾಯಣ''ವೆಂದು ಹೆಸರಿಸಿದ್ದಾನೆ. ೧೫೭ ವೇದ ಮಂತ್ರಗಳಿಂದ ರಾಮಾಯಣ ಕಥಾ, ವ್ಯಕ್ತಿಗಳನ್ನು ನಿರೂಪಿಸಿದ್ದಾನೆ. ೧೫೫ ಋಗ್ವೇದದ ಮಂತ್ರಗಳು, ೨ ವಾಜಸನೇಯ ಸಂಹಿತೆಯದು. ತೈತ್ತಿರೀಯ ಬ್ರಾಹ್ಮಣದಲ್ಲಿ ಸೀತಾ ಉಪಾಖ್ಯಾನವಿದೆ. ಇದಲ್ಲದೇ ''ಐತರೇಯ ಬ್ರಾಹ್ಮಣದ ೭–೨೭–೩ಳರಲ್ಲಿ, ಅಥರ್ವವೇದದ ೩–೧೭–೮ರಲ್ಲಿ ರಾಮನ ನಿರೂಪಣೆ ಇದೆ. ''ಇಕ್ಷ್ವಾಕು, ರಾಮ, ದಶರಥ, ಜನಕ, ಸೀತಾ ಇವರೆಲ್ಲರ ಉಲ್ಲೇಖ ಶತಪಥ

ಬ್ರಾಹ್ಮಣ (೧೦-೬-೧-೨) ಛಾಂದೋಗ್ಯೋಪನಿಷತ್ (೫-೧೧-೪) ಶತಪಥ ಬ್ರಾಹ್ಮಣದ ನಾಲ್ಕು ಸ್ಥಳಗಳಲ್ಲಿ (೧೧-೩-೧, ೧-೨೦೪-೧, ೪-೩-೨೦, ೧೧-೬-೨, ೬-೨-೧-೧೦) ಜನಕನ ಉಲ್ಲೇಖವಿದೆ. ಬೃಹದಾರಣ್ಯಕದ ೩-೧-೧-೨)ರಲ್ಲಿ ರಾಮಾಯಣ ಪಾತ್ರದ ಉಲ್ಲೇಖವಿದೆ. ''ತೈತ್ತಿರೀಯ ಬ್ರಾಹ್ಮಣ, ಐತರೇಯ ಬ್ರಾಹ್ಮಣ, ಕೌಷೀತಕೀ ಬ್ರಾಹ್ಮಣ, ತೈತ್ತಿರೀಯ ಸಂಹಿತಾ, ಕಾಠಕ ಸಂಹಿತಾ ಮತ್ತು ಮೈತ್ರಾಯಿಣಿ ಸಂಹಿತಾ ಇವುಗಳನ್ನು ರಾಮಾಯಣದ ಆಧಾರ ವಾಙ್ಮಯವೆಂದು ಜ್ಞಾನಿಗಳು ನಿರೂಪಿಸಿರುವರು. 'ಕಾಠಕಸಂಹಿತಾ (೨೦-೩) ಕಪಿಷ್ಠಲಸಂಹಿತಾ, (೩೨-೫-೬) ಮೈತ್ರಾಯಿಣಿ ಸಂಹಿತಾ (೩-೨-೪-೫) ಶತಪಥ ಬ್ರಾಹ್ಮಣ (೧೩-೮-೨)ಗಳಲ್ಲಿ ಸೀತಾ ಉಲ್ಲೇಖವಿದೆ. ಕಥೆ ಇದೆ.

೧. **ಶತಕೋಟಿ ರಾಮಾಯಣ**– ನೂರುಕೋಟಿ ಶ್ಲೋಕಗಳಿಂದ ರಾಮಾಯಣ ರಚಿತವಾಗಿದೆ. ಇದನ್ನು ಹಯಗ್ರೀವದೇವರು ಹೇಳಿದ್ದಾರೆ. ಇದಕ್ಕೆ ಮೂಲ ರಾಮಾಯಣವೆಂದೂ ಕರೆಯುತ್ತಾರೆ.

೨. **ವಾಲ್ಮೀಕಿ ರಾಮಾಯಣ**– ಓಂಕಾರದ ವ್ಯಾಖ್ಯಾನ ಗಾಯತ್ರೀಮಂತ್ರ . ಗಾಯತ್ರಿಯಲ್ಲಿ ೨೪ ಅಕ್ಷರಗಳು. ಆ ೨೪ ಅಕ್ಷರಗಳ ವ್ಯಾಖ್ಯಾನವೇ ೨೪ ಸಾವಿರ ಶ್ಲೋಕದ ವಾಲ್ಮೀಕಿಯ ರಾಮಾಯಣ. ಏಳು ಕಾಂಡಗಳು. ವೇದಗಳ ವ್ಯಾಖ್ಯಾನವೇ ಈ ವಾಲ್ಮೀಕಿಯ ರಾಮಾಯಣ. ಈ ವಾಲ್ಮೀಕಿಯ ರಾಮಾಯಣಕ್ಕೆ ೧೦ ಟಿಪ್ಪಣಿಗಳು ಬರೆಯಲ್ಪಟ್ಟಿವೆ.

೩. **ಅಧ್ಯಾತ್ಮರಾಮಾಯಣ**– ವೇದವ್ಯಾಸವಿರಚಿತ ಮೊದಲ ಪುರಾಣ ಬ್ರಹ್ಮಾಂಡ ಪುರಾಣ. ಬ್ರಹ್ಮಾಂಡಪುರಾಣದ ಉತ್ತರಖಂಡದ ಒಂದು ಭಾಗವೇ ಅಧ್ಯಾತ್ಮ ರಾಮಾಯಣ, ಇದು ಶಿವಪಾರ್ವತಿಯರ ಸಂವಾದರೂಪವಾಗಿದೆ. ಭಕ್ತಿ , ಜ್ಞಾನ, ಉಪಾಸನಾ, ನೀತಿ, ಸದಾಚಾರದ ಉಪದೇಶಗಳು ಹೇರಳವಾಗಿವೆ. ಇದು ಎಲ್ಲ ಭಾಷೆಗಳಲ್ಲಿ ಅನೂದಿತವಾಗಿ ಮುದ್ರಿತವಾಗಿದೆ. ರಾವಣ ಅಪಹರಿ- ಸಿದ್ದು ಸೀತಾ ಆಕೃತಿ (ಛಾಯಾಸೀತಾ) ಈ ವಿಷಯ ವಿಸ್ತಾರವಾಗಿ ಬಂದಿದೆ.

೪. **ಅದ್ಭುತರಾಮಾಯಣ**– ಮಹರ್ಷಿ ವಾಲ್ಮೀಕಿ ಹಾಗೂ ಮಹರ್ಷಿ ಭರದ್ವಾಜರ ಸಂವಾದರೂಪವಾಗಿದೆ. ಇದರಲ್ಲಿ ೨೭ ಸರ್ಗಗಳಿವೆ. ೧೪ ಸಾವಿರ ಶ್ಲೋಕಗಳಿವೆ.

೫. **ಆನಂದರಾಮಾಯಣ**– ಇದು ವಾಲ್ಮೀಕಿ ವಿರಚಿತವಾದದ್ದು. ಪ್ರತಿಯೊಂದು ಸರ್ಗದ ಕೊನೆಯಲ್ಲಿ ''ಇತಿ ಶತಕೋಟಿ ರಾಮಚರಿತಾಂತರ್ಗತ ಶ್ರೀಮದಾನಂದ-

ರಾಮಾಯಣೇ ವಾಲ್ಮೀಕೀಯೇ'' ಎಂದಿದೆ. ಶತಕೋಟಿ ರಾಮಾಯಣದ ಒಂದು ಭಾಗವೇ ಆಗಿದೆ, ಇದೂ ಅನೇಕ ಭಾಷೆಗಳಲ್ಲಿ ಅನುವಾದಿತವಾಗಿ, ಮುದ್ರಿತವಾಗಿದೆ.

೬. **ಯೋಗವಾಶಿಷ್ಠ ರಾಮಾಯಣ–** ಮಹರ್ಷಿ ವಶಿಷ್ಠರು ಹಾಗೂ ಪ್ರಭು ಶ್ರೀರಾಮಚಂದ್ರರ ಸಂವಾದ ರೂಪದಲ್ಲಿದೆ. ಬ್ರಹ್ಮದೇವರ ಆಜ್ಞೆಯಂತೆ ವಾಲ್ಮೀಕಿ ಋಷಿಗಳೇ ಇದನ್ನು ರಚಿಸಿದ್ದಾರೆ. ಇದಕ್ಕೆ ಉತ್ತರ ರಾಮಾಯಣ ಅಥವಾ ''ಮಹಾರಾಮಾಯಣ''ವೆಂದೂ ಕರೆಯುವರು. ವಾಲ್ಮೀಕಿಗಳು ಲೋಕಕಲ್ಯಾಣ-ಕ್ಕಾಗಿ, ತತ್ತ್ವಜ್ಞಾನಭರಿತವಾದ ಇದನ್ನು ರಚಿಸಿದ್ದಾರೆ. ಇದರಲ್ಲಿ ೩೨ ಸಾವಿರ ಶ್ಲೋಕಗಳಿವೆ. ಆರು ಪ್ರಧಾನ ಪ್ರಕರಣಗಳಿವೆ. ೧) ವೈರಾಗ್ಯ , ೨) ಮುಮುಕ್ಷು ೩) ಉತ್ಪತ್ತಿ ೪) ಸ್ಥಿತಿ ೫) ಉಪಶಮನ ೬) ನಿರ್ವಾಣ ಎಂಬುದಾಗಿ. ಅಲ್ಲಲ್ಲಿ ಅದ್ವೈತ ಹೇಳಿದಂತಹ ಶ್ಲೋಕಗಳಿವೆ. ಇದು ಅನೇಕ ಭಾಷೆಗಳಲ್ಲಿ ಅನೂದಿತವಾಗಿ ಮುದ್ರಿತವಾಗಿದೆ. ಇದನ್ನು ವಾಸಿಷ್ಠ ರಾಮಾಯಣ, ಆರ್ಷರಾಮಾಯಣವೆಂದೂ ಕರೆಯುವರು.

ವ್ಯಾಸವಾಙ್ಮಯದಲ್ಲಿ ರಾಮಾಯಣ

೭. **ಮಹಾಭಾರತದಲ್ಲಿ ರಾಮಾಯಣ–** ಮಹಾಭಾರತದ ವನಪರ್ವದಲ್ಲಿ ''ರಾಮೋಪಾಖ್ಯಾನಪರ್ವ''ವೆಂದು ರಾಮಕಥೆ ಬಂದಿದೆ. ಪಾಂಡವರ ವನವಾಸ-ದಲ್ಲಿ ಮಾರ್ಕಂಡೇಯರು ಪಾಂಡವರಿಗೆ ಹೇಳುವರು. ೨೭೪ ರಿಂದ ೨೯೧ ಅಧ್ಯಾಯಗಳಲ್ಲಿ ರಾಮಾಯಣ ಬಂದಿದೆ. ವಿಶೇಷ ಘಟನೆಗಳು ವೈವಿಧ್ಯ-ಮಯವಾಗಿ ನಿರೂಪಿಸಲ್ಪಟ್ಟಿವೆ.

೮. **ಭಾಗವತದಲ್ಲಿ ರಾಮಾಯಣ–** ಭಾಗವತದ ಪ್ರಥಮ, ತೃತೀಯಸ್ಕಂಧಗಳಲ್ಲಿ ಒಂದೆರಡು ಶ್ಲೋಕಗಳಲ್ಲಿ ರಾಮಾವತಾರದ ಉಲ್ಲೇಖ ಮಾಡುವರು. ಮುಂದೆ ನವಮಸ್ಕಂಧದ ಹತ್ತು ಹಾಗೂ ಹನ್ನೊಂದನೇ ಎರಡು ಅಧ್ಯಾಯದಲ್ಲಿ ರಾಮಾವತಾರದ ಕಥೆಯು ವರ್ಣಿತವಾಗಿದೆ. ಸಂಕ್ಷಿಪ್ತವಾದರೂ ಗಹನ, ಗಂಭೀರ ಭಾಷೆಯಿಂದ ನಿರೂಪಿತವಾಗಿದೆ ೧ ರಿಂದ ೧೩ ಅಧ್ಯಾಯ ರಾಮವಂಶ, ರಾಮಕಥೆ ಬಂದಿದೆ.

೯. **ಜೈಮಿನಿಭಾರತ-** ರಾಮನು ಮಾಡಿದ ಅಶ್ವಮೇಧಯಾಗ, ಲವಕುಶ ಕಾಳಗ ಮೊದಲಾದ ಪ್ರಕರಣಗಳಿವೆ. ಅಧ್ಯಾಯ ೨೫ ರಿಂದ ೩೬ರ ವರೆಗೆ ರಾಮಕಥೆ ನಿರೂಪಿತವಾಗಿದೆ.

೧೦. **ಅಗ್ನಿಪುರಾಣದಲ್ಲಿ** ೫ನೇ ಅಧ್ಯಾಯದಿಂದ ೧೩ನೇ ಅಧ್ಯಾಯದ ವರೆಗೆ ೯ ಅಧ್ಯಾಯದಲ್ಲಿ ರಾಮಾಯಣ ನಿರೂಪಿತವಾಗಿದೆ. ಇದು ನಾರದರು ಹಾಗೂ ವಾಲ್ಮೀಕಿಯ ಸಂವಾದ ರೂಪವಾಗಿದೆ.

೧೧. **ಗರುಡಪುರಾಣ–** ಗರುಡಪುರಾಣದ ಪೂರ್ವಖಂಡದಲ್ಲಿ ೧೩೪ನೇ ಅಧ್ಯಾಯದಲ್ಲಿ ರಾಮಾಯಣ ಕಥಾಸಾರ ನಿರೂಪಿತವಾಗಿದೆ.

೧೨. **ಸ್ಕಂಧಪುರಾಣ–** ಸ್ಕಂಧಪುರಾಣದ ವೈಷ್ಣವಖಂಡದಲ್ಲಿ ವೈಶಾಖ ಮಾಹಾತ್ಮ್ಯದಲ್ಲಿ ೧೭ ಅಧ್ಯಾಯದಿಂದ ೨೦ನೇ ಅಧ್ಯಾಯದ ವರೆಗೆ ರಾಮಾಯಣ ಕಥೆ ನಿರೂಪಿತವಾಗಿದೆ. ಅದರಂತೆ ಅವಂತೀಖಂಡದ ಅವಂತೀಕ್ಷೇತ್ರದ ಮಾಹಾತ್ಮ್ಯದಲ್ಲಿ, ೨೪ನೇ ಅಧ್ಯಾಯದಲ್ಲಿ ಹಾಗೂ ಪ್ರಭಾಸಖಂಡದ ೨೮೭ ಅಧ್ಯಾಯದಲ್ಲಿ ಮಹರ್ಷಿ ವಾಲ್ಮೀಕಿಯ ಜೀವನಕಥೆ ವರ್ಣಿಸಲ್ಪಟ್ಟಿದೆ.

೧೩. **ಬ್ರಹ್ಮಪುರಾಣ–** ಪುರಾಣಗಳ ಪರಿಗಣನೆಯಲ್ಲಿ ಇದು ಮೊದಲ ಪುರಾಣ. ಇದಕ್ಕೆ ಆದಿಪುರಾಣವೆನ್ನುವರು. ಇದರಲ್ಲಿ ೧೪ ಸಾವಿರ ಶ್ಲೋಕಗಳಿವೆ. ೭೦ನೇ ಅಧ್ಯಾಯದಿಂದ ೧೭೫ ಅಧ್ಯಾಯದ ವರೆಗೆ ಗಂಗೆ, ಗೋದಾವರಿಯರ ಹಿರಿಮೆ ತುಂಬಿದೆ. ಇಲ್ಲೆಲ್ಲಾ ಶ್ರೀರಾಮನ ಕಥೆಯೇ ತುಂಬಿದೆ. ಕೆಲವು ವಿಶಿಷ್ಟ ಘಟನೆಗಳ ಉಲ್ಲೇಖವಿದೆ.

೧೪. **ಪದ್ಮಪುರಾಣ–** ಪದ್ಮಪುರಾಣದಲ್ಲಿ ಮೇಲಿಂದ ಮೇಲೆ ಶ್ರೀರಾಮನ ಕಥೆ ನಿರೂಪಿತವಾಗಿದೆ. ಪದ್ಮಪುರಾಣದ ಸೃಷ್ಟಿಖಂಡದಲ್ಲಿ ಶ್ರೀರಾಮನ ವನವಾಸ, ತೀರ್ಥಯಾತ್ರೆ, ಪುಷ್ಕರದಲ್ಲಿ ಶ್ರಾದ್ಧಾದಿಗಳನ್ನು ಮಾಡಿದ ವರ್ಣನೆ ಇದೆ. ಉತ್ತರಖಂಡದಲ್ಲಿ ೨೪೨ನೇ ಅಧ್ಯಾಯದಿಂದ ೨೪೬ ಅಧ್ಯಾಯದ ವರೆಗೆ ಶ್ರೀರಾಮಾಯಣದ ಕಥೆ ಪೂರ್ಣವಾಗಿ ಹೇಳಲ್ಪಟ್ಟಿದೆ. ಹಾಗೆಯೇ ಪಾತಾಲ-ಖಂಡದಲ್ಲಿ ರಾಮಾಶ್ವಮೇಧದ ಕಥೆ ಬಹಳ ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ಜಾಂಬುವಂತನ ಮುಖದಿಂದ ರಾಮನ ಮಹಿಮೆ ವರ್ಣಿತವಾಗಿದೆ. ದಶರಥನ ಶ್ರಾದ್ಧ, ಬ್ರಾಹ್ಮಣರಲ್ಲಿ ದಶರಥಾದಿಗಳನ್ನು ಸೀತಾ ಕಾಣುವುದು. ಸಂಕೋಚಗಳ ವರ್ಣನೆ ಇದೆ.

೧೫. **ಶಿವಪುರಾಣ–** ಮಹಾಪುರಾಣಗಳಲ್ಲಿ ಶಿವಪುರಾಣ ನಾಲ್ಕನೆಯದು. ಇದು ಬಹಳ ವಿಶಾಲಗಾತ್ರದ್ದು. ಇದರಲ್ಲಿ ೧೨ ಸಂಹಿತೆಗಳು. ಅಲ್ಲಲ್ಲಿ ಶ್ರೀರಾಮಕಥೆ ಬಂದರೂ ಸತೀಖಂಡದಲ್ಲಿ ಅನೇಕ ಅಧ್ಯಾಯಗಳಲ್ಲಿ ಬಂದಿದೆ.

೧೬. **ಬ್ರಹ್ಮಾಂಡ ಪುರಾಣ–** ಬ್ರಹ್ಮಾಂಡಪುರಾಣದ ಲಲಿತೋಪಾಖ್ಯಾನದಲ್ಲಿ ತ್ರಿಪುರಸುಂದರಿಯ ಮಹಿಮೆ ಹೇಳುವಾಗ ರಾಮಾಯಣದ ಕಥೆ ಬಂದಿದೆ. ನಲ್ವತ್ತನೇ ಅಧ್ಯಾಯದಲ್ಲಿ ೮೮ ರಿಂದ ೧೩೭ರ ವರೆಗೆ ಶ್ಲೋಕಗಳಲ್ಲಿ ರಾಮಜನ್ಮ ನಿರೂಪಣೆ ಇದೆ.

೧೭. **ಭಗವದ್ಗೀತೆಯಲ್ಲಿ–** ಶ್ರೀಕೃಷ್ಣ ತನ್ನ ವಿಭೂತಿರೂಪಗಳನ್ನು ವರ್ಣಿಸುವಾಗ ''ರಾಮಃ ಶಸ್ತ್ರಭೃತಾಮಹಮ್'' ಎಂದು ಶಸ್ತ್ರಧಾರಿ ವೀರರಲ್ಲಿ ನಾನೇ ರಾಮನಾಗಿರುವೆನೆಂಬ ಕೃಷ್ಣನ ಮಾತು. ಶ್ರೀರಾಮ, ಶ್ರೀಕೃಷ್ಣರು ಇಬ್ಬರೂ ಒಂದೇ ಎಂಬ ಕಲಿಸಂತರಣೋಪನಿಷತ್ತಿನ ಮಾತು–

''ಹರೇ ರಾಮ ಹರೇ ರಾಮ, ರಾಮ ರಾಮ ಹರೇ ಹರೇ
ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ'' ಎಂದು.

''ವೃಷ್ಣೀನಾಂ ವಾಸುದೇವೋಽಸ್ಮಿ'' ಎಂದು ವೃಷ್ಣಿಗಳಲ್ಲಿ ವಾಸುದೇವ, ಶಸ್ತ್ರಧಾರಿಗಳಲ್ಲಿ ರಾಮನು ನಾನೇ ಎಂದು ಗೀತೆಯ ೧೦ ಅಧ್ಯಾಯದಲ್ಲಿ ಹೇಳಿರುವ.

೧೮. **ಮಹಾರಾಮಾಯಣ–** ಇದು ಶಿವಪಾರ್ವತಿಯರ ಸಂವಾದ ರೂಪದಲ್ಲಿದೆ. ಮೂರು ಲಕ್ಷ ಐವತ್ತು ಸಾವಿರ ಶ್ಲೋಕಗಳಿವೆ. ರಾಮಾಯಣದ ವಿಸ್ತಾರವಾದ ನಿರೂಪಣೆ ಇದೆ.

೧೯. **ಸಂವೃತ ರಾಮಾಯಣ–** ಇದು ನಾರದಕೃತ. ೨೪೦೦೦ ಶ್ಲೋಕಗಳಿವೆ. ಇದರಲ್ಲಿ ಸ್ವಾಯಂಭುವಮನು, ಶತರೂಪಾದೇವಿಯರು ರಾಮನನ್ನು ಮಗನನ್ನಾಗಿ ಪಡೆಯಲು ಮಾಡಿದ ತಪಃ ಶ್ಚರ್ಯದ ವರ್ಣನೆ ಇದೆ. ಅವರೇ ದಶರಥ, ಕೌಸಲ್ಯರಾಗಿ ಹುಟ್ಟಿ ಬಂದುದರ ವಿಸ್ತಾರ ವರ್ಣನೆ ಇದೆ.

೨೦. **ಲೋಮಶ ರಾಮಾಯಣ–** ಲೋಮಶ ಋಷಿಗಳು ಇದನ್ನು ರಚಿಸಿದ್ದಾರೆ. ಇಲ್ಲಿ ೩೨ ಸಾವಿರ ಶ್ಲೋಕಗಳಿವೆ.

೨೧. **ಅಗಸ್ತ್ಯರಾಮಾಯಣ–** ಮಹರ್ಷಿ ಅಗಸ್ತ್ಯರು ರಾಮನ ಕಾಲದಲ್ಲಿ ಇದ್ದವರು. ಲೋಪಾಮುದ್ರಾ ಅವರ ಮಡದಿ. ಅವರ ಸಂವಾದರೂಪದ ಈ ರಾಮಾಯಣ ೧೬ ಸಾವಿರ ಶ್ಲೋಕಗಳಿಂದ ಕೂಡಿದೆ.

೨೨. **ಮಂಜುಲರಾಮಾಯಣ–** ಮಹರ್ಷಿ ಸುತೀಕ್ಷ್ಣರು ಇದನ್ನು ರಚಿಸಿದ್ದಾರೆ. ಇದರಲ್ಲಿ ಒಂದು ಲಕ್ಷ ಇಪ್ಪತ್ತುಸಾವಿರ ಶ್ಲೋಕಗಳಿವೆ.

೨೩. **ಸ್ವೋಪಜ್ಞರಾಮಾಯಣ–** ಇದು ಮಹರ್ಷಿ ಅತ್ರಿಋಷಿಗಳಿಂದ ರಚಿತವಾದದ್ದು. ಇದರಲ್ಲಿ ೬೨ ಸಾವಿರ ಶ್ಲೋಕಗಳಿವೆ.

೨೪. **ರಾಮಾಯಣ ಮಹಾಮಾಲಾ–** ಇದು ಶಿವಪಾರ್ವತಿಯರ ಸಂವಾದ ರೂಪವಾಗಿದೆ. ಇದರಲ್ಲಿ ೧೦ ಸಾವಿರ ಶ್ಲೋಕಗಳಿವೆ.

೨೫. **ಸೌಹಾರ್ದರಾಮಾಯಣ–** ಮಹರ್ಷಿ ಶರಭಂಗರಚಿತವಾಗಿದೆ. ಶರಭಂಗರು ರಾಮನ ಕಾಲದಲ್ಲಿ ಇದ್ದವರು. ಅನುಗ್ರಹ ಪಡೆದವರು. ಇದರಲ್ಲಿ ೫೬ ಸಾವಿರ ಶ್ಲೋಕಗಳಿವೆ.

೨೬. **ಮಣಿರತ್ನ ರಾಮಾಯಣ–** ಮಹರ್ಷಿ ವಶಿಷ್ಠ ಹಾಗೂ ಅರುಂಧತಿಯರ ಸಂವಾದರೂಪವಾಗಿದೆ. ಇದರಲ್ಲಿ ೫೬ ಸಾವಿರ ಶ್ಲೋಕಗಳಿವೆ.

೨೭. **ಸೌರ್ಯರಾಮಾಯಣ–** ಇದು ಹನುಮಂತ ಹಾಗೂ ಸೂರ್ಯರ ಸಂವಾದರೂಪವಾಗಿದೆ. ಇದರಲ್ಲಿ ೬೨ ಸಾವಿರ ಶ್ಲೋಕಗಳಿವೆ.

೨೮. **ಚಾಂದ್ರೀರಾಮಾಯಣ–** ಚಂದ್ರ ಹಾಗೂ ಹನುಮಂತರ ಸಂವಾದರೂಪವಾಗಿದೆ. ೭೫ ಸಾವಿರ ಶ್ಲೋಕಗಳ ಕೃತಿ ಇದು.

೨೯. **ಮೈಂದರಾಮಾಯಣ–** ಇದು ಮೈಂದ, ಕೌರವ ಸಂವಾದರೂಪವಾಗಿದೆ. ಮೈಂದ ವಿವಿದರು ರಾಮಾಯಣ ಕಾಲದಲ್ಲಿದ್ದ ಕಪಿಗಳು.

೩೦. **ಸ್ವಾಯಂಭುವರಾಮಾಯಣ–** ಇದು ಬ್ರಹ್ಮ ನಾರದರ ಸಂವಾದರೂಪವಾಗಿದೆ. ಇದರಲ್ಲಿ ೧೮ ಸಾವಿರ ಶ್ಲೋಕಗಳಿವೆ.

೩೧. **ಸುಬ್ರಹ್ಮ ರಾಮಾಯಣ–** ಬ್ರಹ್ಮವಿರಚಿತ. ಇದರಲ್ಲಿ ೩೨ ಸಾವಿರ ಶ್ಲೋಕಗಳಿವೆ.

೩೨. **ಸುವರ್ಚಸ ರಾಮಾಯಣ–** ಇದು ಸೂರ್ಯಾವತಾರಿ ಸುಗ್ರೀವ, ತಾರೆಯರ ಸಂವಾದರೂಪವಾಗಿದೆ. ೫ ಸಾವಿರ ಶ್ಲೋಕಗಳಿವೆ.

೩೩. **ದೇವರಾಮಾಯಣ–** ತಂದೆ ಇಂದ್ರ, ಮಜಯಂತರ ಸಂವಾದರೂಪವಾಗಿದೆ. ಇದು ಒಂದು ಲಕ್ಷ ಶ್ಲೋಕದ ಕೃತಿ, ಜಯಂತ ರಾಮನಿಂದ ಉದ್ಧಾರ ಹೊಂದಿದ ಪಾದಾಭಿಮಾನಿ.

೩೪. **ಶ್ರವಣ ರಾಮಾಯಣ–** ಇದು ಜನಕರಾಜ ಹಾಗೂ ಇಂದ್ರದೇವರ ಸಂವಾದ ರೂಪವಾಗಿದೆ. ಇದೂ ಒಂದು ಲಕ್ಷ ಶ್ಲೋಕ ಹೊಂದಿದೆ.

೩೫. **ದುರಂತರಾಮಾಯಣ–** ವಶಿಷ್ಠ ಹಾಗೂ ಜನಕರ ಸಂವಾದರೂಪವಾಗಿದೆ. ಇದರಲ್ಲಿ ೬೧ ಸಾವಿರ ಶ್ಲೋಕಗಳಿವೆ.

೩೬. **ನಾರಾಯಣ ಚಂಪೂ–** ಇದು ಶಿವನಾರದ ಸಂವಾದರೂಪವಾಗಿದೆ. ೧೫ ಸಾವಿರ ಶ್ಲೋಕಗಳಿವೆ.

ಸಂಸ್ಕೃತದಲ್ಲಿ ರಾಮಾಯಣ ಸಾಹಿತ್ಯ

ವೇದದಲ್ಲಿ, ಉಪನಿಷತ್ತುಗಳಲ್ಲಿ ರಾಮಾಯಣ ಕಥೆ ನೇರವಾಗಿ ಬಂದಿದೆ. ಹದಿನೆಂಟು ಪುರಾಣಗಳು, ಮಹಾಭಾರತಾದಿಗಳಲ್ಲಿ ಅಪಾರವಾಗಿದೆ. ನೂರು ಕೋಟಿ ಶ್ಲೋಕದ ಮೂಲ ರಾಮಾಯಣ. ಮೂಲ ಆಕರ. ವಾಲ್ಮೀಕಿಯ ರಾಮಾಯಣ ೨೪ ಸಾವಿರ ಶ್ಲೋಕದ ಮಹಾಕಾವ್ಯ . ಆದಿಕಾವ್ಯ . ವೇದದ ವ್ಯಾಖ್ಯಾನ, ಗಾಯತ್ರಿಯ ಭಾಷ್ಯ . ಇದು ದೇಶವ್ಯಾಪಿ ಕೃತಿ. ವಾಲ್ಮೀಕಿ ರಾಮಾಯಣಕ್ಕೆ ಹತ್ತು ವ್ಯಾಖ್ಯಾನಗಳು, ನೂರಾರು ಅನುವಾದಗಳು ಉಪಲಬ್ಧವಿದೆ.

ಸಂಸ್ಕೃತದಲ್ಲಿ ಭಾಸನ ''ಪ್ರತಿಮಾ'' ಅಭಿಷೇಕ ನಾಟಕಗಳು ಪ್ರಖ್ಯಾತ. ಕಾಳಿದಾಸನ ''ರಘುವಂಶ'' ಪ್ರಸಿದ್ಧ ಮಹಾಕಾವ್ಯ . ಜಗನ್ಮಾನ್ಯಕೃತಿ. ಇಲ್ಲಿಯ ಉಪಮೆ, ಸೂಕ್ತಿಗಳು ಅದ್ಭುತ. ವಂಶದ ಚರಿತ್ರೆಯೊಂದಿಗೆ ಶ್ರೀರಾಮನ ಆದರ್ಶ ಬಿಂಬಿಸುವ ಕಾವ್ಯ .

ಭೋಜನ 'ಚಂಪೂರಾಮಾಯಣ' ಜನಪ್ರಿಯವಾದ ಚಂಪು. ನೂತನಕಲ್ಪನೆ, ರಮ್ಯವರ್ಣನೆ, ಮಧುರ ಶೈಲಿಯಲ್ಲಿದೆ. ಸುಂದರಕಾಂಡದ ವರೆಗೆ ಭೋಜ ರಚಿಸಿರುವ, ಉಳಿದ ಭಾಗವನ್ನು ಲಕ್ಷ್ಮಣಸೂರಿ ಪೂರೈಸಿದ್ದಾನೆ. ಇಲ್ಲಿಯ ಪ್ರಾಸಬದ್ಧ, ಗದ್ಯ ಮನಮೋಹಕ. ''ಮೆಂಟ'' ಕವಿಯ ನೂರು ಸರ್ಗಗಳ ಮಹಾಕಾವ್ಯವಿದೆ.

ಸಿಂಹಳದ ಕವಿ ಕುಮಾರದಾಸ. ಅವನ ಜಾನಕೀಹರಣ ಇದೊಂದು ಸುಂದರಕಾವ್ಯ . ಕಾಳಿದಾಸನ ಸ್ನೇಹಿತ ಕುಮಾರದಾಸ.

ಭಟ್ಟಿಯ ''ರಾವಣವಧ.'' ಇದು ಭಟ್ಟಿಕಾವ್ಯವೆಂದೇ ಪ್ರಸಿದ್ಧವು. ಅಲಂಕಾರ,

ವ್ಯಾಕರಣದ ಸೂತ್ರಗಳು, ಪ್ರತಿಶ್ಲೋಕದಲ್ಲಿ ಹತ್ತಾರುಕ್ರಿಯಾಪದಗಳ ಪ್ರಯೋಗ ಬಹಳಿವೆ. ಇದು ಪಂಡಿತರ ಕಾವ್ಯ . ಧಾತುಕಾವ್ಯ . ಪ್ರಾಯೋಗಿಕ ಕೃತಿ.

''ಅಭಿನಂದನ ರಾಮಚರಿತ'' ೩೬ ಸರ್ಗದ ಮಹಾಕಾವ್ಯ . ಈತ ಬಂಗಾಲದ ಅಜ್ಞಾತಕವಿ. ಇಲ್ಲಿ ಪ್ರಕೃತಿಸೌಂದರ್ಯ ತುಂಬಿದೆ.

ಮತ್ತೊಂದು ಮಹಾಕಾವ್ಯ ''ರಘುವೀರಚರಿತ'' ಇದರ ಕರ್ತೃ ಕೋಲಾಚಲ ಮಲ್ಲಿನಾಥನೆಂದು ಹಲವರು. ೧೭ ಸರ್ಗದ ಮಹಾಕಾವ್ಯ . ರಮಣೀಯ ಶೈಲಿ.

ದ್ವಿಸಂಧಾನ ರಾಮಕಾವ್ಯಗಳೂ ಅನೇಕ ಇವೆ. ರಾಮಾಯಣ ಮಹಾಭಾರತ ಪರವಾಗಿ ಅನೇಕ ಕೃತಿಗಳಿವೆ. ಧನಂಜಯನ ''ರಾಘವ ಪಾಂಡವೀಯ,'' ಮಾಧವಭಟ್ಟನ ''ರಾಘವ ಪಾಂಡವೀಯಮ್,'' ಹರದತ್ತ ಸೂರಿಯ ''ರಾಘವ-ನೈಷಧೀಯಮ್,'' ಚಿದಂಬರನ ''ರಾಘವ ಪಾಂಡವೀಯ,'' ವೆಂಕಟಾಧ್ವರಿಯ ''ಯಾದವ ರಾಘವೀಯಮ್, ದೈವಜ್ಞಸೂರ್ಯ ಕವಿಯ ''ರಾಮಕೃಷ್ಣ ವಿಲೋಮಕಾವ್ಯ'' ಮೊದಲಾದ ಕೃತಿಗಳು ಪ್ರಸಿದ್ಧವಾಗಿವೆ.

ರಾಮಾಯಣದ ಸಂದೇಶಕಾವ್ಯಗಳೂ ಅನೇಕ. ವೆಂಕಟದೇಶಿಕರ ''ಹಂಸ ಸಂದೇಶ, ಕಪಿದೂತ,'' ವಾಸುದೇವನ ಭ್ರಮರ ಸಂದೇಶ, ಕೃಷ್ಣಚಂದ್ರನ ''ಚಂದ್ರದೂತ,'' ಮೊದಲಾದ ಅನೇಕ ಖಂಡಕಾವ್ಯಗಳಿವೆ.

ರಾಮಸ್ತೋತ್ರಪ್ರಪಂಚ ಅಪಾರವಾಗಿದೆ. ಸ್ತೋತ್ರಕಾವ್ಯಗಳು ನೂರಾರು. ಶ್ರೀರಾಮಭದ್ರನ ''ಶ್ರೀರಾಮಕರ್ಣ ರಸಾಯನ,'' ''ರಾಮಚಾಪಸ್ತವ'' ''ರಾಮಬಾಣಸ್ತವ'' ''ರಾಮತೂಣೀರವಸ್ತವ'' ''ರಾಮಪ್ರಸಾದಸ್ತವ'' ''ರಾಮಗೀತಾ'' ''ರಾಮಾಷ್ಟಕ'' ಬುಧಕೌಶಿಕರ ''ರಾಮರಕ್ಷಾಸ್ತೋತ್ರ '' ಬ್ರಹ್ಮಾನಂದರ ''ರಾಮಾಷ್ಟಕ'' ''ಇಂದ್ರಕೃತ ರಾಮಸ್ತೋತ್ರ'' ವರವರಮುನಿಯ ''ರಾಮಮಂಗಲಾಶಾಸನ'' ಯಾಮುನಾಚಾರ್ಯರ ''ಶ್ರೀರಾಮಪ್ರೇಮಾಷ್ಟಕ'' ವಾಲ್ಮೀಕಿ ರಾಮಾಯಣಕ್ಕೆ ಹತ್ತು ಸಂಸ್ಕೃತ ವ್ಯಾಖ್ಯಾನಗಳು ಇದ್ದಂತೆ, ಕಾಳಿದಾಸನ ರಘುವಂಶಕ್ಕೆ ಹದಿನಾರು ವ್ಯಾಖ್ಯಾನಗಳಿವೆ. ಚಂಪೂರಾಮಾಯಣಕ್ಕೆ ಹದಿಮೂರು ಸಂಸ್ಕೃತ ವ್ಯಾಖ್ಯಾನಗಳಿವೆ.

ನಾರಾಯಣ ಪಂಡಿತಾಚಾರ್ಯರ ಸಂಗ್ರಹ ರಾಮಾಯಣ, ಶ್ರೀಮಧ್ವರ ''ಮಧ್ವರಾಮಾಯಣ'' ಪ್ರಸಿದ್ಧ ಬೃಹತ್ ಕೃತಿಗಳು.

ಸಂಸ್ಕೃತ ರಾಮಾಯಣ ನಾಟಕ ಪರಂಪರೆ ದೊಡ್ಡದಾಗಿದೆ. ಕ್ರಿ.ಶ. ಪೂರ್ವದಲ್ಲಿ ಭಾಸ, ಪ್ರತಿಮಾ, ಅಭಿಷೇಕ, ಯಜ್ಞಫಲ''ವೆಂಬ ಮೂರು ನಾಟಕ ಬರೆದಿರುವನು. ಅತ್ಯಂತ ಜನಪ್ರಿಯ ನಾಟಕವೆಂದರೆ ಭವಭೂತಿಯ ''ಉತ್ತರರಾಮಚರಿತೆ.'' ಏಳು ಅಂಕಗಳ ಕರುಣರಸದ ಭವ್ಯಕೃತಿ. ಎಲ್ಲ ಭಾಷೆಗಳಲ್ಲಿ ನೂರಾರು ಅನುವಾದ ಕಂಡ ಪ್ರಸಿದ್ಧಕೃತಿ. ಮುರಾರಿ ಕವಿಯ ''ಅನರ್ಘ್ಯ ರಾಘವ'' ಏಳು ಅಂಕಗಳ ನಾಟಕ. ಭವಭೂತಿಯ ''ಮಹಾವೀರಚರಿತ,'' ಉತ್ತಮ ನಾಟಕ. ಕೇರಳದ ಶಕ್ತಿಭದ್ರನ ''ಆಶ್ಚರ್ಯ ಚೂಡಾಮಣಿ'' ಜಯದೇವನ ''ಪ್ರಸನ್ನ ರಾಘವ,'' ರಾಮಭದ್ರ-ದೀಕ್ಷಿತನ ''ಜಾನಕೀಪರಿಣಯ'' ಯಶೋವರ್ಮನ ''ರಾಮಾಭ್ಯುದಯ'' ಇವು ರಾಮಾಯಣದ ಪ್ರಸಿದ್ಧ ನಾಟಕಗಳು.

ಚಾಮರಾಜನಗರದ ಸೀತಾರಾಮಶಾಸ್ತ್ರಿಗಳ ''ಸೀತಾರಾವಣ ಸಂವಾದ ಝರಿ'' ಕಾವ್ಯಸುಂದರವಾಗಿದೆ. ನಾಗರಾಜನ್‌ರವರ ''ಸೀತಾಸ್ವಯಂವರಂ'' ರೇವಾ-ಪ್ರಸಾದರ ''ಸೀತಾಚರಿತಂ,'' ಅಭಿರಾಜೇಂದ್ರರ ''ಜಾನಕೀ ಜೀವನಂ'' ಬಲಭದ್ರಶಾಸ್ತ್ರಿಗಳ ''ದೂತಾಂಜನೇಯಂ'' ಪ್ರಸಿದ್ಧ ಕೃತಿಗಳು. ಥಾಯ್‌ಲೆಂಡಿನ ರಾಮಾಯಣವನ್ನು ಶ್ರೀಸತ್ಯವ್ರತಶಾಸ್ತ್ರಿಗಳು ಸಂಸ್ಕೃತ ಬೃಹತ್ ಕಾವ್ಯವಾಗಿ ಅನುವಾದಿಸಿದ್ದಾರೆ.

ಪಾಂಡ್ಯದೇಶದ ಹಸ್ತಿಮಲ್ಲನ ''ಮೈಥಿಲೀಕಲ್ಯಾಣ'' ಸುಂದರ ಕೃತಿ. ೧೭ನೇ ಶತಮಾನದ ಭಾಸ್ಕರಕವಿಯ ''ಉನ್ಮತ್ತರಾಘವಮ್.'' ಸೀತೆಯ ವಿರಹದಲ್ಲಿ ಶ್ರೀರಾಮನು ಉನ್ಮತ್ತ, ಉನ್ಮಾದಿತನಾಗಿರುವನೆಂದೇ ಹಾಗೆ ಹೆಸರಿಸಿದ. ದಿಙ್ನಾಗನ, ಆರು ಅಂಕದ ''ಕುಂದಮಾಲಾ'' ನಾಟಕ, ಹಾಗೂ ದಾಮೋದರ ಮಿಶ್ರನ ನಾಟಕ ''ಹನುಮನ್ನಾಟಕ.'' ಇದಕ್ಕೆ 'ಮಹಾನಾಟಕ' ಎಂದೂ ಕರೆಯುವರು. ಇದು ಪ್ರಸಿದ್ಧ, ಮಾನ್ಯಕೃತಿ. ಇದು ಹನುಮಂತನೇ ಬರೆದನೆಂದು ವದಂತಿ. ಶ್ರೀರಾಘವೇಂದ್ರಸ್ವಾಮಿಗಳೇ ಮೊದಲಾದವರು ತಮ್ಮ ವ್ಯಾಖ್ಯಾನದಲ್ಲಿ ಇದನ್ನು ಉಲ್ಲೇಖಿಸಿರುವರು. ಇದು ಹದಿನಾಲ್ಕು ಅಂಕದ ಪೂರ್ಣ ರಾಮಾಯಣ ಸಂಗ್ರಹಿಸಿದ ನಾಟಕ. ಶಕ್ತಿಭದ್ರನ ಆಶ್ಚರ್ಯಚೂಡಾಮಣಿ. ಕನ್ನಡಾನುವಾದ ಹೊಂದಿದ ನಾಟಕ.

ಅಲಂಕಾರಿಕನಾದ ರಾಜಶೇಖರನ ''ಬಾಲರಾಮಾಯಣಮ್'' ಎಂಬ ಹತ್ತು ಅಂಕಗಳ ನಾಟಕ. ವಿಸ್ತಾರವಾಗಿದೆ. ಒಂದೊಂದು ಅಂಕಕ್ಕೂ ಒಂದೊಂದು ಹೆಸರುಗಳಿವೆ. ೬೩ ಪಾತ್ರಗಳಿರುವ ಕೃತಿ. ರಾಮಚಂದ್ರನ ''ರಘುವಿಲಾಸ'' ನಾಟಕ.

ಮನನೀಯವಾಗಿದೆ. ರಾಮಾಭ್ಯುದಯವೂ ಅವನದೇ ಕೃತಿ. ಚಾಲುಕ್ಯರಾಜನ ಕವಿಯಾದ ಸೋಮೇಶ್ವರು ''ಉಲ್ಲಾಸರಾಘವಮ್'' ಎಂಬ ನಾಟಕ ಬರೆದಿರುವ. ವಿದರ್ಭದ ಜಯದೇವ ರಚಿಸಿದ ನಾಟಕ ''ಪ್ರಸನ್ನ ರಾಘವಮ್'' ನಾಟಕ, ಕ್ಷೀರಸ್ವಾಮಿಯ ''ರಾಘವಾಭ್ಯುದಯ'' ನಾಟಕಗಳು ಮನೋಹರವಾಗಿವೆ. ಹೊಸ ಹೊಸ ಕಲ್ಪನೆಗಳು ಇವುಗಳಲ್ಲಿ ಒಡಮೂಡಿವೆ. ಹೊಸ ರೀತಿಯಲ್ಲಿ ಹೊಸ ಶೈಲಿಯ ನಾಟಕಗಳಿವು.

ಹಿಂದೀರಾಮಾಯಣಗಳು

ಹಿಂದೀಭಾಷೆಯಲ್ಲಿ ರಾಮಸಾಹಿತ್ಯ ಅಪಾರವಾಗಿದೆ.

ಮೊದಲಕೃತಿ ಚಂದಬರದಾಯಿಯ ''ಪೃಥ್ವಿರಾಜರಾಸೋ.'' ಹಿಂದಿಯಲ್ಲಿ ರಾಮಭಕ್ತಿಸಾಹಿತ್ಯದ ಕಾವ್ಯನಿರ್ಮಾಪಕರು ಅನೇಕರು. ''ಗರೀಬದಾಸ, ರಜ್ಜಬ್, ಸುಂದರದಾಸ, ಜಗಜ್ಜೀವನ ಸಾಹೇಬ, ಪಲಟೂದಾಸ, ದರಿಯಾಸಾಹೇಬ್, ದೇವಕೀನಂದನ ಸಾಹೇಬ್, ''ರಾಮಸನೇಹಿ, ಪರಮಾನಂದದಾಸ, ನಂದದಾಸ, ಹಿತಹರಿವಂಶ ಇವರೆಲ್ಲ ರಾಮಕಾವ್ಯ ನಿರ್ಮಾಪಕರು.

ಆದರೆ ಇಂದಿಗೂ ಜನರ ಮನೆಮನೆಯಲ್ಲಿ ಜೀವಂತವಾದ ಮಹಾಕಾವ್ಯ, ತುಲಸೀದಾಸರ ''ರಾಮಚರಿತಮಾನಸ.'' ''ವಾಲ್ಮೀಕಿ ರಾಮಾಯಣ''ದ ನಂತರ ವಿಶ್ವವ್ಯಾಪಕತೆ ಪಡೆದ ಕಾವ್ಯ. ಅದ್ಭುತವಾದ ಉತ್ತರಭಾರತದ ಅತಿಜನಪ್ರಿಯ ರಾಮಾಯಣ. ಅವಧಿ ಭಾಷೆಯಲ್ಲಿದೆ. ತುಲಸೀದಾಸರು ''ಕವಿತಾವಲಿ'' ಗೀತಾವಲಿ, ರಾಮಾಜ್ಞಾ, ಬರವೈರಾಮಾಯಣ, ಜಾನಕೀಮಂಗಲ, ವಿನಯ-ಪತ್ರಿಕಾ'' ಮೊದಲಾದ ರಾಮಕಾವ್ಯ ರಚಿಸಿರುವರು. ಕೇಶವದಾಸರ ''ರಾಮ-ಚಂದ್ರಿಕಾ'' ವ್ರಜರಾಜನ ರಾಮರಸಲಹರಿ ಪ್ರಮುಖಕೃತಿಗಳು.

ರಾಮಚಂದ್ರ ಪಾಂಡೆಯವರ ''ಪಿಯೂಷಧಾರಿ'' ಜ್ವಾಲಾಪ್ರಸಾದಮಿಶ್ರ, ಲೋಕಮಣಿದಾಹಾಲ್, ರಾಮತೇಜ ಪಾಂಡೆಯರ ರಾಮಕಾವ್ಯಧಾರೆ ಅಪಾರವಾಗಿದೆ. ''ತುಲಸೀರಾಮಾಯಣ'' ಹಾಗೂ ಉಳಿದ ರಾಮಾಯಣಗಳ ತೌಲನಿಕ ಅಧ್ಯಯನ ಮಾಡಿ ಇಂದಿಗೆ ಒಂದುನೂರಾಐವತ್ತು ಪಿಎಚ್.ಡಿ. ಪ್ರಬಂಧಗಳು ನಿರ್ಮಿತವಾಗಿವೆ.

ಮೈಥಿಲೀಶರಣಗುಪ್ತರ ''ಸಾಕೇತ'' ಮಹಾಕಾವ್ಯ, ''ಪಂಚವಟಿ'' ಖಂಡ-ಕಾವ್ಯಗಳು ಜನಪ್ರಿಯವಾಗಿವೆ. ರಾಮಚರಿತಮಾನಸದ ನಂತರ ಅತಿ ಪ್ರಸಿದ್ಧಕೃತಿ

ಇವು. ರಾಮಕಥೆಯನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ವಿಮರ್ಶಾತ್ಮಕವಾಗಿ ನೂರಾರು ಕೃತಿಗಳು ಹಿಂದಿಯಲ್ಲಿ ಮೂಡಿಬಂದಿವೆ. ಭಾರತಭೂಷಣ ಅಗ್ರವಾಲರ ''ವೈದೇಹಿ ವನವಾಸ'' ''ರಾಮರಾಜ್ಯ , ಅಗ್ನಿಲೀಕ ರಾವಣಕಾ ವಿಕ್ಷೋಭ, ಅಗ್ನಿಪಥ, ಮೆಹತಾರವರ ಭೂಮಿಜಾ, ಸಿಯಾವಿಜನವಾಸ'' ಚಿತ್ರಕೂಟ, ಹರದಯಾಲರ ''ರಾವಣ ಮಹಾಕಾವ್ಯ ,'' ಹಿಂದಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ರಾಮಕಥೆಯ ಬಗ್ಗೆ ವಿವಿಧ ಪುಸ್ತಕಗಳು ಬರೆಯಲ್ಪಟ್ಟಿವೆ.

ಗೋರಖಪುರದ ಗೀತಾಪ್ರೆಸ್‌ರವರು ವಾಲ್ಮೀಕಿ ರಾಮಾಯಣವನ್ನು ಹಿಂದೀ, ಇಂಗ್ಲೀಷ್ ಮೊದಲಾದ ಭಾರತೀಯ, ವಿದೇಶೀಯ ಎಲ್ಲ ಭಾಷೆಗಳಲ್ಲಿ ಅನುವಾದಿಸಿ, ಪ್ರಕಾಶಿಸಿದ್ದಾರೆ. ದೇಶದಲ್ಲಿ ಪ್ರಚಾರ, ಪ್ರಸಾರ ಮಾಡಿದ್ದಾರೆ.

ಉಡಿಯಾ ರಾಮಾಯಣಗಳು

೧) ಓಡಿಸಾ ಪ್ರಾಂತದ ಆಡುಭಾಷೆ ಉಡಿಯಾ. ಈ ಭಾಷೆಯ ಆದಿಕವಿ ಶಾರಲಾದಾಸ. ಅವನ ಮಹಾಕೃತಿ ''ವಿಲಂಕಾರಾಮಾಯಣ.'' ಇದು ವಿಲಕ್ಷಣಕೃತಿ. ಹಿಂದಿನ ರಾಮಾಯಣಗಳಿಗಿಂತ ವಿಭಿನ್ನಕೃತಿ. ಇದು ಲೋಕಪ್ರಿಯ– ಕೃತಿ. ಶಾರಲಾದಾಸನು ಜಗನ್ನಾಥಪುರಿಯ ರಾಜನಾದ ಗಜಪತಿ ಗೌಡೇಶ್ವರ ಕಪಿಲೇಂದ್ರದೇವನ ಕಾಲದವನು. ೧೪೫೨ರಲ್ಲಿ ಇದ್ದವ. ''ಶಾರಲಾ'' ಈ ಕವಿಯ ಆರಾಧ್ಯದೇವಿ. ಅವಳ ದಾಸನಿವನು. ಈ ವಿಲಂಕಾರಾಮಾಯಣ ಪೂರ್ವಖಂಡ, ಉತ್ತರಖಂಡವೆಂಬ ಎರಡು ಖಂಡಗಳಲ್ಲಿ ವಿಭಕ್ತವಾಗಿದೆ. ಶಿವಪಾರ್ವತಿಯರ ಸಂವಾದ ರೂಪದಲ್ಲಿದೆ. ಲಂಕೆಗೆ ವಿಲಂಕಾ ಎಂದು ಹೆಸರು. ಇದು ವಿಲಂಕಾ ರಾಮಾಯಣ.

(೨) ''ಜಗಮೋಹನ ರಾಮಾಯಣ. ಜಗನ್ನಾಥನ ಮಂದಿರದಲ್ಲಿ ಕುಳಿತು ಮಹಾಕವಿ ಬಲರಾಮದಾಸರು ರಚಿಸಿದ ಕೃತಿ ಜಗಮೋಹನ ರಾಮಾಯಣ. ಸರಲ ಹಾಗೂ ಸರಸಭಾಷೆಯ ಕೃತಿ ಇದು. ಇದನ್ನು ''ದಾಂಡೀರಾಮಾಯಣ'' ವೆಂದೂ ಕರೆಯುವರು. ಚೈತನ್ಯರ ಸಮಕಾಲೀನ ಕವಿ ಈ ಬಲರಾಮದಾಸ.

(೩) ''ವಿಚಿತ್ರ ರಾಮಾಯಣ''– ಉಡಿಯಾಭಾಷೆಯಲ್ಲಿಯ ಮಹಾಕಾವ್ಯ . ಕವಿ ''ವಿಶ್ವಾನ ಖಿಂಟಿಯಾ'' ರಚಿಸಿದ್ದಾನೆ. ಇದು ಗೇಯ ಕಾವ್ಯ . ಇದು ವಿವಿಧ ಛಂದಸ್ಸುಗಳಲ್ಲಿ ರಚಿತವಾಗಿದೆ. ವಾಲ್ಮೀಕಿಯ ರಾಮಾಯಣ ಕಥೆ ಅವಲಂಬಿಸಿ ರಚಿಸಲ್ಪಟ್ಟಿದೆ.

(೪) ಚಿಕಟಿರಾಮಾಯಣ– ಲೇಖಕ ಚಿಕಟಿ ರಾಜೇಂದ್ರಕವಿ. ಇದು ಪ್ರಸಿದ್ಧಕೃತಿ.

(೫) ಪೀತಾಂಬರಕೃತ ''ದಾಂಡೀರಾಮಾಯಣ.

(೬) ಪಟ್ಟನಾಯಕ ರಾಮಾಯಣ– ಶ್ರೀಕೃಷ್ಣಚಂದ್ರ ಪಟ್ಟನಾಯಕನಿಂದ ರಚಿತವಾಗಿದೆ.

(೭) ವೈದೇಹೀಶವಿಲಾಸ– ಲೇಖಕ ಕವಿರಾಜ ಉಪೇಂದ್ರ ಭಂಜ. ಅಲಂಕಾರಗಳಿಂದ ತುಂಬಿದ ಪ್ರೌಢ, ಸುಂದರಕಾವ್ಯ .

(೮) ಧನಂಜಯ ಭಂಜನನು ರಚಿಸಿದ ರಘುನಾಥವಿಲಾಸ, ಅರ್ಜುನದಾಸನ ''ರಾಮವಿಭಾ'' ಪ್ರಸಿದ್ಧವಾಗಿವೆ.

(೯) ಮಹೇಶ್ವರದಾಸನ ಟೀಕಾರಾಮಾಯಣ. ವಾರಾನಿಧಿಯ ''ವಿಲಂಕಾ ರಾಮಾಯಣ.''

ತಮಿಳು ರಾಮಾಯಣಗಳು

ಕಂಬರಾಮಾಯಣ– ತಮಿಳುಭಾಷೆಯಲ್ಲಿ ಮಹಾಕವಿ ''ಕಂಬನ್'' ರಚಿಸಿದ ರಾಮಾಯಣವಿದು.

ಮೂವರಲ್ಲದೇ ದಶರಥನಿಗೆ ೬೦ ಸಾವಿರ ಮಡದಿಯರ ಉಲ್ಲೇಖವಿದೆ. ಹಲವು ನವೀನತೆಯ ವರ್ಣನವಿದೆ.

ಕಂಬನ್ ತಮಿಳಿನ ಕವಿ. ತಂಜಾವೂರುಜಿಲ್ಲೆಯ ತಿರುವಳಂದೂರಿನವ. ೧೧೩೮ ರಿಂದ ೧೧೯೭ರ ವರೆಗೆ ಇದ್ದವ. ಕುಲೋತ್ತುಂಗರಾಜನ ಆಸ್ಥಾನಕವಿ. ೧೦,೫೦೦ ಪದ್ಯಗಳಿವೆ. ತಮಿಳಿನಲ್ಲಿ ಅದ್ಭುತಕೃತಿ.

ತೆಲಗು ರಾಮಾಯಣಗಳು

ದ್ರಾವಿಡಭಾಷೆಯ ಪರಿವಾರದಲ್ಲಿ ಸೇರಿದ ತೆಲಗು. ಆಂಧ್ರ ಪ್ರದೇಶದ ಆಡುಭಾಷೆ. ತೆಲಗು ಭಾಷೆಯಲ್ಲಿ ಸಣ್ಣದೊಡ್ಡ ರಾಮಾಯಣಕೃತಿಗಳು ಸುಮಾರು ಮೂರುನೂರಕ್ಕೂ ಹೆಚ್ಚು ಇವೆ. ತೆಲಗು ಭಾಷೆಯಲ್ಲಿ ಹನ್ನೊಂದನೇ ಶತಮಾನ-ದಿಂದಲೇ ರಾಮಾಯಣ ಸಾಹಿತ್ಯ ನಿರ್ಮಾಣವಾಗಲು ಆರಂಭವಾಗಿದೆ. ''ರಂಗನಾಥರಾಮಾಯಣ'' ತೆಲಗು ಭಾಷೆಯಲ್ಲಿ ರಚಿತ ಪ್ರಸಿದ್ಧ ರಾಮಾಯಣ. ತುಂಬಾ

ಆಕರ್ಷಕ ಶೈಲಿಯಲ್ಲಿ ರಚಿತವಾಗಿದೆ. ೧೩೮೦ರಲ್ಲಿ ಶ್ರೀಗೋನಬುದ್ಧ- ರಾಜನು ಈ ಲೋಕಪ್ರಿಯ ರಂಗನಾಥ ರಾಮಾಯಣ ರಚಿಸಿದ್ದಾನೆ. ಇದು ದೇಶಜ ಛಂದಸ್ಸಿನಲ್ಲಿದೆ. ತೆಲಗುಭಾಷೆಯಲ್ಲಿ ಪ್ರಾಚೀನಕೃತಿ ಇದು. ಕವಿಕೋನಬುದ್ಧರಾಜ ಸಂಸ್ಕೃತ ಹಾಗೂ ತೆಲುಗಿನಲ್ಲಿ ಪ್ರಖ್ಯಾತ ಪಂಡಿತ. ಹಾಗಾಗಿ ಅವನ ಕೃತಿ ಗಂಭೀರವಾಗಿದೆ. ಉಕ್ತಿವೈಚಿತ್ರ್ಯ ತುಂಬಿವೆ. ರಾಮಕಥೆಯಲ್ಲಿ ಹಲವು ಅಪೂರ್ವತೆಗಳನ್ನು ತಿಳಿಸಿರುವ. ರಾಮಾಯಣದಲ್ಲಿ ಉತ್ತರಕಾಂಡವಿಲ್ಲ. ರಾಮಪಟ್ಟಾಭಿಷೇಕಕ್ಕೇ ಕಾವ್ಯಮುಕ್ತಾಯವಾಗಿದೆ. ೧೭,೨೦೦ ದ್ವಿಪದಿಗಳಲ್ಲಿ ರಚಿತವಾಗಿದೆ.

೨) ೧೪ನೇ ಶತಮಾನದಲ್ಲಿ ಹುಳ್ಳಕ್ಕಿ ಭಾಸ್ಕರ ರಚಿಸಿದ ಭಾಸ್ಕರ ರಾಮಾಯಣ. ಆರು ಕಾಂಡಗಳ ಚಂಪೂಕಾವ್ಯ. ಇದೇ ಸಂದರ್ಭದಲ್ಲಿ ಮೊಲ್ಲ ಎಂಬ ಕುಂಬಾರಸ್ತ್ರೀ ಜನಪ್ರಿಯವಾದ ''ಮೊಲ್ಲ ರಾಮಾಯಣ'' ರಚಿಸಿದ್ದಾಳೆ. ಇವಳೊಬ್ಬ ಕುಂಬಾರಸ್ತ್ರೀ. ಚಮತ್ಕಾರಪೂರ್ಣವಾಗಿ ಈ ಕೃತಿ ರಚಿಸಿದ್ದಾಳೆ.

೩) ೧೬ನೇ ಶತಮಾನದಲ್ಲಿ ''ಕಟ್ಟಾ ವರದರಾಜ'' ರಾಮಾಯಣ ಮಹಾಕಾವ್ಯ ರಚಿಸಿರುವ. ೨೩,೧೨೦ ದ್ವಿಪದಿಗಳ ಕಾವ್ಯವಿದು.

೪) ಕೃಷ್ಣದೇವರಾಜನ ಅಷ್ಟದಿಗ್ಗಜಗಳಲ್ಲಿ ಒಬ್ಬನಾದ ಅಯ್ಯಲರಾಜು-ರಾಮಭದ್ರುಡು ''ರಾಮಾಭ್ಯುದಯಂ'' ಕಾವ್ಯ ಬರೆದಿರುವನು.

೫) ತಿರುಪತಿಯ ಅನ್ನಮಾಚಾರ್ಯರು ರಚಿಸಿದ ''ಅನ್ನಮಯ್ಯ ರಾಮಾಯಣ,'' ಕೊರವಿ ಸತ್ಯನಾರಾಯಣನ ''ರಾಮಾಯಣ'' ಮಹಾಕಾವ್ಯ, ತಂಜಾವೂರಿನ ರಘುನಾಥನಾಯಕನ ''ರಘುನಾಥ ರಾಮಾಯಣ.''

೬) ೧೩ನೇ ಶತಕದಲ್ಲಿ ತಿಕ್ಕನನ ''ನಿರ್ವಚನೋತ್ತರ ರಾಮಾಯಣಂ'' ಹತ್ತುಕಾಂಡಗಳ ಕಾವ್ಯ.

ಕಂಕಂತಿ ಪಾಪರಾಜು ವಾಲ್ಮೀಕಿ ರಾಮಾಯಣ ಅನುವಾದ ಮಾಡಿ ಕಾವ್ಯ ರಚಿಸಿರುವ. ಪುಲ್ಲೇಲು ರಾಮಚಂದ್ರುಡು ವಾಲ್ಮೀಕಿ ರಾಮಾಯಣದ ಪ್ರತಿಶಬ್ದಕ್ಕೂ ವ್ಯಾಖ್ಯಾನ ರಚಿಸಿದ್ದಾನೆ. ವಿಶ್ವನಾಥ ಸತ್ಯನಾರಾಯಣ ರಚಿಸಿದ ''ರಾಮಾಯಣ ಕಲ್ಪವೃಕ್ಷಮು.'' ಅಪ್ಪಾಕವಿಯ ''ಚಮತ್ಕಾರ ರಾಮಾಯಣ,'' ಆಕುಂಡಿ ವೇಂಕಟಶಾಸ್ತ್ರಿಯ ''ಮಣಿಕೊಂಡ ರಾಮಾಯಣ'' ಜನಮಂಚಿ ಶೇಷಾದ್ರಿ-ಶರ್ಮರ ''ಧರ್ಮಸಾರ ರಾಮಾಯಣ'' ೬ ಕಾಂಡ, ೫ ಸಾವಿರಪದ್ಯಗಳ ಕಾವ್ಯ.

ಬಂಗಾಲಿ ರಾಮಾಯಣಗಳು

ಕೃತ್ತಿವಾಸ ರಾಮಾಯಣ– ಕೃತ್ತಿವಾಸ ಬಂಗಾಲದ ವಿದ್ವಾಂಸ. ಮಹಾಕವಿ. ತುಳಸೀದಾಸರಿಗಿಂತ ನೂರು ವರ್ಷ ಮೊದಲೇ ಆಗಿದ್ದಾರೆ. ಪೂರ್ವಭಾರತದಲ್ಲಿ ಶ್ರೀರಾಮಕಥೆಯ ಲೀಲೆಗಳನ್ನು ಪ್ರಚಾರ ಮಾಡಿದವನು. ೧೪೩೩ರಲ್ಲಿ ಜನ್ಮ. ಗೌಡೇಶ್ವರನ ಪ್ರಾರ್ಥನೆಯಂತೆ ರಾಮಾಯಣವನ್ನು ವಂಗಭಾಷೆಯಲ್ಲಿ ಬರೆದ. ಅದೇ ಕೃತ್ತಿವಾಸ ರಾಮಾಯಣ. ಕೃತ್ತಿವಾಸ ಸಂಸ್ಕೃತ ಮಹಾಕವಿ ಶ್ರೀಹರ್ಷನ ವಂಶಜನೆಂದು ಹೇಳಿಕೊಂಡಿರುವ. ಹಿಂದಿನ ಅನೇಕ ರಾಮಾಯಣಗಳ ಕಥೆ ಸಂಗ್ರಹಿಸಿ ಹೇಳಿರುವ. ಸಂಸ್ಕೃತ ಪಂಡಿತ. ತಂದೆ ವನಮಾಲೀ ಓಝಾ. ಕೃತ್ತಿವಾಸ ರಾಮಾಯಣ ಬಂಗಾಲದಲ್ಲಿ ಅತಿಜನಪ್ರಿಯಕೃತಿ. ಇದು ಐತಿಹಾಸಿಕ ಕೃತಿ. ಮುಸಲ್ಮಾನರ ಅಮಾನುಷ ಬರ್ಬರತೆ, ದಬ್ಬಾಳಿಕೆಯನ್ನೂ ರಾಕ್ಷಸರ ದಬ್ಬಾಳಿಕೆಗೆ ಹೋಲಿಸಿದ್ದಾನೆ. ರಾವಣನ ವಧೆಗಾಗಿ ರಾಮ ಮಾಡಿದ ಶಕ್ತಿಪೂಜೆ ವರ್ಣಿತ-ವಾಗಿದೆ.

ಮುಂಡಭಾಷೆಯಲ್ಲಿ ರಚಿತ ಮುಂಡರಾಮಾಯಣ ಬಂಗಾಲದಲ್ಲಿ ಪ್ರಚಲಿತ. ಇದಲ್ಲದೇ ಬಂಗಾಲದ ಜನಪದ ಜೀವನದಲ್ಲಿ ಪ್ರಚಲಿತ ಅನೇಕ ರಾಮಾಯಣ-ಗಳಿವೆ.

ಕನ್ನಡ ರಾಮಾಯಣಗಳು

''ರಾಮಾಯಣ''ದ ಮೇಲೆ ಕನ್ನಡದಲ್ಲಿ ಅಪಾರಕೃತಿಗಳು ನಿರ್ಮಿತವಾಗಿವೆ. ಅದನ್ನು ಕುಮಾರವ್ಯಾಸನು ತನ್ನ ಕೃತಿಯಲ್ಲಿ ವರ್ಣಿಸಿರುವ ''ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂತಿಣಿಯ ಚರಿತೆಯಲಿ ಕಾಲಿಡಲು ತೆರವಿಲ್ಲ'' ಎಂದಿರುವ. ಇದು ಆರು ಶತಕದ ಹಿಂದಿನ ಮಾತು. ಆಗೇ ಇಷ್ಟು ಕೃತಿಗಳು ಕನ್ನಡದಲ್ಲಿ ನಿರ್ಮಿತವಾಗಿದ್ದವು.

ಕನ್ನಡದ ಮೊದಲ ರಾಮಕೃತಿ ಜೈನಕವಿಯಾದ ನಾಗಚಂದ್ರನ ''ರಾಮಚಂದ್ರ ಚರಿತಪುರಾಣ'' ಹಾಗೂ ಕುಮದೆಂದು ಕವಿಯ ''ಕುಮದೆಂದು ರಾಮಾಯಣ.'' ಇವೆಲ್ಲದಕ್ಕಿಂತಾ ಜನಪ್ರಿಯವಾದ ರಾಮಾಯಣ ಕಾವ್ಯವೆಂದರೆ ಮಾಧ್ವ ಕವಿ-ಯಾದ ಕುಮಾರ ವಾಲ್ಮೀಕಿಯ ''ತೊರವೆ ರಾಮಾಯಣ.'' ಭಾಮಿನೀಷಟ್ಪದಿ-ಯಲ್ಲಿದೆ. ಮಧ್ವರ ನಿರ್ಣಯಕ್ಕೆ ಸಮೀಪವಾದ ಕಾವ್ಯ. ನಂತರ ಕನಕದಾಸರ ''ರಾಮಧಾನ್ಯ'' ಚರಿತ್ರೆ. ಲಕ್ಷ್ಮೀಶನ ''ರಾಮಾಶ್ವಮೇಧ'' ಕಾವ್ಯ. ಶಿಶು-

ರಾಮಾಯಣನ ''ಅಂಜನಾಚರಿತೆ, ಯೋಗೀಂದ್ರರ ಉತ್ತರ ರಾಮಾಯಣ. ತಿಮ್ಮರಸನ ''ಮಾರ್ಕಂಡೇಯ ರಾಮಾಯಣ.'' ವೆಂಕಾಮಾತ್ಯನ ''ರಾಮ-ಕಥಾಮೃತ'' ಕಾವ್ಯಗಳಿವೆ.

ಭಾರತದರ್ಶನ ಸಮಿತಿಯವರ ವಾಲ್ಮೀಕಿರಾಮಾಯಣದ ಕನ್ನಡಾನುವಾದ, ಅಳಸಿಂಗಾಚಾರ್ಯರ ರಾಮಾಯಣ, ತಸು ಶಾಮರಾಯರ ''ವಚನ ರಾಮಾಯಣ,'' ಉಲ್ಲೇಖನೀಯ. ಶ್ರೀನಿವಾಸ ಅಯ್ಯಂಗಾರರ ವಾಲ್ಮೀಕಿ ರಾಮಾಯಣದ ಅನುವಾದ, ಅನೇಕ ಸಂಸ್ಕೃತ ರಾಮಾಯಣಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್, ಶ್ರೀಕಂಠಶಾಸ್ತ್ರಿ, ಸಿ ವೆಂಕಟರಮಣಶಾಸ್ತ್ರಿ ಪ್ರಮುಖರು, ಬಾಗಲೂರು ರಾಮಸ್ವಾಮಿಯವರು ಮಾತ್ರಾ ಛಂದಸ್ಸಿನಲ್ಲಿ ಕಾವ್ಯರೂಪದಲ್ಲಿ ಅನುವಾದಿಸಿರುವರು. ಸಂಸ್ಕೃತದಲ್ಲಿಯ ರಾಮಾಯಣದ ವಿವಿಧ ನಾಟಕಗಳನ್ನು ನೂರಾರು ಜನ ಅನುವಾದಿಸಿದ್ದಾರೆ.

ಮಹಾಛಂದಸ್ಸಿನಲ್ಲಿ ಕುವೆಂಪುರವರು ''ರಾಮಾಯಣ ದರ್ಶನ''ವೆಂಬ ಬೃಹತ್ ಪ್ರಸಿದ್ಧಕೃತಿ ರಚಿಸಿರುವರು. ವೀರಪ್ಪಮೋಯ್ಲಿಯವರ ''ಶ್ರೀರಾಮಾಯಣ ಮಹಾನ್ವೇಷಣ'' ಬೃಹತ್‌ಕೃತಿ. ಇವಲ್ಲದೇ ಮುದ್ದಣ ನಂದಳಿಕೆ ಲಕ್ಷ್ಮೀನಾರಾಯಣನ ''ರಾಮಾಶ್ವಮೇಧ'' ''ಅದ್ಭುದರಾಮಾಯಣ'' ಎರಡು ಗದ್ಯಕಾವ್ಯಗಳು.

ಇವಲ್ಲದೇ ಕನ್ನಡದಲ್ಲಿ ರಾಮಕಥೆ ಅವಲಂಬಿಸಿ ನೂರಾರು ನಾಟಕಗಳು, ವಿಮರ್ಶೆಗಳು, ಪಾತ್ರವಿಮರ್ಶೆ ಕೃತಿಗಳು ಅಪಾರವಾಗಿವೆ. ಬಿಡಿಬಿಡಿ ಲೇಖನಗಳು, ವಿಮರ್ಶೆಗಳು, ಟೀಕೆಗಳು, ಅವಕ್ಕೆ ಉತ್ತರಗಳು ಸಾವಿರಾರು ಸಂಖ್ಯೆಯಲ್ಲಿ ರಾಮಕಥೆಯ ಬಗ್ಗೆ ಕಾಣಬಹುದು.

ಕಾಶ್ಮೀರಿ ರಾಮಾಯಣಗಳು

೧) ರಾಮಾವತಾರ ಚರಿತ– ಇದು ೧೮ನೇ ಶತಮಾನದ ಕೃತಿ. ಬರೆದ ಲೇಖಕ ''ಪ್ರಕಾಶರಾಮ.'' ಕಾಶ್ಮೀರದ ಕವಿ. ಇಲ್ಲಿ ಪ್ರಕೃತಿವರ್ಣನೆ ಬಹಳಿದೆ. ಇದಕ್ಕೆ ''ಪ್ರಕಾಶ ರಾಮಾಯಣ''ವೆಂದೂ ಕರೆಯುವರು. ಇದು ಪಾರಸೀಲಿಪಿ, ರೋಮನಲಿಪಿಯಲ್ಲಿಯೂ ಮುದ್ರಿತವಾಗಿದೆ. ಇದು ಜನಪ್ರಿಯಕೃತಿ. ಇದು ಅನೇಕ ಭಾಷೆಗಳಲ್ಲಿ ಅನುವಾದ ಹೊಂದಿದೆ. ಇದಲ್ಲದೇ ಇನ್ನೂ ಅನೇಕ ಕಾಶ್ಮೀರಿ ಭಾಷೆಯಲ್ಲಿ ರಾಮಾಯಣಗಳು ರಚಿತವಾಗಿವೆ.

೨) ''ವಿಷ್ಣುಪ್ರತಾಪ ರಾಮಾಯಣ'' – ಇದರ ಲೇಖಕ ವಿಶ್ವಂಭರನಾಥಕೌಲ. ವ್ಯೋಸಗ್ರಾಮ, ಅನಂತನಾಗದವನು.

೩) ''ಶಂಕರರಾಮಾಯಣ'' – ಕವಿ ''ಶಂಕರ ಕೌಲ.''

೪) ''ಆನಂದ ರಾಮಾವತಾರ ಚರಿತ'' ಆನಂದರಾಮ ರಾಜದಾನನಿಂದ ರಚಿತವಾಗಿದೆ. ೩೪೮ ಅಧ್ಯಾಯಗಳಿವೆ.

೫) ಶರ್ಮಾ ರಾಮಾಯಣ– ಇದು ನೀಲಕಂಠ ಶರ್ಮನಿಂದ ರಚಿತವಾಗಿದೆ. ಡಬಗ್ರಾಮ, ಗಾಂಧರಬಲದ ನಿವಾಸಿ.

೬) ''ತಾರಾಚಂದ ರಾಮಾಯಣ.'' ಕವಿ ತಾರಾಚಂದನಿಂದ ರಚಿತವಾಗಿದೆ.

೭) ''ಅಮರ ರಾಮಾಯಣ'' ಅಮರನಾಥ ಕವಿಯಿಂದ ರಚಿತವಾಗಿದೆ.

೮) ರಾಮಗೀತಾ– ಇದು ಲಕ್ಷ್ಮಣ ಜೂ ಕವಿಯಿಂದ ನಿರ್ಮಿತ. ಇವೆಲ್ಲ ೧೮-೧೯ ಶತಮಾನದ ಪ್ರಸಿದ್ಧ ಕಾಶ್ಮೀರಿ ಭಾಷೆಯ ರಾಮಾಯಣ ಕೃತಿಗಳು. ಮುದ್ರಿತವಾಗಿವೆ.

ಮರಾಠೀ ರಾಮಾಯಣಗಳು

''ಮಹಾರಾಷ್ಟ್ರ'' ರಾಮಾಯಣದ ಘಟನೆಗಳಿಗೆ ಸಾಕ್ಷಿಯಾದ ರಾಜ್ಯ. ''ಪಂಚವಟಿ'' (ನಾಸಿಕ್) ಶೂರ್ಪಣಖೆಯ ಮೂಗು ಕತ್ತರಿಸಿದ ಸ್ಥಳ.

೧. ಸಾಳಯ ರಸಾಳನ ''ರಾಸಾಳ ರಾಮಾಯಣ.'' ರಾಮಾಯಣವು ನಾಮದೇವರ ಅಭಂಗಗಳಲ್ಲಿ ಬಂದಿದೆ.

ಸಂತ ವಿಶ್ವನಾಥರು ೧೫ನೇ ಶತಮಾನದಲ್ಲಿ ''ಭಾವಾರ್ಥ ರಾಮಾಯಣ'' ರಚಿಸಿದರು. ಇದು ಮರಾಠಿಯಲ್ಲಿಯ ರಾಮಾಯಣದ ಮಹಾಕಾವ್ಯ. ಅದೇ ಸಂದರ್ಭದಲ್ಲಿ ಮುದ್ಗಲ್ ಕೃಷ್ಣದಾಸನು ''ಸಂಪೂರ್ಣ ರಾಮಾಯಣ'' ರಚಿಸಿದ. ಸಮರ್ಥ ರಾಮದಾಸರು ''ಲಘುರಾಮಾಯಣ'' ಸುಂದರ, ಯುದ್ಧಕಾಂಡಗಳನ್ನು ರಚಿಸಿರುವರು.

೧೮ನೇ ಶತಕದಲ್ಲಿ ಗಿರಿಧರನು ''ಅಬ್ದಸಂಕೇತ ರಾಮಾಯಣ''ವೆಂಬ ಖಂಡಕಾವ್ಯ ರಚಿಸಿರುವ. ನಿರಂಜನ ಮಾಧವನ ಚಿದ್ಬೋಧ ರಾಮಾಯಣ

''ರಾಮಕರ್ಣಾಮೃತ'' ಶ್ರೀಧರನ ''ರಾಮವಿಜಯ'' ಮಹಾಕಾವ್ಯಗಳು ಪ್ರಸಿದ್ಧ. ಮೋರೋಪಂತರಿಂದ ೧೦೮ ರಾಮಾಯಣಗಳು ರಚಿತವಾಗಿವೆ. ''ಮಂತ್ರ-ರಾಮಾಯಣ, ತೀರ್ಥರಾಮಾಯಣ, ಋಷಿರಾಮಾಯಣ, ಸೀತಾ ರಾಮಾಯಣಾದಿಗಳು. ಇತ್ತೀಚಿನ ಕಾಲದಲ್ಲಿ ಗದೀ, ಮಾಡಗೂಳಕರ ರಚಿತ ಗೀತರಾಮಾಯಣ ಅತಿ ಸುಪ್ರಸಿದ್ಧ. ವಿ.ಮ. ಕುಲಕರ್ಣಿಯವರ ''ಪ್ರಸಾದ ರಾಮಾಯಣ'' ಇದಲ್ಲದೇ ನೂರಾರು ನಾಟಕಗಳು, ಕಾದಂಬರಿಗಳು, ಮರಾಠಿಯಲ್ಲಿ ಬರೆಯಲ್ಪಟ್ಟಿವೆ.

ವಾಯಿಕರ್ ಲೇಲೇ ಶಾಸ್ತ್ರಿಗಳು ವಾಲ್ಮೀಕಿ ರಾಮಾಯಣ ಅನುವಾದ ಮಾಡಿದ್ದಾರೆ.

ಮಹಾರಾಷ್ಟ್ರದಲ್ಲಿ ಸಮರ್ಥ ರಾಮದಾಸರು, ಬ್ರಹ್ಮಚೈತನ್ಯರು ಮೊದಲಾದವ-ರಿಂದ ರಾಮೋಪಾಸನಾಸಂಪ್ರದಾಯ ವ್ಯಾಪಕವಾಯಿತು. ಏಕನಾಥರ ''ಭಾವಾರ್ಥ ರಾಮಾಯಣ'' ಮರಾಠಿಯಲ್ಲಿ ಅತಿ ಪ್ರಸಿದ್ಧವಾದ ಕಾವ್ಯ. ಗೋಡಬೋಲೆಯವರು ''ಆರ್ಯಾ ರಾಮಾಯಣ'' ರಚಿಸಿದ್ದಾರೆ. ಪಾರ್ಶ್ವನಾಥ ಘಡಕುಲೆಯವರ ''ಜೈನ ರಾಮಾಯಣ'' ಕಾವ್ಯವು, ಏಕನಾಥನ ''ಭಾವಾರ್ಥ ರಾಮಾಯಣ'' ಬೃಹತ್‌ಕೃತಿ. ಪ್ರಸಿದ್ಧ ಕೃತಿ. ೧೭,೫೦೦ ಓವಿ ಛಂದಸ್ಸುಗಳು ಇವೆ.

ಹೀಗೆ ಎಲ್ಲ ಭಾಷೆಗಳಲ್ಲಿ, ಎಲ್ಲರಿಂದ ಮಾನ್ಯವಾದ, ಅನುವಾದಿತವಾದ, ವ್ಯಾಖ್ಯೇಯವಾದ, ಭಾರತೀಯ ಸಾಹಿತ್ಯದ ಹೆಮ್ಮೆಯ ಕೃತಿ ಅದು ರಾಮಾಯಣ. ಮನೆ-ಮನೆಗಳಲ್ಲಿ, ಮನ-ಮನಗಳಲ್ಲಿ ಇಂದಿಗೂ ಶಾಶ್ವತವಾಗಿ ನೆಲೆನಿಂತ ಅಪೂರ್ವಕೃತಿಯಾಗಿದೆ.

ಸಂಸ್ಕೃತ ಸಾಹಿತ್ಯಕ್ಷೇತ್ರದಲ್ಲಿ ಅನೇಕ ರಾಮಾಯಣಗಳು ಇದ್ದರೂ ಸಹ ವಾಲ್ಮೀಕಿಗಳು ರಚಿಸಿದ ರಾಮಾಯಣ ಬಹಳ ಪ್ರಸಿದ್ಧವಾಯಿತು. ಜನಮನಗಳಲ್ಲಿ ಇಂದಿಗೂ ರಾರಾಜಿಸುತ್ತಿರುವ ಗ್ರಂಥ. ವಾಲ್ಮೀಕಿರಾಮಾಯಣಕ್ಕೆ ರಾಮಾಯಣತಿಲಕ ರಾಮಾಯಣಶಿರೋಮಣಿ ರಾಮಾಯಣಭೂಷಣ ಮುಂತಾದ ಅನೇಕ ವ್ಯಾಖ್ಯಾನಗಳು ಉಪಲಬ್ಧವಾಗಿವೆ.

ಇಂತಹ ವಾಲ್ಮೀಕಿ ರಾಮಾಯಣದ ಸಮಗ್ರ ಕನ್ನಡ ಅನುವಾದ ಕಾರ್ಯವನ್ನು ದ್ವೈತವೇದಾಂತಅಧ್ಯಯನಸಂಶೋಧಪ್ರತಿಷ್ಠಾನ ಕೈಗೊಂಡಿದ್ದು ಅತ್ಯಂತ ಸ್ತುತ್ಯವಾಗಿದೆ.

ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಅಪ್ರಕಟಿತಗ್ರಂಥಗಳ ಪ್ರಕಾಶನಕ್ಕಾಗಿ ಸಂಸ್ಥಾಪಿತವಾದ ಸಂಸ್ಥೆ ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನ. ಪ್ರೋ. ಕೆ. ಟಿ. ಪಾಂಡುರಂಗಿ ಅವರ ನೇತೃತ್ವದಲ್ಲಿ ಅನೇಕ ವಿದ್ವಾಂಸರ ಪರಿಶ್ರಮದೊಂದಿಗೆ ಸಂಸ್ಥೆಯಿಂದ ಪ್ರಕಟಿತವಾದ ಗ್ರಂಥಗಳು ನೂರಕ್ಕೂ ಹೆಚ್ಚು. ಖಂಡನತ್ರಯ, ವಾದಾವಲೀ, ಪ್ರಮಾಣಪದ್ಧತಿ, ನ್ಯಾಯಾಮೃತ ಮೊದಲಾದ ಗ್ರಂಥಗಳು ಇಂದಿಗೂ ಎಲ್ಲ ವಿದ್ಯಾಪೀಠಗಳಲ್ಲಿ ಪಠ್ಯಪುಸ್ತಕಗಳಾಗಿವೆ.

ಪ್ರಕೃತ ಸಮಗ್ರ ವಾಲ್ಮೀಕಿರಾಮಾಯಣದ ಕನ್ನಡ ಅನುವಾದ ಕೃತಿಗಳನ್ನು ಹೊರತರಬೇಕೆಂದು ಉದ್ದೇಶಿಸಿ, ನಾಡಿನ ಪ್ರಖ್ಯಾತ ಲೇಖಕ ವಿದ್ವಾಂಸರ ಮೂಲಕ ಸಮಗ್ರ ವಾಲ್ಮೀಕಿ ರಾಮಾಯಣಕ್ಕೆ ಕನ್ನಡ ಅನುವಾದ ಮಾಡಿಸಿ, ೧೦ ಸಂಪುಟಗಳಲ್ಲಿ ಹೊರತರಲಾಗುತ್ತಿದೆ. ೮ ವಿದ್ವಾಂಸರು ಎಲ್ಲ ವ್ಯಾಖ್ಯಾನಗಳನ್ನು ಪೂರ್ಣವಾಗಿ ಅವಲೋಕಿಸಿ, ವ್ಯಾಖ್ಯಾನಗಳ ವಿಶೇಷ ವಿಚಾರಗಳೊಂದಿಗೆ ಸುಂದರವಾಗಿ ಅನುವಾದ ಮಾಡಿಕೊಟ್ಟಿದ್ದಾರೆ. ಎರಡು ಮೂರು ವರ್ಷಗಳ ನಿರಂತರ ಪರಿಶ್ರಮದಿಂದ ಸಮಗ್ರ ವಾಲ್ಮೀಕಿ ರಾಮಾಯಣದ ಅನುವಾದಕಾರ್ಯ ಪೂರ್ಣಗೊಂಡು, ಪ್ರಕಾಶನವಾಗಿದೆ.

ಈ ಕನ್ನಡ ಅನುವಾದ ಕಾರ್ಯದ ಪೂರ್ಣ ಜವಾಬ್ದಾರಿಯನ್ನು ಹೆಗಲಮೇಲೆ ಹೊತ್ತು, ಅದಕ್ಕಾಗಿ ವಿಶೇಷ ಪರಿಶ್ರಮ ವಹಿಸಿ, ಅನುವಾದಕೃತಿಪ್ರಕಾಶನವನ್ನು ಪೂರ್ಣವಾಗಿ ಸಾಕಾರಗೊಳಿಸಿದ ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ, ಡಾ. ಎಸ್. ಆರ್. ಪಾಂಡುರಂಗಿ ಹಾಗೂ ಡಾ. ಎ. ಬಿ. ಶಾಮಾಚಾರ್ಯ ಅವರಿಗೆ ಈ ಪ್ರಸಂಗದಲ್ಲಿ ವಿಶೇಷ ಅಭಿನಂದನೆಗಳನ್ನು ತಿಳಿಸುತ್ತಿದ್ದೇನೆ. ಸಿದ್ಧಾಂತಕ್ಕೆ ಅವಿರೋಧವಾಗಿ, ಸುಂದರವಾಗಿ ಕನ್ನಡ ಅನುವಾದ ಮಾಡಿಕೊಟ್ಟಿರುವ ಎಲ್ಲ ವಿದ್ವಾಂಸರಿಗೆ ಅಭಿನಂದನೆಗಳು.

ಡಾ. ಜಯತೀರ್ಥಾಚಾರ್ಯ ಮಳಗಿ
ನಿವೃತ್ತ ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವಿಷಯಾನುಕ್ರಮಣಿಕಾ

ಸರ್ಗ ಸಂಖ್ಯೆ	ವಿಷಯ	ಪುಟ ಸಂಖ್ಯೆ
1.	ಲೋಕದಲ್ಲಿ ಉತ್ತಮಪುರುಷ ಯಾರು? ಎಂಬುದಾಗಿ ವಾಲ್ಮೀಕಿ ಋಷಿಗಳು ನಾರದರನ್ನು ಕುರಿತು ಪ್ರಶ್ನೆ ಕೇಳಿದುದು. ವಾಲ್ಮೀಕಿಗಳ ಆ ಪ್ರಶ್ನೆಗೆ ಶ್ರೀರಾಮಚಂದ್ರನೇ ಪುರುಷೋತ್ತಮನಾದವನು ಎಂದು ಉತ್ತರಿಸಿ, ನಾರದರು ಶ್ರೀರಾಮನ ಗುಣಗಳನ್ನು ವರ್ಣಿಸಿದುದು. ಸಂಕ್ಷೇಪವಾಗಿ ರಾಮಚರಿತೆಯನ್ನು ಹೇಳಿದುದು. ಇದೇ ಸಂಕ್ಷೇಪ ರಾಮಾಯಣ.	1
2.	ನಾರದರು ಬ್ರಹ್ಮಲೋಕಕ್ಕೆ ಹೋದದ್ದು. ವಾಲ್ಮೀಕಿಗಳು ಸ್ನಾನಕ್ಕಾಗಿ ತಮಸಾನದೀತೀರಕ್ಕೆ ಹೋದದ್ದು. ಅಲ್ಲಿ ಒಬ್ಬ ವ್ಯಾಧನು ಕ್ರೌಂಚಪಕ್ಷಿಯನ್ನು ಸಂಹರಿಸಿದಾಗ ವಾಲ್ಮೀಕಿಗಳು ಆ ವ್ಯಾಧನಿಗೆ ''ಮಾ ನಿಷಾದ...'' ಇತ್ಯಾದಿಯಾಗಿ ಶಾಪ ನೀಡಿದ್ದು. ನಂತರ ತಮ್ಮ ಆಶ್ರಮಕ್ಕೆ ಬಂದಮೇಲೆ ವಾಲ್ಮೀಕಿಗಳಿಗೆ ಬ್ರಹ್ಮದೇವರು ರಾಮಾಯಣವನ್ನು ರಚನೆ ಮಾಡಲು ಪ್ರೇರಣೆ ಮಾಡಿದ್ದು.	21
3.	ಬ್ರಹ್ಮದೇವರ ಅನುಗ್ರಹದಿಂದ ವಾಲ್ಮೀಕಿಗಳು ಸಮಗ್ರವಾದ ರಾಮಚರಿತ್ರೆಯನ್ನು ಅಪರೋಕ್ಷ ಮಾಡಿಕೊಂಡದ್ದು, ಏಳು ಕಾಂಡಗಳ ರಾಮಾಯಣವನ್ನು ಬರೆದದ್ದು.	31
4.	ವಾಲ್ಮೀಕಿಗಳು ತಾವು ಬರೆದ ರಾಮಾಯಣವನ್ನು ಕುಶ-ಲವರಿಗೆ ಉಪದೇಶ ಮಾಡಿದ್ದು, ಅಲ್ಲಲ್ಲಿ ಅಲ್ಲಲ್ಲಿ ಋಷ್ಯಾದಿ ಸಭೆಗಳಲ್ಲಿ ರಾಮಾಯಣವನ್ನು ಹಾಡುತ್ತ ಲವಕುಶರು ಶ್ರೀರಾಮನ ಸಭೆಯಲ್ಲೂ ಸಹ ರಾಮಾಯಣವನ್ನು ಹಾಡಲು ಉಪಕ್ರಮಿಸಿದ್ದು.	38
5.	ಅಯೋಧ್ಯಾನಗರದ ವರ್ಣನೆ.	46
6.	ದಶರಥರಾಜನು ಅಯೋಧ್ಯೆಯನ್ನು ಆಳುವಾಗ ಹೇಗೆ ಇತ್ತೆಂದು ವರ್ಣಿಸುವುದು.	51
7.	ದಶರಥನ ಮಂತ್ರಿಗಳು-ಋತ್ವಿಜರು ಅವರೆಲ್ಲರ ಹೆಸರು, ಸಾಮರ್ಥ್ಯಗಳನ್ನು ಹೇಳುವುದು.	57
8.	ದಶರಥನು ಮಕ್ಕಳಾಗುವುದಕ್ಕಾಗಿ ಅಶ್ವಮೇಧಯಾಗ ಮಾಡಲು ನಿರ್ಧಾರ ಮಾಡುವುದು. ಯಜ್ಞಪದಾರ್ಥಗಳನ್ನು ಸಂಗ್ರಹಿಸಲು ನಿಯೋಜನೆ ಮಾಡಿದ್ದು. ದಶರಥಪತ್ನಿಯರ ದೀಕ್ಷಾವಿಧಾನ.	62

9. ಋಷ್ಯಶೃಂಗರ ಅನುಗ್ರಹದಿಂದ ಪುತ್ರೋತ್ಪತ್ತಿ ಆಗುವುದೆಂದು ಸುಮಂತ್ರನು ದಶರಥನಿಗೆ ಹೇಳಿದುದು. 67

10. ಅಂಗರಾಜ್ಯದಲ್ಲಿ ಅನಾವೃಷ್ಟಿ ಉಂಟಾದಾಗ ರೋಮಪಾದನು ಋಷ್ಯಶೃಂಗರನ್ನು ಕರೆತಂದದ್ದರಿಂದ ಉತ್ತಮವೃಷ್ಟಿ ಉಂಟಾಯಿತೆಂದು ಸುಮಂತ್ರನು ರಾಜ ದಶರಥನಿಗೆ ಹೇಳಿದುದು. 72

11. ದಶರಥನು ಅಂಗದೇಶಕ್ಕೆ ತೆರಳಿ, ರೋಮಪಾದನನ್ನು ಪ್ರಾರ್ಥಿಸಿ, ಅವನ ಅನುಮತಿಯಿಂದ ಶಾಂತಾಳೊಂದಿಗೆ ಋಷ್ಯಶೃಂಗರನ್ನು ಅಯೋಧ್ಯೆಗೆ ಕರೆತಂದದ್ದು. 79

12. ಯಜ್ಞವನ್ನು ಮಾಡಿಸಲು ದಶರಥನು ಋಷ್ಯಶೃಂಗರನ್ನು ಒಪ್ಪಿಸುವುದು. ಯಜ್ಞಸಂಭಾರ ಸಂಗ್ರಹ. ಭೂಮಂಡಲಪ್ರದಕ್ಷಿಣೆ ಮಾಡಿಬರಲು ಅಶ್ವಮೇಧದ ಕುದುರೆಯನ್ನು ಬಿಡುವುದು. 85

13. ಯಜ್ಞಕ್ಕಾಗಿ ನಾನಾದೇಶದ ರಾಜರನ್ನು ಆಹ್ವಾನಿಸುವುದು, ಶುಭ-ಮುಹೂರ್ತದಲ್ಲಿ ಯಜ್ಞಶಾಲೆಯನ್ನು ಪ್ರವೇಶಿಸುವುದು. 90

14. ಅಶ್ವಮೇಧಯಾಗದ ಆರಂಭ. ಯಜ್ಞವೈಭವದ ವರ್ಣನೆ. ಯಾಗದ ಕೊನೆಯಲ್ಲಿ ಋತ್ವಿಜರಿಗೆ ದಕ್ಷಿಣೆಗಳನ್ನು ಕೊಡುವುದು. ಪುತ್ರಕಾಮೇಷ್ಟಿ-ಯಾಗವನ್ನು ಮಾಡಿಸಲು ದಶರಥನು ಋಷ್ಯಶೃಂಗರಿಗೆ ಪ್ರಾರ್ಥನೆ ಮಾಡುವುದು. 98

15. ಋಷ್ಯಶೃಂಗರು ದಶರಥನಿಗೆ ಪುತ್ರಕಾಮೇಷ್ಟಿಯಾಗವನ್ನು ಮಾಡಿಸಿದ್ದು. ಈ ಮಧ್ಯದಲ್ಲಿ ಎಲ್ಲ ದೇವತೆಗಳು ಬ್ರಹ್ಮದೇವರಿಗೆ ರಾವಣ ಮಾಡುತ್ತಿದ್ದ ಉಪದ್ರವಗಳನ್ನು ಹೇಳುವುದು. ಅಲ್ಲಿಗೆ ಬಂದಂತಹ ವಿಷ್ಣುವಿಗೆ ಎಲ್ಲ ದೇವತೆಗಳು ರಾವಣನನ್ನು ಸಂಹರಿಸಲು ಪ್ರಾರ್ಥನೆ ಮಾಡುವುದು. 112

16. ದಶರಥನ ಮನೆಯಲ್ಲಿ ಅವತಾರ ಮಾಡುತ್ತೇನೆಂದು ವಿಷ್ಣು ಎಲ್ಲ ದೇವತೆಗಳಿಗೆ ತಿಳಿಸಿ ಅಂತರ್ಧಾನವಾದದ್ದು. ದಶರಥನ ಯಾಗಾಗ್ನಿ ಮಧ್ಯದಲ್ಲಿ ಪ್ರಾದುರ್ಭೂತನಾದ ದಿವ್ಯಪುರುಷನು ದಶರಥನ ಕೈಯಲ್ಲಿ ಪಾಯಸಪಾತ್ರವನ್ನು ಕೊಡುವುದು. ದಶರಥನು ತನ್ನ ಹೆಂಡತಿಯರಿಗೆ ಪಾಯಸವನ್ನು ವಿಭಾಗ ಮಾಡಿ ನೀಡುವುದು. ದಶರಥನ ಹೆಂಡತಿಯರು ಗರ್ಭಧಾರಣೆ ಮಾಡುವುದು. 119

17. ಬ್ರಹ್ಮದೇವರ ಆಜ್ಞೆಯಂತೆ ದೇವತೆಗಳೇ ಮೊದಲಾದವರು ಶ್ರೀರಾಮನ ಸಹಾಯಕ್ಕಾಗಿ ಭೂಮಿಯಲ್ಲಿ ವಾನರಾದಿ ಜಾತಿಗಳಲ್ಲಿ ಅವತರಿಸಿದುದು. 127

18. ಯಜ್ಞವನ್ನು ಮುಗಿಸಿ ದಶರಥನು ಅಯೋಧ್ಯೆಯನ್ನು ಪ್ರವೇಶಿಸುವುದು. ಶ್ರೀರಾಮನ ಅವತಾರ, ಭರತಾದಿಗಳ ಜನನ. ಮಕ್ಕಳಿಗೆ ನಾಮಕರಣದಿಂದ ಉಪನಯನದ ವರೆಗೆ ಎಲ್ಲ ಸಂಸ್ಕಾರಗಳನ್ನೂ ದಶರಥ ನೆರವೇರಿಸುವುದು. ಮಕ್ಕಳ ವಿದ್ಯಾಭ್ಯಾಸ. ದಶರಥನ ಬಳಿ ವಿಶ್ವಾಮಿತ್ರರ ಆಗಮನ. ರಾಜನಾದ ದಶರಥನು ವಿಶ್ವಾಮಿತ್ರರಿಗೆ ಅಭೀಪ್ಸಿತವಾದದ್ದನ್ನು ಮಾಡುವ ಮಾತು ಕೊಟ್ಟದ್ದು. 134

19. ವಿಶ್ವಾಮಿತ್ರರು ತಮ್ಮ ಯಜ್ಞಕ್ಕೆ ವಿಘ್ನ ಮಾಡುತ್ತಿರುವ ಮರೀಚಾದಿ ರಾಕ್ಷಸರನ್ನು ಸಂಹರಿಸುವುದಕ್ಕಾಗಿ ಶ್ರೀರಾಮನನ್ನು ಕಳಿಸಿಕೊಡಲು ದಶರಥನಲ್ಲಿ ಪ್ರಾರ್ಥನೆ ಮಾಡಿದುದು. 147

20. ರಾಮನನ್ನು ಕಳಿಸುವುದಿಲ್ಲ ಎಂಬುದಾಗಿ ವಿಶ್ವಾಮಿತ್ರರನ್ನು ಕುರಿತು ದಶರಥ ಹೇಳುವುದು. 152

21. ಅದನ್ನು ಕೇಳಿ ಕ್ರುದ್ಧರಾದ ವಿಶ್ವಾಮಿತ್ರರು ದಶರಥನಿಗೆ ರಾಮನ ಮಹಿಮೆ-ಯನ್ನು ತಿಳಿಸಿಕೊಡುವ ಮೂಲಕ ರಾಮನನ್ನು ಕಳಿಸಿಕೊಡಲು ಮತ್ತೆ ಪ್ರಾರ್ಥನೆ ಮಾಡಿದುದು. 158

22. ರಾಮಲಕ್ಷ್ಮಣರನ್ನು ಕರೆದುಕೊಂಡು ವಿಶ್ವಾಮಿತ್ರರು ತಮ್ಮ ಆಶ್ರಮಕ್ಕೆ ಹೊರಡುವುದು, ಮಾರ್ಗಮಧ್ಯದಲ್ಲಿ ರಾಮಲಕ್ಷ್ಮಣರಿಗೆ ಬಲ-ಅತಿಬಲ ಎಂಬ ಎರಡು ವಿದ್ಯೆಗಳನ್ನು ಉಪದೇಶಿಸುವುದು. 163

23. ಅವರೆಲ್ಲರೂ ಕಾಮನ ಆಶ್ರಮಕ್ಕೆ ಹೋದದ್ದು. ವಿಶ್ವಾಮಿತ್ರರು ರಾಮನಿಗೆ ಮನ್ಮಥನು ಅನಂಗನಾದ ಕಥೆಯನ್ನು ಹೇಳಿದ್ದು. 169

24. ಅವರೆಲ್ಲರೂ ಗಂಗಾನದಿಯನ್ನು ದಾಟಿ ಮುಂದೆ ನಡೆದದ್ದು. ವಿಶ್ವಾಮಿತ್ರರು ಸರಯೂ ನದಿಯ ಉತ್ಪತ್ತಿಕಥೆಯನ್ನು ಹೇಳಿದ್ದು, ಮಲದ-ಕರೂಶ ದೇಶಗಳ ಚರಿತ್ರೆಯನ್ನು ಹೇಳಿದ್ದು, ಅಲ್ಲಿ ವಾಸಿಸಿರುವ ತಾಟಕೆಯ ದುಷ್ಟತನಗಳನ್ನು ರಾಮನಿಗೆ ತಿಳಿಸಿದ್ದು. 174

25. ತಾಟಕೆಯ ದುಷ್ಟಕಾರ್ಯಗಳನ್ನು ಹೇಳುವ ಮೂಲಕ ಅವಳನ್ನು ಸಂಹರಿಸಲು ರಾಮನಿಗೆ ವಿಶ್ವಾಮಿತ್ರರು ಪ್ರಚೋದಿಸಿದ್ದು. 181

26. ಅಲ್ಲಿಗೆ ಆಗಮಿಸಿದಂತಹ ತಾಟಕಾಳನ್ನು ವಿಶ್ವಾಮಿತ್ರರ ಪ್ರಚೋದನೆಯಂತೆ ರಾಮನು ಸಂಹರಿಸಿದ್ದು, ಅನಂತರ ಅಲ್ಲಿಯೇ ಎಲ್ಲರೂ ಆ ರಾತ್ರಿ ಸುಖವಾಗಿ ವಾಸಿಸಿದ್ದು. 186

27. ವಿಶ್ವಾಮಿತ್ರರು ರಾಮಲಕ್ಷ್ಮಣರಿಗೆ ಅನೇಕ ಅಸ್ತ್ರಗಳನ್ನು ಉಪದೇಶಿಸಿ ಕೊಟ್ಟದ್ದು. 194

28. ವಿಶ್ವಾಮಿತ್ರರು ರಾಮಲಕ್ಷ್ಮಣರಿಗೆ ಉಪಸಂಹಾರ ಎಂಬ ಹೆಸರಿನ ಅನೇಕ ಮಂತ್ರಗಳನ್ನು ಉಪದೇಶಿಸಿದ್ದು. ರಾಮನು ಅಲ್ಲಿರುವ ಆಶ್ರಮದ ಹೆಸರು ಏನೆಂದು ವಿಶ್ವಾಮಿತ್ರರಿಗೆ ಕೇಳಿದ್ದು. 199

29. ಆ ಆಶ್ರಮಕ್ಕೆ ಸಿದ್ಧಾಶ್ರಮ ಎಂದು ಹೆಸರು ಎಂಬುದಾಗಿ ವಿಶ್ವಾಮಿತ್ರರು ತಿಳಿಸಿದ್ದು. ಬಲಿಯ ನಿಗ್ರಹಕ್ಕಾಗಿ ಅವತಾರ ಮಾಡಿದಂತಹ ವಾಮನನ ಕಥೆಯನ್ನು ಹೇಳಿದ್ದು. ಆ ಸಿದ್ಧಾಶ್ರಮದಲ್ಲಿಯೇ ನಡೆಯುವಂತಹ ತಮ್ಮ ಯಜ್ಞಕ್ಕೆ ವಿಘ್ನ ಮಾಡಲು ಆಗಮಿಸುವ ರಾಕ್ಷಸರ ಸಂಹಾರ ಮಾಡುವಂತೆ ವಿಶ್ವಾಮಿತ್ರರು ರಾಮನಿಗೆ ಪ್ರಚೋದನೆ ಮಾಡಿದುದು. ರಾಮನ ಅನುಮತಿಯಿಂದ ಯಜ್ಞಕ್ಕಾಗಿ ದೀಕ್ಷೆ ತೊಟ್ಟದ್ದು. 204

30. ವಿಶ್ವಾಮಿತ್ರರ ಯಜ್ಞ ನಡೆಯುತ್ತಿರಲು, ಆರನೇ ದಿವಸ ವೇದಿಮಧ್ಯದಲ್ಲಿ ರಾಕ್ಷಸರು ರಕ್ತವೃಷ್ಟಿಯನ್ನು ಮಾಡುವುದು. ರಾಮನು ಮಾನವಾಸ್ತ್ರದಿಂದ ಮಾರೀಚನನ್ನು ಸಮುದ್ರದಲ್ಲಿ ಎಸೆಯುವುದು, ಸುಬಾಹು ಮುಂತಾದವರ ಸಂಹಾರ ಮಾಡಿದ್ದು. 214

31. ಯಜ್ಞಸಮಾಪ್ತಿಯಾದಮೇಲೆ ರಾಮಲಕ್ಷ್ಮಣರನ್ನು ಕರೆದುಕೊಂಡು ವಿಶ್ವಾಮಿತ್ರರು ಮಿಥಿಲಾದೇಶಕ್ಕೆ ಹೊರಟದ್ದು, ಸಾಯಂಕಾಲಕ್ಕೆ ಶೋಣಾ-ನದಿಯ ತೀರಕ್ಕೆ ಹೋದದ್ದು. 220

32. ವಿಶ್ವಾಮಿತ್ರರು ತಮ್ಮ ವಂಶದ ಚರಿತೆಯನ್ನು ಹೇಳಿದುದು. ಬ್ರಹ್ಮಪುತ್ರನಾದ ಕುಶನಿಗೆ ಕುಶನಾಭ ಎಂಬ ಪುತ್ರನ ಜನನ. ಆ ಕುಶನಾಭನ ಹೆಣ್ಣು ಮಕ್ಕಳನ್ನು ವಾಯುವು ಕುಬ್ಜರನ್ನಾಗಿ ಮಾಡಿದುದು. 225

33. ಕುಶನಾಭನ ಹೆಣ್ಣುಮಕ್ಕಳಿಗೆ ಬ್ರಹ್ಮದತ್ತನ ಜೊತೆ ವಿವಾಹ ಆದದ್ದು. 231

34. ಕುಶನಾಭನಿಗೆ ಗಾಧಿ ಎಂಬ ಹೆಸರಿನ ಮಗನು ಜನಿಸಿದ್ದು. ಆ ಗಾಧಿರಾಜನಿಗೆ ಸತ್ಯವತೀ ಎಂಬ ಹೆಸರಿನ ಮಗಳು ಹಾಗೂ ವಿಶ್ವಾಮಿತ್ರ ಎಂಬ ಹೆಸರಿನ ಮಗನು ಜನಿಸಿದ್ದು. 237

35. ವಿಶ್ವಾಮಿತ್ರರು ಮಧ್ಯಾಹ್ನಕಾಲದಲ್ಲಿ ಗಂಗಾನದಿಯ ತೀರದಲ್ಲಿ ವಾಸ ಮಾಡಿದ್ದು. ಸಂಗ್ರಹಾತ್ಮಕವಾಗಿ ಗಂಗೆಯ ಹಾಗೂ ಪಾರ್ವತಿಯ ಉತ್ಪತ್ತಿ ಕಥೆ. 242

36. ಪುತ್ರೋತ್ಪತ್ತಿಗಾಗಿ ಶಿವ-ಪಾರ್ವತಿಯರ ಸಂಭೋಗ. ದೇವತೆಗಳು ಅವರ ರತಿವಿಘ್ನ ಮಾಡಿದ್ದಕ್ಕಾಗಿ ಕ್ರುದ್ಧಳಾದ ಪಾರ್ವತೀದೇವಿಯು ದೇವತೆಗಳಿಗೆ ಶಾಪ ನೀಡಿದುದು. ಅನಂತರ ಶಿವ-ಪಾರ್ವತಿಯರು ಹಿಮಾಲಯದಲ್ಲಿ ತಪಸ್ಸು ಮಾಡಿದ್ದು. 247

37. ಸ್ಕಂಧನ ಜನನ. 253

38. ಗಂಗಾವತರಣ ಕಥೆಯನ್ನು ಹೇಳುವುದಕ್ಕಾಗಿ ಸಗರರಾಜನಿಗೆ ಮಕ್ಕಳು ಜನಿಸಿದ ವೃತ್ತಾಂತ ಹೇಳುವುದು. ಸಗರ ರಾಜನು ಅಶ್ವಮೇಧ ಯಾಗವನ್ನು ಮಾಡಲು ಉದ್ಯುಕ್ತನಾದುದು. 260

39. ಸಗರರಾಜನ ಅಶ್ವಮೇಧಯಾಗದ ಕುದುರೆಯನ್ನು ಇಂದ್ರನು ಅಪಹರಿಸಿದುದು. ಕುದುರೆಯನ್ನು ಹುಡುಕುವುದಕ್ಕಾಗಿ ಸಗರನ 60,000 ಮಕ್ಕಳು ಹೊರಟದ್ದು. 266

40. ಕಪಿಲನಾಮಕ ಪರಮಾತ್ಮನ ಕೋಪದಿಂದ ಸಗರನ ಮಕ್ಕಳು ಭಸ್ಮರಾಗಿ ಹೋದದ್ದು. 271

41. ಸಗರನ ಮೊಮ್ಮಗ ಅಂಶುಮಾನ್ ಕಪಿಲನಾಮಕ ಪರಮಾತ್ಮನ ಸಮೀಪದಲ್ಲಿ ಸಂಚರಿಸುತ್ತಿದ್ದ ಕುದುರೆಯನ್ನು ಕಪಿಲನ ಅನುಮತಿಯಿಂದ ಮರಳಿ ಯಜ್ಞಮಂಟಪಕ್ಕೆ ಕರೆತಂದದ್ದು. ಭಸ್ಮೀಭೂತರಾದ ಸಗರನ ಮಕ್ಕಳ ಜಲಕ್ರಿಯೆಗಾಗಿ ಗಂಗೆಯನ್ನು ಕೆಳಗೆ ತರಿಸುವ ಕುರಿತು ಗರುಡನು ಅಂಶುಮಂತನಿಗೆ ಪ್ರಚೋದಿಸಿದ್ದು. ಅಂಶುಮಂತನು ತಂದಂತಹ ಕುದುರೆಯಿಂದ ಸಗರನ ಯಜ್ಞ ಸಮಾಪ್ತವಾದದ್ದು. ಬಹುವಾಗಿ ಪ್ರಯತ್ನಿಸಿದರೂ ಸಹ ಗಂಗೆಯನ್ನು ತರುವ ಉಪಾಯವನ್ನು ತಿಳಿಯದ ಸಗರನು ಸ್ವರ್ಗಸ್ಥನಾದುದು. 277

42. ಅಂಶುಮಂತನು ಹಾಗೂ ಅವನ ಮಗ ದಿಲೀಪನು ಬಹಳ ಪ್ರಯತ್ನ ಮಾಡಿದರೂ ಸಹ ಗಂಗೆಯನ್ನು ತರಲು ಸಾಧ್ಯವಾಗದಿದ್ದದ್ದು. ಅನಂತರ ದಿಲೀಪನ ಮಗ ಭಗೀರಥನು ಗಂಗೆಯನ್ನು ತರುವುದಕ್ಕಾಗಿ ತಪಸ್ಸು ಮಾಡಿದುದು. ತಪಸ್ಸಿನಿಂದ ಪ್ರಸನ್ನನಾದ ಬ್ರಹ್ಮದೇವನು ಗಂಗಾವತರಣಕ್ಕೆ ಅನುಮತಿ ಕೊಟ್ಟದ್ದು. 283

43. ಭಗೀರಥನ ಪ್ರಾರ್ಥನೆಯಿಂದ ರುದ್ರದೇವರು ತಮ್ಮ ತಲೆಯಲ್ಲಿ ಗಂಗೆಯನ್ನು ಧರಿಸಿದ್ದು. ಭೂಮಿಯಲ್ಲಿ ಹರಿದುಬಂದಂತಹ ಗಂಗೆಯಿಂದ (ಗಂಗೆಯ ನೀರು ಸಗರಮಕ್ಕಳ ಅಸ್ಥಿಗಳ ಮೇಲೆ ಹರಿದಿದ್ದರಿಂದ) ಸಗರನ ಮಕ್ಕಳಿಗೆ ಉತ್ತಮಗತಿ ಪ್ರಾಪ್ತಿಯಾದುದು. 288

44. ಭಗೀರಥನು ಗಂಗೆಯನ್ನು ಭೂಮಿಗೆ ಕರೆತಂದ ಕಾರ್ಯವನ್ನು ಬ್ರಹ್ಮದೇವರು ಶ್ಲಾಘಿಸಿದುದು. ಭಗೀರಥನು ತನ್ನ ಊರಿಗೆ ತೆರಳಿ ಸುಖವಾಗಿ ವಾಸಿಸುವುದು. 298

45. ಈ ರೀತಿಯಾಗಿ ಕಥೆಯನ್ನು ಹೇಳುತ್ತ ವಿಶ್ವಾಮಿತ್ರರು ರಾಮ-ಲಕ್ಷ್ಮಣ-ರೊಡನೆ ವಿಶಾಲಾ ಎಂಬ ಹೆಸರಿನ ನಗರಕ್ಕೆ ಹೋದದ್ದು. ಆ ವಿಶಾಲಾ ನಗರದ ವೃತ್ತಾಂತವನ್ನು ಹೇಳುವುದಕ್ಕಾಗಿ ವಿಶ್ವಾಮಿತ್ರರು ಕ್ಷೀರಸಮುದ್ರ-ಮಥನ ಕಥಾವನ್ನು ಹೇಳಿದುದು. 302

46. ದಿತಿದೇವಿಯಲ್ಲಿ ಮರುತ್ತುಗಳ ಜನನ. 312

47. ಯಾವ ಸ್ಥಳದಲ್ಲಿ ದಿತೀದೇವಿಯು ತಪಸ್ಸು ಮಾಡಿದಳೋ ಅದೇ ಸ್ಥಳದಲ್ಲಿ ವಿಶಾಲ ಎಂಬ ಹೆಸರಿನ ರಾಜನು ವಿಶಾಲಾ ಎಂಬ ಹೆಸರಿನ ನಗರವನ್ನು ನಿರ್ಮಿಸಿದ ಕಥೆಯನ್ನು ವಿಶ್ವಾಮಿತ್ರರು ರಾಮನಿಗೆ ಹೇಳಿದುದು. 317

48. ವಿಶಾಲರಾಜನು ಮಡದಿ ಸುಮತಿಯಿಂದ ಕೂಡಿಕೊಂಡು ಅತಿಥಿಗಳಾಗಿ ಬಂದ ವಿಶ್ವಾಮಿತ್ರ-ರಾಮ-ಲಕ್ಷ್ಮಣರನ್ನು ಪೂಜಿಸಿದ್ದು. ಅನಂತರ ಎಲ್ಲರೂ ಅಲ್ಲಿಂದ ಗೌತಮರ ಆಶ್ರಮಕ್ಕೆ ಹೋದದ್ದು. ಇಂದ್ರನಿಂದ ಧರ್ಷಿತಳಾದ ಅಹಲ್ಯೆಯು ಪತಿಯಾದ ಗೌತಮರಿಂದ ಶಪಿಸಲ್ಪಟ್ಟು ಶಿಲೆಯಾಗಿ ಅಲ್ಲಿರುವುದನ್ನು ವಿಶ್ವಾಮಿತ್ರರು ರಾಮನಿಗೆ ಹೇಳಿದುದು. 321

49. ರಾಮನು ಗೌತಮರ ಆಶ್ರಮಕ್ಕೆ ತೆರಳಿ, ಶಿಲೆಯಾಗಿ ಇದ್ದಂತಹ ಅಹಲ್ಯೆ-ಯನ್ನು ಶಾಪದಿಂದ ಮೋಚನ ಮಾಡಿದುದು. 329

50. ವಿಶ್ವಾಮಿತ್ರರು ರಾಮಲಕ್ಷ್ಮಣರೊಡನೆ ಮಿಥಿಲಾಪಟ್ಟಣಕ್ಕೆ ಹೋದದ್ದು. ಜನಕ ಮಹಾರಾಜನಿಗೆ ವಿಶ್ವಾಮಿತ್ರರು ರಾಮಲಕ್ಷ್ಮಣರ ವೃತ್ತಾಂತ ಹೇಳಿದ್ದು. 335

51. ಶತಾನಂದರು ರಾಮನಿಗೆ ವಿಶ್ವಾಮಿತ್ರರ ಚರಿತ್ರೆಯನ್ನು ಹೇಳಿದುದು. ವಿಶ್ವಾಮಿತ್ರರು ಮೊದಲು ಕ್ಷತ್ರಿಯರಾಗಿದ್ದಾಗ (ಆಗ ವಿಶ್ವರಥ ಎಂದು ಹೆಸರು) ಒಮ್ಮೆ ವಸಿಷ್ಠರ ಆಶ್ರಮಕ್ಕೆ ಹೋದದ್ದು. 340

52. ವಸಿಷ್ಠರು ಸೈನ್ಯಸಹಿತನಾದ ವಿಶ್ವರಥರಾಜನಿಗೆ (ವಿಶ್ವಾಮಿತ್ರರಿಗೆ) ಆತಿಥ್ಯ ಮಾಡಿದ್ದು. 346

53. ವಸಿಷ್ಠ ಮಹರ್ಷಿಗಳು ಶಬಲಾ ಗೋವಿನ ಮಹಿಮೆಯಿಂದ ಈ ವಿಧವಾದ ಆತಿಥ್ಯ ಮಾಡಿದ್ದು ಎಂಬುದಾಗಿ ತಿಳಿದ ವಿಶ್ವರಥರಾಜನು ವಸಿಷ್ಠರಿಗೆ ಆ ಶಬಲಾ ಗೋವನ್ನು ಕೊಡಲು ಪ್ರಾರ್ಥಿಸಿದ್ದು. 351

54. ವಿಶ್ವರಥರಾಜನ ಭಟರು ಶಬಲಾಗೋವನ್ನು ಬಲಾತ್ಕಾರವಾಗಿ ಅಪಹಾರ ಮಾಡಿದ್ದು. ಶಬಲಾ ಗೋವು ತನ್ನ ಯೋಗಸಾಮರ್ಥ್ಯದಿಂದ ವಿಶ್ವರಥ-ರಾಜನ ಸೈನ್ಯವನ್ನು ಸೋಲಿಸಿದ್ದು. 356

55. ಶಬಲಾಗೋವು ಸೃಷ್ಟಿಸಿದ ಮ್ಲೇಚ್ಛರಿಂದ ಪರಾಜಿತನಾದ ವಿಶ್ವರಥರಾಜನು ವಸಿಷ್ಠರನ್ನು ಸಂಹರಿಸಲು ಪ್ರಯತ್ನ ಮಾಡಿದುದು. ವಸಿಷ್ಠರ ಹುಂಕಾರ-ದಿಂದಲೇ ಪರಾಜಿತನಾದ ವಿಶ್ವರಥರಾಜನು ರುದ್ರದೇವರನ್ನು ಕುರಿತು ತಪಸ್ಸು ಮಾಡಿದುದು. ರುದ್ರದೇವರ ಅನುಗ್ರಹದಿಂದ ಸಕಲ ಅಸ್ತ್ರಗಳನ್ನು ಪಡೆದು, ವಿಶ್ವರಥರಾಜನು ಮತ್ತೆ ವಸಿಷ್ಠರ ಮೇಲೆ ಯುದ್ಧಕ್ಕೆ ಬಂದದ್ದು. 361

56. ವಸಿಷ್ಠರ ಬ್ರಹ್ಮದಂಡದಿಂದ ವಿಶ್ವರಥರಾಜನ ಎಲ್ಲ ಅಸ್ತ್ರಗಳೂ ನಾಶವಾದಾಗ ವಿಶ್ವರಥರಾಜನು ಬ್ರಾಹ್ಮಣ್ಯಪ್ರಾಪ್ತಿಗಾಗಿ ತಪಸ್ಸು ಮಾಡಲು ನಿರ್ಧರಿಸಿದ್ದು. 367

57. ದಕ್ಷಿಣದಿಕ್ಕಿನಲ್ಲಿ ತಪಸ್ಸನ್ನು ಆಚರಿಸಿದ ವಿಶ್ವರಥರಾಜನಿಗೆ ಬ್ರಹ್ಮದೇವರು ರಾಜರ್ಷಿತ್ವವರವನ್ನು ಕೊಟ್ಟದ್ದು. ಅಷ್ಟರಿಂದ ತೃಪ್ತರಾಗದ ವಿಶ್ವಾಮಿತ್ರರು ಪುನಃ ತಪಸ್ಸು ಮಾಡಿದ್ದು.

ಈ ಮಧ್ಯದಲ್ಲಿ ತ್ರಿಶಂಕು ರಾಜನು ತನ್ನ ಈ ಶರೀರದಿಂದಲೇ ಸ್ವರ್ಗಕ್ಕೆ ಹೋಗಲು ವಸಿಷ್ಠರಿಗೆ ಬಂದು ಪ್ರಾರ್ಥಿಸಿದ್ದು. ಇದು ಅಸಾಧ್ಯ ಎಂಬುದಾಗಿ ವಸಿಷ್ಠರು ಹೇಳಿಕಳಿಸಿದ್ದು. 372

58. ಅನಂತರ ವಸಿಷ್ಠರ ಮಕ್ಕಳ ಬಳಿ ಹೋಗಿ ಈ ಶರೀರದಿಂದಲೇ ಸ್ವರ್ಗಕ್ಕೆ ಹೋಗುವಂತೆ ಮಾಡಲು ತ್ರಿಶಂಕು ಪ್ರಾರ್ಥನೆ ಮಾಡಿದಾಗ, ವಸಿಷ್ಠರ ಮಕ್ಕಳು ತ್ರಿಶಂಕುವಿಗೆ ಚಾಂಡಾಲನಾಗೆಂದು ಶಾಪ ನೀಡಿದ್ದು. ಅನಂತರ ತಪಸ್ಸು ಮಾಡುತ್ತಿರುವ ವಿಶ್ವಾಮಿತ್ರರ ಬಳಿ ಬಂದು ಈ ಶರೀರದಿಂದಲೇ ಸ್ವರ್ಗಕ್ಕೆ ಹೋಗುವಂತೆ ಮಾಡಲು ಯಜ್ಞ ಮಾಡಿಸುವಂತೆ ಪ್ರಾರ್ಥಿಸಿದ್ದು. 377

59. ತ್ರಿಶಂಕುವಿಗೆ ಸಶರೀರವಾಗಿ ಸ್ವರ್ಗಕ್ಕೆ ಹೋಗಲು ಯಜ್ಞ ಮಾಡಿಸಲು ವಿಶ್ವಾಮಿತ್ರರು ಅಂಗೀಕರಿಸಿದ್ದು. ಋತ್ವಿಜರಾಗಿ ಆಹೂತರಾದ ವಸಿಷ್ಠ-ಪುತ್ರರು ವಿಶ್ವಾಮಿತ್ರರಿಗೆ ಅಪಹಾಸ ಮಾಡುತ್ತಿರಲು, ವಿಶ್ವಾಮಿತ್ರರು ವಸಿಷ್ಠಪುತ್ರರಿಗೆ ನೀಚಯೋನಿಯಲ್ಲಿ ಹುಟ್ಟುವಂತೆ ಶಾಪವನ್ನು ನೀಡಿದುದು. 382

60. ವಿಶ್ವಾಮಿತ್ರರು ಅನೇಕ ಋತ್ವಿಜರ ಸಹಾಯದಿಂದ ಯಜ್ಞಪ್ರಾರಂಭ ಮಾಡಿಸಿದ್ದು. ಭಾಗಪ್ರತಿಗ್ರಹ ಮಾಡಲು ದೇವತೆಗಳು ಬರದಿರಲು, ವಿಶ್ವಾಮಿತ್ರರು ತಮ್ಮ ತಪೋಬಲದಿಂದ ಚಂಡಾಲ ರೂಪದಿಂದಲೇ ತ್ರಿಶಂಕುವನ್ನು ಸ್ವರ್ಗಕ್ಕೆ ಕಳಿಸಿದ್ದು. ಸಶರೀರನಾದ ತ್ರಿಶಂಕುವು ದೇವತೆ-ಗಳಿಂದ ತಲೆಕೆಳಗಾಗಿ ಬೀಳಿಸಲ್ಪಟ್ಟರೂ ಸಹ ವಿಶ್ವಾಮಿತ್ರರ ಭಯದಿಂದ ದೇವತೆಗಳು ತ್ರಿಶಂಕುವನ್ನು ಮತ್ತೆ ಅಂತರಿಕ್ಷದಲ್ಲಿಯೇ ನಿಲ್ಲಿಸಿದ್ದು. 387

61. ಈ ರೀತಿಯಾಗಿ ತಪಸ್ಸಿಗೆ ವಿಘ್ನ ಉಂಟಾಗಿದ್ದರಿಂದ ವಿಶ್ವಾಮಿತ್ರರು ಪುಷ್ಕರಕ್ಷೇತ್ರಕ್ಕೆ ಹೋಗಿ ತಪಸ್ಸನ್ನು ಮಾಡಿದ್ದು. ಈ ಮಧ್ಯದಲ್ಲಿ ಯಾಗ

ಮಾಡಲು ಆರಂಭಿಸಿದ ಅಂಬರೀಷ ರಾಜನ ಯಜ್ಞಪಶುವು ನಷ್ಟವಾಗಲು, ಯಜ್ಞಪಶುವಿಗೆ ಪ್ರತಿನಿಧಿಯಾಗಿ ಋಚೀಕರ ಮಗನಾದ ಶುನಃಶೇಪನನ್ನು ಸಾವಿರ ಗೋವುಗಳನ್ನು ಕೊಟ್ಟು ನರಪಶುವಾಗಿ ಖರೀದಿಸಿದ್ದು. 394

62. ಶುನಃಶೇಪನು ವಿಶ್ವಾಮಿತ್ರರ ಬಳಿ ತೆರಳಿ ತನ್ನನ್ನು ರಕ್ಷಿಸುವಂತೆ ಪ್ರಾರ್ಥಿಸಿದ್ದು. ವಿಶ್ವಾಮಿತ್ರರು ಉಪದೇಶಿಸಿದ ಮಂತ್ರವನ್ನು ಜಪಿಸಿದಾಗ, ಅದರಿಂದ ಸಂತುಷ್ಟನಾದ ಇಂದ್ರನು ಶುನಃಶೇಪನನ್ನು ರಕ್ಷಿಸುವ ಮೂಲಕ ರಾಜನಿಗೆ ಯಜ್ಞಫಲವನ್ನು ನೀಡಿದುದು. 399

63. ಮತ್ತೆ ಪುಷ್ಕರಕ್ಷೇತ್ರದಲ್ಲಿ ತಪಸ್ಸು ಮಾಡುತ್ತಿರುವ ವಿಶ್ವಾಮಿತ್ರರ ತಪಸ್ಸಿಗೆ ವಿಘ್ನ ಮಾಡಲು ದೇವತೆಗಳು ಮೇನಕೆಯನ್ನು ಕಳಿಸಿದುದು. ಅವಳ ದರ್ಶನಮಾತ್ರದಿಂದ ಕ್ಷೋಭೆಗೊಂಡ ಹೃದಯವುಳ್ಳ ವಿಶ್ವಾಮಿತ್ರರು ಅವಳೊಂದಿಗೆ ಹತ್ತುವರ್ಷಗಳವರೆಗೆ ಸುಖವಾಗಿ ವಾಸಿಸಿದ್ದು. ತಮ್ಮ ತಪಸ್ಸು ನಷ್ಟವಾಗಿದ್ದಕ್ಕೆ ಪಶ್ಚಾತ್ತಾಪ ಹೊಂದಿದ ವಿಶ್ವಾಮಿತ್ರರು ಮತ್ತೆ ಹಿಮಾಲಯದಲ್ಲಿ ಶ್ರಮಸಾಧ್ಯವಾದ ತಪಸ್ಸನ್ನು ಮಾಡಿದುದು. ಬ್ರಹ್ಮದೇವರು ವಿಶ್ವಾಮಿತ್ರರಿಗೆ ಮಹರ್ಷಿತ್ವ ವರವನ್ನು ಕೊಟ್ಟದ್ದು. ಅಷ್ಟರಿಂದಲೂ ತೃಪ್ತರಾಗದ ವಿಶ್ವಾಮಿತ್ರರು ಮತ್ತೆ ತಪಸ್ಸು ಮಾಡಿದ್ದು. 407

64. ವಿಶ್ವಾಮಿತ್ರರ ತಪೋಭಂಗ ಉಂಟು ಮಾಡುವುದಕ್ಕಾಗಿ ಇಂದ್ರನು ರಂಭೆಯನ್ನು ಕಳಿಸಿದ್ದು. ವಿಶ್ವಾಮಿತ್ರರು ಅವಳಿಗೆ ಕಲ್ಲಾಗುವಂತೆ ಶಾಪ ನೀಡಿದ್ದು. 413

65. ಬ್ರಹ್ಮದೇವರು ವಿಶ್ವಾಮಿತ್ರರಿಗೆ ಬ್ರಹ್ಮರ್ಷಿತ್ವವರವನ್ನು ಕೊಟ್ಟದ್ದು. ಶತಾನಂದರು ಈ ವಿಧವಾದ ಚರಿತ್ರೆಯನ್ನು ರಾಮನಿಗೆ ಹೇಳಿ ಸಮಾಪ್ತಿ-ಗೊಳಿಸಿದ್ದು. 418

66. ರಾಮ-ಲಕ್ಷ್ಮಣರಿಗೆ ಶಿವಧನುಸ್ಸನ್ನು ನೋಡುವ ಅಭಿಲಾಷೆ ಉಂಟಾ-ದದ್ದು. ''ಒಂದುವೇಳೆ ರಾಮನು ಧನುಸ್ಸನ್ನು ಎದೆಯೇರಿಸಿದ್ದೇ ಆದರೆ ಆಗ ನಾನು ಅವನಿಗೆ ಸೀತೆಯನ್ನು ಕೊಟ್ಟು ಮದುವೆ ಮಾಡುತ್ತೇನೆ'' ಎಂಬುದಾಗಿ ಜನಕರಾಜನು ಹೇಳಿದುದು. 427

67. ರಾಜಭಟರು ಧನುಸ್ಸನ್ನು ತಂದದ್ದು. ರಾಮನು ಕೈಯಲ್ಲಿ ಧನುಸ್ಸನ್ನು ಹಿಡಿದು ಎದೆಯೇರಿಸುತ್ತಿರಲು ಧನುಸ್ಸು ಮಧ್ಯದಲ್ಲಿ ಮುರಿದದ್ದು. ಜನಕರಾಜನು ದಶರಥನನ್ನು ಕರೆಸುವುದಕ್ಕಾಗಿ ದೂತನನ್ನು ಕಳಿಸಿದ್ದು. 433

68. ರಾಮನು ಮಾಡಿದಂತಹ ಧನುರ್ಭಂಗ ಮೊದಲಾದ ಎಲ್ಲ ವೃತ್ತಾಂತವನ್ನು ದೂತನ ಮುಖಾಂತರ ತಿಳಿದಂತಹ ದಶರಥನು ಮಿಥಿಲಾ ನಗರವನ್ನು ಕುರಿತು ಹೋಗಲು ನಿರ್ಧಾರ ಮಾಡಿದುದು. 438

69. ದಶರಥನು ಸಕಲ ಪರಿವಾರ ಸಮೇತನಾಗಿ ಮಿಥಿಲಾನಗರಕ್ಕೆ ಹೊರಟದ್ದು. ಜನಕರಾಜನು ದಶರಥನನ್ನು ಸತ್ಕರಿಸಿ ರಾಮನಿಗೆ ಕನ್ಯಾದಾನ ಮಾಡುವ ಪ್ರತಿಜ್ಞೆ ಮಾಡಿದುದು. 442

70. ಜನಕರಾಜನ ತಮ್ಮನಾದ ಕುಶಧ್ವಜನು ಮಿಥಿಲೆಗೆ ಬಂದದ್ದು. ಕನ್ಯೆಯ ವಾಗ್ದಾನಕ್ಕಾಗಿ ದಶರಥನ ವಂಶವನ್ನು ವರ್ಣಿಸಿದ್ದು. 447

71. ಜನಕರಾಜನು ತನ್ನ ವಂಶದ ವರ್ಣನೆ ಮಾಡುವ ಮೂಲಕವಾಗಿ ರಾಮಲಕ್ಷ್ಮಣರಿಗೆ ಸೀತಾ-ಊರ್ಮಿಳಾರನ್ನು ಮದುವೆ ಮಾಡಿಕೊಡುವುದಾಗಿ ಪ್ರತಿಜ್ಞೆ ಮಾಡಿದುದು. 456

72. ವಸಿಷ್ಠ-ವಿಶ್ವಾಮಿತ್ರರು ಕುಶಧ್ವಜನ ಇಬ್ಬರು ಹೆಣ್ಣುಮಕ್ಕಳನ್ನು ಭರತ-ಶತ್ರುಘ್ನರಿಗೆ ಕೊಡಲು ಪ್ರೇರಣೆ ಮಾಡಿದುದು. ಜನಕರಾಜನು ಸಂತೋಷದಿಂದ ಅದಕ್ಕೆ ಒಪ್ಪಿಗೆ ನೀಡಿದ್ದು, ದಶರಥನು ವಿವಾಹಕ್ಕೆ ಅಂಗವಾಗಿ ಗೋದಾನ ಪ್ರಕ್ರಿಯೆ ನಡೆಸಿದುದು. 461

73. ದಶರಥನು ರಾಮಾದಿಗಳಿಂದ ಸಹಿತನಾಗಿ ಕಲ್ಯಾಣಮಂಟಪವನ್ನು ಪ್ರವೇಶ ಮಾಡಿದುದು. ವಸಿಷ್ಠರೇ ಮುಂತಾದ ಋಷಿಗಳನ್ನು ಮುಂದೆ ಮಾಡಿ- ಕೊಂಡು ವೈವಾಹಿಕ ಕ್ರಿಯೆಗಳನ್ನು ಆರಂಭಿಸಿದ್ದು. ದಶರಥನ ರಾಮ ಮೊದಲಾದ ನಾಲ್ಕು ಮಕ್ಕಳು ಜನಕರಾಜನ ಸೀತಾ ಮೊದಲಾದ ನಾಲ್ವರು ಹೆಣ್ಣುಮಕ್ಕಳನ್ನು ಮದುವೆ ಆದುದು. 466

74. ದಶರಥ ಮುಂತಾದವರ ಅನುಮತಿ ಪಡೆದು ವಿಶ್ವಾಮಿತ್ರರು ತಮ್ಮ ಆಶ್ರಮಕ್ಕೆ ಹೋದದ್ದು. ವಿವಾಹ ಮಹೋತ್ಸವದ ಸಮಾಪ್ತಿಯಾದ ನಂತರ ದಶರಥನು ಅಯೋಧ್ಯೆಗೆ ಮರಳಿ ಹೊರಟದ್ದು. ಮಾರ್ಗಮಧ್ಯದಲ್ಲಿ ದಶರಥನಿಗೆ ಅಪಶಕುನಗಳು ಕಾಣಿಸಿದುದು. ಆ ಸಂದರ್ಭದಲ್ಲಿ ಪರಶುರಾಮದೇವರು ಅಲ್ಲಿಗೆ ಬಂದದ್ದು. 475

75. ಪರಶುರಾಮದೇವರು ಶೈವ-ವೈಷ್ಣವ ಧನುಸ್ಸುಗಳ ವೃತ್ತಾಂತವನ್ನು ಹೇಳುವ ಮೂಲಕ ತಮ್ಮಲ್ಲಿರುವ ವೈಷ್ಣವಧನುಸ್ಸಿನಲ್ಲಿ ಬಾಣವನ್ನು ಸಂಧಾನ ಮಾಡಲು ರಾಮನಿಗೆ ಪ್ರಚೋದಿಸಿದ್ದು. 480

76. ರಾಮನು ಆ ವೈಷ್ಣವ ಧನುಸ್ಸಿನಲ್ಲಿ ಬಾಣವನ್ನು ಸಂಧಾನ ಮಾಡಿ ಅಮೋಘವಾದ ಆ ಬಾಣವನ್ನು ಎಲ್ಲಿ ಬಿಡಬೇಕೆಂದು ಪ್ರಶ್ನಿಸಿದ್ದು. ಅತುಲ ಎಂಬ ದೈತ್ಯನು ತನ್ನ ತಪೋಬಲದಿಂದ ಲೋಕಗಳನ್ನೆಲ್ಲ ಗೆದ್ದು, ಪರಶು ರಾಮದೇವರ ಉದರದಲ್ಲಿ ಅಡಗಿದ್ದ. ಅಂತಹ ತಪಸ್ಸಿನಿಂದ ಗೆದ್ದಂತಹ ಲೋಕಗಳ ಕಡೆ (ತನ್ನ ಉದರದಲ್ಲಿದ್ದ ಅತುಲನಾಮಕ ದೈತ್ಯನ ಕಡೆ) ಬಾಣ ಬಿಡಲು ಪರಶುರಾಮದೇವರು ಬಾಣವನ್ನು ಬಿಡಲು ತಿಳಿಸಲು ರಾಮನು ಅಲ್ಲಿ ಬಾಣ ಬಿಟ್ಟದ್ದು. ರಾಮನು ಸಾಕ್ಷಾತ್ ನಾರಾಯಣನೇ ಎಂದು ಉದ್ಘೋಷಣೆ ಮಾಡುವ ಮೂಲಕ ಪರಶುರಾಮದೇವರು ಮಹೇಂದ್ರಪರ್ವತಕ್ಕೆ ಹೋದದ್ದು. 487

77. ಪರಶುರಾಮದೇವರು ಹೋದದ್ದರಿಂದ ಸಂತುಷ್ಟನಾದ ದಶರಥನು ಅಯೋಧ್ಯಾನಗರವನ್ನು ಪ್ರವೇಶ ಮಾಡಿದುದು. ರಾಮ ಮೊದಲಾದ ನಾಲ್ಕು ಮಕ್ಕಳೂ ತಮ್ಮ ತಮ್ಮ ಪತ್ನಿಯರ ಜೊತೆ ಸುಖವಾಗಿ ವಿಹಾರ ಮಾಡಿದುದು. 494

ಶುಭಾಶಂಸನೆ

ಶ್ರೀಯುತರಾದ ಎಂ.ಕೆ. ರಾಘವೇಂದ್ರರಾವ್ (ಚೈತ್ರ) ಅವರು ನಮ್ಮ ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನ ಪ್ರತಿಷ್ಠಾನದ ಸದಸ್ಯರೇ ಆಗಿದ್ದು, ಸಂಸ್ಥೆಯ ಎಲ್ಲ ಕಾರ್ಯಚಟುವಟಿಕೆಗಳಿಗೂ ಬೆನ್ನೆಲುಬಾಗಿ ಇದ್ದಾರೆ ಎಂದರೆ ತಪ್ಪಾಗುವುದಿಲ್ಲ. ಸರಳ ಸಜ್ಜನಿಕೆಯ ಸ್ವಭಾವದವರು.

ಇಂತಹ ಶ್ರೀಯುತ ಎಂ.ಕೆ. ರಾಘವೇಂದ್ರರಾವ್ (ಚೈತ್ರ) ಅವರು ತಮ್ಮ ಸಹಧರ್ಮಿಣಿ ದಿ. ಶ್ರೀಮತಿ ತುಲಸೀ ಅವರ ಸ್ಮರಣಾರ್ಥ-ವಾಗಿ ರಾಮಾಯಣದ ಬಾಲಕಾಂಡದ ಈ ಸಂಪುಟದ ಪ್ರಕಾಶನಕ್ಕೆ ಸಂಪೂರ್ಣ ಆರ್ಥಿಕಸೇವೆ ಸಲ್ಲಿಸಿದ್ದಾರೆ.

ಈ ಮೂಲಕ ಶ್ರೀರಾಮಚಂದ್ರನ, ಶ್ರೀವೇದವ್ಯಾಸದೇವರ, ಶ್ರೀಮದಾಚಾರ್ಯರ ವಿಶೇಷಸೇವೆ ಸಲ್ಲಿಸಿದ ಶ್ರೀಯುತ ಎಂ.ಕೆ. ರಾಘವೇಂದ್ರರಾವ್ (ಚೈತ್ರ) ಇವರಿಗೆ ಹಾಗೂ ಇವರ ಕುಟುಂಬಕ್ಕೆ ಭಗವಂತ ಉತ್ತಮ ಆರೋಗ್ಯ, ಆಯುಷ್ಯ ನೀಡಿ, ಜ್ಞಾನ-ಭಕ್ತಿ-ವೈರಾಗ್ಯಗಳನ್ನು ಕೊಟ್ಟು ಅವರಿಂದ ಹೆಚ್ಚೆಚ್ಚು ಸಾಧನೆ ಮಾಡಿಸಲಿ ಎಂಬುದಾಗಿ ಪ್ರಾರ್ಥಿಸುತ್ತ, ಅವರಿಗೆ ಈ ಸಂದರ್ಭದಲ್ಲಿ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ.

-ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ
ಅಧ್ಯಕ್ಷರು, ದ್ವೈತವೇದಾಂತ ಅಧ್ಯಯನ
ಮತ್ತು ಸಂಶೋಧನ ಪ್ರತಿಷ್ಠಾನ

ಶ್ರೀಃ

ಶ್ರೀಮದ್ವಾಲ್ಮೀಕಿರಾಮಾಯಣಮ್

ಬಾಲಕಾಂಡಮ್

ಪ್ರಥಮಃ ಸರ್ಗಃ

॥ ಶ್ರೀರಾಮಚಂದ್ರಾಯ ನಮಃ ॥

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥ ೧ ॥

ತಪಸ್ಸು ಮತ್ತು ವೇದಾಧ್ಯಯನಾಧ್ಯಾಪನಗಳಲ್ಲಿಯೇ ಸದಾ ನಿರತರೂ ಶಾಸ್ತ್ರಕಾವ್ಯ ವಾಙ್ಮಯವೇತ್ತರಲ್ಲಿ ಉತ್ತಮರೂ ಮುನಿಪುಂಗವರೂ ಆದ ನಾರದರ ಬಳಿ ತಪಸ್ವಿಗಳಾದ ವಾಲ್ಮೀಕಿಮುನಿ ಪ್ರಶ್ನೆ ಮಾಡಿದರು.

ಕೋ ನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್ ।
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥ ೨ ॥

ಈಗ ಲೋಕದಲ್ಲಿ ಗುಣಪೂರ್ಣನಾಗಿರುವವನು ಯಾರು? ಯಾರು ವೀರ್ಯಶಾಲಿ? ಯಾರು ಧರ್ಮಜ್ಞ, ಕೃತಜ್ಞ, ಸತ್ಯವಾದಿ? ಹಾಗೂ ಏಕಪತ್ನ್ಯಾದಿ ವ್ರತಗಳಲ್ಲಿ ದೃಢನಿಷ್ಠೆ ಉಳ್ಳವನು ಯಾರು?

ಚಾರಿತ್ರೇಣ ಚ ಕೋ ಯುಕ್ತಃ ಸರ್ವಭೂತೇಷು ಕೋ ಹಿತಃ ।
ವಿದ್ವಾನ್ ಕಃ ಕಃ ಸಮರ್ಥಶ್ಚ ಕಶ್ಚೈಕಪ್ರಿಯದರ್ಶನಃ ॥ ೩ ॥

ಒಳ್ಳೆಯ ಚಾರಿತ್ರ್ಯ ಉಳ್ಳವನು ಯಾರು? ಎಲ್ಲ ಜೀವಿಗಳಿಗೆ ಹಿತವನ್ನೇ ಬಯಸುವವನಾರು? ಎಲ್ಲ ಬಲ್ಲವ ಒಬ್ಬನೆಂದರೆ ಯಾರು? ಸರ್ವಸಮರ್ಥ ಯಾರು? ಯಾರ ದರ್ಶನ ಸದಾಪ್ರಿಯಕರವೇ ಆಗಿರುವುದು?

ಆತ್ಮವಾನ್ ಕೋ ಜಿತಕ್ರೋಧೋ ದ್ಯುತಿಮಾನ್ ಕೋऽನಸೂಯಕಃ ।
ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ ॥ ೪ ॥

ಮನೋನಿಗ್ರಹ ಉಳ್ಳವನು ಯಾರು? ಕೋಪವನ್ನು ಗೆದ್ದವನಾರು? ಶರೀರಕಾಂತಿ ಉಳ್ಳವನು ಯಾರು? ಅಸೂಯೆ ಇಲ್ಲದವನು ಯಾರು? ರಣರಂಗದಲ್ಲಿ,

ಕೋಪಿಸಿಕೊಂಡು ನಿಂತನೆಂದರೆ ದೇವತೆಗಳೂ ಕೂಡ ಯಾರಿಗೆ ಭಯಭೀತರಾಗುವರು?

ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ।
ಮಹರ್ಷೇ ತ್ವಂ ಸಮರ್ಥೋSಸಿ ಜ್ಞಾತುಮೇವಂವಿಧಂ ನರಮ್ ॥ ೫ ॥

ಇದನ್ನು ನಿಮ್ಮಿಂದ ಕೇಳಿ ತಿಳಿಯಲು ನಾನು ಬಯಸುತ್ತೇನೆ. ಈ ವಿಷಯದಲ್ಲಿ ನನಗೆ ಬಹಳ ಕುತೂಹಲವಿದೆ. ಮಹರ್ಷಿಗಳೇ ಇಂಥ ವ್ಯಕ್ತಿಯನ್ನು ತಿಳಿಯಲು ನೀವೇ ಸಮರ್ಥರು.

ಶ್ರುತ್ವಾ ಚೈತತ್ತ್ರಿಲೋಕಜ್ಞೋ ವಾಲ್ಮೀಕೇರ್ನಾರದೋ ವಚಃ ।
ಶ್ರೂಯತಾಮಿತಿ ಚಾಮಂತ್ರ್ಯ ಪ್ರಹೃಷ್ಟೋ ವಾಕ್ಯಮಬ್ರವೀತ್ ॥ ೬ ॥

ವಾಲ್ಮೀಕಿಮುನಿಯ ಈ ಮಾತನ್ನು ಕೇಳಿ ಬಲು ಸಂತುಷ್ಟರಾದರು ನಾರದರು. ಮೂಲೋಕಗಳನ್ನು ಕಂಡು ತಿಳಿದವರು ನಾರದರು. ಅದರಿಂದ, 'ಇಗೋ! ಹೇಳುವೆನು ಕೇಳು' ಎನ್ನುತ್ತ ಹೇಳಲು ತೊಡಗಿದರು.

ಬಹವೋ ದುರ್ಲಭಾಶ್ಚೈವ ಯೇ ತ್ವಯಾ ಕೀರ್ತಿತಾ ಗುಣಾಃ ।
ಮುನೇ ವಕ್ಷ್ಯಾಮ್ಯಹಂ ಬುದ್ಧ್ವಾ ತೈರ್ಯುಕ್ತಃ ಶ್ರೂಯತಾಂ ನರಃ॥ ೭ ॥

ನೀನು ಕೇಳಿದ ಈ ಎಲ್ಲ ಗುಣಗಳೂ ಒಬ್ಬ ವ್ಯಕ್ತಿಯಲ್ಲಿ ಕಾಣುವುದು ದುರ್ಲಭವೇ. ಆದರೂ ಆ ಎಲ್ಲ ಗುಣಗಳಿಂದ ಕೂಡಿರುವ ಒಬ್ಬ ವ್ಯಕ್ತಿ ನನಗೆ ಗೊತ್ತು. ಮುನಿಯೇ! ಅವನು ಯಾರೆಂದು ಹೇಳುವೆನು.

ಇಕ್ಷ್ವಾಕುವಂಶಪ್ರಭವೋ ರಾಮೋ ನಾಮ ಜನೈಃ ಶ್ರುತಃ ।
ನಿಯತಾತ್ಮಾ ಮಹಾವೀರ್ಯೋ ದ್ಯುತಿಮಾನ್ ಧೃತಿಮಾನ್ ವಶೀ ॥ ೮ ॥

ಇಕ್ಷ್ವಾಕುವಂಶದಲ್ಲಿ ಜನಿಸಿದವನು ಶ್ರೀರಾಮ ಎಂಬುವನು. ಎಲ್ಲ ಜನರಿಗೂ ಗೊತ್ತು. ಒಳ್ಳೆಯ ಮನೋನಿಗ್ರಹ ಉಳ್ಳವನು. ಮಹಾ ವೀರ್ಯಶಾಲಿ, ಶರೀರಕಾಂತಿ ಉಳ್ಳವನು ಆಪತ್ತಿನಲ್ಲಿ ಎಂದೂ ಎದೆಗುಂದದವನು ಇಂದ್ರಿಯ ನಿಗ್ರಹ ಉಳ್ಳವನು.

ಬುದ್ಧಿಮಾನ್ ನೀತಿಮಾನ್ ವಾಗ್ಮೀ ಶ್ರೀಮಾಂಛತ್ರುನಿಬರ್ಹಣಃ ।
ವಿಪುಲಾಂಸೋ ಮಹಾಬಾಹುಃ ಕಂಬುಗ್ರೀವೋ ಮಹಾಹನುಃ ॥ ೯ ॥

ಶಾಸ್ತ್ರ ತಿಳಿಯಲು ಬೇಕಾಗುವ ಚುರುಕು ಬುದ್ಧಿ ಉಳ್ಳವನು. ರಾಜನೀತಿಗಳನ್ನು ಬಲ್ಲವನು ಒಳ್ಳೆಯ ಮಾತುಗಾರಿಕೆ ಉಳ್ಳವನು. ವೇದವಿದ್ಯೆ ಎಂಬ ಸಂಪತ್ತಿನಿಂದ ಶ್ರೀಮಂತನಾಗಿರುವನು. ಶತ್ರುನಾಶಕ, ಉನ್ನತ ಭುಜ ಉಳ್ಳವನು. ನಿಡಿದಾದ ತೋಳುಳ್ಳವನು ಶಂಖದಂಥ ಕೊರಳುಳ್ಳವನು, ಉಬ್ಬಿದ ಕೆನ್ನೆಯವನು.

ಮಹೋರಸ್ಕೋ ಮಹೇಷ್ವಾಸೋ ಗೂಢಜತ್ರುರರಿಂದಮಃ ।
ಆಜಾನುಬಾಹುಃ ಸುಶಿರಾಃ ಸುಲಲಾಟಃ ಸುವಿಕ್ರಮಃ ॥ ೧೦ ॥

ವಿಶಾಲ ಎದೆಯವನು ಮಹಾ ಬಿಲ್ಲುಗಾರ. ಎದ್ದುಕಾಣಿಸದ ಕೊರಳಿನ ಎಲುಬಿನವನು, ಅರಿಷಡ್ವರ್ಗವನ್ನು ದಮನ ಮಾಡಿಕೊಂಡಿರುವವನು. ನಿಡಿದಾದ ತೋಳುಳ್ಳವನು. ಸಮವೃತ್ತಾಕಾರದ ಶಿರ ಉಳ್ಳವನು. ಅರ್ಧಚಂದ್ರಾಕಾರದ ಹಣೆ ಉಳ್ಳವನು. ಸಿಂಹದಂಥ ನಡಿಗೆ ಉಳ್ಳವನು.

ಸಮಃ ಸಮವಿಭಕ್ತಾಂಗಃ ಸ್ನಿಗ್ಧವರ್ಣಃ ಪ್ರತಾಪವಾನ್ ।
ಪೀನವಕ್ಷಾ ವಿಶಾಲಾಕ್ಷೋ ಲಕ್ಷ್ಮೀವಾಂಶ್ಶುಭಲಕ್ಷಣಃ ॥ ೧೧ ॥

ಸಮಪ್ರಮಾಣದ ಎತ್ತರವಾದವನು. ಸಮಪ್ರಮಾಣದ ಅವಯವಗಳುಳ್ಳವನು, ಮನೋಹರ ಮೈಬಣ್ಣ ಉಳ್ಳವನು, ಪ್ರತಾಪಶಾಲಿ, ಉಬ್ಬಿದೆದೆಯವನು, ಉದ್ದ ಕಣ್ಣಿನವನು, ಸರ್ವಾಂಗ ಶೋಭೆ ಉಳ್ಳವನು, ಶುಭ ಲಕ್ಷಣ ಸಂಪನ್ನನು.

ಧರ್ಮಜ್ಞಃ ಸತ್ಯಸಂಧಶ್ಚ ಪ್ರಜಾನಾಂ ಚ ಹಿತೇ ರತಃ ।
ಯಶಸ್ವೀ ಜ್ಞಾನಸಂಪನ್ನಃ ಶುಚಿರ್ವಶ್ಯಃ ಸಮಾಧಿಮಾನ್ ॥ ೧೨ ॥

ಧರ್ಮಜ್ಞ ಸತ್ಯಸಂಧ ಪ್ರಜೆಗಳ ಹಿತದಲ್ಲಿಯೇ ನಿರತ, ಯಶಸ್ವಿ, ಜ್ಞಾನಸಂಪನ್ನ, ಶುದ್ಧಮನಸಿನವನು, ಹಿರಿಯರಿಗೆ ವಿನೀತ, ತಾಳ್ಮೆ ಉಳ್ಳವನು.

ಪ್ರಜಾಪತಿಸಮಃ ಶ್ರೀಮಾನ್ ಧಾತಾ ರಿಪುನಿಷೂದನಃ ।
ರಕ್ಷಿತಾ ಜೀವಲೋಕಸ್ಯ ಧರ್ಮಸ್ಯ ಪರಿರಕ್ಷಿತಾ ॥ ೧೩ ॥

ಪ್ರಜಾಪತಿಗಳಂತೆ ಸರ್ವಲೋಕಪೂಜ್ಯ, ದಿವ್ಯಕಾಂತಿಯುಳ್ಳವನು, ಪ್ರಜಾಪೋಷಕ, ಪ್ರಜೆಗಳ ಶತ್ರುಗಳನ್ನು ನಾಶ ಮಾಡುವವನು, ಜೀವಲೋಕ ರಕ್ಷಕ, ಧರ್ಮರಕ್ಷಕ.

ರಕ್ಷಿತಾ ಸ್ವಸ್ಯ ಧರ್ಮಸ್ಯ ಸ್ವಜನಸ್ಯ ಚ ರಕ್ಷಿತಾ ।
ವೇದವೇದಾಂಗತತ್ತ್ವಜ್ಞೋ ಧನುರ್ವೇದೇ ಚ ನಿಷ್ಠಿತಃ ॥ ೧೪ ॥

ಸ್ವಧರ್ಮಪರಿಪಾಲಕ, ತನ್ನವರಿಗೆ ರಕ್ಷಣೆ ನೀಡುವವನು, ವೇದ ವೇದಾಂಗ ತತ್ವಗಳನ್ನು ಬಲ್ಲವನು. ಧನುರ್ವೇದದಲ್ಲಿ ನಿಷ್ಠೆ ಉಳ್ಳವ.

ಸರ್ವಶಾಸ್ತ್ರಾರ್ಥತತ್ತ್ವಜ್ಞಃ ಸ್ಮೃತಿಮಾನ್ ಪ್ರತಿಭಾನವಾನ್ ।
ಸರ್ವಲೋಕಪ್ರಿಯಃ ಸಾಧುರದೀನಾತ್ಮಾ ವಿಚಕ್ಷಣಃ ॥ ೧೫ ॥

ಸರ್ವಶಾಸ್ತ್ರರಹಸ್ಯಗಳನ್ನು ಅರಿತವನು, ಸ್ಮರಣಶಕ್ತಿ ಉಳ್ಳವನು, ಪ್ರತಿಭಾಸಂಪನ್ನ, ಸರ್ವಲೋಕಪ್ರಿಯ ಎಲ್ಲರಿಗೂ ಉಪಕಾರ ಮಾಡುವ ಸಾಧುಸ್ವಭಾವದವನು. ಅನ್ಯರಿಗೆ ತಲೆ ತಗ್ಗಿಸದವನು, ಎಲ್ಲ ಕಾರ್ಯಗಳಲ್ಲಿಯೂ ನಿಪುಣ.

ಸರ್ವದಾಽಭಿಗತಃ ಸದ್ಭಿಃ ಸಮುದ್ರ ಇವ ಸಿಂಧುಭಿಃ ।
ಆರ್ಯಃ ಸರ್ವಸಮಶ್ಚೈವ ಸದೈವಪ್ರಿಯದರ್ಶನಃ ॥ ೧೬ ॥

ನದಿಗಳಿಗೆಲ್ಲಕ್ಕೂ ಸಮುದ್ರದಂತೆ, ಸಜ್ಜನರಿಗೆಲ್ಲರಿಗೂ ಆಸರೆಯಾಗುವವನು. ಸರ್ವಪೂಜ್ಯ , ಸರ್ವರಿಗೂ ಒಂದೇರೀತಿ ಅನುಕೂಲವಾಗಿ ನಡೆದುಕೊಳ್ಳುವವನು, ಸದಾ ಪ್ರಿಯಕರನಾಗಿಯೇ ಕಂಡುಬರುವವ.

ಸ ಚ ಸರ್ವಗುಣೋಪೇತಃ ಕೌಸಲ್ಯಾನಂದವರ್ಧನಃ ।
ಸಮುದ್ರ ಇವ ಗಾಂಭೀರ್ಯೇ ಧೈರ್ಯೇಣ ಹಿಮವಾನಿವ ॥ ೧೭ ॥

ಅವನು! ಸರ್ವಗುಣ ಸಂಪನ್ನನಾದ ಕೌಸಲ್ಯಾನಂದ ವರ್ಧನನಾದ ಶ್ರೀರಾಮ! ಗಾಂಭೀರ್ಯದಲ್ಲಿ ಸಮುದ್ರದಂತೆ, ಧೈರ್ಯದಲ್ಲಿ ಹಿಮಾಲಯ ಪರ್ವತದಂತೆ.

ವಿಷ್ಣುನಾ ಸದೃಶೋ ವೀರ್ಯೇ ಸೋಮವತ್ಪ್ರಿಯದರ್ಶನಃ ।
ಕಾಲಾಗ್ನಿಸದೃಶಃ ಕ್ರೋಧೇ ಕ್ಷಮಯಾ ಪೃಥಿವೀಸಮಃ ।
ಧನದೇನ ಸಮಸ್ತ್ಯಾಗೇ ಸತ್ಯೇ ಧರ್ಮ ಇವಾಪರಃ ॥ ೧೮ ॥

ಪರಾಕ್ರಮದಲ್ಲಿ ವಿಷ್ಣುವಿನಂತೆ ಕಣ್ಣನೋಟಕ್ಕೆ ಚಂದ್ರನಂತೆ ಆಹ್ಲಾದಕರ, ಕೋಪ ಬಂದರೆ, ಪ್ರಳಯಾಗಿಯಂತೆ, ಕ್ಷಮಾಗುಣದಲ್ಲಿ ಪೃಥಿವಿಯಂತೆ. ದಾನದಲ್ಲಿ ಕುಬೇರ, ಸತ್ಯದಲ್ಲಿ ಧರ್ಮನಂತೆ.

ದಾನದಲ್ಲಿ ಕುಬೇರ, ಸತ್ಯದಲ್ಲಿ ಧರ್ಮ ಎಂದು ಪ್ರಸಿದ್ಧಿ ಉಂಟೆ? ಎಂದರೆ, ದ್ವಾರಕಾ ನಿರ್ಮಾಣಕಾಲದಲ್ಲಿ ಕುಬೇರ ತನ್ನ ತನ್ನ ಎಲ್ಲ ಅಕ್ಷಯ ನಿಧಿಗಳನ್ನೇ ಶ್ರೀಕೃಷ್ಣನಿಗೆ ನೀಡಿದನಂತೆ! ಹಾಗೆ ದಶಮಸ್ಕಂಧ (ಅ.೫೩) ಹೇಳುತ್ತಿದೆ. ದಾನ ಕೊಟ್ಟರೆ, ಕುಬೇರನಂತೆ ಕೊಡಬೇಕು, ಬೇರೆಯವರು ಕೊಡುವುದು 'ಶಾಕಾಯ ವಾ ಸ್ಯಾತ್ ಲವಣಾಯ ವಾ ಸ್ಯಾತ್' ಎಂಬಂತೆ ಅಪ್ರಯೋಜಕವೆನಿಸೀತು.' ಆಪದಾಮ-ಪಹರ್ತಾರಂ ದಾತಾರಂ ಸರ್ವಸಂಪದಾಂ' ಎಂಬಂತೆ ಶ್ರೀರಾಮ ಕೊಟ್ಟರೆ ಅಂಥ ಉತ್ತಮ ದಾನವನ್ನೇ ಕೊಡುತ್ತಾನೆ. ಬೇರೆ ದೇವತೆಗಳು ಕೊಟ್ಟರೆ ಅವೆಲ್ಲ ಅಲ್ಪ, ಕ್ಷಣಿಕ!

ಸತ್ಯನಿಷ್ಠೆಗೆ ಧರ್ಮ ಅಂದರೆ ಧರ್ಮರಾಜ ಉದಾಹರಣೆ. ಯುದ್ಧದಲ್ಲಿ ಒದಗಿದ ಅತಿ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಧರ್ಮರಾಜ 'ಅಶ್ವತ್ಥಾಮಾ ಹತಃ ಕುಂಜರಃ' ಎಂದೇ ಹೇಳಿದ ಹೊರತು 'ಅಶ್ವತ್ಥಾಮ ಹತನಾದ'ನೆನ್ನಲಿಲ್ಲ! ಮುಂದಿನ ದ್ವಾಪರದ ಧರ್ಮರಾಜನ ಸತ್ಯನಿಷ್ಠೆಯನ್ನು ಹಿಂದಿನ ಕೃತಯುಗದಲ್ಲಿ ನಾರದರು ಹೊಗಳುವರೆ? ಎಂದರೆ ಹಿಂದೆಯೂ ದ್ವಾಪರದಲ್ಲಿ ಧರ್ಮರಾಜನಾಗಿ ಹೋಗಿದ್ದ! ಪ್ರತಿಕಲ್ಪದಲ್ಲಿಯೂ ಪ್ರತಿಯೊಬ್ಬ ಧರ್ಮರಾಯ ಹೀಗೇ ಮಾಡುತ್ತಾನೆ ಎಂದು ಅಭಿಪ್ರಾಯ.

ತಮೇವಂಗುಣಸಂಪನ್ನಂ ರಾಮಂ ಸತ್ಯಪರಾಕ್ರಮಮ್ ।
ಜ್ಯೇಷ್ಠಂ ಶ್ರೇಷ್ಠಗುಣೈರ್ಯುಕ್ತಂ ಪ್ರಿಯಂ ದಶರಥಃ ಸುತಮ್ ॥ ೧೯ ॥

ಪ್ರಕೃತೀನಾಂ ಹಿತೈರ್ಯುಕ್ತಂ ಪ್ರಕೃತಿಪ್ರಿಯಕಾಮ್ಯಯಾ ।
ಯೌವರಾಜ್ಯೇನ ಸಂಯೋಕ್ತುಮೈಚ್ಛತ್ ಪ್ರೀತ್ಯಾ ಮಹೀಪತಿಃ ॥ ೨೦ ॥

ಹೀಗೆ ಸಕಲ ಸದ್ಗುಣ ಸಂಪನ್ನನಾದ, ಎಂದೂ ವಿಫಲವಾಗದ ಪರಾಕ್ರಮವೂ ಉಳ್ಳ, ಶ್ರೇಷ್ಠ ಗುಣಯುಕ್ತನೂ ಜ್ಯೇಷ್ಠಪುತ್ರನೂ ಆದ, ಪ್ರೀತಿಯ ಮಗನಾದ ಶ್ರೀರಾಮನನ್ನು, ಪ್ರಜೆಗಳ ಸುಖ ಕಾಮನೆಯಿಂದ ಪ್ರಜಾಹಿತಕಾರಕನೇ ಆದ ಶ್ರೀರಾಮನನ್ನು, ಯುವರಾಜ ಪದವಿಯಲ್ಲಿ ಕೂಡಿಸಿ ಪಟ್ಟಾಭಿಷೇಕ ಮಾಡಲು ಬಯಸಿದ, ದಶರಥ ಮಹಾರಾಜ.' ಹೀಗೆ ಸಂಕ್ಷೇಪವಾಗಿ ರಾಮಾಯಣವನ್ನು ಹೇಳಲು ತೊಡಗಿದ್ದಾರೆ–

ತಸ್ಯಾಭಿಷೇಕಸಂಭಾರಾನ್ ದೃಷ್ಟ್ವಾ ಭಾರ್ಯಾऽಥ ಕೈಕಯೀ ।
ಪೂರ್ವಂ ದತ್ತವರಾ ದೇವೀ ವರಮೇನಮಯಾಚತ ॥ ೨೧ ॥

ಶ್ರೀರಾಮನ ಪಟ್ಟಾಭಿಷೇಕ ಸಿದ್ಧತೆಗಳು ನಡೆಯುತ್ತಿದ್ದುದನ್ನು ಕಂಡು ರಾಣಿ ಕೈಕಯೀದೇವಿ, ಹಿಂದೆ ರಾಜ 'ನಿನಗೆ ವರ ಕೊಡುವೆ'ನೆಂದು ವಾಗ್‌ದಾನ ಮಾಡಿದ್ದರಿಂದ, ವರವನ್ನು ಕೇಳಿದಳು.

ವಿವಾಸನಂ ಚ ರಾಮಸ್ಯ ಭರತಸ್ಯಾಭಿಷೇಚನಮ್ ॥ ೨೨ ॥

ರಾಮನನ್ನು ಕಾಡಿಗೆ ಕಳಿಸು, ಭರತನಿಗೆ ಅಭಿಷೇಕ ಮಾಡು ಎಂದು.

ಸ ಸತ್ಯವಚನಾದ್ ರಾಜಾ ಧರ್ಮಪಾಶೇನ ಸಂಯತಃ ।
ವಿವಾಸಯಾಮಾಸ ಸುತಂ ರಾಮಂ ದಶರಥಃ ಪ್ರಿಯಮ್ ॥ ೨೩ ॥

ರಾಜಾ ದಶರಥನು ಸತ್ಯಸಂಧನಾದ್ದರಿಂದ ಸತ್ಯಧರ್ಮದ ಪಾಶದಿಂದ ಬದ್ಧನಾಗಿ ಪ್ರಿಯ ಪುತ್ರ ರಾಮನನ್ನು ಕಾಡಿಗೆ ಕಳಿಸಿದ.

ಸ ಜಗಾಮ ವನಂ ವೀರಃ ಪ್ರತಿಜ್ಞಾಮನುಪಾಲಯನ್ ।
ಪಿತುರ್ವಚನನಿರ್ದೇಶಾತ್ ಕೈಕೇಯ್ಯಾಃ ಪ್ರಿಯಕಾರಣಾತ್ ॥ ೨೪ ॥

ವೀರ ರಾಮನು ಪಿತೃವಾಕ್ಯ ಪರಿಪಾಲನೆಗಾಗಿ, ಕೈಕೇಯಿಯ ಸಂತೋಷಕ್ಕಾಗಿ, ಕಾಡಿಗೆ ಹೊರಟ, ತಂದೆಯ ಆಜ್ಞೆಯಂತೆ.

ತಂ ವ್ರಜಂತಂ ಪ್ರಿಯೋ ಭ್ರಾತಾ ಲಕ್ಷ್ಮಣೋऽನುಜಗಾಮ ಹ ।
ಸ್ನೇಹಾದ್ ವಿನಯಸಂಪನ್ನಃ ಸುಮಿತ್ರಾನಂದವರ್ಧನಃ ।
ಭ್ರಾತರಂ ದಯಿತೋ ಭ್ರಾತುಃ ಸೌಭ್ರಾತ್ರಮನುದರ್ಶಯನ್ ॥ ೨೫ ॥

ಶ್ರೀರಾಮ ಹೊರಟಾಗ, ಸುಮಿತ್ರಾತನಯನಾದ ವಿನಯ ಸಂಪನ್ನನಾದ ಪ್ರಿಯ ಅನುಜ ಲಕ್ಷ್ಮಣನು ಸ್ನೇಹದಿಂದ ಹಿಂಬಾಲಿಸಿದ. ಅಣ್ಣ ಅರಣ್ಯಕ್ಕೆ ನಡೆದಾಗಲೂ ಪ್ರೀತಿಯ ತಮ್ಮ ಹಿಂಬಾಲಿಸಿ, 'ತಮ್ಮನೆಂದರೆ ಹೀಗಿರಬೇಕೆ'ಂದು ತೋರಿದ.

ರಾಮಸ್ಯ ದಯಿತಾ ಭಾರ್ಯಾ ನಿತ್ಯಂ ಪ್ರಾಣಸಮಾ ಹಿತಾ ।
ಜನಕಸ್ಯ ಕುಲೇ ಜಾತಾ ದೇವಮಾಯೇವ ನಿರ್ಮಿತಾ ॥ ೨೬ ॥

ಸರ್ವಲಕ್ಷಣಸಂಪನ್ನಾ ನಾರೀಣಾಮುತ್ತಮಾ ವಧೂಃ ।
ಸೀತಾಪ್ಯನುಗತಾ ರಾಮಂ ಶಶಿನಂ ರೋಹಿಣೀ ಯಥಾ ॥ ೨೭ ॥

ಶ್ರೀರಾಮನ ಪ್ರಿಯಸತಿ, ಅವನಿಗೆ ಪ್ರಾಣಸಮಾನಳಾಗಿದ್ದು ಸದಾ ಹಿತಕರ-

ಳಾಗಿದ್ದು ಸರ್ವಲಕ್ಷಣ ಸಂಪನ್ನೆ ಸ್ತ್ರೀಯರೊಳಗೇ ಉತ್ತಮಳೂ ನವವಿವಾಹಿತೆಯೂ ಆಗಿದ್ದ, ದೇವದೇವನ ಮೋಹಿನೀ ರೂಪದಂತೇ ನಿರ್ಮಿತಳಾಗಿ ಜನಕನ ಕುಲದಲ್ಲಿ ಆವಿರ್ಭೂತಳಾದ ಸೀತೆಯೂ ಕೂಡ ರಾಮನನ್ನು ಹಿಂಬಾಲಿಸಿದಳು, ಚಂದ್ರನ ಜೊತೆಗೆ ರೋಹಿಣೀ ತಾರೆಯಂತೆ.

ಪೌರೈರನುಗತೋ ದೂರಂ ಪಿತ್ರಾ ದಶರಥೇನ ಚ ।
ಶೃಂಗಿಬೇರಪುರೇ ಸೂತಂ ಗಂಗಾಕೂಲೇ ವ್ಯಸರ್ಜಯತ್ ॥ ೨೮ ॥

ಗುಹಮಾಸಾದ್ಯ ಧರ್ಮಾತ್ಮಾ ನಿಷಾದಾಧಿಪತಿಂ ಪ್ರಿಯಮ್ ।
ಗುಹೇನ ಸಹಿತೋ ರಾಮೋ ಲಕ್ಷ್ಮಣೇನ ಚ ಸೀತಯಾ ॥ ೨೯ ॥

ಬಲು ದೂರದ ವರೆಗೆ ತಂದೆ ದಶರಥನೂ ಪೌರರೂ ರಾಮನನ್ನು ಹಿಂಬಾಲಿಸಿದರು. ಗಂಗಾತೀರದ ಶೃಂಗವೇರಪುರದಲ್ಲಿ ಪ್ರಿಯ ಗುಹನನ್ನು ಶ್ರೀರಾಮ ಸೇರಿದ. ಧರ್ಮಾತ್ಮನಾದ ರಾಮನು ಸೀತಾಲಕ್ಷ್ಮಣರಿಂದಲೂ ಬೇಡರೊಡೆಯನಾದ ಗುಹನಿಂದಲೂ ಕೂಡಿ ಸೂತನಾದ ಸುಮಂತ್ರನನ್ನು ಅಯೋಧ್ಯೆಗೇ ಹಿಂದಕ್ಕೆ ಕಳಿಸಿದ.

ತೇ ವನೇನ ವನಂ ಗತ್ವಾ ನದೀಸ್ತೀರ್ತ್ವಾ ಬಹೂದಕಾಃ ।
ಚಿತ್ರಕೂಟಮನುಪ್ರಾಪ್ಯ ಭರದ್ವಾಜಸ್ಯ ಶಾಸನಾತ್ ॥ ೩೦ ॥

ರಮ್ಯಮಾವಸಥಂ ಕೃತ್ವಾ ರಮಮಾಣಾ ವನೇ ತ್ರಯಃ ।
ದೇವಗಂಧರ್ವಸಂಕಾಶಾಸ್ತತ್ರ ತೇ ನ್ಯವಸನ್ ಸುಖಮ್ ॥ ೩೧ ॥

ಅವರು ಕಾಡಿಂದ ಕಾಡಿಗೆ ಪಯಣಿಸಿ ಬಹುಜಲಸಂಪನ್ನವಾದ ನದಿಗಳನ್ನೂ ದಾಟಿ ಚಿತ್ರಕೂಟ ಪರ್ವತವನ್ನು ಸೇರಿದರು. ಭರದ್ವಾಜಮುನಿ ಹೇಳಿದಂತೆ ಅಲ್ಲಿ ರಮ್ಯವಾದ ಪರ್ಣಶಾಲ ಕಟ್ಟಿಕೊಂಡು ಮೂವರೂ ಆನಂದದಿಂದ ವಿಹರಿಸುತ್ತ ದೇವಗಂಧರ್ವರಂತೆ ಸುಖವಾಗಿ ವಾಸ ಮಾಡಿದರು.

ಚಿತ್ರಕೂಟಂ ಗತೇ ರಾಮೇ ಪುತ್ರಶೋಕಾತುರಸ್ತಥಾ ।
ರಾಜಾ ದಶರಥಃ ಸ್ವರ್ಗಂ ಜಗಾಮ ವಿಲಪನ್ ಸುತಮ್ ॥ ೩೨ ॥

ಶ್ರೀರಾಮ ಚಿತ್ರಕೂಟಕ್ಕೆ ಹೋಗಿದ್ದಾಗ ಇತ್ತ ರಾಜಾ ದಶರಥನು ಪುತ್ರಶೋಕದಿಂದ ಬೆಂದು ಪುತ್ರನನ್ನು ಕುರಿತು ವಿಲಾಪ ಮಾಡುತ್ತ ಸ್ವರ್ಗಸ್ಥನಾದ.

ಮೃತೇ ತು ತಸ್ಮಿನ್ ಭರತೋ ವಸಿಷ್ಠಪ್ರಮುಖೈರ್ದ್ವಿಜೈಃ ।
ನಿಯುಜ್ಯಮಾನೋ ರಾಜ್ಯಾಯ ನೈಚ್ಛದ್ ರಾಜ್ಯಂ ಮಹಾಬಲಃ ।
ಸ ಜಗಾಮ ವನಂ ವೀರೋ ರಾಮಪಾದಪ್ರಸಾದಕಃ ॥ ೩೩ ॥

ದಶರಥ ಮರಣ ಹೊಂದಿದಾಗ ವಸಿಷ್ಠಾದಿ ಮುನಿಗಳು ಭರತನನ್ನು ರಾಜನಾಗಲು ಆದೇಶಿಸಿದರೂ ಅವನು ರಾಜ್ಯವಾಳಲು ಬಯಸಲಿಲ್ಲ. ಮಹಾಬಲಿ, ವೀರನಾದ ಆತ ಶ್ರೀರಾಮನನ್ನೇ ಒಪ್ಪಿಸಲು ಕಾಡಿಗೆ ತೆರಳಿದ.

ಗತ್ವಾ ತು ಸುಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।
ಅಯಾಚದ್ ಭ್ರಾತರಂ ರಾಮಮಾರ್ಯಭಾವಪುರಸ್ಕೃತಃ ॥ ೩೪ ॥

ಕಾಡಿಗೆ ಹೋಗಿ, ಜ್ಯೇಷ್ಠ ರಾಮನೇ ರಾಜ್ಯವಾಳಲು ಅರ್ಹನೆಂಬ ಭಾವವನ್ನು ಪುರಸ್ಕರಿಸಿ, ಸತ್ಯಪರಾಕ್ರಮನಾದ ಮಹಾತ್ಮನಾದ ಅಣ್ಣ ರಾಮನನ್ನೇ ಸೇರಿದ, ರಾಮನನ್ನೇ ಬೇಡಿಕೊಂಡ ಭರತ.

ತ್ವಮೇವ ರಾಜಾ ಧರ್ಮಜ್ಞ ಇತಿ ರಾಮಂ ವಚೋಽಬ್ರವೀತ್ ।
ರಾಮೋಽಪಿ ಪರಮೋದಾರಃ ಸುಮುಖಃ ಸುಮಹಾಯಶಾಃ ॥
ನ ಚೈಚ್ಛತ್ಪಿತುರಾದೇಶಾದ್ ರಾಜ್ಯಂ ರಾಮೋ ಮಹಾಬಲಃ ॥ ೩೫ ॥

ಧರ್ಮಜ್ಞನಾದ ನೀನೇ ರಾಜನಾಗಬೇಕೆಂದು ರಾಮನ ಮುಂದೆ ಭರತ ಪ್ರಾರ್ಥಿಸಿದ. ಆದರೆ ರಾಮನು ಪರಮಶ್ರೇಷ್ಠ ಪುರುಷ, ಮಹಾ ಕೀರ್ತಿಶಾಲಿ, ಮಹಾಬಲಶಾಲಿಯಾದರೂ, ವನವಾಸಕ್ಕೆ ತಂದೆಯ ಆದೇಶವಿದ್ದುದರಿಂದ ಪ್ರಸನ್ನ ಮುಖನಾಗಿಯೇ ನಿರಾಕರಿಸಿದ. ಅವನು ರಾಜ್ಯವನ್ನು ಬಯಸಲಿಲ್ಲ.

ಪಾದುಕೇ ಚಾಸ್ಯ ರಾಜ್ಯಾಯ ನ್ಯಾಸಂ ದತ್ತ್ವಾ ಪುನಃಪುನಃ ।
ನಿವರ್ತಯಾಮಾಸ ತತೋ ಭರತಂ ಭರತಾಗ್ರಜಃ ॥ ೩೬ ॥

ರಾಜ್ಯವಾಳಲು ತನಗೆ ಪ್ರತಿನಿಧಿಯಾಗಿ ತನ್ನ ಪಾದುಕೆಗಳನ್ನಿತ್ತು, ಮತ್ತೆಮತ್ತೆ ಒತ್ತಾಯದಿಂದ ಭರತನನ್ನು ಹಿಂದಿರುಗಿಸಿದ, ಶ್ರೀರಾಮ.

ಸ ಕಾಮಮನವಾಪ್ಯೈವ ರಾಮಪಾದಾವುಪಸ್ಪೃಶನ್ ।
ನಂದಿಗ್ರಾಮೇಽಕರೋದ್ರಾಜ್ಯಂ ರಾಮಾಗಮನಕಾಂಕ್ಷಯಾ ॥ ೩೭ ॥

ಭರತನು ತನ್ನ ಮನೋಽಭೀಷ್ಟವನ್ನು ಎಷ್ಟು ಮಾತ್ರಕ್ಕೂ ಪಡೆಯದೆಯೇ

ರಾಮನ ಪಾದುಕೆಗಳನ್ನು ನಂದಿಗ್ರಾಮದಲ್ಲಿ ಸೇವಿಸುತ್ತ ರಾಮಾಗಮನದ ನಿರೀಕ್ಷೆಯಿಂದಲೇ ರಾಜ್ಯಭಾರ ಮಾಡಿದ.

ಗತೇ ತು ಭರತೇ ಶ್ರೀಮಾನ್ ಸತ್ಯಸಂಧೋ ಜಿತೇಂದ್ರಿಯಃ ।
ರಾಮಸ್ತು ಪುನರಾಲಕ್ಷ್ಯ ನಾಗರಸ್ಯ ಜನಸ್ಯ ಚ ॥
ತತ್ಸಾಗಮನಮೇಕಾಗ್ರೋ ದಂಡಕಾನ್ ಪ್ರವಿವೇಶ ಹ ॥ ೩೮ ॥

ಇತ್ತ ಭರತನು ಹಿಂತಿರುಗಿದಾಗ ಜಿತೇಂದ್ರಿಯನೂ ಸತ್ಯಸಂಧನೂ ಆದ ಶ್ರೀಮಾನ್ ರಾಮಚಂದ್ರನು, ಪುನಃ ನಾಗರಿಕ ಜನರು ಅಲ್ಲಿಗೆ ಬರುತ್ತಿರುವುದನ್ನು ಗಮನಿಸಿ, ಒಮ್ಮನಸ್ಸಿನಿಂದ ಪಿತೃವಾಕ್ಯ ಪರಿಪಾಲನೆ ಮಾಡುವುದಕ್ಕಾಗಿ ದಂಡಕಾರಣ್ಯ–ವನ್ನು ಪ್ರವೇಶಿಸಿದ.

ಪ್ರವಿಶ್ಯ ತು ಮಹಾರಣ್ಯಂ ರಾಮೋ ರಾಜೀವಲೋಚನಃ ।
ವಿರಾಧಂ ರಾಕ್ಷಸಂ ಹತ್ವಾ ಶರಭಂಗಂ ದದರ್ಶ ಹ ॥
ಸುತೀಕ್ಷ್ಣಂ ಚಾಪ್ಯಗಸ್ತ್ಯಂ ಚ ಅಗಸ್ತ್ಯಭ್ರಾತರಂ ತಥಾ ॥ ೩೯ ॥

ಕಮಲಲೋಚನನಾದ ಶ್ರೀರಾಮ ದಂಡಕಾರಣ್ಯವನ್ನು ಪ್ರವೇಶಿಸಿ ಅಲ್ಲಿ ವಿರಾಧನೆಂಬ ರಾಕ್ಷಸನನ್ನು ಕೊಂದು ಶರಭಂಗ ಮುನಿಯನ್ನು ಸುತೀಕ್ಷ್ಣ, ಅಗಸ್ತ್ಯ, ಅಗಸ್ತ್ಯ ಸೋದರನಾದ ಸುದರ್ಶನ ಎಂಬ ಮುನಿಗಳನ್ನೂ ಭೆಟ್ಟಿ ಮಾಡಿದ.

ಅಗಸ್ತ್ಯವಚನಾಚ್ಚೈವ ಜಗ್ರಾಹೈಂದ್ರಂ ಶರಾಸನಮ್ ।
ಖಡ್ಗಂ ಚ ಪರಮಪ್ರೀತಸ್ತೂಣೀ ಚಾಕ್ಷಯಸಾಯಕೌ ॥ ೪೦ ॥

ಅಗಸ್ತ್ಯರ ಪ್ರಾರ್ಥನೆಯಂತೆ, ಹಿಂದೆಯೆ ಇಂದ್ರನು ಅವರ ಬಳಿ ಇರಿಸಿದ್ದ ವೈಷ್ಣವ ಧನುಸ್ಸನ್ನು ಶ್ರೀರಾಮ ಸ್ವೀಕರಿಸಿದ. ಬಲು ಸಂತೋಷದಿಂದ ಅಕ್ಷಯ ಬಾಣಗಳಿಂದ ತುಂಬಿದ್ದ ಎರಡು ಬತ್ತಳಿಕೆಗಳನ್ನೂ ಖಡ್ಗವನ್ನೂ ಸ್ವೀಕರಿಸಿದ.

ವಸತಸ್ತಸ್ಯ ರಾಮಸ್ಯ ವನೇ ವನಚರೈಃ ಸಹ ।
ಋಷಯೋऽಭ್ಯಾಗಮನ್ ಸರ್ವೇ ವಧಾಯಾಸುರರಕ್ಷಸಾಮ್ ॥
ಸ ತೇಷಾಂ ಪ್ರತಿಶುಶ್ರಾವ ರಾಕ್ಷಸಾನಾಂ ತಥಾ ವನೇ ॥ ೪೧ ॥

ವನವಾಸಿಗಳೊಂದಿಗೆ ಶ್ರೀರಾಮ ದಂಡಕಾರಣ್ಯದಲ್ಲಿ ವಾಸಮಾಡುತ್ತಿದ್ದಾಗ ಅಸುರರಾಕ್ಷಸರ ವಧೆ(ಪ್ರಾರ್ಥನೆ)ಗಾಗಿ ಎಲ್ಲ ಋಷಿಗಳೂ ಅವನ ಬಳಿಗೆ ಬಂದರು.

ರಾಕ್ಷಸರಿಂದ ತುಂಬಿದ್ದ ಆ ಅರಣ್ಯದಲ್ಲಿ ಅವರೆಲ್ಲರ ವಧೆ ಮಾಡುವುದಾಗಿ ಶ್ರೀರಾಮ ಮುನಿಗಳ ಮುಂದೆ ಪ್ರತಿಜ್ಞೆ ಮಾಡಿದ.

ಪ್ರತಿಜ್ಞಾತಶ್ಚ ರಾಮೇಣ ವಧಃ ಸಂಯತಿ ರಕ್ಷಸಾಮ್ ।
ಋಷೀಣಾಮಗ್ನಿಕಲ್ಪಾನಾಂ ದಂಡಕಾರಣ್ಯವಾಸಿನಾಮ್ ॥ ೪೨ ॥

ಅಗ್ನಿಯಂತೆ ತೇಜಸ್ವಿಗಳಾದ ದಂಡಕಾರಣ್ಯ ವಾಸಿಗಳಾದ ಮುನಿಗಳ ಮುಂದೆ ಶ್ರೀರಾಮನು ಯುದ್ಧದಲ್ಲಿ ರಾಕ್ಷಸರ ವಧೆ ಮಾಡುವುದಾಗಿ ಪ್ರತಿಜ್ಞೆಗೈದ.

ತೇನ ತತ್ರೈವ ವಸತಾ ಜನಸ್ಥಾನನಿವಾಸಿನೀ ।
ವಿರೂಪಿತಾ ಶೂರ್ಪಣಖಾ ರಾಕ್ಷಸೀ ಕಾಮರೂಪಿಣೀ ॥ ೪೩ ॥

ಶ್ರೀರಾಮ ಅಲ್ಲಿಯೆ ಹದಿಮೂರು ವರ್ಷಕಾಲ ವಾಸ ಮಾಡಿದ. ಒಂದು ದಿನ ಜನಸ್ಥಾನವಾಸಿಯಾದ ಕಾಮರೂಪಿಣಿಯಾದ ಶೂರ್ಪಣಖಾ ಎಂಬ ರಾಕ್ಷಸಿಯ ಕಿವಿ ಮೂಗುಗಳನ್ನು ಕತ್ತರಿಸಿ ಅವಳನ್ನು ವಿರೂಪಗೊಳಿಸಿದ, ಶ್ರೀರಾಮ.

ತತಃ ಶೂರ್ಪಣಖಾವಾಕ್ಯಾದುದ್ಯುಕ್ತಾನ್ ಸರ್ವರಾಕ್ಷಸಾನ್ ।
ಖರಂ ತ್ರಿಶಿರಸಂ ಚೈವ ದೂಷಣಂ ಚೈವ ರಾಕ್ಷಸಮ್ ॥
ನಿಜಘಾನ ರಣೇ ರಾಮಸ್ತೇಷಾಂ ಚೈವ ಪದಾನುಗಾನ್ ॥ ೪೪ ॥

ಬಳಿಕ ಅವಳ ಮಾತಿನಿಂದ ಆಕ್ರಮಿಸಲು ಬಂದ ಖರ ತ್ರಿಶಿರ ದೂಷಣ ರಾಕ್ಷಸರನ್ನೂ ಅವರ ಕಡೆಯ ಎಲ್ಲ ರಾಕ್ಷಸರನ್ನೂ ರಣದಲ್ಲಿ ಶ್ರೀರಾಮ ವಧಿಸಿದ.

ವನೇ ತಸ್ಮಿನ್ ನಿವಸತಾ ಜನಸ್ಥಾನನಿವಾಸಿನಾಮ್ ।
ರಕ್ಷಸಾಂ ನಿಹತಾನ್ಯಾಸನ್ ಸಹಸ್ರಾಣಿ ಚತುರ್ದಶ ॥ ೪೫ ॥

ಆ ವನದಲ್ಲಿ ವಾಸ ಮಾಡುವಾಗ ಶ್ರೀರಾಮನಿಂದ ಜನಸ್ಥಾನವಾಸಿಗಳಾದ ಹದಿನಾಲ್ಕು ಸಾವಿರ ರಾಕ್ಷಸರು ಹತರಾದರು.

ತತೋ ಜ್ಞಾತಿವಧಂ ಶ್ರುತ್ವಾ ರಾವಣಃ ಕ್ರೋಧಮೂರ್ಚ್ಛಿತಃ ।
ಸಹಾಯಂ ವರಯಾಮಾಸ ಮಾರೀಚಂ ನಾಮ ರಾಕ್ಷಸಮ್ ॥ ೪೬ ॥

ಜ್ಞಾತಿಗಳಾದ ಖರದೂಷಣಾದಿಗಳ ವಧೆಯ ಸಮಾಚಾರವನ್ನು ರಾವಣನು ತಿಳಿದು, ಕ್ರೋಧದಿಂದ ಮೈಮರೆತು, ಮಾರೀಚನೆಂಬ ರಾಕ್ಷಸನ ಸಹಾಯವನ್ನು ಕೇಳಿದ.

ವಾರ್ಯಮಾಣಃ ಸುಬಹುಶೋ ಮಾರೀಚೇನ ಸ ರಾವಣಃ ।
ನ ವಿರೋಧೋ ಬಲವತಾ ಕ್ಷಮೋ ರಾವಣ ತೇನ ತೇ ॥ ೪೭ ॥

ಮಾರೀಚನು ರಾವಣನನ್ನು ಬಹುಬಗೆಯಿಂದ ತಡೆದ. 'ರಾವಣ! ಬಲಿಷ್ಠನಾದ ರಾಮನೊಂದಿಗೆ ವಿರೋಧ ಕಟ್ಟಿಕೊಳ್ಳುವುದು ನಿನಗೆ ಯುಕ್ತವಲ್ಲ' ಎಂದ.

ಅನಾದೃತ್ಯ ತು ತದ್ವಾಕ್ಯಂ ರಾವಣಃ ಕಾಲಚೋದಿತಃ ।
ಜಗಾಮ ಸಹಮಾರೀಚಸ್ತಸ್ಯಾಶ್ರಮಪದಂ ತದಾ ॥ ೪೮ ॥

ಆದರೆ ತನ್ನ ಅಂತ್ಯಕಾಲದ ಪ್ರೇರಣೆಯಿಂದ ರಾವಣ ಮಾರೀಚನ ಸಲಹೆಯನ್ನು ಕಡೆಗಣಿಸಿ ಮಾರೀಚನೊಂದಿಗೆ ರಾಮಾಶ್ರಮದ ಪ್ರದೇಶಕ್ಕೆ ನಡೆದ.

ತೇನ ಮಾಯಾವಿನಾ ದೂರಮಪವಾಹ್ಯ ನೃಪಾತ್ಮಜೌ ।
ಜಹಾರ ಭಾರ್ಯಾಂ ರಾಮಸ್ಯ ಗೃಧ್ರಂ ಹತ್ವಾ ಜಟಾಯುಷಮ್ ॥ ೪೯

ಮಾಯಾವಿಯಾದ ಮಾರೀಚನ ಸಹಾಯದಿಂದ ರಾವಣನು ರಾಮಲಕ್ಷ್ಮಣ-ರನ್ನು ಆಶ್ರಮದಿಂದ ದೂರಕ್ಕೊಯ್ದು, ದಾರಿಯಲ್ಲಿ ಜಟಾಯು ಪಕ್ಷಿಯನ್ನೂ ವಧಿಸಿ, ಸೀತೆಯನ್ನು ಲಂಕೆಗೆ ಒಯ್ದ.

ಗೃಧ್ರಂ ಚ ನಿಹತಂ ದೃಷ್ಟ್ವಾ ಹೃತಾಂ ಶ್ರುತ್ವಾ ಚ ಮೈಥಿಲೀಮ್ ।
ರಾಘವಃ ಶೋಕಸಂತಪ್ತೋ ವಿಲಲಾಪಾಕುಲೇಂದ್ರಿಯಃ ॥ ೫೦ ॥

ಶ್ರೀರಾಮನು ಜಟಾಯು ಹತನಾದುದನ್ನು ಕಂಡು, ಅವನಿಂದಲೇ ರಾವಣ ಸೀತೆಯನ್ನು ಅಪಹರಿಸಿದ ವೃತ್ತಾಂತವನ್ನು ಕೇಳಿ, ಶೋಕದಿಂದ ಬೆಂದು, ಇಂದ್ರಿಯ ವ್ಯಾಕುಲತೆಯನ್ನು ನಟಿಸುತ್ತ ವಿಲಾಪಗೈದ.

ತತಸ್ತೇನೈವ ಶೋಕೇನ ಗೃಧ್ರಂ ದಗ್ಧ್ವಾ ಜಟಾಯುಷಮ್ ।
ಮಾರ್ಗಮಾಣೋ ವನೇ ಸೀತಾಂ ರಾಕ್ಷಸಂ ಸಂದದರ್ಶ ಹ ॥
ಕಬಂಧಂ ನಾಮ ರೂಪೇಣ ವಿಕೃತಂ ಘೋರದರ್ಶನಮ್ ॥ ೫೧ ॥

ಆ ಶೋಕದಿಂದಲೇ ಜಟಾಯುವನ್ನು ಅಗ್ನಿಯಲ್ಲಿ ಸಂಸ್ಕರಿಸಿ ಅರಣ್ಯದಲ್ಲಿ ಸೀತೆಯನ್ನು ಹುಡುಕುತ್ತ ವಿಕೃತರೂಪಿಯೂ ನೋಡಲು ಭಯಂಕರನೂ ಆದ ಕಬಂಧನೆಂಬ ರಾಕ್ಷಸನನ್ನು ಕಂಡ.

ತಂ ನಿಹತ್ಯ ಮಹಾಬಾಹುರ್ದದಾಹ ಸ್ವರ್ಗತಶ್ಚ ಸಃ ।
ಸ ಚಾಸ್ಯ ಕಥಯಾಮಾಸ ಶಬರೀಂ ಧರ್ಮಚಾರಿಣೀಮ್ ॥
ಶ್ರಮಣೀಂ ಧರ್ಮನಿಪುಣಾಮಭಿಗಚ್ಛೇತಿ ರಾಘವಮ್ ॥ ೫೨ ॥

ಮಹಾಬಾಹು ಶ್ರೀರಾಮನು ಕಬಂಧನನ್ನು ಕೊಂದು ಸುಟ್ಟ. ಆತ ಸ್ವರ್ಗಸ್ಥನಾದ. ಅವನು 'ಧರ್ಮ ನಿಪುಣೆಯೂ ಧರ್ಮಾಚಾರ ನಿರತಳೂ ಆದ ಶಬರಿ ಎಂಬ ಸನ್ಯಾಸಿನಿಯ ಕಡೆಗೆ ಹೋಗೆ'ಂದು ಶ್ರೀರಾಮನಿಗೆ ಹೇಳಿದ್ದ.

ಸೋಽಭ್ಯಗಚ್ಛನ್ಮಹಾತೇಜಾಃ ಶಬರೀಂ ಶತ್ರುಸೂದನಃ ।
ಶಬರ್ಯಾ ಪೂಜಿತಃ ಸಮ್ಯಗ್ ರಾಮೋ ದಶರಥಾತ್ಮಜಃ ॥ ೫೩ ॥

ಶತ್ರುನಾಶಕನಾದ ಮಹಾತೇಜನಾದ ದಾಶರಥಿ ರಾಮ ಶಬರಿಯ ಬಳಿಗೆ ನಡೆದ. ಶಬರಿಯಿಂದ ಚೆನ್ನಾಗಿ ಪೂಜಿತನಾದ.

ಪಂಪಾತೀರೇ ಹನುಮತಾ ಸಂಗತೋ ವಾನರೇಣ ಹ ।
ಹನುಮದ್ವಚನಾಚ್ಚೈವ ಸುಗ್ರೀವೇಣ ಸಮಾಗತಃ ॥ ೫೪ ॥

ಪಂಪಾತೀರದಲ್ಲಿ ವಾನರನಾದ ಹನುಮಂತನೊಡಗೂಡಿ ಹನುಮನ ಮಾತಿನಂತೆ ಸುಗ್ರೀವನ ಬಳಿ ಬಂದು ಸೇರಿದ.

ಸುಗ್ರೀವಾಯ ಚ ತತ್ಸರ್ವಂ ಶಂಸದ್ರಾಮೋ ಮಹಾಬಲಃ ।
ಆದಿತಸ್ತದ್ ಯಥಾವೃತ್ತಂ ಸೀತಾಯಾಶ್ಚ ವಿಶೇಷತಃ ॥ ೫೫ ॥

ಮಹಾಬಲನಾದ ಶ್ರೀರಾಮನು ಸುಗ್ರೀವನಿಗೆ ಆದಿಯಿಂದ ತನ್ನ ಅವತಾರದಿಂದ ತೊಡಗಿ ಎಲ್ಲ ವೃತ್ತಾಂತವನ್ನೂ, ವಿಶೇವಾಗಿ ಸೀತೆಯ ವೃತ್ತಾಂತವನ್ನೂ ಹೇಗೆ ನಡೆದಿತ್ತೋ ಹಾಗೇ ಹೇಳಿದನು.

ಸುಗ್ರೀವಶ್ಚಾಪಿ ತತ್ಸರ್ವಂ ಶ್ರುತ್ವಾ ರಾಮಸ್ಯ ವಾನರಃ ।
ಚಕಾರ ಸಖ್ಯಂ ರಾಮೇಣ ಪ್ರೀತಶ್ಚೈವಾಗ್ನಿಸಾಕ್ಷಿಕಮ್ ॥ ೫೬ ॥

ವಾನರನಾದ ಸುಗ್ರೀವನೂ ರಾಮನ ಬಗ್ಗೆ ಆದೆಲ್ಲವನ್ನೂ ಕೇಳಿ ಸಂತುಷ್ಟನಾಗಿ ರಾಮನೊಂದಿಗೆ ಅಗ್ನಿಸಾಕ್ಷಿಕವಾಗಿ ಸಖ್ಯವನ್ನು ಮಾಡಿಕೊಂಡ.

ತತೋ ವಾನರರಾಜೇನ ವೈರಾನುಕಥನಂ ಪ್ರತಿ ।
ರಾಮಾಯಾವೇದಿತಂ ಸರ್ವಂ ಪ್ರಣಯಾದ್ದುಃಖಿತೇನ ಚ ॥ ೫೭ ॥

ಬಳಿಕ ದುಃಖಿತನಾದ ವಾನರ ರಾಜ ಸುಗ್ರೀವನು ಪ್ರೀತಿಯಿಂದ ರಾಮನಿಗೆ, ತನ್ನಲ್ಲಿ ವಾಲಿಗೆ ಇರುವ ವೈರದ ಬಗ್ಗೆ ವಿವರವಾಗಿ ವಿಜ್ಞಾಪಿಸಿಕೊಂಡ.

ಪ್ರತಿಜ್ಞಾತಂ ಚ ರಾಮೇಣ ತದಾ ವಾಲಿವಧಂ ಪ್ರತಿ ।
ವಾಲಿನಶ್ಚ ಬಲಂ ತತ್ರ ಕಥಯಾಮಾಸ ವಾನರಃ ॥
ಸುಗ್ರೀವಃ ಶಂಕಿತಶ್ಚಾಸೀನ್ನಿತ್ಯಂ ವೀರ್ಯೇಣ ರಾಘವೇ ॥ ೫೮ ॥

ವಾಲಿವಧ ಮಾಡುವ ಬಗ್ಗೆ ಶ್ರೀರಾಮ ಸುಗ್ರೀವನಿಗೆ ಆಶ್ವಾಸನೆ ನೀಡಿದ. ಸುಗ್ರೀವ ವಾಲಿಯ ಪರಾಕ್ರಮವನ್ನು ರಾಮನಿಗೆ ಬಣ್ಣಿಸಿದ. ಏಕೆಂದರೆ ರಾಮನನ್ನು ಕಂಡಾಗಿನಿಂದಲೂ ಅವನ ವಾಲಿವಧ ಸಾಮರ್ಥ್ಯದ ಬಗ್ಗೆ ಸುಗ್ರೀವನಿಗೆ ಸದಾ ಸಂಶಯ!

ರಾಘವಪ್ರತ್ಯಯಾರ್ಥಂ ತು ದುಂದುಭೇಃ ಕಾಯಮುತ್ತಮಮ್ ।
ದರ್ಶಯಾಮಾಸ ಸುಗ್ರೀವೋ ಮಹಾಪರ್ವತಸನ್ನಿಭಮ್ ॥ ೫೯ ॥

ಅದರಿಂದ ರಾಮನ ಸಾಮರ್ಥ್ಯವನ್ನು ಖಚಿತ ಪಡಿಸಿಕೊಳ್ಳುವುದಕ್ಕಾಗಿ ದೊಡ್ಡ ಬೆಟ್ಟದಂತೆ ಎತ್ತರವಾಗಿದ್ದ ದುಂದುಭಿಯ ಶವವನ್ನು ಸುಗ್ರೀವ ರಾಮನಿಗೆ ತೋರಿಸಿದ.

ಉತ್ಸ್ಮಯಿತ್ವಾ ಮಹಾಬಾಹುಃ ಪ್ರೇಕ್ಷ್ಯ ಚಾಸ್ಥಿ ಮಹಾಬಲಃ ।
ಪಾದಾಂಗುಷ್ಠೇನ ಚಿಕ್ಷೇಪ ಸಂಪೂರ್ಣಂ ದಶಯೋಜನಮ್ ॥ ೬೦ ॥

ಶ್ರೀರಾಮನು ನೋಡಿ ನಸುನಕ್ಕು ಮಹಾಬಾಹು ಮಹಾಬಲನಾದ ರಾಮ ಆ ಕಳೇಬರವನ್ನು ಕಾಲಿನ ಹೆಬ್ಬೆಟ್ಟಿನಿಂದಲೇ ಪೂರ್ತಿ ಹತ್ತುಯೋಜನಗಳಷ್ಟು ದೂರಕ್ಕೆ ಎಸೆದುಬಿಟ್ಟ.

ಬಿಭೇದ ಚ ಪುನಸ್ತಾಲಾನ್ ಸಪ್ತೈಕೇನ ಮಹೇಷುಣಾ ।
ಗಿರಿಂ ರಸಾತಲಂ ಚೈವ ಜನಯನ್ ಪ್ರತ್ಯಯಂ ತದಾ ॥ ೬೧ ॥

ಸುಗ್ರೀವನಿಗೆ ವಿಶ್ವಾಸ ಉಂಟುಮಾಡುವುದಕ್ಕಾಗಿ ಶ್ರೀರಾಮ ತಿರುಗಿ ಒಂದೇ ಬಾಣದಿಂದ ಏಳು ಸಾಲ ವೃಕ್ಷಗಳನ್ನೂ, ಬಳಿಯಲ್ಲಿದ್ದ ಬೆಟ್ಟವನ್ನೂ ರಸಾತಳವನ್ನೂ ಭೇದಿಸಿದ.

ತತಃ ಪ್ರೀತಮನಾಸ್ತೇನ ವಿಶ್ವಸ್ತಃ ಸ ಮಹಾಕಪಿಃ ।
ಕಿಷ್ಕಿಂಧಾಂ ರಾಮಸಹಿತೋ ಜಗಾಮ ಚ ಗುಹಾಂ ತದಾ ॥ ೬೨ ॥

ವಿಶ್ವಾಸಗೊಂಡು ಸಂತುಷ್ಟ ಮನಸ್ಕನಾದ ಮಹಾಕಪಿ ಸುಗ್ರೀವನು ಪರ್ವತ-ಗಳಿಂದ ಸುತ್ತುವರಿದು ಗುಹೆಯಂತಿದ್ದ ಕಿಷ್ಕಿಂಧಾನಗರದ ಕಡೆಗೆ ಶ್ರೀರಾಮನೊಂದಿಗೆ ನಡೆದ.

ತತೋಽಗರ್ಜದ್ಧರಿವರಃ ಸುಗ್ರೀವೋ ಹೇಮಪಿಂಗಲಃ ।
ತೇನ ನಾದೇನ ಮಹತಾ ನಿರ್ಜಗಾಮ ಹರೀಶ್ವರಃ ॥ ೬೩ ॥

ಬಂಗಾರದಂತೆ ಹೊಳೆವ ಕಂದುಬಣ್ಣದ ವಾನರ ಶ್ರೇಷ್ಠ ಸುಗ್ರೀವನು ಅಲ್ಲಿ ಗರ್ಜನೆ ಮಾಡಿದ. ಆ ಮಹಾನಾದಕ್ಕೆ ವಾನರ ರಾಜ ವಾಲಿ ಹೊರಗೆ ಬಂದ.

ಅನುಮಾನ್ಯ ತದಾ ತಾರಾಂ ಸುಗ್ರೀವೇಣ ಸಮಾಗತಃ ।
ನಿಜಘಾನ ಚ ತತ್ರೈನಂ ಶರೇಣೈಕೇನ ರಾಘವಃ ॥ ೬೪ ॥

ವಾಲಿ ತಾರೆಯನ್ನು ಒಪ್ಪಿಸಿ, ಸುಗ್ರೀವನ ಬಳಿಗೆ ಬಂದ. ಶ್ರೀರಾಮ ಅಲ್ಲಿ ಒಂದೇ ಬಾಣದಿಂದ ವಾಲಿಯನ್ನು ವಧಿಸಿದ.

ತತಃ ಸುಗ್ರೀವವಚನಾದ್ ಹತ್ವಾ ವಾಲಿನಮಾಹವೇ ।
ಸುಗ್ರೀವಮೇವ ತದ್ರಾಜ್ಯೇ ರಾಘವಃ ಪ್ರತ್ಯಪಾದಯತ್ ॥ ೬೫ ॥

ಸುಗ್ರೀವನ ಪ್ರಾರ್ಥನೆಯಂತೆ ಯುದ್ಧದಲ್ಲಿ ವಾಲಿಯನ್ನು ಕೊಂದು ಶ್ರೀರಾಮ ಸುಗ್ರೀವನನ್ನೇ ವಾಲಿಯ ರಾಜ್ಯದಲ್ಲಿ ಕೂಡಿಸಿದ.

ಸ ಚ ಸರ್ವಾನ್ ಸಮಾನೀಯ ವಾನರಾನ್ ವಾನರರ್ಷಭಃ ।
ದಿಶಃ ಪ್ರಸ್ಥಾಪಯಾಮಾಸ ದಿದೃಕ್ಷುರ್ಜನಕಾತ್ಮಜಾಮ್ ॥ ೬೬ ॥

ವಾನರ ಶ್ರೇಷ್ಠನಾದ ಸುಗ್ರೀವನು ಎಲ್ಲ ವಾನರರನ್ನೂ ಕರೆಸಿಕೊಂಡು, ಸೀತೆಯನ್ನು ಕಂಡುಹಿಡಿಯಲು ಬಯಸಿ, ಎಲ್ಲರನ್ನೂ ಎಲ್ಲ ದಿಕ್ಕುಗಳಿಗೆ ಕಳಿಸಿದ.

ತತೋ ಗೃಧ್ರಸ್ಯ ವಚನಾತ್ ಸಂಪಾತೇರ್ಹನುಮಾನ್ ಬಲೀ ।
ಶತಯೋಜನವಿಸ್ತೀರ್ಣಂ ಪುಪ್ಲುವೇ ಲವಣಾರ್ಣವಮ್ ॥ ೬೭ ॥

ಬಳಿಕ ಸಂಪಾತಿ ಪಕ್ಷಿಯ ಮಾತಿನಂತೆ ಬಲಿಷ್ಠನಾದ ಹನುಮಂತ ನೂರು-ಯೋಜನ ವಿಸ್ತಾರದ ಲವಣ ಸಮುದ್ರವನ್ನು ಹಾರಿದನು.

ತತ್ರ ಲಂಕಾಂ ಸಮಾಸಾದ್ಯ ಪುರೀಂ ರಾವಣಪಾಲಿತಾಮ್ ।
ದದರ್ಶ ಸೀತಾಂ ಧ್ಯಾಯಂತೀಮಶೋಕವನಿಕಾಂ ಗತಾಮ್ ॥ ೬೮ ॥

ರಾವಣನ ರಕ್ಷಣೆಯಲ್ಲಿದ್ದ ಲಂಕಾಪಟ್ಟಣವನ್ನು ಸೇರಿ ಅಶೋಕವನದಲ್ಲಿ ಧ್ಯಾನಮಗ್ನಳಾಗಿ ಕುಳಿತಿದ್ದ ಸೀತೆಯನ್ನು ಕಂಡ.

ನಿವೇದಯಿತ್ವಾಽಭಿಜ್ಞಾನಂ ಪ್ರವೃತ್ತಿಂ ಚ ನಿವೇದ್ಯ ಚ ।
ಸಮಾಶ್ವಾಸ್ಯ ಚ ವೈದೇಹೀಂ ಮರ್ದಯಾಮಾಸ ತೋರಣಮ್ ॥೬೯॥

ಸೀತೆಗೆ ರಾಮನ ಪ್ರವೃತ್ತಿಯನ್ನು ನಿವೇದಿಸಿ ರಾಮನ ಗುರುತಿನ ಉಂಗುರ-ವನ್ನಿತ್ತು ಸಮಾಧಾನ ಪಡಿಸಿ ಊರಹೊರಗಿನ ಹೆಬ್ಬಾಗಿಲನ್ನು ಪುಡಿಗೈದ.

ಪಂಚ ಸೇನಾಗ್ರಗಾನ್ ಹತ್ವಾ ಸಪ್ತ ಮಂತ್ರಿಸುತಾನಪಿ ।
ಶೂರಮಕ್ಷಂ ಚ ನಿಷ್ಪಿಷ್ಯ ಗ್ರಹಣಂ ಸಮುಪಾಗಮತ್ ॥ ೭೦ ॥

ಐದು ಸೇನಾನಿಗಳನ್ನೂ ಏಳು ಮಂತ್ರಿ ಪುತ್ರರನ್ನೂ ಕೊಂದು ಶೂರನಾದ ಅಕ್ಷಕುಮಾರನನ್ನೂ ಪುಡಿಗೈದು ಇಂದ್ರಜಿತ್ತಿನ ಬ್ರಹ್ಮಾಸ್ತ್ರಕ್ಕೆ ಸೆರೆಯಾದ.

ಅಸ್ತ್ರೇಣೋನ್ಮುಕ್ತಮಾತ್ಮಾನಂ ಜ್ಞಾತ್ವಾ ಪೈತಾಮಹಾದ್ವರಾತ್ ।
ಮರ್ಷಯನ್ ರಾಕ್ಷಸಾನ್ ವೀರೋ ಯಂತ್ರಿಣಸ್ತಾನ್ ಯದೃಚ್ಛಯಾ ॥

ತತೋ ದದರ್ಶಾವಪುರೀಂ ಲಂಕಾಮೃತೇ ಸೀತಾಂ ಚ ಮೈಥಿಲೀಮ್ ।
ರಾಮಾಯ ಪ್ರಿಯಮಾಖ್ಯಾತುಂ ಪುನರಾಯಾನ್ಮಹಾಕಪಿಃ ॥ ೭೨ ॥

'ಪಿತಾಮಹ'ನ, ಅಂದರೆ ತಂದೆಯಾದ ವಾಯುವಿನ ಪಿತನಾದ ಶ್ರೀಹರಿಯ ವರದಿಂದ ತಾನು ಬ್ರಹ್ಮಾಸ್ತ್ರದಿಂದ ಅಯತ್ನವಾಗಿ ಮುಕ್ತನೇ ಇರುವೆನೆಂದು ತಿಳಿದು ವೀರಹನುಮ ಆ ರಾಕ್ಷಸರು ತನ್ನನ್ನು ಬಂಧಿಸಿದರೆ ಅದನ್ನು ಸಹಿಸಿಕೊಂಡ. ಮಿಥಿಲಾರಾಜಕುಮಾರಿ ಸೀತೆಯೊಬ್ಬಳನ್ನು ಹೊರತುಪಡಿಸಿ ಪೂರ್ತಿ ಲಂಕಾಪಟ್ಟಣ-ವನ್ನೇ ಸುಟ್ಟು ಶ್ರೀರಾಮನಿಗೆ ಪ್ರಿಯವಾರ್ತೆಯನ್ನು ಅರುಹಲು ತಿರುಗಿ ಬಂದ ಮಹಾಕಪಿ ಹನುಮ.

ಸೋಽಭಿಗಮ್ಯ ಮಹಾತ್ಮಾನಂ ಕೃತ್ವಾ ರಾಮಂ ಪ್ರದಕ್ಷಿಣಮ್ ।
ನ್ಯವೇದಯದಮೇಯಾತ್ಮಾ ದೃಷ್ಟಾ ಸೀತೇತಿ ತತ್ತ್ವತಃ ॥ ೭೩ ॥

ಮಹಾತ್ಮನಾದ ರಾಮನ ಬಳ ಸಾರಿ, ಅವನಿಗೆ ಪ್ರದಕ್ಷಿಣೆ ಮಾಡಿ, 'ನಾ ಕಂಡೆ, ನಿಜವಾಗಿ ಸೀತೆಯನ್ನು' ಎಂದು ನಿವೇದಿಸಿದ, ಅಮಿತ ಬುದ್ಧಿಶಾಲಿ ಹನುಮ.

ತತಃ ಸುಗ್ರೀವಸಹಿತೋ ಗತ್ವಾ ತೀರಂ ಮಹೋದಧೇಃ ।
ಸಮುದ್ರಂ ಕ್ಷೋಭಯಾಮಾಸ ಶರೈರಾದಿತ್ಯಸನ್ನಿಭೈಃ ॥ ೭೪ ॥

ಬಳಿಕ ಶ್ರೀರಾಮನು ಸುಗ್ರೀವ ಸಹಿತನಾಗಿ ಸಮುದ್ರದ ತೀರಕ್ಕೆ ಹೋಗಿ ಸೂರ್ಯನಂತೆ ಹೊಳೆವ ಬಾಣಗಳಿಂದ ಸಮುದ್ರವನ್ನು ತಳಮಳಗೊಳಿಸಿದ.

ದರ್ಶಯಾಮಾಸ ಚಾತ್ಮಾನಂ ಸಮುದ್ರಃ ಸರಿತಾಂ ಪತಿಃ ।
ಸಮುದ್ರವಚನಾಚ್ಚೈವ ನಲಂ ಸೇತುಮಕಾರಯತ್ ॥ ೭೫ ॥

ನದಿಗಳ ಪತಿಯಾದ ಸಮುದ್ರರಾಜ ನಿಜರೂಪದಿಂದ ತನ್ನನ್ನು ರಾಮನಿಗೆ ತೋರಿಕೊಂಡ. ಅವನ ಮಾತಿನಂತೆ ರಾಮನು ನಲನೆಂಬ ಕಪಿಯಿಂದ ಸೇತು ನಿರ್ಮಾಣಗೈಸಿದ.

ತೇನ ಗತ್ವಾ ಪುರೀಂ ಲಂಕಾಂ ಹತ್ವಾ ರಾವಣಮಾಹವೇ ।
ರಾಮಃ ಸೀತಾಮನು ಪ್ರಾಪ್ಯ ಪರಾಂ ವ್ರೀಡಾಮುಪಾಗಮತ್ ॥ ೭೬ ॥

ಆ ಸೇತುವಿನಿಂದ ಲಂಕೆಗೆ ಹೋಗಿ ಶ್ರೀರಾಮ ಯುದ್ಧದಲ್ಲಿ ರಾವಣನನ್ನು ವಧಿಸಿ ಸೀತೆಯನ್ನು ಹೊಂದಿದರೂ, ಬಳಿಕ ಲೋಕಾಪವಾದ ಭಯದಿಂದ ದೇವಿಯನ್ನು ಸ್ವೀಕರಿಸಲು ಬಹಳ ನಾಚಿಕೆ ಪಟ್ಟ.

ತಾಮುವಾಚ ತತೋ ರಾಮಃ ಪರುಷಂ ಜನಸಂಸದಿ ।
ಅಮೃಷ್ಯಮಾಣಾ ಸಾ ಸೀತಾ ವಿವೇಶ ಜ್ವಲನಂ ಸತೀ ॥ ೭೭ ॥

ಅದರಿಂದ ರಾಮ ಜನರ ಮುಂದೆ ಅವಳಿಗೆ ಒರಟಾಗಿ ನುಡಿದ. ಪತಿವ್ರತೆಯೇ ಆದ ಆ ಸೀತೆ ಇದನ್ನು ಸಹಿಸದೆ ಶಪಥ ಮಾಡಿ ದಿವ್ಯಪರೀಕ್ಷೆಗಾಗಿ ಅಗ್ನಿಪ್ರವೇಶ ಗೈದಳು.

ತತೋಽಗ್ನಿವಚನಾತ್ ಸೀತಾಂ ಜ್ಞಾತ್ವಾ ವಿಗತಕಲ್ಮಷಾಮ್ ।
ಬಭೌ ರಾಮಃ ಸಂಪ್ರಹೃಷ್ಟಃ ಪೂಜಿತಃ ಸರ್ವದೈವತೈಃ ॥ ೭೮ ॥

ಆಗ ಅಗ್ನಿಯ ಮಾತಿನಿಂದ ಸೀತೆ ನಿಷ್ಕಲ್ಮಷಳೆಂದು ತಿಳಿದು ಶ್ರೀರಾಮ ಬಲು ಸಂತುಷ್ಟನಾದ, ಎಲ್ಲ ದೇವತೆಗಳಿಂದ ಪೂಜಿತನಾದ.

ಕರ್ಮಣಾ ತೇನ ಮಹತಾ ತ್ರೈಲೋಕ್ಯಂ ಸಚರಾಚರಮ್ ।
ಸದೇವರ್ಷಿಗಣಂ ತುಷ್ಟಂ ರಾಘವಸ್ಯ ಮಹಾತ್ಮನಃ ॥ ೭೯ ॥

ಮಹಾತ್ಮಾ ಶ್ರೀರಾಮನ ಈ ಮಹತ್ಕಾರ್ಯದಿಂದ ದೇವಋಷಿ ಸಮೂಹ-ದಿಂದೊಡಗೂಡಿದ ಚರಾಚರಗಳಿಂದ ತುಂಬಿದ ಮೂಲೋಕವೇ ಆನಂದಿಸಿತು.

ಅಭಿಷಿಚ್ಯ ಚ ಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಮ್ ।
ಕೃತಕೃತ್ಯಸ್ತದಾ ರಾಮೋ ವಿಜ್ವರಃ ಪ್ರಮುಮೋದ ಹ ॥ ೮೦ ॥

ಲಂಕಾರಾಜ್ಯದಲ್ಲಿ ರಾಕ್ಷಸಾಧಿಪತಿಯಾದ ವಿಭೀಷಣನಿಗೆ ಪಟ್ಟಾಭಿಷೇಕ ಮಾಡಿ ಕೃತಕೃತ್ಯನಾದ ರಾಮ ನಿಶ್ಚಿಂತೆಯಿಂದ ಬಲು ಆನಂದವನ್ನು ಅನುಭವಿಸಿದ.

ದೇವತಾಭ್ಯೋ ವರಂ ಪ್ರಾಪ್ಯ ಸಮುತ್ಥಾಪ್ಯ ಚ ವಾನರಾನ್ ।
ಅಯೋಧ್ಯಾಂ ಪ್ರಸ್ಥಿತೋ ರಾಮಃ ಪುಷ್ಪಕೇಣ ಸುಹೃದ್ ವೃತಃ॥ ೮೧ ॥

ದೇವತೆಗಳಿಂದ ವರ ಪಡೆದು, ಅದರಿಂದ ಮೃತರಾಗಿದ್ದ ವಾನರರನ್ನು ಪುನಃ ಎಬ್ಬಿಸಿ, ಬಂಧುಮಿತ್ರರೊಡಗೂಡಿ, ಪುಷ್ಪಕವಿಮಾನದಿಂದ ಅಯೋಧ್ಯೆಗೆ ಹೊರಟ ಶ್ರೀರಾಮ.

ಭರದ್ವಾಜಾಶ್ರಮಂ ಗತ್ವಾ ರಾಮಃ ಸತ್ಯಪರಾಕ್ರಮಃ ।
ಭರತಸ್ಯಾಂತಿಕಂ ರಾಮೋ ಹನೂಮಂತಂ ವ್ಯಸರ್ಜಯತ್ ॥ ೮೨ ॥

ಭರದ್ವಾಜಾಶ್ರಮಕ್ಕೆ ಹೋದ, ಸತ್ಯಪರಾಕ್ರಮನಾದ ರಾಮ. ಭರತನ ಬಳಿಗೆ ಹನುಮಂತನನ್ನು ಕಳಿಸಿದ ರಾಮ.

ಪುನರಾಖ್ಯಾಯಿಕಾಂ ಜಲ್ಪನ್ ಸುಗ್ರೀವಸಹಿತಸ್ತದಾ ।
ಪುಷ್ಪಕಂ ತತ್ಸಮಾರುಹ್ಯ ನಂದಿಗ್ರಾಮಂ ಯಯೌ ತದಾ ॥ ೮೩ ॥

ಪುನಃ ಸುಗ್ರೀವ ಸಹಿತನಾಗಿ ಪುಷ್ಪಕ ವಿಮಾನವನ್ನೇರಿ, ಭರತನ ಸಮಾಚಾರವನ್ನು ಆಗ ಅವನಿಗೆ ಹೇಳುತ್ತ, ನಂದಿಗ್ರಾಮವನ್ನು ತಲುಪಿದ, ಶ್ರೀರಾಮ.

ನಂದಿಗ್ರಾಮೇ ಜಟಾಂ ಹಿತ್ವಾ ಭ್ರಾತೃಭಿಃ ಸಹಿತೋಽನಘಃ ।
ರಾಮಃ ಸೀತಾಮನುಪ್ರಾಪ್ಯ ರಾಜ್ಯಂ ಪುನರವಾಪ್ತವಾನ್ ॥ ೮೪ ॥

ನಂದಿಗ್ರಾಮದಲ್ಲಿ ಶ್ರೀರಾಮ ಭರತಾದಿಗಳಿಂದ ಸಹಿತನಾಗಿ ಜಟೆಯನ್ನು ವಿಸರ್ಜನ ಮಾಡಿ, ರತ್ನಸಿಂಹಾಸನದಲ್ಲಿ ಸೀತೆಯನ್ನು ಜೊತೆಗೆ ಕೂಡಿಸಿಕೊಂಡು ರಾಜ್ಯದಲ್ಲಿ ಅಭಿಷೇಕ ಮಾಡಿಸಿಕೊಂಡ.

ಪ್ರಹೃಷ್ಟಮುದಿತೋ ಲೋಕಸ್ತುಷ್ಟಃ ಪುಷ್ಟಃ ಸುಧಾರ್ಮಿಕಃ ।
ನಿರಾಮಯೋ ಹ್ಯರೋಗಶ್ಚ ದುರ್ಭಿಕ್ಷಭಯವರ್ಜಿತಃ ॥ ೮೫ ॥

ಈಗ ರಾಮರಾಜ್ಯದಲ್ಲಿ ಪ್ರಜೆಗಳು ಹೃಷ್ಟಪುಷ್ಟರಾಗಿ ಸಂತುಷ್ಟರಾಗಿ ಒಳ್ಳೆಯ ಧರ್ಮಾಚರಣೆ ನಡೆಸುತ್ತ ರೋಗರುಜಿನಗಳ ಪೀಡೆಯೇ ಇಲ್ಲದೆ ದುರ್ಭಿಕ್ಷ ಭಯ ಒಂದನ್ನೂ ಕಾಣದೆ ಸುಖವಾಗಿ ಬಾಳಿಬದುಕುವರು.

ನ ಪುತ್ರಮರಣಂ ಕಿಂಚಿದ್ ದ್ರಕ್ಷ್ಯಂತಿ ಪುರುಷಾಃ ಕ್ವಚಿತ್ ।
ನಾರ್ಯಶ್ಚಾವಿಧವಾ ನಿತ್ಯಂ ಭವಿಷ್ಯಂತಿ ಪತಿವ್ರತಾಃ ॥ ೮೬ ॥

ಪ್ರಜೆಗಳು ಎಲ್ಲಿಯೂ ಮಕ್ಕಳ ಅಕಾಲಮರಣವನ್ನು ಒಂದನ್ನೂ ಕಾಣಲಾರರು. ನಾರಿಯರು ಸದಾ ಪತಿವ್ರತೆ ಮುತ್ತೈದೆಯರಾಗಿಯೇ ಇರುವರು.

ನ ಚಾಗ್ನಿಜಂ ಭಯಂ ಕಿಂಚಿನ್ನಾಪ್ಸು ಮಜ್ಜಂತಿ ಜಂತವಃ ।
ನ ವಾತಜಂ ಭಯಂ ಕಿಂಚಿನ್ನಾಪಿ ಜ್ವರಕೃತಂ ತಥಾ ।
ನ ಚಾಪಿ ಕ್ಷುದ್ಭಯಂ ತತ್ರ ನ ತಸ್ಕರಭಯಂ ತಥಾ ॥ ೮೭ ॥

ಪ್ರಾಣಿಗಳಿಗೂ ಯಾವುದೇ ಅಗ್ನಿಭಯ ವಿರಲಾರದು. ಅವು ನೀರಲ್ಲಿ ಮುಳುಗಿ ಹೋಗಲಾರವು. ಬಿರುಗಾಳಿಯ ಭಯವಿಲ್ಲ. ಜ್ವರಭಯವೂ ಏನೂ ಇರುವುದಿಲ್ಲ. ಹಸಿವಿನ ಭಯವಿಲ್ಲ. ಕಳ್ಳಕಾಕರ ಭಯವಿಲ್ಲ.

ನಗರಾಣಿ ಚ ರಾಷ್ಟ್ರಾಣಿ ಧನಧಾನ್ಯಯುತಾನಿ ಚ ।
ನಿತ್ಯಂ ಪ್ರಮುದಿತಾಃ ಸರ್ವೇ ಯಥಾ ಕೃತಯುಗೇ ತಥಾ ॥ ೮೮ ॥

ನಗರಗಳು ರಾಜ್ಯಗಳು ಧನಧಾನ್ಯ ಸಮೃದ್ಧಿಯಿಂದ ಕೂಡಿವೆ. ಎಲ್ಲರೂ ಬಹು ಸುಖಿಗಳಾಗಿಯೇ ಸದಾ ಕೃತಯುಗದಲ್ಲಿ ಹೇಗೋ ಹಾಗೇ ಬದುಕನ್ನು ಸಾಗಿಸುತ್ತಿರುವರು.

ಅಶ್ವಮೇಧಶತೈರಿಷ್ಟ್ವಾ ತಥಾ ಬಹುಸುವರ್ಣಕೈಃ ।
ಗವಾಂ ಕೋಟ್ಯಯುತಂ ದತ್ತ್ವಾ ಬ್ರಹ್ಮಲೋಕಂ ಪ್ರಯಾಸ್ಯತಿ ।
ಅಸಂಖ್ಯೇಯಂ ಧನಂ ದತ್ತ್ವಾ ಬ್ರಾಹ್ಮಣೇಭ್ಯೋ ಮಹಾಯಶಾಃ ॥೮೯॥

ಪ್ರಜಾಪಾಲನೆಯಲ್ಲಿ ಮಹಾಯಶಸ್ಸನ್ನು ಕಂಡಿರುವ ಶ್ರೀರಾಮನು ನೂರಾರು ಅಶ್ವಮೇಧ ಯಾಗಗಳನ್ನೂ 'ಬಹುಸುವರ್ಣಕ'ವೆಂಬ ಯಾಗಗಳನ್ನೂ ನಡೆಸುತ್ತ, ಹತ್ತುಸಾವಿರಕೋಟಿ ಗೋದಾನ ಮಾಡುತ್ತಾನೆ. ಸಂಖ್ಯೆ ಇಲ್ಲದ ಧನ ಸಂಪತ್ತನ್ನು ಬ್ರಾಹ್ಮಣರಿಗೆ ನೀಡುತ್ತ ಪರಬ್ರಹ್ಮಲೋಕಕ್ಕೆ ಹೋಗುತ್ತಾನೆ ಶ್ರೀರಾಮ.

ರಾಜವಂಶಾಂಧ್ಚತಗುಣಾನ್ ಸ್ಥಾಪಯಿಷ್ಯತಿ ರಾಘವಃ ।
ಚಾತುರ್ವರ್ಣ್ಯಂ ಚ ಲೋಕೇಽಸ್ಮಿನ್ ಸ್ವೇ ಸ್ವೇ ಧರ್ಮೇ ನಿಯೋಕ್ಷ್ಯತಿ॥

ಕ್ಷತ್ರಿಯ ವಂಶಗಳನ್ನು ನೂರುಪಟ್ಟು ಬೆಳೆಸಿ ರಾಜ್ಯಗಳಲ್ಲಿ ಅವರನ್ನು ಸ್ಥಿರ-ವಾಗಿರಿಸುತ್ತಾನೆ ರಾಮ. ನಾಲ್ಕೂ ವರ್ಣದವರನ್ನು ಈ ಲೋಕದಲ್ಲಿ ತಮ್ಮ ತಮ್ಮ ಧರ್ಮಗಳಲ್ಲಿ ಇರಿಸುತ್ತಾನೆ.

ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।
ರಾಮೋ ರಾಜ್ಯಮುಪಾಸಿತ್ವಾ ಬ್ರಹ್ಮಲೋಕಂ ಗಮಿಷ್ಯತಿ ॥ ೯೧ ॥

ಹನ್ನೊಂದು ಸಾವಿರ ವರ್ಷಕಾಲ ರಾಮ ರಾಜ್ಯವಾಳಿ ಪರಬ್ರಹ್ಮನ ಲೋಕವನ್ನು ಸೇರುತ್ತಾನೆ.

ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಮ್ಮಿತಮ್ ।
ಯಃ ಪಠೇದ್ ರಾಮಚರಿತಂ ಸರ್ವಪಾಪೈಃ ಪ್ರಮುಚ್ಯತೇ ॥ ೯೨ ॥

ಈ ರಾಮಚರಿತ್ರೆ ಪವಿತ್ರ, ಪಾಪಹರ, ಪುಣ್ಯಕರ, ವೇದಗಳಿಗೆ ಸಮಾನ. ಯಾರು ಪಠಿಸುವನೋ ಅವನು ಸರ್ವಪಾಪಗಳಿಂದ ಮುಕ್ತನಾಗುವನು.

ಏತದಾಖ್ಯಾನಮಾಯುಷ್ಯಂ ಪಠನ್ರಾಮಾಯಣಂ ನರಃ ।
ಸಪುತ್ರಪೌತ್ರಃ ಸಗಣಃ ಪ್ರೇತ್ಯ ಸ್ವರ್ಗೇ ಮಹೀಯತೇ ॥ ೯೩ ॥

ಈ ರಾಮಾಯಣ ಕಥೆ ಆಯುಷ್ಯಕರ. ಪಠಿಸುವ ಮಾನವನು ಪುತ್ರಪೌತ್ರ ಪರಿವಾರಗಳಿಂದ ಯುಕ್ತನಾಗಿ ಮರಣಾನಂತರ ಸ್ವರ್ಗದಲ್ಲಿ ಮನ್ನಣೆಗೆ ಪಾತ್ರನಾಗುತ್ತಾನೆ.

ಪಠನ್ ದ್ವಿಜೋ ವಾಗೃಷಭತ್ವಮೀಯಾತ್
ಸ್ಯಾತ್ ಕ್ಷತ್ರಿಯೋ ಭೂಮಿಪತಿತ್ವಮೀಯಾತ್ ।
ವಣಿಗ್ಜನಃ ಪಣ್ಯಫಲತ್ವಮೀಯಾ-
ಜ್ಜನಶ್ಚ ಶೂದ್ರೋಽಪಿ ಮಹತ್ವಮೀಯಾತ್ ॥ ೯೪ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕಿಯ ಆದಿಕಾವ್ಯೇ ಬಾಲಕಾಂಡೇ
ಶ್ರೀರಾಮಾಯಣಕಥಾಸಂಕ್ಷೇಪೋ ನಾಮ ಪ್ರಥಮಃ ಸರ್ಗಃ ॥ ೧ ॥

ರಾಮಾಯಣ ಪಠನ ಗೈದರೆ ದ್ವಿಜನು ವೇದಶಾಸ್ತ್ರಗಳಲ್ಲಿ ಪಾರಂಗತನಾಗುವನು. ಕ್ಷತ್ರಿಯನು ರಾಜ್ಯವಾಳುವನು ವೈಶ್ಯನು ವ್ಯಾಪಾರದಲ್ಲಿ ಲಾಭ ಗಳಿಸುವನು. ಶೂದ್ರನು ಮನ್ನಣೆಗೆ ಪಾತ್ರನಾಗುವನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಮೊದಲನೇ ಸರ್ಗ ಮುಗಿಯಿತು.

ದ್ವಿತೀಯಃ ಸರ್ಗಃ

ನಾರದಸ್ಯ ತು ತದ್ವಾಕ್ಯಂ ಶ್ರುತ್ವಾ ವಾಕ್ಯವಿಶಾರದಃ ।
ಪೂಜಯಾಮಾಸ ಧರ್ಮಾತ್ಮಾ ಸಹ ಶಿಷ್ಯೋ ಮಹಾಮುನಿಃ ॥ ೧ ॥

ನಾರದರ ಆ ಮಾತನ್ನು ಆಲಿಸಿ ಮಾತಿನ ಸವಿಯನ್ನು ಬಲ್ಲ ಧರ್ಮಾತ್ಮ ಮಹಾಮುನಿ ವಾಲ್ಮೀಕಿ ಅದನ್ನು ಶ್ಲಾಘಿಸಿದರು.

ಯಥಾವತ್ ಪೂಜಿತಸ್ತೇನ ದೇವರ್ಷಿರ್ನಾರದಸ್ತದಾ ।
ಆಪೃಷ್ಟೋವಾಭ್ಯನುಜ್ಞಾತಃ ಸ ಜಗಾಮ ವಿಹಾಯಸಮ್ ॥ ೨ ॥

ಯಥಾಯೋಗ್ಯವಾಗಿ ಮುನಿಯಿಂದ ಸತ್ಕಾರ ಹೊಂದಿದ ದೇವರ್ಷಿ ನಾರದರು 'ಹೋಗಿ ಬರಲೆ?' ಎಂದು ಅನುಜ್ಞೆಯನ್ನು ಕೇಳಿ ಪಡೆದು ಆಕಾಶಮಾರ್ಗವಾಗಿ ಹೊರಟುಹೋದರು.

ಸ ಮುಹೂರ್ತಂ ಗತೇ ತಸ್ಮಿನ್ ದೇವಲೋಕಂ ಮುನಿಸ್ತದಾ ।
ಜಗಾಮ ತಮಸಾತೀರಂ ಜಾಹ್ನವ್ಯಾಸ್ತ್ವವಿದೂರತಃ ॥ ೩ ॥

ಒಂದು ಮುಹೂರ್ತಕಾಲದಲ್ಲಿ ನಾರದರು ಬ್ರಹ್ಮಲೋಕಕ್ಕೆ ಹೊರಟುಹೋದಾಗ ಇತ್ತ ವಾಲ್ಮೀಕಿ ಮುನಿ ಗಂಗೆಯ ಸಮೀಪದ ತಮಸಾ ನದೀತೀರಕ್ಕೆ ತೆರಳಿದರು.

ಸ ತು ತೀರಂ ಸಮಾಸಾದ್ಯ ತಮಸಾಯಾ ಮುನಿಸ್ತದಾ ।
ಶಿಷ್ಯಮಾಹ ಸ್ಥಿತಂ ಪಾರ್ಶ್ವೇ ದೃಷ್ಟ್ವಾ ತೀರ್ಥಮಕರ್ದಮಮ್ ॥ ೪ ॥

ಮುನಿಯು ತಮಸಾತೀರಕ್ಕೆ ಹೋಗಿ ಕೆಸರಿಲ್ಲದ ಸ್ನಾನಘಟ್ಟವನ್ನು ಕಂಡು, ಆಗ ಸಮೀಪದಲ್ಲಿದ್ದ ಶಿಷ್ಯನಿಗೆ ಹೇಳಿದರು.

ಅಕರ್ದಮಮಿದಂ ತೀರ್ಥಂ ಭರದ್ವಾಜ ನಿಶಾಮಯ ।
ರಮಣೀಯಂ ಪ್ರಸನ್ನಾಂಬು ಸನ್ಮನುಷ್ಯಮನೋ ಯಥಾ ॥ ೫ ॥

'ಭರದ್ವಾಜ! ಕೆಸರಿಲ್ಲದ ಈ ಸ್ನಾನಘಟ್ಟವನ್ನು ನೋಡು. ಸತ್ಪುರುಷನ ಮನಸ್ಸಿನಂತೆ ಎಷ್ಟು ನೀರಿಂದ ತುಂಬಿ ರಮಣೀಯವಾಗಿದೆ!

ನ್ಯಸ್ಯತಾಂ ಕಲಶಸ್ತಾತ ದೀಯತಾಂ ವಲ್ಕಲಂ ಮಮ ।
ಇದಮೇವಾವಗಾಹಿಷ್ಯೇ ತಮಸಾತೀರ್ಥಮುತ್ತಮಮ್ ॥ ೬ ॥

'ಮಗು, ಬಿಂದಿಗೆಯನ್ನು ಕೆಳಗಿಡು. ನನ್ನ ನಾರುಡೆಯನ್ನು ನೀಡು. ಉತ್ತಮ-ವಾದ ಈ ತಮಸಾ ತೀರ್ಥದಲ್ಲಿಯೇ ಸ್ನಾನ ಮಾಡುವೆನು. ನೀನೂ ಇಲ್ಲೇ ಸ್ನಾನ ಮಾಡು' ಎಂದರು.

ಏವಮುಕ್ತೋ ಭರದ್ವಾಜೋ ವಾಲ್ಮೀಕೇನ ಮಹಾತ್ಮನಾ ।
ಪ್ರಾಯಚ್ಛತ ಮುನೇಸ್ತಸ್ಯ ವಲ್ಕಲಂ ನಿಯತೋ ಗುರೋಃ ॥ ೭ ॥

ಶಿಷ್ಯ ಭರದ್ವಾಜನಿಗೆ ಮಹಾತ್ಮ ವಾಲ್ಮೀಕಿ ಹೀಗೆ ಹೇಳಿದೊಡನೆ, ಗುರು ಹೇಳಿದಂತೆ ಮಾಡುವ ಭರದ್ವಾಜನು ಮುನಿಯ ನಾರುಡೆಯನ್ನಿತ್ತ.

ಸ ಶಿಷ್ಯಹಸ್ತಾದಾದಾಯ ವಲ್ಕಲಂ ನಿಯತೇಂದ್ರಿಯಃ ।
ವಿಚಚಾರ ಹ ಪಶ್ಯಂಸ್ತತ್ ಸರ್ವತೋ ವಿಪುಲಂ ವನಮ್ ॥ ೮ ॥

ಶಿಷ್ಯನ ಕೈಯಿಂದ ನಾರುಡೆಯನ್ನು ತೆಗೆದುಕೊಂಡ ಬಳಿಕ ಮುನಿ ತಾನು ಇಂದ್ರಿಯ ನಿಗ್ರಹ ಮಾಡಿಕೊಂಡವನೇ ಆದರೂ ದೈವೇಚ್ಛೆಯಿಂದ ವಿಶಾಲವಾದ ಆ ಅರಣ್ಯದ ಸೊಬಗನ್ನು ಎಲ್ಲ ಕಡೆಯೂ ನೋಡುತ್ತ ಸಂಚರಿಸಿದರು.

ತಸ್ಯಾಭ್ಯಾಶೇ ತು ಮಿಥುನಂ ಚರಂತಮನಪಾಯಿನಮ್ ।
ದದರ್ಶ ಭಗವಾಂಸ್ತತ್ರ ಕ್ರೌಂಚಯೋಶ್ಚಾರುನಿಃಸ್ವನಮ್ ॥ ೯ ॥

ಸಮೀಪದ ಅರಣ್ಯಪ್ರದೇಶದಲ್ಲಿ ಕ್ರೌಂಚಪಕ್ಷಿಗಳ ಜೋಡಿಯೊಂದು ಒಂದ-ನ್ನೊಂದು ಆಗಲದೇ ಜೊತೆಯಿದ್ದು ಮಧುರವಾಗಿ ಉಲಿಯುತ್ತಿದ್ದುದನ್ನು ಭಗವಾನ್ ವಾಲ್ಮೀಕಿ ಮುನಿ ಗಮನಿಸಿದರು.

ತಸ್ಮಾತ್ತು ಮಿಥುನಾದೇಕಂ ಪುಮಾಂಸಂ ಪಾಪನಿಶ್ಚಯಃ ।
ಜಘಾನ ವೈರನಿಲಯೋ ನಿಷಾದಸ್ತಸ್ಯ ಪಶ್ಯತಃ ॥ ೧೦ ॥

ಅವರು ನೋಡುನೋಡುತ್ತಿದ್ದಂತೆಯೇ ಪ್ರಾಣಿಗಳಲ್ಲಿ ವೈರಸ್ವಭಾವದವನಾದ ಓರ್ವ ಬೇಡನು ಆ ಜೋಡಿಯಲ್ಲಿ ಒಂದು ಗಂಡು ಹಕ್ಕಿಯನ್ನು ಕೊಲ್ಲಲು ನಿಶ್ಚಯಿಸಿ ಬಾಣದಿಂದ ಹೊಡೆದು ಬಿಟ್ಟ.

ತಂ ಶೋಣಿತಪರೀತಾಂಗಂ ವೇಷ್ಟಮಾನಂ ಮಹೀತಲೇ ।
ಭಾರ್ಯಾ ತು ನಿಹತಂ ದೃಷ್ಟ್ವಾ ರುರಾವ ಕರುಣಾಂ ಗಿರಮ್॥ ೧೧ ॥

ಆ ಗಂಡುಹಕ್ಕಿ ನೆತ್ತರಿಂದ ತೊಯ್ದು ನೆಲದಲ್ಲಿ ಬಿದ್ದು ಹೊರಳಾಡುವುದನ್ನು ಕಂಡು, ಹೆಣ್ಣುಹಕ್ಕಿ ಕರುಣಾಜನಕವಾಗಿ ಕೂಗಿತು.

ವಿಯುಕ್ತಾ ಪತಿನಾ ತೇನ ದ್ವಿಜೇನ ಸಹಚಾರಿಣಾ ।
ತಾಮ್ರಶೀರ್ಷೇಣ ಮತ್ತೇನ ಪತ್ರಿಣಾ ಸಹಿತೇನ ವೈ ॥ ೧೨ ॥

ಸದಾ ಜೊತೆಗೇ ಇದ್ದು ಜೊತೆಗೇ ಸಂಚರಿಸುತ್ತಿದ್ದ ಕೆಂಬಣ್ಣದ ಜುಟ್ಟಿನಿಂದ ಕೂಡಿದ ಗಂಡುಹಕ್ಕಿ ಹೆಣ್ಣಿನೊಡನೆ ರಮಿಸುತ್ತ ಮೈಮರೆತಿದ್ದಾಗಲೇ ಹೆಣ್ಣು ಅದರಿಂದ ಅಗಲಿತ್ತು.

ತಥಾ ತು ತಂ ದ್ವಿಜಂ ದೃಷ್ಟ್ವಾ ನಿಷಾದೇನ ನಿಪಾತಿತಮ್ ।
ಋಷೇರ್ಧರ್ಮಾತ್ಮನಸ್ತಸ್ಯ ಕಾರುಣ್ಯಂ ಸಮಪದ್ಯತ ॥ ೧೩ ॥

ಹೀಗೆ ಬೇಡನು ಹಕ್ಕಿಯನ್ನು ಹೊಡೆದು ಬೀಳಿಸಿದ್ದನ್ನು ಕಂಡು ಧರ್ಮಾತ್ಮನಾದ ಮುನಿಗೆ ಕರುಣೆ ಉಂಟಾಯಿತು. ಮೃಗಪಕ್ಷಿಗಳು ಜೋಡಿಯಾಗಿ ರಮಿಸುವ ಸಮಯದಲ್ಲಿ ಅವುಗಳನ್ನು ಕೊಲ್ಲುವುದು ಬೇಡನಿಗೂ ಧರ್ಮವಲ್ಲ.

ತತಃ ಕರುಣವೇದಿತ್ವಾದಧರ್ಮೋಽಯಮಿತಿ ದ್ವಿಜಃ ।
ನಿಶಾಮ್ಯ ರುದತೀಂ ಕ್ರೌಂಚೀಮಿದಂ ವಚನಮಬ್ರವೀತ್ ॥ ೧೪ ॥

ದಯಾಸ್ವಭಾವದವನಾದ್ದರಿಂದ ಮುನಿಯು, ಹೆಣ್ಣುಹಕ್ಕಿ ದುಃಖದಿಂದ ಕೂಗುವುದನ್ನು ಕಂಡು, 'ಇದು ಧರ್ಮವಲ್ಲ!' ಎಂದರು.

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।
ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ॥ ೧೫ ॥

'ಬೇಡನೇ! ರಮಿಸುತ್ತ ಮೈಮರೆತಿದ್ದ ಜೋಡಿ ಹಕ್ಕಿಗಳಲ್ಲಿ ಒಂದು ಗಂಡುಹಕ್ಕಿ-ಯನ್ನು ನೀ ಕೊಂದಿರುವೆ. ಬಹುವರ್ಷಗಳ ಕಾಲ ನೀ ಬದುಕಿರಬೇಡ!'

ನಾರದರು ಹೇಳಿದಂತೆ ಸೀತಾರಾಮರು ವನದಲ್ಲಿ ಜೋಡಿಯಾಗಿ ವಿಹರಿಸು-ತ್ತಿದ್ದಾಗ ರಾಮನನ್ನು ಸೀತೆಯಿಂದ ನಿರ್ದಯವಾಗಿ ಅಗಲಿಸಿದ್ದರಿಂದ ರಾವಣ ಬಹು ವರ್ಷಕಾಲ ಬದುಕಲಿಲ್ಲ. ಬದುಕಿರಬಾರದು ಎಂದು ಕವಿಯ ಆಕ್ರೋಶವೇ ಇಲ್ಲಿ ಶಾಪರೂಪದಿಂದ ವ್ಯಕ್ತವಾಗಿದೆ. ಮುಂದೆ ಲೋಕಾಪವಾದ ಹರಡಿದ್ದರಿಂದ ರಾಮನು ತಾನೇ ಸೀತೆಯಿಂದ ಅಗಲಿದಂತೆ ತೋರಿಕೊಂಡದ್ದನ್ನೂ ಕವಿ ಈ ಮಾತಿನಲ್ಲಿ ಸೂಚಿಸುತ್ತಾನೆ– 'ಮಾ ಪ್ರತಿಷ್ಠಾಂಗಮಃ' ಎಂದು. ಒಳಹೊಕ್ಕು

ನೋಡಿದರೆ, ಈ ಶ್ಲೋಕದಲ್ಲಿ ಕವಿ ಮಂಗಳಾಚರಣ ಮಾಡಿದ್ದೂ ಕಂಡುಬರುತ್ತದೆ– ಈಗ, 'ಮಾನಿಷಾದ' ಎಂದು ಒಂದು ಪದ. ಮಾ–ಲಕ್ಷ್ಮಿ, ನಿಷಾದ–ಕುಳಿತು–ಕೊಳ್ಳುವ ಸ್ಥಳ, ಲಕ್ಷ್ಮೀ ನಿವಾಸ, ಶ್ರೀಹರಿ. ಬಹುಕಾಲ, ಶಾಶ್ವತವಾಗಿ ಅವನು ಇರುತ್ತಾನೆ, ಇರಬೇಕು. ಏಕೆಂದರೆ, ಸೀತೆಯ ಮೇಲಿನ ದುಷ್ಟ ಕಾಮಭಾವನೆಯಿಂದ ಮೈಮರೆತು ಮಹಾ ಅಪಚಾರಗೈದ ರಾವಣನನ್ನು ಕೊಂದು, ಮಂಡೋದರಿಯಿಂದ ಅವನನ್ನು ಅಗಲಿಸಿದ್ದಾನೆ, ಶ್ರೀರಾಮ! ತಕ್ಕ ಶಿಕ್ಷೆ ನೀಡಿದ್ದಾನೆ, ಮರ್ಯಾದಾ ಪುರುಷೋತ್ತಮ ಶ್ರೀರಾಮ.

ತಸ್ಯೈವಂ ಬ್ರುವತಶ್ಚಿಂತಾ ಬಭೂವ ಹೃದಿ ವೀಕ್ಷತಃ ।
ಶೋಕಾರ್ತೇನಾಸ್ಯ ಶಕುನೇಃ ಕಿಮಿದಂ ವ್ಯಾಹೃತಂ ಮಯಾ ॥ ೧೬ ॥

ವಾಲ್ಮೀಕಿಮುನಿ ಹೀಗೆ ಬೇಡನಿಗೆ ಶಾಪ ಕೊಡುವಾಗ ಅವರಿಗೇ ಮನದಲ್ಲಿ ಒಂದು ಆಲೋಚನೆ ಉಂಟಾಯಿತು. 'ಈ ಹಕ್ಕಿಯ ಆಕ್ರಂದನಕ್ಕೆ ಮಿಡುಕಿದ ನಾನು ನನ್ನ ಮುಖದಿಂದ ಇದೇನು ಮಾತನ್ನಾಡಿಬಿಟ್ಟೆ?' ಎಂದು.

ಚಿಂತಯನ್ ಸ ಮಹಾಪ್ರಾಜ್ಞಶ್ಚಕಾರ ಮತಿಮಾನ್ಮತಿಮ್ ।
ಶಿಷ್ಯಂ ಚೈವಾಬ್ರವೀದ್ ವಾಕ್ಯಮಿದಂ ಸ ಮುನಿಪುಂಗವಃ ॥ ೧೭ ॥

ಹೀಗೆ ಆಲೋಚಿಸಿ ಮಹಾಪ್ರಾಜ್ಞನಾದ, ಶಾಸ್ತ್ರಜ್ಞನಾದ ಮುನಿಪುಂಗವನು 'ಇದು ಬರಿ ಮಾತಲ್ಲ, ಭಗವಂತನ ಸ್ತೋತ್ರವೇ ಎಂದೆನಿಸಬೇಕು' ಎಂದು ನಿಶ್ಚಯ ಮಾಡಿಕೊಂಡರು, ಹಾಗೇ ಶಿಷ್ಯನಿಗೆ ಹೇಳಿದರು.

ಪಾದಬದ್ಧೋಽಕ್ಷರಸಮಸ್ತಂತ್ರೀಲಯಸಮನ್ವಿತಃ ।
ಶೋಕಾರ್ತಸ್ಯ ಪ್ರವೃತ್ತೋ ಮೇ ಶ್ಲೋಕೋ ಭವತು ನಾನ್ಯಥಾ॥ ೧೮ ॥

'ನಾಲ್ಕು ಪಾದಗಳಿಂದ ಕೂಡಿದೆ, ಪ್ರತಿಪಾದದಲ್ಲಿ ಸಮವಾಗಿ ಎಂಟೆಂಟು ಅಕ್ಷರಗಳೂ ಇವೆ. ವೀಣೆಯ ತಂತಿಯ ಮೇಲೆ ನುಡಿಸಲು ಯೋಗ್ಯವಾಗಿದೆ, ಸಂಗೀತ ಲಯಯುಕ್ತವಾಗಿದೆ. ಪಕ್ಷಿಯ ಮರಣಕ್ಕೆ ಶೋಕಭಾವದಿಂದ ಹೊರಟ, ಶ್ಲೋಕಲಕ್ಷಣಯುಕ್ತವಾದ ನನ್ನ ಈ ಮಾತು, ಪುಣ್ಯಶ್ಲೋಕನಾದ ಹರಿಯ ಶ್ಲೋಕವೇ ಎಂದೆನಿಸಲಿ ಹೊರತು, ವ್ಯರ್ಥ ಶಾಪವಚನವೆಂದಾಗದಿರಲಿ' ಎಂದು.

ಶಿಷ್ಯಸ್ತು ತಸ್ಯ ಬ್ರುವತೋ ಮುನೇರ್ವಾಕ್ಯಮನುತ್ತಮಮ್ ।
ಪ್ರತಿಜಗ್ರಾಹ ಸಂಹೃಷ್ಟಸ್ತಸ್ಯ ತುಷ್ಟೋಽಭವದ್ಗುರುಃ ॥ ೧೯ ॥

ಮುನಿ ಹೀಗೆ ಹೇಳಿದಾಗ 'ಗುರುಗಳು ಹೇಳಿದ್ದು ಸರಿಯೆ' ಎಂದು ಉತ್ಸಾಹ-ದಿಂದ ಶಿಷ್ಯ ಅನುಮೋದಿಸಿದ. ಒಮ್ಮೆ ಕೇಳಿದ ಮಾತ್ರಕ್ಕೇ ಆ ಶ್ಲೋಕವನ್ನು ಆತ ಜಿತ ಮಾಡಿಕೊಂಡಿದ್ದ. ಅದಕ್ಕೆ ಗುರು ಸಂತುಷ್ಟರಾದರು.

ಸೋಽಭಿಷೇಕಂ ತತಃ ಕೃತ್ವಾ ತೀರ್ಥೇ ತಸ್ಮಿನ್ ಯಥಾವಿಧಿ ।
ತಮೇವ ಚಿಂತಯನ್ನರ್ಥಮುಪಾವರ್ತತ ವೈ ಮುನಿಃ ॥ ೨೦ ॥

ಆ ತೀರ್ಥದಲ್ಲಿ ವಿಧ್ಯುಕ್ತವಾಗಿ ಸ್ನಾನ ಮಾಡಿ ತನಗೆ ಶೋಕ ಉಂಟಾದುದರ ಬಗ್ಗೆಯೇ ಆಲೋಚಿಸುತ್ತ ಆಶ್ರಮಕ್ಕೆ ಹಿಂತಿರುಗಿದರು ವಾಲ್ಮೀಕಿ ಮುನಿ.

ಭರದ್ವಾಜಸ್ತತಃ ಶಿಷ್ಯೋ ವಿನೀತಃ ಶ್ರುತವಾನ್ಮುನಿಃ ।
ಕಲಶಂ ಪೂರ್ಣಮಾದಾಯ ಪೃಷ್ಠತೋಽನುಜಗಾಮ ಹ ॥ ೨೧ ॥

ವಿನೀತನೂ ಅಧ್ಯಯನ ಸಂಪನ್ನನೂ ಮುನಿಯೂ ಆಗಿರುವ ಶಿಷ್ಯ ಭರದ್ವಾಜನು ಜಲಪೂರ್ಣವಾದ ಕಲಶವನ್ನು ಹೊತ್ತು ಗುರುಗಳ ಹಿಂದೇ ಹಿಂಬಾಲಿಸಿ ಬಂದನು.

ಸ ಪ್ರವಿಶ್ಯಾಶ್ರಮಪದಂ ಶಿಷ್ಯೇಣ ಸಹ ಧರ್ಮವಿತ್ ।
ಉಪವಿಷ್ಟಃ ಕಥಾಶ್ಚಾನ್ಯಾಶ್ಚಕಾರ ಧ್ಯಾನಮಾಸ್ಥಿತಃ ॥ ೨೨ ॥

ಧರ್ಮಜ್ಞನಾದ ವಾಲ್ಮೀಕಿ ಮುನಿ ಶಿಷ್ಯನೊಂದಿಗೆ ಆಶ್ರಮದೊಳಗೆ ಪ್ರವೇಶಿಸಿ ಕುಳಿತು, ಶ್ಲೋಕದ ಬಗ್ಗೆ ಚಿಂತಿಸುತ್ತಲೇ ಬೇರೆ ವಿಷಯಗಳ ಬಗ್ಗೆ ಮಾತನಾಡಲು ತೊಡಗಿದರು.

ಆಜಗಾಮ ತತೋ ಬ್ರಹ್ಮಾ ಲೋಕಕರ್ತಾ ಸ್ವಯಂ ಪ್ರಭುಃ ।
ಚತುರ್ಮುಖೋ ಮಹಾತೇಜಾ ದ್ರಷ್ಟುಂ ತಂ ಮುನಿಪುಂಗವಮ್ ॥

ಆಗ ಮಹಾತೇಜಸ್ವಿ ಲೋಕ ಸೃಷ್ಟಿಕರ್ತ ಪ್ರಭು ಚತುರ್ಮುಖ ಬ್ರಹ್ಮನು ವಾಲ್ಮೀಕಿ ಮುನಿಪುಂಗವರನ್ನು ಕಾಣಲು ಸ್ವತಃ ಬಂದನು.

ವಾಲ್ಮೀಕಿರಥ ತಂ ದೃಷ್ಟ್ವಾ ಸಹಸೋತ್ಥಾಯ ವಾಗ್ಯತಃ ।
ಪ್ರಾಂಜಲಿಃ ಪ್ರಯತೋ ಭೂತ್ವಾ ತಸ್ಥೌ ಪರಮವಿಸ್ಮಿತಃ ॥ ೨೪ ॥

ವಾಲ್ಮೀಕಿ ಅವನನ್ನು ಕಂಡು ಆಶ್ಚರ್ಯಚಕಿತನಾಗಿ ದಿಗ್ಗನೆ ಎದ್ದರು. ಆಶ್ಚರ್ಯ-ದಿಂದ ಮಾತೇ ಹೊರಡದಂತಾಯಿತು. ಬಲು ವಿನೀತರಾಗಿ ಕೈಮುಗಿದುನಿಂತರು.

ಪೂಜಯಾಮಾಸ ತಂ ದೇವಂ ಪಾದ್ಯಾರ್ಘ್ಯಾಸನವಂದನೈಃ ।
ಪ್ರಣಮ್ಯ ವಿಧಿವಚ್ಚೈನಂ ಪೃಷ್ಟ್ವಾನಾಮಯಮವ್ಯಯಮ್ ॥೨೫॥

ವಾಲ್ಮೀಕಿ ಬ್ರಹ್ಮದೇವನನ್ನು ಪಾದ್ಯ ಅರ್ಘ್ಯ ಆಸನ ವಂದನಗಳಿಂದ ಪೂಜಿಸಿ-ದರು. ವಿಧ್ಯುಕ್ತವಾಗಿ ನಮಿಸಿ ಅವಿಚ್ಛಿನ್ನವಾದ ಕುಶಲ ಸಮಾಚಾರವನ್ನು ಕೇಳಿದರು.

ಅಥೋಪವಿಶ್ಯ ಭಗವಾನಾಸನೇ ಪರಮಾರ್ಚಿತೇ ।
ವಾಲ್ಮೀಕಯೇ ಚ ಋಷಯೇ ಸಂದಿದೇಶಾಸನಂ ತತಃ ॥
ಬ್ರಹ್ಮಣಾ ಸಮನುಜ್ಞಾತಃ ಸೋಽಪ್ಯುಪಾವಿಶದಾಸನೇ ॥ ೨೬ ॥

ಚೆನ್ನಾಗಿ ಅಲಂಕೃತವಾದ ಆಸನದಲ್ಲಿ ಭಗವಾನ್ ಚತುರ್ಮುಖನು ಕುಳಿತು ವಾಲ್ಮೀಕಿಗೂ ಆಸನದಲ್ಲಿ ಕುಳಿತುಕೊಳ್ಳಲು ಅನುಮತಿ ನೀಡಿದರು.

ಉಪವಿಷ್ಟೇ ತದಾ ತಸ್ಮಿನ್ ಸಾಕ್ಷಾಲ್ಲೋಕಪಿತಾಮಹೇ ।
ತದ್ಗತೇನೈವ ಮನಸಾ ವಾಲ್ಮೀಕಿರ್ಧ್ಯಾನಮಾಸ್ಥಿತಃ ॥ ೨೭ ॥

ಸಾಕ್ಷಾತ್ ಲೋಕಪಿತಾಮಹನಾದ ಬ್ರಹ್ಮದೇವನು ಆಸನದಲ್ಲಿ ಕುಳಿತಾಗ ವಾಲ್ಮೀಕಿಮುನಿ ಏಕಾಗ್ರಮನಸ್ಸಿನಿಂದ ಶ್ಲೋಕದ ಬಗ್ಗೆಯೇ ಆಲೋಚಿಸಿದರು.

ಪಾಪಾತ್ಮನಾ ಕೃತಂ ಕಷ್ಟಂ ವೈರಗ್ರಹಣಬುದ್ಧಿನಾ ।
ಯಸ್ತಾದೃಶಂ ಚಾರುರವಂ ಕ್ರೌಂಚಂ ಹನ್ಯಾದಕಾರಣಾತ್ ॥ ೨೮ ॥

'ವೈರದಿಂದ ಹಕ್ಕಿಯನ್ನು ಹಿಡಿಯುವ ಬುದ್ಧಿಯವನು ಪಾಪ ಸ್ವಭಾವದ ಬೇಡನು ಮಧುರವಾಗಿ ಉಲಿಯುತ್ತಿದ್ದ ಕ್ರೌಂಚವನ್ನು ನಿಷ್ಕಾರಣವಾಗಿ ಕೊಂದನು, ದುಷ್ಕೃತ್ಯ ಗೈದನು' ಎಂದು.

ಶೋಚನ್ನೇವ ಮುಹುಃ ಕ್ರೌಂಚೀಮುಪಶ್ಲೋಕಮಿಮಂ ಪುನಃ ।
ಜಗಾವಂತರ್ಗತಮನಾ ಭೂತ್ವಾ ಶೋಕಪರಾಯಣಃ ॥ ೨೯ ॥

ಅಂತರಂಗದಲ್ಲಿ ಹೆಣ್ಣು ಕ್ರೌಂಚದ ಬಗ್ಗೆ ಪುನಃ ಶೋಕಿಸುತ್ತ 'ಮಾನಿಷಾದ' ಎಂಬ ಈ ಶ್ಲೋಕವನ್ನೇ ಪುನಃ ಹಾಡಿದರು, ವಾಲ್ಮೀಕಿಮುನಿ, ಶೋಕಪರಾಯಣರಾದರು.

ತಮುವಾಚ ತತೋ ಬ್ರಹ್ಮಾ ಪ್ರಹಸನ್ ಮುನಿಪುಂಗವಮ್ ।
ಶ್ಲೋಕ ಏವ ತ್ವಯಾ ಬದ್ಧೋ ನಾತ್ರ ಕಾರ್ಯಾ ವಿಚಾರಣಾ ॥ ೩೦ ॥

ಬ್ರಹ್ಮದೇವನು ನಗುತ್ತ ಮುನಿಪುಂಗವನಿಗೆ ಹೇಳಿದರು, 'ನೀವು ಹೇಳಿದ್ದು ಬರೀ ಕ್ರೌಂಚ ಶೋಕವನ್ನಲ್ಲ, ಅದು ಪುಣ್ಯಶ್ಲೋಕನಾದ ಶ್ರೀರಾಮನ ಸ್ತೋತ್ರರೂಪವಾದ ಶ್ಲೋಕವೆ. ಈ ವಿಷಯದಲ್ಲಿ ಸಂಶಯವಿಲ್ಲ,' ಎಂದು.

'ಶ್ಲೋಕ' ಅಂದರೆ ಕಾವ್ಯ . ಛಂದೋಬದ್ಧವಾಗಿರುವುದು ಅದರ ಬಾಹ್ಯ ಲಕ್ಷಣ. ಕವಿಯಲ್ಲಿ ಆಂತರಿಕ ರಸಾನುಭವವು ತೀವ್ರವಾದಾಗ ಅದು ಅಯತ್ನವಾಗಿ ಶ್ಲೋಕರೂಪವಾಗಿ ಹೊರಹೊಮ್ಮುತ್ತದೆ. ರಸವೇ ಅದರ ಸ್ವರೂಪ ಲಕ್ಷಣ. 'ವಾಕ್ಯಂ ರಸಾತ್ಮಕಂ ಕಾವ್ಯಂ' ಎನ್ನುತ್ತಾರೆ, ಆಲಂಕಾರಿಕರು. ಕವಿ ವಾಲ್ಮೀಕಿ, ಕ್ರೌಂಚಪಕ್ಷಿಯ ಶೋಕ ನಿಮಿತ್ತವಾಗಿ ಅದೇ ಬಗೆಯ ನಾರದೋಕ್ತವಾದ ಶ್ರೀರಾಮನ ಸೀತಾ-ವಿರಹಶೋಕವನ್ನೇ ಚಿಂತಿಸುತ್ತ ಆ ಶೋಕರಸಾನುಭವ ತೀವ್ರತೆಯಲ್ಲಿ ಶ್ರೀರಾಮನನ್ನು 'ಮಾನಿಷಾದ!' 'ಶ್ರೀನಿವಾಸ' ಎಂದು ಕೂಗಿ 'ಬಹುಕಾಲ ಬಾಳು' 'ಪ್ರತಿಷ್ಠಾಮಗಮಃ ಶಾಶ್ವತೀಃ ಸಮಾಃ' ಎಂದು ಆಶೀರೂಪ ಮಂಗಳಾಚರಣೆಯನ್ನೇ ಮಾಡಿದ್ದಾನೆ ಕವಿ. ಅದರಿಂದ ಶೋಕ ಬರಿ 'ಶೋಕ'ವಾಗಲಿಲ್ಲ, ಪುಣ್ಯ ಶ್ಲೋಕ'ವಾಯಿತು. ರಾಮಾಯಣ ಮಹಾಕಾವ್ಯರಚನೆಗೆ ನಾಂದಿಯಾಯಿತು. ಅದರಿಂದ 'ವಾಲ್ಮೀಕೇರ್ಗೌಃ ಪುನೀಯಾನ್ನಃ' ಎನ್ನುತ್ತಾರೆ, ಪಂಡಿತಾಚಾರ್ಯರು. ಮೂಲ ರಾಮಾಯಣದ ಸೀತಾಕೃತಿ ವೃತ್ತಾಂತವನ್ನು ವಾಲ್ಮೀಕಿರಸಾನುಕೂಲತೆಯ ದೃಷ್ಟಿಯಿಂದಲೆ ಇಲ್ಲಿ ಹೇಳದೆ ಬಿಟ್ಟಿದ್ದೆಂದು ತಿಳಿಯಬೇಕು. ಹೇಳದೆ ಬಿಡುವುದು ತಪ್ಪಲ್ಲ. ತಪ್ಪು ಹೇಳುವುದು ತಪ್ಪು.

ಮಚ್ಛಂದಾದೇವ ತೇ ಬ್ರಹ್ಮನ್ ಪ್ರವೃತ್ತೇಯಂ ಸರಸ್ವತೀ ।
ರಾಮಸ್ಯ ಚರಿತಂ ಕೃತ್ಸ್ನಂ ಕುರು ತ್ವಮೃಷಿಸತ್ತಮ ॥ ೩೧ ॥

ನನ್ನಿಚ್ಛೆಯಿಂದಲೇ 'ಹೇ ಶ್ರೇಷ್ಠ ಮುನಿಯೇ! ನಿನ್ನ ಮುಖದಿಂದ ಈ 'ಮಾನಿಷಾದ!' ಎಂಬ ಮಾತು ಅಯತ್ನವಾಗಿ ಹೊರಹೊಮ್ಮಿತು. ಅದು ಆಕಸ್ಮಿಕವಲ್ಲ, ಇದನ್ನು ಮಹಾಕಾವ್ಯ ಒಂದಕ್ಕೆ ನಾಂದಿ ಎಂದು ತಿಳಿದು ಪೂರ್ತಿ ರಾಮಾಯಣ ಕಾವ್ಯವನ್ನು ನೀನು ರಚಿಸು.

ಧರ್ಮಾತ್ಮನೋ ಗುಣವತೋ ಲೋಕೇ ರಾಮಸ್ಯ ಧೀಮತಃ ।
ವೃತ್ತಂ ಕಥಯ ಧೀರಸ್ಯ ಯಥಾ ತೇ ನಾರದಾಚ್ಛ್ರುತಮ್ ॥ ೩೨ ॥

ಧರ್ಮಾತ್ಮನಾದ, ಗುಣವಂತ ಧೀಮಂತನಾದ, ಧೀರರಾಮನು ಲೋಕದಲ್ಲಿ ತೋರಿದ ಲೀಲೆಯನ್ನು ಈಗತಾನೆ ನಾರದರಿಂದ ಕೇಳಿ ತಿಳಿದುದಕ್ಕೆ ಅನುಗುಣವಾಗಿ ಬಣ್ಣಿಸು.

ರಹಸ್ಯಂ ಚ ಪ್ರಕಾಶಂ ಚ ಯದ್ ವೃತ್ತಂ ತಸ್ಯ ಧೀಮತಃ ।
ರಾಮಸ್ಯ ಸಹಸೌಮಿತ್ರೇ ರಾಕ್ಷಸಾನಾಂ ಚ ಸರ್ವಶಃ ॥ ೩೩ ॥

ಧೀಮಂತನಾದ ಆ ರಾಮನ, ಲಕ್ಷ್ಮಣನ, ಎಲ್ಲ ರಾಕ್ಷಸರ ಮನೋಗತ ವೃತ್ತಾಂತವನ್ನೂ, ಹೊರಗೆ ವ್ಯಕ್ತವಾದ ವೃತ್ತಾಂತವನ್ನೂ ಎಲ್ಲವನ್ನೂ ಬಿಡದೆ ಹೇಳು.

ವೈದೇಹ್ಯಾಶ್ಚೈವ ಯದ್ ವೃತ್ತಂ ಪ್ರಕಾಶಂ ಯದಿ ವಾ ರಹಃ ।
ತಚ್ಚಾಪ್ಯವಿದಿತಂ ಸರ್ವಂ ವಿದಿತಂ ತೇ ಭವಿಷ್ಯತಿ ॥ ೩೪ ॥

ಸೀತಾಮಾತೆಯ ಅಂತರಂಗ ವೃತ್ತಾಂತವು ಅದು ಹೊರಗೆ ವ್ಯಕ್ತವಾಗಿರಬಹುದು, ಒಳಗೇ ಅವ್ಯಕ್ತವಾಗಿರಬಹುದು, ಎಲ್ಲವೂ ನಿನಗೆ ಇಂದಿನ ವರೆಗೆ ತಿಳಿಯದಿದ್ದುದು ಮುಂದೆ ತಿಳಿಯುವುದು.

ನ ತೇ ವಾಗನೃತಾ ಕಾವ್ಯೇ ಕಾಚಿದತ್ರ ಭವಿಷ್ಯತಿ ।
ಕುರು ರಾಮಕಥಾಂ ಪುಣ್ಯಾಂ ಶ್ಲೋಕಬದ್ಧಾಂ ಮನೋರಮಾಮ್ ॥ ೩೫

ನಿನ್ನ ಈ ಕಾವ್ಯದಲ್ಲಿ ಅಸತ್ಯವಾದ ಮಾತು ಒಂದೂ ಬಾರದು. ಮನೋಹರವೂ ಪುಣ್ಯಕರವೂ ಆದ ರಾಮಕಥೆಯನ್ನು ಶ್ಲೋಕಬದ್ಧವಾಗಿ ರಚಿಸು.

ಪರಶುರಾಮನ ತಪಸ್ಸನ್ನೂ ಲೋಕವನ್ನೂ ರಾಮಬಾಣ ಸುಟ್ಟಿತೆಂದು ಮೇಲು ನೋಟಕ್ಕೆ ಅಸತ್ಯವಾದ ಮಾತೂ ವಾಲ್ಮೀಕಿರಾಮಾಯಣದಲ್ಲಿದೆ. ವಸ್ತುತಃ ಪರಶುರಾಮನ ಉದರದೊಳಗೆ ಆಶ್ರಯ ಪಡೆದು ಅತುಲನೆಂಬ ರಾಕ್ಷಸನು ಗಳಿಸಿರುವ ತಪಸ್ಸು ಮತ್ತು ಅವನ ಲೋಕಗಳು ಅವು. ಪರಮ ಮುಖ್ಯವೃತ್ತಿಯಿಂದ ಅವು 'ಪರಶುರಾಮನವೆ'ಂದು ವಿರೋಧ ಪರಿಹಾರ ನಿರ್ಣಯದಲ್ಲಿ ಕಾಣುತ್ತದೆ.

ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ ।
ತಾವದ್ ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ ॥ ೩೬ ॥

ಭೂತಳದಲ್ಲಿ ಪರ್ವತಗಳು ನದಿಗಳಿರುವಷ್ಟು ಕಾಲವೂ ರಾಮಾಯಣ ಕಥೆ ಲೋಕದಲ್ಲಿ ಹರಡುತ್ತದೆ.

ಯಾವದ್ ರಾಮಾಯಣಕಥಾ ತ್ವತ್ಕೃತಾ ಪ್ರಚರಿಷ್ಯತಿ ।
ತಾವದೂರ್ಧ್ವಮಧಶ್ಚ ತ್ವಂ ಮಲ್ಲೋಕೇಷು ನಿವತ್ಸ್ಯಸಿ ॥ ೩೭ ॥

ನೀನು ರಚಿಸುವ ರಾಮಾಯಣ ಕಥೆ ಲೋಕದಲ್ಲಿ ಪ್ರಚಲಿತವಾಗಿರುಷ್ಟು ಕಾಲವೂ ಮೇಲಿನ ಹಾಗೂ ಕೆಳಗಿನ ಎಲ್ಲ ಲೋಕಗಳಲ್ಲಿಯೂ ನೀನು ಮೆರೆಯುವೆ.

ಇತ್ಯುಕ್ತ್ವಾ ಭಗವಾನ್ ಬ್ರಹ್ಮಾ ತತ್ರೈವಾಂತರಧೀಯತ ।
ತತಃ ಸಶಿಷ್ಯೋ ವಾಲ್ಮೀಕಿರ್ಮುನಿರ್ವಿಸ್ಮಯಮಾಯಯೌ ॥ ೩೮ ॥

ಹೀಗೆ ಹೇಳಿ ಭಗವಾನ್ ಬ್ರಹ್ಮದೇವ ಅಲ್ಲಿಯೆ ಅಂತರ್ಧಾನ ಹೊಂದಿದ. ಆಗ ವಾಲ್ಮೀಕಿ ಮುನಿಯೂ ಅವರ ಶಿಷ್ಯನೂ ವಿಸ್ಮಯಗೊಂಡರು.

ತಸ್ಯ ಶಿಷ್ಯಾಸ್ತತಃ ಸರ್ವೇ ಜಗುಃ ಶ್ಲೋಕಮಿಮಂ ಪುನಃ ।
ಮುಹುರ್ಮುಹುಃ ಪ್ರೀಯಮಾಣಾಃ ಪ್ರಾಹುಶ್ಚ ಭೃಶವಿಸ್ಮಿತಾಃ॥ ೩೯ ॥

ಮುನಿಯ ಶಿಷ್ಯರೆಲ್ಲರೂ ಈ 'ಮಾನಿಷಾದ' ಶ್ಲೋಕವನ್ನು ಮತ್ತೆ ಮತ್ತೆ ಪಠಿಸಿ ಗುರುಗಳಿಗೆ ಸಂತೋಷ ಉಂಟುಮಾಡಿದರು. ಅತ್ಯಂತ ವಿಸ್ಮಯದಿಂದ 'ಶೋಕವು ಶ್ಲೋಕ'ವಾಯಿತೆಂದು ಪ್ರಶಂಸೆ ಮಾಡಿದರು.

ಸಮಾಕ್ಷರೈಶ್ಚತುರ್ಭಿರ್ಯಃ ಪಾದೈರ್ಗೀತೋ ಮಹರ್ಷಿಣಾ ।
ಸೋऽನುವ್ಯಾಹರಣಾದ್ ಭೂಯಃ ಶೋಕಃ ಶ್ಲೋಕತ್ವಮಾಗತಃ ॥೪೦॥

ಸಮಾನ ಸಂಖ್ಯೆಯಲ್ಲಿ ಅಕ್ಷರಗಳಿಂದ ಕೂಡಿದ ನಾಲ್ಕು ಪಾದಗಳ ಛಂದಸ್ಸಿನಲ್ಲಿ ಮಹರ್ಷಿ ಹಾಡಿದ್ದು, ಶೋಕ ರಸಾನುಭವ ಪೂರ್ವಕವಾಗಿ ಹಾಡಿದ್ದರಿಂದ, 'ಶೋಕವೇ ಶ್ಲೋಕವಾಯಿತೆ'ಂದು ಪ್ರಶಂಸೆ ಮಾಡಿದರು, ಶಿಷ್ಯರು.

ತಸ್ಯ ಬುದ್ಧಿರಿಯಂ ಜಾತಾ ವಾಲ್ಮೀಕೇರ್ಭಾವಿತಾತ್ಮನಃ ।
ಕೃತ್ಸ್ನಂ ರಾಮಾಯಣಂ ಕಾವ್ಯಮೀದೃಶೈಃ ಕರವಾಣ್ಯಹಮ್ ॥ ೪೧ ॥

ಇಡಿ ರಾಮಕಥೆಯನ್ನು ಮನಸ್ಸಿನಲ್ಲಿ ಮತ್ತೆ ಮತ್ತೆ ಆಲೋಚಿಸುತ್ತ ಮುನಿಯು ಇಡೀ ರಾಮಾಯಣ ಕಾವ್ಯವನ್ನೂ ಮಾನಿಷಾದ ಶ್ಲೋಕದಂತೇ ರಸಪೂರ್ಣವಾಗಿ ಛಂದೋಬದ್ಧವಾಗಿ ರಚಿಸುವೆನೆಂದು ಸಂಕಲ್ಪ ಮಾಡಿದರು.

ಉದಾರವೃತ್ತಾರ್ಥಪದೈರ್ಮನೋರಮೈ-
ಸ್ತತಃ ಸ ರಾಮಸ್ಯ ಚಕಾರ ಕೀರ್ತಿಮಾನ್ ।
ಸಮಾಕ್ಷರೈಃ ಶ್ಲೋಕಶತೈರ್ಯಶಸ್ವಿನೋ
ಯಶಸ್ಕರಂ ಕಾವ್ಯಮುದಾರಧೀರ್ಮುನಿಃ ॥ ೪೨ ॥

ಕೀರ್ತಿಮಂತನಾದ ಉತ್ತಮ ಬುದ್ಧಿಶಾಲಿಯಾದ ವಾಲ್ಮೀಕಿ ಮುನಿಯು ಯಶಸ್ವಿಯಾದ ರಾಮನ ಯಶಸ್ಸನ್ನು ಹೊಗಳುವ ಮಹಾಕಾವ್ಯವನ್ನು ರಚಿಸಿದರು. 'ಶ್ಲೋಕಶತ' ಅಂದರೆ, ಬಹಳ ಶ್ಲೋಕಗಳು, ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳು ಇಲ್ಲಿ ಇವೆ. ನಾಲ್ಕು ಪಾದಗಳಲ್ಲಿ ಸಮಾನವಾಗಿರುವ ಅಕ್ಷರಗಳಿಂದ ಶ್ಲೋಕಗಳು ಅವು ಇಲ್ಲಿ ಮನೋಹರವಾಗಿವೆ. ಉತ್ತಮವಾದ ವೃತ್ತ, ಅರ್ಥ ಮತ್ತು ಪದಗಳಿಂದ ಮನೋಹರವಾಗಿದೆ.

ತದುಪಗತಸಮಾಸಸಂಧಿಯೋಗಂ
ಸಮಮಧುರೋಪನತಾರ್ಥವಾಕ್ಯಬದ್ಧಮ್ ।
ರಘುವರಚರಿತಂ ಮುನಿಪ್ರಣೀತಂ
ದಶಶಿರಸಶ್ಚ ವಧಂ ನಿಶಾಮಯಧ್ವಂ ॥ ೪೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ದ್ವಿತೀಯಃ ಸರ್ಗಃ ॥ ೨ ॥

ಸಮಾಸಸಂಧಿ ಪದವ್ಯುತ್ಪತ್ತಿಗಳೆಲ್ಲವೂ ಪ್ರಾಯಃ ಇಲ್ಲಿ ವ್ಯಾಕರಣಶಾಸ್ತ್ರಾನುಗುಣವೇ ಇವೆ. ಪದಬಂಧದಲ್ಲಿ ಲಾಲಿತ್ಯ, ರಸಮಾಧುರ್ಯ, ಅರ್ಥದಲ್ಲಿ ಸ್ಪಷ್ಟತೆಗಳು ಈ ಕಾವ್ಯದಲ್ಲಿರುವ ವೈಶಿಷ್ಟ್ಯ. ಹೀಗೆ ಮುನಿಯಿಂದ ವಿರಚಿತವಾದ ಶ್ರೀರಾಮಚರಿತ್ರೆ ರಾವಣವಧೆಗಳನ್ನು ಇಲ್ಲಿ ಶ್ರೋತೃಗಳು ಶ್ರವಣ ಮಾಡಿರಿ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಎರಡನೇ ಸರ್ಗ ಮುಗಿಯಿತು.

ತೃತೀಯಃ ಸರ್ಗಃ

ಶ್ರುತ್ವಾ ವಸ್ತು ಸಮಗ್ರಂ ತದ್ಧರ್ಮಾರ್ಥಸಹಿತಂ ಹಿತಮ್ ।
ವ್ಯಕ್ತಮನ್ವೇಷತೇ ಭೂಯೋ ಯದ್‌ವೃತ್ತಂ ತಸ್ಯ ಧೀಮತಃ ॥ ೧ ॥

ವಾಲ್ಮೀಕಿ ಮುನಿ ನಾರದರಿಂದ ಕಾವ್ಯದ ವಸ್ತುವಾದ ರಾಮಚರಿತೆಯನ್ನು ಶ್ರವಣ ಮಾಡಿದ ಬಳಿಕ, ಧೀಮಂತನಾದ ರಾಮನ ಚರಿತ್ರೆಯ ರೂಪರೇಷೆಯನ್ನು ಅವರು ಆಗ ಮಾತ್ರ ತಿಳಿದಿದ್ದರಿಂದ, ಪುನಃ ಅದನ್ನು 'ಅನ್ವೇಷತೇ' ಪ್ರತಿಭಾ-ಬಲದಿಂದ ಜೀವತುಂಬಿ ಪೂರ್ತಿಯಾಗಿ ಧರ್ಮಾರ್ಥಕಾಮರೂಪ ತ್ರಿವರ್ಗ-ಸಹಿತವಾಗಿ ಹಿತಕರವಾಗಿ ಸ್ಪಷ್ಟವಾಗಿ ಮನಸಿನ ಮುಂದೆ ಪ್ರತ್ಯಕ್ಷ ನಿಲ್ಲಿಸಿಕೊಳ್ಳಲು ಉದ್ಯುಕ್ತರಾಗಿದ್ದಾರೆ.

ಉಪಸ್ಪೃಶ್ಯೋದಕಂ ಸಮ್ಯಙ್ಮುನಿಃ ಸ್ಥಿತ್ವಾ ಕೃತಾಂಜಲಿಃ ।
ಪ್ರಾಚೀನಾಗ್ರೇಷು ದರ್ಭೇಷು ಧರ್ಮೇಣಾನ್ವೇಷತೇ ಗತಿಮ್ ॥ ೨ ॥

ಚೆನ್ನಾಗಿ ಆಚಮನಾದಿಗಳನ್ನು ಮಾಡಿ ಪೂರ್ವಮುಖವಾಗಿ ಹಾಸಿದ ದರ್ಭಾಸನದಲ್ಲಿ ಕುಳಿತು ಕೈಮುಗಿದುಕೊಂಡು ಯೋಗ ಸಮಾಧಿಯ ಬಲದಿಂದ ಸೀತಾರಾಮರ ಹಿಂದಿನ ಇಂದಿನ ಮುಂದಿನ ಎಲ್ಲ ಪ್ರವೃತ್ತಿಗಳನ್ನು ನೋಡಲು ತೊಡಗಿದರು.

ರಾಮಲಕ್ಷ್ಮಣಸೀತಾಭೀ ರಾಜ್ಞಾ ದಶರಥೇನ ಚ ।
ಸಭಾರ್ಯೇಣ ಸರಾಷ್ಟ್ರೇಣ ಯತ್‌ಪ್ರಾಪ್ತಂ ತತ್ರ ತತ್ತ್ವತಃ ॥ ೩ ॥

ಹಸಿತಂ ಭಾಷಿತಂ ಚೈವ ಗತಿರ್ಯಾ ಯಚ್ಚ ಚೇಷ್ಟಿತಮ್ ।
ತತ್ಸರ್ವಂ ಧರ್ಮವೀರ್ಯೇಣ ಯಥಾವತ್ ಸಂಪ್ರಪಶ್ಯತಿ ॥ ೪ ॥

ರಾಮ, ಲಕ್ಷ್ಮಣ, ಸೀತಾ, ರಾಜಾ ದಶರಥ, ಅವನ ಪತ್ನಿಯರು ಮತ್ತು ಅಯೋಧ್ಯಾ ರಾಜ್ಯ – ಈ ಎಲ್ಲರು ಕೈಗೊಳ್ಳುವ ನಗು, ನುಡಿ, ನಡೆ, ಚಲನವಲನ-ಗಳೆಲ್ಲವನ್ನೂ ಯಥಾವತ್ತಾಗಿ ಯೋಗಬಲದಿಂದ ಕಂಡುಕೊಂಡರು.

ಸ್ತ್ರೀತೃತೀಯೇನ ಚ ತಥಾ ಯತ್ಪ್ರಾಪ್ತಂ ಚರತಾ ವನೇ ।
ಸತ್ಯಸಂಧೇನ ರಾಮೇಣ ತತ್ಸರ್ವಂ ಚಾನ್ವವೇಕ್ಷಿತಮ್ ॥ ೫ ॥

ಸತ್ಯಸಂಧನಾದ ರಾಮ ವನವಾಸ ಕಾಲದಲ್ಲಿ ಸೀತಾಲಕ್ಷ್ಮಣ ಸಮೇತನಾಗಿ ಕೈಗೊಂಡ ಎಲ್ಲ ಕರ್ಮಗಳನ್ನೂ ಕಂಡರು.

ತತಃ ಪಶ್ಯತಿ ಧರ್ಮಾತ್ಮಾ ತತ್ಸರ್ವಂ ಯೋಗಮಾಸ್ಥಿತಃ ।
ಪುರಾ ಯತ್ತತ್ರ ನಿರ್ವೃತ್ತಂ ಪಾಣಾವಾಮಲಕಂ ಯಥಾ ॥ ೬ ॥

ಬಳಿಕ ಹಿಂದೆ ಏನೆಲ್ಲ ನಡೆಯಿತು ಮುಂದೇನಾಗಲಿದೆ ಎಲ್ಲವನ್ನೂ ಅಂಗೈನ ನೆಲ್ಲಿಕಾಯಿಯಂತೆ ಯೋಗ ಸಮಾಧಿಸ್ಥರಾದ ಧರ್ಮಾತ್ಮ ಮುನಿ ಕಂಡರು.

ತತ್ಸರ್ವಂ ತತ್ತತೋ ದೃಷ್ಟ್ವಾ ಧರ್ಮೇಣ ಸ ಮಹಾದ್ಯುತಿಃ ।
ಅಭಿರಾಮಸ್ಯ ರಾಮಸ್ಯ ಚರಿತಂ ಕರ್ತುಮುದ್ಯತಃ ॥ ೭ ॥

ಯೋಗಬಲದಿಂದ ಮಹಾಪ್ರಕಾಶವುಳ್ಳ ಮುನಿ ಎಲ್ಲವನ್ನೂ ಯಥಾವತ್ತಾಗಿ ಪ್ರತ್ಯಕ್ಷ ಕಂಡು ಸುಂದರನಾದ ರಾಮನ ಎಲ್ಲ ಚರಿತೆಯನ್ನೂ ಹಾಡಿಕೊಂಡಾಡಲು ಉದ್ಯುಕ್ತರಾದರು.

ಕಾಮಾರ್ಥಗುಣಸಂಪನ್ನಂ ಧರ್ಮಾರ್ಥಗುಣವಿಸ್ತರಮ್ ।
ಸಮುದ್ರಮಿವ ರತ್ನಾಢ್ಯಂ ಸರ್ವಶ್ರುತಿಮನೋಹರಮ್ ॥ ೮ ॥

ಕಾಮ ಮತ್ತು ಅರ್ಥಗಳೆಂಬ ಎರಡು ಪುರುಷಾರ್ಥಗಳೂ ಈ ಕಾವ್ಯದ 'ಗುಣ' ಅಂದರೆ ಫಲವಾಗಿವೆ. ಧರ್ಮ ಮತ್ತು 'ಅರ್ಥ' ಎಂದರೆ ಮೋಕ್ಷವೆಂಬ ಪುರುಷಾರ್ಥ ಈ ಎರಡೂ ಈ ಕಾವ್ಯದ ಫಲಗಳೆ. ಇವು ಎರಡು ಕಾಮ ಅರ್ಥಗಳಿಗಿಂತ ಹೆಚ್ಚು ವಿಸ್ತಾರವಾಗಿ ಉಕ್ತವಾಗುತ್ತವೆಯಷ್ಟೇ. ಸಮುದ್ರವು ರತ್ನಾಢ್ಯ, ರತ್ನಾಕರವಾಗುವಂತೆ ಕಾವ್ಯವೂ ರತ್ನಾಕರವಾಗಿದೆ. ಸಮುದ್ರದಂತೆ ವಿಸ್ತಾರವಾಗಿದ್ದು 'ಮಹಾಕಾವ್ಯ'ವೆನಿಸಿದೆ. ಸರ್ವಶ್ರೋತೃಗಳಿಗೂ ಕೇಳಲು ಮನೋಹರವೂ ಆಗಿದೆ. 'ಅರ್ಥ' ಇಲ್ಲಿ ಮೋಕ್ಷ. 'ಅರ್ಥಃ' ಸ್ಯಾದ್ ವಿಷಯೇ ಮೋಕ್ಷೇ ಶಬ್ದವಾಚ್ಯೇ ಪ್ರಯೋಜನೇ' ಎಂದು ವೈಜಯಂತೀ ಕೋಶವಿದೆ.

ಸ ಯಥಾ ಕಥಿತಂ ಪೂರ್ವಂ ನಾರದೇನ ಮಹರ್ಷಿಣಾ ।
ರಘುವಂಶಸ್ಯ ಚರಿತಂ ಚಕಾರ ಭಗವಾನ್ ಋಷಿಃ ॥ ೯ ॥

ಪೂಜ್ಯನಾದ ಆ ಮುನಿಯು ಹಿಂದೆ ಮಹರ್ಷಿ ನಾರದರು ಹೇಗೆ ಹೇಳಿದ್ದರೋ ಅದೇ ಕ್ರಮದಿಂದ ರಘುವಂಶದಲ್ಲಿ ಅವತರಿಸಿದ ಶ್ರೀರಾಮನ ಚರಿತ್ರೆಯನ್ನು ರಚಿಸಿದರು.

ಜನ್ಮ ರಾಮಸ್ಯ ಸುಮಹದ್ವೀರ್ಯಂ ಸರ್ವಾನುಕೂಲತಾಮ್ ।
ಲೋಕಸ್ಯ ಪ್ರಿಯತಾಂ ಕ್ಷಾಂತಿಂ ಸೌಮ್ಯತಾಂ ಸತ್ಯಶೀಲತಾಮ್ ॥ ೧೦ ॥

ರಾಮನ ಅವತಾರ, ಅವನ ಅನುಪಮವಾದ ಮಹಾವೀರ್ಯ, ಸರ್ವಜನ ಹಿತಕಾರಿತ್ವ, ಲೋಕಪ್ರಿಯತ್ವ, ಕ್ಷಮೆ, ಸೌಮ್ಯತ್ವ, ಸತ್ಯಶೀಲತ್ವಗಳನ್ನು ಮುನಿ ವರ್ಣಿಸುತ್ತಾರೆ.

ನಾನಾ ಚಿತ್ರಕಥಾಶ್ಚಾನ್ಯಾ ವಿಶ್ವಾಮಿತ್ರಸಮಾಗಮೇ ।
ಜಾನಕ್ಯಾಶ್ಚ ವಿವಾಹಂ ಚ ಧನುಷಶ್ಚ ವಿಭೇದನಮ್ ॥ ೧೧ ॥

ಆಶ್ಚರ್ಯಕರವಾದ ಬೇರೆ ನಾನಾ ಕಥೆಗಳನ್ನೂ ಕೂಡ ವಿಶ್ವಾಮಿತ್ರರೊಂದಿಗೆ ಹೋಗುವಾಗ, ರಾಮಲಕ್ಷ್ಮಣರಿಗೆ ಅವರು ಹೇಳುತ್ತಾರೆ. ಸೀತಾವಿವಾಹ ಶಿವಧನುರ್ಭಂಗಗಳನ್ನೂ ಹೇಳುತ್ತಾರೆ.

ರಾಮರಾಮವಿವಾದಂ ಚ ಗುಣಾನ್ ದಾಶರಥೇಸ್ತಥಾ ।
ತದಾऽಭಿಷೇಕಂ ರಾಮಸ್ಯ ಕೈಕೇಯ್ಯಾ ದುಷ್ಟಭಾವತಾಮ್ ॥ ೧೨ ॥

ರಾಮ ಪರಶುರಾಮರ ವಿವಾದದ ಆಂತರ್ಯವನ್ನೂ ರಾಮನ ವಿನಯಾದಿ-ಗುಣಗಳನ್ನೂ ರಾಮಾಭಿಷೇಕ ಪ್ರಯತ್ನವನ್ನೂ ಕೈಕೇಯಿಯ ದುಷ್ಟಭಾವವನ್ನೂ ಹೇಳುತ್ತಾರೆ.

ವಿಘಾತಂ ಚಾಭಿಷೇಕಸ್ಯ ರಾಮಸ್ಯ ಚ ವಿವಾಸನಮ್ ।
ರಾಜ್ಞಃ ಶೋಕವಿಲಾಪಂ ಚ ಪರಲೋಕಸ್ಯ ಚಾಶ್ರಯಮ್ ॥ ೧೩ ॥

ಕೈಕೇಯಿಯ ದುಷ್ಟಭಾವದಿಂದ ರಾಮಾಭಿಷೇಕ ನಿಂತುದನ್ನೂ ರಾಮನಿಗೆ ವನವಾಸವಾದುದನ್ನೂ ರಾಜಾ ದಶರಥನ ಶೋಕ, ವಿಲಾಪ ಪರಲೋಕ ಗಮನಗಳನ್ನೂ ಹೇಳುತ್ತಾರೆ.

ಪ್ರಕೃತೀನಾಂ ವಿಷಾದಂ ಚ ಪ್ರಕೃತೀನಾಂ ವಿಸರ್ಜನಮ್ ।
ನಿಷಾದಾಧಿಪಸಂವಾದಂ ಸೂತೋಪಾವರ್ತನಂ ತಥಾ ॥ ೧೪ ॥

ಪ್ರಜೆಗಳ ವಿಷಾದವನ್ನೂ ರಾಮ ಅವರನ್ನು ಹಿಂದೆ ಕಳಿಸಿದ್ದನ್ನೂ ನಿಷಾದ ರಾಜ ಗುಹನ ಸಂಭಾಷಣವನ್ನೂ ಸಾರಥಿ ಸುಮಂತ್ರನನ್ನು ಹಿಂದೆ ಕಳಿಸಿದ್ದನ್ನೂ ಹೇಳುತ್ತಾರೆ.

ಗಂಗಾಯಾಶ್ಚಾಪಿ ಸಂತಾರಂ ಭರದ್ವಾಜಸ್ಯ ದರ್ಶನಮ್ ।
ಭರದ್ವಾಜಾಭ್ಯನುಜ್ಞಾನಾಚ್ಚಿತ್ರಕೂಟಸ್ಯ ದರ್ಶನಮ್ ॥ ೧೫ ॥

ಗಂಗಾ ನದಿಯನ್ನು ದಾಟಿದ್ದನ್ನೂ ಭರದ್ವಾಜರ ದರ್ಶನವನ್ನೂ ಭರದ್ವಾಜರ ಅನುಮತಿಯಿಂದ ಚಿತ್ರಕೂಟಕ್ಕೆ ಹೋಗಿದ್ದನ್ನೂ ಹೇಳುತ್ತಾರೆ.

ವಾಸ್ತುಕರ್ಮ ನಿವೇಶಂ ಚ ಭರತಾಗಮನಂ ತಥಾ ।
ಪ್ರಸಾದನಂ ಚ ರಾಮಸ್ಯ ಪಿತುಶ್ಚ ಸಲಿಲಕ್ರಿಯಾಮ್ ॥ ೧೬ ॥

ಚಿತ್ರಕೂಟದಲ್ಲಿ ಗುಡಿಸಲು ಕಟ್ಟಿ ಪ್ರವೇಶ ಮಾಡಿದ್ದನ್ನೂ ಭರತನಾಗಮನವನ್ನೂ, ಭರತನು ರಾಮನ ಮನ ಒಲಿಸಲು ಯತ್ನಿಸಿದ್ದನ್ನೂ ತಂದೆಗೆ ಜಲತರ್ಪಣ ಕೊಟ್ಟಿದ್ದನ್ನೂ ಹೇಳುತ್ತಾರೆ.

ಪಾದುಕಾಗ್ರ್ಯಾಭಿಷೇಕಂ ಚ ನಂದಿಗ್ರಾಮನಿವಾಸನಮ್ ।
ದಂಡಕಾರಣ್ಯಗಮನಂ ವಿರಾಧಸ್ಯ ವಧಂ ತಥಾ ॥ ೧೭ ॥

ಶ್ರೇಷ್ಠವಾದ ರಾಮನ ಪಾದುಕೆಗಳಿಗೆ ಭರತನು ಅಭಿಷೇಕ ಮಾಡಿದ್ದನ್ನೂ ನಂದಿಗ್ರಾಮದಲ್ಲಿ ವಾಸ ಮಾಡಿದ್ದನ್ನೂ ಶ್ರೀರಾಮನ ದಂಡಕಾರಣ್ಯಗಮನ, ವಿರಾಧವಧಗಳನ್ನೂ ಹೇಳುತ್ತಾರೆ.

ದರ್ಶನಂ ಶರಭಂಗಸ್ಯ ಸುತೀಕ್ಷ್ಣೇನಾಭಿಸಂಗಮಮ್ ।
ಅನಸೂಯಾಸಹಾಸ್ಯಮಪ್ಯಂಗರಾಗಸ್ಯ ಚಾರ್ಪಣಮ್ ॥ ೧೮ ॥

ಶರಭಂಗನ ದರ್ಶನ, ಸುತೀಕ್ಷ್ಣನ ಸಮಾಗಮ, ಅನಸೂಯೆಯೊಡನೆ ಸೀತೆ ಕುಳಿತಿದ್ದು, ಸೀತೆಗೆ ಅವಳು ಅಂಗರಾಗವನ್ನು ಕೊಟ್ಟಿದ್ದು ಉಕ್ತವಾಗಿದೆ.

ಅಗಸ್ತ್ಯದರ್ಶನಂ ಚೈವ ಶೂರ್ಪಣಖ್ಯಾಶ್ಚ ದರ್ಶನಮ್ ।
ಶೂರ್ಪಣಖ್ಯಾಶ್ಚ ಸಂವಾದಂ ವಿರೂಪಕರಣಂ ತಥಾ ॥
ವಧಂ ಖರತ್ರಿಶಿರಸೋರುತ್ಥಾನಂ ರಾವಣಸ್ಯ ಚ ॥ ೧೯ ॥

ಅಗಸ್ತ್ಯದರ್ಶನ, ಅವರಿಂದ ಧನುಸ್ಸನ್ನು ಪಡೆದುದು ಶೂರ್ಪಣಖೆಯ ದರ್ಶನ, ಅವಳನ್ನು ವಿರೂಪಗೊಳಿಸಿದ್ದು ಖರತ್ರಿಶಿರರ ವಧ. ರಾವಣ ಸೀತಾಪಹರಣಕ್ಕೆ ಹೊರಟಿದ್ದು ಉಕ್ತವಾಯಿತು.

ಮಾರೀಚಸ್ಯ ವಧಂ ಚೈವ ವೈದೇಹ್ಯಾ ಹರಣಂ ತಥಾ ।
ರಾಘವಸ್ಯ ವಿಲಾಪಂ ಚ ಗೃಧ್ರರಾಜನಿಬರ್ಹಣಮ್ ॥ ೨೦ ॥

ಮಾರೀಚವಧ ಸೀತಾಪಹರಣ ಶ್ರೀರಾಮನ ವಿಲಾಪ ಜಟಾಯುವನ್ನು ರಾವಣ ಹಿಂಸಿಸಿದ್ದು.

ಕಬಂಧದರ್ಶನಂ ಚೈವ ಪಂಪಾಯಾಶ್ಚೈವ ದರ್ಶನಮ್ ।
ಶಬರೀದರ್ಶನಂ ಚೈವ ಫಲಮೂಲಾಶನಂ ತಥಾ ।
ಪ್ರಲಾಪಂ ಚೈವ ಪಂಪಾಯಾಂ ಹನೂಮದ್ದರ್ಶನಂ ತಥಾ ॥ ೨೧ ॥

ಕಬಂಧದರ್ಶನ ಪಂಪಾದರ್ಶನ ಶಬರೀದರ್ಶನ ರಾಮನು ಫಲಮೂಲ ಭಕ್ಷಣ ಮಾಡಿದ್ದು, ಹಂಪೆಯಲ್ಲಿ ಅವನು ವಿಲಾಪಗೈದುದು. ಹನುಮಂತನ ದರ್ಶನ.

ಋಷ್ಯಮೂಕಸ್ಯ ಗಮನಂ ಸುಗ್ರೀವೇಣ ಸಮಾಗಮಮ್ ।
ಪ್ರತ್ಯಯೋತ್ಪಾದನಂ ಸಖ್ಯಂ ವಾಲಿಸುಗ್ರೀವವಿಗ್ರಹಮ್ ॥ ೨೨ ॥

ಋಷ್ಯಮೂಕಕ್ಕೆ ಹೋದುದು ಸುಗ್ರೀವನ ಭೇಟ್ಟಿ ಮಾಡಿದ್ದು ವಿಶ್ವಾಸ ಉಂಟು-ಮಾಡಿದ್ದು ಸಖ್ಯ ಬೆಳೆಸಿದ್ದು ವಾಲಿ ಸುಗ್ರೀವರ ಯುದ್ಧ.

ವಾಲಿಪ್ರಮಥನಂ ಚೈವ ಸುಗ್ರೀವಪ್ರತಿಪಾದನಮ್ ।
ತಾರಾವಿಲಾಪಂ ಸಮಯಂ ವರ್ಷರಾತ್ರನಿವಾಸನಮ್ ॥ ೨೩ ॥

ವಾಲಿವಧ, ಸುಗ್ರೀವನಿಗೆ ರಾಜ್ಯವಿತ್ತುದು, ತಾರೆಯ ವಿಲಾಪ, ಸೀತಾನ್ವೇಷಣ ಒಪ್ಪಂದ, ಮಳೆಗಾಲದಲ್ಲಿ ವಾಸ.

ಕೋಪಂ ರಾಘವಸಿಂಹಸ್ಯ ಬಲಾನಾಮುಪಸಂಗ್ರಹಮ್ ।
ದಿಶಃ ಪ್ರಸ್ಥಾಪನಂ ಚೈವ ಪೃಥಿವ್ಯಾಶ್ಚ ನಿವೇದನಮ್ ॥ ೨೪ ॥

ಶ್ರೀರಾಮನ ಕೋಪ ಕಪಿಸೈನ್ಯ ಜಮಾವಣೆ ದಿಕ್ಕುಗಳಿಗೆ ಕಪಿವೀರರನ್ನು ಕಳಿಸಿದ್ದು, ಭೂಲೋಕ ವಿಸ್ತಾರ ವರ್ಣನೆ ಮಾಡಿದ್ದು.

ಅಂಗುಲೀಯಕದಾನಂ ಚ ಋಕ್ಷಸ್ಯ ಬಿಲದರ್ಶನಮ್ ।
ಪ್ರಾಯೋಪವೇಶನಂ ಚೈವ ಸಂಪಾತೇಶ್ಚೈವ ದರ್ಶನಮ್ ॥ ೨೫ ॥

ಸೀತೆಗೆ ಉಂಗುರವಿತ್ತಿದ್ದು ಋಕ್ಷಬಿಲಗುಹೆಯನ್ನು ಕಂಡಿದ್ದು ಪ್ರಾಯೋಪವೇಶನ, ಸಂಪಾತಿಯ ದರ್ಶನ.

ಪರ್ವತಾರೋಹಣಂ ಚೈವ ಸಾಗರಸ್ಯ ಚ ಲಂಘನಮ್ ।
ಸಮುದ್ರವಚನಾಚ್ಚೈವ ಮೈನಾಕಸ್ಯ ಚ ದರ್ಶನಮ್ ॥ ೨೬ ॥

ಪರ್ವತಾರೋಹಣ, ಸಾಗರಲಂಘನ, ಸಮುದ್ರರಾಜನ ಮಾತಿನಿಂದ ಮೈನಾಕನ ದರ್ಶನ.

ಸಿಂಹಿಕಾಯಾಶ್ಚ ನಿಧನಂ ಲಂಕಾಮಲಯದರ್ಶನಮ್ ।
ರಾತ್ರೌ ಲಂಕಾಪ್ರವೇಶಂ ಚ ಏಕಸ್ಯ ಚ ವಿಚಿಂತನಮ್ ॥ ೨೭ ॥

ಸಿಂಹಿಕೆಯನ್ನು ಕೊಂದಿದ್ದು ಲಂಕೆಯ ಬೆಟ್ಟವನ್ನು ಕಂಡಿದ್ದು ರಾತ್ರಿಯಲ್ಲಿ ಲಂಕಾಪ್ರವೇಶ, ಏಕಾಂಗಿಯಾಗಿ ಆಲೋಚಿಸಿದ್ದು.

ಆಪಾನಭೂಮಿಗಮನಮವರೋಧಸ್ಯ ದರ್ಶನಮ್ ।
ದರ್ಶನಂ ರಾವಣಸ್ಯಾಪಿ ಪುಷ್ಪಕಸ್ಯ ಚ ದರ್ಶನಮ್ ॥ ೨೮ ॥

ಮದ್ಯಪಾನ ಸ್ಥಳಕ್ಕೆ ಹೋದುದು. ಅಂತಃಪುರ ದರ್ಶನ ರಾವಣದರ್ಶನ ಪುಷ್ಪಕವಿಮಾನ ದರ್ಶನ.

ಅಶೋಕವನಿಕಾಯಾನಂ ಸೀತಾಯಾಶ್ಚೈವ ದರ್ಶನಮ್ ।
ಅಭಿಜ್ಞಾನಪ್ರದಾನಂ ಚ ಸೀತಾಯಾಶ್ಚಾಭಿಭಾಷಣಮ್ ॥ ೨೯ ॥

ಅಶೋಕವನ ಗಮನ, ಸೀತಾದರ್ಶನ, ಸೀತೆಗೆ ಉಂಗುರ ನೀಡಿದ್ದು ಸಂಭಾಷಣ ಮಾಡಿದ್ದು.

ರಾಕ್ಷಸೀದರ್ಶನಂ ಚೈವ ತ್ರಿಜಟಾಸ್ವಪ್ನದರ್ಶನಮ್ ।
ಮಣಿಪ್ರದಾನಂ ಸೀತಾಯಾ ವೃಕ್ಷಭಂಗಂ ತಥೈವ ಚ ॥ ೩೦ ॥

ರಾಕ್ಷಸಿಯರ ದರ್ಶನ ತ್ರಿಜಟೆಯ ಸ್ವಪ್ನದರ್ಶನ, ಸೀತೆಯ ಚೂಡಾಮಣಿ ಪ್ರದಾನ, ವೃಕ್ಷನಾಶ.

ರಾಕ್ಷಸೀವಿದ್ರವಂ ಚೈವ ಕಿಂಕರಾಣಾಂ ನಿಬರ್ಹಣಮ್ ।
ಗ್ರಹಣಂ ವಾಯುಸೂನೋಶ್ಚ ಲಂಕಾದಾಹಾಭಿಗರ್ಜನಮ್ ॥ ೩೧ ॥

ರಾಕ್ಷಸಿಯರ ಪಲಾಯನ ದೂತರ ನಾಶ, ಹನುಮಂತನ ಬಂಧನ ಲಂಕಾದಹನ ಗರ್ಜನ.

ಪ್ರತಿಪ್ಲವನಮೇವಾಥ ಮಧೂನಾಂ ಹರಣಂ ತಥಾ ।
ರಾಘವಾಶ್ವಾಸನಂ ಚೈವ ಮಣೇರ್ನಿರ್ಯಾತನಂ ತಥಾ ॥ ೩೨ ॥

ಹಿಂತಿರುಗಿ ಸಾಗರ ಲಂಘಿಸಿದ್ದು ಮಧುಪಾನ, ರಾಮನಿಗೆ ಆಶ್ವಾಸನ ಮಾಡಿದ್ದು ಚೂಡಾಮಣಿ ನೀಡಿದ್ದು.

ಸಂಗಮಂ ಚ ಸಮುದ್ರೇಣ ನಲಸೇತೋಶ್ಚ ಬಂಧನಮ್ ।
ಪ್ರತಾರಂ ಚ ಸಮುದ್ರಸ್ಯ ರಾತ್ರೌ ಲಂಕಾವರೋಧನಮ್ ॥ ೩೩ ॥

ಸಮುದ್ರರಾಜನ ಭೆಟ್ಟಿ, ನಲನಿಂದ ಸೇತು ನಿರ್ಮಾಣ, ಸಮುದ್ರವನ್ನು ದಾಟಿದ್ದು, ರಾತ್ರಿಯಲ್ಲಿ ಲಂಕೆಯನ್ನು ಮುತ್ತಿದ್ದು.

ವಿಭೀಷಣೇನ ಸಂಸರ್ಗಂ ವಧೋಪಾಯನಿವೇದನಮ್ ।
ಕುಂಭಕರ್ಣಸ್ಯ ನಿಧನಂ ಮೇಘನಾದನಿಬರ್ಹಣಮ್ ॥ ೩೪ ॥

ವಿಭೀಷಣನೊಡನೆ ಒಪ್ಪಂದ ಇಂದ್ರಜಿದ್ವಧೋಪಾಯವನ್ನು ಹೇಳಿದ್ದು. ಕುಂಭಕರ್ಣವಧ ಇಂದ್ರಜಿದ್‌ವಧ.

ರಾವಣಸ್ಯ ವಿನಾಶಂ ಚ ಸೀತಾವಾಪ್ತಿಮರೇಃ ಪುರೇ ।
ವಿಭೀಷಣಾಭಿಷೇಕಂ ಚ ಪುಷ್ಪಕಸ್ಯ ಚ ದರ್ಶನಮ್ ॥ ೩೫ ॥

ರಾವಣವಧ ಸೀತಾಪ್ರಾಪ್ತಿ ಲಂಕೆಯಲ್ಲಿ ವಿಭೀಷಣನಿಗೆ ಅಭಿಷೇಕ, ಪುಷ್ಪಕ–ವಿಮಾನ ದರ್ಶನ.

ಅಯೋಧ್ಯಾಯಾಶ್ಚ ಗಮನಂ ಭರತೇನ ಸಮಾಗಮಮ್ ।
ರಾಮಾಭಿಷೇಕಾಭ್ಯುದಯಂ ಸರ್ವಸೈನ್ಯವಿಸರ್ಜನಮ್ ॥
ಸ್ವರಾಷ್ಟ್ರರಂಜನಂ ಚೈವ ವೈದೇಹ್ಯಾಶ್ಚ ವಿಸರ್ಜನಮ್ ॥ ೩೬ ॥

ಅಯೋಧ್ಯೆಗೆ ಹಿಂತಿರುಗಿದ್ದು, ಭರತನೊಡನೆ ಸಮಾಗಮ, ರಾಮಾಭಿಷೇಕೋತ್ಸವ, ಕಪಿಸೈನ್ಯವನ್ನು ಹಿಂತಿರುಗಿಸಿದ್ದು ರಾಮರಾಜ್ಯ ರಂಜನೆ, ಸೀತಾಪರಿತ್ಯಾಗ.

ಅನಾಗತಂ ಚ ಯತ್ಕಿಂಚಿದ್ರಾಮಸ್ಯ ವಸುಧಾತಲೇ ।
ತಚ್ಚಕಾರೋತ್ತರೇ ಕಾವ್ಯೇ ವಾಲ್ಮೀಕಿರ್ಭಗವಾನೃಷಿಃ ॥ ೩೭ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ತೃತೀಯಃ ಸರ್ಗಃ ॥ ೩ ॥

ಭವಿಷ್ಯದಲ್ಲಿ ಭೂತಳದಲ್ಲಿ ಶ್ರೀರಾಮನೇನೆಲ್ಲ ಲೀಲೆ ಮಾಡಿದನೋ ಅದನ್ನು ಕೂಡ ಉತ್ತರಕಾಂಡದಲ್ಲಿ ಪೂಜ್ಯ ವಾಲ್ಮೀಕಿ ಮುನಿ ವರ್ಣಿಸಿದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಮೂರನೇ ಸರ್ಗ ಮುಗಿಯಿತು.

ಚತುರ್ಥಃ ಸರ್ಗಃ

ಪ್ರಾಪ್ತರಾಜ್ಯಸ್ಯ ರಾಮಸ್ಯ ವಾಲ್ಮೀಕಿರ್ಭಗವಾನೃಷಿಃ ।
ಚಕಾರ ಚರಿತಂ ಕೃತ್ಸ್ನಂ ವಿಚಿತ್ರಪದಮರ್ಥವತ್ ॥ ೧ ॥

ರಾಜ್ಯಾಭಿಷೇಕದ ಅನಂತರವೂ ಶ್ರೀರಾಮ ತೋರಿದ ಲೀಲೆಯನ್ನೆಲ್ಲವನ್ನು ವರ್ಣಿಸುವ ಸುಂದರ ಪದಬಂಧದ ಅರ್ಥಪೂರ್ಣವಾದ ಕಾವ್ಯವನ್ನೂ ಪೂಜ್ಯ ವಾಲ್ಮೀಕಿ ಮುನಿ ರಚಿಸಿದರು.

ಚತುರ್ವಿಂಶತ್ಸಹಸ್ರಾಣಿ ಶ್ಲೋಕಾನಾಮುಕ್ತವಾನೃಷಿಃ ।
ತಥಾ ಸರ್ಗಶತಾನ್ ಪಂಚ ಷಟ್‌ಕಾಂಡಾನಿ ತಥೋತ್ತರಮ್ ॥ ೨ ॥

ಒಟ್ಟು ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳನ್ನೂ, ಐನೂರು ಸರ್ಗಗಳ ಆರು ಕಾಂಡಗಳನ್ನೂ ಬಳಿಕ ಉತ್ತರಕಾಂಡವನ್ನೂ ರಚಿಸಿದರು.

ಕೃತ್ವಾऽಪಿ ತನ್ಮಹಾಪ್ರಾಜ್ಞಃ ಸಭವಿಷ್ಯಂ ಸಹೋತ್ತರಮ್ ।
ಚಿಂತಯಾಮಾಸ ಕೋ ನ್ವೇತತ್ಪ್ರಯುಂಜೀಯಾದಿತಿ ಪ್ರಭುಃ ॥ ೩ ॥

ಪಟ್ಟಾಭಿಷೇಕದ ಮುಂದಿನ ಚರಿತ್ರೆಯನ್ನು ಹೇಳುವ ಉತ್ತರಕಾಂಡದೊಂದಿಗೆ ಸಮಗ್ರ ರಾಮಾಯಣವನ್ನೂ ಮಹಾಪ್ರಾಜ್ಞರಾದ ವಾಲ್ಮೀಕಿ ಮುನಿ ರಚಿಸಿಯೂ ಈ ಕಾವ್ಯವನ್ನು ಯಾರು ಕಲಿತು ಹಾಡಬಲ್ಲರು ಎಂದು ಚಿಂತಿಸಿದರು.

ತಸ್ಯ ಚಿಂತಯಮಾನಸ್ಯ ಮಹರ್ಷೇರ್ಭಾವಿತಾತ್ಮನಃ ।
ಅಗೃಹ್ಣೀತಾಂ ತತಃ ಪಾದೌ ಮುನಿವೇಷೌ ಕುಶೀಲವೌ ॥ ೪ ॥

ಶುದ್ಧಚಿತ್ತನಾದ ಮಹರ್ಷಿ ಹೀಗೆ ಚಿಂತಿಸುವಾಗ ಮುನಿವೇಷಯುಕ್ತರಾದ ಕುಶಲವರು ಬಂದು ಪಾದಗಳಿಗೆ ವಂದಿಸಿದರು.

ಕುಶೀಲವೌ ತು ಧರ್ಮಜ್ಞೌ ರಾಜಪುತ್ರೌ ಯಶಸ್ವಿನೌ ।
ಭ್ರಾತರೌ ಸ್ವರಸಂಪನ್ನೌ ದದರ್ಶಾಶ್ರಮವಾಸಿನೌ ॥ ೫ ॥

ಕುಶಲವರು ರಾಜಕುಮಾರರಾದ ಸೋದರರು ಆಶ್ರಮವಾಸಿಗಳು, ಧರ್ಮಜ್ಞರು, ಸ್ವಪ್ರತಿಭೆಯಿಂದ ಅಗಲೇ ಕೀರ್ತಿಗಳಿಸಿದವರು, ಕಂಠ ಮಾಧುರ್ಯ ಸಂಪನ್ನರು ಕಾವ್ಯ ಪ್ರಯೋಗಕ್ಕೆ ಇವರೇ ಸಮರ್ಥರೆಂದು ಮುನಿ ನಿಶ್ಚಯಿಸಿದರು.

ಸ ತು ಮೇಧಾವಿನೌ ದೃಷ್ಟ್ವಾ ವೇದೇಷು ಪರಿನಿಷ್ಠಿತೌ ।
ವೇದೋಪಬೃಂಹಣಾರ್ಥಾಯ ತಾವಗ್ರಾಹಯತ ಪ್ರಭುಃ ॥ ೬ ॥

ಕುಶಲವರು ಮೇಧಾವಿಗಳು, ವೇದಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿದವರು. ಇವರನ್ನು ಕಂಡಾಗ ರಾಮಾಯಣದಿಂದ ವೇದತಾತ್ಪರ್ಯ ದರ್ಶನವೆಂಬುದನ್ನು ಇವರ ಮೂಲಕವೇ ತೋರಿಸಬೇಕೆಂದು ಕೊಂಡರು, ವಾಲ್ಮೀಕಿ ಮುನಿ.

ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್ ।
ಪೌಲಸ್ತ್ಯವಧಮಿತ್ಯೇವಂ ಚಕಾರ ಚರಿತವ್ರತಃ ॥ ೭ ॥

ರಾಮಾಯಣ ಕಾವ್ಯವು ರಾಮಚರಿತೆಯಾಗಿರುವಂತೆ ಸೀತೆಯ ಚರಿತವೂ ಆಗಿದೆ, ರಾವಣವಧ ಚರಿತೆಯೂ ಆಗಿದೆ, ಚರಿತೆಗಳನ್ನು ಹಾಡುವ ವ್ರತನಿಷ್ಠರಾದ ಮುನಿ ಹೀಗೆ ಕಾವ್ಯವನ್ನು ರಚಿಸಿದರು.

ಪಾಠ್ಯೇ ಗೇಯೇ ಚ ಮಧುರಂ ಪ್ರಮಾಣೈಸ್ತ್ರಿಭಿರನ್ವಿತಮ್ ।
ಜಾತಿಭಿಃ ಸಪ್ತಭಿರ್ಬದ್ಧಂ ತಂತ್ರೀಲಯಸಮನ್ವಿತಮ್ ॥ ೮ ॥

ಪಠನ ಗಾನಗಳೆರಡರಲ್ಲಿಯೂ ಶ್ರುತಿಸಹಾಯವಿರುವುದರಿಂದ ಕೇಳಲು ಮಧುರವಾಗಿದೆ, ರಾಮಾಯಣಕಾವ್ಯ ದ್ರುತ ಮಧ್ಯ ವಿಲಂಬಿತ ಎಂದು ಮೂರು ಪ್ರಮಾಣಗಳಲ್ಲಿ, ಷಡ್ಜ ಋಷಭ ಗಾಂಧಾರ ಮಧ್ಯಮ ಪಂಚಮ ಧೈವತ ನಿಷಾದ ಎಂದು ಏಳು ಜಾತಿಗಳಲ್ಲಿ ತಂತ್ರೀ ಲಯಯುಕ್ತವಾಗಿ ಹಾಡಬಹುದಾದುದು ಈ ಕಾವ್ಯ .

ರಸೈಃ ಶೃಂಗಾರಕರುಣಹಾಸ್ಯರೌದ್ರಭಯಾನಕೈಃ ।
ವೀರಾದಿಭೀರಸೈರ್ಯುಕ್ತಂ ಕಾವ್ಯಮೇತದಗಾಯತಾಮ್ ॥ ೯ ॥

ಅದರಿಂದ ಕುಶಲವರು ಈ ಕಾವ್ಯವನ್ನು ಶೃಂಗಾರ ಕರುಣ ಹಾಸ್ಯ ರೌದ್ರ ಭಯಾನಕ ವೀರ ಅದ್ಭುತ ಬೀಭತ್ಸ ಶಾಂತ ಎಂಬ ನವರಸಾನುಗುಣವಾಗಿ ಹಾಡಿದರು.

ತೌ ತು ಗಾಂಧರ್ವತತ್ತ್ವಜ್ಞೌ ಮೂರ್ಛನಾಸ್ಥಾನಕೋವಿದೌ ।
ಭ್ರಾತರೌ ಸ್ವರಸಂಪನ್ನೌ ಗಂಧರ್ವಾವಿವ ರೂಪಿಣೌ ॥ ೧೦ ॥

ಷಡ್ಜಾದಿ ಸ್ವರಗಳು ಪೂರ್ತಿಯಾಗುವುದು 'ಮೂರ್ಛನ.' ಮಂದ್ರ ಮಧ್ಯ

ತಾರಗಳೆಂಬ ಮೂರು ಬಗೆಯ ಧ್ವನಿಯ ಉತ್ಪತ್ತಿ ಸ್ಥಾನಗಳಾದ ಉರಃ ಕಂಠ ಶಿರಃ ಇವು ಮೂರು 'ಸ್ಥಾನ'ಗಳು. ಕುಶಲವರು ಈ ಮೂರ್ಧನಾ ಸ್ಥಾನಗಳಲ್ಲಿ ತಜ್ಞರಾಗಿರುವ ಗಾಂಧರ್ವಗಾನ ಶಾಸ್ತ್ರಕೋವಿದರು. ಕಂಠ ಮಾಧುರ್ಯದಿಂದಲೂ ಸಂಪನ್ನರು. ಗಂಧರ್ವರಂತೇ ಸ್ಫುರದ್ರೂಪಿಗಳೂ ಆದ ಈ ಸೋದರರೂ ವಾಲ್ಮೀಕಿ ರಾಮಾಯಣವನ್ನು ಹಾಡಿದರು.

ರೂಪಲಕ್ಷಣಸಂಪನ್ನೌ ಮಧುರಸ್ವರಭಾಷಿಣೌ ।
ಬಿಂಬಾದಿವೋತ್ಥಿತೌ ಬಿಂಬೌ ರಾಮದೇಹಾತ್ತಥಾಪರೌ ॥ ೧೧ ॥

ಸ್ಫುರದ್ರೂಪ ಶರೀರಲಕ್ಷಣಗಳಿಂದ ಸಂಪನ್ನರು ಮಧುರಧ್ವನಿಯಿಂದ ಮಾತನಾಡುವವರು ಒಂದು ಬಿಂಬದಿಂದ ಎರಡು ಬೇರೆ ಬಿಂಬಗಳು ಉದಿಸಿದಂತೆ ರಾಮನ ದೇಹದಿಂದ ಜನಿಸಿದವರು ಕುಶಲವರು.

ತೌ ರಾಜಪುತ್ರೌ ಕಾರ್ಷ್ಣ್ಯೇನ ಧರ್ಮ್ಯಮಾಖ್ಯಾನಮುತ್ತಮಮ್ ।
ವಾಚೋವಿಧೇಯಂ ತತ್ಸರ್ವಂ ಕೃತ್ವಾ ಕಾವ್ಯಮನಿಂದಿತೌ ॥ ೧೨ ॥

ಪುಣ್ಯಕರವಾದ ಉತ್ತಮ ಕಥಾರೂಪವಾದ ರಾಮಾಯಣ ಕಾವ್ಯವನ್ನು ಪೂರ್ತಿ-ಯಾಗಿ ಕಂಠಸ್ಥವಾಗಿ ಮಾಡಿಕೊಂಡರು ದೋಷರಹಿತರಾದ ಈ ರಾಜಕುಮಾರರು.

ಋಷೀಣಾಂ ಚ ದ್ವಿಜಾತೀನಾಂ ಸಾಧೂನಾಂ ಚ ಸಮಾಗಮೇ ।
ಯಥೋಪದೇಶಂ ತತ್ತ್ವಜ್ಞೌ ಜಗತುಸ್ತೌ ಸಮಾಹಿತೌ ॥
ಮಹಾತ್ಮಾನೌ ಮಹಾಭಾಗೌ ಸರ್ವಲಕ್ಷಣಲಕ್ಷಿತೌ ॥ ೧೩ ॥

ಸರ್ವಲಕ್ಷಣ ಸಂಪನ್ನರಾದ ತತ್ವಜ್ಞರಾದ ಮಹಾಭಾಗ್ಯಶಾಲಿ ಮಹಾತ್ಮರಾದ ಆ ರಾಜಕುಮಾರರು ಸ್ಥಿರಚಿತ್ತರಾಗಿ ಋಷಿಗಳು ಬ್ರಾಹ್ಮಣರು ಸಜ್ಜನರೆಲ್ಲರು ಸೇರಿರುವ ಅನೇಕ ಸ್ಥಳದಲ್ಲಿ ಗುರೂಪದೇಶಕ್ಕೆ ವ್ಯತಿರಿಕ್ತವಾಗದಂತೇ ರಾಮಾಯಣವನ್ನು ಹಾಡಿದರು.

ತೌ ಕದಾಚಿತ್ ಸಮೇತಾನಾಮೃಷೀಣಾಂ ಭಾವಿತಾತ್ಮನಾಮ್ ।
ಆಸೀನಾನಾಂ ಸಮೀಪಸ್ಥಾವಿದಂ ಕಾವ್ಯಮಗಾಯತಾಮ್ ॥ ೧೪ ॥

ಒಮ್ಮೆ ಶುದ್ಧಚಿತ್ತರಾದ ಋಷಿಗಳು ಸೇರಿ ಆಸೀನರಾಗಿರುವಾಗ ಅವರ ಸಮೀಪದಲ್ಲಿ ಕುಳಿತು ಈ ಕಾವ್ಯವನ್ನು ಹಾಡಿದರು.

ತಚ್ಛ್ರುತ್ವಾ ಮುನಯಃ ಸರ್ವೇ ಬಾಷ್ಪಪರ್ಯಾಕುಲೇಕ್ಷಣಾಃ ।
ಸಾಧು ಸಾಧ್ವಿತಿ ತಾವೂಚುಃ ಪರಂ ವಿಸ್ಮಯಮಾಗತಾಃ ॥ ೧೫ ॥

ಅದನ್ನು ಕೇಳಿ ಎಲ್ಲ ಮುನಿಗಳೂ ಕಣ್ಣಿಂದ ಆನಂದಬಾಷ್ಪವನ್ನು ಸುರಿಸಿದರು. ಬಲು ವಿಸ್ಮಯಗೊಂಡು ಅವರಿಬ್ಬರನ್ನು 'ಭಲೆ ಭಲೆ' ಎಂದು ಪ್ರಶಂಸೆ ಮಾಡಿದರು.

ತೇ ಪ್ರೀತಮನಸಃ ಸರ್ವೇ ಮುನಯೋ ಧರ್ಮವತ್ಸಲಾಃ ।
ಪ್ರಶಶಂಸುಃ ಪ್ರಶಸ್ತವ್ಯೌ ಗಾಯಮಾನೌ ಕುಶೀಲವೌ ॥ ೧೬ ॥

ಧರ್ಮವನ್ನು ಬಯಸುವ ಆ ಎಲ್ಲ ಮುನಿಗಳೂ ಪ್ರಶಂಸೆಗೆ ಅವಶ್ಯ ಯೋಗ್ಯರಾದ ಕುಶಲವರು ಹಾಡುತ್ತಿರುವಾಗ ಪ್ರಸನ್ನಚಿತ್ತರಾಗಿ ಪ್ರಶಂಸೆ ಗೈದರು.

ಅಹೋ ಗೀತಸ್ಯ ಮಾಧುರ್ಯಂ ಶ್ಲೋಕಾನಾಂ ಚ ವಿಶೇಷತಃ ।
ಚಿರನಿರ್ವೃತ್ತಮಪ್ಯೇತತ್ ಪ್ರತ್ಯಕ್ಷಮಿವ ದರ್ಶಿತಮ್ ॥ ೧೭ ॥

ಆಹಾ! ಏನು ಗಾನಮಾಧುರ್ಯ! ವಿಶೇಷವಾಗಿ ಶ್ಲೋಕ ಮಾಧುರ್ಯವೂ ವಿಸ್ಮಯಕಾರಿ! ಹತ್ತು ಸಾವಿರ ವರ್ಷಗಳ ಹಿಂದೇ ನಡೆದ ಸಂಗತಿ ಎಲ್ಲವೂ ಈಗ ಪ್ರತ್ಯಕ್ಷ ಕಣ್ಣಮುಂದೇ ಇರುವಂತೆ ಇಲ್ಲಿ ಶ್ರೀರಾಮನ ಚರಿತ್ರೆ ವರ್ಣಿತವಾಗಿದೆ!

ಪ್ರವಿಶ್ಯ ತಾವುಭೌ ಸುಷ್ಠು ತಥಾ ಭಾವಮಗಾಯತಾಮ್ ।
ಸಹಿತೌ ಮಧುರಂ ರಕ್ತಂ ಸಂಪನ್ನಂ ಸ್ವರಸಂಪದಾ ॥ ೧೮ ॥

ತಮ್ಮ ಕಾವ್ಯದ ರಸಭಾವಗಳ ಪ್ರಪಂಚವನ್ನು ಸಹೃದಯರಾಗಿ ತಾವೂ ಸ್ವತಃ ಪ್ರವೇಶಿಸಿದಂತೇ ಇವರಿಬ್ಬರೂ ಕೂಡ ತನ್ಮಯತೆಯಿಂದ ಅನುರಕ್ತರಾಗಿ ಮಧುರ-ವಾಗಿ ಷಡ್ಜಾದಿ ಸ್ವರಸಂಪನ್ನವಾಗಿ ಪರಸ್ಪರ ಹೊಂದಿಕೊಂಡು ಹಾಡುತ್ತಿದ್ದಾರೆ!

ಏವಂ ಪ್ರಶಸ್ಯಮಾನೌ ತೌ ತಪಃಶ್ಲಾಘ್ಯೈರ್ಮಹಾತ್ಮಭಿಃ ।
ಸಂರಕ್ತತರಮತ್ಯರ್ಥಂ ಮಧುರಂ ತಾವಗಾಯತಾಮ್ ॥ ೧೯ ॥

ಹೀಗೆ ತಪಸ್ಸಿನಿಂದ ಶ್ಲಾಘ್ಯರಾದ ಮಹಾತ್ಮರಾದ ಋಷಿಗಳು ಹೊಗಳುತ್ತಿರುವಾಗ ಕುಶಲವರು ಇನ್ನೂ ಹೆಚ್ಚಾಗಿ ಗಾನದಲ್ಲಿ ಅನುರಕ್ತರಾಗಿ ಅತ್ಯಂತ ಮಧುರವಾಗಿ ಹಾಡಿದರು.

ಪ್ರೀತಃ ಕಶ್ಚಿನ್ಮುನಿಸ್ತಾಭ್ಯಾಂ ಸಂಸ್ಥಿತಃ ಕಲಶಂ ದದೌ ।
ಪ್ರಸನ್ನೋ ವಲ್ಕಲೇ ಕಶ್ಚಿದ್ದದೌ ತಾಭ್ಯಾಂ ಮಹಾಯಶಾಃ ॥ ೨೦ ॥

ಸಭೆಯಲ್ಲಿದ್ದ ಒಬ್ಬ ಮುನಿ ಸಂತುಷ್ಟನಾಗಿ ಕುಶಲವರಿಗೆ ಕಲಶವನ್ನು ಬಹುಮಾನವಾಗಿ ನೀಡಿದರು. ಇನ್ನೊಬ್ಬರು ಮಹಾಯಶಸ್ವಿ ಮುನಿಯು ಅವರಿಗೆ ವಲ್ಕಲಗಳನ್ನಿತ್ತರು.

ಅನ್ಯಃ ಕೃಷ್ಣಾಜಿನಂ ಪ್ರಾದಾದ್ಯಜ್ಞಸೂತ್ರಮಥಾಪರಃ ।
ಕಶ್ಚಿತ್ ಕಮಂಡಲುಂ ಪ್ರಾದಾನ್ಮೌಂಜೀಮನ್ಯೋ ಮಹಾಮುನಿಃ ॥ ೨೧ ॥

ಇನ್ನೊಬ್ಬರು ಕೃಷ್ಣಾಜಿನವನ್ನಿತ್ತರು. ಮತ್ತೊಬ್ಬರು ಜನಿವಾರ ನೀಡಿದರು. ಇನ್ನೊಬ್ಬರು ಕಮಂಡಲು ನೀಡಿದರು. ಮತ್ತೊಬ್ಬ ಮಹಾಮುನಿ ಮೌಂಜಿಯನ್ನು ನೀಡಿದರು.

ಬೃಸೀಮನ್ಯಸ್ತದಾ ಪ್ರಾದಾತ್ ಕೌಪೀನಮಪರೋ ಮುನಿಃ ।
ತಾಭ್ಯಾಂ ದದೌ ತದಾ ಹೃಷ್ಟಃ ಕುಠಾರಮಪರೋ ಮುನಿಃ ॥ ೨೨ ॥

ಇನ್ನೊಬ್ಬರು ಆಸನವನ್ನು, ಮತ್ತೊಬ್ಬರು ಕೌಪೀನವನ್ನು, ಮತ್ತೊಬ್ಬರು ಹೃಷ್ಟರಾಗಿ ಕಾಷ್ಠಸಂಗ್ರಹಕ್ಕಾಗಿ ಕೊಡಲಿಯನ್ನಿತ್ತರು.

ಕಾಷಾಯಮಪರೋ ವಸ್ತ್ರಂ ಚೀರಮನ್ಯೋ ದದೌ ಮುನಿಃ ।
ಜಟಾಬಂಧನಮನ್ಯಸ್ತು ಕಾಷ್ಠರಜ್ಜುಂ ಮುದಾನ್ವಿತಃ ॥ ೨೩ ॥

ಒಬ್ಬರು ಕಾವಿ ಶಾಟಿಯನ್ನಿತ್ತರು, ಮತ್ತೊಬ್ಬರು ನಾರುಡೆಯನ್ನಿತ್ತರು. ಮತ್ತೊಬ್ಬರು ಜಟಾಬಂಧನವನ್ನು ಮತ್ತೊಬ್ಬರು ಸಂತೋಷದಿಂದ ಸಮಿಧೆಗಳನ್ನು ಕಟ್ಟುವ ಹಗ್ಗವನ್ನಿತ್ತರು.

ಯಜ್ಞಭಾಂಡಮೃಷಿಃ ಕಶ್ಚಿತ್ ಕಾಷ್ಠಭಾರಂ ತಥಾಽಪರಃ ।
ಔದುಂಬರೀ ಬೃಸೀಮನ್ಯೇ ಸ್ವಸ್ತಿ ಕೇಚಿತ್ತದಾವದನ್ ॥ ೨೪ ॥

ಒಬ್ಬರು ಯಜ್ಞಪಾತ್ರೆಯನ್ನಿತ್ತರು ಮತ್ತೊಬ್ಬರು ಕಟ್ಟಿಗೆ ರಾಶಿಯನ್ನಿತ್ತರು. ಕೆಲವರು ಅತ್ತಿಮರದ ಆಸನವಿತ್ತರು. ಕೆಲವರು ಸ್ವಸ್ತಿವಾಚನ ಗೈದರು.

ಆಯುಷ್ಯಮಪರೇ ಪ್ರಾಹುರ್ಮುದಾ ತತ್ರ ಮಹರ್ಷಯಃ ।
ದದುಶ್ಚೈವ ವರಾನ್ ಸರ್ವೇ ಮುನಯಃ ಸತ್ಯವಾದಿನಃ ॥ ೨೫ ॥

ಕೆಲವರು ಮಹರ್ಷಿಗಳು ಸಂತೋಷದಿಂದ ಆಯುಷ್ಯ ಹೆಚ್ಚಲೆಂದು ಹರಸಿದರು. ಸತ್ಯವಾದಿಗಳಾದ ಎಲ್ಲ ಮುನಿಗಳು ಅಭೀಷ್ಟವರಗಳನ್ನು ನೀಡಿದರು.

ಆಶ್ಚರ್ಯಮಿದಮಾಖ್ಯಾನಂ ಮುನಿನಾ ಸಂಪ್ರಕೀರ್ತಿತಮ್ ।
ಪರಂ ಕವೀನಾಮಾಧಾರಂ ಸಮಾಪ್ತಂ ಚ ಯಥಾಕ್ರಮಮ್ ॥ ೨೬ ॥

'ವಾಲ್ಮೀಕಿ ಮುನಿ ಹೇಳಿದ ಈ ರಾಮಾಯಣ ಆಶ್ಚರ್ಯಕರ. ಮುಂದೆ ರಾಮಾಯಣದ ಕವಿಗಳಿಗೆ ಇದು ಆಧಾರವಾಗುವುದು. ಯಥಾಕ್ರಮವಾಗಿಯೇ ಕಾವ್ಯವು ಸ್ವಾಭಾವಿಕವಾಗಿ ಕೊನೆಗೊಂಡಿದೆ' ಇದನ್ನು ಕವಿ ಕುಮಾರವ್ಯಾಸ ಹೇಳುತ್ತಾನೆ– 'ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ.'

ಅಭಿಗೀತಮಿದಂ ಗೀತಂ ಸರ್ವಗೀತೇಷು ಕೋವಿದೌ ।
ಆಯುಷ್ಯಂ ಪುಷ್ಟಿಜನಕಂ ಸರ್ವಶ್ರುತಿಮನೋಹರಮ್ ॥ ೨೭ ॥

'ಎಲ್ಲ ಹಾಡುಗಳಲ್ಲಿಯೂ ಕೋವಿದರಾದ ನೀವಿಬ್ಬರೂ ಹಾಡನ್ನು ಚೆನ್ನಾಗಿಯೇ ಹಾಡಿರುವಿರಿ. ಆಯುಷ್ಕರವಾಗಿ ಪುಷ್ಟಿಜನಕವಾಗಿ ಎಲ್ಲ ಶ್ರೋತೃಗಳಿಗೂ ಕೇಳಲು ಮನೋಹರವಾಗಿ ಹಾಡಿರುವಿರಿ' ಎಂದರು ಮುನಿಗಳು.

ಪ್ರಶಸ್ಯಮಾನೌ ಸರ್ವತ್ರ ಕದಾಚಿತ್ತತ್ರ ಗಾಯಕೌ ।
ರಥ್ಯಾಸು ರಾಜಮಾರ್ಗೇಷು ದದರ್ಶ ಭರತಾಗ್ರಜಃ ॥ ೨೮ ॥

ಎಲ್ಲ ಕಡೆ ಹೀಗೆ ಶ್ರೋತೃಗಳ ಪ್ರಶಂಸೆಗೆ ಭಾಜನರಾಗುತ್ತ ಕುಶಲವರು ಬೀದಿ-ಗಳಲ್ಲಿ ರಾಜಮಾರ್ಗಗಳಲ್ಲಿ ಸಂಚರಿಸುವಾಗ ಶ್ರೀರಾಮ ಒಮ್ಮೆ ಅವರನ್ನು ಕಂಡ.

ಸ್ವವೇಶ್ಮ ಚಾನೀಯ ತತೋ ಭ್ರಾತರೌ ಚ ಕುಶೀಲವೌ ।
ಪೂಜಯಾಮಾಸ ಪೂಜಾರ್ಹೌ ರಾಮಃ ಶತ್ರುನಿಬರ್ಹಣಃ ॥ ೨೯ ॥

ಸಂಮಾನಕ್ಕೆ ಅರ್ಹರಾದ ಸೋದರರಾದ ಕುಶಲವರನ್ನು ಶತ್ರುನಾಶಕನಾದ ಶ್ರೀರಾಮ ತನ್ನರಮನೆಗೆ ಕರೆತಂದು ಸಂಮಾನ ಮಾಡಿದ.

ಆಸೀನಃ ಕಾಂಚನೇ ದಿವ್ಯೇ ಸ ಚ ಸಿಂಹಾಸನೇ ಪ್ರಭುಃ ।
ಉಪೋಪವಿಷ್ಟೈಃ ಸಚಿವೈರ್ಭ್ರಾತೃಭಿಶ್ಚ ಸಮನ್ವಿತಃ ॥ ೩೦ ॥

ದಿವ್ಯ ಸ್ವರ್ಣ ಸಿಂಹಾಸನದಲ್ಲಿ ಪ್ರಭು ಶ್ರೀರಾಮ ಕುಳಿತುಕೊಂಡ. ಜೊತೆಗೆ ಬಳಿಯಲ್ಲಿ ಸಚಿವರೂ ಭ್ರಾತೃಗಳೂ ಆಸೀನರಾದರು.

ದೃಷ್ಟ್ವಾ ತು ರೂಪಸಂಪನ್ನೌ ತಾವುಭೌ ನಿಯತಸ್ತದಾ ।
ಉವಾಚ ಲಕ್ಷ್ಮಣಂ ರಾಮಃ ಶತ್ರುಘ್ನಂ ಭರತಂ ತಥಾ ॥ ೩೧ ॥

ಯಜ್ಞದೀಕ್ಷಿತನಾಗಿದ್ದ ಶ್ರೀರಾಮ ರೂಪಸಂಪನ್ನರಾದ ಆ ಇಬ್ಬರು ಸೋದರರನ್ನು ನೋಡುತ್ತ ಲಕ್ಷ್ಮಣ ಭರತ ಶತ್ರುಘ್ನರಿಗೆ ಹೇಳುತ್ತಾನೆ.

ಶ್ರೂಯತಾಮಿದಮಾಖ್ಯಾನಮನಯೋರ್ದೇವವರ್ಚಸೋಃ ।
ವಿಚಿತ್ರಾರ್ಥಪದಂ ಸಮ್ಯಗ್ಗಾಯಕೌ ಸಮಚೋದಯತ್ ॥ ೩೨ ॥

'ದೇವವರ್ಚಸ್ಸಿನ ಈ ಸೋದರರ ಮುಖದಿಂದ ಈ ಚರಿತ್ರ ಕಾವ್ಯವನ್ನು ಕೇಳೋಣ. ವಿಚಿತ್ರ ಸುಂದರ ಅರ್ಥ ಮತ್ತು ಪದಬಂಧಗಳಿಂದ ಕೂಡಿದೆ' ಎಂದ. ಗಾಯಕ ಸೋದರರನ್ನು ಗಾನ ಮಾಡಲು ಆದೇಶಿಸಿದ, ಶ್ರೀರಾಮ.

ತೌ ಚಾಪಿ ಮಧುರಂ ರಕ್ತಂ ಸ್ವಂಚಿತಾಯತನಿಃಸ್ವನಮ್ ।
ತಂತ್ರೀಲಯವದತ್ಯರ್ಥಂ ವಿಶ್ರುತಾರ್ಥಮಗಾಯತಾಮ್ ॥ ೩೩ ॥

ಅವರು ಗಾನದಲ್ಲಿ ಸ್ವಯಂ ಆಸಕ್ತರಾಗಿ, ಮಧುರವಾಗಿ, ಬಲು ಸುಂದರವಾದ ದೀರ್ಘ ಆಲಾಪನಯುಕ್ತವಾಗಿ, ತಂತ್ರೀಲಯ ಸಮೇತವಾಗಿ ಬಹಳ ಸುಸ್ಪಷ್ಟವಾಗಿ ಅರ್ಥಬೋಧೆ ಉಂಟಾಗುವಂತೆ ಹಾಡಿದರು.

ಹ್ಲಾದಯತ್ಸರ್ವಗಾತ್ರಾಣಿ ಮನಾಂಸಿ ಹೃದಯಾನಿ ಚ ।
ಶ್ರೋತ್ರಾಶ್ರಯಸುಖಂ ಗೇಯಂ ತದ್ಬಭೌ ಜನಸಂಸದಿ ॥ ೩೪ ॥

ಶ್ರೋತೃಗಳೆಲ್ಲರ ಮೈಮನ ಎದೆಗಳಿಗೆ ಆಹ್ಲಾದಕರವಾಗುವ, ಶ್ರೋತ್ರೇಂದ್ರಿಯ ಗಳಿಗೆ ಸುಖ ಉಂಟುಮಾಡುವ ಆ ಗಾನ ಜನರ ಗೋಷ್ಠಿಯಲ್ಲಿ ಬಹಳ ಶೋಭಿಸಿತು.

ಇಮೌ ಮುನೀ ಪಾರ್ಥಿವಲಕ್ಷಣಾನ್ವಿತೌ
ಕುಶೀಲವೌ ಚೈವ ಮಹಾತಪಸ್ವಿನೌ ।
ಮಮಾಪಿ ತದ್ಭೂತಿಕರಂ ಪ್ರವಕ್ಷ್ಯತೇ
ಮಹಾನುಭಾವಂ ಚರಿತಂ ನಿಬೋಧತ ॥ ೩೫ ॥

ಅದರಿಂದ ಶ್ರೀರಾಮನು ಲಕ್ಷ್ಮಣಾದಿಗಳಿಗೆ ಹೇಳುತ್ತಾನೆ– 'ಈ ಕುಶ-ಲವ ಮುನಿಗಳಿಬ್ಬರೂ ರಾಜಲಕ್ಷಣಯುಕ್ತರು. ಮಹಾತಪಸ್ವಿಗಳು. ಅವರು ಹಾಡುವ ರಾಮಚರಿತೆಯೂ ನನಗೂ ಶುಭಾಶಂಸನ ಮಾಡುತ್ತಿದೆ ಎನ್ನುತ್ತಾರೆ ಬಲ್ಲವರು. ನಿಮಗೂ ಮೋಕ್ಷಾದಿ ಪುರುಷಾರ್ಥದಾಯಕ ಮಹಾಪ್ರಭಾವ ಉಳ್ಳ ಈ ರಾಮಾಯಣವನ್ನು ನೀವೆಲ್ಲ ಶ್ರವಣ ಮಾಡಿರಿ' ಎಂದು.

ತತಸ್ತು ತೌ ರಾಮವಚಃಪ್ರಚೋದಿತಾ-
ವಗಾಯತಾಂ ಮಾರ್ಗವಿಧಾನಸಂಪದಾ ।
ಸ ಚಾಪಿ ರಾಮಃ ಪರಿಷದ್ಗತಃ ಶನೈ-
ರ್ಬುಭೂಷಯಾಽಽಸಕ್ತಮನಾ ಬಭೂವ ಹ ॥ ೩೬ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಚತುರ್ಥಃ ಸರ್ಗಃ ॥ ೪ ॥

ರಾಮಾಯಣವನ್ನು ದೇಶಭಾಷೆಯಲ್ಲಿ ಹಾಡಿದರೆ ಅದು ದೇಶಿ ಎನಿಸುತ್ತದೆ. ಪ್ರಕೃತ ವಾಲ್ಮೀಕಿ ರಾಮಾಯಣ ಸಂಸ್ಕೃತ ಭಾಷೆಯಲ್ಲಿ ಇರುವುದರಿಂದ 'ದೇಶಿ' ಎನಿಸುವುದಿಲ್ಲ, 'ಮಾರ್ಗ' ಎನಿಸುತ್ತದೆ. ಕುಶಲವರು ಈ ಮಾರ್ಗವಿಧಾನ ಸಂಪತ್ತಿ-ನಿಂದ ಗಾನ ಮಾಡಿದರು. ರಾಮನು ತನ್ನ ವಚನದಿಂದ ಪ್ರೇರಿತರಾದ ಕುಶಲವರು ಹಾಡುವಾಗ, ಗೋಷ್ಠಿಯಲ್ಲಿ ಕುಳಿತು, ತಾನೂ ಅದನ್ನು ಕೇಳುವಲ್ಲಿ ಆಸಕ್ತಿಯನ್ನು ತೋರಿದ್ದಾನೆ.

ಸ್ವರೂಪಶರೀರದಿಂದ ಮುಂದೆ ರಾಮನು ಪರಂಧಾಮಕ್ಕೆ ಹೋದರೂ, ರಾಮಾಯಣರೂಪದ ವಾಙ್ಮಯ ಶರೀರದಿಂದ ಇಲ್ಲಿಯೇ ಸ್ಥಿರವಾಗಿ ಇಲ್ಲಿಯೂ ಇರುವ ಉದ್ದೇಶದಿಂದ, ರಾಮಾಯಣವನ್ನು 'ಅದೇನೂ ಕಟ್ಟು ಕಥೆಯಲ್ಲ, ಸ್ವಯಂ ರಾಮನೇ ಅದನ್ನು ಕುಶಲವರಿಂದ ಹಾಡಿಸಿ ಕೇಳಿದ್ದಾನೆ' ಎಂದು ಲೋಕಕ್ಕೆ ತಿಳಿಸಲೆಂದೇ ಲಕ್ಷ್ಮಣಾದಿಗಳ ಜೊತೆಗೆ ತಾನು ಕುಳಿತುಕೇಳಲು ಆಸಕ್ತಿ ತೋರಿದ್ದಾನೆ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ನಾಲ್ಕನೇ ಸರ್ಗ ಮುಗಿಯಿತು.

ಪಂಚಮಃ ಸರ್ಗಃ

ಸರ್ವಾಪೂರ್ವಮಿಯಂ ಯೇಷಾಮಾಸೀತ್ ಕೃತ್ಸ್ನಾ ವಸುಂಧರಾ ।
ಪ್ರಜಾಪತಿಮುಪಾದಾಯ ನೃಪಾಣಾಂ ಜಯಶಾಲಿನಾಮ್ ॥ ೧ ॥

ಯೇಷಾಂ ಸ ಸಗರೋ ನಾಮ ಸಾಗರೋ ಯೇನ ಖಾನಿತಃ ।
ಷಷ್ಟಿಃ ಪುತ್ರಸಹಸ್ರಾಣಿ ಯಂ ಯಾಂತಂ ಪರ್ಯವಾರಯನ್ ॥ ೨ ॥

ಇಕ್ಷ್ವಾಕೂಣಾಮಿದಂ ತೇಷಾಂ ರಾಜ್ಞಾಂ ವಂಶೇ ಮಹಾತ್ಮನಾಮ್ ।
ಮಹದುತ್ಪನ್ನಮಾಖ್ಯಾನಂ ರಾಮಾಯಣಮಿತಿ ಶ್ರುತಮ್ ॥ ೩ ॥

ಉಪೋದ್ಘಾತವನ್ನು ಮುಗಿಸಿ, ರಾಮಚರಿತವನ್ನು ಹೇಳುವುದಕ್ಕೆ ಮೊದಲು ಅದರ ಕಥಾವಸ್ತುವನ್ನು ನಿರ್ದೇಶ ಮಾಡುತ್ತಾರೆ ವಾಲ್ಮೀಕಿ ಮುನಿ. ಈ ಇಡೀ ಭೂಮಿಯು ವೈವಸ್ವತ ಮನು ಪ್ರಜಾಪತಿಯಿಂದ ಮೊದಲು ಮಾಡಿ ಜಯಶಾಲಿಗಳಾದ ಯಾವ ರಾಜರಿಗೆ 'ಸರ್ವಾಪೂರ್ವ' ಎಲ್ಲ ಅಪೂರ್ವಸಾಧನೆಗಳಿಗೂ ಸಾಧನವಾಯಿತೋ, ಯಾವ ರಾಜರ ವಂಶದಲ್ಲಿ ಬಂದ ಯಾವ ಸಗರನು ಪುತ್ರರಿಂದ ನೆಲವನ್ನು ಅಗೆಸಿ ಸಾಗರ ನಿರ್ಮಾಣ ಮಾಡಿದನೋ, ಯಾರು ದಂಡಯಾತ್ರೆಗೆ ಹೊರಟರೆ ಅವನ ಅರವತ್ತು ಸಾವಿರ ಪುತ್ರರು ಪರಿವಾರವಾಗಿ ಹೊರಡುತ್ತಿದ್ದರೋ ಆ ಇಕ್ಷ್ವಾಕುವಂಶದ ಮಹಾತ್ಮರಾದ ರಾಜರ ಕಥೆ ಹೇಳಲು ಮಹತ್ತಾದ ಈ ರಾಮಾಯಣ ಹೊರಟಿದೆ.

ತದಿದಂ ವರ್ತಯಿಷ್ಯಾಮಿ ಸರ್ವಂ ನಿಖಿಲಮಾದಿತಃ ।
ಧರ್ಮಕಾಮಾರ್ಥಸಹಿತಂ ಶ್ರೋತವ್ಯಮನಸೂಯಯಾ ॥ ೪ ॥

ಈ ರಾಮಾಯಣವನ್ನು ಆದಿಯಿಂದ ತೊಡಗಿ ಉತ್ತರಕಾಂಡದವರೆಗೂ ಪೂರ್ತಿಯಾಗಿ ಒಂದಂಶವನ್ನೂ ಬಿಡದೇ ಧರ್ಮ ಅರ್ಥ ಕಾಮರೂಪ ಮೂರು ಪುರುಷಾರ್ಥ ಮತ್ತು ಮೋಕ್ಷರೂಪಪರಮಪುರುಷಾರ್ಥ ಸಹಿತವಾಗಿ ಹಾಡುತ್ತೇವೆ. ಶ್ರೋತೃಗಳು ಮತ್ಸರಿಸದೇ ಆಲಿಸಬೇಕು.

ಕೋಸಲೋ ನಾಮ ಮುದಿತಃ ಸ್ಫೀತೋ ಜನಪದೋ ಮಹಾನ್ ।
ನಿವಿಷ್ಟಃ ಸರಯೂತೀರೇ ಪ್ರಭೂತಧನಧಾನ್ಯವಾನ್ ॥ ೫ ॥

ಕೋಸಲವೆಂಬ ದೊಡ್ಡ ರಾಜ್ಯವು ಸರಯೂ ನದೀತೀರ ಪ್ರದೇಶದಲ್ಲಿ ಇದೆ. ಅದು ಬಹಳ ಧನಧಾನ್ಯಗಳಿಂದ ಸುಖ ಸಮೃದ್ಧಿಯುಕ್ತವಾಗಿದೆ.

ಅಯೋಧ್ಯಾ ನಾಮ ನಗರೀ ತತ್ರಾಸೀಲ್ಲೋಕವಿಶ್ರುತಾ ।
ಮನುನಾ ಮಾನವೇಂದ್ರೇಣ ಯಾ ಪುರೀ ನಿರ್ಮಿತಾ ಸ್ವಯಮ್॥ ೬ ॥

ಅಲ್ಲಿ ಲೋಕಪ್ರಸಿದ್ಧವಾದ ಅಯೋಧ್ಯೆ ಎಂಬ ನಗರವಿದೆ. ಅದು ಸ್ವತಃ ಮನು ಮಹಾರಾಜನಿಂದ ನಿರ್ಮಿತವಾಗಿತ್ತು.

ಆಯತಾ ದಶ ಚ ದ್ವೇ ಚ ಯೋಜನಾನಿ ಮಹಾಪುರೀ ।
ಶ್ರೀಮತೀ ತ್ರೀಣಿ ವಿಸ್ತೀರ್ಣಾ ಸುವಿಭಕ್ತಮಹಾಪಥಾ ॥ ೭ ॥

ಈ ಮಹಾನಗರವು ಹನ್ನೆರಡು ಯೋಜನ ಉದ್ದ ಮೂರು ಯೋಜನ ಅಗಲ-ವಿದ್ದು ಎರಡು ಪಾರ್ಶ್ವಗಳಲ್ಲಿ ಸಾಲುಮರಗಳಿಂದ ಅಲಂಕೃತವಾದ ರಾಜಮಾರ್ಗ-ಗಳಿಂದ ಕೂಡಿದೆ, ಸಂಪದ್‌ಭರಿತವಾಗಿದೆ.

ರಾಜಮಾರ್ಗೇಣ ಮಹತಾ ಸುವಿಭಕ್ತೇನ ಶೋಭಿತಾ ।
ಮುಕ್ತಪುಷ್ಪಾವಕೀರ್ಣೇನ ಜಲಸಿಕ್ತೇನ ನಿತ್ಯಶಃ ॥ ೮ ॥

ಸಾಲುಮರಗಳಿಂದ ಅಲಂಕೃತವಾದ ದೊಡ್ಡದೊಡ್ಡ ರಾಜಮಾರ್ಗಗಳಲ್ಲಿ ನಿತ್ಯ ಅರಳಿದ ಹೂ ಚೆಲ್ಲಿರುತ್ತಾರೆ. ನೀರು ಚಿಮುಕಿಸಿರುತ್ತಾರೆ. ಇಂಥ ರಾಜಮಾರ್ಗದಿಂದ ನಗರ ಶೋಭಿಸುತ್ತದೆ.

ತಾಂ ತು ರಾಜಾ ದಶರಥೋ ಮಹಾರಾಷ್ಟ್ರವಿವರ್ಧನಃ ।
ಪುರೀಮಾವಾಸಯಾಮಾಸ ದಿವಂ ದೇವಪತಿರ್ಯಥಾ ॥ ೯ ॥

ಆ ಅಯೋಧ್ಯಾಪುರಿಯನ್ನು, ಮಹಾರಾಷ್ಟ್ರವನ್ನು ಅಭಿವೃದ್ಧಿ ಪಡಿಸುವ ರಾಜಾ ದಶರಥನು ಸ್ವರ್ಗವನ್ನು ಇಂದ್ರನು ಹೇಗೋ ಹಾಗೇ ಆವಾಸಸ್ಥಾನವನ್ನಾಗಿ ಮಾಡಿಕೊಂಡ.

ಕವಾಟತೋರಣವತೀಂ ಸುವಿಭಕ್ತಾಂತರಾಪಣಾಮ್ ।
ಸರ್ವಯಂತ್ರಾಯುಧವತೀಮುಪೇತಾಂ ಸರ್ವಶಿಲ್ಪಿಭಿಃ ॥ ೧೦ ॥

ಸುಂದರ ದ್ವಾರ ಚೌಕಟ್ಟುಗಳುಳ್ಳದ್ದು ಒಳಗೆ ಅಲಂಕೃತವಾದ ಅಂಗಡಿಗಳುಳ್ಳದ್ದು ಕೋಟೆ ಗೋಡೆಗಳ ಮೇಲೆ ಫಿರಂಗಿ ತುಫಾಕಿ ಉಳ್ಳದ್ದು ಎಲ್ಲ ಕಲಾವಿದರ ವಾಸಸ್ಥಾನವಾದುದು ಅಯೋಧ್ಯೆ.

ಪಂಚಮಃ ಸರ್ಗಃ

ಸರ್ವಾಪೂರ್ವಮಿಯಂ ಯೇಷಾಮಾಸೀತ್ ಕೃತ್ಸ್ನಾ ವಸುಂಧರಾ ।
ಪ್ರಜಾಪತಿಮುಪಾದಾಯ ನೃಪಾಣಾಂ ಜಯಶಾಲಿನಾಮ್ ॥ ೧ ॥

ಯೇಷಾಂ ಸ ಸಗರೋ ನಾಮ ಸಾಗರೋ ಯೇನ ಖಾನಿತಃ ।
ಷಷ್ಟಿಃ ಪುತ್ರಸಹಸ್ರಾಣಿ ಯಂ ಯಾಂತಂ ಪರ್ಯವಾರಯನ್ ॥ ೨ ॥

ಇಕ್ಷ್ವಾಕೂಣಾಮಿದಂ ತೇಷಾಂ ರಾಜ್ಞಾಂ ವಂಶೇ ಮಹಾತ್ಮನಾಮ್ ।
ಮಹದುತ್ಪನ್ನಮಾಖ್ಯಾನಂ ರಾಮಾಯಣಮಿತಿ ಶ್ರುತಮ್ ॥ ೩ ॥

ಉಪೋದ್ಘಾತವನ್ನು ಮುಗಿಸಿ, ರಾಮಚರಿತವನ್ನು ಹೇಳುವುದಕ್ಕೆ ಮೊದಲು ಅದರ ಕಥಾವಸ್ತುವನ್ನು ನಿರ್ದೇಶ ಮಾಡುತ್ತಾರೆ ವಾಲ್ಮೀಕಿ ಮುನಿ. ಈ ಇಡೀ ಭೂಮಿಯು ವೈವಸ್ವತ ಮನು ಪ್ರಜಾಪತಿಯಿಂದ ಮೊದಲು ಮಾಡಿ ಜಯಶಾಲಿ-ಗಳಾದ ಯಾವ ರಾಜರಿಗೆ 'ಸರ್ವಾಪೂರ್ವ' ಎಲ್ಲ ಅಪೂರ್ವಸಾಧನೆಗಳಿಗೂ ಸಾಧನವಾಯಿತೋ, ಯಾವ ರಾಜರ ವಂಶದಲ್ಲಿ ಬಂದ ಯಾವ ಸಗರನು ಪುತ್ರ-ರಿಂದ ನೆಲವನ್ನು ಅಗೆಸಿ ಸಾಗರ ನಿರ್ಮಾಣ ಮಾಡಿದನೋ, ಯಾರು ದಂಡ-ಯಾತ್ರೆಗೆ ಹೊರಟರೆ ಅವನ ಅರವತ್ತು ಸಾವಿರ ಪುತ್ರರು ಪರಿವಾರವಾಗಿ ಹೊರಡುತ್ತಿದ್ದರೋ ಆ ಇಕ್ಷ್ವಾಕುವಂಶದ ಮಹಾತ್ಮರಾದ ರಾಜರ ಕಥೆ ಹೇಳಲು ಮಹತ್ತಾದ ಈ ರಾಮಾಯಣ ಹೊರಟಿದೆ.

ತದಿದಂ ವರ್ತಯಿಷ್ಯಾಮಿ ಸರ್ವಂ ನಿಖಿಲಮಾದಿತಃ ।
ಧರ್ಮಕಾಮಾರ್ಥಸಹಿತಂ ಶ್ರೋತವ್ಯಮನಸೂಯಯಾ ॥ ೪ ॥

ಈ ರಾಮಾಯಣವನ್ನು ಆದಿಯಿಂದ ತೊಡಗಿ ಉತ್ತರಕಾಂಡದವರೆಗೂ ಪೂರ್ತಿಯಾಗಿ ಒಂದಂಶವನ್ನೂ ಬಿಡದೇ ಧರ್ಮ ಅರ್ಥ ಕಾಮರೂಪ ಮೂರು ಪುರುಷಾರ್ಥ ಮತ್ತು ಮೋಕ್ಷರೂಪಪರಮಪುರುಷಾರ್ಥ ಸಹಿತವಾಗಿ ಹಾಡುತ್ತೇವೆ. ಶ್ರೋತೃಗಳು ಮತ್ಸರಿಸದೇ ಆಲಿಸಬೇಕು.

ಕೋಸಲೋ ನಾಮ ಮುದಿತಃ ಸ್ಫೀತೋ ಜನಪದೋ ಮಹಾನ್ ।
ನಿವಿಷ್ಟಃ ಸರಯೂತೀರೇ ಪ್ರಭೂತಧನಧಾನ್ಯವಾನ್ ॥ ೫ ॥

ಕೋಸಲವೆಂಬ ದೊಡ್ಡ ರಾಜ್ಯವು ಸರಯೂ ನದೀತೀರ ಪ್ರದೇಶದಲ್ಲಿ ಇದೆ. ಅದು ಬಹಳ ಧನಧಾನ್ಯಗಳಿಂದ ಸುಖ ಸಮೃದ್ಧಿಯುಕ್ತವಾಗಿದೆ.

ಅಯೋಧ್ಯಾ ನಾಮ ನಗರೀ ತತ್ರಾಸೀಲ್ಲೋಕವಿಶ್ರುತಾ ।
ಮನುನಾ ಮಾನವೇಂದ್ರೇಣ ಯಾ ಪುರೀ ನಿರ್ಮಿತಾ ಸ್ವಯಮ್॥ ೬ ॥

ಅಲ್ಲಿ ಲೋಕಪ್ರಸಿದ್ಧವಾದ ಅಯೋಧ್ಯೆ ಎಂಬ ನಗರವಿದೆ. ಅದು ಸ್ವತಃ ಮನು ಮಹಾರಾಜನಿಂದ ನಿರ್ಮಿತವಾಗಿತ್ತು.

ಆಯತಾ ದಶ ಚ ದ್ವೇ ಚ ಯೋಜನಾನಿ ಮಹಾಪುರೀ ।
ಶ್ರೀಮತೀ ತ್ರೀಣಿ ವಿಸ್ತೀರ್ಣಾ ಸುವಿಭಕ್ತಮಹಾಪಥಾ ॥ ೭ ॥

ಈ ಮಹಾನಗರವು ಹನ್ನೆರಡು ಯೋಜನ ಉದ್ದ ಮೂರು ಯೋಜನ ಅಗಲ-ವಿದ್ದು ಎರಡು ಪಾರ್ಶ್ವಗಳಲ್ಲಿ ಸಾಲುಮರಗಳಿಂದ ಅಲಂಕೃತವಾದ ರಾಜಮಾರ್ಗ-ಗಳಿಂದ ಕೂಡಿದೆ, ಸಂಪದ್‌ಭರಿತವಾಗಿದೆ.

ರಾಜಮಾರ್ಗೇಣ ಮಹತಾ ಸುವಿಭಕ್ತೇನ ಶೋಭಿತಾ ।
ಮುಕ್ತಪುಷ್ಪಾವಕೀರ್ಣೇನ ಜಲಸಿಕ್ತೇನ ನಿತ್ಯಶಃ ॥ ೮ ॥

ಸಾಲುಮರಗಳಿಂದ ಅಲಂಕೃತವಾದ ದೊಡ್ಡದೊಡ್ಡ ರಾಜಮಾರ್ಗಗಳಲ್ಲಿ ನಿತ್ಯ ಅರಳಿದ ಹೂ ಚೆಲ್ಲಿರುತ್ತಾರೆ. ನೀರು ಚಿಮುಕಿಸಿರುತ್ತಾರೆ. ಇಂಥ ರಾಜಮಾರ್ಗದಿಂದ ನಗರ ಶೋಭಿಸುತ್ತದೆ.

ತಾಂ ತು ರಾಜಾ ದಶರಥೋ ಮಹಾರಾಷ್ಟ್ರವಿವರ್ಧನಃ ।
ಪುರೀಮಾವಾಸಯಾಮಾಸ ದಿವಂ ದೇವಪತಿರ್ಯಥಾ ॥ ೯ ॥

ಆ ಅಯೋಧ್ಯಾಪುರಿಯನ್ನು, ಮಹಾರಾಷ್ಟ್ರವನ್ನು ಅಭಿವೃದ್ಧಿ ಪಡಿಸುವ ರಾಜಾ ದಶರಥನು ಸ್ವರ್ಗವನ್ನು ಇಂದ್ರನು ಹೇಗೋ ಹಾಗೇ ಆವಾಸಸ್ಥಾನವನ್ನಾಗಿ ಮಾಡಿಕೊಂಡ.

ಕವಾಟತೋರಣವತೀಂ ಸುವಿಭಕ್ತಾಂತರಾಪಣಾಮ್ ।
ಸರ್ವಯಂತ್ರಾಯುಧವತೀಮುಪೇತಾಂ ಸರ್ವಶಿಲ್ಪಿಭಿಃ ॥ ೧೦ ॥

ಸುಂದರ ದ್ವಾರ ಚೌಕಟ್ಟುಗಳುಳ್ಳದ್ದು ಒಳಗೆ ಅಲಂಕೃತವಾದ ಅಂಗಡಿಗಳುಳ್ಳದ್ದು ಕೋಟೆ ಗೋಡೆಗಳ ಮೇಲೆ ಫಿರಂಗಿ ತುಫಾಕಿ ಉಳ್ಳದ್ದು ಎಲ್ಲ ಕಲಾವಿದರ ವಾಸಸ್ಥಾನವಾದುದು ಅಯೋಧ್ಯೆ.

ಪಂಚಮಃ ಸರ್ಗಃ

ಸರ್ವಾಪೂರ್ವಮಿಯಂ ಯೇಷಾಮಾಸೀತ್ ಕೃತ್ಸ್ನಾ ವಸುಂಧರಾ ।
ಪ್ರಜಾಪತಿಮುಪಾದಾಯ ನೃಪಾಣಾಂ ಜಯಶಾಲಿನಾಮ್ ॥ ೧ ॥

ಯೇಷಾಂ ಸ ಸಗರೋ ನಾಮ ಸಾಗರೋ ಯೇನ ಖಾನಿತಃ ।
ಷಷ್ಟಿಃ ಪುತ್ರಸಹಸ್ರಾಣಿ ಯಂ ಯಾಂತಂ ಪರ್ಯವಾರಯನ್ ॥ ೨ ॥

ಇಕ್ಷ್ವಾಕೂಣಾಮಿದಂ ತೇಷಾಂ ರಾಜ್ಞಾಂ ವಂಶೇ ಮಹಾತ್ಮನಾಮ್ ।
ಮಹದುತ್ಪನ್ನಮಾಖ್ಯಾನಂ ರಾಮಾಯಣಮಿತಿ ಶ್ರುತಮ್ ॥ ೩ ॥

ಉಪೋದ್ಘಾತವನ್ನು ಮುಗಿಸಿ, ರಾಮಚರಿತವನ್ನು ಹೇಳುವುದಕ್ಕೆ ಮೊದಲು ಅದರ ಕಥಾವಸ್ತುವನ್ನು ನಿರ್ದೇಶ ಮಾಡುತ್ತಾರೆ ವಾಲ್ಮೀಕಿ ಮುನಿ. ಈ ಇಡೀ ಭೂಮಿಯು ವೈವಸ್ವತ ಮನು ಪ್ರಜಾಪತಿಯಿಂದ ಮೊದಲು ಮಾಡಿ ಜಯಶಾಲಿ-ಗಳಾದ ಯಾವ ರಾಜರಿಗೆ 'ಸರ್ವಾಪೂರ್ವ' ಎಲ್ಲ ಅಪೂರ್ವಸಾಧನೆಗಳಿಗೂ ಸಾಧನವಾಯಿತೋ, ಯಾವ ರಾಜರ ವಂಶದಲ್ಲಿ ಬಂದ ಯಾವ ಸಗರನು ಪುತ್ರ-ರಿಂದ ನೆಲವನ್ನು ಅಗೆಸಿ ಸಾಗರ ನಿರ್ಮಾಣ ಮಾಡಿದನೋ, ಯಾರು ದಂಡ-ಯಾತ್ರೆಗೆ ಹೊರಟರೆ ಅವನ ಅರವತ್ತು ಸಾವಿರ ಪುತ್ರರು ಪರಿವಾರವಾಗಿ ಹೊರಡುತ್ತಿದ್ದರೋ ಆ ಇಕ್ಷ್ವಾಕುವಂಶದ ಮಹಾತ್ಮರಾದ ರಾಜರ ಕಥೆ ಹೇಳಲು ಮಹತ್ತಾದ ಈ ರಾಮಾಯಣ ಹೊರಟಿದೆ.

ತದಿದಂ ವರ್ತಯಿಷ್ಯಾಮಿ ಸರ್ವಂ ನಿಖಿಲಮಾದಿತಃ ।
ಧರ್ಮಕಾಮಾರ್ಥಸಹಿತಂ ಶ್ರೋತವ್ಯಮನಸೂಯಯಾ ॥ ೪ ॥

ಈ ರಾಮಾಯಣವನ್ನು ಆದಿಯಿಂದ ತೊಡಗಿ ಉತ್ತರಕಾಂಡದವರೆಗೂ ಪೂರ್ತಿಯಾಗಿ ಒಂದಂಶವನ್ನೂ ಬಿಡದೇ ಧರ್ಮ ಅರ್ಥ ಕಾಮರೂಪ ಮೂರು ಪುರುಷಾರ್ಥ ಮತ್ತು ಮೋಕ್ಷರೂಪಪರಮಪುರುಷಾರ್ಥ ಸಹಿತವಾಗಿ ಹಾಡುತ್ತೇವೆ. ಶ್ರೋತೃಗಳು ಮತ್ಸರಿಸದೇ ಆಲಿಸಬೇಕು.

ಕೋಸಲೋ ನಾಮ ಮುದಿತಃ ಸ್ಫೀತೋ ಜನಪದೋ ಮಹಾನ್ ।
ನಿವಿಷ್ಟಃ ಸರಯೂತೀರೇ ಪ್ರಭೂತಧನಧಾನ್ಯವಾನ್ ॥ ೫ ॥

ಕೋಸಲವೆಂಬ ದೊಡ್ಡ ರಾಜ್ಯವು ಸರಯೂ ನದೀತೀರ ಪ್ರದೇಶದಲ್ಲಿ ಇದೆ. ಅದು ಬಹಳ ಧನಧಾನ್ಯಗಳಿಂದ ಸುಖ ಸಮೃದ್ಧಿಯುಕ್ತವಾಗಿದೆ.

ಅಯೋಧ್ಯಾ ನಾಮ ನಗರೀ ತತ್ರಾಸೀಲ್ಲೋಕವಿಶ್ರುತಾ ।
ಮನುನಾ ಮಾನವೇಂದ್ರೇಣ ಯಾ ಪುರೀ ನಿರ್ಮಿತಾ ಸ್ವಯಮ್॥ ೬ ॥

ಅಲ್ಲಿ ಲೋಕಪ್ರಸಿದ್ಧವಾದ ಅಯೋಧ್ಯೆ ಎಂಬ ನಗರವಿದೆ. ಅದು ಸ್ವತಃ ಮನು ಮಹಾರಾಜನಿಂದ ನಿರ್ಮಿತವಾಗಿತ್ತು.

ಆಯತಾ ದಶ ಚ ದ್ವೇ ಚ ಯೋಜನಾನಿ ಮಹಾಪುರೀ ।
ಶ್ರೀಮತೀ ತ್ರೀಣಿ ವಿಸ್ತೀರ್ಣಾ ಸುವಿಭಕ್ತಮಹಾಪಥಾ ॥ ೭ ॥

ಈ ಮಹಾನಗರವು ಹನ್ನೆರಡು ಯೋಜನ ಉದ್ದ ಮೂರು ಯೋಜನ ಅಗಲ-ವಿದ್ದು ಎರಡು ಪಾರ್ಶ್ವಗಳಲ್ಲಿ ಸಾಲುಮರಗಳಿಂದ ಅಲಂಕೃತವಾದ ರಾಜಮಾರ್ಗ-ಗಳಿಂದ ಕೂಡಿದೆ, ಸಂಪದ್‌ಭರಿತವಾಗಿದೆ.

ರಾಜಮಾರ್ಗೇಣ ಮಹತಾ ಸುವಿಭಕ್ತೇನ ಶೋಭಿತಾ ।
ಮುಕ್ತಪುಷ್ಪಾವಕೀರ್ಣೇನ ಜಲಸಿಕ್ತೇನ ನಿತ್ಯಶಃ ॥ ೮ ॥

ಸಾಲುಮರಗಳಿಂದ ಅಲಂಕೃತವಾದ ದೊಡ್ಡದೊಡ್ಡ ರಾಜಮಾರ್ಗಗಳಲ್ಲಿ ನಿತ್ಯ ಅರಳಿದ ಹೂ ಚೆಲ್ಲಿರುತ್ತಾರೆ. ನೀರು ಚಿಮುಕಿಸಿರುತ್ತಾರೆ. ಇಂಥ ರಾಜಮಾರ್ಗದಿಂದ ನಗರ ಶೋಭಿಸುತ್ತದೆ.

ತಾಂ ತು ರಾಜಾ ದಶರಥೋ ಮಹಾರಾಷ್ಟ್ರವಿವರ್ಧನಃ ।
ಪುರೀಮಾವಾಸಯಾಮಾಸ ದಿವಂ ದೇವಪತಿರ್ಯಥಾ ॥ ೯ ॥

ಆ ಅಯೋಧ್ಯಾಪುರಿಯನ್ನು, ಮಹಾರಾಷ್ಟ್ರವನ್ನು ಅಭಿವೃದ್ಧಿ ಪಡಿಸುವ ರಾಜಾ ದಶರಥನು ಸ್ವರ್ಗವನ್ನು ಇಂದ್ರನು ಹೇಗೋ ಹಾಗೇ ಆವಾಸಸ್ಥಾನವನ್ನಾಗಿ ಮಾಡಿಕೊಂಡ.

ಕವಾಟತೋರಣವತೀಂ ಸುವಿಭಕ್ತಾಂತರಾಪಣಾಮ್ ।
ಸರ್ವಯಂತ್ರಾಯುಧವತೀಮುಪೇತಾಂ ಸರ್ವಶಿಲ್ಪಿಭಿಃ ॥ ೧೦ ॥

ಸುಂದರ ದ್ವಾರ ಚೌಕಟ್ಟುಗಳುಳ್ಳದ್ದು ಒಳಗೆ ಅಲಂಕೃತವಾದ ಅಂಗಡಿಗಳುಳ್ಳದ್ದು ಕೋಟೆ ಗೋಡೆಗಳ ಮೇಲೆ ಫಿರಂಗಿ ತುಫಾಕಿ ಉಳ್ಳದ್ದು ಎಲ್ಲ ಕಲಾವಿದರ ವಾಸಸ್ಥಾನವಾದುದು ಅಯೋಧ್ಯೆ.

ಸೂತಮಾಗಧಸಂಬಾಧಾಂ ಶ್ರೀಮತೀಮತುಲಪ್ರಭಾಮ್ ।
ಉಚ್ಚಾಟ್ಟಾಲಧ್ವಜವತೀಂ ಶತಘ್ನೀಶತಸಂಕುಲಾಮ್ ॥ ೧೧ ॥

ಸ್ತುತಿ ಪಾಠಕರು ಮತ್ತು ರಾಜವಂಶವನ್ನು ಹೊಗಳುವವರಿಂದ ತುಂಬಿದ್ದು ಸಂಪತ್‌ಸಮೃದ್ಧವಾದುದು ಅಸದೃಶ ಸೌಂದರ್ಯ ಉಳ್ಳದ್ದು ಉನ್ನತವಾದ ಉಪ್ಪರಿಗೆ ಧ್ವಜ ಉಳ್ಳದ್ದು ನೂರಾರು ಫಿರಂಗಿಗಳುಳ್ಳದ್ದು ಅಯೋಧ್ಯೆ.

ವಧೂನಾಟಕಸಂಘೈಶ್ಚ ಸಂಯುಕ್ತಾಂ ಸರ್ವತಃ ಪುರೀಮ್ ।
ಉದ್ಯಾನಾಮ್ರವಣೋಪೇತಾಂ ಮಹತೀಂ ಸಾಲಮೇಖಲಾಮ್ ॥ ೧೨

ಎಲ್ಲೆಡೆ ಸ್ತ್ರೀಯರ ನಾಟಕ ಸಂಘಗಳಿಂದ ಯುಕ್ತವಾದುದು, ಉದ್ಯಾನ ಮಾವಿನ ತೋಪುಗಳಿಂದ ಕೂಡಿದ್ದು ಸಾಲವೃಕ್ಷ ವನಗಳಿಂದ ಸುತ್ತುವರಿದುದು ಮಹಾನಗರಿ ಇದು ಅಯೋಧ್ಯೆ.

ದುರ್ಗಗಂಭೀರಪರಿಖಾಂ ದುರ್ಗಾಮನ್ಯೈರ್ದುರಾಸದಾಮ್ ।
ವಾಜಿವಾರಣಸಂಪೂರ್ಣಾಂ ಗೋಭಿರುಷ್ಟ್ರೈಃ ಖರೈಸ್ತಥಾ ॥ ೧೩ ॥

ದುರ್ಗಮವಾದ ಆಳವಾದ ಕಂದಕ ಉಳ್ಳದ್ದು ಅನ್ಯರಿಗೆ ಬರಲಾಗದುದು, ಆಕ್ರಮಿಸಲಾಗದುದು, ಕುದುರೆ ಆನೆಗಳಿಂದ ತುಂಬಿದುದು ಎತ್ತು ಒಂಟೆ ಕತ್ತೆಗಳಿಂದ ತುಂಬಿದ್ದುದು ಅಯೋಧ್ಯೆ.

ಸಾಮಂತರಾಜಸಂಘೈಶ್ಚ ಬಲಕರ್ಮಭಿರಾವೃತಾಮ್ ।
ನಾನಾದೇಶನಿವಾಸೈಶ್ಚ ವಣಿಗ್ಭಿರುಪಶೋಭಿತಾಮ್ ॥ ೧೪ ॥

ಕಪ್ಪಕೊಡಲು ಬಂದ ಸಾಮಂತ ರಾಜರಿಂದ ತುಂಬಿದ್ದು ನಾನಾ ದೇಶವಾಸಿ ವರ್ತಕರಿಂದಲೂ ತುಂಬಿದುದು ಅಯೋಧ್ಯೆ.

ಪ್ರಾಸಾದೈ ರತ್ನವಿಕೃತೈಃ ಪರ್ವತೈರುಪಶೋಭಿತಾಮ್ ।
ಕೂಟಾಗಾರೈಶ್ಚ ಸಂಪೂರ್ಣಾಮಿಂದ್ರಸ್ಯೇವಾಮರಾವತೀಮ್ ॥ ೧೫ ॥

ರತ್ನಖಚಿತವಾದ ಉಪ್ಪರಿಗೆ ಮನೆಗಳು ಬೆಟ್ಟದಂತೆ ಎತ್ತರವಾಗಿದ್ದು ಶೋಭೆ ನೀಡುತ್ತವೆ. ಮಾಳಿಗೆ ಮೇಲಿನ 'ಸ್ತ್ರೀಯರ ಕೂಟ' ಎಂಬ ಕ್ರೀಡಾಭವನಗಳಿಂದಲೂ ತುಂಬಿದೆ ಅಯೋಧ್ಯೆ.

ಚಿತ್ರಾಮಷ್ಟಾಪದಾಕಾರಾಂ ವರನಾರೀಗಣೈರ್ಯುತಾಮ್ ।
ಸರ್ವರತ್ನಸಮಾಕೀರ್ಣಾಂ ವಿಮಾನಗೃಹಶೋಭಿತಾಮ್ ॥ ೧೬ ॥

ಸುಂದರವಾಗಿದೆ ಪಗಡೆಕಾಯಿಯ ಆಕಾರದಲ್ಲಿದೆ. ಉತ್ತಮ ಸ್ತ್ರೀ ಸಮೂಹ–ಗಳಿಂದ ತುಂಬಿದೆ. ಎಲ್ಲ ಜಾತಿಯ ವಸ್ತುಗಳಲ್ಲಿಯೂ ಉತ್ತಮವಾದ ರತ್ನಪ್ರಾಯ–ವಾದ ವಸ್ತುಗಳೇ ಅಲ್ಲಿ ಇವೆ. ಏಳು ಮಾಳಿಗೆಗಳ ಮನೆಗಳೇ ಎಲ್ಲೆಡೆ ಶೋಭಿಸುತ್ತವೆ.

ಗೃಹಗಾಢಾಮವಿಚ್ಛಿದ್ರಾಂ ಸಮಭೂಮೌ ನಿವೇಶಿತಾಮ್ ।
ಶಾಲಿತಂಡುಲಸಂಪೂರ್ಣಾಮಿಕ್ಷುಕಾಂಡರಸೋದಕಾಮ್ ॥ ೧೭ ॥

ಮನೆಗಳಿಂದ ನಿಬಿಡವಾಗಿ ತುಂಬಿದೆ. ಎಲ್ಲಿಯೂ ಖಾಲಿ ಜಾಗವಿಲ್ಲ. ಸಮತಟ್ಟಾದ ಪ್ರದೇಶದಲ್ಲಿ ನಗರ ವಿಸ್ತಾರವಾಗಿ ಹರಡಿದೆ. ಶಾಲಿ ಅಕ್ಕಿ, ಕಬ್ಬಿನ ರಸದಂಥ ಸಿಹಿನೀರು ಎಲ್ಲೆಡೆ ಇಲ್ಲಿ ಲಭ್ಯ.

ದುಂದುಭೀಭಿರ್ಮೃದಂಗೈಶ್ಚ ವೀಣಾಭಿಃ ಪಣವೈಸ್ತಥಾ ।
ನಾದಿತಾಂ ಭೃಶಮತ್ಯರ್ಥಂ ಪೃಥಿವ್ಯಾಂ ತಾಮನುತ್ತಮಾಮ್ ॥ ೧೮ ॥

ನಗಾರಿ ಮೃದಂಗ ವೀಣೆ ಪಣವವಾದ್ಯಗಳಿಂದ ಬಹಳ ಸದ್ದುಗಳಿಂದ ತುಂಬಿದ್ದು ಭೂಮಿಯಲ್ಲಿ ಅತ್ಯಧಿಕವಾಗಿ ಸಾಟಿ ಇಲ್ಲದೆ ಮೆರೆಯುತ್ತಿದೆ.

ವಿಮಾನಮಿವ ಸಿದ್ಧಾನಾಂ ತಪಸಾಧಿಗತಂ ದಿವಿ ।
ಸುನಿವೇಶಿತವೇಶ್ಮಾಂತಾಂ ನರೋತ್ತಮಸಮಾವೃತಾಮ್ ॥ ೧೯ ॥

ಅಂತರಿಕ್ಷದಲ್ಲಿ ಸಿದ್ಧರಿಗೆ ತಪಸಿನಿಂದ ಲಭಿಸಬಲ್ಲ ಅರಮನೆಯಂತಿದೆ. ಮನೆಯ ಒಳಗಿನ ಹೊರಗಿನ ಎಲ್ಲ ಭಾಗವೂ ಸುಂದರವಾಗಿ ನಿರ್ಮಿತವಾಗಿದೆ. ಉತ್ತಮ ಪುರುಷರಿಂದಲೇ ಆವೃತವಾಗಿದೆ.

ಯೇ ಚ ಬಾಣೈರ್ನ ವಿಧ್ಯಂತಿ ವಿವಿಕ್ತಮಪರಾಪರಮ್ ।
ಶಬ್ದವೇಧ್ಯಂ ಚ ವಿತತಂ ಲಘುಹಸ್ತಾ ವಿಶಾರದಾಃ ॥ ೨೦ ॥

ಗುಂಪಿನಿಂದ ತಪ್ಪಿಸಿಕೊಂಡು ಒಂಟಿಯಾದ ಮೃಗವನ್ನಾಗಲಿ ತನ್ನ ಬಂಧುಗಳಿಂದ ಅಗಲಿದ ಪಲಾಯನ ಮಾಡುವ ಮೃಗವನ್ನಾಗಲಿ, ಕಣ್ಣಿಗೆ ಕಾಣದೆ ಶಬ್ದದಿಂದಲೇ ಬೇಟೆಯಾಡಬಹುದಾದ ಮೃಗವನ್ನಾಗಲಿ ಇಲ್ಲಿಯ ಪುರುಷರು ಬಾಣಗಳಿಂದ ಹೊಡೆಯರು. ಹೊಡೆಯಲು ಸಮರ್ಥರೇ ವೇಗದ ಕೈಚಳಕ ಉಳ್ಳವರೇ ಇವರು.

ಸಿಂಹವ್ಯಾಘ್ರವರಾಹಾಣಾಂ ಮತ್ತಾನಾಂ ನರ್ದತಾಂ ವನೇ ।
ಹಂತಾರೋ ನಿಶಿತೈಃ ಶಸ್ತ್ರೈರ್ಬಲಾದ್ ಬಾಹುಬಲೈರಪಿ ॥ ೨೧ ॥

ಕಾಡಿನಲ್ಲಿ ಮದಿಸಿ ಗರ್ಜನ ಮಾಡುವ ಸಿಂಹ ಹುಲಿ ಕಾಡುಹಂದಿಗಳನ್ನು ಮಾತ್ರ ಹರಿತವಾದ ಆಯುಧಗಳಿಂದಲೂ ಕೇವಲ ಬಾಹುಬಲಗಳಿಂದಲೂ ವಧಿಸುವವರು ಇವರು.

ತಾದೃಶಾನಾಂ ಸಹಸ್ರೈಸ್ತಾಮಭಿಪೂರ್ಣಾಂ ಮಹಾರಥೈಃ ।
ಪುರೀಮಾವಾಸಯಾಮಾಸ ರಾಜಾ ದಶರಥಸ್ತದಾ ॥ ೨೨ ॥

ಅಂಥ ಸಾವಿರಸಾವಿರ ವೀರಪುರುಷರಾದ ಮಹಾರಥರಿಂದ ತುಂಬಿದ ಅಯೋಧ್ಯಾನಗರದಲ್ಲಿದ್ದ ರಾಜಾ ದಶರಥ.

ತಾಮಗ್ನಿಮದ್ಭಿರ್ಗುಣವದ್ಭಿರಾವೃತಾಂ
ದ್ವಿಜೋತ್ತಮೈರ್ವೇದವಿದಂಗಪಾರಗೈಃ ।
ಸಹಸ್ರದೈಃ ಸತ್ಯರತೈರ್ಮಹಾತ್ಮಭಿ-
ರ್ಮಹರ್ಷಿಕಲ್ಪೈರ್ಋಷಿಭಿಶ್ಚ ಕೇವಲೈಃ ॥ ೨೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಪಂಚಮಃ ಸರ್ಗಃ ॥ ೫ ॥

ಅಗ್ನ್ಯಾಧಾನ ಮಾಡಿದ, ಶಮಾದಿಗುಣಭರಿತರಾದ, ವೇದ ವೇದಾಂಗಗಳಲ್ಲಿ ಪಾರಂಗತರಾದ, ಬಹಳ ದಾನ ಮಾಡುವ, ಸತ್ಯನಿಷ್ಠರಾದ ಮಹಾತ್ಮರಾದ ದ್ವಿಜೋತ್ತಮರಿಂದ ತುಂಬಿದ ನಗರ ಅಯೋಧ್ಯೆ, ಇಲ್ಲಿ ಸಾಮಾನ್ಯ ಋಷಿಗಳೂ ಕೂಡ ಸುಮಾರಾಗಿ ಮಹರ್ಷಿ ತುಲ್ಯರೇ ಎನ್ನಬಹುದು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಐದನೇ ಸರ್ಗ ಮುಗಿಯಿತು.

ಷಷ್ಠಃ ಸರ್ಗಃ

ತಸ್ಯಾಂ ಪುರ್ಯಾಮಯೋಧ್ಯಾಯಾಂ ವೇದವಿತ್ ಸರ್ವಸಂಗ್ರಹಃ ।
ದೀರ್ಘದರ್ಶೀ ಮಹಾತೇಜಾಃ ಪೌರಜಾನಪದಪ್ರಿಯಃ ॥ ೧ ॥

ಆ ಅಯೋಧ್ಯಾನಗರದಲ್ಲಿ ರಾಜಾ ದಶರಥನು ವಾಸ ಮಾಡುತ್ತ ಜಗತ್ತಿನ ರಕ್ಷಣೆ ಮಾಡುತ್ತಿದ್ದ. ಅವನು ವೇದಗಳನ್ನು ಬಲ್ಲವನು. ಚತುರಂಗ ಬಲರಾಷ್ಟ್ರ ದುರ್ಗಾದಿಗಳೆಲ್ಲವನ್ನೂ ಸಂಪಾದಿಸಿಕೊಂಡವನು. ದೂರಾಲೋಚನೆ ಉಳ್ಳವನು ಮಹಾಪರಾಕ್ರಮಿ, ಪಟ್ಟಣಿಗರಿಗೂ ಗ್ರಾಮೀಣರಿಗೂ ಪ್ರಿಯ.

ಇಕ್ಷ್ವಾಕೂಣಾಮತಿರಥೋ ಯಜ್ವಾ ಧರ್ಮರತೋ ವಶೀ ।
ಮಹರ್ಷಿಕಲ್ಪೋ ರಾಜರ್ಷಿಸ್ತ್ರಿಷು ಲೋಕೇಷು ವಿಶ್ರುತಃ ॥ ೨ ॥

ಇಕ್ಷ್ವಾಕು ವಂಶದವರಲ್ಲಿ ಮುಖ್ಯ ಅತಿರಥನೆನಿಸಿದವನು. ಯಜ್ಞಶೀಲ, ಧರ್ಮಪರ, ಸ್ವಾಧೀನ. ಮಹರ್ಷಿಗಳಿಗೆ ಕಡಿಮೆಯಲ್ಲದ ರಾಜರ್ಷಿ ಎಂದು ಮೂಲೋಕದಲ್ಲಿ ಪ್ರಸಿದ್ಧನು ದಶರಥ.

ಬಲವಾನ್ನಿಹತಾಮಿತ್ರೋ ಮಿತ್ರವಾನ್ ವಿಜಿತೇಂದ್ರಿಯಃ ।
ಧನೈಶ್ಚ ಸಂಗ್ರಹೈಶ್ಚಾನ್ಯೈಃ ಶಕ್ರವೈಶ್ರವಣೋಪಮಃ ॥ ೩ ॥

ಬಲಿಷ್ಠ, ಶತ್ರುನಾಶ ಗೈದವನು, ಮಿತ್ರರನ್ನು ಸಂಪಾದಿಸಿದವನು ಇಂದ್ರಿಯ ನಿಗ್ರಹ ಉಳ್ಳವನು, ಧನಗಳ, ಬೇರೆ ಧಾನ್ಯಾದಿರಾಶಿಗಳ ಸಂಗ್ರಹದಲ್ಲಿ ಇಂದ್ರ ಕುಬೇರರಂತಿರುವವನು.

ಯಥಾ ಮನುರ್ಮಹಾತೇಜಾ ಲೋಕಸ್ಯ ಪರಿರಕ್ಷಿತಾ ।
ತಥಾ ದಶರಥೋ ರಾಜಾ ಲೋಕಸ್ಯ ಪರಿರಕ್ಷಿತಾ ॥ ೪ ॥

ಮಹಾಪರಾಕ್ರಮಿ ವೈವಸ್ವತಮನು ಹೇಗೆ ಲೋಕರಕ್ಷಣೆ ಮಾಡಿದನೋ ಹಾಗೆ ರಾಜಾ ದಶರಥನೂ ಲೋಕರಕ್ಷಣೆ ಮಾಡಿದನು.

ತೇನ ಸತ್ಯಾಭಿಸಂಧೇನ ತ್ರಿವರ್ಗಮನುತಿಷ್ಠತಾ ।
ಪಾಲಿತಾ ಸಾ ಪುರೀ ಶ್ರೇಷ್ಠಾ ಇಂದ್ರೇಣೇವಾಮರಾವತೀ ॥ ೫ ॥

ಸತ್ಯಸಂಧನಾಗಿ ಧರ್ಮಾರ್ಥ ಕಾಮರೂಪ ತ್ರಿವರ್ಗಸಾಧನೆ ಮಾಡುತ್ತ

ಇಂದ್ರನು ಅಮರಾವತಿಯನ್ನು ಪಾಲಿಸುವಂತೇ ರಾಜಾ ದಶರಥನೂ ಆ ಶ್ರೇಷ್ಟವಾದ ಅಯೋಧ್ಯಾಪುರಿಯನ್ನು ಪಾಲಿಸಿದನು.

ತಸ್ಮಿನ್ ಪುರವರೇ ಹೃಷ್ಟಾ ಧರ್ಮಾತ್ಮಾನೋ ಬಹುಶ್ರುತಾಃ ।
ನರಾಸ್ತುಷ್ಟಾ ಧನೈಃ ಸ್ವೈಃ ಸ್ವೈರಲುಬ್ಧಾಃ ಸತ್ಯವಾದಿನಃ ॥ ೬ ॥

ಆ ಅಯೋಧ್ಯಾಪುರವರದಲ್ಲಿ ಮಾನವರು ತಮ್ಮ ತಮ್ಮ ಧನಗಳಿಂದಲೇ ಸಂತುಷ್ಮರೂ ತೃಪ್ತರೂ ಆಗಿದ್ದು ಧರ್ಮಾಸಕ್ತರೂ ಬಹು ಅಧ್ಯಯನ ಮಾಡಿದವರೂ ಆಗಿದ್ದು ಹೆಚ್ಚಿನ ಸಂಪತ್ತಿಗೆ ಆಸೆ ಪಡದವರೂ ಸತ್ಯವಾದಿಗಳೂ ಆಗಿದ್ದರು.

ನಾಲ್ಪಸನ್ನಿಚಯಃ ಕಶ್ಚಿದಾಸೀತ್ ತಸ್ಮಿನ್ ಪುರೋತ್ತಮೇ ।
ಕುಟುಂಬೀ ಯೋ ಹ್ಯಸಿದ್ಧಾರ್ಥೋ ಽಗವಾಶ್ವಧನಧಾನ್ಯವಾನ್ ॥ ೭ ॥

ಯಾರೂ ಆ ಶ್ರೇಷ್ಠ ಪಟ್ಟಣದಲ್ಲಿ ಅಲ್ಪ ಧನಸಂಪಾದನೆ ಮಾಡಿದವನಿರಲಿಲ್ಲ. ಗೋ ಅಶ್ವಧನಧಾನ್ಯರಹಿತನಾಗಿ ಪುರುಷಾರ್ಥಸಾಧನೆ ಮಾಡಲಾಗದ ಸಂಸಾರಿ ಯಾರೂ ಇರಲಿಲ್ಲ.

ಕಾಮೀ ವಾ ನ ಕದರ್ಯೋ ವಾ ನೃಶಂಸಃ ಪುರುಷಃ ಕ್ವಚಿತ್ ।
ದ್ರಷ್ಟುಂ ಶಕ್ಯಮಯೋಧ್ಯಾಯಾಂ ನಾವಿದ್ವಾನ್ ನ ಚ ನಾಸ್ತಿಕಃ ॥ ೮ ॥

ಕಾಮಿಯಾಗಲಿ, ಹಣಕ್ಕಾಗಿ ಬಂಧುಗಳನ್ನು ಪೀಡಿಸುವವನಾಗಲಿ ಕ್ರೂರಿಯಾಗಲಿ ಆದ ಪುರುಷನು ಅಲ್ಲಿ ಎಲ್ಲಿಯೂ ಕಂಡು ಬರುತ್ತಿರಲಿಲ್ಲ. ವಿದ್ಯೆ ಕಲಿಯದವನೂ ನಾಸ್ತಿಕನೂ ಎಲ್ಲಿಯೂ ಕಾಣಲು ಶಕ್ಯನಿರಲಿಲ್ಲ.

ಸರ್ವೇ ನರಾಶ್ಚ ನಾರ್ಯಶ್ಚ ಧರ್ಮಶೀಲಾಃ ಸುಸಂಯತಾಃ ।
ಮುದಿತಾಃ ಶೀಲವೃತ್ತಾಭ್ಯಾಂ ಮಹರ್ಷಯ ಇವಾಮಲಾಃ ॥ ೯ ॥

ಎಲ್ಲ ನರನಾರಿಯರೂ ಧರ್ಮಶೀಲರು. ಆತ್ಮ ಸಂಯಮ ಉಳ್ಳವರು ಸಂತುಷ್ಟರು, ಸ್ವಭಾವ ನಡತೆಗಳಿಂದ ಮಹರ್ಷಿಗಳಂತೆ ನಿರ್ಮಲರಾಗಿದ್ದರು, ಅಯೋಧ್ಯೆಯಲ್ಲಿ.

ನಾಕುಂಡಲೀ ನಾಮುಕುಟೀ ನಾಸ್ರಗ್ವೀ ನಾಲ್ಪಭೋಗವಾನ್ ।
ನಾಮೃಷ್ಟೋ ನಾನುಲಿಪ್ತಾಂಗೋ ನಾಸುಗಂಧಶ್ಚ ವಿದ್ಯತೇ ॥ ೧೦ ॥

ಕರ್ಣಕುಂಡಲರಹಿತ, ಮುಕುಟರಹಿತ ಮಾಲ್ಯರಹಿತ ಅಲ್ಪ ಭೋಗ ಭಾಗ್ಯ ಉಳ್ಳವ, ಶೌಚವಿಲ್ಲದವ, ಅಂಗರಾಗರಹಿತ ಸುಗಂಧ ರಹಿತ ಯಾರೂ ಅಯೋಧ್ಯೆ-ಯಲ್ಲಿರಲಿಲ್ಲ.

ನಾಮೃಷ್ಟಭೋಜೀ ನಾದಾತಾ ನಾಪ್ಯನಂಗದನಿಷ್ಕಧೃಕ್ ।
ನಾಹಸ್ತಾಭರಣೋ ವಾಪಿ ದೃಶ್ಯತೇ ನಾಪ್ಯನಾತ್ಮವಾನ್ ॥ ೧೧ ॥

ಮೃಷ್ಟಾನ್ನ ಉಣದವನು, ದಾನ ಮಾಡದವನು ತೋಳು ಎದೆಗಳಿಗೆ ಆಭರಣ-ವಿಲ್ಲದವನು ಹಸ್ತಾಭರಣವಿಲ್ಲದವನು ಮನೋನಿಗ್ರಹವಿಲ್ಲದವನು ಅಲ್ಲಿ ಇಲ್ಲ.

ನಾನಾಹಿತಾಗ್ನಿರ್ನಾಯಜ್ವಾ ನ ಕ್ಷುದ್ರೋ ವಾ ನ ತಸ್ಕರಃ ।
ಕಶ್ಚಿದಾಸೀದಯೋಧ್ಯಾಯಾಂ ನ ಚ ನಿರ್ವೃತ್ತಸಂಕರಃ ॥ ೧೨ ॥

ಅಗ್ನ್ಯಾಧಾನ ಮಾಡದವನು ಯಜ್ಞ ಮಾಡದವನು ಅಲ್ಪವಿದ್ಯೆಯವನು, ಕಳ್ಳತನ ಮಾಡುವವನು ಹಾದರ ಮಾಡುವವನು ಯಾರೂ ಅಯೋಧ್ಯೆಯಲ್ಲಿ ಇರಲಿಲ್ಲ.

ಸ್ವಕರ್ಮನಿರತಾ ನಿತ್ಯಂ ಬ್ರಾಹ್ಮಣಾ ವಿಜಿತೇಂದ್ರಿಯಾಃ ।
ದಾನಾಧ್ಯಯನಶೀಲಾಶ್ಚ ಸಂಯತಾಶ್ಚ ಪ್ರತಿಗ್ರಹೇ ॥ ೧೩ ॥

ಅಯೋಧ್ಯೆಯ ಬ್ರಾಹ್ಮಣರು ನಿತ್ಯ ಸ್ವಕರ್ಮನಿರತರು, ಜಿತೇಂದ್ರಿಯರು ದಾನ ಅಧ್ಯಯನಶೀಲರು ಪ್ರತಿಗ್ರಹದಲ್ಲಿ ಸಂಯಮ ಉಳ್ಳವರು.

ನ ನಾಸ್ತಿಕೋ ನಾನೃತಕೋ ನ ಕಶ್ಚಿದಬಹುಶ್ರುತಃ ।
ನಾಸೂಯಕೋ ನ ವಾಽಶಕ್ತೋ ನಾವಿದ್ವಾನ್ವಿದ್ಯತೇ ತದಾ ॥ ೧೪ ॥

ಅಯೋಧ್ಯೆಯಲ್ಲಿ ನಾಸ್ತಿಕನಿಲ್ಲ ಸುಳ್ಳುಗಾರನಿಲ್ಲ. ಬಹು ಅಧ್ಯಯನ ಮಾಡದವನಿಲ್ಲ ಅಸೂಯೆ ಪಡುವವನಿಲ್ಲ ಶಕ್ತಿ ಇಲ್ಲದವನಿಲ್ಲ, ವಿದ್ಯೆ ಇಲ್ಲದವನಿಲ್ಲ.

ನಾಷಡಂಗವಿದತ್ರಾಸೀತ್ ನಾವ್ರತೋ ನಾಸಹಸ್ರದಃ ।
ನ ದೀನಃ ಕ್ಷಿಪ್ತಚಿತ್ತೋ ವಾ ವ್ಯಥಿತೋ ವಾಪಿ ಕಶ್ಚನ ॥ ೧೫ ॥

ಅಯೋಧ್ಯೆಯಲ್ಲಿ ಷಡಂಗಾಧ್ಯಯನ ಮಾಡದವನಿಲ್ಲ ವ್ರತಾಚರಣವಿಲ್ಲ-ದವನಿಲ್ಲ. ಬಹುದಾನ ಮಾಡದವನಿಲ್ಲ. ದೀನನಾಗಲಿ ವಿಕ್ಷಿಪ್ತಚಿತ್ತನಾಗಲಿ ವ್ಯಥೆ ಪಡುವವನಾಗಲಿ ಯಾರೂ ಇಲ್ಲ.

ಕಶ್ಚಿನ್ನರೋ ವಾ ನಾರೀ ವಾ ನಾಶ್ರೀಮಾನ್ ನಾಪ್ಯರೂಪವಾನ್ ।
ದ್ರಷ್ಟುಂ ಶಕ್ಯಮಯೋಧ್ಯಾಯಾಂ ನಾಪಿ ರಾಜನ್ಯಭಕ್ತಿಮಾನ್ ॥ ೧೬ ॥

ಯಾವ ನರನೆ ಆಗಲಿ ನಾರಿಯೇ ಆಗಲಿ ಧನಸಂಪತ್ತಿಲ್ಲದವನು ರೂಪವಿಲ್ಲದವನು ರಾಜನಲ್ಲಿ ಭಕ್ತಿ ಇಲ್ಲದವನು ಅಯೋಧ್ಯೆಯಲ್ಲಿ ಕಾಣಲು ಶಕ್ಯವಿರಲಿಲ್ಲ.

ವರ್ಣೇಽಷ್ವಗ್ರ್ಯಚತುರ್ಥೇಷು ದೇವತಾತಿಥಿಪೂಜಕಾಃ ।
ಕೃತಜ್ಞಾಶ್ಚ ವದಾನ್ಯಾಶ್ಚ ಶೂರಾ ವಿಕ್ರಮಸಂಯುತಾಃ ॥ ೧೭ ॥

ಬ್ರಾಹ್ಮಣಾದಿ ನಾಲ್ಕೂ ವರ್ಣಗಳಲ್ಲಿ ಎಲ್ಲರೂ ದೇವತಾ ಅತಿಥಿ ಪೂಜಕರೇ ಕೃತಜ್ಞರೇ ಉದಾರ-ಶೂರ-ವಿಕ್ರಮಶಾಲಿಗಳೇ ಆಗಿದ್ದರು.

ದೀರ್ಘಾಯುಷೋ ನರಾಃ ಸರ್ವೇ ಧರ್ಮಂ ಸತ್ಯಂ ಚ ಸಂಶ್ರಿತಾಃ ।
ಸಹಿತಾಃ ಪುತ್ರಪೌತ್ರೈಶ್ಚ ನಿತ್ಯಂ ಸ್ತ್ರೀಭಿಃ ಪುರೋತ್ತಮೇ ॥ ೧೮ ॥

ಪುರೋತ್ತಮವಾದ ಅಯೋಧ್ಯೆಯಲ್ಲಿ ನರರೆಲ್ಲರೂ ದೀರ್ಘಾಯುಷಿಗಳು. ಧರ್ಮ ಸತ್ಯನಿರತರು ಪುತ್ರ ಪೌತ್ರರಿಂದಲೂ ಸ್ತ್ರೀಯರಿಂದಲೂ ಸದಾ ಸಮೇತರೇ ಇದ್ದರು.

ಕ್ಷತ್ರಂ ಬ್ರಹ್ಮಮುಖಂ ಚಾಸೀದ್ ವೈಶ್ಯಾಃ ಕ್ಷತ್ರಮನುವ್ರತಾಃ ।
ಶೂದ್ರಾಃ ಸ್ವಧರ್ಮನಿರತಾಸ್ತ್ರೀನ್ ವರ್ಣಾನುಪಚಾರಿಣಃ ॥ ೧೯ ॥

ಏಕೆಂದರೆ ದಶರಥನ ದಕ್ಷ ಆಳ್ವಿಕೆಯಲ್ಲಿ ಪ್ರಜೆಗಳಾದ ಕ್ಷತ್ರಿಯರು ಅಲ್ಲಿ ಬ್ರಾಹ್ಮಣರನ್ನೂ, ವೈಶ್ಯರು ಕ್ಷತ್ರಿಯರನ್ನೂ, ಶೂದ್ರರು ಮೂರೂ ವರ್ಣದವರನ್ನೂ ಸೇವಿಸುತ್ತ ಸ್ವಧರ್ಮನಿರತರಾಗಿದ್ದರು. ಧರ್ಮವೇ ಸಮಾಜ ಸುಧಾರಕವಾಗುವುದು ತಾನೇ?

ಸಾ ತೇನೇಕ್ಷ್ವಾಕುನಾಥೇನ ಪುರೀ ಸುಪರಿರಕ್ಷಿತಾ ।
ಯಥಾ ಪುರಸ್ತಾನ್ಮನುನಾ ಮಾನವೇಂದ್ರೇಣ ಧೀಮತಾ ॥ ೨೦ ॥

ಇಕ್ಷ್ವಾಕು ವಂಶದವರಿಗೆ ಅಧಿಪತಿಯಾದ ದಶರಥನಿಂದ ಆ ಅಯೋಧ್ಯೆ ಹಿಂದೆ ಮನುವಂಶಾಧಿಪತಿಯಾದ ಧೀಮಂತನಾದ ವೈವಸ್ವತ ಮನುವಿನಿಂದ ಹೇಗೋ ಹಾಗೇ ರಕ್ಷಿಸಲ್ಪಟ್ಟಿತು.

ಯೋಧಾನಾಮಗ್ನಿಕಲ್ಪಾನಾಂ ಪೇಶಲಾನಾಮಮರ್ಷಿಣಾಮ್ ।
ಸಂಪೂರ್ಣಾ ಕೃತವಿದ್ಯಾನಾಂ ಗುಹಾ ಕೇಸರಿಣಾಮಿವ ॥ ೨೧ ॥

ಅಗ್ನಿಸದೃಶರು, ಮೋಸ ಮಾಡದವರು, ಅಪರಾಧವನ್ನು ಸಹಿಸದವರು ಶಸ್ತ್ರವಿದ್ಯೆ ಕಲಿತವರೂ ಆದ ಯೋಧರಿಂದ ತುಂಬಿತ್ತು ಅಯೋಧ್ಯೆ. ಸಿಂಹಗಳಿಂದ ಗುಹೆಗಳು ಹೇಗೋ ಹಾಗೆ.

ಕಂಭೋಜವಿಷಯೇ ಜಾತೈರ್ಬಾಹ್ಲೀಕೈಶ್ಚ ಹಯೋತ್ತಮೈಃ ।
ವನಾಯುಜೈರ್ನದೀಜೈಶ್ಚ ಪೂರ್ಣಾ ಹರಿಹಯೋತ್ತಮೈಃ ॥ ೨೨ ॥

ಕಾಂಬೋಜ ಬಾಹ್ಲೀಕ ವನಾಯು ಸಿಂಧು ದೇಶಗಳಲ್ಲಿ ಜನಿಸಿದ್ದು ಉಚ್ಚೈಃಶ್ರವ-ದಂತೆ ಉತ್ತಮಜಾತಿಯವುಗಳಾದ ಅಶ್ವಗಳಿಂದ ತುಂಬಿತ್ತು.

ವಿಂಧ್ಯಪರ್ವತಜೈರ್ಮತ್ತೈಃ ಪೂರ್ಣಾ ಹೈಮವತೈರಪಿ ।
ಮದಾನ್ವಿತೈರತಿಬಲೈರ್ಮಾತಂಗೈಃ ಪರ್ವತೋಪಮೈಃ ॥ ೨೩ ॥

ವಿಂಧ್ಯಪರ್ವತ ಹಿಮಾಲಯ ಪರ್ವತಗಳಲ್ಲಿ ಜನಿಸಿದ್ದು, ಪರ್ವತದಂತೆ ಉನ್ನತವಾದ ಅತಿಬಲಿಷ್ಠವಾದ ಮದ ತುಂಬಿದ ಮತ್ತಗಜಗಳಿಂದಲೂ ತುಂಬಿತ್ತು.

ಐರಾವತಕುಲೀನೈಶ್ಚ ಮಹಾಪದ್ಮಕುಲೈಸ್ತಥಾ ।
ಅಂಜನಾದಪಿ ನಿಷ್ಪನ್ನೈರ್ವಾಮನಾದಪಿ ಚ ದ್ವಿಪೈಃ ॥ ೨೪ ॥

ಭದ್ರೈರ್ಮಂದ್ರೈರ್ಮೃಗೈಶ್ಚೈವ ಭದ್ರಮಂದ್ರಮೃಗೈಸ್ತಥಾ ।
ಭದ್ರಮಂದ್ರೈರ್ಭದ್ರಮೃಗೈರ್ಮೃಗಮಂದ್ರೈಶ್ಚ ಸಾ ಪುರೀ ॥
ನಿತ್ಯಮತ್ತೈಃ ಸದಾ ಪೂರ್ಣಾ ನಾಗೈರಚಲಸನ್ನಿಭೈಃ ॥ ೨೫ ॥

ಐರಾವತ ಮಹಾಪದ್ಮ ಅಂಜನ ವಾಮನ ಎಂಬ ದಿಗ್ಗಜಗಳ ವಂಶದಲ್ಲಿ ಬಂದ ಆನೆಗಳಿಂದಲೂ ಭದ್ರ-ಮಂದ್ರ-ಮೃಗಗಳೆಂಬ ಮೂರು ಜಾತಿಯ ಆನೆ-ಗಳಿಂದಲೂ, ಭದ್ರಮಂದ್ರಮೃಗ ಎಂಬ ಒಂದು ಮಿಶ್ರತಳಿಯ ಮತ್ತು ಭದ್ರಮಂದ್ರ, ಭದ್ರಮೃಗ, ಮೃಗಮಂದ್ರ ಎಂಬ ಮೂರು ಬಗೆಯ ಮಿಶ್ರತಳಿಗಳ ಆನೆಗಳಿಂದಲೂ ಅಯೋಧ್ಯೆ ತುಂಬಿತ್ತು, ಆನೆಗಳು ಬೆಟ್ಟದಂತೆ ಎತ್ತರವಾಗಿದ್ದು ಸದಾ ಮದಿಸಿರುತ್ತಿದ್ದವು.

ಸಾ ಯೋಜನೇ ಚ ದ್ವೇ ಭೂಯಃ ಸತ್ಯನಾಮಾ ಪ್ರಕಾಶತೇ ।
ಯಸ್ಯಾಂ ದಶರಥೋ ರಾಜಾ ವಸಂಜಗದಪಾಲಯತ್ ॥ ೨೬ ॥

ಅಯೋಧ್ಯೆಯು ಹೊರಗೂ ಕೂಡ ಎರಡು ಯೋಜನ ಪರ್ಯಂತ ಅಯೋಧ್ಯ 'ಯುದ್ಧದಿಂದ ಗೆಲ್ಲಲಾಗದುದು' ಎಂಬ ಅನ್ವರ್ಥನಾಮದಿಂದ ಮೆರೆಯುತ್ತಿತ್ತು ಅಯೋಧ್ಯೆ.

ತಾಂ ಪುರೀಂ ಸ ಮಹಾತೇಜಾ ರಾಜಾ ದಶರಥೋ ಮಹಾನ್ ।
ಶಶಾಸ ಶಮಿತಾಮಿತ್ರೋ ನಕ್ಷತ್ರಾಣೀವ ಚಂದ್ರಮಾಃ ॥ ೨೭ ॥

ಮಹಾಪರಾಕ್ರಮಿ ದಶರಥ ಮಹಾರಾಜ ಶತ್ರುಗಳನ್ನು ನಾಶಪಡಿಸಿ ಆ ನಗರವನ್ನು, ನಕ್ಷತ್ರರಗಳನ್ನು ಚಂದ್ರನಂತೆ, ಆಳುತ್ತಿದ್ದ.

ತಾಂ ಸತ್ಯನಾಮಾಂ ದೃಢತೋರಣಾರ್ಗಲಾಂ
ಗೃಹೈರ್ವಿಚಿತ್ರೈರುಪಶೋಭಿತಾಂ ಶಿವಾಮ್ ।
ಪುರೀಮಯೋಧ್ಯಾಂ ನೃಸಹಸ್ರಸಂಕುಲಾಂ
ಶಶಾಸ ವೈ ಶಕ್ರಸಮೋ ಮಹೀಪತಿಃ ॥ ೨೮ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಷಷ್ಠಃ ಸರ್ಗಃ ॥ ೬ ॥

'ಅಯೋಧ್ಯೆ' ಎಂದು ಯಥಾರ್ಥನಾಮ ಉಳ್ಳ ಆ ನಗರವು ದೃಢವಾದ ಹೆಬ್ಬಾಗಿಲು ಚಿಲಕ ಉಳ್ಳದ್ದು ವಿಚಿತ್ರ ಮನೆಗಳಿಂದ ಶೋಭಿಸಿತ್ತು. ಬಹುಜನರಿಂದ ತುಂಬಿತ್ತು. ಮಂಗಳಕರವಾದ ಆ ಅಯೋಧ್ಯೆಯನ್ನು ಇಂದ್ರಸಮನಾದ ರಾಜಾ ದಶರಥ ಆಳುತ್ತಿದ್ದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಆರನೇ ಸರ್ಗ ಮುಗಿಯಿತು.

ಸಪ್ತಮಃ ಸರ್ಗಃ

ತಸ್ಯಾಮಾತ್ಯಾ ಗುಣೈರಾಸನ್ನಿಕ್ಷ್ವಾಕೋಸ್ತು ಮಹಾತ್ಮನಃ ।
ಮಂತ್ರಜ್ಞಾಶ್ಚೇಂಗಿತಜ್ಞಾಶ್ಚ ನಿತ್ಯಂ ಪ್ರಿಯಹಿತೇ ರತಾಃ ॥ ೧ ॥

ಅಷ್ಟೌ ಬಭೂವುರ್ವೀರಸ್ಯ ತಸ್ಯಾಮಾತ್ಯಾ ಯಶಸ್ವಿನಃ ।
ಶುಚಯಶ್ಚಾನುರಕ್ತಾಶ್ಚ ರಾಜಕೃತ್ಯೇಷು ನಿತ್ಯಶಃ ॥ ೨ ॥

ಮಹಾತ್ಮನಾದ ವೀರನಾದ ದಶರಥ ಮಹಾರಾಜನಿಗೆ ಮಂತ್ರಾಲೋಚನೆ ಬಲ್ಲವರು ಪರರ ಮನದೊಳಗಿನ ಅಭಿಪ್ರಾಯವನ್ನು ಊಹೆಯಿಂದ ತಿಳಿಯ-ಬಲ್ಲವರು ರಾಜನ ಸುಖವನ್ನೂ ಹಿತವನ್ನೂ, ಸದಾ ಬಯಸುವವರೂ ಆದ ಎಂಟು ಮಂದಿ ಮಂತ್ರಿಗಳಿದ್ದರು. ಮಾತಿನಲ್ಲಿ ಅಸತ್ಯ, ಮನದಲ್ಲಿ ಸ್ವಾಮಿದ್ರೋಹದಂಥ ಅಶುಚಿತ್ವವಿಲ್ಲದೆ ಸದಾ ರಾಜಕೃತ್ಯಗಳಲ್ಲಿ ಅನುರಕ್ತರಾಗಿರುವ ಗುಣಗಳಿಂದ ಅವರು 'ಅಮಾತ್ಯ'ರು ಅಂದರೆ ಸಹಭಾಗಿಗಳೇ ಆಗಿದ್ದರು.

ಧೃಷ್ಟಿರ್ಜಯಂತೋ ವಿಜಯಃ ಸಿದ್ಧಾರ್ಥೋ ಹ್ಯರ್ಥಸಾಧಕಃ ।
ಅಶೋಕೋ ಮಂತ್ರಪಾಲಶ್ಚ ಸುಮಂತ್ರಶ್ಚಾಷ್ಟಮೋಽಭವತ್ ॥ ೩ ॥

ಧೃಷ್ಟಿ ಜಯಂತ ವಿಜಯ ಸಿದ್ಧಾರ್ಥ ಅರ್ಥಸಾಧಕ ಅಶೋಕ ಮಂತ್ರಪಾಲ ಮತ್ತು ಸುಮಂತ್ರ -ಹೀಗೆ ಎಂಟು ಮಂತ್ರಿಗಳು.

ಋತ್ವಿಜೌ ದ್ವಾವಭಿಮತೌ ತಸ್ಯಾಸ್ತಾಮೃಷಿಸತ್ತಮೌ ।
ವಸಿಷ್ಠೋ ವಾಮದೇವಶ್ಚ ಮಂತ್ರಿಣಶ್ಚ ತಥಾಽಪರೇ ॥ ೪ ॥

ವಸಿಷ್ಠ ವಾಮದೇವರಿಬ್ಬರು ಋಷಿಶ್ರೇಷ್ಠರು ಪ್ರಧಾನ ಋತ್ವಿಜರಾಗಿದ್ದರು. ಮಂತ್ರಿಗಳೂ ಆಗಿದ್ದರು ಉಳಿದವರು ಋತ್ವಿಜರಾಗಿದ್ದರು.

ಸುಯಜ್ಞೋಽಪ್ಯಥ ಜಾಬಾಲಃ ಕಾಶ್ಯಪೋಽಪ್ಯಥ ಗೌತಮಃ ।
ಮಾರ್ಕಂಡೇಯಸ್ತು ದೀರ್ಘಾಯುಸ್ತಥಾ ಕಾತ್ಯಾಯನೋ ದ್ವಿಜಃ ॥
ಏತೈರ್ಬ್ರಹ್ಮರ್ಷಿಭಿರ್ನಿತ್ಯಮೃತ್ವಿಜಸ್ತಸ್ಯ ಪೌರ್ವಕಾಃ ॥ ೫ ॥

ಸುಯಜ್ಞ, ಜಾಬಾಲ, ಕಾಶ್ಯಪ, ಗೌತಮ, ದೀರ್ಘಾಯುವಾದ ಮಾರ್ಕಂಡೇಯ ಮತ್ತು ಕಾತ್ಯಾಯನ- ಈ ಬ್ರಹ್ಮರ್ಷಿಗಳಿಂದ ಯುಕ್ತರಾಗಿ ಬೇರೆ ಮುನಿಗಳೂ ದಶರಥನಿಗೆ ಪರಂಪರೆಯಿಂದ ಬಂದ ಋತ್ವಿಜರಾಗಿದ್ದರು.

ವಿದ್ಯಾವಿನೀತಾ ಹ್ರೀಮಂತಃ ಕುಶಲಾ ನಿಯತೇಂದ್ರಿಯಾಃ ।
ಪರಸ್ಪರಾನುರಕ್ತಾಶ್ಚ ನೀತಿಮಂತೋ ಬಹುಶ್ರುತಾಃ ॥
ಶ್ರೀಮಂತಶ್ಚ ಮಹಾತ್ಮಾನಃ ಶಸ್ತ್ರಜ್ಞಾ ದೃಢವಿಕ್ರಮಾಃ ॥ ೬ ॥

ಇವರೆಲ್ಲರೂ ವಿದ್ಯೆಯಿಂದ ವಿನೀತರು. ನಾಚಿಕೆ ಉಳ್ಳವರು ನಿಪುಟರು ಇಂದ್ರಿಯ ನಿಗ್ರಹ ಉಳ್ಳವರು ಪರಸ್ಪರ ಪ್ರೀತಿಯಿಂದ ಇದ್ದವರು. ನೀತಿ ಉಳ್ಳವರು ಬಹಳ ಅಧ್ಯಯನ ಮಾಡಿದವರು ಶ್ರೀಮಂತರು ಮಹಾತ್ಮರು ಶಸ್ತ್ರವಿದ್ಯೆ ಬಲ್ಲವರು ದೃಢ ಪರಾಕ್ರಮ ಉಳ್ಳವರಾಗಿದ್ದರು.

ಕೀರ್ತಿಮಂತಃ ಪ್ರಣಿಹಿತಾ ಯಥಾವಚನಕಾರಿಣಃ ।
ತೇಜಃ ಕ್ಷಮಾಯಶಃಪ್ರಾಪ್ತಾಃ ಸ್ಮಿತಪೂರ್ವಾಭಿಭಾಷಿಣಃ ॥
ಕ್ರೋಧಾತ್ಕಾಮಾರ್ಥಹೇತೋರ್ವಾ ನ ಬ್ರೂಯುರನೃತಂ ವಚಃ॥ ೭ ॥

ಇವರು ಕೀರ್ತಿಶಾಲಿಗಳು ರಾಜಕಾರ್ಯದಲ್ಲಿ ಎಚ್ಚರದಿಂದಿರುವವರು ರಾಜಾಜ್ಞೆ-ಯಂತೇ ಕಾರ್ಯ ಮಾಡುವವರು, ತೇಜ ಕ್ಷಮಾ ಯಶಸ್ಸುಗಳನ್ನು ಗಳಿಸಿದವರು ನಗುನಗುತ್ತಾ ಮಾತನಾಡುವವರು ಕೋಪದಿಂದಾಗಲಿ ಕಾಮ-ಅರ್ಥ ಲಾಭಕ್ಕಾಗಿಲಿ ಎಂದೂ ಸುಳ್ಳಾಡಲಾರರು.

ತೇಷಾಮವಿದಿತಂ ಕಿಂಚಿತ್ಸ್ವೇಷು ನಾಸ್ತಿ ಪರೇಷು ವಾ ।
ಕ್ರಿಯಮಾಣಂ ಕೃತಂ ವಾಪಿ ಚಾರೇಣಾಪಿ ಚಿಕೀರ್ಷಿತಮ್ ॥ ೮ ॥

ಸ್ವರಾಷ್ಟ್ರದಲ್ಲಾಗಲಿ ಪರರಾಷ್ಟ್ರದಲ್ಲಾಗಲಿ ಶತ್ರುಗಳು ಮಾಡಿದ್ದು ಮಾಡುತ್ತಿರು-ವುದು ಮುಂದೆ ಮಾಡಲಿರುವುದು ಯಾವುದೂ ಕೂಡ ಈ ಮಂತ್ರಿಗಳಿಗೆ ಗೂಢಚಾರರ ಮೂಲಕ ತಿಳಿಯದೇ ಇರುವುದಿಲ್ಲ.

ಕುಶಲಾ ವ್ಯವಹಾರೇಷು ಸೌಹೃದೇಷು ಪರೀಕ್ಷಿತಾಃ ।
ಪ್ರಾಪ್ತಕಾಲಂ ತು ತೇ ದಂಡಂ ಧಾರಯೇಯುಃ ಸುತೇಷ್ವಪಿ ॥ ೯ ॥

ರಾಜನಿಗೆ ಸಲಹೆ ನೀಡುವುದರಲ್ಲಿ ಕುಶಲರು. ವಿಶ್ವಾಸಯೋಗ್ಯತೆಯ ವಿಷಯ-ದಲ್ಲಿ ರಾಜನಿಂದ ಪರೀಕ್ಷಿಸಲ್ಪಟ್ಟವರು ಅಪರಾಧಕ್ಕೆ ಶಿಕ್ಷೆ ನೀಡುವ ಕಾಲದಲ್ಲಿ ಅಪರಾಧಿಗಳು ತಮ್ಮ ಮಕ್ಕಳೇ ಆಗಿದ್ದರೂ ಶಿಕ್ಷೆ ನೀಡುವರು.

ಕೋಶಸಂಗ್ರಹಣೇ ಯುಕ್ತಾ ಬಲಸ್ಯ ಚ ಪರಿಗ್ರಹೇ ।
ಅಹಿತಂ ವಾಪಿ ಪುರುಷಂ ನ ವಿಹಿಂಸ್ಯುರದೂಷಕಮ್ ॥ ೧೦ ॥

ಧನಸಂಗ್ರಹದಲ್ಲಿಯೂ ಸೈನ್ಯ ಸಂಗ್ರಹದಲ್ಲಿಯೂ ಲಕ್ಷ್ಯವಿಡುವವರು, ತಮಗಾಗದವರನ್ನೂ ಕೂಡ ಅವರು ಅಪರಾಧ ಮಾಡದಿದ್ದಾಗ ಹಿಂಸಿಸಲಾರರು.

ವೀರಾಶ್ಚ ನಿಯತೋತ್ಸಾಹಾ ರಾಜಶಾಸ್ತ್ರಮನುಷ್ಠಿತಾಃ ।
ಶುಚೀನಾಂ ರಕ್ಷಿತಾರಶ್ಚ ನಿತ್ಯಂ ವಿಷಯವಾಸಿನಾಮ್ ॥ ೧೧ ॥

ವೀರರು ಸದಾ ಉತ್ಸಾಹಿಗಳು ನೀತಿಶಾಸ್ತ್ರದಿ ಅನುಷ್ಠಾನ ಮಾಡುವವರು. ದೇಶವಾಸಿಗಳು ಸಜ್ಜನರಾಗಿದ್ದರೆ ಸದಾ ರಕ್ಷಿಸುವರು.

ಬ್ರಹ್ಮ ಕ್ಷತ್ರಮಹಿಂಸಂತಸ್ತೇ ಕೋಶಂ ಸಮಪೂರಯನ್ ।
ಸುತೀಕ್ಷ್ಣದಂಡಾಃ ಸಂಪ್ರೇಕ್ಷ್ಯ ಪುರುಷಸ್ಯ ಬಲಾಬಲಮ್ ॥ ೧೨ ॥

ಬ್ರಾಹ್ಮಯ ಮತ್ತು ಕ್ಷತ್ರಿಯರನ್ನು ಹಿಂಸಿಸದೇ ಕೋಶವನ್ನು ಭರ್ತಿ ಮಾಡು-ತ್ತಿದ್ದರು. ಅಪರಾಧಿಯ ಅಪರಾಧ ತಾರತಮ್ಯವನ್ನು ಗಮನದಲ್ಲಿಟ್ಟುಕೊಂಡೇ ತೀಕ್ಷ್ಣದಂಡನೆ ವಿಧಿಸುತ್ತಿದ್ದರು.

ಶುಚೀನಾಮೇಕಬುದ್ಧೀನಾಂ ಸರ್ವೇಷಾಂ ಸಂಪ್ರಜಾನತಾಮ್ ।
ನಾಸೀತ್ಪುರೇ ವಾ ರಾಷ್ಟ್ರೇ ವಾ ಮೃಷಾವಾದೀ ನರಃ ಕ್ವಚಿತ್ ॥ ೧೩ ॥

ಪರಸ್ಪರವಾಗಿ ಶುದ್ಧವಾದ ಒಂದೇ ಮನಸ್ಸಿನಿಂದ ಈ ಮಂತ್ರಿಗಳು ರಾಜ್ಯದ ಸುಸ್ಥಿತಿಯನ್ನು ವಿಚಾರ ಮಾಡುವಾಗ, ಅವರಿಗೆ ನಗರದಲ್ಲಾಗಲಿ ಗ್ರಾಮಗಳಲ್ಲಾಗಲಿ ಸುಳ್ಳಾಡುವ ವ್ಯಕ್ತಿ ಎಲ್ಲೂ ಕಂಡುಬರಲಿಲ್ಲ.

ಕಶ್ಚಿನ್ನ ದುಷ್ಟಸ್ತತ್ರಾಸೀತ್ಪರದಾರರತೋ ನರಃ ।
ಪ್ರಶಾಂತಂ ಸರ್ವಮೇವಾಸೀದ್ರಾಷ್ಟ್ರಂ ಪುರವರಂ ಚ ತತ್ ॥ ೧೪ ॥

ಪರಸ್ತ್ರೀಸಂಗ ಮಾಡುವ ದುಷ್ಟನೊಬ್ಬನೂ ಅಯೋಧ್ಯೆಯಲ್ಲಿ ಇರಲಿಲ್ಲ. ಪುರವಾಗಲಿ ಗ್ರಾಮವಾಗಲಿ ಎಲ್ಲವೂ ಪ್ರಶಾಂತವಾಗಿತ್ತು.

ಸುವಾಸಸಃ ಸುವೇಷಾಶ್ಚ ತೇ ಚ ಸರ್ವೇ ಸುಶೀಲಿನಃ ।
ಹಿತಾರ್ಥಂ ಚ ನರೇಂದ್ರಸ್ಯ ಜಾಗ್ರತೋ ನಯಚಕ್ಷುಷಾ ॥ ೧೫ ॥

ಮಂತ್ರಿಗಳು ಎಲ್ಲರೂ ಒಳ್ಳೆಯ ಬಟ್ಟೆ ಒಳ್ಳೆಯ ವೇಷ ಧರಿಸುತ್ತಿದ್ದರು. ಒಳ್ಳೆ ಶೀಲದವರಾಗಿದ್ದರು ರಾಜನ ಹಿತಕ್ಕಾಗಿ ನೀತಿಶಾಸ್ತ್ರ ದೃಷ್ಟಿಯಿಂದ ಎಚ್ಚೆತ್ತುಕೊಂಡೇ ಇರುತ್ತಿದ್ದರು.

ಗುರೌ ಗುಣಗೃಹೀತಾಶ್ಚ ಪ್ರಖ್ಯಾತಾಶ್ಚ ಪರಾಕ್ರಮೇ ।
ವಿದೇಶೇಷ್ವಪಿ ವಿಜ್ಞಾತಾಃ ಸರ್ವತೋ ಬುದ್ಧಿನಿಶ್ಚಯಾತ್ ॥ ೧೬ ॥

ಗುರುಗಳಲ್ಲಿ ಗುಣಗಳನ್ನೇ ಕಂಡುಕೊಳ್ಳುತ್ತಿದ್ದರು. ಪರಾಕ್ರಮದಲ್ಲಿ ಪ್ರಖ್ಯಾತರಿರುತ್ತಿದ್ದರು. ಅತೀತಾನಾಗತವಿಷಯಗಳಲ್ಲಿ ಎಲ್ಲ ಕಡೆ ನಿಶ್ಚಿತ ಜ್ಞಾನ ಉಳ್ಳವರೆಂದು ವಿದೇಶಗಳಲ್ಲಿ ಕೂಡ ಪ್ರಸಿದ್ಧರಾಗಿದ್ದರು.

ಸಂಧಿವಿಗ್ರಹತತ್ತ್ವಜ್ಞಾಃ ಪ್ರಕೃತ್ಯಾ ಸಂಪದಾನ್ವಿತಾಃ ।
ಮಂತ್ರಸಂವರಣೇ ಶಕ್ತಾಃ ಶ್ಲಕ್ಷ್ಣಾಃ ಸೂಕ್ಷ್ಮಾಸು ಬುದ್ಧಿಷು ॥
ನೀತಿಶಾಸ್ತ್ರವಿಶೇಷಜ್ಞಾಃ ಸತತಂ ಪ್ರಿಯವಾದಿನಃ ॥ ೧೭ ॥

ಈ ಮಂತ್ರಿಗಳು ಸಂಧಿ-ವಿಗ್ರಹಗಳ ಸ್ವರೂಪವನ್ನು ಬಲ್ಲವರು ಸ್ವಭಾವದಿಂದಲೇ ಸಂಪದ್ಯುಕ್ತರು ಧನಾರ್ಜನ ಚಾಪಲ್ಯಕ್ಕೊಳಗಾಗುವವರಲ್ಲ. ರಾಜನ ಮಂತ್ರಾಲೋಚನೆಯನ್ನು ರಹಸ್ಯವಾಗಿರಿಸಲು ಶಕ್ತರು. ಸೂಕ್ಷ್ಮವಿಚಾರಗಳಲ್ಲಿ ಅವರಿಗೆ ಶ್ರಮವಿಲ್ಲದೇ ತಕ್ಷಣ ಪ್ರತಿಭೆ ಅರಳುವುದು. ನೀತಿಶಾಸ್ತ್ರಗಳಲ್ಲಿ ವಿಶೇಷ ತಜ್ಞರು, ಸದಾ ಪ್ರಿಯವಾದಿಗಳು.

ಈದೃಶೈಸ್ತೈರಮಾತ್ಯೈಶ್ಚ ರಾಜಾ ದಶರಥೋಽನಘಃ ।
ಉಪಪನ್ನೋ ಗುಣೋಪೇತೈರನ್ವಶಾಸದ್ವಸುಂಧರಾಮ್ ॥ ೧೮ ॥

ಇಂಥ ಗುಣವಂತರಾದ ಮಂತ್ರಿಗಳ ಸಹಾಯದಿಂದ ಪಾಪರಹಿತನಾದ ರಾಜಾ ದಶರಥನು ಭೂಮಿಯನ್ನಾಳಿದ.

ಅವೇಕ್ಷಮಾಣಶ್ಚಾರೇಣ ಪ್ರಜಾ ಧರ್ಮೇಣ ರಂಜಯನ್ ।
ಪ್ರಜಾನಾಂ ಪಾಲನಂ ಕುರ್ವನ್ನಧರ್ಮಂ ಪರಿವರ್ಜಯನ್ ॥ ೧೯ ॥

ಗೂಢಚರರಿಂದ ಎಲ್ಲ ತಿಳಿಯುತ್ತ ಧರ್ಮದಿಂದ ಪ್ರಜೆಗಳನ್ನು ಸಂತೋಷ ಪಡಿಸುತ್ತ, ಅಧರ್ಮವನ್ನು ದೂರ ಮಾಡುತ್ತ ಪ್ರಜಾಪಾಲನ ಮಾಡುತ್ತಿದ್ದ.

ವಿಶ್ರುತಸ್ತ್ರಿಷು ಲೋಕೇಷು ವದಾನ್ಯಃ ಸತ್ಯಸಂಗರಃ ।
ಸ ತತ್ರ ಪುರುಷವ್ಯಾಘ್ರಃ ಶಶಾಸ ಪೃಥಿವೀಮಿಮಾಮ್ ॥ ೨೦ ॥

ಉದಾರಿಯಾಗಿ ದಾನ ಮಾಡುವವನು ಮತ್ತು ರಣರಂಗದಲ್ಲಿ ಸದಾ ಜಯಶಾಲಿ ಎಂದು ಮೂಲೋಕದಲ್ಲಿ ಪ್ರಸಿದ್ಧನಾದವನು ರಾಜಾ ದಶರಥ. ಇಂಥ ಮಹಾಪುರುಷನು ಈ ಭೂಮಿಯನ್ನಾಳಿದ.

ನಾಧ್ಯಗಚ್ಛದ್ವಿಶಿಷ್ಟಂ ವಾ ತುಲ್ಯಂ ವಾ ಶತ್ರುಮಾತ್ಮನಃ ।
ಮಿತ್ರವಾನ್ನತಸಾಮಂತಃ ಪ್ರತಾಪಹತಕಂಟಕಃ ॥
ಸ ಶಶಾಸ ಜಗದ್ರಾಜಾ ದಿವಂ ದೇವಪತಿರ್ಯಥಾ ॥ ೨೧ ॥

ರಾಜಾ ದಶರಥನಿಗೆ ತನಗಿಂತ ಹೆಚ್ಚಿನವನಾಗಲಿ ಸಮನಾಗಲಿ ಶತ್ರು ಕಂಟಕವನ್ನು ನಿವಾರಿಸಿಕೊಳ್ಳುವ ಆತನಿಗೆ ಸಾಮಂತರು ತಲೆ ಬಾಗುತ್ತಿದ್ದರು. ದೇವೇಂದ್ರನು ದೇವಲೋಕವನ್ನಾಳುವಂತೇ ದಶರಥ ಭೂಮಿಯನ್ನಾಳಿದ.

ತೈರ್ಮಂತ್ರಿಭಿರ್ಮಂತ್ರಹಿತೇ ನಿಯುಕ್ತೈ-
ರ್ವೃತೋಽನುರಕ್ತೈಃ ಕುಶಲೈಃ ಸಮರ್ಥೈಃ ।
ಸ ಪಾರ್ಥಿವೋ ದೀಪ್ತಿಮವಾಪ ಯುಕ್ತ
ಸ್ತೇಜೋಮಯೈರ್ಗೋಭಿರಿವೋದಿತೋಽರ್ಕಃ ॥ ೨೨ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಸಪ್ತಮಃ ಸರ್ಗಃ ॥ ೭ ॥

ಮಂತ್ರಾಲೋಚನೆಯಲ್ಲಿಯೂ ಅದರಿಂದ ಹಿತವನ್ನು ಸಾಧಿಸುವಲ್ಲಿಯೂ ನಿಯುಕ್ತರೂ ಅನುರಕ್ತರೂ ಕುಶಲರೂ ಸಮರ್ಥರೂ ಆದ ಮಂತ್ರಿಗಳಿಂದ ಯುಕ್ತನಾದ ರಾಜಾ ದಶರಥನು ತೇಜೋಮಯವಾದ ಕಿರಣಗಳಿಂದ ಯುಕ್ತನಾಗಿ ಉದಿಸಿದ ಸೂರ್ಯನಂತೆ ದೀಪ್ತಿಯನ್ನು ಹೊಂದಿದ್ದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಏಳನೇ ಸರ್ಗ ಮುಗಿಯಿತು.

ಅಷ್ಟಮಃ ಸರ್ಗಃ

ತಸ್ಯ ತ್ವೇವಂಪ್ರಭಾವಸ್ಯ ಧರ್ಮಜ್ಞಸ್ಯ ಮಹಾತ್ಮನಃ ।
ಸುತಾರ್ಥಂ ತಪ್ಯಮಾನಸ್ಯ ನಾಸೀದ್ವಂಶಕರಃ ಸುತಃ ॥ ೧ ॥

ಇಂಥ ಪ್ರಭಾವ ಉಳ್ಳವನೇ ಆದರೂ ಧರ್ಮಜ್ಞ ಮಹಾತ್ಮನಾದ ರಾಜಾ ದಶರಥನಿಗೆ ವಂಶವನ್ನು ಬೆಳೆಸುವಂಥ ಪುತ್ರಪುತ್ರನಿಗಾಗಿ ತಪಗೈದರೂ ಲಭಿಸಲಿಲ್ಲ.

ಚಿಂತಯಾನಸ್ಯ ತಸ್ಯೈವ ಬುದ್ಧಿರಾಸೀನ್ಮಹಾತ್ಮನಃ ।
ಸುತಾರ್ಥೀ ವಾಜಿಮೇಧೇನ ಕಿಮರ್ಥಂ ನ ಯಜಾಮ್ಯಹಮ್ ॥ ೨ ॥

ಮಹಾತ್ಮ ದಶರಥನಿಗೆ ತಪಸ್ಸಿನಿಂದಲೂ ಪಡೆಯಲಾಗದ ಪುತ್ರನನ್ನು ಹೇಗೆ ಪಡೆಯಬೇಕೆಂದು ಚಿಂತೆಯಾಯಿತು. ಆಗ ಪುತ್ರ ಕಾಮನೆಯಿಂದ ಅಶ್ವಮೇಧ ಯಾಗವನ್ನೇಕೆ ನಾನು ಮಾಡಬಾರದು ಎನ್ನುವ ಆಲೋಚನೆ ಬಂದಿತು.

ಸ ನಿಶ್ಚಿತಾಂ ಮತಿಂ ಕೃತ್ವಾ ಯಷ್ಟವ್ಯಮಿತಿ ಬುದ್ಧಿಮಾನ್ ।
ಮಂತ್ರಿಭಿಃ ಸಹ ಧರ್ಮಾತ್ಮಾ ಸರ್ವೈರೇವ ಕೃತಾತ್ಮಭಿಃ ॥ ೩ ॥

ಬುದ್ಧಿಶಾಲಿಯಾದ ಧರ್ಮಾತ್ಮ ದಶರಥನು ಬುದ್ಧಿಶಾಲಿಗಳಾದ ಎಲ್ಲ ಮಂತ್ರಿ-ಗಳೊಡನೆ ಸಮಾಲೋಚನೆ ನಡೆಸಿ ಅಶ್ವಮೇಧಯಾಗವನ್ನೇ ಮಾಡುವುದೆಂದು ದೃಢ ಸಂಕಲ್ಪ ಮಾಡಿ ಸುಮಂತ್ರನನ್ನು ಕರೆಸಿಕೊಂಡ.

ತತೋಽಬ್ರವೀದಿದಂ ರಾಜಾ ಸುಮಂತ್ರಂ ಮಂತ್ರಿಸತ್ತಮಮ್ ।
ಶೀಘ್ರಮಾನಯ ಮೇ ಸರ್ವಾನ್ ಗುರೂಂಸ್ತಾನ್ಸಪುರೋಹಿತಾನ್॥ ೪ ॥

ಮಂತ್ರಿಶ್ರೇಷ್ಠನಾದ ಸುಮಂತ್ರನಿಗೆ ರಾಜ ನುಡಿದ. 'ನನ್ನ ಎಲ್ಲ ಗುರುಗಳನ್ನೂ ಜೊತೆಗೆ ಪುರೋಹಿತರನ್ನೂ ಬೇಗನೆ ಕರೆ ತಾ' ಎಂದು.

ತತಃ ಸುಮಂತ್ರಸ್ತ್ವರಿತಂ ಗತ್ವಾ ತ್ವರಿತವಿಕ್ರಮಃ ।
ಸಮಾನಯತ್ಸ ತಾನ್ಸರ್ವಾನ್ಸಮಸ್ತಾನ್ವೇದಪಾರಗಾನ್ ॥ ೫ ॥

ಸುಮಂತ್ರನು ಬೇಗನೆ ಎಲ್ಲ ಕೆಲಸ ಮಾಡಬಲ್ಲವನು. ಬೇಗನೆ ಹೋಗಿ ವೇದಪಾರಂಗತರಾದ ಅವರೆಲ್ಲರನ್ನೂ ಜೊತೆಗೇ ಕರೆತಂದ.

ಸುಯಜ್ಞಂ ವಾಮದೇವಂ ಚ ಜಾಬಾಲಮಥ ಕಾಶ್ಯಪಮ್ ।
ಪುರೋಹಿತಂ ವಸಿಷ್ಠಂ ಚ ಯೇ ಚಾನ್ಯೇ ದ್ವಿಜಸತ್ತಮಾಃ ॥ ೬ ॥

ಸುಯಜ್ಞ ವಾಮದೇವ ಜಾಬಾಲ ಕಾಶ್ಯಪ ಪುರೋಹಿತ ವಸಿಷ್ಠರನ್ನು ಮತ್ತು ಬೇರೆ ಬ್ರಾಹ್ಮಣೋತ್ತಮರನ್ನೂ ಕರೆತಂದ.

ತಾನ್ಪೂಜಯಿತ್ವಾ ಧರ್ಮಾತ್ಮಾ ರಾಜಾ ದಶರಥಸ್ತದಾ ।
ಇದಂ ಧರ್ಮಾರ್ಥಸಹಿತಂ ವಾಕ್ಯಂ ಶ್ಲಕ್ಷ್ಣಮಥಾಬ್ರವೀತ್ ॥ ೭ ॥

ಅವರನ್ನು ಧರ್ಮಾತ್ಮ ರಾಜಾ ದಶರಥನು ಸತ್ಕರಿಸಿ ಧರ್ಮ ಮತ್ತು ಅರ್ಥ–ಗಳಿಂದ ಕೂಡಿದ ಮಾತನ್ನು ನಯವಾಗಿ ಹೇಳಿದ.

ಮಮ ಲಾಲಪ್ಯಮಾನಸ್ಯ ಪುತ್ರಾರ್ಥಂ ನಾಸ್ತಿ ವೈ ಸುಖಮ್ ।
ತದರ್ಥಂ ಹಯಮೇಧೇನ ಯಕ್ಷ್ಯಾಮೀತಿ ಮತಿರ್ಮಮ ॥ ೮ ॥

'ಪುತ್ರನಿಗಾಗಿ ವಿಲಾಪ ಮಾಡುತ್ತಿರುವ ನನಗೆ ಯಾವುದರಲ್ಲಿಯೂ ಸುಖವಿಲ್ಲ. ಅದಕ್ಕೆ ಅಶ್ವಮೇಧಯಾಗ ಮಾಡಬೇಕೆಂದು ನಾನು ಸಂಕಲ್ಪಿಸಿದ್ದೇನೆ.

ತದಹಂ ಯಷ್ಟುಮಿಚ್ಛಾಮಿ ಶಾಸ್ತ್ರದೃಷ್ಟೇನ ಕರ್ಮಣಾ ।
ಕಥಂ ಪ್ರಾಪ್ಸ್ಯಾಮ್ಯಹಂ ಕಾಮಂ ಬುದ್ಧಿರತ್ರ ವಿಚಾರ್ಯತಾಮ್॥ ೯ ॥

ಆ ಯಾಗವನ್ನು ಶಾಸ್ತ್ರೋಕ್ತವಿಧಿಯಿಂದ ಮಾಡಲು ಬಯಸುತ್ತೇನೆ. ಈ ಬಯಕೆ–ಯನ್ನು ಹೇಗೆ ಪೂರೈಸಿಕೊಂಡೇನು? ಅದಕ್ಕೇನು ಉಪಾಯ ಆಲೋಚಿಸೋಣ.'

ತತಃ ಸಾಧ್ವಿತಿ ತದ್ವಾಕ್ಯಂ ಬ್ರಾಹ್ಮಣಾಃ ಪ್ರತ್ಯಪೂಜಯನ್ ।
ವಸಿಷ್ಠಪ್ರಮುಖಾಃ ಸರ್ವೇ ಪಾರ್ಥಿವಸ್ಯ ಮುಖಾಚ್ಚ್ಯುತಮ್॥ ೧೦ ॥

ಆಗ ರಾಜನ ಆ ಮಾತನ್ನು 'ನೀನು ಹೇಳುವುದು ಸರಿಯೆ' ಎಂದು ಬ್ರಾಹ್ಮಣರು ವಸಿಷ್ಠಾದಿಗಳೆಲ್ಲರೂ ಹೊಗಳಿದರು.

ಊಚುಶ್ಚ ಪರಮಪ್ರೀತಾಃ ಸರ್ವೇ ದಶರಥಂ ವಚಃ ।
ಸಂಭಾರಾಃ ಸಂಭ್ರಿಯಂತಾಂ ತೇ ತುರಂಗಶ್ಚ ವಿಮುಚ್ಯತಾಮ್ ॥
ಸರಯ್ವಾಶ್ಚೋತ್ತರೇ ತೀರೇ ಯಜ್ಞಭೂಮಿರ್ವಿಧೀಯತಾಮ್ ॥ ೧೧ ॥

ಎಲ್ಲರೂ ಪರಮ ಸಂತುಷ್ಟರಾಗಿ ದಶರಥನಿಗೆ ಹೇಳಿದರು, 'ಯಜ್ಞದ

ಸಲಕರಣೆಗಳನ್ನೆಲ್ಲ ಸಿದ್ಧ ಪಡಿಸೋಣ. ಯಾಗದ ಕುದುರೆಯನ್ನು ಭೂಮಂಡಲ-ವನ್ನು ಸುತ್ತಲು ಬಿಡೋಣ. ಸರಯೂ ನದಿಯ ಉತ್ತರತೀರದಲ್ಲಿ ಯಜ್ಞಶಾಲೆ-ಯನ್ನು ನಿರ್ಮಾಣ ಮಾಡಿಸೋಣ.

ಸರ್ವಥಾ ಪ್ರಾಪ್ಸ್ಯಸೇ ಪುತ್ರಾನಭಿಪ್ರೇತಾಂಶ್ಚ ಪಾರ್ಥಿವ ।
ಯಸ್ಯ ತೇ ಧಾರ್ಮಿಕೀ ಬುದ್ಧಿರಿಯಂ ಪುತ್ರಾರ್ಥಮಾಗತಾ ॥ ೧೨ ॥

ರಾಜನೆ, ಪುತ್ರಲಾಭಕ್ಕಾಗಿ ಧರ್ಮಕಾರ್ಯ ನಡೆಸುವ ಬುದ್ಧಿ ನಿನಗೆ ಬಂದಿದೆ ಎಂದ ಮೇಲೆ ಸರ್ವಥಾ ನೀನು ನಿನ್ನ ಅಭೀಷ್ಟದಂತೇ ಪುತ್ರರನ್ನು ಪಡೆಯುವೆ,' ಎಂದರು.

ತತಃ ಪ್ರೀತೋಽಭವದ್ರಾಜಾ ಶ್ರುತ್ವೈತದ್ದ್ವಿಜಭಾಷಿತಮ್ ।
ಅಮಾತ್ಯಾಂಶ್ಚಾಬ್ರವೀದ್ರಾಜಾ ಹರ್ಷಪರ್ಯಾಕುಲೇಕ್ಷಣಃ ॥ ೧೩ ॥

ರಾಜನು ಬ್ರಾಹ್ಮಣರ ಈ ಮಾತನ್ನಾಲಿಸಿ ಸಂತುಷ್ಟನಾದ. ಕಣ್ಣಲ್ಲಿ ಹರ್ಷಾಶ್ರು ಹರಿಸಿದ ಅಮಾತ್ಯರಿಗೆ ಹೇಳಿದ.

ಸಂಭಾರಾಃ ಸಂಭ್ರಿಯಂತಾಂ ಮೇ ಗುರೂಣಾಂ ವಚನಾದಿಹ ।
ಸಮರ್ಥಾಧಿಷ್ಠಿತಶ್ಚಾಶ್ವಃ ಸೋಪಾಧ್ಯಾಯೋ ವಿಮುಚ್ಯತಾಮ್ ॥ ೧೪ ॥

'ಯಜ್ಞ ಸಾಮಗ್ರಿಗಳನ್ನು ಸಿದ್ಧ ಪಡಿಸೋಣ. ಗುರುಗಳ ಆದೇಶದಂತೆ ಸಮರ್ಥರಾದ ವೀರರ ರಕ್ಷಣೆಯಲ್ಲಿ ಉಪಾಧ್ಯಾಯರೊಂದಿಗೆ ಯಾಗಾಶ್ವವನ್ನು ಭೂಮಂಡಲದಲ್ಲೆಲ್ಲ ಸುತ್ತಿ ಬರಲು ಬಿಡೋಣ.'

ಸರಯ್ವಾಶ್ಚೋತ್ತರೇ ತೀರೇ ಯಜ್ಞಭೂಮಿರ್ವಿಧೀಯತಾಮ್ ।
ಶಾಂತಯಶ್ಚಾಭಿವರ್ಧಂತಾಂ ಯಥಾಕಲ್ಪಂ ಯಥಾವಿಧಿ ॥ ೧೫ ॥

ಸರಯೂ ನದಿಯ ಉತ್ತರ ತೀರದಲ್ಲಿ ಯಜ್ಞಶಾಲೆಯನ್ನು ನಿರ್ಮಾಣ ಮಾಡಿಸೋಣ. ಶಾಂತಿಕರ್ಮಗಳನ್ನೂ ಯಥಾಕ್ರಮವಾಗಿ ವಿಧ್ಯುಕ್ತವಾಗಿ ಬಹುವಾಗಿ ನಡೆಸೋಣ.

ಶಕ್ಯಃ ಕರ್ತುಮಯಂ ಯಜ್ಞಃ ಸರ್ವೈರಪಿ ಮಹೀಕ್ಷಿತಾ ।
ನಾಪರಾಧೋ ಭವೇತ್ಕಷ್ಟೋ ಯದ್ಯಸ್ಮಿನ್ಕ್ರತುಸತ್ತಮೇ ॥ ೧೬ ॥

ಎಲ್ಲ ರಾಜರಿಂದಲೂ ಈ ಯಾಗವನ್ನು ಮಾಡಲು ಶಕ್ಯವೆ? ಈ ಶ್ರೇಷ್ಠ-ಯಾಗದಲ್ಲಿ ಏನೂ ತಪ್ಪಾಗಬಾರದು. ತಪ್ಪೇನಾದರೂ ಆದರೆ ಕಷ್ಟ. ಅದರಿಂದ ತಪ್ಪಾಗದಂತೇ ನೋಡಿಕೊಳ್ಳಬೇಕಾಗುತ್ತದೆ.

ಛಿದ್ರಂ ಹಿ ಮೃಗಯಂತೇಽತ್ರ ವಿದ್ವಾಂಸೋ ಬ್ರಹ್ಮರಾಕ್ಷಸಾಃ ।
ನಿಹತಸ್ಯ ಚ ಯಜ್ಞಸ್ಯ ಸದ್ಯಃ ಕರ್ತಾ ವಿನಶ್ಯತಿ ॥ ೧೭ ॥

ಹಿಂದೆ ಯಜ್ಞದಲ್ಲಿ ತಾವು ತಪ್ಪು ಮಾಡಿ ಈಗ ಬ್ರಹ್ಮರಾಕ್ಷಸರಾದ ಬ್ರಾಹ್ಮಣರು, ಈ ನಮ್ಮ ಯಜ್ಞದಲ್ಲಿ ಏನು ತಪ್ಪಾಯಿತೆಂದು ತಿಳಿಯಬಲ್ಲ ವಿದ್ವಾಂಸರೇ ಆಗಿರುತ್ತಾರೆ. ಅವರು ಎಲ್ಲಿ ತಪ್ಪಾಯಿತೆಂದು ಹುಡುಕುತ್ತಾರೆ. ಅದರಿಂದ ಯಜ್ಞ ನಿಂತುಹೋದರೆ ಯಜಮಾನ ಒಡನೆ ನಾಶವಾಗುತ್ತಾನೆ.

ತದ್ಯಥಾ ವಿಧಿಪೂರ್ವಂ ಮೇ ಕ್ರತುರೇಷ ಸಮಾಪ್ಯತೇ ।
ತಥಾ ವಿಧಾನಂ ಕ್ರಿಯತಾಂ ಸಮರ್ಥಾಃ ಕರಣೇಷ್ವಿಹ ॥ ೧೮ ॥

ಅದರಿಂದ ಕರ್ಮಾಚರಣೆಗಳಲ್ಲಿ ಸಮರ್ಥರಾದ ನೀವೆಲ್ಲರೂ ನನ್ನ ಯಜ್ಞದಲ್ಲಿ ಏನೂ ತಪ್ಪಿಲ್ಲದೆ ವಿಧ್ಯುಕ್ತವಾಗಿ ನಡೆದು ಅದು ಸಮಾಪ್ತಿ ಹೊಂದುವಂತೆ ನೋಡಿ-ಕೊಳ್ಳಿರಿ.'

ಸರ್ವಯಜ್ಞ ಭೋಕ್ತನಾದ ಶ್ರೀಹರಿಗೆ ಯಜ್ಞವು ಅತಿಪ್ರಿಯ. ಶ್ರದ್ಧೆಯಿಂದ ಮಾಡಿದರೆ ಪ್ರಮಾದ ವಶದಿಂದ ಆಗುವ ಎಲ್ಲ ತಪ್ಪುಗಳನ್ನೂ ಅವನು ಕ್ಷಮಿಸುತ್ತಾನೆ. ಆದರೆ, ನಿಷ್ಕಾಮನೆಯಿಂದ ಮಾಡಬೇಕು. ಇದೀಗ ಪುತ್ರ ಕಾಮನೆಯಿಂದ ಮಾಡುವ ಯಜ್ಞ. ಇಲ್ಲಿ ತಪ್ಪು ಬಲು ಅಪಾಯಕಾರಿ.

ತಥೇತಿ ಚಾಬ್ರುವನ್ಸರ್ವೇ ಮಂತ್ರಿಣಃ ಪ್ರತ್ಯಪೂಜಯನ್ ।
ಪಾರ್ಥಿವೇಂದ್ರಸ್ಯ ತದ್ವಾಕ್ಯಂ ಯಥಾಜ್ಞಪ್ತಂ ನಿಶಮ್ಯ ತೇ ॥ ೧೯ ॥

'ಹಾಗೇ ಆಗಲಿ' ಎಂದರು ಎಲ್ಲ ಮಂತ್ರಿಗಳು. ಮಹಾರಾಜನ ಮಾತನ್ನು ಕೇಳಿ 'ನೀನು ಹೇಗೆ ಆಜ್ಞಾಪಿಸಿದೆಯೋ ಹಾಗೇ ಮಾಡುವೆವು' ಎನ್ನುತ್ತ ಶಿರಸಾ ವಹಿಸಿದರು.

ತಥಾ ದ್ವಿಜಾಸ್ತೇ ಧರ್ಮಜ್ಞಾ ವರ್ಧಯಂತೋ ನೃಪೋತ್ತಮಮ್ ।
ಅನುಜ್ಞಾತಾಸ್ತತಃ ಸರ್ವೇ ಪುನರ್ಜಗ್ಮುರ್ಯಥಾಗತಮ್ ॥ ೨೦ ॥

ಧರ್ಮಜ್ಞರಾದ ಆ ಬ್ರಾಹ್ಮಣರು ಎಲ್ಲರೂ ಮಹಾರಾಜನನ್ನು ಹರಸಿ ಅನುಜ್ಞೆ ಪಡೆದು, ಬಂದ ಹಾಗೇ ಹಿಂತಿರುಗಿದರು.

ವಿಸರ್ಜಯಿತ್ವಾ ತಾನ್ವಿಪ್ರಾನ್ಸಚಿವಾನಿದಮಬ್ರವೀತ್ ।
ಋತ್ವಿಗ್ಭಿರುಪದಿಷ್ಟೋಽಯಂ ಯಥಾವತ್ಕ್ರತುರಾಪ್ಯತಾಮ್ ॥ ೨೧ ॥

ಆ ಬ್ರಾಹ್ಮಣರನ್ನು ಕಳಿಸಿ ದಶರಥನು ಮಂತ್ರಿಗಳಿಗೆ ಹೇಳಿದ– 'ಋತ್ವಿಜರು ಹೇಳಿದಂತೇ ಯಥಾವತ್ತಾಗಿ ಯಜ್ಞಕಾರ್ಯವನ್ನು ನಡೆಸೋಣ' ಎಂದು.

ಇತ್ಯುಕ್ತ್ವಾ ನೃಪಶಾರ್ದೂಲಃ ಸಚಿವಾನ್ಸಮುಪಸ್ಥಿತಾನ್ ।
ವಿಸರ್ಜಯಿತ್ವಾ ಸ್ವಂ ವೇಶ್ಮ ಪ್ರವಿವೇಶ ಮಹಾಮತಿಃ ॥ ೨೨ ॥

ಸರ್ವಜ್ಞನಾದ ಮಹಾರಾಜನು ಅಲ್ಲಿ ಬಂದು ಸೇರಿದ್ದ ಮಂತ್ರಿಗಳನ್ನು ಹಿಂದಕ್ಕೆ ಕಳಿಸಿ ತನ್ನ ಅರಮನೆಯನ್ನು ಪ್ರವೇಶಿಸಿದ.

ತತಃ ಸ ಗತ್ವಾ ತಾಃ ಪತ್ನೀರ್ನರೇಂದ್ರೋ ಹೃದಯಪ್ರಿಯಾಃ ।
ಉವಾಚ ದೀಕ್ಷಾಂ ವಿಶತ ಯಕ್ಷ್ಯೇಽಹಂ ಸುತಕಾರಣಾತ್ ॥ ೨೩ ॥

ಬಳಿಕ ಅಂತಃಪುರಕ್ಕೆ ಹೋಗಿ ಹೃದಯಪ್ರಿಯರಾದ ಪತ್ನಿಯರನ್ನು 'ನಾನು ಪುತ್ರಕಾಮನೆಯಿಂದ ಯಜ್ಞ ಮಾಡುತ್ತಿದ್ದೇನೆ, ನೀವು ದೀಕ್ಷಾ ಪ್ರವೇಶಕ್ಕೆ ಸಿದ್ಧರಾಗಿರಿ' ಎಂದನು.

ತಾಸಾಂ ತೇನಾತಿಕಾಂತೇನ ವಚನೇನ ಸುವರ್ಚಸಾಮ್ ।
ಮುಖಪದ್ಮಾನ್ಯಶೋಭಂತ ಪದ್ಮಾನೀವ ಹಿಮಾತ್ಯಯೇ ॥ ೨೪ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇಽಷ್ಟಮಃ ಸರ್ಗಃ ॥ ೮ ॥

ಅತಿ ಪ್ರಿಯವಾದ ಈ ಮಾತಿನಿಂದ ಒಳ್ಳೆಯ ಕಾಂತಿಯುಳ್ಳ ಆ ಪತ್ನಿಯರ ಮುಖಕಮಲಗಳು ವಸಂತ ಬಂದಾಗ ಅರಳುವ ಕಮಲಗಳಂತೇ ಅರಳಿ ಶೋಭಿಸಿದುವು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಎಂಟನೆ ಸರ್ಗ ಮುಗಿಯಿತು.

ನವಮಃ ಸರ್ಗಃ

ಏತಚ್ಛ್ರುತ್ವಾ ರಹಃ ಸೂತೋ ರಾಜಾನಮಿದಮಬ್ರವೀತ್ ।
ಶ್ರೂಯತಾಂ ತತ್ಪುರಾವೃತ್ತಂ ಪುರಾಣೇ ಚ ಮಯಾ ಶ್ರುತಮ್ ॥
ಋತ್ವಿಗ್ಭಿರುಪದಿಷ್ಟೋಽಯಂ ಪುರಾವೃತ್ತೋ ಮಯಾ ಶ್ರುತಃ ॥ ೧ ॥

ಹೀಗೆ ರಾಜನು ಏಕಾಂತದಲ್ಲಿ ಹೇಳಿದ್ದನ್ನು ಕೇಳಿ ಸುಮಂತ್ರನು ರಾಜನಿಗೆ ಹೇಳಿದನು- ಪುರಾಣದಲ್ಲಿ ನಾನು ಕೇಳಿದ ಒಂದು ಪೂರ್ವವೃತ್ತಾಂತವನ್ನು ನಿನಗೆ ಹೇಳುವೆನು ಕೇಳು. 'ಅಶ್ವಮೇಧದಿಂದ ನಿನಗೆ ಮಕ್ಕಳು ಜನಿಸುತ್ತಾರೆ ಎಂದು ನಿನಗೆ ಋತ್ವಿಜರು ಉಪದೇಶಿಸಿದ್ದು ಸರಿಯೆ. ಹಿಂದೆಯೂ ಒಬ್ಬ ದಶರಥನಿಂದ ಇದು ನಡೆದಿತ್ತೆಂದು ಪುರಾಣದಲ್ಲಿ ನಾನು ಕೇಳಿದ್ದೇನೆ.'

ಸನತ್ಕುಮಾರೋ ಭಗವಾನ್ಪೂರ್ವಂ ಕಥಿತವಾನ್ಕಥಾಮ್ ।
ಋಷೀಣಾಂ ಸಂನಿಧೌ ರಾಜಂಸ್ತವ ಪುತ್ರಾಗಮಂ ಪ್ರತಿ ॥ ೨ ॥

ಪೂಜ್ಯ ಸನತ್ಕುಮಾರರು ಋಷಿಗಳ ಸನ್ನಿಧಿಯಲ್ಲಿ, 'ರಾಜನೇ! ನಿನಗೆ ಮಕ್ಕಳಾಗುವರು' ಎಂದು ಹಿಂದೊಮ್ಮೆ ಕಥೆಯನ್ನು ಹೇಳಿದರು.

ಕಶ್ಯಪಸ್ಯ ತು ಪುತ್ರೋಽಸ್ತಿ ವಿಭಂಡಕ ಇತಿ ಶ್ರುತಃ ।
ಋಷ್ಯಶೃಂಗ ಇತಿ ಖ್ಯಾತಸ್ತಸ್ಯ ಪುತ್ರೋ ಭವಿಷ್ಯತಿ ॥ ೩ ॥

ಕಶ್ಯಪರಿಗೆ 'ವಿಭಂಡಕ' ಅಥವಾ 'ವಿಭಾಂಡಕ'ನೆಂಬ ಪುತ್ರನಿದ್ದಾನೆ. ಅವನಿಗೆ 'ಋಶ್ಯಶೃಂಗ' ಅಥವಾ 'ಋಷ್ಯಶೃಂಗ' ಎಂದು ಪ್ರಸಿದ್ಧನಾದ ಪುತ್ರನಿದ್ದ. 'ಋಶ್ಯ'ದಂತೆ ತಲೆ ಮೇಲೆ ಜಿಂಕೆಯಂತೆ ಕೊಂಬು ಉಳ್ಳವನು ಋಶ್ಯಶೃಂಗ.

ಸ ವನೇ ನಿತ್ಯಸಂವೃದ್ಧೋ ಮುನಿರ್ವನಚರೈಃ ಸಹ ।
ನಾನ್ಯಂ ಜಾನಾತಿ ವಿಪ್ರೇಂದ್ರೋ ನಿತ್ಯಂ ಪಿತ್ರನುವರ್ತನಾತ್ ॥ ೪ ॥

ಅವನು ಸದಾ ವನಚರರೊಡನೇ ಬೆಳೆದ ಮುನಿ. ಆ ಬ್ರಾಹ್ಮಣೋತ್ತಮನು ಬೇರೆ ಮುನಿಗಳನ್ನು ಕಂಡರಿಯದವನು ಸದಾ ತನ್ನ ತಂದೆಯ ಬಳಿ ಇದ್ದವನು.

ದ್ವೈವಿಧ್ಯಂ ಬ್ರಹ್ಮಚರ್ಯಸ್ಯ ಭವಿಷ್ಯತಿ ಮಹಾತ್ಮನಃ ।
ಲೋಕೇಷು ಪ್ರಥಿತಂ ರಾಜನ್ ವಿಪ್ರೈಶ್ಚ ಕಥಿತಂ ಸದಾ ॥ ೫ ॥

ವಟುವು ಹನ್ನೆರಡು ವರ್ಷ ಗುರುಕುಲದಲ್ಲಿ 'ಬ್ರಾಹ್ಮ' ಎಂಬ ಬ್ರಹ್ಮಚರ್ಯವನ್ನೂ ಗೃಹಸ್ಥನು ಒಬ್ಬಳೆ ಹೆಂಡತಿಯಲ್ಲಿ ಋತುಕಾಲ ಮಾತ್ರ ಗಮನ ಮಾಡುವ 'ಪ್ರಾಜಾಪತ್ಯ' ಎಂಬ ಬ್ರಹ್ಮಚರ್ಯವನ್ನೂ ನಡೆಸಲು ವಿಧಿ ಇದೆ (ಭಾಗವತ ೩.೧೩.೪೨) ಮಹಾತ್ಮರಿಗೆ ಹೀಗೆ ಎರಡು ಬಗೆಯ ಬ್ರಹ್ಮಚರ್ಯ ಲೋಕದಲ್ಲಿ ಪ್ರಸಿದ್ಧವಿದೆ. ಬ್ರಾಹ್ಮಣರೂ ಹೇಳುತ್ತಾರೆ.

ತಸ್ಯೈವಂ ವರ್ತಮಾನಸ್ಯ ಕಾಲಃ ಸಮಭಿವರ್ತತ ।
ಅಗ್ನಿಂ ಶುಶ್ರೂಷಮಾಣಸ್ಯ ಪಿತರಂ ಚ ಯಶಸ್ವಿನಮ್ ॥ ೬ ॥

ಬ್ರಾಹ್ಮಬ್ರಹ್ಮಚರ್ಯದಲ್ಲಿ ಅಗ್ನಿಯನ್ನೂ ಗುರುವಾದ ಯಶಸ್ವಿಯಾದ ತಂದೆಯನ್ನೂ ಅವನು ಸೇವಿಸುತ್ತಿದ್ದಾಗ ಕೆಲಕಾಲ ಕಳೆಯುವುದು.

ಏತಸ್ಮಿನ್ನೇವ ಕಾಲೇ ತು ರೋಮಪಾದಃ ಪ್ರತಾಪವಾನ್ ।
ಅಂಗೇಷು ಪ್ರಥಿತೋ ರಾಜಾ ಭವಿಷ್ಯತಿ ಮಹಾಬಲಃ ॥ ೭ ॥

ಈ ಕಾಲದಲ್ಲಿಯೇ ಪ್ರತಾಪಶಾಲಿಯಾದ 'ಲೋಮಪಾದ' ಅಥವಾ 'ರೋಮಪಾದ'ನು ಅಂಗದೇಶದಲ್ಲಿ ಮಹಾಬಲಿಷ್ಠನಾದ ರಾಜನಾಗಿರುತ್ತಾನೆ.

ತಸ್ಯ ವ್ಯತಿಕ್ರಮಾದ್ರಾಜ್ಞೋ ಭವಿಷ್ಯತಿ ಸುದಾರುಣಾ ।
ಅನಾವೃಷ್ಟಿಃ ಸುಘೋರಾ ವೈ ಸರ್ವಭೂತಭಯಾವಹಾ ॥ ೮ ॥

ಅವನ ಅಪರಾಧದಿಂದ ಸರ್ವಜೀವಿಗಳಿಗೆ ನಾಶ ಉಂಟು ಮಾಡುವ ಘೋರದಾರುಣವಾದ ಅನಾವೃಷ್ಟಿ ಉಂಟಾಗುವುದು.

ಅನಾವೃಷ್ಟ್ಯಾಂ ತು ವೃತ್ತಾಯಾಂ ರಾಜಾ ದುಃಖಸಮನ್ವಿತಃ ।
ಬ್ರಾಹ್ಮಣಾಂಶ್ಚುತವೃದ್ಧಾಂಶ್ಚ ಸಮಾನೀಯ ಪ್ರವಕ್ಷ್ಯತಿ ॥ ೯ ॥

ಅನಾವೃಷ್ಟಿ ಉಂಟಾದಾಗ ರಾಜನು ದುಃಖದಿಂದ, ಅಧ್ಯಯನದಿಂದ ವೃದ್ಧರಾದ ಬ್ರಾಹ್ಮಣರನ್ನು ಕರೆಸಿ ಹೇಳುತ್ತಾನೆ.

ಭವಂತಃ ಶ್ರುತಧರ್ಮಾಣೋ ಲೋಕಚಾರಿತ್ರವೇದಿನಃ ।
ಸಮಾದಿಶಂತು ನಿಯಮಂ ಪ್ರಾಯಶ್ಚಿತ್ತಂ ಯಥಾ ಭವೇತ್ ॥ ೧೦ ॥

ತಾವು ಅನಾವೃಷ್ಟಿಗೆ ಕಾರಣವಾಗುವ ಕರ್ಮವನ್ನು ತಿಳಿದವರು. ಲೋಕ-

ವ್ಯವಹಾರಜ್ಞರು. ನನ್ನ ತಪ್ಪಿಗೆ ಪ್ರಾಯಶ್ಚಿತ್ತವಾಗಿ ಮಾಡಬೇಕಾಗಿರುವ ಯಾವು-ದಾದರೂ ನಿಯಮವನ್ನು ಉಪದೇಶಿಸಿರಿ.

ಇತ್ಯುಕ್ತಾಸ್ತೇ ತತೋ ರಾಜ್ಞಾ ಸರ್ವೇ ಬ್ರಾಹ್ಮಣಸತ್ತಮಾಃ ।
ವಕ್ಷ್ಯಂತಿ ತೇ ಮಹೀಪಾಲಂ ಬ್ರಾಹ್ಮಣಾ ವೇದಪಾರಗಾಃ ॥
ವಿಭಂಡಕಸುತಂ ರಾಜನ್‌ಸರ್ವೋಪಾಯೈರಿಹಾನಯ ॥ ೧೧ ॥

ಹೀಗೆ ರಾಜನು ಹೇಳಿದಾಗ ವೇದಪಾರಂಗತರಾದ ಎಲ್ಲ ಬ್ರಾಹ್ಮಣೋತ್ತರು ಅವನಿಗೆ ಹೇಳುತ್ತಾರೆ– 'ರಾಜನೇ, ಎಲ್ಲ ಉಪಾಯ ಮಾಡಿ ವಿಭಂಡಕ ಪುತ್ರನನ್ನು ಇಲ್ಲಿಗೆ ಕರೆಸು'.

ಆನಾಯ್ಯ ಚ ಮಹೀಪಾಲ ಋಷ್ಯಶೃಂಗಂ ಸುಸತ್ಕೃತಮ್ ।
ವಿಭಾಂಡಕಸುತಂ ರಾಜನ್ ಬ್ರಾಹ್ಮಣಂ ವೇದಪಾರಗಮ್ ॥
ಪ್ರಯಚ್ಛ ಕನ್ಯಾಂ ಶಾಂತಾಂ ವೈ ವಿಧಿನಾ ಸುಸಮಾಹಿತಃ ॥ ೧೨ ॥

'ರಾಜನೆ, ವೇದಪಾರಂಗತ ಬ್ರಾಹ್ಮಣನಾದ ವಿಭಂಡಕಸುತ ಋಷ್ಯಶೃಂಗನನ್ನು ಸತ್ಕಾರಪೂರ್ವಕವಾಗಿ ಕರೆಸಿ, ವಿಧ್ಯುಕ್ತವಾಗಿ ಮನಃಪೂರ್ವಕವಾಗಿ ಶಾಂತಾಳನ್ನು ಅವನಿಗೆ ಕನ್ಯಾದಾನ ಮಾಡು' ಎಂದು.

ತೇಷಾಂ ತು ವಚನಂ ಶ್ರುತ್ವಾ ರಾಜಾ ಚಿಂತಾಂ ಪ್ರಪತ್ಸ್ಯತೇ ।
ಕೇನೋಪಾಯೇನ ವೈ ಶಕ್ಯ ಇಹಾನೇತುಂ ಸ ವೀರ್ಯವಾನ್॥ ೧೩ ॥

ಅವರ ಮಾತನ್ನು ಕೇಳಿ ರಾಜನು ಚಿಂತೆಯಲ್ಲಿ ಮುಳುಗುತ್ತಾನೆ, 'ತಪೋ-ಬಲವುಳ್ಳ ಆತನನ್ನು ಇಲ್ಲಿಗೆ ಯಾವ ಉಪಾಯದಿಂದ ಕರೆಸಲು ಶಕ್ಯವಾದೀತು?' ಎಂದು.

ತತೋ ರಾಜಾ ವಿನಿಶ್ಚಿತ್ಯ ಸಹ ಮಂತ್ರಿಭಿರಾತ್ಮವಾನ್ ।
ಪುರೋಹಿತಮಮಾತ್ಯಾಂಶ್ಚ ತತಃ ಪ್ರೇಷ್ಯತಿ ಸತ್ಕೃತಾನ್ ॥ ೧೪ ॥

ರಾಜನು ಸ್ಥಿರಮನಸ್ಕನಾಗಿ ಮಂತ್ರಿಗಳೊಡನೆ ಸಮಾಲೋಚಿಸಿ ಒಂದು ನಿಶ್ಚಯಕ್ಕೆ ಬರುತ್ತಾನೆ. ಪುರೋಹಿತರನ್ನೂ ಮಂತ್ರಿಗಳನ್ನೂ ಸತ್ಕರಿಸಿ ಋಷ್ಯಶೃಂಗನ ಬಳಿಗೆ ಹೋಗಲು ಕೇಳಿಕೊಳ್ಳುತ್ತಾನೆ.

ತೇ ತು ರಾಜ್ಞೋ ವಚಃ ಶ್ರುತ್ವಾ ವ್ಯಥಿತಾ ವನತಾನನಾಃ ।
ನ ಗಚ್ಛೇಮ ಋಷೇರ್ಭೀತಾ ಅನುನೇಷ್ಯಂತಿ ತಂ ನೃಪಮ್ ॥ ೧೫ ॥

ಅವರು ರಾಜನ ಮಾತನ್ನು ಕೇಳಿ ಋಷಿಯ ಭಯದಿಂದ ಮುಖ ತಗ್ಗಿಸಿ ವ್ಯಥೆಯಿಂದ ಹೇಳುತ್ತಾರೆ 'ನಾವು ಹೋಗಲಾರೆ'ವು ಎಂದು, ಅನುನಯ ಪೂರ್ವಕವಾಗಿ ಹೇಳುತ್ತಾರೆ.

ವಕ್ಷ್ಯಂತಿ ಚಿಂತಯಿತ್ವಾ ತೇ ತಸ್ಯೋಪಾಯಾಂಶ್ಚ ತತ್ಕ್ಷಮಾನ್ ।
ಆನೇಷ್ಯಾಮೋ ವಯಂ ವಿಪ್ರಂ ನ ಚ ದೋಷೋ ಭವಿಷ್ಯತಿ ॥ ೧೬ ॥

ಬಳಿಕ ಆಲೋಚನೆ ಮಾಡಿ 'ವೇಶ್ಯೆಯರನ್ನು ಮುನಿವೇಷದಿಂದ ಕಳಿಸುವುದೇ ಇದಕ್ಕೆ ಉಪಾಯ.' ಈ ಉಪಾಯದಿಂದಲೇ ಬ್ರಾಹ್ಮಣನನ್ನು ನಾವು ತರಿಸುತ್ತೇವೆ, ಅದು ತಪ್ಪಾಗುವುದಿಲ್ಲ' ಎಂದು.

'ಅಂಗನಾ ಮುನಿವೇಷತಃ' ಎಂದು ಸಂಗ್ರಹ ರಾಮಾಯಣ.

ಏವಮಂಗಾಧಿಪೇನೈವ ಗಣಿಕಾಭಿರ್ಮಹರ್ಷೇಃ ಸುತಃ ।
ಆನೀತೋಽವರ್ಷಯದ್ದೇವಃ ಶಾಂತಾ ಚಾಸ್ಮೈ ಪ್ರದೀಯತೇ ॥ ೧೭ ॥

ಹೀಗೆ ಅಂಗರಾಜನು ವೇಶ್ಯೆಯರ ಮೂಲಕವೇ ಋಷಿಕುಮಾರನನ್ನು ತರಿಸುತ್ತಾನೆ, ಶಾಂತಾಳನ್ನು ಅವನಿಗೆ ದಾನ ನೀಡುತ್ತಾನೆ, ಮಳೆ ಬರುತ್ತದೆ.'

ಋಷ್ಯಶೃಂಗಸ್ತು ಜಾಮಾತಾ ಪುತ್ರಾಂಸ್ತವ ವಿಧಾಸ್ಯತಿ ।
ಸನತ್ಕುಮಾರಕಥಿತಮೇತಾವದ್ವ್ಯಾಹೃತಂ ಮಯಾ ॥ ೧೮ ॥

ಋಷ್ಯಶೃಂಗನು, ನಿನಗೂ ಅಳಿಯನಾಗುತ್ತಾನೆ. ನಿನಗೆ ಮಕ್ಕಳನ್ನು ಅಶ್ವಮೇಧ ಯಾಗದ ಮೂಲಕ ಲಭಿಸುವಂತೆ ಮಾಡುತ್ತಾನೆ. ರಾಜನೇ, ಇಷ್ಟು ಸನತ್ಕುಮಾರನು ಹೇಳಿದ್ದನ್ನು ನಾನು ನಿನಗೆ ಹೇಳಿದ್ದೇನೆ' ಎಂದು ಸುಮಂತ್ರನು ದಶರಥನಿಗೆ ಹೇಳುತ್ತಾನೆ.

(ದಶರಥನ ಕನ್ಯೆ ಶಾಂತಾ, ರೋಮಪಾದನಿಗೆ ದತ್ತು ಹೋಗಿದ್ದಳು.)

ಅಥ ಹೃಷ್ಟೋ ದಶರಥಃ ಸುಮಂತ್ರಂ ಪ್ರತ್ಯಭಾಷತ ।
ಯಥರ್ಷ್ಯಶೃಂಗಸ್ತ್ವಾನೀತೋ ವಿಸ್ತರೇಣ ತ್ವಯೋಚ್ಯತಾಮ್ ॥ ೧೯ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ನವಮಃ ಸರ್ಗಃ ॥ ೯ ॥

ಇದರಿಂದ ಹರ್ಷಗೊಂಡ ದಶರಥ ಸುಮಂತ್ರನಿಗೆ ಹೇಳಿದ– 'ರೋಮಪಾದನು ಋಷ್ಯಶೃಂಗನನ್ನು ಹೇಗೆ ಕರೆಸಿಕೊಂಡನೆಂದು ವಿಸ್ತಾರವಾಗಿ ಹೇಳು' ಎಂದು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಒಂಬತ್ತನೇ ಸರ್ಗ ಮುಗಿಯಿತು.

ದಶಮಃ ಸರ್ಗಃ

ಸುಮಂತ್ರಶ್ಚೋದಿತೋ ರಾಜ್ಞಾ ಪ್ರೋವಾಚೇದಂ ವಚಸ್ತಥಾ ।
ಯಥರ್ಷ್ಯಶೃಂಗಸ್ತಾ ನೀತಃ ಶೃಣು ಮೇ ಮಂತ್ರಿಭಿಃ ಸಹ ॥
ತನ್ಮೇ ನಿಗದಿತಂ ಸರ್ವಂ ವಿಸ್ತರೇಣ ಶೃಣುಷ್ವ ಹ ॥ ೧ ॥

ರಾಜಾ ದಶರಥನು ಹೀಗೆ ಕೇಳಿದ್ದರಿಂದ ಸುಮಂತ್ರ ಹೇಳಿದ– 'ಋಷ್ಯಶೃಂಗನನ್ನು ರೋಮಪಾದ ಹೇಗೆ ರಾಜ್ಯಕ್ಕೆ ಕರೆಸಿಕೊಂಡ ಎಂಬುದನ್ನು ನಾನು ವಿಸ್ತಾರವಾಗಿ ಎಲ್ಲವನ್ನೂ ಹೇಳುವೆನು, ಕೇಳು, ಮಂತ್ರಿಗಳೊಂದಿಗೆ ಆಲಿಸು.

ರೋಮಪಾದಮುವಾಚೇದಂ ಸಹಾಮಾತ್ಯಃ ಪುರೋಹಿತಃ ।
ಉಪಾಯೋ ನಿರಪಾಯೋಽಯಮಸ್ಮಾಭಿರಭಿಚಿಂತಿತಃ ॥ ೨ ॥

'ಪುರೋಹಿತ ಮತ್ತು ಅಮಾತ್ಯರು ರೋಮಪಾದ ರಾಜನಿಗೆ ಹೇಳಿದರು. 'ಏನೂ ಅಪಾಯವಿಲ್ಲ, ಒಂದು ಉಪಾಯವನ್ನು ನಾವು ಆಲೋಚಿಸಿದ್ದೇವೆ.'

ಋಷ್ಯಶೃಂಗೋ ವನಚರಸ್ತಪಸ್ಸ್ವಾಧ್ಯಾಯನೇ ರತಃ ।
ಅನಭಿಜ್ಞಃ ಸ ನಾರೀಣಾಂ ವಿಷಯಾಣಾಂ ಸುಖಸ್ಯ ಚ ॥ ೩ ॥

ಅದೇನೆಂದರೆ ಋಷ್ಯಶೃಂಗನು ವನವಾಸಿ, ತಪಸ್ಸಿನಲ್ಲಿಯೂ ಅಧ್ಯಯನದಲ್ಲಿಯೂ ನಿರತ. ಸ್ತ್ರೀಸುಖ ವಿಷಯ ಸುಖಗಳೆಂದರೆ ಅವನು ಅದರಲ್ಲಿ ಸರ್ವಥಾ ಅನಭಿಜ್ಞ.

ಇಂದ್ರಿಯಾರ್ಥೈರಭಿಮತೈರ್ನರಚಿತ್ತಪ್ರಮಾಥಿಭಿಃ ।
ಪುರಮಾನಾಯಯಿಷ್ಯಾಮಃ ಕ್ಷಿಪ್ರಂ ಚಾಧ್ಯವಸೀಯತಾಮ್ ॥ ೪ ॥

ಅದರಿಂದ ನರಚಿತ್ತವನ್ನು ಕಲಕುವ ಇಂದ್ರಿಯಗಳಿಗೆ ಆಕರ್ಷಕವಾಗುವ ಇಷ್ಟವಾದ ವಾರನಾರಿಯರ ಗೀತನರ್ತನಗಳಿಂದ ಮುನಿಯನ್ನು ಬೇಗನೆ ನಗರದೊಳಗೆ ಕರೆತರಿಸುವೆವು. ನಿಶ್ಚಯ ಮಾಡಿಕೊಳ್ಳಿ.

ಗಣಿಕಾಸ್ತತ್ರ ಗಚ್ಛಂತು ರೂಪವತ್ಯಃ ಸ್ವಲಂಕೃತಾಃ ।
ಪ್ರಲೋಭ್ಯ ವಿವಿಧೋಪಾಯೈರಾನೇಷ್ಯಂತೀಹ ಸತ್ಕೃತಾಃ ॥ ೫ ॥

ರೂಪವತಿಯರಾದ ಚೆನ್ನಾಗಿ ಅಲಂಕೃತರಾದ ಗಣಿಕೆಯರು ಅಲ್ಲಿಗೆ ನಡೆಯಲಿ.

ನಾನಾ ಉಪಾಯಗಳಿಂದ ಅವರು ಆಸೆ ಹುಟ್ಟಿಸಿ ಅವನಿಂದ ಸತ್ಕೃತರಾಗಿಯೇ ಅವನನ್ನು ಇಲ್ಲಿಗೆ ಕರೆತರುವರು.

ಶ್ರುತ್ವಾ ತಥೇತಿ ರಾಜಾ ಚ ಪ್ರತ್ಯುವಾಚ ಪುರೋಹಿತಮ್ ।
ಪುರೋಹಿತೋ ಮಂತ್ರಿಣಶ್ಚ ತಥಾ ಚಕ್ರುಶ್ಚ ತೇ ತದಾ ॥
ವಾರಮುಖ್ಯಾಸ್ತು ತಚ್ಛ್ರುತ್ವಾ ವನಂ ಪ್ರವಿವಿಶುರ್ಮಹತ್ ॥ ೬ ॥

ಇದನ್ನು ಕೇಳಿ ರೋಮಪಾದನು 'ಹಾಗೇ ಆಗಲಿ' ಎಂದು ಪುರೋಹಿತನಿಗೆ ಹೇಳಿದ. ಪುರೋಹಿತನೂ ಮಂತ್ರಿಗಳೂ ಹಾಗೆ ಮಾಡಿದರು. ಇದನ್ನು ಕೇಳಿ ವಾರನಾರಿಯರು ಮಹಾರಣ್ಯವನ್ನು ಪ್ರವೇಶಿಸಿದರು.

ಆಶ್ರಮಸ್ಯಾವಿದೂರೇಽಸ್ಮಿನ್ಯತ್ನಂ ಕುರ್ವಂತಿ ದರ್ಶನೇ ।
ಋಷಿಪುತ್ರಸ್ಯ ಧೀರಸ್ಯ ನಿತ್ಯಮಾಶ್ರಮವಾಸಿನಃ ॥ ೭ ॥

ಆಶ್ರಮ ಸಮೀಪದಲ್ಲಿ ಸಂಚರಿಸುತ್ತ ತಾವು ಮುನಿಯ ಕಣ್ಣಿಗೆ ಗೋಚರ-ರಾಗುವಂತೆ ಯತ್ನಿಸಿದರು.

ಪಿತುಃ ಸ ನಿತ್ಯಸಂತುಷ್ಟೋ ನಾತಿಚಕ್ರಾಮ ಚಾಶ್ರಮಾತ್ ।
ನ ತೇನ ಜನ್ಮಪ್ರಭೃತಿ ದೃಷ್ಟಪೂರ್ವಂ ತಪಸ್ವಿನಾ ।
ಸ್ತ್ರೀ ವಾ ಪುಮಾನ್ವಾ ಯಚ್ಚಾನ್ಯತ್ಸರ್ವಂ ನಗರರಾಷ್ಟ್ರಜಮ್ ॥ ೮ ॥

ಮುನಿಯು ತಂದೆಯ ಬಳಿಯೇ ಸದಾ ಸಂತುಷ್ಟನಾಗಿ ಇದ್ದವನು ಆಶ್ರಮ-ದಿಂದಾಚೆ ಹೋಗುತ್ತಲೇ ಇರಲಿಲ್ಲ. ಆದರಿಂದ ಜನ್ಮಾರಭ್ಯ ನಗರ ಅಥವಾ ಗ್ರಾಮವಾಸಿಗಳಾದ ಸ್ತ್ರೀ ಪುರುಷರನ್ನಾಗಲಿ ಅವರ ವ್ಯವಹಾರಗಳನ್ನಾಗಲಿ ಹಿಂದೆ ಎಂದೂ ಕಂಡವನಲ್ಲ.

ತತಃ ಕದಾಚಿತ್ತಂ ದೇಶಮಾಜಗಾಮ ಯದೃಚ್ಛಯಾ ।
ವಿಭಂಡಕಸುತಸ್ತತ್ರ ತಾಶ್ಚಾಪಶ್ಯದ್ವರಾಂಗನಾಃ ॥ ೯ ॥

ಮುನಿ ಒಮ್ಮೆ ಆಕಸ್ಮಾತ್ ಆ ಪ್ರದೇಶಕ್ಕೆ ಬಂದ, ಆ ವಾರಸ್ತ್ರೀಯರನ್ನು ಕಂಡ.

ತಾಶ್ಚಿತ್ರವೇಷಾಃ ಪ್ರಮದಾ ಗಾಯಂತ್ಯೋ ಮಧುರಸ್ವರೈಃ ।
ಋಷಿಪುತ್ರಮುಪಾಗಮ್ಯ ಸರ್ವಾ ವಚನಮಬ್ರುವನ್ ॥ ೧೦ ॥

ಆ ಸ್ತ್ರೀಯರು ಸುಂದರ ವೇಷ ತೊಟ್ಟು, ಮಧುರಧ್ವನಿಯಿಂದ ಹಾಡುತ್ತ ಋಷಿಪುತ್ರನ ಬಳಿ ಬಂದು ಎಲ್ಲರೂ ಕೇಳಲು ತೊಡಗಿದರು.

ಕಸ್ತ್ವಂ ಕಿಂ ವರ್ತಸೇ ಬ್ರಹ್ಮನ್ ಜ್ಞಾತುಮಿಚ್ಛಾಮಹೇ ವಯಮ್ ।
ಏಕಸ್ತ್ವಂ ವಿಜನೇ ಘೋರೇ ವನೇ ಚರಸಿ ಶಂಸ ನಃ ॥ ೧೧ ॥

'ಯಾರು ನೀನು? ನೀನು ಇಲ್ಲಿ ಏನು ಕೆಲಸ ಮಾಡುತ್ತಿರುವೆ?

ಮುನಿಯೇ! ನಾವು ಇದನ್ನು ತಿಳಿಯಲು ಬಯಸುತ್ತೇವೆ. ನೀನು ಒಬ್ಬನೇ ನಿರ್ಜನವಾದ ಘೋರವಾದ ಅರಣ್ಯದಲ್ಲಿ ಓಡಾಡುತ್ತಿರುವೆ! ನಮಗೆ ಹೇಳು' ಎಂದರು.

ಅದೃಷ್ಟರೂಪಾಸ್ತಾಸ್ತೇನ ಕಾಮ್ಯರೂಪಾ ವನೇ ಸ್ತ್ರಿಯಃ ।
ಹಾರ್ದಾತ್ತಸ್ಯ ಮತಿರ್ಜಾತಾ ಹ್ಯಾಖ್ಯಾತುಂ ಪಿತರಂ ಸ್ವಕಮ್ ॥ ೧೨ ॥

ಸುಂದರಾಕಾರದ ಸ್ತ್ರೀಯರನ್ನು ಮುನಿ ಇದೇ ಮೊದಲು ಕಾಣುತ್ತಿದ್ದಾನೆ. ಅಂಥ ಸ್ತ್ರೀಜಾತಿಯನ್ನೇ ಅವನು ಕಂಡವನಲ್ಲ, ಅವರಲ್ಲಿ ತನಗೆ ಅರಿವಿಲ್ಲದಂತೇ ಪ್ರಣಯ ಅಂಕುರಿಸಿದ್ದರಿಂದ, ಅವರಿಗೆ ತನ್ನ ತಂದೆಯ ಬಗ್ಗೆ ಹೇಳಲು ಮನಸಾಯಿತು.

ಪಿತಾ ವಿಭಂಡಕೋಽಸ್ಮಾಕಂ ತಸ್ಯಾಹಂ ಸುತ ಔರಸಃ ।
ಋಷ್ಯಶೃಂಗ ಇತಿ ಖ್ಯಾತಂ ನಾಮ ಕರ್ಮ ಚ ಮೇ ಭುವಿ ॥ ೧೩ ॥

'ನನ್ನ ತಂದೆ ವಿಭಾಂಡಕ, ನಾನು ಅವರ ಔರಸಪುತ್ರ. ಋಷ್ಯಶೃಂಗ ಎಂದು ನನ್ನ ನಾಮ. ನನ್ನ ಕೆಲಸವೇನೆಂದರೆ ಭೂಮಿಯಲ್ಲಿ ಪ್ರಖ್ಯಾತವಾಗಿರುವ ತಪಸ್ಸು.

ಇಹಾಶ್ರಮಪದೋಽಸ್ಮಾಕಂ ಸಮೀಪೇ ಶುಭದರ್ಶನಾಃ ।
ಕರಿಷ್ಯೇ ವೋಽತ್ರ ಪೂಜಾಂ ವೈ ಸರ್ವೇಷಾಂ ವಿಧಿಪೂರ್ವಕಮ್ ॥

'ನೋಡಲು ಸುಂದರರಾಗಿರುವಿರಿ. ನಮ್ಮಾಶ್ರಮಸ್ಥಳ ಇಲ್ಲಿಯೇ ಸಮೀಪದಲ್ಲಿದೆ. ಬನ್ನಿ, ನಿಮಗೆಲ್ಲರಿಗೂ ವಿಧಿಪೂರ್ವಕವಾಗಿ ಸತ್ಕಾರ ಮಾಡುವೆನು.

ಋಷಿಪುತ್ರವಚಃ ಶ್ರುತ್ವಾ ಸರ್ವಾಸಾಂ ಮತಿರಾಸ ವೈ ।
ತದಾಶ್ರಮಪದಂ ದ್ರಷ್ಟುಂ ಜಗ್ಮುಃ ಸರ್ವಾಶ್ಚ ತೇನ ತಾಃ ॥ ೧೫ ॥

ಋಷಿಕುಮಾರನ ಮಾತನ್ನು ಕೇಳಿ ಅವನ ಆಶ್ರಮಸ್ಥಳವನ್ನು ನೋಡಲು ಅವರಿಗೆ ಮನಸಾಯಿತು. ಅವರೆಲ್ಲರೂ ಅವನನ್ನು ಹಿಂಬಾಲಿಸಿ ಹೋದರು.

ಆಗತಾನಾಂ ತತಃ ಪೂಜಾಮೃಷಿಪುತ್ರಶ್ಚಕಾರ ಹ ।
ಇದಮರ್ಘ್ಯಮಿದಂ ಪಾದ್ಯಮಿದಂ ಮೂಲಮಿದಂ ಫಲಮ್ ॥ ೧೬ ॥

ಬಂದವರಿಗೆ ಋಷಿ ಪುತ್ರನು ವಿಧ್ಯುಕ್ತವಾಗಿ ಸತ್ಕಾರ ಮಾಡಿದ 'ಇದು ಅರ್ಘ್ಯ! ಇದು ಪಾದ್ಯ! ಇದು ಗಡ್ಡೆಗೆಣಸು! ಇದು ಹಣ್ಣು!'

ಪ್ರತಿಗೃಹ್ಯ ತು ತಾಂ ಪೂಜಾಂ ಸರ್ವಾ ಏವ ಸಮುತ್ಸುಕಾಃ ।
ಋಷೇರ್ಭೀತಾಸ್ತು ಶೀಘ್ರಂ ತಾ ಗಮನಾಯ ಮತಿಂ ದಧುಃ ॥ ೧೭ ॥

ಅವರೆಲ್ಲರೂ ಆ ಸತ್ಕಾರವನ್ನು ಸ್ವೀಕರಿಸಿ ಅವನನ್ನು ರಾಜ್ಯಕ್ಕೆ ಕರೆದೊಯ್ಯಲು ಉತ್ಸುಕರಾದರು. ವಿಭಾಂಡಕ ಋಷಿಗೆ ಭೀತರಾಗಿ ಅಲ್ಲಿಂದ ಬೇಗನೆ ಹೋಗಲು ನಿಶ್ಚಯಿಸಿದರು.

ಅಸ್ಮಾಕಮಪಿ ಮುಖ್ಯಾನಿ ಫಲಾನೀಮಾನಿ ವೈ ದ್ವಿಜ ।
ಗೃಹಾಣ ಪ್ರತಿ ಭದ್ರಂ ತೇ ಭಕ್ಷಯಸ್ವ ಚ ಮಾಚಿರಮ್ ॥ ೧೮ ॥

'ಮುನಿಯೆ, ಇನ್ನೂ ಹೆಚ್ಚು ಸ್ವಾದಿಷ್ಠವಾದ ನಮ್ಮ ಫಲಗಳನ್ನು ನೀನೂ ಸ್ವೀಕರಿಸು, ಉಣ್ಣು, ತಡಮಾಡಬೇಡ' ಎಂದರು.

ತತಸ್ತಾಸ್ತಂ ಸಮಾಲಿಂಗ್ಯ ಸರ್ವಾ ಹರ್ಷಸಮನ್ವಿತಾಃ ।
ಮೋದಕಾನ್ಪ್ರದದುಸ್ತಸ್ಮೈ ಭಕ್ಷಾಂಶ್ಚ ವಿವಿಧಾನ್ ಶುಭಾನ್ ॥ ೧೯ ॥

ಅವರೆಲ್ಲರೂ ಹರ್ಷಯುಕ್ತರಾಗಿ ಅವನನ್ನು ಚೆನ್ನಾಗಿ ಆಲಿಂಗಿಸಿ, 'ಇದು ಫಲ, ಇದು ಮೂಲ' ಎನ್ನುತ್ತ ಮೋದಕಗಳನ್ನೂ ನಾನಾ ಬಗೆಯ ರುಚಿಕರವಾದ ಭಕ್ಷ್ಯಗಳನ್ನೂ ತಿನ್ನಲೂ ನೀಡಿದರು.

ತಾನಿ ಚಾಸ್ವಾದ್ಯ ತೇಜಸ್ವೀ ಫಲಾನೀತಿ ಸ್ಮ ಮನ್ಯತೇ ।
ಅನಾಸ್ವಾದಿತಪೂರ್ವಾಣಿ ವನೇ ನಿತ್ಯನಿವಾಸಿನಾಮ್ ॥ ೨೦ ॥

ಅವುಗಳನ್ನು ಆಸ್ವಾದಿಸಿ ತೇಜಸ್ವಿಯಾದ ಮುನಿ ಫಲಗಳೆಂದೇ ತಿಳಿದನು. ಏಕೆಂದರೆ ಅರಣ್ಯದಲ್ಲಿಯೇ ಸದಾ ವಾಸಿಸುವವನಿಗೆ ಅವು ಎಂದೂ ಹಿಂದೆ ತಿಂದು ನೋಡಿದವೇ ಅಲ್ಲ.

ಆಪೃಚ್ಛ್ಯ ಚ ತದಾ ವಿಪ್ರಂ ವ್ರತಚರ್ಯಾಂ ನಿವೇದ್ಯ ಚ ।
ಗಚ್ಛಂತಿ ಸ್ಮಾಪದೇಶಾತ್ತಾ ಭೀತಾಸ್ತಸ್ಯ ಪಿತುಃ ಸ್ತ್ರಿಯಃ ॥ ೨೧ ॥

ಸ್ತ್ರೀಯರು ನಾವಿನ್ನು ವ್ರತಾಚರಣ ಮಾಡಬೇಕಿದೆ' ಎನ್ನುತ್ತ ಆ ದಿನ ಅಲ್ಲಿಂದ ಹೋಗಲು ಮುನಿಯ ಅನುಮತಿ ಕೇಳಿ ಹೊರಟರು. ಅವನ ತಂದೆಗೆ ಭೀತರಾಗಿ ಹೀಗೆ ವ್ರತಾಚರಣದ ನೆಪ ಒಡ್ಡಿದ್ದರು.

ಗತಾಸು ತಾಸು ಸರ್ವಾಸು ಕಾಶ್ಯಪಸ್ಯಾತ್ಮಜೋ ದ್ವಿಜಃ ।
ಅಸ್ವಸ್ಥಹೃದಯಶ್ಚಾಸೀದ್ದುಃಖಂ ಸ್ಮ ಪರಿವರ್ತತೇ ॥ ೨೨ ॥

ಅವರೆಲ್ಲರೂ ಹೊರಟು ಹೋದಾಗ ಇತ್ತ ಮುನಿಕುಮಾರನ ಹೃದಯ ಅಸ್ವಸ್ಥ-ಗೊಂಡಿತ್ತು. ದುಃಖದಿಂದ ಅತ್ತಿಂದಿತ್ತ ಆತ ಓಡಾಡಿದ.

ತತೋಽಪರೇದ್ಯುಸ್ತಂ ದೇಶಮಾಜಗಾಮ ಸ ವೀರ್ಯವಾನ್ ।
ಮನೋಜ್ಞಾ ಯತ್ರ ತಾ ದೃಷ್ಟಾ ವಾರಮುಖ್ಯಾಃ ಸ್ವಲಂಕೃತಾಃ ॥ ೨೩ ॥

ಅದರಿಂದ ಮರುದಿನವೂ, ಆತ ತಪೋಬಲ ಉಳ್ಳವನಾದ್ದರಿಂದ 'ಇದು ಪ್ರಾರಬ್ಧ, ಉಣಲೇ ಬೇಕೆಂ'ದುಕೊಂಡು, ಮನೋಜ್ಞರಾದ ಅಲಂಕೃತರಾದ ಆ ವಾರಾಂಗನೆಯರನ್ನು ಹಿಂದಿನ ದಿನ ಕಂಡಿದ್ದ ಪ್ರದೇಶಕ್ಕೇ ತಿರುಗಿಬಂದ.

ದೃಷ್ಟ್ವೈವ ಚ ತದಾ ವಿಪ್ರಮಾಯಾಂತಂ ಹೃಷ್ಟಮಾನಸಾಃ ।
ಉಪಸೃತ್ಯ ತತಃ ಸರ್ವಾಸ್ತಾಸ್ತಮೂಚುರಿದಂ ವಚಃ ॥ ೨೪ ॥

ಋಷ್ಯಶೃಂಗ ಮುನಿ ತಮ್ಮಲ್ಲಿಗೆ ತಾನೇ ಬಂದುದನ್ನುಕಂಡು ಆ ಸ್ತ್ರೀಯರು ಹರ್ಷಗೊಂಡು ಎಲ್ಲರೂ ಅವನ ಬಳಿಸಾರಿ ಈ ಮಾತನ್ನು ಹೇಳಿದರು.

ಅವರು ಸಾಮಾನ್ಯ ವೇಶ್ಯೆಯರಲ್ಲ. ಗೋಕುಲದ ಗೋಪಿಯರಂತೆ ಇವರೆಲ್ಲರೂ ದೇವಲೋಕದ ಅಪ್ಸರೆಯರ ಅವತಾರರಾಗಿದ್ದರು. ಅದರಿಂದ ಪವಿತ್ರವಾದ ರಾಮಾಯಣದಲ್ಲಿ ಅವರ ಕಥೆ ಬಂದಿದೆ.

ಏಹ್ಯಾಶ್ರಮಪದಂ ಸೌಮ್ಯ ಹ್ಯಸ್ಮಾಕಮಿತಿ ಚಾಬ್ರುವನ್ ।
ತತ್ರಾಪ್ಯೇಷ ವಿಧಿಃ ಶ್ರೀಮಾನ್ವಿಶೇಷೇಣ ಭವಿಷ್ಯತಿ ॥ ೨೫ ॥

ಸೌಮ್ಯ, ಬಾ ನಮ್ಮಾಶ್ರಮದ ಸ್ಥಳಕ್ಕೆ. ಅಲ್ಲಿಯೂ ನಿನಗೆ ನಮ್ಮ ಈ ಬಗೆಯ ಶ್ರೀಮಂತವಾದ ಸತ್ಕಾರ ವಿಶೇಷವಾಗಿ ನಡೆಯುತ್ತದೆ' ಎಂದರು.

ಶ್ರುತ್ವಾ ತು ವಚನಂ ತಾಸಾಂ ಸರ್ವಾಸಾಂ ಹೃದಯಂಗಮಮ್ ।
ಗಮನಾಯ ಮತಿಂ ಚಕ್ರೇ ತಂ ಚ ನಿನ್ಯುಸ್ತದಾ ಸ್ತ್ರಿಯಃ ॥ ೨೬ ॥

ಅವರೆಲ್ಲರ ಹೃದಯಂಗಮವಾದ ಮಾತನ್ನಾಲಿಸಿ ಮುನಿ ಅವರೊಂದಿಗೆ ನಡೆಯಲು ಮನಸು ಮಾಡಿದ. ಆಗ ಅನಾಯಾಸವಾಗಿ ಸ್ತ್ರೀಯರು ಅವನನ್ನು ಅಂಗರಾಜ್ಯಕ್ಕೆ ಕರೆದುಕೊಂಡು ಬಂದರು.

ತತ್ರ ಚಾನೀಯಮಾನೇ ತು ವಿಪ್ರೇ ತಸ್ಮಿನ್ಮಹಾತ್ಮನಿ ।
ವವರ್ಷ ಸಹಸಾ ದೇವೋ ಜಗತ್ಪ್ರಹ್ಲಾದಯಂಸ್ತದಾ ॥ ೨೭ ॥

ಮಹಾತ್ಮನಾದ ಮುನಿಯನ್ನು ರಾಜ್ಯಕ್ಕೆ ಕರೆ ತರುವಾಗಲೆ ಅನಿರೀಕ್ಷಿತವಾಗಿ ಮಳೆಯಾಯಿತು. ಜಗತ್ತು ಆಹ್ಲಾದಗೊಂಡಿತು.

ವಸರ್ೇಣೈವಾಗತಂ ವಿಪ್ರಂ ವಿಷಯಂ ಸ್ವಂ ನರಾಧಿಪಃ ।
ಪ್ರತ್ಯುದ್ಗಮ್ಯ ಮುನಿಂ ಪ್ರಹ್ವಃ ಶಿರಸಾ ಚ ಮಹೀಂ ಗತಃ ॥ ೨೮ ॥

ಮಳೆಯನ್ನೂ ಜೊತೆಗೇ ಕರೆದುಕೊಂಡು ತನ್ನ ರಾಜ್ಯಕ್ಕೆ ಬಂದ ಮುನಿಯನ್ನು ವಿನಮ್ರತೆಯಿಂದ ನೆಲದ ಮೇಲೆ ಬಿದ್ದು ಸಾಷ್ಟಾಂಗವಾಗಿ ನಮಿಸಿದ, ರೋಮಪಾದ ರಾಜ.

ಅರ್ಘ್ಯಂ ಚ ಪ್ರದದೌ ತಸ್ಮೈ ನ್ಯಾಯತಃ ಸುಸಮಾಹಿತಃ ।
ವವ್ರೇ ಪ್ರಸಾದಂ ವಿಪ್ರೇಂದ್ರಾನ್ನಾ ವಿಪ್ರಂ ಮನ್ಯುರಾವಿಶೇತ್ ॥ ೨೯ ॥

ರಾಜನು ಶ್ರದ್ಧೆಯಿಂದ ಶಾಸ್ತ್ರೋಕ್ತ ರೀತಿಯಲ್ಲಿ ಮುನಿಶ್ರೇಷ್ಠನಿಗೆ ಅರ್ಘ್ಯ ನೀಡಿದ. ಮುನಿಗೆ ಕೋಪ ಬಾರದಿರಲೆಂದು ಮೊದಲೇ ಅವನ ಅನುಗ್ರಹವನ್ನು ಬೇಡಿಕೊಂಡ.

ಅಂತಃಪುರಂ ಪ್ರವಿಶ್ಯಾಸ್ಮೈ ಕನ್ಯಾಂ ದತ್ತ್ವಾ ಯಥಾವಿಧಿ ।
ಶಾಂತಾಂ ಶಾಂತೇನ ಮನಸಾ ರಾಜಾ ಹರ್ಷಮವಾಪ ಸಃ ॥ ೩೦ ॥

ಅವನೊಂದಿಗೆ ಅಂತಃಪುರವನ್ನು ಪ್ರವೇಶಿಸಿ ಮಗಳಾದ ಶಾಂತಾಳನ್ನು ಕೊಟ್ಟು ರಾಜ ವಿಧ್ಯುಕ್ತವಾಗಿ ಶಾಂತಮನಸಿನಿಂದ ಕನ್ಯಾದಾನ ಮಾಡಿ ಹರ್ಷಗೊಂಡ.

ಏವಂ ಸ ನ್ಯವಸತ್ತತ್ರ ಸರ್ವಕಾಮೈಃ ಸುಪೂಜಿತಃ ।
ಋಷ್ಯಶೃಂಗೋ ಮಹಾತೇಜಾಃ ಶಾಂತಯಾ ಸಹ ಭಾರ್ಯಯಾ॥೩೧॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ದಶಮಃ ಸರ್ಗಃ ॥ ೧೦ ॥

ಮಹಾತೇಜನಾದ ಋಷ್ಯಶೃಂಗಮುನಿ ಪತ್ನಿಯಾದ ಶಾಂತಾಳೊಡನೆ ಸರ್ವಾಭೀಷ್ಟ ವಸ್ತುಗಳಿಂದ ಸತ್ಕೃತನಾಗಿ ಅಲ್ಲಿ ವಾಸ ಮಾಡಿದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಹತ್ತನೆ ಸರ್ಗ ಮುಗಿಯಿತು.

ಏಕಾದಶಃ ಸರ್ಗಃ

ಭೂಯ ಏವ ಹಿ ರಾಜೇಂದ್ರ ಶೃಣು ಮೇ ವಚನಂ ಹಿತಮ್ ।
ಯಥಾ ಸ ದೇವಪ್ರವರಃ ಕಥಾಯಾಮೇವಮಬ್ರವೀತ್ ॥ ೧ ॥

'ಇನ್ನೂ ಹೇಳುತ್ತೇನೆ ಕೇಳು, ಮಹಾರಾಜ! ಹಿತಕರವಾದ ನನ್ನ ಈ ಮಾತನ್ನು. ದೇವೋತ್ತಮ ಸನತ್ಕುಮಾರನು ಪ್ರವಚನದಲ್ಲಿ ಮುಂದೆ ಹೀಗೆ ಹೇಳಿದ್ದಾರೆ.

ಇಕ್ಷ್ವಾಕೂಣಾಂ ಕುಲೇ ಜಾತೋ ಭವಿಷ್ಯತಿ ಸುಧಾರ್ಮಿಕಃ ।
ರಾಜಾ ದಶರಥೋ ನಾಮ ಶ್ರೀಮಾನ್ಸತ್ಯಪ್ರತಿಶ್ರವಃ ॥ ೨ ॥

ಇಕ್ಷ್ವಾಕುವಂಶದಲ್ಲಿ ಬಹಳ ಧಾರ್ಮಿಕನಾದ ಸತ್ಯಪ್ರತಿಜ್ಞನಾದ ಶ್ರೀಮಾನ್ ದಶರಥನೆಂಬ ರಾಜ ಹುಟ್ಟಿ ಬರುತ್ತಾನೆ.

ಅಂಗರಾಜೇನ ಸಖ್ಯಂ ಚ ತಸ್ಯ ರಾಜ್ಞೋ ಭವಿಷ್ಯತಿ ।
ಕನ್ಯಾ ಚಾಸ್ಯ ಮಹಾಭಾಗಾ ಶಾಂತಾ ನಾಮ ಭವಿಷ್ಯತಿ ॥ ೩ ॥

ಅಂಗರಾಜನೊಡನೆ ಅವನಿಗೆ ಸಖ್ಯ ಉಂಟಾಗುವುದು. ಆ ಕಾಲದಲ್ಲಿ ದಶರಥನಿಗೆ ಶಾಂತಾ ಎಂಬ ಮಹಾಭಾಗ್ಯಶಾಲಿನಿ ಮಗಳು ಜನಿಸಿರುತ್ತಾಳೆ. ಅವಳನ್ನು ಅಂಗರಾಜನಿಗೆ ದತ್ತು ಕೊಡುತ್ತಾನೆ.

ಪುತ್ರಸ್ತು ಸೋಽಙ್ಗರಾಜಸ್ಯ ರೋಮಪಾದ ಇತಿ ಶ್ರುತಃ ।
ತಂ ಸ ರಾಜಾ ದಶರಥೋ ಗಮಿಷ್ಯತಿ ಮಹಾಯಶಾಃ ॥ ೪ ॥

ಈ 'ಅಂಗರಾಜನೆಂದರೆ' 'ಅಂಗ' ಎಂಬ ರಾಜನ ಮಗನಾದ ರೋಮಪಾದ-ನೆಂದು ಪ್ರಸಿದ್ಧನಾದ 'ರಾಜ.' ಮಹಾಕೀರ್ತಿಶಾಲಿಯಾದ ಈ ರಾಜಾ ದಶರಥನು ರೋಮಪಾದ ರಾಜನ ಬಳಿಗೆ ಹೋಗುತ್ತಾನೆ.

ಅನಪತ್ಯೋಽಸ್ಮಿ ಧರ್ಮಾತ್ಮನ್ ಶಾಂತಾಭರ್ತಾ ಮಮ ಕ್ರತುಮ್ ।
ಆಹರೇತ ತ್ವಯಾಜ್ಞಪ್ತಃ ಸಂತಾನಾರ್ಥಂ ಕುಲಸ್ಯ ಚ ॥ ೫ ॥

'ಧರ್ಮಾತ್ಮನೆ! ನನಗೆ ಗಂಡು ಮಕ್ಕಳಿಲ್ಲ. ಅದಕ್ಕೆ ನಿನ್ನಳಿಯ ಶಾಂತಾಪತಿಯಾದ ಋಷ್ಯಶೃಂಗನು ನನ್ನ ಅಶ್ವಮೇಧಯಾಗವನ್ನು ನಡೆಸಿಕೊಡಲಿ. ಹಾಗೆ ಅವನಿಗೆ ನೀನು ಆಜ್ಞಾಪಿಸಬೇಕು. ಅದರಿಂದ ನನ್ನ ಕುಲ ಅವಿಚ್ಛಿನ್ನವಾಗಿ ಮುಂದುವರಿ-ಯಲಿ' ಎನ್ನುತ್ತಾನೆ.

ಶ್ರುತ್ವಾ ರಾಜ್ಞೋಽಥ ತದ್ವಾಕ್ಯಂ ಮನಸಾ ಸ ವಿಚಿಂತ್ಯ ಚ ।
ಪ್ರದಾಸ್ಯತೇ ಪುತ್ರವಂತಂ ಶಾಂತಾಭರ್ತಾರಮಾತ್ಮವಾನ್ ॥ ೬ ॥

ರಾಜಾ ದಶರಥನ ಈ ಮಾತನ್ನು ಕೇಳಿ, ಮನಸಿನಲ್ಲಿ ಇದು ಯುಕ್ತ-ವೆಂದಾಲೋಚಿಸಿ, ಮನೋನಿಗ್ರಹ ಉಳ್ಳ ರೋಮಪಾದನು ಪುತ್ರವಂತನಾದ ಶಾಂತಾಪತಿ ಋಷ್ಯಶೃಂಗನನ್ನು ಅಶ್ವಮೇಧಕ್ಕಾಗಿ ಅಯೋಧ್ಯೆಗೆ ಕಳಿಸಿಕೊಡುತ್ತಾನೆ.

ಪುತ್ರವಂತನಾದ್ದರಿಂದ 'ಜಾತಪುತ್ರಃ ಕೃಷ್ಣಕೇಶಃ ಅಗ್ನೀನಾದಧೀತ' ಎಂಬ ವಿಧಿಯಂತೆ ಮುನಿ ಯಜ್ಞಾಧಿಕಾರ ಉಳ್ಳವನಾಗಿದ್ದ.

ಪ್ರತಿಗೃಹ್ಯ ಚ ತಂ ವಿಪ್ರಂ ಸ ರಾಜಾ ವಿಗತಜ್ವರಃ ।
ಆಹರಿಷ್ಯತಿ ತಂ ಯಜ್ಞಂ ಪ್ರಹೃಷ್ಟೇನಾಂತರಾತ್ಮನಾ ॥ ೭ ॥

ಋಷ್ಯಶೃಂಗ ಮುನಿಯನ್ನು ದಶರಥನು ಅಶ್ವಮೇಧಕ್ಕೆ ಪುರೋಹಿತನನ್ನಾಗಿ ಸ್ವೀಕರಿಸಿ ನಿಶ್ಚಿಂತನಾಗುವನು, 'ಪ್ರಹೃಷ್ಟವಾದ ಮನಸಿನಿಂದ ಈತ ನನ್ನ ಯಜ್ಞವನ್ನು ನಡೆಸಿಕೊಡುವನು' ಎಂದು.

ತಂ ಚ ರಾಜಾ ದಶರಥೋ ಯಷ್ಟುಕಾಮಃ ಕೃತಾಂಜಲಿಃ ।
ಋಷ್ಯಶೃಂಗಂ ದ್ವಿಜಶ್ರೇಷ್ಠಂ ವರಯಿಷ್ಯತಿ ಧರ್ಮವಿತ್ ॥ ೮ ॥

ಯಾಗ ಮಾಡಲು ಬಯಸಿದ್ದ ಧರ್ಮಜ್ಞನಾದ ದಶರಥನು ಕೈಮುಗಿದು ಮುನಿಶ್ರೇಷ್ಠನಾದ ಋಷ್ಯಶೃಂಗನನ್ನು ಪುರೋಹಿತನೆಂದು ವರಣ ಮಾಡುತ್ತಾನೆ.

ಯಜ್ಞಾರ್ಥಂ ಪ್ರಸವಾರ್ಥಂ ಚ ಸ್ವರ್ಗಾರ್ಥಂ ಚ ಜನೇಶ್ವರಃ ।
ಲಭತೇ ಚ ಸ ತಂ ಕಾಮಂ ದ್ವಿಜಮುಖ್ಯಾದ್ವಿಶಾಂಪತಿಃ ॥ ೯ ॥

ಯಜ್ಞಕ್ಕಾಗಿ ಪುತ್ರಪ್ರಾಪ್ತಿಗಾಗಿ ಸ್ವರ್ಗಲಾಭಕ್ಕಾಗಿ ರಾಜಾ ದಶರಥನು ಬ್ರಾಹ್ಮಣಶೇಷ್ಠನಿಂದ ಆ ಅಭೀಷ್ಟವನ್ನು ಕೇಳಿ ಪಡೆಯುತ್ತಾನೆ.

ಪುತ್ರಾಶ್ಚಾಸ್ಯ ಭವಿಷ್ಯಂತಿ ಚತ್ವಾರೋಽಮಿತವಿಕ್ರಮಾಃ ।
ವಂಶಪ್ರತಿಷ್ಠಾನಕರಾಃ ಸರ್ವಲೋಕೇಷು ವಿಶ್ರುತಾಃ ॥ ೧೦ ॥

ಅಮಿತ ಪರಾಕ್ರಮಿಗಳಾದ ವಂಶಸ್ಥಿತಿಗೆ ಕಾರಣರಾದ ಸರ್ವಲೋಕಗಳಲ್ಲಿ ಪ್ರಸಿದ್ಧರಾದ ನಾಲ್ಕು ಮಕ್ಕಳು ಅವನಿಗೆ ಜನಿಸುತ್ತಾರೆ.

ಏವಂ ಸ ದೇವಪ್ರವರಃ ಪೂರ್ವಂ ಕಥಿತವಾನ್ಕಥಾಮ್ ।
ಸನತ್ಕುಮಾರೋ ಭಗವಾನ್ಪುರಾ ದೇವ ಯುಗೇ ಪ್ರಭುಃ ॥ ೧೧ ॥

ಹೀಗೆ ದೇವೋತ್ತಮ ಪ್ರಭು ಭಗವಾನ್ ಸನತ್ಕುಮಾರನು ಹಿಂದೆ ಕೃತಯುಗದಲ್ಲಿ ಹೀಗೆ ಕಥೆಯನ್ನು ಹೇಳಿದ್ದಾರೆ.

ಸ ತ್ವಂ ಪುರುಷಶಾರ್ದೂಲ ತಮಾನಯ ಸುಸತ್ಕೃತಮ್ ।
ಸ್ವಯಮೇವ ಚ ರಾಜೇಂದ್ರ ಗತ್ವಾ ಸಬಲವಾಹನಃ ॥
ಸುಮಂತ್ರಸ್ಯ ವಚಃ ಶ್ರುತ್ವಾ ಹೃಷ್ಟೋ ದಶರಥೋಽಭವತ್ ॥ ೧೨ ॥

ಮಹಾರಾಜ, ಸೈನ್ಯವಾಹನ ಸಮೇತನಾಗಿ ಸ್ವಯಂ ಹೋಗಿ ಋಷ್ಯಶೃಂಗನನ್ನು ಒಳ್ಳೆಯ ಸತ್ಕಾರಪೂರ್ವಕವಾಗಿ ಕರೆದು ತಾ ಎಂದು ಸುಮಂತ್ರನು ಹೇಳಿದ್ದನ್ನು ಕೇಳಿ ದಶರಥನು ಹೃಷ್ಟನಾದ.

ಅನುಮಾನ್ಯ ವಸಿಷ್ಠಂ ಚ ಸೂತವಾಕ್ಯಂ ನಿಶಮ್ಯ ಚ ।
ವಸಿಷ್ಠೇನಾಭ್ಯನುಜ್ಞಾತೋ ರಾಜಾ ಸಂಪೂರ್ಣಮಾನಸಃ ॥
ಸಾಂತಃಪುರಃ ಸಹಾಮಾತ್ಯಃ ಪ್ರಯಯೌ ಯತ್ರ ಸ ದ್ವಿಜಃ ॥ ೧೩ ॥

ಸೂತನಾದ ಸುಮಂತ್ರನ ಮಾತನ್ನು ಕೇಳಿ ವಸಿಷ್ಠನಲ್ಲಿ ಇದಕ್ಕೆ ಅನುಮತಿಯನ್ನು ಬೇಡಿ ಅವನ ಅನುಜ್ಞೆಯಿಂದ ರಾಜಾ ದಶರಥನು ಅಂತಃಪುರಜನರಿಂದಲೂ ಅಮಾತ್ಯರಿಂದಲೂ ಒಡಗೂಡಿ ಋಷ್ಯಶೃಂಗರಿರುವಲ್ಲಿಗೆ ಪ್ರಯಾಣ ಮಾಡಿದ. ತನ್ನ ಅಳಿಯನನ್ನು ಮಗಳು ಶಾಂತಾಳೊಂದಿಗೆ ಕರೆತರುವುದಕ್ಕಾಗಿ ಅಂತಃಪುರಜನ-ರೊಂದಿಗೇ ಹೋಗಿದ್ದಾನೆ ದಶರಥ.

ವನಾನಿ ಸರಿತಶ್ಚೈವ ವ್ಯತಿಕ್ರಮ್ಯ ಶನೈಃ ಶನೈಃ ।
ಅಭಿಚಕ್ರಾಮ ತಂ ದೇಶಂ ಯತ್ರ ವೈ ಮುನಿಪುಂಗವಃ ॥ ೧೪ ॥

ನಿಧಾನವಾಗಿ ಅರಣ್ಯ ನದಿಗಳನ್ನು ದಾಟಿ ಮುನಿಶ್ರೇಷ್ಠನಿರುವಲ್ಲಿಗೆ ದಶರಥನು ಪ್ರಯಾಣ ಮಾಡಿದ.

ಆಸಾದ್ಯ ತಂ ದ್ವಿಜಶ್ರೇಷ್ಠಂ ರೋಮಪಾದಸಮೀಪಗಮ್ ।
ಋಷಿಪುತ್ರಂ ದದರ್ಶಾದೌ ದೀಪ್ಯಮಾನಮಿವಾನಲಮ್ ॥ ೧೫ ॥

ಹೋಗಿ ಮೊದಲಿಗೆ ದಶರಥನು ರೋಮಪಾದ ರಾಜನ ಸಮೀಪದಲ್ಲಿದ್ದ ಅಗ್ನಿಯಂತೆ ಬೆಳಗುತ್ತಿದ್ದ ದ್ವಿಜಶ್ರೇಷ್ಠನಾದ ಮುನಿಪುತ್ರನನ್ನು ಕಂಡ.

ತತೋ ರಾಜಾ ಯಥಾನ್ಯಾಯಂ ಪೂಜಾಂ ಚಕ್ರೇ ವಿಶೇಷತಃ ।
ಸಖಿತ್ವಾತ್ತಸ್ಯ ವೈ ರಾಜ್ಞಃ ಪ್ರಹೃಷ್ಟೇನಾಂತರಾತ್ಮನಾ ॥ ೧೬ ॥

ಬಳಿಕ ರಾಜಾ ದಶರಥನು ಆ ರೋಮಪಾದ ರಾಜನಿಗೆ, ಅವನು ಮಿತ್ರ-ನಾದ್ದರಿಂದ, ಹೃಷ್ಟಮನಸಿನಿಂದ ವಿಶೇಷವಾಗಿ ವಿಧ್ಯುಕ್ತವಾದ ಸತ್ಕಾರವನ್ನು ಸಲ್ಲಿಸಿದ.

ರೋಮಪಾದೇನ ಚಾಖ್ಯಾತಮೃಷಿಪುತ್ರಾಯ ಧೀಮತೇ ।
ಸಖ್ಯಂ ಸಂಬಂಧಕಂ ಚೈವ ತದಾ ತಂ ಪ್ರತ್ಯಪೂಜಯತ್ ॥ ೧೭ ॥

ರೋಮಪಾದನು ಋಷಿಕುಮಾರನಾದ ಧೀಮಂತನಾದ ಋಷ್ಯಶೃಂಗನಿಗೆ ದಶರಥನಲ್ಲಿ ತನಗಿರುವ ಸಖ್ಯವನ್ನೂ, ಅವನ ಮಗಳಾದ ಶಾಂತಾದೇವಿಯನ್ನು ತಾನು ದತ್ತು ಪಡೆದಿದ್ದರಿಂದ ಆ ಸಂಬಂಧವನ್ನೂ ಹೇಳಿದ ಮತ್ತು ದಶರಥನನ್ನು ಸತ್ಕರಿಸಿದ.

ಏವಂ ಸುಸತ್ಕೃತಸ್ತೇನ ಸಹೋಷಿತ್ವಾ ನರರ್ಷಭಃ ।
ಸಪ್ತಾಷ್ಟದಿವಸಾನ್ ರಾಜಾ ರಾಜಾನಮಿದಮಬ್ರವೀತ್ ॥ ೧೮ ॥

ಹೀಗೆ ರಾಜಾ ದಶರಥನು ರೋಮಪಾದರಾಜನಿಂದ ಸತ್ಕೃತನಾಗಿ ಅವನೊಂದಿಗೆ ಏಳೆಂಟು ದಿನ ವಾಸವಾಗಿದ್ದು ಅವನಿಗೆ ಹೇಳಿದ.

ಶಾಂತಾ ತವ ಸುತಾ ರಾಜನ್ ಸಹ ಭರ್ತ್ರಾ ವಿಶಾಂಪತೇ ।
ಮದೀಯಂ ನಗರಂ ಯಾತು ಕಾರ್ಯಂ ಹಿ ಮಹದುದ್ಯತಮ್ ॥ ೧೯

'ರಾಜನೆ, ನನ್ನ ಮಗಳು ಶಾಂತಾದೇವಿ ಪತಿಯೊಂದಿಗೆ ನನ್ನ ಅಯೋಧ್ಯೆಗೆ ಪ್ರಯಾಣ ಮಾಡಲಿ ಮಹತ್ತಾದ ಯಜ್ಞಕಾರ್ಯವನ್ನು ನಡೆಸಲು ನಾವು ಹೊರಟಿದ್ದೇವೆ' ಎಂದ.

ತಥೇತಿ ರಾಜಾ ಸಂಶ್ರುತ್ಯ ಗಮನಂ ತಸ್ಯ ಧೀಮತಃ ।
ಉವಾಚ ವಚನಂ ವಿಪ್ರಂ ಗಚ್ಛ ತ್ವಂ ಸಹ ಭಾರ್ಯಯಾ ॥ ೨೦ ॥

'ಹಾಗೇ ಆಗಲಿ' ಎನ್ನುತ್ತ ಧೀಮಂತನಾದ ಮುನಿಯನ್ನು ಕಳಿಸುವುದಾಗಿ ಮಾತುಕೊಟ್ಟು, ರೋಮಪಾದನು ಮುನಿಗೆ ಹೇಳಿದ, 'ಪತ್ನಿಯೊಂದಿಗೆ ನೀನು ಅಯೋಧ್ಯೆಗೆ ಹೋಗು' ಎಂದು.

ಋಷಿಪುತ್ರಃ ಪ್ರತಿಶ್ರುತ್ಯ ತಥೇತ್ಯಾಹ ನೃಪಂ ತದಾ ।
ಸ ನೃಪೇಣಾಭ್ಯನುಜ್ಞಾತಃ ಪ್ರಯಯೌ ಸಹ ಭಾರ್ಯಯಾ ॥ ೨೧ ॥

ಋಷ್ಯಶೃಂಗನೂ 'ಹಾಗೇ ಆಗಲಿ' ಎಂದು ರಾಜನಿಗೆ ಮಾತುಕೊಟ್ಟು ರಾಜನ ಅನುಜ್ಞೆ ಪಡೆದು ಪತ್ನಿಯೊಂದಿಗೆ ಹೊರಟ.

ತಾವನ್ಯೋನ್ಯಾಂಜಲಿಂ ಕೃತ್ವಾ ಸ್ನೇಹಾತ್ಸಂಶ್ಲಿಷ್ಯ ಚೋರಸಾ ।
ನನಂದತುರ್ದಶರಥೋ ರೋಮಪಾದಶ್ಚ ವೀರ್ಯವಾನ್ ॥ ೨೨ ॥

ವೀರ್ಯಶಾಲಿಯಾದ ದಶರಥನೂ ರೋಮಪಾದನೂ ಪರಸ್ಪರ ಕೈಮುಗಿದು ಸ್ನೇಹದಿಂದ ಎದೆಗೆ ತಬ್ಬಿಕೊಂಡು ಆನಂದಿಸಿದರು.

ತತಃ ಸುಹೃದಮಾಪೃಚ್ಛ್ಯ ಪ್ರಸ್ಥಿತೋ ರಘುನಂದನಃ ।
ಪೌರೇಭ್ಯಃ ಪ್ರೇಷಯಾಮಾಸ ದೂತಾನ್ವೈ ಶೀಘ್ರಗಾಮಿನಃ ॥ ೨೩ ॥

ಮಿತ್ರನ ಅನುಮತಿ ಪಡೆದು ದಶರಥನು ಹೊರಟು ಅಯೋಧ್ಯೆಯ ಪೌರರಿಗೆ ಮುಂಚಿತವಾಗಿ ಸಮಾಚಾರವನ್ನು ತಿಳಿಸುವುದಕ್ಕಾಗಿ ಶೀಘ್ರಗಾಮಿಗಳಾದ ದೂತರನ್ನು ಕಳಿಸಿದ.

ಕ್ರಿಯತಾಂ ನಗರಂ ಸರ್ವಂ ಕ್ಷಿಪ್ರಮೇವ ಸ್ವಲಂಕೃತಮ್ ।
ಧೂಪಿತಂ ಸಿಕ್ತಸಂಮೃಷ್ಟಂ ಪತಾಕಾಭಿರಲಂಕೃತಮ್ ॥ ೨೪ ॥

'ಇಡೀ ನಗರವನ್ನು ಬೇಗನೆ ಚೆನ್ನಾಗಿ ಅಲಂಕರಿಸಲಿ, ಧೂಪ ಹಾಕಿ ನೀರು ಚಿಮುಕಿಸಿ ಚೆನ್ನಾಗಿ ಸಾರಿಸಿ ಪತಾಕೆಗಳಿಂದ ಅಲಂಕರಿಸಲಿ' ಎಂದು ಹೇಳಿಕಳಿಸಿದ.

ತತಃ ಪ್ರಹೃಷ್ಟಾಃ ಪೌರಾಸ್ತೇ ಶ್ರುತ್ವಾ ರಾಜಾನಮಾಗತಮ್ ।
ತಥಾ ಪ್ರಚಕ್ರುಸ್ತತ್ಸರ್ವಂ ರಾಜ್ಞಾ ಯತ್ಕೀರ್ತಿತಂ ತದಾ ॥ ೨೫ ॥

ಅಯೋಧ್ಯೆಯ ಪೌರರು ರಾಜನು ಬಂದನೆಂದು ಕೇಳಿ ಬಹಳ ಹರ್ಷಗೊಂಡು ರಾಜನು ಹೇಳಿಕಳಿಸಿದಂತೆಯೇ ಎಲ್ಲವನ್ನೂ ಮಾಡಿದರು.

ತತಃ ಸ್ವಲಂಕೃತಂ ರಾಜಾ ನಗರಂ ಪ್ರವಿವೇಶ ಹ ।
ಶಂಖದುಂದುಭಿನಿರ್ಘೋಷೈಃ ಪುರಸ್ಕೃತ್ಯ ದ್ವಿಜರ್ಷಭಮ್ ॥ ೨೬ ॥

ಬಳಿಕ ರಾಜಾ ದಶರಥನು ಋಷ್ಯಶೃಂಗನನ್ನು ಮುಂದೆ ಮಾಡಿಕೊಂಡು ಶಂಖ ನಗಾರಿ ಸದ್ದುಗಳೊಂದಿಗೆ ಅಲಂಕೃತವಾದ ಅಯೋಧ್ಯಾನಗರವನ್ನು ಪ್ರವೇಶಿಸಿದ.

ತತಃ ಪ್ರಮುದಿತಾಃ ಸರ್ವೇ ದೃಷ್ಟ್ವಾ ತಂ ನಾಗರಾ ದ್ವಿಜಮ್ ।
ಪ್ರವೇಶ್ಯಮಾನಂ ಸತ್ಕೃತ್ಯ ನರೇಂದ್ರೇಣೇಂದ್ರಕರ್ಮಣಾ ॥
ಯಥಾ ದಿವಿ ಸುರೇಂದ್ರೇಣ ಸಹಸ್ರಾಕ್ಷೇಣ ಕಾಶ್ಯಪಮ್ ॥ ೨೭ ॥

ನಾಗರಿಕರೆಲ್ಲರೂ ಋಷ್ಯಶೃಂಗಮುನಿಯನ್ನು ಕಂಡು ಆನಂದಿಸಿದರು. ಇಂದ್ರನಂತೆ ರಾಜ್ಯಭಾರ ಕಾರ್ಯವನ್ನು ಮಾಡುವ ದಶರಥನು, ಸಹಸ್ರಾಕ್ಷ ಇಂದ್ರನು ದೇವಲೋಕದಲ್ಲಿ ವಾಮನನನ್ನು ಪುರಪ್ರವೇಶ ಮಾಡಿಸಿದಂತೆ, ಋಷ್ಯಶೃಂಗನನ್ನು ಅಯೋಧ್ಯೆಯಲ್ಲಿ ಪುರಪ್ರವೇಶ ಮಾಡಿಸಿದನು.

ಅಂತಃಪುರಂ ಪ್ರವೇಶ್ಯೈನಂ ಪೂಜಾಂ ಕೃತ್ವಾ ವಿಧಾನತಃ ।
ಕೃತಕೃತ್ಯಂ ತದಾತ್ಮಾನಂ ಮೇನೇ ತಸ್ಯೋಪವಾಹನಾತ್ ॥ ೨೮ ॥

ದಶರಥನು ಋಷ್ಯಶೃಂಗನನ್ನು ಅಂತಃಪುರದೊಳಗೆ ಒಯ್ದು ವಿಧ್ಯುಕ್ತವಾಗಿ ಸತ್ಕಾರ ಮಾಡಿ ಅವನನ್ನು ಕರೆತಂದುದರಿಂದ ತಾನು ಕೃತಾರ್ಥನಾದೆನೆಂದು ಭಾವಿಸಿದ.

ಅಂತಃಪುರಸ್ತ್ರಿಯಃ ಸರ್ವಾಃ ಶಾಂತಾಂ ದೃಷ್ಟ್ವಾ ತಥಾಗತಾಮ್ ।
ಸಹ ಭರ್ತ್ರಾ ವಿಶಾಲಾಕ್ಷೀಂ ಪ್ರೀತ್ಯಾನಂದಮುಪಾಗಮನ್ ॥ ೨೯ ॥

ಅಂತಃಪುರದ ಸ್ತ್ರೀಯರೆಲ್ಲರೂ ವಿಶಾಲಾಕ್ಷಿಯಾದ ಶಾಂತಾದೇವಿ ಪತಿಯೊಂದಿಗೆ ಹೀಗೆ ವೈಭವದಿಂದ ಬಂದುದನ್ನು ಕಂಡು ಪ್ರೀತಿಯಿಂದ ಹರ್ಷ ಪಟ್ಟರು.

ಪೂಜ್ಯಮಾನಾ ಚ ತಾಭಿಃ ಸಾ ರಾಜ್ಞಾ ಚೈವ ವಿಶೇಷತಃ ।
ಉವಾಸ ತತ್ರ ಸುಖಿತಾ ಕಂಚಿತ್ಕಾಲಂ ಸಹದ್ವಿಜಾ ॥ ೩೦ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಏಕಾದಶಃ ಸರ್ಗಃ ॥ ೧೧ ॥

ಅಂತಃಪುರಸ್ತ್ರೀಯರಿಂದಲೂ ರಾಜನಿಂದಲೂ ವಿಶೇಷವಾಗಿ ಸತ್ಕೃತಳಾಗುತ್ತ ಶಾಂತಾದೇವಿ ಪತಿಯೊಂದಿಗೆ ಕೆಲಕಾಲ ಸುಖವಾಗಿ ವಾಸ ಮಾಡಿದಳು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಹನ್ನೊಂದನೆ ಅಧ್ಯಾಯ ಮುಗಿಯಿತು.

ದ್ವಾದಶಃ ಸರ್ಗಃ

ತತಃ ಕಾಲೇ ಬಹುತಿಥೇ ಕಸ್ಮಿಂಶ್ಚಿತ್ಸುಮನೋಹರೇ ।
ವಸಂತೇ ಸಮನುಪ್ರಾಪ್ತೇ ರಾಜ್ಞೋ ಯಷ್ಟುಂ ಮನೋಽಭವತ್ ॥೧॥

ಅನಂತರ ಬಹುಕಾಲ ಕಳೆದ ಬಳಿಕ ಮನೋಹರವಾದ ವಸಂತಕಾಲ ಬಂದಾಗ ರಾಜನಿಗೆ ಅಶ್ವಮೇಧ ಯಾಗಾಂಗವಾಗಿ ಸಾಂಗ್ರಹಣೇಷ್ಟಿಯಾಗ ಮಾಡಲು ಮನಸಾಯಿತು.

ತತಃ ಪ್ರಣಮ್ಯ ಶಿರಸಾ ತಂ ವಿಪ್ರಂ ದೇವವರ್ಣಿನಮ್ ।
ಯಜ್ಞಾಯ ವರಯಾಮಾಸ ಸಂತಾನಾರ್ಥಂ ಕುಲಸ್ಯ ವೈ ॥ ೨ ॥

ಆಗ ಋಷ್ಯಶೃಂಗನಿಗೆ ತಲೆಬಾಗಿ ನಮಿಸಿ ಕುಲಸಂತತಿಗಾಗಿ ಸಾಂಗ್ರಹಣೀ ಎಂಬ ಇಷ್ಟಿಗೆ ಬ್ರಹ್ಮತ್ವೇನ ಅವನನ್ನು ರಾಜಾ ದಶರಥ ವರಣ ಮಾಡಿದ.

ತಥೇತಿ ಚ ಸ ರಾಜಾನಮುವಾಚ ಚ ಸುಸತ್ಕೃತಃ ।
ಸಂಭಾರಾಃ ಸಂಭ್ರಿಯಂತಾಂ ತೇ ತುರಗಶ್ಚ ವಿಮುಚ್ಯತಾಮ್ ॥
ಸರಯ್ವಾಶ್ಚೋತ್ತರೇ ತೀರೇ ಯಜ್ಞಭೂಮಿರ್ವಿಧೀಯತಾಮ್ ॥೩॥

'ಹಾಗೇ ಆಗಲಿ' ಎಂದು ರಾಜನಿಂದ ಸತ್ಕೃತನಾದ ಮುನಿ ನುಡಿದ– ಯಜ್ಞದ ಸಲಕರಣೆಗಳನ್ನು ಸಿದ್ಧ ಪಡಿಸೋಣ ಯಾಗದ ಕುದುರೆಯನ್ನು ಭೂಮಂಡಲದಲ್ಲಿ ಒಂದು ವರ್ಷ ಎಲ್ಲೆಡೆ ಸುತ್ತಲು ಬಿಡೋಣ. ಸರಯೂ ನದಿಯ ಉತ್ತರತೀರದಲ್ಲಿ ಯಾಗಶಾಲೆ ನಿರ್ಮಾಣ ಮಾಡಿಸೋಣ' ಎಂದು.

ತತೋ ರಾಜಾಽಬ್ರವೀದ್ವಾಕ್ಯಂ ಸುಮಂತ್ರಂ ಮಂತ್ರಿಸತ್ತಮ್ ।
ಸುಮಂತ್ರಾವಾಹಯ ಕ್ಷಿಪ್ರಮೃತ್ವಿಜೋ ಬ್ರಹ್ಮವಾದಿನಃ ॥ ೪ ॥

ರಾಜಾ ದಶರಥನು ಉತ್ತಮ ಮಂತ್ರಿಯಾದ ಸುಮಂತ್ರನಿಗೆ ಹೇಳಿದ– 'ಸುಮಂತ್ರ! ಬೇಗನೆ ಇನ್ನು ಒಂದು ವರ್ಷದ ಅವಧಿಯಲ್ಲಿ ಪ್ರತಿ ಹುಣ್ಣಿಮೆ ಅಮಾವಾಸ್ಯೆಗಳಲ್ಲಿ ಆಯಾ ಬ್ರಹ್ಮವಾದಿಗಳಾದ ಷೋಡಶ ಋತ್ವಿಜರನ್ನು ಯಜ್ಞ ಶಾಲೆಗೆ ಕರೆಸು.

ಸುಯಜ್ಞಂ ವಾಮದೇವಂ ಚ ಜಾಬಾಲಮಥ ಕಾಶ್ಯಪಮ್ ।
ಪುರೋಹಿತಂ ವಸಿಷ್ಠಂ ಚ ಯೇ ಚಾಪ್ಯನ್ಯೇ ದ್ವಿಜಾತಯಃ ॥ ೫ ॥

ಸುಯಜ್ಞ, ವಾಮದೇವ, ಜಾಬಾಲಿ, ಕಾಶ್ಯಪ, ಪುರೋಹಿತನಾದ ವಸಿಷ್ಠ ಇನ್ನೂ ಬೇರೆ ಋಷಿಗಳು ಎಲ್ಲರನ್ನೂ ಕರೆಸು.

ತತಃ ಸುಮಂತ್ರಸ್ತ್ವರಿತಂ ಗತ್ವಾ ತ್ವರಿತವಿಕ್ರಮಃ ।
ಸಮಾನಯತ್ಸ ತಾನ್ವಿಪ್ರಾನ್ಸಮಸ್ತಾನ್ವೇದಪಾರಗಾನ್ ॥ ೬ ॥

ಆಗ ಬೇಗನೆ ಕೆಲಸ ಮಾಡಬಲ್ಲ ಸುಮಂತ್ರನು ಬೇಗನೆ ಹೋಗಿ ವೇದ-ಪಾರಂಗತರಾದ ಎಲ್ಲ ವಿಪ್ರರನ್ನು ಆನೆ ಕುದುರೆ ವಾಹನಗಳಲ್ಲಿ ಕರೆಸಿಕೊಂಡ.

ತಾನ್ಪೂಜಯಿತ್ವಾ ಧರ್ಮಾತ್ಮಾ ರಾಜಾ ದಶರಥಸ್ತದಾ ।
ಧರ್ಮಾರ್ಥಸಹಿತಂ ಯುಕ್ತಂ ಶ್ಲಕ್ಷ್ಣಂ ವಚನಮಬ್ರವೀತ್ ॥ ೭ ॥

ಅವರೆಲ್ಲರನ್ನೂ ಸತ್ಕರಿಸಿದ ಬಳಿಕ ಧರ್ಮಾತ್ಮ ರಾಜಾ ದಶರಥನು ಧರ್ಮ ಮತ್ತು ಅರ್ಥಗಳಿಂದ ಗರ್ಭಿತವಾದ ಯುಕ್ತಿಯಿಂದ ಕೂಡಿದ ಮಾತನ್ನು ನಯವಾಗಿ ನುಡಿದ.

ಮಮ ಲಾಲಪ್ಯಮಾನಸ್ಯ ಪುತ್ರಾರ್ಥಂ ನಾಸ್ತಿ ವೈ ಸುಖಮ್ ।
ತದರ್ಥಂ ಹಯಮೇಧೇನ ಯಕ್ಷ್ಯಾಮೀತಿ ಮತಿರ್ಮಮ ॥ ೮ ॥

'ಪುತ್ರನಿಗಾಗಿ ವಿಲಾಪ ಮಾಡುತ್ತಿರುವ ನನಗೆ ಯಾವುದರಲ್ಲಿಯೂ ಸುಖವೇ ಇಲ್ಲ. ಅದಕ್ಕೆ ಅಶ್ವಮೇಧಯಾಗ ಅನುಷ್ಠಾನ ಮಾಡಬೇಕೆಂದು ನಾನು ಸಂಕಲ್ಪಿಸಿದ್ದೇನೆ.

ತದಹಂ ಯಷ್ಟುಮಿಚ್ಛಾಮಿ ಶಾಸ್ತ್ರದೃಷ್ಟೇನ ಕರ್ಮಣಾ ।
ಋಷಿಪುತ್ರಪ್ರಭಾವೇನ ಕಾಮಾನ್ಪ್ರಾಪ್ಸ್ಯಾಮಿ ಚಾಪ್ಯಹಮ್ ॥ ೯ ॥

'ಆ ಯಾಗವನ್ನು ಶಾಸ್ತ್ರೋಕ್ತ ವಿಧಾನದಿಂದ ಮಾಡಲು ಬಯಸುತ್ತೇನೆ. ವಿಭಾಂಡಕ ಮುನಿಪುತ್ರನಾದ ಋಷ್ಯಶೃಂಗನ ಪ್ರಭಾವದಿಂದ ಯಾಗ ಮಾಡಿ ತನ್ನ ಅಭೀಷ್ಟಗಳನ್ನು ಪಡೆಯುವೆನು' ಎಂದು.

ತತಃ ಸಾಧ್ವಿತಿ ತದ್ವಾಕ್ಯಂ ಬ್ರಾಹ್ಮಣಾಃ ಪ್ರತ್ಯಪೂಜಯನ್ ।
ವಸಿಷ್ಠಪ್ರಮುಖಾಃ ಸರ್ವೇ ಪಾರ್ಥಿವಸ್ಯ ಮುಖಾಚ್ಚ್ಯುತಮ್ ॥೧೦॥

ಆಗ ರಾಜನ ಆ ಮಾತನ್ನು 'ನೀನು ಹೇಳುವುದು ಸರಿಯೆ' ಎಂದು ವಸಿಷ್ಠಾದಿ ಮುನಿಗಳೆಲ್ಲರೂ ಪ್ರಶಂಸಿಸಿದರು.

ಋಷ್ಯಶೃಂಗಪುರೋಗಾಶ್ಚ ಪ್ರತ್ಯೂಚುರ್ನೃಪತಿಂ ತದಾ ।
ಸಂಭಾರಾಃ ಸಂಭ್ರಿಯಂತಾಂ ತೇ ತುರಗಶ್ಚ ವಿಮುಚ್ಯತಾಮ್ ॥
ಸರಯ್ವಾಶ್ಚೋತ್ತರೇ ತೀರೇ ಯಜ್ಞಭೂಮಿರ್ವಿಧೀಯತಾಮ್ ॥ ೧೧ ॥

ಋಷ್ಯಶೃಂಗ ಮುಂತಾದವರೂ ಕೂಡ ರಾಜನಿಗೆ ಹೇಳಿದರು– 'ನಿನ್ನ ಯಜ್ಞದ ಸಲಕರಣೆ ಎಲ್ಲವನ್ನೂ ಸಿದ್ಧ ಪಡಿಸು ಯಾಗದ ಕುದುರೆಯನ್ನು ಭೂಮಂಡಲದಲ್ಲಿ ಸುತ್ತಲು ಬಿಡು.' ಸರಯೂ ನದಿಯ ಉತ್ತರತೀರದಲ್ಲಿ ಯಾಗಶಾಲೆ ನಿರ್ಮಾಣ ಮಾಡಿಸೋಣ.

ಸರ್ವಥಾ ಪ್ರಾಪ್ಸ್ಯಸೇ ಪುತ್ರಾಂಶ್ಚತುರೋಽಮಿತವಿಕ್ರಮಾನ್ ।
ಯಸ್ಯ ತೇ ಧಾರ್ಮಿಕೀ ಬುದ್ಧಿರಿಯಂ ಪುತ್ರಾರ್ಥಮಾಗತಾ ॥ ೧೨ ॥

'ಪುತ್ರಲಾಭಕ್ಕಾಗಿ ಇಂಥ ಧರ್ಮಾಚರಣಬುದ್ಧಿ ನಿನಗೆ ಉಂಟಾಗಿರುವುದರಿಂದ ನೀನು ಸರ್ವಥಾ ಅಮಿತಪರಾಕ್ರಮಿಗಳಾದ ನಾಲ್ಕು ಮಂದಿ ಪುತ್ರರನ್ನು ಪಡೆಯುವೆ' ಎಂದು.

ತತಃ ಪ್ರೀತೋಽಭವದ್ರಾಜಾ ಶ್ರುತ್ವಾ ತು ದ್ವಿಜಭಾಷಿತಮ್ ।
ಅಮಾತ್ಯಾಂಶ್ಚಾಬ್ರವೀದ್ರಾಜಾ ಹರ್ಷೇಣೇದಂ ಶುಭಾಕ್ಷರಮ್ ॥ ೧೩ ॥

ಮುನಿಗಳು ಹೇಳಿದ ಈ ಮಾತನ್ನು ಕೇಳಿ ರಾಜಾ ದಶರಥನು ಬಹಳ ಸಂತುಷ್ಟನಾದ. ಹರ್ಷದಿಂದ ಅಮಾತ್ಯರಿಗೆ ಈ ಸಂತೋಷಕರವಾದ ಮಾತನ್ನು ನುಡಿದ.

ಗುರೂಣಾಂ ವಚನಾಚ್ಚೀಘ್ರಂ ಸಂಭಾರಾಃ ಸಂಭ್ರಿಯಂತು ಮೇ ।
ಸಮರ್ಥಾಧಿಷ್ಠಿತಶ್ಚಾಶ್ವಃ ಸೋಪಾಧ್ಯಾಯೋ ವಿಮುಚ್ಯತಾಮ್ ॥ ೧೪ ॥

ಗುರುಗಳ ಮಾತಿನಂತೆ ಶೀಘ್ರವಾಗಿ ನನ್ನ ಯಜ್ಞದ ಸಲಕರಣೆಗಳನ್ನು ಸಿದ್ಧ ಪಡಿಸಿರಿ. ಸಮರ್ಥರಾದ ವೀರರ ರಕ್ಷಣೆಯಲ್ಲಿ ಪ್ರಧಾನರಾದ ನಾಲ್ವರು ಋತ್ವಿಜರು ಮತ್ತು ಉಪಾಧ್ಯಾಯರೊಂದಿಗೆ ಯಜ್ಞಾಶ್ವವನ್ನು ಭೂಮಂಡಲದಲ್ಲಿ ಸುತ್ತಿಬರಲು ಬಿಡಿರಿ.

ಸರಯ್ವಾಶ್ಚೋತ್ತರೇ ತೀರೇ ಯಜ್ಞಭೂಮಿರ್ವಿಧೀಯತಾಮ್ ।
ಶಾಂತಯಶ್ಚಾಭಿವರ್ಧಂತಾಂ ಯಥಾಕಲ್ಪಂ ಯಥಾವಿಧಿ ॥ ೧೫ ॥

ಸರಯೂ ನದಿಯ ಉತ್ತರ ತೀರದಲ್ಲಿ ಯಾಗಶಾಲೆ ನಿರ್ಮಾಣಕಾರ್ಯವನ್ನು

ಪೂರ್ತಿ ಮಾಡಿಸಿರಿ. ಶಾಂತಿಕರ್ಮಗಳನ್ನು ಯಥಾಕ್ರಮವಾಗಿ ವಿಧ್ಯುಕ್ತವಾಗಿ ಮಾಡಿಸಿರಿ.

ಶಕ್ಯಃ ಕರ್ತುಮಯಂ ಯಜ್ಞಃ ಸರ್ವೈರಪಿ ಮಹೀಕ್ಷಿತಾ ।
ನಾಪರಾಧೋ ಭವೇತ್ಕಶ್ಚೋ ಯದ್ಯಸ್ಮಿನ್ ಕ್ರತುಸತ್ತಮೇ ॥ ೧೬ ॥

ಎಲ್ಲ ರಾಜರಿಂದಲೂ ಈ ಯಾಗವನ್ನು ಮಾಡಲು ಶಕ್ಯವೆ? ಶ್ರೇಷ್ಠವಾದ ಈ ಯಾಗದಲ್ಲಿ ಏನೂ ತಪ್ಪಾಗಬಾರದು. ತಪ್ಪೇನಾದರೂ ಆದರೆ ಕಷ್ಟ.

ಛಿದ್ರಂ ಹಿ ಮೃಗಯಂತೇಽತ್ರ ವಿದ್ವಾಂಸೋ ಬ್ರಹ್ಮರಾಕ್ಷಸಾಃ ।
ವಿಘ್ನಿತಸ್ಯ ಹಿ ಯಜ್ಞಸ್ಯ ಸದ್ಯಃ ಕರ್ತಾ ವಿನಶ್ಯತಿ ॥ ೧೭ ॥

ಯಜ್ಞದಲ್ಲಿ ಹಿಂದೆ ತಾವು ತಪ್ಪು ಮಾಡಿ ಈಗ ಬ್ರಹ್ಮರಾಕ್ಷಸರಾದ ಬ್ರಾಹ್ಮಣರು ಯಜ್ಞದಲ್ಲಿ ಏನು ತಪ್ಪಾಯಿತೆಂದು ತಿಳಿಯಬಲ್ಲ ವಿದ್ವಾಂಸರಾಗಿರುತ್ತಾರೆ. ಅವರು ತಪ್ಪನ್ನು ಹುಡುಕುತ್ತಾರೆ. ತಪ್ಪಿನಿಂದಾಗಿ ಯಜ್ಞ ನಿಂತುಹೋದರೆ ಯಜಮಾನ ಒಡನೆ ನಾಶ ಹೊಂದುತ್ತಾನೆ.

ತದ್ಯಥಾ ವಿಧಿಪೂರ್ವಂ ಮೇ ಕ್ರತುರೇವ ಸಮಾಪ್ಯತೇ ।
ತಥಾ ವಿಧಾನಂ ಕ್ರಿಯತಾಂ ಸಮರ್ಥಾಃ ಕರಣೇಷ್ವಿಹ ॥ ೧೮ ॥

ಕರ್ಮಾಚರಣೆಯಲ್ಲಿ ಸಮರ್ಥರಾದ ನೀವೆಲ್ಲರೂ ನನ್ನ ಯಜ್ಞವು ಏನೂ ತಪ್ಪಿಲ್ಲದೆ ವಿಧ್ಯುಕ್ತವಾಗಿ ನಡೆದು ಸಮಾಪ್ತಿ ಹೊಂದುವಂತೆ ನೋಡಿಕೊಳ್ಳಿರಿ' ಎಂದು.

ತಥೇತಿ ಚ ತತಃ ಸರ್ವೇ ಮಂತ್ರಿಣಃ ಪ್ರತ್ಯಪೂಜಯನ್ ।
ಪಾರ್ಥಿವೇಂದ್ರಸ್ಯ ತದ್ವಾಕ್ಯಂ ಯಥಾಜ್ಞಪ್ತಮಕುರ್ವತ ॥ ೧೯ ॥

'ಹಾಗೇ ಆಗಲಿ' ಎಂದು ಎಲ್ಲ ಮಂತ್ರಿಗಳೂ ರಾಜನ ಮಾತನ್ನು ಶಿರಸಾ ವಹಿಸಿದರು. ಅವನಾಜ್ಞೆಯಂತೇ ಕರ್ಮ ಮಾಡಿದರು.

ತತೋ ದ್ವಿಜಾಸ್ತೇ ಧರ್ಮಜ್ಞಮಸ್ತುವನ್ಪಾರ್ಥಿವರ್ಷಭಮ್ ।
ಅನುಜ್ಞಾತಾಸ್ತತಃ ಸರ್ವೇ ಪುನರ್ಜಗ್ಮುರ್ಯಥಾಗತಮ್ ॥ ೨೦ ॥

ಧರ್ಮಜ್ಞನಾದ ರಾಜಶ್ರೇಷ್ಠನನ್ನು ಎಲ್ಲ ವಿಪ್ರರೂ ಹೊಗಳಿದರು. ಅವನ ಅನುಜ್ಞೆ ಪಡೆದು ಬಂದ ಹಾಗೇ ಹಿಂದೆ ಹೋದರು.

ಗತೇಷ್ವಥ ದ್ವಿಜಾಗ್ರ್ಯೇಷು ಮಂತ್ರಿಣಸ್ತಾನ್ನರಾಧಿಪಃ ।
ವಿಸರ್ಜಯಿತ್ವಾ ಸ್ವಂ ವೇಶ್ಮ ಪ್ರವಿವೇಶ ಮಹಾದ್ಯುತಿಃ ॥ ೨೧ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ದ್ವಾದಶಃ ಸರ್ಗಃ ॥ ೧೨ ॥

ವಿಪ್ರರೆಲ್ಲರೂ ಹೋದ ಬಳಿಕ ರಾಜನು ಆ ಮಂತ್ರಿಗಳನ್ನೂ ಹಿಂದಕ್ಕೆ ಕಳಿಸಿ ತನ್ನ ಅರಮನೆಯನ್ನು ಪ್ರವೇಶಿಸಿದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಹನ್ನೆರಡನೆ ಸರ್ಗ ಮುಗಿಯಿತು.

ತ್ರಯೋದಶಃ ಸರ್ಗಃ

ಪುನಃ ಪ್ರಾಪ್ತೇ ವಸಂತೇ ತು ಪೂರ್ಣಃ ಸಂವತ್ಸರೋಽಭವತ್ ।
ಪ್ರಸವಾರ್ಥಂ ಗತೋ ಯಷ್ಟುಂ ಹಯಮೇಧೇನ ವೀರ್ಯವಾನ್ ॥೧॥

ಪುನಃ ವಸಂತಕಾಲ ಬಂದಾಗ ಆಗಲೇ ಒಂದು ವರ್ಷ ಪೂರ್ತಿಯಾಯಿತು. ಸಾಂಗ್ರಹಿಣೇಷ್ಟಿ ಮುಂತಾದ ಎಲ್ಲ ಅಂಗಯಾಗಗಳೂ ಮುಗಿದುವು. ಪುತ್ರ-ಕಾಮನೆಯಿಂದ ಪ್ರಧಾನವಾದ ಅಶ್ವಮೇಧ- ಯಾಗ ಮಾಡಲು ರಾಜಾ ದಶರಥ ತೊಡಗಿದನು.

ಅಭಿವಾದ್ಯ ವಸಿಷ್ಠಂ ಚ ನ್ಯಾಯತಃ ಪ್ರತಿಪೂಜ್ಯ ಚ ।
ಅಬ್ರವೀತ್ಪ್ರಶ್ರಿತಂ ವಾಕ್ಯಂ ಪ್ರಸವಾರ್ಥಂ ದ್ವಿಜೋತ್ತಮಮ್ ॥ ೨ ॥

ವಸಿಷ್ಠರನ್ನು ಅಭಿವಾದನ ಮಾಡಿ ವಿಧ್ಯುಕ್ತವಾಗಿ ಸತ್ಕರಿಸಿ ವಿನಯಪೂರ್ವಕವಾದ ಮಾತನ್ನು ಪುತ್ರಕಾಮನೆಯಿಂದ ಅವರಲ್ಲಿ ನಿವೇದಿಸಿದನು.

ಯಜ್ಞೋ ಮೇ ಕ್ರಿಯತಾಂ ವಿಪ್ರ ಯಥೋಕ್ತಂ ಮುನಿಪುಂಗವ ।
ಯಥಾ ನ ವಿಘ್ನಃ ಕ್ರಿಯತೇ ಯಜ್ಞಾಂಗೇಷು ವಿಧೀಯತಾಮ್ ॥ ೩ ॥

ಮುನಿಯೇ, ನೀವು ಅಧ್ವರ್ಯುವಾಗಿ ವಿಧ್ಯುಕ್ತವಾಗಿ ನನ್ನ ಯಜ್ಞವನ್ನು ನಡೆಸಿಕೊಡಿರಿ. ಯಜ್ಞಾಂಗಗಳಲ್ಲಿ ರಾಕ್ಷಸರು ವಿಘ್ನ ಮಾಡದಂತೆ ನೋಡಿಕೊಳ್ಳಿರಿ.

ಭವಾನ್ ಸ್ನಿಗ್ಧಃ ಸುಹೃನ್ಮಹ್ಯಂ ಗುರುಶ್ಚ ಪರಮೋ ಮಹಾನ್ ।
ವೋಢವ್ಯೋ ಭವತಾ ಚೈವ ಭಾರೋ ಯಜ್ಞಸ್ಯ ಚೋದ್ಯತಃ ॥ ೪ ॥

ತಾವು ನನಗೆ ಪ್ರೀತಿಯ ಬಂಧು, ಪರಮ ಗುರು, ದೊಡ್ಡವರು. ಯಜ್ಞಾಶ್ವ ಹಿಂತಿರುಗಿ ಬಂದಿರುವುದರಿಂದ ಇನ್ನೂ ಪ್ರಾರಂಭವಾಗುವ ಯಜ್ಞದ ಎಲ್ಲ ಹೊಣೆಯನ್ನು ತಾವೇ ಹೊರಬೇಕು.

ತಥೇತಿ ಚ ಸ ರಾಜಾನಮಬ್ರವೀದ್ದ್ವಿಜಸತ್ತಮಃ ।
ಕರಿಷ್ಯೇ ಸರ್ವಮೇವೈತದ್ಭವತಾ ಯತ್ಸಮರ್ಥಿತಮ್ ॥ ೫ ॥

'ಹಾಗೇ ಆಗಲಿ,' ನೀನು ಹೇಳಿದಂತೇ ಎಲ್ಲವನ್ನೂ ಮಾಡವೆನು' ಎಂದರು ವಿಪ್ರೋತ್ತಮರಾದ ವಸಿಷ್ಠರು.

ತತೋಽಬ್ರವೀದ್ ದ್ವಿಜಾನ್ ವೃದ್ಧಾನ್ ಯಜ್ಞಕರ್ಮಸು ನಿಷ್ಠಿತಾನ್ ।
ಸ್ಥಾಪತ್ಯೇ ನಿಷ್ಠಿತಾಂಶ್ಚೈವ ವೃದ್ಧಾನ್ ಪರಮಧಾರ್ಮಿಕಾನ್ ॥ ೬ ॥

ಬಳಿಕ ವಸಿಷ್ಠರು ಯಜ್ಞಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಗಳಲ್ಲಿ ಪರಿಣತರಾದ ಬ್ರಾಹ್ಮಣರಿಗೆ ಹೇಳಿದರು. ಪರಮ ಧಾರ್ಮಿಕರಾದ ನಿಷ್ಠೆಯಿಂದ ಕಾರ್ಯ ಮಾಡಬಲ್ಲ, ಶಿಲ್ಪದಲ್ಲಿ ನಿಪುಣರಾದ ವಿಪ್ರರಿಗೆ ಹೇಳಿದರು.

ಕರ್ಮಾಂತಿಕಾನ್ ಶಿಲ್ಪಕರಾನ್ ವರ್ಧಕೀನ್ ಖನಕಾನಪಿ ।
ಗಣಕಾನ್ ಶಿಲ್ಪಿನಶ್ಚೈವ ತಥೈವ ನಟನರ್ತಕಾನ್ ॥
ತಥಾ ಶುಚೀನ್ ಶಾಸ್ತ್ರವಿದಃ ಪುರುಷಾನ್ಬಹುಶ್ರುತಾನ್ ॥ ೭ ॥

ಯಜ್ಞಸಮಾಪ್ತಿ ಪರ್ಯಂತ ಕರ್ಮ ಮಾಡುವ ಪರಿಚಾರಕರಿಗೂ ಹೇಳಿದರು. ಶಿಲ್ಪಿಗಳಿಗೂ ಬಡಗಿಗಳಿಗೂ ನೆಲ ಅಗೆಯುವವರಿಗೂ ಜ್ಯೋತಿಷಿಗಳಿಗೂ ಚಿತ್ರಕಾರರಿಗೂ ನಟ ನರ್ತಕರಿಗೂ ಹಾಗೇ ಶುದ್ಧ ಬುದ್ಧಿಯವರಾದ ಬಹು ಅಧ್ಯಯನ ಮಾಡಿದ ಶಾಸ್ತ್ರಜ್ಞರಾದ ಪುರುಷರಿಗೂ ಯಜ್ಞಕ್ಕೆ ಸಂಬಂಧಿಸಿದ ಎಲ್ಲ ಕರ್ಮಗಳನ್ನೂ ನಿರ್ವಹಿಸಲು ಆದೇಶಿಸಿದರು.

ಯಜ್ಞಕರ್ಮ ಸಮೀಹಂತಾಂ ಭವಂತೋ ರಾಜಶಾಸನಾತ್ ।
ಇಷ್ಟಕಾ ಬಹುಸಾಹಸ್ರಾಃ ಶೀಘ್ರಮಾನೀಯತಾಮಿತಿ ॥ ೮ ॥

'ರಾಜಾಜ್ಞೆಯಂತೆ ನೀವೆಲ್ಲರೂ ಯಜ್ಞದ ಆಯಾ ಕಾರ್ಯಗಳನ್ನು ನಿರ್ವಹಿಸಿರಿ. ಬಹು ಸಹಸ್ರಸಂಖ್ಯೆಯಲ್ಲಿ ಇಟ್ಟಿಗೆಗಳನ್ನು ತಂದಿರಿಸಿರಿ' ಎಂದರು.

ಔಪಕಾರ್ಯಾಃ ಕ್ರಿಯಂತಾಂ ಚ ರಾಜ್ಞಾಂ ಬಹುಗುಣಾನ್ವಿತಾಃ ।
ಬ್ರಾಹ್ಮಣಾವಸಥಾಶ್ಚೈವ ಕರ್ತವ್ಯಾಃ ಶತಶಃ ಶುಭಾಃ ॥ ೯ ॥

'ಅತಿಥಿಗಳಾಗಿ ಬರುವ ರಾಜರಿಗೆ ಯೋಗ್ಯವಾದ ಎಲ್ಲ ಸೌಲಭ್ಯಗಳಿಂದ ಕೂಡಿದ ನೂರಾರು ಅರಮನೆಗಳನ್ನೂ, ಬ್ರಾಹ್ಮಣರಿಗೆ ಗೃಹಗಳನ್ನು ಸಿದ್ಧ ಪಡಿಸಿರಿ.

ಭಕ್ಷ್ಯಾನ್ನಪಾನೈರ್ಬಹುಭಿಃ ಸಮುಪೇತಾಃ ಸುನಿಷ್ಠಿತಾಃ ।
ತಥಾ ಪೌರಜನಸ್ಯಾಪಿ ಕರ್ತವ್ಯಾ ಬಹುವಿಸ್ತರಾಃ ॥ ೧೦ ॥

'ಅರಮನೆ ಹಾಗೂ ಬ್ರಾಹ್ಮಣಗೃಹಗಳು ವಿಸ್ತಾರವಾಗಿದ್ದು ಬಹು ಭಕ್ಷ್ಯ ಅನ್ನಪಾನಗಳಿಂದ ಸಜ್ಜಾಗಿರಬೇಕು. ಅದೇ ರೀತಿ ಪೌರಜನರಿಗೂ ವಿಸ್ತಾರವಾದ ವಸತಿ ಸೌಲಭ್ಯ ಕಲ್ಪಿಸಬೇಕು.

ಆಗತಾನಾಂ ಸುದೂರಾಚ್ಚ ಪಾರ್ಥಿವಾನಾಂ ಪೃಥಕ್ ಪೃಥಕ್ ।
ವಾಜಿವಾರಣಶಾಲಾಶ್ಚ ತಥಾ ಶಯ್ಯಾಗೃಹಾಣಿ ಚ ॥
ಭಟಾನಾಂ ಮಹದಾವಾಸಾ ವೈದೇಶಿಕನಿವಾಸಿನಾಮ್ ॥ ೧೧ ॥

'ದೂರದಿಂದ ಬಂದ ರಾಜರಿಗೆ ಬೇರೆ ಬೇರೆಯಾಗಿ ಅಶ್ವಶಾಲೆ ಗಜಶಾಲೆ ಶಯ್ಯಾಗೃಹಗಳನ್ನೂ ವಿದೇಶವಾಸಿಗಳಾದ ಭಟರಿಗೂ ವಿಸ್ತಾರವಾದ ವಸತಿಗಳನ್ನೂ ನಿರ್ಮಿಸಬೇಕು.

ಆವಾಸಾ ಬಹುಭಕ್ಷ್ಯಾ ವೈ ಸರ್ವಕಾಮೈರುಪಸ್ಥಿತಾಃ ।
ತಥಾ ಜಾನಪದಸ್ಯಾಪಿ ಜನಸ್ಯ ಬಹುಶೋಭನಮ್ ।
ದಾತವ್ಯಮನ್ನಂ ವಿಧಿವತ್ಸತ್ಕೃತ್ಯ ನ ತು ಲೀಲಯಾ ॥ ೧೨ ॥

'ಈ ವಸತಿಗಳಲ್ಲಿ ಬಹು ಭಕ್ಷ್ಯಗಳಿರಬೇಕು. ಎಲ್ಲ ಅಭೀಷ್ಟ ವಸ್ತುಗಳಿರಬೇಕು. ಗ್ರಾಮೀಣ ಜನರಿಗೂ ಬಹು ಉತ್ತಮವಾದ ಅನ್ನವನ್ನು ವಿಧ್ಯುಕ್ತವಾಗಿ ನೀಡಬೇಕು. ಅನಾದರದಿಂದಲ್ಲ.

ಸರ್ವವರ್ಣಾ ಯಥಾ ಪೂಜಾಂ ಪ್ರಾಪ್ನುವಂತಿ ಸುಸತ್ಕೃತಾಃ ॥ ೧೩ ॥

'ಎಲ್ಲ ವರ್ಣದವರೂ ಚೆನ್ನಾಗಿ ಸತ್ಕೃತರಾಗಿಯೇ ಅನ್ನಾದಿ ಉಪಚಾರಗಳನ್ನು ಹೊಂದುವಂತಾಗಬೇಕು.

ನ ಚಾವಜ್ಞಾ ಪ್ರಯೋಕ್ತವ್ಯಾ ಕಾಮಕ್ರೋಧವಶಾದಪಿ ।
ಯಜ್ಞಕರ್ಮಸು ಯೇ ವ್ಯಗ್ರಾಃ ಪುರುಷಾಃ ಶಿಲ್ಪಿನಸ್ತಥಾ ॥ ೧೪ ॥

ತೇಷಾಮಪಿ ವಿಶೇಷೇಣ ಪೂಜಾ ಕಾರ್ಯಾ ಯಥಾಕ್ರಮಮ್ ।
ತೇ ಚ ಸ್ಯುಃ ಸಂಭೃತಾಃ ಸರ್ವೇ ವಸುಭಿರ್ಭೋಜನೇನ ಚ ॥ ೧೫ ॥

ವೈಯಕ್ತಿಕ ಕಾಮಕ್ರೋಧಾದಿ ವಶದಿಂದ ಅತಿಥಿಗಳನ್ನು ಯಾರೂ ತಿರಸ್ಕಾರದಿಂದ ನೋಡಬಾರದು. ಯಜ್ಞಕ್ಕೆ ಸಂಬಂಧಿಸಿದ ಯಜ್ಞಶಾಲಾ ನಿರ್ಮಾಣ, ಅತಿಥಿಗಳ ವಸತಿ ಸೌಲಭ್ಯಕಲ್ಪನೆ ಮುಂತಾದ ಕಾರ್ಯಗಳಲ್ಲಿ ನಿರತರಾದವರಿಗೂ ಗೀತನೃತ್ಯ ಚಿತ್ರಕಲೆ ಮುಂತಾದ ಶಿಲ್ಪಗಳಲ್ಲಿ ತೊಡಗಿಸಿಕೊಂಡವರಿಗೂ ಕೂಡ ಯಥಾಕ್ರಮವಾಗಿ ಸತ್ಕಾರ ಮಾಡಬೇಕು. ಅವರೂ ಕೂಡ ಅನ್ನದಾನ ದಕ್ಷಿಣೆಗಳಿಂದ ತೃಪ್ತರಾಗುವಂತೆ ನೋಡಿಕೊಳ್ಳಬೇಕು.

ಯಥಾ ಸರ್ವಂ ಸುವಿಹಿತಂ ನ ಕಿಂಚಿತ್ಪರಿಹೀಯತೇ ।
ತಥಾ ಭವಂತಃ ಕುರ್ವಂತು ಪ್ರೀತಿಸ್ನಿಗ್ಧೇನ ಚೇತಸಾ ॥ ೧೬ ॥

'ಎಲ್ಲ ಕಾರ್ಯಕ್ರಮವನ್ನೂ ಯಶಸ್ವಿಯಾಗಿ ಲೋಪದೋಷಗಳಿಲ್ಲದಂತೆ ಪ್ರೀತಿ ಸ್ನೇಹಪೂರ್ಣವಾದ ಮನಸಿನಿಂದ ನಡೆಸಿಕೊಡಿರಿ' ಎಂದು ವಸಿಷ್ಠರು ಸ್ವಯಂ ಸೇವಕರಿಗೆ ಆದೇಶ ನೀಡಿದರು.

ತತಃ ಸರ್ವೇ ಸಮಾಗಮ್ಯ ವಸಿಷ್ಠಮಿದಮಬ್ರುವನ್ ।
ಯಥೋಕ್ತಂ ತತ್ಸುವಿಹಿತಂ ನ ಕಿಂಚಿತ್ಪರಿಹೀಯತೇ ।
ಯಥೋಕ್ತಂ ತತ್ಕರಿಷ್ಯಾಮೋ ನ ಕಿಂಚಿತ್ಪರಿಹೀಯತೇ ॥ ೧೭ ॥

ಆಗ ಅವರೆಲ್ಲರೂ ಬಂದು ವಸಿಷ್ಠರಿಗೆ ಹೇಳಿದರು– 'ನೀವು ಹೇಳಿದಂತೆಯೇ ಯಶಸ್ವಿಯಾಗಿ ಎಲ್ಲವನ್ನೂ ಮಾಡುವೆವು ಎಲ್ಲಿಯೂ ಲೋಪದೋಷಗಳಿಲ್ಲದಂತೆ ನೋಡಿಕೊಳ್ಳುವೆವು' ಎಂದು.

ತತಃ ಸುಮಂತ್ರಮಾನೀಯ ವಸಿಷ್ಠೋ ವಾಕ್ಯಮಬ್ರವೀತ್ ॥
ನಿಮಂತ್ರಯಸ್ವ ನೃಪತೀನ್ಪೃಥಿವ್ಯಾಂ ಯೇ ಚ ಧಾರ್ಮಿಕಾಃ ॥ ೧೮ ॥

ಬಳಿಕ ಸುಮಂತ್ರನನ್ನು ಕರೆಸಿ ವಸಿಷ್ಠರು ಹೇಳಿದರು– 'ಭೂಮಂಡಲದಲ್ಲಿರುವ ಎಲ್ಲ ಧಾರ್ಮಿಕರಾದ ರಾಜರನ್ನು ಆಹ್ವಾನಿಸು.

ಬ್ರಾಹ್ಮಣಾನ್ ಕ್ಷತ್ರಿಯಾನ್ ವೈಶ್ಯಾನ್ ಶೂದ್ರಾಂಶ್ಚೈವ ಸಹಸ್ರಶಃ ।
ಸಮಾನಯಸ್ವ ಸತ್ಕೃತ್ಯ ಸರ್ವದೇಶೇಷು ಮಾನವಾನ್ ॥ ೧೯ ॥

ಬ್ರಾಹ್ಮಣರನ್ನೂ ಕ್ಷತ್ರಿಯರನ್ನೂ ವೈಶ್ಯರನ್ನೂ ಶೂದ್ರರನ್ನೂ ಮಾತ್ರವಲ್ಲದೆ ಸಂಕರ ಜಾತಿಯ ಮಾನವರನ್ನೂ ಆಹ್ವಾನಿಸು.

ಮಿಥಿಲಾಧಿಪತಿಂ ಶೂರಂ ಜನಕಂ ಸತ್ಯವಿಕ್ರಮಮ್ ।
ನಿಷ್ಠಿತಂ ಸರ್ವಶಾಸ್ತ್ರೇಷು ತಥಾ ವೇದೇಷು ನಿಷ್ಠಿತಮ್ ॥ ೨೦ ॥

ತಮಾನಯ ಮಹಾಭಾಗಂ ಸ್ವಯಮೇವ ಸುಸತ್ಕೃತಮ್ ।
ಪೂರ್ವಸಂಬಂಧಿನಂ ಜ್ಞಾತ್ವಾ ತತಃ ಪೂರ್ವಂ ಬ್ರವೀಮಿ ತೇ ॥ ೨೧ ॥

ವಿಶೇಷವಾಗಿ ಶೂರ, ಸತ್ಯಪರಾಕ್ರಮಿ, ಸರ್ವಶಾಸ್ತ್ರಗಳಲ್ಲಿ ನಿಷ್ಠೆ ಉಳ್ಳವನು,

ವೇದಗಳಲ್ಲಿ ನಿಷ್ಠೆ ಉಳ್ಳವನು. ಇಂಥ ಮಹಾಶಯ ಮಿಥಿಲಾಧಿಪತಿ ಜನಕರಾಜನನ್ನು ಆಹ್ವಾನಿಸು, ಸ್ವತಃ ನೀನೇ ಅವನನ್ನು ಎಲ್ಲರಿಗಿಂತ ಮೊದಲಿಗೇ ಕರೆತಾ. ಅವನು ಮುಂದೆ ನಮಗೆ ಸಂಬಂಧಿಯಾಗುವನೆಂದು ನಾನು ಮೊದಲೇ ಯೋಗಬಲದಿಂದ ತಿಳಿದಿದ್ದೇನೆ.

ತಥಾ ಕಾಶೀಪತಿಂ ಸ್ನಿಗ್ಧಂ ಸತತಂ ಪ್ರಿಯವಾದಿನಮ್ ।
ಸದ್‌ವೃತ್ತಂ ದೇವಸಂಕಾಶಂ ಸ್ವಯಮೇವಾನಯಸ್ವ ಹ ॥ ೨೨ ॥

ಹಾಗೆ ಕಾಶೀರಾಜ. ಅವನು ಸ್ನೇಹಿತ, ಸದಾ ಪ್ರಿಯವಾದಿ, ಸದಾಚಾರಿ, ದೇವಸದೃಶ, ಸ್ವತಃ ನೀನೇ ಅವನನ್ನೂ ಕರೆತಾ.

ತಥಾ ಕೇಕಯರಾಜಾನಂ ವೃದ್ಧಂ ಪರಮಧಾರ್ಮಿಕಮ್ ।
ಶ್ವಶುರಂ ರಾಜಸಿಂಹಸ್ಯ ಸಪುತ್ರಂ ತ್ವಮಿಹಾನಯ ॥ ೨೩ ॥

ಹಾಗೇ ಕೇಕಯರಾಜ. ವೃದ್ಧ, ಪರಮ ಧಾರ್ಮಿಕ. ದಶರಥನಿಗೆ ಮಾವ, ಪುತ್ರನೊಂದಿಗೆ ಅವನನ್ನು ಕರೆತಾ.

ಅಂಗೇಶ್ವರಂ ಮಹಾಭಾಗಂ ರೋಮಪಾದಂ ಸುಸತ್ಕೃತಮ್ ।
ವಯಸ್ಯಂ ರಾಜಸಿಂಹಸ್ಯ ಸಮಾನಯ ಯಶಸ್ವಿನಮ್ ॥ ೨೪ ॥

ಅಂಗರಾಜ ರೋಮಪಾದನೂ ಮಹಾಶಯ, ದಶರಥನ ಸ್ನೇಹಿತ, ಯಶಸ್ವಿ. ಅವನನ್ನೂ ಸತ್ಕಾರದೊಂದಿಗೆ ಕರೆತಾ.

ತಥಾ ಕೋಸಲರಾಜಾನಂ ಭಾನುಮಂತಂ ಸುಸತ್ಕೃತಮ್ ।
ಮಗಧಾಧಿಪತಿಂ ಶೂರಂ ಸರ್ವಶಾಸ್ತ್ರವಿಶಾರದಮ್ ॥ ೨೫ ॥

ಕೋಸಲರಾಜ ಭಾನುಮಂತ ಮತ್ತು ಶೂರನೂ ಸರ್ವಶಾಸ್ತ್ರ ವಿಶಾರದನೂ ಆದ ಮಗಧರಾಜ. ಇವರನ್ನೂ ಕರೆತಾ.

ಪ್ರೀತಿಜ್ಞಂ ಪರಮೋದಾರಂ ಸತ್ಕೃತಂ ಪುರುಷರ್ಷಭಮ್ ।
ರಾಜ್ಞಃ ಶಾಸನಮಾದಾಯ ಚೋದಯಸ್ವ ನೃಪರ್ಷಭಾನ್ ॥ ೨೬ ॥

ಇವರು ನಮ್ಮ ಪ್ರೀತಿಯನ್ನು ಅನುಭವದಿಂದ ಬಲ್ಲವರು ಪರಮ ಔದಾರ್ಯ ಉಳ್ಳ ಶ್ರೇಷ್ಠ ಪುರುಷರು. ಸತ್ಕಾರ ಪೂರ್ವಕವಾಗಿ ಇವರನ್ನು ಕರೆತಾ. ರಾಜಾಜ್ಞೆ-ಯನ್ನು ಶಿರಸಾ ವಹಿಸಿ ಇವರೆಲ್ಲರನ್ನೂ ಯಜ್ಞಕ್ಕೆ ಬರಲು ಕೇಳಿಕೊಳ್ಳು.

ಪ್ರಾಚೀನಾನ್ಸಿಂಧುಸೌವೀರಾನ್ಸೌರಾಷ್ಟ್ರೇಯಾಂಶ್ಚ ಪಾರ್ಥಿವಾನ್ ।
ದಾಕ್ಷಿಣಾತ್ಯಾನ್ನರೇಂದ್ರಾಂಶ್ಚ ಸಮಸ್ತಾನಾನಯಸ್ವ ಹ ॥ ೨೭ ॥

ಪೂರ್ವದೇಶದ ರಾಜರು ಸಿಂಧು ಸೌವೀರರಾಜರು, ಸೌರಾಷ್ಟ್ರದೇಶದ ರಾಜರು, ದಾಕ್ಷಿಣಾತ್ಯ ರಾಜರು ಇವರೆಲ್ಲರನ್ನೂ ದೂತರ ಮೂಲಕ ಆಹ್ವಾನವಿತ್ತು ಕರೆಸು.

ಸಂತಿ ಸ್ನಿಗ್ಧಾಶ್ಚ ಯೇ ಚಾನ್ಯೇ ರಾಜಾನಃ ಪೃಥಿವೀತಲೇ ।
ತಾನಾನಯ ಯಥಾಕ್ಷಿಪ್ರಂ ಸಾನುಗಾನ್ಸಹಬಾಂಧವಾನ್ ॥ ೨೮ ॥

ಇನ್ನು ಸ್ನೇಹಿತರಾದ ರಾಜರು ಯಾರ್ಯಾರು ಭೂತಲದಲ್ಲಿ ಇರುವರೋ ಅವರನ್ನೂ ಸಕುಟುಂಬ ಸಪರಿವಾರರಾಗಿ ಬೇಗನೆ ಯಜ್ಞಕ್ಕೆ ಕರೆಸು.

ವಸಿಷ್ಠವಾಕ್ಯಂ ತಚ್ಛ್ರುತ್ವಾ ಸುಮಂತ್ರಸ್ತ್ವರಿತಸ್ತದಾ ।
ವ್ಯಾದಿಶತ್ಪುರುಷಾಂಸ್ತತ್ರ ರಾಜ್ಞಾಮಾನಯನೇ ಶುಭಾನ್ ॥ ೨೯ ॥

ವಸಿಷ್ಠರ ಆದೇಶವನ್ನು ಕೇಳಿ ಸುಮಂತ್ರನು ಬೇಗನೆ ಪೂರ್ವದೇಶ ಸಿಂಧು ಸೌವೀರಾದಿ ರಾಜರನ್ನು ಕರೆಸಲು ರಾಜದೂತರನ್ನು ಕಳಿಸಿದ.

ಸ್ವಯಮೇವ ಹಿ ಧರ್ಮಾತ್ಮಾ ಪ್ರಯಯೌ ಮುನಿಶಾಸನಾತ್ ।
ಸುಮಂತ್ರಸ್ತ್ವರಿತೋ ಭೂತ್ವಾ ಸಮಾನೇತುಂ ಮಹೀಕ್ಷಿತಃ ॥ ೩೦ ॥

ಜನಕರಾಜ ಮುಂತಾದ ರಾಜರನ್ನು ಕರೆತರಲು ಧರ್ಮಾತ್ಮನಾದ ಸುಮಂತ್ರನು ತಾನೇ ತ್ವರೆಯಿಂದ ಪ್ರಯಾಣ ಮಾಡಿದ.

ತೇ ಚ ಕರ್ಮಾಂತಿಕಾಃ ಸರ್ವೇ ವಸಿಷ್ಠಾಯ ಚ ಧೀಮತೇ ।
ಸರ್ವಂ ನಿವೇದಯಂತಿ ಸ್ಮ ಯಜ್ಞೇ ಯದುಪಕಲ್ಪಿತಮ್ ॥ ೩೧ ॥

ಯಜ್ಞದಲ್ಲಿ ಕೊನೆವರೆಗೂ ಸೇವೆ ಮಾಡುವ ಪರಿಚಾರಕರು ಎಲ್ಲರೂ ಧೀಮಂತರಾದ ವಸಿಷ್ಠರಿಗೆ ಯಜ್ಞಕ್ಕೆ ಏನು ಸಿದ್ಧತೆಗಳಾಗಬೇಕೋ ಅದೆಲ್ಲವೂ ಆಗಿದೆ ಎಂದು ನಿವೇದನೆ ಮಾಡಿಕೊಂಡರು.

ತತಃ ಪ್ರೀತೋ ದ್ವಿಜಶ್ರೇಷ್ಠಸ್ತಾನ್ಸರ್ವಾನ್ವನರಬ್ರವೀತ್ ।
ಭವದ್ಭಿರ್ನ ತಥಾ ಯಜ್ಞೇ ಪರಿಹಾಸ್ಯೇತ ಕಶ್ಚನ ॥ ೩೨ ॥

ಮುನಿಶ್ರೇಷ್ಠರಾದ ವಸಿಷ್ಠರು ಇದನ್ನು ಕೇಳಿ ಸಂತುಷ್ಟರಾದರು. ಅವನಿಗೆಲ್ಲರಿಗೂ ಪುನಃ ಹೇಳಿದರು 'ಯಜ್ಞದಲ್ಲಿ ನೀವು ಯಾರನ್ನೂ ಅಪಹಾಸ್ಯ ಮಾಡಬಾರದು.

ಅವಜ್ಞಯಾ ನ ದಾತವ್ಯಂ ಕಸ್ಯಚಿಲ್ಲೀಲಯಾಪಿ ವಾ ।
ಅವಜ್ಞಯಾ ಕೃತಂ ಹನ್ಯಾದ್ದಾತಾರಂ ನಾತ್ರ ಸಂಶಯಃ ॥ ೩೩ ॥

'ತಿರಸ್ಕಾರ ಭಾವನೆಯಿಂದಲಾಗಲಿ ವಿನೋದಕ್ಕಾಗಿಯಾಗಲಿ ದಾನ ಮಾಡಬಾರದು. ತಿರಸ್ಕಾರದಿಂದ ದಾನ ಮಾಡಿದರೆ ಅದು ದಾನ ಮಾಡಿದವನನ್ನು ನಾಶ ಮಾಡೀತು. ಇದರಲ್ಲಿ ಸಂಶಯವಿಲ್ಲ.'

ತತಃ ಕೈಶ್ಚಿದಹೋರಾತ್ರೈರುಪಯಾತಾ ಮಹೀಕ್ಷಿತಃ ।
ಬಹೂನಿ ರತ್ನಾನ್ಯಾದಾಯ ರಾಜ್ಞೋ ದಶರಥಸ್ಯ ಹಿ ॥ ೩೪ ॥

ಬಳಿಕ ಕೆಲವೇ ದಿನಗಳಲ್ಲಿ ರಾಜರು ಬಂದು ರಾಜಾ ದಶರಥನಿಗೆ ಬಹುರತ್ನ-ಗಳನ್ನು ತಂದೊಪ್ಪಿಸಿದರು.

ತತೋ ವಸಿಷ್ಠಃ ಸುಪ್ರೀತೋ ರಾಜಾನಮಿದಮಬ್ರವೀತ್ ।
ಉಪಯಾತಾ ನರವ್ಯಾಘ್ರ ರಾಜಾನಸ್ತವ ಶಾಸನಾತ್ ॥ ೩೫ ॥

ವಸಿಷ್ಠಮುನಿ ಸಂತುಷ್ಟರಾಗಿ ರಾಜನಿಗೆ ಹೇಳಿದರು 'ರಾಜನೆ ರಾಜರು ನಿನ್ನಾದೇಶದಿಂದ ಯಜ್ಞಕ್ಕೆ ಬಂದಿದ್ದಾರೆ.

ಮಯಾ ಚ ಸತ್ಕೃತಾಃ ಸರ್ವೇ ಯಥಾರ್ಹಂ ರಾಜಸತ್ತಮಾಃ ।
ಯಜ್ಞೋಯಂ ಚ ಕೃತಂ ರಾಜನ್ಪುರುಷೈಃ ಸುಸಮಾಹಿತೈಃ ॥ ೩೬ ॥

ರಾಜ ಶ್ರೇಷ್ಠರೆಲ್ಲರೂ ಯಥಾಯೋಗ್ಯವಾಗಿ ನನ್ನಿಂದ ಸತ್ಕಾರ ಪಡೆದಿದ್ದಾರೆ, ರಾಜನೆ, ಚೆನ್ನಾಗಿ ಮನಸಿಟ್ಟು ಯಜ್ಞಸಿದ್ಧತೆಯನ್ನು ಮಾಡಿದ್ದಾರೆ.

ನಿರ್ಯಾತು ಚ ಭವಾನ್ಯಷ್ಟುಂ ಯಜ್ಞಾಯತನಮಂತಿಕಾತ್ ।
ಸರ್ವಕಾಮೈರುಪಹೃತೈರುಪೇತಂ ವೈ ಸಮಂತತಃ ॥
ದ್ರಷ್ಟುಮರ್ಹಸಿ ರಾಜೇಂದ್ರ ಮನಸೇವ ವಿನಿರ್ಮಿತಮ್ ॥ ೩೭ ॥

ನೀನು ಯಜ್ಞ ಮಾಡಲು ಯಜ್ಞಶಾಲೆಯತ್ತ ಬರಬಹುದು. ಮಹಾರಾಜ, ನಿನ್ನ ಇಚ್ಛಾಮಾತ್ರದಿಂದಲೇ ನಿರ್ಮಿಸಿದಂತಿರುವ, ರಾಜರು ತಂದಿಟ್ಟ ಸಕಲಾಭೀಷ್ಟ ವಸ್ತುಗಳನ್ನು ಆಲ್ಲಿ ಎಲ್ಲೆಡೆ ನೀನೆ ನೋಡುವೆಯಂತೆ!

ತಥಾ ವಸಿಷ್ಠವಚನಾದೃಷ್ಯಶೃಂಗಸ್ಯ ಚೋಭಯೋಃ ।
ಶುಭೇ ದಿವಸನಕ್ಷತ್ರೇ ನಿರ್ಯಾತೋ ಜಗತೀಪತಿಃ ॥ ೩೮ ॥

ವಸಿಷ್ಠ ಮತ್ತು ಋಷ್ಯಶೃಂಗ ಇವರಿಬ್ಬರ ಮಾತಿನಂತೆ ಶುಭವಾರ ಶುಭನಕ್ಷತ್ರ-ಗಳಲ್ಲಿ ರಾಜಾ ದಶರಥನು ವಾದ್ಯಘೋಷದೊಂದಿಗೆ ಯಜ್ಞಶಾಲೆಗೆ ಹೊರಟನು.

ತತೋ ವಸಿಷ್ಠಪ್ರಮುಖಾಃ ಸರ್ವ ಏವ ದ್ವಿಜೋತ್ತಮಾಃ ।
ಋಷ್ಯಶೃಂಗಂ ಪುರಸ್ಕೃತ್ಯ ಯಜ್ಞಕರ್ಮಾರಭಂಸ್ತದಾ ॥ ೩೯ ॥

ಒಡನೆ ವಸಿಷ್ಠಾದಿ ಸಮಸ್ತ ಮುನಿಗಳು ಋಷ್ಯಶೃಂಗನನ್ನು ಮುಂದೆ ಮಾಡಿ-ಕೊಂಡು ಯಜ್ಞಕಾರ್ಯವನ್ನು ಆರಂಭಿಸಿದರು.

ಯಜ್ಞವಾಟಗತಾಃ ಸರ್ವೇ ಯಥಾಶಾಸ್ತ್ರಂ ಯಥಾವಿಧಿ ।
ಶ್ರೀಮಾಂಶ್ಚ ಸಹ ಪತ್ನೀಭೀ ರಾಜಾ ದೀಕ್ಷಾಮುಪಾವಿಶತ್ ॥ ೪೦ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ತ್ರಯೋದಶಃ ಸರ್ಗಃ ॥ ೧೩ ॥

ಎಲ್ಲರೂ ಯಜ್ಞಶಾಲೆಯಲ್ಲಿ ಬಂದು ಸೇರಿದರು. ಶಾಸ್ತ್ರಾನುಸಾರ ವಿಧ್ಯುಕ್ತವಾಗಿ ಶ್ರೀಮಾನ್ ರಾಜಾ ದಶರಥನು ಪತ್ನಿಯರೊಂದಿಗೆ ಯಜ್ಞದೀಕ್ಷೆಯನ್ನು ಹೊಂದಿದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಹದಿಮೂರನೆ ಸರ್ಗ ಮುಗಿಯಿತು.

ಚತುರ್ದಶಃ ಸರ್ಗಃ

ಅಥ ಸಂವತ್ಸರೇ ಪೂರ್ಣೇ ತಸ್ಮಿನ್ ಪ್ರಾಪ್ತೇ ತುರಂಗಮೇ ।
ಸರಯ್ವಾಶ್ಚೋತ್ತರೇ ತೀರೇ ರಾಜ್ಞೋ ಯಜ್ಞೋಽಭ್ಯವರ್ತತ ॥ ೧ ॥

ಯಜ್ಞಾಶ್ವವನ್ನು ಭೂತಳದಲ್ಲಿ ಸುತ್ತಲು ಬಿಟ್ಟು ಒಂದು ವರ್ಷ ಪೂರ್ತಿಯಾದಾಗ ಅದು ಹಿಂತಿರುಗಿ ಬಂದಿತು. ಬಳಿಕ ಸರಯೂ ನದಿಯ ಉತ್ತರತೀರದಲ್ಲಿ ರಾಜಾ ದಶರಥನ ಅಶ್ವಮೇಧಯಜ್ಞ ಪ್ರಾರಂಭವಾಯಿತು.

ಋಶ್ಯಶೃಂಗಂ ಪುರಸ್ಕೃತ್ಯ ಕರ್ಮ ಚಕ್ರುರ್ದ್ವಿಜರ್ಷಭಾಃ ।
ಅಶ್ವಮೇಧೇ ಮಹಾಯಜ್ಞೇ ರಾಜ್ಞೋಽಸ್ಯ ಸುಮಹಾತ್ಮನಃ ॥ ೨ ॥

ಕರ್ಮ ಕುರ್ವಂತಿ ವಿಧಿವದ್‌ಯಾಜಕಾ ವೇದಪಾರಗಾಃ ।
ಯಥಾವಿಧಿ ಯಥಾನ್ಯಾಯಂ ಪರಿಕ್ರಾಮಂತಿ ಶಾಸ್ತ್ರತಃ ॥ ೩ ॥

ಋಶ್ಯಶೃಂಗನನ್ನು ಮುಂದೆ ಮಾಡಿಕೊಂಡು ಮುನಿಶ್ರೇಷ್ಠರು ಮಹಾತ್ಮನಾದ ಈ ರಾಜನ ಅಶ್ವಮೇಧ ಮಹಾಯಜ್ಞದಲ್ಲಿ ಆಯಾ ಕರ್ಮಗಳನ್ನು ಮಾಡಿದರು. ಬ್ರಹ್ಮ ಎಂಬ ಋತ್ವಿಜನು ಆದಿಯಿಂದ ಅಂತ್ಯದ ವರೆಗೂ ಯಾವುದೇ ಕರ್ಮದಲ್ಲಿ ಯಾವುದೇ ಲೋಪದೋಷಗಳು ವಿಘ್ನಗಳು ಉಂಟಾಗದಂತೆ, ಉಂಟಾದರೆ ಒಡನೆ ಪ್ರಾಯಶ್ಚಿತ್ತಾದಿ ವಿಧಿಯಿಂದ ಪರಿಹಾರವಾಗುವಂತೆ ನೋಡಿಕೊಳ್ಳುವ ಅತಿ ಮುಖ್ಯವಾದ ಬ್ರಹ್ಮತ್ವ ಕರ್ಮವನ್ನು ಮಾಡುವವನು. ಋಶ್ಯಶೃಂಗರು ಈ ಕರ್ಮ ಮಾಡುವರು. ಯಾಜಕರು ಋತ್ವಿಜರು ಎಲ್ಲರೂ ವೇದಪಾರಂಗತರಾಗಿದ್ದು ವಿಧ್ಯುಕ್ತವಾಗಿ ಶಾಸ್ತ್ರಾನುಸಾರವೇ ಯಥಾಯೋಗ್ಯವಾಗಿ ತಮ್ಮ ತಮ್ಮ ಪಾಲಿನ ಕರ್ಮ ಮಾಡಿದರು.

ಪ್ರವರ್ಗ್ಯಂ ಶಾಸ್ತ್ರತಃ ಕೃತ್ವಾ ತಥೈವೋಪಸದಂ ದ್ವಿಜಾಃ ।
ಚಕ್ರುಶ್ಚ ವಿಧಿವತ್ಸರ್ವಮಧಿಕಂ ಕರ್ಮ ಶಾಸ್ತ್ರತಃ ॥ ೪ ॥

ಶಾಸ್ತ್ರಾನುಸಾರ ಪ್ರವರ್ಗ್ಯ ಕರ್ಮವನ್ನು ಮಾಡಿ ಒಡನೆ ಉಪಸತ್ ಎಂಬ ಇಷ್ಟಿಯನ್ನು ನಡೆಸಿದರು.

ಅಗ್ನಿಕುಂಡದಲ್ಲಿ ಕುದಿವ ತುಪ್ಪಕ್ಕೆ ಹಾಲು ಬೆರೆಸುವ ಕರ್ಮ ಪ್ರವರ್ಗ್ಯ. ಉಪಸದಿಷ್ಟಿಯು ಒಂದು ಆಜ್ಯಹೋಮ. ಎರಡನ್ನೂ ಮೂರು ದಿನಗಳ ಕಾಲ

ಬೆಳಿಗ್ಗೆ ಸಂಜೆ ಎರಡು ಹೊತ್ತು ನಡೆಸುತ್ತ ಮುಂದೆ ಇನ್ನೂ ಹೆಚ್ಚಿನ ಕರ್ಮವನ್ನು ವಿಧ್ಯುಕ್ತವಾಗಿ ಶಾಸ್ತ್ರಾನುಸಾರ ಮಾಡಿದರು.

ಅಭಿಪೂಜ್ಯ ತತೋ ಹೃಷ್ಟಾಃ ಸರ್ವೇ ಚಕ್ರುರ್ಯಥಾವಿಧಿ ।
ಪ್ರಾತಃ ಸವನಪೂರ್ವಾಣಿ ಕರ್ಮಾಣಿ ಮುನಿಪುಂಗವಾಃ ॥ ೫ ॥

ಕರ್ಮಾಂಗ ದೇವತೆಗಳನ್ನು ಆರಾಧಿಸುತ್ತ ಉತ್ಸಾಹದಿಂದ ವಿಧ್ಯುಕ್ತವಾಗಿ ಸೋಮಲತೆ ಜಜ್ಜಿ ರಸ ತೆಗೆದು ಪ್ರಾತಃಸವನ ಮುಂತಾದ ಕರ್ಮಗಳನ್ನು ಮುನಿಶ್ರೇಷ್ಠರು ನಡೆಸಿದರು.

ಐಂದ್ರಶ್ಚ ವಿಧಿವದ್ದತ್ತೋ ರಾಜಾ ಚಾಭಿಷುತೋಽನಘಃ ।
ಮಾಧ್ಯಂದಿನಂ ಚ ಸವನಂ ಪ್ರಾವರ್ತತ ಯಥಾಕ್ರಮಮ್ ॥ ೬ ॥

ಮೊದಲಿಗೆ ಇಂದ್ರನಿಗೆ ಸವನೀಯ ಹವಿಸ್ಸನ್ನು ನಿರ್ವಾಪ ಮಾಡಿ ವಿಧ್ಯುಕ್ತವಾಗಿ ಸೋಮಲತೆಗಳನ್ನು ಜಜ್ಜಿ ರಸ ತೆಗೆದು ಹೋಮಿಸಿದರು. ಹೀಗೆ ಪ್ರಾತಃಸವನವಾದ ಬಳಿಕ ಇದೇ ರೀತಿ ಮಾಧ್ಯಂದಿನ ಸವನವನ್ನೂ ಕ್ರಮವಾಗಿ ನಡೆಸಿದರು.

ತೃತೀಯಸವನಂ ಚೈವ ರಾಜ್ಞೋಽಸ್ಯ ಸುಮಹಾತ್ಮನಃ ।
ಚಕ್ರುಸ್ತೇ ಶಾಸ್ತ್ರತೋ ದೃಷ್ಟ್ವಾ ತಥಾ ಬ್ರಾಹ್ಮಣಪುಂಗವಾಃ ॥ ೭ ॥

ಮಹಾತ್ಮನಾದ ಈ ರಾಜನ ಯಜ್ಞಾಂಗವಾಗಿ ಬ್ರಾಹ್ಮಣೋತ್ತಮರು ಶಾಸ್ತ್ರಾನುಸಾರ ತೃತೀಯ ಸವನವನ್ನೂ ನಡೆಸಿದರು.

ಆಹ್ವಯಾಂಚಕ್ರಿರೇ ತತ್ರ ಶಕ್ರಾದೀನ್ವಿಬುಧೋತ್ತಮಾನ್ ।
ಋಷ್ಯಶೃಂಗಾದಯೋ ಮಂತ್ರೈಃ ಶಿಕ್ಷಾಕ್ಷರಸಮನ್ವಿತೈಃ ॥ ೮ ॥

ಈ ಸವನ ತ್ರಯದಲ್ಲಿ ಋಷ್ಯಶೃಂಗಾದಿ ಮುನಿಗಳು ಇಂದ್ರಾದಿ ದೇವೋತ್ತಮರನ್ನು ಶಿಕ್ಷಾ ಶಾಸ್ತ್ರಾನುಸಾರವಾಗಿ ಉಚ್ಚರಿಸಿದ ಮಂತ್ರಗಳಿಂದ ಆಹ್ವಾನಿಸಿದರು.

ಗೀತಿಭಿರ್ಮಧುರೈಃ ಸ್ನಿಗ್ಧೈರ್ಮಂತ್ರಾಹ್ವಾನೈರ್ಯಥಾರ್ಹತಃ ।
ಹೋತಾರೋ ದದುರಾವಾಹ್ಯ ಹವಿರ್ಭಾಗಾನ್ ದಿವೌಕಸಾಂ ॥ ೯ ॥

ಮಧುರವಾದ ಭಕ್ತಿಪೂರ್ವಕವಾದ ಸಾಮಗಾನ ರೂಪವಾದ ಸ್ತೋತ್ರಗಳಿಂದಲೂ ಮಂತ್ರಪೂರ್ವಕ ಆಹ್ವಾನರೂಪವಾದ ಶಸ್ತ್ರಗಳಿಂದಲೂ ದೇವತೆಗಳನ್ನು ಆವಾಹಿಸಿ ಯಥಾಯೋಗ್ಯವಾದ ಹವಿರ್ಭಾಗಗಳನ್ನು ಋತ್ವಿಜರು ಅರ್ಪಿಸಿದರು.

ನ ಚಾಹುತಮಭೂತ್ತತ್ರ ಸ್ಖಲಿತಂ ವಾಪಿ ಕಿಂಚನ ।
ದೃಶ್ಯತೇ ಬ್ರಹ್ಮವತ್ಸರ್ವಂ ಕ್ಷೇಮಯುಕ್ತಂ ಹಿ ಚಕ್ರಿರೇ ॥ ೧೦ ॥

ಯಾವುದೇ ಹೋಮ ಈ ಯಜ್ಞದಲ್ಲಿ ಲುಪ್ತವಾಗಲಿಲ್ಲ. ಯಾವುದೇ ತಪ್ಪು ಉಂಟಾಗಲಿಲ್ಲ. ಎಲ್ಲವೂ ವಿಧ್ಯುಕ್ತವಾಗಿ ನಡೆದುದು ಕಂಡುಬರುತ್ತಿತ್ತು. ಎಲ್ಲವನ್ನೂ ನಿರ್ವಿಘ್ನವಾಗಿ ಋತ್ವಿಜರು ನಡೆಸಿದರು.

ನ ತೇಷ್ವಹಸ್ಸು ಶ್ರಾಂತೋ ವಾ ಕ್ಷುಧಿತೋ ವಾಪಿ ದೃಶ್ಯತೇ ।
ನಾವಿದ್ವಾನ್ಬ್ರಾಹ್ಮಣಸ್ತತ್ರ ನಾಶತಾನುಚರಸ್ತಥಾ ॥ ೧೧ ॥

ಆ ಯಜ್ಞದ ದಿನಗಳಲ್ಲಿ ಯಾವ ಋತ್ವಿಜನೂ ಶ್ರಮದಿಂದ ಅಥವಾ ಹಸಿವಿನಿಂದ ಅಶಕ್ತನಾದುದು ಕಂಡುಬರಲಿಲ್ಲ. ಶಾಸ್ತ್ರವನ್ನು ತಿಳಿಯದಿದ್ದ ಋತ್ವಿಜನಾಗಲಿ ಶತಶಿಷ್ಯ ಸಮೇತನಾಗದ ಋತ್ವಿಜನಾಗಲಿ ಈ ಯಜ್ಞದಲ್ಲಿ ಇರಲಿಲ್ಲ.

ಬ್ರಾಹ್ಮಣಾ ಭುಂಜತೇ ನಿತ್ಯಂ ನಾಥವಂತಶ್ಚ ಭುಂಜತೇ ।
ತಾಪಸಾ ಭುಂಜತೇ ಚಾಪಿ ಶ್ರಮಣಾ ಭುಂಜತೇ ತಥಾ ॥ ೧೨ ॥

ಬ್ರಾಹ್ಮಣರೂ ಉಂಡರು. ಶೂದ್ರರೂ ಉಂಡರು. ತಪಸ್ವಿಗಳೂ ಉಂಡರು, ಸನ್ಯಾಸಿಗಳೂ ಉಂಡರು. ಯಜ್ಞಾಂಗವಾಗಿ ಅನ್ನದಾನ ನಡೆಯಿತು.

ವೃದ್ಧಾಶ್ಚ ವ್ಯಾಧಿತಾಶ್ಚೈವ ಸ್ತ್ರಿಯೋ ಬಾಲಾಸ್ತಥೈವ ಚ ।
ಅನಿಶಂ ಭುಂಜಮಾನಾನಾಂ ನ ತೃಪ್ತಿರುಪಲಭ್ಯತೇ ॥ ೧೩ ॥

ವೃದ್ಧರು ವ್ಯಾಧಿತರು ಸ್ತ್ರೀಯರು ಬಾಲಕರು ಎಲ್ಲರೂ ಉಂಡರು. ನಿರಂತರ ಈ ಭೋಜನ ಕಾರ್ಯಕ್ರಮ ನಡೆಯುತ್ತಿದ್ದರೂ ಯಜಮಾನನಿಗೆ ತೃಪ್ತಿಯಾದುದು ಮಾತ್ರ ಕಂಡುಬರಲಿಲ್ಲ.

ದೀಯತಾಂ ದೀಯತಾಮನ್ನಂ ವಾಸಾಂಸಿ ವಿವಿಧಾನಿ ಚ ।
ಇತಿ ಸಂಚೋದಿತಾಸ್ತತ್ರ ತಥಾ ಚಕ್ರುರನೇಕಶಃ ॥ ೧೪ ॥

ಅಧಿಕಾರಿಗಳು ಪರಿಚಾರಕರಿಗೆ 'ಬಡಿಸಿರಿ, ಬಡಿಸಿರಿ ಅನ್ನವನ್ನು. ಕೊಡಿರಿ ನಾನಾ ಬಗೆಯ ವಸ್ತ್ರಗಳನ್ನು' ಎಂದು ಹುರಿದುಂಬಿಸುತ್ತಿದ್ದರು. ಅದರಂತೆ ಪರಿಚಾರಕರು ಮತ್ತೆ ಮತ್ತೆ ಬಡಿಸಿದರು.

ಅನ್ನ ಕೂಟಾಶ್ಚ ಬಹವೋ ದೃಶ್ಯಂತೇ ಪರ್ವತೋಪಮಾಃ ।
ದಿವಸೇ ದಿವಸೇ ತತ್ರ ಸಿದ್ಧಸ್ಯ ವಿಧಿವತ್ತದಾ ॥ ೧೫ ॥

ಪ್ರತಿದಿವಸವೂ ಪಕ್ವವಾದ ಬೆಟ್ಟದಷ್ಟು ಪ್ರಮಾಣದ ಅನ್ನದ ರಾಶಿಗಳು ಬಹುಸಂಖ್ಯೆಯಲ್ಲಿ ಕಂಡುಬರುತ್ತಿದ್ದುವು.

ನಾನಾದೇಶಾದನುಪ್ರಾಪ್ತಾಃ ಪುರುಷಾಃ ಸ್ತ್ರೀಗಣಾಸ್ತಥಾ ।
ಅನ್ನಪಾನೈಃ ಸುವಿಹಿತಾಸ್ತಸ್ಮಿನ್ಯಜ್ಞೇ ಮಹಾತ್ಮನಃ ॥ ೧೬ ॥

ನಾನಾ ದೇಶದಿಂದ ಬಂದ ಪುರುಷರೂ ಸ್ತ್ರೀಯರೂ ಮಹಾತ್ಮ ದಶರಥನ ಆ ಯಜ್ಞದಲ್ಲಿ ಅನ್ನಪಾನಗಳಿಂದ ಚೆನ್ನಾಗಿ ಸತ್ಕಾರ ಹೊಂದಿದರು.

ಅನ್ನಂ ಹಿ ವಿಧಿವತ್ಸಾದು ಪ್ರಶಂಸಂತಿ ದ್ವಿಜರ್ಷಭಾಃ ।
ಅಹೋ ತೃಪ್ತಾಃ ಸ್ಮ ಭದ್ರಂ ತ ಇತಿ ಶುಶ್ರಾವ ರಾಘವಃ ॥ ೧೭ ॥

'ಆಹಾ! ಅನ್ನವು ಪಾಕಶಾಸ್ತ್ರ ವಿಧಿಗನುಗುಣವಾಗಿ ರುಚಿಕರವಾಗಿ ಪಕ್ವವಾಗಿದೆ! ನಾವು ತೃಪ್ತರಾಗಿದ್ದೇವೆ! ನಿನಗೆ ಒಳ್ಳೆಯದಾಗಲಿ' ಎಂದು ಬ್ರಾಹ್ಮಣೋತ್ತಮರು ಪ್ರಶಂಸಿಸಿದರು, ಹರಸಿದರು.

ಸ್ವಲಂಕೃತಾಶ್ಚ ಪುರುಷಾ ಬ್ರಾಹ್ಮಣಾನ್ಪರ್ಯವೇಷಯನ್ ।
ಉಪಾಸತೇ ಚ ತಾನನ್ಯೇ ಸುಮೃಷ್ಟಮಣಿಕುಂಡಲಾಃ ॥ ೧೮ ॥

ಅಲಂಕೃತರಾದ ಪುರುಷರು ಬ್ರಾಹ್ಮಣರಿಗೆ ಬಡಿಸಿದರು. ಬಡಿಸುವವರಿಗೆ ಬೇರೆ ಹೊಳೆವ ಮಣಿಕುಂಡಲಧಾರಿಗಳು ಸಹಾಯ ಮಾಡಿದರು.

ಕರ್ಮಾಂತರೇ ತದಾ ವಿಪ್ರಾ ಹೇತುವಾದಾನ್ಬಹೂನಪಿ ।
ಪ್ರಾಹುಃ ಸ್ಮ ವಾಗ್ಮಿನೋ ಧೀರಾಃ ಪರಸ್ಪರಜಿಗೀಷಯಾ ॥ ೧೯ ॥

ಸವನಗಳ ನಡುವಿನ ವಿಶ್ರಾಂತಿಕಾಲದಲ್ಲಿ ವಾಗ್ಮಿಗಳಾದ ವಿದ್ವಾಂಸರು ಯಜ್ಞಾಂಗವಾಗಿ ಪರಸ್ಪರ ಜಯೇಚ್ಛೆಯಿಂದ ತರ್ಕ ಪ್ರತಿತರ್ಕಗಳನ್ನು ಬಹುವಾಗಿ ಹೇಳುತ್ತಿದ್ದರು.

ದಿವಸೇ ದಿವಸೇ ತತ್ರ ಸಂಸ್ತರೇ ಕುಶಲಾ ದ್ವಿಜಾಃ ।
ಸರ್ವಕರ್ಮಾಣಿ ಚಕ್ರುಸ್ತೇ ಯಥಾಶಾಸ್ತ್ರಂ ಪ್ರಚೋದಿತಾಃ ॥ ೨೦ ॥

ಪ್ರತಿದಿವಸಗಳಲ್ಲಿಯು ಕುಶಲರಾದ ಋತ್ವಿಜರು ಶಾಸ್ತ್ರಾನುಸಾರ ದರ್ಭಾಸನದಲ್ಲಿ 'ಊಮ, ಊರ್ವ್ಯ, ಕಾವ್ಯ' ಎಂಬ ಪಿತೃಗಣ ದೇವತೆಗಳಿಗೆ, ಪ್ರಾತಃ ಸವನದಲ್ಲಿ ಎರಡು ಬಾರಿ, ಮಾಧ್ಯಂದಿನ ಸವನದಲ್ಲಿ ಎರಡು ಬಾರಿ, ತೃತೀಯ ಸವನದಲ್ಲಿ ಒಂದು ಬಾರಿ ಹೀಗೆ 'ನಾರಾಶಂಸ' ಎಂಬ ಸೋಮಪಾತ್ರೆಗಳಿಂದ ಸೋಮರಸದ ಆಹುತಿ ನೀಡುವ 'ಸರ್ವಕರ್ಮ'ಗಳನ್ನೂ ಮಾಡಿ ತಾವೂ ಸೋಮಪಾನ ಮಾಡಿದರು.

ನಾಷಡಂಗವಿದತ್ರಾಸೀನ್ನಾವ್ರತೋ ನಾಬಹುಶ್ರುತಃ ।
ಸದಸ್ಯಾಸ್ತಸ್ಯ ವೈ ರಾಜ್ಞೋ ನಾವಾದಕುಶಲಾ ದ್ವಿಜಾಃ ॥ ೨೧ ॥

ಈ ಯಾಗದಲ್ಲಿ ಸದಸ್ಯರೆಂಬ ಋತ್ವಿಜರಲ್ಲಿಯೂ ಷಡಂಗಗಳನ್ನು ತಿಳಿಯ-ದವನೂ ವ್ರತಾಚಾರಣ ಮಾಡದಿದ್ದವನೂ ಬಹು ಅಧ್ಯಯನ ಮಾಡದಿದ್ದವನೂ ಯಾರೂ ಇರಲಿಲ್ಲ. ವಾದಕೌಶಲ್ಯವಿಲ್ಲದ ದ್ವಿಜರೂ ಇರಲಿಲ್ಲ.

ಪ್ರಾಪ್ತೇ ಯೂಪೋಚ್ಛ್ರಯೇ ತಸ್ಮಿನ್ಷಡ್ ಬೈಲ್ವಾಃ ಖಾದಿರಾಸ್ತಥಾ ।
ತಾವಂತೋ ಬಿಲ್ವಸಹಿತಾಃ ಪರ್ಣಿನಶ್ಚ ತಥಾಽಪರೇ ॥ ೨೨ ॥

ಯೂಪಾರೋಪಣ ಕಾಲ ಪ್ರಾಪ್ತವಾದಾಗ ಆರು ಬಿಲ್ವವೃಕ್ಷ ಯೂಪಗಳು ಆರು ಖದಿರ ವೃಕ್ಷಯೂಪಗಳು ಸ್ಥಾಪಿತವಾದುವು, ಆರು ಪಲಾಶಯೂಪಗಳೂ ಬಿಲ್ವಯೂಪಗಳ ಪಕ್ಕದಲ್ಲಿ ಸ್ಥಾಪಿತವಾದುವು.

ಶ್ಲೇಷ್ಮಾತಕಮಯಸ್ತ್ವೇಕೋ ದೇವದಾರುಮಯಸ್ತಥಾ ।
ದ್ವಾವೇವ ವಿಹಿತೌ ತತ್ರ ಬಾಹುವ್ಯಸ್ತಪರಿಗ್ರಹೌ ॥ ೨೩ ॥

ಸವನೀಯ ಪಶುವಾದ ಅಶ್ವವನ್ನು ಕಟ್ಟುವ ಪ್ರಧಾನವಾದ ಯೂಪವು ಚಳ್ಳೆಮರದಿಂದ ಮಾಡಿದ್ದು ಸ್ಥಾಪಿತವಾಯಿತು. ಅದರ ಆಚೆ ಈಚೆ ದೇವದಾರು ಮಯವಾದ ಎರಡು ಯೂಪಗಳು. 'ವ್ಯಾಮ' ಅಂದರೆ ಚಾಚಿದ ಎರಡೂ ತೋಳುಗಳಿಂದ ಸ್ಪರ್ಶಿಸಬಹುದಾಗುವಷ್ಟು ಈ ಯೂಪಗಳು ಎತ್ತರವಾಗಿದ್ದುವು.

ಎರಡೂ ಕಡೆ ದೇವದಾರು ಯೂಪದ ಪಕ್ಕದಲ್ಲಿ ಬಿಲ್ವಯೂಪಗಳು ಮೂರು, ಅವುಗಳ ಬಳಿ ಖಾದಿರ ಯೂಪಗಳು ಮೂರು, ಪಲಾಶಯೂಪಗಳು ಮೂರು. ಎರಡೂ ಪಾರ್ಶ್ವಗಳಲ್ಲಿ. ಹೀಗೆ ಒಟ್ಟು ಇಪ್ಪತ್ತೊಂದು ಯೂಪಗಳು. ನಡುವಿನ ಯೂಪದಲ್ಲಿ ಅಶ್ವವನ್ನು ಕಟ್ಟಿದ್ದರು.

ಕಾರಿತಾಃ ಸರ್ವ ಏವೈತೇ ಶಾಸ್ತ್ರಜ್ಞೈರ್ಯಜ್ಞಕೋವಿದೈಃ ।
ಶೋಭಾರ್ಥಂ ತಸ್ಯ ಯಜ್ಞಸ್ಯ ಕಾಂಚನಾಲಂಕೃತಾ ಭವನ್ ॥ ೨೪ ॥

ಈ ಇಪ್ಪತ್ತೊಂದು ಯೂಪಗಳು ಯಜ್ಞಕೋವಿದರಾದ ಶಾಸ್ತ್ರಜ್ಞರಾದ ಋತ್ವಿಜ-ರಿಂದ ಮಾಡಿಸಲ್ಪಟ್ಟು ಯಜ್ಞಶೋಭೆಗಾಗಿ ಬಂಗಾರದಿಂದ ಅಲಂಕೃತವೂ ಆಗಿದ್ದುವು.

ಏಕವಿಂಶತಿಯೂಪಾಸ್ತೇ ಏಕವಿಂಶತ್ಯರತ್ನಯಃ ।
ವಾಸೋಭಿರೇಕವಿಂಶದ್ಭಿರೇಕೈಕಂ ಸಮಲಂಕೃತಾಃ ॥ ೨೫ ॥

ಇಪ್ಪತ್ತೊಂದು 'ಆರತ್ನಿ' ಅಂದರೆ, ಇಪ್ಪತ್ತನಾಲ್ಕು ಅಂಗುಲ ಅಳತೆ, ಒಟ್ಟು ಐನೂರ ನಾಲ್ಕು ಅಂಗುಲಗಳಷ್ಟು ಎತ್ತರದ ಇಪ್ಪತ್ತೊಂದು ಯೂಪಗಳಿಗೆ ಇಪ್ಪತ್ತೊಂದು ವಸ್ತ್ರಗಳನ್ನು ಸುತ್ತಿ ಪ್ರತಿಯೊಂದನ್ನೂ ಬಂಗಾರದಿಂದ ಅಲಂಕರಿಸಿ-ದ್ದಾರೆ.

ವಿನ್ಯಸ್ತಾ ವಿಧಿವತ್ಸರ್ವೇ ಶಿಲ್ಪಿಭಿಃ ಸುಕೃತಾ ದೃಢಾಃ ।
ಅಷ್ಟಾಶ್ರಯಃ ಸರ್ವ ಏವ ಶ್ಲಕ್ಷ್ಣರೂಪಸಮನ್ವಿತಾಃ ॥ ೨೬ ॥

'ಅಷ್ಟಾಶ್ರೀ' ಎಂಟು ಮೂಲೆಗಳುಳ್ಳ ಸುಂದರ ರೂಪದ ಆ ಎಲ್ಲ ಯೂಪಗಳು ವಿಧ್ಯುಕ್ತವಾಗಿ ಶಿಲ್ಪಿಗಳಿಂದ ನಿರ್ಮಿತವಾದವು. ದೃಢವಾಗಿರುವವು, ವಿಧ್ಯುಕ್ತವಾಗಿ ಸ್ಥಾಪಿತವಾದುವು.

ಆಚ್ಛಾದಿತಾಸ್ತೇ ವಾಸೋಭಿಃ ಪುಷ್ಪೈರ್ಗಂಧೈಶ್ಚ ಪೂಜಿತಾಃ ।
ಸಪ್ತರ್ಷಯೋ ದೀಪ್ತಿಮಂತೋ ವಿರಾಜಂತೇ ಯಥಾ ದಿವಿ ॥ ೨೭ ॥

ಯೂಪಗಳನ್ನು ಬಟ್ಟೆಯಿಂದ ಆಚ್ಛಾದಿಸಿ ಪುಷ್ಪಗಂಧಗಳಿಂದ ಅಲಂಕರಿಸಿದ್ದರು. ಅಂತರಿಕ್ಷದಲ್ಲಿ ಹೊಳೆಯುವ ಸಪ್ತರ್ಷಿಗಳಂತೆ ಈ ಯೂಪಗಳು ಸಾಲಾಗಿ ನಿಂತು ವಿರಾಜಮಾನವಾದುವು.

ಇಷ್ಟಕಾಶ್ಚ ಯಥಾನ್ಯಾಯಂ ಕಾರಿತಾಶ್ಚ ಪ್ರಮಾಣತಃ ।
ಚಿತೋಽಗ್ನಿರ್ಬ್ರಾಹ್ಮಣೈಸ್ತತ್ರ ಕುಶಲೈಃ ಶುಲ್ಬಕರ್ಮಣಿ ॥ ೨೮ ॥

ಯಥಾಯೋಗ್ಯ ಪ್ರಮಾಣ ಉಳ್ಳ ಇಟ್ಟಿಗೆಗಳನ್ನೂ ತಯಾರು ಮಾಡಿಸಿದ್ದರು. 'ಶುಲ್ಬಕರ್ಮ'ದಲ್ಲಿ ಹಗ್ಗದಿಂದ ಅಳೆದು ಮಾಡುವ ಅಗ್ನಿಚಯನ ಕಾರ್ಯದಲ್ಲಿ ಕುಶಲರಾದ ಬ್ರಾಹ್ಮಣರಿಂದ ಗರುಡಾಕಾರದಲ್ಲಿ ಚಯನ ಮಾಡಿದ್ದರು.

ಸ ಚಿತ್ಯೋ ರಾಜಸಿಂಹಸ್ಯ ಸಂಚಿತಃ ಕುಶಲೈರ್ದ್ವಿಜೈಃ ।
ಗರುಡೋ ರುಕ್ಮಪಕ್ಷೋ ವೈ ತ್ರಿಗುಣೋಽಷ್ಟಾದಶಾತ್ಮಕೈಃ ॥ ೨೯ ॥

ಬಂಗಾರದ ಇಟ್ಟಿಗೆಗಳಿಂದ ಗರುಡಾಕಾರವಾಗಿ ಆರು ಚಿತಿಗಳಲ್ಲಿ ಮೂರು ಪದರುಗಳಿಂದ ಒಟ್ಟು ಹದಿನೆಂಟು ಚಿತಿಗಳನ್ನು ಚಯನ ಪ್ರದೇಶದಲ್ಲಿ ಕುಶಲರಾದ ದ್ವಿಜರು ಮಹಾರಾಜ ದಶರಥನ ಯಜ್ಞಕ್ಕಾಗಿ ನಿರ್ಮಾಣ ಮಾಡಿದರು.

ನಿಯುಕ್ತಾಸ್ತತ್ರ ಪಶವಸ್ತತ್ತದುದ್ದಿಶ್ಯ ದೈವತಮ್ ।
ಉರಗಾಃ ಪಕ್ಷಿಣಶ್ಚೈವ ಯಥಾಶಾಸ್ತ್ರಂ ಪ್ರಚೋದಿತಾಃ ॥ ೩೦ ॥

ಆಯಾ ದೇವತೆಗಳ ಉದ್ದೇಶವಾಗಿ ಅರಣ್ಯದ ಪಶುಗಳನ್ನು ಕೂಡ ಯೂಪ ಸಂದುಗಳಲ್ಲಿ ಕಟ್ಟಿದರು. ಶಾಸ್ತ್ರಾನುಗುಣವಾಗಿ ವಿಹಿತವಾದ ಹಾವು ಪಕ್ಷಿಗಳನ್ನೂ ಇರಿಸಿದರು. ಇವು ಸಂಖ್ಯೆಯಲ್ಲಿ ಒಟ್ಟು ಮುನ್ನೂರರವತ್ತು, ಇವುಗಳನ್ನು ಪ್ರೋಕ್ಷಣ ಮಾಡಿದ ಬಳಿಕ ವಧೆ ಮಾಡದೆ ಹಾಗೇ ಅರಣ್ಯಕ್ಕೆ ಒಯ್ದು ಬಿಟ್ಟುಬಿಡುತ್ತಾರೆ. ಗ್ರಾಮ್ಯ ಪಶುಗಳನ್ನು ಮಾತ್ರ ಬಲಿಕೊಡುತ್ತಾರೆ.

ಶಾಮಿತ್ರೇ ತು ಹಯಸ್ತತ್ರ ತಥಾ ಜಲಚರಾಶ್ಚ ಯೇ ।
ಋತ್ವಿಗ್ಭಿಃ ಸರ್ವಮೇವೈತನ್ನಿಯುಕ್ತಂ ಶಾಸ್ತ್ರತಸ್ತದಾ ॥ ೩೧ ॥

ವಧಿಸಿ ಕತ್ತರಿಸುವುದಕ್ಕೆ ಅಶ್ವವನ್ನೂ ಆಮೆ ಮುಂತಾದ ಜಲಚರವನ್ನೂ ಬೇರೆ ಆಡು ಕುರಿ ಮುಂತಾದ ಎಲ್ಲ ಗ್ರಾಮ್ಯ ಪಶುಗಳನ್ನೂ ಋತ್ವಿಜರು ಶಾಸ್ತ್ರಾನುಸಾರ ಯೂಪದಲ್ಲಿ ಕಟ್ಟಿದರು.

ಪಶೂನಾಂ ತ್ರಿಶತಂ ತತ್ರ ಯೂಪೇಷು ನಿಯತಂ ತದಾ ।
ಅಶ್ವರತ್ನೋತ್ತಮಂ ತಸ್ಯ ರಾಜ್ಞೋ ದಶರಥಸ್ಯ ಚ ॥ ೩೨ ॥

ಮಾಧ್ಯಂದಿನ ಶಾಖಾನುಸಾರ, ಮುನ್ನೂರ ನಲವತ್ತೊಂಬತ್ತು ಗ್ರಾಮ್ಯ ಪಶುಗಳನ್ನು ಯೂಪಕ್ಕೆ ಕಟ್ಟುತ್ತಾರೆ. ರಾಜಾ ದಶರಥನ ಅಶ್ವರತ್ನಗಳಲ್ಲಿ ಉತ್ತಮ-ವಾದುದನ್ನೂ ಕಟ್ಟಿದ್ದಾರೆ.

ಉತ್ತಮ ಏಕೆಂದರೆ ಅದು ಸೋಮಪಾನ ಮಾಡಿದ ತಂದೆ ತಾಯಿಗಳಿಂದ ಹುಟ್ಟಿದ್ದು, ಹುಟ್ಟಿ ನೀರು ಕುಡಿಯುವುದಕ್ಕೆ ಮೊದಲು ಸೋಮರಸವನ್ನೇ ಕುಡಿದಿರುತ್ತದೆ. ಮುಂಭಾಗ ಕಪ್ಪಾಗಿದ್ದು ಹಿಂಭಾಗ ಬಿಳಿ ಬಣ್ಣದ್ದು, ಹಣೆಯಲ್ಲಿ

ರಥದಾಕಾರದ ಬಿಳಿಯಾದ ತಿಲಕವಿದ್ದು ರಾಜಗಾಂಭೀರ್ಯಯುಕ್ತವಾದ ಸುಂದರಾಕಾರದ್ದಾಗಿರುತ್ತದೆ.

ಕೌಸಲ್ಯಾ ತಂ ಹಯಂ ತತ್ರ ಪರಿಚರ್ಯ ಸಮಂತತಃ ।
ಕೃಪಾಣೈರ್ವಿಶಶಾಸೈನಂ ತ್ರಿಭಿಃ ಪರಮಯಾ ಮುದಾ ॥ ೩೩ ॥

ಯೂಪಕ್ಕೆ ಕಟ್ಟಿದ ಅಶ್ವಕ್ಕೆ ಪ್ರೋಕ್ಷಣಾದಿ ಸಂಸ್ಕಾರವಾದ ಬಳಿಕ ಪಶುವಧೆ. ಕೌಸಲ್ಯಾ ಮುಂತಾದ ರಾಣಿಯರು ಮೃತಾಶ್ವದ ಮೈಮೇಲೆ ಬಂಗಾರದ ಸೂಜಿಗಳಿಂದ ಎಲ್ಲೆಡೆ ಗೆರೆ ಹಾಕಿದರು. ಮುಂದೆ ಅಲ್ಲಿ ಕತ್ತಿಯಿಂದ ವಿಶಸನ ಮಾಡಬೇಕು, ಹೊರತು ಜೀವಂತ ಅಶ್ವದೊಂದಿಗೆ ರಾಣಿಯರು ರತಿಕ್ರೀಡೆ ಮಾಡುವ ಕಾರ್ಯಕ್ರಮವಿಲ್ಲ. ಅದರಿಂದ ಇಲ್ಲಿ ಅಶ್ಲೀಲತೆ ಏನಿಲ್ಲ.

ಪತತ್ರಿಣಾ ತದಾ ಸಾರ್ಧಂ ಸುಸ್ಥಿತೇನ ಚ ಚೇತಸಾ ।
ಅವಸದ್ರಜನೀಮೇಕಾಂ ಕೌಸಲ್ಯಾ ಧರ್ಮಕಾಮ್ಯಯಾ ॥ ೩೪ ॥

ರೆಕ್ಕೆ ಉಳ್ಳ ಉಚ್ಚೈಃಶ್ರವದಂತೆ ಇರುವ, ವಾಜಸನೇಯ ಸಂಹಿತೆಯನ್ನು ಉಪದೇಶಿಸಿದ ಶ್ರೀಹರಿಯ ವಾಜಿರೂಪವನ್ನೇ ಸ್ಥಿರಚಿತ್ತದಿಂದ ಮೃತಾಶ್ವದಲ್ಲಿ ಚಿಂತಿಸುತ್ತ ರಾಣಿ ಕೌಸಲ್ಯೆ ಧರ್ಮಕಾಮನೆಯಿಂದ ಪೂರ್ತಿ ಒಂದು ರಾತ್ರಿ ವಾಸ ಮಾಡಿದಳು. ಅದರಿಂದ ಅಶ್ವದಂತೇ ಬಲಿಷ್ಠನಾದ ಶ್ರೀರಾಮನನ್ನು ಪುತ್ರನಾಗಿ ಪಡೆದಳು.

ಹೋತಾಧ್ವರ್ಯುಸ್ತಥೋದ್ಗಾತಾ ಹಸ್ತೇನ ಸಮಯೋಜಯನ್ ।
ಮಹಿಷ್ಯಾ ಪರಿವೃತ್ತ್ಯಾ ಚ ವಾವಾತಾಮಪರಾಂ ತಥಾ ॥ ೩೫ ॥

ಹೋತೃ ಅಧ್ವರ್ಯು ಉದ್ಗಾತೃ ಬ್ರಹ್ಮ ಈ ನಾಲ್ವರೂ ಋತ್ವಿಜರು 'ಮಹಿಷೀ-ಪರಿವೃತ್ತಿ-ವಾವಾತಾ-ಪಾಲಾಗಲಿ' ಈ ನಾಲ್ವರನ್ನು ಕೈಹಿಡಿದು ಮೃತಾಶ್ವದ ಬಳಿಗೆ ಒಯ್ದರು.

ಧರ್ಮಕಾಮನೆಯಿಂದಲೇ 'ಉಷಾವಾ ಅಶ್ವಸ್ಯ ಮೇಧ್ಯಸ್ಯ ಶಿರಃ' ಎಂಬಂತೆ ಮೃತಾಶ್ವ ಶರೀರದಲ್ಲಿ ಕೇವಲ ಸೂರ್ಯಾಂತರ್ಗತನಾದ ಸರ್ವದೇವ- ಮಯನಾದ ಅಶ್ವರೂಪಿ ಹರಿಯ ಬಳಿ ಅಂಬೇ ಅಂಬಾಲ್ಯಂಬಿಕೇ ಇತ್ಯಾದಿ ಸೂರ್ಯಾಂತರ್ಗತನ ವಾಜಸನೇಯ ಮಂತ್ರಗಳಿಂದ ಒಂದು ರಾತ್ರಿ ಇಡಿ ಎಚ್ಚೆತ್ತು ಜಪಿಸುವ ಕೌಸಲ್ಯೆಯೊಡನೆ, ವಿನೋದಕ್ಕಾಗಿಯಾದರೂ ಅಶ್ಲೀಲ ಸಂಭಾಷಣೆಯನ್ನು ಪರಿವೃತ್ತಿ ಮುಂತಾದವರು ದಾಸಿಯರು ಮಾಡುವ ಸಂಭವವಿಲ್ಲ.

ರಾಜನೊಂದಿಗೆ ಪಟ್ಟಾಭಿಷಿಕ್ತಳು 'ಮಹಿಷಿ.' ಉಪೇಕ್ಷಿತಳಾದ ದಾಸಿ 'ಪರಿವೃತ್ತಿ.' ಭೋಗಿನಿ ದಾಸಿ 'ವಾವಾತಾ.' ಪಾನಪಾತ್ರಪ್ರದಳಾದ ದಾಸಿ 'ಪಾಲಾಗಲಿ.' ಇವರು ಮಹಿಷಿಯೊಂದಿಗೆ 'ಅಶ್ಲೀಲ ಸಂಭಾಷಣೆ'ಯಲ್ಲಿ ಪಾತ್ರಧಾರಿಗಳು.

ಪತ್ರಿಣಸ್ತಸ್ಯ ವಪಾಮುದ್ಧೃತ್ಯ ನಿಯತೇಂದ್ರಿಯಃ ।
ಋತ್ವಿಕ್ ಪರಮಸಂಪನ್ನಃ ಶ್ರಪಯಾಮಾಸ ಶಾಸ್ತ್ರತಃ ॥ ೩೬ ॥

ಹಿಂದಿನ ಕಾಲದಲ್ಲಿ ಉಚ್ಚೈಃಶ್ರವದಂತೆ ಕುದುರೆಗಳಿಗೆ ರೆಕ್ಕೆ ಇದ್ದುದರಿಂದ 'ಪತ್ರಿ' ಎಂದರೆ ಇಲ್ಲಿ ಕುದುರೆ. ಕುದುರೆಗೆ ಯದ್ಯಪಿ ವಪಾ ಇಲ್ಲ, ಅದಕ್ಕೆ ಪ್ರತಿನಿಧಿಯಾಗಿ 'ಚಂದ್ರ' ಎಂಬ ಮೇದಸ್ಸನ್ನು ತೆಗೆದು, ಪರಮಜ್ಞಾನ ಸಂಪನ್ನನಾದ ಋತ್ವಿಜನು ಶಾಸ್ತ್ರಾನುಸಾರ ಅದನ್ನು ಯಾಗಾಗ್ನಿಯಲ್ಲಿ ಪಾಕ ಮಾಡಿದ.

ಧೂಮಗಂಧಂ ವಪಾಯಾಸ್ತು ಜಿಘ್ರತಿ ಸ್ಮ ನರಾಧಿಪಃ ।
ಯಥಾಕಾಲಂ ಯಥಾನ್ಯಾಯಂ ನಿರ್ಯಾದನ್ವಾಪಮಾತ್ಮನಃ ॥ ೩೭ ॥

ಈ 'ಚಂದ್ರ'ದ ಧೂಮಗಂಧವನ್ನೇ ರಾಜನು, ಕಾಲಾನುಸಾರ ನ್ಯಾಯಾನುಸಾರ ಆಘ್ರಾಣಿಸಿ ತನ್ನ ಪಾಪವನ್ನು ಪರಿಹರಿಸಿಕೊಂಡ.

ಹಯಸ್ಯ ಯಾನಿ ಚಾಂಗಾನಿ ತಾನಿ ಸರ್ವಾಣಿ ಬ್ರಾಹ್ಮಣಾಃ ।
ಅಗ್ನೌ ಪ್ರಾಸ್ಯಂತಿ ವಿಧಿವತ್ಸಮಂತ್ರಾಃ ಷೋಡಶರ್ತ್ವಿಜಃ ॥ ೩೮ ॥

ಅಶ್ವದ ಎಲ್ಲ ಹನ್ನೆರಡೂ ಅಂಗಗಳನ್ನೂ ಎಲ್ಲ ಹದಿನಾರು ಮಂದಿ ಋತ್ವಿಜರಾದ ಬ್ರಾಹ್ಮಣರೂ ಅಗ್ನಿಯಲ್ಲಿ ಹೋಮಿಸುವರು. ಅದರಿಂದ ಶೇಷ ಭಕ್ಷಣವಿಲ್ಲ.

ಹನ್ನೆರಡು ಅಂಗಗಳು ಇವು–

ಚಂದ್ರ, ಹೃದಯ, ಜಿಹ್ವೆ, ವಕ್ಷ ಯಕೃತ್ ಎರಡು ವೃಕ್ಕಗಳು ಬಾಹುಮೂಲ ಎರಡು ಪಾರ್ಶ್ವಗಳು ಬಲ ನಿತಂಬ ಮತ್ತು ಗುದದ ಒಂದು ಅಂಶ ಎಂದು.

ಇವರು ಹದಿನಾರು ಋತ್ವಿಜರು–

ಅಧ್ವರ್ಯುಗಣದವರು	ಬ್ರಹ್ಮಗಣದವರು
ಅಧ್ವರ್ಯು	ಬ್ರಹ್ಮ
ಪ್ರತಿಪ್ರಸ್ಥಾತೃ	ಬ್ರಾಹ್ಮಣಾಚ್ಛಂಸಿ
ನೇಷ್ಟೃ	ಆಗ್ನೀಧ್ರ
ಉನ್ನೇತೃ	ಪೋತೃ

ಹೋತೃಗಣದವರು	ಉದ್ಗಾತೃಗಣದವರು
ಹೋತೃ	ಉದ್ಗಾತೃ
ಮೈತ್ರಾವರುಣ	ಪ್ರಸ್ತೋತೃ
ಆಚ್ಛಾವಾಕ	ಪ್ರತಿಹರ್ತೃ
ಗ್ರಾವಸ್ತುತ್	ಸುಬ್ರಹ್ಮಣ್ಯ

ಇವರೊಂದಿಗೆ 'ಸದಸ್ಯ' ಎಂಬ ಋತ್ವಿಜನೂ ಇರುತ್ತಾನೆ.

ಪ್ಲಕ್ಷಶಾಖಾಸು ಯಜ್ಞಾನಾಮನ್ಯೇಷಾಂ ಕ್ರಿಯತೇ ಹವಿಃ ।
ಅಶ್ವಮೇಧಸ್ಯ ಯಜ್ಞಸ್ಯ ವೈತಸೋ ಭಾಗ ಇಷ್ಯತೇ ॥ ೩೯ ॥

ಪ್ಲಕ್ಷ (ಜುಲ್ಲಿಗಿಡ) ಶಾಖೆಯಿಂದ ಅನ್ಯ ಪಶು ಹವಿಸ್ಸನ್ನು ಅವದಾನ ಮಾಡುತ್ತಾರೆ. ಅಶ್ವಮೇಧ ಪಶುಹವಿಸ್ಸನ್ನು ವೇತಸ (ಹಬ್ಬೆಗಿಡದ) ಶಾಖೆಯಿಂದ ಅವದಾನ ಮಾಡುತ್ತಾರೆ.

ತ್ರ್ಯಹೋಽಶ್ವಮೇಧಃ ಸಂಖ್ಯಾತಃ ಕಲ್ಪಸೂತ್ರೇಣ ಬ್ರಾಹ್ಮಣೈಃ ।
ಚತುಷ್ಟೋಮಮಹಸ್ತಸ್ಯ ಪ್ರಥಮಂ ಪರಿಕಲ್ಪಿತಮ್ ॥ ೪೦ ॥

ಅಶ್ವಮೇಧದಲ್ಲಿ ಸವನತ್ರಯ ನಡೆಯುವ ದಿನಗಳು ಮೂರು ಎಂದು ಬ್ರಾಹ್ಮಣರು ಕಲ್ಪಸೂತ್ರಪ್ರಕಾರ ಹೇಳುತ್ತಾರೆ. ಅಗ್ನಿಷ್ಟೋಮ, ಮೊದಲನೆ ದಿನ ಎನ್ನುತ್ತಾರೆ. ಈ ಅಗ್ನಿಷ್ಟೋಮವೇ 'ಚತುಷ್ಟೋಮಃ' ಏಕೆಂದರೆ ಇದರಲ್ಲಿ ನಾಲ್ಕು 'ಸ್ತೋಮ' ಮಂತ್ರಗಳಿವೆ.

ಉಕ್ಥ್ಯಂ ದ್ವಿತೀಯಂ ಸಂಖ್ಯಾತಮತಿರಾತ್ರಂ ತಥೋತ್ತರಮ್ ।
ಕಾರಿತಾಸ್ತತ್ರ ಬಹವೋ ವಿಹಿತಾಃ ಶಾಸ್ತ್ರದರ್ಶನಾತ್ ॥ ೪೧ ॥

ಉಕ್ಥ್ಯವು ಎರಡನೆ ದಿನ ಎನ್ನುತ್ತಾರೆ. ಅತಿರಾತ್ರವು ಮೂರನೆ ದಿನ. ಅದರಿಂದ ಅಶ್ವಮೇಧದಲ್ಲಿ ಈ ಮೂರೇ ಯಜ್ಞಗಳನ್ನು ಮಾಡಬೇಕಾಗಿದ್ದರೂ, ಶಾಸ್ತ್ರದಲ್ಲಿ ಬೇರೆಯೂ ಹೇಳಿದ್ದರಿಂದ ಅಶ್ವಮೇಧ ಮುಗಿದ ಬಳಿಕವೂ ಬೇರೆ ಅನೇಕ ಯಜ್ಞಗಳನ್ನೂ ದಶರಥನು ಋತ್ವಿಜರಿಂದ ಮಾಡಿಸಿದ್ದಾನೆ.

ಜ್ಯೋತಿಷ್ಟೋಮಾಯುಷೀ ಚೈವಮತಿರಾತ್ರೌ ಚ ನಿರ್ಮಿತೌ ।
ಅಭಿಜಿದ್ವಿಶ್ವಜಿಚ್ಚೈವಮಪ್ತೋರ್ಯಾಮೋ ಮಹಾಕ್ರತುಃ ॥ ೪೨ ॥

ಜ್ಯೋತಿಷ್ಟೋಮ ಆಯುಷ್ಟೋಮ ಅತಿರಾತ್ರ ಪ್ರಯೋಗಗಳು ಎರಡು, ಅಭಿಜಿತ್ ವಿಶ್ವಜಿತ್ ಆಪ್ತೋರ್ಯಾಮ –ಇವೆಲ್ಲವೂ ಮಹಾಯಜ್ಞಗಳು ಈ ಮಹಾಯಜ್ಞಗಳನ್ನೂ ರಾಜಾ ದಶರಥ ಮಾಡಿಸಿದ್ದಾನೆ.

ಪ್ರಾಚೀಂ ಹೋತ್ರೇ ದದೌ ರಾಜಾ ದಿಶಂ ಸ್ವಕುಲವರ್ಧನಃ ।
ಅಧ್ವರ್ಯವೇ ಪ್ರತೀಚೀಂ ತು ಬ್ರಹ್ಮಣೇ ದಕ್ಷಿಣಾಂ ದಿಶಮ್ ॥ ೪೩ ॥

ಉದ್ಗಾತ್ರೇ ಚ ತಥೋದೀಚೀಂ ದಕ್ಷಿಣೈಷಾ ವಿನಿರ್ಮಿತಾ ।
ಅಶ್ವಮೇಧೇ ಮಹಾಯಜ್ಞೇ ಸ್ವಯಂಭುವಿಹಿತೇ ಪುರಾ ॥ ೪೪ ॥

ಸಮಗ್ರ ಭೂಮಂಡಲದಲ್ಲಿ ಪೂರ್ವದಿಕ್ಕನ್ನು ಕುಲವರ್ಧನನಾದ ರಾಜಾ ದಶರಥನು ಹೋತೃವಿಗೆ ದಾನವಾಗಿ ಕೊಟ್ಟ. 'ಅಧ್ವರ್ಯುವಿಗೆ ಪಶ್ಚಿಮ ದಿಕ್ಕನ್ನೂ ಬ್ರಹ್ಮನಿಗೆ ದಕ್ಷಿಣದಿಕ್ಕನ್ನೂ ನೀಡಿದ. ಉದ್ಗಾತೃವಿಗೆ ಉತ್ತರ ದಿಕ್ಕನ್ನೂ ದಕ್ಷಿಣೆಯಾಗಿ ನೀಡಿದ. ಏಕೆಂದರೆ ಅಶ್ವಮೇಧವು ಹಿಂದೆ ಬ್ರಹ್ಮನಿಂದ ವಿಹಿತವಾದ ಮಹಾಯಜ್ಞ.

ಕ್ರತುಂ ಸಮಾಪ್ಯ ತು ತದಾ ನ್ಯಾಯತಃ ಪುರುಷರ್ಷಭಃ ।
ಋತ್ವಿಗ್ಭ್ಯೋ ಹಿ ದದೌ ರಾಜಾ ಧರಾಂ ತಾಂ ಕ್ರತುವರ್ಧನಃ ॥ ೪೫ ॥

ಪುರುಷಶ್ರೇಷ್ಠನಾದ ದಶರಥನು ಕುಲವರ್ಧನೆಗಾಗಿ ಅಶ್ವಮೇಧ ಯಾಗ ಮುಗಿದೊಡನೆ ನ್ಯಾಯವಾಗಿ ಯಾಗವನ್ನು ನಡೆಸಿಕೊಟ್ಟ ಋತ್ವಿಜರಿಗೆ ಭೂದಾನ ಮಾಡಿದ.

ಋತ್ವಿಜಸ್ತ್ವಬ್ರುವನ್ಸರ್ವೇ ರಾಜಾನಂ ಗತಕಲ್ಮಷಮ್ ।
ಭವಾನೇವ ಮಹೀಂ ಕೃತ್ಸ್ನಾಮೇಕೋ ರಕ್ಷಿತುಮರ್ಹತಿ ॥ ೪೬ ॥

ಪಾಪ ಪರಿಹಾರ ಮಾಡಿಕೊಂಡ ರಾಜನಿಗೆ ಎಲ್ಲ ಋತ್ವಿಜರು ಹೇಳಿದರು. 'ನೀನೊಬ್ಬನೆ ಇಡಿ ಭೂಮಿಯನ್ನು ರಕ್ಷಿಸಲು ಸಮರ್ಥನು.'

ನ ಭೂಮ್ಯಾ ಕಾರ್ಯಮಸ್ಮಾಕಂ ನ ಹಿ ಶಕ್ತಾಃ ಸ್ಮ ಪಾಲನೇ ।
ರತಾಃ ಸ್ವಾಧ್ಯಾಯಕರಣೇ ವಯಂ ನಿತ್ಯಂ ಹಿ ಭೂಮಿಪ ॥
ನಿಷ್ಕ್ರಯಂ ಕಿಂಚಿದೇವೇಹ ಪ್ರಯಚ್ಛತು ಭವಾನಿತಿ ॥ ೪೭ ॥

ನಮಗೆ ಭೂಮಿಯ ಒಡೆತನದಿಂದ ಏನಾಗಬೇಕಿಲ್ಲ. ಅದನ್ನು ಪಾಲನೆ ಮಾಡಲೂ ನಾವು ಶಕ್ತರಲ್ಲ. ನಾವು ಸದಾ ಶಾಸ್ತ್ರಾಧ್ಯಯನದಲ್ಲಿ ನಿರತರು. ಅದರಿಂದ ನೀನು ನಮಗೆ ಆ ಭೂಮಿಯ ಬೆಲೆಯನ್ನೇ ಸ್ವಲ್ಪವೇ ಕೊಟ್ಟು ಬಿಡು' ಎಂದರು.

ಮಣಿರತ್ನಂ ಸುವರ್ಣಂ ವಾ ಗಾವೋ ಯದ್ವಾ ಸಮುದ್ಯತಮ್ ।
ತತ್ಪ್ರಯಚ್ಛ ನರಶ್ರೇಷ್ಠ ಧರಣ್ಯಾ ನ ಪ್ರಯೋಜನಮ್ ॥ ೪೮ ॥

ಮಣಿರತ್ನವನ್ನಾಗಲಿ, ಅದು ರಾಜನಿಗೇ ಯೋಗ್ಯವಾದ್ದರಿಂದ, ಬಂಗಾರ-ವನ್ನಾಗಲಿ, ನಿನ್ನಲ್ಲಿರುವ ಗೋವುಗಳನ್ನಾಗಲಿ ಬೇರಾವುದನ್ನಾಗಲಿ ಕೊಡು.

ಏವಮುಕ್ತೋ ನರಪತಿರ್ಬ್ರಾಹ್ಮಣೈರ್ವೇದಪಾರಗೈಃ ।
ಗವಾಂ ಶತಸಹಸ್ರಾಣಿ ದಶ ತೇಭ್ಯೋ ದದೌ ನೃಪಃ ॥
ದಶಕೋಟೀಃ ಸುವರ್ಣಸ್ಯ ರಜತಸ್ಯ ಚತುರ್ಗುಣಮ್ ॥ ೪೯ ॥

ವೇದ ಪಾರಂಗತರಾದ ಬ್ರಾಹ್ಮಣರು ಹೀಗೆ ಹೇಳಿದಾಗ ರಾಜಾ ದಶರಥನು ಅವರಿಗೆ ದಶಲಕ್ಷ ಗೋವುಗಳನ್ನು ನೀಡಿದ. ದಶಕೋಟಿ ಸುವರ್ಣ, ನಲವತ್ತು ಕೋಟಿ ರಜತವನ್ನೂ ನೀಡಿದ.

ಯದ್ಯಪಿ ಯಜ್ಞದಲ್ಲಿ ಬೆಳ್ಳಿಯ ದಾನ ನಿಷಿದ್ಧ. ಆದರೆ ಇಲ್ಲಿ ಬೆಳ್ಳಿಯನ್ನೇ ದಾನ ಮಾಡಲಿಲ್ಲ. ಭೂದಾನ ಮಾಡಿದ. ಅದಕ್ಕೆ ಪ್ರತಿನಿಧಿಯಾಗಿ ಮಾತ್ರ ಬೆಳ್ಳಿಯನ್ನು ಬ್ರಾಹ್ಮಣರು ದಾನ ಪಡೆದಿದ್ದಾರೆ.

ಋತ್ವಿಜಸ್ತು ತತಃ ಸರ್ವೇ ಪ್ರದದುಃ ಸಹಿತಾ ವಸು ।
ಋಷ್ಯಶೃಂಗಾಯ ಮುನಯೇ ವಸಿಷ್ಠಾಯ ಚ ಧೀಮತೇ ॥ ೫೦ ॥

ಬಳಿಕ ಋತ್ವಿಜರೆಲ್ಲರೂ ಆ ಎಲ್ಲ ಸಂಪತ್ತನ್ನೂ ವಿಭಾಗ ಮಾಡಲು ಧೀಮಂತ ಮುನಿಯಾದ ಋಷ್ಯಶೃಂಗರಿಗೂ ವಸಿಷ್ಠರಿಗೂ ನೀಡಿದರು.

ತತಸ್ತೇ ನ್ಯಾಯತಃ ಕೃತ್ವಾ ಪ್ರವಿಭಾಗಂ ದ್ವಿಜೋತ್ತಮಾಃ ।
ಸುಪ್ರೀತಮನಸಃ ಸರ್ವೇ ಪ್ರತ್ಯೂಚುರ್ಮುದಿತಾ ಭೃಶಮ್ ॥ ೫೧ ॥

ಹೀಗೆ ರಾಜ ನೀಡಿದ ಸಂಪತ್ತನ್ನು ಋಷ್ಯಶೃಂಗ ವಸಿಷ್ಠರ ಮೂಲಕ ನ್ಯಾಯಾನು-ಸಾರ ವಿಭಾಗ ಮಾಡಿಕೊಂಡು ಸುಪ್ರೀತ ಮಾನಸರಾದ ಬ್ರಾಹ್ಮಣೋತ್ತಮರು 'ನಾವೆಲ್ಲರೂ ಬಲು ಸಂತೋಷ ಪಟ್ಟೆವು' ಎಂದು ರಾಜನ ಮುಂದೆ ಹೇಳಿದರು.

ತತಃ ಪ್ರಸರ್ಪಕೇಭ್ಯಸ್ತು ಹಿರಣ್ಯಂ ಸುಸಮಾಹಿತಃ ।
ಜಾಂಬೂನದಂ ಕೋಟಿಸಂಖ್ಯಂ ಬ್ರಾಹ್ಮಣೇಭ್ಯೋ ದದೌ ತದಾ॥ ೫೨ ॥

ರಾಜನು ಯಜ್ಞಪ್ರೇಕ್ಷಕರಾಗಿ ಬಂದ ಬ್ರಾಹ್ಮಣರಿಗೂ ಏಕಾಗ್ರಚಿತ್ತನಾಗಿ ಕೋಟಿ ಸಂಖ್ಯೆಯಲ್ಲಿ ಬಂಗಾರ ನಾಣ್ಯಗಳನ್ನು ನೀಡಿದ.

ದರಿದ್ರಾಯ ದ್ವಿಜಾಯಾಥ ಹಸ್ತಾಭರಣಮುತ್ತಮಮ್ ।
ಕಾಂಚನಾನಾಂ ಶತೋಪೇತಂ ನವರತ್ನೈಃ ಸಮಾಹಿತಮ್ ॥
ಕಸ್ಮೈಚಿದ್ಯಾಚಮಾನಾಯ ದದೌ ರಾಘವನಂದನಃ ॥ ೫೩ ॥

ದಾನವೆಲ್ಲ ಮುಗಿದ ಬಳಿಕ ಬೇಡುತ್ತ ಬಂದ ಓರ್ವ ದರಿದ್ರ ಬ್ರಾಹ್ಮಣನಿಗೆ ಏನೂ ಕೊಡಲು ಇಲ್ಲದಿದ್ದಾಗ ತನ್ನ ಉತ್ತಮವಾದ ಹಸ್ತಾಭರಣವನ್ನೇ ತೆಗೆದುಕೊಟ್ಟ, ದಶರಥ. ಆ ಆಭರಣವು ನವರತ್ನಖಚಿತವಾಗಿತ್ತು , ನೂರು ಸುವರ್ಣ ಬೆಲೆ ಬಾಳುತ್ತಿತ್ತು .

ತತಃ ಪ್ರೀತೇಷು ನೃಪತಿರ್ದ್ವಿಜೇಷು ದ್ವಿಜವತ್ಸಲಃ ।
ಪ್ರಣಾಮಮಕರೋತ್ತೇಷಾಂ ಹರ್ಷಪರ್ಯಾಕುಲೇಕ್ಷಣಃ ॥ ೫೪ ॥

ಬ್ರಾಹ್ಮಣರು ಸುಪ್ರೀತರಾದಾಗ ಬ್ರಾಹ್ಮಣಪ್ರಿಯನಾದ ರಾಜ ಹರ್ಷದಿಂದ ಕಣ್ಣೀರು ತಂದುಕೊಂಡು ಅವರಿಗೆ ಪ್ರಣಾಮಗೈದ.

ತಸ್ಯಾಶಿಷೋಽಥ ವಿಧಿವದ್ಬ್ರಾಹ್ಮಣೈಃ ಸಮುದಾಹೃತಾಃ ।
ಸದಾರಸ್ಯ ನೃವೀರಸ್ಯ ಧರಣ್ಯಾಂ ಪ್ರಣತಸ್ಯ ಚ ॥ ೫೫ ॥

ನೆಲದ ಮೇಲೆ ದಂಡಪ್ರಣಾಮ ಮಾಡಿದ ಸಪತ್ನೀಕನಾದ ರಾಜನಿಗೆ ಬ್ರಾಹ್ಮಣರು ವಿಧ್ಯುಕ್ತವಾದ ಆಶೀರ್ವಾದ ನೀಡಿದರು.

ತತಃ ಪ್ರೀತಮನಾ ರಾಜಾ ಪ್ರಾಪ್ಯ ಯಜ್ಞಮನುತ್ತಮಮ್ ।
ಪಾಪಾಪಹಂ ಸ್ವರ್ಗಯನಂ ದುಸ್ತರಂ ಪಾರ್ಥಿವರ್ಷಭೈಃ ॥ ೫೬ ॥

ಆಗ ಪ್ರೀತಮನಸ್ಕನಾದ ರಾಜ, ಬೇರೆ ರಾಜರಿಂದ ಮಾಡಲಾಗದ ಪಾಪ-ನಾಶಕವಾದ ಸ್ವರ್ಗ ಫಲಕವಾದ ಅತ್ಯುತ್ತಮವಾದ ಯಾಗವನ್ನು ತಾನು ಮಾಡಿದೆನೆಂದು.

ತತೋಽಬ್ರವೀದೃಷ್ಯಶೃಂಗಂ ರಾಜಾ ದಶರಥಸ್ತದಾ ।
ಕುಲಸ್ಯ ವರ್ಧನಂ ತ್ವಂ ತು ಕರ್ತುಮರ್ಹಸಿ ಸುವ್ರತ ॥ ೫೭ ॥

ಬಳಿಕ ರಾಜಾ ದಶರಥನು ಋಷ್ಯಶೃಂಗನ ಮುಂದೆ ಹೇಳಿದ– ಒಳ್ಳೆ ವ್ರತನಿಷ್ಠ–ನಾದ ಮುನಿಯೆ, ನನ್ನ ಕುಲ ಬೆಳೆಯುವಂತೆ ಆಶೀರ್ವಾದ ಮಾಡು ಎಂದು.

ತಥೇತಿ ಚ ಸ ರಾಜಾನಮುವಾಚ ದ್ವಿಜಸತ್ತಮಃ ।
ಭವಿಷ್ಯಂತಿ ಸುತಾ ರಾಜಂಶ್ಚತ್ವಾರಸ್ತೇ ಕುಲೋದ್ವಹಾಃ ॥ ೫೮ ॥

'ಹಾಗೆ ಆಗಲಿ' ಎಂದು ಆ ಬ್ರಾಹ್ಮಣೋತ್ತಮನು ರಾಜನಿಗೆ ಆಶೀರ್ವದಿಸಿ 'ನಿನ್ನ ಕುಲೋದ್ಧಾರ ಮಾಡುವ ನಾಲ್ಕು ಮಂದಿ ಪುತ್ರರು ನಿನಗೆ ಜನಿಸುವರು' ಎಂದನು.

ಸ ತಸ್ಯ ವಾಕ್ಯಂ ಮಧುರಂ ನಿಶಮ್ಯ
ಪ್ರಣಮ್ಯ ತಸ್ಮೈ ಪ್ರಯತೋ ನೃಪೇಂದ್ರಃ ।
ಜಗಾಮ ಹರ್ಷಂ ಪರಮಂ ಮಹಾತ್ಮಾ
ತಮೃಷ್ಯಶೃಂಗಂ ಪುನರಪ್ಯುವಾಚ ॥ ೫೯ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಚತುರ್ದಶಃ ಸರ್ಗಃ ॥ ೧೪ ॥

ಋಷ್ಯಶೃಂಗನ ಆ ಮಧುರವಾದ ಮಾತನ್ನು ಜಿತೇಂದ್ರಿಯನಾದ ಮಹಾತ್ಮ ದಶರಥನು ಕೇಳಿ ಪರಮ ಹರ್ಷವನ್ನು ಹೊಂದಿದ. ಆತ ಪುನಃ ಅವನಿಗೆ 'ಪುತ್ರಕಾಮೇಷ್ಟಿಯನ್ನೂ ನಡೆಸಿಕೊಡು' ಎಂದ.

ಯದ್ಯಪಿ ಪುತ್ರಪ್ರಾಪ್ತಿಗಾಗಿ ಅಶ್ವಮೇಧವನ್ನು ಮಾಡಿದ್ದಾಯಿತು. ಇನ್ನೇಕೆ ಪುತ್ರೇಷ್ಟಿ ಎಂಬ ಪ್ರಶ್ನೆ ಇಲ್ಲಿ ಸಹಜ. ಆದರೆ ಪುತ್ರಪ್ರಾಪ್ತಿಗೆ ಸಾಧನವು ಪುತ್ರೇಷ್ಟಿಯೆ. ಅದರ ಫಲವಾಗಿ ಪುತ್ರಪ್ರಾಪ್ತಿಯಾಗುವಲ್ಲಿ ದಶರಥ ಗೈದ ಶ್ರವಣಕುಮಾರ ವಧ ದೋಷವು ಪ್ರತಿಬಂಧಕವಾಗುತ್ತಿತ್ತು. ಅಶ್ವಮೇಧದಿಂದ ಅದೀಗ ನಿರಸನವಾಗಿದೆ ಎಂದು ಅಭಿಪ್ರಾಯ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಹದಿನಾಲ್ಕನೆ ಸರ್ಗ ಮುಗಿಯಿತು.

ಪಂಚದಶಃ ಸರ್ಗಃ

ಮೇಧಾವೀ ತು ತತೋ ಧ್ಯಾತ್ವಾ ಸ ಕಿಂಚಿದಿದಮುತ್ತರಮ್ ।
ಲಬ್ಧಸಂಜ್ಞಸ್ತತಸ್ತಂ ತು ವೇದಜ್ಞೋ ನೃಪಮಬ್ರವೀತ್ ॥ ೧ ॥

ಮಹಾಬುದ್ಧಿಶಾಲಿಯಾದ ವೇದಜ್ಞನಾದ ಋಷ್ಯಶೃಂಗನು ಬಳಿಕ ದಶರಥನ ಪುತ್ರಪ್ರಾಪ್ತಿ ವಿಷಯವನ್ನು ಸ್ವಲ್ಪಧ್ಯಾನ ಮಾಡಿ ಬಳಿಕ ಧ್ಯಾನದಿಂದ ಎಚ್ಚೆತ್ತು ರಾಜಾ ದಶರಥನಿಗೆ ಹೇಳಿದನು.

ಇಷ್ಟಿಂ ತೇऽಹಂ ಕರಿಷ್ಯಾಮಿ ಪುತ್ರೀಯಾಂ ಪುತ್ರಕಾರಣಾತ್ ।
ಅಥರ್ವಶಿರಸಿ ಪ್ರೋಕ್ತೈರ್ಮಂತ್ರೈಃ ಸಿದ್ಧಾಂ ವಿಧಾನತಃ ॥ ೨ ॥

ನಿನಗೆ ಪುತ್ರಪ್ರಾಪ್ತಿಗಾಗಿ ಅಥರ್ವಶೀರ್ಷವೆಂಬ ವೇದಭಾಗದಲ್ಲಿ ಹೇಳಿದ ಮಂತ್ರಗಳಿಂದ ಕಲ್ಪಸೂತ್ರವಿಧಾನದಿಂದ ಪುತ್ರಪ್ರದವೆಂದು ಪ್ರಸಿದ್ಧವಾಗಿರುವ ಪುತ್ರಕಾಮೇಷ್ಟಿಯನ್ನೂ ನಡೆಸಿಕೊಡುವೆನೆಂದನು.

ತತಃ ಪ್ರಕ್ರಮ್ಯ ತಾಮಿಷ್ಟಿಂ ಪುತ್ರೀಯಾಂ ಪುತ್ರಕಾರಣಾತ್ ।
ಜುಹಾವ ಚಾಗ್ನೌ ತೇಜಸ್ವೀ ಮಂತ್ರದೃಷ್ಟೇನ ಕರ್ಮಣಾ ॥ ೩ ॥

ಬಳಿಕ ಋಷ್ಯಶೃಂಗನು ದಶರಥನ ಪುತ್ರಪ್ರಾಪ್ತಿಗಾಗಿ ಆ ಪುತ್ರೇಷ್ಟಿಯನ್ನು ಮಾಡಲು ಪ್ರಾರಂಭಿಸಿದನು. ತೇಜಸ್ವಿಯಾದ ಮುನಿಯು ಮಂತ್ರಸಿದ್ಧವಾದ ಕರ್ಮದಿಂದ ಅಗ್ನಿಯಲ್ಲಿ ಹೋಮ ಮಾಡಿದನು.

ತತೋ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ಭಾಗಪ್ರತಿಗ್ರಹಾರ್ಥಂ ವೈ ಸಮವೇತಾ ಯಥಾವಿಧಿ ॥ ೪ ॥

ಆಗ ಹವಿರ್ಭಾಗ ಸ್ವೀಕರಿಸಲೆಂದು ದೇವತೆಗಳು ಗಂಧರ್ವರು ಸಿದ್ಧರು ಪರಮಋಷಿಗಳು ವಿಧ್ಯುಕ್ತವಾಗಿ ಬಂದು ಸೇರಿದರು.

ತಾಃ ಸಮೇತ್ಯ ಯಥಾನ್ಯಾಯಂ ತಸ್ಮಿನ್ಸದಸಿ ದೇವತಾಃ ।
ಅಬ್ರುವಂಲ್ಲೋಕಕರ್ತಾರಂ ಬ್ರಹ್ಮಾಣಂ ವಚನಂ ಮಹತ್ ॥ ೫ ॥

ಆ ದೇವತೆಗಳು ಆ ಯಜ್ಞಶಾಲೆಯಲ್ಲಿ ಯಥಾಕ್ರಮವಾಗಿ ಬಂದು ಸೇರುವವರು ಮೊದಲಿಗೆ ಬ್ರಹ್ಮಲೋಕದಲ್ಲಿ ಲೋಕಕರ್ತರಾದ ಬ್ರಹ್ಮದೇವರಲ್ಲಿ ಮಹತ್ವಪೂರ್ಣವಾದ ಮಾತನ್ನು ಹೇಳಿಕೊಂಡರು.

ಭಗವಂಸ್ತ್ವತ್ಪ್ರಸಾದೇನ ರಾವಣೋ ನಾಮ ರಾಕ್ಷಸಃ ।
ಸರ್ವಾನ್ನೋ ಬಾಧತೇ ವೀರ್ಯಾಚ್ಚಾಪಿತುಂ ತಂ ನ ಶಕ್ನುಮಃ ॥ ೬ ॥

ಪೂಜ್ಯನೆ, ನಿನ್ನ ವರಬಲದಿಂದ ರಾವಣನೆಂಬ ರಾಕ್ಷಸನು ನಮ್ಮೆಲ್ಲರನ್ನೂ ಬಾಧಿಸುತ್ತಿದ್ದಾನೆ. ನಾವು ಸ್ವಶಕ್ತಿಯಿಂದ ಅವನನ್ನು ನಿಗ್ರಹಿಸಲು ಶಕ್ತರಾಗುತ್ತಿಲ್ಲ.

ತ್ವಯಾ ತಸ್ಮೈ ವರೋ ದತ್ತಃ ಪ್ರೀತೇನ ಭಗವನ್ಪುರಾ ।
ಮಾನಯಂತಶ್ಚ ತಂ ನಿತ್ಯಂ ಸರ್ವಂ ತಸ್ಯ ಕ್ಷಮಾಮಹೇ ॥ ೭ ॥

ನೀನು ಅವನ ತಪಸ್ಸಿಗೆ ಒಲಿದು ಅವನಿಗೆ ವರ ನೀಡಿರುವೆ. ಅದಕ್ಕೆ ಗೌರವ ಕೊಟ್ಟು ನಾವು ಅವನ ಎಲ್ಲ ಅಪರಾಧವನ್ನು ಕ್ಷಮಿಸುತ್ತಿದ್ದೇವೆ.

ಉದ್ವೇಜಯತಿ ಲೋಕಾಂಸ್ತ್ರೀನುಚ್ಚೈಸ್ತಾನ್ ದ್ವೇಷ್ಟಿ ದುರ್ಮತಿಃ ।
ಶಕ್ರಂ ತ್ರಿದಶರಾಜಾನಂ ಪ್ರಧರ್ಷಯಿತುಮಿಚ್ಛತಿ ॥ ೮ ॥

ದುರ್ಬುದ್ಧಿಯವನಾದ ರಾವಣನು ಉತ್ತಮವಾದ ಮೂರು ಲೋಕಗಳನ್ನೂ ಪೀಡಿಸುತ್ತಿದ್ದಾನೆ. ದೇವರಾಜ ಇಂದ್ರನನ್ನೂ ಬಲಾತ್ಕರಿಸುತ್ತಿದ್ದಾನೆ.

ಋಷೀನ್ ಯಕ್ಷಾನ್ ಸಗಂಧರ್ವಾನಸುರಾನ್ ಬ್ರಾಹ್ಮಣಾಂಸ್ತಥಾ ।
ಅತಿಕ್ರಾಮತಿ ದುರ್ಧರ್ಷೋ ವರದಾನೇನ ಮೋಹಿತಃ ॥ ೯ ॥

ನಿನ್ನ ವರದಾನದಿಂದ ಪರವಶನಾಗಿ ರಾವಣನು ಋಷಿ ಯಕ್ಷ ಗಂಧರ್ವ ಅಸುರ ವಿಪ್ರರೆಲ್ಲರನ್ನೂ ಅತಿಕ್ರಮಿಸುತ್ತಾನೆ, ಅವನನ್ನು ಅಂಕೆಯಲ್ಲಿಟ್ಟುಕೊಳ್ಳುವುದು ಸಾಧ್ಯವಿಲ್ಲ.

ನೈನಂ ಸೂರ್ಯಃ ಪ್ರತಪತಿ ಪಾರ್ಶ್ವೇ ವಾತಿ ನ ಮಾರುತಃ ।
ಚಲೋರ್ಮಿಮಾಲೀ ತಂ ದೃಷ್ಟ್ವಾ ಸಮುದ್ರೋಽಪಿ ನ ಕಂಪತೇ॥೧೦॥

ರಾವಣನ ಮೈಗೆ ಸೂರ್ಯ ತಾಪ ಉಂಟುಮಾಡಲಾರ. ಪಾರ್ಶ್ವದಲ್ಲಿ ವಾಯು ಬೀಸಲಾರ. ಸದಾ ಚಲಿಸುವ ತೆರೆ ಉಳ್ಳ ಸಮುದ್ರರಾಜನೂ ಅವನನ್ನು ನೋಡಿ ಚಲಿಸುವುದಿಲ್ಲ.

ತನ್ಮಹನ್ನೋ ಭಯಂ ತಸ್ಮಾದ್ರಾಕ್ಷಸಾದ್ ಘೋರದರ್ಶನಾತ್ ।
ವಧಾರ್ಥಂ ತಸ್ಯ ಭಗವನ್ನುಪಾಯಂ ಕರ್ತುಮರ್ಹಸಿ ॥ ೧೧ ॥

ಭಯಂಕರನಾಗಿ ಕಾಣುವ ಆ ರಾಕ್ಷಸನಿಂದ ನಮಗೆ ಮಹತ್ತಾದ ಭಯ ಉಂಟಾಗಿದೆ. ಪೂಜ್ಯನೆ, ಅವನ ವಧೆಗೆ ಉಪಾಯ ಮಾಡು.

ಏವಮುಕ್ತಃ ಸುರೈಃ ಸರ್ವೈಶ್ಚಿಂತಯಿತ್ವಾ ತತೋಽಬ್ರವೀತ್ ।
ಹಂತಾಯಂ ವಿದಿತಸ್ತಸ್ಯ ವಧೋಪಾಯೋ ದುರಾತ್ಮನಃ ॥ ೧೨ ॥

ಹೀಗೆ ಎಲ್ಲ ದೇವತೆಗಳು ಹೇಳಿದಾಗ ಬ್ರಹ್ಮದೇವನು ಆಲೋಚಿಸಿ ಹೇಳಿದ, 'ಆ ದುರಾತ್ಮನ ವಧೆಗೆ ಏನು ಉಪಾಯವೆಂದು ನನಗೆ ತಿಳಿದಿದೆ.

ತೇನ ಗಂಧರ್ವಯಕ್ಷಾಣಾಂ ದೇವದಾನವರಕ್ಷಸಾಮ್ ।
ಅವಧ್ಯೋಽಸ್ಮೀತಿ ವಾಗುಕ್ತಾ ತಥೇತ್ಯುಕ್ತಂ ಚ ತನ್ಮಯಾ ॥ ೧೩ ॥

'ಅವನು ಗಂಧರ್ವ ಯಕ್ಷ ದೇವ ದಾನವ ರಾಕ್ಷಸರಿಂದ ಯಾರಿಂದಲೂ ತಾನು ಅವಧ್ಯನಾಗಬೇಕೆಂದು ಹೇಳಿದ. ಹಾಗೇ ಆಗಲೆಂದು ನಾನು ನುಡಿದೆ.'

ನಾಕೀರ್ತಯದವಜ್ಞಾನಾತ್ತದ್ರಕ್ಷೋ ಮಾನುಷಾಂಸ್ತದಾ ।
ತಸ್ಮಾತ್ಸ ಮಾನುಷಾದ್ವಧ್ಯೋ ಮೃತ್ಯುರ್ನಾನ್ಯೋಽಸ್ಯ ವಿದ್ಯತೇ॥ ೧೪ ॥

'ಮನುಷ್ಯರಲ್ಲಿ ತಿರಸ್ಕಾರಬುದ್ಧಿಯಿಂದ ಅವರ ಹೆಸರನ್ನು ಆತ ಹೇಳಲಿಲ್ಲ. ಅದರಿಂದ ಮನುಷ್ಯರಿಂದ ಆತ ವಧ್ಯನಾಗುವನು. ಬೇರೊಬ್ಬನು ಅವನಿಗೆ ಮೃತ್ಯು ಇಲ್ಲ.'

ಏತಚ್ಛ್ರುತ್ವಾ ಪ್ರಿಯಂ ವಾಕ್ಯಂ ಬ್ರಹ್ಮಣಾ ಸಮುದಾಹೃತಮ್ ।
ದೇವಾ ಮಹರ್ಷಯಃ ಸರ್ವೇ ಪ್ರಹೃಷ್ಟಾಸ್ತೇಽಭವಂಸ್ತದಾ ॥ ೧೫ ॥

ಬ್ರಹ್ಮನು ಹೇಳಿದ ಈ ಪ್ರಿಯವಚನವನ್ನು ಕೇಳಿ ದೇವತೆಗಳು ಋಷಿಗಳು ಎಲ್ಲರೂ ಆಗ ಸಂತುಷ್ಟರಾದರು.

ಏತಸ್ಮಿನ್ನಂತರೇ ವಿಷ್ಣುರುಪಯಾತೋ ಮಹಾದ್ಯುತಿಃ ।
ಶಂಖಚಕ್ರಗದಾಪಾಣಿಃ ಪೀತವಾಸಾ ಜಗತ್ಪತಿಃ ॥ ೧೬ ॥

ಈ ಸಮಯದಲ್ಲಿ ಮಹಾ ಪ್ರಕಾಶ ಉಳ್ಳವನು ಶಂಖಚಕ್ರ ಗದಾಪಾಣಿ ಪೀತಾಂಬರಧಾರಿ ಜಗತ್ಪತಿಯಾದ ವಿಷ್ಣು ಬಂದನು.

ವೈನತೇಯಂ ಸಮಾರುಹ್ಯ ಭಾಸ್ಕರಸ್ತೋಯದಂ ಯಥಾ ।
ತಪ್ತಹಾಟಕಕೇಯೂರೋ ವಂದ್ಯಮಾನಃ ಸುರೋತ್ತಮೈಃ ॥ ೧೭ ॥

ಪುಟಕ್ಕಿಟ್ಟ ಚಿನ್ನದ ತೋಳ್ಬಳೆ ಉಳ್ಳವನು ದೇವಶ್ರೇಷ್ಠರಿಂದ ವಂಧ್ಯನು ವಿಷ್ಣು, ಮೋಡದ ಮೇಲೇರಿ ಸೂರ್ಯನು ಬರುವಂತೆ ಗರುಡನ ಮೇಲೆ ಬಂದ, ವಿಷ್ಣು.

ಬ್ರಹ್ಮಣಾ ಚ ಸಮಾಗಮ್ಯ ತತ್ರ ತಸ್ಥೌ ಸಮಾಹಿತಃ ।
ತಮಬ್ರುವನ್ಸುರಾಃ ಸರ್ವೇ ಸಮಭಿಷ್ಟೂಯ ಸಂನತಾಃ ॥
ತ್ವಾಂ ನಿಯೋಕ್ಷ್ಯಾಮಹೇ ವಿಷ್ಣೋ ಲೋಕಾನಾಂ ಹಿತಕಾಮ್ಯಯಾ॥೧೮॥

ವಿಷ್ಣು ಬ್ರಹ್ಮನ ಬಳಿಗೆ ಬಂದು ಜೊತೆಯಲ್ಲಿ ನಿಂತ. ದೇವತೆಗಳೆಲ್ಲರೂ ಅವನನ್ನು ನಮಿಸಿ ಸ್ತೋತ್ರ ಮಾಡಿ ಹೇಳಿದರು. ಲೋಕಗಳ ಹಿತಕಾಮನೆಯಿಂದ, ಹೇ ವಿಷ್ಣೋ! ನಾವು ನಿನ್ನನ್ನೇ ಪ್ರಾರ್ಥಿಸುತ್ತೇವೆ.'

ರಾಜ್ಞೋ ದಶರಥಸ್ಯ ತ್ವಮಯೋಧ್ಯಾಧಿಪತೇರ್ವಿಭೋ ।
ಧರ್ಮಜ್ಞಸ್ಯ ವದಾನ್ಯಸ್ಯ ಮಹರ್ಷಿಸಮತೇಜಸಃ ॥ ೧೯ ॥

ತಸ್ಯ ಭಾರ್ಯಾಸು ತಿಸೃಷ್ವಹ್ರೀಶ್ರೀಕೀರ್ತ್ಯುಪಮಾಸು ಚ ।
ವಿಷ್ಣೋ ಪುತ್ರತ್ವಮಾಗಚ್ಛ ಕೃತ್ವಾऽऽತ್ಮಾನಂ ಚತುರ್ವಿಧಮ್ ॥ ೨೦ ॥

'ಪ್ರಭು, ಧರ್ಮಜ್ಞ, ಉದಾರಿ, ಮಹರ್ಷಿ ಸಮತೇಜಸ್ವಿಯಾದ ಅಯೋಧ್ಯಾಧಿಪತಿ ರಾಜಾ ದಶರಥನಿಗೆ ಹ್ರೀದೇವಿ ಶ್ರೀದೇವಿ ಕೀರ್ತಿ ದೇವಿಯರಂತಿರುವ ಆತನ ಮೂವರು ರಾಣಿಯರಲ್ಲಿ ಹೇ ವಿಷ್ಣೋ ನೀನು ನಾಲ್ಕು ಮಂದಿ ಪುತ್ರರೂಪದಿಂದ ಅವತರಿಸು. ಅದಕ್ಕೆ ನೀನು ನಾಲ್ಕು ರೂಪಗಳನ್ನು ತಾಳು.

ತತ್ರ ತ್ವಂ ಮಾನುಷೋ ಭೂತ್ವಾ ಪ್ರವೃದ್ಧಂ ಲೋಕಕಂಟಕಮ್ ।
ಅವಧ್ಯಂ ದೈವತೈರ್ವಿಷ್ಣೋ ಸಮರೇ ಜಹಿ ರಾವಣಮ್ ॥ ೨೧ ॥

'ಹೇ ವಿಷ್ಣೋ, ದಶರಥನ ರಾಣಿಯರಲ್ಲಿ ನೀನು ಮನುಷ್ಯರೂಪನಾಗಿ ಅವತರಿಸಿ, ಲೋಕಕಂಟಕನಾಗಿ ಬಹಳ ಹೆಚ್ಚಿಕೊಂಡಿರುವ ದೇವತೆಗಳಿಗೂ ಅವಧ್ಯನೆನಿಸಿರುವ ರಾವಣನನ್ನು ಕೊಲ್ಲು.

ಸ ಹಿ ದೇವಾನ್ಸಗಂಧರ್ವಾನ್ಸಿದ್ಧಾಂಶ್ಚ ಋಷಿಸತ್ತಮಾನ್ ।
ರಾಕ್ಷಸೋ ರಾವಣೋ ಮೂಖರ್ೋ ವೀರ್ಯೋತ್ಸೇಕೇನ ಬಾಧತೇ॥೨೨

'ಮೂರ್ಖನಾದ ರಾಕ್ಷಸ ರಾವಣನು ಬಲದರ್ಪದಿಂದ ದೇವ ಗಂಧರ್ವ ಸಿದ್ಧ ಮಹರ್ಷಿಗಳನ್ನೂ ಪೀಡಿಸುತ್ತಿದ್ದಾನೆ.

ಋಷಯಸ್ತು ತತಸ್ತೇನ ಗಂಧರ್ವಾಪ್ಸರಸಸ್ತಥಾ ।
ಕ್ರೀಡಂತೋ ನಂದನವನೇ ಕ್ರೂರೇಣ ಕಿಲ ಹಿಂಸಿತಾಃ ॥ ೨೩ ॥

'ನಂದನ ವನದಲ್ಲಿ ವಿಹರಿಸುತ್ತಿದ್ದಾಗಲೂ ಋಷಿ ಗಂಧರ್ವ ಅಪ್ಸರೆಯರನ್ನು ಕ್ರೂರನಾದ ರಾವಣ ಹಿಂಸಿಸುತ್ತಾನೆ!

ವಧಾರ್ಥಂ ವಯಮಾಯಾತಾಸ್ತಸ್ಯ ವೈ ಮುನಿಭಿಃ ಸಹ ।
ಸಿದ್ಧಗಂಧರ್ವಯಕ್ಷಾಶ್ಚ ತತಸ್ತ್ವಾಂ ಶರಣಂ ಗತಾಃ ॥ ೨೪ ॥

'ಅವನ ವಧೆಯನ್ನು ಪ್ರಾರ್ಥಿಸುವುದಾಗಿ ನಾವು ಮುನಿಗಳೊಂದಿಗೆ ಸಿದ್ಧ-ಗಂಧರ್ವರೊಂದಿಗೆ ಬಂದಿದ್ದೇವೆ. ನಿನ್ನನ್ನೇ ಶರಣು ಹೊಂದಿದ್ದೇವೆ.

ತ್ವಂ ಗತಿಃ ಪರಮಾ ದೇವ ಸರ್ವೇಷಾಂ ನಃ ಪರಂತಪ ।
ವಧಾಯ ದೇವಶತ್ರೂಣಾಂ ನೃಣಾಂ ಲೋಕೇ ಮನಃ ಕುರು ॥ ೨೫ ॥

'ನೀನೆ ನಮ್ಮೆಲ್ಲರಿಗೂ ಮುಖ್ಯ ರಕ್ಷಕ, ಆಶ್ರಯದಾತ, ಶತ್ರುನಾಶಕನಾದ ಹೇ ದೇವನೆ, ಮನುಷ್ಯ ಲೋಕದಲ್ಲಿ ಅವತರಿಸಿ ದೇವ ಶತ್ರುಗಳ ವಧೆ ಮಾಡಲು ಮನಸ್ಸು ಮಾಡು.'

ಏವಮುಕ್ತಸ್ತು ದೇವೇಶೋ ವಿಷ್ಣುಸ್ತ್ರಿದಶಪುಂಗವಃ ।
ಪಿತಾಮಹಪುರೋಗಾಂಸ್ತಾನ್ಸರ್ವಲೋಕನಮಸ್ಕೃತಃ ॥
ಅಬ್ರವೀತ್ ತ್ರಿದಶಾನ್ಸರ್ವಾನ್ಸಮೇತಾನ್ ಧರ್ಮಸಂಹಿತಾನ್ ॥ ೨೬ ॥

ಸರ್ವಲೋಕ ನಮಸ್ಕೃತನಾದ ದೇವೋತ್ತಮನಾದ ದೇವೇಶ ವಿಷ್ಣು ಈ ಪ್ರಾರ್ಥನೆಯನ್ನು ಕೇಳಿ ಶರಣಾಗತಿ ಧರ್ಮವನ್ನಾಚರಿಸಿದ ಬ್ರಹ್ಮಾದಿ ಸಮಸ್ತ ದೇವತೆಗಳಿಗೆ ನುಡಿದ.

ಭಯಂ ತ್ಯಜತ ಭದ್ರಂ ವೋ ಹಿತಾರ್ಥಂ ಯುಧಿ ರಾವಣಮ್ ।
ಸಪುತ್ರಪೌತ್ರಂ ಸಾಮಾತ್ಯಂ ಸಮಿತ್ರಜ್ಞಾತಿಬಾಂಧವಮ್ ॥ ೨೭ ॥

ಹತ್ವಾ ಕ್ರೂರಂ ದುರಾತ್ಮಾನಂ ದೇವರ್ಷೀಣಾಂ ಭಯಾವಹಮ್ ।
ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ॥
ವತ್ಸ್ಯಾಮಿ ಮಾನುಷೇ ಲೋಕೇ ಪಾಲಯನ್ ಪೃಥಿವೀಮಿಮಾಮ್ ॥

'ಭಯವನ್ನು ಬಿಡಿ, ನಿಮಗೆ ಶುಭವಾಗಲಿ, ನಿಮ್ಮ ಹಿತಕ್ಕಾಗಿ ನಾನು ಕ್ರೂರ ದುರಾತ್ಮನಾದ, ದೇವ ಋಷಿಗಳಿಗೆ ಭಯ ಉಂಟುಮಾಡುವ ರಾವಣನನ್ನು ಯುದ್ಧದಲ್ಲಿ ಪುತ್ರ ಪೌತ್ರ ಅಮಾತ್ಯ ಮಿತ್ರ ಜ್ಞಾತಿ ಬಾಂಧವ ಸಮೇತ ಕೊಂದು ಹನ್ನೊಂದು ಸಾವಿರ ವರ್ಷಕಾಲ ಭೂಮಿಯನ್ನು ಆಳುತ್ತ ಮನುಷ್ಯಲೋಕದಲ್ಲಿ ವಾಸ ಮಾಡುತ್ತೇನೆ.

ಏವಂ ದತ್ತ್ವಾ ವರಂ ದೇವೋ ದೇವಾನಾಂ ವಿಷ್ಣುರಾತ್ಮವಾನ್ ।
ಮಾನುಷೇ ಚಿಂತಯಾಮಾಸ ಜನ್ಮಭೂಮಿಮಥಾತ್ಮನಃ ॥ ೨೯ ॥

ಸ್ವತಂತ್ರನಾದ ದೇವದೇವನಾದ ವಿಷ್ಣು ಹೀಗೆ ವರ ನೀಡಿ ಮನುಷ್ಯಲೋಕದಲ್ಲಿ ತನಗೆ ಅವತಾರ ಭೂಮಿಯನ್ನು ಚಿಂತಿಸಿದ.

ತತಃ ಪದ್ಮಪಲಾಶಾಕ್ಷಃ ಕೃತ್ವಾತ್ಮಾನಂ ಚತುರ್ವಿಧಮ್ ।
ಪಿತರಂ ರೋಚಯಾಮಾಸ ತದಾ ದಶರಥಂ ನೃಪಮ್ ॥ ೩೦ ॥

ಕಮಲಾಕ್ಷನಾದ ವಿಷ್ಣು ತಾನೇ ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಎಂದು ನಾಲ್ಕು ರೂಪ ತಳೆದು ರಾಜಾ ದಶರಥನನ್ನು ತಂದೆಯಾಗಿ ಮಾಡಿಕೊಳ್ಳಲು ನಿರ್ಧರಿಸಿದ.

ವಾಸುದೇವನು ರಾಮನಾಗಿ ಸ್ವರೂಪಾವತಾರವನ್ನೂ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧರು ಕ್ರಮವಾಗಿ ಲಕ್ಷ್ಮಣ ಭರತ ಶತ್ರುಘ್ನರಾಗಿ ಆವೇಶಾವತಾರವನ್ನೂ ತಳೆದರು.

ತತೋ ದೇವರ್ಷಿಗಂಧರ್ವಾಃ ಸರುದ್ರಾಃ ಸಾಪ್ಸರೋಗಣಾಃ ।
ಸ್ತುತಿಭಿರ್ದಿವ್ಯರೂಪಾಭಿಸ್ತುಷ್ಟುವುರ್ಮಧುಸೂದನಮ್ ॥ ೩೧ ॥

ಆಗ ದೇವ ಋಷಿ ಗಂಧರ್ವರು ರುದ್ರರು ಅಪ್ಸರೋಗಣಗಳೂ ದಿವ್ಯ ಸ್ವರೂಪದ ಸ್ತುತಿಗಳಿಂದ ಮಧುಸೂದನನನ್ನು ಸ್ತುತಿಸಿದರು.

ತಮುದ್ಧತಂ ರಾವಣಮುಗ್ರತೇಜಸಂ
ಪ್ರವೃದ್ಧದರ್ಪಂ ತ್ರಿದಶೇಶ್ವರದ್ವಿಷಮ್ ।
ವಿರಾವಣಂ ಸಾಧುತಪಸ್ವಿಕಂಟಕಂ
ತಪಸ್ವಿನಾಮುದ್ಧರ ತಂ ಭಯಾವಹಂ ॥ ೩೨ ॥

'ರಾವಣ ಉದ್ಧತನಾಗಿರುವನು, ಉಗ್ರ ಪರಾಕ್ರಮಿ, ಮದೋನ್ಮತ್ತ, ದೇವೋ-ತ್ತಮರನ್ನು ದ್ವೇಷಿಸುತ್ತಾನೆ. ಲೋಕಗಳನ್ನು ಅಳಿಸುತ್ತಾನೆ. ಸಾಧು ತಪಸ್ವಿ ಜನರಿಗೆ ಕಂಟಕಪ್ರಾಯನಾಗಿದ್ದಾನೆ. ತಪಸ್ವಿಗಳಿಗೆ ಭಯ ಉಂಟುಮಾಡುವ ಆತನನ್ನು ಸಂಹರಿಸು.

ತಮೇವ ಹತ್ವಾ ಸಬಲಂ ಸಬಾಂಧವಂ
ವಿರಾವಣಂ ರಾವಣಮುಗ್ರಪೌರುಷಮ್ ।
ಸ್ವಲೋ೯ಕಮಾಗಚ್ಛ ಗತಜ್ವರಶ್ಚಿರಂ
ಸುರೇಂದ್ರಗುಪ್ತಂ ಗತದೋಷಕಲ್ಮಷಂ ॥ ೩೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಪಂಚದಶಃ ಸರ್ಗಃ ॥ ೧೫ ॥

ಉಗ್ರ ಪೌರುಷನಾಗಿ ಲೋಕವನ್ನು ಅಳಿಸುವ ರಾವಣನನ್ನು ಸೈನ್ಯ ಮತ್ತು ಬಂಧುಜನ ಸಮೇತವಾಗಿ ಕೊಂದು ನಿಶ್ಚಿಂತನಾಗಿ ದೇವೇಂದ್ರನ ರಕ್ಷಣೆಯಲ್ಲಿರುವ ದೋಷಕಲ್ಮಷ ರಹಿತವಾದ ಸ್ವರ್ಗಲೋಕದಲ್ಲಿ ಚಿರಕಾಲ ಬಂದಿರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಹದಿನೈದನೆ ಸರ್ಗ ಮುಗಿಯಿತು.

ಷೋಡಶಃ ಸರ್ಗಃ

ತತೋ ನಾರಾಯಣೋ ವಿಷ್ಣುರ್ನಿಯುಕ್ತಃ ಸುರಸತ್ತಮೈಃ ।
ಜಾನನ್ನಪಿ ಸುರಾನೇವಂ ಶ್ಲಕ್ಷ್ಣಂ ವಚನಮಬ್ರವೀತ್ ॥ ೧ ॥

ದೇವೋತ್ತಮರು ಪ್ರಾರ್ಥಿಸಿದಾಗ ನಾರಾಯಣ ವಿಷ್ಣು ತಾನೇ ತಿಳಿದವ-ನಾಗಿದ್ದರೂ ದೇವತೆಗಳ ಮುಂದೆ ನಯವಾಗಿ ಕೇಳಿದ.

ಉಪಾಯಃ ಕೋ ವಧೇ ತಸ್ಯ ರಾಕ್ಷಸಾಧಿಪತೇಃ ಸುರಾಃ ।
ಯಮಹಂ ತಂ ಸಮಾಸ್ಥಾಯ ನಿಹನ್ಯಾಮೃಷಿಕಂಟಕಮ್ ॥ ೨ ॥

ದೇವತೆಗಳೇ ಆ ರಾಕ್ಷಸಾಧಿಪತಿಯ ವಧೆಗೆ ಏನು ಉಪಾಯ? ಋಷಿ ಕಂಟಕನಾದ ಆತನನ್ನು ಯಾವ ಉಪಾಯದಿಂದ ನಾನು ಕೊಲ್ಲಲಿ?

ಏವಮುಕ್ತಾಃ ಸುರಾಃ ಸರ್ವೇ ಪ್ರತ್ಯೂಚುರ್ವಿಷ್ಣುಮವ್ಯಯಮ್ ।
ಮಾನುಷೀಂ ತನುಮಾಸ್ಥಾಯ ರಾವಣಂ ಜಹಿ ಸಂಯುಗೇ ॥ ೩ ॥

ಹೀಗೆ ಕೇಳಿದಾಗ ದೇವತೆಗಳೆಲ್ಲರೂ ಅವ್ಯಯನಾದ ವಿಷ್ಣುವಿಗೆ ಹೀಗೆ ಉತ್ತರಿಸಿದರು– 'ಮನುಷ್ಯರೂಪ ತಳೆದು ರಾವಣನನ್ನು ಯುದ್ಧದಲ್ಲಿ ಸಂಹರಿಸು.

ಸ ಹಿ ತೇಪೇ ತಪಸ್ತೀವ್ರಂ ದೀರ್ಘಕಾಲಮರಿಂದಮ ।
ಯೇನ ತುಷ್ಟೋಽಭವದ್ ಬ್ರಹ್ಮಾ ಲೋಕಕೃಲ್ಲೋಕಪೂರ್ವಜಃ ॥ ೪ ॥

ಶತ್ರುನಾಶಕನೇ! ರಾವಣನು ದೀರ್ಘಕಾಲ ತೀವ್ರ ತಪಸ್ಸನ್ನು ಗೈದ. ಅದರಿಂದ ಲೋಕಪಿತಾಮಹ, ಲೋಕ ಸೃಷ್ಟಿಕರ್ತನಾದ ಬ್ರಹ್ಮನು ಸಂತುಷ್ಟನಾದ.

ಸಂತುಷ್ಟಃ ಪ್ರದದೌ ತಸ್ಮೈ ರಾಕ್ಷಸಾಯ ವರಂ ಪ್ರಭುಃ ।
ನಾನಾವಿಧೇಭ್ಯೋ ಭೂತೇಭ್ಯೋ ಭಯಂ ನಾನ್ಯತ್ರ ಮಾನುಷಾತ್ ॥
ಅವಜ್ಞಾತಾಃ ಪುರಾ ತೇನ ವರದಾನೇ ಹಿ ಮಾನವಾಃ ॥ ೫ ॥

ಪ್ರಭು ಬ್ರಹ್ಮನು ಸಂತುಷ್ಟನಾಗಿ ರಾಕ್ಷಸನಿಗೆ ವರ ನೀಡಿದನು 'ಮನುಷ್ಯರಿಂದ ಹೊರತು ನಾನಾ ವಿಧರಾದ ಬೇರೆ ಯಾವ ಜನರಿಂದಲೂ ಭಯ ನಿನಗೆ ಇರುವು-ದಿಲ್ಲ' ಎಂದು. ವರದಾನ ಕಾಲದಲ್ಲಿ ರಾವಣನು ಮನುಷ್ಯರನ್ನು ಕಡೆಗಣಿಸಿದ್ದ, ಮನುಷ್ಯರಿಂದ ಭಯವಿಲ್ಲವಾಗಬೇಕೆಂದು ವರವನ್ನು ಬೇಡಲಿಲ್ಲ.

ಏವಂ ಪಿತಾಮಹಾತ್ತಸ್ಮಾದ್ವರಂ ಪ್ರಾಪ್ಯ ಸ ದರ್ಪಿತಃ ।
ಉತ್ಸಾದಯತಿ ಲೋಕಾಂಸ್ತ್ರೀನ್ಸ್ತ್ರಿಯಶ್ಚಾಪ್ಯಪಕರ್ಷತಿ ॥ ೬ ॥

ಹೀಗೆ ಪಿತಾಮಹನಿಂದ ವರ ಪಡೆದ ಬಳಿಕ ದರ್ಪಿತನಾಗಿ ಮೂಲೋಕವನ್ನು ಪೀಡಿಸುತ್ತಿದ್ದಾನೆ. ಸ್ತ್ರೀಯರನ್ನು ಅಪಹಾರ ಮಾಡುತ್ತಿದ್ದಾನೆ.

ತಸ್ಮಾತ್ತಸ್ಯ ವಧೋ ದೃಷ್ಟೋ ಮಾನುಷೇಭ್ಯಃ ಪರಂತಪ ।
ಇತ್ಯೇತದ್ವಚನಂ ಶ್ರುತ್ವಾ ಸುರಾಣಾಂ ವಿಷ್ಣುರಾತ್ಮವಾನ್ ॥
ಪಿತರಂ ರೋಚಯಾಮಾಸ ತದಾ ದಶರಥಂ ನೃಪಮ್ ॥ ೭ ॥

ಅದರಿಂದ ಓ ಶತ್ರುನಾಶಕನೆ! ರಾವಣನ ವಧೆಯು ಮನುಷ್ಯರಿಂದ ಮಾತ್ರ ಸಾಧ್ಯವೆಂಬುದು ನಿಶ್ಚಿತವಾಗಿದೆ.' ದೇವತೆಗಳು ಆಡಿದ ಈ ಮಾತನ್ನು ಕೇಳಿ ಸ್ವತಂತ್ರನಾದ ವಿಷ್ಣು ರಾಜಾ ದಶರಥನನ್ನು ತಂದೆಯಾಗಿ ಮಾಡಿಕೊಳ್ಳಲು ಬಯಸಿದ.

ಸ ಚಾಪ್ಯಪುತ್ರೋ ನೃಪತಿಸ್ತಸ್ಮಿನ್ಕಾಲೇ ಮಹಾದ್ಯುತಿಃ ।
ಅಯಜತ್ ಪುತ್ರಿಯಾಮಿಷ್ಟಿಂ ಪುತ್ರೇಪ್ಸುರರಿಸೂದನಃ ॥ ೮ ॥

ಮಹಾಪ್ರಕಾಶ ಉಳ್ಳ ಶತ್ರುನಾಶಕನಾದ ರಾಜಾ ದಶರಥನು ಅಪುತ್ರನಾಗಿದ್ದು ಪುತ್ರನನ್ನು ಬಯಸಿ ಪುತ್ರಕಾಮೇಷ್ಟಿಯನ್ನು ಆ ಕಾಲದಲ್ಲಿ ಮಾಡಿದ್ದ.

ಸ ಕೃತ್ವಾ ನಿಶ್ಚಯಂ ವಿಷ್ಣುರಾಮಂತ್ರ್ಯ ಚ ಪಿತಾಮಹಮ್ ।
ಅಂತರ್ಧಾನಂ ಗತೋ ದೇವೈಃ ಪೂಜ್ಯಮಾನೋ ಮಹರ್ಷಿಭಿಃ ॥ ೯ ॥

ವಿಷ್ಣು ದಶರಥನಲ್ಲಿ ಪುತ್ರನಾಗಿ ಅವತರಿಸಲು ನಿಶ್ಚಯಿಸಿ ಬ್ರಹ್ಮನಿಂದ ಅನುಮತಿ ಕೇಳಿ ಪಡೆದು ದೇವತೆಗಳಿಂದಲೂ ಮಹರ್ಷಿಗಳಿಂದಲೂ ಸ್ತುತಿಸಿಕೊಳ್ಳುತ್ತ ಅಂತರ್ಧಾನ ಹೊಂದಿದ.

ತತೋ ವೈ ಯಜಮಾನಸ್ಯ ಪಾವಕಾದತುಲಪ್ರಭಮ್ ।
ಪ್ರಾದುರ್ಭೂತಂ ಮಹದ್ಭೂತಂ ಮಹಾವೀರ್ಯಂ ಮಹಾಬಲಮ್ ॥

ಬಳಿಕ ಪುತ್ರೇಷ್ಟಿಯಲ್ಲಿ ಯಜಮಾನನಾದ ದಶರಥನಿಗೆ ಮಹಾಬಲ ಮಹಾ-ವೀರ್ಯ ಉಳ್ಳ ಮಹಾ ಭೂತಪುರುಷನೊಬ್ಬನು ಯಾಗಾಗ್ನಿಯಿಂದ ಪ್ರಾದು-ರ್ಭೂತನಾದ.

ಕೃಷ್ಣಂ ರಕ್ತಾಂಬರಧರಂ ರಕ್ತಾಸ್ಯಂ ದುಂದುಭಿಸ್ವನಮ್ ।
ಸ್ನಿಗ್ಧಹರ್ಯಕ್ಷತನುಜಶ್ಮಶ್ರುಪ್ರವರಮೂರ್ಧಜಮ್ ॥ ೧೧ ॥

ಕೃಷ್ಣವರ್ಣದವನು ಕೆಂಪು ಬಟ್ಟೆ ಉಟ್ಟಿದ್ದಾನೆ. ಕೆಂಪು ಮುಖದವನು ನಗಾರಿಯ ಧ್ವನಿ. ಸಿಂಹದಂತೇ ಮುಖದಲ್ಲಿ ರೋಮಮೀಸೆ ಮುಂತಾದುವು ತಲೆಯಲ್ಲಿ ಕೂದಲು ಇದ್ದುವು.

ಶುಭಲಕ್ಷಣಸಂಪನ್ನಂ ದಿವ್ಯಾಭರಣಭೂಷಿತಮ್ ।
ಶೈಲಶೃಂಗಸಮುತ್ಸೇಧಂ ದೃಪ್ತಶಾರ್ದೂಲವಿಕ್ರಮಮ್ ॥ ೧೨ ॥

ಶುಭ ಲಕ್ಷಣ ಸಂಪನ್ನವಾದ ಶರೀರ ಉಳ್ಳವನು, ದಿವ್ಯಾಭರಣ ಭೂಷಿತನು. ಶೈಲ ಶಿಖರದಂತೆ ಉನ್ನತವಾದ ಕಾಯ. ದರ್ಪದಿಂದ ಹುಲಿಯಂತೆ ಹೆಜ್ಜೆ ಇಡುವವನು.

ದಿವಾಕರಸಮಾಕಾರಂ ದೀಪ್ತಾನಲಶಿಖೋಪಮಮ್ ।
ತಪ್ತಜಾಂಬೂನದಮಯೀಂ ರಾಜತಾಂತಪರಿಚ್ಛದಾಮ್ ॥ ೧೩ ॥

ಸೂರ್ಯನಂತೆ ಪ್ರಭಾಮಂಡಲ ಉಳ್ಳವನು ಜ್ವಲಿಸುವ ಬೆಂಕಿಯ ಜ್ವಾಲೆಯಂತೆ ತೀಕ್ಷ್ಣ ಪ್ರಕಾಶ ಉಳ್ಳವನು. ಕೈಯಲ್ಲಿ ಪುಟಕ್ಕಿಟ್ಟ ಚಿನ್ನದ ಭರಣಿಗೆ ಬೆಳ್ಳಿಯ ಮುಚ್ಚಳ.

ದಿವ್ಯಪಾಯಸಸಂಪೂರ್ಣಾಂ ಪಾತ್ರೀಂ ಪತ್ನೀಮಿವ ಪ್ರಿಯಾಮ್ ।
ಪ್ರಗೃಹ್ಯ ವಿಪುಲಾಂ ದೋರ್ಭ್ಯಾಂ ಸ್ವಯಂ ಮಾಯಾಮಯೀಮಿವ ॥

ದಿವ್ಯ ಪಾಯಸದಿಂದ ಆ ಪಾತ್ರೆ ತುಂಬಿದೆ ಅದ್ಭುತರೂಪವತಿಯಾದ ಪ್ರಿಯಪತ್ನಿಯನ್ನು ಪತಿ ಪ್ರೀತಿಯಿಂದ ಎರಡೂ ತೋಳುಗಳಿಂದ ತಬ್ಬಿಕೊಳ್ಳುವಂತೆ, ಆತ ಭಕ್ತಿಯಿಂದ ಆ ದೊಡ್ಡಪಾತ್ರೆಯನ್ನು ತಬ್ಬಿಕೊಂಡು ಹಿಡಿದಿದ್ದನು. ಶ್ರೀಹರಿಯ ವಾಸುದೇವಾದಿ ನಾಲ್ಕು ರೂಪಗಳ ಸನ್ನಿಧಾನ ಆ ಪಾಯಸದಲ್ಲಿದ್ದುದರಿಂದ, ಮುಂದಿನ ಶ್ಲೋಕದಲ್ಲಿ ಹೇಳುವಂತೆ 'ಪ್ರಾಜಾಪತ್ಯ' ಪ್ರಜಾಪತಿ ಬ್ರಹ್ಮನದೇ ಇನ್ನೊಂದು ರೂಪ ಈ ಭೂತವಾದ್ದರಿಂದ, ಆತ ಭಕ್ತಿಯಿಂದ ತಬ್ಬಿಕೊಂಡು ಪಾಯಸ ಪಾತ್ರೆಯನ್ನು ಹಿಡಿದಿದ್ದ ಎನ್ನಬಹುದು. ಹರಿ ರೂಪಗಳೆಲ್ಲವೂ ಅದ್ಭುತ ಮಾಯಾಮಯ ಎಂಬುದನ್ನು ಇದು ಸೂಚಿಸುತ್ತದೆ. 'ಮಾಯಾಮಯೀಮಿವ' ಎಂಬಲ್ಲಿ 'ಇವ ಶಬ್ದ ಏವಾರ್ಥ' ಎನ್ನುತ್ತಾರೆ ವ್ಯಾಖ್ಯಾನಕಾರರು.

ಸಮವೇಕ್ಷ್ಯಾಬ್ರವೀದ್ವಾಕ್ಯಮಿದಂ ದಶರಥಂ ನೃಪಮ್ ।
ಪ್ರಾಜಾಪತ್ಯಂ ನರಂ ವಿದ್ಧಿ ಮಾಮಿಹಾಭ್ಯಾಗತಂ ನೃಪ ॥ ೧೫ ॥

ರಾಜಾ ದಶರಥನನ್ನು ಕಂಡು ಹೇಳುತ್ತಾನೆ ಭೂತಪುರುಷ 'ರಾಜನೇ ಪ್ರಜಾಪತಿ ಬ್ರಹ್ಮನ ರೂಪಾಂತರನಾದ ಪುರುಷನು ನಾನು ನಿನ್ನ ಬಳಿಗೆ ಬಂದಿದ್ದೇನೆ' ಎಂದು ತಿಳಿ' ಎಂದು.

ತತಃ ಪರಂ ತದಾ ರಾಜಾ ಪ್ರತ್ಯುವಾಚ ಕೃತಾಂಜಲಿಃ ।
ಭಗವನ್‌ಸ್ವಾಗತಂ ತೇಽಸ್ತು ಕಿಮಹಂ ಕರವಾಣಿ ತೇ ॥ ೧೬ ॥

ಆಗ ರಾಜನು ಕೈಮುಗಿದು ಹೇಳಿದ, 'ಪೂಜ್ಯನೇ ನಿನಗೆ ಸ್ವಾಗತ. ನಾನು ನಿನಗೆ ಏನು ಸೇವೆ ಮಾಡಲಿ?' ಎಂದು.

ಅಥೋ ಪುನರಿದಂ ವಾಕ್ಯಂ ಪ್ರಾಜಾಪತ್ಯೋ ನರೋಽಬ್ರವೀತ್ ।
ರಾಜನ್ನರ್ಚಯತಾ ದೇವಾನದ್ಯ ಪ್ರಾಪ್ತಮಿದಂ ತ್ವಯಾ ॥ ೧೭ ॥

ಆಗ ಪ್ರಾಜಾಪತ್ಯ ಪುರುಷನು ಪುನಃ ನುಡಿದ– ರಾಜನೇ! ನೀನು ದೇವತೆಗಳನ್ನು ಪೂಜಿಸಿದ್ದರ ಫಲವಾಗಿ ಈ ಪಾಯಸ ನಿನಗೆ ಲಭಿಸಿದೆ.

ಇದಂ ತು ನೃಪಶಾರ್ದೂಲ ಪಾಯಸಂ ದೇವನಿರ್ಮಿತಮ್ ।
ಪ್ರಜಾಕರಂ ಗೃಹಾಣ ತ್ವಂ ಧನ್ಯಮಾರೋಗ್ಯವರ್ಧನಮ್ ॥ ೧೮ ॥

ಮಹಾರಾಜ, ಈ ಪಾಯಸ ದೇವ ನಿರ್ಮಿತವಾದುದು. ಸಂತತಿಕರ, ಸಂಪತ್ಕರ, ಆರೋಗ್ಯಕರ.

ಭಾರ್ಯಾಣಾಮನುರೂಪಾಣಾಮಶ್ನೀತೇತಿ ಪ್ರಯಚ್ಛ ವೈ ।
ತಾಸು ತ್ವಂ ಪ್ರಾಪ್ಸ್ಯಸೇ ಪುತ್ರಾನ್‌ಯದರ್ಥಂ ಯಜಸೇ ನೃಪ ॥ ೧೯ ॥

ಅನುರೂಪರಾದ ಪತ್ನಿಯರಿಗೆ 'ತಿನ್ನಿರಿ' ಎಂದು ನೀಡು, ರಾಜನೆ, ಅವರಲ್ಲಿ ನೀನು ಮಕ್ಕಳನ್ನು ಪಡೆಯುವೆ. ಅದಕ್ಕಾಗಿ ತಾನೇ ನೀನು ಯಜ್ಞ ಮಾಡಿರುವೆ?

ತಥೇತಿ ನೃಪತಿಃ ಪ್ರೀತಃ ಶಿರಸಾ ಪ್ರತಿಗೃಹ್ಯ ತಾಮ್ ।
ಪಾತ್ರೀಂ ದೇವಾನ್ನಸಂಪೂರ್ಣಾಂ ದೇವದತ್ತಾಂ ಹಿರಣ್ಮಯೀಮ್ ॥೨೦

'ಹಾಗೇ ಆಗಲಿ' ಎಂದು ರಾಜನು ಸಂತೋಷದಿಂದ ದೇವ ನಿರ್ಮಿತ ಅನ್ನದಿಂದ

ಪೂರ್ತಿ ತುಂಬಿದ ದೇವದತ್ತವಾದ ಬಂಗಾರದ ಪಾತ್ರೆಯನ್ನು ಸ್ವೀಕರಿಸಿ ತಲೆಬಾಗಿ ನಮಿಸಿದ.

ಅಭಿವಾದ್ಯ ಚ ತದ್ಭೂತಮದ್ಭುತಂ ಪ್ರಿಯದರ್ಶನಮ್ ।
ಮುದಾ ಪರಮಯಾ ಯುಕ್ತಶ್ಚಕಾರಾಭಿಪ್ರದಕ್ಷಿಣಮ್ ॥ ೨೧ ॥

ಅದ್ಭುತನಾದ ಮತ್ತೆ ಮತ್ತೆ ನೋಡಬೇಕೆನಿಸುವ ಆ ಭೂತಪುರುಷನನ್ನು ಅಭಿವಾದನ ಮಾಡಿ ಪರಮಾನಂದದಿಂದ ಮತ್ತೆ ಮತ್ತೆ ಪ್ರದಕ್ಷಿಣೆ ಗೈದ, ರಾಜ.

ತತೋ ದಶರಥಃ ಪ್ರಾಪ್ಯ ಪಾಯಸಂ ದೇವನಿರ್ಮಿತಮ್ ।
ಬಭೂವ ಪರಮಪ್ರೀತಃ ಪ್ರಾಪ್ಯ ವಿತ್ತಮಿವಾಧನಃ ॥ ೨೨ ॥

ದಶರಥನು ದೇವ ನಿರ್ಮಿತ ಪಾಯಸವನ್ನು ಪಡೆದು ದರಿದ್ರನು ಧನವನ್ನು ಪಡೆದಂತೆ ಪರಮಾನಂದ ಭರಿತನಾದ.

ತತಸ್ತದದ್ಭುತಪ್ರಖ್ಯಂ ಭೂತಂ ಪರಮಭಾಸ್ವರಮ್ ।
ಸಂವರ್ತಯಿತ್ವಾ ತತ್ಕರ್ಮ ತತ್ರೈವಾಂತರಧೀಯತ ॥ ೨೩ ॥

ಅದ್ಭುತಾಕಾರವಾದ ಬಹಳ ಪ್ರಕಾಶಮಾನವಾದ ಆ ಭೂತವು ಪಾಯಸ ನೀಡುವ ಕರ್ಮವನ್ನು ಮಾಡಿ ಮುಗಿಸಿ ಅಲ್ಲಿಯೇ ಅಂತರ್ಧಾನ ಹೊಂದಿತು.

ಹರ್ಷರಶ್ಮಿಭಿರುದ್ಯೋತಂ ತಸ್ಯಾಂತಃಪುರಮಾಬಭೌ ।
ಶಾರದಸ್ಯಾಭಿರಾಮಸ್ಯ ಚಂದ್ರಸ್ಯೇವ ನಭೋಽಂಶುಭಿಃ ॥ ೨೪ ॥

ಶರತ್ಕಾಲದ ಸುಂದರ ಚಂದ್ರಮನ ಬೆಳದಿಂಗಳಿಂದ ಆಕಾಶದಂತೆ, ಹರ್ಷದ ಬೆಳಕಿನಿಂದ ದಶರಥನ ಅಂತಃಪುರ ಬೆಳಗಿತು.

ಸೋಽಂತಃಪುರಂ ಪ್ರವಿಶ್ಯೈವ ಕೌಸಲ್ಯಾಮಿದಮಬ್ರವೀತ್ ।
ಪಾಯಸಂ ಪ್ರತಿಗೃಹ್ಣೀಷ್ವ ಪುತ್ರೀಯಂ ತ್ವಿದಮಾತ್ಮನಃ ॥ ೨೫ ॥

ದಶರಥನು ಅಂತಃಪುರವನ್ನು ಪ್ರವೇಶಿಸಿದೊಡನೆ ಕೌಸಲ್ಯೆಗೆ ಹೇಳಿದ. ಇದು ನಿನಗೆ ಪುತ್ರ ಸಂತತಿ ನೀಡುವ ಪಾಯಸ ಇದನ್ನು ಸ್ವೀಕರಿಸು ಎಂದು.

ಕೌಸಲ್ಯಾಯೈ ನರಪತಿಃ ಪಾಯಸಾರ್ಧಂ ದದೌ ತದಾ ।
ಅರ್ಧಾದರ್ಧಂ ದದೌ ಚಾಪಿ ಸುಮಿತ್ರಾಯೈ ನರಾಧಿಪಃ ॥

ಕೈಕೇಯ್ಯೈ ಚಾವಶಿಷ್ಟಾರ್ಧಂ ದದೌ ಪುತ್ರಾರ್ಥಕಾರಣಾತ್ ॥ ೨೬ ॥

ರಾಜನು ಕೌಸಲ್ಯೆಗೆ ಪಾಯಸದಲ್ಲಿ ಒಂದು ಭಾಗವನ್ನು ನೀಡಿದ. ಇನ್ನೊಂದು ಭಾಗದಿಂದಲೂ ಒಂದು ಭಾಗವನ್ನು ತೆಗೆದು ಸುಮಿತ್ರೆಗೆ ನೀಡಿದ. ಉಳಿದ ಭಾಗದಿಂದಲೂ ಒಂದು ಭಾಗವನ್ನು ಪುತ್ರಸಂತತಿಗಾಗಿ ಕೈಕೇಯಿಗೆ ನೀಡಿದ.

ಪ್ರದದೌ ಚಾವಶಿಷ್ಟಾರ್ಧಂ ಪಾಯಸಸ್ಯಾಮೃತೋಪಮಮ್ ।
ಅನುಚಿಂತ್ಯ ಸುಮಿತ್ರಾಯೈ ಪುನರೇವ ಮಹೀಪತಿಃ ॥
ಏವಂ ತಾಸಾಂ ದದೌ ರಾಜಾ ಭಾರ್ಯಾಣಾಂ ಪಾಯಸಂ ಪೃಥಕ್ ॥

ಆಗ ಉಳಿದ, ಪಾಯಸದ ಅಮೃತೋಪಮವಾದ ಭಾಗವನ್ನು ಆಲೋಚನೆ ಮಾಡಿ ಪುನಃ ಸುಮಿತ್ರೆಗೇ ಕೊಟ್ಟ ರಾಜ. ಹೀಗೆ ರಾಜನು ಪಾಯಸವನ್ನು ಭಾಗ ಮಾಡಿ ಆ ಪತ್ನಿಯರಿಗೆ ಕೊಟ್ಟಿದ್ದಾನೆ.

ಇಲ್ಲಿ ಅರ್ಧ ಕಾಲು ಎಂಟನೆ ಒಂದಂಶ ಎಂದೆಲ್ಲ ಅಳತೆ ಪಾತ್ರದಿಂದ ಅಳೆದು ಅಳೆದು ವಿಭಾಗ ಮಾಡಿ ರಾಜನು ಪತ್ನಿಯರಿಗೆ ಪಾಯಸ ಉಣಿಸುವುದು ಸಹಜವಲ್ಲ. 'ಅರ್ಧ' ಎಂದರೆ ಸ್ವಲ್ಪ ಭಾಗ' ಎಂದೇ ಅರ್ಥ. ಸರಿಯಾಗಿ ಅರ್ಧ-ಭಾಗ ಎಂದಲ್ಲ. ಅರ್ಧ ಶಬ್ದಕ್ಕೆ ಹಾಗೂ ಅರ್ಥ ಇದ್ದರೂ ಇಲ್ಲಿ ಅದು ವಿವಕ್ಷಿತವೆನ್ನಲು ಕಾರಣವಿಲ್ಲ. ಅದರಿಂದ ಕೈಕೇಯಿಗೆ ರಾಜ ದುರ್ಬುದ್ಧಿಯಿಂದ ಕೇವಲ ಅತ್ಯಲ್ಪವಾದ, ಸಂತತಿ ಲಾಭಕ್ಕೆ ಏನೂ ಸಾಕಾಗದ ಎಂಟನೆ ಒಂದಂಶವನ್ನು ಮಾತ್ರ ಅಳತೆ ಮಾಡಿ ಕೊಟ್ಟಿದ್ದಾನೆ, ಆದರೂ 'ಅಯ್ಯೋ ಕೈಕೇಯಿಯಲ್ಲಿ ಭರತನ ಜನ್ಮ ನಿಶ್ಚಿತವಾಯಿತು! ಅದನ್ನು ತಪ್ಪಿಸಲಾಗದೆ ಹೋದೆನೆಂದು ಮುಂತಾಗಿ 'ಅನುಚಿಂತ್ಯ' ಪರಿತಪಿಸಿ ಎಂದು ವಿಚಿತ್ರ ಕಲ್ಪನೆಗೆ ಇಲ್ಲಿ ಅವಕಾಶವಿಲ್ಲ.

ಹಾಗಾದರೆ ಕೊನೆಯಲ್ಲಿ ಉಳಿದ ಭಾಗವನ್ನು ಸುಮಿತ್ರೆಗೇ ಏಕೆ ಕೊಟ್ಟ? ಎಂದರೆ, ಹುಟ್ಟುವ ಮಕ್ಕಳು ನಾಲ್ಕು ಮಂದಿ ಎಂಬುದು ಮೊದಲೇ ಎಲ್ಲರಿಗೂ ತಿಳಿದಿತ್ತು. ಮೂವರು ರಾಣಿಯರಲ್ಲಿ ಯಾರಾದರೂ ಒಬ್ಬಳಿಗೆ ಇಬ್ಬರು ಮಕ್ಕಳಾಗಲೇಬೇಕು. ಆ ಭಾಗ್ಯ ಸುಮಿತ್ರೆಗೇ ದೊರಕಲಿ, ಏಕೆಂದರೆ ಅವಳು, ಪಟ್ಟಮಹಿಷಿಗೆ ದೊರೆತ ಪತಿ ಪ್ರೀತಿಯಿಂದಲೂ, ಕಿರಿಯ ಮೋಹದ ಮಡದಿ ಕೈಕೇಯಿಗೆ ದೊರೆತ ಪ್ರೀತಿಯಿಂದಲೂ ವಂಚಿತಳಾದವಳು ಪಾಪ! ನಡುವಿನ ಮಡದಿ ಎಂದು 'ಅನುಚಿಂತ್ಯ' ಅನುಕಂಪೆಯಿಂದ, ಅವಳಿಗೇ ಇಬ್ಬರು ಮಕ್ಕಳಾಗಲಿ, 'ಅಧಿಕಸ್ಯಾಧಿಕಂ ಫಲಂ' ಎಂದ ರಾಜ ಎರಡನೇ ಬಾರಿಗೆ ಉಳಿದೆಲ್ಲ ಪಾಯಸ ನೀಡಿದ್ದಾನೆ ಎಂದರೆ, ತಪ್ಪಾಗದು.

ಮತ್ತು ಕೈಕೇಯಿಯ ಜಂಭದಿಂದ ಕೌಸಲ್ಯೆಗೆ ಬೇಸರವಾಗುವಾಗಲೆಲ್ಲ, ಅವಳನ್ನು ಸಂತೈಸುತ್ತಿದ್ದವಳು ಸುಮಿತ್ರೆ ಎಂದೂ ರಾಜನಿಗೆ ಗೊತ್ತು ಹೀಗಾಗಿ ಅವಳಲ್ಲಿ ಅನುಕಂಪೆ ಸಜಹ. 'ಅನುಚಿಂತ್ಯ ಸುಮಿತ್ರಾಯೈ' ಎಂಬ ಮಾತಿನಿಂದ ಇದು ಸೂಚಿತವಾಗುತ್ತದೆ.

ತಾಸ್ತ್ವೇತತ್ಪಾಯಸಂ ಪ್ರಾಪ್ಯ ನರೇಂದ್ರಸ್ಯೋತ್ತಮಾಃ ಸ್ತ್ರಿಯಃ ।
ಸಂಮಾನಂ ಮೇನಿರೇ ಸರ್ವಾಃ ಪ್ರಹರ್ಷೋದಿತಚೇತಸಃ ॥ ೨೮ ॥

ಆ ರಾಣಿಯರು ಮೂವರೂ ರಾಜನ ಉತ್ತಮ ಪತ್ನಿಯರು. ಅವರು ಉತ್ತಮವಾದ ಈ ಪಾಯಸವನ್ನು ರಾಜನ ಕೈಯಿಂದಲೇ ಪಡೆದು ಎಲ್ಲ ಮೂವರೂ ರಾಣಿಯರು ತಮಗೆ ರಾಜ ನೀಡಿದ ಸಂಮಾನವಿದೆಂದು ತಿಳಿದರು. ಬಹಳ ಹರ್ಷಭರಿತ ಮನಸ್ಸಿನವರಾದರು.

ಕೈಕೇಯಿ ಪುತ್ರನಿಗೇ ಪಟ್ಟವೆಂದು ತಾನು ಮಾತು ಕೊಟ್ಟಿದ್ದರಿಂದ ಕೈಕೇಯಿಗೆ ಮಕ್ಕಳಾಗಬಾರದೆಂದು ದುರುದ್ದೇಶದಿಂದಲೇ ರಾಜ ಅವಳಿಗೆ ಅತ್ಯಲ್ಪ ಪಾಯಸ ಇತ್ತುದಾಗಿದ್ದರೆ, ಕೈಕೇಯಿ ಇದನ್ನು ದೊಡ್ಡ ರಾದ್ಧಾಂತ ಮಾಡುವ ಸಂಭವವೇ ಹೆಚ್ಚಿತ್ತು 'ಸಂಮಾನವಾಯಿತೆಂ'ದು ಹರ್ಷ ಪಡುತ್ತಿರಲಿಲ್ಲ. ಹೀಗಾಗಿ 'ಪುತ್ರಾರ್ಥ–ಕಾರಣಾತ್' ಎಂದರೆ, 'ಕೈಕೇಯಿಗೆ ಪುತ್ರಲಾಭ ನಿವೃತ್ತಿಗಾಗಿ' ಎಂದೂ ವಿವರಣೆ ನೀಡುವುದು ಅಸಹಜ, ಅನಾವಶ್ಯಕ.

ತತಸ್ತು ತಾಃ ಪ್ರಾಶ್ಯ ತದುತ್ತಮಸ್ತ್ರಿಯೋ
ಮಹೀಪತೇರುತ್ತಮಪಾಯಸಂ ಪೃಥಕ್ ।
ಹುತಾಶನಾದಿತ್ಯಸಮಾನತೇಜಸ–
ಶ್ಚಿರೇಣಗರ್ಭಾನ್ಪ್ರತಿಪೇದಿರೇ ತದಾ ॥ ೨೯ ॥

ಉತ್ತಮವಾದ ಆ ಪಾಯಸವನ್ನು ಉಂಡು ರಾಜನ ಉತ್ತಮ ಪತ್ನಿಯರು ('ಚಿರೇಣ' ಎಂದು ಪಾಠ). ನಿಧಾನವಾಗಿ ಅಗ್ನಿ ಸೂರ್ಯರ ಕಾಂತಿ ಉಳ್ಳ ಗರ್ಭಗಳನ್ನು ಪಡೆದರು. ತಾವೂ ಅಗ್ನಿ ಸೂರ್ಯಕಾಂತಿಯಿಂದ ಬೆಳಗಿದರು.

ತತಸ್ತು ರಾಜಾ ಪ್ರಸಮೀಕ್ಷ್ಯ ತಾಃ ಸ್ತ್ರಿಯಃ
ಪ್ರರೂಢಗರ್ಭಾಃ ಪ್ರತಿಲಬ್ಧಮಾನಸಃ ।
ಬಭೂವ ಹೃಷ್ಟಸ್ತ್ರಿದಿವೇ ಯಥಾ ಹರಿಃ
ಸುರೇಂದ್ರಸಿದ್ಧರ್ಷಿಗಣಾಭಿಪೂಜಿತಃ ॥ ೩೦ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಷೋಡಶಃ ಸರ್ಗಃ ॥ ೧೬ ॥

ರಾಜನು ಆ ರಾಣಿಯರಲ್ಲಿ ಗರ್ಭಗಳು ಬೆಳೆದುದನ್ನು ಕಂಡು ಬಹುಕಾಲದ ತನ್ನ ಮನದ ಇಷ್ಟ ಲಭಿಸಿತೆಂದು ಹರ್ಷಿತನಾದ, ಸ್ವರ್ಗದಲ್ಲಿ 'ಹರಿ' ಅಂದರೆ ಇಂದ್ರನು ಹೇಗೆ ಹೃಷ್ಟನಾಗಿರುವನೋ ಹಾಗೇ. ಇಂದ್ರನಿಂದಲೂ, ಸಿದ್ಧರು ಮತ್ತು ಋಷಿಗಳು ಇವರ ಸಮೂಹದಿಂದಲೂ ರಾಜಾ ದಶರಥನು 'ವಿಷ್ಣುವಿಗೆ ತಂದೆಯಾಗ-ಲಿರುವನೆಂ'ದು ಸ್ತುತಿಗೆ ಪಾತ್ರನಾದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಹದಿನಾರನೆ ಸರ್ಗ ಮುಗಿಯಿತು.

ಸಪ್ತದಶಃ ಸರ್ಗಃ

ಪುತ್ರತ್ವಂ ತು ಗತೇ ವಿಷ್ಣೌ ರಾಜ್ಞಸ್ತಸ್ಯ ಮಹಾತ್ಮನಃ ।
ಉವಾಚ ದೇವತಾಃ ಸರ್ವಾಃ ಸ್ವಯಂಭೂರ್ಭಗವಾನಿದಮ್ ॥ ೧ ॥

ಮಹಾತ್ಮನಾದ ದಶರಥ ರಾಜನ ಪುತ್ರತ್ವವನ್ನು ವಿಷ್ಣುವು ಸ್ವೀಕರಿಸಿದಾಗ ಭಗವಾನ್ ಬ್ರಹ್ಮದೇವನು ಎಲ್ಲ ದೇವತೆಗಳಿಗೆ ಹೀಗೆ ಆದೇಶ ನೀಡಿದ.

ಸತ್ಯಸಂಧಸ್ಯ ವೀರಸ್ಯ ಸರ್ವೇಷಾಂ ನೋ ಹಿತೈಷಿಣಃ ।
ವಿಷ್ಣೋಃ ಸಹಾಯಾನ್‌ಬಲಿನಃ ಸೃಜಧ್ವಂ ಕಾಮರೂಪಿಣಃ ॥ ೨ ॥

ಸತ್ಯಸಂಧ, ವೀರ, ನಮ್ಮೆಲ್ಲರಿಗೂ ಹಿತೈಷಿಯಾಗಿರುವ ರಾಮರೂಪಿ ವಿಷ್ಣುವಿಗೆ ಸಹಾಯ ನೀಡಲು ನೀವು ಕಾಮರೂಪಿಗಳಾದ, ಸಮಯಕ್ಕೆ ತಕ್ಕಂತೆ ಬೇಕಾದ ರೂಪ ಧರಿಸಬಲ್ಲ, ಬಲಿಷ್ಠರಾದ ಪುತ್ರರನ್ನು ಹುಟ್ಟಿಸಿರಿ.

ಮಾಯಾವಿದಶ್ಚ ಶೂರಾಂಶ್ಚ ವಾಯುವೇಗಸಮಾನ್‌ಜವೇ ।
ನಯಜ್ಞಾನುಬ್ದಿಸಂಪನ್ನಾನ್ವಿಷ್ಣುತುಲ್ಯಪರಾಕ್ರಮಾನ್ ॥ ೩ ॥

ಅಸಂಹಾರ್ಯಾನುಪಾಯಜ್ಞಾನ್ಸಿಂಹಸಂಹನನಾನ್ವಿತಾನ್ ।
ಸರ್ವಾಸ್ತ್ರಗುಣಸಂಪನ್ನಾನಮೃತಪ್ರಾಶನಾನಿವ ।
ಅಪ್ಸರಸ್ಸು ಚ ಮುಖ್ಯಾಸು ಗಂಧರ್ವೀಣಾಂ ತನೂಷು ಚ ॥ ೪ ॥

ಯಕ್ಷಪನ್ನಗಕನ್ಯಾಸು ಋಕ್ಷವಿದ್ಯಾಧರೀಷು ಚ ।
ಕಿನ್ನರೀಣಾಂ ಚ ಗಾತ್ರೇಷು ವಾನರೀಣಾಂ ತನೂಷು ಚ ।
ಸೃಜಧ್ವಂ ಹರಿರೂಪೇಣ ಪುತ್ರಾಂಸ್ತುಲ್ಯಪರಾಕ್ರಮಾನ್ ॥ ೫ ॥

ಪುತ್ರರು ನಿಮ್ಮಂತೆ ಮಾಯೆಯನ್ನು ಬಲ್ಲವರು ಶೂರರು ವಾಯುವೇದಕ್ಕೇ ವೇಗದಲ್ಲಿ ಸಮಾನರು, ನೀತಿಬಲ್ಲವರು ಬುದ್ಧಿಶಾಲಿಗಳು ವಿಷ್ಣುತುಲ್ಯಪರಾಕ್ರಮ ಉಳ್ಳವರು ಅವಧ್ಯರು ಉಪಾಯ ಬಲ್ಲವರು ಸಿಂಹದಂತೆ ಬಲಿಷ್ಠವಾದ ಶರೀರ ಉಳ್ಳವರು ಸರ್ವಾಸ್ತ್ರಗುಣ ಸಂಪನ್ನರು ಅಮೃತಪ್ರಾಶನ ಮಾಡಿದವರಂತೆ ಇರುವವರು ಆಗಿರಬೇಕು. ಇಂಥ ಪುತ್ರರನ್ನು ನೀವು ಮುಖ್ಯ ಅಪ್ಸರೆಯರಲ್ಲಿ ಗಂಧರ್ವ ಸ್ತ್ರೀಯರ ಶರೀರಗಳಲ್ಲಿ ಯಕ್ಷ ನಾಗಕನ್ಯೆಯರಲ್ಲಿ ಹೆಣ್ಣುಕರಡಿ ವಿದ್ಯಾಧರ ಸ್ತ್ರೀಯರಲ್ಲಿ ಕಿನ್ನರಿಯರ ಶರೀರಗಳಲ್ಲಿ ಕಪಿಸ್ತ್ರೀಯರ ಶರೀರಗಳಲ್ಲಿ ನಿಮ್ಮ ಪರಾಕ್ರಮಕ್ಕೆ ತುಲ್ಯವಾದ ಪರಾಕ್ರಮ ಉಳ್ಳ ಕಪಿರೂಪ ಪುತ್ರರನ್ನು ಹುಟ್ಟಿಸಿರಿ.

ಪೂರ್ವಮೇವ ಮಯಾ ಸೃಷ್ಟೋ ಜಾಂಬವಾನೃಕ್ಷಪುಂಗವಃ ।
ಜೃಂಭಮಾಣಸ್ಯ ಸಹಸಾ ಮಮ ವಕ್ತ್ರಾದಜಾಯತ ॥ ೬ ॥

ಹಿಂದೆಯೆ ಕರಡಿಗಳಲ್ಲಿ ಶ್ರೇಷ್ಠನಾದ ಜಾಂಬವನನ್ನು ನಾನು ಹುಟ್ಟಿಸಿದ್ದೇನೆ ನಾನು ಬಾಯಿ ಆಕಳಿಸಿದಾಗ ಒಡನೆ ಬಾಯಿಯಿಂದ ಆತ ಹುಟ್ಟಿದ್ದ.

ತೇ ತಥೋಕ್ತಾ ಭಗವತಾ ತತ್ಪ್ರತಿಶ್ರುತ್ಯ ಶಾಸನಮ್ ।
ಜನಯಾಮಾಸುರೇವಂ ತೇ ಪುತ್ರಾನ್ವಾನರರೂಪಿಣಃ ॥ ೭ ॥

ಭಗವಾನ್ ಬ್ರಹ್ಮದೇವನು ಹಾಗೆ ಹೇಳಿದಾಗ ಆ ಶಾಸನವನ್ನು ದೇವತೆಗಳು ಸ್ವೀಕರಿಸಿ ಬ್ರಹ್ಮನಂತೇ ತಾವೂ ವಾನರ ರೂಪರಾದ ಪುತ್ರರನ್ನು ಹುಟ್ಟಿಸಿದರು.

ಋಷಯಶ್ಚ ಮಹಾತ್ಮಾನಃ ಸಿದ್ಧವಿದ್ಯಾಧರೋರಗಾಃ ।
ಚಾರಣಾಶ್ಚ ಸುತಾನ್ವೀರಾನ್ ಸಸೃಜುರ್ವನಚಾರಿಣಃ ॥ ೮ ॥

ಮಹಾತ್ಮರಾದ ಋಷಿಗಳೂ ಸಿದ್ಧ ವಿದ್ಯಾಧರ ನಾಗರೂ ಚಾರಣರೂ ವೀರರಾದ ವನವಾಸಿ ಪುತ್ರರನ್ನು ಹುಟ್ಟಿಸಿದರು.

ವಾನರೇಂದ್ರಂ ಮಹೇಂದ್ರಾಭಮಿಂದ್ರೋ ವಾಲಿನಮೂರ್ಜಿತಮ್ ।
ಸುಗ್ರೀವಂ ಜನಯಾಮಾಸ ತಪನಸ್ತಪತಾಂ ವರಃ ॥ ೯ ॥

ದೇವೇಂದ್ರನು ದೇವೇಂದ್ರನಂಥ ಬಲಿಷ್ಠನಾದ ವಾನರೇಂದ್ರನಾದ ವಾಲಿಯನ್ನು ಸೃಜಿಸಿದನು. ತಾಪ ಉಂಟು ಮಾಡುವವರಲ್ಲಿ ಶ್ರೇಷ್ಠನಾದ ಸೂರ್ಯನು ಸುಗ್ರೀವನನ್ನು ಹುಟ್ಟಿಸಿದನು.

ಬೃಹಸ್ಪತಿಸ್ತ್ವಜನಯತ್ತಾರಂ ನಾಮ ಮಹಾಹರಿಮ್ ।
ಸರ್ವವಾನರಮುಖ್ಯಾನಾಂ ಬುದ್ಧಿಮಂತಮನುತ್ತಮಮ್ ॥ ೧೦ ॥

ಬೃಹಸ್ಪತಿಯು ತಾರನೆಂಬ ಮಹಾಕಪಿಯನ್ನು ಸೃಜಿಸಿದನು. ತಾರನು ಎಲ್ಲ ಕಪಿಶ್ರೇಷ್ಠರಲ್ಲಿ ಬಹಳ ಉತ್ತಮ ಬುದ್ಧಿಶಾಲಿ ಎನಿಸಿದನು.

ಧನದಸ್ಯ ಸುತಃ ಶ್ರೀಮಾನ್ವಾನರೋ ಗಂಧಮಾದನಃ ।
ವಿಶ್ವಕರ್ಮಾ ತ್ವಜನಯನ್ನಲಂ ನಾಮ ಮಹಾಹರಿಮ್ ॥ ೧೧ ॥

ಕುಬೇರನ ಪುತ್ರನು ಶ್ರೀಮಂತನಾದ ಗಂಧಮಾದನನೆಂಬ ಕಪಿಯನ್ನು, ವಿಶ್ವಕರ್ಮನು ನಲನೆಂಬ ಮಹಾಕಪಿಯನ್ನು ಹುಟ್ಟಿಸಿದನು.

ಪಾವಕಸ್ಯ ಸುತಃ ಶ್ರೀಮಾನ್ನೀಲೋಽಗ್ನಿಸದೃಶಪ್ರಭಃ ।
ತೇಜಸಾ ಯಶಸಾ ವೀರ್ಯಾದತ್ಯರಿಚ್ಯತ ವಾನರಾನ್ ॥ ೧೨ ॥

ಅಗ್ನಿಪುತ್ರನು ಅಗ್ನಿಸದೃಶಪ್ರಭೆ ಉಳ್ಳ ಶ್ರೀಮಂತನಾದ ನೀಲ. ತೇಜ ಯಶ ವೀರ್ಯಗಳಿಂದ ಇವನು ಬೇರೆ ಕಪಿಗಳನ್ನು ಮೀರಿದನು.

ರೂಪದ್ರವಿಣಸಂಪನ್ನಾವಶ್ವಿನೌ ರೂಪಸಮ್ಮತೌ ।
ಮೈಂದಂ ಚ ದ್ವಿವಿದಂ ಚೈವ ಜನಯಾಮಾಸತುಃ ಸ್ವಯಮ್ ॥ ೧೩ ॥

ರೂಪಸಂಪತ್ತಿನಿಂದ ಕೂಡಿದ ಅಶ್ವಿನಿದೇವತೆಗಳು ರೂಪಯುಕ್ತರಾದ ಮೈಂದ ದ್ವಿವಿದರನ್ನು ಸ್ವತಃ ಸೃಜಿಸಿದರು.

ವರುಣೋ ಜನಯಾಮಾಸ ಸುಷೇಣಂ ನಾಮ ವಾನರಮ್ ।
ಶರಭಂ ಜನಯಾಮಾಸ ಪರ್ಜನ್ಯಸ್ತು ಮಹಾಬಲಮ್ ॥ ೧೪ ॥

ವರುಣನು ಸುಷೇಣನೆಂಬ ವಾನರನನ್ನು ಸೃಜಿಸಿದನು ಪರ್ಜನ್ಯನು ಮಹಾಬಲಿಯಾದ ಶರಭನನ್ನು ಸೃಜಿಸಿದನು.

ಮಾರುತಸ್ಯಾತ್ಮಜಃ ಶ್ರೀಮಾನ್ ಹನುಮಾನ್ನಾಮ ವಾನರಃ ।
ವಜ್ರಸಂಹನನೋಪೇತೋ ವೈನತೇಯಸಮೋ ಜವೇ ।
ಸರ್ವವಾನರಮುಖ್ಯೇಷು ಬುದ್ಧಿಮಾನ್ಬಲವಾನಪಿ ॥ ೧೫ ॥

ವಾಯುದೇವನ ಪುತ್ರನು ಶ್ರೀಮಾನ್ ಹನುಮಾನ್ ಎಂಬ ವಾನರನು, ವಜ್ರಕಾಯದಿಂದ ಕೂಡಿದ್ದು ವೇಗದಲ್ಲಿ ಗರುಡನಿಗೆ ಸಮಾನ. ಎಲ್ಲ ಶ್ರೇಷ್ಠ ವಾನರರಲ್ಲಿ ಹೆಚ್ಚು ಬುದ್ಧಿಶಾಲಿ ಬಲಶಾಲಿ.

ತೇ ಸೃಷ್ಟಾ ಬಹುಸಾಹಸ್ರಾ ದಶಗ್ರೀವವಧೇ ರತಾಃ ॥
ಅಪ್ರಮೇಯಬಲಾ ವೀರಾ ವಿಕ್ರಾಂತಾಃ ಕಾಮರೂಪಿಣಃ ॥ ೧೬ ॥

ಸಾವಿರ ಸಾವಿರ ಸಂಖ್ಯೆಯಲ್ಲಿ ಸೃಷ್ಟರಾದ ಈ ಕಪಿವೀರರು ಅಮಿತ ಬಲಶಾಲಿ–ಗಳು ವಿಕ್ರಮಶಾಲಿ ವೀರರು ಕಾಮರೂಪಿಗಳು ರಾವಣ ಸಂಹಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

ಮೇರುಮಂದರಸಂಕಾಶಾ ವಪುಷ್ಮಂತೋ ಮಹಾಬಲಾಃ ।
ಋಕ್ಷವಾನರಗೋಪುಚ್ಛಾಃ ಕ್ಷಿಪ್ರಮೇವಾಭಿಜಜ್ಞಿರೇ ॥ ೧೭ ॥

ಮೇರು ಮಂದರ ಬೆಟ್ಟಗಳಷ್ಟು ಉನ್ನತರಾದ ದೃಢಶರೀರಿಗಳಾದ ಮಹಾ ಬಲಿಷ್ಠರಾದ ಕರಡಿಗಳೂ ವಾನರರೂ ಗೋಪುಚ್ಛ ಜಾತಿಯ ಕಪಿಗಳೂ ಬೇಗನೆ ಹುಟ್ಟಿದರು.

ಯಸ್ಯ ದೇವಸ್ಯ ಯದ್ರೂಪಂ ವೇಷೋ ಯಶ್ಚ ಪರಾಕ್ರಮಃ ।
ಅಜಾಯತ ಸಮಸ್ತೇನ ತಸ್ಯ ತಸ್ಯ ಸುತಃ ಪೃಥಕ್ ॥ ೧೮ ॥

ಯಾವ ದೇವನಲ್ಲಿ ಯಾವ ರೂಪವೇಷ ಪರಾಶ್ರಮಗಳಿವೆಯೋ ಆ ಎಲ್ಲ ರೂಪ ವೇಷ ಪರಾಕ್ರಮಗಳಿಂದ ಆ ದೇವನಿಗೆ ಸಮನಾಗಿ ಅವನ ಪುತ್ರನು ಬೇರೆಯಾಗಿ ಜನಿಸಿದನು.

ಗೋಲಾಂಗುಲೀಷು ಚೋತ್ಪನ್ನಾಃ ಕೇಚಿತ್ಸಂಮತವಿಕ್ರಮಾಃ ।
ಋಕ್ಷೀಷು ಚ ತಥಾ ಜಾತಾ ವಾನರಾಃ ಕಿನ್ನರೀಷು ಚ ॥ ೧೯ ॥

ಗೋಲಾಂಗುಲ ಕಪಿ ಸ್ತ್ರೀಯರಲ್ಲಿ ಕೆಲವರು ಒಳ್ಳೆಯ ಪರಾಕ್ರಮಿಗಳಾದ ಪುತ್ರರು ಜನಿಸಿದರು. ಹಾಗೆ ಹೆಣ್ಣು ಕರಡಿಗಳಲ್ಲಿ ಕಿನ್ನರಸ್ತ್ರೀಯರಲ್ಲಿ ಕೆಲವರು ಜನಿಸಿದರು.

ದೇವಾ ಮಹರ್ಷಿಗಂಧರ್ವಾಸ್ತಾರ್ಕ್ಷ್ಯಾ ಯಕ್ಷಾ ಯಶಸ್ವಿನಃ ।
ನಾಗಾಃ ಕಿಂಪುರುಷಾಶ್ಚೈವ ಸಿದ್ಧವಿದ್ಯಾಧರೋರಗಾಃ ।
ಬಹವೋ ಜನಯಾಮಾಸುರ್ಹೃಷ್ಟಾಸ್ತತ್ರ ಸಹಸ್ರಶಃ ॥ ೨೦ ॥

ಚಾರಣಾಶ್ಚ ಸುತಾನ್ವೀರಾನ್ಸಸೃಜುರ್ವನಚಾರಿಣಃ ।
ವಾನರಾನ್ಸುಮಹಾಕಾಯಾನ್ಸರ್ವಾನ್ವೈ ವನಚಾರಿಣಃ ॥ ೨೧ ॥

ದೇವ ಮಹರ್ಷಿ ಗಂಧರ್ವ ಗರುಡ ಯಕ್ಷ ನಾಗ ಕಿಂಪುರುಷ ಸಿದ್ಧ ವಿದ್ಯಾಧರ ನಾಗರು ಚಾರಣರು ಬಹುಮಂದಿ ಉತ್ಸಾಹದಿಂದ ಸಾವಿರ ಗಟ್ಟಲೆ ವೀರ, ವನಚಾರಿ ಪುತ್ರರನ್ನು ಉತ್ಪಾದಿಸಿದರು. ವನಚಾರಿಗಳಾದ ಮಹಾಕಾಯರಾದ ಎಲ್ಲ ಕಪಿಗಳನ್ನೂ ಹುಟ್ಟಿಸಿದರು.

ಅಪ್ಸರಸ್ಸು ಚ ಮುಖ್ಯಾಸು ತಥಾ ವಿದ್ಯಾಧರೀಷು ಚ ।
ನಾಗಕನ್ಯಾಸು ಚ ತಥಾ ಗಂಧರ್ವೀಣಾಂ ತನೂಷು ಚ ॥ ೨೨ ॥

ಅಪ್ಸರೋತ್ತಮರಲ್ಲಿ ವಿಧಾಧರಿಯರಲ್ಲಿ ನಾಗಕನ್ಯೆಯರಲ್ಲಿ ಗಂಧರ್ವ ಸ್ತ್ರಿಯರ ಶರೀರಗಳಲ್ಲಿ ಮಕ್ಕಳನ್ನು ಸೃಜಿಸಿಕೊಂಡರು.

ಕಾಮರೂಪಬಲೋಪೇತಾ ಯಥಾಕಾಮಂ ವಿಚಾರಿಣಃ ।
ಸಿಂಹಶಾರ್ದೂಲಸದೃಶಾ ದರ್ಪೇಣ ಚ ಬಲೇನ ಚ ॥ ೨೩ ॥

ಬಯಸಿದ ರೂಪ ಬಲಯುಕ್ತರಾದ, ಬಯಸಿದಂತೆ ಸಂಚರಿಸುವ, ದರ್ಪ-ದಿಂದಲೂ ಬಲದಿಂದಲೂ ಸಿಂಹ ಹುಲಿಗಳಿಗೆ ಸದೃಶರು ಈ ಕಪಿವೀರರು.

ಶಿಲಾಪ್ರಹರಣಾಃ ಸರ್ವೇ ಸರ್ವೇ ಪಾದಪಯೋಧಿನಃ ।
ನಖದಂಷ್ಟ್ರಾಯುಧಾಃ ಸರ್ವೇ ಸರ್ವೇ ಸರ್ವಾಸ್ತ್ರಕೋವಿದಾಃ ॥ ೨೪ ॥

ಎಲ್ಲ ಕಪಿಗಳೂ ಕಲ್ಲುಗಳನ್ನು ಎಸೆಯುವವರು, ಮರಗಳಿಂದ ಯುದ್ಧ ಮಾಡುವವರು. ಉಗುರು ಕೋರೆ ಹಲ್ಲುಗಳಿಂದ ಕಾಳಗ ಮಾಡುವವರು, ಎಲ್ಲರೂ ಎಲ್ಲ ಅಸ್ತ್ರಗಳಲ್ಲಿಯೂ ಕೋವಿದರು.

ವಿಚಾಲಯೇಯುಃ ಶೈಲೇಂದ್ರಾನ್ಭೇದಯೇಯುಃ ಸ್ಥಿರಾನ್ ದ್ರುಮಾನ್ ।
ಕ್ಷೋಭಯೇಯುಶ್ಚ ವೇಗೇನ ಸಮುದ್ರಂ ಸರಿತಾಂ ಪತಿಮ್ ॥ ೨೫ ॥

ದೊಡ್ಡ ಬೆಟ್ಟಗಳನ್ನೂ ಕೀಳಬಲ್ಲರು ಸ್ಥಿರವಾಗಿ ಬೇರು ಬಿಟ್ಟ ಮರಗಳನ್ನು ನಾಶ ಪಡಿಸಬಲ್ಲರು ನದಿಗಳಿಗೆ ಅಧಿಪತಿಯಾದ ಸಮುದ್ರರಾಜನನ್ನೂ ವೇಗದಿಂದ ಪ್ರಕ್ಷುಬ್ಧ ಗೊಳಿಸಬಲ್ಲರು, ಕಪಿಗಳು.

ದಾರಯೇಯುಃ ಕ್ಷಿತಿಂ ಪದ್ಭ್ಯಾಮಾಪ್ಲವೇಯುರ್ಮಹಾರ್ಣವಮ್ ।
ನಭಃಸ್ಥಲಂ ವಿಶೇಯುಶ್ಚ ಗೃಹ್ಣೀಯುರಪಿ ತೋಯದಾನ್ ॥ ೨೬ ॥

ಕಾಲುಗಳಿಂದ ಭೂಮಿಯನ್ನು ಭಾಗ ಮಾಡಬಲ್ಲರು, ಮಹಾ ಸಮುದ್ರವನ್ನೂ ದಾಟಬಲ್ಲರು. ಆಕಾಶದಲ್ಲಿ ಪ್ರವೇಶಿಸಬಲ್ಲರು, ಮೋಡಗಳನ್ನು ಹಿಡಿದುಕೊಳ್ಳ-ಬಲ್ಲರು, ಕಪಿಗಳು.

ಗೃಹ್ಣೀಯುರಪಿ ಮಾತಂಗಾನ್ಮತ್ತಾನ್ ಪ್ರವ್ರಜತೋ ವನೇ ।
ನರ್ದಮಾನಾಶ್ಚ ನಾದೇನ ಪಾತಯೇಯುರ್ವಿಹಂಗಮಾನ್ ॥ ೨೭ ॥

ಕಾಡಿನಲ್ಲಿ ಓಡಾಡುವ ಮದಿಸಿದ ಆನೆಗಳನ್ನು ಹಿಡಿದಿಟ್ಟು ಕೊಳ್ಳಬಲ್ಲರು. ಗರ್ಜನೆ ಮಾಡಿ ಗರ್ಜನೆಯಿಂದಲೆ ಆಗಸದಲ್ಲಿ ಹಾರುವ ಹಕ್ಕಿಗಳನ್ನು ಕೆಳಗೆ ಬೀಳಿಸಬಲ್ಲರು.

ಈದೃಶಾನಾಂ ಪ್ರಸೂತಾನಿ ಹರೀಣಾಂ ಕಾಮರೂಪಿಣಾಮ್ ।
ಶತಂ ಶತಸಹಸ್ರಾಣಿ ಯೂಥಪಾನಾಂ ಮಹಾತ್ಮನಾಮ್ ॥ ೨೮ ॥

ಇಂಥ ಕಾಮರೂಪಿಗಳಾದ ಮಹಾತ್ಮರಾದ ಸೇನಾಪತಿಗಳಾದ ಕಪಿವೀರರನ್ನು ಶತಶತ ಸಹಸ್ರ ಲಕ್ಷ ಸಂಖ್ಯೆಯಲ್ಲಿ ಹುಟ್ಟಿಸಿದರು.

ತೇ ಪ್ರಧಾನೇಷು ಯೂಥೇಷು ಹರೀಣಾಂ ಹರಿಯೂಥಪಾಃ ।
ಬಭೂವುರ್ಯೂಥಪಶ್ರೇಷ್ಠಾ ವೀರಾಂಶ್ಚಾಜನಯನ್ ಹರೀನ್ ॥ ೨೯ ॥

ಸುಗ್ರೀವಾದಿ ಕಪಿ ಸೇನಾಪತಿಗಳು ಪ್ರಧಾನ ಕಪಿ ಸಮೂಹಗಳಲ್ಲಿ ಪ್ರಧಾನ ಸೇನಾಪತಿಗಳಾದರು. ವೀರರಾದ ಕಪಿಗಳಿಗೆ ಜನ್ಮವನ್ನಿತ್ತರು.

ಅನ್ಯೇ ಋಕ್ಷವತಃ ಪ್ರಸ್ಥಾನುಪತಸ್ಥುಃ ಸಹಸ್ರಶಃ ।
ಅನ್ಯೇ ನಾನಾವಿಧಾನ್ಶೈಲಾನ್ಭೇಜಿರೇ ಕಾನನಾನಿ ಚ ॥ ೩೦ ॥

ಬೇರೆ ಸಾವಿರಾರು ಕಪಿವೀರರು ಋಕ್ಷವತ್ ಎಂಬ ಪರ್ವತದ ಶಿಖರಗಳಲ್ಲಿ ವಾಸ ಮಾಡಿದರು. ಇನ್ನು ಕೆಲವರು ನಾನಾ ವಿಧವಾದ ಬೆಟ್ಟಗಳನ್ನೂ ಕಾಡುಗಳನ್ನೂ ಆಶ್ರಯಿಸಿದರು.

ಸೂರ್ಯಪುತ್ರಂ ಚ ಸುಗ್ರೀವಂ ಶಕ್ರಪುತ್ರಂ ಚ ವಾಲಿನಮ್ ।
ಭ್ರಾತರಾವುಪತಸ್ಥುಸ್ತೇ ಸರ್ವ ಏವ ಹರೀಶ್ವರಾಃ ॥
ನಲಂ ನೀಲಂ ಹನೂಮಂತಮನ್ಯಾಂಶ್ಚ ಹರಿಯೂಥಪಾನ್ ॥ ೩೧ ॥

ಸೂರ್ಯಪುತ್ರನಾದ ಸುಗ್ರೀವ ಮತ್ತು ಇಂದ್ರ ಪುತ್ರನಾದ ವಾಲಿ ಈ ಇಬ್ಬರು ಸೋದರರನ್ನು ನಲ ನೀಲ ಹನುಮಾನ್ ಮುಂತಾದ ಬೇರೆ ಕಪಿಸೇನಾ ಪ್ರಮುಖರನ್ನೂ ಎಲ್ಲ ಕಪಿಸೇನಾಪತಿಗಳೂ ಆಶ್ರಯಿಸಿದರು.

ತೇ ತಾರ್ಕ್ಷ್ಯಬಲಸಂಪನ್ನಾಃ ಸರ್ವೇ ಯುದ್ಧವಿಶಾರದಾಃ ।
ವಿಚರಂತೋऽರ್ದಯನ್ದರ್ಪಾತ್ ಸಿಂಹವ್ಯಾಘ್ರಮಹೋರಗಾನ್ ॥

ಅವರು ಎಲ್ಲರೂ ಗರುಡನಂತೆ ಬಲಶಾಲಿಗಳು, ಯುದ್ಧ ವಿಶಾರದರು. ಕಾಡಿನಲ್ಲಿ ಸಿಂಹ ಹುಲಿ ಮಹಾನಾಗಗಳೆಲ್ಲವನ್ನೂ ಮರ್ದಿಸುತ್ತ ಸಂಚರಿಸಿದರು.

ತಾಂಶ್ಚ ಸರ್ವಾನ್ಮಹಾಬಾಹುರ್ವಾಲೀ ವಿಪುಲವಿಕ್ರಮಃ ।
ಜುಗೋಪ ಭುಜವೀರ್ಯೇಣ ಋಕ್ಷಗೋಪುಚ್ಛವಾನರಾನ್ ॥ ೩೩ ॥

ಕರಡಿ, ಗೋಪುಚ್ಛ – ವಾನರಕಪಿಗಳು ಇವರೆಲ್ಲರನ್ನೂ ಬಹು ಪರಾಕ್ರಮಿಯಾದ ಮಹಾಬಾಹು ವಾಲಿ ಭುಜಬಲದಿಂದಲೆ ಆಳಿದ.

ತೈರಿಯಂ ಪೃಥಿವೀ ಶೂರೈಃ ಸಪರ್ವತವನಾರ್ಣವಾ ।
ಕೀರ್ಣಾ ವಿವಿಧಸಂಸ್ಥಾನೈರ್ನಾನಾವ್ಯಂಜನಲಕ್ಷಣೈಃ ॥ ೩೪ ॥

ನಾನಾ ಆಕಾರದ ಅವಯವಗಳಿಂದಲೂ ನಾನಾ ವಿಶೇಷ ಲಕ್ಷಣಗಳಿಂದಲೂ ಯುಕ್ತರಾದ ಶೂರರಾದ ಆ ಕಪಿವೀರರಿಂದ ಬೆಟ್ಟ ಕಾಡು ಸಮುದ್ರ ಯುಕ್ತವಾದ ಈ ಭೂಮಿ ವ್ಯಾಪ್ತವಾಯಿತು.

ತೈರ್ಮೇಘಬೃಂದಾಚಲಕೂಟಕಲ್ಪೈ-
ರ್ಮಹಾಬಲೈರ್ವಾನರಯೂಥಪಾಲೈಃ ।
ಬಭೂವ ಭೂರ್ಭೀಮಶರೀರರೂಪೈಃ
ಸಮಾವೃತಾ ರಾಮಸಹಾಯಹೇತೋಃ ॥ ೩೫ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಸಪ್ತದಶಃ ಸರ್ಗಃ ॥ ೧೭ ॥

ಮೇಘ ಸಮೂಹಗಳಂತೆ ಪರ್ವತ ಶಿಖರಗಳಂತೆ ಕಾಣುವ ಭಯಂಕರ ಶರೀರ-ಗಳ ಆಕಾರದಿಂದಿರುವ ಮಹಾಬಲಿಷ್ಠರಾದ ಆ ಕಪಿ ಸೇನಾ ಪ್ರಮುಖರು ಶ್ರೀರಾಮನಿಗೆ ಸಹಾಯ ಮಾಡುವ ಉದ್ದೇಶದಿಂದ ಇಡಿ ಭೂಮಿಯನ್ನೇ ಆವರಿಸಿದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಹದಿನೇಳನೆ ಸರ್ಗ ಮುಗಿಯಿತು.

ಅಷ್ಟಾದಶಃ ಸರ್ಗಃ

ನಿರ್ವೃತ್ತೇ ತು ಕ್ರತೌ ತಸ್ಮಿನ್ ಹಯಮೇಧೇ ಮಹಾತ್ಮನಃ ।
ಪ್ರತಿಗೃಹ್ಯ ಸುರಾ ಭಾಗಾನ್ ಪ್ರತಿಜಗ್ಮುರ್ಯಥಾಗತಮ್ ॥ ೧ ॥

ಮಹಾತ್ಮ ರಾಜಾ ದಶರಥನ ಅಶ್ವಮೇಧ ಪುತ್ರೇಷ್ಟಿಗಳು ನಡೆದಾಗ ದೇವತೆಗಳು ಬಂದು ಹವಿರ್ಭಾಗಗಳನ್ನು ಸ್ವೀಕರಿಸಿ ಬಂದಂತೆಯೆ ಹಿಂದಿರುಗಿದರು.

ಸಮಾಪ್ತದೀಕ್ಷಾನಿಯಮಃ ಪತ್ನೀಗಣಸಮನ್ವಿತಃ ।
ಪ್ರವಿವೇಶ ಪುರೀಂ ರಾಜಾ ಸಭೃತ್ಯಬಲವಾಹನಃ ॥ ೨ ॥

ಯಜ್ಞದೀಕ್ಷಾ ನಿಯಮವನ್ನು ರಾಜನು ಸಮಾಪ್ತಿಗೊಳಿಸಿ ಪತ್ನೀ ಸಮೂಹದೊಂದಿಗೆ, ಭೃತ್ಯ ಸೈನ್ಯವಾಹನಗಳಿಂದಲೂ ಸಮೇತನಾಗಿ ಅಯೋಧ್ಯಾನಗರವನ್ನು ಪ್ರವೇಶಿಸಿದ.

ಯಥಾರ್ಹಂ ಪೂಜಿತಾಸ್ತೇನ ರಾಜ್ಞಾ ವೈ ಪೃಥಿವೀಶ್ವರಾಃ ।
ಮುದಿತಾಃ ಪ್ರಯಯುರ್ದೇಶಾನ್ ಪ್ರಣಮ್ಯ ಮುನಿಪುಂಗವಮ್ ॥ ೩

ಬಂದ ರಾಜರೂ ರಾಜಾ ದಶರಥನಿಂದ ಸತ್ಕಾರಗಳನ್ನು ಪಡೆದು ಸಂತುಷ್ಟರಾಗಿ ಮುನಿಶ್ರೇಷ್ಠನಾದ ಋಷ್ಯಶೃಂಗನನ್ನು ನಮಿಸಿ ತಮ್ಮ ದೇಶಗಳಿಗೆ ಹಿಂತಿರುಗಿದರು.

ಶ್ರೀಮತಾಂ ಗಚ್ಛತಾಂ ತೇಷಾಂ ಸ್ವಪುರಾಣಿ ಪುರಾತ್ತತಃ ।
ಬಲಾನಿ ರಾಜ್ಞಾಂ ಶುಭ್ರಾಣಿ ಪ್ರಹೃಷ್ಟಾನಿ ಚಕಾಶಿರೇ ॥ ೪ ॥

ಅಯೋಧ್ಯೆಯಿಂದ ತಮ್ಮ ಊರುಗಳಿಗೆ ಹೋಗುವಾಗ ಈ ರಾಜರ ಸೈನ್ಯಗಳು ದಶರಥನು ನೀಡಿದ ವಸ್ತ್ರಾಭರಣಗಳಿಂದ ಬಹಳ ಶುಭ್ರವಾಗಿ ಹರ್ಷಭರಿತವಾಗಿ ಶೋಭಿಸಿದುವು.

ಗತೇಷು ಪೃಥಿವೀಶೇಷು ರಾಜಾ ದಶರಥಸ್ತದಾ ।
ಪ್ರವಿವೇಶ ಪುರೀಂ ಶ್ರೀಮಾನ್ ಪುರಸ್ಕೃತ್ಯ ದ್ವಿಜೋತ್ತಮಾನ್ ॥ ೫ ॥

ರಾಜರು ಹೊರಟು ಹೋದಾಗ ರಾಜಾ ಶ್ರೀಮಾನ್ ದಶರಥನು ಬ್ರಾಹ್ಮಣೋತ್ತಮರನ್ನು ಮುಂದೆ ಮಾಡಿಕೊಂಡು ಅಯೋಧ್ಯಾ ಪುರಪ್ರವೇಶ ಮಾಡಿದ.

ಶಾಂತಯಾ ಪ್ರಯಯೌ ಸಾರ್ಧಮೃಶ್ಯಶೃಂಗಃ ಸುಪೂಜಿತಃ ।
ಅನ್ವೀಯಮಾನೋ ರಾಜ್ಞಾಥ ಸಾನುಯಾತ್ರೇಣ ಧೀಮತಾ ॥ ೬ ॥

ಋಷ್ಯಶೃಂಗನನ್ನು ಚೆನ್ನಾಗಿ ಸತ್ಕರಿಸಿ ಧೀಮಂತನಾದ ರಾಜಾ ದಶರಥನು ಭೃತ್ಯರೊಂದಿಗೆ ಅವನನ್ನು ಸ್ವಲ್ಪ ದೂರ ಹಿಂಬಾಲಿಸಿ ಬೀಳ್ಕೊಟ್ಟಾಗ ಅವನು ಪತ್ನಿ ಶಾಂತಾದೇವಿಯೊಂದಿಗೆ ಪ್ರಯಾಣ ಬೆಳೆಸಿದ.

ಏವಂ ವಿಸೃಜ್ಯ ತಾನ್ಸರ್ವಾನ್ ರಾಜಾ ಸಂಪೂರ್ಣಮಾನಸಃ ।
ಉವಾಸ ಸುಖಿತಸ್ತತ್ರ ಪುತ್ರೋತ್ಪತ್ತಿಂ ವಿಚಿಂತಯನ್ ॥
ತತೋ ಯಜ್ಞೇ ಸಮಾಪ್ತೇ ತು ಋತೂನಾಂ ಷಟ್ ಸಮತ್ಯಯುಃ ॥ ೭

ಹೀಗೆ ಅವರೆಲ್ಲರನ್ನೂ ಹಿಂದೆ ಕಳಿಸಿ ರಾಜ ಪೂರ್ಣತೃಪ್ತನಾಗಿ ಸುಖವಾಗಿ ಪುತ್ರೋತ್ಪತ್ತಿಯನ್ನು ಇದಿರು ನೋಡುತ್ತ ವಾಸ ಮಾಡಿದ. ಬಳಿಕ ಯಜ್ಞಸಮಾಪ್ತಿ-ಯಾದ ಅನಂತರ ಆರು ಋತುಗಳು ಕಳೆದುವು.

ಶ್ರೀರಾಮಾವತಾರಘಟ್ಟಃ

ತತಶ್ಚ ದ್ವಾದಶೇ ಮಾಸೇ ಚೈತ್ರೇ ನಾವಮಿಕೇ ತಿಥೌ ।
ನಕ್ಷತ್ರೇಽದಿತಿದೈವತ್ಯೇ ಸ್ವೋಚ್ಚಸಂಸ್ಥೇಷು ಪಂಚಸು ॥ ೮ ॥

ಗ್ರಹೇಷು ಕರ್ಕಟೇ ಲಗ್ನೇ ವಾಕ್ಪತಾವಿಂದುನಾ ಸಹ ।
ಪ್ರೋದ್ಯಮಾನೇ ಜಗನ್ನಾಥಂ ಸರ್ವಲೋಕನಮಸ್ಕೃತಮ್ ॥ ೯ ॥

ಕೌಸಲ್ಯಾಽಜನಯದ್ರಾಮಂ ಸರ್ವಲಕ್ಷಣಸಂಯುತಮ್ ।
ವಿಷ್ಣೋರರ್ಧಂ ಮಹಾಭಾಗಂ ಪುತ್ರಮೈಕ್ಷ್ವಾಕವರ್ಧನಮ್ ॥
ಲೋಹಿತಾಕ್ಷಂ ಮಹಾಬಾಹುಂ ರಕ್ತೋಷ್ಠಂ ದುಂದುಭಿಸ್ವನಮ್ ॥

ಶ್ರೀರಾಮಾವತಾರ ಘಟ್ಟ- ಹನ್ನೆರಡನೇ ಮಾಸವಾದ ಚೈತ್ರದಲ್ಲಿ ನವಮೀ ತಿಥಿಯಲ್ಲಿ ಅದಿತಿ ದೇವತಾಕವಾದ ಪುನರ್ವಸು ನಕ್ಷತ್ರದಲ್ಲಿ ಸೂರ್ಯನು ಮೇಷರಾಶಿಯಲ್ಲಿ ಮತ್ತು ಅಂಗಾರಕ ಬುಧ ಗುರು ಶುಕ್ರ ಶನಿ ಈ ಐದು ಗ್ರಹಗಳು ತಮಗೆ ಉಚ್ಚಸ್ಥಾನವಾದ ಮಕರ ಕನ್ಯಾ ಕರ್ಕಾಟಕ ಮೀನ ತುಲಾ ರಾಶಿಯಲ್ಲಿದ್ದಾಗ ಕರ್ಕಾಟಕ ಲಗ್ನದಲ್ಲಿ ಗುರುಚಂದ್ರರ ಉದಯವಾದಾಗ ಕೆಂಗಣ್ಣ ಚೆಂದುಟಿಯವನು ಮಹಾಬಾಹು ದುಂದುಭಿ ಧ್ವನಿಯವನು, ಸರ್ವಲಕ್ಷಣ ಸಂಪನ್ನನು ಇಂಥ

ಇಕ್ಷ್ವಾಕು ವಂಶವರ್ಧನನಾದ, ಮಹಾಭಾಗ್ಯಶಾಲಿ ವಿಷ್ಣುವಿನ ಅರ್ಧಾಂಶನಾದ ರಾಮನನ್ನು ಕೌಸಲ್ಯೆ ಹಡೆದಳು.

ಇಲ್ಲಿಯೂ ಅರ್ಧ ಎಂದರೆ ಸರಿಯಾಗಿ ಅರ್ಧ ಎಂದರ್ಥವಲ್ಲ. ಅನಂತನಾದ ಪರಮಾತ್ಮನನ್ನು ಸರಿಯಾಗಿ ಅರ್ಧ ಕಾಲಂಶ ಎಂದು ವಿಭಾಗ ಮಾಡಲಾಗುವುದಿಲ್ಲ. ಅಲ್ಪಾಂಶ ಎಂದರ್ಥ. ಅಲ್ಪಾಂಶ ಎಂದ ಮಾತ್ರಕ್ಕೆ ಅವನ ಬಲ ಅಲ್ಪವೇನಲ್ಲ. ಅನಂತವೇ.

ಕೌಸಲ್ಯಾ ಶುಶುಭೇ ತೇನ ಪುತ್ರೇಣಾಮಿತತೇಜಸಾ ।
ಯಥಾ ವರೇಣ ದೇವಾನಾಮದಿತಿರ್ವಜ್ರಪಾಣಿನಾ ॥ ೧೧ ॥

ಅನಂತ ತೇಜನಾದ ಆ ರಾಮನಿಂದ ಕೌಸಲ್ಯೆ ಶೋಭಿಸಿದಳು, ದೇವೋತ್ತಮ ದೇವೇಂದ್ರನಿಂದ ತಾಯಿ ಅದಿತಿ ಹೇಗೆ ಶೋಭಿಸಿದಳೋ ಹಾಗೆ.

ಭರತೋ ನಾಮ ಕೈಕೇಯ್ಯಾಂ ಜಜ್ಞೇ ಸತ್ಯಪರಾಕ್ರಮಃ ।
ಸಾಕ್ಷಾದ್ವಿಷ್ಣೋಶ್ಚತುರ್ಭಾಗಃ ಸರ್ವೈಃ ಸಮುದಿತೋ ಗುಣೈಃ ॥ ೧೨ ॥

ಬಳಿಕ ಕೈಕೇಯಿಯಲ್ಲಿ ಸಾಕ್ಷಾತ್ ವಿಷ್ಣುವಿನ ನಾಲ್ಕನೆ ಒಂದು ಭಾಗವಾದ, ಸರ್ವಗುಣಪೂರ್ಣನಾದ ಸತ್ಯಪರಾಕ್ರಮನಾದ ಭರತನು ಜನಿಸಿದ.

ಇಲ್ಲಿ 'ನಾಲ್ಕನೆ ಒಂದು ಭಾಗ' ಎಂದರೆ, ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಎಂಬ ನಾಲ್ಕು ಅಂಶ ರೂಪಗಳು ಸ್ವತಃ ಸರ್ವಗುಣಪೂರ್ಣವೇ ಅನಂತವೇ ಆಗಿವೆ. ಈ ನಾಲ್ಕು ಅಂಶರೂಪಗಳಲ್ಲಿ ಒಂದು ರೂಪವು ಪ್ರದ್ಯುಮ್ನ. ಹೀಗೆ ನಾಲ್ಕು ಅಂಶರೂಪಗಳಲ್ಲಿ ಒಂದಾದ್ದರಿಂದ ನಾಲ್ಕನೇ ಒಂದು ಎಂದು ವ್ಯವಹಾರ, ಹೊರತು 'ಸರಿಯಾಗಿ ನಾಲ್ಕು ಭಾಗ ಮಾಡಿ ಅವುಗಳಲ್ಲಿ ಒಂದು ಭಾಗ ನಾಲ್ಕನೇ ಒಂದು' ಎಂದಲ್ಲ. 'ಸರ್ವಗುಣಪೂರ್ಣ, ಅನಂತ' ಎಂಬ ಮಾತಿನಲ್ಲಿ ಇದು ಸೂಚಿತವಾಗಿದೆ.

ಅಥ ಲಕ್ಷ್ಮಣಶತ್ರುಘ್ನೌ ಸುಮಿತ್ರಾऽಜನಯತ್ಸುತೌ ।
ಸರ್ವಾಸ್ತ್ರಕುಶಲೌ ವೀರೌ ವಿಷ್ಣೋರರ್ಧಸಮನ್ವಿತೌ ॥ ೧೩ ॥

ಬಳಿಕ ವಿಷ್ಣುವಿನ ಅರ್ಧ ಅಂಶಗಳಿಂದ ಕೂಡಿದ ಸರ್ವಾಸ್ತ್ರ ಕುಶಲರಾದ ವೀರ ಲಕ್ಷ್ಮಣ ಶತ್ರುಘ್ನರನ್ನು ಸುಮಿತ್ರೆ ಹಡೆದಳು.

ಇಲ್ಲಿಯೂ ಅರ್ಧ ಅಂಶಗಳೆಂದರೆ ಅಲ್ಪ ಭಾಗಗಳೇ. ಸಂಕರ್ಷಣ ಅನಿರುದ್ಧರೇ ಇಲ್ಲಿ ಎರಡು 'ಅರ್ಧಾಂಶ'ಗಳು. 'ವಿಷ್ಣೋರರ್ಧಂ' 'ಸಾಕ್ಷಾತ್ ವಿಷ್ಣೋಶ್ಚತುರ್ಭಾಗಃ' ಎಂದು ಹಿಂದೆ ಹೇಳಿದ್ದರೂ ಇಲ್ಲಿ 'ವಿಷ್ಣೋರರ್ಧ ಸಮನ್ವಿತೌ' ಎಂದು 'ಸಮನ್ವಿತ' ಪದದಿಂದ 'ಅರ್ಧಾಂಶ ಸ್ವರೂಪರಲ್ಲ, ಅರ್ಧಾಂಶಾವೇಶಯುಕ್ತರು' ಎಂದು ಹೇಳಿದಂತಾಗಿದೆ. ಅದರಿಂದ ಲಕ್ಷ್ಮಣ ಶತ್ರುಘ್ನರು ಶೇಷಾಂಶ ಶಂಖಾಂಶ ಸಂಭೂತರು ಸಂಕರ್ಷಣಾನಿರುದ್ಧರ ಆವೇಶಾವತಾರರು ಎನ್ನುವ ಅಭಿಪ್ರಾಯವಿದೆ. ಭರತನನ್ನು 'ವಿಷ್ಣೋಶ್ಚತುರ್ಭಾಗಃ' ಎನ್ನುವಾಗ 'ಚತುರ್ಭಾಗ' ಎಂದರೆ 'ಚತುರ್ಥ ಭಾಗಯುಕ್ತ' ಎಂದು ಬಹುವ್ರೀಹೀಸಮಾಸ ಇಟ್ಟುಕೊಂಡರೆ ಭರತನೂ ವಿಷ್ಣುವಿನಾವೇಶಾವತಾರ ಎಂದೇ ಹೇಳಿದಂತಾಗುತ್ತದೆ. ರಾಮನನ್ನು ಮಾತ್ರ 'ವಿಷ್ಣೋರರ್ಧಂ' ಎಂದು ಸ್ಪಷ್ಟ ಸ್ವರೂಪಾವತಾರ ಎಂದೇ ಹೇಳುತ್ತಿದ್ದಾರೆ ವಾಲ್ಮೀಕಿ ಮುನಿ.

'ಅಥ ಲಕ್ಷ್ಮಣ ಶತ್ರುಘ್ನೌ' ಎಂದು ಭರತನ ಅನಂತರ ಲಕ್ಷ್ಮಣ ಶತ್ರುಘ್ನರು ಯಮಳರಾಗಿ ಜನಿಸಿದರೆಂದು ವಾಲ್ಮೀಕಿಮುನಿ ಹೇಳುತ್ತಿದ್ದಾರೆ. ಮುಂದಿನ ಶ್ಲೋಕದಲ್ಲಿಯೂ ಒಂದೇ ನಕ್ಷತ್ರದಲ್ಲಿ ಇಬ್ಬರ ಜನನವನ್ನು ಹೇಳಿ ಅವರು ಯಮಳರೆಂಬುದನ್ನು ಸ್ಪಷ್ಟ ಪಡಿಸುತ್ತಿದ್ದಾರೆ.

ಹೀಗಾಗಿ ಭರತ ಲಕ್ಷ್ಮಣರಲ್ಲಿ ಭರತ ಹಿರಿಯ ಎನ್ನುವುದೇ ವಾಲ್ಮೀಕಿಗಳ ಅಭಿಪ್ರಾಯ. ಸಂಗ್ರಹರಾಮಾಯಣದಲ್ಲಿ ಮಾತ್ರ ಪಂಡಿತಾಚಾರ್ಯರು ರಾಮ-ಲಕ್ಷ್ಮಣಭರತ ಶತ್ರುಘ್ನ ಎಂದು ಮಕ್ಕಳ ಕ್ರಮವನ್ನು ಹೇಳಿದಂತೆ ಕಾಣುತ್ತದೆ–

(೧) ಸರ್ಪಭೇಽಜನಿ ಸೌಮಿತ್ರಿಃ ಕುಳೀರೇಽಭ್ಯುದಿತೇ ರವೌ ॥

(೨) ಚಕ್ರಾಯುಧಸ್ಯ ಯ ಚ್ಚಕ್ರಂ ದೈತ್ಯಚಕ್ರ ವಿದಾರಣಂ ।
ತತ್‌ಕಾಮರೂಪಂ ಕೈಕೇಯ್ಯಾಃ ಪುಷ್ಯೇ ಪುತ್ರತ್ವಮಾಯಯೌ ॥

(೩) ದೇವದ್ವಿಡ್ ಜನ ಜನ್ಯಘ್ನಃ ಪಾಂಚಜನ್ಯೋಽಪ್ಯಜಾಯತ ।
ಸುಮಿತ್ರಾಯಾಃ ಸುತತ್ವೇನ ಸ್ವಾಮಿನಃ ಸೇವನೇಚ್ಛಯಾ ॥
(ಬಾಲ, ೩-೩೨,೩೩,೩೪)

ಆದರೆ, ಇಲ್ಲಿ ಮೂರು ಶ್ಲೋಕಗಳ ಕ್ರಮದಲ್ಲಿ ಏನೋ ವ್ಯತ್ಯಾಸವಾಗಿದೆ. ಲಕ್ಷ್ಮಣನ ಜನನವನ್ನು ಹೇಳಿದ ಬಳಿಕ ಶತ್ರುಘ್ನನ ಜನನವನ್ನು ಹೇಳುವ ಶ್ಲೋಕವೇ ಬರಬೇಕಿತ್ತು . ಆಗ ಶತ್ರುಘ್ನನ ಜನ್ಮನಕ್ಷತ್ರವನ್ನು ಪಂಡಿತಾಚಾರ್ಯರು ಸ್ಪಷ್ಟ ಹೇಳದಿರುವುದು ಯುಕ್ತವಾಗುತ್ತಿತ್ತು . ಏಕೆಂದರೆ ಪೂರ್ವಶ್ಲೋಕದಿಂದ 'ಸರ್ಪಭೇ'

ಎಂದು ಸಹಜವಾಗಿ ಅನುವೃತ್ತಿಯಾಗುತ್ತದೆ ತಾನೆ? ಆದರೆ ಲೇಖಕರು ಲಕ್ಷ್ಮಣನ ಜನನವನ್ನು ಹೇಳಿದೊಡನೆ ಭರತನ ಜನ್ಮವನ್ನು ಹೇಳುವ ಶ್ಲೋಕವಿಟ್ಟಿದ್ದಾರೆ, ಭರತನು ಕಿರಿಯನಾಗಬೇಕೆಂದು ಅವರ ಅಭಿಪ್ರಾಯ. ಹೀಗೆ ಭರತನ ಜನ್ಮವನ್ನು ಹೇಳುವ ಶ್ಲೋಕ ನಡುವೇ ಬಂದುದರಿಂದ, ಶತ್ರುಘ್ನನ ಜನನವನ್ನು ಹೇಳುವ ಶ್ಲೋಕದಲ್ಲಿ 'ಸರ್ಪಭೇ' ಎನ್ನುವ ಶಬ್ದವು ಅನುವೃತ್ತವಾಗುತ್ತಿಲ್ಲ.

ಪುಷ್ಯೇ ಜಾತಸ್ತು ಭರತೋ ಮೀನಲಗ್ನೇ ಪ್ರಸನ್ನಧೀಃ ।
ಸಾರ್ಪೇ ಜಾತೌ ಚ ಸೌಮಿತ್ರೀ ಕುಲೀರೇಽಭ್ಯುದಿತೇ ರವೌ ॥ ೧೪ ॥

ಪುಷ್ಯ ನಕ್ಷತ್ರದಲ್ಲಿ ಮೀನಲಗ್ನದಲ್ಲಿ ಪ್ರಸನ್ನ ಬುದ್ಧಿಯವನಾದ ಭರತನು ಜನಿಸಿದನು. ಆಶ್ಲೇಷಾ ನಕ್ಷತ್ರ ಕರ್ಕಟಕ ಲಗ್ನದಲ್ಲಿ, ಸೂರ್ಯನು ಉದಿಸಿ ಮಧ್ಯಾಹ್ನ ಕಾಲಕ್ಕೆ ಬಂದಾಗ ಲಕ್ಷ್ಮಣ ಶತ್ರುಘ್ನರು ಜನಿಸಿದರು.

ರಾಜ್ಞಃ ಪುತ್ರಾ ಮಹಾತ್ಮಾನಶ್ಚತ್ವಾರೋ ಜಜ್ಞಿರೇ ಪೃಥಕ್ ।
ಗುಣವಂತೋಽನುರೂಪಾಶ್ಚ ರುಚ್ಯಾ ಪ್ರೋಷ್ಠಪದೋಪಮಾಃ॥ ೧೫ ॥

ರಾಜಪುತ್ರರು ನಾಲ್ವರು ಮೊದಲಿಗೆ ಪಾಯಸದಲ್ಲೇ ಒಂದು ವೈಷ್ಣವ ತೇಜಸ್ಸಾ-ಗಿದ್ದವರು ಲೀಲೆಯಿಂದ ನಾಲ್ಕಾಗಿ ವಿಭಾಗಗೊಂಡು ಬೇರೆ ಬೇರೆಯಾಗಿ ಜನಿಸಿದರು. ಗುಣವಂತರು ರಾಜನಿಗೆ ಅನುರೂಪರಾದ ಪುತ್ರರು, ಕಾಂತಿಯಿಂದ ಒಂದು ಎತ್ತಿನ ನಾಲ್ಕು ಪಾದಗಳಂತೆ ಶೋಭಿಸಿದರು.

ಜಗುಃ ಕಲಂ ಚ ಗಂಧರ್ವಾ ನನೃತುಶ್ಚಾಪ್ಸರೋಗಣಾಃ ।
ದೇವದಂದುಭಯೋ ನೇದುಃ ಪುಷ್ಪವೃಷ್ಟಿಶ್ಚ ಖಾಚ್ಚ್ಯುತಾ ॥
ಉತ್ಸವಶ್ಚ ಮಹಾನಾಸೀದಯೋಧ್ಯಾಯಾಂ ಜನಾಕುಲಃ ॥ ೧೬ ॥

ಗಂಧರ್ವರು ಆಗ ಮಧುರವಾಗಿ ಹಾಡಿದರು. ಅಪ್ಸರೆಯರು ನರ್ತನ ಮಾಡಿದರು. ದೇವದುಂದುಭಿಗಳು ಧ್ವನಿಗೈದುವು. ಆಕಾಶದಿಂದ ಹೂಮಳೆ ಸುರಿಯಿತು. ಅಯೋಧ್ಯೆಯಲ್ಲಿ ಜನರೆಲ್ಲ ನೆರೆದು ಉತ್ಸವ ಮಾಡಿಕೊಂಡರು.

ರಥ್ಯಾಶ್ಚ ಜನಸಂಬಾಧಾ ನಟನರ್ತಕಸಂಕುಲಾಃ ।
ಗಾಯನೈಶ್ಚ ವಿರಾವಿಣ್ಯೋ ವಾದನೈಶ್ಚ ತಥಾಽಪರೈಃ ॥
ವಿರೇಜುರ್ವಿಪುಲಾಸ್ತತ್ರ ಸರ್ವರತ್ನಸಮನ್ವಿತಾಃ ॥ ೧೭ ॥

ಬೀದಿಗಳೆಲ್ಲವೂ ನಟ ನರ್ತಕರಿಂದ ತುಂಬಿದವು. ಗಾಯಕರಿಂದಲೂ ವಾದಕ–ರಿಂದಲೂ ಗಜ ಬಜಿಸಿತು. ಸರ್ವ ರತ್ನಯುಕ್ತವಾಗಿ ವಿಪುಲವಾಗಿ ಶೋಭಿಸಿತು.

ಪ್ರದೇಯಾಂಶ್ಚ ದದೌ ರಾಜಾ ಸೂತಮಾಗಧವಂದಿನಾಮ್ ।
ಬ್ರಾಹ್ಮಣೇಭ್ಯೋ ದದೌ ವಿತ್ತಂ ಗೋಧನಾನಿ ಸಹಸ್ರಶಃ ॥
ಅತೀತ್ಯೈಕಾದಶಾಹಂ ತು ನಾಮಕರ್ಮ ತಥಾऽಕರೋತ್ ॥ ೧೪ ॥

ರಾಜನು ಸೂತಮಾಗಧ ವಂದಿಗಳಿಗೆ ಪಾರಿತೋಷಿಕಗಳನ್ನಿತ್ತನು. ಬ್ರಾಹ್ಮಣರಿಗೆ ಧನದಾನ ಸಹಸ್ರಗೋಧನ ದಾನಗಳನ್ನೂ ನೀಡಿದನು. ರಾಮಜನ್ಮದಿಂದ ಹದಿಮೂರನೆ ದಿನ ನಾಮಕರಣವನ್ನು ಮಾಡಿದನು.

ಜ್ಯೇಷ್ಠಂ ರಾಮಂ ಮಹಾತ್ಮಾನಂ ಭರತಂ ಕೈಕಯೀಸುತಮ್ ।
ಸೌಮಿತ್ರಿಂ ಲಕ್ಷ್ಮಣಮಿತಿ ಶತ್ರುಘ್ನಮಪರಂ ತಥಾ ॥
ವಸಿಷ್ಠಃ ಪರಮಪ್ರೀತೋ ನಾಮಾನಿ ಕೃತವಾಂಸ್ತದಾ ॥ ೧೫ ॥

ಮಹಾತ್ಮನಾದ ಸರ್ವಜ್ಯೇಷ್ಠ ಪುತ್ರನನ್ನು ರಾಮನೆಂದೂ ಬಳಿಕ ಜ್ಯೇಷ್ಠನಾದ ಕೈಕೇಯೀ ಸುತನನ್ನು ಭರತನೆಂದೂ, ಒಬ್ಬ ಸುಮಿತ್ರಾತನಯನನ್ನು ಲಕ್ಷ್ಮಣನೆಂದೂ ಇನ್ನೊಬ್ಬ ಸುಮಿತ್ರಾತನಯನನ್ನು ಶತ್ರುಘ್ನನೆಂದೂ ಪರಮ ಸಂತುಷ್ಟರಾದ ವಸಿಷ್ಠರು ರಾಜನಿಂದ ನಾಮಕರಣ ಮಾಡಿಸಿದರು.

ಬ್ರಾಹ್ಮಣಾನ್ಭೋಜಯಾಮಾಸ ಪೌರಾನ್ ಜಾನಪದಾನಪಿ ।
ಅದದದ್ಬ್ರಾಹ್ಮಣಾನಾಂ ಚ ರತ್ನೌಘಮಮಿತಂ ಬಹು ॥
ತೇಷಾಂ ಜನ್ಮಕ್ರಿಯಾದೀನಿ ಸರ್ವಕರ್ಮಾಣ್ಯಕಾರಯತ್ ॥ ೨೦ ॥

ರಾಜನು ಬ್ರಾಹ್ಮಣರಿಗೂ ಪೌರರಿಗೂ ಗ್ರಾಮೀಣ ಜನರಿಗೂ ಭೋಜನ ಮಾಡಿಸಿದನು. ಬ್ರಾಹ್ಮಣರಿಗೆ ಅಪರಿಮಿತ ರತ್ನ ಸಮೂಹಗಳನ್ನು ನೀಡಿದನು. ರಾಜಪುತ್ರರಿಗೆ ಜಾತಕರ್ಮದಿಂದ ತೊಡಗಿ ಉಪನಯನ ಪರ್ಯಂತ ಸರ್ವ–ಕರ್ಮಗಳನ್ನೂ ರಾಜನಿಂದ ವಸಿಷ್ಠರು ಮಾಡಿಸಿದರು.

ತೇಷಾಂ ಕೇತುರಿವ ಜ್ಯೇಷ್ಠೋ ರಾಮೋ ರತಿಕರಃ ಪಿತುಃ ।
ಬಭೂವ ಭೂಯೋ ಭೂತಾನಾಂ ಸ್ವಯಂಭೂರಿವ ಸಮ್ಮತಃ ॥ ೨೧ ॥

ಆ ನಾಲ್ಕೂ ರಾಜಕುಮಾರರಲ್ಲಿ ಜ್ಯೇಷ್ಠನಾದ ರಾಮನು ಧ್ವಜದಂತೆ ಇಕ್ಷ್ವಾಕು

ವಂಶದ ವಿಜಯವನ್ನು ಸಾರಿದ. ತಂದೆಗೆ ಹೆಚ್ಚು ಪ್ರಿಯನಾದ. ಪ್ರಜೆಗಳಿಗೆ ಬ್ರಹ್ಮನಂತೆ ನಿತ್ಯ ಪ್ರೀತ್ಯಾಸ್ಪದನಾದ.

ಸರ್ವೇ ವೇದವಿದಃ ಶೂರಾಃ ಸರ್ವೇ ಲೋಕಹಿತೇ ರತಾಃ ।
ಸರ್ವೇ ಜ್ಞಾನೋಪಸಂಪನ್ನಾಃ ಸರ್ವೇ ಸಮುದಿತಾ ಗುಣೈಃ ॥ ೨೨ ॥

ನಾಲ್ವರೂ ವೇದಜ್ಞರು, ಶೂರರು ನಾಲ್ವರೂ ಲೋಕಹಿತದಲ್ಲಿ ನಿರತರು. ನಾಲ್ವರೂ ಜ್ಞಾನ ಸಂಪನ್ನರು ನಾಲ್ವರೂ ಗುಣಪೂರ್ಣರು.

ತೇಷಾಮಪಿ ಮಹಾತೇಜಾ ರಾಮಃ ಸತ್ಯಪರಾಕ್ರಮಃ ।
ಇಷ್ಟಃ ಸರ್ವಸ್ಯ ಲೋಕಸ್ಯ ಶಶಾಂಕ ಇವ ನಿರ್ಮಲಃ ॥ ೨೩ ॥

ಅವರಲ್ಲಿಯೂ ಮಹಾತೇಜಸ್ವಿಯಾದ ರಾಮ ಸತ್ಯಪರಾಕ್ರಮ ನಿರ್ಮಲಚಂದ್ರ-ನಂತೆ ಸರ್ವಲೋಕಕ್ಕೂ ಇಷ್ಟನಾದನು.

ಗಜಸ್ಕಂಧೇऽಶ್ವಪೃಷ್ಠೇ ಚ ರಥಚರ್ಯಾಸು ಸಮ್ಮತಃ ।
ಧನುರ್ವೇದೇ ಚ ನಿರತಃ ಪಿತೃಶುಶ್ರೂಷಣೇ ರತಃ ॥ ೨೪ ॥

ಆನೆಯ ಹೆಗಲೇರುವುದರಲ್ಲಿ ಕುದುರೆಯ ಬೆನ್ನೇರುವುದರಲ್ಲಿ ರಥ ಸವಾರಿಯಲ್ಲಿ ಸಮರ್ಥನೆಂದು ರಾಮನು ಪ್ರಸಿದ್ಧನಾದ. ಧನುರ್ವೇದದಲ್ಲಿ ನಿರತನಾಗಿದ್ದ ತಂದೆ ತಾಯಿಗಳ ಸೇವೆಯಲ್ಲಿ ಆಸಕ್ತನಾಗಿದ್ದ.

ಬಾಲ್ಯಾತ್ಪ್ರಭೃತಿ ಸುಸ್ನಿಗ್ಧೋ ಲಕ್ಷ್ಮಣೋ ಲಕ್ಷ್ಮಿವರ್ಧನಃ ।
ರಾಮಸ್ಯ ಲೋಕರಾಮಸ್ಯ ಭ್ರಾತುರ್ಜ್ಯೇಷ್ಠಸ್ಯ ನಿತ್ಯಶಃ ॥ ೨೫ ॥

ಶ್ರೀರಾಮನಿಗೆ ಬಾಲ್ಯದಿಂದಲೂ ಬಹಳ ಸ್ನೇಹದಿಂದ ಇದ್ದವನು ಲಕ್ಷ್ಮಣ. ಲೋಕಕ್ಕೆ ಸಂಪತ್ತನ್ನು ವೃದ್ಧಿ ಮಾಡುವವನು. ಸದಾ ಲೋಕಕ್ಕೆ ಆನಂದಕರನಾದ ಅಣ್ಣ ರಾಮನಿಗೆ ಸದಾ ಸಂಪತ್ಕರ.

ಸರ್ವಪ್ರಿಯಕರಸ್ತಸ್ಯ ರಾಮಸ್ಯಾಪಿ ಶರೀರತಃ ।
ಲಕ್ಷ್ಮಣೋ ಲಕ್ಷ್ಮಿಸಂಪನ್ನೋ ಬಹಿಃಪ್ರಾಣ ಇವಾಪರಃ ॥ ೨೬ ॥

ಸಂಪತ್ತಿನಿಂದ ಪರಿಪೂರ್ಣನಾಗಿದ್ದು ಸರ್ವರಿಗೂ ಪ್ರಿಯಕರನಾದ ರಾಮನಿಗೂ ಶರೀರದಿಂದ ಸರ್ವಪ್ರಿಯಕರನಾದವನು ಲಕ್ಷ್ಮಣ. ಅವನಿಗೆ ಹೊರಗಿರುವ ಇನ್ನೊಂದು ಪ್ರಾಣವೇ ಆಗಿದ್ದನೀತ.

ನ ಚ ತೇನ ವಿನಾ ನಿದ್ರಾಂ ಲಭತೇ ಪುರುಷೋತ್ತಮಃ ।
ಮೃಷ್ಟಮನ್ನಮುಪಾನೀತಮಶ್ನಾತಿ ನ ಹಿ ತಂ ವಿನಾ ॥ ೨೭ ॥

ಪುರುಷೋತ್ತಮ ರಾಮನೂ ಲಕ್ಷ್ಮಣನನ್ನು ಬಿಟ್ಟು ತಾನೊಬ್ಬನೇ ನಿದ್ದೆಯನ್ನೂ ಮಾಡುತ್ತಿರಲಿಲ್ಲ. ತಂದೆತಾಯಿಗಳು ಮೃಷ್ಟಾನ್ನ ತಂದಿತ್ತರೆ ಅದನ್ನೂ ಕೂಡ ಲಕ್ಷ್ಮಣನನ್ನು ಬಿಟ್ಟು ತಾನೊಬ್ಬನೆ ಉಣ್ಣುತ್ತಿರಲಿಲ್ಲ.

ಯದಾ ಹಿ ಹಯಮಾರೂಢೋ ಮೃಗಯಾಂ ಯಾತಿ ರಾಘವಃ ।
ತದೈನಂ ಪೃಷ್ಠತೋಭ್ಯೇತಿ ಸಧನುಃ ಪರಿಪಾಲಯನ್ ॥ ೨೮ ॥

ರಾಮ ಕುದುರೆ ಏರಿ ಬೇಟೆಗೆ ಹೋದರೆ, ಅವನ ರಕ್ಷಣೆಗೆ ಧನುರ್ಧಾರಿಯಾಗಿ ತಾನೂ ಹಿಂಬಾಲಿಸುತ್ತಿದ್ದ, ಲಕ್ಷ್ಮಣ.

ಭರತಸ್ಯಾಪಿ ಶತ್ರುಘ್ನೋ ಲಕ್ಷ್ಮಣಾವರಜೋ ಹಿ ಸಃ ।
ಪ್ರಾಣೈಃ ಪ್ರಿಯತರೋ ನಿತ್ಯಂ ತಸ್ಯ ಚಾಸೀತ್ತಥಾ ಪ್ರಿಯಃ ॥ ೨೯ ॥

ಇಂಥ ಲಕ್ಷ್ಮಣನ ತಮ್ಮನಾದ್ದರಿಂದ ಶತ್ರುಘ್ನನೂ ಭರತನಿಗೆ ಹಾಗೇ ಪ್ರಿಯನಾಗಿದ್ದ. ಅವನಿಗೆ ಪ್ರಾಣಕ್ಕಿಂತ ಹೆಚ್ಚು ಪ್ರಿಯಕರ ಆತ.

ಸ ಚತುರ್ಭಿರ್ಮಹಾಭಾಗೈಃ ಪುತ್ರೈರ್ದಶರಥಃ ಪ್ರಿಯೈಃ ।
ಬಭೂವ ಪರಮಪ್ರೀತೋ ದೇವೈರಿವ ಪಿತಾಮಹಃ ॥ ೩೦ ॥

ಮಹಾಭಾಗ್ಯಶಾಲಿಗಳಾದ ನಾಲ್ಕುಮಂದಿ ಪ್ರಿಯ ಪುತ್ರರಿಂದ, ದೇವತೆಗಳಿಂದ ಪಿತಾಮಹ ಬ್ರಹ್ಮನು ಹೇಗೋ ಹಾಗೆ ಪರಮಾನಂದ ಭರಿತನಾದ ದಶರಥ.

ತೇ ಯದಾ ಜ್ಞಾನಸಂಪನ್ನಾಃ ಸರ್ವೇ ಸಮುದಿತಾ ಗುಣೈಃ ।
ಹ್ರೀಮಂತಃ ಕೀರ್ತಿಮಂತಶ್ಚ ಸರ್ವಜ್ಞಾ ದೀರ್ಘದರ್ಶಿನಃ ॥ ೩೧ ॥

ತೇಷಾಮೇವಂಪ್ರಭಾವಾನಾಂ ಸರ್ವೇಷಾಂ ದೀಪ್ತತೇಜಸಾಮ್ ।
ಪಿತಾ ದಶರಥೋ ಹೃಷ್ಟೋ ಬ್ರಹ್ಮಾ ಲೋಕಾಧಿಪೋ ಯಥಾ ॥ ೩೨ ॥

ಅವರು ನಾಲ್ವರೂ ದುಷ್ಕೃತ್ಯಕ್ಕೆ ನಾಚುವವರೂ ಸತ್ಕರ್ಮದಿಂದ ಕೀರ್ತಿಶಾಲಿ-ಗಳೂ ಸರ್ವಜ್ಞರೂ ದೀರ್ಘದರ್ಶಿಗಳೂ ಆಗಿ ಎಲ್ಲ ಸದ್ಗುಣಗಳಿಂದ ಪೂರ್ಣರಾಗಿ ಜ್ಞಾನಸಂಪನ್ನರಾದಾಗ, ಇಂಥ ಪ್ರಭಾವಶಾಲಿಗಳಾದ ತೇಜಸ್ಸಿನಿಂದ ಬೆಳಗುವ ಆ ಮಕ್ಕಳಿಂದ ಲೋಕಾಧಿಪನಾದ ಬ್ರಹ್ಮನಂತೇ ದಶರಥನು ಹರ್ಷಭರಿತನಾದ.

ತೇ ಚಾಪಿ ಮನುಜವ್ಯಾಘ್ರಾ ವೈದಿಕಾಧ್ಯಯನೇ ರತಾಃ ।
ಪಿತೃಶುಶ್ರೂಷಣರತಾ ಧನುರ್ವೇದೇ ಚ ನಿಷ್ಠಿತಾಃ ॥ ೩೩ ॥

ಮನುಷ್ಯೋತ್ತಮರಾದ ಆ ಮಕ್ಕಳೂ ಕೂಡ ವೈದಿಕ ವಿದ್ಯೆಯನ್ನು ಅಧ್ಯಯನ ಮಾಡುತ್ತ ಧನುರ್ವೇದದಲ್ಲಿಯೂ ಪರಿಣತರಾಗಿ ತಂದೆತಾಯಿಗಳ ಸೇವೆಯಲ್ಲಿ ನಿರತರಾದರು.

ಅಥ ರಾಜಾ ದಶರಥಸ್ತೇಷಾಂ ದಾರಕ್ರಿಯಾಂ ಪ್ರತಿ ।
ಚಿಂತಯಾಮಾಸ ಧರ್ಮಾತ್ಮಾ ಸೋಪಾಧ್ಯಾಯಃ ಸಬಾಂಧವಃ॥ ೩೪ ॥

ಧರ್ಮಾತ್ಮನಾದ ರಾಜಾ ದಶರಥನು ಆ ಮಕ್ಕಳಿಗೆ ವಿವಾಹ ಮಾಡುವ ಬಗ್ಗೆ ಉಪಾಧ್ಯಾಯರಿಂದಲೂ ಬಂಧುಗಳಿಂದಲೂ ಕೂಡಿ ವಿಚಾರ ಮಾಡತೊಡಗಿದ.

ತಸ್ಯ ಚಿಂತಯಮಾನಸ್ಯ ಮಂತ್ರಿಮಧ್ಯೇ ಮಹಾತ್ಮನಃ ।
ಅಭ್ಯಾಗಚ್ಛನ್ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ ॥ ೩೫ ॥

ಮಂತ್ರಿಗಳ ನಡುವೆ ಮಹಾತ್ಮ ದಶರಥನು ವಿಚಾರ ಮಾಡುತ್ತಿದ್ದಾಗ ಮಹಾ-ತೇಜಸ್ವಿಯಾದ ಮಹಾಮುನಿ ವಿಶ್ವಾಮಿತ್ರನು ಆಗಮಿಸಿದ.

ಸ ರಾಜ್ಞೋ ದರ್ಶನಾಕಾಂಕ್ಷೀ ದ್ವಾರಾಧ್ಯಕ್ಷಾನುವಾಚ ಹ ।
ಶೀಘ್ರಮಾಖ್ಯಾತ ಮಾಂ ಪ್ರಾಪ್ತಂ ಕೌಶಿಕಂ ಗಾಧಿನಃ ಸುತಮ್॥ ೩೬ ॥

'ಗಾಧಿರಾಜನ ಪುತ್ರನಾದ ವಿಶ್ವಾಮಿತ್ರನು ನಾನು ಬಂದಿದ್ದೇನೆ, ರಾಜನಿಗೆ ಬೇಗನೆ ಹೇಳಿರಿ' ಎಂದು ರಾಜದರ್ಶನಾಕಾಂಕ್ಷಿಯಾದ ವಿಶ್ವಾಮಿತ್ರನು ದ್ವಾರಪಾಲಕರಿಗೆ ಹೇಳಿದ.

ತಚ್ಛ್ರುತ್ವಾ ವಚನಂ ತ್ರಾಸಾದ್ರಾಜ್ಞೋ ವೇಶ್ಮ ಪ್ರದುದ್ರುವುಃ ।
ಸಂಭ್ರಾಂತಮನಸಃ ಸರ್ವೇ ತೇನ ವಾಕ್ಯೇನ ಚೋದಿತಾಃ ॥ ೩೭ ॥

ವಿಶ್ವಾಮಿತ್ರನ ಮಾತನ್ನು ಕೇಳಿ ಭಯದಿಂದ ದ್ವಾರಪಾಲಕರು ರಾಜಭವನಕ್ಕೆ ಧಾವಿಸಿದರು. ಆ ಮುನಿಯ ಮಾತಿನಿಂದ ಪ್ರೇರಿತರಾಗಿ ಎಲ್ಲರೂ ಮನಸಿನಲ್ಲಿ ದಿಗ್ಭ್ರಮೆ ಗೊಂಡರು.

ತೇ ಗತ್ವಾ ರಾಜಭವನಂ ವಿಶ್ವಾಮಿತ್ರಮೃಷಿಂ ತದಾ ।
ಪ್ರಾಪ್ತಮಾವೇದಯಾಮಾಸುರ್ನೃಪಾಯೈಕ್ಷ್ವಾಕವೇ ತದಾ ॥ ೩೮ ॥

ಅವರು ರಾಜಭವನಕ್ಕೆ ಹೋಗಿ ಇಕ್ಷ್ವಾಕು ವಂಶಜ ರಾಜನಾದ ದಶರಥನಿಗೆ 'ವಿಶ್ವಾಮಿತ್ರ ಮಹರ್ಷಿ ಬಂದಿದ್ದಾರೆ' ಎಂದು ನಿವೇದನ ಮಾಡಿದರು.

ತೇಷಾಂ ತದ್ವಚನಂ ಶ್ರುತ್ವಾ ಸಪುರೋಧಾಃ ಸುಮಾಹಿತಃ ।
ಪ್ರತ್ಯುಜ್ಜಗಾಮ ತಂ ಹೃಷ್ಟೋ ಬ್ರಹ್ಮಾಣಮಿವ ವಾಸವಃ ॥ ೩೯ ॥

ಅವರ ಆ ಮಾತನ್ನು ಕೇಳಿದೊಡನೆ ಸ್ಥಿರಚಿತ್ತನಾಗಿ ಹರ್ಷಭರಿತನಾಗಿ ಪುರೋಹಿತ ವಸಿಷ್ಠರೊಂದಿಗೆ ಬಂದು ಬ್ರಹ್ಮನನ್ನು ದೇವೇಂದ್ರನು ಹೇಗೋ ಹಾಗೆ ಮುನಿಯನ್ನು ದಶರಥನು ಇದಿರುಗೊಂಡನು.

ತಂ ದೃಷ್ಟ್ವಾ ಜ್ವಲಿತಂ ದೀಪ್ತ್ಯಾ ತಾಪಸಂ ಸಂಶಿತವ್ರತಮ್ ।
ಪ್ರಹೃಷ್ಟವದನೋ ರಾಜಾ ತತೋಽರ್ಘ್ಯಮುಪಹಾರಯತ್ ॥ ೪೦ ॥

ದೀಪ್ತಿಯಿಂದ ಬೆಳಗುವ, ತೀಕ್ಷ್ಣವ್ರತನಿಷ್ಠನಾದ ಆ ತಾಪಸನನ್ನು ಕಂಡು ಅರಳಿದ ಮುಖದಿಂದ ರಾಜಾ ದಶರಥನು ಅರ್ಘ್ಯವನ್ನಿತ್ತನು.

ಸ ರಾಜ್ಞಃ ಪ್ರತಿಗೃಹ್ಯಾರ್ಘ್ಯಂ ಶಾಸ್ತ್ರದೃಷ್ಟೇನ ಕರ್ಮಣಾ ।
ಕುಶಲಂ ಚಾವ್ಯಯಂ ಚೈವ ಪರ್ಯಪೃಚ್ಛನ್ನರಾಧಿಪಮ್ ॥ ೪೧ ॥

ರಾಜನು ಶಾಸ್ತ್ರೋಕ್ತವಿಧಾನದಿಂದ ಅರ್ಪಿಸಿದ ಅರ್ಘ್ಯವನ್ನು ಮುನಿಯು ಸ್ವೀಕರಿಸಿ, ರಾಜನ ಸಂಪತ್ಪ್ರಾಪ್ತಿ ಅಭಿವೃದ್ಧಿಗಳ ಬಗ್ಗೆ ವಿಚಾರಿಸಿದನು.

ಪುರೇ ಕೋಶೇ ಜನಪದೇ ಬಾಂಧವೇಷು ಸಹೃತ್ಸು ಚ ।
ಕುಶಲಂ ಕೌಶಿಕೋ ರಾಜ್ಞಃ ಪರ್ಯಪೃಚ್ಛತ್ಸುಧಾರ್ಮಿಕಃ ॥ ೪೨ ॥

ಬಲು ಧಾರ್ಮಿಕನಾದ ವಿಶ್ವಾಮಿತ್ರನು ರಾಜಾ ದಶರಥನ ಪುರ ಕೋಶ ರಾಜ್ಯ ಬಂಧುಮಿತ್ರರೆಲ್ಲರ ಕುಶಲವನ್ನು ವಿಚಾರಿಸಿದನು.

ಅಪಿ ತೇ ಸನ್ನತಾಃ ಸರ್ವೇ ಸಾಮಂತಾ ರಿಪವೋ ಜಿತಾಃ ।
ದೈವಂ ಚ ಮಾನುಷಂ ಚಾಪಿ ಕರ್ಮ ತೇ ಸಾಧ್ವನುಷ್ಠಿತಮ್ ॥ ೪೩ ॥

'ರಾಜನೆ! ನಿನಗೆ ಸಾಮಂತರೆಲ್ಲರೂ ವಿಧೇಯರಾಗಿರುವರೆ? ಶತ್ರುಗಳು ಜಿತರಾಗಿರುವರೆ? ಯಜ್ಞಾದಿ ದೇವಕಾರ್ಯ ಅತಿಥಿ ಸತ್ಕಾರಾದಿ ಮಾನುಷ ಕಾರ್ಯಗಳು ಚೆನ್ನಾಗಿ ನಡೆದಿವೆಯೇ?' ಎಂದು ವಿಶ್ವಾಮಿತ್ರನು ವಿಚಾರಿಸಿದನು.

ವಸಿಷ್ಠಂ ಚ ಸಮಾಗಮ್ಯ ಕುಶಲಂ ಮುನಿಪುಂಗವಃ ।
ಋಷೀಂಶ್ಚಾನ್ಯಾನ್ಯಥಾನ್ಯಾಯಂ ಮಹಾಭಾಗಾನುವಾಚ ಹ ॥ ೪೪ ॥

ವಸಿಷ್ಠನನ್ನೂ ಬೇರೆ ಮುನಿಗಳನ್ನೂ ಮುನಿಶ್ರೇಷ್ಠನಾದ ವಿಶ್ವಾಮಿತ್ರನು ಭೆಟ್ಟಿ ಮಾಡಿ ಮಹಾಭಾಗ್ಯಶಾಲಿಗಳಾದ ಅವರನ್ನು ಯಥಾಯೋಗ್ಯವಾಗಿ ಆದರಿಸಿ ಕುಶಲವನ್ನು ನುಡಿದನು.

ತೇ ಸರ್ವೇ ಹೃಷ್ಟಮನಸಸ್ತಸ್ಯ ರಾಜ್ಞೋ ನಿವೇಶನಮ್ ।
ವಿವಿಶುಃ ಪೂಜಿತಾಸ್ತತ್ರ ನಿಷೇದುಶ್ಚ ಯಥಾರ್ಹತಃ ॥ ೪೫ ॥

ಅವರೆಲ್ಲರೂ ಹೃಷ್ಟ ಮನಸ್ಕರಾಗಿ ಅರಮನೆಯನ್ನು ಪ್ರವೇಶಿಸಿದರು. ಯಥಾಯೋಗ್ಯವಾಗಿ ಸತ್ಕಾರಪಡೆದು ಕುಳಿತರು.

ಅಥ ಹೃಷ್ಟಮನಾ ರಾಜಾ ವಿಶ್ವಾಮಿತ್ರಂ ಮಹಾಮುನಿಮ್ ।
ಉವಾಚ ಪರಮೋದಾರೋ ಹೃಷ್ಟಸ್ತಮಭಿಪೂಜಯನ್ ॥ ೪೬ ॥

ಹೃಷ್ಟವಾದ ಮನಸಿನಿಂದ ಮಹಾ ಉದಾರಿಯಾದ ರಾಜನು ಮಹಾಮುನಿ ವಿಶ್ವಾಮಿತ್ರನನ್ನು ಸತ್ಕರಿಸಿ ಹೃಷ್ಟನಾಗಿ ನುಡಿದ.

ಯಥಾऽಮೃತಸ್ಯ ಸಂಪ್ರಾಪ್ತಿರ್ಯಥಾ ವರ್ಷಮನೂದಕೇ ।
ಯಥಾ ಸದೃಶದಾರೇಷು ಪುತ್ರಜನ್ಮಾಪ್ರಜಸ್ಯ ಚ ॥ ೪೭ ॥

ಪ್ರನಷ್ಟಸ್ಯ ಯಥಾ ಲಾಭೋ ಯಥಾ ಹರ್ಷೋ ಮಹೋದಯೇ ।
ತಥೈವಾಗಮನಂ ಮನ್ಯೇ ಸ್ವಾಗತಂ ತೇ ಮಹಾಮುನೇ ॥ ೪೮ ॥

'ಮಹಾಮುನಿಯೇ! ನಿನಗೆ ಸ್ವಾಗತ. ನಿಮ್ಮ ಆಗಮನದಿಂದ ಅಮೃತಪ್ರಾಪ್ತಿ-ಯಾದಂತೆ, ಬಂಜರು ನೆಲಕ್ಕೆ ಮಳೆ ಸುರಿದಂತೆ ಮಕ್ಕಳಿಲ್ಲದವನಿಗೆ ಯೋಗ್ಯಪತ್ನಿ-ಯಲ್ಲಿ ಪುತ್ರಪ್ರಾಪ್ತಿಯಾದಂತೆ, ಸಂಪತ್ತೆಲ್ಲ ನಾಶವಾದಾಗ ನಿಧಿ ಸಿಕ್ಕಿದಂತೆ ಪುತ್ರೋತ್ಸವಾದಿಗಳಿಂದ ಹರ್ಷ ಉಕ್ಕಿದಂತೆ ಎಂದು ತಿಳಿಯುತ್ತೇನೆ.'

ಕಂ ಚ ತೇ ಪರಮಂ ಕಾಮಂ ಕರೋಮಿ ಕಿಮು ಹರ್ಷಿತಃ ।
ಪಾತ್ರಭೂತೋऽಸಿ ಮೇ ಬ್ರಹ್ಮನ್ ದಿಷ್ಟ್ಯಾ ಪ್ರಾಪ್ತೋऽಸಿ ಧಾರ್ಮಿಕ ।
ಅದ್ಯ ಮೇ ಸಫಲಂ ಜನ್ಮ ಜೀವಿತಂ ಚ ಸುಜೀವಿತಮ್ ॥ ೪೯ ॥

'ಹರ್ಷ ತುಂಬಿದವನಾಗಿ ನಾನು ನಿನ್ನ ಯಾವ ಪರಮ ಅಭಿಲಾಷೆಯನ್ನು ಹೇಗೆ ಪೂರೈಸಿಕೊಡಲಿ? ನೀನು ನನಗೆ ಸತ್ಪಾತ್ರನಾಗಿರುವೆ, ಧಾರ್ಮಿಕನಾದ ಓ ಮುನಿಯೇ! ನನ್ನ ಅದೃಷ್ಟದಿಂದ ನೀನು ನನ್ನ ಬಳಿ ಬಂದಿರುವೆ. ಇಂದು ನನ್ನ ಜನ್ಮ ಸಫಲವಾಯಿತು. ನನ್ನ ಬದುಕು ಸಾರ್ಥಕವಾಯಿತು.

ಪೂರ್ವಂ ರಾಜರ್ಷಿಶಬ್ದೇನ ತಪಸಾ ದ್ಯೋತಿತಪ್ರಭಃ ।
ಬ್ರಹ್ಮರ್ಷಿತ್ವಮನುಪ್ರಾಪ್ತಃ ಪೂಜ್ಯೋಽಸಿ ಬಹುಧಾ ಮಯಾ ॥ ೫೦ ॥

'ಹಿಂದೆ ನೀನು ರಾಜರ್ಷಿ ಎನಿಸಿದ್ದೆ. ಬಳಿಕ ತಪಸಿನಿಂದ ಹೊಳೆಯುವ ಪ್ರಭೆ-ಯುಳ್ಳವನಾಗಿ ಬ್ರಹ್ಮರ್ಷಿತ್ವವನ್ನು ಸಂಪಾದಿಸಿದೆ. ನಾನು ನಿನಗೆ ಬಹುರೀತಿಯಿಂದ ಪೂಜಿಸಬೇಕು.

ತದದ್ಭುತಮಿದಂ ಬ್ರಹ್ಮನ್ಪವಿತ್ರಂ ಪರಮಂ ಮಮ ।
ಶುಭಕ್ಷೇತ್ರಗತಶ್ಚಾಹಂ ತವ ಸಂದರ್ಶನಾತ್ಪ್ರಭೋ ॥ ೫೧ ॥

'ಪ್ರಭು! ಈ ನಿನ್ನಾಗಮನವು ಪರಮಾಶ್ಚರ್ಯಕರ. ನನಗಿದು ಪರಮ ಪಾವನವಾಗಿದೆ. ನಿನ್ನ ಸಂದರ್ಶನದಿಂದ ನಾನು ಶುಭ ಪುಣ್ಯಕ್ಷೇತ್ರ ದರ್ಶನ ಮಾಡಿದಂತಾಯಿತು.

ಬ್ರೂಹಿ ಯತ್ಪ್ರಾರ್ಥಿತಂ ತುಭ್ಯಂ ಕಾರ್ಯಮಾಗಮನಂ ಪ್ರತಿ ।
ಇಚ್ಛಾಮ್ಯನುಗೃಹೀತೋಽಹಂ ತ್ವದರ್ಥಪರಿವೃದ್ಧಯೇ ॥ ೫೨ ॥

'ಹೇಳು, ನಿನ್ನ ಅಭೀಷ್ಟವೇನು, ನಿನ್ನಾಗಮನದ ಉದ್ದೇಶವಾಗಿರುವ ಕಾರ್ಯ-ವೇನು? ನಿನ್ನ ಅನುಗ್ರಹದಿಂದ ನಾನು ನಿನ್ನ ಅಭೀಷ್ಟವನ್ನು ಚೆನ್ನಾಗಿ ಪೂರೈಸಲು ಬಯಸುವೆನು.

ಕಾರ್ಯಸ್ಯ ನ ವಿಮರ್ಶಂ ಚ ಗಂತುಮರ್ಹಸಿ ಕೌಶಿಕ ।
ಕರ್ತಾ ಚಾಹಮಶೇಷೇಣ ದೈವತಂ ಹಿ ಭವಾನ್ಮಮ ॥ ೫೩ ॥

'ಮುನಿಯೆ, ನಿನ್ನ ಕಾರ್ಯ ಫಲಿಸುವುದೆ? ಎಂದು ಚಿಂತಿಸಬೇಡ. ನಾನು ಪೂರ್ತಿಯಾಗಿ ಅದನ್ನು ಮಾಡಿಕೊಡುವೆನು, ನೀನು ನನ್ನ ಆರಾಧ್ಯ ದೈವ.

ಮಮ ಚಾಯಮನುಪ್ರಾಪ್ತೋ ಮಹಾನಭ್ಯುದಯೋ ದ್ವಿಜ ।
ತವಾಗಮನಜಃ ಕೃತ್ಸ್ನೋ ಧರ್ಮಶ್ಚಾನುತ್ತಮೋ ಮಮ ॥ ೫೪ ॥

ಮುನಿಯೇ, ಮಹಾ ಅಭ್ಯುದಯ ಕಾಲ ನನಗೆ ಇದೀಗ ಬಂದೊದಗಿದೆ. ನಿನ್ನ ಆಗಮನದಿಂದ ನನಗೆ ಲಭಿಸುವ ಪುಣ್ಯಕ್ಕೆ ಸಾಟಿಯೆ ಇಲ್ಲ!

ಇತಿ ಹೃದಯಸುಖಂ ನಿಶಮ್ಯ ವಾಕ್ಯಂ
ಶ್ರುತಿಸುಖಮಾತ್ಮವತಾ ವಿನೀತಮುಕ್ತಮ್ ।
ಪ್ರಥಿತಗುಣಯಶಾ ಗುಣೈರ್ವಿಶಿಷ್ಟಃ
ಪರಮಋಷಿಃ ಪರಮಂ ಜಗಾಮ ಹರ್ಷಮ್ ॥ ೫೫ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ
ಬಾಲಕಾಂಡೇಽಷ್ಟಾದಶಃ ಸರ್ಗಃ ॥ ೧೮ ॥

ಹೀಗೆ ಮನೋಬಲ ಉಳ್ಳ ದಶರಥನು ವಿನಯದಿಂದ ಆಡಿದ ಈ ಮಾತು ಮುನಿಗೆ ಶ್ರವಣ-ಮನಗಳಿಗೆ ಆನಂದಕರವಾಗಿತ್ತು. ಅದನ್ನು ಕೇಳಿ, ಸದ್ಗುಣಶಾಲಿ, ಪರಮ ಯಶೋಭಾಜನನಾದ ಪರಮ ಋಷಿ ವಿಶ್ವಾಮಿತ್ರನು ಪರಮ ಹರ್ಷಭರಿತನಾದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಹದಿನೆಂಟನೆ ಸರ್ಗ ಮುಗಿಯಿತು.

ಏಕೋನವಿಂಶಃ ಸರ್ಗಃ

ತಚ್ಛ್ರುತ್ವಾ ರಾಜಸಿಂಹಸ್ಯ ವಾಕ್ಯಮದ್ಭುತವಿಸ್ತರಮ್ ।
ಹೃಷ್ಟರೋಮಾ ಮಹಾತೇಜಾ ವಿಶ್ವಾಮಿತ್ರೋಽಭ್ಯಭಾಷತ ॥ ೧ ॥

ಮಹಾರಾಜ ದಶರಥನು ಆಡಿದ ಮಾತು ಆಶ್ಚರ್ಯ ಪ್ರಪಂಚವಾಗಿತ್ತು. ಅದನ್ನು ಕೇಳಿ ಮಹಾತೇಜನಾದ ವಿಶ್ವಾಮಿತ್ರ ಆಶ್ಚರ್ಯ ಪುಲಕಿತನಾಗಿ ನುಡಿದ.

ಸದೃಶಂ ರಾಜಶಾರ್ದೂಲ ತವೈತದ್ಭುವಿ ನಾನ್ಯಥಾ ।
ಮಹಾವಂಶಪ್ರಸೂತಸ್ಯ ವಸಿಷ್ಠವ್ಯಪದೇಶಿನಃ ॥ ೨ ॥

'ರಾಜಶ್ರೇಷ್ಠನೆ, ಈ ಭೂಮಿಯಲ್ಲಿ ಮಹಾವಂಶದಲ್ಲಿ ಬಂದು, ವಸಿಷ್ಠನಾದೇಶ-ದಂತೇ ನಡೆಯುವ ನಿನಗೆ ಈ ಮಾತು ತಕ್ಕುದಾಗಿ ಇದೆ ಹೊರತು ಅನ್ಯರಿಗಲ್ಲ.

ಯತ್ತು ಮೇ ಹೃದ್ಗತಂ ವಾಕ್ಯಂ ತಸ್ಯ ಕಾರ್ಯಸ್ಯ ನಿಶ್ಚಯಮ್ ।
ಕುರುಷ್ವ ರಾಜಶಾರ್ದೂಲ ಭವ ಸತ್ಯಪ್ರತಿಶ್ರವಾಃ ॥ ೩ ॥

'ರಾಜಶ್ರೇಷ್ಠನೆ, ನನ್ನ ಮನೋಗತವಾದ ಮಾತನ್ನು ನಡೆಸಿ ಕೊಡುವ ನಿರ್ಧಾರವನ್ನು ನೀನು ಕೈಗೊಳ್ಳಬೇಕು. ಸತ್ಯಪ್ರತಿಜ್ಞನಾಗು ನೀನು.

ಅಹಂ ನಿಯಮಮಾತಿಷ್ಠೇ ಸಿದ್ಧ್ಯರ್ಥಂ ಪುರುಷರ್ಷಭ ।
ತಸ್ಯ ವಿಘ್ನಕರೌ ದ್ವೌ ತು ರಾಕ್ಷಸೌ ಕಾಮರೂಪಿಣೌ ॥ ೪ ॥

ಪುರುಷ ಶ್ರೇಷ್ಠನೆ, ನಾನು ಪುರುಷಾರ್ಥ ಸಿದ್ಧಿಗಾಗಿ ಒಂದು ಯಜ್ಞದೀಕ್ಷೆಯನ್ನು ಕೈಗೊಂಡಿದ್ದೇನೆ. ಅದಕ್ಕೆ ವಿಘ್ನ ಮಾಡುತ್ತಿದ್ದಾರೆ ಕಾಮರೂಪಿಗಳಾದ ಇಬ್ಬರು ರಾಕ್ಷಸರು.

ವ್ರತೇ ಮೇ ಬಹುಶಶ್ಚೀರ್ಣೇ ಸಮಾಪ್ತ್ಯಾಂ ರಾಕ್ಷಸಾವಿಮೌ ।
ಮಾರೀಚಶ್ಚ ಸುಬಾಹುಶ್ಚ ವೀರ್ಯವಂತೌ ಸುಶಿಕ್ಷಿತೌ ॥
ಸಮಾಂಸರುಧಿರೌಘೇಣ ವೇದಿಂ ತಾಮಭ್ಯವರ್ಷತಾಮ್ ॥ ೫ ॥

'ನನ್ನ ದೀಕ್ಷೆ ಬಹ್ವಂತ ಪೂರ್ಣವಾಗಿದೆ, ಈಗ ಸಮಾಪ್ತಿಯಾಗುವಲ್ಲಿ, ವಿಘ್ನ ಮಾಡುವುದನ್ನು ಚೆನ್ನಾಗಿ ಕಲಿತವರು, ತಕ್ಕ ಸಾಮರ್ಥ್ಯ ಉಳ್ಳವರು ಮಾರೀಚ ಮತ್ತು ಸುಬಾಹು ಎಂಬ ಈ ಇಬ್ಬರು ರಾಕ್ಷಸರು ಯಜ್ಞವೇದಿಯ ಮೇಲೆ ಮಾಂಸ ರಕ್ತಗಳ ಮಳೆಯನ್ನು ಸುರಿಯುತ್ತಾರೆ.

ಅವಧೂತೇ ತಥಾಭೂತೇ ತಸ್ಮಿನ್ನಿಯಮನಿಶ್ಚಯೇ ।
ಕೃತಶ್ರಮೋ ನಿರುತ್ಸಾಹಸ್ತಸ್ಮಾದ್ದೇಶಾದಪಾಕ್ರಮೇ ॥ ೬ ॥

'ನನ್ನ ಯಜ್ಞದೀಕ್ಷಾ ಸಂಕಲ್ಪ ಹೀಗೆ ತೊಂದರೆಗೊಳಗಾದಾಗ ನಾನು ಬಹು ಶ್ರಮಪಟ್ಟಿದ್ದು ಎಲ್ಲವೂ ವ್ಯರ್ಥವಾಗುತ್ತಿದೆ ಎಂದು ನಿರುತ್ಸಾಹಗೊಂಡು ಆ ಪ್ರದೇಶದಿಂದ ಈಚೆ ಬಂದಿದ್ದೇನೆ.

ನ ಚ ಮೇ ಕ್ರೋಧಮುತ್ಸೃಷ್ಟುಂ ಬುದ್ಧಿರ್ಭವತಿ ಪಾರ್ಥಿವ ।
ತಥಾಭೂತಾ ಹಿ ಸಾ ಚರ್ಯಾ ನ ಶಾಪಸ್ತತ್ರ ಮುಚ್ಯತೇ ॥ ೭ ॥

'ರಾಜನೆ, ಅವರಿಗೆ ಕೋಪದಿಂದ ಶಾಪ ಕೊಡಲು ನನಗೆ ಮನಸಾಗುವುದಿಲ್ಲ. ಶಾಪಕ್ಕೆ ಯೋಗ್ಯವೇ ಅವರ ದುಷ್ಟಚರ್ಯೆ. ಆದರೂ ಅವರು ಶಿವವರದಿಂದ ಅವಧ್ಯರಾಗಿರುವುದರಿಂದ ನಾನು ಶಾಪ ಕೊಡುವುದಿಲ್ಲ.

ಸ್ವಪುತ್ರಂ ರಾಜಶಾರ್ದೂಲ ರಾಮಂ ಸತ್ಯಪರಾಕ್ರಮಮ್ ।
ಕಾಕಪಕ್ಷಧರಂ ಶೂರಂ ಜ್ಯೇಷ್ಠಂ ಮೇ ದಾತುಮರ್ಹಸಿ ॥ ೮ ॥

'ರಾಜಶ್ರೇಷ್ಠನೆ, ತಲೆಯ ಎರಡೂ ಪಕ್ಕಗಳಲ್ಲಿ ಬಾಲಕರಿಗೆ ಉಚಿತವಾಗಿ ಶಿಖೆಗಳನ್ನು ಧರಿಸಿದ ಬಾಲಕರು ರಾಮಲಕ್ಷ್ಮಣರು. ರಾಮನು ಹೀಗೆ 'ಕಾಕ ಪಕ್ಷಧರ'ನಾದ ಬಾಲಕನಾದರೂ ಶೂರ, ಸತ್ಯಪರಾಕ್ರಮನೇ ಆಗಿದ್ದಾನೆ. ಅದರಿಂದ ನಿನ್ನ ಜ್ಯೇಷ್ಠಪುತ್ರನಾದ ರಾಮನನ್ನು ನನಗೆ ಕೊಡು.

ಶಕ್ತೋ ಹ್ಯೇಷ ಮಯಾ ಗುಪ್ತೋ ದಿವ್ಯೇನ ಸ್ವೇನ ತೇಜಸಾ ।
ರಾಕ್ಷಸಾ ಯೇ ವಿಕರ್ತಾರಸ್ತೇಷಾಮಪಿ ವಿನಾಶನೇ ॥ ೯ ॥

'ನಾನು ಇವನಿಗೆ ರಕ್ಷಣೆ ಕೊಡುತ್ತೇನೆ. ದಿವ್ಯವಾದ ತನ್ನ ತೇಜಸ್ಸಿನಿಂದ ಯಜ್ಞ ವಿರೋಧಿಗಳಾದ ಬೇರೆ ರಾಕ್ಷಸರನ್ನೂ ನಾಶ ಮಾಡಲು ಇವನು ಶಕ್ತ.

ಶ್ರೇಯಶ್ಚಾಸ್ಮೈ ಪ್ರದಾಸ್ಯಾಮಿ ಬಹುರೂಪಂ ನ ಸಂಶಯಃ ।
ತ್ರಯಾಣಾಮಪಿ ಲೋಕಾನಾಂ ಯೇನ ಖ್ಯಾತಿಂ ಗಮಿಷ್ಯತಿ ॥ ೧೦ ॥

'ಬಹುರೂಪವಾದ ಶ್ರೇಯಸ್ಸನ್ನೂ ನಾನು ಈತನಿಗೆ ಕೊಡುವೆನು. ಇದರಲ್ಲಿ ಸಂಶಯವಿಲ್ಲ. ಅದರಿಂದ ಇವನು ಮೂರು ಲೋಕಗಳಲ್ಲಿ ಖ್ಯಾತಿಯನ್ನು ಹೊಂದುತ್ತಾನೆ.

ನ ಚ ತೌ ರಾಮಮಾಸಾದ್ಯ ಶಕ್ತೌ ಸ್ಥಾತುಂ ಕಥಂಚನ ।
ನ ಚ ತೌ ರಾಘವಾದನ್ಯೋ ಹಂತುಮುತ್ಸಹತೇ ಪುಮಾನ್ ॥ ೧೧ ॥

'ಮತ್ತು ಅವರು ರಾಮನ ಮುಂದೆ ಬಂದು ನಿಲ್ಲಲು ಶಕ್ತರೂ ಅಲ್ಲ. ರಾಮನಿಗಿಂತ ಬೇರೊಬ್ಬ ಅವರನ್ನು ಕೊಲ್ಲಲು ಸಮರ್ಥನೂ ಇಲ್ಲ.

ವೀರ್ಯೋತ್ಸಿಕ್ತೌ ಹಿ ತೌ ಪಾಪೌ ಕಾಲಪಾಶವಶಂ ಗತೌ ।
ರಾಮಸ್ಯ ರಾಜಶಾರ್ದೂಲ ನ ಪರ್ಯಾಪ್ತೌ ಮಹಾತ್ಮನಃ ॥ ೧೨ ॥

'ಆ ಪಾಪಿಗಳು ಬಲ ಪರಾಕ್ರಮದಿಂದ ಉನ್ಮತ್ತರಾಗಿ ಕಾಲಯಮನ ಪಾಶಕ್ಕೆ ವಶರಾಗಿದ್ದಾರೆ. ರಾಜೋತ್ತಮನೆ ಅವರು ಮಹಾತ್ಮನಾದ ರಾಮನ ಮುಂದೆ ನಿಲ್ಲಲು ಶಕ್ತರಲ್ಲ.

ನ ಚ ಪುತ್ರಕೃತಸ್ನೇಹಂ ಕರ್ತುಮರ್ಹಸಿ ಪಾರ್ಥಿವ ।
ಅಹಂ ತೇ ಪ್ರತಿಜಾನಾಮಿ ಹತೌ ತೌ ವಿದ್ಧಿ ರಾಕ್ಷಸೌ ॥ ೧೩ ॥

'ರಾಜನೆ, ಪುತ್ರನೆನ್ನುವ ಪ್ರೀತಿಯನ್ನು ಈ ವಿಷಯದಲ್ಲಿ ನೀನು ರಾಮನಲ್ಲಿಟ್ಟು-ಕೊಳ್ಳಬೇಡ. ನಾನು ನಿಃಸಂದಿಗ್ಧವಾಗಿ ಹೇಳುತ್ತೇನೆ, ಆ ರಾಕ್ಷಸರು ಇನ್ನು ಸತ್ತರೆಂದೇ ತಿಳಿ.

ಅಹಂ ವೇದ್ಮಿ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।
ವಸಿಷ್ಠೋಽಪಿ ಮಹಾತೇಜಾ ಯೇ ಚೇಮೇ ತಪಸಿ ಸ್ಥಿತಾಃ ॥ ೧೪ ॥

'ರಾಮನನ್ನು ಸತ್ಯಪರಾಕ್ರಮನಾದ ಮಹಾತ್ಮನೆಂದು ನಾನು ತಿಳಿದಿದ್ದೇನೆ. ಮಹಾತೇಜನಾದ ವಸಿಷ್ಠನೂ ಬಲ್ಲ, ತಪಸ್ಸು ಮಾಡುತ್ತಿರುವ ಈ ಮುನಿಗಳೂ ಬಲ್ಲರು.

ಯದಿ ತೇ ಧರ್ಮಲಾಭಂ ಚ ಯಶಶ್ಚ ಪರಮಂ ಭುವಿ ।
ಸ್ಥಿತಮಿಚ್ಛಸಿ ರಾಜೇಂದ್ರ ರಾಮಂ ಮೇ ದಾತುಮರ್ಹಸಿ ॥ ೧೫ ॥

'ನೀನು ಪುಣ್ಯಲಾಭವನ್ನು ಇಚ್ಛಿಸುವಿಯಾದರೆ, ಒಳ್ಳೆಯ ಕೀರ್ತಿ ಭೂಮಿಯಲ್ಲಿ ಸ್ಥಿರವಾಗಿ ನಿಲ್ಲಲಿ ಎಂದು ಬಯಸುವಿಯಾದರೆ, ರಾಜಶ್ರೇಷ್ಠನೆ, ನೀನು ಸರ್ವಥಾ ರಾಮನನ್ನು ನನಗೆ ಬಿಟ್ಟುಕೊಡು.

ಯದಿ ಹ್ಯನುಜ್ಞಾಂ ಕಾಕುತ್ಸ್ಥ ದದತೇ ತವ ಮಂತ್ರಿಣಃ ।
ವಸಿಷ್ಠಪ್ರಮುಖಾಃ ಸರ್ವೇ ರಾಘವಂ ಮೇ ವಿಸರ್ಜಯ ॥ ೧೬ ॥

'ಕಾಕುತ್ಸ್ಥರಾಜನೆ, ನಿನ್ನ ಮಂತ್ರಿಗಳು ವಸಿಷ್ಠ ಮುಂತಾದವರು ನಿನಗೆ ಅನುಜ್ಞೆ ಕೊಡುವುದಾದರೆ ನೀನು ಅವಶ್ಯ ರಾಮನನ್ನು ನನಗೆ ಬಿಟ್ಟುಕೊಡು.

ಅಭಿಪ್ರೇತಮಸಂಸಕ್ತಮಾತ್ಮಜಂ ದಾತುಮರ್ಹಸಿ ।
ದಶರಾತ್ರಂ ಹಿ ಯಜ್ಞಸ್ಯ ರಾಮಂ ರಾಜೀವಲೋಚನಮ್ ॥ ೧೭ ॥

'ಈತ ನನಗೆ ಇಷ್ಟನಾಗಿದ್ದಾನೆ, ಬೆಳೆದು ನಿಂತವನಾದ್ದರಿಂದ, ನಿನ್ನಲ್ಲಿ ಹಿಂದಿನಷ್ಟು ಆಸಕ್ತಿ ಅವನಿಗಿರಲಿಕ್ಕಿಲ್ಲ, ಕಮಲಾಕ್ಷನಾದ ಮಗನಾದ ರಾಮನನ್ನು ಯಜ್ಞದ ಕೇವಲ ಹತ್ತುದಿವಸಗಳ ಮಟ್ಟಿಗೆ ನನಗೇ ಬಿಟ್ಟುಕೊಡು.

ನಾತ್ಯೇತಿ ಕಾಲೋ ಯಜ್ಞಸ್ಯ ಯಥಾಯಂ ಮಮ ರಾಘವ ।
ತಥಾ ಕುರುಷ್ವ ಭದ್ರಂ ತೇ ಮಾ ಚ ಶೋಕೇ ಮನಃ ಕೃಥಾಃ ॥ ೧೮ ॥

'ರಘುವಂಶದವನೆ, ನನಗೆ ಯಜ್ಞದ ಕಾಲ ಅತಿಕ್ರಮಿಸಿ ಹೋಗದಂತೆ ಮಾಡು. ನಿನಗೆ ಒಳ್ಳೆಯದಾಗಲಿ. ಶೋಕ ಪರವಶನಾಗಬೇಡ.'

ಇತ್ಯೇವಮುಕ್ತ್ವಾ ಧರ್ಮಾತ್ಮಾ ಧರ್ಮಾರ್ಥಸಹಿತಂ ವಚಃ ।
ವಿರರಾಮ ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ ॥ ೧೯ ॥

ಧರ್ಮಾತ್ಮನಾದ ಮಹಾತೇಜನಾದ ಮಹಾಮುನಿ ವಿಶ್ವಾಮಿತ್ರನು ಹೀಗೆ ಧರ್ಮ ಮತ್ತು ಲೌಕಿಕ ಅರ್ಥಯುಕ್ತವಾದ ಮಾತನ್ನು ಹೇಳಿ ಸುಮ್ಮನಾದನು.

ಸ ತನ್ನಿಶಮ್ಯ ರಾಜೇಂದ್ರೋ ವಿಶ್ವಾಮಿತ್ರವಚಃ ಶುಭಮ್ ।
ಶೋಕಮಭ್ಯಗಮತ್ತೀವ್ರಂ ವ್ಯಷೀದತ ಭಯಾನ್ವಿತಃ ॥ ೨೦ ॥

ರಾಜಶ್ರೇಷ್ಠನಾದ ದಶರಥನು ಶುಭಪ್ರದವಾದ ವಿಶ್ವಾಮಿತ್ರನ ಮಾತನ್ನು ಕೇಳಿ ತೀವ್ರಶೋಕಕ್ಕೊಳಗಾದನು. ಭಯಾನ್ವಿತನಾಗಿ ವಿಷಣ್ಣನಾದನು.

ಇತಿ ಹೃದಯಮನೋವಿದಾರಣಂ
ಮುನಿವಚನಂ ತದತೀವ ಶುಶ್ರುವಾನ್ ।
ನರಪತಿರಭವನ್ಮಹಾಂಸ್ತದಾ ವ್ಯಥಿತಮನಾಃ
ಪ್ರಚಚಾಲ ಚಾಸನಾತ್ ॥ ೨೧ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಏಕೋನವಿಂಶಃ ಸರ್ಗಃ ॥ ೧೯ ॥

ಈ ರೀತಿ ಹೃದಯ ಮನಸ್ಸುಗಳಿಗೆ ಅತೀವ ನೋವನ್ನುಂಟುಮಾಡುವ ಮುನಿವಚನವನ್ನು ಕೇಳಿ ಮಹಾರಾಜ ದಶರಥನು ಮನೋವ್ಯಥೆಯಿಂದ ಮೂರ್ಛಿತನಾಗಿ ಆಸನದಿಂದ ನೆಲದ ಮೇಲೊರಗಿದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಹತ್ತೊಂಬತ್ತನೇ ಸರ್ಗ ಮುಗಿಯಿತು.

ವಿಂಶಃ ಸರ್ಗಃ

ತಚ್ಛ್ರುತ್ವಾ ರಾಜಶಾರ್ದೂಲೋ ವಿಶ್ವಾಮಿತ್ರಸ್ಯ ಭಾಷಿತಮ್ ।
ಮುಹೂರ್ತಮಿವ ನಿಃಸಂಜ್ಞಃ ಸಂಜ್ಞಾವಾನಿದಮಬ್ರವೀತ್ ॥ ೧ ॥

ರಾಜಶ್ರೇಷ್ಠನಾದ ದಶರಥನು ವಿಶ್ವಾಮಿತ್ರನ ಮಾತನ್ನು ಕೇಳಿ ಮುಹೂರ್ತಕಾಲ ಮೂರ್ಛಿತನಾಗಿದ್ದು ಬಳಿಕ ಎಚ್ಚೆತ್ತು ನುಡಿದ.

ಊನಷೋಡಶವರ್ಷೋ ಮೇ ರಾಮೋ ರಾಜೀವಲೋಚನಃ ।
ನ ಯುದ್ಧಯೋಗ್ಯತಾಮಸ್ಯ ಪಶ್ಯಾಮಿ ಸಹ ರಾಕ್ಷಸೈಃ ॥ ೨ ॥

'ಕಮಲಾಕ್ಷನಾದ ನನ್ನ ರಾಮನಿನ್ನೂ ಹದಿನಾರು ವಯಸ್ಸು ತುಂಬಲಿಲ್ಲ. ರಾಕ್ಷಸರೊಂದಿಗೆ ಯುದ್ಧ ಮಾಡಬಲ್ಲ ಸಾಮರ್ಥ್ಯವನ್ನು ಅವನಲ್ಲಿ ನಾ ಕಾಣಲಾರೆ.

ಇಯಮಕ್ಷೌಹಿಣೀ ಪೂರ್ಣಾ ಯಸ್ಯಾಹಂ ಪತಿರೀಶ್ವರಃ ।
ಅನಯಾ ಸಂವೃತೋ ಗತ್ವಾ ಯೋದ್ಧಾಹಂ ತೈರ್ನಿಶಾಚರೈಃ ॥ ೩ ॥

'ಇದು ಪೂರ್ಣ ಅಕ್ಷೌಹಿಣೀ ಸೈನ್ಯ , ಅದರೊಡೆಯನು ನಾನು, ರಾಕ್ಷಸರೊಡನೆ ಯುದ್ಧ ಮಾಡಲು ಸಮರ್ಥನಿದ್ದೇನೆ. ಈ ಸೈನ್ಯದೊಂದಿಗೆ ಹೋಗಿ ನಾನು ಆ ರಾಕ್ಷಸರ ಜೊತೆ ಯುದ್ಧ ಮಾಡುವೆನು.

ಇಮೇ ಶೂರಾಶ್ಚ ವಿಕ್ರಾಂತಾ ಭೃತ್ಯಾ ಮೇಽಸ್ತ್ರವಿಶಾರದಾಃ ।
ಯೋಗ್ಯಾ ರಕ್ಷೋಗಣೈರ್ಯೋದ್ಧುಂ ನ ರಾಮಂ ನೇತುಮರ್ಹಸಿ ॥೪॥

'ಈ ನನ್ನ ಶೂರ ಭಟರು ಪರಾಕ್ರಮಶಾಲಿಗಳು ಅಸ್ತ್ರವಿಶಾರದರು, ರಾಕ್ಷಸ ಸಮೂಹಗಳೊಂದಿಗೆ ಯುದ್ಧ ಮಾಡಲು ಯೋಗ್ಯರಾಗಿರುವರು. ಅದಕ್ಕೆ ರಾಮನನ್ನು ಒಯ್ಯಬೇಡಿರಿ.

ಅಹಮೇವ ಧನುಷ್ಪಾಣಿರ್ಗೋಪ್ತಾ ಸಮರಮೂರ್ಧನಿ ।
ಯಾವತ್ಪ್ರಾಣಾನ್ ಧರಿಷ್ಯಾಮಿ ತಾವದ್ಯೋತ್ಸ್ಯೇ ನಿಶಾಚರೈಃ ॥ ೫ ॥

'ನಾನೇ ಧನುಸ್ಸನ್ನು ಹಿಡಿದು ಯಜ್ಞರಕ್ಷಕನಾಗಿ ಯುದ್ಧದಲ್ಲಿ ಮುಂದೆ ನಿಂತು, ಪ್ರಾಣಧಾರಣ ಮಾಡಿಕೊಂಡಿರುವಷ್ಟು ಕಾಲವೂ ರಾಕ್ಷಸರೊಡನೆ ಹೋರಾಡುವೆನು.

ನಿರ್ವಿಘ್ನಾ ವ್ರತಚರ್ಯಾ ಸಾ ಭವಿಷ್ಯತಿ ಸುರಕ್ಷಿತಾ ।
ಅಹಂ ತತ್ರ ಗಮಿಷ್ಯಾಮಿ ನ ರಾಮಂ ನೇತುಮರ್ಹಸಿ ॥ ೬ ॥

ನಿಮ್ಮ ಯಜ್ಞದೀಕ್ಷಾವ್ರತಚರ್ಯೆ ನಿರ್ವಿಘ್ನವಾಗಿ ಸುರಕ್ಷಿತವಾಗಿರುತ್ತದೆ. ಅದಕ್ಕೆ ಅಲ್ಲಿಗೆ ನಾನೇ ಹೋಗುವೆನು? ರಾಮನನ್ನು ಮಾತ್ರ ಒಯ್ಯಬೇಡಿರಿ.

ಬಾಲೋ ಹ್ಯಕೃತವಿದ್ಯಶ್ಚ ನ ಚ ವೇತ್ತಿ ಬಲಾಬಲಮ್ ।
ನ ಚಾಸ್ತ್ರಬಲಸಂಯುಕ್ತೋ ನ ಚ ಯುದ್ಧವಿಶಾರದಃ ॥
ನ ಚಾಸೌ ರಕ್ಷಸಾಂ ಯೋಗ್ಯಃ ಕೂಟಯುದ್ಧಾ ಹಿ ತೇ ಧ್ರುವಮ್ ॥ ೭ ॥

‘ರಾಮನು ಇನ್ನೂ ಬಾಲಕ. ವಿದ್ಯಾಭ್ಯಾಸವನ್ನು ಮುಗಿಸಿಲ್ಲ. ಶತ್ರುಸೈನ್ಯದ ಬಲಾಬಲಗಳನ್ನು ತಿಳಿಯಲಾರ. ಅಸ್ತ್ರಬಲಯುಕ್ತನೂ ಆಗಿಲ್ಲ. ಯುದ್ಧ ವಿಶಾರದನೂ ಆಗಿಲ್ಲ. ರಾಕ್ಷಸರೊಂದಿಗೆ ಯುದ್ಧ ಮಾಡಲು ಯೋಗ್ಯನಲ್ಲ. ಅವರು ಕಪಟ ಯುದ್ಧವನ್ನೇ ಮಾಡುವರು. ಇದು ನಿಶ್ಚಯ.

ವಿಪ್ರಯುಕ್ತೋ ಹಿ ರಾಮೇಣ ಮುಹೂರ್ತಮಪಿ ನೋತ್ಸಹೇ ।
ಜೀವಿತುಂ ಮುನಿಶಾರ್ದೂಲ ನ ರಾಮಂ ನೇತುಮರ್ಹಸಿ ॥ ೮ ॥

‘ರಾಮನಿಲ್ಲದೆ ಒಂದು ಮುಹೂರ್ತವೂ ನಾನು ಬದುಕಿರಲಾರೆ. ಮುನಿಶ್ರೇಷ್ಠನೆ, ರಾಮನನ್ನು ಒಯ್ಯಬೇಡ.

ಯದಿ ವಾ ರಾಘವಂ ಬ್ರಹ್ಮನ್ನೇತುಮಿಚ್ಛಸಿ ಸುವ್ರತ ।
ಚತುರಂಗಸಮಾಯುಕ್ತಂ ಮಯಾ ಚ ಸಹಿತಂ ನಯ ॥ ೯ ॥

‘ಮುನಿಯೆ, ಸುವ್ರತನಿಷ್ಠನೆ, ರಾಮನನ್ನು ಒಯ್ಯಲೇಬೇಕೆಂದು ಬಯಸುವೆ–ಯಾದರೆ ಚತುರಂಗ ಬಲಯುಕ್ತನಾದ ನನ್ನ ಜೊತೆಗೇ ಅವನನ್ನು ಒಯ್ಯು.

ಷಷ್ಟಿ ವರ್ಷಸಹಸ್ರಾಣಿ ಜಾತಸ್ಯ ಮಮ ಕೌಶಿಕ ।
ದುಃಖೇನೋತ್ಪಾದಿತಶ್ಚಾಯಂ ನ ರಾಮಂ ನೇತುಮರ್ಹಸಿ ॥ ೧೦ ॥

ನಾನು ಹುಟ್ಟಿ ಅರವತ್ತು ಸಾವಿರ ವರ್ಷಗಳು ಕಳೆದುವು. ಬಳಿಕ ಬಹುಕಷ್ಟದಿಂದ ನಾನು ರಾಮನಿಗೆ ಜನ್ಮ ಕೊಟ್ಟಿದ್ದೇನೆ. ರಾಮನನ್ನು ಒಯ್ಯಬೇಡ. (ಸಂಗ್ರಹ–ರಾಮಾಯಣ ಪ್ರಕಾರ ಒಂಬತ್ತು ಸಾವಿರ ವರ್ಷ).

ಚತುರ್ಣಾಮಾತ್ಮಜಾನಾಂ ಹಿ ಪ್ರೀತಿಃ ಪರಮಿಕಾ ಮಮ ।
ಜ್ಯೇಷ್ಠಂ ಧರ್ಮಪ್ರಧಾನಂ ಚ ನ ರಾಮಂ ನೇತುಮರ್ಹಸಿ ॥ ೧೧ ॥

'ನಾಲ್ಕು ಮಕ್ಕಳಲ್ಲಿಯೂ ನನಗೆ ಬಹಳ ಪ್ರೀತಿ ಇದೆ. ಅವರಲ್ಲಿಯೂ ಜ್ಯೇಷ್ಠನೂ ಧರ್ಮಪರನೂ ಆದವನು ರಾಮ. ರಾಮನನ್ನು ಒಯ್ಯಬೇಡಿರಿ.

ಕಿಂವೀರ್ಯಾ ರಾಕ್ಷಸಾಸ್ತೇ ಚ ಕಸ್ಯ ಪುತ್ರಾಶ್ಚ ಕೇ ಚ ತೇ ।
ಕಥಂಪ್ರಮಾಣಾಃ ಕೇ ಚೈತಾನ್ರಕ್ಷಂತಿ ಮುನಿಪುಂಗವ ॥ ೧೨ ॥

'ಆ ರಾಕ್ಷಸರು ಏನು ಬಲ ಉಳ್ಳವರು? ಯಾರ ಮಕ್ಕಳು? ಅವರ ಹೆಸರೇನು? ಅವರ ಶರೀರ ಪ್ರಮಾಣ ಹೇಗಿದೆ? ಯಾರು ಅವರನ್ನು ರಕ್ಷಿಸುತ್ತಿದ್ದಾರೆ. ಮುನಿಶ್ರೇಷ್ಠನೆ, ಹೇಳು.

ಕಥಂ ಚ ಪ್ರತಿಕರ್ತವ್ಯಂ ತೇಷಾಂ ರಾಮೇಣ ರಕ್ಷಸಾಮ್ ।
ಮಾಮಕೈರ್ವಾ ಬಲೈರ್ಬ್ರಹ್ಮನ್ಮಯಾ ವಾ ಕೂಟಯೋಧಿನಾಮ್ ॥

'ಕಪಟಯುದ್ಧವನ್ನು ಮಾಡುವ ಆ ರಾಕ್ಷಸರನ್ನು ರಾಮನಾಗಲಿ ನನ್ನ ಸೈನಿಕರಾಗಲಿ ನಾನೇ ಆಗಲಿ ಹೇಗೆ ನಾಶ ಮಾಡಲಾದೀತು? ಮುನಿಯೆ ಹೇಳು.

ಸರ್ವಂ ಮೇ ಶಂಸ ಭಗವನ್ಕಥಂ ತೇಷಾಂ ಮಯಾ ರಣೇ ।
ಸ್ಥಾತವ್ಯಂ ದುಷ್ಟಭಾವಾನಾಂ ವೀರ್ಯೋತ್ಸಿಕ್ತಾ ಹಿ ರಾಕ್ಷಸಾಃ ॥ ೧೪ ॥

'ಪೂಜ್ಯನೆ, ಎಲ್ಲವನ್ನೂ ನನಗೆ ಹೇಳು. ದುಷ್ಟ ಭಾವದವರಾದ ಆ ರಾಕ್ಷಸರ ಮುಂದೆ ರಣದಲ್ಲಿ ನಾನು ಹೇಗೆ ನಿಲ್ಲಲು ಸಾಧ್ಯ ? ರಾಕ್ಷಸರು ಬಲೋನ್ಮತ್ತರು.'

ತಸ್ಯ ತದ್ವಚನಂ ಶ್ರುತ್ವಾ ವಿಶ್ವಾಮಿತ್ರೋಽಭ್ಯಭಾಷತ ।
ಪೌಲಸ್ತ್ಯವಂಶಪ್ರಭವೋ ರಾವಣೋ ನಾಮ ರಾಕ್ಷಸಃ ॥ ೧೫ ॥

'ದಶರಥನ ಈ ಮಾತನ್ನು ಕೇಳಿ ವಿಶ್ವಾಮಿತ್ರಮುನಿ ಹೇಳಿದರು– 'ಪುಲಸ್ತ್ಯ ಮುನಿಯ ವಂಶದಲ್ಲಿ ಹುಟ್ಟಿದವನು ಈ ರಾವಣನೆಂಬ ರಾಕ್ಷಸ.

ಸ ಬ್ರಹ್ಮಣಾ ದತ್ತವರಸ್ತ್ರೈಲೋಕ್ಯಂ ಬಾಧತೇ ಭೃಶಮ್ ।
ಮಹಾಬಲೋ ಮಹಾವೀರ್ಯೋ ರಾಕ್ಷಸೈರ್ಬಹುಭಿರ್ವೃತಃ ॥ ೧೬ ॥

'ಬ್ರಹ್ಮದೇವ ಅವನಿಗೆ ವರವಿತ್ತಿದ್ದಾನೆ. ಅವನು ಮೂಲೋಕವನ್ನು ಬಹಳ

ಪೀಡಿಸುತ್ತಿದ್ದಾನೆ. ಮಹಾಬಲಿ ಮಹಾವೀರ. ಬಹುರಾಕ್ಷಸರಿಂದ ಪರಿವೃತ-ನಾಗಿದ್ದಾನೆ.

ಶ್ರೂಯತೇ ಹಿ ಮಹಾವೀರ್ಯೋ ರಾವಣೋ ರಾಕ್ಷಸಾಧಿಪಃ ।
ಸಾಕ್ಷಾದ್ವೈಶ್ರವಣಭ್ರಾತಾ ಪುತ್ರೋ ವಿಶ್ರವಸೋ ಮುನೇಃ ॥ ೧೭ ॥

'ಮಹಾವೀರ ರಾಕ್ಷಸಾಧಿಪ ರಾವಣನು ಬಲು ಪ್ರಸಿದ್ಧನೆ. ಸಾಕ್ಷಾತ್ ಕುಬೇರನ ತಮ್ಮ. ವಿಶ್ರವಸ ಮುನಿಯ ಪುತ್ರ.

ಯದಾ ಸ್ವಯಂ ನ ಯಜ್ಞಸ್ಯ ವಿಘ್ನಕರ್ತಾ ಮಹಾಬಲಃ ।
ತೇನ ಸಂಚೋದಿತೌ ದ್ವೌ ತು ರಾಕ್ಷಸೌ ಸುಮಹಾಬಲೌ ॥
ಮಾರೀಚಶ್ಚ ಸುಬಾಹುಶ್ಚ ಯಜ್ಞವಿಘ್ನಂ ಕರಿಷ್ಯತಃ ॥ ೧೮ ॥

'ಮಹಾಬಲಿಯಾದ ರಾವಣ ತಾನೇ ಯಜ್ಞವಿಘ್ನ ಮಾಡದಿರುವಾಗ ಅವನಿಂದ ಆಜ್ಞಪ್ತರಾಗಿ ಈ ಮಾರೀಚ ಮತ್ತು ಸುಬಾಹು ಎಂದು ಮಹಾಬಲಶಾಲಿಗಳಾದ ಇಬ್ಬರು ರಾಕ್ಷಸರು ಯಜ್ಞಗಳಿಗೆ ವಿಘ್ನ ಮಾಡುತ್ತಾರೆ.'

ಇತ್ಯುಕ್ತೋ ಮುನಿನಾ ತೇನ ರಾಜೋವಾಚ ಮುನಿಂ ತದಾ ।
ನ ಹಿ ಶಕ್ತೋಽಸ್ಮಿ ಸಂಗ್ರಾಮೇ ಸ್ಥಾತುಂ ತಸ್ಯ ದುರಾತ್ಮನಃ ॥ ೧೯ ॥

ವಿಶ್ವಾಮಿತ್ರ ಮುನಿ ಹೀಗೆ ಹೇಳಿದಾಗ ರಾಜಾ ದಶರಥನು ನುಡಿದ, 'ಆ ದುರಾತ್ಮನೊಡನೆ ಯುದ್ಧದಲ್ಲಿ ನಿಲ್ಲಲು ನಾನು ಶಕ್ತನಲ್ಲ.

ಸ ತ್ವಂ ಪ್ರಸಾದಂ ಧರ್ಮಜ್ಞ ಕುರುಷ್ವ ಮಮ ಪುತ್ರಕೇ ।
ಮಮ ಚೈವಾಲ್ಪಭಾಗ್ಯಸ್ಯ ದೈವತಂ ಹಿ ಭವಾನ್ ಗುರುಃ ॥ ೨೦ ॥

'ಧರ್ಮಜ್ಞನಾದ ಮುನಿಯೆ, ನನ್ನ ಪುತ್ರನಲ್ಲಿ ನೀನು ಪ್ರಸನ್ನನಾಗು. ಅಲ್ಪ ಭಾಗ್ಯನಾದ ನನಗೆ ಗುರುವೂ ದೈವವೂ ನೀನೆ.

ದೇವದಾನವಗಂಧರ್ವಾ ಯಕ್ಷಾಃ ಪತಗಪನ್ನಗಾಃ ।
ನ ಶಕ್ತಾ ರಾವಣಂ ಸೋಢುಂ ಕಿಂ ಪುನರ್ಮಾನವಾ ಯುಧಿ ॥ ೨೧ ॥

'ದೇವ ದಾನವ ಗಂಧರ್ವ ಯಕ್ಷ ಪಕ್ಷಿ ನಾಗರು ಯಾರೂ ಯುದ್ಧದಲ್ಲಿ ರಾವಣನ ಆಕ್ರಮಣವನ್ನು ಸಹಿಸಲು ಶಕ್ತರಲ್ಲ. ಇನ್ನು ಮಾನವರ ಬಗ್ಗೆ ಏನು ಹೇಳಲಿ?

ಸ ಹಿ ವೀರ್ಯವತಾಂ ವಿರ್ಯಮಾದತ್ತೇ ಯುಧಿ ರಾಕ್ಷಸಃ ।
ತೇನ ಚಾಹಂ ನ ಶಕ್ನೋಮಿ ಸಂಯೋದ್ಧುಂ ತಸ್ಯ ವಾ ಬಲೈಃ ॥
ಸಬಲೋ ವಾ ಮುನಿಶ್ರೇಷ್ಠ ಸಹಿತೋ ವಾ ಮಮಾತ್ಮಜೈಃ ॥ ೨೨ ॥

'ಅವನು ವೀರರ ವೀರ್ಯವನ್ನೇ ನಾಶ ಮಾಡುತ್ತಾನೆ! ಅಂಥ ರಾಕ್ಷಸನೊಂದಿಗೆ ಯುದ್ಧ ಮಾಡದಿದ್ದರೆ ಏನೂ ತಪ್ಪಾಗುವುದಿಲ್ಲ. ಅದರಿಂದ, ಅವನೊಂದಿಗೆ ಅಥವಾ ಅವನ ಸೈನ್ಯದೊಂದಿಗೆ, ನಾನು ನನ್ನ ಸೈನ್ಯದೊಂದಿಗಾಗಲಿ ನನ್ನ ಪುತ್ರರೊಂದಿಗಾಗಲಿ ಕೂಡಿ ಯುದ್ಧ ಮಾಡಲಾರೆ.

ಕಥಮಪ್ಯಮರಪ್ರಖ್ಯಂ ಸಂಗ್ರಾಮಾಣಾಮಕೋವಿದಮ್ ।
ಬಾಲಂ ಮೇ ತನಯಂ ಬ್ರಹ್ಮನ್ನೈವ ದಾಸ್ಯಾಮಿ ಪುತ್ರಕಮ್ ॥ ೨೩ ॥

ಪಾಪ, ದೇವರಂತೆ ಕಾಣುವ, ಯುದ್ಧಗಳಲ್ಲಿ ಹೆಚ್ಚು ಅನುಭವವಿಲ್ಲದ ಇನ್ನೂ ಸಣ್ಣ ಮಗುವಾಗಿರುವ ನನ್ನ ಮಗನನ್ನು, ಮುನಿಯೆ, ನಾನು ಸರ್ವಥಾ ನಿನಗೆ ಬಿಟ್ಟುಕೊಡಲಾರೆ.

ಅಥ ಕಾಲೋಪಮೌ ಯುದ್ಧೇ ಸುತೌ ಸುಂದೋಪಸುಂದಯೋಃ ।
ಯಜ್ಞವಿಘ್ನಕರೌ ತೌ ತೇ ನೈವ ದಾಸ್ಯಾಮಿ ಪುತ್ರಕಮ್ ॥ ೨೪ ॥

ಇನ್ನು, ಯಜ್ಞವಿಘ್ನಕಾರಿಗಳಾಗಿರುವವರು ಯುದ್ಧದಲ್ಲಿ ಕಾಲ ಯಮನಂತಿರುವ ಸುಂದೋಪಸುಂದರ ಮಕ್ಕಳಾದ ಆ ಮಾರೀಚ ಮತ್ತು ಸುಬಾಹುಗಳು ಎಂದಮೇಲೆ, ಸರ್ವಥಾ ನನ್ನ ಮಗನನ್ನು ಕೊಡಲಾರೆ, ಸುಂದನ ಮಗ ಮಾರೀಚ, ಉಪಸುಂದನ ಮಗನು ಸುಬಾಹು. ಇಬ್ಬರೂ ತಾಟಕೆಯ ಮಕ್ಕಳು.

ತೌ ಹಿ ಯಕ್ಷಸ್ಯ ಕನ್ಯಾಯಾಂ ಜಾತೌ ದೈತ್ಯಕುಲೋದ್ವಹೌ ।
ಮಾರೀಚಶ್ಚ ಸುಬಾಹುಶ್ಚ ವೀರ್ಯವಂತೌ ಸುಶಿಕ್ಷಿತೌ ॥ ೨೫ ॥

ಸುಕೇತು ಎಂಬ ಯಕ್ಷನ ಮಗಳು ತಾಟಕೆ. ಅವಳಲ್ಲಿ ಸುಂದ ಉಪಸುಂದ ರಾಕ್ಷಸರಿಂದ ಹುಟ್ಟಿದವರು ಈ ಮಾರೀಚ ಸುಬಾಹು ರಾಕ್ಷಸರು ದೈತ್ಯಕುಲೋದ್ಭವರು. ಯಕ್ಷರಾಗಿ ಜನಿಸಿ ಅಗಸ್ತ್ಯಶಾಪದಿಂದ ರಾಕ್ಷಸರಾದವರು.

ತಯೋರನ್ಯತರೇಣಾಹಂ ಯೋದ್ಧಾ ಸ್ಯಾಂ ಸಸುಹೃದ್ಗಣಃ ।
ಅನ್ಯಥಾ ತ್ವನುನೇಷ್ಯಾಮಿ ಭವಂತಂ ಸಹಬಾಂಧವಃ ॥ ೨೬ ॥

ಅವರಿಬ್ಬರೊಡನೆ ನಾನು ನನ್ನವರೊಂದಿಗೆ ಕೂಡಿ ಯುದ್ಧ ಮಾಡುವೆನು. ಅದಾಗದಿದ್ದರೆ, ನಾನು ನನ್ನ ಬಂಧುಗಳೊಂದಿಗೆ ನಿನ್ನನ್ನು ರಾಮನನ್ನೊಯ್ಯದಿರಲು ಒತ್ತಾಯ ಪಡಿಸುವೆನು.

ಇತಿ ನರಪತಿಜಲ್ಪನಾದ್ದ್ವಿಜೇಂದ್ರಂ
ಕುಶಿಕಸುತಂ ಸುಮಹಾನ್ವಿವೇಶ ಮನ್ಯುಃ ।
ಸುಹುತ ಇವ ಮಖೇಽಗ್ನಿರಾಜ್ಯಸಿಕ್ತಃ
ಸಮಭವದುಜ್ಜ್ವಲಿತೋ ಮಹರ್ಷಿವಹ್ನಿಃ ॥ ೨೭ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ವಿಂಶಃ ಸರ್ಗಃ ॥ ೨೦ ॥

ಹೀಗೆ ದಶರಥನಾಡಿದ ಮಾತಿನಿಂದ ಮಹಾಮುನಿ ವಿಶ್ವಾಮಿತ್ರನಲ್ಲಿ ಮಹಾಕೋಪ ಆವೇಶಗೊಂಡಿತು. ಯಜ್ಞದಲ್ಲಿ ಅಗ್ನಿಗೆ ಸಮಿತ್ತನ್ನು ಹೋಮಿಸಿ ತುಪ್ಪವನ್ನು ಸುರಿದಂತಾಯಿತು. ಮಹರ್ಷಿ ರೂಪದ ಅಗ್ನಿ ಜ್ವಲಿಸಿತು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಇಪ್ಪತ್ತನೇ ಸರ್ಗ ಮುಗಿಯಿತು.

ಏಕವಿಂಶಃ ಸರ್ಗಃ

ತಚ್ಛ್ರುತ್ವಾ ವಚನಂ ತಸ್ಯ ಸ್ನೇಹಪರ್ಯಾಕುಲಾಕ್ಷರಮ್ ।
ಸಮನ್ಯುಃ ಕೌಶಿಕೋ ವಾಕ್ಯಂ ಪ್ರತ್ಯುವಾಚ ಮಹೀಪತಿಮ್ ॥ ೧ ॥

ರಾಜಾ ದಶರಥನು ಆಡುವಾಗ ಪುತ್ರಸ್ನೇಹದಿಂದ ಅವನ ಕಂಠ ಬಿಗಿದು ಬಂದಿದ್ದರಿಂದ ಮಾತು ಅಸ್ಪಷ್ಟವಾಗಿತ್ತು. ಕುಪಿತನಾದ ವಿಶ್ವಾಮಿತ್ರ ರಾಜನಿಗೆ ಪ್ರತ್ಯುತ್ತರ ನೀಡಿದ.

ಪೂರ್ವಮರ್ಥಂ ಪ್ರತಿಶ್ರುತ್ಯ ಪ್ರತಿಜ್ಞಾಂ ಹಾತುಮಿಚ್ಛಸಿ ।
ರಾಘವಾಣಾಮಯುಕ್ತೋಽಯಂ ಕುಲಸ್ಯಾಸ್ಯ ವಿಪರ್ಯಯಃ ॥ ೨ ॥

ಮೊದಲಿಗೆ ನನ್ನ ಅಭೀಷ್ಟವನ್ನು ಈಡೇರಿಸುವುದಾಗಿ ಪ್ರತಿಜ್ಞೆ ಮಾಡಿ ಅದನ್ನು ಈಗ ಬಿಡಲು ಇಚ್ಛಿಸುವೆಯ? ರಘುಕುಲದವರಿಗೆ ಇದು ಯುಕ್ತವಲ್ಲ. ಕುಲಕ್ಕೆ ಇದು ನಾಶಕರ.

ಯದೀದಂ ತೇ ಕ್ಷಮಂ ರಾಜನ್ ಗಮಿಷ್ಯಾಮಿ ಯಥಾಗತಮ್ ।
ಮಿಥ್ಯಾಪ್ರತಿಜ್ಞಃ ಕಾಕುತ್ಸ್ಥ ಸುಖೀ ಭವ ಸಬಾಂಧವಃ ॥ ೩ ॥

ಕುಲನಾಶವಾಗುವುದು ನಿನಗೆ ಸಹ್ಯವೇ ಆದರೆ, ರಾಜನೆ, ನಾನು ಬಂದಂತೇ ಹಿಂದೆ ಹೋಗುವೆನು. ಕಾಕುತ್ಸ್ಥವಂಶದವನೆ, ಕೊಟ್ಟ ಮಾತಿಗೆ ತಪ್ಪುವ ನೀನು ನಿನ್ನ ಬಂಧುಗಳೊಂದಿಗೆ ಸುಖವಾಗಿರು.

ತಸ್ಯ ರೋಷಪರೀತಸ್ಯ ವಿಶ್ವಾಮಿತ್ರಸ್ಯ ಧೀಮತಃ ।
ಚಚಾಲ ವಸುಧಾ ಕೃತ್ಸ್ನಾ ವಿವೇಶ ಚ ಭಯಂ ಸುರಾನ್ ॥ ೪ ॥

ಧೀಮಂತನಾದ ವಿಶ್ವಾಮಿತ್ರ ಕೋಪಾವೇಶಗೊಂಡಾಗ ಇಡಿ ಭೂಮಿ ಕಂಪಿಸಿತು. ದೇವತೆಗಳು ಭಯಭೀತರಾದರು.

ತ್ರಸ್ತರೂಪಂ ಸ ವಿಜ್ಞಾಯ ಜಗತ್ಸರ್ವಂ ಮಹಾನೃಷಿಃ ।
ನೃಪತಿಂ ಸುವ್ರತೋ ಧೀರೋ ವಸಿಷ್ಠೋ ವಾಕ್ಯಮಬ್ರವೀತ್ ॥ ೫ ॥

ಎಲ್ಲ ಜಗತ್ತು ಬಲು ಭೀತಿಗೊಂಡಿದ್ದನ್ನು ಕಂಡು ಸುವ್ರತ, ಧೀರನಾದ ವಸಿಷ್ಠ ಮಹರ್ಷಿ ರಾಜನಿಗೆ ನುಡಿದ.

ಇಕ್ಷ್ವಾಕೂಣಾಂ ಕುಲೇ ಜಾತಃ ಸಾಕ್ಷಾದ್ಧರ್ಮ ಇವಾಪರಃ ।
ಧೃತಿಮಾನ್ವ್ಯವಸಃ ಶ್ರೀಮಾನ್ನ ಧರ್ಮಂ ಹಾತುಮರ್ಹಸಿ ॥ ೬ ॥

ಇಕ್ಷ್ವಾಕುವಂಶದಲ್ಲಿ ಸಾಕ್ಷಾತ್ ಇನ್ನೊಬ್ಬ ಧರ್ಮಪುರುಷನಂತೆ ಜನಿಸಿದವನು ಧೈರ್ಯವಂತ ಶ್ರೀಮಂತ ವ್ರತನಿಷ್ಠನಾದ ನೀನು ಧರ್ಮವನ್ನು ತೊರೆಯಬೇಡ.

ತ್ರಿಷು ಲೋಕೇಷು ವಿಖ್ಯಾತೋ ಧರ್ಮಾತ್ಮಾ ಇತಿ ರಾಘವಃ
ಸ್ವಧರ್ಮಂ ಪ್ರತಿಪದ್ಯಸ್ವ ನಾಧರ್ಮಂ ವೋಢುಮರ್ಹಸಿ ॥ ೭ ॥

ಮೂಲೋಕದಲ್ಲಿ ಧರ್ಮಾತ್ಮನೆಂದು ವಿಖ್ಯಾತನಾದ ರಘುವಂಶದವನು ನೀನು ನಿನ್ನ ಧರ್ಮವನ್ನು ಪಾಲಿಸು, ಅಧರ್ಮ ಮಾಡಬೇಡ.

ಸಂಶ್ರುತ್ಯೈವಂ ಕರಿಷ್ಯಾಮೀತ್ಯಕುರ್ವಾಣಸ್ಯ ರಾಘವ ।
ಇಷ್ಟಾಪೂರ್ತವಧೋ ಭೂಯಾತ್ತಸ್ಮಾದ್ರಾಮಂ ವಿಸರ್ಜಯ ॥ ೮ ॥

ರಘುವಂಶಜನೆ, ಹೀಗೆ ಮಾಡುವೆನೆಂದು ಮುನಿಗೆ ಮಾತು ಕೊಟ್ಟಮೇಲೆ ಅದನ್ನು ಮಾಡದಿದ್ದರೆ ನಿನ್ನ ಅಶ್ವಮೇಧಾದಿ ಯಾಗ, ಕೆರೆ ಬಾವಿ ಕಟ್ಟಿಸುವಂತಹ ಜನೋಪಕಾರ ಎಲ್ಲವೂ ನಿರರ್ಥಕವಾಗುವುವು. ಅದರಿಂದ ನೀನು ಕೊಟ್ಟಮಾತಿನಂತೆ ರಾಮನನ್ನು ಮುನಿಯ ವಶಕ್ಕೆ ಒಪ್ಪಿಸು.

ಕೃತಾಸ್ತ್ರಮಕೃತಾಸ್ತ್ರಂ ವಾ ನೈನಂ ಶಕ್ಷ್ಯಂತಿ ರಾಕ್ಷಸಾಃ ।
ಗುಪ್ತಂ ಕುಶಿಕಪುತ್ರೇಣ ಜ್ವಲನೇನಾಮೃತಂ ಯಥಾ ॥ ೯ ॥

ರಾಮ ಅಸ್ತ್ರಗಳ ವಿಷಯದಲ್ಲಿ ತಜ್ಞನಾಗಲಿ ಅಜ್ಞನಾಗಲಿ ಅವನನ್ನು ರಾಕ್ಷಸರೇನೂ ಮಾಡಲಾರರು. ಅಮೃತವನ್ನು ಅಗ್ನಿಚಕ್ರವು ರಕ್ಷಿಸುವಂತೆ ರಾಮನನ್ನು ವಿಶ್ವಾಮಿತ್ರನು ರಕ್ಷಿಸುವನು.

ಏಷ ವಿಗ್ರಹವಾನ್ ಧರ್ಮ ಏಷ ವೀರ್ಯವತಾಂ ವರಃ ।
ಏಷ ಬುದ್ಧ್ಯಧಿಕೋ ಲೋಕೇ ತಪಸಶ್ಚ ಪರಾಯಣಮ್ ॥ ೧೦ ॥

ರಾಮನೆಂದರೆ, ಸಾಕ್ಷಾತ್ ಧರ್ಮವೇ ಮೂರ್ತಿಮತ್ತಾಗಿದೆ. ವೀರ್ಯಶಾಲಿಗಳಲ್ಲಿ ಶ್ರೇಷ್ಠ, ಬುದ್ಧಿಯಲ್ಲಿಯೂ ಲೋಕದಲ್ಲಿ ಸರ್ವಶ್ರೇಷ್ಠ. ಎಲ್ಲ ತಪಸ್ಸುಗಳಿಗೂ ಆಶ್ರಯ ಅವನೆ.

ಏಷೋಽಸ್ತ್ರಾನ್ ವಿವಿಧಾನ್ ವೇತ್ತಿ ತ್ರೈಲೋಕ್ಯೇ ಸಚರಾಚರೇ ।
ನೈನಮನ್ಯಃ ಪುಮಾನ್ವೇತ್ತಿ ನ ಚ ವೇತ್ಸ್ಯಂತಿ ಕೇಚನ ॥ ೧೧ ॥

ರಾಮ ವಿವಿಧ ಅಸ್ತ್ರಗಳನ್ನು ತಿಳಿದಿದ್ದಾನೆ. ಅವುಗಳನ್ನು ಅವನಂತೆ ಚರಾಚರ-ಗಳಿಂದ ತುಂಬಿದ ಮೂಲೋಕದಲ್ಲಿ ಬೇರೆ ಯಾರೊಬ್ಬನೂ ತಿಳಿದವನಿಲ್ಲ. ಮುಂದೆಯೂ ಯಾರೂ ತಿಳಿಯುವುದಿಲ್ಲ.

ನ ದೇವಾ ಋಷಯಃ ಕೇಚಿನ್ನಾಸುರಾ ನ ಚ ರಾಕ್ಷಸಾಃ ।
ಗಂಧರ್ವಯಕ್ಷಪ್ರವರಾಃ ಸಕಿನ್ನರಮಹೋರಾಗಾಃ ॥ ೧೨ ॥

ದೇವತೆಗಳು ಋಷಿಗಳು ಅಸುರರು ರಾಕ್ಷಸರು ಗಂಧರ್ವರು ಯಕ್ಷರು ಕಿನ್ನರರು ಮಹಾ ನಾಗರು ಯಾರೂ ರಾಮನಂತೆ ಸರ್ವಾಸ್ತ್ರಗಳನ್ನು ಯಾರೂ ತಿಳಿದವರಿಲ್ಲ, ಮುಂದೆಯೂ ಯಾರೂ ತಿಳಿಯುವುದೂ ಇಲ್ಲ.

ಸರ್ವಾಸ್ತ್ರಾಣಿ ಕೃಶಾಶ್ವಸ್ಯ ಪುತ್ರಾಃ ಪರಮಧಾರ್ಮಿಕಾಃ ।
ಕೌಶಿಕಾಯ ಪುರಾ ದತ್ತಾ ಯದಾ ರಾಜ್ಯಂ ಪ್ರಶಾಸತಿ ॥ ೧೩ ॥

ಎಲ್ಲ ಅಸ್ತ್ರ ದೇವತೆಗಳೂ ಕೃಶಾಶ್ವನೆಂಬ ಪ್ರಜಾಪತಿಯ ಪುತ್ರರು. ಪರಮ ಧಾರ್ಮಿಕರು ಅಧರ್ಮಿಗಳನ್ನು ಸುಡುವವರು ಅವರೆಲ್ಲರನ್ನೂ ಶಿವನು ವಿಶ್ವಾಮಿತ್ರನಿಗೆ, ಅವನು ರಾಜರ್ಷಿಯಾಗಿ ಆಳುತ್ತಿದ್ದಾಗ ಉಪದೇಶಿಸಿದ್ದನು.

ತೇಽಪಿ ಪುತ್ರಾ ಕೃಶಾಶ್ವಸ್ಯ ಪ್ರಜಾಪತಿಸುತಾಸುತಾಃ ।
ನೈಕರೂಪಾ ಮಹಾವೀರ್ಯಾ ದೀಪ್ತಿಮಂತೋ ಜಯಾವಹಾಃ ॥೧೪॥

ಆ ಕೃಶಾಶ್ವ ಪುತ್ರರಾದ ಅಸ್ತ್ರದೇವತೆಳು ದಕ್ಷ ಪ್ರಜಾಪತಿಯ ಇಬ್ಬರು ಕನ್ಯೆಯರಲ್ಲಿ ಜನಿಸಿದವರು. ನಾನಾ ರೂಪಿಗಳು ಮಹಾ ವೀರ್ಯಪರಾಕ್ರಮ ದೀಪ್ತಿ ಉಳ್ಳವರು ಶತ್ರುಜಯ ತಂದುಕೊಡುವವರು.

ಜಯಾ ಚ ಸುಪ್ರಭಾ ಚೈವ ದಕ್ಷಕನ್ಯೇ ಸುಮಧ್ಯಮೇ ।
ತೇ ಸುವಾತೇಽಸ್ತ್ರಶಸ್ತ್ರಾಣಿ ಶತಂ ಪರಮಭಾಸ್ವರಮ್ ॥ ೧೫ ॥

ಜಯಾ ಮತ್ತು ಸುಪ್ರಭಾ –ಇವರೇ ಆ ದಕ್ಷಕನ್ಯೆಯರಾದ ಸುಂದರ ಸ್ತ್ರೀಯರು. ಆ ಅಸ್ತ್ರಗಳನ್ನು ಪ್ರಯೋಗ ಮಾಡಿದಾಗ ಅವುಗಳಿಂದ ಒಮ್ಮೇಲೆ ನೂರಾರು ಅಸ್ತ್ರಶಸ್ತ್ರಗಳು ಪರಮ ದೀಪ್ತಿಯಿಂದ ಹೊಳೆಯುತ್ತ ಪ್ರಾದುರ್ಭವಿಸುವವು.

ಪಂಚಾಶತಂ ಸುತಾಂಲ್ಲೇಭೇ ಜಯಾ ನಾಮ ಪರಾನ್ಪರಾ ।
ವಧಾಯಾಸುರಸೈನ್ಯಾನಾಮಮೇಯಾನ್ಕಾಮರೂಪಿಣಃ ॥ ೧೬ ॥

ಜಯಾದೇವಿ ಹಿಂದೆ ಅಸುರ ಸೈನ್ಯ ವಧೆಗಾಗಿ ಕಾಮರೂಪಿಗಳಾದ ಅಪರಿಮೇಯರಾದ 'ಪರ'ರೆಂಬ ಐವತ್ತು ಮಕ್ಕಳನ್ನು ಪಡೆದಳು.

ಸುಪ್ರಭಾऽಜನಯಚ್ಚಾಪಿ ಪುತ್ರಾನ್ಪಂಚಾಶತಂ ಪುನಃ ।
ಸಂಹಾರಾನ್ನಾಮ ದುರ್ಧರ್ಷಾನ್ದುರಾಕ್ರಾಮಾನ್ಬಲೀಯಸಃ ॥ ೧೭ ॥

ಸುಪ್ರಭಾದೇವಿಯೂ ಹಿಂದೆ 'ಸಂಹಾರ'ರೆಂಬ ಐವತ್ತು ಮಂದಿ, ಶತ್ರುಗಳ ಧರ್ಷಣ ಆಕ್ರಮಣಗಳಿಗೆ ಬಗ್ಗದ ಬಲಿಷ್ಠರಾದ ಮಕ್ಕಳನ್ನು ಪಡೆದಳು.

ತಾನಿ ಚಾಸ್ತ್ರಾಣಿ ವೇತ್ತೈಷ ಯಥಾವತ್ಕುಶಿಕಾತ್ಮಜಃ ।
ಅಪೂರ್ವಾಣಾಂ ಚ ಜನನೇ ಶಕ್ತೋ ಭೂಯಃ ಸ ಧರ್ಮವಿತ್ ॥೧೮॥

ಆ ಅಸ್ತ್ರಗಳನ್ನು ಈ ವಿಶ್ವಾಮಿತ್ರನು ಸರಿಯಾಗಿ ತಿಳಿದಿದ್ದಾನೆ. ಧರ್ಮಜ್ಞನಾದ ಈತ ಪುನಃ ಅಪೂರ್ವವಾದ ಬೇರೆ ಅಸ್ತ್ರಗಳನ್ನೂ ಉತ್ಪಾದಿಸಲು ಶಕ್ತನಾಗಿದ್ದಾನೆ.

ತೇನಾಸ್ಯ ಮುನಿಮುಖ್ಯಸ್ಯ ಸರ್ವಜ್ಞಸ್ಯ ಮಹಾತ್ಮನಃ ।
ನ ಕಿಂಚಿದಪ್ಯವಿದಿತಂ ಭೂತಂ ಭವ್ಯಂ ಚ ರಾಘವ ॥ ೧೯ ॥

ಅದರಿಂದ, ರಾಜನೆ, ಸರ್ವಜ್ಞನೂ ಮಹಾತ್ಮನೂ ಆದ ಈ ಮುನಿಶ್ರೇಷ್ಠನಿಗೆ ತಿಳಿಯದಿದ್ದ ಭೂತ ಭವಿಷ್ಯವೇನೂ ಇಲ್ಲ.

ಏವಂವೀರ್ಯೋ ಮಹಾತೇಜಾ ವಿಶ್ವಾಮಿತ್ರೋ ಮಹಾಯಶಾಃ ।
ನ ರಾಮಗಮನೇ ರಾಜನ್ಸಂಶಯಂ ಗಂತುಮರ್ಹಸಿ ॥ ೨೦ ॥

ಮಹಾಕೀರ್ತಿಶಾಲಿ ವಿಶ್ವಾಮಿತ್ರನು ಇಂಥ ವೀರ್ಯ ಪರಾಕ್ರಮ ಉಳ್ಳವನು. ರಾಜನೆ, ರಾಮನು ಇವನೊಂದಿಗೆ ಯಜ್ಞ ರಕ್ಷಣೆಗಾಗಿ ಹೋಗುವ ವಿಷಯದಲ್ಲಿ ಸಂಶಯ ಪಡಬೇಡ.

ತೇಷಾಂ ನಿಗ್ರಹಣೇ ಶಕ್ತಃ ಸ್ವಯಂ ಚ ಕುಶಿಕಾತ್ಮಜಃ ।
ಧನುರ್ಭೃತೋऽಸ್ಯ ಶಕ್ರಸ್ತು ಬಿಭೀಯಾತ್ಸಮರೇ ವಿಭೋ ॥
ತವ ಪುತ್ರಹಿತಾರ್ಥಾಯ ತ್ವಾಮುಪೇತ್ಯಾಭಿಯಾಚತೇ ॥ ೨೧ ॥

ಆ ರಾಕ್ಷಸರ ನಿಗ್ರಹಕ್ಕೆ ವಿಶ್ವಾಮಿತ್ರನು ಸ್ವತಃ ಶಕ್ತ. ಅವನು ಯುದ್ಧದಲ್ಲಿ ಬಿಲ್ಲು ಹಿಡಿದು ನಿಂತರೆ ದೇವೇಂದ್ರನೂ ಭಯ ಪಡುತ್ತಾನೆ. ನಿನ್ನ ಪುತ್ರನ ಹಿತಕ್ಕಾಗಿ ನಿನ್ನ ಬಳಿ ಬಂದು ಯಾಚನೆ ಮಾಡುತ್ತಿದ್ದಾನೆ.

ಇತಿ ಮುನಿವಚನಾತ್ಪ್ರಸನ್ನಚಿತ್ತೋ
ರಘುವೃಷಭಶ್ಚ ಮುಮೋದ ಭಾಸ್ವರಾಂಗಃ ।
ಗಮನಮಭಿರುರೋಚ ರಾಘವಸ್ಯ
ಪ್ರಥಿತಯಶಾಃ ಕುಶಿಕಾತ್ಮಜಾಯ ಬುದ್ಧ್ಯಾ ॥ ೨೨ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಏಕವಿಂಶಃ ಸರ್ಗಃ ॥ ೨೧ ॥

ಹೀಗೆ ವಸಿಷ್ಠ ಮುನಿಯಾಡಿದ ಮಾತಿನಿಂದ ದಶರಥನು ಪ್ರಸನ್ನಚಿತ್ತನಾಗಿ ಭಾಸುರ ಕಾಯನಾಗಿ ಆನಂದಿಸಿದ. ಪ್ರಖ್ಯಾತ ಕೀರ್ತಿಯವನಾದ ರಾಜ ಬುದ್ಧಿ-ಪೂರ್ವಕವಾಗಿ ವಿಶ್ವಾಮಿತ್ರನ ಸಂತೋಷಕ್ಕಾಗಿ ರಾಮನನ್ನು ಕಳಿಸಲು ಒಪ್ಪಿಕೊಂಡ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಇಪ್ಪತ್ತೊಂದನೇ ಸರ್ಗ ಮುಗಿಯಿತು.

ದ್ವಾವಿಂಶಃ ಸರ್ಗಃ

ತಥಾ ವಸಿಷ್ಠೇ ಬ್ರುವತಿ ರಾಜಾ ದಶರಥಃ ಸುತಮ್ ।
ಪ್ರಹೃಷ್ಟವದನೋ ರಾಮಮಾಜುಹಾವ ಸಲಕ್ಷ್ಮಣಮ್ ॥ ೧ ॥

ವಸಿಷ್ಠಮುನಿ ಹೀಗೆ ಹೇಳಿದಾಗ ರಾಜಾ ದಶರಥನು ಪ್ರಸನ್ನ ಮುಖದಿಂದ ಪುತ್ರನಾದ ರಾಮನನ್ನೂ ಲಕ್ಷ್ಮಣನನ್ನೂ ಬಳಿಗೆ ಕರೆಸಿಕೊಂಡ.

ಕೃತಸ್ವಸ್ತ್ಯಯನಂ ಮಾತ್ರಾ ಪಿತ್ರಾ ದಶರಥೇನ ಚ ।
ಪುರೋಧಸಾ ವಸಿಷ್ಠೇನ ಮಂಗಲೈರಭಿಮಂತ್ರಿತಮ್ ॥ ೨ ॥

ಮಾತೆ ಕೌಸಲ್ಯೆ ತಂದೆ ದಶರಥರಿಬ್ಬರೂ ರಾಮನಿಗೆ ಮಂಗಳಾಶಾಸನ ಮಾಡಿದರು, ಪುರೋಹಿತರಾದ ವಸಿಷ್ಠರು ಮಂಗಳಾಶೀರ್ವಾದ ಮಂತ್ರಪೂರ್ವಕ ಸ್ಪರ್ಶ ಮಾಡಿದರು.

ಸ ಪುತ್ರಂ ಮೂರ್ಧ್ನ್ಯುಪಾಘ್ರಾಯ ರಾಜಾ ದಶರಥಃ ಪ್ರಿಯಮ್ ।
ದದೌ ಕುಶಿಕಪುತ್ರಾಯ ಸುಪ್ರೀತೇನಾಂತರಾತ್ಮನಾ ॥ ೩ ॥

ಬಳಿಕ ಪ್ರಿಯಪುತ್ರ ರಾಮನನ್ನು ರಾಜಾ ದಶರಥನು ನೆತ್ತಿಯಲ್ಲಿ ಆಘ್ರಾಣಿಸಿ ಸಂತುಷ್ಟವಾದ ಮನಸಿನಿಂದ ಅವನನ್ನು ವಿಶ್ವಾಮಿತ್ರನಿಗೆ ಬಿಟ್ಟುಕೊಟ್ಟನು.

ತತೋ ಭೂಯೋ ವಸಿಷ್ಠೇನ ಮಂಗಲೈರಭಿಮಂತ್ರಿತಮ್ ।
ಆದಾಯ ವಿಪ್ರೋ ಹೃಷ್ಟೋಽಭೂತ್ ತ್ರಿದಶಾ ವಿಜ್ವರಾ ಭವನ್॥ ೪ ॥

ಪುನಃ ವಸಿಷ್ಠನು ಸ್ವಸ್ತಿ ಮಂತ್ರಗಳಿಂದ ಅಭಿಮಂತ್ರಿಸಿ ರಾಮನನ್ನು ವಿಶ್ವಾಮಿತ್ರನ ವಶಕ್ಕೆ ಒಪ್ಪಿಸಿದನು. ವಿಶ್ವಾಮಿತ್ರನು ರಾಮನನ್ನು ಸ್ವೀಕರಿಸಿ ಸಂತುಷ್ಟನಾದನು. ಇನ್ನು ಯಜ್ಞರಕ್ಷಣೆಯಾಗುವುದೆಂದು ದೇವತೆಗಳು ಸಮಾಧಾನ ಪಟ್ಟರು.

ತತೋ ವಾಯುಃ ಸುಖಸ್ಪರ್ಶೋ ವಿರಜಸ್ಕೋ ವವೌ ತದಾ ।
ವಿಶ್ವಾಮಿತ್ರಗತಂ ರಾಮಂ ದೃಷ್ಟ್ವಾ ರಾಜೀವಲೋಚನಮ್ ॥ ೫ ॥

ಕಮಲಾಕ್ಷನಾದ ರಾಮ ವಿಶ್ವಾಮಿತ್ರನ ಜೊತೆಗೂಡಿದ್ದನ್ನು ಕಂಡು ವಾಯು-ದೇವನು ನಿರ್ಮಲವಾಗಿ ಮೈಗೆ ಸುಖಸ್ಪರ್ಶ ಉಂಟುಮಾಡುತ್ತ ಬೀಸಿದನು.

ಪುಷ್ಪವೃಷ್ಟಿರ್ಮಹತ್ಯಾಸೀದ್ದೇವದುಂದುಭಿನಿಃಸ್ವನೈಃ ।
ಶಂಖದುಂದುಭಿನಿರ್ಘೋಷಃ ಪ್ರಯಾತೇ ತು ಮಹಾತ್ಮನಿ ॥ ೬ ॥

ಮಹಾತ್ಮನಾದ ರಾಮ ಪ್ರಯಾಣಕ್ಕೆ ಹೊರಟನೆಂದು ಒಳ್ಳೆಯ ಹೂಮಳೆ ಸುರಿಯಿತು. ದೇವತೆಗಳ ದುಂದುಭಿ ಮೊಳಗಿತು. ನಗರದ ಪ್ರಜೆಗಳೂ ಶಂಖನಾದದೊಂದಿಗೆ ದುಂದುಭಿಯನ್ನು ಮೊಳಗಿಸಿದರು.

ವಿಶ್ವಾಮಿತ್ರೋ ಯಯಾವಗ್ರೇ ತತೋ ರಾಮೋ ಮಹಾಯಶಾಃ ।
ಕಾಕಪಕ್ಷಧರೋ ಧನ್ವೀ ತಂ ಚ ಸೌಮಿತ್ರಿರನ್ವಗಾತ್ ॥ ೭ ॥

ವಿಶ್ವಾಮಿತ್ರ ಮುನಿ ಮುಂದಿನಿಂದ ನಡೆದನು. ಬಳಿಕ ಮಹಾಕೀರ್ತಿಶಾಲಿ ಕಾಕಪಕ್ಷಧರ ಧನುರ್ಧಾರಿಯಾದ ರಾಮ ನಡೆದ. ಅವರನ್ನು ಲಕ್ಷ್ಮಣ ಹಿಂಬಾಲಿಸಿದ. ಅವನೂ ಕಾಕಪಕ್ಷಧರ, ಧನುರ್ಧಾರಿ.

ಕಲಾಪಿನೌ ಧನುಷ್ಪಾಣೀ ಶೋಭಯಾನೌ ದಿಶೋ ದಶ ।
ವಿಶ್ವಾಮಿತ್ರಂ ಮಹಾತ್ಮಾನಂ ತ್ರಿಶೀರ್ಷಾವಿವ ಪನ್ನಗೌ ॥
ಅನುಜಗ್ಮತುರಕ್ಷುದ್ರೌ ಪಿತಾಮಹಮಿವಾಶ್ವಿನೌ ॥ ೮ ॥

ಕೈಯಲ್ಲಿ ಬಿಲ್ಲು ಹಿಡಿದು ಹೆಗಲಲ್ಲಿ ಎರಡು ಬತ್ತಳಿಕೆ ಹೊತ್ತು ಮಹಾತ್ಮರಾದ ರಾಮಲಕ್ಷ್ಮಣರು ಮೂರು ಹೆಡೆಗಳ ಸರ್ಪಗಳಂತೆ ಹತ್ತುದಿಕ್ಕುಗಳನ್ನೂ ಶೋಭೆಗೊಳಿಸುತ್ತ ಮಹಾತ್ಮನಾದ ವಿಶ್ವಾಮಿತ್ರನನ್ನು ಹಿಂಬಾಲಿಸಿದರು. ಪಿತಾಮಹನನ್ನು ಅಶ್ವಿನೀಕುಮಾರರು ಹಿಂಬಾಲಿಸುವಂತೆ.

ತದಾ ಕುಶಿಕಪುತ್ರಂ ತು ಧನುಷ್ಪಾಣೀ ಸ್ವಲಂಕೃತೌ ।
ಬದ್ಧಗೋಧಾಂಗುಲಿತ್ರಾಣೌ ಖಡ್ಗವಂತೌ ಮಹಾದ್ಯುತೀ ॥ ೯ ॥

ಕುಮಾರೌ ಚಾರುವಪುಷೌ ಭ್ರಾತರೌ ರಾಮಲಕ್ಷ್ಮಣೌ ।
ಅನುಯಾತೌ ಶ್ರಿಯಾ ದೀಪ್ತೌ ಶೋಭಯೇತಾಮನಿಂದಿತೌ ॥
ಸ್ಥಾಣುಂ ದೇವಮಿವಾಚಿಂತ್ಯಂ ಕುಮಾರಾವಿವ ಪಾವಕೇ ॥ ೧೦ ॥

ವಿಶ್ವಾಮಿತ್ರರು ಮುಂದಿನಿಂದ ನಡೆಯುವಾಗ ಉಡುಚರ್ಮದ ಬೆರಳು ಕಾಪು ಕಟ್ಟಿಕೊಂಡು ಬಿಲ್ಲು ಹಿಡಿದು ನಿರ್ದೋಷರಾದ ಕುಮಾರ ರಾಮಲಕ್ಷ್ಮಣಸೋದರರು ಹಿಂಬಾಲಿಸಿದರು. ಸುಂದರ ಶರೀರ ಉಳ್ಳವರು ಚೆನ್ನಾಗಿ ಅಲಂಕೃತರೂ ಆಗಿದ್ದರು. ಖಡ್ಗ ಧರಿಸಿದ್ದರು. ಕಾಂತಿಯಿಂದ ಬೆಳಗುತ್ತಿದ್ದರು. ಅಚಿಂತ್ಯನಾದ ರುದ್ರದೇವನನ್ನು

ಅಗ್ನಿಪುತ್ರರಾದ ಸ್ಕಂದ ವಿಶಾಖರು ಹಿಂಬಾಲಿಸಿದಂತೆ ವಿಶ್ವಾಮಿತ್ರನನ್ನು ರಾಮ-ಲಕ್ಷ್ಮಣರು ಹಿಂಬಾಲಿಸಿ ಶೋಭಿಸಿದರು.

ಅಧ್ಯರ್ಧಯೋಜನಂ ಗತ್ವಾ ಸರಯ್ವಾ ದಕ್ಷಿಣೇ ತಟೇ ।
ರಾಮೇತಿ ಮಧುರಾಂ ವಾಣೇಂ ವಿಶ್ವಾಮಿತ್ರೋಽಭ್ಯಭಾಷತ ॥ ೧೧ ॥

ಸರಯೂ ನದಿಯ ದಕ್ಷಿಣತೀರದಲ್ಲಿ ಒಂದುವರೆ ಯೋಜನದಷ್ಟು ದೂರ ಪ್ರಯಾಣ ಮಾಡಿದ ಬಳಿಕ 'ರಾಮ!' ಎಂದು ಕರೆದು, ವಿಶ್ವಾಮಿತ್ರನು ಮಧುರವಾಣಿಯನ್ನು ನುಡಿದನು.

ಗೃಹಾಣ ವತ್ಸ ಸಲಿಲಂ ಮಾ ಭೂತ್ಕಾಲವಿಪರ್ಯಯಃ ।
ಮಂತ್ರಗ್ರಾಮಂ ಗೃಹಾಣ ತ್ವಂ ಬಲಾಮತಿಬಲಾಂ ತಥಾ ॥ ೧೨ ॥

ಮಗು! ಶುದ್ಧಾಚಮನ ಮಾಡು, ಭೋಜನ ಕಾಲದ ಅತಿಕ್ರಮಣವಾಗಬಾರದು, ಬಲಾ ಅತಿಬಲಾ ಎಂಬ ಎರಡು ಮಂತ್ರ ಸಮೂಹಗಳನ್ನು ಹೇಳಿಕೊಡುತ್ತೇನೆ. ಸ್ವೀಕರಿಸು.

ನ ಶ್ರಮೋ ನ ಜ್ವರೋ ವಾ ತೇ ನ ರೂಪಸ್ಯ ವಿಪರ್ಯಯಃ ।
ನ ಚ ಸುಪ್ತಂ ಪ್ರಮತ್ತಂ ವಾ ಧರ್ಷಯಿಷ್ಯಂತಿ ನೈರ್ಋತಾಃ ॥ ೧೩ ॥

ಅದರ ಜಪ ಮಾಡಿದರೆ ಹಸಿವು ಬಾಯಾರಿಕೆಗಳಿಂದ ಶ್ರಮವಾಗದು. ಜ್ವರ ಬಾರದು, ರೂಪ ಸೌಂದರ್ಯ ಮಾಸದು. ಮಲಗಿರುವಾಗ ಅಜಾಗರೂಕನಾಗಿರುವಾಗ ರಾಕ್ಷಸರು ಹಿಂಸೆ ಮಾಡರು.

ನ ಬಾಹ್ವೋಃ ಸದೃಶೋ ವೀರ್ಯೇ ಪೃಥಿವ್ಯಾಮಸ್ತಿ ಕ ಶ್ಚನ ।
ತ್ರಿಷು ಲೋಕೇಷು ವೈ ರಾಮ ನ ಭವೇತ್ಸದೃಶಸ್ತವ ॥
ಬಲಾಮತಿಬಲಾಂ ಚೈವ ಪಠತಸ್ತವ ರಾಘವ ॥ ೧೪ ॥

ಬಲಾ ಅತಿಬಲಾ ಮಂತ್ರಪಠನ ಮಾಡುತ್ತಿದ್ದರೆ ನಿನಗೆ ನಿನ್ನ ಬಾಹುಗಳಿಗೆ ವೀರ್ಯದಲ್ಲಿ ಸದೃಶನಾದವನು ಭೂಮಿಯಲ್ಲಿಯೆ ಇಲ್ಲವಾಗುವನು. ಮೂಲೋಕದಲ್ಲಿಯೂ ರಾಮ! ನಿನಗೆ ಸದೃಶನೊಬ್ಬನಿರುವುದಿಲ್ಲ.

ನ ಸೌಭಾಗ್ಯೇ ನ ದಾಕ್ಷಿಣ್ಯೇ ನ ಜ್ಞಾನೇ ಬುದ್ಧಿನಿಶ್ಚಯೇ ।
ನೋತ್ತರೇ ಪ್ರತಿವಕ್ತವ್ಯೇ ಸಮೋ ಲೋಕೇ ತವಾನಘ ॥ ೧೫ ॥

ಪುಷ್ಪವೃಷ್ಟಿರ್ಮಹತ್ಯಾಸೀದ್ದೇವದುಂದುಭಿನಿಃಸ್ವನೈಃ ।
ಶಂಖದುಂದುಭಿನಿರ್ಘೋಷಃ ಪ್ರಯಾತೇ ತು ಮಹಾತ್ಮನಿ ॥ ೬ ॥

ಮಹಾತ್ಮನಾದ ರಾಮ ಪ್ರಯಾಣಕ್ಕೆ ಹೊರಟನೆಂದು ಒಳ್ಳೆಯ ಹೂಮಳೆ ಸುರಿಯಿತು. ದೇವತೆಗಳ ದುಂದುಭಿ ಮೊಳಗಿತು. ನಗರದ ಪ್ರಜೆಗಳೂ ಶಂಖನಾದದೊಂದಿಗೆ ದುಂದುಭಿಯನ್ನು ಮೊಳಗಿಸಿದರು.

ವಿಶ್ವಾಮಿತ್ರೋ ಯಯಾವಗ್ರೇ ತತೋ ರಾಮೋ ಮಹಾಯಶಾಃ ।
ಕಾಕಪಕ್ಷಧರೋ ಧನ್ವೀ ತಂ ಚ ಸೌಮಿತ್ರಿರನ್ವಗಾತ್ ॥ ೭ ॥

ವಿಶ್ವಾಮಿತ್ರ ಮುನಿ ಮುಂದಿನಿಂದ ನಡೆದನು. ಬಳಿಕ ಮಹಾಕೀರ್ತಿಶಾಲಿ ಕಾಕಪಕ್ಷಧರ ಧನುರ್ಧಾರಿಯಾದ ರಾಮ ನಡೆದ. ಅವರನ್ನು ಲಕ್ಷ್ಮಣ ಹಿಂಬಾಲಿಸಿದ. ಅವನೂ ಕಾಕಪಕ್ಷಧರ, ಧನುರ್ಧಾರಿ.

ಕಲಾಪಿನೌ ಧನುಷ್ಪಾಣೀ ಶೋಭಯಾನೌ ದಿಶೋ ದಶ ।
ವಿಶ್ವಾಮಿತ್ರಂ ಮಹಾತ್ಮಾನಂ ತ್ರಿಶೀರ್ಷಾವಿವ ಪನ್ನಗೌ ॥
ಅನುಜಗ್ಮತುರಕ್ಷುದ್ರೌ ಪಿತಾಮಹಮಿವಾಶ್ವಿನೌ ॥ ೮ ॥

ಕೈಯಲ್ಲಿ ಬಿಲ್ಲು ಹಿಡಿದು ಹೆಗಲಲ್ಲಿ ಎರಡು ಬತ್ತಳಿಕೆ ಹೊತ್ತು ಮಹಾತ್ಮರಾದ ರಾಮಲಕ್ಷ್ಮಣರು ಮೂರು ಹೆಡೆಗಳ ಸರ್ಪಗಳಂತೆ ಹತ್ತುದಿಕ್ಕುಗಳನ್ನೂ ಶೋಭೆಗೊಳಿಸುತ್ತ ಮಹಾತ್ಮನಾದ ವಿಶ್ವಾಮಿತ್ರನನ್ನು ಹಿಂಬಾಲಿಸಿದರು. ಪಿತಾಮಹನನ್ನು ಅಶ್ವಿನೀಕುಮಾರರು ಹಿಂಬಾಲಿಸುವಂತೆ.

ತದಾ ಕುಶಿಕಪುತ್ರಂ ತು ಧನುಷ್ಪಾಣೀ ಸ್ವಲಂಕೃತೌ ।
ಬದ್ಧಗೋಧಾಂಗುಲಿತ್ರಾಣೌ ಖಡ್ಗವಂತೌ ಮಹಾದ್ಯುತೀ ॥ ೯ ॥

ಕುಮಾರೌ ಚಾರುವಪುಷೌ ಭ್ರಾತರೌ ರಾಮಲಕ್ಷ್ಮಣೌ ।
ಅನುಯಾತೌ ಶ್ರಿಯಾ ದೀಪ್ತೌ ಶೋಭಯೇತಾಮನಿಂದಿತೌ ॥
ಸ್ಥಾಣುಂ ದೇವಮಿವಾಚಿಂತ್ಯಂ ಕುಮಾರಾವಿವ ಪಾವಕೀ ॥ ೧೦ ॥

ವಿಶ್ವಾಮಿತ್ರರು ಮುಂದಿನಿಂದ ನಡೆಯುವಾಗ ಉಡುಚರ್ಮದ ಬೆರಳು ಕಾಪು ಕಟ್ಟಿಕೊಂಡು ಬಿಲ್ಲು ಹಿಡಿದು ನಿರ್ದೋಷರಾದ ಕುಮಾರ ರಾಮಲಕ್ಷ್ಮಣಸೋದರರು ಹಿಂಬಾಲಿಸಿದರು. ಸುಂದರ ಶರೀರ ಉಳ್ಳವರು ಚೆನ್ನಾಗಿ ಅಲಂಕೃತರೂ ಆಗಿದ್ದರು. ಖಡ್ಗ ಧರಿಸಿದ್ದರು. ಕಾಂತಿಯಿಂದ ಬೆಳಗುತ್ತಿದ್ದರು. ಅಚಿಂತ್ಯನಾದ ರುದ್ರದೇವನನ್ನು

ಅಗ್ನಿಪುತ್ರರಾದ ಸ್ಕಂದ ವಿಶಾಖರು ಹಿಂಬಾಲಿಸಿದಂತೆ ವಿಶ್ವಾಮಿತ್ರನನ್ನು ರಾಮ-ಲಕ್ಷ್ಮಣರು ಹಿಂಬಾಲಿಸಿ ಶೋಭಿಸಿದರು.

ಅಧ್ಯರ್ಧಯೋಜನಂ ಗತ್ವಾ ಸರಯ್ವಾ ದಕ್ಷಿಣೇ ತಟೇ ।
ರಾಮೇತಿ ಮಧುರಾಂ ವಾಣೀಂ ವಿಶ್ವಾಮಿತ್ರೋಽಭ್ಯಭಾಷತ ॥ ೧೧ ॥

ಸರಯೂ ನದಿಯ ದಕ್ಷಿಣತೀರದಲ್ಲಿ ಒಂದುವರೆ ಯೋಜನದಷ್ಟು ದೂರ ಪ್ರಯಾಣ ಮಾಡಿದ ಬಳಿಕ 'ರಾಮ!' ಎಂದು ಕರೆದು, ವಿಶ್ವಾಮಿತ್ರನು ಮಧುರವಾಣಿಯನ್ನು ನುಡಿದನು.

ಗೃಹಾಣ ವತ್ಸ ಸಲಿಲಂ ಮಾ ಭೂತ್ಕಾಲವಿಪರ್ಯಯಃ ।
ಮಂತ್ರಗ್ರಾಮಂ ಗೃಹಾಣ ತ್ವಂ ಬಲಾಮತಿಬಲಾಂ ತಥಾ ॥ ೧೨ ॥

ಮಗು! ಶುದ್ಧಾಚಮನ ಮಾಡು, ಭೋಜನ ಕಾಲದ ಅತಿಕ್ರಮಣವಾಗಬಾರದು, ಬಲಾ ಅತಿಬಲಾ ಎಂಬ ಎರಡು ಮಂತ್ರ ಸಮೂಹಗಳನ್ನು ಹೇಳಿಕೊಡುತ್ತೇನೆ. ಸ್ವೀಕರಿಸು.

ನ ಶ್ರಮೋ ನ ಜ್ವರೋ ವಾ ತೇ ನ ರೂಪಸ್ಯ ವಿಪರ್ಯಯಃ ।
ನ ಚ ಸುಪ್ತಂ ಪ್ರಮತ್ತಂ ವಾ ಧರ್ಷಯಿಷ್ಯಂತಿ ನೈರ್ಋತಾಃ ॥ ೧೩ ॥

ಅದರ ಜಪ ಮಾಡಿದರೆ ಹಸಿವು ಬಾಯಾರಿಕೆಗಳಿಂದ ಶ್ರಮವಾಗದು. ಜ್ವರ ಬಾರದು, ರೂಪ ಸೌಂದರ್ಯ ಮಾಸದು. ಮಲಗಿರುವಾಗ ಅಜಾಗರೂಕನಾಗಿರುವಾಗ ರಾಕ್ಷಸರು ಹಿಂಸೆ ಮಾಡರು.

ನ ಬಾಹ್ವೋಃ ಸದೃಶೋ ವೀರ್ಯೇ ಪೃಥಿವ್ಯಾಮಸ್ತಿ ಕಶ್ಚನ ।
ತ್ರಿಷು ಲೋಕೇಷು ವೈ ರಾಮ ನ ಭವೇತ್ಸದೃಶಸ್ತವ ॥
ಬಲಾಮತಿಬಲಾಂ ಚೈವ ಪಠತಸ್ತವ ರಾಘವ ॥ ೧೪ ॥

ಬಲಾ ಅತಿಬಲಾ ಮಂತ್ರಪಠನ ಮಾಡುತ್ತಿದ್ದರೆ ನಿನಗೆ ನಿನ್ನ ಬಾಹುಗಳಿಗೆ ವೀರ್ಯದಲ್ಲಿ ಸದೃಶನಾದವನು ಭೂಮಿಯಲ್ಲಿಯೆ ಇಲ್ಲವಾಗುವನು. ಮೂಲೋಕದಲ್ಲಿಯೂ ರಾಮ! ನಿನಗೆ ಸದೃಶನೊಬ್ಬನಿರುವುದಿಲ್ಲ.

ನ ಸೌಭಾಗ್ಯೇ ನ ದಾಕ್ಷಿಣ್ಯೇ ನ ಜ್ಞಾನೇ ಬುದ್ಧಿನಿಶ್ಚಯೇ ।
ನೋತ್ತರೇ ಪ್ರತಿವಕ್ತವ್ಯೇ ಸಮೋ ಲೋಕೇ ತವಾನಘ ॥ ೧೫ ॥

ಸುದೈವ ಒಳ್ಳೆಯತನ ತತ್ವಜ್ಞಾನ ಲೌಕಿಕದಲ್ಲಿ ಬುದ್ಧಿವಂತಿಕೆ ವಾದಕ್ಕೆ ಪ್ರತಿವಾದ ಈ ಎಲ್ಲದರಲ್ಲಿ ನಿನಗೆ ಲೋಕದಲ್ಲಿ ಸಮಾನರಿಲ್ಲವಾಗುವುದು.

ಏತದ್ವಿದ್ಯಾದ್ವಯೇ ಲಬ್ಧೇ ಭವಿತಾ ನಾಸ್ತಿ ತೇ ಸಮಃ ।
ಬಲಾ ಚಾತಿಬಲಾ ಚೈವ ಸರ್ವಜ್ಞಾನಸ್ಯ ಮಾತರೌ ॥ ೧೬ ॥

ಬಲಾ ಅತಿಬಲಾ ಎಂಬ ಎರಡು ಮಂತ್ರಗಳ ಸಿದ್ಧಿಯಾಯಿತೆಂದರೆ ನಿನಗೆ ಸಮರೆ ಇಲ್ಲ ಎಂದಾಗುವುದು. ಎಲ್ಲ ಜ್ಞಾನಗಳಿಗೂ ಈ ಎರಡು ಮಂತ್ರೋಪಾಸನೆ ಕಾರಣವಾಗುವುದು.

ಕ್ಷುತ್ಪಿಪಾಸೇ ನ ತೇ ರಾಮ ಭವಿಷ್ಯೇತೇ ನರೋತ್ತಮ ।
ಬಲಾಮತಿಬಲಾಂ ಚೈವ ಪಠತಃ ಪಥಿ ರಾಘವ ॥ ೧೭ ॥

ಬಲಾ ಅತಿಬಲಾ ಮಂತ್ರಪಠನ ಮಾಡಿದರೆ, ಹೇ ನರೋತ್ತಮ, ರಾಘವ, ರಾಮ! ದಾರಿಯಲ್ಲಿ ನಿನಗೆ ಹಸಿವು ಬಾಯಾರಿಕೆಗಳಾಗುವುದಿಲ್ಲ.

ವಿದ್ಯಾದ್ವಯಮಧೀಯಾನೇ ಯಶಶ್ಚಾಪ್ಯತುಲಂ ತ್ವಯಿ ।
ಪಿತಾಮಹಸುತೇ ಹ್ಯೇತೇ ವಿದ್ಯೇ ತೇಜಃಸಮನ್ವಿತೇ ॥
ಪ್ರದಾತುಂ ತವ ಕಾಕುತ್ಸ್ಥ ಸದೃಶಸ್ತ್ವಂ ಹಿ ಧಾರ್ಮಿಕ ॥ ೧೮ ॥

ನೀನು ಈ ಮಂತ್ರಪಠನ ಮಾಡುತ್ತಿದ್ದರೆ, ಅನುಪಮವಾದ ಕೀರ್ತಿಯೂ ನಿನಗೆ ಲಭಿಸುವುದು. ಪ್ರಭಾವಶಾಲಿಯಾದ ಈ ಮಂತ್ರಗಳು ಪಿತಾಮಹನಿಂದ ಪ್ರಾದುರ್ಭೂತವಾದವು. ಅವುಗಳನ್ನು ನಿನಗೆ ಹೇಳಲು ನಾನು ಇಷ್ಟ ಪಡುತ್ತೇನೆ, ಅದಕ್ಕೆ ನೀನು ಯೋಗ್ಯನಿರುವೆ, ಧಾರ್ಮಿಕನೆ! ರಾಮ!

ಕಾಮಂ ಬಹುಗುಣಾಃ ಸರ್ವೇ ತ್ವಯ್ಯೇತೇ ನಾತ್ರ ಸಂಶಯಃ ।
ತಪಸಾ ಸಂಭೃತೇ ಚೈತೇ ಬಹುರೂಪೇ ಭವಿಷ್ಯತಃ ॥ ೧೯ ॥

ಈ ಎಲ್ಲ ಬಹುಗುಣಗಳೂ ನಿನ್ನಲ್ಲಿ ಪೂರ್ಣವಾಗಿಯೆ ಇವೆ. ಇದರಲ್ಲಿ ಸಂಶಯವೆ ಇಲ್ಲ. ಆದರೂ ನೀನು ಉಪದೇಶ ಪಡೆದರೆ ಈ ತಪಸ್ಸಿನಿಂದ ಮಂತ್ರ-ಗಳೆರಡೂ ಲೋಕದಲ್ಲಿ ಬಹು ಫಲಪ್ರದವಾಗುವುವು.

'ಅನಂತಂ ವಿಷ್ಣು ಸನ್ನಿಧೌ' ರಾಮನ ಕಿವಿಯಲ್ಲಿ ಮಂತ್ರವನ್ನು ಉಸುರಿದರೆ ಆ ಮಂತ್ರಲೋಕದಲ್ಲಿ ಅನಂತ ಫಲಪ್ರದವಾಗುತ್ತದೆ. ಹೀಗೆ ಲೋಕೋಪಕಾರಕ್ಕಾಗಿ

ಮುನಿ ರಾಮನಿಗೆ ಮಂತ್ರೋಪದೇಶದ ನಾಟಕವಾಡುತ್ತಾನೆ, ಎಂದು ವಾಲ್ಮೀಕಿ ತಾನೇ ಈ ಶ್ಲೋಕದಲ್ಲಿ ಹೇಳುತ್ತಾನೆ. ಕಸ್ತೂರಿಯ ಸಂಬಂಧದಿಂದ ವಾತಾವರಣ ಪರಿಮಲಯುಕ್ತವಾಗುವಂತೆ ರಾಮಕರ್ಣ ಸಂಬಂಧದಿಂಧ ಮಂತ್ರಗಳಿಗೇ ವಿಶೇಷ ಪ್ರಭಾವ ಲಭಿಸುವುದು.

ತತೋ ರಾಮೋ ಜಲಂ ಸ್ಪೃಷ್ಟಾ ಪ್ರಹೃಷ್ಟವದನಃ ಶುಚಿಃ ।
ಪ್ರತಿಜಗ್ರಾಹ ತೇ ವಿದ್ಯೇ ಮಹರ್ಷೇರ್ಭಾವಿತಾತ್ಮನಃ ॥ ೨೦ ॥

ವಿಶ್ವಾಮಿತ್ರ ಮುನಿ ಹೀಗೆ ಹೇಳಿದಾಗ ರಾಮನು ಶುದ್ಧಾಚಮನ ಮಾಡಿ ಶುಚಿ-ಯಾಗಿ 'ಪ್ರಸನ್ನವದನನಾಗಿ, ಪರಮಾತ್ಮ ಧ್ಯಾನ ಮಾಡಿದ ಮಹರ್ಷಿಯಿಂದ ಆ ಎರಡು ಮಂತ್ರಗಳನ್ನು ಉಪದೇಶ ಪಡೆದ.

ವಿದ್ಯಾಸಮುದಿತೋ ರಾಮಃ ಶುಶುಭೇ ಭೂರಿವಿಕ್ರಮಃ ।
ಸಹಸ್ರರಶ್ಮಿರ್ಭಗವಾನ್‌ಶರದೀವ ದಿವಾಕರಃ ॥ ೨೧ ॥

ಶರತ್ಕಾಲದಲ್ಲಿ ಸಹಸ್ರ ರಶ್ಮಿ ಉಳ್ಳ ಭಗವಾನ್ ಸೂರ್ಯನು ವಿಶೇಷವಾಗಿ ಬೆಳಗುವಂತೆ ಮಂತ್ರೋಪದೇಶವನ್ನು ಸ್ವೀಕರಿಸಿದ ರಾಮನು ವಿಶೇಷ ತೇಜಸ್ಸಿನಿಂದ ಶೋಭಿಸಿದ.

ಗುರುಕಾರ್ಯಾಣಿ ಸರ್ವಾಣಿ ನಿಯುಜ್ಯ ಕುಶಿಕಾತ್ಮಜೇ ।
ಊಷುಸ್ತಾಂ ರಜನೀಂ ತೀರೇ ಸರಯ್ವಾಃ ಸುಸುಖಂ ತ್ರಯಃ ॥ ೨೨ ॥

ಗುರುಸೇವಾಕಾರ್ಯಗಳನ್ನು ಎಲ್ಲವನ್ನೂ ವಿಶ್ವಾಮಿತ್ರರಲ್ಲಿ ಮಾಡಿದ ಬಳಿಕ ರಾಮಲಕ್ಷ್ಮಣರು ಮತ್ತು ವಿಶ್ವಾಮಿತ್ರ ಮೂವರೂ ಆ ರಾತ್ರಿಯನ್ನು ಸರಯೂ ತೀರದಲ್ಲಿ ಬಲು ಸುಖದಿಂದ ಕಳೆದರು.

ದಶರಥನೃಪಸೂನುಸತ್ತಮಾಭ್ಯಾಂ
ತೃಣಶಯನೇऽನುಚಿತೇ ಸಹೋಷಿತಾಭ್ಯಾಮ್ ।
ಕುಶಿಕಸುತವಚೋನುಲಾಲಿತಾಭ್ಯಾಂ
ಸುಖಮಿವ ಸಾ ವಿಬಭೌ ವಿಭಾವರೀ ಚ ॥ ೨೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ದ್ವಾವಿಂಶಃ ಸರ್ಗಃ ॥ ೨೨ ॥

ದಶರಥ ರಾಜನ ಪುತ್ರೋತ್ತಮರಾದ ರಾಮಲಕ್ಷ್ಮಣರು ತಮಗೆ ಉಚಿತವಲ್ಲದ ಹುಲ್ಲಿನ ಹಾಸಿನ ಮೇಲೆ ಜೊತೆಗೆ ಮಲಗಿದರು. ವಿಶ್ವಾಮಿತ್ರ ಕಥೆಗಳನ್ನು ಹೇಳುತ್ತ ಅವರನ್ನು ಲಾಲನೆ ಮಾಡಿದರು. ರಾತ್ರಿಯು ಸುಖಕರವಾಗಿಯೇ ಶೋಭಿಸಿತು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಇಪ್ಪತ್ತೆರಡನೆ ಸರ್ಗ ಮುಗಿಯಿತು.

ತ್ರಯೋವಿಂಶಃ ಸರ್ಗಃ

ಪ್ರಭಾತಾಯಾಂ ತು ಶರ್ವರ್ಯಾಂ ವಿಶ್ವಾಮಿತ್ರೋ ಮಹಾಮುನಿಃ ।
ಅಭ್ಯಭಾಷತ ಕಾಕುತ್ಸ್ಥೌ ಶಯಾನೌ ಪರ್ಣಸಂಸ್ತರೇ ॥ ೧ ॥

ರಾತ್ರಿ ಬೆಳಗಾಗುವಾಗ ಮಹಾಮುನಿ ವಿಶ್ವಾಮಿತ್ರನು ಹುಲ್ಲಿನ ಹಾಸಿನಮೇಲೆ ಮಲಗಿದ್ದ ರಾಮಲಕ್ಷ್ಮಣರಿಗೆ ಹೇಳಿದನು.

ಕೌಸಲ್ಯಾಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ ।
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಮ್ ॥ ೨ ॥

'ಕೌಸಲ್ಯೆಯ ಸುಪುತ್ರನಾದ ರಾಮನೆ ಏಳು. ಪ್ರಾತಃಸಂಧ್ಯಾಕಾಲ ಬರುತ್ತಿದೆ. ಪುರುಷೋತ್ತಮನೆ, ದೇವತಾರಾಧನ ರೂಪವಾದ ಆಹ್ನಿಕಕರ್ಮವನ್ನು ನೀನು ಈಗ ಮಾಡಬೇಕಾಗಿದೆ.'

ತಸ್ಯರ್ಷೇಃ ಪರಮೋದಾರಂ ವಚಃ ಶ್ರುತ್ವಾ ನೃಪಾತ್ಮಜೌ ।
ಸ್ನಾತ್ವಾ ಕೃತೋದಕೌ ವೀರೌ ಜೇಪತುಃ ಪರಮಂ ಜಪಮ್ ॥ ೩ ॥

ವಿಶ್ವಾಮಿತ್ರನ ಪರಮ ಉತ್ತಮವಾದ ಆ ಮಾತನ್ನು ಕೇಳಿ ವೀರರಾದ ರಾಜಕುಮಾರರು ಸ್ನಾನ ಮಾಡಿ ಅರ್ಘ್ಯ ಪ್ರದಾನ ತರ್ಪಣಗಳನ್ನು ಮುಗಿಸಿ ಉತ್ತಮವಾದ ಗಾಯತ್ರೀ ಮಂತ್ರವನ್ನು ಜಪಿಸಿದರು.

ಕೃತಾಹ್ನಿಕೌ ಮಹಾವೀರ್ಯೌ ವಿಶ್ವಾಮಿತ್ರಂ ತಪೋಧನಮ್ ।
ಅಭಿವಾದ್ಯಾಭಿಸಂಹೃಷ್ಟೌ ಗಮನಾಯಾಭಿತಸ್ಥತುಃ ॥ ೪ ॥

ರಾಮಲಕ್ಷ್ಮಣರು ಆಹ್ನಿಕಗಳನ್ನು ಮುಗಿಸಿದರು. ಮಹಾವೀರ್ಯಶಾಲಿಗಳಾದ ತಪೋಧನನಾದ ವಿಶ್ವಾಮಿತ್ರನಿಗೆ ಅಭಿವಾದನ ಮಾಡಿ ಬಲು ಉತ್ಸಾಹಗೊಂಡು ಮುಂದೆ ಪ್ರಯಾಣಕ್ಕೆ ಹೊರಟರು.

ತೌ ಪ್ರಯಾತೌ ಮಹಾವೀರ್ಯೌ ದಿವ್ಯಾಂ ತ್ರಿಪಥಗಾಂ ನದೀಮ್ ।
ದದೃಶಾತೇ ತತಸ್ತತ್ರ ಸರಯ್ವಾಃ ಸಂಗಮೇ ಶುಭೇ ॥ ೫ ॥

ಮಹಾವೀರ್ಯಶಾಲಿಗಳಾದ ಅವರು ಮುಂದೆ ಮಂಗಳಕರವಾದ ಸರಯೂ ಸಂಗಮದಲ್ಲಿ ದಿವ್ಯವಾದ ಗಂಗಾನದಿಯನ್ನು ಕಂಡರು.

ತತ್ರಾಶ್ರಮಪದಂ ಪುಣ್ಯಮೃಷೀಣಾಮುಗ್ರತೇಜಸಾಮ್ ।
ಬಹುವರ್ಷಸಹಸ್ರಾಣಿ ತಪ್ಯತಾಂ ಪರಮಂ ತಪಃ ॥ ೬ ॥

ಅಲ್ಲಿ ಬಹು ಸಾವಿರ ವರ್ಷಕಾಲ ಉತ್ತಮವಾದ ತಪಸ್ಸನ್ನು ಗೈವ ಉಗ್ರ ತೇಜಃಶಾಲಿಗಳಾದ ಮುನಿಗಳ ಪುಣ್ಯಕರವಾದ ಆಶ್ರಮಸ್ಥಳವನ್ನು ಕಂಡರು.

ತಂ ದೃಷ್ಟ್ವಾ ಪರಮಪ್ರೀತೌ ರಾಘವೌ ಪುಣ್ಯಮಾಶ್ರಮಮ್ ।
ಊಚತುಸ್ತಂ ಮಹಾತ್ಮಾನಂ ವಿಶ್ವಾಮಿತ್ರಮಿದಂ ವಚಃ ॥
ಕೌತೂಹಲಾತ್ತೌ ಧರ್ಮಜ್ಞೌ ವೀರ್ಯವಂತಂ ತಪೋಧನಮ್ ॥ ೭ ॥

ಪುಣ್ಯಕರವಾದ ಆ ಆಶ್ರಮವನ್ನು ಕಂಡು ಬಲು ಸುಪ್ರೀತರಾದ ಧರ್ಮಜ್ಞರಾದ ರಾಮಲಕ್ಷ್ಮಣರು ವೀರ್ಯಶಾಲಿ ತಪೋಧನ ಮಹಾತ್ಮನಾದ ವಿಶ್ವಾಮಿತ್ರನಿಗೆ ಕುತೂಹಲದಿಂದ ಪ್ರಶ್ನೆ ಮಾಡಿದರು.

ಕಸ್ಯಾಯಮಾಶ್ರಮಃ ಪುಣ್ಯಃ ಕೋ ನ್ವಸ್ಮಿನ್ವಸತೇ ಪುಮಾನ್ ।
ಭಗವಂಶ್ಶ್ರೋತುಮಿಚ್ಛಾವಃ ಪರಂ ಕೌತೂಹಲಂ ಹಿ ನೌ ॥ ೮ ॥

ಇದು ಯಾರ ಪುಣ್ಯಾಶ್ರಮ? ಯಾವ ಪುರುಷನು ಇಲ್ಲಿ ವಾಸ ಮಾಡುತ್ತಿದ್ದಾನೆ? ಪೂಜ್ಯನೆ, ಇದನ್ನು ಕೇಳಲು ಇಚ್ಛಿಸುತ್ತೇವೆ, ನಮಗೆ ಬಹಳ ಕುತೂಹಲ ಉಂಟಾಗಿದೆ.

ತಯೋಸ್ತದ್ವಚನಂ ಶ್ರುತ್ವಾ ಪ್ರಹಸ್ಯ ಮುನಿಪುಂಗವಃ ।
ಅಬ್ರವೀಚ್ಛ್ರೂಯತಾಂ ರಾಮ ಯಸ್ಯಾಯಂ ಪೂರ್ವ ಆಶ್ರಮಃ ॥
ಕಂದರ್ಪೋ ಮೂರ್ತಿಮಾನಾಸೀತ್ಕಾಮ ಇತ್ಯುಚ್ಯತೇ ಬುಧೈಃ ॥ ೯ ॥

ರಾಮಲಕ್ಷ್ಮಣರು ಕೇಳಿದ ಪ್ರಶ್ನೆಯನ್ನು ಕೇಳಿ ಮುನಿಶ್ರೇಷ್ಠನು ನಕ್ಕು ಹೇಳಿದನು, ಇದು ಯಾರ ಪೂರ್ವಕಾಲದ ಆಶ್ರಮ ಎಂಬುದನ್ನು ಹೇಳುವೆನು ಕೇಳು. ಕಂದರ್ಪ ಕಾಮನು ಹಿಂದೆ ಶರೀರಧಾರಿಯಾಗಿದ್ದನೆಂದು ಬಲ್ಲವರು ಹೇಳುತ್ತಾರೆ.

ತಪಸ್ಯಂತಮಿಹ ಸ್ಥಾಣುಂ ನಿಯಮೇನ ಸಮಾಹಿತಮ್ ।
ಕೃತೋದ್ವಾಹಂ ತು ದೇವೇಶಂ ಗಚ್ಛಂತಂ ಸಮರುದ್ಗಣಮ್ ॥
ಧರ್ಷಯಾಮಾಸ ದುರ್ಮೇಧಾ ಹುಂಕೃತಶ್ಚ ಮಹಾತ್ಮನಾ ॥ ೧೦ ॥

ಇಲ್ಲಿಯೇ ಹಿಂದೆ ರುದ್ರದೇವನು ಅವಿಚ್ಛಿನ್ನವಾಗಿ ಸಮಾಧಿಸ್ಥನಾಗಿ ತಪಸ್ಸನ್ನು

ನಡೆಸುತ್ತಿದ್ದ. ದೇವೇಶನಾದ ಅವನು ಪಾರ್ವತೀ ಪರಿಣಯ ಮಾಡಿಯೂ ಸಮಾಧಿ ಸ್ಥನಾಗಿದ್ದರಿಂದ, ಮರುತಗಣ ಸಮ್ಮತಿಯಿಂದ ಕಾಮನು ದುರ್ಬುದ್ಧಿಯಿಂದ ಅವನನ್ನು ರೊಚ್ಚಿಗೆಬ್ಬಿಸಿದನು. ಮಹಾತ್ಮನಾದ ಶಿವನ ಹುಂಕಾರಕ್ಕೆ ಬಲಿಯಾದನು.

ಅವದಗ್ಧಸ್ಯ ರೌದ್ರೇಣ ಚಕ್ಷುಷಾ ರಘುನಂದನ ।
ವ್ಯಶೀರ್ಯಂತ ಶರೀರಾತ್ ಸ್ವಾತ್ಸರ್ವಗಾತ್ರಾಣಿ ದುರ್ಮತೇಃ ॥ ೧೧ ॥

ರಾಮ! ಶಿವನ ಹಣೆಗಣ್ಣಿಂದ ದಗ್ಧನಾದ ದುರ್ಬುದ್ಧಿಯಾದ ಕಾಮನ ಶರೀರದ ಸರ್ವಾವಯವಗಳೂ ಸುಟ್ಟುಬೂದಿಯಾದುವು.

ತಸ್ಯ ಗಾತ್ರಂ ಹತಂ ತತ್ರ ನಿರ್ದಗ್ಧಸ್ಯ ಮಹಾತ್ಮನಾ ।
ಅಶರೀರಃ ಕೃತಃ ಕಾಮಃ ಕ್ರೋಧಾದ್ದೇವೇಶ್ವರೇಣ ಹ ॥ ೧೨ ॥

ಮಹಾತ್ಮ ಶಿವನಿಂದ ದಗ್ಧನಾದ ಕಾಮನ ಶರೀರ ಅಲ್ಲಿ ಸುಟ್ಟುಹೋಯಿತು. ದೇವೇಶನಾದ ಶಿವನ ಕ್ರೋಧದಿಂದ ಕಾಮನು ಶರೀರ ರಹಿತನಾಗಿ ಮಾಡಲ್ಪಟ್ಟನು.

ಅನಂಗ ಇತಿ ವಿಖ್ಯಾತಸ್ತದಾಪ್ರಭೃತಿ ರಾಘವ ।
ಸ ಚಾಂಗವಿಷಯಃ ಶ್ರೀಮಾನ್ಯತ್ರಾಂಗಂ ಪ್ರಮುಮೋಚ ಹ ॥ ೧೩ ॥

ರಾಮ, ಅಂದಿನಿಂದ ಕಾಮನು 'ಅನಂಗ' ಶರೀರವಿಲ್ಲದವನು ಎಂದು ವಿಖ್ಯಾತನಾದ, ಕಾಮನು ಎಲ್ಲಿ ಶರೀರವನ್ನು ತೊರೆದನೋ ಆ ಪ್ರದೇಶವೇ ಶ್ರೀಮಂತವಾದ 'ಅಂಗ' ಎಂಬ ದೇಶ.

ತಸ್ಯಾಯಮಾಶ್ರಮಃ ಪುಣ್ಯಸ್ತಸ್ಯೇಮೇ ಮುನಯಃ ಪುರಾ ।
ಶಿಷ್ಯಾ ಧರ್ಮಪರಾ ನಿತ್ಯಂ ತೇಷಾಂ ಪಾಪಂ ನ ವಿದ್ಯತೇ ॥ ೧೪ ॥

ಅಂಥ ಶಿವನ ಪುಣ್ಯಕರವಾದ ಆಶ್ರಮ ಇದು. ಅವನ ಶಿಷ್ಯರು ಈ ಮುನಿಗಳು. ಹಿಂದಿನಿಂದಲೂ ಸದಾ ಧರ್ಮಪರರು. ಅವರಲ್ಲಿ ಪಾಪವಿರುವುದಿಲ್ಲ.

ಇಹಾದ್ಯ ರಜನೀಂ ರಾಮ ವಸೇಮ ಶುಭದರ್ಶನ ।
ಪುಣ್ಯಯೋಃ ಸರಿತೋರ್ಮಧ್ಯೇ ಶ್ವಸ್ತರಿಷ್ಯಾಮಹೇ ವಯಮ್ ॥ ೧೫ ॥

ಮಂಗಳಕರ ದರ್ಶನ ನೀಡುವ ಓ ರಾಮನೆ! ಇಂದು ಇಲ್ಲಿಯೇ ಪುಣ್ಯಕರವಾದ ಎರಡು ನದಿಗಳ ನಡುವೆ ರಾತ್ರಿ ಇಡೀ ವಾಸ ಮಾಡೋಣ. ನಾಳೆ ನದಿಯನ್ನು ದಾಟೋಣ.

ಅಭಿಗಚ್ಛಾಮಹೇ ಸರ್ವೇ ಶುಚಯಃ ಪುಣ್ಯಮಾಶ್ರಮಮ್ ।
ಇಹ ವಾಸಃ ಪರೋಽಸ್ಮಾಕಂ ಸುಖಂ ವತ್ಸ್ಯಾಮಹೇ ನಿಶಾಮ್ ॥
ಸ್ನಾತಾಶ್ಚ ಕೃತಜಪ್ಯಾಶ್ಚ ಹುತಹವ್ಯಾ ನರೋತ್ತಮ ॥ ೧೬ ॥

ನಾಳೆ ಸ್ನಾನ ಮಾಡಿ ಜಪ ಹೋಮ ಮಾಡಿ ನಾವು ಮೂವರೂ ಶುಚಿಗಳಾಗಿ ಪುಣ್ಯಕರವಾದ ಆಶ್ರಮವನ್ನು ಸೇರೋಣ. ಪುರುಷೋತ್ತಮನೇ! ಇಲ್ಲಿ ಈಗ ವಾಸ ಮಾಡುವುದು ನಮಗೆ ಒಳ್ಳೆಯದು. ರಾತ್ರಿ ಇಡೀ ಇಲ್ಲಿ ಸುಖವಾಗಿ ವಾಸ ಮಾಡೋಣ.

ತೇಷಾಂ ಸಂವದತಾಂ ತತ್ರ ತಪೋದೀರ್ಘೇಣ ಚಕ್ಷುಷಾ ।
ವಿಜ್ಞಾಯ ಪರಮಪ್ರೀತಾ ಮುನಯೋ ಹರ್ಷಮಾಗಮನ್ ॥ ೧೭ ॥

ಮೂವರೂ ಹೀಗೆ ಮಾತನಾಡಿಕೊಳ್ಳುತ್ತಿದ್ದುದನ್ನು ದೂರದರ್ಶನ ಮತ್ತು ದೂರಶ್ರವಣ ರೂಪವಾದ ಯೋಗದ ಬಲದಿಂದ ತಿಳಿದು ಆಶ್ರಮದಲ್ಲಿದ್ದ ಮುನಿಗಳು ಪರಮಪ್ರೀತಿರಾದರು. ಹರ್ಷಗೊಂಡರು.

ಅರ್ಘ್ಯಂ ಪಾದ್ಯಂ ತಥಾऽऽತಿಥ್ಯಂ ನಿವೇದ್ಯ ಕುಶಿಕಾತ್ಮಜೇ ।
ರಾಮಲಕ್ಷ್ಮಣಯೋಃ ಪಶ್ಚಾದಕುರ್ವನ್ನತಿಥಿಕ್ರಿಯಾಮ್ ॥ ೧೮ ॥

ಮುನಿಗಳು ಬಂದು ವಿಶ್ವಾಮಿತ್ರನಿಗೆ ಅರ್ಘ್ಯ ಪಾದ್ಯ ಆತಿಥ್ಯಗಳನ್ನು ನಿವೇದಿಸಿ ಬಳಿಕ ರಾಮಲಕ್ಷ್ಮಣರಿಗೆ ಅತಿಥಿ ಸತ್ಕಾರ ಮಾಡಿದರು.

ಸತ್ಕಾರಂ ಸಮನುಪ್ರಾಪ್ಯ ಕಥಾಭಿರಭಿರಂಜಯನ್ ।
ಯಥಾರ್ಹಮಜಪನ್ಸಂಧ್ಯಾಮೃಷಯಸ್ತೇ ಸಮಾಹಿತಾಃ ॥ ೧೯ ॥

ಮುನಿಗಳೂ ವಿಶ್ವಾಮಿತ್ರನಿಂದ ಕುಶಲ ಪ್ರಶ್ನಾದಿ ಸತ್ಕಾರವನ್ನು ಪಡೆದು, ಕಥೆಗಳಿಂದ ಮೂವರನ್ನೂ ಸಂತೋಷಗೊಳಿಸಿದರು. ಸ್ಥಿರಚಿತ್ತರಾಗಿ ಆ ಋಷಿಗಳೂ ರಾಮಲಕ್ಷ್ಮಣರೂ ಸಂಧ್ಯೆಯಲ್ಲಿ ಜಪ ಮಾಡಿದರು.

ತತ್ರ ವಾಸಿಭಿರಾನೀತಾ ಮುನಿಭಿಃ ಸುವ್ರತೈಃ ಸಹ ।
ನ್ಯವಸನ್ಸುಸುಖಂ ತತ್ರ ಕಾಮಾಶ್ರಮಪದೇ ತದಾ ॥ ೨೦ ॥

ಆಶ್ರಮ ವಾಸಿಗಳಾದ ಸುವ್ರತರಾದ ಮುನಿಗಳು ಮೂವರನ್ನೂ ವಾಸಕ್ಕಾಗಿ ಆಶ್ರಮಕ್ಕೆ ಕರೆತಂದರು. ಆ ಕಾಮಾಶ್ರಮ ಪ್ರದೇಶದಲ್ಲಿ ಮೂವರೂ ಸುಖವಾಗಿ ವಾಸ ಮಾಡಿದರು.

ಕಥಾಭಿರಭಿರಾಮಾಭಿರಭಿರಾಮೌ ನೃಪಾತ್ಮಜೌ ।
ರಮಯಾಮಾಸ ಧರ್ಮಾತ್ಮಾ ಕೌಶಿಕೋ ಮುನಿಪುಂಗವಃ ॥ ೨೧ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ತ್ರಯೋವಿಂಶಃ ಸರ್ಗಃ ॥ ೨೩ ॥

ಮುನಿ ಶ್ರೇಷ್ಠನಾದ ಧರ್ಮಾತ್ಮನಾದ ವಿಶ್ವಾಮಿತ್ರನು ಸುಂದರರಾದ ರಾಮ-ಲಕ್ಷ್ಮಣರಿಗೆ ಸುಂದರವಾದ ಕಥೆಗಳನ್ನು ಹೇಳಿ ಸಂತೋಷ ಗೊಳಿಸಿದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಇಪ್ಪತ್ತಮೂರನೆ ಸರ್ಗ ಮುಗಿಯಿತು.

ಚತುರ್ವಿಂಶಃ ಸರ್ಗಃ

ತತಃ ಪ್ರಭಾತೇ ವಿಮಲೇ ಕೃತಾಹ್ನಿಕಮರಿಂದಮೌ ।
ವಿಶ್ವಾಮಿತ್ರಂ ಪುರಸ್ಕೃತ್ಯ ನದ್ಯಾಸ್ತೀರಮುಪಾಗತೌ ॥ ೧ ॥

ಬಳಿಕ ನಿರ್ಮಲವಾದ ಪ್ರಾತಃಕಾಲದಲ್ಲಿ ಶತ್ರುನಾಶಕರಾದ ರಾಮಲಕ್ಷ್ಮಣರು ಆಹ್ನಿಕ ಮಾಡಿ ಮುಗಿಸಿದ್ದ ವಿಶ್ವಾಮಿತ್ರನನ್ನು ಮುಂದೆ ಮಾಡಿಕೊಂಡು ನದೀತೀರಕ್ಕೆ ಬಂದರು.

ತೇ ಚ ಸರ್ವೇ ಮಹಾತ್ಮಾನೋ ಮುನಯಃ ಸಂಶಿತವ್ರತಾಃ ।
ಉಪಸ್ಥಾಪ್ಯ ಶುಭಾಂ ನಾವಂ ವಿಶ್ವಾಮಿತ್ರಮಥಾಬ್ರುವನ್ ॥ ೨ ॥

ತೀಕ್ಷ್ಣವ್ರತಗಳನ್ನು ಮಾಡುವ ಮಹಾತ್ಮರಾದ ಎಲ್ಲ ಮುನಿಗಳೂ ಒಳ್ಳೆಯ ನೌಕೆಯನ್ನು ತಂದಿತ್ತು ವಿಶ್ವಾಮಿತ್ರನಿಗೆ ಹೇಳಿದರು.

ಆರೋಹತು ಭವಾನ್ನಾವಂ ರಾಜಪುತ್ರಪುರಸ್ಕೃತಃ ।
ಅರಿಷ್ಟಂ ಗಚ್ಛ ಪಂಥಾನಂ ಮಾ ಭೂತ್ಕಾಲವಿಪರ್ಯಯಃ ॥ ೩ ॥

'ರಾಜಕುಮಾರರನ್ನು ಮುಂದು ಮಾಡಿಕೊಂಡು ನೀನು ನೌಕೆಯನ್ನು ಏರು, ನಿರ್ವಿಘ್ನವಾಗಿ ಮಾರ್ಗ ಪ್ರಯಾಣ ಮಾಡು. ಕಾಲಾತಿಕ್ರಮಣವಾಗದಿರಲಿ.'

ವಿಶ್ವಾಮಿತ್ರಸ್ತಥೇತ್ಯುಕ್ತ್ವಾ ತಾನೃಷೀನಭಿಪೂಜ್ಯ ಚ ।
ತತಾರ ಸಹಿತಸ್ತಾಭ್ಯಾಂ ಸರಿತಂ ಸಾಗರಂಗಮಾಮ್ ॥ ೪ ॥

ವಿಶ್ವಾಮಿತ್ರನು 'ಹಾಗೇ ಆಗಲಿ' ಎಂದು ಹೇಳಿ ಆ ಋಷಿಗಳನ್ನು ಪ್ರಶಂಸೆ ಮಾಡಿ ರಾಮಲಕ್ಷ್ಮಣರೊಂದಿಗೆ ಸಾಗರಗಾಮಿಯಾದ ಗಂಗಾನದಿಯನ್ನು ದಾಟಿದನು.

ತತಃ ಶುಶ್ರಾವ ವೈ ಶಬ್ದಮತಿಸಂರಂಭವರ್ಧಿತಮ್ ।
ಮಧ್ಯಮಾಗಮ್ಯ ತೋಯಸ್ಯ ಸಹ ರಾಮಃ ಕನೀಯಸಾ ॥ ೫ ॥

ರಾಮನು ಲಕ್ಷ್ಮಣನೊಂದಿಗೆ ನೀರಿನ ಮಧ್ಯಕ್ಕೆ ಬಂದಾಗ ನೀರಿನ ಅಲೆಗಳ ಅತಿವೇಗದಿಂದ ಹೆಚ್ಚುತ್ತಿದ್ದ ಶಬ್ದವನ್ನಾಲಿಸಿದನು.

ಅಥ ರಾಮಃ ಸರಿನ್ಮಧ್ಯೇ ಪಪ್ರಚ್ಛ ಮುನಿಪುಂಗವಮ್ ।
ವಾರಿಣೋ ಭಿದ್ಯಮಾನಸ್ಯ ಕಿಮಯಂ ತುಮುಲೋ ಧ್ವನಿಃ ॥ ೬ ॥

ರಾಮನು ನದಿಯ ಮಧ್ಯೆ ಮುನಿಪುಂಗವ ವಿಶ್ವಾಮಿತ್ರನನ್ನು ಕೇಳಿದ, ನೀರ ಹೊಡೆತದಿಂದ ಏಕೆ ಇಷ್ಟೊಂದು ಹೆಚ್ಚಿನ ಶಬ್ದ ಉಂಟಾಗುತ್ತಿದೆ?

ರಾಘವಸ್ಯ ವಚಃ ಶ್ರುತ್ವಾ ಕೌತೂಹಲಸಮನ್ವಿತಮ್ ।
ಕಥಯಾಮಾಸ ಧರ್ಮಾತ್ಮಾ ತಸ್ಯ ಶಬ್ದಸ್ಯ ನಿಶ್ಚಯಮ್ ॥ ೭ ॥

ಕುತೂಹಲದಿಂದ ಕೂಡಿದ ರಾಮನ ಮಾತನ್ನು ಕೇಳಿ ಧರ್ಮಾತ್ಮ ವಿಶ್ವಾಮಿತ್ರನು ಆ ಶಬ್ದದ ವಿಶೇಷ ಕಾರಣವನ್ನು ಹೇಳಿದನು.

ಕೈಲಾಸಪರ್ವತೇ ರಾಮ ಮನಸಾ ನಿರ್ಮಿತಂ ಸರಃ ।
ಬ್ರಹ್ಮಣಾ ನರಶಾರ್ದೂಲ ತೇನೇದಂ ಮಾನಸಂ ಸರಃ ॥ ೮ ॥

ಪುರುಷೋತ್ತಮನೆ! ರಾಮ! ಕೈಲಾಸಪರ್ವತದಲ್ಲಿ ಬ್ರಹ್ಮನು ಮನಸ್ಸಿನಿಂದ ನಿರ್ಮಿಸಿದ ಸರೋವರವಿದೆ. ಮನಸ್ಸಿನಿಂದ ನಿರ್ಮಿತವಾದ್ದರಿಂದ ಅದು ಮಾನಸ ಸರೋವರವೆನಿಸಿದೆ.

ತಸ್ಮಾತ್ಸುಸ್ರಾವ ಸರಸಃ ಸಾऽಯೋಧ್ಯಾಮುಪಗೂಹತೇ ।
ಸರಃ ಪ್ರವೃತ್ತಾ ಸರಯೂಃ ಪುಣ್ಯಾ ಬ್ರಹ್ಮಸರಶ್ಚ್ಯುತಾ ॥ ೯ ॥

'ಆ ಸರೋವರದಿಂದ ಹರಿದುಬಂದ ನದಿ ಸರಯು ಅಯೋಧ್ಯೆಯನ್ನು ಸುತ್ತಲೂ ಆವರಿಸುತ್ತದೆ. ಬ್ರಹ್ಮನಿರ್ಮಿತ ಸರಸ್ಸಿನಿಂದ ಹೊರಟ ಪುಣ್ಯ ನದಿಯಾದ್ದರಿಂದ ಅದು ಸರಯೂ ಎನಿಸಿತು.

ತಸ್ಯಾಯಮತುಲಃ ಶಬ್ದೋ ಜಾಹ್ನವೀಮಭಿವರ್ತತೇ ।
ವಾರಿಸಂಕ್ಷೋಭಜೋ ರಾಮ ಪ್ರಣಾಮಂ ನಿಯತಃ ಕುರು ॥ ೧೦ ॥

'ಗಂಗೆಯನ್ನು ಸರಯೂ ನದಿ ಸೇರುವುದರಿಂದ, ನೀರಿನ ಪರಸ್ಪರ ಹೊಡೆತದಿಂದಾಗಿರುವ ಶಬ್ದ ಇದು. ಅನುಪಮವಾಗಿದೆ. ರಾಮ, ನಿಯಮಪೂರ್ವಕವಾಗಿ ಪ್ರಣಾಮ ಮಾಡು' ಎಂದನು ವಿಶ್ವಾಮಿತ್ರ .

ತಾಭ್ಯಾಂ ತು ತಾವುಭೌ ಕೃತ್ವಾ ಪ್ರಣಾಮಮತಿಧಾರ್ಮಿಕೌ ।
ತೀರಂ ದಕ್ಷಿಣಮಾಸಾದ್ಯ ಜಗ್ಮತುರ್ಲಘುವಿಕ್ರಮೌ ॥ ೧೧ ॥

ಅತ್ಯಂತ ಧರ್ಮಶ್ರದ್ಧೆ ಉಳ್ಳವರು ರಾಮಲಕ್ಷ್ಮಣರು ಇಬ್ಬರೂ ಗಂಗಾ ಸರಯೂ ನದಿಗಳಿಗೆ ಪ್ರಣಾಮಗೈದು ದಕ್ಷಿಣತೀರಕ್ಕೆ ಬಂದು ಬೇಗಬೇಗನೆ ಹೆಜ್ಜೆ ಇಡುತ್ತ ಮುಂದೆ ನಡೆದರು.

ಸ ವನಂ ಘೋರಸಂಕಾಶಂ ದೃಷ್ಟ್ವಾ ನೃಪವರಾತ್ಮಜಃ ।
ಅವಿಪ್ರಹತಮೈಕ್ಷ್ವಾಕಃ ಪಪ್ರಚ್ಛ ಮುನಿಪುಂಗವಮ್ ॥ ೧೨ ॥

ಜನರು ಯಾರೂ ದಾರಿ ತುಳಿಯದಿದ್ದ ಘೋರವಾದ ಅರಣ್ಯವನ್ನು ಕಂಡು ಇಕ್ಷ್ವಾಕುವಂಶದ ರಾಜಕುಮಾರ ರಾಮ ಮುನಿಶ್ರೇಷ್ಠನಾದ ವಿಶ್ವಾಮಿತ್ರನನ್ನು ಕೇಳಿದ.

ಅಹೋ ವನಮಿದಂ ದುರ್ಗಂ ಝಿಲ್ಲಿಕಾಗಣನಾದಿತಮ್ ।
ಭೈರವೈಃ ಶ್ವಾಪದೈಃ ಪೂರ್ಣಂ ಶಕುಂತೈರ್ದಾರುಣಾರುತೈಃ ॥ ೧೩ ॥

'ಆಶ್ಚರ್ಯಕರವಾದ ಈ ಅರಣ್ಯ ದುರ್ಗಮವಾಗಿದೆ. ಜೀರುಂಡೆಗಳ ರಾಶಿ ಶಬ್ದ ಮಾಡುತ್ತಿದೆ. ಭಯಂಕರವಾದ ಹಿಂಸ್ರಮೃಗಗಳಿಂದಲೂ ದಾರುಣವಾಗಿ ಕೂಗುವ ಪಕ್ಷಿಗಳಿಂದಲೂ ತುಂಬಿದೆ.

ನಾನಾಪ್ರಕಾರೈಃ ಶಕುನೈರ್ವಾಶ್ಯದ್ಭಿರ್ಭೈರವಸ್ವನೈಃ ।
ಸಿಂಹವ್ಯಾಘ್ರವರಾಹೈಶ್ಚ ವಾರಣೈಶ್ಚೋಪಶೋಭಿತಮ್ ॥ ೧೪ ॥

'ಭಯಂಕರ ಧ್ವನಿಯಿಂದ ಕೂಗುವ ನಾನಾ ಪ್ರಕಾರವಾದ ಪಕ್ಷಿಗಳಿಂದಲೂ ಸಿಂಹ ಹುಲಿ ಕಾಡುಹಂದಿ ಆನೆಗಳಿಂದಲೂ ಈ ಅರಣ್ಯಕ್ಕೆ ಶೋಭೆ ಬಂದಿದೆ.

ಧವಾಶ್ವಕರ್ಣಕಕುಭೈರ್ಬಿಲ್ವತಿಂದುಕಪಾಟಲೈಃ ।
ಸಂಕೀರ್ಣಂ ಬದರೀಭಿಶ್ಚ ಕಿಂನ್ವೇತದ್ದಾರುಣಂ ವನಮ್ ॥ ೧೫ ॥

'ಧವ, ಅಶ್ವಕರ್ಣ, ಕಕುಭ, ಬಿಲ್ವ, ತಿಂದುಕ, ಪಾಟಲ, ಬದರ ಎಂಬ ನಾನಾ-ವಿಧವಾದ ವೃಕ್ಷಗಳಿಂದ ತುಂಬಿದ ಘೋರವಾದ ಈ ಅರಣ್ಯ ಯಾರದು? ಇದರ ಹೆಸರೇನು?'

ತಮುವಾಚ ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ ।
ಶ್ರೂಯತಾಂ ವತ್ಸ ಕಾಕುತ್ಸ್ಥ ಯಸ್ಯೈತದ್ದಾರುಣಂ ವನಮ್ ॥ ೧೬ ॥

ಮಹಾತೇಜನಾದ ವಿಶ್ವಾಮಿತ್ರ ಮಹಾಮುನಿ ರಾಮನಿಗೆ ಹೇಳಿದ, 'ಮಗು, ಕಾಕುತ್ಸ್ಥ ರಾಮ! ಕೇಳು, ಈ ಭಯಂಕರವಾದ ಅರಣ್ಯ ಯಾರದೆಂದು ಹೇಳುತ್ತೇನೆ.

ಏತೌ ಜನಪದೌ ಸ್ಫೀತೌ ಪೂರ್ವಮಾಸ್ತಾಂ ನರೋತ್ತಮ ।
ಮಲದಾಶ್ಚ ಕರೂಶಾಶ್ಚ ದೇವನಿರ್ಮಾಣನಿರ್ಮಿತೌ ॥ ೧೭ ॥

ಪುರುಷೋತ್ತಮ! ಹಿಂದೆ ಇದು ಮಲದ ಮತ್ತು ಕರೂಶ ಎಂಬ ಎರಡು ಸಮೃದ್ಧ ದೇಶಗಳಾಗಿತ್ತು . ಅವು ದೇವತೆಗಳ ಪ್ರಯತ್ನದಿಂದ ನಿರ್ಮಿತವಾಗಿದ್ದುವು.

ಪುರಾ ವೃತ್ರವಧೇ ರಾಮ ಮಲೇನ ಸಮಭಿಪ್ಲುತಮ್ ।
ಕ್ಷುಧಾ ಚೈವ ಸಹಸ್ರಾಕ್ಷಂ ಬ್ರಹ್ಮಹತ್ಯಾ ಸಮಾವಿಶತ್ ॥ ೧೮ ॥

ರಾಮ, ಹಿಂದೆ ವೃತ್ರಾಸುರನ ವಧೆ ಮಾಡಿದಾಗ ದೇವೇಂದ್ರನನ್ನು ಪಾಪ-ಕರ್ಮವೂ ಹಸಿವೂ ಆಕ್ರಮಿಸಿದುವು. ಆಗ ಬ್ರಹ್ಮಹತ್ಯಾಪಾಪ ಅವನಲ್ಲಿ ಆವೇಶ ಗೊಂಡಿತು.

ತಮಿಂದ್ರಂ ಸ್ನಾಪಯನ್ ದೇವಾ ಋಷಯಶ್ಚ ತಪೋಧನಾಃ ।
ಕಲಶೈಃ ಸ್ನಾಪಯಾಮಾಸುರ್ಮಲಂ ಚಾಸ್ಯ ಪ್ರಮೋಚಯನ್ ॥ ೧೯ ॥

ತಪೋಧನರಾದ ದೇವತೆಗಳೂ ಋಷಿಗಳೂ ಅವನಿಗೆ ಗಂಗಾದಿ ತೀರ್ಥಗಳಲ್ಲಿ ಸ್ನಾನ ಮಾಡಿಸಿದರು. ಕಲಶೋದಕಗಳಿಂದಲೂ ಅಭಿಷೇಕ ಮಾಡಿ ಅವನ ಮೈಯಲ್ಲಿ ಸೇರಿಕೊಂಡಿದ್ದ ಪಾಪರೂಪವಾದ ಮಲವನ್ನು ತೊಳೆದರು.

ಇಹ ಭೂಮ್ಯಾಂ ಮಲಂ ದತ್ವಾ ದತ್ವಾ ಕಾರೂಶಮೇವ ಚ ।
ಶರೀರಜಂ ಮಹೇಂದ್ರಸ್ಯ ತತೋ ಹರ್ಷಂ ಪ್ರಪೇದಿರೇ ॥ ೨೦ ॥

ದೇವತೆಗಳೂ ಋಷಿಗಳೂ ದೇವೇಂದ್ರನ ಶರೀರದಲ್ಲಿದ್ದ ಪಾಪರೂಪ ಮಲ-ವನ್ನೂ , ಹಸಿವಿನ ರೂಪದ ಕರೂಶವನ್ನೂ ಭೂಮಿಯಲ್ಲಿ ಇರಿಸಿ ಹರ್ಷ ಪಟ್ಟರು.

ದೇವತೆಗಳು ಹರಿಯಾಜ್ಞೆಯಂತೆ ಭೂಮಿಯಲ್ಲಿ ಪಾಪಯೋಗ್ಯರಿಂದ ಪಾಪ ಮಾಡಿಸಿ ಅದರ ಫಲವಾಗಿ ಹಸಿವು ತೃಷೇ ಜರೆ ಮರಣ ಮುಂತಾದುವುಗಳನ್ನು ಉಣಿಸುತ್ತಾರೆ. ತಾವು ಮಾತ್ರ, ''ಪ್ರೇರಕಾ ಅಪಿ ಪಾಪಾನಾಂ ನ ದೇವಾಃ ಪಾಪಮಾಪ್ನುಯುಃ'' ಪಾಪ ಪ್ರೇರಕರಾದರೂ ಪಾಪವನ್ನೂ ಅದರ ಫಲವಾದ ಹಸಿವು ಮುಂತಾದವುಗಳ ಪೀಡೆಯನ್ನು ಹೊಂದುವುದಿಲ್ಲ. ಅದರಿಂದ ಭೂಮಿಯಲ್ಲಿ ಪಾಪ ಮತ್ತು ಹಸಿವುಗಳನ್ನು ದೇವತೆಗಳು ಇರಿಸಿದ್ದು ಯುಕ್ತವೆ.

ನಿರ್ಮಲೋ ನಿಷ್ಕರೂಶಶ್ಚ ಶುಚಿರಿಂದ್ರೋ ಯದಾऽಭವತ್ ।
ದದೌ ದೇಶಸ್ಯ ಸುಪ್ರೀತೋ ವರಂ ಪ್ರಭುರನುತ್ತಮಮ್ ॥ ೨೧ ॥

ದೇವೇಂದ್ರನು ಮಲ-ಕರೂಶ-ಬ್ರಹ್ಮಹತ್ಯೆಗಳಿಂದ ಮುಕ್ತನಾದಾಗ, ಸುಪ್ರೀತನಾಗಿ, ಉತ್ತಮ ಅತ್ಯುತ್ತಮವಾದ ವರವನ್ನು ಮಲಕರೂಶ ಯುಕ್ತವಾದ ದೇಶಗಳಿಗೆ ನೀಡಿದ.

ಪಾಪಪ್ರೇರಕರಾಗಿರುವಂತೆ ಪುಣ್ಯಪ್ರೇರಕರೂ ಆಗಿರುವವರೂ ತತ್ತ್ವಾಭಿಮಾನಿ ದೇವತೆಗಳೆ. ಅವರು ಪುಣ್ಯ ಮಾಡಿಸಿ ಅದರ ಫಲವಾಗಿ ಸುಖಸಮೃದ್ಧಿಯನ್ನೂ ಖ್ಯಾತಿಯನ್ನೂ ಅನುಗ್ರಹಿಸುವರು. ಇದೂ ಅವರಿಗೆ ಹರಿಯಾಜ್ಞೆಯೆ.

ಇಮೌ ಜನಪದೌ ಸ್ಫೀತೌ ಖ್ಯಾತಿಂ ಲೋಕೇ ಗಮಿಷ್ಯತಃ ।
ಮಲದಾಶ್ಚ ಕರೂಶಾಶ್ಚ ಮಮಾಂಗಮಲಧಾರಿಣೌ ॥ ೨೨ ॥

'ಮಲದ ಕರೂಶ ಎಂಬ ಈ ಎರಡೂ ದೇಶಗಳು ಲೋಕದಲ್ಲಿ ಸುಖ ಸಮೃದ್ಧಿಯನ್ನೂ ಖ್ಯಾತಿಯನ್ನೂ ಹೊಂದುವುವು. ಏಕೆಂದರೆ ಅವು ನನ್ನ ಮೈಯ ಪಾಪವನ್ನು ಭಕ್ತಿಯಿಂದ ತಾವು ಧರಿಸಿದುವು' ಎಂದು.

ಸಾಧು ಸಾಧ್ವಿತಿ ತಂ ದೇವಾಃ ಪಾಕಶಾಸನಮಬ್ರುವನ್ ।
ದೇಶಸ್ಯ ಪೂಜಾಂ ತಾಂ ದೃಷ್ಟ್ವಾ ಕೃತಾಂ ಶಕ್ರೇಣ ಧೀಮತಾ ॥ ೨೩ ॥

'ಭಲೆ ಭಲೆ' ಎಂದು ದೇವತೆಗಳು ಇಂದ್ರನನ್ನು ಕೊಂಡಾಡಿದರು. ಧೀಮಂತ-ನಾದ ಇಂದ್ರನು ಮಾಡಿದ ಆ ದೇಶಪೂಜೆಯನ್ನು ನೋಡಿ ಸಂತುಷ್ಟರಾದರು.

ಏತೌ ಜನಪದೌ ಸ್ಫೀತೌ ದೀರ್ಘಕಾಲಮರಿಂದಮ ।
ಮಲದಾಶ್ಚ ಕರೂಶಾಶ್ಚ ಮುದಿತೌ ಧನಧಾನ್ಯತಃ ॥ ೨೪ ॥

ಶತ್ರುನಾಶಕನೆ, ರಾಮ! ಇಂದ್ರನಿತ್ತ ವರದಿಂದ ಈ ಎರಡು ದೇಶಗಳು ದೀರ್ಘಕಾಲದ ವರೆಗೂ ಸಮೃದ್ಧವಾಗಿದ್ದುವು. ಮಲದ ಕರೂಶ ದೇಶಗಳೆರಡೂ ಧನಧಾನ್ಯಗಳಿಂದ ಸುಖಭರಿತವಾಗಿದ್ದುವು.

ಕಸ್ಯಚಿತ್ತ್ವಥ ಕಾಲಸ್ಯ ಯಕ್ಷೀ ವೈ ಕಾಮರೂಪಿಣೀ ।
ಬಲಂ ನಾಗಸಹಸ್ರಸ್ಯ ಧಾರಯಂತೀ ತದಾ ಹ್ಯಭೂತ್ ॥ ೨೫ ॥

ಕೆಲ ಕಾಲಾನಂತರ ಕಾಮರೂಪಿಣಿಯಾದ ಯಕ್ಷಸ್ತ್ರೀಯೊಬ್ಬಳು ಹುಟ್ಟುವಾಗಲೇ ಸಾವಿರ ಆನೆಗಳ ಬಲದಿಂದ ಯುಕ್ತಳಾಗಿಯೇ ಹುಟ್ಟಿದಳು.

ತಾಟಕಾ ನಾಮ ಭದ್ರಂ ತೇ ಭಾರ್ಯಾ ಸುಂದಸ್ಯ ಧೀಮತಃ ।
ಮಾರೀಚೋ ರಾಕ್ಷಸಃ ಪುತ್ರೋ ಯಸ್ಯಾಃ ಶಕ್ರಪರಾಕ್ರಮಃ ॥ ೨೬ ॥

ಅವಳು ತಾಟಕೆ ಎಂಬುವಳು, ಧೀಮಂತನಾದ ಸುಂದನೆಂಬ ರಾಕ್ಷಸನ ಹೆಂಡತಿ. ರಾಮ! ನಿನಗೆ ಅವಳ ಭಯ ಬೇಡ. ಅವಳ ಮಗನೆ ಇಂದ್ರನಂಥ ಪರಾಕ್ರಮ ಉಳ್ಳ ಮಾರೀಚನೆಂಬ ರಾಕ್ಷಸ.

ವೃತ್ತಬಾಹುರ್ಮಹಾವೀರ್ಯೋ ವಿಪುಲಾಸ್ಯತನುರ್ಮಹಾನ್ ।
ರಾಕ್ಷಸೋ ಭೈರವಾಕಾರೋ ನಿತ್ಯಂ ತ್ರಾಸಯತೇ ಪ್ರಜಾಃ ॥ ೨೭ ॥

ಮಾರೀಚನು ವೃತ್ತ ಬಾಹು ಉಳ್ಳವನು, ಮಹಾವೀರ್ಯಶಾಲಿ ದೊಡ್ಡ ಬಾಯಿಯ ಶರೀರ ಉಳ್ಳವನು ದೊಡ್ಡಗಾತ್ರದವನು ಭಯಂಕರ ಆಕಾರದ ರಾಕ್ಷಸ. ಸದಾ ಜನರನ್ನು ಭಯ ಪಡಿಸುತ್ತಾನೆ.

ಇಮೌ ಜನಪದೌ ನಿತ್ಯಂ ವಿನಾಶಯತಿ ರಾಘವ ।
ಮಲದಾಂಶ್ಚ ಕರೂಶಾಂಶ್ಚ ತಾಟಕಾ ದುಷ್ಟಚಾರಿಣೀ ॥ ೨೮ ॥

ರಾಮ! ದುಷ್ಟ ಆಚಾರವುಳ್ಳ ತಾಟಕೆ ಮಲದ ಕರೂಶ ದೇಶಗಳೆರಡನ್ನೂ ನಿತ್ಯ ನಾಶ ಪಡಿಸುತ್ತಾಳೆ.

ಸೇಯಂ ಪಂಥಾನಮಾವೃತ್ಯ ವಸತ್ಯರ್ಧ್ಯರ್ಧಯೋಜನೇ ।
ಅತ ಏವ ಚ ಗಂತವ್ಯಂ ತಾಟಕಾಯಾ ವನಂ ಯತಃ ॥ ೨೯ ॥

ಇವಳು ಒಂದೂವರೆ ಯೋಜನದುದ್ದಕ್ಕೂ ಈ ದಾರಿಯನ್ನು ಆಕ್ರಮಿಸಿ ವಾಸ ಮಾಡುತ್ತಿದ್ದಾಳೆ. ಅದರಿಂದ ತಾಟಕೆಯ ಅರಣ್ಯಕ್ಕೆ ನಾವು ಹೋಗಲೇ ಬೇಕಾಗಿದೆ.

ಸ್ವಬಾಹುಬಲಮಾಶ್ರಿತ್ಯ ಜಹೀಮಾಂ ದುಷ್ಟಚಾರಿಣೀಮ್ ।
ಮನ್ನಿಯೋಗಾದಿಮಂ ದೇಶಂ ಕುರು ನಿಷ್ಕಂಟಕಂ ಪುನಃ ॥ ೩೦ ॥

ದುಷ್ಟಕರ್ಮ ಮಾಡುವ ಇವಳನ್ನು ನಿನ್ನ ಬಾಹುಬಲದಿಂದ ವಧಿಸು. ನನ್ನಾದೇಶಾನುಸಾರ ಈ ದೇಶವನ್ನು ನಿಷ್ಕಂಟಕವಾಗುವಂತೆ ಮಾಡು.

ನ ಹಿ ಕಶ್ಚಿದಿಮಂ ದೇಶಂ ಶಕ್ನೋತ್ಯಾಗಂತುಮೀದೃಶಮ್ ।
ಯಕ್ಷಿಣ್ಯಾ ಘೋರಯಾ ರಾಮ ಉತ್ಸಾದಿತಮಸಹ್ಯಯಾ ॥ ೩೧ ॥

ದೇವೇಂದ್ರನು ಮಲ-ಕರೂಶ-ಬ್ರಹ್ಮಹತ್ಯೆಗಳಿಂದ ಮುಕ್ತನಾದಾಗ, ಸುಪ್ರೀತನಾಗಿ, ಉತ್ತಮ ಅತ್ಯುತ್ತಮವಾದ ವರವನ್ನು ಮಲಕರೂಶ ಯುಕ್ತವಾದ ದೇಶಗಳಿಗೆ ನೀಡಿದ.

ಪಾಪಪ್ರೇರಕರಾಗಿರುವಂತೆ ಪುಣ್ಯಪ್ರೇರಕರೂ ಆಗಿರುವವರೂ ತತ್ತ್ವಾಭಿಮಾನಿ ದೇವತೆಗಳೆ. ಅವರು ಪುಣ್ಯ ಮಾಡಿಸಿ ಅದರ ಫಲವಾಗಿ ಸುಖಸಮೃದ್ಧಿಯನ್ನೂ ಖ್ಯಾತಿಯನ್ನೂ ಅನುಗ್ರಹಿಸುವರು. ಇದೂ ಅವರಿಗೆ ಹರಿಯಾಜ್ಞೆಯೆ.

ಇಮೌ ಜನಪದೌ ಸ್ಫೀತೌ ಖ್ಯಾತಿಂ ಲೋಕೇ ಗಮಿಷ್ಯತಃ ।
ಮಲದಾಶ್ಚ ಕರೂಶಾಶ್ಚ ಮಮಾಂಗಮಲಧಾರಿಣೌ ॥ ೨೨ ॥

'ಮಲದ ಕರೂಶ ಎಂಬ ಈ ಎರಡೂ ದೇಶಗಳು ಲೋಕದಲ್ಲಿ ಸುಖ ಸಮೃದ್ಧಿಯನ್ನೂ ಖ್ಯಾತಿಯನ್ನೂ ಹೊಂದುವುವು. ಏಕೆಂದರೆ ಅವು ನನ್ನ ಮೈಯ ಪಾಪವನ್ನು ಭಕ್ತಿಯಿಂದ ತಾವು ಧರಿಸಿದುವು' ಎಂದು.

ಸಾಧು ಸಾಧ್ವಿತಿ ತಂ ದೇವಾಃ ಪಾಕಶಾಸನಮಬ್ರುವನ್ ।
ದೇಶಸ್ಯ ಪೂಜಾಂ ತಾಂ ದೃಷ್ಟ್ವಾ ಕೃತಾಂ ಶಕ್ರೇಣ ಧೀಮತಾ ॥ ೨೩ ॥

'ಭಲೆ ಭಲೆ' ಎಂದು ದೇವತೆಗಳು ಇಂದ್ರನನ್ನು ಕೊಂಡಾಡಿದರು. ಧೀಮಂತ-ನಾದ ಇಂದ್ರನು ಮಾಡಿದ ಆ ದೇಶಪೂಜೆಯನ್ನು ನೋಡಿ ಸಂತುಷ್ಟರಾದರು.

ಏತೌ ಜನಪದೌ ಸ್ಫೀತೌ ದೀರ್ಘಕಾಲಮರಿಂದಮ ।
ಮಲದಾಶ್ಚ ಕರೂಶಾಶ್ಚ ಮುದಿತೌ ಧನಧಾನ್ಯತಃ ॥ ೨೪ ॥

ಶತ್ರುನಾಶಕನೆ, ರಾಮ! ಇಂದ್ರನಿತ್ತ ವರದಿಂದ ಈ ಎರಡು ದೇಶಗಳು ದೀರ್ಘಕಾಲದ ವರೆಗೂ ಸಮೃದ್ಧವಾಗಿದ್ದುವು. ಮಲದ ಕರೂಶ ದೇಶಗಳೆರಡೂ ಧನಧಾನ್ಯಗಳಿಂದ ಸುಖಭರಿತವಾಗಿದ್ದುವು.

ಕಸ್ಯಚಿತ್ತ್ವಥ ಕಾಲಸ್ಯ ಯಕ್ಷೀ ವೈ ಕಾಮರೂಪಿಣೀ ।
ಬಲಂ ನಾಗಸಹಸ್ರಸ್ಯ ಧಾರಯಂತೀ ತದಾ ಹ್ಯಭೂತ್ ॥ ೨೫ ॥

ಕೆಲ ಕಾಲಾನಂತರ ಕಾಮರೂಪಿಣಿಯಾದ ಯಕ್ಷಸ್ತ್ರೀಯೊಬ್ಬಳು ಹುಟ್ಟುವಾಗಲೇ ಸಾವಿರ ಆನೆಗಳ ಬಲದಿಂದ ಯುಕ್ತಳಾಗಿಯೇ ಹುಟ್ಟಿದಳು.

ತಾಟಕಾ ನಾಮ ಭದ್ರಂ ತೇ ಭಾರ್ಯಾ ಸುಂದಸ್ಯ ಧೀಮತಃ ।
ಮಾರೀಚೋ ರಾಕ್ಷಸಃ ಪುತ್ರೋ ಯಸ್ಯಾಃ ಶಕ್ರಪರಾಕ್ರಮಃ ॥ ೨೬ ॥

ಅವಳು ತಾಟಕೆ ಎಂಬುವಳು, ಧೀಮಂತನಾದ ಸುಂದನೆಂಬ ರಾಕ್ಷಸನ ಹೆಂಡತಿ. ರಾಮ! ನಿನಗೆ ಅವಳ ಭಯ ಬೇಡ. ಅವಳ ಮಗನೆ ಇಂದ್ರನಂಥ ಪರಾಕ್ರಮ ಉಳ್ಳ ಮಾರೀಚನೆಂಬ ರಾಕ್ಷಸ.

ವೃತ್ತಬಾಹುರ್ಮಹಾವೀರ್ಯೋ ವಿಪುಲಾಸ್ಯತನುರ್ಮಹಾನ್ ।
ರಾಕ್ಷಸೋ ಭೈರವಾಕಾರೋ ನಿತ್ಯಂ ತ್ರಾಸಯತೇ ಪ್ರಜಾಃ ॥ ೨೭ ॥

ಮಾರೀಚನು ವೃತ್ತ ಬಾಹು ಉಳ್ಳವನು, ಮಹಾವೀರ್ಯಶಾಲಿ ದೊಡ್ಡ ಬಾಯಿಯ ಶರೀರ ಉಳ್ಳವನು ದೊಡ್ಡಗಾತ್ರದವನು ಭಯಂಕರ ಆಕಾರದ ರಾಕ್ಷಸ. ಸದಾ ಜನರನ್ನು ಭಯ ಪಡಿಸುತ್ತಾನೆ.

ಇಮೌ ಜನಪದೌ ನಿತ್ಯಂ ವಿನಾಶಯತಿ ರಾಘವ ।
ಮಲದಾಂಶ್ಚ ಕರೂಶಾಂಶ್ಚ ತಾಟಕಾ ದುಷ್ಟಚಾರಿಣೀ ॥ ೨೮ ॥

ರಾಮ! ದುಷ್ಟ ಆಚಾರವುಳ್ಳ ತಾಟಕೆ ಮಲದ ಕರೂಶ ದೇಶಗಳೆರಡನ್ನೂ ನಿತ್ಯ ನಾಶ ಪಡಿಸುತ್ತಾಳೆ.

ಸೇಯಂ ಪಂಥಾನಮಾವೃತ್ಯ ವಸತ್ಯರ್ಧ್ಯರ್ಧಯೋಜನೇ ।
ಅತ ಏವ ಚ ಗಂತವ್ಯಂ ತಾಟಕಾಯಾ ವನಂ ಯತಃ ॥ ೨೯ ॥

ಇವಳು ಒಂದೂವರೆ ಯೋಜನದುದ್ದಕ್ಕೂ ಈ ದಾರಿಯನ್ನು ಆಕ್ರಮಿಸಿ ವಾಸ ಮಾಡುತ್ತಿದ್ದಾಳೆ. ಅದರಿಂದ ತಾಟಕೆಯ ಅರಣ್ಯಕ್ಕೆ ನಾವು ಹೋಗಲೇ ಬೇಕಾಗಿದೆ.

ಸ್ವಬಾಹುಬಲಮಾಶ್ರಿತ್ಯ ಜಹೀಮಾಂ ದುಷ್ಟಚಾರಿಣೀಮ್ ।
ಮನ್ನಿಯೋಗಾದಿಮಂ ದೇಶಂ ಕುರು ನಿಷ್ಕಂಟಕಂ ಪುನಃ ॥ ೩೦ ॥

ದುಷ್ಟಕರ್ಮ ಮಾಡುವ ಇವಳನ್ನು ನಿನ್ನ ಬಾಹುಬಲದಿಂದ ವಧಿಸು. ನನ್ನಾದೇಶಾನುಸಾರ ಈ ದೇಶವನ್ನು ನಿಷ್ಕಂಟಕವಾಗುವಂತೆ ಮಾಡು.

ನ ಹಿ ಕಶ್ಚಿದಿಮಂ ದೇಶಂ ಶಕ್ನೋತ್ಯಾಗಂತುಮೀದೃಶಮ್ ।
ಯಕ್ಷಿಣ್ಯಾ ಘೋರಯಾ ರಾಮ ಉತ್ಸಾದಿತಮಸಹ್ಯಯಾ ॥ ೩೧ ॥

ಇಂಥ ಈ ದೇಶಕ್ಕೆ ಬರಲು ಯಾರೂ ಶಕ್ತನಾಗುವುದಿಲ್ಲ. ರಾಮ! ಘೋರಳಾದ ಯಾರಿಂದಲೂ ಇದಿರಿಸಲಾಗದ ಯಕ್ಷಿಣಿಯಿಂದ ಈ ದೇಶವು ನಾಶವಾಗಿದೆ.

ಏತತ್ತೇ ಸರ್ವಮಾಖ್ಯಾತಂ ಯಥೈತದ್ದಾರುಣಂ ವನಮ್ ।
ಯಕ್ಷ್ಯಾ ಚೋತ್ಸಾದಿತಂ ಸರ್ವಮದ್ಯಾಪಿ ನ ನಿವರ್ತತೇ ॥ ೩೨ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಚತುರ್ವಿಂಶಃ ಸರ್ಗಃ ॥ ೨೪ ॥

ಹೀಗೆ ಈ ಅರಣ್ಯ ಏಕೆ ಘೋರವಾಗಿದೆ, ಯಕ್ಷಿಣಿ ಹೇಗೆ ಈ ದೇಶವನ್ನು ಹಾಳುಗೆಡವಿದ್ದಾಳೆ, ಇಂದಿಗೂ ಕೂಡ ಅವಳ ಈ ವಿನಾಶಕಾರ್ಯಕ್ಕೆ ನಿಲುಗಡೆ ಇಲ್ಲ ಏಕೆ ಎಂಬುದನ್ನೆಲ್ಲ ನಾನು ನಿನಗೆ ಹೇಳಿದ್ದೇನೆ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಇಪ್ಪತ್ತನಾಲ್ಕನೆ ಸರ್ಗ ಮುಗಿಯಿತು.

ಪಂಚವಿಂಶಃ ಸರ್ಗಃ

ಅಥ ತಸ್ಯಾಪ್ರಮೇಯಸ್ಯ ಮುನೇರ್ವಚನಮುತ್ತಮಮ್ ।
ಶ್ರುತ್ವಾ ಪುರುಷಶಾರ್ದೂಲಃ ಪ್ರತ್ಯುವಾಚ ಶುಭಾಂ ಗಿರಮ್ ॥ ೧ ॥

ಅಪರಿಮಿತ ಪ್ರಭಾವಶಾಲಿಯಾದ ವಿಶ್ವಾಮಿತ್ರಮುನಿಯ ಉತ್ತಮವಾದ ಮಾತನ್ನು ಕೇಳಿ ಪುರುಷೋತ್ತಮ ಶ್ರೀರಾಮ ಮಂಗಳಕರವಾದ ಮಾತನ್ನು ನುಡಿದ.

ಅಲ್ಪವೀರ್ಯಾ ಯದಾ ಯಕ್ಷಾಃ ಶ್ರೂಯಂತೇ ಮುನಿಪುಂಗವ ।
ಕಥಂ ನಾಗಸಹಸ್ರಸ್ಯ ಧಾರಯತ್ಯಬಲಾ ಬಲಮ್ ॥ ೨ ॥

ಮುನಿಶ್ರೇಷ್ಠನೆ, ಯಕ್ಷರು ಅಲ್ಪಬಲವುಳ್ಳವರೆಂದು ಕೇಳಿಬರುತ್ತದೆ. ಅಂಥ ಯಕ್ಷರ ಸ್ತ್ರೀಯೊಬ್ಬಳು ಸಾವಿರ ಆನೆಗಳ ಬಲವನ್ನು ಧರಿಸಿದ್ದು ಹೇಗೆ?

ಇತ್ಯುಕ್ತವಚನಂ ಶ್ರುತ್ವಾ ರಾಘವಸ್ಯಾಮಿತೌಜಸಃ ।
ಹರ್ಷಯನ್ಶ್ಲಕ್ಷ್ಣಯಾ ವಾಚಾ ಸಲಕ್ಷ್ಮಣಮರಿಂದಮಮ್ ॥ ೩ ॥

ವಿಶ್ವಾಮಿತ್ರೋಽಬ್ರವೀದ್ವಾಕ್ಯಂ ಶೃಣು ಯೇನ ಬಲೋತ್ತರಾ ।
ವರದಾನಕೃತಂ ವೀರ್ಯಂ ಧಾರಯತ್ಯಬಲಾ ಬಲಮ್ ॥ ೪ ॥

ಅಮಿತ ಪರಾಕ್ರಮಿಯಾದ ರಾಮನ ಈ ಮಾತನ್ನು ಕೇಳಿ ವಿಶ್ವಾಮಿತ್ರನು ಶತ್ರುನಾಶಕ ರಾಮ ಮತ್ತು ಲಕ್ಷ್ಮಣರಿಗೆ ನಯವಾದ ಮಾತಿನಿಂದ ಸಂತೋಷ-ಗೊಳಿಸುತ್ತ ಈ ಮಾತನ್ನು ನುಡಿದ. ತಾಟಕೆಗೆ ಅಷ್ಟು ಬಲ ಹೇಗೆ ಲಬ್ಧವಾಯಿತು ಎಂಬುದನ್ನು ಹೇಳುತ್ತೇನೆ, ಕೇಳು.

ವರದಾನದಿಂದಾದ ಬಲ ವೀರ್ಯಗಳನ್ನು ಅಬಲೆ ತಾಟಕೆ ಧರಿಸಿದಳು.

ಪೂರ್ವಮಾಸೀನ್ಮಹಾಯಕ್ಷಃ ಸುಕೇತುರ್ನಾಮ ವೀರ್ಯವಾನ್ ।
ಅನಪತ್ಯಃ ಶುಭಾಚಾರಃ ಸ ಚ ತೇಪೇ ಮಹತ್ತಪಃ ॥ ೫ ॥

ಹಿಂದೆ ಸುಕೇತು ಎಂಬ ವೀರ್ಯಶಾಲಿ ಮಹಾ ಯಕ್ಷನಿದ್ದ. ಅವನಿಗೆ ಮಕ್ಕಳಿರ-ಲಿಲ್ಲ. ಒಳ್ಳೆಯ ಆಚಾರದಲ್ಲಿದ್ದು ಮಹತ್ತಾದ ತಪಸ್ಸನ್ನು ಆತ ನಡೆಸಿದ.

ಪಿತಾಮಹಸ್ತು ಸುಪ್ರೀತಸ್ತಸ್ಯ ಯಕ್ಷಪತೇಸ್ತದಾ ।
ಕನ್ಯಾರತ್ನಂ ದದೌ ರಾಮ ತಾಟಕಾಂ ನಾಮ ನಾಮತಃ ॥ ೬ ॥

ಪಿತಾಮಹ ಬ್ರಹ್ಮದೇವ ಆ ಯಕ್ಷರಾಜನಿಗೆ ಒಲಿದು, ರಾಮ! ತಾಟಕೆ ಎಂಬ ಹೆಸರಿನ ಕನ್ಯಾರತ್ನವನ್ನು ನೀಡಿದ.

ದದೌ ನಾಗಸಹಸ್ರಸ್ಯ ಬಲಂ ಚಾಸ್ಯಾಃ ಪಿತಾಮಹಃ ।
ನ ತ್ವೇವ ಪುತ್ರಂ ಯಕ್ಷಾಯ ದದೌ ಬ್ರಹ್ಮಾ ಮಹಾಯಶಾಃ ॥ ೭ ॥

ಪಿತಾಮಹನು ಅವಳಿಗೆ ಸಾವಿರ ಆನೆಗಳ ಬಲವನ್ನೂ ನೀಡಿದ, ಹೊರತು ಯಕ್ಷನಿಗೆ ಮಹಾಯಶಸ್ವಿಯಾದ ಪಿತಾಮಹ ಬ್ರಹ್ಮನು ಪುತ್ರನನ್ನು ಕೊಡಲಿಲ್ಲ.

ತಾಂ ತು ಜಾತಾಂ ವಿವರ್ಧಂತೀಂ ರೂಪಯೌವನಶಾಲಿನೀಮ್ ।
ಜಂಭಪುತ್ರಾಯ ಸುಂದಾಯ ದದೌ ಭಾರ್ಯಾಂ ಯಶಸ್ವಿನೀಮ್ ॥೮॥

ಅವಳು ಹುಟ್ಟಿ ರೂಪಯೌವನಶಾಲಿನಿಯಾಗಿ ಬೆಳೆದು ನಿಂತಾಗ ಯಶಸ್ವಿನಿಯಾದ ಆಕೆಯನ್ನು ಜಂಭಾಸುರನ ಪುತ್ರನಾದ ಸುಂದಾಸುರನಿಗೆ ಭಾರ್ಯೆಯಾಗಿ ನೀಡಿದ.

ಕಸ್ಯಚಿತ್ತ್ವಥ ಕಾಲಸ್ಯ ಯಕ್ಷೀ ಪುತ್ರಮಜಾಯತ ।
ಮಾರೀಚಂ ನಾಮ ದುರ್ಧರ್ಷಂ ಯಃ ಶಾಪಾದ್ರಾಕ್ಷಸೋಽಭವತ್ ॥೯

ಕೆಲಕಾಲದ ಬಳಿಕ ಯಕ್ಷಿ ಪುತ್ರನಿಗೆ ಜನ್ಮವಿತ್ತಳು. ಅವನೆ ಯಾರಿಗೂ ಮಣಿಸಲಾಗದ ಮಾರೀಚ. ಅವನು ಶಾಪದಿಂದ ರಾಕ್ಷಸನಾದ.

ಸುಂದೇ ತು ನಿಹತೇ ರಾಮ ಸಾಽಗಸ್ತ್ಯಂ ಮುನಿಪುಂಗವಮ್ ।
ತಾಟಕಾ ಸಹ ಪುತ್ರೇಣ ಪ್ರಧರ್ಷಯಿತುಮಿಚ್ಛತಿ ॥
ಭಕ್ಷಾರ್ಥಂ ಜಾತಸಂರಂಭಾ ಗರ್ಜಂತೀ ಸಾಽಭ್ಯಧಾವತ ॥ ೧೦ ॥

ಅಗಸ್ತ್ಯ ಮುನಿಯ ಶಾಪದಿಂದ ಸುಂದನು ಮೃತನಾದಾಗ ತಾಟಕೆ ಪುತ್ರನೊಂದಿಗೆ ಸೇರಿ ಮುನಿಪುಂಗವನಾದ ಅಗಸ್ತ್ಯನಿಗೆ ಹಿಂಸೆ ಕೊಡಲು ಬಯಸಿದಳು. ತಿಂದು ಬಿಡುವೆನೆಂದು ಕೋಪದಿಂದ ಅವನೆದುರಿಗೆ ಧಾವಿಸಿ ಬಂದಳು.

ಆಪತಂತೀಂ ತು ತಾಂ ದೃಷ್ಟ್ವಾ ಅಗಸ್ತ್ಯೋ ಭಗವಾನೃಷಿಃ ।
ರಾಕ್ಷಸತ್ವಂ ಭಜಸ್ವೇತಿ ಮಾರೀಚಂ ವ್ಯಾಜಹಾರ ಸಃ ॥
ಅಗಸ್ತ್ಯಃ ಪರಮಕ್ರುದ್ಧಸ್ತಾಟಕಾಮಪಿ ಶಪ್ತವಾನ್ ॥ ೧೧ ॥

ತನ್ನ ಕಡೆಗೆ ಮಾರೀಚನೊಂದಿಗೆ ನುಗ್ಗಿ ಬರುತ್ತಿದ್ದ ತಾಟಕೆಯನ್ನು ಕಂಡು ಭಗವಾನ್ ಅಗಸ್ತ್ಯಋಷಿ ಪರಮಕ್ರೋಧದಿಂದ ಮಾರೀಚನನ್ನು ರಾಕ್ಷಸನಾಗು ಎಂದು ಶಪಿಸಿದ. ತಾಟಕೆಗೂ ಹಾಗೇ ಶಪಿಸಿದ.

ಪುರುಷಾದೀ ಮಹಾಯಕ್ಷೀ ವಿರೂಪಾ ವಿಕೃತಾನನಾ ।
ಇದಂ ರೂಪಂ ವಿಹಾಯಾಥ ದಾರುಣಂ ರೂಪಮಸ್ತು ತೇ ॥ ೧೨ ॥

ಮಹಾ ಯಕ್ಷಿಣಿಯಾದ ನೀನು ಈ ನಿಜ ರೂಪವನ್ನು ತೊರೆದು ನರಭಕ್ಷಕ ರಾಕ್ಷಸಿಯಾಗು. ವಿಕಾರ ಮುಖದವಳು ವಿರೂಪೆಯಾಗು. ಘೋರರೂಪವೇ ನಿನಗೆ ಇರಲಿ ಎಂದು ಮುನಿಯು ಶಪಿಸಿದನು.

ಸೈಷಾ ಶಾಪಕೃತಾಮರ್ಷಾ ತಾಟಕಾ ಕ್ರೋಧಮೂರ್ಚ್ಛಿತಾ ।
ದೇಶಮುತ್ಸಾದಯತ್ಯೇನಮಗಸ್ತ್ಯಾಚರಿತಂ ಶುಭಮ್ ॥ ೧೩ ॥

ಮುನಿಶಾಪದಿಂದ ಅವಳಿಗೆ ಅಸಹನೆ ಹೆಚ್ಚಿತು. ತಾಟಕೆ ಹೀಗೆ ಕೋಪದಿಂದ ಮೈಮರೆತು ಈ ದೇಶವನ್ನೇ ನಾಶ ಪಡಿಸುತ್ತಿದ್ದಾಳೆ. ಮಂಗಳಕರವಾದ ಅಗಸ್ತ್ಯ-ಮುನಿಯ ತಪಸ್ಸಿನ ಸ್ಥಾನವಿದು ಎಂದು ಕೋಪ.

ಏನಾಂ ರಾಘವ ದುರ್ವೃತ್ತಾಂ ಯಕ್ಷೀಂ ಪರಮದಾರುಣಾಮ್ ।
ಗೋಬ್ರಾಹ್ಮಣಹಿತಾರ್ಥಾಯ ಜಹಿ ದುಷ್ಪರಾಕ್ರಮಾಮ್ ॥ ೧೪ ॥

ರಾಮ, ಕೆಟ್ಟ ನಡತೆಯವಳು ಪರಮಕ್ರೂರಿ ದುಷ್ಪರಾಕ್ರಮ ತೋರುವವಳು ಅಂಥ ಈ ಯಕ್ಷಿಣಿಯನ್ನು ಗೋಬ್ರಾಹ್ಮಣಹಿತಕ್ಕಾಗಿ ವಧಿಸು.

ನ ಹ್ಯೇನಾಂ ಶಾಪಸಂಸ್ಪೃಷ್ಟಾಂ ಕಶ್ಚಿದುತ್ಸಹತೇ ಪುಮಾನ್ ।
ನಿಹಂತುಂ ತ್ರಿಷು ಲೋಕೇಷು ತ್ವಾಮೃತೇ ರಘುನಂದನ ॥ ೧೫ ॥

ರಾಮ, ನರಭಕ್ಷಕಳಾಗೆಂದು ಶಾಪಯುಕ್ತಳಾದ ಈ ತಾಟಕೆಯನ್ನು ಕೊಲ್ಲಲು ನಿನ್ನ ಹೊರತು ಮೂರು ಲೋಕದಲ್ಲಿ ಯಾವನೇ ಒಬ್ಬ ನರನು ಸಮರ್ಥನಾಗಿರ-ಲಾರ.

ನ ಹಿ ತೇ ಸ್ತ್ರೀವಧಕೃತೇ ಘೃಣಾ ಕಾರ್ಯಾ ನರೋತ್ತಮ ।
ಚಾತುರ್ವರ್ಣ್ಯಹಿತಾರ್ಥಾಯ ಕರ್ತವ್ಯಂ ರಾಜಸೂನುನಾ ॥ ೧೬ ॥

ಪುರುಷೋತ್ತಮ, ಇದು ಸ್ತ್ರೀಹತ್ಯೆಯಾಗುವುದೆಂದು ದಯೆ ತೋರಬೇಡ. ರಾಜಪುತ್ರನು ನಾಲ್ಕು ವರ್ಣಗಳ ಹಿತಕ್ಕಾಗಿ ಇದನ್ನು ಮಾಡಬೇಕಾಗುತ್ತದೆ.

ನೃಶಂಸಮನೃಶಂಸಂ ವಾ ಪ್ರಜಾರಕ್ಷಣಕಾರಣಾತ್ ।
ಪಾತಕಂ ವಾ ಸದೋಷಂ ವಾ ಕರ್ತವ್ಯಂ ರಕ್ಷತಾ ಸತಾ ॥ ೧೭ ॥

ಕ್ರೂರವಿರಲಿ ಕ್ರೂರವಲ್ಲದಿರಲಿ ಮಹಾಪಾಪವಿರಲಿ ಅಲ್ಪದೋಷದ್ದೇ ಇರಲಿ, ಪ್ರಜಾರಕ್ಷಣೆಗಾಗಿ ರಕ್ಷಕನಾದ ರಾಜಕುಮಾರನು ಸ್ತ್ರೀವಧೆಯನ್ನೂ ಮಾಡಬೇಕಾಗುತ್ತದೆ.

ರಾಜ್ಯಭಾರನಿಯುಕ್ತಾನಾಮೇಷ ಧರ್ಮಃ ಸನಾತನಃ ।
ಅಧರ್ಮ್ಯಾಂ ಜಹಿ ಕಾಕುತ್ಸ್ಥ ಧರ್ಮೋ ಹ್ಯಸ್ಯಾ ನ ವಿದ್ಯತೇ ॥ ೧೮ ॥

ರಾಜ್ಯಭಾರದಲ್ಲಿ ನಿಯುಕ್ತರಾದವರಿಗೆ ಇದು ಸನಾತನ ಧರ್ಮವಾಗಿರುತ್ತದೆ. ರಾಮ, ಅಧರ್ಮಿಷ್ಠಳಾದ ತಾಟಕೆಯನ್ನು ವಧಿಸು, ಇವಳಲ್ಲಿ ಧರ್ಮವೆಂಬುದೇ ಇಲ್ಲ.

ಶ್ರೂಯತೇ ಹಿ ಪುರಾ ಶಕ್ರೋ ವಿರೋಚನಸುತಾಂ ನೃಪ ।
ಪೃಥಿವೀಂ ಹಂತುಮಿಚ್ಛಂತೀಂ ಮಂಥರಾಮಭ್ಯಸೂದಯತ್ ॥ ೧೯ ॥

ರಾಮ, ಹಿಂದೆಯೂ ವಿರೋಚನ ಸುತೆಯಾದ ಮಂಥರೆ ಭೂಮಿಯನ್ನು ನಾಶ ಮಾಡಲು ಬಯಸಿದಾಗ ದೇವೇಂದ್ರನು ಅವಳನ್ನು ವಧಿಸಿದನೆಂದು ಕೇಳಿಬರುತ್ತದೆ.

ವಿಷ್ಣುನಾ ಚ ಪುರಾ ರಾಮ ಭೃಗುಪತ್ನೀ ದೃಢವ್ರತಾ ।
ಅನಿಂದ್ರಂ ಲೋಕಮಿಚ್ಛಂತೀ ಕಾವ್ಯಮಾತಾ ನಿಷೂದಿತಾ ॥ ೨೦ ॥

ರಾಮ, ಭೃಗುಪತ್ನಿ ಶುಕ್ರಾಚಾರ್ಯರ ಮಾತೆ ದೃಢವ್ರತೆಯಾಗಿದ್ದರೂ ಲೋಕದಲ್ಲಿ ದೇವೇಂದ್ರನಿರಲೇಬಾರದೆಂದು ಬಯಸಿದಾಗ ಅವಳನ್ನು ವಿಷ್ಣು ವಧಿಸಿದನೆಂದು ಕೇಳಿ ಬರುತ್ತದೆ.

ಏತೈಶ್ಚಾನ್ಯೈಶ್ಚ ಬಹುಭೀ ರಾಜಪುತ್ರ ಮಹಾತ್ಮಭಿಃ ।
ಅಧರ್ಮಸಹಿತಾ ನಾರ್ಯೋ ಹತಾಃ ಪುರುಷಸತ್ತಮೈಃ ॥
ತಸ್ಮಾದೇನಾಂ ಘೃಣಾಂ ತ್ಯಕ್ತ್ವಾ ಜಹಿ ಮಚ್ಛಾಸನಾನ್ನೃಪ ॥ ೨೧ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಪಂಚವಿಂಶಃ ಸರ್ಗಃ ॥ ೨೫ ॥

ರಾಜಕುಮಾರ, ಇವರು ಮಾತ್ರವಲ್ಲ, ಪುರುಷೋತ್ತಮರಾದ ಬೇರೆಯೂ ಬಹುಮಂದಿ ಮಹಾತ್ಮರು ಅಧರ್ಮಿಷ್ಠರಾದ ನಾರಿಯರನ್ನು ಕೊಂದಿದ್ದಾರೆ. ಅದರಿಂದ, ರಾಮ, ನನ್ನಾದೇಶದಂತೆ ಇವಳಲ್ಲಿ ದಯೆಯನ್ನು ತೊರೆದು ವಧೆ ಮಾಡು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಇಪ್ಪತ್ತೈದನೆ ಸರ್ಗ ಮುಗಿಯಿತು.

ಷಡ್‌ವಿಂಶಃ ಸರ್ಗಃ

ಮುನೇರ್ವಚನಮಕ್ಲೀಬಂ ಶ್ರುತ್ವಾ ನರವರಾತ್ಮಜಃ ।
ರಾಘವಃ ಪ್ರಾಂಜಲಿರ್ಭೂತ್ವಾ ಪ್ರತ್ಯುವಾಚ ದೃಢವ್ರತಃ ॥ ೧ ॥

ಮುನಿಯು ಬಲವಾಗಿ ಹೇಳಿದ ಮಾತನ್ನು ಕೇಳಿ ದೃಢವ್ರತನಾದ ರಾಜಕುಮಾರ ರಾಮ ಕೈಮುಗಿದು ನುಡಿದ.

ಪಿತುರ್ವಚನನಿರ್ದೇಶಾತ್ತಿತುರ್ವಚನಗೌರವಾತ್ ।
ವಚನಂ ಕೌಶಿಕಸ್ಯೇತಿ ಕರ್ತವ್ಯಮವಿಶಂಕಯಾ ॥ ೨ ॥

'ವಿಶ್ವಾಮಿತ್ರನ ಮಾತಿನಂತೆ ನಡೆಯಬೇಕೆಂ'ದು ನಮ್ಮ ತಂದೆಯ ಆದೇಶ-ವಿರುವುದರಿಂದ, ತಂದೆಯ ಮಾತಿನ ಮೇಲಿನ ಗೌರವ ಭಾವನೆಯಿಂದ ನಾನು ಈ ನಿಮ್ಮ ಆದೇಶದಂತೇ ಶಂಕೆಯಿಲ್ಲದೆ ನಡೆಯುವೆನು.

ಅನುಶಿಷ್ಟೋಽಸ್ಮ್ಯಯೋಧ್ಯಾಯಾಂ ಗುರುಮಧ್ಯೇ ಮಹಾತ್ಮನಾ ।
ಪಿತ್ರಾ ದಶರಥೇನಾಹಂ ನಾವಜ್ಞೇಯಂ ಚ ತದ್ವಚಃ ॥ ೩ ॥

ಅಯೋಧ್ಯೆಯಲ್ಲಿ ಹಿರಿಯರ ನಡುವೆ ಮಹಾತ್ಮನಾದ ನಮ್ಮ ತಂದೆ ದಶರಥನು ನನಗೆ ಈ ಬಗ್ಗೆ ಆದೇಶ ನೀಡಿದ್ದಾನೆ. ಅವನ ಆ ಮಾತನ್ನು ನಾನು ಕಡೆಗಣಿಸುವಂತಿಲ್ಲ.

ಸೋಽಹಂ ಪಿತುರ್ವಚಃ ಶ್ರುತ್ವಾ ಶಾಸನಾದ್ಬ್ರಹ್ಮವಾದಿನಃ ।
ಕರಿಷ್ಯಾಮಿ ನ ಸಂದೇಹಸ್ತಾಟಕಾವಧಮುತ್ತಮಮ್ ॥ ೪ ॥

ತಂದೆಯ ಮಾತನ್ನು ಕೇಳಿರುವ ನಾನು ಬ್ರಹ್ಮವಾದಿಯಾದ ನಿಮ್ಮ ಆದೇಶದಂತೆ ಉತ್ತಮವಾದ ತಾಟಕಾವಧವನ್ನು ಮಾಡುವೆನು. ಇದರಲ್ಲಿ ಸಂದೇಹವಿಲ್ಲ.

ಗೋಬ್ರಾಹ್ಮಣಹಿತಾರ್ಥಾಯ ದೇಶಸ್ಯಾಸ್ಯ ಸುಖಾಯ ಚ ।
ತವ ಚೈವಾಪ್ರಮೇಯಸ್ಯ ವಚನಂ ಕರ್ತುಮುದ್ಯತಃ ॥ ೫ ॥

ಗೋ ಬ್ರಾಹ್ಮಣ ಹಿತಕ್ಕಾಗಿ ಈ ದೇಶದ ಸುಖಕ್ಕಾಗಿ ಅಪರಿಮಿತ ಪ್ರಭಾವಶಾಲಿ-ಯಾದ ನಿಮ್ಮ ಮಾತನ್ನು ನಡೆಸಿಕೊಡಲು ನಾನು ಉದ್ಯುಕ್ತನಾಗಿರುವೆನು.

ಏವಮುಕ್ತ್ವಾ ಧನುರ್ಮಧ್ಯೇ ಬದ್ಧ್ವಾ ಮುಷ್ಟಿಮರಿಂದಮಃ ।
ಜ್ಯಾಘೋಷಮಕರೋತ್ತೀವ್ರಂ ದಿಶಃ ಶಬ್ದೇನ ನಾದಯನ್ ॥ ೬ ॥

ಶತ್ರುನಾಶಕನಾದ ರಾಮ ಧನುಸ್ಸಿನ ನಡುವೆ ಮುಷ್ಟಿ ಬಿಗಿದು ದಿಕ್ಕುಗಳು ಪ್ರತಿಧ್ವನಿಸುವಂತೆ ಹೆದೆ ಎಳೆದು ಠೇಂಕಾರ ಗೈದನು.

ತಸ್ಯ ಸಂರಂಭಮಾಲೋಕ್ಯ ಸಭ್ರಾತುರ್ಮುನಿಪುಂಗವಃ ।
ಸ ಹರ್ಷಮತುಲಂ ಲೇಭೇ ರಾಮಂ ಸಾಧ್ವಿತಿ ಚಾಬ್ರವೀತ್ ॥ ೭ ॥

ರಾಮ ಲಕ್ಷ್ಮಣರ ಈ ಸಡಗರವನ್ನು ಕಂಡು ಮುನಿಪುಂಗವನು ಅನುಪಮವಾದ ಹರ್ಷವನ್ನು ಹೊಂದಿದನು. ರಾಮನಿಗೆ 'ಭೇಷ್' ಎಂದೂ ಹೇಳಿದನು.

ತೇನ ಶಬ್ದೇನ ವಿತ್ರಸ್ತಾಸ್ತಾಟಕಾವನವಾಸಿನಃ ।
ತಾಟಕಾ ಚ ಸುಸಂಕ್ರುದ್ಧಾ ತೇನ ಶಬ್ದೇನ ಮೋಹಿತಾ ॥ ೮ ॥

ಆ ಧ್ವನಿಯಿಂದ ತಾಟಕಾವನವಾಸಿಗಳಾದ ರಾಕ್ಷಸರು ಭಯಗೊಂಡರು. ತಾಟಕೆಯೂ ಬಲು ಕುಪಿತಳಾದಳು. ಆ ಶಬ್ದದಿಂದ ವ್ಯಾಕುಲಗೊಂಡಳು.

ತಂ ಶಬ್ದಮಭಿನಿಧ್ಯಾಯ ರಾಕ್ಷಸೀ ಕ್ರೋಧಮೂರ್ಚ್ಛಿತಾ ।
ಶ್ರುತ್ವಾ ಚಾಭ್ಯದ್ರವದ್ವೇಗಾದ್ಯತಃ ಶಬ್ದೋ ವಿನಿಃಸೃತಃ ॥ ೯ ॥

ಆ ಶಬ್ದವನ್ನು ಕೇಳಿ ರಾಕ್ಷಸಿಯು ಕೋಪದಿಂದ ಮೈಮರೆತು, ಶಬ್ದ ಎಲ್ಲಿಂದ ಹೊರಟಿತೋ ಆ ಪ್ರದೇಶವನ್ನು ಗುರಿಯಾಗಿಸಿ ವೇಗದಿಂದ ಧಾವಿಸಿದಳು.

ತಾಂ ದೃಷ್ಟ್ವಾ ರಾಘವಃ ಕ್ರುದ್ಧಾಂ ವಿಕೃತಾಂ ವಿಕೃತಾನನಾಮ್ ।
ಪ್ರಮಾಣೇನಾತಿವೃದ್ಧಾಂ ಚ ಲಕ್ಷ್ಮಣಂ ಸೋಽಭ್ಯಭಾಷತ ॥ ೧೦ ॥

ತಾಟಕೆ ಕ್ರುದ್ಧಳಾಗಿ ವಿಕಾರಗೊಂಡಳು. ದೇಹ ಪರಿಮಾಣದಲ್ಲಿ ಅತಿಯಾಗಿ ಬೆಳೆದಳು. ವಿಕೃತವಾಗಿ ಬಾಯಿ ತೆರೆದುಕೊಂಡು ಬಂದ ಅವಳನ್ನು ಕಂಡು ರಾಮ ಲಕ್ಷ್ಮಣನಿಗೆ ಹೇಳಿದ.

ಪಶ್ಯ ಲಕ್ಷ್ಮಣ ಯಕ್ಷಿಣ್ಯಾ ಭೈರವಂ ದಾರುಣಂ ವಪುಃ ।
ಭಿದ್ಯೇರನ್ ದರ್ಶನಾದಸ್ಯಾ ಭೀರೂಣಾಂ ಹೃದಯಾನಿ ಚ ॥ ೧೧ ॥

ನೋಡು ಲಕ್ಷ್ಮಣ, ಯಕ್ಷಿಣಿಯ ಕ್ರೂರ ಭಯಂಕರ ಶರೀರವನ್ನು ಅವಳ ದರ್ಶನಮಾತ್ರದಿಂದಲೇ ಹೇಡಿಗಳ ಹೃದಯಗಳೇ ಒಡೆದುಹೋಗುವುವು.

ಏನಾಂ ಪಶ್ಯ ದುರಾಧರ್ಷಾಂ ಮಾಯಾಬಲಸಮನ್ವಿತಾಮ್ ।
ವಿನಿವೃತ್ತಾಂ ಕರೋಮ್ಯದ್ಯ ಹೃತಕರ್ಣಾಗ್ರನಾಸಿಕಾಮ್ ॥ ೧೨ ॥

ಇವಳನ್ನು ನೋಡು. ಬೇರೆಯವರಿಗೆ ಇದಿರಿಸಲಾಗದವಳು ಅದೃಶ್ಯಳಾಗಿ ನಿಂತುಹೋರಾಡುವ ಮಾಯೆಯ ಬಲ ಉಳ್ಳವಳು. ಅವಳನ್ನು ಈಗಲೆ ನಾನು ಕಿವಿ ತುದಿಮೂಗುಗಳನ್ನು ಕತ್ತರಿಸಿ ಹೊಡೆದೋಡಿಸುತ್ತೇನೆ.

ನ ಹ್ಯೇನಾಮುತ್ಸಹೇ ಹಂತುಂ ಸ್ತ್ರೀಸ್ವಭಾವೇನ ರಕ್ಷಿತಾಮ್ ।
ವೀರ್ಯಂ ಚಾಸ್ಯಾ ಗತಿಂ ಚಾಪಿ ಹನಿಷ್ಯಾಮೀತಿ ಮೇ ಮತಿಃ ॥ ೧೩ ॥

ಇವಳನ್ನು ನಾನು ಕೊಲ್ಲಲಾರೆ, ಕೊಲ್ಲಬೇಕೆಂದರೆ ಅವಳ ಸ್ತ್ರೀತ್ವವು ಅಡ್ಡಿಯಾಗಿ ಅವಳಿಗೆ ರಕ್ಷಣೆ ನೀಡುತ್ತದೆ. ಅದರಿಂದ ಅವಳ ಕೈಕಾಲುಗಳನ್ನು ಕತ್ತರಿಸಿ, ಹೋರಾಡಲೂ ಓಡಾಡಲೂ ಆಗದಂತೆ ಮಾಡುವುದೇ ಸರಿ ಎಂದು ನನ್ನ ಅಭಿಪ್ರಾಯ.

ಏವಂ ಬ್ರುವಾಣೇ ರಾಮೇ ತು ತಾಟಕಾ ಕ್ರೋಧಮೂರ್ಚ್ಛಿತಾ ।
ಉದ್ಯಮ್ಯ ಬಾಹೂ ಗರ್ಜಂತೀ ರಾಮಮೇವಾಭ್ಯಧಾವತ ॥ ೧೪ ॥

ರಾಮನು ಹೀಗೆ ಹೇಳುತ್ತಿದ್ದಂತೆಯೇ, ತಾಟಕೆ ಕೋಪದಿಂದ ಮೈಮರೆತು ಎರಡೂ ತೋಳುಗಳನ್ನೆತ್ತಿ ಆರ್ಭಟಿಸುತ್ತ ರಾಮನ ಕಡೆಗೇ ಧಾವಿಸಿಬಂದಳು.

ವಿಶ್ವಾಮಿತ್ರಸ್ತು ಬ್ರಹ್ಮರ್ಷಿರ್ಹುಂಕಾರೇಣಾಭಿಭರ್ತ್ಸ್ಯ ತಾಮ್ ।
ಸ್ವಸ್ತಿ ರಾಘವಯೋರಸ್ತು ಜಯಂ ಚೈವಾಭ್ಯಭಾಷತ ॥ ೧೫ ॥

ಬ್ರಹ್ಮರ್ಷಿ ವಿಶ್ವಾಮಿತ್ರನು ಹುಂಕಾರದಿಂದ ರಾಕ್ಷಸಿಯನ್ನು ಧಿಕ್ಕರಿಸಿ, ರಾಮ ಲಕ್ಷ್ಮಣರಿಗೆ 'ಮಂಗಳವಾಗಲಿ ಜಯವಾಗಲಿ' ಎಂದರು.

ಉದ್ಧೂನ್ವಾನಾ ರಜೋ ಘೋರಂ ತಾಟಕಾ ರಾಘವಾವುಭೌ ।
ರಜೋಮೋಹೇನ ಮಹತಾ ಮುಹೂರ್ತಂ ಸಾ ವ್ಯಮೋಹಯತ್ ॥

ತಾಟಕೆ ಘೋರವಾಗಿ ಧೂಳನ್ನೆಬ್ಬಿಸಿ ಒಂದು ಮುಹೂರ್ತಕಾಲ ರಾಮಲಕ್ಷ್ಮಣರಿಗೆ ಧೂಳಿನಿಂದ ಏನೂ ಕಾಣದಂತೆ ಮಾಡಿದಳು.

ತತೋ ಮಾಯಾಂ ಸಮಾಸ್ಥಾಯ ಶಿಲಾವರ್ಷೇಣ ರಾಘವೌ ।
ಅವಾಕಿರತ್ಸುಮಹತಾ ತತಶ್ಚುಕ್ರೋಧ ರಾಘವಃ ॥ ೧೬ ॥

ಬಳಿಕ ಅತೃಶ್ಯಳಾಗಿ ನಿಂತು ಮಾಯೆಯ ಬಲದಿಂದ ರಾಮಲಕ್ಷ್ಮಣರ ಮೇಲೆ ಬಂಡೆಗಲ್ಲುಗಳ ಸುರಿಮಳೆ ಸುರಿಸಿದಳು. ರಾಮ ಆಗ ಕುಪಿತನಾದ.

ಶಿಲಾವರ್ಷಂ ಮಹತ್ತಸ್ಯಾಃ ಶರವರ್ಷೇಣ ರಾಘವಃ ।
ಪ್ರತಿಹತ್ಯೋಪಧಾವಂತ್ಯಾಃ ಕರೌ ಚಿಚ್ಛೇದ ಪತ್ರಿಭಿಃ ॥ ೧೮ ॥

ಕಲ್ಲಿನ ಮಳೆಯನ್ನು ರಾಮ ಬಾಣಗಳ ಮಳೆಯಿಂದ ತಡೆದು ಬಳಿಗೆ ಬಂದ ಅವಳ ತೋಳುಗಳನ್ನು ಬಾಣಗಳಿಂದ ತರಿದ.

ತತಶ್ಛಿನ್ನಭುಜಾಂ ಶ್ರಾಂತಾಮಭ್ಯಾಶೇ ಪರಿಗರ್ಜತೀಂ ।
ಸೌಮಿತ್ರಿರಕರೋತ್ಕೋಧಾದ್ದತಕರ್ಣಾಗ್ರನಾಸಿಕಾಮ್ ॥ ೧೯ ॥

ತೋಳುಗಳನ್ನು ಕಡಿದುಕೊಂಡು ಶ್ರಮದಿಂದ ಬಳಿಯಲ್ಲಿಯೇ ಜೋರಾಗಿ ಗರ್ಜಿಸುತ್ತಿದ್ದ ಆ ತಾಟಕೆಯ ಕಿವಿ ಮೂಗುಗಳನ್ನು ಲಕ್ಷ್ಮಣ ಕೋಪದಿಂದ ಕತ್ತರಿಸಿದ.

ಕಾಮರೂಪಧರಾ ಸದ್ಯಃ ಕೃತ್ವಾ ರೂಪಾಣ್ಯನೇಕಶಃ ।
ಅಂತರ್ಧಾನಂ ಗತಾ ಯಕ್ಷೀ ಮೋಹಯಂತೀವ ಮಾಯಯಾ ॥
ಅಶ್ಮವರ್ಷಂ ವಿಮುಂಚಂತೀ ಭೈರವಂ ವಿಚಚಾರ ಹ ॥ ೨೦ ॥

ಬೇಕಾದ ರೂಪಗಳನ್ನು ಧರಿಸಬಲ್ಲ ತಾಟಕೆ ಒಡನೆ ಅನೇಕ ರೂಪಗಳನ್ನು ತಳೆದು ಅಂತರ್ಧಾನಳಾಗಿ ಮಾಯೆಯಿಂದ ಭೀಕರವಾದ ಕಲ್ಲಿನ ಮಳೆ ಸುರಿಸುತ್ತ ರಾಮಲಕ್ಷ್ಮಣರನ್ನು ಮೋಹಗೊಳಿಸುತ್ತ ಸಂಚರಿಸಿದಳು.

ತತಸ್ತಾವಶ್ಮವರ್ಷೇಣ ಕೀರ್ಯಮಾಣೌ ಸಮಂತತಃ ।
ದೃಷ್ಟ್ವಾ ಗಾಧಿಸುತಃ ಶ್ರೀಮಾನಿದಂ ವಚನಮಬ್ರವೀತ್ ॥ ೨೧ ॥

ರಾಮಲಕ್ಷ್ಮಣರು ಎಲ್ಲೆಡೆ ಕಲ್ಲಿನ ಮಳೆಯಲ್ಲಿ ಸಿಲುಕಿದ್ದನ್ನು ಕಂಡು ವಿಶ್ವಾಮಿತ್ರರು ಈಗ ರಾಮ ತಾಟಕಾವಧ ಮಾಡಿಯೆ ತೀರುತ್ತಾನೆ ಎಂದು ಸಂತೋಷದಿಂದ ಕಾಂತಿಪೂರ್ಣರಾಗಿ ಈ ಮಾತನ್ನು ಹೇಳಿದರು.

ಅಲಂ ತೇ ಘೃಣಯಾ ವೀರ ಪಾಪೈಷಾ ದುಷ್ಟಚಾರಿಣೀ ।
ಯಜ್ಞವಿಘ್ನಕರೀ ಯಕ್ಷೀ ಪುರಾ ವರ್ಧತಿ ಮಾಯಯಾ ॥ ೨೨ ॥

ವೀರ ರಾಮ! ಸ್ತ್ರೀ ಎಂದು ನೀನು ದಯೆ ತೋರುವುದು ಬೇಡ, ಅದೃಶ್ಯಳಾಗಿ ಕಲ್ಲಿನ ಮಳೆ ಸುರಿಸುವ ದುಷ್ಟ ಕೃತ್ಯ ಮಾಡುವವಳು, ಯಜ್ಞ ವಿಘ್ನವನ್ನೂ

ಮಾಡುವವಳು ಪಾಪಿ ಇವಳು. ದಯೆಯಿಂದ ಹೋಗಲಿ ಎಂದು ಬಿಟ್ಟರೆ ಮಾಯೆಯಿಂದ ಇನ್ನೂ ಹೆಚ್ಚು ಪಾಪ ಮಾಡುವಳು.

ವಧ್ಯತಾಂ ತಾವದೇವೈಷಾ ಪುರಾ ಸಂಧ್ಯಾ ಪ್ರವರ್ತತೇ ।
ರಕ್ಷಾಂಸಿ ಸಂಧ್ಯಾಕಾಲೇಷು ದುರ್ಧರ್ಷಾಣಿ ಭವಂತಿ ವೈ ॥ ೨೩ ॥

ಸಂಧ್ಯಾಕಾಲ ಬರುವುದರೊಳಗೆ ಇವಳನ್ನು ಕೊಲ್ಲು, ರಾಕ್ಷಸರು ಸಂಧ್ಯಾಕಾಲಗಳಲ್ಲಿ ಇದಿರಿಸಲಾಗದವರಾಗಿ ಬಿಡುತ್ತಾರೆ.

ಇತ್ಯುಕ್ತಸ್ತು ತದಾ ಯಕ್ಷೀಮಶ್ಮವೃಷ್ಟ್ಯಾಭಿವರ್ಷತೀಮ್ ।
ದರ್ಶಯಞ್ಶಬ್ದವೇಧಿತ್ವಂ ತಾಂ ರುರೋಧ ಸ ಸಾಯಕೈಃ ॥ ೨೪ ॥

ಮುನಿ ಹೀಗೆ ಹೇಳಿದಾಗ ರಾಮನು, ಶಬ್ದದಿಂದಲೇ ಶತ್ರು ಎಲ್ಲಿ ಇರುವನೆಂದು ತಿಳಿದು ಬಾಣ ಎಸೆಯುವ ಶಬ್ದವೇಧಿ ತಾನು ಎನ್ನುವುದನ್ನು ತೋರಿಸುತ್ತ, ಅದೃಶ್ಯಳಾಗಿ ಕಲ್ಲಿನ ಮಳೆ ಸುರಿಸುತ್ತಿದ್ದ ಯಕ್ಷಿಣಿಯನ್ನು ಕಣ್ಣಾರೆ ನೋಡದೇ ಬಾಣಗಳಿಂದ ಶರಪಂಜರದಲ್ಲಿ ಬಂಧಿಸಿದ.

ಸಾ ರುದ್ಧಾ ಶರಜಾಲೇನ ಮಾಯಾಬಲಸಮನ್ವಿತಾ ।
ಅಭಿದುದ್ರಾವ ಕಾಕುತ್ಸ್ಥಂ ಲಕ್ಷ್ಮಣಂ ಚ ವಿನೇದುಷೀ ॥ ೨೫ ॥

ಅಂತರ್ಧಾನ ವ್ಯರ್ಥವೆಂದು ಅದನ್ನು ಬಿಟ್ಟು ಗರ್ಜಿಸುತ್ತ ಮಾಯಾ ಬಲದಿಂದ ರಾಮಲಕ್ಷ್ಮಣರ ಇದಿರಿಗೇ ಧಾವಿಸಿ ಬಂದಳು ತಾಟಕೆ.

ತಾಮಾಪತಂತೀಂ ವೇಗೇನ ವಿಕ್ರಾಂತಾಮಶನೀಮಿವ ।
ಶರೇಣೋರಸಿ ವಿವ್ಯಾಧ ಸಾ ಪಪಾತ ಮಮಾರ ಚ ॥ ೨೬ ॥

ಆಕ್ರಮಿಸಿ ವೇಗದಿಂದ ಮುನ್ನುಗ್ಗಿ ಬರುತ್ತಿದ್ದ ತಾಟಕೆಯನ್ನು ರಾಮಬಾಣದಿಂದ ಎದೆಗೆ ಹೊಡೆದ. ಅವಳು ಬಿದ್ದು ಸತ್ತಳು.

ತಾಂ ಹತಾಂ ಭೀಮಸಂಕಾಶಾಂ ದೃಷ್ಟ್ವಾ ಸುರಪತಿಸ್ತದಾ ।
ಸಾಧು ಸಾಧ್ವಿತಿ ಕಾಕುತ್ಸ್ಥಂ ಸುರಾಶ್ಚ ಸಮಪೂಜಯನ್ ॥ ೨೭ ॥

ಭಯಂಕರರೂಪಳಾಗಿ ಹತಳಾದ ತಾಟಕೆಯನ್ನು ನೋಡಿ ದೇವೇಂದ್ರನೂ ದೇವತೆಗಳೂ ಭಲೆ ಭಲೆ ಎಂದು ರಾಮನನ್ನು ಹೊಗಳಿದರು.

ಉವಾಚ ಪರಮಪ್ರೀತಃ ಸಹಸ್ರಾಕ್ಷಃ ಪುರಂದರಃ ।
ಸುರಾಶ್ಚ ಸರ್ವೇ ಸಂಹೃಷ್ಟಾ ವಿಶ್ವಾಮಿತ್ರಮಥಾಬ್ರುವನ್ ॥ ೨೮ ॥

ಸಹಸ್ರಾಕ್ಷನಾದ ಇಂದ್ರನು ಬಹಳ ಸಂತುಷ್ಟನಾಗಿ ವಿಶ್ವಾಮಿತ್ರನಿಗೆ ಹೇಳಿದ, ಎಲ್ಲ ದೇವತೆಗಳೂ ಹರ್ಷಿತರಾಗಿ ವಿಶ್ವಾಮಿತ್ರನಿಗೆ ಹೇಳಿದರು.

ಮುನೇ ಕೌಶಿಕ ಭದ್ರಂ ತೇ ಸೇಂದ್ರಾಃ ಸರ್ವೇ ಮರುದ್ಗಣಾಃ ।
ತೋಷಿತಾಃ ಕರ್ಮಣಾಽನೇನ ಸ್ನೇಹಂ ದರ್ಶಯ ರಾಘವೇ ॥ ೨೯ ॥

'ವಿಶ್ವಾಮಿತ್ರ ಮುನಿಯೆ, ನಿನಗೆ ಒಳ್ಳೆಯದಾಗಲಿ, ಇಂದ್ರನೂ ಎಲ್ಲ ಮರುತರ ಸಮೂಹಗಳೂ ನಾವು ಈ ತಾಟಕಾವಧ ಎಂಬ ಕರ್ಮದಿಂದ ಸಂತುಷ್ಟರಾಗಿದ್ದೇವೆ. ರಾಮನಲ್ಲಿ ನೀನು ನಿನ್ನ ಪ್ರೀತಿಯು ಎಷ್ಟೆಂಬುದನ್ನು ತೋರಿಸು.'

ಪ್ರಜಾಪತೇಃ ಕೃಶಾಶ್ವಸ್ಯ ಪುತ್ರಾನ್ಸತ್ಯಪರಾಕ್ರಮಾನ್ ।
ತಪೋಬಲಭೃತಾನ್ಬ್ರಹ್ಮನ್ ರಾಘವಾಯ ನಿವೇದಯ ॥ ೩೦ ॥

ಮುನಿಯೆ, ನಿನ್ನ ಪ್ರೀತಿಯ ಕುರುಹಾಗಿ ಕೃಶಾಶ್ವಪ್ರಜಾಪತಿಯ ಮಕ್ಕಳಾದ ಸತ್ಯಪರಾಕ್ರಮಿಗಳಾದ ತಪೋಬಲದಿಂದ ಪುಷ್ಟರಾದ ಅಸ್ತ್ರದೇವತೆಗಳನ್ನು ರಾಮನಿಗೆ ಅರ್ಪಿಸು.

ಪಾತ್ರಭೂತಶ್ಚ ತೇ ಬ್ರಹ್ಮಂಸ್ತವಾನುಗಮನೇ ರತಃ ।
ಕರ್ತವ್ಯಂ ಚ ಮಹತ್ಕರ್ಮ ಸುರಾಣಾಂ ರಾಜಸೂನುನಾ ॥ ೩೧ ॥

ಮುನಿಯೆ, ನಿನ್ನ ಶುಶ್ರೂಷೆಯಲ್ಲಿ ನಿರತನಾಗಿರುವ ರಾಮ ನಿನ್ನ ಪ್ರೀತಿಗೆ ಪಾತ್ರ ಭೂತನಾಗಿದ್ದಾನೆ ಮಾತ್ರವಲ್ಲದೆ ಅವನು ಮುಂದೆ ಮಹತ್ತಾದ ದೇವ ಕಾರ್ಯ-ಗಳನ್ನೂ ಮಾಡಬೇಕಿದೆ.

ಏವಮುಕ್ತ್ವಾ ಸುರಾಃ ಸರ್ವೇ ಜಗ್ಮುರ್ಹೃಷ್ಟಾ ಯಥಾಗತಮ್ ।
ವಿಶ್ವಾಮಿತ್ರಂ ಪೂಜಯಂತಸ್ತತಃ ಸಂಧ್ಯಾ ಪ್ರವರ್ತತೇ ॥ ೩೨ ॥

ಹೀಗೆ ಹೇಳಿ ಎಲ್ಲ ದೇವತೆಗಳೂ ಹರ್ಷಿತರಾಗಿ ವಿಶ್ವಾಮಿತ್ರನನ್ನು ಹೊಗಳುತ್ತ ಬಂದ ಹಾಗೇ ಹಿಂದೆ ಹೋದರು. ಆಗ ಸಂಜೆಯಾಯಿತು.

ತತೋ ಮುನಿವರಃ ಪ್ರೀತಸ್ತಾಟಕಾವಧತೋಷಿತಃ ।
ಮೂರ್ಧ್ನಿ ರಾಮಮುಪಾಘ್ರಾಯ ಇದಂ ವಚನಮಬ್ರವೀತ್ ॥ ೩೩ ॥

ಬಳಿಕ ಮುನಿವರ ವಿಶ್ವಾಮಿತ್ರನು ತಾಟಕಾ ವಧದಿಂದ ಸಂತುಷ್ಟನಾಗಿ ತೃಪ್ತಿಯಿಂದ ರಾಮನ ನೆತ್ತಿಯನ್ನು ಆಘ್ರಾಣಿಸಿ ಈ ಮಾತನ್ನು ನುಡಿದ.

ಇಹಾದ್ಯ ರಜನೀಂ ರಾಮ ವಸಾಮ ಶುಭದರ್ಶನ ।
ಶ್ವಃಪ್ರಭಾತೇ ಗಮಿಷ್ಯಾಮಸ್ತದಾಶ್ರಮಪದಂ ಮಮ ॥ ೩೪ ॥

'ಮಂಗಳಕರವಾದ ದರ್ಶನ ನೀಡುವ ರಾಮನೆ, ಇಂದು ಇಲ್ಲಿ ರಾತ್ರಿ ಪೂರ್ತಿ ವಾಸ ಮಾಡೋಣ. ನಾಳೆ ಬೆಳಿಗ್ಗೆ ನಮ್ಮ ಆಶ್ರಮಕ್ಕೆ ಹೋಗೋಣ,' ಎಂದು.

ವಿಶ್ವಾಮಿತ್ರವಚಃ ಶ್ರುತ್ವಾ ಹೃಷ್ಟೋ ದಶರಥಾತ್ಮಜಃ ।
ಉವಾಸ ರಜನೀಂ ತತ್ರ ತಾಟಕಾಯಾ ವನೇ ಸುಖಮ್ ॥ ೩೫ ॥

ವಿಶ್ವಾಮಿತ್ರನ ಮಾತನ್ನು ಕೇಳಿ ಹರ್ಷಿತನಾದ ರಾಮ ರಾತ್ರಿಪೂರ್ತಿ ಆ ತಾಟಕಾವನದಲ್ಲಿ ಸುಖವಾಗಿ ವಾಸ ಮಾಡಿದ.

ಮುಕ್ತಶಾಪಂ ವನಂ ತಚ್ಚ ತಸ್ಮಿನ್ನೇವ ತದಾಹನಿ ।
ಚಂಪಕಾಶೋಕಪುನ್ನಾಗಮಲ್ಲಿಕಾದ್ಯೈಃ ಸುಶೋಭಿತಮ್ ॥ ೩೬ ॥

ಚೂತೈಶ್ಚ ಪನಸೈಃ ಪೂಗೈರ್ನಾರಿಕೇಲೈಶ್ಚ ಶೋಭಿತಮ್ ।
ವಾಪೀಕೂಪತಟಾಕೈಶ್ಚ ದೀರ್ಘಿಕಾಭಿರಲಂಕೃತಮ್ ।
ರಮಣೀಯಂ ವಿಬಭ್ರಾಜ ಯಥಾ ಚೈತ್ರರಥಂ ವನಮ್ ॥ ೩೭ ॥

ಆಗ ಆದೇ ತಾಟಕಾವನವು ಶಾಪಮುಕ್ತವಾಗಿ ಸಂಪಿಗೆ ಅಶೋಕ ಪುನ್ನಾಗ ಮಲ್ಲಿಕಾದಿ ಪುಷ್ಪಗಳಿಂದಲೂ ಚೂತ ಪನಸ ಪೂಗ ನಾರಿಕೇಲ ಫಲಗಳಿಂದಲೂ ಶೋಭಿತವಾಯಿತು. ವಾಪೀ ಕೂಪ ತಟಾಕ ದೀರ್ಘಿಕಾಗಳಿಂದ ಅಲಂಕೃತವಾಗಿ ಚೈತ್ರರಥ ವನದಂತೆ ರಮಣೀಯವಾಗಿ ಶೋಭಿಸಿತು.

ನಿಹತ್ಯ ತಾಂ ಯಕ್ಷಸುತಾಂ ಸ ರಾಮಃ
ಪ್ರಶಸ್ಯಮಾನಃ ಸುರಸಿದ್ಧಸಂಘೈಃ ।
ಉವಾಸ ತಸ್ಮಿನ್ಮುನಿನಾ ಸಹೈವ
ಪ್ರಭಾತವೇಲಾಂ ಪ್ರತಿಬೋಧ್ಯಮಾನಃ ॥ ೩೮ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಷಡ್‌ವಿಂಶಃ ಸರ್ಗಃ ॥ ೨೬ ॥

ಶ್ರೀರಾಮನು ಆ ತಾಟಕೆಯನ್ನು ಕೊಂದು ಸುರರಿಂದ ಸಿದ್ಧರಿಂದಲೂ ಸ್ತುತಿಸಿ-ಕೊಳ್ಳುತ್ತ ಆ ತಾಟಕಾವನದಲ್ಲಿ ವಿಶ್ವಾಮಿತ್ರ ಮುನಿಯೊಂದಿಗೆ ರಾತ್ರಿಕಾಲದಲ್ಲಿ ವಾಸ ಮಾಡಿದನು. ಬೆಳಗಾಗುವ ಕಾಲದಲ್ಲಿ ವಿಶ್ವಾಮಿತ್ರನು ಎಬ್ಬಿಸಿದಾಗ ಎಚ್ಚೆತ್ತನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಇಪ್ಪತ್ತಾರನೆ ಅಧ್ಯಾಯ ಮುಗಿಯಿತು.

ಸಪ್ತವಿಂಶಃ ಸರ್ಗಃ

ಅಥ ತಾಂ ರಜನೀಮುಷ್ಯ ವಿಶ್ವಾಮಿತ್ರೋ ಮಹಾಯಶಾಃ ।
ಪ್ರಹಸ್ಯ ರಾಘವಂ ವಾಕ್ಯಮುವಾಚ ಮಧುರಾಕ್ಷರಮ್ ॥ ೧ ॥

ಆ ರಾತ್ರಿ ತಾಟಕಾವನದಲ್ಲಿ ವಾಸ ಮಾಡಿ ಬೆಳಗಾದಾಗ ಮಹಾಕೀರ್ತಿಶಾಲಿಯಾದ ವಿಶ್ವಾಮಿತ್ರನು ರಾಮನಿಗೆ ಮಧುರಧ್ವನಿಯಿಂದ ನಕ್ಕು ನುಡಿದ.

ಪರಿತುಷ್ಟೋಽಸ್ಮಿ ಭದ್ರಂ ತೇ ರಾಜಪುತ್ರ ಮಹಾಯಶಃ ।
ಪ್ರೀತ್ಯಾ ಪರಮಯಾ ಯುಕ್ತೋ ದದಾಮ್ಯಸ್ತ್ರಾಣಿ ಸರ್ವಶಃ ॥ ೨ ॥

ಮಹಾಯಶಸ್ವಿಯಾದ ರಾಜಕುಮಾರನೆ ನಿನ್ನಲ್ಲಿ ನಾನು ಬಲು ಸಂತುಷ್ಟನಾಗಿದ್ದೇನೆ ನಿನಗೆ ಒಳ್ಳೆಯದಾಗಲಿ. ಪರಮಪ್ರೀತಿಯುಕ್ತನಾಗಿ ನಾನು ನಿನಗೆ ಎಲ್ಲ ಅಸ್ತ್ರಗಳನ್ನೂ ಹೇಳಿ ಕೊಡುತ್ತೇನೆ.

ದೇವಾಸುರಗಣಾನ್ವಾಪಿ ಸಗಂಧರ್ವೋರಗಾನಪಿ ।
ಯೈರಮಿತ್ರಾನ್ಸಸಹ್ಯಾಜೌ ವಶೀಕೃತ್ಯ ಜಯಿಷ್ಯಸಿ ॥ ೩ ॥

ವಿರೋಧಿಗಳು ದೇವ ಅಸುರಗಣಗಳಿರಲಿ ಗಂಧರ್ವ ನಾಗರಿರಲಿ ಯುದ್ಧದಲ್ಲಿ ಅವರನ್ನು ನೀನು ಈ ಅಸ್ತ್ರಗಳಿಂದ ಬಲವಾಗಿ ವಶೀಕರಿಸಿಕೊಂಡು ಗೆಲ್ಲುವೆ.

ತಾನಿ ದಿವ್ಯಾನಿ ಭದ್ರಂ ತೇ ದದಾಮ್ಯಸ್ತ್ರಾಣಿ ಸರ್ವಶಃ ।
ದಂಡಚಕ್ರಂ ಮಹದ್ದಿವ್ಯಂ ತವ ದಾಸ್ಯಾಮಿ ರಾಘವ ॥ ೪ ॥

ನಿನಗೆ ಒಳ್ಳೆಯದಾಗಲಿ ಆ ಎಲ್ಲ ಅಸ್ತ್ರಗಳನ್ನೂ ನಿನಗೆ ಹೇಳಿ ಕೊಡುತ್ತೇನೆ ರಾಮ, ದಂಡಚಕ್ರವು ಮಹಾದಿವ್ಯ ಅಸ್ತ್ರ. ಅದನ್ನು ನಿನಗೆ ಹೇಳಿಕೊಡುತ್ತೇನೆ.

ಧರ್ಮಚಕ್ರಂ ತತೋ ವೀರ ಕಾಲಚಕ್ರಂ ತಥೈವ ಚ ।
ವಿಷ್ಣುಚಕ್ರಂ ತಥಾತ್ಯುಗ್ರಮೈಂದ್ರಮಸ್ತ್ರಂ ತಥೈವ ಚ ॥ ೫ ॥

ಧರ್ಮಚಕ್ರ ಕಾಲಚಕ್ರ ವಿಷ್ಣುಚಕ್ರ ಮತ್ತು ಅತ್ಯುಗ್ರವಾದ ಐಂದ್ರಾಸ್ತ್ರಗಳನ್ನು ಕೊಡುತ್ತೇನೆ.

ವಜ್ರಮಸ್ತ್ರಂ ನರಶ್ರೇಷ್ಠ ಶೈವಂ ಶೂಲವರಂ ತಥಾ ।
ಅಸ್ತ್ರಂ ಬ್ರಹ್ಮಶಿರಶ್ಚೈವ ಐಷೀಕಮಪಿ ರಾಘವ ।

ದದಾಮಿ ತೇ ಮಹಾಬಾಹೋ ಬ್ರಾಹ್ಮಮಸ್ತ್ರಮನುತ್ತಮಮ್ ॥ ೬ ॥

ವಜ್ರಾಸ್ತ್ರ, ಶೈವಶೂಲ ಬ್ರಹ್ಮಶಿರೋಸ್ತ್ರ ಐಷೀಕಾಸ್ತ್ರ ಮತ್ತು ಅತ್ಯುತ್ತಮವಾದ ಬ್ರಹ್ಮಾಸ್ತ್ರ ಇವನ್ನೂ ಹೇಳಿ ಕೊಡುವೆನು.

ಗದೇ ದ್ವೇ ಚೈವ ಕಾಕುತ್ಸ್ಥ ಮೋದಕೀ ಶಿಖರೀ ಉಭೇ ।
ಪ್ರದೀಪ್ತೇ ನರಶಾರ್ದೂಲ ಪ್ರಯಚ್ಛಾಮಿ ನೃಪಾತ್ಮಜ ॥ ೭ ॥

ಮೋದಕೀ ಶಿಖರೀ ಎಂಬ ಎರಡು ಗದೆಗಳನ್ನೂ ಕೊಡುವೆನು.

ಧರ್ಮಪಾಶಮಹಂ ರಾಮ ಕಾಲಪಾಶಂ ತಥೈವ ಚ ।
ಪಾಶಂ ವಾರುಣಮಸ್ತ್ರಂ ಚ ದದಾಮ್ಯಹಮನುತ್ತಮಮ್ ॥ ೮ ॥

ಧರ್ಮಪಾಶ ಕಾಲಪಾಶ ವರುಣಪಾಶ ಈ ಉತ್ತಮ ಅಸ್ತ್ರಗಳನ್ನೂ ಕೊಡುವೆನು.

ಅಶನೀ ದ್ವೇ ಪ್ರಯಚ್ಛಾಮಿ ಶುಷ್ಕಾರ್ದ್ರೇ ರಘುನಂದನ ।
ದದಾಮಿ ಚಾಸ್ತ್ರಂ ಪೈನಾಕಮಸ್ತ್ರಂ ನಾರಾಯಣಂ ತಥಾ ॥ ೯ ॥

ಶುಷ್ಕಾಶನಿ–ಆರ್ದ್ರಾಶನಿ ಅಸ್ತ್ರಗಳು ಪೈನಾಕಾಸ್ತ್ರ ಮತ್ತು ನಾರಾಯಣಾಸ್ತ್ರಗಳನ್ನು ಕೊಡುತ್ತೇನೆ.

ಆಗ್ನೇಯಮಸ್ತ್ರಂ ದಯಿತಂ ಶಿಖರಂ ನಾಮ ನಾಮತಃ ।
ವಾಯವ್ಯಂ ಪ್ರಥಮಂ ನಾಮ ದದಾಮಿ ಚ ತವಾನಘ ॥ ೧೦ ॥

ಶಿಖರ ನಾಮಕವಾದ ಆಗ್ನೇಯಾಸ್ತ್ರ ಪ್ರಥಮ ನಾಮಕ ವಾಯವ್ಯಾಸ್ತ್ರಗಳನ್ನು ಕೊಡುತ್ತೇನೆ.

ಅಸ್ತ್ರಂ ಹಯಶಿರೋ ನಾಮ ಕ್ರೌಂಚಮಸ್ತ್ರಂ ತಥೈವ ಚ ।
ಶಕ್ತಿದ್ವಯಂ ಚ ಕಾಕುತ್ಸ್ಥ ದದಾಮಿ ತವ ರಾಘವ ॥ ೧೧ ॥

ಹಯಶಿರೋಸ್ತ್ರ ಕ್ರೌಂಚಾಸ್ತ್ರ ಶಕ್ತಿದ್ವಯಗಳನ್ನೂ ಕೊಡುತ್ತೇನೆ.

ಕಂಕಾಲಂ ಮುಸಲಂ ಘೋರಂ ಕಾಪಾಲಮಥ ಕಂಕಣಮ್ ।
ಧಾರಯಂತ್ಯಸುರಾ ಯಾನಿ ದದಾಮ್ಯೇತಾನಿ ಸರ್ವಶಃ ॥ ೧೨ ॥

ಕಂಕಾಲ ಮುಸಲ ಕಾಪಾಲ ಕಂಕಣ ಇವನ್ನು ಅಸುರರು ಧರಿಸುತ್ತಾರೆ. ಅವನ್ನೂ ಕೊಡುತ್ತೇನೆ.

ವೈದ್ಯಾಧರಂ ಮಹಾಸ್ತ್ರಂ ಚ ನಂದನಂ ನಾಮ ನಾಮತಃ ।
ಅಸಿರತ್ನಂ ಮಹಾಬಾಹೋ ದದಾಮಿ ನೃವರಾತ್ಮಜ ॥ ೧೩ ॥

ನಂದನ ನಾಮಕವಾದ ವೈದ್ಯಾಧರ ಮಹಾಸ್ತ್ರ ಅಸಿರತ್ನಗಳನ್ನೂ ಕೊಡುತ್ತೇನೆ.

ಗಾಂಧರ್ವಮಸ್ತ್ರಂ ದಯಿತಂ ಮಾನವಂ ನಾಮ ನಾಮತಃ ।
ಪ್ರಸ್ವಾಪನಪ್ರಶಮನೇ ದದ್ಮಿ ಸೌರಂ ಚ ರಾಘವ ॥ ೧೪ ॥

ಮಾನವನಾಮಕ ಗಾಂಧರ್ವಾಸ್ತ್ರ, ಪ್ರಸ್ವಾಪನ-ಪ್ರಶಮನ ಎಂಬ ಎರಡು ಸೌರಾಸ್ತ್ರಗಳನ್ನೂ ಕೊಡುತ್ತೇನೆ.

ವರ್ಷಣಂ ಶೋಷಣಂ ಚೈವ ಸಂತಾಪನವಿಲಾಪನೇ ।
ಮದನಂ ಚೈವ ದುರ್ಧರ್ಷಂ ಕಂದರ್ಪದಯಿತಂ ತಥಾ ॥ ೧೫ ॥

ವರ್ಷಣ ಶೋಷಣ ಸಂತಾಪನ ವಿಲಾಪನ ಮತ್ತು ಮದನ ಎಂಬ ದುರ್ಧರ್ಷ-ವಾದ ಕಂದರ್ಪಾಸ್ತ್ರಗಳನ್ನೂ ಕೊಡುತ್ತೇನೆ.

ಪೈಶಾಚಮಸ್ತ್ರಂ ದಯಿತಂ ಮೋಹನಂ ನಾಮ ನಾಮತಃ ।
ಪ್ರತೀಚ್ಛ ನರಶಾರ್ದೂಲ ರಾಜಪುತ್ರ ಮಹಾಯಶಃ ॥ ೧೬ ॥

ಮೋಹನ ನಾಮಕ ಪೈಶಾಚಾಸ್ತ್ರವನ್ನು ಕೊಡುತ್ತೇನೆ.

ತಾಮಸಂ ನರಶಾರ್ದೂಲ ಸೌಮನಂ ಚ ಮಹಾಬಲ ।
ಸಂವರ್ತಂ ಚೈವ ದುರ್ಧರ್ಷಂ ಮೌಸಲಂ ನಾಮ ನಾಮತಃ ॥ ೧೭ ॥

ತಾಮಸ ಸೌಮನ ಸಂವರ್ತ ಮೌಸಲಾಸ್ತ್ರಗಳನ್ನು ಕೊಡುತ್ತೇನೆ.

ಸತ್ಯಮಸ್ತ್ರಂ ಮಹಾಬಾಹೋ ತಥಾ ಮಾಯಾಧರಂ ಪರಮ್ ।
ಘೋರಂ ತೇಜಃಪ್ರಭಂ ನಾಮ ಪರತೇಜೋಪಕರ್ಷಣಮ್ ॥ ೧೮ ॥

ಸತ್ಯಾಸ್ತ್ರ, ಮಾಯಾಸ್ತ್ರ, ಶತ್ರುತೇಜೋನಾಶಕವಾದ ತೇಜಃಪ್ರಭ ಅಸ್ತ್ರಗಳನ್ನು ಕೊಡುತ್ತೇನೆ.

ಸೌಮ್ಯಾಸ್ತ್ರಂ ಶಿಶಿರಂ ನಾಮ ತ್ವಾಷ್ಟ್ರಮಸ್ತ್ರಂ ಸುಕಾಮದಮ್ ।
ದಾರುಣಂ ಚ ಭಗಸ್ಯಾಪಿ ಶೀತೇಷುಮಥ ಮಾನವಮ್ ॥ ೧೯ ॥

ಶಿಶಿರ ನಾಮಕ ಸೌಮ್ಯಾಸ್ತ್ರ ತ್ವಾಷ್ಟ್ರಾಸ್ತ್ರ ಶೀತೇಷು ಮಾನವನಾಮಕವಾದ ಭಗಾಸ್ತ್ರಗಳನ್ನೂ ಕೊಡುತ್ತೇನೆ.

ಏತಾನ್ ರಾಮ ಮಹಾಬಾಹೋ ಕಾಮರೂಪಾನ್ಮಹಾಬಲಾನ್ ।
ಗೃಹಾಣ ಪರಮೋದಾರಾನ್ಕ್ಷಿಪ್ರಮೇವ ನೃಪಾತ್ಮಜ ॥ ೨೦ ॥

ಮಹಾಬಾಹು ರಾಮ! ಇವು ಎಲ್ಲವೂ ಕಾಮರೂಪಿ ಮಹಾಬಲಪೂರ್ಣ ಪರಮಶ್ರೇಷ್ಠ ಅಸ್ತ್ರಗಳು ಇವನ್ನು ಬೇಗನೆ ಸ್ವೀಕರಿಸು.

ಸ್ಥಿತಸ್ತು ಪ್ರಾಙ್ಮುಖೋ ಭೂತ್ವಾ ಶುಚಿರ್ಮುನಿವರಸ್ತದಾ ।
ದದೌ ರಾಮಾಯ ಸುಪ್ರೀತೋ ಮಂತ್ರಗ್ರಾಮಮನುತ್ತಮಮ್ ॥೨೧॥

ಹೀಗೆ ಹೇಳಿ ವಿಶ್ವಾಮಿತ್ರ ಮುನಿಶ್ರೇಷ್ಠನು ಶುಚಿರ್ಭೂತನಾಗಿ ಪೂರ್ವಾಭಿ-ಮುಖವಾಗಿ ಕುಳಿತು ಸುಪ್ರೀತನಾಗಿ ರಾಮನಿಗೆ ಎಲ್ಲ ಮಂತ್ರಗಳನ್ನು ಉಪದೇಶಿಸಿದನು.

ಸರ್ವಸಂಗ್ರಹಣಂ ಯೇಷಾಂ ದೈವತೈರಪಿ ದುರ್ಲಭಮ್ ।
ತಾನ್ಯಸ್ತ್ರಾಣಿ ತದಾ ವಿಪ್ರೋ ರಾಘವಾಯ ನ್ಯವೇದಯತ್ ॥ ೨೨ ॥

ಇವುಗಳಲ್ಲಿ ಎಲ್ಲವನ್ನೂ ಸ್ವೀಕರಿಸಲು ದೇವತೆಗಳಿಗೂ ಅಶಕ್ಯ. ಆ ಅಸ್ತ್ರಗಳನ್ನು ವಿಶ್ವಾಮಿತ್ರ ಮುನಿ ರಾಮನಿಗೆ ಉಪದೇಶಿಸಿದನು.

ಜಪತಸ್ತು ಮುನೇಸ್ತಸ್ಯ ವಿಶ್ವಾಮಿತ್ರಸ್ಯ ಧೀಮತಃ ।
ಉಪತಸ್ಥುರ್ಮಹಾರ್ಹಾಣಿ ಸರ್ವಾಣ್ಯಸ್ತ್ರಾಣಿ ರಾಘವಮ್ ॥ ೨೩ ॥

ಧೀಮಂತನಾದ ವಿಶ್ವಾಮಿತ್ರಮುನಿ ಜಪಿಸಿದಾಗ ಅತ್ಯಮೂಲ್ಯವಾದ ಆ ಎಲ್ಲ ಅಸ್ತ್ರಗಳ ಅಭಿಮಾನಿಗಳಾದ ಬ್ರಹ್ಮಾದಿ ದೇವತೆಗಳೂ ರಾಮನ ಬಳಿ ಬಂದು ಉಪಸ್ಥಿತರಾದರು.

ಊಚುಶ್ಚ ಮುದಿತಾಃ ಸರ್ವೇ ರಾಮಂ ಪ್ರಾಂಜಲಯಸ್ತದಾ ।
ಇಮೇ ಸ್ಮ ಪರಮೋದಾರಾಃ ಕಿಂಕರಾಸ್ತವ ರಾಘವ ॥ ೨೪ ॥

ಅಸ್ತ್ರಾಭಿಮಾನಿಗಳಾದ ಬ್ರಹ್ಮಾದಿ ದೇವತೆಗಳೆಲ್ಲರೂ ರಾಮನ ಮುಂದೆ ಕೈಮುಗಿದು ನಿಂತು, 'ರಾಮ! ನಾವೆಲ್ಲರೂ ನಿನಗೆ ಕಿಂಕರರು!' ಎಂದರು.

ಯದ್ಯದಿಚ್ಛಸಿ ಭದ್ರಂ ತೇ ತತ್ಸರ್ವಂ ಕರವಾಮ ವೈ ।
ತತೋ ರಾಮಃ ಪ್ರಸನ್ನಾತ್ಮಾ ತೈರಿತ್ಯುಕ್ತೋ ಮಹಾಬಲೈಃ ॥ ೨೫ ॥

'ನೀನೇನೇನು ಬಯಸುವೆಯೋ ಅವೆಲ್ಲವನ್ನೂ ನಾವು ಮಾಡುವೆವು' ಎಂದರು. ಆಗ ರಾಮ ಪ್ರಸನ್ನನಾದ.

ಪ್ರತಿಗೃಹ್ಯ ಚ ಕಾಕುತ್ಸ್ಥಃ ಸಮಾಲಭ್ಯ ಚ ಪಾಣಿನಾ ।
ಮಾನಸಾ ಮೇ ಭವಿಷ್ಯಧ್ವಮಿತಿ ತಾನಭ್ಯಚೋದಯತ್ ॥ ೨೬ ॥

ಅವರನ್ನು ಹಸ್ತದಿಂದ ಸ್ಪರ್ಶ ಮಾಡಿ ಸ್ವೀಕರಿಸಿ 'ನನ್ನ ಮನಸಿನಲ್ಲಿ ನೆಲೆಸಿರಿ' ಎಂದು ಆದೇಶಿಸಿದನು, ರಾಮ.

ತತಃ ಪ್ರೀತಮನಾ ರಾಮೋ ವಿಶ್ವಾಮಿತ್ರಂ ಮಹಾಮುನಿಮ್ ।
ಅಭಿವಾದ್ಯ ಮಹಾತೇಜಾ ಗಮನಾಯೋಪಚಕ್ರಮೇ ॥ ೨೭ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಸಪ್ತವಿಂಶಃ ಸರ್ಗಃ ॥ ೨೭ ॥

ಸಂತುಷ್ಟನಾದ ರಾಮನು ಮಹಾಮುನಿ ವಿಶ್ವಾಮಿತ್ರನನ್ನು ಅಭಿವಾದನ ಮಾಡಿ ಮುಂದಿನ ಪ್ರಯಾಣ ಮಾಡಲು ಉಪಕ್ರಮಿಸಿದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಇಪ್ಪತ್ತೇಳನೆ ಸರ್ಗ ಮುಗಿಯಿತು.

ಅಷ್ಟಾವಿಂಶಃ ಸರ್ಗಃ

ಪ್ರತಿಗೃಹ್ಯ ತತೋಽಸ್ತ್ರಾಣಿ ಪ್ರಹೃಷ್ಟವದನಃ ಶುಚಿಃ ।
ಗಚ್ಛನ್ನೇವ ಚ ಕಾಕುತ್ಸ್ಥೋ ವಿಶ್ವಾಮಿತ್ರಮಥಾಬ್ರವೀತ್ ॥ ೧ ॥

ಶ್ರೀರಾಮನು ವಿಶ್ವಾಮಿತ್ರರಿಂದ ಅಸ್ತ್ರಮಂತ್ರಗಳೆಲ್ಲವನ್ನೂ ಸ್ವೀಕರಿಸಿ, ಪ್ರಸನ್ನ-ಮುಖನಾಗಿ ಶುಚಿಯಾಗಿ ಪ್ರಯಾಣ ಮಾಡುತ್ತ ವಿಶ್ವಾಮಿತ್ರರಿಗೆ ನುಡಿದ.

ಗೃಹೀತಾಸ್ತ್ರೋಽಸ್ಮಿ ಭಗವನ್ ದುರಾಧರ್ಷಃ ಸುರಾಸುರೈಃ ।
ಅಸ್ತ್ರಾಣಾಂ ತ್ವಹಮಿಚ್ಛಾಮಿ ಸಂಹಾರಂ ಮುನಿಪುಂಗವ ॥ ೨ ॥

ಪೂಜ್ಯನೇ, ಅಸ್ತ್ರಮಂತ್ರಗಳನ್ನು ನಾನು ಸ್ವೀಕರಿಸಿದ್ದಾಯಿತು. ಆದರಿಂದ ನಾನು ಸುರ ಅಸುರರಾರಿಂದಲೂ ಮಣಿಸಲಾಗದವನು. ಆದರೂ ನಾನು ಅಸ್ತ್ರಗಳ ಉಪಸಂಹಾರ ಮಂತ್ರಗಳನ್ನೂ ಬಯಸುತ್ತೇನೆ. ಉಪಸಂಹಾರವನ್ನು ತಿಳಿಯದವನು ಅಸ್ತ್ರಪ್ರಯೋಗ ಮಾಡಿದರೆ ಅದು ಅನರ್ಥಕರವಾಗುತ್ತದೆ.

ಏವಂ ಬ್ರುವತಿ ಕಾಕುತ್ಸ್ಥೇ ವಿಶ್ವಾಮಿತ್ರೋ ಮಹಾಯಶಾಃ ।
ಸಂಹಾರಂ ವ್ಯಾಜಹಾರಾಥ ಧೃತಿಮಾನ್ಸುವ್ರತಃ ಶುಚಿಃ ॥ ೩ ॥

ರಾಮ ಹೀಗೆ ಹೇಳಿದಾಗ ಮಹಾಕೀರ್ತಿಶಾಲಿಯಾದ ಸುವ್ರತನೂ ಶುಚಿಯೂ ಆದ ವಿಶ್ವಾಮಿತ್ರನು ಸಂತುಷ್ಟನಾಗಿ ಉಪಸಂಹಾರ ಮಂತ್ರಗಳನ್ನೂ ಉಪದೇಶಿಸಿದ ಬಳಿಕ ಬೇರೆ ಅಸ್ತ್ರ ಮಂತ್ರಗಳನ್ನೂ ಉಪದೇಶಿಸಿದ.

ಸತ್ಯವಂತಂ ಸತ್ಯಕೀರ್ತಿಂ ಧೃಷ್ಟಂ ರಭಸಮೇವ ಚ ।
ಪ್ರತಿಹಾರತರಂ ನಾಮ ಪರಾಙ್ಮುಖಮವಾಙ್ಮುಖಮ್ ॥ ೪ ॥

ಸತ್ಯವಾನ್ ಸತ್ಯಕೀರ್ತಿ ಧೃಷ್ಟ ರಭಸ ಪ್ರತಿಹಾರತರ ಪರಾಙ್ಮುಖ ಅವಾಙ್ಮುಖ ಎಂಬ ಅಸ್ತ್ರಗಳನ್ನೂ ವಿಶ್ವಾಮಿತ್ರನು ಉಪದೇಶಿಸಿದ.

ಅಕ್ಷಾಕ್ಷವಿಷಮೌ ಚೈವ ದೃಢನಾಭಸುನಾಭಕೌ ।
ದಶಾಕ್ಷಶತವಕ್ತ್ರೌ ಚ ದಶಶೀರ್ಷಶತೋದರೌ ॥ ೫ ॥

ಅಕ್ಷಾಕ್ಷ ವಿಷಮ ದೃಢನಾಭ ಸುನಾಭ ದಶಾಕ್ಷ ಶತವಕ್ತ್ರ ದಶಶೀರ್ಷ ಶತೋದರ ಎಂಬ ಅಸ್ತ್ರಗಳನ್ನೂ ಉಪದೇಶಿಸಿದ.

ಪದ್ಮನಾಭಮಹಾನಾಭೌ ದುಂದುನಾಭಸುನಾಭಕೌ ।
ಜ್ಯೋತಿಷಂ ಕೃಶನಂ ಚೈವ ನೈರಾಶ್ಯವಿಮಲಾವುಭೌ ॥ ೬ ॥

ಪದ್ಮನಾಭ ಮಹಾನಾಭ ದುಂದುನಾಭ ಸುನಾಭ ಜ್ಯೋತಿಷ ಕೃಶನ ನೈರಾಶ್ಯ ವಿಮಲ ಈ ಮಂತ್ರಗಳನ್ನೂ ಉಪದೇಶಿಸಿದ.

ಯೋಗಂಧರಹರಿದ್ರೌ ಚ ದೈತ್ಯಪ್ರಶಮನೌ ತಥಾ ।
ಶುಚಿರ್ಬಾಹುರ್ಮಹಾಬಾಹುರ್ನಿಷ್ಕಲಿರ್ವಿರುಚಿಸ್ತಥಾ ॥
ಸಾರ್ಚಿರ್ಮಾಲೀ ಧೃತಿರ್ಮಾಲೀ ವೃತ್ತಿಮಾನ್ರುಚಿರಸ್ತಥಾ ॥ ೭ ॥

ಯೋಗಂಧರ ಹರಿದ್ರ ದೈತ್ಯಪ್ರಶಮನ ಶುಚಿಬಾಹು ಮಹಾಬಾಹು ನಿಷ್ಕಲಿ ವಿರುಚಿ ಸಾರ್ಚಿರ್ಮಾಲಿ ಧೃತಿ ರ್ಮಾಲಿ ವೃತ್ತಿಮಾನ್ ರುಚಿರ ಎಂಬ ಅಸ್ತ್ರಗಳನ್ನೂ ನೀಡಿದ.

ಪಿತೃಸೌಮನಸಂ ಚೈವ ವಿಧೂತಮಕರಾವುಭೌ ।
ಕರವೀರಕರಂ ಚೈವ ಧನಧಾನ್ಯೌ ಚ ರಾಘವ ॥ ೮ ॥

ಪಿತೃ ಸೌಮನಸ ವಿಧೂತ ಮಕರ ಕರವೀರಕರ ಧನ ಧಾನ್ಯ ಎಂಬ ಅಸ್ತ್ರಗಳನ್ನೂ ಉಪದೇಶಿಸಿದ.

ಕಾಮರೂಪಂ ಕಾಮರುಚಿಂ ಮೋಹಮಾವರಣಂ ತಥಾ ।
ಜೃಂಭಕಂ ಸರ್ವನಾಭಂ ಚ ಸಂತಾನವರಣೌ ತಥಾ ॥ ೯ ॥

ಕಾಮರೂಪ ಕಾಮರುಚಿ ಮೋಹ ಆವರಣ ಜೃಂಭಕ ಸರ್ವನಾಭ ಸಂತಾನ ವರಣ ಮಂತ್ರಗಳನ್ನೂ ಉಪದೇಶಿಸಿದ.

ಕೃಶಾಶ್ವತನಯಾನ್ ರಾಮ ಭಾಸ್ವರಾನ್ಕಾಮರೂಪಿಣಃ ।
ಪ್ರತೀಚ್ಛ ಮಮ ಭದ್ರಂ ತೇ ಪಾತ್ರಭೂತೋಽಸಿ ರಾಘವಮ್॥ ೧೦ ॥

'ಕೃಶಾಶ್ವಪ್ರಜಾಪತಿಯ ಪುತ್ರರಾದ ಪ್ರಕಾಶಮಾನರಾದ ಕಾಮರೂಪಿಗಳಾದ ಈ ಎಲ್ಲ ಅಸ್ತ್ರದೇವತೆಗಳನ್ನು ರಾಮ! ನೀನು ಸ್ವೀಕರಿಸು ನಿನಗೆ ಒಳ್ಳೆಯದಾಗಲಿ. ರಾಮ! ನೀನು ಪಾತ್ರಭೂತನೆನಿಸಿರುವೆ ಎಂದರು ವಿಶ್ವಾಮಿತ್ರರು.

ಬಾಢಮಿತ್ಯೇವ ಕಾಕುತ್ಸ್ಥಃ ಪ್ರಹೃಷ್ಟೇನಾಂತರಾತ್ಮನಾ ।
ತತ್ಸರ್ವಮಗ್ರಹೀದ್ರಾಮೋ ವಿಶ್ವಾಮಿತ್ರಾನ್ಮಹಾಮುನೇಃ ॥ ೧೧ ॥

'ಆಗಲಿ' ಎನ್ನುತ್ತ ರಾಮನು ಉತ್ಸಾಹ ತುಂಬಿದ ಮನಸಿನಿಂದ ಅದೆಲ್ಲವನ್ನೂ ಮಹಾಮುನಿ ವಿಶ್ವಾಮಿತ್ರನಿಂದ ಸ್ವೀಕರಿಸಿದನು.

ದಿವ್ಯಭಾಸ್ವರದೇಹಾಶ್ಚ ಮೂರ್ತಿಮಂತಃ ಸುಖಪ್ರದಾಃ ।
ಕೇಚಿದಂಗಾರಸದೃಶಾಃ ಕೇಚಿದ್ಧೂಮೋಪಮಾಸ್ತಥಾ ॥ ೧೨ ॥

ಆ ಅಸ್ತ್ರದೇವತೆಗಳು ಎಲ್ಲರೂ ದಿವ್ಯ ಪ್ರಕಾಶದಿಂದ ಹೊಳೆವ ಶರೀರದವರು ಮೂರ್ತಿಮಂತರಾಗಿ ಸುಖದಾಯಕರಾಗುವವರು. ಕೆಲವರು ಉರಿಯುವ ಕೆಂಡ–ದಂಥವರು ಕೆಲವರು ಧೂಮದಂತಿರುವವರು.

ಚಂದ್ರಾರ್ಕಸದೃಶಾಃ ಕೇಚಿತ್ಪ್ರಹ್ವಾಂಜಲಿಪುಟಾಸ್ತಥಾ ।
ರಾಮಂ ಪ್ರಾಂಜಲಯೋ ಭೂತ್ವಾऽಬ್ರುವನ್ಮಧುರಭಾಷಿಣಃ ॥
ಇಮೇ ಸ್ಮ ನರಶಾರ್ದೂಲ ಶಾಧಿ ಕಿಂ ಕರವಾಮ ತೇ ॥ ೧೩ ॥

ಚಂದ್ರ ಸೂರ್ಯರಂಥವರು ಕೆಲವರು ಕೈಮುಗಿದು ಪ್ರಾಂಜಲರಾಗಿ ಮಧುರ–ವಾಗಿ ರಾಮನ ಮುಂದೆ ನುಡಿದರು– ಪುರುಷೋತ್ತಮ ನಾವು ನಿನ್ನ ಬಳಿಗೆ ಬಂದಿದ್ದೇವೆ, ಆಜ್ಞೆ ಮಾಡು, ನಾವು ಏನು ಮಾಡಬೇಕು?

ಮಾನಸಾಃ ಕಾರ್ಯಕಾಲೇಷು ಸಾಹಾಯ್ಯಂ ಮೇ ಕರಿಷ್ಯಥ ।
ಗಮ್ಯತಾಮಿತಿ ತಾನಾಹ ಯಥೇಷ್ಟಂ ರಘುನಂದನಃ ॥ ೧೪ ॥

ರಾಮ ಅವರಿಗೆ ಆಜ್ಞೆ ಮಾಡಿದ, 'ಮನಸಿನಲ್ಲಿದ್ದು ನೆನೆದಾಗಲೆಲ್ಲ ಬಂದು ಕಾರ್ಯ ಮಾಡಬೇಕಾದ ಕಾಲದಲ್ಲಿ ನನಗೆ ಸಹಾಯ ಮಾಡಿರಿ. ಹೋಗಿರಿ' ಎಂದು.

ಅಥ ತೇ ರಾಮಮಾಮಂತ್ರ್ಯ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ಏವಮಸ್ತ್ವಿತಿ ಕಾಕುತ್ಸ್ಥಮುಕ್ತ್ವಾ ಜಗ್ಮುರ್ಯಥಾಗತಮ್ ॥ ೧೫ ॥

ಆಗ ಅಸ್ತ್ರದೇವತೆಗಳು ಹೋಗಲು ಅನುಮತಿ ಕೇಳಿ ಪ್ರದಕ್ಷಿಣೆ ಮಾಡಿ, 'ನೀನು ಹೇಳಿದಂತೇ ಆಗಲಿ' ಎನ್ನುತ್ತ ಬಂದಹಾಗೇ ಹಿಂದೆಹೊರಟು ಹೋದರು.

ಪ್ರಣಮ್ಯ ಶಿರಸಾ ರಾಮಂ ಸರ್ವೇ ಸಮ್ಮತವಿಕ್ರಮಾಃ ॥ ೧೬ ॥

ಪ್ರಸಿದ್ಧ ಪರಾಕ್ರಮಶಾಲಿಗಳಾದ ಆ ಅಸ್ತ್ರದೇವತೆಗಳೆಲ್ಲರೂ ರಾಮನಿಗೆ ಶಿರಸಾ ಪ್ರಣಾಮಗೈದು ಹೊರಟುಹೋದರು.

ತತಸ್ತು ರಾಮಃ ಕಾಕುತ್ಸ್ಥಃ ಶಾಸನಾದ್ಬ್ರಹ್ಮವಾದಿನಃ ।
ಲಕ್ಷ್ಮಣಾಯ ಚ ತಾನ್ಸರ್ವಾನ್ವರಾಸ್ತ್ರಾನ್ರಘುನಂದನಃ ।
ಸಂಹಾರಾನ್ಸ ಚ ಸಂಹೃಷ್ಟಃ ಶ್ರೀಮಾಂಸ್ತಸ್ಮೈ ನ್ಯವೇದಯತ್ ॥ ೧೭ ॥

ಬಳಿಕ ಬ್ರಹ್ಮವಾದಿ ವಿಶ್ವಾಮಿತ್ರನಾದೇಶದಂತೆ ಶ್ರೀಮಾನ್ ರಾಮನು ಸಂತುಷ್ಟನಾಗಿ ಎಲ್ಲ ಉತ್ತಮ ಅಸ್ತ್ರಗಳನ್ನೂ ಉಪಸಂಹಾರ ಸಹಿತವಾಗಿ ಲಕ್ಷ್ಮಣನಿಗೆ ಉಪದೇಶಿಸಿದನು.

ಸ ಚ ತಾನ್ ರಾಘವೋ ಜ್ಞಾತ್ವಾ ವಿಶ್ವಾಮಿತ್ರಂ ಮಹಾಮುನಿಮ್ ।
ಗಚ್ಛನ್ನೇವಾಥ ಮಧುರಂ ಶ್ಲಕ್ಷ್ಣಂ ವಚನಮಬ್ರವೀತ್ ॥ ೧೮ ॥

ರಾಮನು ಎಲ್ಲ ಅಸ್ತ್ರಗಳನ್ನೂ ಸಂಹಾರ ಸಹಿತವಾಗಿ ತಿಳಿದು ಮುಂದೆ ಪ್ರಯಾಣ ಮಾಡುವಾಗ ಮಧುರವಾಗಿ ನಯವಾಗಿ ವಿಶ್ವಾಮಿತ್ರರನ್ನು ಕೇಳಿದನು.

ಕಿನ್ನ್ವೇತನ್ಮೇಘಸಂಕಾಶಂ ಪರ್ವತಸ್ಯಾವಿದೂರತಃ ।
ವೃಕ್ಷಷಂಡಮಿತೋ ಭಾತಿ ಪರಂ ಕೌತೂಹಲಂ ಹಿ ಮೇ ॥ ೧೯ ॥

'ಇದೇನು, ಪರ್ವತದ ಬಳಿ ಮೋಡದಂತೆ ವೃಕ್ಷ ಸಮೂಹವು ಶೋಭಿಸುತ್ತಿದೆ, ಅದನ್ನು ತಿಳಿಯಲು ನನಗೆ ಕುತೂಹಲ ಉಂಟಾಗಿದೆ.

ದರ್ಶನೀಯಂ ಮೃಗಾಕೀರ್ಣಂ ಮನೋಹರಮತೀವ ಚ ।
ನಾನಾಪ್ರಕಾರೈಃ ಶಕುನೈರ್ವಲ್ಗುನಾದೈರಲಂಕೃತಮ್ ॥
ನಿಃಸೃತಾಸ್ಮ ಮುನಿಶ್ರೇಷ್ಠ ಕಾಂತಾರಾದ್ರೋಮಹರ್ಷಣಾತ್ ॥ ೨೦ ॥

ನೋಡಲು ಸುಂದರವಾಗಿದೆ. ಅತ್ಯಂತ ಮನೋಹರವಾಗಿದೆ. ಮೃಗಗಳಿಂದ ತುಂಬಿದೆ. ನಾನಾ ಬಗೆಯ ಮಧುರಧ್ವನಿಗೈವ ಪಕ್ಷಿಗಳಿಂದ ಅಲಂಕೃತವಾಗಿದೆ. ಮುನಿಶ್ರೇಷ್ಠನೆ, ಭಯಾನಕವಾಗಿ ರೋಮಾಂಚನ ಉಂಟು ಮಾಡುವಂಥ ತಾಟಕಾರಣ್ಯದಿಂದ ನಾವು ಹೊರಗೆ ಬಂದಿರುತ್ತೇವೆ.

ಅನಯಾ ತ್ವವಗಚ್ಛಾಮಿ ದೇಶಸ್ಯ ಸುಖವತ್ತಯಾ ।
ಸರ್ವಂ ಮೇ ಶಂಸ ಭಗವನ್ ಕಸ್ಯಾಶ್ರಮಪದಂ ತ್ವಿದಮ್ ॥ ೨೧ ॥

ಈ ಪ್ರದೇಶವು ಸುಖಕರವಾಗಿರುವುದರಿಂದ ಇದು ಒಂದು ತಪೋವನವಿರಬಹುದೆಂದು ಊಹಿಸುತ್ತೇನೆ. ಪೂಜ್ಯನೆ ಇದು ಯಾರ ಆಶ್ರಮ ಸ್ಥಳ? ಎಲ್ಲವನ್ನೂ ನನಗೆ ಹೇಳು.

ಸಂಪ್ರಾಪ್ತಾ ಯತ್ರ ತೇ ಪಾಪಾ ಬ್ರಹ್ಮಘ್ನಾ ದುಷ್ಟಚಾರಿಣಃ ।
ತವ ಯಜ್ಞಸ್ಯ ವಿಘ್ನಾಯ ದುರಾತ್ಮಾನೋ ಮಹಾಮುನೇ ॥ ೨೨ ॥

ಮಹಾಮುನಿಯೆ, ಬ್ರಹ್ಮಹತ್ಯೆ ಮಾಡುವ ದುಷ್ಕರ್ಮಕಾರಿಗಳಾದ ಆ ಪಾಪಿಗಳು ದುರಾತ್ಮರು ನಿಮ್ಮ ಯಜ್ಞನಾಶಕ್ಕಾಗಿ ಎಲ್ಲಿ ಬಂದಿದ್ದಾರೆ?

ಭಗವಂಸ್ತಸ್ಯ ಕೋ ದೇಶಃ ಸಾ ಯತ್ರ ತವ ಯಾಜ್ಞಿಕೀ ।
ರಕ್ಷಿತವ್ಯಾ ಕ್ರಿಯಾ ಬ್ರಹ್ಮನ್ಮಯಾ ವಧ್ಯಾಶ್ಚ ರಾಕ್ಷಸಾಃ ॥
ಏತತ್ಸರ್ವಂ ಮುನಿಶ್ರೇಷ್ಠ ಶ್ರೋತುಮಿಚ್ಛಾಮ್ಯಹಂ ಪ್ರಭೋ ॥ ೨೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇऽಷ್ಟಾವಿಂಶಃ ಸರ್ಗಃ ॥ ೨೪ ॥

ಮುನಿಯೇ, ಎಲ್ಲಿ ನಿನ್ನ ಯಜ್ಞಕ್ರಿಯೆಯನ್ನು ನಾನು ರಕ್ಷಿಸಬೇಕಾಗಿದೆ? ಎಲ್ಲಿ ನಾನು ಆ ರಾಕ್ಷಸರನ್ನು ವಧಿಸಬೇಕಾಗಿದೆ? ಪೂಜ್ಯನೇ! ಆ ಯಜ್ಞದ ಸ್ಥಳ ಯಾವುದು? ಮುನಿಶ್ರೇಷ್ಠನೇ ಪ್ರಭು, ಇದೆಲ್ಲವನ್ನೂ ನಾನು ಕೇಳಿ ತಿಳಿಯಲು ಬಯಸುತ್ತೇನೆ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಇಪ್ಪತ್ತೆಂಟನೆ ಸರ್ಗ ಮುಗಿಯಿತು.

ಏಕೋನತ್ರಿಂಶಃ ಸರ್ಗಃ

ಅಥ ತಸ್ಯಾಪ್ರಮೇಯಸ್ಯ ತದ್ವನಂ ಪರಿಪೃಚ್ಛತಃ ।
ವಿಶ್ವಾಮಿತ್ರೋ ಮಹಾತೇಜಾ ವ್ಯಾಖ್ಯಾತುಮುಪಚಕ್ರಮೇ ॥ ೧ ॥

ಅಪರಿಮಿತ ಮಹಿಮನಾದ ಶ್ರೀರಾಮನು ಆ ತಪೋವನದ ಬಗ್ಗೆ ಕೇಳಿದಾಗ ಮಹಾತೇಜನಾದ ವಿಶ್ವಾಮಿತ್ರನು ಹೇಳಲು ತೊಡಗಿದನು.

ಇಹ ರಾಮ ಮಹಾಬಾಹೋ ವಿಷ್ಣುರ್ದೇವವರಃ ಪ್ರಭುಃ ।
ವರ್ಷಾಣಿ ಸುಬಹೂನ್ಯೇವ ತಥಾ ಯುಗಶತಾನಿ ಚ ॥
ತಪಶ್ಚರಣಯೋಗಾರ್ಥಮುವಾಸ ಸುಮಹಾತಪಾಃ ॥ ೨ ॥

ಮಹಾಬಾಹುವಾದ ರಾಮನೆ! ಇಲ್ಲಿ ದೇವೋತ್ತಮ ಮಹಾತಪನಾದ ಪ್ರಭು ವಿಷ್ಣುವು ನೂರಾರು ಯುಗಗಳಲ್ಲಿ ಬಹುವರ್ಷಗಳಲ್ಲಿ ತಪಶ್ಚರಣ ಪೂರ್ವಕ ಯೋಗಾನುಷ್ಠಾನಕ್ಕಾಗಿ ವಾಸ ಮಾಡಿದನು.

ಏಷ ಪೂರ್ವಾಶ್ರಮೋ ರಾಮ ವಾಮನಸ್ಯ ಮಹಾತ್ಮನಃ ।
ಸಿದ್ಧಾಶ್ರಮ ಇತಿ ಖ್ಯಾತಃ ಸಿದ್ಧೋ ಹ್ಯತ್ರ ಮಹಾತಪಾಃ ॥ ೩ ॥

ರಾಮ ಇದು ಮಹಾತ್ಮನಾದ ವಾಮನನ ಪೂರ್ವಾಶ್ರಮ. ಇಲ್ಲಿ ಮಹಾತಪಗೈದ ವಿಷ್ಣು ತಪಃಸಿದ್ಧಿ ಪಡೆದುದರಿಂದ ಇದು ಸಿದ್ಧಾಶ್ರಮ ಎಂದು ಪ್ರಸಿದ್ಧವಾಗಿದೆ.

ಏತಸ್ಮಿನ್ನೇವ ಕಾಲೇ ತು ರಾಜಾ ವೈರೋಚನಿರ್ಬಲಿಃ ।
ನಿರ್ಜಿತ್ಯ ದೈವತಗಣಾನ್ಸೇಂದ್ರಾಂಶ್ಚ ಸಮರುದ್ಗಣಾನ್ ॥ ೪ ॥

ಕಾರಯಾಮಾಸ ತದ್ರಾಜ್ಯಂ ತ್ರಿಷು ಲೋಕೇಷು ವಿಶ್ರುತಃ ।
ಯಜ್ಞಂ ಚಕಾರ ಮತಿಮಾನಸುರೇಂದ್ರೋ ಮಹಾಬಲಿಃ ॥ ೫ ॥

ವಿಷ್ಣು ತಪಸ್ಸೆಂದರೆ ಹೀಗಿರಬೇಕೆಂದು ಲೋಕಕ್ಕೆ ತೋರಿಸುವುದಕ್ಕಾಗಿ ಇಲ್ಲಿ ತಪಸ್ಸು ಮಾಡುತ್ತಿದ್ದಾಗ ವಿರೋಚನ ಪುತ್ರನಾದ ರಾಜಾ ಬಲಿಯು ಇಂದ್ರನಿಂದಲೂ ಮರುತರ ಸಮೂಹಗಳಿಂದಲೂ ಯುಕ್ತವಾದ ದೇವತಾ ಸಮೂಹಗಳನ್ನು ಗೆದ್ದು ಮೂಲೋಕಗಳಲ್ಲಿ ತನ್ನವರಿಂದಲೇ ರಾಜ್ಯಭಾರ ನಡೆಸಿದ. ಧೀಮಂತನಾದ ಅಸುರೇಂದ್ರ ಮಹಾಬಲಿ ಮೂಲೋಕ ಪ್ರಸಿದ್ಧನಾಗಿ ನೂರು ಅಶ್ವಮೇಧ ಯಾಗಗಳನ್ನು ಮಾಡಲು ತೊಡಗಿದ.

ಬಲೇಸ್ತು ಯಜಮಾನಸ್ಯ ದೇವಾಃ ಸಾಗ್ನಿಪುರೋಗಮಾಃ ।
ಸಮಾಗಮ್ಯ ಸ್ವಯಂ ಚೈವ ವಿಷ್ಣುಮೂಚುರಿಹಾಶ್ರಮೇ ॥ ೬ ॥

ಬಲಿಯು ಯಾಗ ಮಾಡುತ್ತಿದ್ದಾಗ ಅಗ್ನಿ ಮುಂತಾದ ದೇವತೆಗಳು ಸ್ವತಃ ಬಂದು ಈ ಆಶ್ರಮದಲ್ಲಿ ವಿಷ್ಣುವಿನ ಬಳಿ ಹೇಳಿದರು.

ಬಲಿರ್ವೈರೋಚನಿರ್ವಿಷ್ಣೋ ಯಜತೇ ಯಜ್ಞಮುತ್ತಮಮ್ ।
ಅಸಮಾಪ್ತೇ ಕ್ರತೌ ತಸ್ಮಿನ್ಸ್ವಕಾರ್ಯಮಭಿಪದ್ಯತಾಮ್ ॥ ೭ ॥

ವಿಷ್ಣುವೇ! ವಿರೋಚನ ಪುತ್ರನಾದ ಬಲಿಯು ಉತ್ತಮವಾದ ಯಜ್ಞವನ್ನು ಮಾಡುತ್ತಿದ್ದಾನೆ. ಯಜ್ಞವು ಸಮಾಪ್ತವಾಗುವುದರೊಳಗೇ ನೀನು ನಿನ್ನವರಾದ ದೇವತೆಗಳ ಕಾರ್ಯವನ್ನು ಪೂರ್ತಿ ಮಾಡಿಕೊಳ್ಳು.

ಯೇ ಚೈನಮಭಿವರ್ತಂತೇ ಯಾಚಿತಾರ ಇತಸ್ತತಃ ।
ಯಚ್ಚ ಯತ್ರ ಯಥಾವಚ್ಚ ಸರ್ವಂ ತೇಭ್ಯಃ ಪ್ರಯಚ್ಛತಿ ॥ ೮ ॥

ನಾನಾ ದೇಶಗಳಿಂದ ಯಾವ ಯಾವ ಯಾಚಕರು ಅವನ ಬಳಿಗೆ ಬರುವರೋ ಅವರಿಗೆಲ್ಲರಿಗೂ ಅವರೇನನ್ನು ಯಾಚಿಸುವರೋ ಅವೆಲ್ಲವನ್ನೂ ಯಥಾವತ್ ವಿಧ್ಯುಕ್ತ ರೀತಿಯಿಂದ ಬಲಿಯು ದಾನ ಮಾಡುತ್ತಾನೆ.

ಸ ತ್ವಂ ಸುರಹಿತಾರ್ಥಾಯ ಮಾಯಾಯೋಗಮುಪಾಗತಃ ।
ವಾಮನತ್ವಂ ಗತೋ ವಿಷ್ಣೋ ಕುರು ಕಲ್ಯಾಣಮುತ್ತಮಮ್ ॥ ೯ ॥

ವಿಷ್ಣುವೆ! ನೀನು ದೇವತೆಗಳ ಹಿತಕ್ಕಾಗಿ ಸ್ವೇಚ್ಛೆಯಿಂದ ವಟುರೂಪಧಾರಣದ ಉಪಾಯವನ್ನು ಕೈಗೊಂಡು ವಾಮನಾವತಾರಮಾಡಿ ಲೋಕಕ್ಕೆ ಮಂಗಳವನ್ನುಂಟು ಮಾಡು ಎಂದು ದೇವತೆಗಳು ಪ್ರಾರ್ಥಿಸಿದರು.

ಏತಸ್ಮಿನ್ನಂತರೇ ರಾಮ ಕಾಶ್ಯಪೋಽಗ್ನಿಸಮಪ್ರಭಃ ।
ಅದಿತ್ಯಾ ಸಹಿತೋ ರಾಮ ದೀಪ್ಯಮಾನ ಇವೌಜಸಾ ॥ ೧೦ ॥

ದೇವೀಸಹಾಯೋ ಭಗವಾನ್ ದಿವ್ಯಂ ವರ್ಷಸಹಸ್ರಕಮ್ ।
ವ್ರತಂ ಸಮಾಪ್ಯ ವರದಂ ತುಷ್ಟಾವ ಮಧುಸೂದನಮ್ ॥ ೧೧ ॥

ರಾಮ! ಈ ಸಮಯದಲ್ಲಿ ಅಗ್ನಿ ಸಮಪ್ರಭನಾದ ಭಗವಾನ್ ಕಶ್ಯಪಮುನಿಯು ತಪಸ್ಸಿನ ಕಾಂತಿಯಿಂದ ಹೊಳೆಯುತ್ತ ಅದಿತಿಯೊಂದಿಗೆ ಸಾವಿರ ವರ್ಷಕಾಲ

ಪಯೋವ್ರತವನ್ನು ಮಾಡಿ ಮುಗಿಸಿ ವರದಾನಕ್ಕೆ ಮೈದೋರಿನಿಂತ ವಿಷ್ಣುವನ್ನು ದೇವಿ ಅದಿತಿ ಸಹಿತನಾಗಿ ಸ್ತುತಿಸಿದ.

ತಪೋಮಯಂ ತಪೋರಾಶಿಂ ತಪೋಮೂರ್ತಿಂ ತಪಾತ್ಮಕಮ್ ।
ತಪಸಾ ತ್ವಾಂ ಸುತಪ್ತೇನ ಪಶ್ಯಾಮಿ ಪುರುಷೋತ್ತಮಮ್ ॥ ೧೨ ॥

ತಪಸ್ಸೆಂದರೆ ಜ್ಞಾನ. ಅದರಿಂದ ನೀನು ತಪೋಮಯ, ತಪೋರಾಶಿ ತಪೋ ಮೂರ್ತಿ ತಪ ಆತ್ಮಕನಾಗಿರುವೆ. ಚೆನ್ನಾಗಿ ಮಾಡಿದ ತಪಸಿನಿಂದ ಪುರುಷೋತ್ತಮ-ನಾದ ನಿನ್ನನ್ನು ಈಗ ಕಾಣುತ್ತಿದ್ದೇನೆ.

ಶರೀರೇ ತವ ಪಶ್ಯಾಮಿ ಜಗತ್ಸರ್ವಮಿದಂ ಪ್ರಭೋ ।
ತ್ವಮನಾದಿರನಿರ್ದೇಶ್ಯಸ್ತ್ವಾಮಹಂ ಶರಣಂ ಗತಃ ॥ ೧೩ ॥

ನಿನ್ನ ಶರೀರದಲ್ಲಿಯೆ ಈ ಎಲ್ಲ ಜಗತ್ತು ಆಶ್ರಯಿಸಿಕೊಂಡಿರುವುದನ್ನು ನಾನು ಕಾಣುತ್ತಿದ್ದೇನೆ. ಪ್ರಭು, ನೀನು ಅನಾದಿ, ಅದ್ಭುತನಾದ್ದರಿಂದ ಅನಿರ್ವಾಚ್ಯ ಅನಿರ್ದೇಶ್ಯ . ನಿನ್ನನ್ನೇ ನಾನು ಶರಣು ಹೊಂದಿದ್ದೇನೆ' ಎಂದು ಕಶ್ಯಪಮುನಿ ವಿಷ್ಣುವನ್ನು ಸ್ತುತಿಸಿದನು.

ತಮುವಾಚ ಹರಿಃ ಪ್ರೀತಃ ಕಾಶ್ಯಪಂ ಧೂತಕಲ್ಮಷಮ್ ।
ವರಂ ವರಯ ಭದ್ರಂ ತೇ ವರಾರ್ಹೋಽಸಿ ಮತೋ ಮಮ॥ ೧೪ ॥

ತಪಸ್ಸಿನಿಂದ ಎಲ್ಲ ಕಲ್ಮಷವನ್ನು ದೂರ ಮಾಡಿಕೊಂಡಿದ್ದ ಕಶ್ಯಪನಿಗೆ ಒಲಿದ ಹರಿ ನುಡಿದ, ನಿನಗೆ ಒಳ್ಳೆಯದಾಗಲಿ ಬೇಕಾದ ವರವನ್ನು ಕೇಳು ನೀನು ವರಕ್ಕೆ ಅರ್ಹನಾಗಿರುವೆ ಎಂದು ನನಗೆ ಸಮ್ಮತನಾಗಿರುವೆ.

ಕಿಮಿಚ್ಛಸಿ ವರಂ ಶ್ರೇಷ್ಠಂ ವರದೋಸ್ಮಿ ಮಹಾದ್ಯುತೇ ।
ತಚ್ಛ್ರುತ್ವಾ ವಚನಂ ತಸ್ಯ ಮಾರೀಚಃ ಕಾಶ್ಯಪೋಽಬ್ರವೀತ್ ॥ ೧೫ ॥

'ಮಹಾ ಪ್ರಕಾಶಶಾಲಿಯೇ, ನೀನೇನು ಶ್ರೇಷ್ಠವಾದ ವರವನ್ನು ಬಯಸುವೆ? ನಾನು ವರದಾಯಕನಾಗಿರುವೆನು.' ಹರಿಯ ಈ ಮಾತನ್ನು ಕೇಳಿ ಮರೀಚಿ ಮುನಿಯ ಪುತ್ರನಾದ ಕಶ್ಯಪನು ನುಡಿದ.

ಅದಿತ್ಯಾ ದೇವತಾನಾಂ ಚ ಮಮ ಚೈವಾನುಯಾಚತಃ ।
ವರಂ ವರದ ಸುಪ್ರೀತೋ ದಾತುಮರ್ಹಸಿ ಸುವ್ರತ ॥ ೧೬ ॥

ಸುವ್ರತದಿಂದ ಆರಾಧ್ಯನಾದ ವರದಾಯಕನಾದ ಹರಿಯೆ, ಅದಿತಿಗೂ ದೇವತೆಗಳಿಗೂ ಯಾಚನೆ ಮಾಡುವ ನನಗೂ ಸುಪ್ರೀತನಾಗಿರುವ ನೀನು ವರವನ್ನು ನೀಡು.

ಪುತ್ರತ್ವಂ ಗಚ್ಛ ಭಗವನ್ನದಿತ್ಯಾ ಮಮ ಚಾನಘ ।
ಭ್ರಾತಾ ಭವ ಯವೀಯಾಂಸ್ತ್ವಂ ಶಕ್ರಸ್ಯಾಸುರಸೂದನ ॥
ಶೋಕಾರ್ತಾನಾಂ ತು ದೇವಾನಾಂ ಸಾಹಾಯ್ಯಂ ಕರ್ತುಮರ್ಹಸಿ॥ ೧೭

ಭಗವಂತನೆ, ನಿರ್ದೋಷನೆ ಅಸುರನಾಶಕನೆ ಹರಿಯೆ, ನೀನು ಅದಿತಿಗೂ ನನಗೂ ಮಗನಾಗಿ ಅವತರಿಸು, ಇಂದ್ರನಿಗೆ ತಮ್ಮನೆನಿಸು. ಶೋಕಾರ್ತರಾದ ದೇವತೆಗಳಿಗೆ ಸಹಾಯ ಮಾಡು.

ಅಯಂ ಸಿದ್ಧಾಶ್ರಮೋ ನಾಮ ಪ್ರಸಾದಾತ್ತೇ ಭವಿಷ್ಯತಿ ।
ಸಿದ್ಧೇ ಕರ್ಮಣಿ ದೇವೇಶ ಉತ್ತಿಷ್ಠ ಭಗವನ್ನಿತಃ ॥ ೧೮ ॥

ಈ ಪ್ರದೇಶವು ನಿನ್ನ ಅನುಗ್ರಹದಿಂದ ಸಿದ್ಧಾಶ್ರಮ ಎನಿಸಲಿ ದೇವೇಶ! ಭಗವಂತ! ನನ್ನ ತಪಸ್ಸು ಪೂರ್ತಿಯಾಗಿ ಸಿದ್ಧವಾಗುವಾಗ ವಾಮನನಾಗಿ ಅವತರಿಸುವುದಕ್ಕಾಗಿ ಈ ಪ್ರದೇಶದಿಂದ ಎದ್ದು ಬಾ' ಎಂದು ಕಶ್ಯಪನು ನುಡಿದ.

ಅಥ ವಿಷ್ಣುರ್ಮಹಾತೇಜಾ ಅದಿತ್ಯಾಂ ಸಮಜಾಯತ ।
ಛತ್ರೀ ಭಿಕ್ಷುಕರೂಪೇಣ ಕಮಂಡಲುಶಿಖೋಜ್ಜ್ವಲಃ ।
ವಾಮನಂ ರೂಪಮಾಸ್ಥಾಯ ವೈರೋಚನಿಮುಪಾಗಮತ್ ॥ ೧೯ ॥

ಬಳಿಕ ಮಹಾತೇಜನಾದ ವಿಷ್ಣು ಅದಿತಿಯಲ್ಲಿ ಅವತರಿಸಿದ. ಛತ್ರವನ್ನು ಹಿಡಿದು ಕಮಂಡಲು ಶಿಖೆಗಳಿಂದ ಬೆಳಗುತ್ತ ವಟುರೂಪದಿಂದ ವಾಮನಾವತಾರ ತಾಳಿ ಬಲಿಯ ಬಳಿಗೆ ಬಂದ.

ತಂ ದೃಷ್ಟ್ವಾಽಸುರರಾಜೇಂದ್ರೋ ವಾಮನತ್ವಾಚ್ಚ ವಿಸ್ಮಿತಃ ।
ಮಾಧವೋಽಯಮಿತಿ ಜ್ಞಾತ್ವಾ ಪೂಜಯಾಮಾಸ ಧರ್ಮತಃ ॥ ೨೦ ॥

ವಾಮನನ್ನು ನೋಡಿ ಬಲಿ ವಾಮನನ ವಾಮನತ್ವದಿಂದ ಶರೀರ ಸೌಂದರ್ಯ-ದಿಂದ ಆಶ್ಚರ್ಯ ಚಕಿತನಾದ. ಇವನು ಹರಿಯೇ ಎಂದು ಶುಕ್ರಾಚಾರ್ಯರು ಹೇಳಿದ್ದನ್ನು ಕೇಳಿ ತಿಳಿದು ವಿಧ್ಯುಕ್ತವಾಗಿ ವಾಮನನ್ನು ಬಲಿ ಪೂಜಿಸಿದ.

ಪೂಜಿತಸ್ತೇನ ಧರ್ಮಾತ್ಮಾ ಸರ್ವಲೋಕಹಿತಾಯ ವೈ ।
ಆಸಾದ್ಯ ಯಜಮಾನಂ ತಮುವಾಚ ಭಗವಾನ್ಹರಿಃ ।
ಸ್ವಸ್ತಿ ತೇಽಸ್ತು ಮಹಾರಾಜ ಯಜ್ಞಶ್ಚಾತೀವ ಶೋಭನಃ ॥ ೨೧ ॥

ಧರ್ಮಾತ್ಮನಾದ ಭಗವಾನ್ ಹರಿ ಬಲಿಯಿಂದ ಪೂಜಿತನಾಗಿ ಯಜಮಾನನಾದ ಆತನನ್ನು, 'ಆಸಾದ್ಯ' ಭಾಗವತದಲ್ಲಿ ಹೇಳಿದಂತೆ ಬಲಿಯ ಪೂರ್ವಜರನ್ನು ಪ್ರಶಂಸೆ ಮಾಡುತ್ತ ಬಲಿಯನ್ನು ಒಲಿಸಿಕೊಂಡು ನುಡಿದ,' ಮಹಾರಾಜ, ಈ ನಿನ್ನ ಯಜ್ಞವು ಬಹಳ ಉತ್ತಮವಾಗಿದೆ. ನಿನಗೆ ಒಳ್ಳೆಯದಾಗಲಿ' ಎಂದು.

ವಯಂ ದಾನಾರ್ಥಿನೋ ರಾಜನ್ ಶ್ರುತ್ವಾ ಯಜ್ಞಮನುತ್ತಮಮ್ ।
ತ್ವಾಂ ದೃಷ್ಟ್ವಾ ತವ ಯೋಗೇಷು ಕಿಂಚಿಲ್ಲಬ್ಧುಮಿಹಾಗತಾಃ ॥ ೨೨ ॥

ರಾಜನೆ, ನಾನು ದಾನಾರ್ಥಿಯಾಗಿರುವೆನು. ನಿನ್ನ ಉತ್ತಮವಾದ ಯಜ್ಞದ ಬಗ್ಗೆ ಕೇಳಿ ನಿನ್ನನ್ನು ಸಂದರ್ಶನ ಮಾಡಿ ನಿನ್ನ ಯೋಗಗಳಲ್ಲಿ ಅಪ್ರಾಪ್ತ ಪ್ರಾಪ್ತಿಗಳಲ್ಲಿ ಸ್ವಲ್ಪಮಾತ್ರ ದಾನವಾಗಿ ಪಡೆಯಲು ಇಲ್ಲಿಗೆ ಬಂದಿರುವೆನು.'

ವಾಮನೇನೈವಮುಕ್ತಸ್ತು ಮುದಾ ರಾಜಾ ತದಾಽಬ್ರವೀತ್ ।
ಅದ್ಯ ಮೇ ಸಫಲೋ ಯಜ್ಞಃ ಕೃತಾರ್ಥೋಽಸ್ಮ್ಯದ್ಯ ವಾಮನ॥ ೨೩ ॥

ವಾಮನನು ಹೀಗೆ ಹೇಳಿದಾಗ ಬಲಿರಾಜ ಸಂತಸದಿಂದ ನುಡಿದ, 'ವಾಮನ, ಇಂದು ನನ್ನ ಯಜ್ಞ ಸಫಲವಾಯಿತು. ನಾನು ಕೃತಾರ್ಥನಾದೆ.'

ತ್ವದರ್ಥಂ ಕಲ್ಪಿತಂ ಚೈವ ಮಮ ಸರ್ವಸ್ವಮೇವ ಚ ।
ಧನೌಘಂ ರತ್ನರಾಶಿಂ ವಾ ಭೂಷಣಂ ಧಾನ್ಯಸಂಚಯಮ್ ॥ ೨೪ ॥

ನನ್ನ ಸರ್ವಸ್ವವೂ ನಿನ್ನಾರಾಧನೆಗೇ ಸಂಪಾದಿತವಾಗಿದೆ. ಧನರಾಶಿ ರತ್ನರಾಶಿ ಆಭರಣ ಧಾನ್ಯರಾಶಿ ಯಾವುದನ್ನಾದರೂ ನೀನು ನನ್ನಿಂದ ಪಡೆಯಬಹುದು.

ಗ್ರಾಮಂ ವಾ ನಗರಂ ವಾಪಿ ರಾಷ್ಟ್ರಂ ವಾ ಯಾನಮೇವ ವಾ ।
ಹಸ್ತ್ಯಶ್ವರಥಪತ್ತೀರ್ವಾ ತ್ವಂ ಲಭಸ್ವಾನ್ಯಮೇವ ವಾ ॥
ಕಿಮಿಚ್ಛಸಿ ಮಹಾಬಾಹೋ ತದ್ದದಾಮಿ ತವಾನಘ ॥ ೨೫ ॥

ಗ್ರಾಮ ನಗರ ರಾಷ್ಟ್ರ ವಾಹನಗಳನ್ನಾಗಲಿ ಗಜ ಹಯ ರಥ ಪದಾತಿ ಸೈನ್ಯ-ವನ್ನಾಗಲಿ ಬೇರೇನನ್ನೇ ಆಗಲಿ ನನ್ನಿಂದ ಪಡೆಯಬಹುದು. ಮಹಾಬಾಹುವೆ, ಪಾಪರಹಿತನೆ ನೀನೇನು ಬಯಸುವೆ? ಅದನ್ನು ನಿನಗೆ ಕೊಡುವೆನು.

ಏವಮುಕ್ತಸ್ತದಾ ರಾಜ್ಞಾ ಭಗವಾನ್ಪುರುಷೋತ್ತಮಃ ।
ಉವಾಚೇಷತ್‌ಸ್ಮಿತಂ ಕೃತ್ವಾ ಯಜಮಾನಂ ಮಹಾಬಲಿಮ್ ॥ ೨೬ ॥

ಬಲಿರಾಜ ಹೀಗೆ ಹೇಳಿದಾಗ ಭಗವಾನ್ ಪುರುಷೋತ್ತಮನು ನಸುನಕ್ಕು ಯಜಮಾನನಾದ ಆ ಮಹಾಬಲಿಗೆ ನುಡಿದ.

ಏತೈಃ ಕಿಂ ಮಮ ರಾಜೇಂದ್ರ ತ್ರೈಸ್ತು ನಾಸ್ತಿ ಪ್ರಯೋಜನಮ್ ।
ಅಸ್ಮತ್ಪಾದತ್ರಯಾಕ್ರಾಂತಾಂ ದೇಹಿ ಭೂಮಿಂ ವಿಭೋ ತವ ॥ ೨೭ ॥

ವಿಭು, ರಾಜೋತ್ತಮ, ಇವುಗಳಿಂದ ನನಗೇನಾಗಬೇಕಿದೆ? ಅವುಗಳಿಂದ ನನಗೆ ಏನೂ ಪ್ರಯೋಜನವಿಲ್ಲ. ನನ್ನ ಮೂರು ಹೆಜ್ಜೆಗಳಷ್ಟು ನಿನ್ನ ಭೂಮಿಯನ್ನು ಕೊಡು.

ಶ್ರುತ್ವಾ ತದ್ವಾಮನೇನೋಕ್ತಂ ಸ್ಮಿತಂ ಕೃತ್ವಾಽಸುರೋತ್ತಮಃ ।
ಯೇನೇಷ್ಟಂಪೂರ್ಯತೇ ಬ್ರಹ್ಮಂಸ್ತತ್ಕರ್ಮೇತಿ ತತೋಽಬ್ರವೀತ್॥ ೨೮

ವಾಮನ ಹೇಳಿದ್ದನ್ನು ಕೇಳಿ ಅಸುರಶ್ರೇಷ್ಠ ಬಲಿ ನಸುನಕ್ಕು 'ಆಟುವೆ, ನಿನ್ನ ಅಭೀಷ್ಟ ಪೂರ್ತಿಯಾಗುವುದಾದರೆ ಅದನ್ನು ನಾನು ಮಾಡುವೆನು' ಎಂದನು.

ವಾಮನಾಯ ಮಹೀಂ ದಾತುಂ ನಿಶ್ಚಿತೇಽಸುರಸತ್ತಮೇ ।
ತಂ ನಿವಾರ್ಯ ಮಹಾರಾಜಂ ಪ್ರಾಹ ಶುಕ್ರೋ ದ್ವಿಜೋತ್ತಮಃ ॥ ೨೯

ವಾಮನನಿಗೆ ಭೂದಾನ ಮಾಡಲು ಬಲಿ ಸಿದ್ಧನಾದಾಗ ಅವನನ್ನು ದ್ವಿಜೋತ್ತಮ ಶುಕ್ರಾಚಾರ್ಯನು ತಡೆದನು.

ವಿರಿಂಚಭವಶಕ್ರಾದ್ಯಾ ಯೋಗಿನಶ್ಚ ಸುರಾಸುರಾಃ ।
ಯಂ ನ ಜಾನಂತಿ ವೇದಾಶ್ಚ ಸ ಏಷೋ ವಿಷ್ಣುರವ್ಯಯಃ ॥ ೩೦ ॥

'ಬ್ರಹ್ಮರುದ್ರ ಇಂದ್ರಾದಿಗಳೂ ಯೋಗಿಗಳೂ ಸುರ-ಅಸುರರೂ, ವೇದಗಳೂ ಕೂಡ ಯಾರನ್ನು ಪೂರ್ತಿ ತಿಳಿಯಲಾರರೋ ಆ ಅವ್ಯಯನಾದ ವಿಷ್ಣುವೇ ಈ ವಾಮನ,' ಎಂದನು.

ದಾನಾರಕ್ತೇ ತತಃ ಶುಕ್ರೇ ಶುಕ್ರಂ ರಾಜಪುರೋಹಿತಮ್ ।
ಗೃಹೀತ್ವಾ ತಾಡಯಾಮಾಸ ವೈನತೇಯೋ ಮಹಾಬಲಃ ॥ ೩೧ ॥

ಶುಕ್ರಾಚಾರ್ಯನು ಬಲಿಯ ದಾನವನ್ನು ಒಲ್ಲದಿದ್ದಾಗ ರಾಜ ಪುರೋಹಿತನಾದ ಆ ಶುಕ್ರಾಚಾರ್ಯನನ್ನು ಮಹಾ ಬಲನಾದ ಗರುಡನು ಹಿಡಿದು ತಾಡನ ಮಾಡಿದ.

ಈ ಅಂಶ ಭಾಗವತಾದಿ ಪುರಾಣಗಳಲ್ಲಿ ಕಂಡುಬರುವುದಿಲ್ಲ. ಕಲ್ಪಾಂತರದ ಕಥೆ ಎಂದೂ ಒಪ್ಪಲಾಗದು. ಬ್ರಾಹ್ಮಣನಿಗೆ ಅವನೇನು ತಪ್ಪು ಮಾಡಿದರೂ ದೈಹಿಕವಾಗಿ ಶಿಕ್ಷಿಸಬಾರದೆಂದು ಮನುಸ್ಮೃತ್ಯಾದಿ ವಚನಗಳಿವೆ. ಅದಕ್ಕೆ 'ಉತ್ತಮೇ ವಚಸಾ ಶಿಕ್ಷಾ' ಎಂಬಂತೆ ಗರುಡನು ಶುಕ್ರಾಚಾರ್ಯರಿಗೆ ಮಾತಿನಿಂದಲೇ ಹೊಡೆದನೆಂದು ತಿಳಿಯಬೇಕು. 'ನ ತೇ ವಾಗನೃತಾ ಕಾಚಿತ್' ಎಂಬಂತೆ ವಾಲ್ಮೀಕಿಯ ಮಾತು ಸುಳ್ಳಾಗದು.

ಪತ್ನ್ಯಾ ಸಹ ವಿನಿಶ್ಚಿತ್ಯ ಯಜಮಾನೋ ಮಹಾಬಲಿಃ ।
ಮಾಯಾರೂಪೇಣ ದೇವೇಶೋ ಮಮ ಯಜ್ಞಂ ಗತೋ ಯದಿ ॥
ತದೈತದ್ಯಜ್ಞಸಾಫಲ್ಯಮೇವಮಸ್ತ್ವಿತಿ ಚಾಬ್ರವೀತ್ ॥ ೩೨ ॥

ಯಜಮಾನನಾದ ಮಹಾಬಲಿ ಪತ್ನಿಯೊಂದಿಗೆ ಸಮಾಲೋಚನೆ ಮಾಡಿ ನುಡಿದ. 'ದೇವೇಶನು ವಂಚಕವಾದ ವಟು ರೂಪದಿಂದಲಾದರೂ ನನ್ನ ಯಜ್ಞಕ್ಕೆ ಬಂದನೆಂದರೆ ಇದು ನನ್ನ ಯಜ್ಞದ ಸಾಫಲ್ಯವೇ ಸರಿ. ಅದು ಹಾಗೇ ಆಗಲಿ' ಎಂದು.

ಇತಿ ಮತ್ವೋದಕಂ ದತ್ತಂ ವಾಮನಾಯ ಮಹಾತ್ಮನೇ ।
ತವ ಪಾದತ್ರಯಾಕ್ರಾಂತಾಂ ಗೃಹಾಣಾದ್ಯ ಮಹೀಂ ಪ್ರಭೋ ॥ ೩೩ ॥

ಹೀಗೆ ನಿರ್ಧಾರ ಮಾಡಿ 'ಪ್ರಭೋ! ನಿನ್ನ ಹೆಜ್ಜೆಯಳತೆಯಷ್ಟು ಭೂಮಿಯನ್ನು ನೀನೀಗ ಸ್ವೀಕರಿಸು' ಎನ್ನುತ್ತ ಮಹಾತ್ಮನಾದ ವಾಮನನಿಗೆ ಭೂಮಿಯನ್ನು ಧಾರೆಯೆರೆದು ಕೊಟ್ಟುಬಿಟ್ಟ.

ಉದಕೇ ಸ್ಪೃಷ್ಟಮಾತ್ರೇ ತು ವಿಶ್ವರೂಪಧರೋ ಹರಿಃ ।
ತತ್ರಸ್ಥ ಏವ ವವೃಧೇ ಯೇನ ಪೂರ್ಣಂ ಜಗತ್ರಯಮ್ ॥
ಸಾಯುಧೈರ್ಬಾಹುಭಿಃ ಪೂರ್ಣಾ ದಿಗ್ವಿದಿಕ್ಸರ್ವಮೇವ ಹಿ ॥ ೩೪ ॥

ಧಾರಾಪೂರ್ವಕ ದಾನ ಮಾಡಿದೊಡನೆ ವಿಶ್ವರೂಪಧಾರಿಯಾದ ಹರಿ ಆ ಯಜ್ಞಶಾಲೆಯಲ್ಲಿಯೇ ನಿಂತು ಮೂಲೋಕವನ್ನೂ ಪೂರ್ತಿ ತುಂಬುವಂತೆ ಬೆಳೆದ. ಆಯುಧ ಸಮೇತವಾದ ಬಾಹುಗಳಿಂದ ದಿಕ್ಕು ವಿದಿಕ್ಕು ಎಲ್ಲವೂ ಪೂರ್ತಿ ತುಂಬಿತು.

ತ್ರೀನ್‌ಪದಾನಥ ಭಿಕ್ಷಿತ್ವಾ ಪ್ರತಿಗೃಹ್ಯ ಚ ಮಾನದಃ ।
ಆಕ್ರಮ್ಯ ಲೋಕಾಂಲ್ಲೋಕಾತ್ಮಾ ಸರ್ವಲೋಕಹಿತೇ ರತಃ ॥ ೩೫ ॥

ಲೋಕಸ್ವಾಮಿಯಾದ ಅಹಂಕಾರ ನಾಶಕನಾದ ಶ್ರೀಹರಿ ಮೂರು ಹೆಜ್ಜೆ ಭೂಮಿಯನ್ನು ಬೇಡಿ ಪಡೆದು ಸರ್ವಲೋಕ ಹಿತವನ್ನು ಬಯಸಿ ಸರ್ವಲೋಕ-ಗಳನ್ನೂ ಆಕ್ರಮಿಸಿದ.

ಮಹೇಂದ್ರಾಯ ಪುನಃ ಪ್ರಾದಾನ್ನಿಯಮ್ಯ ಬಲಿಮೋಜಸಾ ।
ತ್ರೈಲೋಕ್ಯಂ ಸ ಮಹಾತೇಜಾಶ್ಚಕ್ರೇ ಶಕ್ರವಶಂ ಪುನಃ ॥ ೩೬ ॥

ಆಕ್ರಮಿಸಿ, ಮಹೇಂದ್ರನಿಗೆ ಪುನಃ ಕೊಟ್ಟ. ಬಲಿಯನ್ನು ವರುಣಪಾಶದಿಂದ ಗರುಡನ ಮೂಲಕ ಬಂಧಿಸಿದ ಮಹಾತೇಜನಾದ ವಾಮನ ಮೂಲೋಕವನ್ನು ತಿರುಗಿ ಇಂದ್ರನ ಅಧೀನವಾಗಿ ಮಾಡಿದ. ಆದರೂ ಒಂದು ರೂಪದಿಂದ ಬಲಿಯ ಮನೆ ಬಾಗಿಲು ಕಾಯ್ದ.

ತೇನೈಷ ಪೂರ್ವಮಾಕ್ರಾಂತ ಆಶ್ರಮಃ ಶ್ರಮನಾಶನಃ ।
ಮಯಾಪಿ ಭಕ್ತ್ಯಾ ತಸ್ಯೈಷ ವಾಮನಸ್ಯೋಪಭುಜ್ಯತೇ ॥ ೩೭ ॥

ಇನ್ನೊಂದು ವಾಮನ ರೂಪದಿಂದ ಸಿದ್ಧಾಶ್ರಮದಲ್ಲಿ ಪುನಃ ತಪಸ್ಸು ಮಾಡಲು ತೊಡಗಿದ. ಹೀಗೆ, 'ಆ-ಅಶ್ರಮ' ಚೆನ್ನಾಗಿ ಶ್ರಮನಾಶವಾಗುವುದರಿಂದ 'ಆಶ್ರಮ'ವೆನಿಸಿದ ಈ ಆಶ್ರಮವನ್ನು ಮೊದಲಿಗೆ ಇನ್ನೊಂದು ವಾಮನ ರೂಪದಿಂದ ವಿಷ್ಣುವೇ ಆಕ್ರಮಿಸಿದ್ದ. ಈಗ ಆ ವಾಮನನ ಆಶ್ರಮವನ್ನು ನಾನೂ ಭಕ್ತಿಯಿಂದ ಆಕ್ರಮಿಸಿ ಅನುಭವಿಸುತ್ತಿದ್ದೇನೆ.'

ಏತಮಾಶ್ರಮಮಾಯಾಂತಿ ರಾಕ್ಷಸಾ ವಿಘ್ನಕಾರಿಣಃ ।
ಅತ್ರೈವ ಪುರುಷವ್ಯಾಘ್ರ ಹಂತವ್ಯಾ ದುಷ್ಟಚಾರಿಣಃ ॥ ೩೮ ॥

ಇಂಥ ಆಶ್ರಮವನ್ನು ಈಗ ಯಜ್ಞ ವಿಘ್ನಕಾರಿಗಳಾದ ರಾಕ್ಷಸರು ಆಕ್ರಮಿ-ಸುತ್ತಿದ್ದಾರೆ. ಇಲ್ಲಿಯೇ ದುಷ್ಕರ್ಮಿಗಳಾದ ಅವರನ್ನು ಪುರುಷೋತ್ತಮನೆ! ನೀನು ವಧಿಸಬೇಕು.

ಅದ್ಯ ಗಚ್ಛಾಮಹೇ ರಾಮ ಸಿದ್ಧಾಶ್ರಮಮನುತ್ತಮಮ್ ।
ತದಾಶ್ರಮಪದಂ ತಾತ ತವಾಪ್ಯೇತದ್ಯಥಾ ಮಮ ॥ ೩೯ ॥

ರಾಮ ಇದೀಗ ನಾವು ಉತ್ತಮವಾದ ಸಿದ್ಧಾಶ್ರಮಕ್ಕೇ ಹೋಗುತ್ತಿದ್ದೇವೆ. ಆ ಆಶ್ರಮ ಸ್ಥಳವು, 'ಮಗು!' ಹೇಗೆ ನನ್ನದಾಗಿದೆಯೋ ಹಾಗೇ ನಿನ್ನದೂ ಆಗಿದೆ.

ಇತ್ಯುಕ್ತ್ವಾ ಪರಮಪ್ರೀತೋ ಗೃಹ್ಯ ರಾಮಂ ಸಲಕ್ಷ್ಮಣಮ್ ।
ಪ್ರವಿಶನ್ನಾಶ್ರಮಪದಂ ವ್ಯರೋಚತ ಮಹಾಮುನಿಃ ॥
ಶಶೀವ ಗತನೀಹಾರಃ ಪುನರ್ವಸುಸಮನ್ವಿತಃ ॥ ೪೦ ॥

ಹೀಗೆ ಹೇಳಿ ಮಹಾಮುನಿಯು ಬಲು ಸಂತುಷ್ಟನಾಗಿ ರಾಮಲಕ್ಷ್ಮಣರನ್ನು ಇಬ್ಬರನ್ನೂ ಕರೆದುಕೊಂಡು ಆಶ್ರಮ ಪ್ರದೇಶವನ್ನು ಪ್ರವೇಶಿಸಿ, ಎರಡು ಪುನರ್ವಸು ನಕ್ಷತ್ರಗಳಿಂದ ಯುಕ್ತನಾದ ಹಿಮನಿರ್ಮುಕ್ತನಾದ ಶರತ್ಕಾಲದ ಚಂದ್ರನಂತೆ ಶೋಭಿಸಿದರು.

ತಂ ದೃಷ್ಟ್ವಾ ಮುನಯಃ ಸರ್ವೇ ಸಿದ್ಧಾಶ್ರಮನಿವಾಸಿನಃ ।
ಉತ್ಪತ್ಯೋತ್ಪತ್ಯ ಸಹಸಾ ವಿಶ್ವಾಮಿತ್ರಮಪೂಜಯನ್ ॥ ೪೧ ॥

ಸಿದ್ಧಾಶ್ರಮವಾಸಿಗಳಾದ ಮುನಿಗಳೆಲ್ಲರೂ ವಿಶ್ವಾಮಿತ್ರನನ್ನು ಕಂಡು ಒಡನೇ ಆತುರದಿಂದ ಧಾವಿಸಿ ಬಂದು ಸತ್ಕರಿಸಿದರು.

ಯಥಾರ್ಹಂ ಚಕ್ರಿರೇ ಪೂಜಾಂ ವಿಶ್ವಾಮಿತ್ರಾಯ ಧೀಮತೇ ।
ತಥೈವ ರಾಜಪುತ್ರಾಭ್ಯಾಮಕುರ್ವನ್ನತಿಥಿಕ್ರಿಯಾಮ್ ॥ ೪೨ ॥

ಧೀಮಂತನಾದ ವಿಶ್ವಾಮಿತ್ರನಿಗೆ ಮುನಿಗಳು ತಕ್ಕ ಸತ್ಕಾರ ಮಾಡಿ ರಾಜಕುಮಾರರಿಗೂ ಅತಿಥಿ ಸತ್ಕಾರ ಮಾಡಿದರು.

ಮುಹೂರ್ತಮಿವ ವಿಶ್ರಾಂತೌ ರಾಜಪುತ್ರಾವರಿಂದಮೌ ।
ಪ್ರಾಂಜಲೀ ಮುನಿಶಾರ್ದೂಲಮೂಚತೂ ರಘುನಂದನೌ ॥ ೪೩ ॥

ಮುಹೂರ್ತಕಾಲ ವಿಶ್ರಾಂತಿ ಪಡೆದು ಶತ್ರುನಾಶಕರಾದ ರಾಜಕುಮಾರರು ರಾಮಲಕ್ಷ್ಮಣರು ಕೈಮುಗಿದು ಮುನಿಶ್ರೇಷ್ಠನಿಗೆ ಹೇಳಿದರು.

ಅದ್ಯೈವ ದೀಕ್ಷಾಂ ಪ್ರವಿಶ ಭದ್ರಂ ತೇ ಮುನಿಪುಂಗವ ।
ಸಿದ್ಧಾಶ್ರಮೋऽಯಂ ಸಿದ್ಧಃ ಸ್ಯಾತ್ಸತ್ಯಮಸ್ತು ವಚಸ್ತವ ॥ ೪೪ ॥

ಮುನಿಶ್ರೇಷ್ಠನೇ, ಇಂದೇ ಯಜ್ಞದೀಕ್ಷೆಯನ್ನು ಸ್ವೀಕರಿಸು. ನಿನಗೆ ಒಳ್ಳೆಯ-ದಾಗಲಿ, ಸಿದ್ಧಾಶ್ರಮವಿದು ಹೆಸರಿಗೆ ತಕ್ಕಂತೆ ಯಜ್ಞಕ್ಕೆ ಸಿದ್ಧವಾಗಲಿ 'ಅತ್ಯೈವ

ಹಂತವ್ಯಾ ದುಷ್ಟಚಾರಿಣ' ಎಂದು ನೀನು ಹೇಳಿದ್ದು ನಿಜವಾಗಲಿ. ಇಲ್ಲಿಯೆ ದುಷ್ಟರ ವಧೆಯಾಗಲಿ.

ಏವಮುಕ್ತೋ ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ ।
ಪ್ರವಿವೇಶ ತತೋ ದೀಕ್ಷಾಂ ನಿಯತೋ ನಿಯತೇಂದ್ರಿಯಃ ॥ ೪೫ ॥

ಶ್ರೀರಾಮ ಹೇಳಿದಂತೇ ಇಂದ್ರಿಯ ನಿಗ್ರಹ ಮಾಡಿಕೊಂಡಿರುವ ಮಹಾ-ತೇಜನಾದ ಮಹಾಮುನಿ ವಿಶ್ವಾಮಿತ್ರನು ಮನೋನಿಗ್ರಹ ಮಾಡಿಕೊಂಡು ಯಜ್ಞದೀಕ್ಷೆ ಪಡೆದ.

ಕುಮಾರಾವಪಿ ತಾಂ ರಾತ್ರಿಮುಷಿತ್ವಾ ಸುಸಮಾಹಿತೌ ।
ಪ್ರಭಾತಕಾಲೇ ಚೋತ್ಥಾಯ ಪೂರ್ವಾಂ ಸಂಧ್ಯಾಮುಪಾಸ್ಯ ಚ॥ ೪೬ ॥

ಸ್ಪೃಷ್ಟೋದಕೌ ಶುಚೀ ಜಪ್ಯಂ ಸಮಾಪ್ಯ ನಿಯಮೇನ ಚ ।
ಹುತಾಗ್ನಿಹೋತ್ರಮಾಸೀನಂ ವಿಶ್ವಾಮಿತ್ರಮವಂದತಾಮ್ ॥ ೪೭ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಏಕೋನತ್ರಿಂಶಃ ಸರ್ಗಃ ॥ ೨೯ ॥

ಕುಮಾರರೂ ಆ ರಾತ್ರಿ ಸ್ಥಿರಚಿತ್ತರಾಗಿ ವಾಸ ಮಾಡಿ ಬೆಳಿಗ್ಗೆ ಎದ್ದು ಪ್ರಾತಃ ಸಂಧ್ಯೋಪಾಸನ ಮಾಡಿ ಅರ್ಘ್ಯಪ್ರದಾನ ಜಪಗಳನ್ನು ಮುಗಿಸಿದರು. ನಿಯಮ-ಪೂರ್ವಕ ಔಪಾಸನ ಹೋಮವನ್ನೂ ಮಾಡಿ ಕುಳಿತಿದ್ದ ವಿಶ್ವಾಮಿತ್ರರನ್ನು ವಂದಿಸಿದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಇಪ್ಪತ್ತೊಂಬತ್ತನೇ ಸರ್ಗ ಮುಗಿಯಿತು.

ರಾಮ ಇದೀಗ ನಾವು ಉತ್ತಮವಾದ ಸಿದ್ಧಾಶ್ರಮಕ್ಕೇ ಹೋಗುತ್ತಿದ್ದೇವೆ. ಆ ಆಶ್ರಮ ಸ್ಥಳವು, 'ಮಗು!' ಹೇಗೆ ನನ್ನದಾಗಿದೆಯೋ ಹಾಗೇ ನಿನ್ನದೂ ಆಗಿದೆ.

ಇತ್ಯುಕ್ತ್ವಾ ಪರಮಪ್ರೀತೋ ಗೃಹ್ಯ ರಾಮಂ ಸಲಕ್ಷ್ಮಣಮ್ ।
ಪ್ರವಿಶನ್ನಾಶ್ರಮಪದಂ ವ್ಯರೋಚತ ಮಹಾಮುನಿಃ ॥
ಶಶೀವ ಗತನೀಹಾರಃ ಪುನರ್ವಸುಸಮನ್ವಿತಃ ॥ ೪೦ ॥

ಹೀಗೆ ಹೇಳಿ ಮಹಾಮುನಿಯು ಬಲು ಸಂತುಷ್ಟನಾಗಿ ರಾಮಲಕ್ಷ್ಮಣರನ್ನು ಇಬ್ಬರನ್ನೂ ಕರೆದುಕೊಂಡು ಆಶ್ರಮ ಪ್ರದೇಶವನ್ನು ಪ್ರವೇಶಿಸಿ, ಎರಡು ಪುನರ್ವಸು ನಕ್ಷತ್ರಗಳಿಂದ ಯುಕ್ತನಾದ ಹಿಮನಿರ್ಮುಕ್ತನಾದ ಶರತ್ಕಾಲದ ಚಂದ್ರನಂತೆ ಶೋಭಿಸಿದರು.

ತಂ ದೃಷ್ಟ್ವಾ ಮುನಯಃ ಸರ್ವೇ ಸಿದ್ಧಾಶ್ರಮನಿವಾಸಿನಃ ।
ಉತ್ಪತ್ಯೋತ್ಪತ್ಯ ಸಹಸಾ ವಿಶ್ವಾಮಿತ್ರಮಪೂಜಯನ್ ॥ ೪೧ ॥

ಸಿದ್ಧಾಶ್ರಮವಾಸಿಗಳಾದ ಮುನಿಗಳೆಲ್ಲರೂ ವಿಶ್ವಾಮಿತ್ರನನ್ನು ಕಂಡು ಒಡನೇ ಆತುರದಿಂದ ಧಾವಿಸಿ ಬಂದು ಸತ್ಕರಿಸಿದರು.

ಯಥಾರ್ಹಂ ಚಕ್ರಿರೇ ಪೂಜಾಂ ವಿಶ್ವಾಮಿತ್ರಾಯ ಧೀಮತೇ ।
ತಥೈವ ರಾಜಪುತ್ರಾಭ್ಯಾಮಕುರ್ವನ್ನತಿಥಿಕ್ರಿಯಾಮ್ ॥ ೪೨ ॥

ಧೀಮಂತನಾದ ವಿಶ್ವಾಮಿತ್ರನಿಗೆ ಮುನಿಗಳು ತಕ್ಕ ಸತ್ಕಾರ ಮಾಡಿ ರಾಜಕುಮಾರರಿಗೂ ಅತಿಥಿ ಸತ್ಕಾರ ಮಾಡಿದರು.

ಮುಹೂರ್ತಮಿವ ವಿಶ್ರಾಂತೌ ರಾಜಪುತ್ರಾವರಿಂದಮೌ ।
ಪ್ರಾಂಜಲೀ ಮುನಿಶಾರ್ದೂಲಮೂಚತೂ ರಘುನಂದನೌ ॥ ೪೩ ॥

ಮುಹೂರ್ತಕಾಲ ವಿಶ್ರಾಂತಿ ಪಡೆದು ಶತ್ರುನಾಶಕರಾದ ರಾಜಕುಮಾರರು ರಾಮಲಕ್ಷ್ಮಣರು ಕೈಮುಗಿದು ಮುನಿಶ್ರೇಷ್ಠನಿಗೆ ಹೇಳಿದರು.

ಅದ್ಯೈವ ದೀಕ್ಷಾಂ ಪ್ರವಿಶ ಭದ್ರಂ ತೇ ಮುನಿಪುಂಗವ ।
ಸಿದ್ಧಾಶ್ರಮೋಽಯಂ ಸಿದ್ಧಃ ಸ್ಯಾತ್ಸತ್ಯಮಸ್ತು ವಚಸ್ತವ ॥ ೪೪ ॥

ಮುನಿಶ್ರೇಷ್ಠನೇ, ಇಂದೇ ಯಜ್ಞದೀಕ್ಷೆಯನ್ನು ಸ್ವೀಕರಿಸು. ನಿನಗೆ ಒಳ್ಳೆಯ-ದಾಗಲಿ, ಸಿದ್ಧಾಶ್ರಮವಿದು ಹೆಸರಿಗೆ ತಕ್ಕಂತೆ ಯಜ್ಞಕ್ಕೆ ಸಿದ್ಧವಾಗಲಿ 'ಅತ್ಯೈವ

ಹಂತವ್ಯಾ ದುಷ್ಟಚಾರಿಣ' ಎಂದು ನೀನು ಹೇಳಿದ್ದು ನಿಜವಾಗಲಿ. ಇಲ್ಲಿಯೆ ದುಷ್ಟರ ವಧೆಯಾಗಲಿ.

ಏವಮುಕ್ತೋ ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ ।
ಪ್ರವಿವೇಶ ತತೋ ದೀಕ್ಷಾಂ ನಿಯತೋ ನಿಯತೇಂದ್ರಿಯಃ ॥ ೪೫ ॥

ಶ್ರೀರಾಮ ಹೇಳಿದಂತೇ ಇಂದ್ರಿಯ ನಿಗ್ರಹ ಮಾಡಿಕೊಂಡಿರುವ ಮಹಾ-ತೇಜನಾದ ಮಹಾಮುನಿ ವಿಶ್ವಾಮಿತ್ರನು ಮನೋನಿಗ್ರಹ ಮಾಡಿಕೊಂಡು ಯಜ್ಞದೀಕ್ಷೆ ಪಡೆದ.

ಕುಮಾರಾವಪಿ ತಾಂ ರಾತ್ರಿಮುಷಿತ್ವಾ ಸುಸಮಾಹಿತೌ ।
ಪ್ರಭಾತಕಾಲೇ ಚೋತ್ಥಾಯ ಪೂರ್ವಾಂ ಸಂಧ್ಯಾಮುಪಾಸ್ಯ ಚ॥ ೪೬ ॥

ಸ್ಪೃಷ್ಟೋದಕೌ ಶುಚೀ ಜಪ್ಯಂ ಸಮಾಪ್ಯ ನಿಯಮೇನ ಚ ।
ಹುತಾಗ್ನಿಹೋತ್ರಮಾಸೀನಂ ವಿಶ್ವಾಮಿತ್ರಮವಂದತಾಮ್ ॥ ೪೭ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಏಕೋನತ್ರಿಂಶಃ ಸರ್ಗಃ ॥ ೨೯ ॥

ಕುಮಾರರೂ ಆ ರಾತ್ರಿ ಸ್ಥಿರಚಿತ್ತರಾಗಿ ವಾಸ ಮಾಡಿ ಬೆಳಿಗ್ಗೆ ಎದ್ದು ಪ್ರಾತಃ ಸಂಧ್ಯೋಪಾಸನ ಮಾಡಿ ಅರ್ಘ್ಯಪ್ರದಾನ ಜಪಗಳನ್ನು ಮುಗಿಸಿದರು. ನಿಯಮ-ಪೂರ್ವಕ ಔಪಾಸನ ಹೋಮವನ್ನೂ ಮಾಡಿ ಕುಳಿತಿದ್ದ ವಿಶ್ವಾಮಿತ್ರರನ್ನು ವಂದಿಸಿದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಇಪ್ಪತ್ತೊಂಬತ್ತನೇ ಸರ್ಗ ಮುಗಿಯಿತು.

ತ್ರಿಂಶಃ ಸರ್ಗಃ

ಅಥ ತೌ ದೇಶಕಾಲಜ್ಞೌ ರಾಜಪುತ್ರಾವರಿಂದಮೌ ।
ದೇಶೇ ಕಾಲೇ ಚ ವಾಕ್ಯಜ್ಞಾವಬ್ರೂತಾಂ ಕೌಶಿಕಂ ವಚಃ ॥ ೧ ॥

ಶತ್ರುನಾಶಕರಾದ ರಾಜಕುಮಾರ ರಾಮಲಕ್ಷ್ಮಣರು ಎಲ್ಲ ಕಾರ್ಯಕ್ಕೂ ಉಚಿತವಾದ ದೇಶಕಾಲಗಳನ್ನು ಅರಿಯ ಬಲ್ಲವರು ಹೇಗೆ ಮಾತನಾಡಬೇಕೆಂದೂ ಬಲ್ಲವರು. ಅದರಿಂದ ಅವರು ಉಚಿತವಾದ ದೇಶಕಾಲಗಳಲ್ಲಿ ಉಚಿತವಾದ ರೀತಿಯಲ್ಲಿ ವಿಶ್ವಾಮಿತ್ರ ಮುನಿಗೆ ಹೇಳಿದರು.

ಭಗವನ್ ಶ್ರೋತುಮಿಚ್ಛಾವೋ ಯಸ್ಮಿನ್ಕಾಲೇ ನಿಶಾಚರೌ ।
ಸಂರಕ್ಷಣೀಯೌ ತೌ ಬ್ರಹ್ಮನ್ನಾತಿವರ್ತೇತ ತತ್ಕ್ಷಣಮ್ ॥ ೨ ॥

ಪೂಜ್ಯರೆ, ಯಾವ ಸಮಯದಲ್ಲಿ ಮಾರೀಚ ಸುಬಾಹು ರಾಕ್ಷಸರನ್ನು ಯಜ್ಞ-ರಕ್ಷಣೆಗಾಗಿ ದೂರ ಮಾಡಬೇಕಾಗಿದೆ? ಮುನಿಯೆ, ಆ ಸಮಯವನ್ನು ನಾವು ಅತಿಕ್ರಮಿಸಬಾರದು ತಾನೆ?

ಏವಂ ಬ್ರುವಾಣೌ ಕಾಕುತ್ಸ್ಥೌ ತ್ವರಮಾಣೌ ಯುಯುತ್ಸಯಾ ।
ಸರ್ವೇ ತೇ ಮುನಯಃ ಪ್ರೀತಾಃ ಪ್ರಶಶಂಸುರ್ನರಾತ್ಮಜೌ ॥ ೩ ॥

ಹೀಗೆ ಹೇಳುತ್ತ ರಾಕ್ಷಸರೊಡನೆ ಯುದ್ಧಕ್ಕೆ ತ್ವರೆ ಮಾಡುತ್ತಿದ್ದ ರಾಜಕುಮಾರ ರಾಮಲಕ್ಷ್ಮಣರನ್ನು ಸುಪ್ರೀತರಾದ ಆ ಎಲ್ಲ ಮುನಿಗಳು ಹೊಗಳಿದರು.

ಅದ್ಯಪ್ರಭೃತಿ ಷಡ್ರಾತ್ರಂ ರಕ್ಷತಂ ರಾಘವೌ ಯುವಾಮ್ ।
ದೀಕ್ಷಾಂ ಗತೋ ಹ್ಯೇಷ ಮುನಿರ್ಮೌನಿತ್ವಂ ಚ ಗಮಿಷ್ಯತಿ ॥ ೪ ॥

ಇಂದಿನಿಂದ ಆರು ದಿನಗಳ ಕಾಲ ರಾಮಲಕ್ಷ್ಮಣರು ನೀವು ಆ ರಾಕ್ಷಸರು ಯಜ್ಞದಿಂದ ದೂರವಿರುವಂತೆ ನೋಡಿಕೊಳ್ಳಿರಿ. ಈ ವಿಶ್ವಾಮಿತ್ರಮುನಿ ಯಜ್ಞದೀಕ್ಷೆಯನ್ನು ಸ್ವೀಕರಿಸಿ ಮೌನವಾಗಿರುತ್ತಾರೆ.

ತೌ ಚ ತದ್ವಚನಂ ಶ್ರುತ್ವಾ ರಾಜಪುತ್ರೌ ಯಶಸ್ವಿನೌ ।
ಅನಿದ್ರೌ ಷಡಹೋರಾತ್ರಂ ತಪೋವನಮರಕ್ಷತಾಮ್ ॥ ೫ ॥

ಯಶಸ್ವಿಗಳಾದ ಆ ರಾಜಕುಮಾರರು ಮುನಿಗಳ ಆ ಮಾತನ್ನು ಕೇಳಿ ಆರು ಹಗಲು ರಾತ್ರಿಗಳ ಕಾಲ ನಿದ್ದೆಬಿಟ್ಟು ತಪೋವನವನ್ನು ಕಾಪಾಡಿದರು.

ಉಪಾಸಾಂಚಕ್ರತುರ್ವೀರೌ ಯತ್ತೌ ಪರಮಧನ್ವಿನೌ ।
ರರಕ್ಷತುರ್ಮುನಿವರಂ ವಿಶ್ವಾಮಿತ್ರಮರಿಂದಮೌ ॥ ೬ ॥

ವೀರರಾದ ಶತ್ರುನಾಶಕರಾದ ರಾಮಲಕ್ಷ್ಮಣರು ಶ್ರೇಷ್ಠ ಧನುಸ್ಸುಗಳನ್ನು ಹಿಡಿದು ಜಾಗರೂಕರಾಗಿದ್ದು ಮುನಿವರ ವಿಶ್ವಾಮಿತ್ರರ ಯಜ್ಞವನ್ನು ರಕ್ಷಿಸಿದರು.

ಅಥ ಕಾಲೇ ಗತೇ ತಸ್ಮಿನ್ಷಷ್ಠೇಽಹನಿ ಸಮಾಗತೇ ।
ಸೌಮಿತ್ರಿಮಬ್ರವೀದ್ರಾಮೋ ಯತ್ತೋ ಭವ ಸಮಾಹಿತಃ ॥ ೭ ॥

ಕಾಲ ಸರಿಯುತ್ತಿದ್ದಂತೆ ಸಪ್ತರಾತ್ರ ಯಜ್ಞದಲ್ಲಿ ಸೋಮಾಹುತಿ ನೀಡುವ ಪ್ರಧಾನವಾದ ಆರನೆ ದಿನವೂ ಬಂದಾಗ ರಾಮ ಲಕ್ಷ್ಮಣನಿಗೆ ನುಡಿದ. 'ಸ್ಥಿರಚಿತ್ತನಾಗಿ ಜಾಗರೂಕನಾಗಿರು' ಎಂದು.

ರಾಮಸ್ಯೈವಂ ಬ್ರುವಾಣಸ್ಯ ತ್ವರಿತಸ್ಯ ಯುಯುತ್ಸಯಾ ।
ಪ್ರಜಜ್ವಾಲ ತತೋ ವೇದಿಃ ಸೋಪಾಧ್ಯಾಯಪುರೋಹಿತಾ ॥ ೮ ॥

ರಾಕ್ಷಸರೊಡನೆ ಯುದ್ಧಕ್ಕೆ ತ್ವರೆ ಮಾಡುತ್ತ ರಾಮ ಹೀಗೆ ನುಡಿಯುತ್ತಿದ್ದಾಗಲೆ ರಾಕ್ಷಸರ ಮಾಯೆಯಿಂದ ಉಪಾಧ್ಯಾಯ ಪುರೋಹಿತರೊಂದಿಗೆ ಯಜ್ಞವೇದಿ ಬೆಂಕಿ ಹೊತ್ತಿ ಉರಿಯಲು ತೊಡಗಿತು.

ಸದರ್ಭಚಮಸಸ್ರುಕ್ಕಾ ಸಸಮಿತ್ಕುಸುಮೋಚ್ಚಯಾ ।
ವಿಶ್ವಾಮಿತ್ರೇಣ ಸಹಿತಾ ವೇದಿರ್ಜಜ್ವಾಲ ಸರ್ತ್ವಿಜಾ ॥ ೯ ॥

ದರ್ಭ ಚಮಸ ಸ್ರುಕ್ಕು ಸಮಿತ್ತು ಹೂಗಳ ರಾಶಿಯೊಂದಿಗೇ ಋತ್ವಿಜರಿಂದಲೂ ವಿಶ್ವಾಮಿತ್ರರಿಂದಲೂ ಸಹಿತವಾಗಿಯೆ ಯಜ್ಞವೇದಿ ಹೊತ್ತಿ ಉರಿಯತೊಡಗಿತು.

ಮಂತ್ರವಚ್ಚ ಯಥಾನ್ಯಾಯಂ ಯಜ್ಞೋಽಸೌ ಸಂಪ್ರವರ್ತತೇ ।
ಏವಂ ಪ್ರವರ್ತಿತೇ ಯಜ್ಞೇ ವಿಶ್ವಾಮಿತ್ರಸ್ಯ ಧೀಮತಃ ।
ಆಕಾಶೇ ಚ ಮಹಾನ್ ಶಬ್ದಃ ಪ್ರಾದುರಾಸೀದ್ಭಯಾನಕಃ ॥ ೧೦ ॥

ಮಂತ್ರಪೂರ್ವಕವಾಗಿ ವಿಧ್ಯುಕ್ತವಾಗಿ ಯಜ್ಞ ನಡೆಯುತ್ತಿತ್ತು. ಧೀಮಂತನಾದ ವಿಶ್ವಾಮಿತ್ರ ಮುನಿಯ ಯಜ್ಞ ಹೀಗೆ ನಡೆಯುತ್ತಿದ್ದಾಗಲೇ ಆಕಾಶದಲ್ಲಿ ಭಯಾನಕವಾದ ಮಹಾಶಬ್ದವು ಪ್ರಾದುರ್ಭವಿಸಿತು.

ಆವಾರ್ಯ ಗಗನಂ ಮೇಘೋ ಯಥಾ ಪ್ರಾವೃಷಿ ನಿರ್ಗತಃ ।
ತಥಾ ಮಾಯಾಂ ವಿಕುರ್ವಾಣೌ ರಾಕ್ಷಸಾವಭ್ಯಧಾವತಾಮ್ ॥ ೧೧ ॥

ಮಳೆಗಾಲದಲ್ಲಿ ಹೊರಟ ಮೋಡಗಳು ಗುಡುಗುಮಳೆ ಸಹಿತವಾಗಿ ಆಕಾಶವನ್ನು ಆವರಿಸುತ್ತ ಧಾವಿಸಿಬರುವಂತೆ ಮಾಯೆಯನ್ನು ಪ್ರಯೋಗಿಸುತ್ತ ಮಹಾಶಬ್ದ ಮಾಡುತ್ತ ರಾಕ್ಷಸರು ಆಕಾಶವನ್ನು ಆವರಿಸಿ ಧಾವಿಸಿ ಬಂದರು.

ಮಾರೀಚಶ್ಚ ಸುಬಾಹುಶ್ಚ ತಯೋರನುಚರಾಶ್ಚ ಯೇ ।
ಆಗಮ್ಯ ಭೀಮಸಂಕಾಶಾ ರುಧಿರೌಘಮವಾಸೃಜನ್ ॥ ೧೨ ॥

ಮಾರೀಚ ಸುಬಾಹು ಮತ್ತು ಅವರ ಕಡೆಯ ರಾಕ್ಷಸರು ಭಯಂಕರಾಕಾರಾಗಿ ಬಂದು ನೆತ್ತರಿನ ಹೊಳೆಯನ್ನು ಹರಿಸಿದರು.

ಸಾ ತೇನ ರುಧಿರೌಘೇಣ ವೇದಿರ್ಜಜ್ವಾಲ ಮಂಡಿತಾ ।
ದೃಷ್ಟ್ವಾ ವೇದಿಂ ತಥಾಭೂತಾಂ ಸಾನುಜಃ ಕ್ರೋಧಸಂಯುತಃ ।
ಸಹಸಾऽಭಿದ್ರುತೋ ರಾಮಸ್ತಾನಪಶ್ಯತ್ತತೋ ದಿವಿ ॥ ೧೩ ॥

ಅಲಂಕೃತವಾಗಿದ್ದ ಆ ಯಜ್ಞವೇದಿಕೆ ನೆತ್ತರ ಹೊಳೆಯೊಂದಿಗೇ ಹೊತ್ತಿ ಉರಿಯಿತು. ಯಜ್ಞವೇದಿ ಹಾಗಾದುದನ್ನು ನೋಡಿ ರಾಮನೂ ಲಕ್ಷ್ಮಣನೂ ಕ್ರೋಧಭರಿತರಾದರು. ರಾಮನು ಇದಿರಿಗೆ ಧಾವಿಸಿಬಂದು ಆಕಾಶದಲ್ಲಿ ಆ ರಾಕ್ಷಸರನ್ನು ದಿಟ್ಟಿಸಿ ನೋಡಿದ.

ತಾವಾಪತಂತೌ ಸಹಸಾ ದೃಷ್ಟ್ವಾ ರಾಜೀವಲೋಚನಃ ।
ಅಸಂಭ್ರಾಂತಸ್ತ್ವರನ್ನಿಂಚಿತ್ಸ್ವಯಂ ಕೃತ್ವಾ ಮಹದ್ಧನುಃ ।
ಲಕ್ಷ್ಮಣಂ ತ್ವಭಿಸಂಪ್ರೇಕ್ಷ್ಯ ರಾಮೋ ವಚನಮಬ್ರವೀತ್ ॥ ೧೪ ॥

ಒಡನೆ ಕಮಲನಯನನಾದ ರಾಮ ತನ್ನ ಮುಂದೆ ನುಗ್ಗಿಬರುತ್ತಿದ್ದ ಮಾರೀಚ ಸುಬಾಹು ರಾಕ್ಷಸರುಗಳನ್ನು ಕಂಡು ಏನೂ ಧೃತಿಗೆಡದೆ ತ್ವರೆಯಿಂದ ಮಹಾ-ಧನುವಿಗೆ ಹೆದೆಯೇರಿಸಿ ಲಕ್ಷ್ಮಣನನ್ನು ನೋಡುತ್ತ ನುಡಿದ.

ಪಶ್ಯ ಲಕ್ಷ್ಮಣ ದುರ್ವೃತ್ತಾನ್ರಾಕ್ಷಸಾನ್ಪಿಶಿತಾಶನಾನ್ ।
ಯಜ್ಞಘ್ನಾನಶನಿಪ್ರಖ್ಯಾನ್ ದೇವಾರೀನ್ಪಿಶಿತಾಶನಾನ್ ॥ ೧೫ ॥

ಲಕ್ಷ್ಮಣ ನೋಡು, ದುರಾಚಾರಿ ಮಾಂಸಭಕ್ಷಕ ರಾಕ್ಷಸರನ್ನು, ದೇವಶತ್ರುಗಳು ಅವರು ಮಾಂಸ ತಿನ್ನುತ್ತ ಯಜ್ಞಗಳನ್ನು ನಾಶ ಪಡಿಸುತ್ತಾರೆ.

ಮಾನವಾಸ್ತ್ರಸಮಾಧೂತಾನನಿಲೇನ ಯಥಾ ಘನಾನ್ ।
ಕರಿಷ್ಯಾಮಿ ನ ಸಂದೇಹೋ ನೋತ್ಸಹೇ ಹಂತುಮೀದೃಶಾನ್ ।
ಇತ್ಯುಕ್ತ್ವಾ ವಚನಂ ರಾಮಶ್ಚಾಪೇ ಸಂಧಾಯ ವೇಗವಾನ್ ॥ ೧೬ ॥

ಮಾನವಂ ಪರಮೋದಾರಮಸ್ತ್ರಂ ಪರಮಭಾಸ್ವರಮ್ ।
ಚಿಕ್ಷೇಪ ಪರಮಕ್ರುದ್ಧೋ ಮಾರೀಚೋರಸಿ ರಾಘವಃ ॥ ೧೭ ॥

'ಬೀಸುವ ಗಾಳಿಗೆ ಮೋಡಗಳು ಹೇಗೋ ಹಾಗೆ ಈ ರಾಕ್ಷಸರು ಮಾನವಾಸ್ತ್ರದ ಹೊಡೆತಕ್ಕೆ ಸಿಲುಕಿ ಓಡಿಹೋಗುವಂತೆ ಮಾಡುತ್ತೇನೆ. ಇದರಲ್ಲಿ ಸಂಶಯವಿಲ್ಲ, ಇಂಥ ಅಲ್ಪರನ್ನು ಕೊಲ್ಲಲು ನಾನು ಬಯಸುವುದಿಲ್ಲ' ಹೀಗೆ ಹೇಳಿ, ವೇಗದಿಂದ ಪರಮಶ್ರೇಷ್ಠ ಪರಮ ಪ್ರಕಾಶಯುಕ್ತವಾದ ಮಾನವಾಸ್ತ್ರವನ್ನು ಧನುಸ್ಸಿಗೆ ಹೂಡಿ, ಪರಮ ಕ್ರುದ್ಧನಾದ ರಾಮ ಮಾರೀಚನ ಎದೆಗೆ ಎಸೆದ.

ಸ ತೇನ ಪರಮಾಸ್ತ್ರೇಣ ಮಾನವೇನ ಸಮಾಹತಃ ।
ಸಂಪೂರ್ಣಂ ಯೋಜನಶತಂ ಕ್ಷಿಪ್ತಃ ಸಾಗರಸಂಪ್ಲವೇ ॥ ೧೮ ॥

ಮಾರೀಚನು ಶ್ರೇಷ್ಠವಾದ ಮಾನವಾಸ್ತ್ರದ ಹೊಡೆತಕ್ಕೆ ಸಿಲುಕಿ ಪೂರ್ತಿ ನೂರು ಯೋಜನ ದೂರಕ್ಕೆ ಸಾಗರಮಧ್ಯದಲ್ಲಿ ಎಸೆಯಲ್ಪಟ್ಟ.

ವಿಚೇತನಂ ವಿಘೂರ್ಣಂತಂ ಶೀತೇಷುಬಲತಾಡಿತಮ್ ।
ನಿರಸ್ತಂ ದೃಶ್ಯ ಮಾರೀಚಂ ರಾಮೋ ಲಕ್ಷ್ಮಣಮಬ್ರವೀತ್ ॥ ೧೯ ॥

'ಶೀತೇಷು' ನಾಮಕವಾದ ಆ ಮಾನವಾಸ್ತ್ರದಿಂದ ಬಲವಾಗಿ ಹೊಡೆಯಲ್ಪಟ್ಟು ಎಸೆಯಲ್ಪಟ್ಟ ಮಾರೀಚನು ಜೋರಾಗಿ ಅಬ್ಬರಿಸಿ ನಿಶ್ಚೇತನನಾಗಿ ಬಿದ್ದ. ಅದನ್ನು ನೋಡಿ ರಾಮ ಲಕ್ಷ್ಮಣನಿಗೆ ನುಡಿದ.

ಪಶ್ಯ ಲಕ್ಷ್ಮಣ ಶೀತೇಷುಂ ಮಾನವಂ ಮನುಸಂಹಿತಮ್ ।
ಮೋಹಯಿತ್ವಾ ನಯತ್ಯೇನಂ ನ ಚ ಪ್ರಾಣೈರ್ವಿಯುಜ್ಯತೇ ॥೨೦॥

'ನೋಡು ಲಕ್ಷ್ಮಣ, ಮನುಪ್ರಯುಕ್ತವಾದ ಶೀತೇಷು ಎಂಬ ಈ ಮಾನವಾಸ್ತ್ರವನ್ನು, ಅದು ಶತ್ರುವನ್ನು ನಿಶ್ಚೇತನಗೊಳಿಸಿ ಎಸೆದುಬಿಡುತ್ತದೆ, ಅವನ ಪ್ರಾಣಹರಣ ಮಾಡುವುದಿಲ್ಲ! ಮುಂದೆ ಮಾಯಾಮೃಗವಾಗಿ ಈತ ಬರಲಿ! ಎಂದು.

ಇಮಾನಪಿ ವಧಿಷ್ಯಾಮಿ ನಿರ್ಘೃಣಾನ್ ದುಷ್ಟಚಾರಿಣಃ ।
ರಾಕ್ಷಸಾನ್ಪಾಪಕರ್ಮಸ್ಥಾನ್ಯಜ್ಞಘ್ನಾನ್ರುಧಿರಾಶನಾನ್ ॥ ೨೧ ॥

ಇನ್ನು ಕ್ರೂರ ದುಷ್ಕರ್ಮಿಗಳಾದ ರಕ್ತಪಿಪಾಸುಗಳಾದ ಪಾಪಕರ್ಮ ನಿರತರಾದ ಯಜ್ಞನಾಶಕರಾದ ಈ ರಾಕ್ಷಸರನ್ನು ನಾಶ ಪಡಿಸುತ್ತೇನೆ.

ಇತ್ಯುಕ್ತ್ವಾ ಲಕ್ಷ್ಮಣಂ ಚಾಶು ಲಾಘವಂ ದರ್ಶಯನ್ನಿವ ।
ಸಂಗೃಹ್ಯ ಸುಮಹಚ್ಚಾಸ್ತ್ರಮಾಗ್ನೇಯಂ ರಘುನಂದನಃ ।
ಸುಬಾಹೂರಸಿ ಚಿಕ್ಷೇಪ ಸ ವಿದ್ಧಃ ಪ್ರಾಪತದ್ಭುವಿ ॥ ೨೨ ॥

ಹೀಗೆ ಹೇಳಿ ಲಕ್ಷ್ಮಣನಿಗೆ ತನ್ನ ಹಸ್ತಲಾಘವವನ್ನು ತೋರುತ್ತ ರಾಮನು ಆಗ್ನೇಯ ಮಹಾ ಅಸ್ತ್ರವನ್ನು ಎತ್ತಿಕೊಂಡು ಸುಬಾಹುವಿನ ಎದೆ ಮೇಲೆ ಎಸೆದ. ಆತ ಅದರಿಂದ ಹೊಡೆಸಿಕೊಂಡು ಸ್ಥಳದಲ್ಲಿಯೇ ಸತ್ತುಬಿದ್ದ.

ಶೇಷಾನ್ವಾಯವ್ಯಮಾದಾಯ ನಿಜಘಾನ ಮಹಾಯಶಾಃ ।
ರಾಘವಃ ಪರಮೋದಾರೋ ಮುನೀನಾಂ ಮುದಮಾವಹನ್ ॥ ೨೩ ॥

ಮಹಾಯಶಸ್ವಿ ಪರಮ ಉದಾರಿ ರಾಮ ಮುನಿಗಳಿಗೆ ಮುದ ಉಂಟು-ಮಾಡುತ್ತ ಇನ್ನುಳಿದ ರಾಕ್ಷಸರ ಮೇಲೆ ವಾಯವ್ಯಾಸ್ತ್ರವನ್ನೆತ್ತಿಕೊಂಡು ಎಸೆದು ಕೊಂದ.

ಸ ಹತ್ವಾ ರಾಕ್ಷಸಾನ್ಸರ್ವಾನ್ಯಜ್ಞಘ್ನಾನ್ರಘುನಂದನಃ ।
ಋಷಿಭಿಃ ಪೂಜಿತಸ್ತತ್ರ ಯಥೇಂದ್ರೋ ವಿಜಯೀ ಪುರಾ ॥ ೨೪ ॥

ರಾಮನು ಯಜ್ಞನಾಶಕರಾದ ಸರ್ವರಾಕ್ಷಸರನ್ನೂ ಕೊಂದು, ಋಷಿಗಳಿಂದ ಸತ್ಕೃತನಾದ, ಹಿಂದೆ ಜಯಶಾಲಿಯಾದ ಇಂದ್ರನು ಸತ್ಕೃತನಾದಂತೆ.

ಅಥ ಯಜ್ಞೇ ಸಮಾಪ್ತೇ ತು ವಿಶ್ವಾಮಿತ್ರೋ ಮಹಾಮುನಿಃ ।
ನಿರೀತಿಕಾ ದಿಶೋ ದೃಷ್ಟ್ವಾ ಕಾಕುತ್ಸ್ಥಮಿದಮಬ್ರವೀತ್ ॥ ೨೫ ॥

ಯಜ್ಞ ನಿರ್ವಿಘ್ನವಾಗಿ ಸಮಾಪ್ತಿ ಹೊಂದಿದಾಗ ವಿಶ್ವಾಮಿತ್ರ ಮಹಾಮುನಿ ದಿಕ್ಕುಗಳೆಲ್ಲವೂ ನಿರ್ಬಾಧವಾದುದನ್ನು ಕಂಡು ರಾಮನಿಗೆ ಹೇಳಿದನು.

ಕೃತಾಸ್ಮೋಽಸ್ಮಿ ಮಹಾಬಾಹೋ ಕೃತಂ ಗುರುವಚಸ್ತ್ವಯಾ ।
ಸಿದ್ಧಾಶ್ರಮಮಿದಂ ಸತ್ಯಂ ಕೃತಂ ರಾಮ ಮಹಾಯಶಃ ॥

ಸ ಹಿ ರಾಮಂ ಪ್ರಶಸ್ಯೈವಂ ತಾಭ್ಯಾಂ ಸಂಧ್ಯಾಮುಪಾಗಮತ್ ॥೨೬॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ತ್ರಿಂಶಃ ಸರ್ಗಃ ॥ ೩೦ ॥

ಮಹಾಯಶಸ್ವಿಯಾದ ಮಹಾಬಾಹು ರಾಮನೆ, ನಾನು ಕೃತಾರ್ಥನಾದೆ. ನೀನು ನಿನ್ನ ಪಿತನ ಮಾತನ್ನು ನಡೆಸಿಕೊಟ್ಟಿರುವೆ. ಸಿದ್ಧಾಶ್ರಮವನ್ನು ನಿಜವಾಗಿ ಸಿದ್ಧಾಶ್ರಮ-ವಾಗುವಂತೆ ಮಾಡಿರುವೆ. ಹೀಗೆ ರಾಮನನ್ನು ಹೊಗಳಿ, ರಾಮಲಕ್ಷ್ಮಣರೊಂದಿಗೆ ತಾನು ಸಂಧ್ಯೋಪಾಸನೆಯನ್ನು ನಡೆಸಿದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಮೂವತ್ತನೆ ಸರ್ಗ ಮುಗಿಯಿತು.

ಏಕತ್ರಿಂಶಃ ಸರ್ಗಃ

ಅಥ ತಾಂ ರಜನೀಂ ತತ್ರ ಕೃತಾರ್ಥೌ ರಾಮಲಕ್ಷ್ಮಣೌ ।
ಊಷತುರ್ಮುದಿತೌ ವೀರೌ ಪ್ರಹೃಷ್ಟೇನಾಂತರಾತ್ಮನಾ ॥ ೧ ॥

ವೀರರಾದ ರಾಮಲಕ್ಷ್ಮಣರು ಕೃತಾರ್ಥರಾಗಿ ಸಂತುಷ್ಟರಾಗಿ ಪ್ರಹೃಷ್ಟ ಮನಸಿನಿಂದ ಆ ರಾತ್ರಿಯಲ್ಲಿ ಸಿದ್ಧಾಶ್ರಮದಲ್ಲಿ ವಾಸ ಮಾಡಿದರು.

ಪ್ರಭಾತಾಯಾಂ ತು ಶರ್ವರ್ಯಾಂ ಕೃತಪೌರ್ವಾಹ್ಣಿಕಕ್ರಿಯೌ ।
ವಿಶ್ವಾಮಿತ್ರಮೃಷೀಂಶ್ಚಾನ್ಯಾನ್ಸಹಿತಾವಭಿಜಗ್ಮತುಃ ॥ ೨ ॥

ರಾತ್ರಿ 'ಬೆಳಗಾದಾಗ ರಾಮಲಕ್ಷ್ಮಣರು ಪಾತರಾಹ್ನಿಕವನ್ನು ಮುಗಿಸಿ ವಿಶ್ವಾಮಿತ್ರನನ್ನೂ ಬೇರೆ ಋಷಿಗಳನ್ನೂ ನಮಸ್ಕರಿಸಲು ಹೋದರು.

ಅಭಿವಾದ್ಯ ಮುನಿಶ್ರೇಷ್ಠಂ ಜ್ವಲಂತಮಿವ ಪಾವಕಮ್ ।
ಊಚತುರ್ಮಧುರೋದಾರಂ ವಾಕ್ಯಂ ಮಧುರಭಾಷಿಣೌ ॥ ೩ ॥

ಅಗ್ನಿಯಂತೆ ಬೆಳಗುವ ಮುನಿಶ್ರೇಷ್ಠನನ್ನು ಅಭಿವಾದನ ಮಾಡಿ ಮಧುರ-ಭಾಷಿಗಳಾದ ರಾಮಲಕ್ಷ್ಮಣರು ಮಧುರವಾದ ಉತ್ತಮವಾದ ಮಾತನ್ನಾಡಿದರು.

ಇಮೌ ಸ್ಮ ಮುನಿಶಾರ್ದೂಲ ಕಿಂಕರೌ ಸಮುಪಸ್ಥಿತೌ ।
ಆಜ್ಞಾಪಯ ಯಥೇಷ್ಟಂ ವೈ ಶಾಸನಂ ಕರವಾವ ಕಿಮ್ ॥ ೪ ॥

ಮುನಿಶ್ರೇಷ್ಠನೆ, ನಾವು ನಿಮ್ಮ ಸೇವಕರು. ಬಳಿಗೆ ಬಂದಿದ್ದೇವೆ. ಯಥೇಚ್ಛವಾಗಿ ನಮಗೆ ಆಜ್ಞೆ ಮಾಡಿರಿ. ನಾವೇನು ಮಾಡಬೇಕು?

ಏವಮುಕ್ತಾಸ್ತತಸ್ತಾಭ್ಯಾಂ ಸರ್ವ ಏವ ಮಹರ್ಷಯಃ ।
ವಿಶ್ವಾಮಿತ್ರಂ ಪುರಸ್ಕೃತ್ಯ ರಾಮಂ ವಚನಮಬ್ರುವನ್ ॥ ೫ ॥

ಅವರು ಹೀಗೆ ಹೇಳಿದಾಗ ಎಲ್ಲ ಮಹರ್ಷಿಗಳೂ ವಿಶ್ವಾಮಿತ್ರರನ್ನು ಮುಂದೆ ಮಾಡಿಕೊಂಡು ರಾಮನಿಗೆ ಹೇಳಿದರು.

ಮೈಥಿಲಸ್ಯ ನರಶ್ರೇಷ್ಠ ಜನಕಸ್ಯ ಭವಿಷ್ಯತಿ ।
ಯಜ್ಞಃ ಪರಮಧರ್ಮಿಷ್ಠಸ್ತಸ್ಯ ಯಾಸ್ಯಾಮಹೇ ವಯಮ್ ॥ ೬ ॥

ನರಶ್ರೇಷ್ಠನೆ ಮಿಥಿಲೆಯ ಅರಸನಾದ ಜನಕನ ಪರಮಪುಣ್ಯವಾದ ಒಂದು ಯಜ್ಞ ನಡೆಯಲಿದೆ. ನಾವು ಅಲ್ಲಿಗೆ ಹೋಗುವೆವು.

ತ್ವಂ ಚೈವ ನರಶಾರ್ದೂಲ ಸಹಾಸ್ಮಾಭಿರ್ಗಮಿಷ್ಯಸಿ ।
ಅದ್ಭುತಂ ಧನುರತ್ನಂ ಚ ತತ್ರ ತದ್ದ್ರಷ್ಟುಮರ್ಹಸಿ ॥ ೭ ॥

ನರಶ್ರೇಷ್ಠನೆ, ನೀನೂ ನಮ್ಮೊಂದಿಗೆ ಬಂದುಬಿಡು. ಅಲ್ಲಿ ಅದ್ಭುತವಾದ ಶ್ರೇಷ್ಠಧನುಸ್ಸು ಇದೆ. ಅದನ್ನು ನೋಡು.

ತದ್ಧಿ ಪೂರ್ವಂ ನರಶ್ರೇಷ್ಠ ದತ್ತಂ ಸದಸಿ ದೈವತೈಃ ।
ಅಪ್ರಮೇಯಬಲಂ ಘೋರಂ ಮಖೇ ಪರಮಭಾಸ್ವರಮ್ ॥ ೮ ॥

ನರಶ್ರೇಷ್ಠನೆ, ಅದು ಹಿಂದೆ ಯಜ್ಞಶಾಲೆಯಲ್ಲಿ ದೇವತೆಗಳು ನೀಡಿದ್ದ ಶಿವಧನುಸ್ಸು, ಘೋರ, ಅಪರಿಮಿತ ಶಕ್ತಿ ಉಳ್ಳದ್ದು ಮಹಾ ಕಾಂತಿಯಿಂದ ಹೊಳೆಯುವುದು.

ನಾಸ್ಯ ದೇವಾ ನ ಗಂಧರ್ವಾ ನಾಸುರಾ ನ ಚ ರಾಕ್ಷಸಾಃ ।
ಕರ್ತುಮಾರೋಪಣಂ ಶಕ್ತಾ ನ ಕಥಂಚನ ಮಾನುಷಾಃ ॥ ೯ ॥

ದೇವ ಗಂಧರ್ವ ಅಸುರ ರಾಕ್ಷಸರು ಯಾರೂ ಅದಕ್ಕೆ ಹೆದೆ ಏರಿಸಲು ಶಕ್ತರಲ್ಲ. ಮನುಷ್ಯರು ಸರ್ವಥಾ ಶಕ್ತರಲ್ಲ.

ಧನುಷಸ್ತಸ್ಯ ವೀರ್ಯಂ ತು ಜಿಜ್ಞಾಸಂತೋ ಮಹೀಕ್ಷಿತಃ ।
ನ ಶೇಕುರಾರೋಪಯಿತುಂ ರಾಜಪುತ್ರಾ ಮಹಾಬಲಾಃ ॥ ೧೦ ॥

ಆ ಧನುಸ್ಸಿನ ಶಕ್ತಿಯನ್ನು ಪರೀಕ್ಷಿಸಲೆಂದು ಹೆದೆ ಯೇರಿಸಲು ಮಹಾಬಲರಾದ ರಾಜರು ಯಾರೂ ಶಕ್ತರಾಗಲಿಲ್ಲ.

ತದ್ಧನುರ್ನರಶಾರ್ದೂಲ ಮೈಥಿಲಸ್ಯ ಮಹಾತ್ಮನಃ ।
ತತ್ರ ದ್ರಕ್ಷ್ಯಸಿ ಕಾಕುತ್ಸ್ಥ ಯಜ್ಞಂ ಚಾದ್ಭುತದರ್ಶನಮ್ ॥ ೧೧ ॥

ಆ ಧನುಸ್ಸು, ನರಶ್ರೇಷ್ಠನೆ, ಮಹಾತ್ಮನಾದ ಜನಕರಾಜನದು. ರಾಮ, ಅದ್ಭುತವಾಗಿ ಕಾಣುವ ಆ ಧನುಸ್ಸನ್ನೂ ನೋಡು ಯಜ್ಞವನ್ನೂ ನೋಡು.

ತದ್ಧಿ ಯಜ್ಞಫಲಂ ತೇನ ಮೈಥಿಲೇನೋತ್ತಮಂ ಧನುಃ ।
ಯಾಚಿತಂ ನರಶಾರ್ದೂಲ ಸುನಾಭಂ ಸರ್ವದೈವತೈಃ ॥ ೧೨ ॥

ಆ ಧನುಸ್ಸು ಜನಕನು ಯಜ್ಞಫಲವಾಗಿ ಸರ್ವದೇವತೆಗಳಿಂದ ಬೇಡಿ ಪಡೆದುದು, ನರಶ್ರೇಷ್ಠನೆ, ಉತ್ತಮ ನಡುವುಳ್ಳ ಉತ್ತಮ ಧನುಸ್ಸು ಅದು.

ಆಯಾಗಭೂತಂ ನೃಪತೇಸ್ತಸ್ಯ ವೇಶ್ಮನಿ ರಾಘವ ।
ಅರ್ಚಿತಂ ವಿವಿಧೈರ್ಗಂಧೈರ್ಧೂಪೈಶ್ಚಾಗರುಗಂಧಿಭಿಃ ॥ ೧೩ ॥

ಧನುರ್ಯಾಗದಲ್ಲಿ ಮುಖ್ಯವಾಗಿ ಪೂಜ್ಯವಾದ ಆ ಧನುಸ್ಸು ಜನಕನ ಅರಮನೆಯಲ್ಲಿ ನಾನಾ ವಿಧ ಗಂಧಗಳಿಂದಲೂ ಅಗರು ಪರಿಮಳದ ಧೂಪಗಳಿಂದಲೂ ಪೂಜೆಯನ್ನು ಕೈಗೊಳ್ಳುತ್ತದೆ.

ಏವಮುಕ್ತ್ವಾ ಮುನಿವರಃ ಪ್ರಸ್ಥಾನಮಕರೋತ್ತದಾ ।
ಸರ್ಷಿಸಂಘಃ ಸಕಾಕುತ್ಸ್ಥ ಆಮಂತ್ರ್ಯ ವನದೇವತಾಃ ॥ ೧೪ ॥

ಮುನಿಶ್ರೇಷ್ಠನಾದ ವಿಶ್ವಾಮಿತ್ರರು ಇಷ್ಟು ಹೇಳಿ, ಮುನಿಗಳಿಂದಲೂ ರಾಮ-ಲಕ್ಷ್ಮಣರಿಂದಲೂ ಒಡಗೂಡಿ, ವನದೇವತೆಗಳಿಗೆ 'ಹೋಗಿಬರುವೆ'ವೆಂದು ಹೇಳಿ ಮಿಥಿಲಾನಗರಿಗೆ ಹೊರಟರು.

ಸ್ವಸ್ತಿ ವೋಸ್ತು ಗಮಿಷ್ಯಾಮಿ ಸಿದ್ಧಃ ಸಿದ್ಧಾಶ್ರಮಾದಹಮ್ ।
ಉತ್ತರೇ ಜಾಹ್ನವೀತೀರೇ ಹಿಮವಂತಂ ಶಿಲೋಚ್ಚಯಮ್ ॥ ೧೫ ॥

ನಿಮಗೆ ಮಂಗಳವಾಗಲಿ, ಸಿದ್ಧನಾದ ನಾನು ಸಿದ್ಧಾಶ್ರಮದಿಂದ ಗಂಗೆಯ ಉತ್ತರ ತೀರದಲ್ಲಿರುವ ಹಿಮಾಲಯ ಪರ್ವತದ ಕಡೆಗೆ ಹೋಗುತ್ತಿದ್ದೇವೆ.'

ಇತ್ಯುಕ್ತ್ವಾ ಮುನಿಶಾರ್ದೂಲಃ ಕೌಶಿಕಃ ಸ ತಪೋಧನಃ ।
ಪ್ರದಕ್ಷಿಣಂ ತತಃ ಕೃತ್ವಾ ಸಿದ್ಧಾಶ್ರಮಮನುತ್ತಮಮ್ ॥
ಉತ್ತರಾಂ ದಿಶಮುದ್ದಿಶ್ಯ ಪ್ರಸ್ಥಾತುಮುಪಚಕ್ರಮೇ ॥ ೧೬ ॥

ಹೀಗೆ ಹೇಳಿ ತಪೋಧನರಾದ ಮುನಿಶ್ರೇಷ್ಠ ವಿಶ್ವಾಮಿತ್ರರು ಸಿದ್ಧಾಶ್ರಮಕ್ಕೆ ಪ್ರದಕ್ಷಿಣ ಮಾಡಿ ಉತ್ತರದಿಕ್ಕಿನ ಕಡೆಗೆ ಪ್ರಯಾಣ ಮಾಡಲು ಆರಂಭಿಸಿದರು.

ತಂ ಪ್ರಯಾಂತಂ ಮುನಿವರಮನ್ವಯಾದನುಸಾರಿಣಾಮ್ ।
ಶಕಟೀಶತಮಾತ್ರಂ ಚ ಪ್ರಾಯೇಣ ಬ್ರಹ್ಮವಾದಿನಾಮ್ ॥ ೧೭ ॥

ಮುನಿಶ್ರೇಷ್ಠರಾದ ವಿಶ್ವಾಮಿತ್ರರು ಪ್ರಯಾಣ ಮಾಡುವಾಗ ಅವರನ್ನು

ಅನುಸರಿಸಿರುವ ಬ್ರಹ್ಮವಾದಿಗಳಾದ ಮುನಿಗಳ ನೂರು ಬಂಡಿಗಳು ಹಿಂಬಾಲಿಸಿ ಬಂದುವು.

ಮೃಗಪಕ್ಷಿಗಣಾಶ್ಚೈವ ಸಿದ್ಧಾಶ್ರಮನಿವಾಸಿನಃ ।
ಅನುಜಗ್ಮುರ್ಮಹಾತ್ಮಾನಂ ವಿಶ್ವಾಮಿತ್ರಂ ಮಹಾಮುನಿಮ್ ॥
ನಿವರ್ತಯಾಮಾಸ ತತಃ ಪಕ್ಷಿಸಂಘಾನ್ಮೃಗಾನಪಿ ॥ ೧೮ ॥

ಸಿದ್ಧಾಶ್ರಮದಿಂದ ಮಹಾಮುನಿ ಮಹಾತ್ಮ ವಿಶ್ವಾಮಿತ್ರರು ಹೊರಟಾಗ ಆಶ್ರಮದ ಮೃಗಪಕ್ಷಿಗಳೆಲ್ಲವೂ ಹಿಂಬಾಲಿಸಿ ಬಂದುವು. ಆದರೆ ಮುನಿ ಅವೆಲ್ಲ-ವನ್ನೂ ಹಿಂದೆ ಕಳಿಸಿದರು.

ತೇ ಗತ್ವಾ ದೂರಮಧ್ವಾನಂ ಲಂಬಮಾನೇ ದಿವಾಕರೇ ।
ವಾಸಂ ಚಕ್ರುರ್ಮುನಿಗಣಾಃ ಶೋಣಾಕೂಲೇ ಸಮಾಹಿತಾಃ ॥ ೧೯ ॥

ಅವರು ದೂರದ ದಾರಿಯನ್ನು ಕ್ರಮಿಸಿ ಸೂರ್ಯಾಸ್ತವಾದಾಗ ಶೋಣಾ-ನದೀತೀರದಲ್ಲಿ ಸ್ಥಿರಚಿತ್ತರಾಗಿ ಮುನಿಗಳು ವಾಸ ಮಾಡಿದರು. 'ಶೋಣ' ಎಂಬುದು ಗಂಡುನದಿ. ಆದರೆ ಇಲ್ಲಿ ಗಿರಿವ್ರಜ ಸಮೀಪದ 'ಶೋಣಾ' ಎಂಬ ಹೆಣ್ಣುನದಿ ಉಕ್ತವಾಗಿದೆ.

ತೇಽಸ್ತಂ ಗತೇ ದಿನಕರೇ ಸ್ನಾತ್ವಾ ಹುತಹುತಾಶನಾಃ ।
ವಿಶ್ವಾಮಿತ್ರಂ ಪುರಸ್ಕೃತ್ಯ ನಿಷೇದುರಮಿತೌಜಸಃ ॥ ೨೦ ॥

ಸೂರ್ಯಾಸ್ತವಾದಾಗ ಅಮಿತಕಾಂತಿ ಉಳ್ಳ ಮುನಿಗಳು ಸ್ನಾನ ಮಾಡಿ ಅಗ್ನಿ-ಹೋತ್ರ ಹೋಮ ಮಾಡಿ ವಿಶ್ವಾಮಿತ್ರರನ್ನು ಮುಂದೆ ಮಾಡಿಕೊಂಡು ಕುಳಿತರು.

ರಾಮೋ ಹಿ ಸಹಸೌಮಿತ್ರಿರ್ಮುನೀಂಸ್ತಾನಭಿಪೂಜ್ಯ ಚ ।
ಅಗ್ರತೋ ನಿಷಸಾದಾಥ ವಿಶ್ವಾಮಿತ್ರಸ್ಯ ಧೀಮತಃ ॥ ೨೧ ॥

ರಾಮನು ಲಕ್ಷ್ಮಣ ಸಮೇತನಾಗಿ ಆ ಮುನಿಗಳನ್ನು ಸತ್ಕರಿಸಿ ಧೀಮಂತರಾದ ವಿಶ್ವಾಮಿತ್ರರ ಸಮ್ಮುಖದಲ್ಲಿ ಕುಳಿತನು.

ಅಥ ರಾಮೋ ಮಹಾತೇಜಾ ವಿಶ್ವಾಮಿತ್ರಂ ಮಹಾಮುನಿಮ್ ।
ಪಪ್ರಚ್ಛ ನರಶಾರ್ದೂಲಃ ಕೌತೂಹಲಸಮನ್ವಿತಃ ॥ ೨೨ ॥

ಮಹಾತೇಜನಾದ ನರಶ್ರೇಷ್ಠರಾಮನು ಮಹಾಮುನಿ ವಿಶ್ವಾಮಿತ್ರರನ್ನು ಕುತೂಹಲಯುಕ್ತನಾಗಿ ಕೇಳಿದ.

ಭಗವನ್ಕೋ ನ್ವಯಂ ದೇಶಃ ಸಮೃದ್ಧವನಶೋಭಿತಃ ।
ಶ್ರೋತುಮಿಚ್ಛಾಮಿ ಭದ್ರಂ ತೇ ವಕ್ತುಮರ್ಹಸಿ ತತ್ತ್ವತಃ ॥ ೨೩ ॥

ಪೂಜ್ಯರೆ, ಇದು ಯಾವ ಪ್ರದೇಶ? ಅರಣ್ಯಸಮೃದ್ಧಿಯಿಂದ ಶೋಭಿಸುತ್ತಿದೆ. ಅದನ್ನು ಕೇಳಿ ತಿಳಿಯಲು ಬಯಸುತ್ತೇನೆ. ನಿಮಗೆ ಶುಭವಾಗಲಿ, ಯಥಾರ್ಥವಾಗಿ ಹೇಳಿರಿ.

ಚೋದಿತೋ ರಾಮವಾಕ್ಯೇನ ಕಥಯಾಮಾಸ ಸುವ್ರತಃ ।
ತಸ್ಯ ದೇಶಸ್ಯ ನಿಖಿಲಮೃಷಿಮಧ್ಯೇ ಮಹಾತಪಾಃ ॥ ೨೪ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಏಕತ್ರಿಂಶಃ ಸರ್ಗಃ ॥ ೩೧ ॥

ರಾಮನ ಮಾತಿನಿಂದ ಪ್ರೇರಿತರಾದ ಸುವ್ರತನಿಷ್ಠ ಮಹಾತಪರಾದ ವಿಶ್ವಾಮಿತ್ರರು ಎಲ್ಲ ಋಷಿಗಳ ಮಧ್ಯದಲ್ಲಿ ಆ ಪ್ರದೇಶದ ಬಗ್ಗೆ ಹೇಳಲು ತೊಡಗಿದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಮೂವತ್ತೊಂದನೆ ಸರ್ಗ ಮುಗಿಯಿತು.

ದ್ವಾತ್ರಿಂಶಃ ಸರ್ಗಃ

ಬ್ರಹ್ಮಯೋನಿರ್ಮಹಾನಾಸೀತ್ಕುಶೋ ನಾಮ ಮಹಾತಪಾಃ ।
ಅಕ್ಲಿಷ್ಟವ್ರತಧರ್ಮಜ್ಞಃ ಸಜ್ಜನಪ್ರತಿಪೂಜಕಃ ॥ ೧ ॥

ಬ್ರಹ್ಮದೇವನ ಅಯೋನಿಜ ಪುತ್ರನಾದ ಕುಶನು ಮಹಾತ್ಮ ಮಹಾ ತಪಸ್ವಿ, ಕ್ಲೇಶವಿಲ್ಲದೇ ವ್ರತಧರ್ಮಾನುಷ್ಠಾನ ಮಾಡಬಲ್ಲವನು ಸಜ್ಜನರಿಗೆ ಸತ್ಕಾರ ಮಾಡುವವನೂ ಆಗಿದ್ದ.

ಸ ಮಹಾತ್ಮಾ ಕುಲೀನಾಯಾಂ ಯುಕ್ತಾಯಾಂ ಸುಗುಣೋಲ್ಬಣಾನ್ ।
ವೈದಭ್ರ್ಯಾಂ ಜನಯಾಮಾಸ ಸದೃಶಾಂಶ್ಚತುರಃ ಸುತಾನ್ ॥
ಕುಶಾಂಬಂ ಕುಶನಾಭಂ ಚ ಆಧೂರ್ತರಜಸಂ ವಸುಮ್ ॥ ೨ ॥

ಆ ಮಹಾತ್ಮನು ಕುಲೀನಳೂ ಅನುರೂಪಳೂ ಆದ ವೈದಭ್ರೀ ಎಂಬ ಪತ್ನಿಯಲ್ಲಿ ಕುಶಾಂಬ ಕುಶನಾಭ ಆಧೂರ್ತರಜಸ ಮತ್ತು ವಸು ಎಂಬ ನಾಲ್ಕು ಮಂದಿ ಪುತ್ರರನ್ನು ಪಡೆದ. ಅವರು ತಂದೆಗೆ ಅನುರೂಪರೂ ಸದ್ಗುಣಶಾಲಿಗಳೂ ಆಗಿದ್ದರು.

ದೀಪ್ತಿಯುಕ್ತಾನ್ಮಹೋತ್ಸಾಹಾನ್ ಕ್ಷತ್ರಧರ್ಮಚಿಕೀರ್ಷಯಾ ।
ತಾನುವಾಚ ಕುಶಃ ಪುತ್ರಾನ್ ಧರ್ಮಿಷ್ಠಾನ್ಸತ್ಯವಾದಿನಃ ॥ ೩ ॥

ಕ್ರಿಯತಾಂ ಪಾಲನಂ ಪುತ್ರಾ ಧರ್ಮಂ ಪ್ರಾಪ್ಸ್ಯಥ ಪುಷ್ಕಲಮ್ ।
ಕುಶಸ್ಯ ವಚನಂ ಶ್ರುತ್ವಾ ಚತ್ವಾರೋ ಲೋಕಸಮ್ಮತಾಃ ।
ನಿವೇಶಂ ಚಕ್ರಿರೇ ಸರ್ವೇ ಪುರಾಣಾಂ ನೃವರಾಸ್ತದಾ ॥ ೪ ॥

ಕಾಂತಿಯುಕ್ತರೂ ಮಹಾ ಉತ್ಸಾಹಶಾಲಿಗಳೂ ಧರ್ಮಿಷ್ಠರೂ ಆದ ಸತ್ಯವಾದಿ-ಗಳೂ ಆದ ಆ ಪುತ್ರರಿಗೆ ಕ್ಷಾತ್ರಧರ್ಮಪಾಲನೆಯ ಬಯಕೆಯಿಂದ ಕುಶನು ಹೇಳಿದ, 'ಮಕ್ಕಳೆ, ನೀವು ಪ್ರಜಾಪಾಲನವನ್ನು ಮಾಡಿರಿ. ಪುಷ್ಕಳವಾದ ಪುಣ್ಯ ಪಡೆಯಿರಿ' ಎಂದು. ಕುಶನ ಮಾತನ್ನು ಕೇಳಿ ಲೋಕಪ್ರಸಿದ್ಧ ಪುರುಷೋತ್ತಮರಾದ ನಾಲ್ವರು ಪುತ್ರರು ಎಲ್ಲರೂ ನಾಲ್ಕು ನಗರ ಪ್ರದೇಶಗಳ ನಿರ್ಮಾಣ ಮಾಡಿದರು.

ಕುಶಾಂಬಸ್ತು ಮಹಾತೇಜಾಃ ಕೌಶಾಂಬೀಮಕರೋತ್ಪುರೀಮ್ ।
ಕುಶನಾಭಸ್ತು ಧರ್ಮಾತ್ಮಾ ಪುರಂ ಚಕ್ರೇ ಮಹೋದಯಮ್ ॥ ೫ ॥

ಮಹಾತೇಜನಾದ ಕುಶಾಂಬನು 'ಕೌಶಾಂಬೀ' ನಗರಿಯನ್ನು ನಿರ್ಮಾಣ ಮಾಡಿದನು. ಕುಶನಾಭನು ಧರ್ಮಾತ್ಮ. ಅವನು 'ಮಹೋದಯ' ಎಂಬ ನಗರವನ್ನು ನಿರ್ಮಾಣ ಮಾಡಿದನು.

ಆಧೂರ್ತರಜಸೋ ರಾಮ ಧರ್ಮಾರಣ್ಯಂ ಮಹೀಪತಿಃ ।
ಚಕ್ರೇ ಪುರವರಂ ರಾಜಾ ವಸುಶ್ಚಕ್ರೇ ಗಿರಿವ್ರಜಮ್ ॥ ೬ ॥

ಆಧೂರ್ತರಜಸನೆಂಬ ರಾಜನು 'ಧರ್ಮಾರಣ್ಯ' ನಗರವನ್ನೂ, ರಾಜಾ ವಸು 'ಗಿರಿವ್ರಜ' ಎಂಬ ನಗರವನ್ನೂ ನಿರ್ಮಿಸಿದನು.

ಏಷಾ ವಸುಮತೀ ರಾಮ ವಸೋಸ್ತಸ್ಯ ಮಹಾತ್ಮನಃ ।
ಏತೇ ಶೈಲವರಾಃ ಪಂಚ ಪ್ರಕಾಶಂತೇ ಸಮಂತತಃ ॥ ೭ ॥

ಶೋಣಾ ನದೀತೀರದ ಈ ಭೂಮಿಯು ಮಹಾತ್ಮ ವಸುರಾಜನದು. 'ಗಿರಿವ್ರಜ' ಎಂಬ ಹೆಸರಿಗೆ ಕಾರಣವಾದ ಈ ಐದು ದೊಡ್ಡ ಬೆಟ್ಟಗಳು ಇಲ್ಲಿ ಸುತ್ತಲೂ ಕಾಣುತ್ತವೆ.

ಸುಮಾಗಧೀ ನದೀ ರಮ್ಯಾ ಮಗಧಾನ್ವಿಶ್ರುತಾSSಯಯೌ ।
ಪಂಚಾನಾಂ ಶೈಲಮುಖ್ಯಾನಾಂ ಮಧ್ಯೇ ಮಾಲೇವ ಶೋಭತೇ ॥ ೮ ॥

ಶೋಣಾ ನದಿಯು ಮಗಧ ದೇಶದಿಂದ ಬಂದಿದ್ದರಿಂದ ಮಾಗಧೀ ಎನಿಸಿತು. ರಮ್ಯವಾದ ಪ್ರಸಿದ್ಧವಾದ ಈ ನದಿಯು ಐದು ಬೆಟ್ಟಗಳ ಮಧ್ಯದಲ್ಲಿ ಮಾಲೆಯಂತೆ ಹರಿಯುತ್ತ ಮಗಧ ದೇಶಕ್ಕೆ ಹರಿದುಬಂದಿತು.

ಸೈಷಾ ಹಿ ಮಾಗಧೀ ರಾಮ ವಸೋಸ್ತಸ್ಯ ಮಹಾತ್ಮನಃ ।
ಪೂರ್ವಾಭಿಚರಿತಾ ರಾಮ ಸುಕ್ಷೇತ್ರಾ ಸಸ್ಯಮಾಲಿನೀ ॥ ೯ ॥

ರಾಮ, ಈ ಮಾಗಧೀ ನದಿಯು ಪೂರ್ವದಿಂದ ಪಶ್ಚಿಮಕ್ಕೆ ಹರಿಯುತ್ತದೆ. ಎರಡೂ ಪಾರ್ಶ್ವಗಳಲ್ಲಿ ಒಳ್ಳೆಯ ಹೊಲಗಳಿಂದ ಕೂಡಿದ್ದು ಸಸ್ಯಭರಿತವಾಗಿದೆ. ಇದು ಮಹಾತ್ಮನಾದ ವಸುರಾಜನಿಗೇ ಸೇರಿದ್ದು.

ಕುಶನಾಭಸ್ತು ರಾಜರ್ಷಿಃ ಕನ್ಯಾಶತಮನುತ್ತಮಮ್ ।
ಜನಯಾಮಾಸ ಧರ್ಮಾತ್ಮಾ ಘೃತಾಚ್ಯಾಂ ರಘುನಂದನ ॥ ೧೦ ॥

ರಾಜರ್ಷಿ ಕುಶನಾಭನು ಧರ್ಮಾತ್ಮ. ರಾಮ, ಈತನು ಘೃತಾಚೀ ಎಂಬ ಅಪ್ಸರೆಯಲ್ಲಿ ನೂರು ಮಂದಿ ಉತ್ತಮ ಕನ್ಯೆಯರಿಗೆ ಜನ್ಮವಿತ್ತನು.

ತಾಸ್ತು ಯೌವನಶಾಲಿನ್ಯೋ ರೂಪವತ್ಯಃ ಸ್ವಲಂಕೃತಾಃ ।
ಉದ್ಯಾನಭೂಮಿಮಾಗಮ್ಯ ಪ್ರಾವೃಷೀವ ಶತಹ್ರದಾಃ ॥ ೧೧ ॥

ಗಾಯಂತ್ಯೋ ನೃತ್ಯಮಾನಾಶ್ಚ ವಾದಯಂತ್ಯಶ್ಚ ಸರ್ವಶಃ ।
ಆಮೋದಂ ಪರಮಂ ಜಗ್ಮುರ್ವರಾಭರಣಭೂಷಿತಾಃ ॥ ೧೨ ॥

ಆ ಕನ್ಯೆಯರು ಯೌವನವತಿಯರೂ ರೂಪವತಿಯರೂ ಆಗಿದ್ದು ಅಲಂಕೃತ-ರಾಗಿ ಉದ್ಯಾನ ಭೂಮಿಗೆ ಬಂದು ಎಲ್ಲೆಡೆ ಹಾಡುತ್ತ ಕುಣಿಯುತ್ತ ವಾದ್ಯ ನುಡಿಸುತ್ತ ಪರಮಾನಂದಭರಿತರಾದರು, ಉತ್ತಮಾಭರಣ ಭೂಷಿತರಾಗಿ ಮಳೆಗಾಲದ ಮಿಂಚುಗಳಂತೆ ಕಂಡುಬಂದರು.

ಅಥ ತಾಶ್ಚಾರುಸರ್ವಾಂಗ್ಯೋ ರೂಪೇಣಾಪ್ರತಿಮಾ ಭುವಿ ।
ಉದ್ಯಾನಭೂಮಿಮಾಗಮ್ಯ ತಾರಾ ಇವ ಘನಾಂತರೇ ॥ ೧೩ ॥

ಸರ್ವಾಂಗ ಸುಂದರಿಯರು ರೂಪದಿಂದ ಭೂಮಿಯಲ್ಲಿ ಅವರಿಗೆ ಸಾಟಿಯೆ ಇರಲಿಲ್ಲ. ಮೋಡಗಳ ನಡುವೆ ಕಾಣುವ ತಾರೆಗಳಂತೆ ಉದ್ಯಾನ ಭೂಮಿಯಲ್ಲಿ ಬಂದು ನರ್ತಿಸಿದರು.

ತಾಃ ಸರ್ವಗುಣಸಂಪನ್ನಾ ರೂಪಯೌವನಸಂಯುತಾಃ ।
ದೃಷ್ಟ್ವಾ ಸರ್ವಾತ್ಮಕೋ ವಾಯುರಿದಂ ವಚನಮಬ್ರವೀತ್ ॥ ೧೪ ॥

ಸರ್ವಗುಣ ಸಂಪನ್ನೆಯರೂ ರೂಪಯೌವನವತಿಯರೂ ಆದ ಆ ಕನ್ಯೆಯರನ್ನು ನೋಡಿ ಸರ್ವಾಂತರ್ಯಾಮಿ ವಾಯುದೇವನು ಅವರಿಗೆ ನುಡಿದನು.

ಅಹಂ ವಃ ಕಾಮಯೇ ಸರ್ವಾ ಭಾರ್ಯಾ ಮಮ ಭವಿಷ್ಯಥ ।
ಮಾನುಷತ್ವಮುಜ್ಝತಾಂ ಭಾವೋ ದೀರ್ಘಮಾಯುರವಾಪ್ಸ್ಯಥ ॥ ೧೫ ॥

ನಾನು ನಿಮ್ಮನ್ನು ಪ್ರೀತಿಸುವೆನು ನೀವು ಎಲ್ಲರೂ ನನ್ನ ಪತ್ನಿಯರಾಗಿರಿ. ಮನುಷ್ಯತ್ವವನ್ನು ತೊರೆದು ದೇವತ್ವವನ್ನು ಹೊಂದಿರಿ, ದೀರ್ಘಾಯುಷ್ಯವನ್ನು ಪಡೆಯಿರಿ.

ಚಲಂ ಹಿ ಯೌವನಂ ನಿತ್ಯಂ ಮಾನುಷೇಷು ವಿಶೇಷತಃ ।
ಅಕ್ಷಯ್ಯಂ ಯೌವನಂ ಪ್ರಾಪ್ತಾ ಅಮರ್ಯಶ್ಚ ಭವಿಷ್ಯಥ ॥ ೧೬ ॥

ಯೌವನವೆಂದಿಗೂ ಅಸ್ಥಿರ, ಮನುಷ್ಯರಲ್ಲಿ ಅದು ವಿಶೇಷವಾಗಿ ಅಸ್ಥಿರ. ಅಕ್ಷಯವಾದ ಯೌವನವನ್ನು ಪಡೆಯಿರಿ. ದೇವತೆಗಳಾಗಿರಿ.'

ತಸ್ಯ ತದ್ವಚನಂ ಶ್ರುತ್ವಾ ವಾಯೋರಕ್ಲಿಷ್ಟಕರ್ಮಣಃ ।
ಅಪಹಾಸ್ಯ ತತೋ ವಾಕ್ಯಂ ಕನ್ಯಾಶತಮಥಾಬ್ರವೀತ್ ॥ ೧೭ ॥

ಅನಾಯಾಸ ಎಲ್ಲ ಕರ್ಮ ಮಾಡುವ ವಾಯುದೇವನು ಪರೀಕ್ಷೆಗಾಗಿ ನುಡಿದ ಈ ಮಾತನ್ನು ಕೇಳಿ ಅಪಹಾಸ ಮಾಡುತ್ತ ನೂರು ಮುಗ್ಧ ಕನ್ಯೆಯರೂ ನುಡಿದರು.

ಅಂತಶ್ಚರಸಿ ಭೂತಾನಾಂ ಸರ್ವೇಷಾಂ ತ್ವಂ ಸುರೋತ್ತಮ ।
ಪ್ರಭಾವಜ್ಞಾಶ್ಚ ತೇ ಸರ್ವಾಃ ಕಿಮಸ್ಮಾನವಮನ್ಯಸೇ ॥ ೧೮ ॥

ದೇವೋತ್ತಮನೆ, ನೀನು ಎಲ್ಲರೊಳಗೂ ಅಂತರ್ಯಾಮಿಯಾಗಿರುವೆ. ನಿನ್ನ ಪ್ರಭಾವವನ್ನು ನಾವೆಲ್ಲರೂ ತಿಳಿದವರೆ. ಆದರೂ ನಮ್ಮನ್ನೇಕೆ ಅವಮಾನಿಸುವೆ?

ಕುಶನಾಭಸುತಾಃ ಸರ್ವಾಃ ಸಮರ್ಥಾಸ್ತಾ ತ್ವಂ ಸುರೋತ್ತಮ ।
ಸ್ಥಾನಾಚ್ಚ್ಯವಯಿತುಂ ದೇವಂ ರಕ್ಷಾಮಸ್ತು ತಪೋ ವಯಮ್॥ ೧೯ ॥

ನಾವೆಲ್ಲರೂ ಕುಶನಾಭನ ಮಕ್ಕಳು. ದೇವೋತ್ತಮನೆ, ದೇವನಾದ ನಿನ್ನನ್ನು ನಿನ್ನ ದೇವಪದವಿಯಿಂದ ಕೆಳಗಿಳಿಸಲು ನಾವು ಸಮರ್ಥರು. ಆದರೆ ನಾವು ಹಾಗೆ ಮಾಡುವುದಿಲ್ಲ. ನಮ್ಮ ತಪಸ್ಸನ್ನು ನಾವು ರಕ್ಷಣೆ ಮಾಡಿಕೊಳ್ಳುತ್ತೇವೆ ಹಾಳಾಗಲು ಬಿಡುವುದಿಲ್ಲ.

ಮಾಭೂತ್ಸ ಕಾಲೋ ದುರ್ಮೇಧಃ ಪಿತರಂ ಸತ್ಯವಾದಿನಮ್ ।
ನಾವಮನ್ಯ ಸ್ವಧರ್ಮೇಣ ಸ್ವಯಂವರಮುಪಾಸ್ಮಹೇ ॥ ೨೦ ॥

ದುರ್ಬುದ್ಧಿಯವನೆ! ಸತ್ಯವಾದಿಯಾದ ನಮ್ಮ ಪಿತನನ್ನು ಅವಮಾನಿಸಿ ಸ್ವೇಚ್ಛೆ-ಯಿಂದ ಸ್ವತಃ ನಮ್ಮ ವರನನ್ನು ನಾವೇ ಆರಿಸಿಕೊಳ್ಳುವ ಒಂದು ಕಾಲ ನಮಗೆ ಎಂದೂ ಬರಬಾರದು.

ಪಿತಾ ಹಿ ಪ್ರಭುರಸ್ಮಾಕಂ ದೈವತಂ ಪರಮಂ ಹಿ ನಃ ।
ಯಸ್ಯ ನೋ ದಾಸ್ಯತಿ ಪಿತಾ ಸ ನೋ ಭರ್ತಾ ಭವಿಷ್ಯತಿ ॥ ೨೧ ॥

ಪಿತನೇ ನಮಗೆ ಪ್ರಭು, ಪರದೇವತೆ. ಪಿತನು ಯಾರಿಗೆ ನಮ್ಮನ್ನು ಕೊಡುವನೋ ಅವನು ನಮಗೆ ಪತಿಯಾಗುವನು.

ತಾಸಾಂ ತದ್ವಚನಂ ಶ್ರುತ್ವಾ ವಾಯುಃ ಪರಮಕೋಪನಃ ।
ಪ್ರವಿಶ್ಯ ಸರ್ವಗಾತ್ರಾಣಿ ಬಭಂಜ ಭಗವಾನ್ಪ್ರಭುಃ ॥ ೨೨ ॥

ಕನ್ಯೆಯರ ಈ ಮಾತನ್ನು ಕೇಳಿ ಅಂತರಂಗದಲ್ಲಿ ಅವರ ಈ ಪಿತೃಭಕ್ತಿಯನ್ನೂ, ದೇವತೆಗಳನ್ನೂ ಲೆಕ್ಕಿಸದಿರುವ ದಿಟ್ಟತನವನ್ನೂ ಮೆಚ್ಚಿಕೊಂಡವನೇ ಆದರೂ, ಇನ್ನೂ ಪರೀಕ್ಷೆ ಮಾಡಬೇಕೆಂದು ಬಯಸಿ, ಮಹಾ ಕೋಪಿಯಂತೆ ವಾಯು ತೋರಿಕೊಳ್ಳುತ್ತಾನೆ. ಕನ್ಯೆಯರ ಶರೀರವನ್ನು ಪ್ರವೇಶಿಸಿ ವಿರೂಪ ಗೊಳಿಸುತ್ತಾನೆ. ಭಗವಾನ್ ಪ್ರಭು ವಾಯುದೇವ.

ತಾಃ ಕನ್ಯಾ ವಾಯುನಾ ಭಗ್ನಾ ವಿವಿಶುರ್ನೃಪತೇರ್ಗೃಹಮ್ ।
ಪ್ರಾಪತನ್ಭುವಿ ಸಂಭ್ರಾಂತಾಃ ಸಲಜ್ಜಾಃ ಸಾಶ್ರುಲೋಚನಾಃ ॥ ೨೩ ॥

ಆ ಕನ್ಯೆಯರು ವಾಯುದೇವನಿಂದ ವಿರೂಪಗೊಳಿಸಲ್ಪಟ್ಟಾಗ ಅರಮನೆಯೊಳಗೆ ಪ್ರವೇಶಿಸಿದರು. ಉದ್ವಿಗ್ನಚಿತ್ತರಾಗಿ ಲಜ್ಜಿತರಾಗಿ ಕಣ್ಣುಗಳಿಂದ ನೀರು ಸುರಿಸಿದರು.

ಸ ಚ ತಾ ದಯಿತಾ ದೀನಾಃ ಕನ್ಯಾಃ ಪರಮಶೋಭನಾಃ ।
ದೃಷ್ಟ್ವಾ ಭಗ್ನಾಸ್ತದಾ ರಾಜಾ ಸಂಭ್ರಾಂತ ಇದಮಬ್ರವೀತ್ ॥ ೨೪ ॥

ಪರಮ ಸುಂದರಿಯರಾಗಿದ್ದ ಮುದ್ದಿನ ಕನ್ಯೆಯರು ಈಗ ವಿರೂಪರಾಗಿ ದೀನರಾದುದನ್ನು ಕಂಡು ರಾಜನು ಉದ್ವಿಗ್ನಚಿತ್ತನಾಗಿ ನುಡಿದ.

ಕಿಮಿದಂ ಕಥ್ಯತಾಂ ಪುತ್ರ್ಯಃ ಕೋ ಧರ್ಮಮವಮನ್ಯತೇ ।
ಕುಬ್ಜಾಃ ಕೇನ ಕೃತಾಃ ಸರ್ವಾ ವೇಷ್ಟಂತ್ಯೋ ನಾಭಿಭಾಷಥ ॥ ೨೫ ॥

ಮಕ್ಕಳೇ ಇದೇನಾಯಿತು ಹೇಳಿ, ನಿಮ್ಮ ಸ್ವಧರ್ಮವನ್ನು ಯಾರು ಅವಮಾನಿಸುತ್ತಿದ್ದಾನೆ? ನೀವೆಲ್ಲರನ್ನೂ ಗೂನಿಯರನ್ನಾಗಿ ಯಾರು ಮಾಡಿದರು? ಎಲ್ಲರೂ ನೆಲದ ಮೇಲೆ ಹೊರಳುವಿರಿ ಏನೂ ಹೇಳುವುದಿಲ್ಲ ಏಕೆ?

ಶ್ರೋತುಮಿಚ್ಛಾಮಿ ತಂ ಪುತ್ರ್ಯೋ ಯಸ್ಯೇದಂ ಕರ್ಮ ಗರ್ಹಿತಮ್ ।
ಏವಂ ರಾಜಾ ವಿನಿಶ್ವಸ್ಯ ಸಮಾಧಿಂ ಸಂದಧೇ ತತಃ ॥ ೨೬ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ದ್ವಾತ್ರಿಂಶಃ ಸರ್ಗಃ ॥ ೩೨ ॥

'ಮಕ್ಕಳೆ, ಯಾರು ಈ ಕುಕೃತ್ಯ ಮಾಡಿದವನು ಎಂದು ನಾನು ತಿಳಿಯ-ಬಯಸುತ್ತೇನೆ' ಹೀಗೆ ರಾಜನು ವ್ಯಥೆ ಪಟ್ಟು ನಿಟ್ಟುಸಿರಿಟ್ಟು ಕಾತರದಿಂದ ಎಲ್ಲವನ್ನೂ ತಿಳಿಯಲು ಬಯಸಿದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಮೂವತ್ತೆರಡನೆ ಸರ್ಗ ಮುಗಿಯಿತು.

ತ್ರಯಸ್ತ್ರಿಂಶಃ ಸರ್ಗಃ

ತಸ್ಯ ತದ್ವಚನಂ ಶ್ರುತ್ವಾ ಕುಶನಾಭಸ್ಯ ಧೀಮತಃ ।
ಶಿರೋಭಿಶ್ಚರಣೌ ಸ್ಪೃಷ್ಟ್ವಾ ಕನ್ಯಾಶತಮಭಾಷತ ॥ ೧ ॥

ಧೀಮಂತನಾದ ಕುಶನಾಭನ ಆ ಮಾತನ್ನು ಕೇಳಿ ನೂರು ಕನ್ಯೆಯರು ಕಾಲುಗಳ ಮೇಲೆ ತಲೆ ಇಟ್ಟು ಹೇಳಿದರು.

ವಾಯುಃ ಸರ್ವಾತ್ಮಕೋ ರಾಜನ್ನಧರ್ಷಯಿತುಮಿಚ್ಛತಿ ।
ಅಶುಭಂ ಮಾರ್ಗಮಾಸ್ಥಾಯ ನ ಧರ್ಮಂ ಪ್ರತ್ಯವೇಕ್ಷತೇ ॥ ೨ ॥

ರಾಜನೆ, ಸರ್ವಾಂತರ್ಯಾಮಿಯಾದ ವಾಯುದೇವನು ಅಶುಭಮಾರ್ಗದಿಂದ ನಮ್ಮನ್ನು ಬಲಾತ್ಕರಿಸಲು ಬಯಸುತ್ತಾನೆ. ಧರ್ಮವನ್ನು ಆದರಿಸುವುದಿಲ್ಲ.

ಪಿತೃಮತ್ಯಃ ಸ್ಮ ಭದ್ರಂ ತೇ ಸ್ವಚ್ಛಂದೇ ನ ವಯಂ ಸ್ಥಿತಾಃ ।
ಪಿತರಂ ನೋ ವೃಣೀಷ್ವ ತ್ವಂ ಯದಿ ನೋ ದಾಸ್ಯತೇ ತವ ॥ ೩ ॥

'ನಾವು ತಂದೆ ತಾಯಿಗಳುಳ್ಳವರು. ನಿನಗೆ ಶುಭವಾಗಲಿ. ಸ್ವಚ್ಛಂದವಾಗಿ ನಾವು ಇರುವುದಿಲ್ಲ. ನಮ್ಮ ತಂದೆಯನ್ನೇ ಕೇಳು. ಅವನು ನಮ್ಮನ್ನು ನಿನಗೆ ಕೊಟ್ಟರೆ ನಾವು ನಿನ್ನವರಾಗುವೆವು.'

ತೇನ ಪಾಪಾನುಬಂಧೇನ ವಚನಂ ನಪ್ರತೀಚ್ಛತಾ ।
ಏವಂ ಬ್ರುವಂತ್ಯಃ ಸರ್ವಾಃ ಸ್ಮ ವಾಯುನಾ ನಿಹತಾ ಭೃಶಮ್ ॥ ೪ ॥

ನಾವು ಹೀಗೆ ಹೇಳಿದರೆ, ವಾಯುದೇವ ಅದನ್ನು ಸ್ವೀಕರಿಸದೇ ನಾವು ಹೀಗೆ ಹೇಳಿದ್ದಕ್ಕೆ ಪ್ರತಿಯಾಗಿ ನಮ್ಮೆಲ್ಲರನ್ನೂ ಬಹಳ ಪೀಡಿಸಿದ್ದಾನೆ.

ತಾಸಾಂ ತದ್ವಚನಂ ಶ್ರುತ್ವಾ ರಾಜಾ ಪರಮಧಾರ್ಮಿಕಃ ।
ಪ್ರತ್ಯುವಾಚ ಮಹಾತೇಜಾಃ ಕನ್ಯಾಶತಮನುತ್ತಮಮ್ ॥ ೫ ॥

ಕನ್ಯೆಯರು ಹೇಳಿದ ಮಾತನ್ನು ಕೇಳಿ ಪರಮ ಧಾರ್ಮಿಕನಾದ ಮಹಾತೇಜನಾದ ರಾಜಾ ಕುಶನಾಭನು ಉತ್ತಮರಾದ ನೂರು ಕನ್ಯೆಯರಿಗೆ ಹೇಳಿದ-

ಕ್ಷಾಂತಂ ಕ್ಷಮಾವತಾಂ ಪುತ್ರ್ಯಃ ಕರ್ತವ್ಯಂ ಸುಮಹತ್ಕೃತಮ್ ।
ಏಕಮತ್ಯಮುಪಾಗಮ್ಯ ಕುಲಂ ಚಾವೇಕ್ಷಿತಂ ಮಮ ॥

ಅಲಂಕಾರೋ ಹಿ ನಾರೀಣಾಂ ಕ್ಷಮಾ ತು ಪುರುಷಸ್ಯ ವಾ ॥ ೬ ॥

ಮಕ್ಕಳೇ, ನೀವು ಧೈರ್ಯ ತಾಳಿರುವಿರಿ, ಧೈರ್ಯವಂತರ ಮಹತ್ತಾದ ಕರ್ತವ್ಯ-ವನ್ನು ನೀವು ಮಾಡಿರುವಿರಿ. ಎಲ್ಲರೂ ಐಕಮತ್ಯದಿಂದ ಇದ್ದು ನನ್ನ ಕುಲದ ಮರ್ಯಾದೆಯನ್ನು ರಕ್ಷಿಸಿರುವಿರಿ. ನಾರಿಗಾಗಲಿ ಪುರುಷನಿಗಾಗಲಿ ಈ ಧೈರ್ಯ ಅಲಂಕಾರಪ್ರಾಯವಾಗಿರುತ್ತದೆ.

ದುಷ್ಕರಂ ತದ್ಧಿ ವಃ ಕ್ಷಾಂತಂ ತ್ರಿದಶೇಷು ವಿಶೇಷತಃ ।
ಯಾದೃಶೀ ವಃ ಕ್ಷಮಾ ಪುತ್ರ್ಯಃ ಸರ್ವಾಸಾಮವಿಶೇಷತಃ ॥ ೭ ॥

ನೀವು ತೋರಿದ ದಿಟ್ಟತನ ದುಷ್ಕರವಾದುದು. ವಿಶೇಷವಾಗಿ ದೇವತೆಗಳ ಮುಂದೆ ಅದು ಬಲು ದುಷ್ಕರ. ನಿಮ್ಮಲ್ಲಿ ಎಲ್ಲರಿಗೂ ಒಂದೇರೀತಿಯ ದಿಟ್ಟತನವಿರುವುದೂ ಅತಿ ದುಷ್ಕರ.

ಕ್ಷಮಾ ದಾನಂ ಕ್ಷಮಾ ಸತ್ಯಂ ಕ್ಷಮಾ ಯಜ್ಞಶ್ಚ ಪುತ್ರಿಕಾಃ ।
ಕ್ಷಮಾ ಯಶಃ ಕ್ಷಮಾ ಧರ್ಮಃ ಕ್ಷಮಯಾ ವಿಷ್ಠಿತಂ ಜಗತ್ ॥ ೮ ॥

ದಾನ-ಸತ್ಯ-ಯಜ್ಞ-ಯಶಸ್ಸು-ಧರ್ಮಗಳಿಂದ ಸಿಗುವ ಸತ್ಫಲವೆಲ್ಲವೂ ಈ ದಿಟ್ಟತನದ ಹೋರಾಟ ಒಂದರಿಂದಲೇ ಲಭ್ಯ ಮಕ್ಕಳೆ, ಇಂಥ ಸಾತ್ವಿಕವಾದ ದಿಟ್ಟತನದಿಂದಲೇ ಜಗತ್ತು ನಾಶವಾಗದೆ ಉಳಿದಿದೆ.

ವಿಸೃಜ್ಯ ಕನ್ಯಾಃ ಕಾಕುತ್ಸ್ಥ ರಾಜಾ ತ್ರಿದಶವಿಕ್ರಮಃ ।
ಮಂತ್ರಜ್ಞೋ ಮಂತ್ರಯಾಮಾಸ ಪ್ರದಾನಂ ಸಹ ಮಂತ್ರಿಭಿಃ ॥
ದೇಶಕಾಲೌ ಪ್ರದಾನಸ್ಯ ಸದೃಶೇ ಪ್ರತಿಪಾದನಮ್ ॥ ೯ ॥

ದೇವತೆಗಳಂಥ ಪರಾಕ್ರಮಿ ರಾಜಾ ಕುಶನಾಭನು ಕನ್ಯೆಯರಿಗೆ ಸಮಾಧಾನ ಹೇಳಿಕಳಿಸಿ, ಮಂತ್ರಿಗಳೊಂದಿಗೆ ಕನ್ಯಾದಾನದ ಬಗ್ಗೆ ಮಂತ್ರಾಲೋಚನೆಗೆ ತೊಡಗಿದ, ಮಂತ್ರಾಲೋಚನೆಯನ್ನು ಬಲ್ಲ ಆ ರಾಜಾ ಕುಶನಾಭ. ಕನ್ಯಾದಾನಕ್ಕೆ ಉಚಿತವಾದ ದೇಶಕಾಲಗಳನ್ನೂ ಆಲೋಚಿಸಿದ. ಅನುರೂಪರಾದ ವರರಿಗೆ ಕನ್ಯಾದಾನ ಮಾಡುವ ಬಗ್ಗೆಯೂ ಆಲೋಚಿಸಿದ.

ಏತಸ್ಮಿನ್ನೇವ ಕಾಲೇ ತು ಚೂಲೀ ನಾಮ ಮಹಾಮುನಿಃ ।
ಊರ್ಧ್ವರೇತಾಃ ಶುಭಾಚಾರೋ ಬ್ರಾಹ್ಮಂ ತಪ ಉಪಾಗಮತ್॥ ೧೦ ॥

ಇದೇ ಸಮಯದಲ್ಲಿ ಚೂಲಿ ಎಂಬ ಮಹಾಮುನಿ ಊರ್ಧ್ವ ರೇತಸ್ಕನಾಗಿ ಶುಭಾಚಾರನಿಷ್ಠನಾಗಿ ಬ್ರಹ್ಮದೇವನ ಕುರಿತು ತಪಸ್ಸು ಮಾಡುತ್ತಿದ್ದ.

ತಪ್ಯಂತಂ ತಮೃಷಿಂ ತತ್ರ ಗಂಧರ್ವೀ ಪರ್ಯುಪಾಸತೇ ।
ಸೋಮದಾ ನಾಮ ಭದ್ರಂ ತೇ ಊರ್ಮಿಲಾತನಯಾ ತದಾ ॥ ೧೧ ॥

ಚೂಲಿ ಮುನಿ ತಪಸ್ಸು ಮಾಡುವಾಗ ಊರ್ಮಿಲಾ ತನಯೆಯಾದ ಸೋಮದಾ ಎಂಬ ಗಂಧರ್ವ ಸ್ತ್ರೀ ಅವನಿಗೆ ಸೇವೆ ಮಾಡುತ್ತಿದ್ದಳು, ರಾಮ! ನಿನಗೆ ಶುಭವಾಗಲಿ!

ಸಾ ಚ ತಂ ಪ್ರಣತಾ ಭೂತ್ವಾ ಶುಶ್ರೂಷಣಪರಾಯಣಾ ।
ಉವಾಸ ಕಾಲೇ ಧರ್ಮಿಷ್ಠಾ ತಸ್ಯಾಸ್ತುಷ್ಟೋಽಭವದ್ಗುರುಃ ॥ ೧೨ ॥

ಧರ್ಮಿಷ್ಠಳಾದ ಅವಳು ಆತನನ್ನು ನಮಿಸಿ ಸೇವಾಪರಾಯಣಳಾಗಿ ಬಹುಕಾಲ ವಾಸ ಮಾಡಿದಳು. ಅವಳಿಗೆ ಗುರು ಸಂತುಷ್ಟನಾದ.

ಸ ಚ ತಾಂ ಕಾಲಯೋಗೇನ ಪ್ರೋವಾಚ ರಘುನಂದನ ।
ಪರಿತುಷ್ಟೋಽಸ್ಮಿ ಭದ್ರಂ ತೇ ಕಿಂ ಕರೋಮಿ ತವ ಪ್ರಿಯಮ್ ॥ ೧೩ ॥

ಸೇವಾಕರ್ಮ ಪರಿಪಾಕ ಕಾಲ ಬಂದಾಗ- ರಾಮ! ನಿನಗೆ ಶುಭವಾಗಲಿ, ಗುರು ನುಡಿದ, 'ನಾನು ಸಂತುಷ್ಟನಾಗಿದ್ದೇನೆ, ನಿನ್ನಿಷ್ಟದಂತೆ ನಾನೇನು ಮಾಡಲಿ?'

ಪರಿತುಷ್ಟಂ ಮುನಿಂ ಜ್ಞಾತ್ವಾ ಗಂಧರ್ವೀ ಮಧುರಸ್ವರಾ ।
ಉವಾಚ ಪರಮಪ್ರೀತಾ ವಾಕ್ಯಜ್ಞಾ ವಾಕ್ಯಕೋವಿದಮ್ ॥ ೧೪ ॥

ಮುನಿ ತುಷ್ಟನಾಗಿರುವನೆಂದು ತಿಳಿದು ಮಾತುಬಲ್ಲ ಗಂಧರ್ವಿ ಪರಮ-ಪ್ರೀತಳಾಗಿ ಮಧುರಸ್ವರದಿಂದ, ಮಾತಿನಲ್ಲಿ ಕೋವಿದನಾದ ಮುನಿಗೆ ಹೇಳಿದಳು.

ಲಕ್ಷ್ಮ್ಯಾ ಸಮುದಿತೋ ಬ್ರಾಹ್ಮ್ಯಾ ಬ್ರಹ್ಮಭೂತೋ ಮಹಾತಪಾಃ ।
ಬ್ರಾಹ್ಮೇಣ ತಪಸಾ ಯುಕ್ತಂ ಪುತ್ರಮಿಚ್ಛಾಮಿ ಧಾರ್ಮಿಕಮ್ ॥ ೧೫ ॥

'ಮಹಾತಪಗೈದು ಪರಬ್ರಹ್ಮನ ಅನುಗ್ರಹವನ್ನು ಹೊಂದಿರುವ ನೀನು ಬ್ರಹ್ಮಜ್ಞಾನ ಸಂಪತ್ತಿನಿಂದ ಬೆಳಗುತ್ತಿರುವೆ. ಅದರಿಂದ ಧಾರ್ಮಿಕನಾದ ಬ್ರಹ್ಮಜ್ಞಾನ-ಯುಕ್ತನಾದ ಪುತ್ರನನ್ನು ನಿನ್ನ ಅನುಗ್ರಹದಿಂದ ಹೊಂದಲು ಬಯಸುತ್ತೇನೆ.

ಅಪತಿಶ್ಚಾಸ್ಮಿ ಭದ್ರಂ ತೇ ಭಾರ್ಯಾ ಚಾಸ್ಮಿ ನ ಕಸ್ಯಚಿತ್ ।
ಬ್ರಾಹ್ಮೇಣೋಪಗತಾಯಾಶ್ಚ ದಾತುಮರ್ಹಸಿ ಮೇ ಸುತಮ್ ॥ ೧೬ ॥

'ನನಗೆ ಪತಿ ಇಲ್ಲ, ಹಿಂದೆ ಯಾರಿಗೂ ನಾನು ಪತ್ನಿಯಾಗಿಯೂ ಇರಲಿಲ್ಲ. ಶರಣಾಗತಳಾದ ನನಗೆ ತಪೋಮಹಿಮೆಯಿಂದಲೇ ಮಗನೊಬ್ಬನನ್ನು ಅನುಗ್ರಹಿಸು' ಎಂದು.

ತಸ್ಯಾಃ ಪ್ರಸನ್ನೋ ಬ್ರಹ್ಮರ್ಷಿರ್ದದೌ ಪುತ್ರಮನುತ್ತಮಮ್ ।
ಬ್ರಹ್ಮದತ್ತ ಇತಿ ಖ್ಯಾತಂ ಮಾನಸಂ ಚೂಲಿನಃ ಸುತಮ್ ॥ ೧೭ ॥

ಚೂಲಿ ಮುನಿಯೆ 'ಚೂಲಿನ' ಎಂದೂ ಕರೆಸಿಕೊಂಡಿದ್ದ. ಅಂಥ ಬ್ರಹ್ಮರ್ಷಿಯಾದ ಚೂಲಿನ ಮುನಿಯು ಗಂಧರ್ವಿಗೆ ಪ್ರಸನ್ನನಾಗಿ, ಬ್ರಹ್ಮದತ್ತ ಎಂದು ಪ್ರಸಿದ್ಧನಾದ ಉತ್ತಮ ಮಾನಸಪುತ್ರನೊಬ್ಬನನ್ನು ಅನುಗ್ರಹಿಸಿದನು.

ಸ ರಾಜಾ ಸೌಮದೇಯಸ್ತು ಪುರೀಮಧ್ಯಾವಸತ್ತದಾ ।
ಕಾಂಪಿಲ್ಯಾಂ ಪರಯಾ ಲಕ್ಷ್ಮ್ಯಾ ದೇವರಾಜೋ ಯಥಾ ದಿವಮ್ ॥೧೮

ಹೀಗೆ ಸೋಮದಾ ಗಂಧರ್ವಿಯ ಪುತ್ರನಾಗಿ ಸೌಮದೇಯನೆನಿಸಿದ ಬ್ರಹ್ಮದತ್ತರಾಜನು ಕಾಂಪಿಲ್ಯಾ ನಗರಿಯಲ್ಲಿ, ಸ್ವರ್ಗದಲ್ಲಿ ದೇವರಾಜ ಇಂದ್ರನಂತೆ, ಮಹಾಸಂಪತ್ತಿನಿಂದ ಯುಕ್ತನಾಗಿ ವಾಸ ಮಾಡಿದ.

ಸ ಬುದ್ಧಿಂ ಕೃತವಾನ್ರಾಜಾ ಕುಶನಾಭಃ ಸುಧಾರ್ಮಿಕಃ ।
ಬ್ರಹ್ಮದತ್ತಾಯ ಕಾಕುತ್ಸ್ಥ ದಾತುಂ ಕನ್ಯಾಶತಂ ತದಾ ॥ ೧೯ ॥

ಅತ್ಯಂತ ಧಾರ್ಮಿಕನಾದ ರಾಜಾ ಕುಶನಾಭನು, ಹೇ ರಾಮ!, ಬ್ರಹ್ಮದತ್ತನಿಗೆ ನೂರು ಕನ್ಯೆಯರನ್ನು ದಾನ ಮಾಡಲು ಮನಸು ಮಾಡಿದ.

ತಮಾಹೂಯ ಮಹಾತೇಜಾ ಬ್ರಹ್ಮದತ್ತಂ ಮಹೀಪತಿಃ ।
ದದೌ ಕನ್ಯಾಶತಂ ರಾಜಾ ಸುಪ್ರೀತೇನಾಂತರಾತ್ಮನಾ ॥ ೨೦ ॥

ಮಹಾತೇಜನಾದ ರಾಜಾ ಕುಶನಾಭನು ಬ್ರಹ್ಮದತ್ತನನ್ನು ಆಹ್ವಾನಿಸಿ ಸಂತುಷ್ಟ ಮನಸಿನಿಂದ ತನ್ನ ನೂರು ಕನ್ಯೆಯರನ್ನು ದಾನ ಮಾಡಿದ.

ಯಥಾಕ್ರಮಂ ತತಃ ಪಾಣೀನ್ ಜಗ್ರಾಹ ರಘುನಂದನ ।
ಬ್ರಹ್ಮದತ್ತೋ ಮಹೀಪಾಲಸ್ತಾಸಾಂ ದೇವಪತಿರ್ಯಥಾ ॥ ೨೧ ॥

ರಾಮ! ದೇವೇಂದ್ರನಂತೆ ಮೆರೆಯುತ್ತಿದ್ದ ಬ್ರಹ್ಮದತ್ತ ರಾಜನು ವಿಧ್ಯುಕ್ತಕ್ರಮದಿಂದ ಕನ್ಯೆಯರ ಪಾಣಿಗ್ರಹಣ ನೆರವೇರಿಸಿದ.

ಸ್ಪೃಷ್ಟಮಾತ್ರೇ ತತಃ ಪಾಣೌ ವಿಕುಬ್ಜಾ ವಿಗತಜ್ವರಾಃ ।
ಯುಕ್ತಾಃ ಪರಮಯಾ ಲಕ್ಷ್ಮ್ಯಾ ಬಭುಃ ಕನ್ಯಾಶತಂ ತದಾ ॥ ೨೨ ॥

ಪಾಣಿಗ್ರಹಣ ಮಾತ್ರದಿಂದಲೇ ಕನ್ಯೆಯರ ಶರೀರದಲ್ಲಿ ಗೂನು ಜ್ವರವೆಲ್ಲವೂ ಮಾಯವಾಯಿತು. ನೂರು ಕನ್ಯೆಯರೂ ಪರಮ ಸೌಂದರ್ಯಯುಕ್ತರಾಗಿ ಹೊಳೆದರು.

'ಸ್ಪೃಷ್ಟಮಾತ್ರೇ' ಎಂದು 'ಮಾತ್ರ' ಪದ ಪ್ರಯೋಗ ಮಾಡಿ ವಾಲ್ಮೀಕಿಯು 'ಪಾಣಿಗ್ರಹಣ ಇಲ್ಲಿ ನಿಮಿತ್ತಮಾತ್ರ, ಮುಖ್ಯವಾಗಿ ವಾಯುವಿನ ಅನುಗ್ರಹ-ದಿಂದಲೇ ಕನ್ಯೆಯರಿಗೆ ಕಳೆದುಹೋಗಿದ್ದ ಶರೀರಸೌಂದರ್ಯ ದೇಹಾರೋಗ್ಯಗಳು ಪುನಃ ಪ್ರಾಪ್ತವಾದುವು' ಎಂದು ಸೂಚಿಸುತ್ತಿದ್ದಾನೆ. 'ಸರ್ವಾತ್ಮಕೋ ವಾಯುಃ' 'ಅಂತಶ್ಚರಸಿ ಭೂತಾನಾಂ' ಎಂದು ಮುಂತಾಗಿ ಹೇಳುತ್ತ ವಾಲ್ಮೀಕಿ ಇಲ್ಲಿ ವಾಯುದೇವ ಕನ್ಯೆಯರ ಸದ್ಗುಣಗಳನ್ನು ಪರೀಕ್ಷೆ ಮಾಡಿ, ತಾನೇ ಅವರನ್ನು ಆ ಪರೀಕ್ಷೆಯಲ್ಲಿ ಗೆಲ್ಲಿಸಿ, ಕೀರ್ತಿ ತಂದುಕೊಟ್ಟಿದ್ದಾನೆ ಎಂದು ವಾಯುಸ್ತುತಿ ಗೈದಿದ್ದಾನೆ.

ಸ ದೃಷ್ಟ್ವಾ ವಾಯುನಾ ಮುಕ್ತಾಃ ಕುಶನಾಭೋ ಮಹೀಪತಿಃ ।
ಬಭೂವ ಪರಮಪ್ರೀತೋ ಹರ್ಷಂ ಲೇಭೇ ಪುನಃಪುನಃ ॥ ೨೩ ॥

ನೂರು ಕನ್ಯೆಯರೂ ವಾತರೋಗದಿಂದ ಮುಕ್ತರಾಗಿರುವುದನ್ನು ಪುನಃ ಪುನಃ ಕಂಡು ಪರಮಪ್ರೀತನಾದ, ಹರ್ಷಭರಿತನಾದ, ರಾಜಾ ಕುಶನಾಭ.

ಕೃತೋದ್ವಾಹಂ ತು ರಾಜಾನಂ ಬ್ರಹ್ಮದತ್ತಂ ಮಹೀಪತಿಃ ।
ಸದಾರಂ ಪ್ರೇಷಯಾಮಾಸ ಸೋಪಾಧ್ಯಾಯಗಣಂ ತದಾ ॥ ೨೪ ॥

ಕನ್ಯೆಯರನ್ನು ವಿವಾಹವಾದ ರಾಜಾ ಬ್ರಹ್ಮದತ್ತನನ್ನು ಪತ್ನೀಸಮೇತವಾಗಿ ಉಪಾಧ್ಯಾಯ ಸಮೂಹದೊಂದಿಗೆ ಕಳಿಸಿಕೊಟ್ಟ ಕುಶನಾಭ.

ಸೋಮದಾಪಿ ಸುಸಂಹೃಷ್ಟಾ ಪುತ್ರಸ್ಯ ಸದೃಶೀಂ ಕ್ರಿಯಾಮ್ ।
ಯಥಾನ್ಯಾಯಂ ಚ ಗಂಧರ್ವೀ ಸ್ನುಷಾಸ್ತಾಃ ಪ್ರತ್ಯನಂದತ ॥
ಸ್ಪಲಷ್ಟಾ ಸ್ಪಲಷ್ಟಾ ಚ ತಾಃ ಕನ್ಯಾಃ ಕುಶನಾಭಂ ಪ್ರಶಸ್ಯ ಚ ॥ ೨೫ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ತ್ರಯಸ್ತ್ರಿಂಶಃ ಸರ್ಗಃ ॥ ೩೩ ॥

ಸೋಮದಾ ಗಂಧರ್ವಿಯೂ ಬಹಳ ಹರ್ಷಭರಿತಳಾದಳು. ಪುತ್ರ ಬ್ರಹ್ಮದತ್ತನ ವಿವಾಹ ಕ್ರಿಯೆಯನ್ನೂ, ಅವನು ವಿವಾಹವಾದ ಆ ಸೊಸೆಯಂದಿರನ್ನೂ ಯಥಾ-ಕ್ರಮವಾಗಿ ನೋಡಿ ಆನಂದಿಸಿದಳು. ಕನ್ಯೆಯರನ್ನು ಮುಟ್ಟಿಮುಟ್ಟಿ ನೋಡಿ ಕುಶನಾಭನನ್ನು ಹೊಗಳಿದಳು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಮೂವತ್ತಮೂರನೆ ಸರ್ಗ ಮುಗಿಯಿತು.

ಚತುಸ್ತ್ರಿಂಶಃ ಸರ್ಗಃ

ಕೃತೋದ್ವಾಹೇ ಗತೇ ತಸ್ಮಿನ್ಬ್ರಹ್ಮದತ್ತೇ ಚ ರಾಘವ ।
ಅಪುತ್ರಃ ಪುತ್ರಲಾಭಾಯ ಪೌತ್ರೀಮಿಷ್ಟಿಮಕಲ್ಪಯತ್ ॥ ೧ ॥

ರಾಮ, ಮದುವೆ ಮಾಡಿಕೊಂಡು ಬ್ರಹ್ಮದತ್ತನು ಹೋದ ಬಳಿಕ ಕುಶನಾಭನು ಪುತ್ರಸಂತತಿ ಇಲ್ಲದವನಾದುದರಿಂದ ಪುತ್ರಲಾಭಕ್ಕಾಗಿ ಪುತ್ರೇಷ್ಟಿ ಮಾಡಲು ತೊಡಗಿದ.

ಇಷ್ಟ್ಯಾಂ ಚ ವರ್ತಮಾನಾಯಾಂ ಕುಶನಾಭಂ ಮಹೀಪತಿಮ್ ।
ಉವಾಚ ಪರಮೋದಾರಃ ಕುಶೋ ಬ್ರಹ್ಮಸುತಸ್ತದಾ ॥ ೨ ॥

ರಾಜಾ ಕುಶನಾಭನು ಇಷ್ಟಿ ಮಾಡುತ್ತಿದ್ದಾಗ ಬ್ರಹ್ಮಪುತ್ರನಾದ ಪರಮೋದಾರ-ನಾದ ಕುಶನು ಬಂದು ನುಡಿದ.

ಪುತ್ರ ತೇ ಸದೃಶಃ ಪುತ್ರೋ ಭವಿಷ್ಯತಿ ಸುಧಾರ್ಮಿಕಃ ।
ಗಾಧಿಂ ಪ್ರಾಪ್ಸ್ಯಸಿ ತೇನ ತ್ವಂ ಕೀರ್ತಿಂ ಲೋಕೇ ಚ ಶಾಶ್ವತೀಮ್॥ ೩ ॥

'ಪುತ್ರನೆ, ನಿನಗೆ ಒಳ್ಳೆಯ ಧಾರ್ಮಿಕನಾದ ಸದೃಶನಾದ ಪುತ್ರನು ಜನಿಸುತ್ತಾನೆ. ಗಾಧಿ ಎಂಬ ಪುತ್ರನನ್ನು ಪಡೆಯುವಿ, ಲೋಕದಲ್ಲಿ ಶಾಶ್ವತ ಕೀರ್ತಿಯನ್ನು ಪಡೆಯುವಿ.'

ಏವಮುಕ್ತ್ವಾ ಕುಶೋ ರಾಮ ಕುಶನಾಭಂ ಮಹೀಪತಿಮ್ ।
ಜಗಾಮಾಕಾಶಮಾವಿಶ್ಯ ಬ್ರಹ್ಮಲೋಕಂ ಸನಾತನಮ್ ॥ ೪ ॥

ರಾಮ! ಕುಶನು ರಾಜಾ ಕುಶನಾಭನಿಗೆ ಹೀಗೆ ಹೇಳಿ, ಆಕಾಶಮಾರ್ಗವಾಗಿ ಸನಾತನ ಬ್ರಹ್ಮಲೋಕವನ್ನು ಹೋಗಿ ಸೇರಿದ.

ಕಸ್ಯಚಿತ್ತ್ವಥ ಕಾಲಸ್ಯ ಕುಶನಾಭಸ್ಯ ಧೀಮತಃ ।
ಜಜ್ಞೇ ಪರಮಧರ್ಮಿಷ್ಠೋ ಗಾಧಿರಿತ್ಯೇವ ನಾಮತಃ ॥ ೫ ॥

ಕೆಲಕಾಲದ ಬಳಿಕ ಧೀಮಂತನಾದ ಕುಶನಾಭನಿಗೆ ಪರಮಧರ್ಮಿಷ್ಠನಾದ ಇಂದ್ರಾವತಾರನಾದ ಗಾಧಿನಾಮಕನಾದ ಪುತ್ರನು ಜನಿಸಿದ.

ಸ ಪಿತಾ ಮಮ ಕಾಕುತ್ಸ್ಥ ಗಾಧಿಃ ಪರಮಧಾರ್ಮಿಕಃ ।
ಕುಶವಂಶಪ್ರಸೂತೋಽಸ್ಮಿ ಕೌಶಿಕೋ ರಘುನಂದನ ॥ ೬ ॥

ರಾಮ! ಪರಮ ಧಾರ್ಮಿಕನಾದ ಆ ಗಾಧಿ ರಾಜನು ನನ್ನ ಪಿತ. ಹೀಗೆ ರಾಮ! ನಾನು ಕುಶನ ವಂಶ ಪ್ರಸೂತ, ಕೌಶಿಕನೆನಿಸಿದ್ದೇನೆ.

ಪೂರ್ವಜಾ ಭಗಿನೀ ಚಾಪಿ ಮಮ ರಾಘವ ಸುವ್ರತಾ ।
ನಾಮ್ನಾ ಸತ್ಯವತೀ ನಾಮ ಋಚೀಕೇ ಪ್ರತಿಪಾದಿತಾ ॥ ೭ ॥

ರಾಮ! ನನ್ನ ಜೇಷ್ಠ ಭಗಿನಿಯೂ ಕೂಡ ಉತ್ತಮವ್ರತ ನಿಷ್ಠೆ ಉಳ್ಳವಳು - ಹೆಸರು ಸತ್ಯವತೀ ಎಂದು. ಋಚೀಕಮುನಿಗೆ ಕೊಡಲ್ಪಟ್ಟಳು.

ಸಶರೀರಾ ಗತಾ ಸ್ವರ್ಗಂ ಭರ್ತಾರಮನುವರ್ತಿನೀ ।
ಕೌಶಿಕೀ ಪರಮೋದಾರಾ ಪ್ರವೃತ್ತಾ ಚ ಮಹಾನದೀ ॥ ೮ ॥

ದಿವ್ಯಾ ಪುಣ್ಯೋದಕಾ ರಮ್ಯಾ ಹಿಮವಂತಮುಪಾಶ್ರಿತಾ ।
ಲೋಕಸ್ಯ ಹಿತಕಾಮಾರ್ಥಂ ಪ್ರವೃತ್ತಾ ಭಗಿನೀ ಮಮ ॥ ೯ ॥

ಅವಳು ಪತಿಯನ್ನು ಅನುಸರಿಸಿ ಸಶರೀರಳಾಗಿ ಸ್ವರ್ಗಕ್ಕೆ ಹೋದಳು. ಲೋಕದ ಹಿತ ಕಾಮನೆಯಿಂದ ನನ್ನ ಆ ಭಗಿನಿ ಹಿಮವತ್ ಪರ್ವತವನ್ನು ಸೇರಿ, ಪರಮೋದಾರ, ದಿವ್ಯ, ಪುಣ್ಯೋದಕ, ರಮ್ಯ, ಮಹಾನದಿಯಾಗಿಯೂ ಪ್ರವೃತ್ತ-ಳಾಗಿರುವಳು.

ತತೋಽಹಂ ಹಿಮವತ್ಪಾರ್ಶ್ವೇ ವಸಾಮಿ ನಿರತಃ ಸುಖಮ್ ।
ಭಗಿನ್ಯಾಂ ಸ್ನೇಹಸಂಯುಕ್ತಃ ಕೌಶಿಕ್ಯಾಂ ರಘುನಂದನ ॥ ೧೦ ॥

ಅದರಿಂದ ರಾಮ! ನಾನು ಭಗಿನಿಯಾದ ಕೌಶಿಕೀನದಿಯ ಮೇಲಿನ ಸ್ನೇಹ-ಯುಕ್ತನಾಗಿ ಹಿಮಾಲಯದ ಪಾರ್ಶ್ವದಲ್ಲಿ ನಿತ್ಯವೂ ಸುಖವಾಗಿ ವಾಸ ಮಾಡುತ್ತಿದ್ದೇನೆ.

ಸಾ ತು ಸತ್ಯವತೀ ಪುಣ್ಯಾ ಸತ್ಯೇ ಧರ್ಮೇ ಪ್ರತಿಷ್ಠಿತಾ ।
ಪತಿವ್ರತಾ ಮಹಾಭಾಗಾ ಕೌಶಿಕೀ ಸರಿತಾಂ ವರಾ ॥ ೧೧ ॥

ಪುಣ್ಯಕರಳಾದ ಆ ಸತ್ಯವತಿಯು ಸತ್ಯಧರ್ಮದಲ್ಲಿ ರಕ್ಷಕಳಾಗಿ ನೆಲೆಸಿರುವಳು, ಅದಕ್ಕಾಗಿ ಕೌಶಿಕೀ ಎಂಬ ಶ್ರೇಷ್ಠನದಿಯಾಗಿ ಹರಿಯುತ್ತಿರುವಳು. ಮಹಾಭಾಗ್ಯವತಿ ಪತಿವ್ರತೆಯಾಗಿ ಸ್ವರ್ಗದಲ್ಲಿಯೂ ಪತಿಯೊಂದಿಗೆ ಇರುವಳು.

ಅಹಂ ಹಿ ನಿಯಮಾದ್ರಾಮ ಹಿತ್ವಾ ತಾಂ ಸಮುಪಾಗತಃ ।
ಸಿದ್ಧಾಶ್ರಮಮನುಪ್ರಾಪ್ಯ ಸಿದ್ಧೋಽಸ್ಮಿ ತವ ತೇಜಸಾ ॥ ೧೨ ॥

ಸಿದ್ಧಾಶ್ರಮದಲ್ಲಿ ಒಂದು ಯಜ್ಞ ಮಾಡುವ ಬಯಕೆಯಿಂದ ನಾನು ಸ್ವಲ್ಪಕಾಲ ಕೌಶಿಕೀ ತೀರಪ್ರದೇಶವನ್ನು ಬಿಟ್ಟು ಸಿದ್ಧಾಶ್ರಮಕ್ಕೆ ಬಂದಿದ್ದೆ, ನಿನ್ನ ಅನುಗ್ರಹದಿಂದ ಯಜ್ಞಸಿದ್ಧಿಯನ್ನು ಪಡೆದುಕೊಂಡೆ.

ಏಷಾ ರಾಮ ಮಮೋತ್ಪತ್ತಿಃ ಸ್ವಸ್ಯ ವಂಶಸ್ಯ ಕೀರ್ತಿತಾ ।
ದೇಶಸ್ಯ ಚ ಮಹಾಬಾಹೋ ಯನ್ಮಾಂ ತ್ವಂ ಪರಿಪೃಚ್ಛಸಿ ॥ ೧೩ ॥

ಮಹಾಬಾಹು ರಾಮ! ಇದು ನನ್ನ ಹಾಗೂ ನನ್ನ ವಂಶದ ಉತ್ಪತ್ತಿ ಚರಿತ್ರೆ, ಮತ್ತು ಶೋಣಾತೀರದ ಗಿರಿವ್ರಜ ಪ್ರದೇಶದ ಪರಿಚಯ. ನೀನು ಕೇಳಲು ಇಷ್ಟ ಪಟ್ಟಿದ್ದರಿಂದ ಹೇಳಿದ್ದೇನೆ.

ಗತೋಽರ್ಧರಾತ್ರಃ ಕಾಕುತ್ಸ್ಥ ಕಥಾಃ ಕಥಯತೋ ಮಮ ।
ನಿದ್ರಾಮಭ್ಯೇಹಿ ಭದ್ರಂ ತೇ ಮಾಭೂದ್ವಿಘ್ನೋಽಧ್ವನೀಹ ನಃ ॥ ೧೪ ॥

ರಾಮ! ಈಗ ನಾನು ಕಥೆಗಳನ್ನು ಹೇಳುತ್ತಿದ್ದಂತೇ ಪ್ರದೋಷಕಾಲ ಕಳೆಯಿತು. ಇನ್ನು ನೀನು ನಿದ್ದೆ ಹೋಗಬಹುದು, ನಿನಗೆ ಒಳ್ಳೆಯದಾಗಲಿ. ಮುಂದೆ ಈ ದಾರಿಯಲ್ಲಿ ವಿಘ್ನ ಏನೂ ಉಂಟಾಗದಿರಲಿ.

ನಿಷ್ಪಂದಾಸ್ತರವಃ ಸರ್ವೇ ನಿಲೀನಾ ಮೃಗಪಕ್ಷಿಣಃ ।
ನೈಶೇನ ತಮಸಾ ವ್ಯಾಪ್ತಾ ದಿಶಶ್ಚ ರಘುನಂದನ ॥ ೧೫ ॥

ರಾಮ! ಮರಗಳೆಲ್ಲವೂ ನಿಶ್ಚಲವಾಗಿವೆ. ಮೃಗಪಕ್ಷಿಗಳು ಅಲ್ಲಲ್ಲಿ ಅಡಗಿ-ಕೊಂಡಿವೆ. ರಾತ್ರಿಯ ಕತ್ತಲಿಂದ ದಿಕ್ಕುಗಳೆಲ್ಲವೂ ವ್ಯಾಪ್ತವಾಗಿವೆ.

ಶನೈರ್ವಿಯುಜ್ಯತೇ ಸಂಧ್ಯಾ ನಭೋ ನೇತ್ರೈರಿವಾವೃತಮ್ ।
ನಕ್ಷತ್ರತಾರಾಗಹನಂ ಜ್ಯೋತಿರ್ಭಿರವಭಾಸತೇ ॥ ೧೬ ॥

ನಿಧಾನವಾಗಿ ಸಾಯಂಸಂಧ್ಯೆ ಕಳೆದಿದೆ. ಆಗಸದಲ್ಲಿ ಕಣ್ಣುಗಳಂತೆ ಹೊಳೆವ ನಕ್ಷತ್ರ ತಾರೆಗಳು ಪ್ರಕಾಶಮಾನವಾಗಿ ಆವರಿಸಿವೆ.

ಉತ್ತಿಷ್ಠತಿ ಚ ಶೀತಾಂಶುಃ ಶಶೀ ಲೋಕತಮೋನುದಃ ।
ಹ್ಲಾದಯನ್ಪ್ರಾಣಿನಾಂ ಲೋಕೇ ಮನಾಂಸಿ ಪ್ರಭಯಾ ವಿಭೋ ॥ ೧೭ ॥

ಚಂದ್ರೋದಯವಾಗುತ್ತಿದೆ. ಲೋಕದಕತ್ತಲು ದೂರವಾಗುತ್ತಿದೆ. ಲೋಕದಲ್ಲಿ ಪ್ರಾಣಿಗಳ ಮನಸಿಗೆ ಆಹ್ಲಾದ ಉಂಟು ಮಾಡುವ ಬೆಳದಿಂಗಳು ಹರಡುತ್ತಿದೆ.

ಹುಣ್ಣಿಮೆ ದಿನ ಸಪ್ತರಾತ್ರ ಸೋಮಯಾಗವನ್ನು ಮುಗಿಸಿ ಬಿದಿಗೆ ದಿನ ಪ್ರಯಾಣಕ್ಕೆ ಹೊರಟಿದ್ದರಿಂದ ರಾತ್ರಿಯಲ್ಲಿ ನಾಲ್ಕು ಗಳಿಗೆಯ ಅನಂತರ ಚಂದ್ರೋದಯವಾಗುತ್ತಿದೆ. ಅದರಿಂದ ೧೪ನೇ ಶ್ಲೋಕದಲ್ಲಿ ಹೇಳಿದ 'ಅರ್ಧರಾತ್ರಿ' ಎಂದರೆ ಪ್ರದೋಷಕಾಲ. 'ಅರ್ಧ' ಎಂದರೆ ಒಂದು ಸಣ್ಣ ಅಂಶ ಹೊರತು ಸರಿಯಾಗಿ ಅರ್ಧವಲ್ಲ.

ನೈಶಾನಿ ಸರ್ವಭೂತಾನಿ ಪ್ರಚರಂತಿ ತತಸ್ತತಃ ।
ಯಕ್ಷರಾಕ್ಷಸಸಂಘಾಶ್ಚ ರೌದ್ರಾಶ್ಚ ಪಿಶಿತಾಶನಾಃ ॥ ೧೮ ॥

ರಾತ್ರಿ ಸಂಚಾರ ಮಾಡುವ ಎಲ್ಲ ಮೃಗಪಕ್ಷಿಗಳೂ ಮಾಂಸಭಕ್ಷಕ ಭಯಂಕರ ಯಕ್ಷರಾಕ್ಷಸ ಸಮೂಹಗಳೂ ಓಡಾಡಲು ಈಗ ತೊಡಗಿವೆ.

ಏವಮುಕ್ತ್ವಾ ಮಹಾತೇಜಾ ವಿರರಾಮ ಮಹಾಮುನಿಃ ।
ಸಾಧು ಸಾಧ್ವಿತಿ ತಂ ಸರ್ವೇ ಋಷಯೋ ಹ್ಯಭ್ಯಪೂಜಯನ್ ॥ ೧೯ ॥

ಹೀಗೆ ಹೇಳಿ ಮಹಾತೇಜನಾದ ಮಹಾಮುನಿ ಸುಮ್ಮನಾದರು. ಎಲ್ಲ ಋಷಿಗಳು 'ಇದು ಸರಿ, ಇದು ಸರಿ' ಎಂದು ಒಪ್ಪಿಕೊಂಡರು.

ಕುಶಿಕಾನಾಮಯಂ ವಂಶೋ ಮಹಾನ್ ಧರ್ಮಪರಃ ಸದಾ ।
ಬ್ರಹ್ಮೋಪಮಾ ಮಹಾತ್ಮಾನಃ ಕುಶವಂಶ್ಯಾ ನರೋತ್ತಮಾಃ ॥ ೨೦ ॥

ನಿಮ್ಮ ಕುಶಿಕರ ವಂಶ ದೊಡ್ಡದು, ಸದಾ ಧರ್ಮಪರ. ಕುಶವಂಶದ ಪುರುಷೋತ್ತಮರೆಲ್ಲರೂ ಮಹಾತ್ಮರು ಚತುರ್ಮುಖನಂತಿರುವವರು.

ವಿಶೇಷೇಣ ಭವಾನೇವ ವಿಶ್ವಾಮಿತ್ರೋ ಮಹಾಯಶಾಃ ।
ಕೌಶಿಕೀ ಚ ಸರಿಚ್ಛ್ರೇಷ್ಠಾ ಕುಲೋದ್ಯೋತಕರೀ ತವ ॥ ೨೧ ॥

ವಿಶೇಷವಾಗಿ ನೀನೇ ವಿಶ್ವಾಮಿತ್ರನು ಮಹಾಕೀರ್ತಿಶಾಲಿಯಾಗಿರುವೆ, ಕೌಶಿಕೀ ನದಿಯೂ ಶ್ರೇಷ್ಠವಾಗಿದ್ದು ನಿಮ್ಮ ಕುಲವನ್ನು ಬೆಳಗಿಸುತ್ತಿದೆ.

ಇತಿ ತೈರ್ಮುನಿಶಾರ್ದೂಲೈಃ ಪ್ರಶಸ್ತಃ ಕುಶಿಕಾತ್ಮಜಃ ।
ನಿದ್ರಾಮುಪಾಗಮಚ್ಛ್ರೀಮಾನಸ್ತಂ ಗತ ಇವಾಂಶುಮಾನ್ ॥ ೨೨ ॥

ಹೀಗೆ ವಿಶ್ವಾಮಿತ್ರ ಮುನಿಯನ್ನು ಆ ಮುನಿಶ್ರೇಷ್ಠರು ಹೊಗಳುತ್ತಿದ್ದಂತೇ, ಚಂದ್ರನು ಅಸ್ತಂಗತನಾಗುವಂತೆ ಮುನಿ ನಿದ್ದೆ ಹೋದರು.

ರಾಮೋಽಪಿ ಸಹಸೌಮಿತ್ರಿಃ ಕಿಂಚಿದಾಗತವಿಸ್ಮಯಃ ।
ಪ್ರಶಸ್ಯ ಮುನಿಶಾರ್ದೂಲಂ ನಿದ್ರಾಂ ಸಮುಪಸೇವತೇ ॥ ೨೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಚತುಸ್ತ್ರಿಂಶಃ ಸರ್ಗಃ ॥ ೩೪ ॥

ರಾಮ ಲಕ್ಷ್ಮಣರೂ ವಿಸ್ಮಯಗೊಂಡು ವಿಶ್ವಾಮಿತ್ರರನ್ನು ಸ್ವಲ್ಪಹೊಗಳಿ ನಿದ್ದೆ ಹೋದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಮೂವತ್ತನಾಲ್ಕನೆ ಸರ್ಗ ಮುಗಿಯಿತು.

ಪಂಚತ್ರಿಂಶಃ ಸರ್ಗಃ

ಉಪಾಸ್ಯ ರಾತ್ರಿಶೇಷಂ ತು ಶೋಣಾಕೂಲೇ ಮಹರ್ಷಿಭಿಃ ।
ನಿಶಾಯಾಂ ಸುಪ್ರಭಾತಾಯಾಂ ವಿಶ್ವಾಮಿತ್ರೋಽಭ್ಯಭಾಷತ ॥ ೧ ॥

ಮಹರ್ಷಿಗಳೊಂದಿಗೆ ವಿಶ್ವಾಮಿತ್ರನು ಶೋಣಾತೀರದಲ್ಲಿ ರಾತ್ರಿ ಶೇಷವನ್ನು ಕಳೆದು ರಾತ್ರಿ ಬೆಳಗಾದಾಗ ಎದ್ದು ನುಡಿದರು.

ಸುಪ್ರಭಾತಾ ನಿಶಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ ।
ಉತ್ತಿಷ್ಠೋತ್ತಿಷ್ಠ ಭದ್ರಂ ತೇ ಗಮನಾಯಾಭಿರೋಚಯ ॥ ೨ ॥

'ರಾಮ! ರಾತ್ರಿ ಬೆಳಗಾಯಿತು, ಪ್ರಾತಃ ಸಂಧ್ಯೆ ಪ್ರಾರಂಭವಾಗಿದೆ. ಎದ್ದೇಳು ಎದ್ದೇಳು ನಿನಗೆ ಶುಭವಾಗಲಿ, ಹೊರಡಲು ಅಣಿಯಾಗು.'

ತಚ್ಛ್ರುತ್ವಾ ವಚನಂ ತಸ್ಯ ಕೃತ್ವಾ ಪೌರ್ವಾಹ್ಣಿಕೀಂ ಕ್ರಿಯಾಮ್ ।
ಗಮನಂ ರೋಚಯಾಮಾಸ ವಾಕ್ಯಂ ಚೇದಮುವಾಚ ಹ ॥ ೩ ॥

ವಿಶ್ವಾಮಿತ್ರರ ಈ ಮಾತನ್ನು ಕೇಳಿ ಪೂರ್ವಾಹ್ಣದ ಕೃತ್ಯವನ್ನು ಮುಗಿಸಿ ರಾಮನು ಹೊರಡಲು ಅಣಿಯಾದ ಮತ್ತು ಹೇಳಿದ.

ಅಯಂ ಶೋಣಃ ಶುಭಜಲೋ ಗಾಧಃ ಪುಲಿನಮಂಡಿತಃ ।
ಕತರೇಣ ಪಥಾ ಬ್ರಹ್ಮನ್ತರಿಷ್ಯಾಮಹೇ ವಯಮ್ ॥ ೪ ॥

ಇದು ಶೋಣಾನದಿ. ನಿರ್ಮಲವಾದ ನೀರುಳ್ಳದ್ದು. ನೀರು ಹೆಚ್ಚಿಲ್ಲ. ಮಳಲಿಂದ ಶೋಭಿಸುತ್ತಿದೆ. ಯಾವ ದಾರಿಯಿಂದ ನಾವು ದಾಟೋಣ?

ಏವಮುಕ್ತಸ್ತು ರಾಮೇಣ ವಿಶ್ವಾಮಿತ್ರೋಽಬ್ರವೀದಿದಮ್ ।
ಏಷ ಪಂಥಾ ಮಯೋದ್ದಿಷ್ಟೋ ಯೇನ ಯಾಂತಿ ಮಹರ್ಷಯಃ॥ ೫ ॥

ಹೀಗೆ ರಾಮನು ಹೇಳಿದಾಗ ವಿಶ್ವಾಮಿತ್ರರು ದಾರಿ ತೋರಿಸಿ ಹೇಳಿದರು 'ಇದು ದಾರಿ, ನಾನು ಉದ್ದೇಶಿಸಿದ್ದು. ಮಹರ್ಷಿಗಳು ಈ ದಾರಿಯಿಂದ ನಡೆಯುತ್ತಾರೆ.'

ಏವಮುಕ್ತಾ ಮಹರ್ಷಯೋ ವಿಶ್ವಾಮಿತ್ರೇಣ ಧೀಮತಾ ।
ಪಶ್ಯಂತಸ್ತೇ ಪ್ರಯಾತಾ ವೈ ವನಾನಿ ವಿವಿಧಾನಿ ಚ ॥ ೬ ॥

ಧೀಮಂತರಾದ ವಿಶ್ವಾಮಿತ್ರರು ಹೀಗೆ ಹೇಳಿದಾಗ ಮಹರ್ಷಿಗಳು ನಾನಾ ಬಗೆಯ ಅರಣ್ಯಗಳನ್ನು ಕಾಣುತ್ತ ಪ್ರಯಾಣ ಮಾಡಿದರು.

ತೇ ಗತ್ವಾ ದೂರಮಧ್ವಾನಂ ಗತೇಽರ್ಧದಿವಸೇ ತದಾ ।
ಜಾಹ್ನವೀಂ ಸರಿತಾಂ ಶ್ರೇಷ್ಠಾಂ ದದೃಶುರ್ಮುನಿಸೇವಿತಾಮ್ ॥ ೭ ॥

ಅವರು ದೂರವಾದ ದಾರಿ ತುಳಿದು ಅರ್ಧ ದಿನ ಕಳೆದಾಗ ಮುನಿಗಳು ಸೇವಿಸುವ ಶ್ರೇಷ್ಠವಾದ ಗಂಗಾನದಿಯನ್ನು ಕಂಡರು.

ತಾಂ ದೃಷ್ಟ್ವಾ ಪುಣ್ಯಸಲಿಲಾಂ ಹಂಸಸಾರಸಸೇವಿತಾಮ್ ।
ಬಭೂವುರ್ಮುನಯಃ ಸರ್ವೇ ಮುದಿತಾಃ ಸಹರಾಘವಾಃ ॥
ತಸ್ಯಾಸ್ತೀರೇ ತತಶ್ಚಕ್ರುಸ್ತ ಆವಾಸಪರಿಗ್ರಹಮ್ ॥ ೮ ॥

ಪುಣ್ಯಕರವಾದ ನೀರುಳ್ಳ ಹಂಸಸಾರಸಪಕ್ಷಿಗಳಿಂದ ಸೇವಿತವಾದ ಆ ನದಿಯನ್ನು ಕಂಡು ಎಲ್ಲ ಮುನಿಗಳೂ ರಾಮಲಕ್ಷ್ಮಣರೂ ಸಂತೋಷ ಪಟ್ಟರು. ಅದರ ತೀರದಲ್ಲಿ ಒಂದು ವಾಸಸ್ಥಳವನ್ನು ಸ್ವೀಕರಿಸಿದರು.

ತತಃ ಸ್ನಾತ್ವಾ ಯಥಾನ್ಯಾಯಂ ಸಂತರ್ಪ್ಯ ಪಿತೃದೇವತಾಃ ।
ಹುತ್ವಾ ಚೈವಾಗ್ನಿಹೋತ್ರಾಣಿ ಪ್ರಾಶ್ಯ ಚಾಮೃತವದ್ಧವಿಃ ॥ ೯ ॥

ಬಳಿಕ ಸ್ನಾನ ಮಾಡಿ ವಿಧ್ಯುಕ್ತವಾಗಿ ಪಿತೃದೇವ ತರ್ಪಣಗಳನ್ನೂ ಅಗ್ನಿಹೋತ್ರ ಹೋಮವನ್ನೂ ಮಾಡಿ ಮುಗಿಸಿ ಅಮೃತದಂಥ ಯಜ್ಞಶೇಷ ಹವಿಸ್ಸನ್ನು ಭಕ್ಷಿಸಿದರು.

ವಿವಿಶುರ್ಜಾಹ್ನವೀತೀರೇ ಶುಚೌ ಮುದಿತಮಾನಸಾಃ ।
ವಿಶ್ವಾಮಿತ್ರಂ ಮಹಾತ್ಮಾನಂ ಪರಿವಾರ್ಯ ಸಮಂತತಃ ॥ ೧೦ ॥

ಶುಚಿಯಾದ ಜಾಹ್ನವೀತೀರದಲ್ಲಿ ಸಂತುಷ್ಟ ಚಿತ್ತರಾಗಿ ಮಹಾತ್ಮರಾದ ವಿಶ್ವಾಮಿತ್ರರನ್ನು ಸುತ್ತುವರಿದು ಕುಳಿತರು.

ವಿಷ್ಠಿತಾಶ್ಚ ಯಥಾನ್ಯಾಯಂ ರಾಘವೌ ಚ ಯಥಾರ್ಹತಃ ।
ಅಥ ತತ್ರ ತದಾ ರಾಮೋ ವಿಶ್ವಾಮಿತ್ರಮಥಾಬ್ರವೀತ್ ॥ ೧೧ ॥

ವಿಧ್ಯುಕ್ತವಾಗಿ ಯಥಾಯೋಗ್ಯವಾಗಿ ಮುನಿಗಳೂ ಕುಳಿತರು, ರಾಮ-ಲಕ್ಷ್ಮಣರೂ ಕುಳಿತರು. ಆಗ ರಾಮನು ವಿಶ್ವಾಮಿತ್ರರಲ್ಲಿ ಕೇಳಿದ.

ಭಗವನ್ ಶ್ರೋತುಮಿಚ್ಛಾಮಿ ಗಂಗಾಂ ತ್ರಿಪಥಗಾಂ ನದೀಮ್ ।
ತ್ರೈಲೋಕ್ಯಂ ಕಥಮಾಕ್ರಮ್ಯ ಗತಾ ನದನದೀಪತಿಮ್ ॥ ೧೨ ॥

ಪೂಜ್ಯರೇ ತ್ರಿಪಥಗೆಯಾದ ಗಂಗಾನದಿಯ ಬಗ್ಗೆ ನಿಮ್ಮಿಂದ ಕೇಳಲು ಬಯಸುತ್ತೇನೆ. ಮೂಲೋಕವನ್ನು ಹೇಗೆ ವ್ಯಾಪಿಸಿ ಅದು ನದನದೀಪತಿಯಾದ ಸಮುದ್ರವನ್ನು ಹೋಗಿ ಸೇರಿತು?

ಚೋದಿತೋ ರಾಮವಾಕ್ಯೇನ ವಿಶ್ವಾಮಿತ್ರೋ ಮಹಾಮುನಿಃ ।
ವೃದ್ಧಿಂ ಜನ್ಮ ಚ ಗಂಗಾಯಾ ವಕ್ತುಮೇವೋಪಚಕ್ರಮೇ ॥ ೧೩ ॥

ರಾಮನ ಮಾತಿನಿಂದ ಪ್ರೇರಿತರಾದ ಮಹಾಮುನಿ ವಿಶ್ವಾಮಿತ್ರರು ಗಂಗಾ-ನದಿಯ ಜನ್ಮವೃದ್ಧಿಗಳನ್ನು ಹೇಳಲು ತೊಡಗಿದರು.

ಶೈಲೇಂದ್ರೋ ಹಿಮವಾನ್ನಾಮ ಧಾತೂನಾಮಾಕರೋ ಮಹಾನ್ ।
ತಸ್ಯ ಕನ್ಯಾದ್ವಯಂ ರಾಮ ರೂಪೇಣಾಪ್ರತಿಮಂ ಭುವಿ ॥ ೧೪ ॥

ಪರ್ವತರಾಜ ಹಿಮಾಲಯವೆಂದರೆ ಧಾತುಗಳ ದೊಡ್ಡ ಆಕರವಾಗಿದೆ. ರಾಮ, ಹಿಮಾಲಯನಿಗೆ ಭೂಮಿಯಲ್ಲಿ, ರೂಪದಲ್ಲಿ ಅಪ್ರತಿಮರಾದ ಇಬ್ಬರು ಕನ್ಯೆಯರು.

ಯಾ ಮೇರುದುಹಿತಾ ರಾಮ ತಯೋರ್ಮಾತಾ ಸುಮಧ್ಯಮಾ ।
ನಾಮ್ನಾ ಮನೋರಮಾ ನಾಮ ಪತ್ನೀ ಹಿಮವತಃ ಪ್ರಿಯಾ ॥ ೧೫ ॥

ಮೇರು ಪರ್ವತನ ಮಗಳು ಮನೋರಮಾ ಎಂಬ ಸುಂದರಿ ಆ ಇಬ್ಬರು ಕನ್ಯೆಯರಿಗೆ ತಾಯಿ, ಹಿಮವಂತನ ಪ್ರಿಯ ಪತ್ನಿ.

ತಸ್ಯಾಂ ಗಂಗೇಯಮಭವಜ್ಜ್ಯೇಷ್ಠಾ ಹಿಮವತಃ ಸುತಾ ।
ಉಮಾ ನಾಮ ದ್ವಿತೀಯಾಭೂತ್ಕನ್ಯಾ ತಸ್ಯೈವ ರಾಘವ ॥ ೧೬ ॥

ಅವಳಲ್ಲಿ ಈ ಗಂಗೆ ಜನಿಸಿದಳು. ಇವಳು ಹಿಮವಂತನ ಜ್ಯೇಷ್ಠಪುತ್ರಿ. ರಾಮ! ಅವನ ಎರಡನೆ ಮಗಳು ಉಮೆ.

ಅಥ ಜ್ಯೇಷ್ಠಾಂ ಸುರಾಃ ಸರ್ವೇ ದೇವತಾರ್ಥಚಿಕೀರ್ಷಯಾ ।
ಶೈಲೇಂದ್ರಂ ವರಯಾಮಾಸುರ್ಗಂಗಾಂ ತ್ರಿಪಥಗಾಂ ನದೀಮ್ ॥ ೧೭

ಜ್ಯೇಷ್ಠ ಪುತ್ರಿಯಾದ ತ್ರಿಪಥಗಾ ನದಿಯಾದ ಗಂಗೆಯನ್ನು ಎಲ್ಲ ದೇವತೆಗಳೂ ದೇವಕಾರ್ಯ ಮಾಡುವ ಇಚ್ಛೆಯಿಂದ ಹಿಮವಂತನಲ್ಲಿ ಕೇಳಿ ಪಡೆದರು.

ದದೌ ಧರ್ಮೇಣ ಹಿಮವಾಂಸ್ತನಯಾಂ ಲೋಕಪಾವನೀಮ್ ।
ಸ್ವಚ್ಛಂದಪಥಗಾಂ ಗಂಗಾಂ ತ್ರೈಲೋಕ್ಯಹಿತಕಾಮ್ಯಯಾ ॥ ೧೮ ॥

ಹಿಮವಂತನು ಲೋಕಪಾವನೆಯಾದ ಸ್ವಚ್ಛಂದ ಮಾರ್ಗದಲ್ಲಿ ಹರಿಯುವ ಗಂಗೆ ಎಂಬ ಮಗಳನ್ನು ತ್ರೈಲೋಕ್ಯಹಿತ ಕಾಮನೆಯಿಂದ ಕನ್ಯಾದಾನ ವಿಧಿಯಿಂದ ದೇವತೆಗಳಿಗೆ ಕೊಟ್ಟನು.

ಪ್ರತಿಗೃಹ್ಯ ತತೋ ದೇವಾಸ್ತ್ರಿಲೋಕಹಿತಕಾರಿಣಃ ।
ಗಂಗಾಮಾದಾಯ ತೇऽಗಚ್ಛನ್ಕೃತಾರ್ಥೇನಾಂತರಾತ್ಮನಾ ॥ ೧೯ ॥

ಆಗ ತ್ರಿಲೋಕ ಹಿತಕಾರಿಗಳಾದ ದೇವತೆಗಳು ಕೃತಾರ್ಥವಾದ ಅಂತರಾತ್ಮ ಪೂರ್ವಕವಾಗಿ ಗಂಗೆಯನ್ನು ಸ್ವೀಕರಿಸಿ ಸ್ವರ್ಗಕ್ಕೆ ಕರೆದೊಯ್ದರು.

ಯಾ ಚಾನ್ಯಾ ಶೈಲದುಹಿತಾ ಕನ್ಯಾऽऽಸೀದ್ರಘುನಂದನ ।
ಉಗ್ರಂ ಸಾ ವ್ರತಮಾಸ್ಥಾಯ ತಪಸ್ತೇಪೇ ತಪೋಧನಾ ॥ ೨೦ ॥

ರಾಮ! ಇನ್ನೊಬ್ಬಳು ಪರ್ವತ ಪುತ್ರಿ ಪಾರ್ವತಿ ಎಂಬ ಕನ್ಯೆ ತಪೋಧನಳು. ಕಠಿನ ವ್ರತವನ್ನು ಕೈಗೊಂಡು ಉಗ್ರವಾದ ತಪಸ್ಸನ್ನು ಮಾಡಿದಳು.

ಉಗ್ರೇಣ ತಪಸಾ ಯುಕ್ತಾಂ ದದೌ ಶೈಲವರಃ ಸುತಾಮ್ ।
ರುದ್ರಾಯಾಪ್ರತಿರೂಪಾಯ ಉಮಾಂ ಲೋಕನಮಸ್ಕೃತಾಮ್ ॥ ೨೧ ॥

ಪರ್ವತರಾಜನು ಮಗಳಾದ, ಉಗ್ರ ತಪಸ್ಸಿನಿಂದ ಯುಕ್ತಳಾದ, ಲೋಕ ನಮಸ್ಕೃತಳಾದ ಉಮೆಯನ್ನು ಅಸದೃಶನಾದ ರುದ್ರದೇವನಿಗೆ ಕೊಟ್ಟನು.

ಏತೇ ತೇ ಶೈಲರಾಜಸ್ಯ ಸುತೇ ಲೋಕನಮಸ್ಕೃತೇ ।
ಗಂಗಾ ಚ ಸರಿತಾಂ ಶ್ರೇಷ್ಠಾ ಉಮಾ ದೇವೀ ಚ ರಾಘವ ॥ ೨೨ ॥

ಇವರಿಬ್ಬರು, ನದಿಗಳಲ್ಲಿ ಶ್ರೇಷ್ಠಳಾದ ಗಂಗೆ ಮತ್ತು ದೇವಿ ಉಮೆ, ಪರ್ವತರಾಜನ ಲೋಕ ನಮಸ್ಕೃತರಾದ ಪುತ್ರಿಯರು.

ಏತತ್ತೇ ಸರ್ವಮಾಖ್ಯಾತಂ ಯಥಾ ತ್ರಿಪಥಗಾ ನದೀ ।
ಖಂ ಗತಾ ಪ್ರಥಮಂ ತಾತ ಗತಿಂ ಗತಿಮತಾಂ ವರ ॥ ೨೩ ॥

ಸುಂದರಗತಿ ಉಳ್ಳವರಲ್ಲಿ ಶ್ರೇಷ್ಠನಾದ ಮಗು ಹೇ ರಾಮನೆ! ತ್ರಿಪಥಗಾ ನದಿ

ಗಂಗೆ ಹೇಗೆ ಮೊದಲಿಗೆ ಆಕಾಶದೇಶಕ್ಕೆ ಹೊರಟುಹೋದಳು ಎಂಬುದನ್ನು ಪೂರ್ತಿಯಾಗಿ ನಿನಗೆ ಹೇಳಿದ್ದೇನೆ.

ಸೈಷಾ ಸುರನದೀ ರಮ್ಯಾ ಶೈಲೇಂದ್ರಸ್ಯ ಸುತಾ ತದಾ ।
ಸುರಲೋಕಂ ಸಮಾರೂಢಾ ವಿಪಾಪಾ ಜಲವಾಹಿನೀ ॥ ೨೪ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಪಂಚತ್ರಿಂಶಃ ಸರ್ಗಃ ॥ ೩೫ ॥

ಪರ್ವತರಾಜನ ಪುತ್ರಿಯಾದ ರಮ್ಯಳಾದ ಪಾಪರಹಿತಳಾದ ಈ ದೇವನದಿಯು ಸುರಲೋಕವನ್ನು ಸೇರಿ ನೀರಾಗಿ ಹರಿಯುವ ಸ್ವಭಾವದವಳಾದಳು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಮೂವತ್ತೈದನೆ ಸರ್ಗ ಮುಗಿಯಿತು.

ಷಟ್‌ತ್ರಿಂಶಃ ಸರ್ಗಃ

ಉಕ್ತವಾಕ್ಯೇ ಮುನೌ ತಸ್ಮಿನ್ನುಭೌ ರಾಘವಲಕ್ಷ್ಮಣೌ ।
ಅಭಿನಂದ್ಯ ಕಥಾಂ ವೀರಾವೂಚತುರ್ಮುನಿಪುಂಗವಮ್ ॥ ೧ ॥

ವಿಶ್ವಾಮಿತ್ರ ಮುನಿ ಗಂಗೆ ಗೌರಿ ಎಂಬ ಈ ಇಬ್ಬರು ಹಿಮವಂತನ ಪುತ್ರಿಯರ ಬಗ್ಗೆ ಕಥೆ ಹೇಳಿದಾಗ, ಮುನಿ ಹೇಳಿದ ಕಥೆಯನ್ನು ರಾಮಲಕ್ಷ್ಮಣರಿಬ್ಬರೂ ಅಭಿನಂದಿಸಿ, ಪುನಃ ಕೇಳಿದರು.

ಧರ್ಮಯುಕ್ತಮಿದಂ ಬ್ರಹ್ಮನ್ಕಥಿತಂ ಪರಮಂ ತ್ವಯಾ ।
ದುಹಿತುಃ ಶೈಲರಾಜಸ್ಯ ಜ್ಯೇಷ್ಠಾಯಾ ವಕ್ತುಮರ್ಹಸಿ ॥ ೨ ॥

ಪುಣ್ಯಕರವಾದ ಕಥೆ, ಚೆನ್ನಾಗಿ ಹೇಳಿರುವೆ, ಮುನಿಯೆ! ಹೀಗೇ ಪರ್ವತರಾಜನ ಜ್ಯೇಷ್ಠಪುತ್ರಿ ಗಂಗೆಯ ಬಗ್ಗೆ ಇನ್ನೂ ಹೇಳು.

ವಿಸ್ತರಂ ವಿಸ್ತರಜ್ಞೋಽಸಿ ದಿವ್ಯಮಾನುಷಸಂಭವಮ್ ।
ತ್ರೀನ್ಪಥೋ ಹೇತುನಾ ಕೇನ ಪ್ಲಾವಯೇಲ್ಲೋಕಪಾವನೀ ॥ ೩ ॥

ಮುನಿಯೆ! ದಿವ್ಯ ಹಾಗೂ ಮಾನುಷ ಲೋಕಗಳೆರಡರಲ್ಲಿಯೂ ಸಂಭವಿಸುವ ಕಥಾ ವಿಸ್ತಾರವನ್ನು ಬಲ್ಲವನು ನೀನು ಲೋಕಪಾವನೆ ಗಂಗೆ ಯಾವ ಕಾರಣದಿಂದ 'ತ್ರಿಪಥ' ಮೂರು ಮಾರ್ಗಗಳನ್ನು 'ಗ'ವ್ಯಾಪಿಸಿದಳು ಎನ್ನುವ ವಿಸ್ತಾರವನ್ನೂ ನಮಗೆ ಹೇಳು.

ಕಥಂ ಗಂಗಾ ತ್ರಿಪಥಗಾ ವಿಶ್ರುತಾ ಸರಿದುತ್ತಮಾ ।
ತ್ರಿಷು ಲೋಕೇಷು ಧರ್ಮಜ್ಞ ಕರ್ಮಭಿಃ ಕೈಃ ಸಮನ್ವಿತಾ ॥ ೪ ॥

ನದಿಗಳಲ್ಲಿ ಉತ್ತಮವಾದ ಗಂಗಾನದಿ 'ತ್ರಿಪಥಗಾ' ಎಂದು ಹೇಗೆ ಪ್ರಸಿದ್ಧವಾಯಿತು? ಧರ್ಮಜ್ಞನೆ, ಮೂಲೋಕಗಳಲ್ಲಿ ಯಾವ ವಿಶೇಷ ಕಾರ್ಯಗಳನ್ನು ಅದು ಮಾಡಿತು?

ತಥಾ ಬ್ರುವತಿ ಕಾಕುತ್ಸ್ಥೇ ವಿಶ್ವಾಮಿತ್ರಸ್ತಪೋಧನಃ ।
ನಿಖಿಲೇನ ಕಥಾಂ ಸರ್ವಾಮೃಷಿಮಧ್ಯೇ ನ್ಯವೇದಯತ್ ॥ ೫ ॥

ರಾಮನು ಹೀಗೆ ಹೇಳಿದಾಗ ತಪೋಧನನಾದ ವಿಶ್ವಾಮಿತ್ರಮುನಿ ಪೂರ್ತಿಯಾಗಿ ಎಲ್ಲ ಕಥೆಯನ್ನೂ ಋಷಿಗಳ ನಡುವೆ ಹೇಳಿದನು.

ಪುರಾ ರಾಮ ಕೃತೋದ್ವಾಹೋ ನೀಲಕಂಠೋ ಮಹಾತಪಾಃ ।
ದೃಷ್ಟ್ವಾ ಚ ಸ್ಪೃಹಯಾ ದೇವೀಂ ಮೈಥುನಾಯೋಪಚಕ್ರಮೇ ॥ ೬ ॥

ಹಿಂದೆ, ರಾಮ! ಮಹಾ ತಪನಾದ ನೀಲಕಂಠನು ಪಾರ್ವತಿಯನ್ನು ಮದುವೆ-ಯಾಗಿ ರಮಿಸುವಾಸೆಯಿಂದ ನೋಡಿ ರತಿಕ್ರೀಡೆಗೆ ಆರಂಭಿಸಿದ.

ಶಿತಿಕಂಠಸ್ಯ ದೇವಸ್ಯ ದಿವ್ಯಂ ವರ್ಷಶತಂ ಗತಮ್ ।
ತಸ್ಯ ಸಂಕ್ರೀಡಮಾನಸ್ಯ ಮಹಾದೇವಸ್ಯ ಧೀಮತಃ ॥
ನ ಚಾಪಿ ತನಯೋ ರಾಮ ತಸ್ಯಾಮಾಸೀತ್ಪರಂತಪ ॥ ೭ ॥

ಧೀಮಂತನಾದ ಮಹಾದೇವನಾದ ಶಿತಿಕಂಠದೇವನು ರತಿಕ್ರೀಡೆಯಾಡುತ್ತಿದ್ದಂತೆ ದೇವಮಾನದ ಬಹು ವರ್ಷಗಳೇ ಕಳೆದು ಹೋದುವು. ಹೇ ಶತ್ರುನಾಶಕ ರಾಮ! ನೀಲಕಂಠನಿಗೆ ಪುತ್ರನು ಜನಿಸಲಿಲ್ಲ!

ತತೋ ದೇವಾಃ ಸಮುದ್ವಿಗ್ನಾಃ ಪಿತಾಮಹಪುರೋಗಮಾಃ ।
ಯದಿಹೋತ್ಪದ್ಯತೇ ಭೂತಂ ಕಸ್ತತ್ಧಾರಯಿಷ್ಯತೇ ॥
ಅಭಿಗಮ್ಯ ಸುರಾಃ ಸರ್ವೇ ಪ್ರಣಿಪತ್ಯೇದಮಬ್ರುವನ್ ॥ ೮ ॥

ಬ್ರಹ್ಮಾದಿ ದೇವತೆಗಳು ಉದ್ವಿಗ್ನರಾದರು 'ಹರನ ವೀರ್ಯವು ಪುತ್ರನಾಗಿ ಭೂಮಿಯಲ್ಲಿ ಜನಿಸಲೇ ಬೇಕು. ಆದರೆ ಪೂರ್ತಿಯಾಗಿ ಭೂಮಿಯಲ್ಲಿ ಅದು ಸುರಿದರೆ ಅದನ್ನು ಯಾರು ಧರಿಸಬಲ್ಲರು?' ಎಂದು. ಎಲ್ಲ ದೇವತೆಗಳೂ ಹರನ ಬಳಿಗೆ ಹೋಗಿ ಹೇಳಿದರು.

ದೇವದೇವ ಮಹಾದೇವ ಲೋಕಸ್ಯಾಸ್ಯ ಹಿತೇ ರತ ।
ಸುರಾಣಾಂ ಪ್ರಣಿಪಾತೇನ ಪ್ರಸಾದಂ ಕರ್ತುಮರ್ಹಸಿ ॥ ೯ ॥

ಈ ಲೋಕದ ಹಿತದಲ್ಲಿ ನಿರತನಾದ ದೇವದೇವ ಮಹಾ ದೇವನೆ! ನಾವು ದೇವತೆಗಳು ನಮಿಸುತ್ತಿದ್ದೇವೆ. ಪ್ರಸನ್ನನಾಗು.

ನ ಲೋಕಾ ಧಾರಯಿಷ್ಯಂತಿ ತವ ತೇಜಃ ಸುರೋತ್ತಮ ।
ಬ್ರಾಹ್ಮೇಣ ತಪಸಾ ಯುಕ್ತೋ ದೇವ್ಯಾ ಸಹ ತಪಶ್ಚರ ॥ ೧೦ ॥

ನಿನ್ನ ವೀರ್ಯವನ್ನು ಪೂರ್ತಿಯಾಗಿ ಲೋಕದಲ್ಲಿ ಯಾರೂ ಧರಿಸಲು ಶಕ್ತರಾಗಲಾರರು. ಸುರಶ್ರೇಷ್ಠನೇ! ಪಾರ್ವತಿಯಲ್ಲಿ ವೀರ್ಯಾಧಾನ ಮಾಡದೇ

ಪರಬ್ರಹ್ಮನ ಪ್ರೀತಿಗಾಗಿ ತಪಸ್ಸು ಮಾಡಲು ದೇವಿ ಪಾರ್ವತಿ- ಯೊಂದಿಗೆ ತಪಸ್ಸನಾರಂಭಿಸು, ರತಿಕ್ರೀಡೆಯನ್ನು ನಿಲ್ಲಿಸು.

ತ್ರೈಲೋಕ್ಯಹಿತಕಾಮಾರ್ಥಂ ತೇಜಸ್ತೇಜಸಿ ಧಾರಯ ।
ರಕ್ಷ ಸರ್ವಾನಿಮಾಲ್ಲೋಕಾನ್ನಾಲೋಕಂ ಕರ್ತುಮರ್ಹಸಿ ॥ ೧೧ ॥

ಮೂಲೋಕದ ಹಿತಕ್ಕಾಗಿ ನಿನ್ನ ವೀರ್ಯವನ್ನು ನೀನೇ ನಿನ್ನೊಳಗೇ ಧರಿಸು. ಆ ಮೂಲಕ ಈ ಲೋಕಗಳನ್ನು ಕಾಪಾಡು. ಲೋಕನಾಶವನ್ನು ಮಾಡಬೇಡ.

ದೇವತಾನಾಂ ವಚಃ ಶ್ರುತ್ವಾ ಸರ್ವಲೋಕಮಹೇಶ್ವರಃ ।
ಬಾಢಮಿತ್ಯಬ್ರವೀತ್ಸರ್ವಾನ್ಪುನಶ್ಚೇದಮುವಾಚ ಹ ॥ ೧೨ ॥

ದೇವತೆಗಳ ಮಾತನ್ನು ಕೇಳಿ ಸರ್ವಲೋಕಕ್ಕೆ ಮಹಾ ಅಧಿಪತಿಯಾದ ಹರನು ಎಲ್ಲರಿಗೂ 'ಹಾಗೇ ಆಗಲಿ' ಎಂದು ಸಂತೈಸಿದನು. ಪುನಃ ಹೇಳಿದನು.

ಧಾರಯಿಷ್ಯಾಮ್ಯಹಂ ತೇಜಸ್ತೇಜಸ್ಯೇವ ಸಹೋಮಯಾ ।
ತ್ರಿದಶಾಃ ಪೃಥಿವೀ ಚೈವ ನಿರ್ವಾಣಮಧಿಗಚ್ಛತು ॥ ೧೩ ॥

'ನಾನು ವೀರ್ಯವನ್ನು ಉಮೆಯೊಂದಿಗೆ ನನ್ನಲ್ಲೇ ಧರಿಸುವೆನು. ದೇವತೆಗಳೇ, ಲೋಕವು ಸಮಾಧಾನ ಹೊಂದಲಿ.

ಯದಿದಂ ಕ್ಷುಭಿತಂ ಸ್ಥಾನಾನ್ಮಮ ತೇಜೋ ಹ್ಯನುತ್ತಮಮ್ ।
ಧಾರಯಿಷ್ಯತಿ ಕಸ್ತನ್ಮೇ ಬ್ರುವಂತು ಸುರಸತ್ತಮಾಃ ॥ ೧೪ ॥

'ಆದರೆ ಉತ್ತಮವಾದ ನನ್ನ ವೀರ್ಯದ ಒಂದಂಶ ಸ್ವಸ್ಥಾನದಿಂದ ಚಲಿಸಿ-ಬಿಟ್ಟಿದೆ. ಅದನ್ನಾದರೂ ಯಾರು ಧರಿಸಬಲ್ಲರು? ನನಗೆ ಹೇಳಿರಿ, ದೇವಶ್ರೇಷ್ಠರೆ!

ಏವಮುಕ್ತಾಸ್ತತೋ ದೇವಾಃ ಪ್ರತ್ಯೂಚುರ್ವೃಷಭಧ್ವಜಮ್ ।
ಯತ್ತೇಜಃ ಕ್ಷುಭಿತಂ ಹ್ಯೇತತ್ತದ್ಧರಾ ಧಾರಯಿಷ್ಯತಿ ॥ ೧೫ ॥

ಹರನು ಹೀಗೆ ಹೇಳಿದಾಗ ದೇವತೆಗಳು ಅವನಿಗೆ ಹೇಳಿದರು, 'ಚಲಿಸಿರುವ ವೀರ್ಯವನ್ನು ಧರೆ ಧರಿಸುವಳು' ಎಂದು.

ಏವಮುಕ್ತಃ ಸುರಪತಿಃ ಪ್ರಮುಮೋಚ ಮಹೀತಲೇ ।
ತೇಜಸಾ ಪೃಥಿವೀ ಯೇನ ವ್ಯಾಪ್ತಾ ಸಗಿರಿಕಾನನಾ ॥ ೧೬ ॥

ಹೀಗೆ ಹೇಳಿದಾಗ ದೇವೇಶನು ಸುಡುವ ವೀರ್ಯವನ್ನು ಧರೆಯಲ್ಲಿ ಹಾಕಿದ. ಆಗ ಬೆಟ್ಟ ಕಾಡುಗಳೊಂದಿಗೆ ಇಡೀ ಧರೆ ಉರಿಯುವಂತೆ ವೀರ್ಯದಿಂದ ಮುಚ್ಚಿಹೋಯಿತು. ಅದನ್ನು ಧರಿಸಲು ಧರೆ ಅಶಕ್ತವಾಯಿತು.

ತತೋ ದೇವಾಃ ಪುನರಿದಮೂಚುಶ್ಚಾಥ ಹುತಾಶನಮ್ ।
ಪ್ರವಿಶ ತ್ವಂ ಮಹಾತೇಜೋ ರೌದ್ರಂ ವಾಯುಸಮನ್ವಿತಃ ॥ ೧೭ ॥

ಆಗ ದೇವತೆಗಳು ಅಗ್ನಿಗೆ ಹೇಳಿದರು, ವಾಯುವಿನ ಸಹಾಯದಿಂದ ಸುಡುವ ಅಗ್ನಿ ನೀನು ಸುಡುವ ರುದ್ರನ ಮಹಾವೀರ್ಯವನ್ನು ನಿನ್ನೊಳಗೇ ಜೀರ್ಣಿಸಿಕೊಳ್ಳು ಎಂದು.

ತದಗ್ನಿನಾ ಪುನರ್ವ್ಯಾಪ್ತಂ ಸಂಜಾತಃಶ್ವೇತಪರ್ವತಃ ।
ದಿವ್ಯಂ ಶರವಣಂ ಚೈವ ಪಾವಕಾದಿತ್ಯಸನ್ನಿಭಮ್ ॥
ಯತ್ರ ಜಾತೋ ಮಹಾತೇಜಾಃ ಕಾರ್ತಿಕೇಯೋಽಗ್ನಿಸಂಭವಃ ॥ ೧೮ ॥

ಆಗ ಹರನ ಆ ವೀರ್ಯವು ಅಗ್ನಿಯಿಂದ ಆವೃತವಾಗಿ ಭೂಮಿಯಲ್ಲಿ, ಅಗ್ನಿ ಸೂರ್ಯರಂತೆ ಹೊಳೆಯುವ ಬಿಳಿಬಣ್ಣದ ಪರ್ವತವಾಯಿತು. ದಿವ್ಯವಾದ ಶರವಣ ವಾಯಿತು. ಅಗ್ನಿಸಂಭವನಾದ ಮಹಾತೇಜ ಕಾರ್ತಿಕೇಯನ ಜನನವಾಯಿತು.

ಅಥೋಮಾಂ ಚ ಶಿವಂ ಚೈವ ದೇವಾಃ ಸರ್ಷಿಗಣಾಸ್ತದಾ ।
ಪೂಜಯಾಮಾಸುರತ್ಯರ್ಥಂ ಸುಪ್ರೀತಮನಸಸ್ತತಃ ॥ ೧೯ ॥

ಆಗ ಕಾರ್ತಿಕೇಯನಿಗೆ ಹೀಗೆ ಜನ್ಮವಿತ್ತ ಶಿವ ಪಾರ್ವತಿಯರನ್ನು ದೇವತೆಗಳೂ ಋಷಿಗಳೂ ಎಲ್ಲರೂ ಬಹಳ ಸಂತುಷ್ಟವಾದ ಮನಸಿನಂದ ಆರಾಧಿಸಿದರು.

ಅಥ ಶೈಲಸುತಾ ರಾಮ ತ್ರಿದಶಾನಿದಮಬ್ರವೀತ್ ।
ಅಪ್ರಿಯಸ್ಯ ಕೃತಸ್ಯಾದ್ಯ ಫಲಂ ಪ್ರಾಪ್ಸ್ಯಥ ಮೇ ಸುರಾಃ ॥ ೨೦ ॥

ರಾಮ! ಪಾರ್ವತಿ ದೇವತೆಗಳಿಗೆ ಹೇಳಿದಳು– 'ದೇವತೆಗಳೆ, ನನಗೆ ಅಪ್ರಿಯವಾದ ರತಿವಿಘ್ನವನ್ನು ಮಾಡಿದ್ದಕ್ಕೆ ಫಲವನ್ನೂ ನೀನು ಪಡೆಯಬೇಕು.

ಇತ್ಯುಕ್ತ್ವಾ ಸಲಿಲಂ ಗೃಹ್ಯ ಪಾರ್ವತೀ ಭಾಸ್ಕರಪ್ರಭಾ ।
ಸಮನ್ಯುರಶಪತ್ಸರ್ವಾನ್ಕ್ರೋಧಸಂರಕ್ತಲೋಚನಾ ॥ ೨೧ ॥

ಹೀಗೆ ಹೇಳಿ ಸೂರ್ಯನಂತೆ ಹೊಳೆಯುವ ಪಾರ್ವತಿ ನೀರನ್ನೆತ್ತಿ ಕೊಂಡು ಕೋಪದಿಂದ, ಕೆಂಗಣ್ಣಿಂದ ನೋಡುತ್ತ ಶಾಪ ನೀಡಿದಳು.

ಯಸ್ಮಾನ್ನಿವಾರಿತಾ ಚೈವ ಸಂಗತಿಃ ಪುತ್ರಕಾಮ್ಯಯಾ ।
ಅಪತ್ಯಂ ಸ್ವೇಷು ದಾರೇಷು ತಸ್ಮಾನ್ನೋತ್ಪಾದಯಿಷ್ಯಥ ॥ ೨೨ ॥

'ನನ್ನ ಉದರದಲ್ಲಿ ಪುತ್ರನನ್ನು ಬಯಸಿ ನಾನು ಮಾಡುತ್ತಿದ್ದ ರತಿಕ್ರೀಡೆಯನ್ನು ನೀವು ತಡೆದುದರಿಂದ ನಿಮಗೆ ನಿಮ್ಮ ಪತ್ನಿಯರಲ್ಲಿ ಮಕ್ಕಳಾಗದೇ ಹೋಗಲಿ' ಎಂದು.

ಅದ್ಯಪ್ರಭೃತಿ ಯುಷ್ಮಾಕಮಪ್ರಜಾಃ ಸಂತು ಪತ್ನಯಃ ।
ಏವಮುಕ್ತ್ವಾ ಸುರಾನ್ಸರ್ವಾನ್ಶಶಾಪ ಪೃಥಿವೀಮಪಿ ॥ ೨೩ ॥

'ಇಂದಿನಿಂದ ನನ್ನಂತೆ ನಿಮ್ಮ ಪತ್ನಿಯರು ಕೂಡ ಅಪುತ್ರವತಿಯರಾಗಲಿ' ಹೀಗೆ ಎಲ್ಲ ದೇವತೆಗಳಿಗೂ ಶಾಪ ನೀಡಿ ಪೃಥಿವಿಗೂ ಶಪಿಸಿದಳು ಪಾರ್ವತಿ.

ಅವನೇ ನೈಕರೂಪಾ ತ್ವಂ ಬಹುಭಾರ್ಯಾ ಭವಿಷ್ಯಸಿ ।
ನ ಚ ಪುತ್ರಕೃತಾಂ ಪ್ರೀತಿಂ ಮತ್ಕೋಧಕಲುಷೀಕೃತಾ ॥
ಪ್ರಾಪ್ಸ್ಯಸಿ ತ್ವಂ ಸುದುರ್ಮೇಧೇ ಮಮ ಪುತ್ರಮನಿಚ್ಛತೀ ॥ ೨೪ ॥

'ನನ್ನ ಪತಿಯ ವೀರ್ಯವನ್ನು ಧರಿಸಿ ವ್ಯಭಿಚಾರಿಣಿಯಂತಾದ ನೀನು, ಹೇ ಪೃಥಿವಿ! ಅನೇಕ ರೂಪಳಾಗಿ ಅನೇಕ ರಾಜರಿಗೆ ಪತ್ನಿಯಾಗುವಿ. ನನ್ನ ಕೋಪದಿಂದ ಕಲುಷಿತಳಾದ ನೀನು ಪುತ್ರ ಸುಖದಿಂದ ವಂಚಿತಳಾಗುವಿ. ದುರ್ಬುದ್ಧಿಯವಳೆ! ನೀನು ನನಗೆ ಪುತ್ರಸುಖ ಸಿಗದಂತೆ ಮಾಡಿರುವಿ.

ತಾನ್ಸರ್ವಾನ್ ವ್ರೀಡಿತಾನ್ ದೃಷ್ಟ್ವಾ ಸುರಾನ್ಸುರಪತಿಸ್ತದಾ ।
ಗಮನಾಯೋಪಚಕ್ರಾಮ ದಿಶಂ ವರುಣಪಾಲಿತಾಮ್ ॥ ೨೫ ॥

ಹೀಗೆ ಎಲ್ಲ ದೇವತೆಗಳೂ ತಾವು ಮಾಡಿದ ಅಪರಾಧಕ್ಕೆ ನಾಚಿದ್ದನ್ನು ಕಂಡು ಬೇಸರದಿಂದ ಶಿವನೂ ಅಲ್ಲಿಂದ ಹೊರಟು ಪಶ್ಚಿಮದಿಕ್ಕಿಗೆ ನಡೆದ.

ಸ ಗತ್ವಾ ತಪ ಆತಿಷ್ಠತ್ತಾಪ್ಶ್ಚೈ ತಸ್ಯೋತ್ತರೇ ಗಿರೇಃ ।
ಹಿಮವತ್ಪ್ರಭವೇ ಶೃಂಗೇ ಸಹ ದೇವ್ಯಾ ಮಹೇಶ್ವರಃ ॥ ೨೬ ॥

ಹಿಮವತ್ ಪರ್ವತದ ಉತ್ತರ ಪಾರ್ಶ್ವದ ಒಂದು ಶಿಖರದಲ್ಲಿ ದೇವಿಯೊಂದಿಗೆ ಮಹಾದೇವ ದೇವಿಯೊಂದಿಗೆ ತಪಸ್ಸಿಗೆ ಕುಳಿತ.

ಏಷ ತೇ ವಿಸ್ತರೋ ರಾಮ ಶೈಲಪುತ್ರ್ಯಾ ನಿವೇದಿತಃ ।
ಗಂಗಾಯಾಃ ಪ್ರಭವಂ ಚೈವ ಶೃಣು ಮೇ ಸಹಲಕ್ಷ್ಮಣಃ ॥ ೨೭ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಪತ್ರಿಂಶಃ ಸರ್ಗಃ ॥ ೩೬ ॥

ರಾಮ! ಇದೀಗ ಮೊದಲಿಗೆ ಪಾರ್ವತಿದೇವಿಯ ಕಥಾವಿಸ್ತಾರವನ್ನು ನಿನಗೆ ಹೇಳಿದ್ದೇನೆ. ಇನ್ನು ಮುಂದೆ ನೀನು ಕೇಳಿದ ಗಂಗಾದೇವಿಯ ಪ್ರಭಾವವನ್ನು ಹೇಳುತ್ತೇನೆ ಕೇಳು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಮೂವತ್ತಾರನೆ ಸರ್ಗ ಮುಗಿಯಿತು.

ಸಪ್ತತ್ರಿಂಶಃ ಸರ್ಗಃ

ತಪ್ಯಮಾನೇ ತಪೋ ದೇವೇ ದೇವಾಃ ಸರ್ಷಿಗಣಾಃ ಪುರಾ ।
ಸೇನಾಪತಿಮಭೀಪ್ಸಂತಃ ಪಿತಾಮಹಮುಪಾಗಮನ್ ॥ ೧ ॥

ಹಿಂದೆ ಸೇನಾಪತಿಯಾಗಿದ್ದ ಮಹಾದೇವನು ತಪೋನಿರತನಾದಾಗ ದೇವತೆಗಳೂ ಋಷಿಗಳೂ ಸೇನಾಪತಿಯೊಬ್ಬ ತಮಗೆ ಬೇಕೆಂದು ಬಯಸಿ ಬ್ರಹ್ಮದೇವರ ಬಳಿಗೆ ಬಂದರು.

ತತೋऽಬ್ರುವನ್ಸುರಾಃ ಸರ್ವೇ ಭಗವಂತಂ ಪಿತಾಮಹಮ್ ।
ಪ್ರಣಿಪತ್ಯ ಸುರಾಃ ಸರ್ವೇ ಸೇಂದ್ರಾಃ ಸಾಗ್ನಿಪುರೋಗಮಾಃ ॥ ೨ ॥

ಆಗ ಎಲ್ಲ ದೇವತೆಗಳೂ ಭಗವಾನ್ ಬ್ರಹ್ಮದೇವನಿಗೆ ನಮಿಸಿ ಇಂದ್ರನಿಂದಲೂ ಅಗ್ನಿಮುಖರಾದ ದೇವತೆಗಳಿಂದಲೂ ಕೂಡಿದ ದೇವತೆಗಳು ನಮಿಸಿ ಹೇಳಿದರು.

ಯೋ ನಃ ಸೇನಾಪತಿರ್ದೇವ ದತ್ತೋ ಭಗವತಾ ಪುರಾ ।
ತಪಃ ಪರಮಮಾಸ್ಥಾಯ ತಪ್ಯತೇ ಸ್ಮ ಸಹೋಮಯಾ ॥ ೩ ॥

ಪೂಜ್ಯನಾದ ನೀನು ಹಿಂದೆ ನಮಗೆ ಸೇನಾಪತಿಯಾಗಿ ನೀಡಿರುವ ಮಹಾದೇವನು ಈಗ ಉಮೆಯೊಂದಿಗೆ ದೊಡ್ಡ ತಪಸಿನಲ್ಲಿ ನಿರತನಾಗಿರುವನು.

ಯದತ್ರಾನಂತರಂ ಕಾರ್ಯಂ ಲೋಕಾನಾಂ ಹಿತಕಾಮ್ಯಯಾ ।
ಸಂವಿಧತ್ಸ್ವ ವಿಧಾನಜ್ಞ ತ್ವಂ ಹಿ ನಃ ಪರಮಾ ಗತಿಃ ॥ ೪ ॥

ಲೋಕದ ಹಿತ ಕಾಮನೆಯಿಂದ ಈಗ ನಾವು ಅವಶ್ಯ ಮಾಡಬೇಕಾಗಿರುವ ಕಾರ್ಯವನ್ನು ಆಜ್ಞಾಪಿಸು. ಕಾರ್ಯವನ್ನು ವಿಧಿಸಲು ಬಲ್ಲವನೆ! ದೇವ! ನೀನೆ ನಮಗೆ ಉತ್ತಮ ಆಶ್ರಯದಾತ.

ದೇವತಾನಾಂ ವಚಃ ಶ್ರುತ್ವಾ ಸರ್ವಲೋಕಪಿತಾಮಹಃ ।
ಸಾಂತ್ವಯನ್ಮಧುರೈರ್ವಾಕ್ಯೈಸ್ತ್ರಿದಶಾನಿದಮಬ್ರವೀತ್ ॥ ೫ ॥

ದೇವತೆಗಳ ಮಾತನ್ನಾಲಿಸಿ ಸರ್ವಲೋಕಕ್ಕೆ ಪಿತಾಮಹನಾದ ಬ್ರಹ್ಮದೇವನು ದೇವತೆಗಳನ್ನು ಸವಿ ಮಾತುಗಳಿಂದ ಸಂತೈಸುತ್ತ ನುಡಿದನು.

ಶೈಲಪುತ್ರ್ಯಾ ಯದುಕ್ತಂ ತನ್ನ ಪ್ರಜಾಃ ಸಂತು ಪತ್ನಿಷು ।
ತಸ್ಯಾ ವಚನಮಕ್ಲಿಷ್ಟಂ ಸತ್ಯಮೇತನ್ನ ಸಂಶಯಃ ॥ ೬ ॥

ಪಾರ್ವತಿ ನಿಮ್ಮನ್ನು ಶಪಿಸಿದಳು. ನಿಮಗೆ ಪತ್ನಿಯರಲ್ಲಿ ಮಕ್ಕಳಾಗದಿರಲಿ ಎಂದು. ಅವಳ ಮಾತು ಎಂದೂ ಸುಳ್ಳಾಗದು. ಇದು ಸತ್ಯ . ಇದರಲ್ಲಿ ಸಂಶಯವಿಲ್ಲ.

ಇಯಮಾಕಾಶಗಾ ಗಂಗಾ ಯಸ್ಯಾಂ ಪುತ್ರಂ ಹುತಾಶನಃ ।
ಜನಯಿಷ್ಯತಿ ದೇವಾನಾಂ ಸೇನಾಪತಿಮರಿಂದಮಮ್ ॥ ೭ ॥

ಇವಳು ಆಕಾಶಗಂಗೆ, ಇವಳಲ್ಲಿ ಅಗ್ನಿದೇವನು ಶತ್ರುನಾಶಕನಾದ ದೇವಸೇನಾಪತಿಯೊಬ್ಬನನ್ನು ಹುಟ್ಟಿಸುವನು.

ಜ್ಯೇಷ್ಠಾ ಶೈಲೇಂದ್ರದುಹಿತಾ ಮಾನಯಿಷ್ಯತಿ ತತ್ಸುತಮ್ ।
ಉಮಾಯಾಸ್ತದ್ಬಹುಮತಂ ಭವಿಷ್ಯತಿ ನ ಸಂಶಯಃ ॥ ೮ ॥

ಜ್ಯೇಷ್ಠಳಾದ ಪರ್ವತರಾಜಕುಮಾರಿ ಗಂಗೆ ಅವನನ್ನು ತನ್ನ ಪುತ್ರನೆಂದು ಒಪ್ಪಿ-ಕೊಳ್ಳುತ್ತಾಳೆ. ತಂಗಿ ಉಮೆಗೂ ಅದು ಸಮ್ಮತವಾಗುವುದು. ಇದರಲ್ಲಿ ಸಂಶಯವಿಲ್ಲ.

ತಚ್ಛ್ರುತ್ವಾ ವಚನಂ ತಸ್ಯ ಕೃತಾರ್ಥಾ ರಘುನಂದನ ।
ಪ್ರಣಿಪತ್ಯ ಸುರಾಃ ಸರ್ವೇ ಪಿತಾಮಹಮಪೂಜಯನ್ ॥ ೯ ॥

ರಾಮ, ಬ್ರಹ್ಮನ ಈ ಮಾತನ್ನು ಕೇಳಿ ಎಲ್ಲ ದೇವತೆಗಳೂ ಕೃತಾರ್ಥರಾದರು. ಎಲ್ಲ ದೇವತೆಗಳೂ ಪಿತಾಮಹನನ್ನು ನಮಿಸಿ ಸತ್ಕರಿಸಿದರು.

ತೇ ಗತ್ವಾ ಪರ್ವತಂ ರಾಮ ಕೈಲಾಸಂ ಧಾತುಮಂಡಿತಮ್ ।
ಅಗ್ನಿಂ ನಿಯೋಜಯಾಮಾಸುಃ ಪುತ್ರಾರ್ಥಂ ಸರ್ವದೇವತಾಃ ॥ ೧೦ ॥

ಎಲ್ಲ ದೇವತೆಗಳು ಧಾತುಗಳಿಂದ ಅಲಂಕೃತವಾದ ಕೈಲಾಸ ಪರ್ವತಕ್ಕೆ ಹೋಗಿ, ಪುತ್ರನನ್ನು ಹುಟ್ಟಿಸಲು ಅಗ್ನಿಯನ್ನು ಕೇಳಿಕೊಂಡರು.

ದೇವಕಾರ್ಯಮಿದಂ ದೇವ ಸಂವಿಧತ್ಸ್ವ ಹುತಾಶನ ।
ಶೈಲಪುತ್ರ್ಯಾಂ ಮಹಾತೇಜೋ ಗಂಗಾಯಾಂ ತೇಜ ಉತ್ಸೃಜ॥ ೧೧ ॥

'ಅಗ್ನಿದೇವ, ಇದು ದೇವತೆಗಳಿಗೆ ಇಷ್ಟವಾದ ಕಾರ್ಯ. ನಡೆಸಿಕೊಡು. ಮಹಾತೇಜನೆ, ಶೈಲಪುತ್ರಿಯಾದ ಗಂಗೆಯಲ್ಲಿ ನಿನ್ನಲ್ಲಿರುವ ಶಿವನ ತೇಜಸ್ಸನ್ನು ಸುರಿಸು,' ಎಂದು.

ದೇವತಾನಾಂ ಪ್ರತಿಜ್ಞಾಯ ಗಂಗಾಮಭ್ಯೇತ್ಯ ಪಾವಕಃ ।
ಗರ್ಭಂ ಧಾರಯ ವೈ ದೇವಿ ದೇವತಾನಾಮಿದಂ ಪ್ರಿಯಮ್ ॥ ೧೨ ॥

ಹಾಗೇ ಮಾಡುವೆನೆಂದು ದೇವತೆಗಳಿಗೆ ಮಾತುಕೊಟ್ಟು ಅಗ್ನಿ ಗಂಗೆಯ ಬಳಿಗೆ ಹೋಗಿ 'ದೇವಿ, ಗರ್ಭವನ್ನು ಧರಿಸು ಇದು ದೇವತೆಗಳಿಗೆ ಇಷ್ಟವಾದ ಕಾರ್ಯ' ಎಂದನು.

ತಸ್ಯ ತದ್ವಚನಂ ಶ್ರುತ್ವಾ ದಿವ್ಯಂ ರೂಪಮಧಾರಯತ್ ।
ದೃಷ್ಟ್ವಾ ತನ್ಮಹಿಮಾನಂ ಸ ಸಮಂತಾದವಕೀರ್ಯತ ॥ ೧೩ ॥

ಅಗ್ನಿಯ ಮಾತನ್ನು ಕೇಳಿ ಗಂಗೆ ದಿವ್ಯಸುಂದರರೂಪ ಧರಿಸಿದಳು. ಅವಳ ಆ ಸುಂದರ ರೂಪವನ್ನು ಕಂಡು ತನ್ನ ಎಲ್ಲ ನಾಡಿಗಳಿಂದಲೂ ಶ್ವೇತಪರ್ವತ ರೂಪದಿಂದಿದ್ದ ತನ್ನಿಂದ ಆವೃತವಾಗಿದ್ದ ಶಿವನ ರೇತಸ್ಸನ್ನು ಹೊರಗೆ ಸುರಿಸಿದ.

ಸಮಂತತಸ್ತದಾ ದೇವೀಮಭ್ಯಷಿಂಚತ ಪಾವಕಃ ।
ಸರ್ವಸ್ರೋತಾಂಸಿ ಪೂರ್ಣಾನಿ ಗಂಗಾಯಾ ರಘುನಂದನ ॥ ೧೪ ॥

ರಾಮ! ಅಗ್ನಿ ಗಂಗೆಯ ಎಲ್ಲ ನಾಡಿಗಳಿಗೂ ರೇತಸ್ಸಿನಿಂದ ಅಭಿಷೇಕ ಗೈದ. ಅವಳ ಎಲ್ಲ ನಾಡಿಗಳೂ ರೇತಸ್ಸಿನಿಂದ ತುಂಬಿದುವು.

ತಮುವಾಚ ತತೋ ಗಂಗಾ ಸರ್ವದೇವಪುರೋಹಿತಮ್ ।
ಅಶಕ್ತಾ ಧಾರಣೇ ದೇವ ತವ ತೇಜಃ ಸಮುದ್ಧತಮ್ ॥
ದಹ್ಯಮಾನಾऽಗ್ನಿನಾ ತೇನ ಸಂಪ್ರವ್ಯಥಿತಚೇತನಾ ॥ ೧೫ ॥

ಸರ್ವದೇವರಿಗೂ ಪುರೋಹಿತನಾದ ಅಗ್ನಿಗೆ ಗಂಗೆ ಹೇಳಿದಳು 'ದೇವ! ಈ ರೇತಸ್ಸು ಬಹಳ ವೃದ್ಧಿ ಹೊಂದಿದೆ. ಸುಡುತ್ತಿದೆ. ಅದನ್ನು ಧರಿಸಲು ನಾನು ಶಕ್ತಳಾಗುತ್ತಿಲ್ಲ. ಅಗ್ನಿಯಿಂದ ಬೆಂದು ಬಹಳ ವ್ಯಥೆ ಪಡುತ್ತಿದ್ದೇನೆ' ಎಂದು.

ಅಥಾಬ್ರವೀದಿದಂ ಗಂಗಾಂ ಸರ್ವದೇವಹುತಾಶನಃ ।
ಇಹ ಹೈಮವತೇ ಪಾದೇ ಗರ್ಭೋऽಯಂ ಸನ್ನಿವೇಶ್ಯತಾಮ್ ॥ ೧೬ ॥

ಸರ್ವದೇವತೆಗಳ ಆಹುತಿಯನ್ನು ಉಣ್ಣುವ ಅಗ್ನಿ ಗಂಗೆಗೆ ಹೇಳಿದ, 'ಇಲ್ಲಿ ಹಿಮಾಲಯದ ತಪ್ಪಲಲ್ಲಿ ನೆಲದ ಮೇಲೆ ಗರ್ಭವನ್ನಿರಿಸು.

ಶ್ರುತ್ವಾ ತ್ವಗ್ನಿವಚೋ ಗಂಗಾ ತಂ ಗರ್ಭಮತಿಭಾಸ್ವರಮ್ ।
ಉತ್ಸಸರ್ಜ ಮಹಾತೇಜಃ ಸ್ರೋತೋಭ್ಯೋ ಹಿ ತದಾನಘ ॥ ೧೭ ॥

ಅಗ್ನಿಯ ಮಾತನ್ನು ಕೇಳಿ ಗಂಗೆ ಅತಿ ಪ್ರಕಾಶಮಾನವಾದ ಗರ್ಭವನ್ನು, ಮಹಾತೇಜನಾದ ಅನಘ ರಾಮನೆ! ನಾಡಿಗಳಿಂದ ಎತ್ತಿ ಕೆಳಗೆ ನೆಲಕ್ಕೆ ಸುರಿದಳು.

ಯದಸ್ಯಾ ನಿರ್ಗತಂ ತಸ್ಮಾತ್ತಪ್ತಜಾಂಬೂನದಪ್ರಭಮ್ ।
ಕಾಂಚನಂ ಧರಣೀಂ ಪ್ರಾಪ್ತಂ ಹಿರಣ್ಯಮಮಲಂ ಶುಭಮ್ ॥ ೧೮ ॥

ಗಂಗೆಯ ಮೈಯಿಂದ ಸುರಿದ ಬಂಗಾರದಂತೆ ಹೊಳೆವ ಶಿವನ ವೀರ್ಯವು ನೆಲದ ಮೇಲೆ ಬಿದ್ದಾಗ ಅದು ಎಲ್ಲವೂ ನಿರ್ಮಲವಾದ ಮಂಗಳಕರವಾದ ಬಂಗಾರವಾಯಿತು, ಬೆಳ್ಳಿಯಾಯಿತು!

ತಾಮ್ರಂ ಕಾರ್ಷ್ಣಾಯಸಂ ಚೈವ ತೈಕ್ಷ್ಣ್ಯಾದೇವಾಭ್ಯಜಾಯತ ।
ಮಲಂ ತಸ್ಯಾಭವತ್ತತ್ರ ತ್ರಪು ಸೀಸಕಮೇವ ಚ ॥
ತದೇತದ್ಧರಣೀಂ ಪ್ರಾಪ್ಯ ನಾನಾಧಾತುರವರ್ಧತ ॥ ೧೯ ॥

ಆ ವೀರ್ಯದ ಕಠಿನಾಂಶ ತಾಮ್ರ ಕಬ್ಬಿಣಗಳಾದುವು. ಮಲಭಾಗದಿಂದ ತವರ ಸೀಸಗಳುಂಟಾದುವು.

ನಿಕ್ಷಿಪ್ತಮಾತ್ರೇ ಗರ್ಭೇ ತು ತೇಜೋಭಿರಭಿರಂಜಿತಮ್ ।
ಸರ್ವಂ ಪರ್ವತಸನ್ನದ್ಧಂ ಸೌವರ್ಣಮಭವದ್ವನಮ್ ॥ ೨೦ ॥

ಹಿಮಾಲಯದ ತಪ್ಪಲಿನಲ್ಲಿ ಗಂಗೆ ಹೀಗೆ ಶಿವವೀರ್ಯವನ್ನಿರಿಸಿದಾಗ ಅದು ಬಹು ತೇಜಸ್ಸುಗಳಿಂದ ಹೊಳೆಯಿತು ಶ್ವೇತಪರ್ವತದಲ್ಲಿದ್ದ ಎಲ್ಲ ವಸ್ತುಗಳೂ ಶರವಣವೂ ಬಂಗಾರ ಮಯವೇ ಆಯಿತು.

ತಂ ದೇಶಂ ತು ತತೋ ಬ್ರಹ್ಮಾ ಸಂಪ್ರಾಪ್ಯೈನಮಭಾಷತ ।
ಜಾತಸ್ಯ ರೂಪಂ ಯತ್ತಸ್ಮಾಜ್ಜಾತರೂಪಂ ಭವಿಷ್ಯತಿ ।
ಜಾತರೂಪಮಿತಿ ಖ್ಯಾತಂ ತದಾಪ್ರಭೃತಿ ರಾಘವ ॥ ೨೧ ॥

ಆ ಪ್ರದೇಶಕ್ಕೆ ಬ್ರಹ್ಮನು ಬಂದು ಅಗ್ನಿಗೆ ಹೇಳಿದನು. 'ಜಾತಸ್ಯ' ಎಲ್ಲ ವಸ್ತು ಸಮೂಹಕ್ಕೂ 'ರೂಪ' ಬಂಗಾರದ ರೂಪವನ್ನು ತಂದುಕೊಟ್ಟಿದ್ದರಿಂದ ಶಿವನ ವೀರ್ಯವು 'ಜಾತರೂಪ'ವೆನಿಸುವುದು' ಎಂದು. ಹೀಗೆ ಹುಟ್ಟಿದಂದಿನಿಂದ ರಾಮ! ಬಂಗಾರವು 'ಜಾತರೂಪ' ಎಂದು ಖ್ಯಾತವಾಯಿತು.

ಸುವರ್ಣಂ ಪುರುಷವ್ಯಾಘ್ರ ಹುತಾಶನಸಮಪ್ರಭಮ್ ॥
ತೃಣವೃಕ್ಷಲತಾಗುಲ್ಮಂ ಸರ್ವಂ ಭವತಿ ಕಾಂಚನಮ್ ॥ ೨೨ ॥

ಪುರುಷೋತ್ತಮ ರಾಮ! ಹೀಗೆ ಅಗ್ನಿಯ ಪ್ರಥಮ ಅಪತ್ಯವಾದ ಸುವರ್ಣವು ಅಗ್ನಿಸಮಾನಕಾಂತಿ ಉಳ್ಳದ್ದಾಯಿತು. ಶರವಣದಲ್ಲಿದ್ದ ತೃಣವೃಕ್ಷ ಲತೆ ಗುಲ್ಮ ಎಲ್ಲವೂ ಬಂಗಾರವಾಯಿತು.

ತಂ ಕುಮಾರಂ ತತೋ ಜಾತಂ ಸೇಂದ್ರಾಃ ಸಹಮರುದ್ಗಣಾಃ ।
ಕ್ಷೀರಸಂಭಾವನಾರ್ಥಾಯ ಕೃತ್ತಿಕಾಃ ಸಮಯೋಜಯನ್ ॥ ೨೩ ॥

ಗಂಗೆಯ ಮೈಯಿಂದ ಭೂಮಿಯ ಮೇಲೆ ಸುರಿದ ಶಿವನ ವೀರ್ಯದಿಂದ ಕುಮಾರ ಜನಿಸಿದ. ಅವನನ್ನು ಕ್ಷೀರಪಾನಕ್ಕೆ ಕೃತ್ತಿಕಾದೇವಿಯರ ಬಳಿ ಇರಿಸಿದರು, ಇಂದ್ರಾದಿ ದೇವತೆಗಳು.

ತಾಃ ಕ್ಷೀರಂ ಜಾತಮಾತ್ರಸ್ಯ ಕೃತ್ವಾ ಸಮಯಮುತ್ತಮಮ್ ।
ದದುಃ ಪುತ್ರೋಽಯಮಸ್ಮಾಕಂ ಸರ್ವಾಸಾಮಿತಿ ನಿಶ್ಚಿತಾಃ ॥ ೨೪ ॥

'ಈತನು ನಮ್ಮೆಲ್ಲರಿಗೂ ಪುತ್ರನೆನಿಸಬೇಕೆಂ'ದು ಒಡಂಬಡಿಕೆ ಮಾಡಿಕೊಂಡು ಹುಟ್ಟಿದ ಶಿಶುಕುಮಾರನಿಗೆ ಹಾಲೂಡಿಸಿದರು ಕೃತ್ತಿಕಾದೇವಿಯರು.

ತತಸ್ತು ದೇವತಾಃ ಸರ್ವಾಃ ಕಾರ್ತಿಕೇಯ ಇತಿ ಬ್ರುವನ್ ।
ಪುತ್ರಸ್ತ್ರೈಲೋಕ್ಯವಿಖ್ಯಾತೋ ಭವಿಷ್ಯತಿ ನ ಸಂಶಯಃ ॥ ೨೫ ॥

ಅಂದಿನಿಂದ ಕುಮಾರನನ್ನು 'ಕಾರ್ತಿಕೇಯ'ನೆಂದು ಕರೆದರು. 'ನಿಮ್ಮ ಪುತ್ರ ಕಾರ್ತಿಕೇಯನು ಮೂಲೋಕ ವಿಖ್ಯಾತನಾಗುವನು ಸಂಶಯ ಬೇಡ ಎಂದರು.

ತೇಷಾಂ ತದ್ವಚನಂ ಶ್ರುತ್ವಾ ಸ್ಕನ್ನಂ ಗರ್ಭಪರಿಸ್ರವೇ ।
ಸ್ನಾಪಯನ್ವರಯಾ ಲಕ್ಷ್ಮ್ಯಾ ದೀಪ್ಯಮಾನಂ ಯಥಾನಲಮ್ ॥ ೨೬ ॥

ಅವರ ಮಾತನ್ನು ಕೇಳಿ ಕೃತ್ತಿಕಾ ದೇವಿಯರು ಉತ್ತಮ ಕಾಂತಿಯಿಂದ ಅಗ್ನಿಯಂತೆ ಹೊಳೆಯುತ್ತಿದ್ದ ಸ್ಕಂದನನ್ನು ಗರ್ಭೋದಕದಲ್ಲಿ ಬಿದ್ದವನಾದ್ದರಿಂದ ಜಳಕ ಮಾಡಿಸಿದರು.

ಸ್ಕಂದ ಇತ್ಯಬ್ರುವನ್ ದೇವಾಃ ಸ್ಕನ್ನಂ ಗರ್ಭಪರಿಸ್ರವಾತ್ ।
ಕಾರ್ತಿಕೇಯಂ ಮಹಾಭಾಗಂ ಕಾಕುತ್ಸ್ಥ ಜ್ವಲನೋಪಮಮ್ ॥ ೨೭ ॥

ಗರ್ಭಸ್ರಾವದಿಂದ ಬಿದ್ದವನ್ನಾರಿಂದ ಅಗ್ನಿಯಂತೆ ಹೊಳೆವ ಮಹಾಭಾಗ್ಯಶಾಲಿ ಕಾರ್ತಿಕೇಯನನ್ನು ದೇವತೆಗಳು 'ಸ್ಕಂದ' ಎಂದು ಕರೆದರು.

ಪ್ರಾದುರ್ಭೂತಂ ತತಃ ಕ್ಷೀರಂ ಕೃತ್ತಿಕಾನಾಮನುತ್ತಮಮ್ ।
ಷಣ್ಣಾಂ ಷಡಾನನೋ ಭೂತ್ವಾ ಜಗ್ರಾಹ ಸ್ತನಜಂ ಪಯಃ ॥ ೨೮ ॥

ಆರುಮಂದಿ ಕೃತ್ತಿಕೆಯರ ಸ್ತನಗಳಿಂದ ಉತ್ತಮವಾದ ಕ್ಷೀರ ಪ್ರಾದುರ್ಭೂತವಾಯಿತು. ಆರು ಮಂದಿ ತಾಯಂದಿರ ಸ್ತನದಲ್ಲಿ ಉದಿಸಿದ ಹಾಲನ್ನು ಆರು ಮೊಗದವನಾಗಿ ಉಂಡ ಕಾರ್ತಿಕೇಯ, ಷಡಾನನನಾದ. 'ಆರ್ಮೊಗ'ನಾದ.

ಗೃಹೀತ್ವಾ ಕ್ಷೀರಮೇಕಾಹ್ನಾ ಸುಕುಮಾರವಪುಸ್ತದಾ ।
ಅಜಯತ್ ಸ್ವೇನ ವೀರ್ಯೇಣ ದೈತ್ಯಸೈನ್ಯಗಣಾನ್ವಿಭುಃ ॥ ೨೯ ॥

ಒಂದು ದಿನ ಹಾಲುಂಡ ಮಾತ್ರಕ್ಕೆ ಆ ಕೋಮಲ ಶರೀರದಲ್ಲೇ ತನ್ನ ಪರಾಕ್ರಮದಿಂದ ದೈತ್ಯ ಸೈನ್ಯ ಸಮೂಹವನ್ನು ಗೆದ್ದ ಸ್ಕಂದ.

ಸುರಸೇನಾಗಣಪತಿಂ ತತಸ್ತಮತುಲದ್ಯುತಿಮ್ ।
ಅಭ್ಯಷಿಂಚನ್ಸುರಗಣಾಃ ಸಮೇತ್ಯಾಗ್ನಿಪುರೋಗಮಾಃ ॥ ೩೦ ॥

ಅಷ್ಟು ಸಮರ್ಥನಾದ್ದರಿಂದ ಅತುಲತೇಜನಾದ ಸ್ಕಂದನನ್ನು ಅಗ್ನಿ ಮುಂತಾದ ದೇವಸಮೂಹಗಳೆಲ್ಲ ಸೇರಿ ದೇವಸೇನಾ ಸಮೂಹಕ್ಕೆ ಪತಿ ಎಂದು ಅಭಿಷೇಕಗೈದರು.

ಏಷ ತೇ ರಾಮ ಗಂಗಾಯಾ ವಿಸ್ತರೋಽಭಿಹಿತೋ ಮಯಾ ।
ಕುಮಾರಸಂಭವಶ್ಚೈವ ಧನ್ಯಃ ಪುಣ್ಯಸ್ತಥೈವ ಚ ॥ ೩೧ ॥

ರಾಮ! ಇದು ಗಂಗೆಯ ಚರಿತ್ರ ವಿಸ್ತಾರ ಮತ್ತು ಕುಮಾರನ ಉತ್ಪತ್ತಿ, ಎರಡನ್ನೂ ಹೇಳಿದ್ದೇನೆ. ಎರಡೂ ಸಂಪತ್ಕರವೂ ಹೌದು, ಪುಣ್ಯಪ್ರದವೂ ಹೌದು.

ಭಕ್ತಶ್ಚ ಯಃ ಕಾರ್ತಿಕೇಯೇ ಕಾಕುತ್ಸ್ಥ ಭುವಿ ಮಾನವಃ ।
ಆಯುಷ್ಮಾನ್ಪುತ್ರಪೌತ್ರೈಶ್ಚ ಸ್ಕಂದಸಾಲೋಕ್ಯತಾಂ ವ್ರಜೇತ್ ॥ ೩೨ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಸಪ್ತತ್ರಿಂಶಃ ಸರ್ಗಃ ॥ ೩೭ ॥

ರಾಮ! ಕಾರ್ತಿಕೇಯನಲ್ಲಿ ಭಕ್ತಿ ಮಾಡುವ ಮಾನವನು ಭೂಮಿಯಲ್ಲಿ ದೀರ್ಘಾಯುಷಿಯಾಗುತ್ತಾನೆ. ಪುತ್ರ ಸಂತತಿ ಪೌತ್ರ ಸಂತತಿಯುಕ್ತನೂ ಆಗುತ್ತಾನೆ. ಪರದಲ್ಲಿ ಸ್ಕಂದನ ಸಾಲೋಕ್ಯವನ್ನು ಪಡೆಯುತ್ತಾನೆ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಮೂವತ್ತೇಳನೆ ಸರ್ಗ ಮುಗಿಯಿತು.

ಅಷ್ಟತ್ರಿಂಶಃ ಸರ್ಗಃ

ತಾಂ ಕಥಾಂ ಕೌಶಿಕೋ ರಾಮೇ ನಿವೇದ್ಯ ಕುಶಿಕಾತ್ಮಜಃ ।
ಪುನರೇವಾಪರಂ ವಾಕ್ಯಂ ಕಾಕುತ್ಸ್ಥಮಿದಮಬ್ರವೀತ್ ॥ ೧ ॥

ಸ್ಕಂದ ಜನನದ ಬಗ್ಗೆ ಒಂದು ಗಂಗೆಗೆ ಸಂಬಂಧಿಸಿದ ಕಥೆಯನ್ನು ರಾಮನಿಗೆ ಹೇಳಿದ ಬಳಿಕ ಕುಶಿಕನ ಪುತ್ರ 'ಕೌಶಿಕ'ನೆನಿಸಿದ ವಿಶ್ವಾಮಿತ್ರನು ಪುನಃ ಗಂಗೆಗೆ ಸಂಬಂಧಿಸಿದ ಇನ್ನೊಂದು ಕಥೆಯನ್ನೂ ರಾಮನಿಗೆ ಹೇಳಿದನು.

ಅಯೋಧ್ಯಾಧಿಪತಿಃ ಶೂರಃ ಪೂರ್ವಮಾಸೀನ್ನರಾಧಿಪಃ ।
ಸಗರೋ ನಾಮ ಧರ್ಮಾತ್ಮಾ ಪ್ರಜಾಕಾಮಃ ಸ ಚಾಪ್ರಜಃ ॥ ೨ ॥

ಹಿಂದೆ ಅಯೋಧ್ಯಾಧಿಪತಿಯಾಗಿ ಶೂರನಾದ ಧರ್ಮಾತ್ಮನಾದ ಸಗರ ಎಂಬ ರಾಜನಿದ್ದ. ಅವನಿಗೆ ಮಕ್ಕಳಿರಲಿಲ್ಲ. ಮಕ್ಕಳಾಗಬೇಕೆಂದು ಬಯಸಿದ, ಆತ.

ವೈದರ್ಭದುಹಿತಾ ರಾಮ ಕೇಶಿನೀ ನಾಮ ನಾಮತಃ ।
ಜ್ಯೇಷ್ಠಾ ಸಗರಪತ್ನೀ ಸಾ ಧರ್ಮಿಷ್ಠಾ ಸತ್ಯವಾದಿನೀ ॥ ೩ ॥

ವೈದರ್ಭ ರಾಜಕುಮಾರಿ ಕೇಶಿನೀ ಎಂಬವಳು ಸಗರನ ಜ್ಯೇಷ್ಠಪತ್ನಿಯಾಗಿದ್ದಳು. ರಾಮ! ಅವಳು ಧರ್ಮಿಷ್ಠಳು ಮತ್ತು ಸತ್ಯವಾದಿನಿಯಾಗಿದ್ದಳು.

ಅರಿಷ್ಟನೇಮಿದುಹಿತಾ ರೂಪೇಣಾಪ್ರತಿಮಾ ಭುವಿ ।
ದ್ವಿತೀಯಾ ಸಗರಸ್ಯಾಸೀತ್ಪತ್ನೀ ಸುಮತಿಸಂಜ್ಞಿತಾ ॥ ೪ ॥

ಅರಿಷ್ಟನೇಮಿಯ ಪುತ್ರಿ ಗರುಡನ ಭಗಿನಿ ಸುಮತಿ ಎಂಬುವಳು ಸಗರನ ಎರಡನೆ ಪತ್ನಿಯಾಗಿದ್ದಳು. ರೂಪದಲ್ಲಿ ಅವಳಿಗೆ ಎಣೆಯಾದವರು ಭೂಮಿಯಲ್ಲಿ ಯಾರೂ ಇರಲಿಲ್ಲ.

ತಾಭ್ಯಾಂ ಸಹ ತದಾ ರಾಜಾ ಪತ್ನೀಭ್ಯಾಂ ತಪ್ತವಾಂಸ್ತಪಃ ।
ಹಿಮವಂತಂ ಸಮಾಸಾದ್ಯ ಭೃಗುಪ್ರಸ್ರವಣೇ ಗಿರೌ ॥ ೫ ॥

ಆ ಇಬ್ಬರು ಪತ್ನಿಯರೊಂದಿಗೆ ರಾಜಾ ಸಗರನು ಹಿಮಾಲಯಕ್ಕೆ ಹೋಗಿ ಅಲ್ಲಿ ಭೃಗು ಪ್ರಸ್ರವಣ ಎಂಬ ಬೆಟ್ಟದಲ್ಲಿ ತಪಸ್ಸು ಮಾಡಿದ.

ಅಥ ವರ್ಷಶತೇ ಪೂರ್ಣೇ ತಪಸಾऽऽರಾಧಿತೋ ಮುನಿಃ ।
ಸಗರಾಯ ವರಂ ಪ್ರಾದಾದ್ಭೃಗುಃ ಸತ್ಯವತಾಂ ವರಃ ॥ ೬ ॥

ನೂರು ವರ್ಷಗಳ ತಪಸ್ಸು ಪೂರ್ತಿಯಾದಾಗ ತಪಸ್ಸಿನಿಂದ ಆರಾಧಿತನಾದ ಸತ್ಯವಂತರಲ್ಲಿ ಶ್ರೇಷ್ಠನಾದ ಭೃಗುಮುನಿ ವರ ನೀಡಿದರು.

ಅಪತ್ಯಲಾಭಃ ಸುಮಹಾನ್ಭವಿಷ್ಯತಿ ತವಾನಘ ।
ಕೀರ್ತಿಂ ಚಾಪ್ರತಿಮಾಂ ಲೋಕೇ ಪ್ರಾಪ್ಸ್ಯಸೇ ಪುರುಷರ್ಷಭ ॥ ೭ ॥

ಪಾಪರಹಿತ ಪುರುಷೋತ್ತಮನಾದ ಸಗರನೆ! ನಿನಗೆ ದೊಡ್ಡ ಸಂತತಿ ಲಾಭವಾಗಲಿದೆ. ಲೋಕದಲ್ಲಿ ಎಣೆಯಿಲ್ಲದ್ದ ಕೀರ್ತಿಯನ್ನು ಹೊಂದುವೆ.

ಏಕಾ ಜನಯಿತಾ ತಾತ ಪುತ್ರಂ ವಂಶಕರಂ ತವ ।
ಷಷ್ಟಿಂ ಪುತ್ರಸಹಸ್ರಾಣಿ ಅಪರಾ ಜನಯಿಷ್ಯತಿ ॥ ೮ ॥

ಪ್ರಿಯನೆ, ನಿನ್ನ ಒಬ್ಬಳು ಪತ್ನಿ ವಂಶ ವೃದ್ಧಿಕರನಾದ ಪುತ್ರನನ್ನು ಹಡೆಯುವಳು. ಇನ್ನೊಬ್ಬಳು ಅರವತ್ತು ಸಾವಿರ ಪುತ್ರರನ್ನು ಹಡೆಯುವಳು.

ಭಾಷಮಾಣಂ ಮಹಾತ್ಮಾನಂ ರಾಜಪುತ್ರ್ಯೌ ಪ್ರಸಾದ್ಯ ತಮ್ ।
ಊಚತುಃ ಪರಮಪ್ರೀತೇ ಕೃತಾಂಜಲಿಪುಟೇ ತದಾ ॥ ೯ ॥

ಹೀಗೆ ಮಹಾತ್ಮ ಭೃಗುಮುನಿ ಹೇಳುತ್ತಿದ್ದಂತೇ ರಾಜಕುಮಾರಿಯರು ಪರಮ ಸಂತುಷ್ಟರಾಗಿ ಅವನಿಗೆ ಮಣಿದು ಕೈಮುಗಿದು ಹೇಳಿದರು.

ಏಕಃ ಕಸ್ಯಾಃ ಸುತೋ ಬ್ರಹ್ಮನ್ಕಾ ಬಹೂನ್ ಜನಯಿಷ್ಯತಿ ।
ಶ್ರೋತುಮಿಚ್ಛಾವಹೇ ಬ್ರಹ್ಮನ್ಸತ್ಯಮಸ್ತು ವಚಸ್ತವ ॥ ೧೦ ॥

ಮುನಿಯೇ! ಯಾರಿಗೆ ಒಬ್ಬನು ಪುತ್ರ ? ಯಾರು ಬಹುಪುತ್ರರನ್ನು ಹಡೆಯುವಳು? ಮುನಿಯೆ! ಹೇಳು, ಕೇಳಲು ಬಯಸುತ್ತೇವೆ. ನಿನ್ನ ಮಾತು ಸತ್ಯವಾಗಲಿ.

ತಯೋಸ್ತದ್ವಚನಂ ಶ್ರುತ್ವಾ ಭೃಗುಃ ಪರಮಧಾರ್ಮಿಕಃ ।
ಉವಾಚ ಪರಮಾಂ ವಾಣೀಂ ಸ್ವಚ್ಛಂದೋऽತ್ರ ವಿಧೀಯತಾಮ್ ॥

ಇಬ್ಬರು ರಾಣಿಯರ ಆ ಮಾತನ್ನು ಕೇಳಿ ಪರಮ ಧಾರ್ಮಿಕನಾದ ಭೃಗು ಪರಮಸತ್ಯವಾದ ಮಾತನ್ನು ನುಡಿದ, ನಿಮ್ಮ ಅಭಿಲಾಷೆಯನ್ನು ನೀವೇ ಹೇಳಿ, ಯಾರು ಯಾವುದನ್ನು ಆರಿಸಿಕೊಳ್ಳುವಿರಿ?

ಏಕೋ ವಂಶಕರೋ ವಾಸ್ತು ಬಹವೋ ವಾ ಮಹಾಬಲಾಃ ।
ಕೀರ್ತಿಮಂತೋ ಮಹೋತ್ಸಾಹಾಃ ಕಾ ವಾ ಕಂ ವರಮಿಚ್ಛತಿ ॥ ೧೨ ॥

ವಂಶವೃದ್ಧಿಕರನಾದ ಏಕಪುತ್ರನೆ ಅಥವಾ ಬಹುಪುತ್ರರೇ? ಎಲ್ಲರೂ ಮಹಾಬಲಿಗಳು ಕೀರ್ತಿವಂತರು ಮಹಾ ಉತ್ಸಾಹ ಉಳ್ಳವರೆ ಆಗಿರುತ್ತಾರೆ, ಯಾರು ಯಾವುದನ್ನು ಆರಿಸಿಕೊಳ್ಳುವಿರಿ?

ಮುನೇಸ್ತು ವಚನಂ ಶ್ರುತ್ವಾ ಕೇಶಿನೀ ರಘುನಂದನ ।
ಪುತ್ರಂ ವಂಶಕರಂ ರಾಮ ಜಗ್ರಾಹ ನೃಪಸನ್ನಿಧೌ ॥ ೧೩ ॥

ಭೃಗುಮುನಿಯ ಮಾತನ್ನು ಕೇಳಿ, ರಾಮ! ರಘುನಂದನ! ಸಗರರಾಜನ ಸನ್ನಿಧಿಯಲ್ಲಿ, ಕೇಶಿನಿಯು ವಂಶವೃದ್ಧಿಕರನಾದ ಒಬ್ಬ ಪುತ್ರನನ್ನೇ ಆಯ್ದುಕೊಂಡಳು.

ಷಷ್ಟಿಂ ಪುತ್ರಸಹಸ್ರಾಣಿ ಸುಪರ್ಣಭಗಿನೀ ತದಾ ।
ಮಹೋತ್ಸಾಹಾನ್ಕೀರ್ತಿಮತೋ ಜಗ್ರಾಹ ಸುಮತಿಃ ಸುತಾನ್ ॥ ೧೪ ॥

ಗರುಡನ ಭಗಿನಿ ಸುಮತಿಯು ಮಹೋತ್ಸಾಹ ಉಳ್ಳ ಕೀರ್ತಿಶಾಲಿಗಳಾದ ಅರವತ್ತು ಸಾವಿರ ಪುತ್ರರನ್ನು ಆರಿಸಿಕೊಂಡಳು.

ಪ್ರದಕ್ಷಿಣಮೃಷಿಂ ಕೃತ್ವಾ ಶಿರಸಾऽಭಿಪ್ರಣಮ್ಯ ಚ ।
ಜಗಾಮ ಸ್ವಪುರಂ ರಾಜಾ ಸಭಾರ್ಯೋ ರಘುನಂದನ ॥ ೧೫ ॥

ರಾಮ! ರಾಜಾ ಸಗರನು ಭೃಗುಮುನಿಗೆ ಪ್ರದಕ್ಷಿಣೆಗೈದು ತಲೆ ಬಾಗಿ ನಮಿಸಿ ಪತ್ನಿಯರೊಂದಿಗೆ ತನ್ನ ನಗರಕ್ಕೆ ಮರಳಿದ.

ಅಥ ಕಾಲೇ ಗತೇ ತಸ್ಮಿನ್ ಜ್ಯೇಷ್ಠಾ ಪುತ್ರಂ ವ್ಯಜಾಯತ ।
ಅಸಮಂಜ ಇತಿ ಖ್ಯಾತಂ ಕೇಶಿನೀ ಸಗರಾತ್ಮಜಮ್ ॥ ೧೬ ॥

ಕೆಲಕಾಲಾನಂತರ ಜ್ಯೇಷ್ಠಪತ್ನಿ ಕೇಶಿನಿಯು ಅಸಮಂಜ ಎಂದು ಖ್ಯಾತನಾದ ಸಗರ ಪುತ್ರನಿಗೆ ಜನ್ಮವಿತ್ತಳು.

ಸುಮತಿಸ್ತು ನರವ್ಯಾಘ್ರ ಗರ್ಭತುಂಬಂ ವ್ಯಜಾಯತ ।
ಷಷ್ಟಿಃ ಪುತ್ರಾಃ ಸಹಸ್ರಾಣಿ ತುಂಬ ಭೇದಾದ್ ವಿನಿಃ ಸೃತಾಃ ॥ ೧೭ ॥

ರಾಮ! ಪುರುಷೋತ್ತಮ! ಸುಮತಿಯು ಕರಿ ಕುಂಬಳಕಾಯಿಯಾಕಾರದ

ಗರ್ಭಪಿಂಡ ಒಂದನ್ನು ಹಡೆದಳು. ಗರ್ಭವು ವಿಭಾಗ ಹೊಂದಿದಾಗ ಅದರಿಂದ ಅರವತ್ತು ಸಾವಿರ ಪುತ್ರರು ಹೊರಗೆ ಬಂದರು.

ಘೃತಪೂರ್ಣೇಷು ಕುಂಭೇಷು ಧಾತ್ರ್ಯಸ್ತಾನ್ಸಮವರ್ಧಯನ್ ।
ಕಾಲೇನ ಮಹತಾ ಸರ್ವೇ ಯೌವನಂ ಪ್ರತಿಪೇದಿರೇ ॥ ೧೮ ॥

ಆ ಮಕ್ಕಳನ್ನು ಸಾಕುತಾಯಂದಿರು ತುಪ್ಪ ತುಂಬಿದ ಬಿಂದಿಗೆಗಳಲ್ಲಿಟ್ಟು ಪೋಷಿಸಿದರು. ಬಹುಕಾಲಾ ನಂತರ ಇವರು ಯೌವನವನ್ನು ಹೊಂದಿದರು.

ಅಥ ದೀರ್ಘೇಣ ಕಾಲೇನ ರೂಪಯೌವನಶಾಲಿನಃ ।
ಷಷ್ಟಿಃ ಪುತ್ರಸಹಸ್ರಾಣಿ ಸಗರಸ್ಯಾಭವಂಸ್ತದಾ ॥ ೧೯ ॥

ದೀರ್ಘಕಾಲಾನಂತರ ಸಗರ ರಾಜನಿಗೆ ರೂಪಯೌವನ ಶಾಲಿಗಳಾದ ಅರವತ್ತು ಸಾವಿರ ಪುತ್ರರಾದರು.

ಸ ಚ ಜ್ಯೇಷ್ಠೋ ನರಶ್ರೇಷ್ಠಃ ಸಗರಸ್ಯಾತ್ಮಸಂಭವಃ ।
ಬಾಲಾನ್ ಗೃಹೀತ್ವಾ ತು ಜಲೇ ಸರಯ್ವಾ ರಘುನಂದನ ॥
ಪ್ರಕ್ಷಿಪ್ಯ ಪ್ರಹಸನ್ನಿತ್ಯಂ ಮಜ್ಜತಸ್ತಾನ್ ಸಮೀಕ್ಷ್ಯ ವೈ ॥ ೨೦ ॥

ರಾಮ! ಸಗರನಿಂದ ಜನಿಸಿದ ಪುರುಷೋತ್ತಮನಾದ ಜ್ಯೇಷ್ಠ ಪುತ್ರ ಅಸಮಂಜನು ಮಾತ್ರ ನಿತ್ಯ ಊರವರ ಸಣ್ಣ ಮಕ್ಕಳನ್ನು ಹಿಡಿದೆತ್ತಿ ಸರಯೂ ಜಲದಲ್ಲಿ ಹಾಕಿ ಅವು ಮುಳುಗಿ ಹೋಗುವುದನ್ನು ಕಂಡು ನಗುತ್ತಿದ್ದ.

ಏವಂ ಪಾಪಸಮಾಚಾರಃ ಸಜ್ಜನಪ್ರತಿಬಾಧಕಃ ।
ಪೌರಾಣಾಮಹಿತೇ ಯುಕ್ತಃ ಪುತ್ರೋ ನಿರ್ವಾಸಿತಃ ಪುರಾತ್ ॥ ೨೧ ॥

ಹೀಗೆ ಸಜ್ಜನರಿಗೆ ಪೀಡೆ ಉಂಟುಮಾಡುತ್ತ ಪೌರರಿಗೆ ಅಹಿತವನ್ನು ಮಾಡುತ್ತ ಪಾಪಕರ್ಮಾಚರಣ ಮಾಡುತ್ತಿದ್ದ ಪುತ್ರ ಅಸಮಂಜನನ್ನು ಸಗರ ರಾಜನು ನಗರದಿಂದ ಗಡಿಪಾರು ಮಾಡಿದ.

ಅಸಮಂಜನಿಗೆ ಅದೇ ಬೇಕಾಗಿತ್ತು ಏಕೆಂದರೆ, ಭಾಗವತ (೯.೮.೧೮)ದಲ್ಲಿ ಹೀಗೆ ಹೇಳಿದ್ದಾರೆ–

ಅಸಮಂಜನು ಪೂರ್ವಜನ್ಮದಲ್ಲಿ ಯೋಗಿ. ಜನಸಂಪರ್ಕದಿಂದ ಯೋಗಭ್ರಷ್ಟ-ನಾಗಿ ರಾಜಕುಮಾರನಾಗಿ ಜನಿಸಿದನು. ಪೂರ್ವಜನ್ಮ ಸ್ಮರಣೆಯಿಂದ ಪಶ್ಚಾತ್ತಾಪ-

ಗೊಂಡು ಜನಸಂಪರ್ಕದಿಂದ ದೂರವಾಗುವುದಕ್ಕಾಗಿ 'ಅ-ಸಮಂಜಸ' ದುಷ್ಟನಂತೆ ತೋರಿಕೊಂಡ, ವಸ್ತುತಃ 'ಅ' ಎಂದರೆ ಪರಮಾತ್ಮನ ವಿಷಯದಲ್ಲಿ, 'ಸಮಂಜಸ'ನೆ ನಿರ್ದುಷ್ಟನೆ.

ಅದರಿಂದ ತಾನು ಗಡಿಪಾರಾದಾಗ, ಊರವರಿಗೆ ಯೋಗಬಲದಿಂದ, ನದಿಯಲ್ಲಿ ಬಿದ್ದು ಸತ್ತಿದ್ದ ಮಕ್ಕಳನ್ನು ತಿರುಗಿ ಜೀವಂತವಾಗಿಸಿ ತಂದುಕೊಟ್ಟ. ವಸ್ತುತಃ ಪುರಜನರ ಅಹಿತದಲ್ಲಿ 'ಪೌರಾಣಾ ಮಹಿತೇ' 'ಯುಕ್ತ'ನಾಗದೆ 'ಅಯುಕ್ತ'-ನಾಗಿಯೇ ಇದ್ದ.

'ಯುಕ್ತ' 'ಅಯುಕ್ತ' ಎಂದೂ ಎರಡೂ ರೀತಿ ಪದವಿಭಾಗ ಶಕ್ಯವಿದೆ, ಯುಕ್ತ-ನಂತೇ ಕಾಣುತ್ತಿದ್ದ, ವಸ್ತುತಃ ಅಯುಕ್ತನೇ ಆಗಿದ್ದ ಎಂದು.

ಸಂಗ್ರಹ ರಾಮಾಯಣದಲ್ಲಿ ಇದನ್ನೇ ಸ್ಪಷ್ಟವಾಗಿ ಹೇಳಿದ್ದಾರೆ.

ತಸ್ಯ ಪುತ್ರೋಽಂಶುಮಾನ್ನಾಮ ಅಸಮಂಜಸ್ಯ ವೀರ್ಯವಾನ್ ।
ಸಮ್ಮತಃ ಸರ್ವಲೋಕಸ್ಯ ಸರ್ವಸ್ಯಾಪಿ ಪ್ರಿಯಂವದಃ ॥ ೨೨ ॥

'ಅಸಮಂಜ'ನ ಪುತ್ರನು ಅಂಶುಮಾನ್. ಅಸಮಂಜನಂತೇ ವಾಸ್ತವದಲ್ಲಿ ಸಮಂಜಸವೇ ಆದ ವೀರ್ಯ ಉಳ್ಳವನು. ಸರ್ವಲೋಕ ಪ್ರಸಿದ್ಧನಾದವನು. ಎಲ್ಲರಿಗೂ ಪ್ರಿಯವಾಗಿಯೇ ಮಾತನಾಡುತ್ತಿದ್ದವನು.

ತತಃ ಕಾಲೇನ ಮಹತಾ ಮತಿಃ ಸಮಭಿಜಾಯತ ।
ಸಗರಸ್ಯ ನರಶ್ರೇಷ್ಠ ಯಜೇಯಮಿತಿ ನಿಶ್ಚಿತಾ ॥ ೨೩ ॥

ಬಹು ಕಾಲಾ ನಂತರ, ಅಂಶುಮಂತನು ಲೋಕಪ್ರಿಯನಾಗಿ ಬೆಳೆದ ಬಳಿಕ, ಪುರುಷೋತ್ತಮನೆ! ರಾಮ! ಸಗರನಿಗೆ ತಾನು ಯಜ್ಞ ಮಾಡಬೇಕು ಎಂದು ನಿಶ್ಚಿತವಾದ ಆಲೋಚನೆ ಉಂಟಾಯಿತು.

ಸ ಕೃತ್ವಾ ನಿಶ್ಚಯಂ ರಾಮ ಸೋಪಾಧ್ಯಾಯಗಣಸ್ತದಾ ।
ಯಜ್ಞಕರ್ಮಣಿ ವೇದಜ್ಞೋ ಯಷ್ಟುಂ ಸಮುಪಚಕ್ರಮೇ ॥ ೨೪ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇಽಷ್ಟತ್ರಿಂಶಃ ಸರ್ಗಃ ॥ ೩೮ ॥

ರಾಮ! ಸಗರನು ವೇದಜ್ಞ, ಹೀಗೆ ಯಜ್ಞಕರ್ಮ ಮಾಡಲು ನಿಶ್ಚಯಿಸಿ ಉಪಾಧ್ಯಾಯರ ಸಹಯೋಗದಿಂದ ಯಜ್ಞ ಮಾಡಲು ಉಪಕ್ರಮಿಸಿದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಮೂವತ್ತೆಂಟನೆ ಸರ್ಗ ಮುಗಿಯಿತು.

ಏಕೋನಚತ್ವಾರಿಂಶಃ ಸರ್ಗಃ

ವಿಶ್ವಾಮಿತ್ರವಚಃ ಶ್ರುತ್ವಾ ಕಥಾಂತೇ ರಘುನಂದನಃ ।
ಉವಾಚ ಪರಮಪ್ರೀತೋ ಮುನಿಂ ದೀಪ್ತಮಿವಾನಲಮ್ ॥ ೧ ॥

ವಿಶ್ವಾಮಿತ್ರನ ಮಾತನ್ನು ಕೇಳಿ, ಕಥೆಯ ಕೊನೆಯಲ್ಲಿ ಮುನಿ ಹೇಳಿದ ಸಗರ ಯಜ್ಞದ ಬಗ್ಗೆ ಪರಮ ಸಂತುಷ್ಟನಾಗಿ, ಅಗ್ನಿಯಂತೆ ಪ್ರಕಾಶದಿಂದ ಬೆಳಗುವ ಮುನಿಯನ್ನು ಕೇಳಿದನು ರಾಮ.

ಶ್ರೋತುಮಿಚ್ಛಾಮಿ ಭದ್ರಂ ತೇ ವಿಸ್ತರೇಣ ಕಥಾಮಿಮಾಮ್ ।
ಪೂರ್ವಕೋ ಮೇ ಕಥಂ ಬ್ರಹ್ಮನ್ಯಜ್ಞಂ ವೈ ಸಮುಪಾಹರತ್ ॥ ೨ ॥

ಮುನಿಯೇ! ನಿನಗೆ ಮಂಗಳವಾಗಲಿ, ಈ ಸಗರ ಯಜ್ಞದ ಕಥೆಯನ್ನು ವಿಸ್ತಾರವಾಗಿ ಕೇಳಲು ಬಯಸುತ್ತೇನೆ, ಮುನಿಯೆ! ನನ್ನ ಪೂರ್ವಜನಾದ ಸಗರನು ಯಜ್ಞವನ್ನು ಹೇಗೆ ನಡೆಸಿದ?

ತಸ್ಯ ತದ್ವಚನಂ ಶ್ರುತ್ವಾ ಕೌತೂಹಲಸಮನ್ವಿತಮ್ ।
ವಿಶ್ವಾಮಿತ್ರಸ್ತು ಕಾಕುತ್ಸ್ಥಮುವಾಚ ಪ್ರಹಸನ್ನಿವ ॥
ಶ್ರೂಯತಾಂ ವಿಸ್ತರೋ ರಾಮ ಸಗರಸ್ಯ ಮಹಾತ್ಮನಃ ॥ ೩ ॥

ರಾಮನು ಹೇಳಿದ ಕುತೂಹಲಭರಿತವಾದ ಮಾತನ್ನು ಕೇಳಿ ವಿಶ್ವಾಮಿತ್ರನು ನಗುತ್ತ ನುಡಿದ, 'ರಾಮ! ಸಗರನ ವೃತ್ತಾಂತವನ್ನು ವಿಸ್ತಾರವಾಗಿ ಹೇಳುವೆನು ಕೇಳು.'

ಶಂಕರಶ್ವಶುರೋ ನಾಮ ಹಿಮವಾನಚಲೋತ್ತಮಃ ।
ವಿಂಧ್ಯಪರ್ವತಮಾಸಾದ್ಯ ನಿರೀಕ್ಷೇತೇ ಪರಸ್ಪರಮ್ ॥ ೪ ॥

ಶಿವನಿಗೆ ಹೆಣ್ಣುಕೊಟ್ಟ ಮಾವನಾದ ಪರ್ವತಶ್ರೇಷ್ಠ ಹಿಮಾಲಯನು ವಿಂಧ್ಯ-ಪರ್ವತವನ್ನು, ವಿಂಧ್ಯನು ಹಿಮಾಲಯವನ್ನು ನೋಡುತ್ತಾನೆ. ಇಬ್ಬರೂ ಪರಸ್ಪರ ಸ್ನೇಹದಿಂದ ನೋಡುತ್ತಾರೆ.

ತಯೋರ್ಮಧ್ಯೇ ಪ್ರವೃತ್ತೋಽಭೂದ್ಯಜ್ಞಃ ಸ ಪುರುಷೋತ್ತಮ ।
ಸ ಹಿ ದೇಶೋ ನರವ್ಯಾಘ್ರ ಪ್ರಶಸ್ತೋ ಯಜ್ಞಕರ್ಮಣಿ ॥ ೫ ॥

ಈ ವಿಂಧ್ಯ ಹಿಮಾಲಯಗಳ ನಡುವಿನ ಪ್ರದೇಶ ಆರ್ಯಾವರ್ತ ಎಂಬ ಪುಣ್ಯಭೂಮಿ ಯಜ್ಞಕರ್ಮಕ್ಕೆ ಬಹಳ ಪ್ರಶಸ್ತವಾಗಿದೆ. ಪುರುಷೋತ್ತಮ ರಾಮ! ಈ ಪ್ರದೇಶದಲ್ಲಿ ಸಗರನ ಯಜ್ಞ ಪ್ರಾರಂಭವಾಯಿತು.

ತಸ್ಯಾಶ್ವಚರ್ಯಾಂ ಕಾಕುತ್ಸ್ಥ ದೃಢಧನ್ವಾ ಮಹಾರಥಃ ।
ಅಂಶುಮಾನಕರೋತ್ತಾತ ಸಗರಸ್ಯ ಮತೇ ಸ್ಥಿತಃ ॥ ೬ ॥

ಯಾಗದ ಕುದುರೆಯ ಸಂಚಾರ ಸುಗಮವಾಗುವಂತೆ, ಸಗರನ ಅಪೇಕ್ಷೆಯಂತೆ, ರಾಮ! ದೃಢ ಧನುರ್ಧಾರಿ ಮಹಾರಥನಾದ ಅಂಶುಮಂತನೆ ನೋಡಿಕೊಳ್ಳುತ್ತಿದ್ದ.

ತಸ್ಯ ಪರ್ವಣಿ ತಂ ಯಜ್ಞಂ ಯಜಮಾನಸ್ಯ ವಾಸವಃ ।
ರಾಕ್ಷಸೀಂ ತನುಮಾಸ್ಥಾಯ ಯಜ್ಞೀಯಾಶ್ವಮಪಾಹರತ್ ॥ ೭ ॥

ಆ ಯಜ್ಞದ 'ಉಕ್ಥ್ಯ' ಎಂಬ ಪರ್ವಕಾಲದಲ್ಲಿ ಮಾಡಬೇಕಾಗಿದ್ದ ಅಶ್ವಾಲಂಭನ ಅಶ್ವವಿಶಸನಗಳು ನಡೆಯದಂತೆ ಮೊದಲೇ ರಾಕ್ಷಸರೂಪತಾಳಿ ದೇವೇಂದ್ರನು ಯಜಮಾನನ ಯಾಗಾಶ್ವವನ್ನು ಅಪಹರಿಸಿದನು.

ಅಪಹರಿಸಿ ಪಾತಾಳಲೋಕಕ್ಕೆ ಒಯ್ದು ಅಲ್ಲಿ ಕಪಿಲಾವತಾರ ಹರಿಯ ಆಶ್ರಮದ ಬಳಿ ಕಟ್ಟಿದನು. ಯಜ್ಞ ಮಾಡುವುದು ದೇವತೆಗಳ ಪ್ರೀತಿಗಾಗಿ. ಅಂಥ ಯಜ್ಞವನ್ನು ದೇವೇಂದ್ರನೇಕೆ ವಿಘ್ನವೊಡ್ಡಿ ನಿಲ್ಲಿಸುತ್ತಾನೆ? ಎಂದರೆ ಧ್ರುವಕುಮಾರನ ತಪಸ್ಸನ್ನು ನಿಲ್ಲಿಸಲು ದೇವತೆಗಳು ಯತ್ನಿಸಿದಂತೆ ಇದು. ಯಜ್ಞಕ್ಕೆ ಎಷ್ಟು ವಿಘ್ನ ಬಂದರೂ ಬಿಡದೆ ಯಜ್ಞ ಮಾಡಿದರೆ ಹೆಚ್ಚು ಕೀರ್ತಿ ಎಂದು, ವಸ್ತುತಃ ಅಲ್ಪಾಯುಷಿಗಳಾದ ಸಗರಪುತ್ರರ ಮರಣವೂ ಆಗಬೇಕಿತ್ತು. ಭಗೀರಥನಿಂದ ಗಂಗಾವತರಣ-ವಾಗಬೇಕಿತ್ತು.

ಹ್ರಿಯಮಾಣೇ ತು ಕಾಕುತ್ಸ್ಥ ತಸ್ಮಿನ್ನಶ್ವೇ ಮಹಾತ್ಮನಃ ।
ಉಪಾಧ್ಯಾಯಗಣಾಃ ಸರ್ವೇ ಯಜಮಾನಮಥಾಬ್ರುವನ್ ॥ ೮ ॥

ಮಹಾತ್ಮ ಸಗರನ ಯಜ್ಞಾಶ್ವವು ಅಪಹೃತವಾದಾಗ, ರಾಮ! ಉಪಾಧ್ಯಾಯ-ರೆಲ್ಲರೂ ಯಜಮಾನನಿಗೆ ಹೇಳಿದರು.

ಅಯಂ ಪರ್ವಣಿ ವೇಗೇನ ಯಜ್ಞೀಯಾಶ್ವೋಽಪನೀಯತೇ ।
ಹರ್ತಾರಂ ಜಹಿ ಕಾಕುತ್ಸ್ಥ ಹಯಶ್ಚೈವೋಪನೀಯತಾಮ್ ॥ ೯ ॥

ಸಗರರಾಜನೆ! 'ಈ ರಾಕ್ಷಸನು ವೇಗದಿಂದ ಯಜ್ಞಾಶ್ವವನ್ನು ಒಯ್ಯುತ್ತಿದ್ದಾನೆ. ಒಯ್ಯದಂತೆ ಅವನನ್ನು ಕೊಲ್ಲು. ಅಶ್ವವನ್ನು ಇಲ್ಲಿಗೆ ತರಿಸು.'

ಯಜ್ಞಶ್ಚಿದ್ರಂ ಭವತ್ಯೇತತ್ಸರ್ವೇಷಾಮಶಿವಾಯ ನಃ ।
ತತ್ತಥಾ ಕ್ರಿಯತಾಂ ರಾಜನ್ಯಥಾऽಚ್ಛಿದ್ರಃ ಕ್ರತುರ್ಭವೇತ್ ॥ ೧೦ ॥

'ಯಜ್ಞ ನಿಂತುಹೋದರೆ ನಮಗೆಲ್ಲರಿಗೂ ಅಶುಭವಾಗುವುದು. ಅದರಿಂದ ಯಜ್ಞ ಸಾಂಗವಾಗಿ ನಡೆಯುವಂತೆ ಮಾಡು, ರಾಜನೆ!'

ಉಪಾಧ್ಯಾಯವಚಃ ಶ್ರುತ್ವಾ ತಸ್ಮಿನ್ಸದಸಿ ಪಾರ್ಥಿವಃ ।
ಷಷ್ಟಿಂ ಪುತ್ರಸಹಸ್ರಾಣಿ ವಾಕ್ಯಮೇತದುವಾಚ ಹ ॥ ೧೧ ॥

ಯಜ್ಞ ಸದಸ್ಸಿನಲ್ಲಿ ಕುಳಿತಿದ್ದ ಉಪಾಧ್ಯಾಯರಾದ ಮುನಿಗಳು ಹೇಳಿದ ಈ ಮಾತನ್ನು ಕೇಳಿ ಸಗರ ರಾಜ ತನ್ನ ಅರವತ್ತು ಸಾವಿರ ಪುತ್ರರಿಗೆ ಹೇಳಿದ.

ಗತಿಂ ಪುತ್ರಾ ನ ಪಶ್ಯಾಮಿ ರಕ್ಷಸಾಂ ಪುರುಷರ್ಷಭಾಃ ।
ಮಂತ್ರಪೂತೈರ್ಮಹಾಭಾಗೈರಾಸ್ಥಿತೋ ಹಿ ಮಹಾಕ್ರತುಃ ॥ ೧೨ ॥

'ಪುತ್ರರೇ, ಪುರುಷೋತ್ತಮರೆ, ಮಂತ್ರದಿಂದ ಪೂತಾತ್ಮರಾಗಿರುವ ಮಹಾ-ಭಾಗ್ಯಶಾಲಿಗಳಾದ ಋತ್ವಿಜರು ನಡೆಸುತ್ತಿರುವ ಪವಿತ್ರ ಯಜ್ಞದಲ್ಲಿ ಕ್ಷುದ್ರರಾಕ್ಷಸರು ಬಂದುದು ಹೇಗೆ? ಬಂದರೂ ನನಗೆ ಕಾಣಿಸದೆ ಹೋದುದೂ ಹೇಗೆ? ತಿಳಿಯದು.

ತದ್ಗಚ್ಛತ ವಿಚಿನ್ವಧ್ವಂ ಪುತ್ರಕಾ ಭದ್ರಮಸ್ತು ವಃ ।
ಸಮುದ್ರಮಾಲಿನೀಂ ಸರ್ವಾಂ ಪೃಥಿವೀಮನುಗಚ್ಛತ ॥
ಏಕೈಕಂ ಯೋಜನಂ ಪುತ್ರಾ ವಿಸ್ತಾರಮಭಿಗಚ್ಛತ ॥ ೧೩ ॥

'ಪುತ್ರರೇ! ನೀವು ಹೋಗಿರಿ ಹುಡುಕಿರಿ. ನಿಮಗೆ ಶುಭವಾಗಲಿ ಸಮುದ್ರದಿಂದ ಸುತ್ತುವರಿದ ಇಡೀ ಪೃಥಿವಿಯನ್ನು ಶೋಧನೆ ಮಾಡಿರಿ. ಮಕ್ಕಳೇ ಒಬ್ಬೊಬ್ಬರು ಒಂದೊಂದು ಯೋಜನದಂತೆ ಪೃಥಿವಿಯ ವಿಸ್ತಾರವನ್ನು ಶೋಧಿಸಿರಿ.

ಯಾವತ್ತುರಗಸಂದರ್ಶನ್ತಾವತ್ಖನತ ಮೇದಿನೀಮ್ ।
ತಂ ಚೈವಂ ಹಯಹರ್ತಾರಂ ಮಾರ್ಗಮಾಣಾ ಮಮಾಜ್ಞಯಾ ॥ ೧೪

'ಅಶ್ವವು ಕಾಣಿಸಿಕೊಳ್ಳುವ ವರೆಗೂ ಅಶ್ವಚೋರನನ್ನು ಅನ್ವೇಷಣ ಮಾಡುತ್ತ ನೆಲವನ್ನು ಅಗೆಯಿರಿ. ಇದು ನನ್ನ ಆಜ್ಞೆ.

ದೀಕ್ಷಿತಃ ಪೌತ್ರಸಹಿತಃ ಸೋಪಾಧ್ಯಾಯಗಣೋ ಹ್ಯಹಮ್ ।
ಇಹ ಸ್ಥಾಸ್ಯಾಮಿ ಭದ್ರಂ ವೋ ಯಾವತ್ತುರಗದರ್ಶನಮ್ ॥ ೧೫ ॥

'ಯಜ್ಞದೀಕ್ಷಾ ಸ್ವೀಕಾರ ಮಾಡಿರುವುದರಿಂದ ನಾನು ಮಾತ್ರ ಪೌತ್ರರಿಂದಲೂ ಉಪಾಧ್ಯಾಯರಿಂದಲೂ ಸಹಿತನಾಗಿ ಇಲ್ಲಿಯೇ ಇರುತ್ತೇನೆ, ಅಶ್ವ ಕಾಣಿಸಿಕೊಳ್ಳುವ ವರೆಗೆ ನಿಮಗೆ ಒಳ್ಳೆಯದಾಗಲಿ.

ಇತ್ಯುಕ್ತಾ ಹೃಷ್ಟಮನಸೋ ರಾಜಪುತ್ರಾ ಮಹಾಬಲಾಃ ।
ಜಗ್ಮುರ್ಮಹೀತಲಂ ರಾಮ ಪಿತುರ್ವಚನಯಂತ್ರಿತಾಃ ॥ ೧೬ ॥

ರಾಮ! ರಾಜ ಹೀಗೆ ಹೇಳಿದಾಗ ಪಿತನಾಜ್ಞೆಗೆ ಕಟ್ಟುಬಿದ್ದ ಮಹಾ ಬಲಿಗಳಾದ ರಾಜಕುಮಾರರು ಹೃಷ್ಟ ಮನಸ್ಸಿನಿಂದ ಭೂತಲವೆಲ್ಲವನ್ನೂ ಶೋಧಿಸಿದರು.

ಗತ್ವಾ ತು ಪೃಥಿವೀಂ ಸರ್ವಾಮದೃಷ್ಟ್ವಾ ತಂ ಮಹಾಬಲಾಃ ।
ಯೋಜನಾಯಾಮವಿಸ್ತಾರಮೇಕೈಕೋ ಧರಣೀತಲಮ್ ॥
ಬಿಭಿದುಃ ಪುರುಷವ್ಯಾಘ್ರ ವಜ್ರಸ್ಪರ್ಶಸಮೈರ್ಭುಜೈಃ ॥ ೧೭ ॥

ಸಮಗ್ರ ಪೃಥಿವಿಯನ್ನು ಶೋಧಿಸಿಯೂ ಮಹಾಬಲಿಗಳಾದ ಸಗರ ಪುತ್ರರು ಅಶ್ವವನ್ನು ಕಾಣದೆ ರಾಮ! ಪ್ರತಿಯೊಬ್ಬನೂ ಯೋಜನ ಪ್ರಮಾಣವಿಸ್ತಾರದ ಭೂತಲವನ್ನು ವಜ್ರಸ್ಪರ್ಶ ಸಮಾನವಾದ ಬಾಹುಗಳಿಂದ ಅಗೆದರು.

ಶೂಲೈರಶನಿಕಲ್ಪೈಶ್ಚ ಹಲೈಶ್ಚಾಪಿ ಸುದಾರುಣೈಃ ।
ಭಿದ್ಯಮಾನಾ ವಸುಮತೀ ನನಾದ ರಘುನಂದನ ॥ ೧೮ ॥

ವಜ್ರಾಯುಧದಂತಹ ಬಲು ಭಯಂಕರವಾದ ಶೂಲಹಲ ಆಯುಧಗಳಿಂದ ಅಗೆದಾಗ ರಾಮ! ಭೂಮಿ ಶಬ್ದಮಾಡಿತು.

ನಾಗಾನಾಂ ವಧ್ಯಮಾನಾನಾಮಸುರಾಣಾಂ ಚ ರಾಘವ ।
ರಾಕ್ಷಸಾನಾಂ ಚ ದುರ್ಧರ್ಷಃ ಸತ್ವಾನಾಂ ನಿನದೋಽಭವತ್ ॥ ೧೯ ॥

ರಾಮ! ಹತರಾಗುವಾಗ ನಾಗರು ಅಸುರರು ರಾಕ್ಷಸರು ಬೇರೆ ಪ್ರಾಣಿಗಳು ಎಂದು ಎಲ್ಲ ಪಾತಾಲ ವಾಸಿಗಳೂ ಸಹಿಸಲಾಗದಂಥ ಮಹಾಶಬ್ದ ಮಾಡಿದರು.

ಯೋಜನಾನಾಂ ಸಹಸ್ರಾಣಿ ಷಷ್ಟಿಂ ತು ರಘುನಂದನ ।
ಬಿಭಿದುರ್ಧರಣೀಂ ವೀರಾ ರಸಾತಲಮನುತ್ತಮಮ್ ॥ ೨೦ ॥

ರಾಮ! ವೀರರಾದ ಸಗರ ಪುತ್ರರು, ಧರೆಯು ಉತ್ತಮವಾದ ರಸಾತಲವೇ ಆಗಿ ಹೋಗುವಂತೆ, ಅರವತ್ತು ಸಾವಿರ ಯೋಜನದಷ್ಟು ಎಲ್ಲೆಡೆ ಧರೆಯನ್ನು ಅಗೆದರು.

ಏವಂ ಪರ್ವತಸಂಬಾಧಂ ಜಂಬೂದ್ವೀಪಂ ನೃಪಾತ್ಮಜಾಃ ।
ಖನಂತೋ ನರಶಾರ್ದೂಲ ಸರ್ವತಃ ಪರಿಚಕ್ರಮುಃ ॥ ೨೧ ॥

ಹೀಗೆ, ರಾಜಕುಮಾರರು ಪರ್ವತಗಳಿಂದ ತುಂಬಿದ ಜಂಬೂದ್ವೀಪವನ್ನು ಅಗೆಯುತ್ತ, ರಾಮ! ಎಲ್ಲೆಡೆ ಶೋಧಿಸಿದರು.

ತತೋ ದೇವಾಃ ಸಗಂಧರ್ವಾಃ ಸಾಸುರಾಃ ಸಹಪನ್ನಗಾಃ ।
ಸಂಭ್ರಾಂತಮನಸಃ ಸರ್ವೇ ಪಿತಾಮಹಮುಪಾಗಮನ್ ॥ ೨೨ ॥

ಆಗ ದೇವತೆಗಳು ಗಂಧರ್ವರು ಅಸುರರು ನಾಗರು ಎಲ್ಲರೂ ಉದ್ವಿಗ್ನ ಮನಸ್ಕರಾಗಿ ಬ್ರಹ್ಮದೇವನ ಬಳಿಗೆ ಬಂದರು.

ತೇ ಪ್ರಸಾದ್ಯ ಮಹಾತ್ಮಾನಂ ವಿಷಣ್ಣವದನಾಸ್ತದಾ ।
ಊಚುಃ ಪರಮಸಂತ್ರಸ್ತಾಃ ಪಿತಾಮಹಮಿದಂ ವಚಃ ॥ ೨೩ ॥

ಅವರು ಬಲುಭೀತರಾಗಿ ವಿಷಣ್ಣ ವದನರಾಗಿ ಮಹಾತ್ಮನಾದ ಬ್ರಹ್ಮದೇವನನ್ನು ನಮಿಸಿ ಹೇಳಿದರು.

ಭಗವನ್‌ಪೃಥಿವೀ ಸರ್ವಾ ಖನ್ಯತೇ ಸಗರಾತ್ಮಜೈಃ ।
ಬಹವಶ್ಚ ಮಹಾತ್ಮಾನೋ ಹನ್ಯಂತೇ ತಲವಾಸಿನಃ ॥ ೨೪ ॥

ಪೂಜ್ಯನೆ, ಸಗರ ಪುತ್ರರು ಇಡೀ ಪೃಥಿವಿಯನ್ನೇ ಅಗೆಯುತ್ತಿದ್ದಾರೆ. ಪಾತಾಳ-ವಾಸಿಗಳಾದ ಮಹಾತ್ಮರು ಬಹುಮಂದಿ ಹತರಾಗುತ್ತಿದ್ದಾರೆ.

ಅಯಂ ಯಜ್ಞಹರೋಽಸ್ಮಾಕಮನೇನಾಶ್ವೋಽಪನೀಯತೇ ।
ಇತಿ ತೇ ಸರ್ವಭೂತಾನಿ ನಿಘ್ನಂತಿ ಸಗರಾತ್ಮಜಾಃ ॥ ೨೫ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ ಬಾಲಕಾಂಡೇ ಏಕೋನಚತ್ವಾರಿಂಶಃ ಸರ್ಗಃ ॥ ೩೯ ॥

'ಈತ ನಮಗೆ ಬೇಕಾದ ಅಶ್ವಚೋರ! ಇವನಿಂದ ಅಶ್ವ ಅಪಹೃತವಾಗಿದೆ!' ಎನ್ನುತ್ತ ಸಗರ ಪುತ್ರರು ಎಲ್ಲ ಪ್ರಾಣಿಗಳನ್ನೂ ವಧಿಸುತ್ತಾರೆ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಮೂವತ್ತೊಂಬತ್ತನೆ ಸರ್ಗ ಮುಗಿಯಿತು.

ಚತ್ವಾರಿಂಶಃ ಸರ್ಗಃ

ದೇವತಾನಾಂ ವಚಃ ಶ್ರುತ್ವಾ ಭಗವಾನ್ ವೈ ಪಿತಾಮಹಃ ।
ಪ್ರತ್ಯುವಾಚ ಸುಸಂತ್ರಸ್ತಾನ್ ಕೃತಾಂತಬಲಮೋಹಿತಾನ್ ॥ ೧ ॥

ಸರ್ವಪ್ರಾಣಿಗಳ ನಾಶಗೈವ ಸಗರ ಪುತ್ರರ ಬಲಕ್ಕೆ ಹೆದರಿ ಪರವಶರಾದ ದೇವತೆಗಳು ಆಡಿದ ಮಾತನ್ನು ಕೇಳಿ ಪೂಜ್ಯ ಬ್ರಹ್ಮದೇವ ನುಡಿದ.

ಯಸ್ಯೇಯಂ ವಸುಧಾ ಕೃತ್ಸ್ನಾ ವಾಸುದೇವಸ್ಯ ಧೀಮತಃ ।
ಕಾಪಿಲಂ ರೂಪಮಾಸ್ಥಾಯ ಧಾರಯತ್ಯನಿಶಂ ಧರಾಮ್ ॥
ತಸ್ಯ ಕೋಪಾಗ್ನಿನಾ ದಗ್ಧಾ ಭವಿಷ್ಯಂತಿ ನೃಪಾತ್ಮಜಾಃ ॥ ೨ ॥

'ಈ ಇಡೀ ಭೂಮಿ ಧೀಮಂತನಾದ ವಾಸುದೇವನದು. ಅವನು ಕಪಿಲ-ರೂಪವನ್ನು ಧರಿಸಿ ಪಾತಾಳದಲ್ಲಿದ್ದು ಭೂಮಿಯನ್ನು ಸದಾ ಕಾಪಾಡುತ್ತಿದ್ದಾನೆ. ರಾಜಕುಮಾರರು ಅವನ ಕೋಪಾಗ್ನಿಯಿಂದ ಸುಟ್ಟು ಬೂದಿಯಾಗುವರು.

'ಕೋಪದಿಂದ ಕಪಿಲಮುನಿಯ ಮೇಲೆ ಆಕ್ರಮಣ ಮಾಡಿದ್ದರಿಂದಲೆ ಸಗರ ಪುತ್ರರು,

ಅವನ ಕೋಪದಿಂದ ಅವರಲ್ಲಿ ಅವರ ವಿನಾಶ ಕಾಲಪ್ರಯುಕ್ತವಾಗಿ ಭುಗಿಲೆದ್ದ ಅವರ ಶಿರೀರಾಗ್ನಿಯಿಂದಲೇ ಅವರು ಸುಟ್ಟು ಬೂದಿಯಾದರು'

ಎನ್ನುತ್ತದೆ ಭಾಗವತ. (೯.೮.೧೨) 'ವಿನಾಶೋಽದೀರ್ಘ ಜೀವಿನಾಂ' ಎಂದು ಮುಂದಿನ ಶ್ಲೋಕದಲ್ಲಿ ವಾಲ್ಮೀಕಿಯೇ ಇದನ್ನು ಸ್ಪಷ್ಟಗೊಳಿಸುತ್ತಾನೆ.

ಪೃಥಿವ್ಯಾಶ್ಚಾಪಿ ನಿರ್ಭೇದೋ ದೃಷ್ಟ ಏವ ಸನಾತನಃ ।
ಸಗರಸ್ಯ ಚ ಪುತ್ರಾಣಾಂ ವಿನಾಶೋಽದೀರ್ಘಜೀವಿನಾಮ್ ॥ ೩ ॥

ಪೃಥಿವಿಯನ್ನು ಸಗರ ಪುತ್ರರು ಅಗೆದು ಸಾಗರವನ್ನಾಗಿ ಮಾಡುವುದು 'ಸನಾತನ'ವೆ ಪ್ರತಿಕಲ್ಪದಲ್ಲಿ ಅವಶ್ಯ ದೃಷ್ಟವಾಗುವಂಥದ್ದು ಮತ್ತು ದೀರ್ಘಾ-ಯುಷ್ಯವಿಲ್ಲದಿದ್ದ ಸಗರ ಪುತ್ರರ ವಿನಾಶವಾಗುವುದೂ 'ಸನಾತನ'ವೆ, ಪ್ರತಿಕಲ್ಪದಲ್ಲಿ ಅವಶ್ಯ ದೃಷ್ಟವಾಗುವಂಥದ್ದು. ಅದರಿಂದ ಶೋಕ ಬೇಡ.

ಪಿತಾಮಹವಚಃ ಶ್ರುತ್ವಾ ತ್ರಯಸ್ತ್ರಿಂಶದರಿಂದಮ ।
ದೇವಾಃ ಪರಮಸಂಹೃಷ್ಟಾಃ ಪುನರ್ಜಗ್ಮುರ್ಯಥಾಗತಮ್ ॥ ೪ ॥

ಶತ್ರುನಾಶಕ ರಾಮನೆ! ಮೂವತ್ತಮೂರು ದೇವತೆಗಳು ಬ್ರಹ್ಮದೇವನ ಮಾತನ್ನು ಕೇಳಿ ಪರಮ ಸಂತುಷ್ಟರಾಗಿ ಬಂದಂತೇ ಹಿಂದೆ ಹೋದರು.

ಅಷ್ಟವಸುಗಳು ಏಕಾದಶರುದ್ರರು ದ್ವಾದಶ ಆದಿತ್ಯರು ಮತ್ತು ಇಬ್ಬರು ಅಶ್ವಿನೀ ದೇವತೆಗಳು– ಒಟ್ಟು ಮೂವತ್ತಮೂರು ದೇವತೆಗಳು.

ಸಗರಸ್ಯ ಚ ಪುತ್ರಾಣಾಂ ಪ್ರಾದುರಾಸೀನ್ಮಹಾತ್ಮನಾಮ್ ।
ಪೃಥಿವ್ಯಾಂ ಭಿದ್ಯಮಾನಾಯಾಂ ನಿರ್ಘಾತಸಮನಿಃಸ್ವನಃ ॥ ೫ ॥

ಇತ್ತ ಮಹಾತ್ಮರಾದ ಸಗರಪುತ್ರರು ನೆಲ ಅಗೆಯುವಾಗ ಸಿಡಿಲಿನಂಥ ಧ್ವನಿ ಉತ್ಪಾತ ಸೂಚಕವಾಗಿ ಪ್ರಾದುರ್ಭವಿಸಿತು.

ತತೋ ಭಿತ್ವಾ ಮಹೀಂ ಸರ್ವೇ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ಸಹಿತಾಃ ಸಾಗರಾಃ ಸರ್ವೇ ಪಿತರಂ ವಾಕ್ಯಮಬ್ರುವನ್ ॥ ೬ ॥

ಬಳಿಕ ಸಗರ ಪುತ್ರರೆಲ್ಲರೂ ಭೂಮಿಯನ್ನು ಅಗೆದು ಎಲ್ಲೆಡೆ ಪ್ರದಕ್ಷಿಣೆ ಮಾಡಿ ಅಶ್ವವನ್ನು ಕಾಣದೆ ಪಿತನ ಬಳಿಬಂದು ಹೇಳಿದನು.

ಪರಿಕ್ರಾಂತಾ ಮಹೀ ಸರ್ವಾ ಸತ್ವವಂತಶ್ಚ ಸೂದಿತಾಃ ।
ದೇವದಾನವರಕ್ಷಾಂಸಿ ಪಿಶಾಚೋರಗಕಿನ್ನರಾಃ ॥ ೭ ॥

ಭೂಮಿಯನ್ನೆಲ್ಲ ಶೋಧಿಸಿದ್ದಾಯಿತು. ಬಲಿಷ್ಠರಾದ ದೇವದಾನವ ರಾಕ್ಷಸರು ಮತ್ತು ಪಿಶಾಚ ನಾಗ ಕಿನ್ನರ ಮುಂತಾದವರನ್ನು ವಧಿಸಿದ್ದೂ ಆಯಿತು.

ನ ಚ ಪಶ್ಯಾಮಹೇಽಶ್ವಂ ತಮಶ್ವಹರ್ತಾರಮೇವ ಚ ।
ಕಿಂ ಕರಿಷ್ಯಾಮ ಭದ್ರಂ ತೇ ಬುದ್ಧಿರತ್ರ ವಿಚಾರ್ಯತಾಮ್ ॥ ೮ ॥

ಆದರೂ ಅಶ್ವವನ್ನೂ ಅಶ್ವಚೋರನನ್ನೂ ನಾವೆಲ್ಲೂ ಕಾಣಲಿಲ್ಲ. ನಾವೇನು ಮಾಡಲಿ? ನಿನಗೆ ಮಂಗಳವಾಗಲಿ' ಇನ್ನೇನು ಉಪಾಯವೆಂದು ಆಲೋಚಿಸು.

ತೇಷಾಂ ತದ್ವಚನಂ ಶ್ರುತ್ವಾ ಪುತ್ರಾಣಾಂ ರಾಜಸತ್ತಮಃ ।
ಸಮನ್ಯುರಬ್ರವೀದ್ವಾಕ್ಯಂ ಸಗರೋ ರಘುನಂದನ ॥ ೯ ॥

ರಾಮ! ರಾಜಶ್ರೇಷ್ಠನಾದ ಸಗರನು ಆ ಪುತ್ರರು ಹೇಳಿದ ಆ ವಚನವನ್ನು ಕೇಳಿ ಸಿಟ್ಟಾಗಿ ನುಡಿದನು.

ಭೂಯಃ ಖನತ ಭದ್ರಂ ವೋ ನಿರ್ಭಿದ್ಯ ವಸುಧಾತಲಮ್ ।
ಅಶ್ವಹರ್ತಾರಮಾಸಾದ್ಯ ಕೃತಾರ್ಥಾಶ್ಚ ನಿವರ್ತಧ್ವ ॥ ೧೦ ॥

ನೀವು ಭೂತಲವನ್ನು ಇನ್ನೂ ಭೇದಿಸಿ ಅಗೆಯಿರಿ. ಅಶ್ವಚೋರನನ್ನು ಕಂಡು-ಹಿಡಿದೇ ಕೃತಾರ್ಥರಾಗಿ ಹಿಂತಿರುಗಿರಿ, ಎಂದು.

ಪಿತುರ್ವಚನಮಾಸಾದ್ಯ ಸಗರಸ್ಯ ಮಹಾತ್ಮನಃ ।
ಷಷ್ಟಿಃ ಪುತ್ರಸಹಸ್ರಾಣಿ ರಸಾತಲಮಭಿದ್ರವನ್ ॥ ೧೧ ॥

ತಂದೆಯಾದ ಮಹಾತ್ಮ ಸಗರನ ಆಜ್ಞೆ ಪಡೆದು ಅರವತ್ತು ಸಾವಿರ ಪುತ್ರರು ರಸಾತಳಕ್ಕೆ ಧಾವಿಸಿದರು.

ಖನ್ಯಮಾನೇ ತತಸ್ತಸ್ಮಿನ್ದದೃಶುಃ ಪರ್ವತೋಪಮಮ್ ।
ದಿಶಾಗಜಂ ವಿರೂಪಾಕ್ಷಂ ಧಾರಯಂತಂ ಮಹೀತಲಮ್ ॥ ೧೨ ॥

ಬಳಿಕ ಅಲ್ಲಿ ಭೂಮಿಯನ್ನು ಅಗೆಯುತ್ತಿದ್ದಂತೇ ಸಗರ ಪುತ್ರರು ಅಲ್ಲಿ ಭೂತಲ-ವನ್ನು ಧರಿಸುತ್ತಿರುವ ಬೆಟ್ಟದಂಥ ವಿರೂಪಾಕ್ಷ ಎಂಬ ದಿಗ್ಗಜವನ್ನು ಕಂಡರು.

ಸಪರ್ವತವನಾಂ ಕೃತ್ಸ್ನಾಂ ಪೃಥಿವೀಂ ರಘುನಂದನ ।
ಶಿರಸಾ ಧಾರಯಾಮಾಸ ವಿರೂಪಾಕ್ಷೋ ಮಹಾಗಜಃ ॥ ೧೩ ॥

ರಾಮ, ಬೆಟ್ಟ ಕಾಡುಗಳಿಂದ ಕೂಡಿದ ಸಮಸ್ತ ಪೃಥಿವಿಯನ್ನು ವಿರೂಪಾಕ್ಷ ಎಂಬ ಮಹಾಗಜವು ತಲೆಯಿಂದ ಹೊತ್ತುಕೊಂಡಿದೆ.

ಯದಾ ಪರ್ವಣಿ ಕಾಕುತ್ಸ್ಥ ವಿಶ್ರಮಾರ್ಥಂ ಮಹಾಗಜಃ ।
ಖೇದಾಚ್ಚಾಲಯತೇ ಶೀರ್ಷಂ ಭೂಮಿಕಂಪಸ್ತದಾ ಭವೇತ್ ॥ ೧೪ ॥

ಪರ್ವಕಾಲದಲ್ಲಿ, ರಾಮ! ಯಾವಾಗ ಈ ವಿರೂಪಾಕ್ಷ ಮಹಾಗಜವು ಶ್ರಮ-ದಿಂದ ಸ್ವಲ್ಪ ತಲೆಯಾಡಿಸುವುದೋ ಆಗ ಭೂಕಂಪವಾಗುತ್ತದೆ!

ತಂ ತೇ ಪ್ರದಕ್ಷಿಣಂ ಕೃತ್ವಾ ದಿಶಾಪಾಲಂ ಮಹಾಗಜಮ್ ।
ಮಾನಯಂತೋ ಹಿ ತೇ ರಾಮ ಜಗ್ಮುರ್ಭಿತ್ವಾ ರಸಾತಲಮ್ ॥ ೧೫ ॥

ಸಗರಪುತ್ರರು, ರಾಮ! ಪೂರ್ವದಿಕ್ಪಾಲಕವಾದ ಆ ವಿರೂಪಾಕ್ಷ ಮಹಾಗಜವನ್ನು ಪ್ರದಕ್ಷಿಣೆ ಮಾಡಿ ಸತ್ಕರಿಸಿ ಪೂರ್ವದಿಕ್ಕಿನ ಭೂಮಿಯನ್ನು ಭೇದಿಸಿ ರಸಾತಳಕ್ಕೆ ಇಳಿಸಿದರು.

ಶತ್ರುನಾಶಕ ರಾಮನೆ! ಮೂವತ್ತಮೂರು ದೇವತೆಗಳು ಬ್ರಹ್ಮದೇವನ ಮಾತನ್ನು ಕೇಳಿ ಪರಮ ಸಂತುಷ್ಟರಾಗಿ ಬಂದಂತೇ ಹಿಂದೆ ಹೋದರು.

ಅಷ್ಟವಸುಗಳು ಏಕಾದಶರುದ್ರರು ದ್ವಾದಶ ಆದಿತ್ಯರು ಮತ್ತು ಇಬ್ಬರು ಅಶ್ವಿನೀ ದೇವತೆಗಳು– ಒಟ್ಟು ಮೂವತ್ತಮೂರು ದೇವತೆಗಳು.

ಸಗರಸ್ಯ ಚ ಪುತ್ರಾಣಾಂ ಪ್ರಾದುರಾಸೀನ್ಮಹಾತ್ಮನಾಮ್ ।
ಪೃಥಿವ್ಯಾಂ ಭಿದ್ಯಮಾನಾಯಾಂ ನಿರ್ಘಾತಸಮನಿಃಸ್ವನಃ ॥ ೫ ॥

ಇತ್ತ ಮಹಾತ್ಮರಾದ ಸಗರಪುತ್ರರು ನೆಲ ಅಗೆಯುವಾಗ ಸಿಡಿಲಿನಂಥ ಧ್ವನಿ ಉತ್ಪಾತ ಸೂಚಕವಾಗಿ ಪ್ರಾದುರ್ಭವಿಸಿತು.

ತತೋ ಭಿತ್ವಾ ಮಹೀಂ ಸರ್ವೇ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ಸಹಿತಾಃ ಸಾಗರಾಃ ಸರ್ವೇ ಪಿತರಂ ವಾಕ್ಯಮಬ್ರುವನ್ ॥ ೬ ॥

ಬಳಿಕ ಸಗರ ಪುತ್ರರೆಲ್ಲರೂ ಭೂಮಿಯನ್ನು ಅಗೆದು ಎಲ್ಲೆಡೆ ಪ್ರದಕ್ಷಿಣೆ ಮಾಡಿ ಅಶ್ವವನ್ನು ಕಾಣದೆ ಪಿತನ ಬಳಿಬಂದು ಹೇಳಿದನು.

ಪರಿಕ್ರಾಂತಾ ಮಹೀ ಸರ್ವಾ ಸತ್ವವಂತಶ್ಚ ಸೂದಿತಾಃ ।
ದೇವದಾನವರಕ್ಷಾಂಸಿ ಪಿಶಾಚೋರಗಕಿನ್ನರಾಃ ॥ ೭ ॥

ಭೂಮಿಯನ್ನೆಲ್ಲ ಶೋಧಿಸಿದ್ದಾಯಿತು. ಬಲಿಷ್ಠರಾದ ದೇವದಾನವ ರಾಕ್ಷಸರು ಮತ್ತು ಪಿಶಾಚ ನಾಗ ಕಿನ್ನರ ಮುಂತಾದವರನ್ನು ವಧಿಸಿದ್ದೂ ಆಯಿತು.

ನ ಚ ಪಶ್ಯಾಮಹೇಽಶ್ವಂ ತಮಶ್ವಹರ್ತಾರಮೇವ ಚ ।
ಕಿಂ ಕರಿಷ್ಯಾಮ ಭದ್ರಂ ತೇ ಬುದ್ಧಿರತ್ರ ವಿಚಾರ್ಯತಾಮ್ ॥ ೮ ॥

ಆದರೂ ಅಶ್ವವನ್ನೂ ಅಶ್ವಚೋರನನ್ನೂ ನಾವೆಲ್ಲೂ ಕಾಣಲಿಲ್ಲ. ನಾವೇನು ಮಾಡಲಿ? ನಿನಗೆ ಮಂಗಳವಾಗಲಿ' ಇನ್ನೇನು ಉಪಾಯವೆಂದು ಆಲೋಚಿಸು.

ತೇಷಾಂ ತದ್ವಚನಂ ಶ್ರುತ್ವಾ ಪುತ್ರಾಣಾಂ ರಾಜಸತ್ತಮಃ ।
ಸಮನ್ಯುರಬ್ರವೀದ್ವಾಕ್ಯಂ ಸಗರೋ ರಘುನಂದನ ॥ ೯ ॥

ರಾಮ! ರಾಜಶ್ರೇಷ್ಠನಾದ ಸಗರನು ಆ ಪುತ್ರರು ಹೇಳಿದ ಆ ವಚನವನ್ನು ಕೇಳಿ ಸಿಟ್ಟಾಗಿ ನುಡಿದನು.

ಭೂಯಃ ಖನತ ಭದ್ರಂ ವೋ ನಿರ್ಭಿದ್ಯ ವಸುಧಾತಲಮ್ ।
ಅಶ್ವಹರ್ತಾರಮಾಸಾದ್ಯ ಕೃತಾರ್ಥಾಶ್ಚ ನಿವರ್ತಧ್ವ ॥ ೧೦ ॥

ನೀವು ಭೂತಲವನ್ನು ಇನ್ನೂ ಭೇದಿಸಿ ಅಗೆಯಿರಿ. ಅಶ್ವಚೋರನನ್ನು ಕಂಡು-ಹಿಡಿದೇ ಕೃತಾರ್ಥರಾಗಿ ಹಿಂತಿರುಗಿರಿ, ಎಂದು.

ಪಿತುರ್ವಚನಮಾಸಾದ್ಯ ಸಗರಸ್ಯ ಮಹಾತ್ಮನಃ ।
ಷಷ್ಟಿಃ ಪುತ್ರಸಹಸ್ರಾಣಿ ರಸಾತಲಮಭಿದ್ರವನ್ ॥ ೧೧ ॥

ತಂದೆಯಾದ ಮಹಾತ್ಮ ಸಗರನ ಆಜ್ಞೆ ಪಡೆದು ಅರವತ್ತು ಸಾವಿರ ಪುತ್ರರು ರಸಾತಳಕ್ಕೆ ಧಾವಿಸಿದರು.

ಖನ್ಯಮಾನೇ ತತಸ್ತಸ್ಮಿನ್‌ದದೃಶುಃ ಪರ್ವತೋಪಮಮ್ ।
ದಿಶಾಗಜಂ ವಿರೂಪಾಕ್ಷಂ ಧಾರಯಂತಂ ಮಹೀತಲಮ್ ॥ ೧೨ ॥

ಬಳಿಕ ಅಲ್ಲಿ ಭೂಮಿಯನ್ನು ಅಗೆಯುತ್ತಿದ್ದಂತೇ ಸಗರ ಪುತ್ರರು ಅಲ್ಲಿ ಭೂತಲ-ವನ್ನು ಧರಿಸುತ್ತಿರುವ ಬೆಟ್ಟದಂಥ ವಿರೂಪಾಕ್ಷ ಎಂಬ ದಿಗ್ಗಜವನ್ನು ಕಂಡರು.

ಸಪರ್ವತವನಾಂ ಕೃತ್ಸ್ನಾಂ ಪೃಥಿವೀಂ ರಘುನಂದನ ।
ಶಿರಸಾ ಧಾರಯಾಮಾಸ ವಿರೂಪಾಕ್ಷೋ ಮಹಾಗಜಃ ॥ ೧೩ ॥

ರಾಮ, ಬೆಟ್ಟ ಕಾಡುಗಳಿಂದ ಕೂಡಿದ ಸಮಸ್ತ ಪೃಥಿವಿಯನ್ನು ವಿರೂಪಾಕ್ಷ ಎಂಬ ಮಹಾಗಜವು ತಲೆಯಿಂದ ಹೊತ್ತುಕೊಂಡಿದೆ.

ಯದಾ ಪರ್ವಣಿ ಕಾಕುತ್ಸ್ಥ ವಿಶ್ರಮಾರ್ಥಂ ಮಹಾಗಜಃ ।
ಖೇದಾಚ್ಚಾಲಯತೇ ಶೀರ್ಷಂ ಭೂಮಿಕಂಪಸ್ತದಾ ಭವೇತ್ ॥ ೧೪ ॥

ಪರ್ವಕಾಲದಲ್ಲಿ, ರಾಮ! ಯಾವಾಗ ಈ ವಿರೂಪಾಕ್ಷ ಮಹಾಗಜವು ಶ್ರಮ-ದಿಂದ ಸ್ವಲ್ಪ ತಲೆಯಾಡಿಸುವುದೋ ಆಗ ಭೂಕಂಪವಾಗುತ್ತದೆ!

ತಂ ತೇ ಪ್ರದಕ್ಷಿಣಂ ಕೃತ್ವಾ ದಿಶಾಪಾಲಂ ಮಹಾಗಜಮ್ ।
ಮಾನಯಂತೋ ಹಿ ತೇ ರಾಮ ಜಗ್ಮುರ್ಭಿತ್ತ್ವಾ ರಸಾತಲಮ್ ॥ ೧೫ ॥

ಸಗರಪುತ್ರರು, ರಾಮ! ಪೂರ್ವದಿಕ್ಪಾಲಕವಾದ ಆ ವಿರೂಪಾಕ್ಷ ಮಹಾಗಜವನ್ನು ಪ್ರದಕ್ಷಿಣೆ ಮಾಡಿ ಸತ್ಕರಿಸಿ ಪೂರ್ವದಿಕ್ಕಿನ ಭೂಮಿಯನ್ನು ಭೇದಿಸಿ ರಸಾತಳಕ್ಕೆ ಇಳಿಸಿದರು.

ತತಃ ಪೂರ್ವಾಂ ದಿಶಂ ಭಿತ್ವಾ ದಕ್ಷಿಣಾಂ ಬಿಭಿದುಃ ಪುನಃ ।
ದಕ್ಷಿಣಸ್ಯಾಮಪಿ ದಿಶಿ ದದೃಶುಸ್ತೇ ಮಹಾಗಜಮ್ ॥ ೧೬ ॥

ಹೀಗೆ ಪೂರ್ವಭಾಗದ ಭೂಮಿಯನ್ನು ಭೇದಿಸಿದ ಬಳಿಕ ದಕ್ಷಿಣದ ಭೂಭಾಗವನ್ನೂ ಭೇದಿಸಿದರು. ದಕ್ಷಿಣ ದಿಕ್ಕಿನಲ್ಲಿಯೂ ಅವರು ಮಹಾಗಜವನ್ನು ಕಂಡರು.

ಮಹಾಪದ್ಮಂ ಮಹಾತ್ಮಾನಂ ಸುಮಹತ್ಪರ್ವತೋಪಮಮ್ ।
ಶಿರಸಾ ಧಾರಯಂತಂ ತೇ ವಿಸ್ಮಯಂ ಜಗ್ಮುರುತ್ತಮಮ್ ॥ ೧೭ ॥

ಮಹಾಪರ್ವತೋಪಮವಾದ ಮಹಾತ್ಮಮಹಾಪದ್ಮದಿಗ್ಗಜವನ್ನು ಕಂಡರು. ಅದು ಶಿರಸಿನಿಂದ ಭೂಮಿಯನ್ನು ಧರಿಸುವುದನ್ನು ಕಂಡು ಬಲು ವಿಸ್ಮಯ ಹೊಂದಿದರು.

ತತಃ ಪ್ರದಕ್ಷಿಣಂ ಕೃತ್ವಾ ಸಗರಸ್ಯ ಮಹಾತ್ಮನಃ ।
ಷಷ್ಟಿಃ ಪುತ್ರಸಹಸ್ರಾಣಿ ಪಶ್ಚಿಮಾಂ ಬಿಭಿದುರ್ದಿಶಮ್ ॥ ೧೮ ॥

ಮಹಾತ್ಮ ಸಗರನ ಅರವತ್ತು ಸಾವಿರ ಪುತ್ರರು ಮಹಾ ಪದ್ಮ ದಿಗ್ಗಜಕ್ಕೆ ಪ್ರದಕ್ಷಿಣೆ ಮಾಡಿ ಮುಂದೆ ಪಶ್ಚಿಮದ ಭೂಭಾಗವನ್ನೂ ಭೇದಿಸಿದರು.

ಪಶ್ಚಿಮಾಯಾಮಪಿ ದಿಶಿ ಮಹಾಂತಮಚಲೋಪಮಮ್ ।
ದಿಶಾಗಜಂ ಸೌಮನಸಂ ದದೃಶುಸ್ತೇ ಮಹಾಬಲಾಃ ॥ ೧೯ ॥

ಪಶ್ಚಿಮ ದಿಕ್ಕಿನಲ್ಲೂ ಕೂಡ ದೊಡ್ಡದಾದ ಬೆಟ್ಟದಂಥ ಸೌಮನಸ ಎಂಬ ದಿಗ್ಗಜವನ್ನು ಮಹಾಬಲರಾದ ಸಗರ ಪುತ್ರರು ಕಂಡರು.

ತಂ ತೇ ಪ್ರದಕ್ಷಿಣಂ ಕೃತ್ವಾ ಪೃಷ್ಟ್ವಾ ಚಾಪಿ ನಿರಾಮಯಮ್ ।
ಖನಂತಃ ಸಮುಪಕ್ರಾಂತಾ ದಿಶಂ ಹೈಮವತೀಂ ತತಃ ॥ ೨೦ ॥

ಅವರು ಆ ಸೌಮನಸದಿಗ್ಗಜವನ್ನು ಪ್ರದಕ್ಷಿಣೆ ಮಾಡಿ ಕುಶಲ ಪ್ರಶ್ನೆ ಮಾಡಿ ಮುಂದೆ ಉತ್ತರದಿಕ್ಕಿನ ಭೂಮಿಯನ್ನೂ ಅಗೆಯುತ್ತ ಹೋದರು.

ಉತ್ತರಸ್ಯಾಂ ರಘುಶ್ರೇಷ್ಠ ದದೃಶುರ್ಹಿಮಪಾಂಡುರಮ್ ।
ಭದ್ರಂ ಭದ್ರೇಣ ವಪುಷಾ ಧಾರಯಂತಂ ಮಹೀಮಿಮಾಮ್ ॥ ೨೧ ॥

ರಾಮ! ಉತ್ತರದಿಕ್ಕಿನಲ್ಲಿ ಸುಂದರವಾದ ಶರೀರದಿಂದ ಈ ಭೂಮಿಯನ್ನು ಹೊರುತ್ತಿರುವ ಹಿಮದಂತೆ ಬಿಳಿಯಾಗಿರುವ ಭದ್ರ ಎಂಬ ದಿಗ್ಗಜವನ್ನು ಕಂಡರು.

ಸಮಾಲಭ್ಯ ತತಃ ಸರ್ವೇ ಕೃತ್ವಾ ಚೈನಂ ಪ್ರದಕ್ಷಿಣಮ್ ।
ಷಷ್ಟಿಃ ಪುತ್ರಸಹಸ್ರಾಣಿ ಬಿಭಿದುರ್ವಸುಧಾತಲಮ್ ॥ ೨೨ ॥

ಅರವತ್ತು ಸಾವಿರ 'ಸಾಗರ'ರು ಅಂದರೆ, ಸಗರಪುತ್ರರೆಲ್ಲರೂ ಭದ್ರಗಜವನ್ನು ಮುಟ್ಟಿ ಪ್ರದಕ್ಷಿಣೆ ಬಂದು ಅಲ್ಲಿ ಭೂತಲವನ್ನು ಭೇದಿಸಿದರು.

ತತಃ ಪ್ರಾಗುತ್ತರಾಂ ಗತ್ವಾ ಸಾಗರಾಃ ಪ್ರಥಿತಾಂ ದಿಶಮ್ ।
ರೋಷಾದಭ್ಯಖನನ್ಸರ್ವೇ ಪೃಥಿವೀಂ ಸಗರಾತ್ಮಜಾಃ ॥ ೨೩ ॥

'ಸಗರಾತ್ಮಜ'ರು ಸಗರ ಪುತ್ರರು ಮುಂದೆ ಸರ್ವ ಕರ್ಮಗಳಿಗೆ ಯೋಗ್ಯವೆಂದು ಪ್ರಸಿದ್ಧವಾದ ಈಶಾನ್ಯದಿಕ್ಕಿಗೆ ಹೋಗಿ ಎಲ್ಲರೂ ರೋಷದಿಂದ ಪೃಥಿವಿಯನ್ನು ಅಗೆದರು.

ಇಲ್ಲಿ 'ಸಾಗರಾಃ' ಎಂಬುದನ್ನು ಹೀಗೆ ಹಿಂದಿನ ಶ್ಲೋಕಕ್ಕೆ ಒಯ್ದರೆ ಈ ಶ್ಲೋಕ–ದಲ್ಲಿ 'ಸಗರಾತ್ಮಜಾಃ' ಎಂಬುದು ವ್ಯರ್ಥ ಪುನರುಕ್ತಿಯಾಗುವುದಿಲ್ಲ. ಅಥವಾ 'ಸಗರಾತ್ಮಜಾಃ' ಶಬ್ದವನ್ನು ಮುಂದಿನ ಶ್ಲೋಕಕ್ಕೂ ಅನ್ವಯಿಸಬಹುದು. 'ಸಾಗರಾಃ' ಎಂಬುದು ಈ ಶ್ಲೋಕದಲ್ಲಿಯೇ ಇರಲಿ.

ತೇ ತು ಸರ್ವೇ ಮಹಾತ್ಮಾನೋ ಭೀಮವೇಗಾ ಮಹಾಬಲಾಃ ।
ದದೃಶುಃ ಕಪಿಲಂ ತತ್ರ ವಾಸುದೇವಂ ಸನಾತನಮ್ ॥ ೨೪ ॥

ಆ 'ಸಗರಾತ್ಮಜ'ರು ಸಗರ ಪುತ್ರರು ಭಯಂಕರ ವೇಗ ಮತ್ತು ಮಹಾಬಲ ಉಳ್ಳವರು, ಮಹಾತ್ಮರು, ತಂದೆಯ ಯಜ್ಞವನ್ನು ರಕ್ಷಿಸುವುದಕ್ಕಾಗಿ ಮಹತ್ತಾದ ಆತ್ಮಶಕ್ತಿ ತೋರಿದವರು. ಕಪಿಲಮುನಿಯಲ್ಲಿ ಅಪಚಾರಗೈದು ಸುಟ್ಟು ಬೂದಿ–ಯಾದರೂ ಮುಂದೆ ಭಗೀರಥನ ಪ್ರಯತ್ನದಿಂದ ಶಾಶ್ವತ ಸದ್ಗತಿ ಪಡೆದರು. ಅವರು ಅಲ್ಲಿ ಕಪಿಲಾವತಾರನಾದ ವಾಸುದೇವರೂಪಿ ಸನಾತನ ಪರಮಾತ್ಮನನ್ನು ಕಂಡರು.

ಹಯಂ ಚ ತಸ್ಯ ದೇವಸ್ಯ ಚರಂತಮವಿದೂರತಃ ।
ಪ್ರಹರ್ಷಮತುಲಂ ಪ್ರಾಪ್ತಾಃ ಸರ್ವೇ ತೇ ರಘುನಂದನ ॥ ೨೫ ॥

ಕಪಿಲದೇವನ ಬಳಿಯೇ ಹುಲ್ಲು ಮೇಯುತ್ತಿದ್ದ ಅಶ್ವವನ್ನು ಕಂಡು ಅತುಲ ಹರ್ಷ ಹೊಂದಿದರು, ಆ ಎಲ್ಲ ಸಗರ ಪುತ್ರರು.

ತೇ ತಂ ಹಯಹರಂ ಜ್ಞಾತ್ವಾ ಕ್ರೋಧಪರ್ಯಾಕುಲೇಕ್ಷಣಾಃ ।

ಖನಿತ್ರಲಾಂಗಲಧರಾ ನಾನಾವೃಕ್ಷಶಿಲಾಧರಾಃ ॥
ಅಭ್ಯಧಾವಂತ ಸಂಕ್ರುದ್ಧಾಸ್ತಿಷ್ಠತಿಷ್ಠೇತಿ ಚಾಬ್ರುವನ್ ॥ ೨೬ ॥

ಅವರು ಕಪಿಲನೇ ಅಶ್ವಚೋರನೆಂದು ತಪ್ಪಾಗಿ ಭಾವಿಸಿ ಕ್ರೋಧದಿಂದ ಕಣ್ಣು ಕೆಂಪಾಗಿ ಮಾಡಿಕೊಂಡು ಗುದ್ದಲಿ ನೇಗಿಲು ಹಿಡಿದು, ನಾನಾ ವೃಕ್ಷ ಹಾಗೂ ಶಿಲೆಗಳನ್ನು ಹಿಡಿದು ಧಾವಿಸಿ ಕೋಪದಿಂದ ನಿಲ್ಲು ನಿಲ್ಲೆಂದು ಆರ್ಭಟಿಸಿದರು.

ಅಸ್ಮಾಕಂ ತ್ವಂ ಹಿ ತುರಗಂ ಯಜ್ಞೀಯಂ ಹೃತವಾನಸಿ ।
ದುರ್ಮೇಧಸ್ತ್ವಂ ಹಿ ಸಂಪ್ರಾಪ್ತಾನ್ವಿದ್ಧಿ ನಃ ಸಗರಾತ್ಮಜಾನ್ ॥ ೨೭ ॥

'ನಮ್ಮ ಯಜ್ಞಾಶ್ವವನ್ನು ನೀನು ಕದ್ದು ತಂದಿರುವೆ! ದುರ್ಬುದ್ಧಿಯವನು ನೀನು! ನಮ್ಮನ್ನು ಸಗರ ಪುತ್ರರೆಂದು ತಿಳಿ' ಎಂದರು.

ಶ್ರುತ್ವಾ ತು ವಚನಂ ತೇಷಾಂ ಕಪಿಲೋ ರಘುನಂದನ ।
ರೋಷೇಣ ಮಹತಾವಿಷ್ಟೋ ಹುಂಕಾರಮಕರೋತ್ತದಾ ॥ ೨೮ ॥

ಅವರ ಮಾತನ್ನು ಕೇಳಿ, ರಾಮ! ಕಪಿಲನು ಮಹಾರೋಷದಿಂದ ಆವಿಷ್ಟನಾಗಿ ಹುಂಕಾರಗೈದನು.

ತತಸ್ತೇನಾಪ್ರಮೇಯೇನ ಕಪಿಲೇನ ಮಹಾತ್ಮನಾ ।
ಭಸ್ಮರಾಶೀಕೃತಾಃ ಸರ್ವೇ ಕಾಕುತ್ಸ್ಥ ಸಗರಾತ್ಮಜಾಃ ॥ ೨೯ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಚತ್ವಾರಿಂಶಃ ಸರ್ಗಃ ॥ ೪೦ ॥

ಅಪ್ರಮೇಯನಾದ ಮಹಾತ್ಮ ಕಪಿಲನಿಂದ, ರಾಮ! ಸಗರಪುತ್ರರು ಎಲ್ಲರೂ ಸುಟ್ಟು ಬೂದಿರಾಶಿಗಳಾದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ನಲವತ್ತನೇ ಸರ್ಗ ಮುಗಿಯಿತು.

ಏಕಚತ್ವಾರಿಂಶಃ ಸರ್ಗಃ

ಪುತ್ರಾಂಶ್ಚಿರಗತಾನ್ ಜ್ಞಾತ್ವಾ ಸಗರೋ ರಘುನಂದನ ।
ನಪ್ತಾರಮಬ್ರವೀದ್ರಾಜಾ ದೀಪ್ಯಮಾನಂ ಸ್ವತೇಜಸಾ ॥ ೧ ॥

ರಾಮ! ಪುತ್ರರು ಹೋಗಿ ಬಹುದಿನಗಳಾದುದನ್ನು ಆಲೋಚಿಸಿ ರಾಜಾ ಸಗರನು ಮೊಮ್ಮಗನಾದ ತನ್ನ ತೇಜದಿಂದ ಹೊಳೆಯುತ್ತಿದ್ದ ಅಂಶುಮಂತನಿಗೆ ಹೇಳಿದ.

ಶೂರಶ್ಚ ಕೃತವಿದ್ಯಶ್ಚ ಪೂರ್ವೈಸ್ತುಲ್ಯೋಽಸಿ ತೇಜಸಾ ।
ಪಿತೄಣಾಂ ಗತಿಮನ್ವಿಚ್ಛ ಯೇನ ಚಾಶ್ವೋಽಪವಾಹಿತಃ ॥ ೨ ॥

ನೀನು ಶೂರ, ವಿದ್ಯೆಕಲಿತವ, ಪೂರ್ವಿಕರಿಗೆ ತೇಜಸ್ಸಿನಿಂದ ಸದೃಶನೇ ಆಗಿರುವೆ. ನಿನ್ನ ಪಿತೃಗಳು ಎಲ್ಲಿಗೆ ಹೋದರು? ಎಂಬುದನ್ನು ಪತ್ತೆ ಮಾಡು, ಕುದುರೆಯನ್ನು ಕದ್ದವನೆಲ್ಲಿ ಎಂಬುದನ್ನೂ ಪತ್ತೆಮಾಡು.

ಅಂತರ್ಭೌಮಾನಿ ಸತ್ವಾನಿ ವೀರ್ಯವಂತಿ ಮಹಾಂತಿ ಚ ।
ತೇಷಾಂ ತ್ವಂ ಪ್ರತಿಘಾತಾರ್ಥಂ ಸಾಸಿಂ ಗೃಹ್ಣೀಷ್ವ ಕಾರ್ಮುಕಮ್ ॥ ೩

ಭೂಮಿಯೊಳಗೆ ವಾಸ ಮಾಡುವ ಜೀವಿಗಳು ಪರಾಕ್ರಮ ಉಳ್ಳವರು ಮಹಾ-ಶರೀರ ಉಳ್ಳವರು. ಅವರನ್ನು ಇದಿರಿಸುವುದಕ್ಕೆ ಖಡ್ಗ ಮತ್ತು ಧನುಸ್ಸುಗಳನ್ನು ಹಿಡಿದುಕೊಳ್ಳು.

ಅಭಿವಾದ್ಯಾಭಿವಾದ್ಯಾಂಸ್ತ್ವಂ ಹತ್ವಾ ವಿಘ್ನಕರಾನಪಿ ।
ಸಿದ್ಧಾರ್ಥಃ ಸನ್ನಿವರ್ತಸ್ವ ಮಮ ಯಜ್ಞಸ್ಯ ಪಾರಗಃ ॥ ೪ ॥

ವಂದ್ಯರಿಗೆ ವಂದನ ಮಾಡು, ವಿಘ್ನಕಾರಿಗಳನ್ನು ಕೊಲ್ಲು. ಕೃತಾರ್ಥನಾಗಿ ಹಿಂತಿರುಗು. ನನ್ನ ಯಜ್ಞ ಪೂರೈಸುವಂತೆ ಮಾಡು.

ಏವಮುಕ್ತೋಽಂಶುಮಾನ್ಸಮ್ಯಕ್ಸಗರೇಣ ಮಹಾತ್ಮನಾ ।
ಧನುರಾದಾಯ ಖಡ್ಗಂ ಚ ಜಗಾಮ ಲಘುವಿಕ್ರಮಃ ॥ ೫ ॥

ಹೀಗೆ ಮಹಾತ್ಮ ಸಗರ ಹೇಳಿದಾಗ ಅಂಶುಮಂತನು ಚೆನ್ನಾಗಿ ಧನುಸ್ಸನ್ನೂ ಖಡ್ಗವನ್ನೂ ಹಿಡಿದು ವೇಗವಾಗಿ ಹೆಜ್ಜೆ ಇಟ್ಟು ನಡೆದ.

ಸ ಖಾತಂ ಪಿತೃಭಿರ್ಮಾರ್ಗಮಂತರ್ಭೌಮಂ ಮಹಾತ್ಮಭಿಃ ।
ಪ್ರಾಪದ್ಯತ ನರಶ್ರೇಷ್ಠಸ್ತೇನ ರಾಜ್ಞಾऽಭಿಚೋದಿತಃ ॥ ೬ ॥

ಮಹಾತ್ಮರಾದ ಪಿತೃಗಳು ಭೂಮಿಯೊಳಗೆ ಅಗೆದು ನಿರ್ಮಿಸಿದ್ದ ಮಾರ್ಗವನ್ನು ಪುರುಷೋತ್ತಮನಾದ ಅಂಶುಮಂತನು ರಾಜಾಜ್ಞೆಯಿಂದ ಅನುಸರಿಸಿದ.

ದೈತ್ಯದಾನವರಕ್ಷೋಭಿಃ ಪಿಶಾಚಪತಗೋರಗೈಃ ।
ಪೂಜ್ಯಮಾನಂ ಮಹಾತೇಜಾ ದಿಶಾಗಜಮಪಶ್ಯತ ॥ ೭ ॥

ದೈತ್ಯ ದಾನವ ರಾಕ್ಷಸ ಪಿಶಾಚ ಪಕ್ಷಿ ನಾಗರಿಂದ ಪೂಜಿಸಲ್ಪಡುವ ದಿಗ್ಗಜವನ್ನು ಮಹಾತೇಜನಾದ ಅಂಶುಮಂತ ಕಂಡ.

ಸ ತಂ ಪ್ರದಕ್ಷಿಣಂ ಕೃತ್ವಾ ಪೃಷ್ಟ್ವಾ ಚೈವ ನಿರಾಮಯಮ್ ।
ಪಿತೄನ್ ಸ ಪರಿಪಪ್ರಚ್ಛ ವಾಜಿಹರ್ತಾರಮೇವ ಚ ॥ ೮ ॥

ಅಂಶುಮಂತ ದಿಗ್ಗಜಕ್ಕೆ ಪ್ರದಕ್ಷಿಣೆ ಮಾಡಿ ಕುಶಲಪ್ರಶ್ನೆ ಮಾಡಿ ತನ್ನ ಪಿತೃಗಳ ಮತ್ತು ಅಶ್ವಚೋರನ ಬಗ್ಗೆ ಕೇಳಿದ.

ದಿಶಾಗಜಸ್ತು ತಚ್ಛ್ರುತ್ವಾ ಪ್ರತ್ಯಾಹಾಂಶುಮತೋ ವಚಃ ।
ಆಸಮಂಜ ಕೃತಾರ್ಥಸ್ತ್ವಂ ಸಹಾಶ್ವಃ ಶೀಘ್ರಮೇಷ್ಯಸಿ ॥ ೯ ॥

ದಿಗ್ಗಜವು ಅಂಶುಮಂತನ ಆ ಮಾತನ್ನಾಲಿಸಿ ಪ್ರತಿಯಾಗಿ ಹೇಳಿತು, 'ಅಸಮಂಜಸನ ಪುತ್ರನೆ! ನೀನು ನಿನ್ನ ಪ್ರಯತ್ನದಲ್ಲಿ ಯಶಸ್ವಿಯಾಗಿ ಬೇಗನೆ ಅಶ್ವವನ್ನು ಹಿಡಿದುಕೊಂಡು ಹಿಂತಿರುಗಿ ಬರುವಿ' ಎಂದಿತು.

ತಸ್ಯ ತದ್ವಚನಂ ಶ್ರುತ್ವಾ ಸರ್ವಾನೇವ ದಿಶಾಗಜಾನ್ ।
ಯಥಾಕ್ರಮಂ ಯಥಾನ್ಯಾಯಂ ಪ್ರಷ್ಟುಂ ಸಮುಪಚಕ್ರಮೇ ॥ ೧೦ ॥

ದಿಗ್ಗಜದ ಆ ಮಾತನ್ನು ಕೇಳಿ ಅಂಶುಮಂತನು ಎಲ್ಲ ದಿಗ್ಗಜಗಳನ್ನೂ ಕ್ರಮವಾಗಿ ವಿಧ್ಯುಕ್ತವಾಗಿ ಪ್ರಶ್ನಿಸಲು ತೊಡಗಿದ.

ತೈಶ್ಚ ಸರ್ವೈರ್ದಿಶಾಪಾಲೈರ್ವಾಕ್ಯಜ್ಞೈರ್ವಾಕ್ಯಕೋವಿದೈಃ ।
ಪೂಜಿತಃ ಸಹಯಶ್ಚೈವ ಗಂತಾಸೀತ್ಯಭಿಚೋದಿತಃ ॥ ೧೧ ॥

ಮಾತು ಬಲ್ಲವುಗಳೂ ಮಾತಿನಲ್ಲಿ ಜಾಣರೂ ಆದ ಆ ಎಲ್ಲ ದಿಗ್ಗಜಗಳಿಂದಲೂ

ಪ್ರೀತಿಯಿಂದ ಆದರಿಸಲ್ಪಟ್ಟ ಅಂಶುಮಂತನು 'ಅಶ್ವದೊಂದಿಗೇ ಹಿಂತಿರುಗಿ ಹೋಗುವಿ' ಎಂದು ಆಶೀರ್ವದಿಸಲ್ಪಟ್ಟನು.

ತೇಷಾಂ ತದ್ವಚನಂ ಶ್ರುತ್ವಾ ಜಗಾಮ ಲಘುವಿಕ್ರಮಃ ।
ಭಸ್ಮರಾಶೀಕೃತಾ ಯತ್ರ ಪಿತರಸ್ತಸ್ಯ ಸಾಗರಾಃ ॥ ೧೨ ॥

ಆ ದಿಗ್ಗಜಗಳ ಮಾತನ್ನು ಕೇಳಿ ವೇಗವಾಗಿ ಹೆಜ್ಜೆ ಇಟ್ಟು, ತನ್ನ ಪಿತೃಗಳು ಸಗರ ಪುತ್ರರು ಬೂದಿರಾಶಿಗಳಾಗಿದ್ದ ಸ್ಥಳಕ್ಕೆ ನಡೆದ.

ಸ ದುಃಖವಶಮಾಪನ್ನಸ್ತ್ವಸಮಂಜಸುತಸ್ತದಾ ।
ಚುಕ್ರೋಶ ಪರಮಾರ್ತಸ್ತು ವಧಾತ್ತೇಷಾಂ ಸುದುಃಖಿತಃ ॥ ೧೩ ॥

ಅಸಮಂಜನ ಪುತ್ರ ಅಂಶುಮಂತನು ಪಿತೃಗಳ ವಧೆಯಿಂದ ಬಹಳ ದುಃಖಿತ-ನಾದ, ಬಹಳ ಆರ್ತನಾದ, ದುಃಖಪರವಶನಾಗಿ ಅತ್ತುಬಿಟ್ಟ!

ಯಜ್ಞೀಯಂ ಚ ಹಯಂ ತತ್ರ ಚರಂತಮವಿದೂರತಃ ।
ದದರ್ಶ ಪುರುಷವ್ಯಾಘ್ರೋ ದುಃಖಶೋಕಸಮನ್ವಿತಃ ॥ ೧೪ ॥

ದುಃಖ ಶೋಕಯುಕ್ತನಾಗಿಯೇ ಅಂಶುಮಂತನು ಸಮೀಪದಲ್ಲಿಯೇ ಮೇಯುತ್ತಿದ್ದ ಯಜ್ಞಾಶ್ವವನ್ನೂ ಕಂಡ.

ಸ ತೇಷಾಂ ರಾಜಪುತ್ರಾಣಾಂ ಕರ್ತುಕಾಮೋ ಜಲಕ್ರಿಯಾಮ್ ।
ಸಲಿಲಾರ್ಥೀ ಮಹಾತೇಜಾ ನ ಚಾಪಶ್ಯಜ್ಜಲಾಶಯಮ್ ॥ ೧೫ ॥

ಮಹಾತೇಜನಾದ ಅಂಶುಮಂತನು ಆ ರಾಜಕುಮಾರರಿಗೆ ಜಲಸೇಚನೆ ಮಾಡಲು ಬಯಸಿ ಜಲಾನ್ವೇಷಣ ಮಾಡಿದ. ಜಲಾಶಯ ಎಲ್ಲಿಯೂ ಕಂಡು ಬರಲಿಲ್ಲ.

ವಿಸಾರ್ಯ ನಿಪುಣಾಂ ದೃಷ್ಟಿಂ ತತೋಽಪಶ್ಯತ್ಖಗಾಧಿಪಮ್ ।
ಪಿತೃಣಾಂ ಮಾತುಲಂ ರಾಮ ಸುಪರ್ಣಮನಿಲೋಪಮಮ್॥ ೧೬ ॥

ದೂರದರ್ಶನಕ್ಕೆ ಸಮರ್ಥವಾದ ನೋಟವನ್ನು ಹರಿಸಿ ರಾಮ! ಪಿತೃಗಳ ಸೋದರಮಾವನಾದ ಗಾಳಿವೇಗದ ಗರುಡನನ್ನು ಕಂಡ ಅಂಶುಮಂತ.

ಸ ಚೈನಮಬ್ರವೀದ್ವಾಕ್ಯಂ ವೈನತೇಯೋ ಮಹಾಬಲಃ ।
ಮಾ ಶುಚಃ ಪುರುಷವ್ಯಾಘ್ರ ವಧೋಽಯಂ ಲೋಕಸಂಮತಃ॥ ೧೭ ॥

ಮಹಾಬಲನಾದ ಗರುಡನು ಅಂಶುಮಂತನಿಗೆ ಹೇಳಿದ, ಶೋಕಿಸಬೇಡ! ಪುರುಷೋತ್ತಮ! ಈ ವಧೆ ಲೋಕ ಸಂಮತವೆ.

ಕಪಿಲೇನಾಪ್ರಮೇಯೇನ ದಗ್ಧಾ ಹೀಮೇ ಮಹಾಬಲಾಃ ।
ಸಲಿಲಂ ನಾರ್ಹಸಿ ಪ್ರಾಜ್ಞ ದಾತುಮೇಷಾಂ ಹಿ ಲೌಕಿಕಮ್ ॥ ೧೮ ॥

ಅಪ್ರಮೇಯನಾದ ಕಪಿಲನಿಂದ ಮಹಾಬಲರಾದ ಈ ನಿನ್ನ ಪಿತೃಗಳು ಸುಟ್ಟು-ಹೋದರು. ಅವರಿಗೆ ಲೌಕಿಕ ಜಲದಿಂದ ಪ್ರಾಜ್ಞನೆ! ನೀನು ತರ್ಪಣ ಕೊಡುವಂತಿಲ್ಲ,

ಬ್ರಾಹ್ಮಣನಾದ ಕಪಿಲಮುನಿಯಲ್ಲಿ ಗೈದ ಅಪಚಾರದಿಂದ ಅವರು ಅಪಮೃತ್ಯುವಶರಾಗಿದ್ದಾರೆ! ಅಪಮೃತ್ಯು ಹೊಂದಿದವರಿಗೆ ಪ್ರಾಯಶ್ಚಿತ್ತವಿಲ್ಲ. ಪಿಂಡತರ್ಪಣಗಳೂ ಇಲ್ಲ.

ಗಂಗಾ ಹಿಮವತೋ ಜ್ಯೇಷ್ಠಾ ದುಹಿತಾ ಪುರುಷರ್ಷಭ ।
ತಸ್ಯಾಂ ಕುರು ಮಹಾಬಾಹೋ ಪಿತೄಣಾಂ ತು ಜಲಕ್ರಿಯಾಮ್॥೧೯॥

ಪುರುಷೋತ್ತಮ! ಅಂಶುಮಂತ! ಮಹಾಬಾಹೋ! ಹಿಮವಂತನ ಜ್ಯೇಷ್ಠಪುತ್ರಿಯಾದ ಗಂಗೆಯ ಜಲದಲ್ಲಿ ಪಿತೃಗಳಿಗೆ ಜಲತರ್ಪಣ ನೀಡು.

ಭಸ್ಮರಾಶೀಕೃತಾನೇತಾನ್‌ಪ್ಲಾವಯೇಲ್ಲೋಕಪಾವನೀ ।
ತಯಾ ಕ್ಲಿನ್ನಮಿದಂ ಭಸ್ಮ ಗಂಗಯಾ ಲೋಕಕಾಂತಯಾ ॥
ಷಷ್ಟಿಂ ಪುತ್ರಸಹಸ್ರಾಣಿ ಸ್ವರ್ಗಲೋಕಂ ನಯಿಷ್ಯತಿ ॥ ೨೦ ॥

ಅದಕ್ಕೆ ಮೊದಲು, ಬೂದಿರಾಶಿಯಾಗಿ ಬಿದ್ದಿರುವ ಪಿತೃಗಳ ಭಸ್ಮ ಗಂಗಾಜಲ-ದಿಂದ ಒದ್ದೆಯಾಗಬೇಕು. ಲೋಕಕ್ಕೆ ಅಭೀಷ್ಟಳಾದ ಲೋಕಪಾವನೆಯಾದ ಗಂಗೆ ಸ್ಪರ್ಶಮಾತ್ರದಿಂದಲೆ ಪ್ರಾಯಶ್ಚಿತ್ತವಿಲ್ಲದೇ ಅರವತ್ತು ಸಾವಿರ ಪಿತೃಗಳನ್ನೂ ಸ್ವರ್ಗಕ್ಕೆ ಒಯ್ಯುವಳು.

ಗಂಗಾಮಾನಯ ಭದ್ರಂ ತೇ ದೇವಲೋಕಾನ್ಮಹೀತಲಮ್ ।
ಕ್ರಿಯತಾಂ ಯದಿ ಶಕ್ತೋಸಿ ಗಂಗಾಯಾಸ್ತ್ವವತಾರಣಮ್ ॥ ೨೧ ॥

ಗರುಡನು ಅಂಶುಮಂತನಿಗೆ ಹೇಳಿದನು, 'ನಿನಗೆ ಮಂಗಳವಾಗಲಿ ದೇವ-ಲೋಕದಿಂದ ಗಂಗೆಯನ್ನು ಭೂಮಿಗೆ ತರಿಸು. ಗಂಗೆಯನ್ನು ಸ್ವರ್ಗದಿಂದ ಇಳಿಸಲು ನೀನು ಶಕ್ತನಿದ್ದರೆ, ಇಳಿಸು.

ಗಚ್ಛ ಚಾಶ್ವಂ ಮಹಾಭಾಗ ತಂ ಗೃಹ್ಯ ಪುರುಷರ್ಷಭ ।
ಯಜ್ಞಂ ಪೈತಾಮಹಂ ವೀರ ಸಂವರ್ತಯಿತುಮರ್ಹಸಿ ॥ ೨೨ ॥

ಮಹಾಭಾಗ್ಯಶಾಲಿಯೇ! ಪುರುಷೋತ್ತಮನೆ! ವೀರ ಅಂಶುಮಂತನೆ, ಈಗ ನೀನು ಕುದುರೆಯನ್ನು ಹಿಡಿದೊಯ್ದು ಪಿತಾಮಹ ಸಗರನ ಯಜ್ಞವನ್ನು ಪೂರೈಸುವಂತೆ ಮಾಡು.'

ಸುಪರ್ಣವಚನಂ ಶ್ರುತ್ವಾ ಸೋಽಂಶುಮಾನತಿವೀರ್ಯವಾನ್ ।
ತ್ವರಿತಂ ಹಯಮಾದಾಯ ಪುನರಾಯಾನ್ಮಹಾಯಶಾಃ ॥ ೨೩ ॥

ಗರುಡನ ಮಾತನ್ನು ಕೇಳಿ ಅತಿಪರಾಕ್ರಮಿ ಮಹಾ ಕೀರ್ತಿಶಾಲಿಯಾದ ಅಂಶು-ಮಂತನು ಕುದುರೆಯನ್ನು ಹಿಡಿದುಕೊಂಡು ಬೇಗನೆ ಸಗರನ ಬಳಿಗೆ ಹಿಂತಿರುಗಿ-ಬಂದ.

ತತೋ ರಾಜಾನಮಾಸಾದ್ಯ ದೀಕ್ಷಿತಂ ರಘುನಂದನ ।
ನ್ಯವೇದಯದ್ಯಥಾವೃತ್ತಂ ಸುಪರ್ಣವಚನಂ ತಥಾ ॥ ೨೪ ॥

ರಾಮ! ಅಂಶುಮಂತನು ದೀಕ್ಷಿತನಾದ ಸಗರನ ಬಳಿಗೆ ಬಂದು ಪಿತೃಗಳ ಸಮಾಚಾರವನ್ನೂ ಗರುಡನ ಮಾತನ್ನೂ ನಿವೇದಿಸಿದ.

ತಚ್ಛ್ರುತ್ವಾ ಘೋರಸಂಕಾಶಂ ವಾಕ್ಯಮಂಶುಮತೋ ನೃಪಃ ।
ಯಜ್ಞಂ ನಿರ್ವರ್ತಯಾಮಾಸ ಯಥಾಕಲ್ಪಂ ಯಥಾವಿಧಿ ॥ ೨೫ ॥

ರಾಜಾ ಸಗರನು ಅಂಶುಮಂತನು ಕೇಳಿದ ಘೋರವಾರ್ತೆಯನ್ನು ಕೇಳಿ ಯಥಾಕ್ರಮವಾಗಿ ವಿಧ್ಯುಕ್ತವಾಗಿ ಯಜ್ಞವನ್ನು ಪೂರೈಸಿದ.

ಸ್ವಪುರಂ ಚಾಗಮಚ್ಛ್ರೀಮಾನಿಷ್ಟಯಜ್ಞೋ ಮಹೀಪತಿಃ ।
ಗಂಗಾಯಾಶ್ಚಾಗಮೇ ರಾಜಾ ನಿಶ್ಚಯಂ ನಾಧ್ಯಗಚ್ಛತ ॥ ೨೬ ॥

ಯಜ್ಞ ಮಾಡಿದ ಶ್ರೀಮಾನ್ ರಾಜಾ ಸಗರನು ತನ್ನ ನಗರಕ್ಕೆ ಹಿಂತಿರುಗಿದ. ಗಂಗೆಯನ್ನು ಸ್ವರ್ಗದಿಂದ ತರುವಲ್ಲಿ ಉಪಾಯವನ್ನು ಅವನು ತಿಳಿಯಲಿಲ್ಲ.

ಅಕೃತ್ವಾ ನಿಶ್ಚಯಂ ರಾಜಾ ಕಾಲೇನ ಮಹತಾ ಮಹಾನ್ ।
ತ್ರಿಂಶದ್ವರ್ಷಸಹಸ್ರಾಣಿ ರಾಜ್ಯಂ ಕೃತ್ವಾ ದಿವಂ ಗತಃ ॥ ೨೭ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಏಕಚತ್ವಾರಿಂಶಃ ಸರ್ಗಃ ॥ ೪೧ ॥

ಉಪಾಯವನ್ನು ತಿಳಿಯದೇ ಮಹಾರಾಜ ಸಗರನು ಮೂವತ್ತು ಸಾವಿರ ವರ್ಷ ರಾಜ್ಯಭಾರ ಮಾಡಿ ದೀರ್ಘಕಾಲದ ಬಳಿಕ ಸ್ವರ್ಗಸ್ಥನಾದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ನಲವತ್ತೊಂದನೆ ಸರ್ಗ ಮುಗಿಯಿತು.

ದ್ವಿಚತ್ವಾರಿಂಶಃ ಸರ್ಗಃ

ಕಾಲಧರ್ಮಂ ಗತೇ ರಾಮ ಸಗರೇ ಪ್ರಕೃತೀಜನಾಃ ।
ರಾಜಾನಂ ರೋಚಯಾಮಾಸುರಂಶುಮಂತಂ ಸುಧಾರ್ಮಿಕಮ್ ॥೧॥

ರಾಮ! ಸಗರನು ಕಾಲಾಧೀನನಾದಾಗ ಪ್ರಜೆಗಳು ಒಳ್ಳೆಯ ಧಾರ್ಮಿಕನಾದ ಅಂಶುಮಂತ ರಾಜನಾಗಲೆಂದು ಬಯಸಿದರು.

ಸ ರಾಜಾ ಸುಮಹಾನಾಸೀದಂಶುಮಾನ್‌ರಘುನಂದನ ।
ತಸ್ಯ ಪುತ್ರೋ ಮಹಾನಾಸೀದ್ದಿಲೀಪ ಇತಿ ವಿಶ್ರುತಃ ॥ ೨ ॥

ರಾಮ! ಅಂಶುಮಂತನು ಮಹಾರಾಜನಾದ. ಅವನ ಪುತ್ರನು ದಿಲೀಪನೆಂದು ಪ್ರಸಿದ್ಧ, ಮಹಾತ್ಮ.

ತಸ್ಮಿನ್ರಾಜ್ಯಂ ಸಮಾವೇಶ್ಯ ದಿಲೀಪೇ ರಘುನಂದನ ।
ಹಿಮವಚ್ಛಿಖರೇ ಪುಣ್ಯೇ ತಪಸ್ತೇಪೇ ಸುದಾರುಣಮ್ ॥ ೩ ॥

ರಾಮ! ಆ ದಿಲೀಪನಿಗೆ ರಾಜ್ಯವನ್ನು ಒಪ್ಪಿಸಿ ಅಂಶುಮಂತನು ಹಿಮಾಲಯದ ಪುಣ್ಯಕರ ಶಿಖರದಲ್ಲಿ ಕಠಿನವಾದ ತಪಸ್ಸು ಮಾಡಿದ.

ದ್ವಾತ್ರಿಂಶಚ್ಚ ಸಹಸ್ರಾಣಿ ವರ್ಷಾಣಿ ಸುಮಹಾಯಶಾಃ ।
ತಪೋವನಂ ಗತೋ ರಾಮ ಸ್ವರ್ಗಂ ಲೇಭೇ ತಪೋಧನಃ ॥ ೪ ॥

ರಾಮ! ಮಹಾಕೀರ್ತಿಶಾಲಿಯಾದ ಅಂಶುಮಂತನು ತಪೋಧನ. ಗಂಗೆಯನ್ನು ಭೂಮಿಗೆ ಇಳಿಸುವುದಕ್ಕಾಗಿ ಮೂವತ್ತೆರಡು ಸಾವಿರ ವರ್ಷಕಾಲ ತಪೋವನದಲ್ಲಿದ್ದು ತಪಗೈದು ಸ್ವರ್ಗ ಪಡೆದುಕೊಂಡ. ಹೊರತು ಗಂಗೆಯನ್ನು ಸ್ವರ್ಗದಿಂದ ತರಿಸಲು ಶಕ್ತನಾಗಲಿಲ್ಲ.

ದಿಲೀಪಸ್ತು ಮಹಾತೇಜಾಃ ಶ್ರುತ್ವಾ ಪೈತಾಮಹಂ ವಧಮ್ ।
ದುಃಖೋಪಹತಯಾ ಬುದ್ಧ್ಯಾ ನಿಶ್ಚಯಂ ನಾಧ್ಯಗಚ್ಛತ ॥ ೫ ॥

ಮಹಾತೇಜನಾದ ದಿಲೀಪನು ಪಿತಾಮಹರ ವಧೆಯನ್ನು ತಿಳಿದು ದುಃಖ-ಪರವಶನಾದನೇ ಹೊರತು ಗಂಗೆಯನ್ನು ಸ್ವರ್ಗದಿಂದ ತರಿಸಲು ಶಕ್ತನಾಗಲಿಲ್ಲ.

ಕಥಂ ಗಂಗಾವತರಣಂ ಕಥಂ ತೇಷಾಂ ಜಲಕ್ರಿಯಾ ।
ತಾರಯೇಯಂ ಕಥಂ ಚೈನಾನಿತಿ ಚಿಂತಾಪರೋಽಭವತ್ ॥ ೬ ॥

ಗಂಗೆಯನ್ನು ಸ್ವರ್ಗದಿಂದ ಹೇಗೆ ಕೆಳಗೆ ಇಳಿಸಬೇಕು? ಪಿತಾಮಹರಿಗೆ ಜಲತರ್ಪಣ ಹೇಗೆ ಸಾಧ್ಯವಾದೀತು? ಅವರನ್ನು ಹೇಗೆ ಪಾಪದಿಂದ ಪಾರು-ಮಾಡಬೇಕು ಎಂದು ಚಿಂತಾಪರನಾದ.

ತಸ್ಯ ಚಿಂತಯತೋ ನಿತ್ಯಂ ಧರ್ಮೇಣ ವಿದಿತಾತ್ಮನಃ ।
ಪುತ್ರೋ ಭಗೀರಥೋ ನಾಮ ಜಜ್ಞೇ ಪರಮಧಾರ್ಮಿಕಃ ॥ ೭ ॥

ಧರ್ಮಾಚರಣದಿಂದ ಪ್ರಸಿದ್ಧನಾದ ದಿಲೀಪನು ಸದಾ ಚಿಂತೆ ಮಾಡುತ್ತಲೇ ಇದ್ದ. ಅವನಿಗೆ ಭಗೀರಥನೆಂಬ ಪರಮ ಧಾರ್ಮಿಕನಾದ ಮಗನು ಜನಿಸಿದ.

ದಿಲೀಪಸ್ತು ಮಹಾತೇಜಾ ಯಜ್ಞೈರ್ಬಹುಭಿರಿಷ್ಟವಾನ್ ।
ತ್ರಿಂಶದ್ವರ್ಷಸಹಸ್ರಾಣಿ ರಾಜಾ ರಾಜ್ಯಮಕಾರಯತ್ ॥ ೮ ॥

ಮಹಾತೇಜನಾದ ರಾಜಾ ದಿಲೀಪನು ಬಹುಯಜ್ಞಗಳನ್ನು ಮಾಡುತ್ತ ಮೂವತ್ತು ಸಾವಿರ ವರ್ಷಕಾಲ ರಾಜ್ಯಭಾರ ಮಾಡಿದ.

ಅಗತ್ವಾ ನಿಶ್ಚಯಂ ರಾಜಾ ತೇಷಾಮುದ್ಧರಣಂ ಪ್ರತಿ ।
ವ್ಯಾಧಿನಾ ನರಶಾರ್ದೂಲ ಕಾಲಧರ್ಮಮುಪೇಯಿವಾನ್ ॥ ೯ ॥

ಪಿತಾಮಹರ ಉದ್ಧಾರಕ್ಕೆ ಉಪಾಯವನ್ನು ತಿಳಿಯದೆಯೆ, ರಾಮ! ದಿಲೀಪನು ವ್ಯಾಧಿಯಿಂದ ಕಾಲಾಧೀನನಾದ.

ಇಂದ್ರಲೋಕಂ ಗತೋ ರಾಜಾ ಸಾರ್ಜಿತೇನೈವ ಕರ್ಮಣಾ ।
ರಾಜ್ಯೇ ಭಗೀರಥಂ ಪುತ್ರಮಭಿಷಿಚ್ಯ ನರರ್ಷಭಃ ॥ ೧೦ ॥

ರಾಜ್ಯದಲ್ಲಿ ಪುತ್ರನಾದ ಭಗೀರಥನನ್ನು ಅಭಿಷೇಕ ಮಾಡಿ ಪುರುಷೋತ್ತಮನಾದ ರಾಜಾದಿಲೀಪನು ತಾನು ಸಂಪಾದಿಸಿದ ಪುಣ್ಯದಿಂದ ತಾನು ಇಂದ್ರಲೋಕವನ್ನು ಪಡೆದ, ಪಿತಾಮಹರಿಗೆ ಸದ್ಗತಿ ದೊರಕಿಸಲಾರದೆ ಹೋದ.

ಭಗೀರಥಸ್ತು ರಾಜರ್ಷಿರ್ಧಾರ್ಮಿಕೋ ರಘುನಂದನ ।
ಅನಪತ್ಯೋ ಮಹಾತೇಜಾಃ ಪ್ರಜಾಕಾಮಃ ಸ ಚಾಪ್ರಜಃ ॥

ಮಂತ್ರಿಷ್ವಾಧಾಯ ತದ್ರಾಜ್ಯಂ ಗಂಗಾವತರಣೇ ರತಃ ॥ ೧೧ ॥

ರಾಮ! ಭಗೀರಥನು ರಾಜರ್ಷಿ, ಧಾರ್ಮಿಕ ಮಹಾತೇಜ. ಆದರೆ ಅವನಿಗೆ ಮಕ್ಕಳಾಗಲಿಲ್ಲ. ಅದರಿಂದ ಅವನು ರಾಜ್ಯಭಾರವನ್ನು ಮಂತ್ರಿಗಳಿಗೆ ಒಪ್ಪಿಸಿ ಗಂಗೆಯನ್ನು ಭೂಮಿಗೆ ಇಳಿಸುವುದಕ್ಕೂ ಯತ್ನವನ್ನು ಕೈಗೊಂಡ.

ಸ ತಪೋ ದೀರ್ಘಮಾತಿಷ್ಠದ್ಗೋಕರ್ಣೇ ರಘುನಂದನ ।
ಊರ್ಧ್ವಬಾಹುಃ ಪಂಚತಪಾ ಮಾಸಾಹಾರೋ ಜಿತೇಂದ್ರಿಯಃ॥ ೧೨ ॥

ಭಗೀರಥನು, ರಾಮ! ಗೋಕರ್ಣದಲ್ಲಿ ದೀರ್ಘತಪಸ್ಸಿಗೆ ತೊಡಗಿದ. ಇಂದ್ರಿಯ ನಿಗ್ರಹ ಮಾಡಿಕೊಂಡು ತಿಂಗಳಿಗೊಮ್ಮೆ ಉಣ್ಣುವ ಮಾಸಾಹಾರ ವ್ರತದಲ್ಲಿದ್ದು ಸುತ್ತಲೂ ನಾಲ್ಕು ಪಾರ್ಶ್ವಗಳಲ್ಲಿಯೂ ಅಗ್ನಿ, ತಲೆ ಮೇಲೆ ಸೂರ್ಯನ ಬಿಸಿಲು –ಹೀಗೆ ಪಂಚ ತಾಪಗಳ ಮಧ್ಯೆ ಎರಡೂ ತೋಳುಗಳನ್ನು ಮೇಲೆತ್ತಿಕೊಂಡು ತಪಸ್ಸು ತಡೆಸಿದ.

ತಸ್ಯ ವರ್ಷಸಹಸ್ರಾಣಿ ಘೋರೇ ತಪಸಿ ತಿಷ್ಠತಃ ।
ಅತೀತಾನಿ ಮಹಾಬಾಹೋ ತಸ್ಯ ರಾಜ್ಞೋ ಮಹಾತ್ಮನಃ ॥
ಸುಪ್ರೀತೋ ಭಗವಾನ್ಬ್ರಹ್ಮಾ ಪ್ರಜಾನಾಂ ಪತಿರೀಶ್ವರಃ ॥ ೧೩ ॥

ಘೋರವಾದ ತಪಸ್ಸು ಮಾಡುತ್ತ ಮಹಾಬಾಹು ಮಹಾತ್ಮ ರಾಜಾ ಭಗೀರಥ ನಿಂತಿದ್ದಾಗ ಅನೇಕ ಸಾವಿರ ವರ್ಷಗಳೇ ಕಳೆದುವು. ಮಹಾಬಾಹು ರಾಮ! ಸರ್ವಶಕ್ತ ಪ್ರಜಾಪತಿ ಭಗವಾನ್ ಬ್ರಹ್ಮನು ಸುಪ್ರೀತನಾದ.

ತತಃ ಸುರಗಣೈಃ ಸಾರ್ಧಮುಪಾಗಮ್ಯ ಪಿತಾಮಹಃ ।
ಭಗೀರಥಂ ಮಹಾತ್ಮಾನಂ ತಪ್ಯಮಾನಮಥಾಬ್ರವೀತ್ ॥ ೧೪ ॥

ದೇವಸಮೂಹಗಳೊಂದಿಗೆ ಪಿತಾಮಹ ಬ್ರಹ್ಮದೇವನು ಬಂದು ತಪಸ್ಸು ಮಾಡುತ್ತಿದ್ದ ಭಗೀರಥನಿಗೆ ಹೇಳಿದನು.

ಭಗೀರಥ ಮಹಾಭಾಗ ಪ್ರೀತಸ್ತೇಽಹಂ ಜನೇಶ್ವರ ।
ತಪಸಾ ಚ ಸುತಪ್ತೇನ ವರಂ ವರಯ ಸುವ್ರತ ॥ ೧೫ ॥

ಮಹಾ ಭಾಗ್ಯಶಾಲಿ, ಒಳ್ಳೆಯ ವ್ರತನಿಷ್ಠ ರಾಜಾ ಭಗೀರಥನೆ! ನೀನು ಚೆನ್ನಾಗಿ ನಡೆಸಿದ ತಪಸ್ಸಿನಿಂದ ನಾನು ನಿನಗೆ ಸಂತುಷ್ಟನಾಗಿದ್ದಾನೆ, ವರವನ್ನು ಕೇಳು.

ತಮುವಾಚ ಮಹಾತೇಜಾಃ ಸರ್ವಲೋಕಪಿತಾಮಹಮ್ ।
ಭಗೀರಥೋ ಮಹಾಭಾಗಃ ಕೃತಾಂಜಲಿರುಪಸ್ಥಿತಃ ॥ ೧೬ ॥

ಮಹಾತೇಜನಾದ ಮಹಾಭಾಗ್ಯಶಾಲಿಯಾದ ಭಗೀರಥನು ಕೈ ಮುಗಿದು ಬಳಿನಿಂತು ಸರ್ವಲೋಕಕ್ಕೂ ಪಿತಾಮಹನಾದ ಬ್ರಹ್ಮದೇವನಿಗೆ ನುಡಿದ.

ಯದಿ ಮೇ ಭಗವನ್ ಪ್ರೀತೋ ಯದ್ಯಸ್ತಿ ತಪಸಃ ಫಲಮ್ ।
ಸಗರಸ್ಯಾತ್ಮಜಾಃ ಸರ್ವೇ ಮತ್ತಃ ಸಲಿಲಮಾಪ್ನುಯುಃ ॥ ೧೭ ॥

ಪೂಜ್ಯನೆ ನೀನು ಸಂತುಷ್ಟನಾಗಿರುವುದಾದರೆ ತಪಸ್ಸಿಗೆ ಫಲವಿರುವುದಾದರೆ ಸಗರ ಪುತ್ರರೆಲ್ಲರೂ ನನ್ನಿಂದ ಜಲತರ್ಪಣವನ್ನು ಪಡೆಯುವಂತಾಗಲಿ.

ಗಂಗಾಯಾಃ ಸಲಿಲಕ್ಲಿನ್ನೇ ಭಸ್ಮನ್ಯೇಷಾಂ ಮಹಾತ್ಮನಾಮ್ ।
ಸ್ವರ್ಗಂ ಗಚ್ಛೇಯುರತ್ಯಂತಂ ಸರ್ವೇ ಮೇ ಪ್ರಪಿತಾಮಹಾಃ ॥ ೧೮ ॥

ಈ ಮಹಾತ್ಮರ ಭಸ್ಮವು ಗಂಗಾಜಲದಿಂದ ಒದ್ದೆಯಾಗಲಿ ಆಗ ಅದರಿಂದ ನನ್ನ ಮುತ್ತಾತರೆಲ್ಲರೂ ಅತ್ಯಂತ ಸುಖದ ಸ್ವರ್ಗವನ್ನು ಪಡೆಯಲಿ.

ದೇಯಾ ಚ ಸಂತತಿರ್ದೇವ ನಾವಸೀದೇತ್ಕುಲಂ ಚ ನಃ ।
ಇಕ್ಷ್ವಾಕೂಣಾಂ ಕುಲೇ ದೇವ ಏಷ ಮೇಸ್ತು ವರಃ ಪರಃ ॥ ೧೯ ॥

ದೇವ, ನನಗೆ ಸಂತತಿಯನ್ನೂ ನೀನು ನೀಡಬೇಕು. ನಮ್ಮ ವಂಶ ನಿಂತುಹೋಗ-ಬಾರದು. ಇಕ್ಷ್ವಾಕು ಕುಲಜಾತನಾದ ನನಗೆ ನೀನು ಈ ವರವನ್ನೂ ನೀಡಬೇಕು. ದೇವ, ಈ ಇನ್ನೊಂದು ವರವೂ ನನಗೆ ಲಭಿಸಲಿ.

ಉಕ್ತವಾಕ್ಯಂ ತು ರಾಜಾನಂ ಸರ್ವಲೋಕಪಿತಾಮಹಃ ।
ಪ್ರತ್ಯುವಾಚ ಶುಭಾಂ ವಾಣೀಂ ಮಧುರಾಂ ಮಧುರಾಕ್ಷರಾಮ್ ॥೨೦॥

ರಾಜಾ ಭಗೀರಥ ಹೀಗೆ ಹೇಳಿದಾಗ ಸರ್ವಲೋಕ ಪಿತಾಮಹನಾದ ಬ್ರಹ್ಮ-ದೇವನು ಮಧುರವಾಗಿ ಮಧುರಾಕ್ಷರಯುಕ್ತವಾದ ಶುಭಕರವಾದ ಮಾತನ್ನು ಪ್ರತಿಯಾಗಿ ನುಡಿದ.

ಮನೋರಥೋ ಮಹಾನೇಷ ಭಗೀರಥ ಮಹಾರಥ ।
ಏವಂ ಭವತು ಭದ್ರಂ ತೇ ಇಕ್ಷ್ವಾಕುಕುಲವರ್ಧನ ॥ ೨೧ ॥

ಇಕ್ಷ್ವಾಕುಲ ವರ್ಧನ! ಮಹಾರಥ ಭಗೀರಥನೆ! ನಿನಗೆ ಈ ದೊಡ್ಡ-ಮನೋರಥವೂ ಕೂಡ ಪೂರ್ಣವಾಗಲಿ.

ಇಯಂ ಹೈಮವತೀ ಗಂಗಾ ಜ್ಯೇಷ್ಠಾ ಹಿಮವತಃ ಸುತಾ ।
ತಾಂ ವೈ ಧಾರಯಿತುಂ ಶಕ್ತೋ ಹರಸ್ತತ್ರ ನಿಯುಜ್ಯತಾಮ್ ॥ ೨೨ ॥

ಈ ಹೈಮವತಿ ಗಂಗೆ ಹಿಮವಂತನ ಜ್ಯೇಷ್ಠ ಪುತ್ರಿ. ಇವಳು ಸ್ವರ್ಗದಿಂದ ಇಳಿಯುವಾಗ ಅವಳನ್ನು ಧರಿಸಲು ಹರನೇ ಶಕ್ತ. ಅವನನ್ನು ಅದಕ್ಕೆ ಕೇಳಿಕೊಳ್ಳು.

ಗಂಗಾಯಾಃ ಪತನಂ ರಾಜನ್‌ಪೃಥಿವೀ ನ ಸಹಿಷ್ಯತಿ ।
ತಾಂ ವೈ ಧಾರಯಿತುಂ ವೀರ ನಾನ್ಯಂ ಪಶ್ಯಾಮಿ ಶೂಲಿನಃ ॥ ೨೩ ॥

ರಾಜನೆ! ಗಂಗೆ ಬೀಳುವುದನ್ನು ಪೃಥ್ವಿ ಸಹಿಸಲಾರಳು. ವೀರನೇ! ಅವಳನ್ನು ಧರಿಸಲು ಶಕ್ತನೆಂದರೆ ಶಿವನೇ ಹೊರತು ಅನ್ಯನನ್ನು ನಾಕಾಣೆ.

ತಮೇವಮುಕ್ತ್ವಾ ರಾಜಾನಂ ಗಂಗಾಂ ಚಾಭಾಷ್ಯ ಲೋಕಕೃತ್ ।
ಜಗಾಮ ತ್ರಿದಿವಂ ದೇವಃ ಸಹ ದೇವೈರ್ಮರುದ್ಗಣೈಃ ॥ ೨೪ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ದ್ವಿಚತ್ವಾರಿಂಶಃ ಸರ್ಗಃ ॥ ೪೨ ॥

ಹೀಗೆ ಲೋಕಪಿತಾಮಹ ಬ್ರಹ್ಮದೇವನು ರಾಜಾ ಭಗೀರಥನಿಗೂ ಗಂಗೆಗೂ ಹೇಳಿ ದೇವತೆಗಳಿಂದಲೂ ಮರುದ್ ಗಣಗಳಿಂದಲೂ ಕೂಡಿಕೊಂಡು ಸ್ವರ್ಗಕ್ಕೆ ಹೊರಟು ಹೋದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ನಲವತ್ತೆರಡನೆ ಸರ್ಗ ಮುಗಿಯಿತು.

ತ್ರಿಚತ್ವಾರಿಂಶಃ ಸರ್ಗಃ

ದೇವದೇವೇ ಗತೇ ತಸ್ಮಿನ್ಪೋಂಗುಷ್ಠಾಗ್ರನಿಪೀಡಿತಾಮ್ ।
ಕೃತ್ವಾ ವಸುಮತೀಂ ರಾಮ ಸಂವತ್ಸರಮುಪಾಸತ ॥ ೧ ॥

ದೇವದೇವನಾದ ಬ್ರಹ್ಮದೇವನು ಸ್ವರ್ಗಕ್ಕೆ ತೆರಳಿದಾಗ, ರಾಮ! ರಾಜಾ ಭಗೀರಥನು ನೆಲದ ಮೇಲೆ ಕಾಲ ಹೆಬ್ಬೆಟ್ಟುಗಳನ್ನು ಊರಿ ನಿಂತು ವರ್ಷಕಾಲ ಶಿವನನ್ನು ಕುರಿತು ತಪಸ್ಸು ಮಾಡಿದ.

ಊರ್ಧ್ವಬಾಹುರ್ನಿರಾಲಂಬೋ ವಾಯುಭಕ್ಷೋ ನಿರಾಶ್ರಯಃ ।
ಅಚಲಃ ಸ್ಥಾಣುವತ್ಸ್ಥಿತ್ವಾ ರಾತ್ರಿಂದಿವಮರಿಂದಮ ॥ ೨ ॥

ಯಾವುದರ ಆಸರೆ ಇಲ್ಲದೆ ಎರಡೂ ತೋಳುಗಳನ್ನು ಮೇಲೆತ್ತಿ ಕೇವಲ ಗಾಳಿ ನುಂಗುತ್ತ ಬೇರೆ ಆಹಾರವನ್ನಾಶ್ರಯಿಸದೆ ನಿಶ್ಚಲನಾಗಿ ಮೋಟು ಮರದಂತೆ ನಿಂತು, ಶತ್ರುನಾಶಕ ರಾಮನೆ! ರಾತ್ರಿಹಗಲು ಭಗೀರಥನು ತಪಸ್ಸು ಮಾಡಿದ.

ಅಥ ಸಂವತ್ಸರೇ ಪೂರ್ಣೇ ಸರ್ವಲೋಕನಮಸ್ಕೃತಃ ।
ಉಮಾಪತಿಃ ಪಶುಪತೀ ರಾಜಾನಮಿದಮಬ್ರವೀತ್ ॥ ೩ ॥

ಒಂದು ವರ್ಷ ಪೂರ್ಣವಾದಾಗ ಸರ್ವಲೋಕ ನಮಸ್ಕೃತನಾದ ಉಮಾಪತಿ-ಯಾದ ಪಶುಪತಿಯು ರಾಜನಿಗೆ ನುಡಿದನು.

ಪ್ರೀತಸ್ತೇऽಹಂ ನರಶ್ರೇಷ್ಠ ಕರಿಷ್ಯಾಮಿ ತವ ಪ್ರಿಯಮ್ ।
ತಮಬ್ರವೀನ್ನೃಪವರೋ ಗಂಗಾಂ ಧಾರಯ ವೈ ಹರ ॥ ೪ ॥

'ಪುರುಷೋತ್ತಮ! ನಾನು ಸಂತುಷ್ಟನಾಗಿದ್ದೇನೆ. ನಿನ್ನ ಇಷ್ಟವನ್ನು ಸಲ್ಲಿಸುವೆನು' ಎಂದು ಶಿವ ನುಡಿದಾಗ ರಾಜ ಹೇಳುತ್ತಾನೆ– 'ಹರನೆ! ಗಂಗೆಯನ್ನು ಧರಿಸು!' ಎಂದು.

ಇತ್ಯುಕ್ತೋ ವಚನಂ ಭರ್ಗಃ ಕರಿಷ್ಯಾಮಿ ತವ ಪ್ರಿಯಮ್ ।
ಶಿರಸಾ ಧಾರಯಿಷ್ಯಾಮಿ ಶೈಲರಾಜಸುತಾಮಹಮ್ ॥ ೫ ॥

ರಾಜ ಹೀಗೆಂದಾಗ ಹರನು 'ನಿನ್ನ ಇಷ್ಟವನ್ನು ಸಲ್ಲಿಸುತ್ತೇನೆ' ಎಂದು ಪರ್ವತ-ರಾಜ ಹಿಮಾಲಯನ ಪುತ್ರಿಯಾದ ಗಂಗೆಯನ್ನು ನಾನು ತಲೆಯಲ್ಲಿ ಧರಿಸುವೆನು' ಎಂದನು.

ತತೋ ಹೈಮವತೀ ಜ್ಯೇಷ್ಠಾ ಸರ್ವಲೋಕನಮಸ್ಕೃತಾ ।
ಉಮಾಪತೇರ್ವಚಃ ಶ್ರುತ್ವಾ ಗಂಗಾ ಕ್ರೋಧಸಮನ್ವಿತಾ ॥ ೬ ॥

ಆಗ ಹಿಮವಂತನ ಜ್ಯೇಷ್ಠಪುತ್ರಿ ಸರ್ವಲೋಕ ನಮಸ್ಕೃತಳು ಗಂಗೆ ಹರನ ಮಾತನ್ನು ಕೇಳಿ ಕುಪಿತಳಾದಳು.

ತದಾ ಸಾಽತಿಮಹದ್ರೂಪಂ ಕೃತ್ವಾ ವೇಗಂ ಚ ದುಃಸಹಮ್ ।
ಆಕಾಶಾದಪತದ್ರಾಮ ಶಿವೇ ಶಿವಶಿರಸ್ಯುತ ॥ ೭ ॥

ಗಂಗೆ ಆಗ ಅತಿ ದೊಡ್ಡರೂಪ ತಳೆದಳು. ಸಹಿಸಲಾಗದ ವೇಗವನ್ನೂ ತೋರಿದಳು. ಮಂಗಳಕರವಾದ ಶಿವನ ಶಿರಸ್ಸಿನ ಮೇಲೆ ವೇಗದಿಂದ ಬಿದ್ದಳು.

ಅಚಿಂತಯಚ್ಚ ಸಾ ದೇವೀ ಗಂಗಾ ಪರಮದುರ್ಧರಾ ।
ವಿಶಾಮ್ಯಹಂ ಹಿ ಪಾತಾಲಂ ಸ್ರೋತಸಾ ಗೃಹ್ಯ ಶಂಕರಮ್ ॥ ೮ ॥

ಗಂಗಾದೇವಿ ಆಲೋಚಿಸಿದಳು 'ನಾನು ಯಾರಿಂದಲೂ ಧರಿಸಲಾಗದವಳು. ಪ್ರವಾಹದಿಂದ ಶಂಕರನನ್ನು ಹಿಡಿದು ಕೊಂಡು ಪಾತಾಲವನ್ನೇ ಪ್ರವೇಶಿಸುವೆನು' ಎಂದು.

ತಸ್ಯಾ ವಲೇಪನಂ ಜ್ಞಾತ್ವಾ ಕ್ರುದ್ಧಸ್ತು ಭಗವಾನ್ಹರಃ ।
ತಿರೋಭಾವಯಿತುಂ ಬುದ್ಧಿಂ ಚಕ್ರೇ ತ್ರಿಣಯನಸ್ತದಾ ॥ ೯ ॥

ಅವಳ ದರ್ಪವನ್ನು ಕಂಡು ಭಗವಾನ್ ಹರ ಕ್ರುದ್ಧನಾದ. ಮುಕ್ಕಣ್ಣನು ಗಂಗೆಯನ್ನು ಅದೃಶ್ಯಳನ್ನಾಗಿ ಮಾಡಲು ಇಚ್ಛಿಸಿದನು.

ಸಾ ತಸ್ಮಿನ್ಪತಿತಾ ಪುಣ್ಯಾ ಪುಣ್ಯೇ ರುದ್ರಸ್ಯ ಮೂರ್ಧನಿ ।
ಹಿಮವತ್ಪ್ರತಿಮೇ ರಾಮ ಜಟಾಮಂಡಲಗಹ್ವರೇ ॥ ೧೦ ॥

ಗಂಗೆ ಪುಣ್ಯಕರಳು, ಪುಣ್ಯಕರವಾದ ರುದ್ರನ ಶಿರದಲ್ಲಿ ಹಿಮಾಚಲ ಸದೃಶವಾದ ಜಟಾಮಂಡಲದ ಗುಹೆಯಲ್ಲಿ ಬಿದ್ದಳು.

ಸಾ ಕಥಂಚಿನ್ಮಹೀಂ ಗಂತುಂ ನಾಶಕ್ನೋದ್ಯತ್ನಮಾಸ್ಥಿತಾ ।
ನೈವ ನಿರ್ಗಮನಂ ಲೇಭೇ ಜಟಾಮಂಡಲಮೋಹಿತಾ ॥ ೧೧ ॥

ಗಂಗೆ ಶಿವನ ಜಟಾ, ಮಂಡಲದಿಂದ ಹೊರಗೆ ಬರಲು ಯತ್ನ ಮಾಡಿದರೂ ಶಕ್ತಳಾಗಲಿಲ್ಲ. ಭೂಮಿಗೆ ಇಳಿಯಲು ಸರ್ವಥಾ ಶಕ್ತಳಾಗಲಿಲ್ಲ.

ತತ್ರೈವಾಬಭ್ರಮದ್ದೇವೀ ಸಂವತ್ಸರಗಣಾನ್ಬಹೂನ್ ।
ತಾಮಪಶ್ಯನ್ಪುನಸ್ತತ್ರ ತಪಃ ಪರಮಮಾಸ್ಥಿತಃ ॥ ೧೨ ॥

ಸ ತೇನ ತೋಷಿತಶ್ಚಾಭೂದತ್ಯರ್ಥಂ ರಘುನಂದನ ।
ವಿಸಸರ್ಜ ತತೋ ಗಂಗಾಂ ಹರೋ ಬಿಂದುಸರಃ ಪ್ರತಿ ॥
ತಸ್ಯಾಂ ವಿಸೃಜ್ಯಮಾನಾಯಾಂ ಸಪ್ತ ಸ್ರೋತಾಂಸಿ ಜಜ್ಞಿರೇ ॥ ೧೩ ॥

ಜಟಾಮಂಡಲದ ಗುಹೆಯೊಳಗೇ ದೇವಿ ಗಂಗೆ ಬಹು ವರ್ಷಗಳ ಕಾಲ ಪುನಃ ಪುನಃ ಸುತ್ತಿದಳು. ಅವಳನ್ನು ಶಿವನು ತಿರೋಧಾನ ಮಾಡಿದ್ದರಿಂದ ಅವಳನ್ನು ಕಾಣದೆ ಪುನಃ ದೊಡ್ಡ ತಪಸ್ಸು ಮಾಡಿದ, ಭಗೀರಥ. ರಾಮ, ಆ ತಪಸ್ಸಿನಿಂದ ಹರನು ಬಹಳ ಸಂತುಷ್ಟನಾದ. ಗಂಗೆಯನ್ನು ಬಿಂದುಸರಕ್ಕೆ ಬಿಟ್ಟ. ಹೀಗೆ ಗಂಗೆ ಶಿವನ ಜಟೆಯಿಂದ ಬಿಡುಗಡೆ ಹೊಂದಿದಾಗ ಏಳು ಪ್ರವಾಹಗಳು ಉಂಟಾದುವು.

ಹ್ಲಾದಿನೀ ಪಾವನೀ ಚೈವ ನಲಿನೀ ಚ ತಥಾऽಪರಾ ।
ತಿಸ್ರಃ ಪ್ರಾಚೀಂ ದಿಶಂ ಜಗ್ಮುರ್ಗಂಗಾಃ ಶಿವಜಲಾಃ ಶುಭಾಃ ॥ ೧೪ ॥

ಸುಚಕ್ಷುಶ್ಚೈವ ಸೀತಾ ಚ ಸಿಂಧುಶ್ಚೈವ ಮಹಾನದೀ ।
ತಿಸ್ರಸ್ತ್ವೇತಾ ದಿಶಂ ಜಗ್ಮುಃ ಪ್ರತೀಚೀಂ ತು ದಿಶಂ ಶುಭಾಃ ॥ ೧೫ ॥

ಹ್ಲಾದಿನೀ ಪಾವನೀ ನಲಿನೀ ಎಂದು ಮೂರು ಪ್ರವಾಹಗಳು ಪೂರ್ವಕ್ಕೂ, ಸುಚಕ್ಷು ಸೀತಾ ಸಿಂಧು ಎಂದು ಮೂರು ಪ್ರವಾಹಗಳು ಪಶ್ಚಿಮಕ್ಕೂ ಹರಿದುವು.

ತಥೈವ ಚಾಲಕಾ ನಾಮ ವಿಶ್ರುತಾ ಲೋಕಪಾವನೀ ।
ಸಪ್ತಮೀ ಚಾನ್ವಗಾತ್ತಾಸಾಂ ಭಗೀರಥಮಥೋ ನೃಪಮ್ ॥ ೧೬ ॥

ಲೋಕಪಾವನೆಯಾದ ಅಲಕಾ ಎಂಬ ಪ್ರವಾಹವು ದಕ್ಷಿಣಕ್ಕೆ ಹರಿಯಿತು. ಇದು ಏಳನೆ ಪ್ರವಾಹ. ಇದು ಭಗೀರಥ ರಾಜನನ್ನು ಹಿಂಬಾಲಿಸಿ ಹರಿಯಿತು.

ಈ ಶ್ಲೋಕದ ಪೂರ್ವಾರ್ಧದಲ್ಲಿ ಏಳನೆ ಪ್ರವಾಹದ ನಾಮ 'ಅಲಕಾ' ಎಂದು ಕಾಣುತ್ತದೆ. ಈ ಪೂರ್ವಾರ್ಧವನ್ನು ವ್ಯಾಖ್ಯಾನಕಾರರು ಯಾರು ಗ್ರಹಣ ಮಾಡಿಲ್ಲ. ಟಿ.ಆರ್. ಕೃಷ್ಣಾಚಾರ್ಯರ ಸಂಪಾದನೆಯಲ್ಲಿ ಮಾತ್ರ ಕಂಸಗಳೊಳಗೇ ಕಂಡು ಬರುತ್ತದೆ.

ಭಗೀರಥೋऽಪಿ ರಾಜರ್ಷಿರ್ದಿವ್ಯಂ ಸ್ಯಂದನಮಾಸ್ಥಿತಃ ।
ಪ್ರಾಯಾದಗ್ರೇ ಮಹಾತೇಜಾ ಗಂಗಾ ತಂ ಚಾಪ್ಯನುವ್ರಜತ್ ॥ ೧೭ ॥

ಮಹಾತೇಜನಾದ ರಾಜರ್ಷಿ ಭಗೀರಥನು ದಿವ್ಯರಥದಿಂದ ಮುಂದೆ ಮುಂದೆ ಹೋಗುತ್ತಿದ್ದಂತೆ ಈ ಏಳನೇ ಪ್ರವಾಹ ಹಿಂಬಾಲಿಸುತ್ತ ಹರಿಯಿತು.

ಗಗನಾಚ್ಚಂಕರಶಿರಸ್ತತೋ ಧರಣಿಮಾಶ್ರಿತಾ ।
ವ್ಯಸರ್ಪತ ಜಲಂ ತತ್ರ ತೀವ್ರಶಬ್ದಪುರಸ್ಕೃತಮ್ ॥ ೧೮ ॥

ಗಂಗಾಜಲವು ಗಗನದಿಂದ ಶಂಕರನ ಶಿರಕ್ಕೂ ಅಲ್ಲಿಂದ ಧರಣಿಗೂ ತೀವ್ರ ಶಬ್ದದೊಂದಿಗೆ ಹರಿಯಿತು.

ಮತ್ಸ್ಯಕಚ್ಛಪಸಂಘೈಶ್ಚ ಶಿಂಶುಮಾರಗಣೈಸ್ತದಾ ।
ಪತದ್ಭಿಃ ಪತಿತೈಶ್ಚಾನ್ಯೈರ್ವ್ಯರೋಚತ ವಸುಂಧರಾ ॥ ೧೯ ॥

ಗಂಗಾಜಲದೊಂದಿಗೆ ಮೀನು ಆಮೆ ಶಿಂಶುಮಾರ ಮುಂತಾದ ಜಲಜಂತುಗಳು ಕೆಲವು ಬೀಳುತ್ತ ಶೋಭಿಸಿದವು. ಕೆಲವು ಬಿದ್ದು ವಸುಂಧರೆಗೆ ಶೋಭೆ ತಂದುವು.

ತತೋ ದೇವರ್ಷಿಗಂಧರ್ವಾ ಯಕ್ಷಾಃ ಸಿದ್ಧಗಣಾಸ್ತದಾ ।
ವ್ಯಲೋಕಯಂತ ತೇ ತತ್ರ ಗಗನಾದ್ಗಾಂ ಗತಾಂ ತಥಾ ॥ ೨೦ ॥

ದೇವ ಋಷಿ ಗಂಧರ್ವ ಯಕ್ಷ ಸಿದ್ಧರು ಎಲ್ಲರೂ ಗಂಗೆ ಗಗನದಿಂದ ಭೂಮಿಗೆ ಇಳಿದು ಬರುವುದನ್ನು ದರ್ಶನ ಮಾಡಿದರು.

ವಿಮಾನೈರ್ನಗರಾಕಾರೈರ್ಹಯೈರ್ಗಜವರೈಸ್ತದಾ ।
ಪಾರಿಪ್ಲವಗತೈಶ್ಚಾಪಿ ದೇವತಾಸ್ತತ್ರ ವಿಷ್ಠಿತಾಃ ॥ ೨೧ ॥

ನಗರಾಕಾರದ ದೊಡ್ಡ ವಿಮಾನಗಳಿಂದಲೂ ಅಶ್ವಗಜಗಳನ್ನೇರಿಯೂ ಪಲ್ಲಕ್ಕಿ-ಗಳಲ್ಲಿ ಕುಳಿತೂ ದೇವತೆಗಳು, ಗಂಗೆ ಭೂಮಿಯಲ್ಲಿ ಬೀಳುವ ಪ್ರದೇಶದಲ್ಲಿ ಬಂದು ನೆರೆದರು.

ತದದ್ಭುತತಮಂ ಲೋಕೇ ಗಂಗಾಪತನಮುತ್ತಮಮ್ ।
ದಿದೃಕ್ಷವೋ ದೇವಗಣಾಃ ಸಮೀಯುರಮಿತೌಜಸಃ ॥ ೨೨ ॥

ಆಕಾಶದಿಂದ ಗಂಗೆ ಭೂಮಿಗೆ ಬೀಳುವುದು ಲೋಕದಲ್ಲಿ ಎಲ್ಲೂ ಕಾಣದ ಅತ್ಯಂತ ಅದ್ಭುತವಾದ ಘಟನೆಯಾಗಿದ್ದರಿಂದ ಅದನ್ನು ವೀಕ್ಷಿಸಲು ಅಮಿತ ಶಕ್ತಿ ಉಳ್ಳ ದೇವತೆಗಳು ಬಂದು ನೆರೆದರು.

ಸಂಪತದ್ಭಿಃ ಸುರಗಣೈಸ್ತೇಷಾಂ ಚಾಭರಣೌಜಸಾ ।
ಶತಾದಿತ್ಯಮಿವಾಭಾತಿ ಗಗನಂ ಗತತೋಯದಮ್ ॥ ೨೩ ॥

ದೇವ ಸಮೂಹಗಳು ವೀಕ್ಷಿಸಲು ಆಕಾಶದಲ್ಲಿ ಬರುವಾಗ ಮೋಡವಿಲ್ಲದ ಆಕಾಶದಲ್ಲಿ ಅವರ ಆಭರಣ ಪ್ರಕಾಶಗಳೇ ತುಂಬಿ ನೂರಾರು ಸೂರ್ಯರು ಒಮ್ಮೇಲೆ ಉದಿಸಿ ಬಂದಂತೆ ಕಂಡಿತು.

ಶಿಂಶುಮಾರೋರಗಗಣೈರ್ಮೀನೈರಪಿ ಚ ಚಂಚಲೈಃ ।
ವಿದ್ಯುದ್ಭಿರಿವ ವಿಕ್ಷಿಪ್ತಮಾಕಾಶಮಭವತ್ತದಾ ॥ ೨೪ ॥

ಗಂಗೆ ಭೂಮಿಗೆ ಇಳಿಯುವಾಗ ಶಿಂಶುಮಾರ ಹಾವು ಮೀನುಗಳು ಚಂಚಲ-ವಾಗಿ ಚಲಿಸುತ್ತ ಗಂಗಾಜಲದಲ್ಲಿ ತುಂಬಿದ್ದರಿಂದ ಆಕಾಶದಲ್ಲಿ ತುಂಬಿದ ಮಿಂಚುಗಳಂತೇ ಕಾಣುತ್ತಿದ್ದರು.

ಪಾಂಡುರೈಃ ಸಲಿಲೋತ್ಪೀಡೈಃ ಕೀರ್ಯಮಾಣೈಃ ಸಹಸ್ರಧಾ ।
ಶಾರದಾಭ್ರೈರಿವಾಕೀರ್ಣಂ ಗಗನಂ ಹಂಸಸಂಪ್ಲವೈಃ ॥ ೨೫ ॥

ಸಾವಿರ ಗಟ್ಟಲೆ ಬಿಳಿಯಾದ ನೀರ ನೊರೆ ರಾಶಿಗಳು ಆಗಸದಲ್ಲಿ ಕಂಡು ಬಂದಿದ್ದರಿಂದ ಶರತ್ಕಾಲದ ಬಿಳಿ ಮೋಡಗಳಿಂದಲೂ ಹಂಸಗಳ ಹಾರಾಟಗಳಿಂದಲೂ ಯುಕ್ತವಾದಂತೆ ಆಕಾಶ ಕಂಡುಬಂದಿತು.

ಕ್ವಚಿದ್ದ್ರುತತರಂ ಯಾತಿ ಕುಟಿಲಂ ಕ್ವಚಿದಾಯತಮ್ ।
ವಿನತಂ ಕ್ವಚಿದುದ್ಧೂತಂ ಕ್ವಚಿದ್ಯಾತಿ ಶನೈಃಶನೈಃ ॥ ೨೬ ॥

ಗಂಗಾಪ್ರವಾಹ ಭೂಮಿಯಲ್ಲಿ ಹರಿಯುವಾಗ ಕೆಲವೆಡೆ ವೇಗದಿಂದ ಕೆಲವೆಡೆ ಸುಳಿಯುತ್ತ ಕೆಲವೆಡೆ ದೀರ್ಘವಾಗಿ ಕೆಲವೆಡೆ ತಗ್ಗಿಗೆ ಧುಮುಕುತ್ತ ಕೆಲವೆಡೆ ಮೇಲಕ್ಕೆ ಪುಟಿದೇಳುತ್ತ ಕೆಲವೆಡೆ ನಿಧಾನವಾಗಿ ಹೀಗೆ ನಾನಾ ರೀತಿಯಾಗಿ ಪ್ರವಾಹದ ಚಲನೆ ಕಂಡುಬಂದಿತು.

ಸಲಿಲೇನೈವ ಸಲಿಲಂ ಕ್ವಚಿದಭ್ಯಾಹತಂ ಪುನಃ ।
ಮುಹುರೂರ್ಧ್ವಮುಖಂ ಗತ್ವಾ ಪಪಾತ ವಸುಧಾತಲಮ್ ॥ ೨೭ ॥

ನೀರಿಗೆ ನೀರಿಂದಲೇ ಹೊಡೆತ ಬಿದ್ದಾಗ ಮೇಲಕ್ಕೆ ಹಾರಿ ಕೆಳಗೆ ಬೀಳುವುದೂ ಕೆಲವೆಡೆ ಕಂಡುಬಂದಿತು.

ತಚ್ಛಂಕರಶಿರೋಭ್ರಷ್ಟಂ ಭ್ರಷ್ಟಂ ಭೂಮಿತಲೇ ಪುನಃ ।
ವ್ಯರೋಚತ ತದಾ ತೋಯಂ ನಿರ್ಮಲಂ ಗತಕಲ್ಮಷಮ್ ॥ ೨೮ ॥

ಗಂಗಾಜಲವು ಸದಾ ಪವಿತ್ರ . ಶಂಕರನ ಶಿರಸ್ಸಿನ ಮೇಲೆ ಬಿದ್ದರೂ ಶಿವ-ನಿರ್ಮಾಲ್ಯವೆನಿಸಿ ಅಪವಿತ್ರವಾಗಲಿಲ್ಲ. ಭೂಮಿತಲದಲ್ಲಿ ನೆಲದಲ್ಲಿ ಬಿದ್ದು ಕೆಸರಿಂದ ರಾಡಿಯಾದರೂ ಅಪವಿತ್ರವಾಗಲಿಲ್ಲ. ಸದಾ ನಿರ್ಮಲವೇ ಸದಾ ಪಾಪ ರಹಿತವೆ ಆಗಿದ್ದು ಶೋಭಿಸುತ್ತಲೇ ಇರುತ್ತದೆ.

ತತ್ರ ದೇವರ್ಷಿಗಂಧರ್ವಾ ವಸುಧಾತಲವಾಸಿನಃ ।
ಭವಾಂಗಪತಿತಂ ತೋಯಂ ಪವಿತ್ರಮಿತಿ ಪಸ್ಪೃಶುಃ ॥ ೨೯ ॥

ಭವನ ಅಂಗದ ಮೇಲೆ ಬಿದ್ದರೂ ಗಂಗಾಜಲ ಪವಿತ್ರವೇ ಎಂದು ತಿಳಿದು ದೇವ ಋಷಿ ಗಂಧರ್ವರಾಗಲಿ ಭೂತಲವಾಸಿ ಮನುಷ್ಯರಾಗಲಿ ಎಲ್ಲರೂ ಗಂಗಾಸ್ನಾನ-ವನ್ನು ತಪ್ಪದೇ ಮಾಡುತ್ತಾರೆ.

ಶಾಪಾತ್ಪ್ರಪತಿತಾ ಯೇ ಚ ಗಗನಾದ್ವಸುಧಾತಲಮ್ ।
ಕೃತ್ವಾ ತತ್ರಾಭಿಷೇಕಂ ತೇ ಬಭೂವುರ್ಗತಕಲ್ಮಷಾಃ ॥ ೩೦ ॥

ಗಂಗಾಜಲ ಎಷ್ಟು ಪವಿತ್ರ ಎಂದರೆ ಶಾಪ ಪ್ರಯುಕ್ತವಾಗಿ ಗಗನದಿಂದ ಭೂತಲ-ದಲ್ಲಿ ಪತಿತರಾದವರೂ ಕೂಡ ಗಂಗೆಯಲ್ಲಿ ಮಿಂದು ಪಾಪರಹಿತರಾಗುತ್ತಾರೆ.

ಧೂತಪಾಪಾಃ ಪುನಸ್ತೇನ ತೋಯೇನಾಥ ಸುಭಾಸ್ವತಾ ।
ಪುನರಾಕಾಶಮಾವಿಶ್ಯ ಸ್ವಾಂಲ್ಲೋಕಾನ್ಪ್ರತಿಪೇದಿರೇ ॥ ೩೧ ॥

ಗಂಗಾಸ್ನಾನದಿಂದ ಪಾಪಮುಕ್ತರಾದವರೂ ಕೂಡ ಪುಣ್ಯಶಾಲಿಗಳಾಗಿ ದಿವ್ಯಪ್ರಕಾಶದಿಂದ ಹೊಳೆವ ಗಂಗಾಜಲ ಸೇವನೆಯಿಂದ ಪುನಃ ಆಕಾಶಕ್ಕೆ ಏರಿ ತಮ್ಮ ತಮ್ಮ ಪುಣ್ಯಲೋಕಕ್ಕೆ ಹೋಗಿ ಸೇರುತ್ತಾರೆ.

ಮುಮುದೇ ಮುದಿತೋ ಲೋಕಸ್ತೇನ ತೋಯೇನ ಭಾಸ್ವತಾ ।
ಕೃತಾಭಿಷೇಕೋ ಗಂಗಾಯಾಂ ಬಭೂವ ವಿಗತಕ್ಲಮಃ ॥ ೩೨ ॥

ಗಂಗಾಜಲ ದರ್ಶನ ಮಾತ್ರದಿಂದ ಸುಖಿಯಾದವನ್ನು ಪುಣ್ಯಶಾಲಿಯಾಗಿ ಮತ್ತೆ ಮತ್ತೆ ಸ್ನಾನ ಪಾನಾದಿಗಳಿಂದ ಸುಖ ಪಡೆದೇ ತೀರುತ್ತಾನೆ. ದುಃಖಪರಿಹಾರವನ್ನು ಅವಶ್ಯ ಮಾಡಿಕೊಳ್ಳುತ್ತಾನೆ.

ಭಗೀರಥೋಽಪಿ ರಾಜರ್ಷಿರ್ದಿವ್ಯಂ ಸ್ಯಂದನಮಾಸ್ಥಿತಃ ।
ಪ್ರಾಯಾದಗ್ರೇ ಮಹಾತೇಜಾಸ್ತಂ ಗಂಗಾ ಪೃಷ್ಠತೋಽನ್ವಗಾತ್॥ ೩೩ ॥

ಭಗೀರಥನೂ ಕೂಡ ಗಂಗೆಯ ದರ್ಶನದಿಂದ ದುಃಖಮುಕ್ತನಾಗಿ ಸುಖ ಪಡೆದವನು ಅದರಿಂದ ಪುಣ್ಯಶಾಲಿಯಾಗಿ ಅವನು ದಿವ್ಯರಥವೇರಿ ಮುಂದೆ ಹೋಗುತ್ತಿದ್ದರೆ ಗಂಗೆ ತಾನೇ ಬಿಡದೆ ಅವನನ್ನು ಹಿಂಬಾಲಿಸಿದಳು.

ದೇವಾಃ ಸರ್ಷಿಗಣಾಃ ಸರ್ವೇ ದೈತ್ಯದಾನವರಾಕ್ಷಸಾಃ ।
ಗಂಧರ್ವಯಕ್ಷಪ್ರವರಾಃ ಸಕಿನ್ನರಮಹೋರಗಾಃ ॥ ೩೪ ॥

ಸರ್ವಾಶ್ಚಾಪ್ಸರಸೋ ರಾಮ ಭಗೀರಥರಥಾನುಗಾಮ್ ।
ಗಂಗಾಮನ್ವಗಮನ್ಹೃತಾಃ ಸರ್ವೇ ಜಲಚರಾಶ್ಚ ಯೇ ॥ ೩೫ ॥

ದೇವತೆಗಳು ಋಷಿಗಳು ದೈತ್ಯರು ದಾನವರು ರಾಕ್ಷಸರು ಗಂಧರ್ವರು ಯಕ್ಷ-ಶ್ರೇಷ್ಠರು ಕಿನ್ನರರು ಮಹಾನಾಗರು ಎಲ್ಲ ಅಪ್ಸರೆಯರು ಎಲ್ಲ ಜಲಚರಪ್ರಾಣಿಗಳೂ ಆನಂದದಿಂದ ಭಗೀರಥನ ರಥವನ್ನು ಹಿಂಬಾಲಿಸಿದ ಗಂಗೆಯನ್ನು ಹಿಂಬಾಲಿಸಿದರು.

ಯತೋ ಭಗೀರಥೋ ರಾಜಾ ತತೋ ಗಂಗಾ ಯಶಸ್ವಿನೀ ।
ಜಗಾಮ ಸರಿತಾಂ ಶ್ರೇಷ್ಠಾ ಸರ್ವಪಾಪವಿನಾಶಿನೀ ॥ ೩೬ ॥

ತತೋ ಹಿ ಯಜಮಾನಸ್ಯ ಜಹ್ನೋರದ್ಭುತಕರ್ಮಣಃ ।
ಗಂಗಾ ಸಂಪ್ಲಾವಯಾಮಾಸ ಯಜ್ಞವಾಟಂ ಮಹಾತ್ಮನಃ ॥ ೩೭ ॥

ಭಗೀರಥರಾಜನು ಎಲ್ಲಿ ಹೋಗುವನೋ ಅಲ್ಲಿಗೆ ಪ್ರೀತಿಯಿಂದ ಸರ್ವಪಾಪ ವಿನಾಶಿನಿ ಯಶಸ್ವಿನಿ ನದೀ ಶ್ರೇಷ್ಠಳಾದ ಗಂಗೆಯೂ ಅವಶ್ಯ ಹೋದಳು. ಅದರಿಂದ ಅದ್ಭುತ ಕರ್ಮ ಮಾಡುವ ಮಹಾತ್ಮನಾದ ಜಹ್ನು ಎಂಬ ರಾಜರ್ಷಿ ಯಜಮಾನ-ನಾಗಿ ಯಜ್ಞದೀಕ್ಷಿತನಾಗಿ ಕುಳಿತಿದ್ದ ಯಜ್ಞಶಾಲೆಗೆ ಭಗೀರಥ ರಾಜ ಬಂದಿದ್ದರಿಂದ ಗಂಗೆಯೂ ಬಂದಳು! ಯಜ್ಞಶಾಲೆಯನ್ನು ಪ್ರವಾಹದಲ್ಲಿ ಮುಳುಗಿಸಿಯೇ ಬಿಟ್ಟಳು!

ತಸ್ಯಾವಲೇಪನಂ ಜ್ಞಾತ್ವಾ ಕ್ರುದ್ಧೋ ಯಜ್ವಾ ತು ರಾಘವ ।
ಅಪಿಬಚ್ಚ ಜಲಂ ಸರ್ವಂ ಗಂಗಾಯಾಃ ಪರಮಾದ್ಭುತಮ್ ॥ ೩೮ ॥

ರಾಮ! ಗಂಗೆಯ ಅಹಂಕಾರವನ್ನು ಕಂಡು ಕೋಪಗೊಂಡ ಜಹ್ನುಮುನಿ ಗಂಗಾಜಲವೆಲ್ಲವನ್ನೂ ಯೋಗಬಲದಿಂದ ಕುಡಿದುಬಿಟ್ಟ. ಇದು ಪರಮಾದ್ಭುತ-ವಾಗಿತ್ತು.

ಇಲ್ಲಿ 'ತಸ್ಯಾ ವಲೇಪನಂ ಜ್ಞಾತ್ವಾ ಕ್ರುದ್ಧೋ' ಎಂಬಲ್ಲಿ 'ಜ್ಞಾತ್ವಾ-ಅಕ್ರುದ್ಧಃ' ಎಂದು ಪದವಿಭಾಗ ಶಕ್ಯವಿದೆ. 'ಅಕ್ರುದ್ಧಃ' ಎಂದರೆ 'ನ ಕ್ರುದ್ಧಃ' 'ಕೋಪ-ಗೊಳ್ಳಲಿಲ್ಲ' ಮಾತ್ರವಲ್ಲ 'ಕೋಪಕ್ಕೆ ವಿರುದ್ಧವಾದ ಪ್ರೀತಿಯನ್ನೇ ಮಾಡಿದ' ಎಂದು ಅರ್ಥವೂ ಹೊರಡುತ್ತದೆ. ಅದು ಉಚಿತವೂ ಹೌದು. ಜಹ್ನು ಮುನಿ ಇಲ್ಲಿ ಯಜ್ಞಶಾಲೆಯಲ್ಲಿ ಯಜ್ಞ ಮಾಡುತ್ತಿದ್ದ. ಯಜ್ಞವು ದೇವತಾರಾಧನೆ. ಅದರಿಂದ ದೇವತೆಗಳಲ್ಲಿ ಮುನಿ ಕೋಪ ಮಾಡಿದರೇ ತಪ್ಪಾಗುತ್ತದೆ, ಕೋಪ ಮಾಡಲಿಲ್ಲ. ಏಕೆಂದರೆ ಪ್ರೀತಿಯಿಂದ ಗಂಗೆ ತಾನಾಗಿ ಬಂದು ಯಾಗದ ಸ್ಥಳ ಶುದ್ಧಿಗೈದಳು. ಕೋಪ ಮಾಡಿದರೂ ಬಾಲಕೃಷ್ಣ ಮೊಸರು ಚೆಲ್ಲಿದ್ದಕ್ಕೆ ಯಶೋದೆ ಕೋಪ ಮಾಡಿ-ಕೊಂಡಳಂತೆ! ಅಂಥ ಕೋಪವಿದು! ಅದರಿಂದ ಮುನಿ ಪ್ರೀತಿಯಿಂದಲೆ ಗಂಗಾ-ಜಲವೆಲ್ಲವನ್ನೂ ಪಾನ ಮಾಡಿ, ಬ್ರಾಹ್ಮಣನ ಪರಮ ಪವಿತ್ರವಾದ ಬಲ ಕಿವಿಯಲ್ಲಿ ಗಂಗೋದ್ಭವ ಮಾಡುವ ಮೂಲಕ, ಅವಳಿಗೆ ಹೊಸ ಜನ್ಮಕೊಟ್ಟು ಮುದ್ದಿನ ಮಗಳನ್ನಾಗಿ ಮಾಡಿಕೊಂಡಿದ್ದಾನೆ!

ತತೋ ದೇವಾಃ ಸಗಂಧರ್ವಾ ಋಷಯಶ್ಚ ಸುವಿಸ್ಮಿತಾಃ।
ಪೂಜಯಂತಿ ಮಹಾತ್ಮಾನಂ ಜಹ್ನುಂ ಪುರುಷಸತ್ತಮಮ್ ॥
ಗಂಗಾಂ ಚಾಪಿ ನಯಂತಿ ಸ್ಮ ದುಹಿತೃತ್ವೇ ಮಹಾತ್ಮನಃ ॥ ೩೯ ॥

ಆಗ ದೇವತೆಗಳು ಗಂಧರ್ವರು ಋಷಿಗಳು ಬಹಳ ವಿಸ್ಮಿತರಾಗಿ ಪುರುಷೋತ್ತಮ ಮಹಾತ್ಮ ಜಹ್ನುಮುನಿಯನ್ನು ಪ್ರಶಂಸೆ ಮಾಡಿದರು. ಗಂಗೆಯನ್ನು ಮಹಾತ್ಮ ಮುನಿಯ ಮಗಳೆಂದು ಕೊಂಡಾಡಿ ಮಗಳನ್ನಾಗಿ ಮಾಡಿದರು.

ತತಸ್ತುಷ್ಟೋ ಮಹಾತೇಜಾಃ ಶ್ರೋತ್ರಾಭ್ಯಾಮಸೃಜತ್ಪುನಃ।
ವಿಸೃಜ್ಯ ಗಂಗಾಂ ರಾಜೇಂದ್ರೋ ಜ್ಞಾತ್ವಾ ಪ್ರಾಪ್ತಂ ಭಗೀರಥಮ್ ॥ ೪೦

ಪೂಜಯಿತ್ವಾ ಯಥಾನ್ಯಾಯಂ ಯಜ್ಞವಾಟಮುಪಾಗಮತ್।
ತಸ್ಮಾಜ್ಜಹ್ನುಸುತಾ ಗಂಗಾ ಪ್ರೋಚ್ಯತೇ ಜಾಹ್ನವೀತಿ ಚ ॥ ೪೧ ॥

ಮಹಾತೇಜನಾದ ರಾಜರ್ಷಿ ಜಹ್ನುಮುನಿ ಸಂತುಷ್ಟನಾಗಿ ಕಿವಿಗಳಿಂದ ಗಂಗೆಗೆ

ಪುನಃ ಜನ್ಮವಿತ್ತನು. ಗಂಗೆಗೆ ಜನ್ಮವಿತ್ತ ಬಳಿಕ ಅಲ್ಲಿಗೆ ಬಂದಿದ್ದ ಭಗೀರಥನ ಬಗ್ಗೆ ಎಲ್ಲವನ್ನೂ ತಿಳಿದುಕೊಂಡು ಯಥಾಯೋಗ್ಯವಾಗಿ ಅವನಿಗೂ ಸತ್ಕಾರ ಮಾಡಿ ಪುನಃ ಯಜ್ಞಶಾಲೆಯನ್ನು ಪ್ರವೇಶಿಸಿದನು. ಹೀಗೆ ಗಂಗೆ ಜಹ್ನುಮುನಿಯ ಮಗಳಾಗಿ ಹುಟ್ಟಿ 'ಜಾಹ್ನವೀ' ಎಂದು ಕರೆಸಿಕೊಂಡಳು,.

ಜಗಾಮ ಚ ಪುನರ್ಗಂಗಾ ಭಗೀರಥರಥಾನುಗಾ ।
ಸಾಗರಂ ಚಾಪಿ ಸಂಪ್ರಾಪ್ತಾ ಸಾ ಸರಿತ್ವರಾ ತದಾ ॥
ರಸಾತಲಮುಪಾಗಚ್ಛತ್ಸಿದ್ಧ್ಯರ್ಥಂ ತಸ್ಯ ಕರ್ಮಣಃ ॥ ೪೨ ॥

ಗಂಗೆ ಪುನಃ ಭಗೀರಥನ ರಥವನ್ನು ಹಿಂಬಾಲಿಸಿದಳು. ನದಿಗಳಲ್ಲಿ ಶ್ರೇಷ್ಠಳಾದ ಗಂಗೆ ನದಿಗಳ ಪತಿಯಾದ ಸಾಗರನನ್ನು ಹೋಗಿ ಸೇರಿದಳು. ಮುಂದೆ ಭಗೀರಥನ ಪಿತೃಕರ್ಮಸಿದ್ಧಿಗಾಗಿ ರಸಾತಳಕ್ಕೂ ಹೋದಳು.

ಭಗೀರಥೋಽಪಿ ರಾಜರ್ಷಿರ್ಗಂಗಾಮಾದಾಯ ಯತ್ನತಃ ।
ಪಿತಾಮಹಾನ್ಭಸ್ಮಕೃತಾನಪಶ್ಯದ್ದೀನಚೇತನಃ ॥ ೪೩ ॥

ರಾಜರ್ಷಿ ಭಗೀರಥನೂ ಗಂಗೆಯನ್ನು ಯತ್ನದಿಂದ ಜೊತೆಗೆ ಕರೆದುಕೊಂಡು ರಸಾತಳಕ್ಕೆ ಹೋಗಿ, ಅಲ್ಲಿ ಬೂದಿ ಮಾಡಲ್ಪಟ್ಟಿದ್ದ ಪಿತಾಮಹರನ್ನು ನೋಡಿ ಮನನೊಂದು ದುಃಖದಿಂದ ದರ್ಶನ ಮಾಡಿದನು.

ಅಥ ತದ್ಭಸ್ಮನಾಂ ರಾಶಿಂ ಗಂಗಾಸಲಿಲಮುತ್ತಮಮ್ ।
ಪ್ಲಾವಯದ್ಧೂತಪಾಪ್ಮಾನಃ ಸ್ವರ್ಗಂ ಪ್ರಾಪ್ತಾ ರಘೂತ್ತಮ ॥ ೪೪ ॥

ರಾಮ! ಉತ್ತಮವಾದ ಗಂಗಾಜಲವು ಭಸ್ಮಗಳ ರಾಶಿಯ ಮೇಲೆ ಹರಿದು ಸಗರ ಪುತ್ರರನ್ನು ಸ್ವರ್ಗಕ್ಕೆ ಕಳಿಸಿತು. ಅವರು ಪಾಪವಿಮುಕ್ತರಾಗಿ ಸ್ವರ್ಗವನ್ನು ಪಡೆದರು.

ತತಸ್ತು ಗಂಗಾಂ ಪ್ರತಿಲಭ್ಯ ರಾಜಾ
ದಿಲೀಪಸೂನುರ್ಗಗನಾದ್ಭುವಂ ಗತಾಮ್ ।
ಹೃಷ್ಟೋಽವತಾರ್ಯಾಶು ನೃಪಾಚ್ಚ ಜಹ್ನೋಃ
ಸಂಭಾವಯಾಮಾಸ ಪಿತಾಮಹೇಭ್ಯಃ ॥ ॥ ೪೫ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ತ್ರಿಚತ್ವಾರಿಂಶಃ ಸರ್ಗಃ ॥ ೪೩ ॥

ದಿಲೀಪಪುತ್ರನಾದ ರಾಜಾ ಭಗೀರಥನು ತಪಸಿನಿಂದ ಗಂಗೆಯನ್ನು ಸ್ವರ್ಗದಿಂದ ಕರೆಸಿಕೊಂಡು, ಆಕಾಶದಿಂದ ಭೂಮಿಗೆ ಇಳಿದ ಆ ನದಿಯನ್ನು ಜಹ್ನುರಾಜರ್ಷಿಯ ಕಿವಿಗಳಿಂದಲೂ ಕೆಳಗೆ ಇಳಿಸಿ ಸಂತುಷ್ಟನಾಗಿ ಪಿತಾಮಹರಾದ ಸಗರ ಪುತ್ರರಿಗೆ ಉತ್ತರಕ್ರಿಯೆಯನ್ನು ಸಲ್ಲಿಸಿದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ನಲವತ್ತಮೂರನೆ ಸರ್ಗ ಮುಗಿಯಿತು.

ಚತುಶ್ಚತ್ವಾರಿಂಶಃ ಸರ್ಗಃ

ಸ ಗತ್ವಾ ಸಾಗರಂ ರಾಜಾ ಗಂಗಯಾऽನುಗತಸ್ತದಾ ।
ಪ್ರವಿವೇಶ ತಲಂ ಭೂಮೇರ್ಯತ್ರ ತೇ ಭಸ್ಮಸಾತ್ಕೃತಾಃ ॥ ೧ ॥

ರಾಜಾ ಭಗೀರಥನು ಹಿಂಬಾಲಿಸಿಬಂದ ಗಂಗೆಯೊಂದಿಗೆ ಸಮುದ್ರವನ್ನು ಸೇರಿ ರಸಾತಳಕ್ಕೂ ಇಳಿದ. ಅಲ್ಲಿ ಸಗರ ಪುತ್ರರು ಬೂದಿಯಾಗಿದ್ದರು.

ಭಸ್ಮನ್ಯಥಾऽऽಪ್ಲುತೇ ರಾಮ ಗಂಗಾಯಾಃ ಸಲಿಲೇನ ವೈ ।
ಸರ್ವಲೋಕಪ್ರಭುರ್ಬ್ರಹ್ಮಾ ರಾಜಾನಮಿದಮಬ್ರವೀತ್ ॥ ೨ ॥

ಗಂಗೆಯ ಜಲದಿಂದ ಬೂದಿ ಮುಳುಗಿ ಒದ್ದೆಯಾದಾಗ ಸರ್ವಲೋಕ ಪ್ರಭು ಬ್ರಹ್ಮದೇವನು ರಾಜನಿಗೆ ಹೇಳಿದನು.

ತಾರಿತಾ ನರಶಾರ್ದೂಲ ದಿವಂ ಯಾತಾಶ್ಚ ದೇವವತ್ ।
ಷಷ್ಟಿಃ ಪುತ್ರಸಹಸ್ರಾಣಿ ಸಗರಸ್ಯ ಮಹಾತ್ಮನಃ ॥ ೩ ॥

ಪುರುಷೋತ್ತಮನೆ, ಮಹಾತ್ಮ ಸಗರನ ಅರವತ್ತು ಸಾವಿರ ಪುತ್ರರು ಪಾಪಮುಕ್ತ-ರಾದರು, ದೇವತೆಗಳಂತೆ ಸ್ವರ್ಗಕ್ಕೆ ಹೋದರು.

ಸಾಗರಸ್ಯ ಜಲಂ ಲೋಕೇ ಯಾವತ್ಸ್ಥಾಸ್ಯತಿ ಪಾರ್ಥಿವ ।
ಸಗರಸ್ಯಾತ್ಮಜಾಸ್ತಾವತ್ಸ್ವರ್ಗೇ ಸ್ಥಾಸ್ಯಂತಿ ದೇವವತ್ ॥ ೪ ॥

ರಾಜನೆ, ಸಾಗರಜಲ ಲೋಕದಲ್ಲಿ ಇರುವಷ್ಟು ಕಾಲವೂ ಸಗರ ಪುತ್ರರು ದೇವತೆಗಳಂತೆ ಸ್ವರ್ಗದಲ್ಲಿರುವರು.

ಇಯಂ ಚ ದುಹಿತಾ ಜ್ಯೇಷ್ಠಾ ತವ ಗಂಗಾ ಭವಿಷ್ಯತಿ ।
ತ್ವತ್ಕೃತೇನ ಚ ನಾಮ್ನಾऽಥ ಲೋಕೇ ಸ್ಥಾಸ್ಯತಿ ವಿಶ್ರುತಾ ॥ ೫ ॥

ಈ ಗಂಗೆ ನಿನಗೂ ಜ್ಯೇಷ್ಠಪುತ್ರಿ ಎನಿಸುವಳು. ನೀನು ಅವಳಿಗೆ ಇಟ್ಟ ಭಾಗೀರಥೀ ಎಂಬ ಹೆಸರಿನಿಂದ ಲೋಕದಲ್ಲಿ ಪ್ರಸಿದ್ಧಳಾಗುವಳು.

ಗಂಗಾ ತ್ರಿಪಥಗಾ ರಾಜನ್ ದಿವ್ಯಾ ಭಾಗೀರಥೀತಿ ಚ ।
ತ್ರೀನ್ಪಥೋ ಭಾವಯಂತೀತಿ ತತಸ್ತ್ರಿಪಥಗಾ ಸ್ಮೃತಾ ॥ ೬ ॥

ರಾಜನೆ, ದಿವ್ಯ ಗಂಗೆಯು ತ್ರಿಪಥಗಾ ಎಂದೂ ಭಾಗೀರಥೀ ಎಂದೂ ಕರೆಸಿ-

ಕೊಳ್ಳುವಳು. ಸ್ವರ್ಗ ಮರ್ತ್ಯ ಪಾತಾಳ ಎಂದು ಮೂರು ಮಾರ್ಗಗಳನ್ನೂ ವ್ಯಾಪಿಸುವವಳು ಎಂದು ತ್ರಿಪಥಗಾ ಎನಿಸುವಳು.

ಪಿತಾಮಹಾನಾಂ ಸರ್ವೇಷಾಂ ತ್ವಮತ್ರ ಮನುಜಾಧಿಪ ।
ಕುರುಷ್ವ ಸಲಿಲಂ ರಾಜನ್ಪ್ರತಿಜ್ಞಾಮಪವರ್ಜಯ ॥ ೭ ॥

ರಾಜನೆ, ಈ ಗಂಗೆಯಲ್ಲಿ ನೀನು ಎಲ್ಲ ಪಿತಾಮಹರಿಗೂ ಜಲತರ್ಪಣ ನೀಡು. 'ಗಂಗಾಜಲ ತರ್ಪಣದಿಂದ ಸಗರ ಪುತ್ರರನ್ನು ಪಾಪವಿಮುಕ್ತರನ್ನಾಗಿ ಮಾಡುವೆನು' ಎಂಬ ನಿನ್ನ ಪ್ರತಿಜ್ಞೆಯನ್ನು ನೀನು ಪೂರೈಸು.

ಪೂರ್ವಕೇಣ ಹಿ ತೇ ರಾಜಂಸ್ತೇನಾತಿಯಶಸಾ ತದಾ ।
ಧರ್ಮಿಣಾಂ ಪ್ರವರೇಣಾಪಿ ನೈಷ ಪ್ರಾಪ್ತೋ ಮನೋರಥಃ ॥ ೮ ॥

ಅತ್ಯಂತ ಕೀರ್ತಿಶಾಲಿಯಾದ ಶ್ರೇಷ್ಠ ಧಾರ್ಮಿಕನಾದ ಪೂರ್ವಜನಾದ ಸಗರನಿಂದ-ಈ ಅಭೀಷ್ಟವನ್ನು ಪೂರೈಸಿಕೊಳ್ಳಲಾಗಲಿಲ್ಲ.

ತಥೈವಾಂಶುಮತಾ ತಾತ ಲೋಕೇಽಪ್ರತಿಮತೇಜಸಾ ।
ಗಂಗಾಂ ಪ್ರಾರ್ಥಯತಾಽಽನೇತುಂ ಪ್ರತಿಜ್ಞಾ ನಾಪವರ್ಜಿತಾ ॥ ೯ ॥

ಹಾಗೇ ಲೋಕದಲ್ಲಿ ಅಪ್ರತಿಮ ತೇಜನಾದ ಅಂಶುಮಂತನಿಂದಲೂ ಗಂಗೆ-ಯನ್ನು ಭೂಮಿಗೆ ಕರೆಸಿಕೊಳ್ಳುವೆನೆಂದು ಪ್ರತಿಜ್ಞೆ ಮಾಡಿ ಅದನ್ನು ಪೂರೈಸಿ-ಕೊಳ್ಳಲಾಗಲಿಲ್ಲ.

ರಾಜರ್ಷಿಣಾ ಗುಣವತಾ ಮಹರ್ಷಿಸಮತೇಜಸಾ ।
ಮತ್ತುಲ್ಯತಪಸಾ ಚೈವ ಕ್ಷತ್ರಧರ್ಮಸ್ಥಿತೇನ ಚ ॥ ೧೦ ॥

ದಿಲೀಪೇನ ಮಹಾಭಾಗ ತವ ಪಿತ್ರಾಽತಿತೇಜಸಾ ।
ಪುನರ್ನ ಶಕಿತಾಽಽನೇತುಂ ಗಂಗಾಂ ಪ್ರಾರ್ಥಯತಾಽನಘ ॥ ೧೧ ॥

ರಾಜರ್ಷಿ, ಗುಣವಂತ, ಮಹರ್ಷಿ ಸಮತೇಜ ಉಳ್ಳವ, ನನಗೆ ಸಮವಾಗಿ ತಪಗೈವವನು, ಕ್ಷಾತ್ರಧರ್ಮದಲ್ಲಿ ಸ್ಥಿತನಾದವನು, ಅತಿ ತೇಜನು ಇಂಥ ನಿನ್ನ ತಂದೆ ದಿಲೀಪನೂ ಕೂಡ ಗಂಗೆಯನ್ನು ತರಿಸಲು ಬಯಸಿಯೂ ತರಿಸಲು ಶಕ್ತನಾಗಲಿಲ್ಲ.

ಸಾ ತ್ವಯಾ ಸಮತಿಕ್ರಾಂತಾ ಪ್ರತಿಜ್ಞಾ ಪುರುಷರ್ಷಭ ।
ಪ್ರಾಪ್ತೋಽಸಿ ಪರಮಂ ಲೋಕೇ ಯಶಃ ಪರಮಸಮ್ಮತಮ್ ॥ ೧೨ ॥

ಪುರುಷ ಶ್ರೇಷ್ಠನೇ! ನೀನು ಪ್ರತಿಜ್ಞೆಯನ್ನು ಪೂರೈಸಿರುವೆ. ಲೋಕದಲ್ಲಿ ಪರಮ ಸಮ್ಮತವಾದ ಉತ್ತಮ ಯಶಸ್ಸನ್ನು ನೀನು ಹೊಂದಿರುವೆ.

ಯಚ್ಚ ಗಂಗಾವತರಣಂ ತ್ವಯಾ ಕೃತಮರಿಂದಮ ।
ಅನೇನ ಚ ಭವಾನ್‌ಪ್ರಾಪ್ತೋ ಧರ್ಮಸ್ಯಾಯತನಂ ಮಹತ್ ॥ ೧೩ ॥

ಶತ್ರುನಾಶಕನೇ! ನೀನು ಮಾಡಿದ ಈ ಗಂಗಾವತರಣದಿಂದ ನೀನು ಪುಣ್ಯಲಭ್ಯವಾದ ಮಹತ್ತಾದ ಸ್ಥಾನವನ್ನು ಪಡೆದಿರುವೆ.

ಪ್ಲಾವಯಸ್ವ ತ್ವಮಾತ್ಮಾನಂ ನರೋತ್ತಮ ಸದೋಚಿತೇ ।
ಸಲಿಲೇ ಪುರುಷವ್ಯಾಘ್ರ ಶುಚಿಃ ಪುಣ್ಯಫಲೋ ಭವ ॥ ೧೪ ॥

ಪುರುಷೋತ್ತಮನೆ! ಸ್ನಾನಾದಿಗಳಿಗೆ ಸದಾ ಉಚಿತವಾಗಿರುವ ಈ ಗಂಗಾಜಲದಲ್ಲಿ ನೀನು ಮೈ ತೊಳೆದುಕೊಂಡು ಶುಚಿಯಾಗು, ಪುಣ್ಯಫಲ ಭಾಗಿಯಾಗು.

ಪಿತಾಮಹಾನಾಂ ಸರ್ವೇಷಾಂ ಕುರುಷ್ವ ಸಲಿಲಕ್ರಿಯಾಮ್ ।
ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಸ್ವಂ ಲೋಕಂ ಗಮ್ಯತಾಂ ನೃಪ ॥ ೧೫ ॥

ರಾಜನೇ! ಎಲ್ಲ ಪಿತಾಮಹರಿಗೂ ಜಲತರ್ಪಣ ನೀಡು, ನಿನಗೆ ಮಂಗಳವಾಗಲಿ, ನನ್ನ ಲೋಕಕ್ಕೆ ನಾನು ಹಿಂತಿರುಗುವೆನು ನೀನೂ ನಿನ್ನ ಲೋಕಕ್ಕೆ ಹೋಗು.

ಇತ್ಯೇವಮುಕ್ತ್ವಾ ದೇವೇಶಃ ಸರ್ವಲೋಕಪಿತಾಮಹಃ ।
ಯಥಾಗತಂ ತಥಾಽಗಚ್ಛದ್ದೇವಲೋಕಂ ಮಹಾಯಶಾಃ ॥ ೧೬ ॥

ಹೀಗೆ ಹೇಳಿ ಸರ್ವಲೋಕಕ್ಕೂ ಪಿತಾಮಹನಾದ ಮಹಾಯಶ ದೇವೇಶನಾದ ಬ್ರಹ್ಮದೇವನು ಬಂದಹಾಗೇ ದೇವಲೋಕಕ್ಕೆ ಹಿಂತಿರುಗಿದನು.

ಭಗೀರಥೋಽಪಿ ರಾಜರ್ಷಿಃ ಕೃತ್ವಾ ಸಲಿಲಮುತ್ತಮಮ್ ।
ಯಥಾಕ್ರಮಂ ಯಥಾನ್ಯಾಯಂ ಸಾಗರಾಣಾಂ ಮಹಾಯಶಾಃ॥ ೧೭ ॥

ಕೃತೋದಕಃ ಶುಚೀ ರಾಜಾ ಸ್ವಪುರಂ ಪ್ರವಿವೇಶ ಹ ।
ಸಮೃದ್ಧಾರ್ಥೋ ನರಶ್ರೇಷ್ಠ ಸ್ವರಾಜ್ಯಂ ಪ್ರಶಶಾಸ ಹ ॥ ೧೮ ॥

ರಾಮ! ಮಹಾಯಶನಾದ ರಾಜರ್ಷಿ ಭಗೀರಥನು ಯಥಾಕ್ರಮವಾಗಿ ಯಥಾಯೋಗ್ಯವಾಗಿ ಸಗರ ಪುತ್ರರಿಗೆ ಉತ್ತಮವಾದ ಜಲತರ್ಪಣವಿತ್ತು ಸ್ನಾನ

ಮಾಡಿ ಶುಚಿಯಾಗಿ ತನ್ನ ನಗರವನ್ನು ಪ್ರವೇಶಿಸಿದ. ಸಮೃದ್ಧ ಸಂಪತ್ತನ್ನು ಹೊಂದಿ ತನ್ನ ರಾಜ್ಯವನ್ನಾಳಿದ.

ಪ್ರಮುಮೋದ ಚ ಲೋಕಸ್ತಂ ನೃಪಮಾಸಾದ್ಯ ರಾಘವ ।
ನಷ್ಟಶೋಕಃ ಸಮೃದ್ಧಾರ್ಥೋ ಬಭೂವ ವಿಗತಜ್ವರಃ ॥ ೧೯ ॥

ರಾಮ! ಲೋಕವೂ ಭಗೀರಥನ ಆಳ್ವಿಕೆಯನ್ನು ಹೊಂದಿ ಸಮೃದ್ಧ ಸಂಪತ್ತನ್ನು ಪಡೆದು ಶೋಕ ಚಿಂತೆಗಳಿಂದ ದೂರವಾಯಿತು.

ಏಷ ತೇ ರಾಮ ಗಂಗಾಯಾ ವಿಸ್ತರೋಽಭಿಹಿತೋ ಮಯಾ ।
ಸ್ವಸ್ತಿ ಪ್ರಾಪ್ನುಹಿ ಭದ್ರಂ ತೇ ಸಂಧ್ಯಾಕಾಲೋಽತಿವರ್ತತೇ ॥ ೨೦ ॥

ರಾಮ! ಗಂಗಾ ಚರಿತ್ರೆಯನ್ನು ವಿಸ್ತಾರವಾಗಿ ಹೇಳಿದ್ದೇನೆ. ನಿನಗೆ ಶುಭವಾಗಲಿ ಶುಭವಾಗಲಿ, ಸಂಧ್ಯಾಕಾಲ ಮೀರುತ್ತಿದೆ.

ಧನ್ಯಂ ಯಶಸ್ಯಮಾಯುಷ್ಯಂ ಪುತ್ರ್ಯಂ ಸ್ವರ್ಗ್ಯಮತೀವ ಚ ।
ಯಃ ಶ್ರಾವಯತಿ ವಿಪ್ರೇಷು ಕ್ಷತ್ರಿಯೇಷ್ವಿತರೇಷು ಚ ॥
ಪ್ರೀಯಂತೇ ಪಿತರಸ್ತಸ್ಯ ಪ್ರೀಯಂತೇ ದೈವತಾನಿ ಚ ॥ ೨೧ ॥

ಈ ಗಂಗಾಚರಿತ್ರೆ ಧನ ಯಶಸ್ಸು ಆಯುಷ್ಯ ಪುತ್ರ ಸಂತತಿಗಳನ್ನೂ ಸ್ವರ್ಗವನ್ನೂ ಕೊಡಲು ಅತ್ಯಂತ ಸಮರ್ಥವಾಗಿದೆ. ಯಾರು ಇದನ್ನು ವಿಪ್ರರಿಗೂ ಕ್ಷತ್ರಿಯರಿಗೂ ಇತರರಿಗೂ ಹೇಳುವನೋ ಅವನಿಗೆ ಪಿತೃಗಳೂ ದೇವತೆಗಳೂ ತುಷ್ಟರಾಗುತ್ತಾರೆ.

ಇದಮಾಖ್ಯಾನಮವ್ಯಗ್ರೋ ಗಂಗಾವತರಣಂ ಶುಭಮ್ ।
ಯಃ ಶೃಣೋತಿ ಚ ಕಾಕುತ್ಸ್ಥ ಸರ್ವಾನ್ಕಾಮಾನವಾಪ್ನುಯಾತ್ ॥
ಸರ್ವೇ ಪಾಪಾಃ ಪ್ರಣಶ್ಯಂತಿ ಆಯುಃ ಕೀರ್ತಿಶ್ಚ ವರ್ಧತೇ ॥ ೨೨ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಚತುಶ್ಚತ್ವಾರಿಂಶಃ ಸರ್ಗಃ ॥ ೪೪ ॥

ಶುಭಕರವಾದ ಈ ಗಂಗಾವತರಣ ಕಥೆಯನ್ನು ಏಕಾಗ್ರತೆಯಿಂದ ಯಾರು ಶ್ರವಣ ಮಾಡುವನೋ, ರಾಮ! ಅವನು ಸರ್ವಾಭೀಷ್ಟಗಳನ್ನೂ ಹೊಂದುತ್ತಾನೆ. ಸಮಸ್ತ ಪಾಪಗಳೂ ಪರಿಹಾರವಾಗುತ್ತವೆ. ಆಯುಷ್ಯ ಕೀರ್ತಿಗಳೂ ವರ್ಧಿಸುತ್ತಿವೆ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ನಲವತ್ತ ನಾಲ್ಕನೆ ಸರ್ಗ ಮುಗಿಯಿತು.

ಪಂಚಚತ್ವಾರಿಂಶಃ ಸರ್ಗಃ

ವಿಶ್ವಾಮಿತ್ರವಚಃ ಶ್ರುತ್ವಾ ರಾಘವಃ ಸಹಲಕ್ಷ್ಮಣಃ ।
ವಿಸ್ಮಯಂ ಪರಮಂ ಗತ್ವಾ ವಿಶ್ವಾಮಿತ್ರಮಥಾऽಬ್ರವೀತ್ ॥ ೧ ॥

ವಿಶ್ವಾಮಿತ್ರರ ಕಥಾಪ್ರವಚನವನ್ನು ಕೇಳಿ ರಾಮಲಕ್ಷ್ಮಣರು ಬಹಳ ಆಶ್ಚರ್ಯ ಪಟ್ಟು ವಿಶ್ವಾಮಿತ್ರರಿಗೆ ಹೇಳಿದರು.

ಅತ್ಯದ್ಭುತಮಿದಂ ಬ್ರಹ್ಮನ್ಕಥಿತಂ ಪರಮಂ ತ್ವಯಾ ।
ಗಂಗಾವತರಣಂ ಪುಣ್ಯಂ ಸಾಗರಸ್ಯಾಪಿ ಪೂರಣಮ್ ॥ ೨ ॥

ಮುನಿಯೆ! ಗಂಗೆಯು ಸ್ವರ್ಗದಿಂದ ಇಳಿದುಬಂದು ಭೂಮಿಯಲ್ಲಿ ಸಾಗರವನ್ನು ಭರ್ತಿ ಮಾಡಿದ್ದು ಅತ್ಯದ್ಭುತ ಮತ್ತು ಪರಮಪುಣ್ಯಕರ. ಇದನ್ನು ನೀವು ನಮಗೆ ಹೇಳಿರುವಿರಿ.

ಕ್ಷಣಭೂತೇವ ನೌ ರಾತ್ರಿಃ ಸಂವೃತ್ತೇಯಂ ಮಹಾತಪಃ ।
ಇಮಾಂ ಚಿಂತಯತಃ ಸರ್ವಾಂ ನಿಖಿಲೇನ ಕಥಾಂ ತವ ॥ ೩ ॥

ತಸ್ಯ ಸಾ ಶರ್ವರೀ ಸರ್ವಾ ಸಹ ಸೌಮಿತ್ರಿಣಾ ತದಾ ।
ಜಗಾಮ ಚಿಂತಯಾನಸ್ಯ ವಿಶ್ವಾಮಿತ್ರಕಥಾಂ ಶುಭಾಮ್ ॥ ೪ ॥

ಮಹಾ ತಪನೆ! ವಿಶ್ವಾಮಿತ್ರರೆ! ರಾತ್ರಿ ನಮಗೆ ಕ್ಷಣದಂತಾಯಿತು. ನೀವು ಹೇಳಿದ ಈ ಇಡೀಕಥೆಯನ್ನು ಪೂರ್ತಿಯಾಗಿ ಮೆಲುಕು ಹಾಕಿದೆವು. ಅದರಲ್ಲಿಯೇ ಇಡೀರಾತ್ರಿ ಕಳೆದುಹೋಯಿತು ಎಂದು.

ತತಃ ಪ್ರಭಾತೇ ವಿಮಲೇ ವಿಶ್ವಾಮಿತ್ರಂ ಮಹಾಮುನಿಮ್ ।
ಉವಾಚ ರಾಘವೋ ವಾಕ್ಯಂ ಕೃತಾಹ್ನಿಕಮರಿಂದಮಃ ॥
ಗತಾ ಭಗವತೀ ರಾತ್ರಿಃ ಶ್ರೋತವ್ಯಂ ಪರಮಂ ಶ್ರುತಮ್ ॥ ೫ ॥

ರಾತ್ರಿ ಕಳೆಯಿತು, ಮುಖ್ಯವಾಗಿ ಕೇಳಬೇಕಾಗಿದ್ದುದು ಕೇಳಿಯಾಯಿತು. ಬಳಿಕ ಬೆಳಗಾದಾಗ ಆಹ್ನಿಕವನ್ನು ಮುಗಿಸಿದ್ದ ಮಸಾಮುನಿ ವಿಶ್ವಾಮಿತ್ರರಿಗೆ ಶತ್ರುನಾಶಕ ರಾಮ ನುಡಿದನು.

ಪ್ರಚಲಿತ ಪಾಠದಲ್ಲಿ 'ತತಃ ಪ್ರಭಾತೇ ವಿಮಲೇ' ಎಂಬ ಒಂದು ಶ್ಲೋಕವಾದ ಬಳಿಕ 'ಗತಾ ಭಗವತೀ ರಾತ್ರಿಃ' ಎಂಬ ಅರ್ಧ ಶ್ಲೋಕ ಬರುತ್ತದೆ. ಅದು

ಸರಿಯಲ್ಲ. ಈ ಅರ್ಧ ಶ್ಲೋಕವಾದ ಬಳಿಕ 'ತತಃ ಪ್ರಭಾತೇ' ಎಂಬ ಇಡೀ ಒಂದು ಶ್ಲೋಕ ಬರಬೇಕು. ಗೋವಿಂದರಾಜೀಯ ವ್ಯಾಖ್ಯಾನದಲ್ಲಿ 'ಗತೇತ್ಯರ್ಧತ್ರಯಂ' ಎಂದೊಡನೇ 'ತರಾಮೇತ್ಯರ್ಧತ್ರಯಂ' ಎಂದಿದೆ. ಪ್ರಚಲಿತ ಪಾಠದಲ್ಲಿ 'ತರಾಮೇತ್ಯರ್ಧತ್ರಯಕ್ಕಿಂತ ಮೊದಲಿಗೆ' ಗತೇತ್ಯರ್ಧತ್ರಯ' ಸಿಗುವುದಿಲ್ಲ. ಗತೇತಿ ಅರ್ಧ ಮಾತ್ರ ಸಿಗುತ್ತದೆ. ಅರ್ಥಾನುಗುಣವಾಗಿ ಗೋವಿಂದರಾಜೀಯಾನುಸಾರ ಶ್ಲೋಕಕ್ರಮವಿಟ್ಟುಕೊಳ್ಳುವುದೇ ಯುಕ್ತ.

ತರಾಮ ಸರಿತಾಂ ಶ್ರೇಷ್ಠಾಂ ಪುಣ್ಯಾಂ ತ್ರಿಪಥಗಾಂ ನದೀಮ್ ।
ನೌರೇಷಾ ಹಿ ಸುಖಾಸ್ತೀರ್ಣಾ ಋಷೀಣಾಂ ಪುಣ್ಯಕರ್ಮಣಾಮ್ ॥
ಭಗವಂತಮಿಹ ಪ್ರಾಪ್ತಂ ಜ್ಞಾತ್ವಾ ತ್ವರಿತಮಾಗತಾ ॥ ೬ ॥

ಆಹ್ನಿಕವನ್ನು ಮುಗಿಸಿದ್ದ ವಿಶ್ವಾಮಿತ್ರ ಮುನಿಗೆ ರಾಮ ಏನು ನುಡಿದನೆಂದರೆ, 'ನದಿಗಳಲ್ಲಿ ಶ್ರೇಷ್ಠವಾದ ಪುಣ್ಯಕರವಾದ ತ್ರಿಪಥಗೆಯಾದ ನದಿಯನ್ನು ದಾಟೋಣ. ಸುಖಾಸನಗಳಿಂದ ಯುಕ್ತವಾಗಿ ಸಜ್ಜಾಗಿರುವ, ಪುಣ್ಯಕರ್ಮಿ ಋಷಿಗಳಿಗೆ ಯೋಗ್ಯ-ವಾದ ಈ ನೌಕೆ, ಈಗ ಪೂಜ್ಯರಾದ ತಾವು ಬಂದಿರುವುದನ್ನು ತಿಳಿದು ಶೀಘ್ರವಾಗಿ ಇಲ್ಲಿಗೆ ಬಂದಿದೆ' ಎಂದು.

ತಸ್ಯ ತದ್ವಚನಂ ಶ್ರುತ್ವಾ ರಾಘವಸ್ಯ ಮಹಾತ್ಮನಃ ।
ಸಂತಾರಂ ಕಾರಯಾಮಾಸ ಸರ್ಷಿಸಂಘಃ ಸರಾಘವಃ ॥ ೭ ॥

ಮಹಾತ್ಮ ರಾಮನು ಹೇಳಿದ ಆ ಮಾತನ್ನು ಕೇಳಿ ಋಷಿ ಸಮೂಹದಿಂದ ಮತ್ತು ರಾಮಲಕ್ಷ್ಮಣರಿಂದ ಯುಕ್ತರಾದ ವಿಶ್ವಾಮಿತ್ರ ಮುನಿಯು ನಾವಿಕರ ಸಹಾಯ-ದಿಂದ ಗಂಗಾತರಣ ಮಾಡಿದರು.

ಉತ್ತರಂ ತೀರಮಾಸಾದ್ಯ ಸಂಪೂಜ್ಯರ್ಷಿಗಣಂ ತದಾ ।
ಗಂಗಾಕೂಲೇ ನಿವಿಷ್ಟಾಸ್ತೇ ವಿಶಾಲಾಂ ದದೃಶುಃ ಪುರೀಮ್ ॥ ೮ ॥

ಅವರು ಗಂಗೆಯ ಉತ್ತರ ತೀರವನ್ನು ಹೋಗಿ ಸೇರಿ, ಅಲಿಇಲ್ಲಿರುವ ಋಷಿ-ಸಮೂಹವನ್ನು ಸತ್ಕರಿಸಿ ಆ ಗಂಗಾತೀರದಲ್ಲಿ ಕುಳಿತರು. ವಿಶಾಲ ಎಂಬ ನಗರವನ್ನು ಕಂಡರು.

ತತೋ ಮುನಿವರಸ್ತೂರ್ಣಂ ಜಗಾಮ ಸಹರಾಘವಃ ।
ವಿಶಾಲಾಂ ನಗರೀಂ ರಮ್ಯಾಂ ದಿವ್ಯಾಂ ಸ್ವರ್ಗೋಪಮಾಂ ತದಾ॥ ೯ ॥

ಬಳಿಕ ಮುನಿವರ ವಿಶ್ವಾಮಿತ್ರರು ರಾಮಲಕ್ಷ್ಮಣರೊಂದಿಗೆ ಶೀಘ್ರವಾಗಿ ರಮ್ಯವಾದ ದಿವ್ಯವಾದ ಸ್ವರ್ಗದಂತಿರುವ ವಿಶಾಲಾನಗರಿಗೆ ಹೊರಟರು.

ಅಥ ರಾಮೋ ಮಹಾಪ್ರಾಜ್ಞೋ ವಿಶ್ವಾಮಿತ್ರಂ ಮಹಾಮುನಿಮ್ ।
ಪಪ್ರಚ್ಛ ಪ್ರಾಂಜಲಿರ್ಭೂತ್ವಾ ವಿಶಾಲಾಮುತ್ತಮಾಂ ಪುರೀಮ್ ॥೧೦॥

ಮಹಾಪ್ರಾಜ್ಞನಾದ ರಾಮನು ಮಹಾಮುನಿ ವಿಶ್ವಾಮಿತ್ರರನ್ನು ಕೈಮುಗಿದು ಉತ್ತಮವಾದ ವಿಶಾಲಾ ನಗರಿಯ ಬಗ್ಗೆ ಕೇಳಿದನು.

ಕತರೋ ರಾಜವಂಶೋಽಯಂ ವಿಶಾಲಾಯಾಂ ಮಹಾಮುನೇ ।
ಶ್ರೋತುಮಿಚ್ಛಾಮಿ ಭದ್ರಂ ತೇ ಪರಂ ಕೌತೂಹಲಂ ಹಿ ಮೇ ॥ ೧೧ ॥

ಮಹಾಮುನಿಯೆ! ವಿಶಾಲಾನಗರಿಯಲ್ಲಿ ಇರುವ ರಾಜವಂಶ ಯಾವುದು? ಅದನ್ನು ಕೇಳಲು ಬಯಸುತ್ತೇನೆ. ನಿಮಗೆ ಶುಭವಾಗಲಿ, ನನಗೆ ಬಹಳ ಕುತೂಹಲ ಉಂಟಾಗಿದೆ.

ತಸ್ಯ ತದ್ವಚನಂ ಶ್ರುತ್ವಾ ರಾಮಸ್ಯ ಮುನಿಪುಂಗವಃ ।
ಆಖ್ಯಾತುಂ ತತ್ಸಮಾರೇಭೇ ವಿಶಾಲಸ್ಯ ಪುರಾತನಮ್ ॥ ೧೨ ॥

ಮುನಿಶ್ರೇಷ್ಠರಾದ ವಿಶ್ವಾಮಿತ್ರರು ರಾಮನ ಆ ಮಾತನ್ನು ಕೇಳಿ ವಿಶಾಲ ರಾಜನ ಪುರಾತನ ವೃತ್ತಾಂತವನ್ನು ಹೇಳಲು ತೊಡಗಿದರು.

ಶ್ರೂಯತಾಂ ರಾಮ ಶಕ್ರಸ್ಯ ಕಥಾಂ ಕಥಯತಃ ಶುಭಾಮ್ ।
ಅಸ್ಮಿನ್‌ದೇಶೇ ತು ಯದ್‌ವೃತ್ತಂ ತದಪಿ ಶೃಣು ರಾಘವ ॥ ೧೩ ॥

ರಾಮ! ಕೇಳು ಇಂದ್ರನ ಮಂಗಳಕರವಾದ ಕಥೆಯನ್ನು ಹೇಳುತ್ತ ಈ ವಿಶಾಲ-ನಗರ ಪ್ರದೇಶದಲ್ಲಿ ಏನು ನಡೆಯಿತು ಆ ವೃತ್ತಾಂತವನ್ನೂ ಹೇಳುತ್ತೇನೆ ಕೇಳು.

ಪೂರ್ವಂ ಕೃತಯುಗೇ ರಾಮ ದಿತೇಃ ಪುತ್ರಾ ಮಹಾಬಲಾಃ ।
ಅದಿತೇಶ್ಚ ಮಹಾಭಾಗ ವೀರ್ಯವಂತಃ ಸುಧಾರ್ಮಿಕಾಃ ॥ ೧೪ ॥

ರಾಮ! ಹಿಂದೆ ಕೃತಯುಗದಲ್ಲಿ ಮಹಾಬಲಶಾಲಿಗಳಾದ ದಿತಿ ಪುತ್ರರೂ, ವೀರ್ಯಶಾಲಿಗಳೂ ಬಲು ಧಾರ್ಮಿಕರೂ ಆದ ಅದಿತಿ ಪುತ್ರರೂ ಇಲ್ಲಿ ಇದ್ದರು.

ತತಸ್ತೇಷಾಂ ನರಶ್ರೇಷ್ಠ ಬುದ್ಧಿರಾಸೀನ್ಮಹಾತ್ಮನಾಮ್ ।
ಅಮರಾ ಅಜರಾಶ್ಚೈವ ಕಥಂ ಸ್ಯಾಮ ನಿರಾಮಯಾಃ ॥ ೧೫ ॥

ಪುರುಷೋತ್ತಮ ರಾಮ! ಮಹಾತ್ಮರಾದ ಅವರಿಗೆ ತಾವು ಅಜರರೂ ಅಮರರೂ ರೋಗರಹಿತರೂ ಆಗಬೇಕು, ಹೇಗೆ? ಎನ್ನುವ ಆಲೋಚನೆ ಉಂಟಾಯಿತು.

ತೇಷಾಂ ಚಿಂತಯತಾಂ ರಾಮ ಬುದ್ಧಿರಾಸೀನ್ಮಹಾತ್ಮನಾಮ್ ।
ಕ್ಷೀರೋದಮಥನಂ ಕೃತ್ವಾ ರಸಂ ಪ್ರಾಪ್ಸ್ಯಾಮ ತತ್ರ ವೈ ॥ ೧೬ ॥

ಹೀಗೆ ಆಲೋಚನೆ ಮಾಡುತ್ತಿದ್ದಾಗ ರಾಮ! ಮಹಾತ್ಮರಾದ ಅವರಿಗೆ ಉಪಾಯ ಹೊಳೆಯಿತು, ಕ್ಷೀರ ಸಮುದ್ರವನ್ನು ಮಥನ ಮಾಡಿ ಅದರಲ್ಲಿ ರಸವನ್ನು ಪಡೆಯೋಣ ಎಂದು.

ತತೋ ನಿಶ್ಚಿತ್ಯ ಮಥನಂ ಯೋಕ್ತ್ರಂ ಕೃತ್ವಾ ಚ ವಾಸುಕಿಮ್ ।
ಮಂಥಾನಂ ಮಂದರಂ ಕೃತ್ವಾ ಮಮಂಥುರಮಿತೌಜಸಃ ॥ ೧೭ ॥

ಮಥನ ಮಾಡಲು ನಿಶ್ಚಯಿಸಿ ವಾಸುಕಿ ಸರ್ಪವನ್ನು ಹಗ್ಗವಾಗಿ ಮಾಡಿ ಮಂದರ ಪರ್ವತವನ್ನು ಕಡಗೋಲು ಮಾಡಿ ಅಮಿತ ಬಲಶಾಲಿಗಳಾದ ಅವರು ಮಥನ ಮಾಡಿದರು.

ಅಥ ವರ್ಷಸಹಸ್ರೇಣ ಯೋಕ್ತ್ರಸರ್ಪಶಿರಾಂಸಿ ಚ ।
ವಮಂತ್ಯತಿವಿಷಂ ತತ್ರ ದದಂಶುರ್ದಶನೈಃ ಶಿಲಾಃ ॥ ೧೮ ॥

ಸಾವಿರ ವರ್ಷಗಳಾದ ಬಳಿಕ ಹಗ್ಗವಾದ ವಾಸುಕಿ ಸರ್ಪನ ಶಿರಸ್ಸುಗಳು ಅತಿಯಾಗಿ ವಿಷವನ್ನು ವಮನ ಮಾಡಿದುವು ಕೋರೆ ದಾಡೆ ಹಲ್ಲುಗಳಿಂದ ಬಂಡೆಗಲ್ಲುಗಳನ್ನು ಕಡಿದುವು.

ಉತ್ಪಪಾತಾಗ್ನಿಸಂಕಾಶಂ ಹಾಲಾಹಲಮಹಾವಿಷಮ್ ।
ತೇನ ದಗ್ಧಂ ಜಗತ್ಸರ್ವಂ ಸದೇವಾಸುರಮಾನುಷಮ್ ॥ ೧೯ ॥

ಅಗ್ನಿಯಂಥ ಹಾಲಾಹಲ ಮಹಾವಿಷವೂ ಉದ್ಭವಿಸಿತು ಆ ವಿಷದಿಂದ ದೇವ ಅಸುರ ಮನುಷ್ಯರಿಂದ ಕೂಡಿಸಿ ಎಲ್ಲ ಜಗತ್ತು ದಗ್ಧವಾಯಿತು.

ಅಥ ದೇವಾ ಮಹಾದೇವಂ ಶಂಕರಂ ಶರಣಾರ್ಥಿನಃ ।
ಜಗ್ಮುಃ ಪಶುಪತಿಂ ರುದ್ರಂ ತ್ರಾಹಿ ತ್ರಾಹೀತಿ ತುಷ್ಟುವುಃ ॥ ೨೦ ॥

ದೇವತೆಗಳು ಶರಣಾರ್ಥಿಗಳಾಗಿ ಶಂಕರ ಪಶುಪತಿ ರುದ್ರನಾಮಕನಾದ ಮಹಾದೇವನನ್ನು ಬಳಿ ಸಾರಿ ರಕ್ಷಿಸು ರಕ್ಷಿಸೆಂದು ಸ್ತುತಿಸಿದರು.

ಏವಮುಕ್ತಸ್ತತೋ ದೇವೈರ್ದೇವದೇವೇಶ್ವರಃ ಪ್ರಭುಃ ।
ಪ್ರಾದುರಾಸೀತ್ತತೋಽತ್ರೈವ ಶಂಖಚಕ್ರಧರೋ ಹರಿಃ ॥ ೨೧ ॥

ದೇವತೆಗಳು ಹೀಗೆ ರುದ್ರನನ್ನು ಸ್ತುತಿಸುವಾಗ ಅಲ್ಲಿಯೆ ದೇವದೇವೇಶ್ವರ ಪ್ರಭು ಶ್ರೀಹರಿ ಶಂಖಚಕ್ರಧರನಾಗಿ ಪ್ರಾದುರ್ಭವಿಸಿದ.

ಉವಾಚೈನಂ ಸ್ಮಿತಂ ಕೃತ್ವಾ ರುದ್ರಂ ಶೂಲಭೃತಂ ಹರಿಃ ।
ದೈವತೈರ್ಮಥ್ಯಮಾನೇ ತು ಯತ್ಪೂರ್ವಂ ಸಮುಪಸ್ಥಿತಮ್ ॥ ೨೨ ॥

ತತ್ತ್ವದೀಯಂ ಸುರಶ್ರೇಷ್ಠ ಸುರಾಣಾಮಗ್ರಜೋಽಸಿ ಯತ್ ।
ಅಗ್ರಪೂಜಾಮಿಮಾಂ ಮತ್ವಾ ಗೃಹಾಣೇದಂ ವಿಷಂ ಪ್ರಭೋ ॥ ೨೩ ॥

ಹರಿ ಮಂದಹಾಸ ಮಾಡುತ್ತ ಶೂಲಧಾರಿಯಾದ ರುದ್ರನಿಗೆ ಹೇಳಿದನು, 'ದೇವತೆಗಳು ಮಥನ ಮಾಡುವಾಗ ಯಾವುದು ಮೊದಲಿಗೆ ಉದ್ಭವಿಸುವುದೋ ಅದು ನಿನಗೇ ಸೇರುವುದು ಉಚಿತ. ಏಕೆಂದರೆ ದೇವತೆಗಳಲ್ಲಿ ಮೊದಲಿಗನು ನೀನು. ಇದು ಈಗ ದೇವತೆಗಳು ಮೊದಲಿಗನಿಗೆ ಮಾಡುವ ಮೊದಲ ಪೂಜೆ, ವಿಷ ಸಮರ್ಪಣೆ ಎಂದು ಬಗೆದು ಈ ವಿಷವನ್ನು ಉಣ್ಣು, ಪ್ರಭುವೆ!'

'ಪ್ರಭು' ಅಂದರೆ ಸರ್ವಶಕ್ತ. ವಿಷ ಉಣಲು ನೀನು 'ಪ್ರಭು' ಶಕ್ತನಾಗುವೆ ಎಂದು ಹರಿಯು ಹರನಿಗೆ ವರ ನೀಡುತ್ತಿದ್ದಾನೆ. ಲಯಮೂರ್ತಿಯಾದ ಅವನಿಂದ ವಿಷಭಕ್ಷಣದ ಮೂಲಕ ಲೋಕರಕ್ಷಣಕಾರ್ಯ ಮಾಡಿಸುತ್ತಿದ್ದಾನೆ, ಪಾಲನ ಮೂರ್ತಿ. ಅವನ ವರಬಲದಿಂದ ವಿಷವನ್ನು 'ಅಮೃತೋಪಮ'ವಾಗಿ ಮಾಡಿ-ಕೊಂಡು ಭಕ್ಷಣ ಮಾಡುತ್ತಾನೆ ಎಂದು ಮುಂದೆ ಹೇಳುತ್ತಾನೆ ವಾಲ್ಮೀಕಿ.

ಇತ್ಯುಕ್ತ್ವಾ ಚ ಸುರಶ್ರೇಷ್ಠಸ್ತತ್ರೈವಾಂತರಧೀಯತ ।
ದೇವತಾನಾಂ ಭಯಂ ದೃಷ್ಟ್ವಾ ಶ್ರುತ್ವಾ ವಾಕ್ಯಂ ತು ಶಾರ್ಙ್ಗಿಣಃ॥೨೪॥

ಹಾಲಾಹಲವಿಷಂ ಘೋರಂ ಸ ಜಗ್ರಾಹಾಮೃತೋಪಮಮ್ ।
ದೇವಾನ್ವಿಸೃಜ್ಯ ದೇವೇಶೋ ಜಗಾಮ ಭಗವಾನ್ಹರಃ ॥ ೨೫ ॥

ಹೀಗೆ ಹೇಳಿ ದೇವೋತ್ತಮನಾದ ಹರಿ ಅಲ್ಲಿಯೆ ಅಂತರ್ಧಾನ ಹೊಂದಿದ. ದೇವತೆಗಳ ಭಯವನ್ನು ಕಂಡು ಹರಿಯ ಮಾತನ್ನೂ ಕೇಳಿ ಘೋರವಾದ ಹಾಲಾಹಲ ವಿಷವನ್ನು ನಾಮತ್ರಯ ಜಪದಿಂದ ಅಮೃತೋಪಮವಾಗಿ

ಮಾಡಿಕೊಂಡು ನುಂಗಿದ, ಭಗವಾನ್ ಹರ. ದೇವೇಶ ಬಳಿಕ ದೇವತೆಗಳನ್ನು ಬಿಟ್ಟು ಹೊರಟುಹೋದ.

ತತೋ ದೇವಾಸುರಾಃ ಸರ್ವೇ ಮಮಂಥೂ ರಘುನಂದನ ।
ಪ್ರವಿವೇಶಾಥ ಪಾತಾಲಂ ಮಂಥಾನಃ ಪರ್ವತೋಽನಘ ॥ ೨೬ ॥

ಅನಘನಾದ ಹೇ ರಾಮ! ಬಳಿಕ ದೇವತೆಗಳೂ ಅಸುರರೂ ಎಲ್ಲರೂ ಮಥನ ಮಾಡಿದರು. ಆಗ ಕಡಗೋಲಾದ ಮಂದರ ಪರ್ವತ ಕುಸಿದು ಪಾತಾಳವನ್ನು ಪ್ರವೇಶಿಸಿತು.

ತತೋ ದೇವಾಃ ಸಗಂಧರ್ವಾಸ್ತುಷ್ಟುವುರ್ಮಧುಸೂದನಮ್ ।
ತ್ವಂ ಗತಿಃ ಸರ್ವಭೂತಾನಾಂ ವಿಶೇಷೇಣ ದಿವೌಕಸಾಮ್ ॥ ೨೭ ॥

ಆಗ ದೇವತೆಗಳೂ ಗಂಧರ್ವರೂ ಮಧುಸೂದನನನ್ನು ಸ್ತುತಿಸಿದರು. 'ಎಲ್ಲ ಜೀವಿಗಳಿಗೂ, ವಿಶೇಷವಾಗಿ ದೇವತೆಗಳಿಗೆ ನೀನೆ ರಕ್ಷಕ' ಎಂದು.

ಪಾಲಯಾಸ್ಮಾನ್ಮಹಾಬಾಹೋ ಗಿರಿಮುದ್ಧರ್ತುಮರ್ಹಸಿ ।
ಇತಿ ಶ್ರುತ್ವಾ ಹೃಷೀಕೇಶಃ ಕಾಮಠಂ ರೂಪಮಾಸ್ಥಿತಃ ॥ ೨೮ ॥

ಮಹಾಬಾಹುವೆ ನಮ್ಮನ್ನು ರಕ್ಷಿಸು. ಪರ್ವತವನ್ನು ಮೇಲೆತ್ತು . ಹೀಗೆ ದೇವತೆಗಳ ಮೊರೆಯನ್ನಾಲಿಸಿ ಹರಿ ಕೂರ್ಮರೂಪವನ್ನು ಧರಿಸಿದ.

ಪರ್ವತಂ ಪೃಷ್ಠತಃ ಕೃತ್ವಾ ಶಿಶ್ಯೇ ತತ್ರೋದಧೌ ಹರಿಃ ।
ಪರ್ವತಾಗ್ರಂ ತು ಲೋಕಾತ್ಮಾ ಹಸ್ತೇನಾಕ್ರಮ್ಯ ಕೇಶವಃ ॥
ದೇವಾನಾಂ ಮಧ್ಯತಃ ಸ್ಥಿತ್ವಾ ಮಮಂಥ ಪುರುಷೋತ್ತಮಃ ॥ ೨೯ ॥

ಮಂದರಪರ್ವತವನ್ನು ಬೆನ್ನ ಮೇಲೆ ಇರಿಸಿಕೊಂಡು ಅಲ್ಲಿ ಸಮುದ್ರದಲ್ಲಿ ಶಯನ ಮಾಡಿದ ಶ್ರೀಹರಿ. ಲೋಕವ್ಯಾಪಿ ರೂಪದಿಂದ ಪರ್ವತದ ತುದಿಯನ್ನು ಅದು ಮೇಲೆ ಹಾರದಂತೆ ಕೈಯಿಂದ ಒತ್ತಿ ಹಿಡಿದು ದೇವತೆಗಳ ಮಧ್ಯದಲ್ಲಿ ತಾನೂ ಒಬ್ಬ ದೇವನಾಗಿ ನಿಂತು ಮಥನ ಮಾಡಿದ ಪುರುಷೋತ್ತಮ. ಕೂರ್ಮಾವತಾರದಲ್ಲಿ ಮೊನಚಾದ ಕಲ್ಲು ಬಂಡೆಗಳ ಮಂದರ ಪರ್ವತ ಬೆನ್ನಮೇಲೆ ಗಿರಗಿರನೆ ಸುತ್ತಿದರೆ ಅವನಿಗೆ ಹಾಯಾಗಿ ಬೆನ್ನು ತುರಿಸಿದ ಅನುಭವ! ಅದರಿಂದ ತೂಕಡಿಕೆ ಹರಿಗೆ. ಭಾಗವತ ಹೇಳುತ್ತದೆ–

ಪೃಷ್ಠೇ ಭ್ರಾಮ್ಯದಮಂದ ಮಂದರಗಿರಿ
ಗ್ರಾವಾಗ್ರಕಂಡೂಯನಾತ್
ನಿದ್ರಾಲೋಃ ಕಮಠಾಕೃತೇರ್ಭಗವತಃ ..... (ಭಾಗ ೧೨.೧೩.೨)

ವಾಲ್ಮೀಕಿ ಇದನ್ನು 'ಪರ್ವತಂ ಪೃಷ್ಠತಃ ಕೃತ್ವಾ ಶಿಶ್ಯೇ' ಎನ್ನುವ ಮಾತಿನಿಂದ ಸೂಚಿಸಿದ್ದಾನೆ.

ಅಥ ವರ್ಷಸಹಸ್ರೇಣ ಆಯುರ್ವೇದಮಯಃ ಪುಮಾನ್ ।
ಉದತಿಷ್ಠತ್ಸುಧರ್ಮಾತ್ಮಾ ಸದಂಡಃ ಸಕಮಂಡಲುಃ ॥
ಪೂರ್ವಂ ಧನ್ವಂತರಿರ್ನಾಮ ಅಪ್ಸರಾಶ್ಚ ಸುವರ್ಚಸಃ ॥ ೩೦ ॥

ಬಳಿಕ ಸಾವಿರ ವರ್ಷಗಳ ಬಳಿಕ ಆಯುರ್ವೇದ ಪ್ರವರ್ತಕ ಧನ್ವಂತರಿ ನಾಮಕ ಅವತಾರವನ್ನು ಮಾಡಿ 'ಪುಮಾನ್' ಪುರುಷ, ಪರಮಪುರುಷನು ಸಮುದ್ರದಿಂದ ಎದ್ದುಬಂದ. ದಂಡ ಕಮಂಡಲು ಹಿಡಿದುನಿಂತ. ಬಳಿಕ ಒಳ್ಳೆಯ ಕಾಂತಿಯುಕ್ತರಾದ ಅಪ್ಸರೆಯರು ಬಂದರು.

ಅಪ್ಸು ನಿರ್ಮಥನಾದೇವ ರಸಾತ್ತಸ್ಮಾದ್ವರಸ್ತ್ರಿಯಃ ।
ಉತ್ಪೇತುರ್ಮನುಜಶ್ರೇಷ್ಠ ತಸ್ಮಾದಪ್ಸರಸೋऽಭವನ್ ॥ ೩೧ ॥

ನೀರಲ್ಲಿ ಮಥನದಿಂದ ಉದ್ಭವಿಸಿದ ರಸದಿಂದ ಈ ಅಪ್ಸರ ಸ್ತ್ರೀಯರು ಎದ್ದುಬಂದರು. ಅದರಿಂದ, ಹೇ ರಾಮ! ಅವರು 'ಅಪ್ಸರೆ'ಯರೆನಿಸಿದರು.

ಷಷ್ಟಿಃ ಕೋಟ್ಯೋऽಭವಂಸ್ತಾಸಾಮಪ್ಸರಾಣಾಂ ಸುವರ್ಚಸಾಮ್ ।
ಅಸಂಖ್ಯೇಯಾಸ್ತು ಕಾಕುತ್ಸ್ಥ ಯಾಸ್ತಾಸಾಂ ಪರಿಚಾರಿಕಾಃ ॥ ೩೨ ॥

ಒಳ್ಳೆಯ ಕಾಂತಿಯುಕ್ತರಾದ ಅರವತ್ತು ಕೋಟಿ ಅಪ್ಸರೆಯರು ಜನಿಸಿದರು. ರಾಮ! ಈ ಅಪ್ಸರೆಯರ ಪರಿಚಾರಿಕೆಯರು ಅಸಂಖ್ಯರು.

ನ ತಾಃ ಸ್ಮ ಪ್ರತಿಗೃಹ್ಣಂತಿ ಸರ್ವೇ ತೇ ದೇವದಾನವಾಃ ।
ಅಪ್ರತಿಗ್ರಹಣಾತ್ತಾಶ್ಚ ಸರ್ವಾಃ ಸಾಧಾರಣಾಃ ಸ್ಮೃತಾಃ ॥ ೩೩ ॥

ಈ ಅಪ್ಸರ ಸ್ತ್ರೀಯರನ್ನು ದೇವದಾನವರು ಯಾರೂ ವಿವಾಹವಾಗಲಿಲ್ಲ. ವಿವಾಹವಿಲ್ಲದವರಾದ್ದರಿಂದ ಅವರು ಗಣಿಕೆಯರೆನಿಸಿದರು.

ವರುಣಸ್ಯ ತತಃ ಕನ್ಯಾ ವಾರುಣೀ ರಘುನಂದನ ।
ಉತ್ಪಪಾತ ಮಹಾಭಾಗಾ ಮಾರ್ಗಮಾಣಾ ಪರಿಗ್ರಹಮ್ ॥ ೩೪ ॥

ವರುಣನ ಕನ್ಯೆ ವಾರುಣಿ ಉದ್ಭವಿಸಿದಳು ರಾಮ! ಅವಳು ತನ್ನನ್ನು ಪರಿಗ್ರಹ ಮಾಡುವವರು ಯಾರೆಂದು ಅನ್ವೇಷಣ ಮಾಡಿದಳು.

ದಿತೇಃ ಪುತ್ರಾ ನ ತಾಂ ರಾಮ ಜಗೃಹುರ್ವರುಣಾತ್ಮಜಾಮ್ ।
ಅದಿತೇಸ್ತು ಸುತಾ ವೀರ ಜಗೃಹುಸ್ತಾಮನಿಂದಿತಾಮ್ ॥ ೩೫ ॥

ವರುಣನ ಕನ್ಯೆಯಾದ ವಾರುಣಿ ಸುರೆಯ ಅಭಿಮಾನಿ ದೇವತೆ. ಅವಳನ್ನು ರಾಮ! ದಿತಿಪುತ್ರರು ಯಾರೂ ಸ್ವೀಕರಿಸಲಿಲ್ಲ. ಅದಿತಿಪುತ್ರರು ಮಾತ್ರ ಅನಿಂದಿತ-ಳಾದ ಅವಳನ್ನು ಸ್ವೀಕರಿಸಿದರು.

ಅಸುರಾಸ್ತೇನ ದೈತೇಯಾಃ ಸುರಾಸ್ತೇನಾದಿತೇಃ ಸುತಾಃ ।
ಹೃಷ್ಟಾಃ ಪ್ರಮುದಿತಾಶ್ಚಾಸನ್ವಾರುಣೀಗ್ರಹಣಾತ್ಸುರಾಃ ॥ ೩೬ ॥

ಅದರಿಂದ ದಿತಿಪುತ್ರರು 'ಅ-ಸುರ'ರೆನಿಸಿದರು ಅದಿತಿ ಪುತ್ರರು 'ಸುರ'-ರೆನಿಸಿದರು. ವಾರುಣಿಯನ್ನು ಪರಿಗ್ರಹಿಸಿ ಸುರರು ಹೃಷ್ಟರಾದರು ಆನಂದಿಸಿದರು.

ತಾ.ನಿರ್ಣಯ (೧೦.೧೮) ದಲ್ಲಿ,

'ಸುರಾऽಭವತ್ ತಾಮಸುರಾ ಅವಾಪುಃ'

'ಸುರೆ ಉದ್ಭವಿಸಿತು. ಅಸುರರು ಅದನ್ನು ಪಡೆದರು' ಎಂದಿದ್ದಾರೆ. ಆದರೆ ವಾಲ್ಮೀಕಿ ಹೇಳುತ್ತಾನೆ– 'ದಿತಿಪುತ್ರರು ಯಾರೂ ಸುರೆಯನ್ನು ಸ್ವೀಕರಿಸಲಿಲ್ಲ ಅದರಿಂದ ಅವರು ಅಸುರರೆನಿಸಿದರು ಎಂದು. ವಸ್ತುತಃ ಸೌತ್ರಾಮಣ್ಯಾದಿ ಯಾಗ-ಗಳಲ್ಲಿ ಸುರಾಹುತಿ ವಿಹಿತವಾಗಿದೆ. ಅದನ್ನು ಅದಿತಿ ಪುತ್ರರು ಮಾತ್ರ ಸ್ವೀಕರಿಸುತ್ತಾರೆ. ದಿತಿಪುತ್ರರು ಯಾರೂ ಸ್ವೀಕರಿಸುವುದಿಲ್ಲ. ಏಕೆಂದರೆ ವೇದೋಕ್ತ ಆಹುತಿಗಳಲ್ಲಿ ದಿತಿಪುತ್ರರಿಗೆ ಅಧಿಕಾರವಿಲ್ಲ ಎನ್ನುತ್ತಾನೆ ವಾಲ್ಮೀಕಿ. ಹೀಗೆ ಅನಿಂದಿತವಾದ ವೇದವಿಹಿತವಾದ ಸುರಾಹುತಿಗಳನ್ನು ಬಿಟ್ಟು ನಿಂದಿತವಾದ ಸುರೆಯನ್ನು ಅಸುರರು ಪಡೆದರು ಎನ್ನುತ್ತಾರೆ ನಿರ್ಣಯಕಾರರು. ಅನಿಂದಿತವಾದ ಸುರೆಯನ್ನು ಸ್ವೀಕರಿಸಿ ಅದಿತಿ ಪುತ್ರರು ಸುರರೆನಿಸಿದರು. ಅದನ್ನು ಬಿಟ್ಟು ದಿತಿಪುತ್ರರು ಅಸುರರೆನಿಸಿದರು ಎಂದು ವಾಲ್ಮೀಕಿ ಹೇಳುತ್ತಾನೆ.

ಉಚ್ಚೈಃಶ್ರವಾ ಹಯಶ್ರೇಷ್ಠೋ ಮಣಿರತ್ನಂ ಚ ಕೌಸ್ತುಭಮ್ ।
ಉದತಿಷ್ಠನ್ನರಶ್ರೇಷ್ಠ ತಥೈವಾಮೃತಮುತ್ತಮಮ್ ॥ ೩೭ ॥

ಮುಂದೆ ಸಮುದ್ರ ಮಥನದಿಂದ, ನರಶ್ರೇಷ್ಠ ರಾಮನೆ! ಹಯಶ್ರೇಷ್ಠವಾದ ಉಚ್ಚೈಶ್ರವಸೂ, ಮಣಿರತ್ನವಾದ ಕೌಸ್ತುಭವೂ ಉತ್ತಮವಾದ ಅಮೃತವೂ ಉದ್ಭವಿಸಿತು. ನಿರ್ಣಯ (೧೦.೧೯)ದ ಪ್ರಕಾರ ಉಚ್ಚೈಶ್ರವಾದಿಗಳ ತರುವಾಯ ಲಕ್ಷ್ಮೀಧನ್ವಂತರಿಗಳ ಪ್ರಾದುರ್ಭಾವ. ಧನ್ವಂತರಿ ಅಮೃತಕಲಶವನ್ನು ಹಿಡಿದೇ ಪ್ರಾದುರ್ಭವಿಸಿದ್ದಾನೆ. ಆದರೆ ಬಹು ಕಲ್ಪಾನುಸಾರವಾದ ಕ್ರಮವನ್ನು ನಿರ್ಣಯ-ದಲ್ಲಿ ಹೇಳಿದ್ದಾರೆ. ಯಾವುದೋ ಒಂದು ಕಲ್ಪಾನುಸಾರವಾಗಿ ವಾಲ್ಮೀಕಿ ಹೇಳುತ್ತಾನೆ ಎಂದು ವಿರೋಧವನ್ನು ಪರಿಹರಿಸಿಕೊಳ್ಳಬೇಕು. ಗೋವಿಂದರಾಜೀಯ ವ್ಯಾಖ್ಯಾನ-ದಲ್ಲಿ ಹಾಗೇ ಹೇಳಿದೆ– 'ಪುರಾಣಾಂತರ ವೃತ್ತಾಂತಃ ಕಲ್ಪಭೇದೇನೇತಿ ಬೋಧ್ಯಂ.'

ಅಥ ತಸ್ಯ ಕೃತೇ ರಾಮ ಮಹಾನಾಸೀತ್ಕುಲಕ್ಷಯಃ ।
ಅದಿತೇಸ್ತು ತತಃ ಪುತ್ರಾ ದಿತೇಃ ಪುತ್ರಾನಸೂದಯನ್ ॥ ೩೮ ॥

ರಾಮ! ಬಳಿಕ ಅಮೃತಕ್ಕಾಗಿ ಕುಲಕ್ಷಯಕಾರಿಯಾದ ಮಹಾಯುದ್ಧ ನಡೆಯಿತು. ಸುರರು ಅಸುರರನ್ನು ನಾಶಗೈದರು.

ಏಕತೋಽಭ್ಯಾಗಮನ್ಸರ್ವೇ ಹ್ಯಸುರಾ ರಾಕ್ಷಸೈಃ ಸಹ ।
ಯುದ್ಧಮಾಸೀನ್ಮಹಾಘೋರಂ ವೀರ ತ್ರೈಲೋಕ್ಯಮೋಹನಮ್ ॥ ೩೯ ॥

ಅಸುರರು ಎಲ್ಲರೂ ರಾಕ್ಷಸರೊಂದಿಗೆ ಒಂದಾಗಿ ಸುರರೊಂದಿಗೆ ಯುದ್ಧ ಮಾಡಿದರು. ವೀರರಾಮನೆ! ಮೂಲೋಕ ತಲ್ಲಣಗೊಳ್ಳುವಂತೆ ಮಹಾಘೋರವಾದ ದೇವಾಸುರಯುದ್ಧ ನಡೆಯಿತು.

ಯದಾ ಕ್ಷಯಂ ಗತಂ ಸರ್ವಂ ತದಾ ವಿಷ್ಣುರ್ಮಹಾಬಲಃ ।
ಅಮೃತಂ ಸೋಽಹರತ್ತೂರ್ಣಂ ಮಾಯಾಮಾಸ್ಥಾಯ ಮೋಹಿನೀಮ್ ॥

ಅಸುರರೊಂದಿಗೆ ರಾಕ್ಷಸರೂ ಸೇರಿದಾಗ ಅವರ ಕೈ ಮೇಲಾದೀತೆಂದು ಅಮೃತವು ಅವರ ಪಾಲಾದೀತೆಂದು ಸುರಪಕ್ಷ ಕ್ಷೀಣವಾದೀತೆಂದು, ಬೇಗನೆ ಮಹಾಬಲನಾದ ವಿಷ್ಣು ಸ್ವೇಚ್ಛೆಯಿಂದ ಮೋಹಿನೀರೂಪವನ್ನು ತಾಳಿ ಅಮೃತವನ್ನು ಅಪಹರಿಸಿದ. ಮೋಹಿನೀ ವೃತ್ತಾಂತವನ್ನು ವಾಲ್ಮೀಕಿ ಹೇಳುತ್ತಿಲ್ಲ. ಪುರಾಣಗಳಲ್ಲಿ ಅದನ್ನು ನೋಡಬೇಕು ಎಂದು ಅವನ ಅಭಿಪ್ರಾಯ.

ಯೇ ಗತಾಽಭಿಮುಖಂ ವಿಷ್ಣುಮಕ್ಷಯಂ ಪುರುಷೋತ್ತಮಮ್ ।
ಸಂಪಿಷ್ಟಾಸ್ತೇ ತದಾ ಯುದ್ಧೇ ವಿಷ್ಣುನಾ ಪ್ರಭವಿಷ್ಣುನಾ ॥ ೪೧ ॥

ಕ್ಷಯರಹಿತನಾದ ಪುರುಷೋತ್ತಮ ವಿಷ್ಣುವನ್ನು ಯಾರು ಇದಿರಿಸಲು ಬಂದರೋ ಅವರು ಸರ್ವಶಕ್ತನಾದ ವಿಷ್ಣುವಿನಿಂದ ಯುದ್ಧದಲ್ಲಿ ಪುಡಿಯಾದರು.

ಅದಿತೇರಾತ್ಮಜಾ ವೀರಾ ದಿತೇಃ ಪುತ್ರಾನ್ನಿಜಘ್ನಿರೇ ।
ತಸ್ಮಿನ್ಯುದ್ಧೇ ಮಹಾಘೋರೇ ದೈತೇಯಾದಿತ್ಯಯೋರ್ಭೃಶಮ್॥ ೪೨ ॥

ನಿಹತ್ಯ ದಿತಿಪುತ್ರಾಂಶ್ಚ ರಾಜ್ಯಂ ಪ್ರಾಪ್ಯ ಪುರಂದರಃ ।
ಶಶಾಸ ಮುದಿತೋ ಲೋಕಾನ್ಸರ್ಷಿಸಂಘಾನ್ಸಚಾರಣಾನ್ ॥ ೪೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಪಂಚಚತ್ವಾರಿಂಶಃ ಸರ್ಗಃ ॥ ೪೫ ॥

ವೀರರಾದ ಅದಿತಿಪುತ್ರರು ದಿತಿಪುತ್ರರನ್ನು ವಧಿಸಿದರು. ಆ ದೇವಾಸುರರೊಳಗಿನ ಮಹಾಘೋರಯುದ್ಧದಲ್ಲಿ ದೇವೇಂದ್ರನು ದೈತ್ಯರನ್ನು ವಧಿಸಿ ರಾಜ್ಯವನ್ನು ಹೊಂದಿ ಋಷಿ ಸಮೂಹ ಮತ್ತು ಚಾರಣ ಸಮೇತವಾಗಿ ಲೋಕಗಳನ್ನು ಸುಖವಾಗಿ ಆಳಿದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ನಲವತ್ತೈದನೆ ಸರ್ಗ ಮುಗಿಯಿತು.

ಷಟ್‌ಚತ್ವಾರಿಂಶಃ ಸರ್ಗಃ

ಹತೇಷು ತೇಷು ಪುತ್ರೇಷು ದಿತಿಃ ಪರಮದುಃಖಿತಾ ।
ಮಾರೀಚಂ ಕಾಶ್ಯಪಂ ರಾಮ ಭರ್ತಾರಮಿದಮಬ್ರವೀತ್ ॥ ೧ ॥

ರಾಮ! ತನ್ನ ಪುತ್ರರು ಯುದ್ಧದಲ್ಲಿ ಹತರಾದಾಗ ದಿತಿಯು ಪರಮ ದುಃಖಿತಳಾಗಿ ಪತಿಯಾದ ಮರೀಚಿ ಪುತ್ರ ಕಾಶ್ಯಪನಲ್ಲಿ ಹೇಳಿಕೊಂಡಳು.

ಹತಪುತ್ರಾಸ್ಮಿ ಭಗವಂಸ್ತವ ಪುತ್ರೈರ್ಮಹಾಬಲೈಃ ।
ಶಕ್ರಹಂತಾರಮಿಚ್ಛಾಮಿ ಪುತ್ರಂ ದೀರ್ಘತಪೋರ್ಜಿತಮ್ ॥ ೨ ॥

ಪೂಜ್ಯನೆ, ಮಹಾಬಲಿಷ್ಠರಾದ ನಿನ್ನ ಪುತ್ರರಾದ ದೇವತೆಗಳಿಂದ ನನ್ನ ಪುತ್ರರು ಹತರಾದರು. ಅದರಿಂದ ಇಂದ್ರನನ್ನು ಕೊಲ್ಲಬಲ್ಲ, ದೀರ್ಘತಪಸ್ಸಿನಿಂದ ಬಲಿಷ್ಠ-ನಾಗುವ ಪುತ್ರನನ್ನು ಬಯಸುವೆನು.

ಸಾಹಂ ತಪಶ್ಚರಿಷ್ಯಾಮಿ ಗರ್ಭಂ ಮೇ ದಾತುಮರ್ಹಸಿ ।
ಬಲವಂತಂ ಮಹೇಷ್ವಾಸಂ ಸ್ಥಿತಿಜ್ಞಂ ಸಮದರ್ಶಿನಮ್ ।
ಈಶ್ವರಂ ಶಕ್ರಹಂತಾರಂ ತ್ವಮನುಜ್ಞಾತುಮರ್ಹಸಿ ॥ ೩ ॥

ಅದಕ್ಕೆ ನಾನು ತಪಸ್ಸು ಮಾಡುತ್ತೇನೆ. ನೀನು ಗರ್ಭಾಧಾನ ಮಾಡಬೇಕು. ಬಲವಂತ, ಮಹಾಧನುರ್ಧರ, ಸ್ಥಿತಿಜ್ಞ, ಸಮದರ್ಶಿ, ಶಕ್ತಿಶಾಲಿ, ಇಂದ್ರನನ್ನೂ ಕೊಲ್ಲಬಲ್ಲವನಾಗಬೇಕು ಇಂಥ ಮಗನನ್ನು ಪಡೆಯಲು ನಾನು ತಪಸ್ಸು ಮಾಡುತ್ತೇನೆ ಅದಕ್ಕೆ ನೀನು ಅನುಜ್ಞೆ ನೀಡಬೇಕು.

ತಸ್ಯಾಸ್ತದ್ವಚನಂ ಶ್ರುತ್ವಾ ಮಾರೀಚಃ ಕಾಶ್ಯಪಸ್ತದಾ ।
ಪ್ರತ್ಯುವಾಚ ಮಹಾತೇಜಾ ದಿತಿಂ ಪರಮದುಃಖಿತಾಮ್ ॥ ೪ ॥

ಪರಮ ದುಃಖಿತಳಾದ ದಿತಿಯು ಹೇಳಿದ ಈ ಮಾತನ್ನು ಕೇಳಿ ಮಹಾತೇಜನಾದ ಮರೀಚಿಪುತ್ರ ಕಾಶ್ಯಪನು ನುಡಿದ.

ಏವಂ ಭವತು ಭದ್ರಂ ತೇ ಶುಚಿರ್ಭವ ತಪೋಧನೇ ।
ಜನಯಿಷ್ಯಸಿ ಪುತ್ರಂ ತ್ವಂ ಶಕ್ರಹಂತಾರಮಾಹವೇ ॥ ೫ ॥

'ಹೀಗೇ ಆಗಲಿ, ತಪೋಧನಳೆ, ನಿನಗೆ ಒಳ್ಳೆಯದಾಗಲಿ ಶುಚಿಯಾಗು. ಯುದ್ಧದಲ್ಲಿ ಇಂದ್ರನನ್ನೂ ಕೊಲ್ಲಬಲ್ಲ ಪುತ್ರನಿಗೆ ನೀನು ಜನ್ಮ ನೀಡುವೆ.

ಪೂರ್ಣೇ ವರ್ಷಸಹಸ್ರೇ ತು ಶುಚಿರ್ಯದಿ ಭವಿಷ್ಯಸಿ ।
ಪುತ್ರಂ ತ್ರೈಲೋಕ್ಯಭರ್ತಾರಂ ಮತ್ತಸ್ತ್ವಂ ಜನಯಿಷ್ಯಸಿ ॥ ೬ ॥

'ಸಾವಿರ ವರ್ಷ ತಪಸ್ಸು ಪೂರ್ಣವಾದಾಗ ನೀನು ಶುಚಿಯೇ ಆಗಿರುವಿ-ಯಾದರೆ ಮೂಲೋಕವಾಳಬಲ್ಲ ಪುತ್ರನನ್ನು ನನ್ನಿಂದ ನೀನು ಪಡೆಯುವಿ.

ಏವಮುಕ್ತ್ವಾ ಮಹಾತೇಜಾಃ ಪಾಣಿನಾ ಸಂಮಮಾರ್ಜ ತಾಮ್ ।
ಸಮಾಲಭ್ಯ ತತಃ ಸ್ಪೃಷ್ಟೀತ್ಯುಕ್ತ್ವಾ ಸ ತಪಸೇ ಯಯೌ ॥ ೭ ॥

ಹೀಗೆ ಹೇಳಿ ಮಹಾತೇಜನಾದ ಕಾಶ್ಯಪಮುನಿ ಅವಳನ್ನು ಕೈಯಿಂದ ಸ್ಪರ್ಶಿಸಿ ಶುದ್ಧಿ ಮಾಡಿ 'ಶುಭವಾಗಲಿ' ಎಂದು ಹೇಳಿ ತಪಸ್ಸಿಗೆ ಹೊರಟುಹೋದ.

ಗತೇ ತಸ್ಮಿನ್ನರಶ್ರೇಷ್ಠ ದಿತಿಃ ಪರಮಹರ್ಷಿತಾ ।
ಕುಶಪ್ಲವನಮಾಸಾದ್ಯ ತಪಸ್ತೇಪೇ ಸುದಾರುಣಮ್ ॥ ೮ ॥

ಪುರುಷೋತ್ತಮರಾಮ! ದಿತಿಯು ಮುನಿ ಹೊರಟುಹೋದ ಬಳಿಕ ಇಲ್ಲಿ 'ಕುಶಪ್ಲವನ' ಎಂದು ಕರೆಸಿಕೊಂಡಿದ್ದ ಈ ಪ್ರದೇಶದಲ್ಲಿ ಕಠಿನವಾದ ತಪಸ್ಸು ಮಾಡಿದಳು.

ತಪಸ್ತಸ್ಯಾಂ ಹಿ ಕುರ್ವಂತ್ಯಾಂ ಪರಿಚರ್ಯಾಂ ಚಕಾರ ಹ ।
ಸಹಸ್ರಾಕ್ಷೋ ನರಶ್ರೇಷ್ಠ ಪರಯಾ ಗುಣಸಂಪದಾ ॥ ೯ ॥

ದಿತಿಯು ತಪಸ್ಸು ಮಾಡುತ್ತಿದ್ದಾಗ ಮಗನಾದ ಅದಿತಿ ಪುತ್ರ ದೇವೇಂದ್ರನು ಅವಳಿಗೆ ಪರಮಭಕ್ತಿಯಿಂದ ಸೇವೆ ಮಾಡಿದ ಎಂದಾದರೂ ಅವಳು ಅಶುಚಿ-ಯಾಗುವಳೆ? ಅಶುಚಿಯಾದರೆ ಅವಳ ಗರ್ಭವನ್ನು ನಾಶ ಪಡಿಸಬಹುದೆಂದು ದೇವೇಂದ್ರನ ಲೆಕ್ಕಾಚಾರವಾಗಿತ್ತು. ದೈವವಶದಿಂದ ದಿತಿಗೆ ಇದು ತಿಳಿಯಲಿಲ್ಲ.

ಅಗ್ನಿಂ ಕುಶಾನ್ಕಾಷ್ಠಮಪಃ ಫಲಂ ಮೂಲಂ ತಥೈವ ಚ ।
ನ್ಯವೇದಯತ್ಸಹಸ್ರಾಕ್ಷೋ ಯಚ್ಚಾನ್ಯದಪಿ ಕಾಂಕ್ಷಿತಮ್ ॥ ೧೦ ॥

ತಪಸ್ಸಿನ ಅಂಗವಾಗಿ ಹೋಮ ನಡೆಸಲು ದೇವೇಂದ್ರ ಅವಳಿಗೆ ಅಗ್ನಿ, ದರ್ಭೆ, ಸಮಿಧೆ, ಜಲ, ಫಲ, ಮೂಲ, ಇನ್ನೂ ಬೇರೆ ಏನಾದರೂ ಬೇಕಾದುದನ್ನು ತಂದು-ಕೊಡುತ್ತಿದ್ದ. ಈ ಮಾತೃಸೇವೆಯ ಪುಣ್ಯದಿಂದ ತನ್ನ ಕಾರ್ಯವನ್ನು ಸಾಧಿಸಿಕೊಂಡ.

ಗಾತ್ರಸಂವಾಹನೈಶ್ಚೈವ ಶ್ರಮಾಪನಯನೈಸ್ತಥಾ ।
ಶಕ್ರಃ ಸರ್ವೇಷು ಕಾಲೇಷು ದಿತಿಂ ಪರಿಚಚಾರ ಹ ॥ ೧೧ ॥

ಕೈಕಾಲು ಒತ್ತುವುದು, ಗಾಳಿ ಬೀಸಿ ಶ್ರಮವನ್ನು ಪರಿಹರಿಸುವುದು ಹೀಗೆ ಸದಾ ಸಾವಿರ ವರ್ಷಕಾಲ ಮಾತೆಯ ಸೇವೆ ಮಾಡಿದ ಇಂದ್ರ.

ಅಥ ವರ್ಷಸಹಸ್ರೇ ತು ದಶೋನೇ ರಘುನಂದನ ।
ದಿತಿಃ ಪರಮಸಂಪ್ರೀತಾ ಸಹಸ್ರಾಕ್ಷಮಥಾಬ್ರವೀತ್ ॥ ೧೨ ॥

ರಾಮ! ಸಾವಿರ ವರ್ಷ ಪೂರ್ತಿಯಾಗಲು ಕೇವಲ ಹತ್ತುವರ್ಷ ಬಾಕಿ ಇತ್ತು. ದಿತಿ ಬಹಳ ಸಂತುಷ್ಟಳಾಗಿ ಇಂದ್ರನಿಗೆ ಹೇಳಿದಳು.

ಯಾಚಿತೇನ ಸುರಶ್ರೇಷ್ಠ ಪಿತ್ರಾ ತವ ಮಹಾತ್ಮನಾ ।
ವರೋ ವರ್ಷಸಹಸ್ರಾಂತೇ ಮಮ ದತ್ತಃ ಸುತಂ ಪ್ರತಿ ॥ ೧೩ ॥

'ಸುರೋತ್ತಮ! ಮಹಾತ್ಮನಾದ ನಿನ್ನ ತಂದೆಯನ್ನು ಬೇಡಿಕೊಂಡಾಗ ನನಗೆ ಸಾವಿರ ವರ್ಷಗಳ ಕೊನೆಯಲ್ಲಿ ಒಬ್ಬ ಮಗನು ಜನಿಸುವನೆಂದು ವರ ನೀಡಿದ್ದಾರೆ.

ತಪಶ್ಚರಂತ್ಯಾ ವರ್ಷಾಣಿ ದಶ ವೀರ್ಯವತಾಂ ವರ ।
ಅವಶಿಷ್ಟಾನಿ ಭದ್ರಂ ತೇ ಭ್ರಾತರಂ ದ್ರಕ್ಷ್ಯಸೇ ತತಃ ॥ ೧೪ ॥

'ವೀರ್ಯಶಾಲಿಗಳಲ್ಲಿ ಉತ್ತಮನೆ! ನನ್ನ ತಪಸ್ಸು ಪೂರ್ಣವಾಗಲು ಹತ್ತುವರ್ಷ ಉಳಿದಿದೆ. ನಿನಗೆ ಒಳ್ಳೆಯದಾಗಲಿ, ನೀನು ಒಬ್ಬ ತಮ್ಮನನ್ನು ನೋಡುವೆ!

ತಮಹಂ ತ್ವತ್ಕೃತೇ ಪುತ್ರಂ ಸಮಾಧಾಸ್ಯೇ ಜಯೋತ್ಸುಕಮ್ ।
ತ್ರೈಲೋಕ್ಯವಿಜಯಂ ಪುತ್ರ ಸಹ ಭೋಕ್ಷ್ಯಸಿ ವಿಜ್ವರಃ ॥ ೧೫ ॥

ಆ ನನ್ನ ಪುತ್ರನನ್ನು ನಿನಗೆ ಹಿತೈಷಿಯಾಗುವಂತೆ ಮಾಡುತ್ತೇನೆ ನಿನಗೆ ಜಯ ತರುವಲ್ಲಿ ಉತ್ಸುಕನಾಗುವಂತೆ ಮಾಡುತ್ತೇನೆ. ಮೂಲೋಕ ಜಯವನ್ನು ಮಗು! ನೀನು ಅವನೊಂದಿಗೆ ಅನುಭವಿಸುವೆ. ನಿಶ್ಚಿಂತನಾಗುವೆ.

ಏವಮುಕ್ತ್ವಾ ದಿತಿಃ ಶಕ್ರಂ ಪ್ರಾಪ್ತೇ ಮಧ್ಯಂ ದಿವಾಕರೇ ।
ನಿದ್ರಯಾಽಪಹೃತಾ ದೇವೀ ಪಾದೌ ಕೃತ್ವಾಥ ಶೀರ್ಷತಃ ॥ ೧೬ ॥

ಇಂದ್ರನಿಗೆ ಹೀಗೆ ಹೇಳಿ ದಿತಿ ಮಧ್ಯಾಹ್ನ ಕಾಲದಲ್ಲಿ ಹಾಸಿಗೆ ಮೇಲೆ ತಲೆ ಇಡುವಲ್ಲಿ ಕಾಲಿಟ್ಟು ಮಲಗಿ ನಿದ್ದೆ ಹೋದಳು.

ದೃಷ್ಟ್ವಾ ತಾಮಶುಚಿಂ ಶಕ್ರಃ ಪಾದತಃ ಕೃತಮೂರ್ಧಜಾಮ್ ।
ಶಿರಃಸ್ಥಾನೇ ಕೃತೌ ಪಾದೌ ಜಹಾಸ ಚ ಮುಮೋದ ಚ ॥ ೧೭ ॥

ದಿತಿ ಈಗ ಅಶುಚಿ, ಕಾಲಿಡುವಲ್ಲಿ ತಲೆ ಇಟ್ಟು ಮಲಗಿದ್ದಾಳೆ. ತಲೆ ಇಡುವಲ್ಲಿ ಕಾಲಿಟ್ಟಿದ್ದಾಳೆ. ಇಂದ್ರ ಇದನ್ನು ಕಂಡು ನಕ್ಕು ಆನಂದಿಸಿದ.

ತಸ್ಯಾಃ ಶರೀರವಿವರಂ ವಿವೇಶ ಚ ಪುರಂದರಃ ।
ಗರ್ಭಂ ಚ ಸಪ್ತಧಾ ರಾಮ ಬಿಭೇದ ಪರಮಾತ್ಮವಾನ್ ॥ ೧೮ ॥

ಆಗ ಇಂದ್ರನು ಅವಳ ಯೋನಿದ್ವಾರದಲ್ಲಿ ಪ್ರವೇಶಿಸಿದ. ರಾಮ! ಪರಮಾತ್ಮ ಪ್ರೇರಣೆಯಿಂದ ಇಂದ್ರನು ಗರ್ಭವನ್ನು ಏಳುಭಾಗವಾಗಿ ಕತ್ತರಿಸಿದ. ಪ್ರತಿಯೊಂದು ಭಾಗವನ್ನೂ ಪುನಃ ಏಳಾಗಿ ಕತ್ತರಿಸಿದ.

ಭಿದ್ಯಮಾನಸ್ತತೋ ಗರ್ಭೋ ವಜ್ರೇಣ ಶತಪರ್ವಣಾ ।
ರುರೋದ ಸುಸ್ವರಂ ರಾಮ ತತೋ ದಿತಿರಬುಧ್ಯತ ॥ ೧೯ ॥

ಮೊನಚಾದ ನೂರು ತುದಿಗಳುಳ್ಳ ವಜ್ರಾಯುಧದಿಂದ ಇಂದ್ರನು ಕತ್ತರಿಸುವಾಗ ಗರ್ಭವು ದೊಡ್ಡ ಧ್ವನಿಯಿಂದ ಅಳಲು ತೊಡಗಿತು. ದಿತಿ ಎಚ್ಚರಗೊಂಡಳು.

ಮಾ ರುದೋ ಮಾ ರುದಶ್ಚೇತಿ ಗರ್ಭಂ ಶಕ್ರೋಽಭ್ಯಭಾಷತ ।
ಬಿಭೇದ ಚ ಮಹಾತೇಜಾ ರುದಂತಮಪಿ ವಾಸವಃ ॥ ೨೦ ॥

'ಅಳಬೇಡ ಅಳಬೇಡ' ಎಂದು ಇಂದ್ರ ಗರ್ಭಕ್ಕೆ ಹೇಳಿದ. ಅದು ಅಳುತ್ತಿದ್ದಂತೇ ಮತ್ತೂ ಮಹಾತೇಜನಾದ ಇಂದ್ರ ಕತ್ತರಿಸಿದ.

ನ ಹಂತವ್ಯೋ ನ ಹಂತವ್ಯ ಇತ್ಯೇವಂ ದಿತಿರಬ್ರವೀತ್ ।
ನಿಷ್ಪಪಾತ ತತಃ ಶಕ್ರೋ ಮಾತುರ್ವಚನಗೌರವಾತ್ ॥ ೨೧ ॥

'ಕೊಲ್ಲಬೇಡ ಕೊಲ್ಲಬೇಡ' ಎಂದು ದಿತಿ ಹೇಳಿದಳು. ತಾಯಿಯ ಮಾತಿನ ಮೇಲಿನ ಗೌರವದಿಂದ ಇಂದ್ರ ಹೊರಗೆ ಬಂದ.

ಪ್ರಾಂಜಲಿರ್ವಜ್ರಸಹಿತೋ ದಿತಿಂ ಶಕ್ರೋಽಭ್ಯಭಾಷತ ।
ಅಶುಚಿರ್ದೇವಿ ಸುಪ್ತಾಽಸಿ ಪಾದಯೋಃ ಕೃತಮೂರ್ಧಜಾ ॥ ೨೨ ॥

ವಜ್ರಾಯುಧ ಸಹಿತನಾಗಿ ಹೊರಗೆ ಬಂದು ಕೈಮುಗಿದು ಇಂದ್ರನು ದಿತಿಗೆ

ಹೇಳಿದ– ದೇವಿ! ಅಶುಚಿಯಾಗಿ ಕಾಲಿಡುವಲ್ಲಿ ತಲೆ ಇಟ್ಟು ಮಲಗಿ ನಿದ್ದೆ ಹೋಗಿದ್ದೆ.

ತದಂತರಮಹಂ ಲಬ್ಧ್ವಾ ಶಕ್ರಹಂತಾರಮಾಹವೇ ।
ಅಭಿದಂ ಸಪ್ತಧಾ ದೇವಿ ತನ್ಮೇ ತ್ವಂ ಕ್ಷಂತುಮರ್ಹಸಿ ॥ ೨೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಷಟ್‌ಚತ್ವಾರಿಂಶಃ ಸರ್ಗಃ ॥ ೪೬ ॥

ಆ ಅವಕಾಶವನ್ನು ಪಡೆದು ನಾನು, ಯುದ್ಧದಲ್ಲಿ ಇಂದ್ರನನ್ನು ವಧಿಸುವಂಥ ನಿನ್ನ ಈ ಗರ್ಭವನ್ನು ಏಳೇಳು ಭಾಗವಾಗಿ ಕತ್ತರಿಸಿದ್ದೇನೆ, ಅದನ್ನು ಕ್ಷಮಿಸು, ದೇವಿ!

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ನಲವತ್ತಾರನೆ ಸರ್ಗ ಮುಗಿಯಿತು.

ಸಪ್ತಚತ್ವಾರಿಂಶಃ ಸರ್ಗಃ

ಸಪ್ತಧಾ ತು ಕೃತೇ ಗರ್ಭೇ ದಿತಿಃ ಪರಮದುಃಖಿತಾ ।
ಸಹಸ್ರಾಕ್ಷಂ ದುರಾಧರ್ಷಂ ವಾಕ್ಯಂ ಸಾನುನಯಾಬ್ರವೀತ್ ॥ ೧ ॥

ಏಳೇಳು ಭಾಗವಾಗಿ ಗರ್ಭವನ್ನು ಇಂದ್ರನು ಕತ್ತರಿಸಿದಾಗ ದಿತಿ ಪರಮ ದುಃಖಿತಳಾಗಿ ಯಾರಿಂದಲೂ ಮಣಿಸಲಾಗದವನಾದ ಇಂದ್ರನಲ್ಲಿ ಅನುನಯದ ಮಾತನ್ನಾಡಿದಳು.

ಮಮಾಪರಾಧಾದ್ಗರ್ಭೋಽಯಂ ಸಪ್ತಧಾ ವಿಫಲೀಕೃತಃ ।
ನಾಪರಾಧೋಽಸ್ತಿ ದೇವೇಶ ತವಾತ್ರ ಬಲಸೂದನ ॥ ೨ ॥

ನನ್ನ ತಪ್ಪಿನಿಂದ ನನ್ನ ಗರ್ಭವನ್ನು ನೀನು ಏಳು ಭಾಗವಾಗಿ ಕತ್ತರಿಸಿ ವ್ಯರ್ಥ ಗೊಳಿಸುವಂತಾಯಿತು. ಬಲಾಸುರ ನಾಶಕನೆ! ದೇವೇಶ! ಈ ವಿಷಯದಲ್ಲಿ ನಿನ್ನ ತಪ್ಪೇನೂ ಇಲ್ಲ.

ಪ್ರಿಯಂ ತ್ವತ್ಕೃತಮಿಚ್ಛಾಮಿ ಮಮ ಗರ್ಭವಿಪರ್ಯಯೇ ।
ಮರುತಾಂ ಸಪ್ತ ಸಪ್ತಾನಾಂ ಸ್ಥಾನಪಾಲಾ ಭವಂತ್ವಿಮೇ ॥ ೩ ॥

ಆದರೂ ಹಾಳಾದ ಗರ್ಭದ ವಿಷಯದಲ್ಲಿ ನನಗಿಷ್ಟವಾದ ಕಾರ್ಯ ಒಂದನ್ನು ನೀನು ಮಾಡಬೇಕೆಂದು ಬಯಸುತ್ತೇನೆ. ಗರ್ಭದ ಈ ಬೇರೆ ಬೇರೆ ಏಳು ಭಾಗಗಳೆಲ್ಲವೂ ಲೋಕದಲ್ಲಿ ಏಳು ಬೇರೆ ಬೇರೆ ಸ್ಥಾನಗಳನ್ನು ಆಳುತ್ತಿರಲಿ.

ವಾತಸ್ಕಂಧಾ ಇಮೇ ಸಪ್ತ ಚರಂತು ದಿವಿ ಪುತ್ರಕ ।
ಮಾರುತಾ ಇತಿ ವಿಖ್ಯಾತಾ ದಿವ್ಯರೂಪಾ ಮಮಾತ್ಮಜಾಃ ॥ ೪ ॥

ಬ್ರಹ್ಮಲೋಕಂ ಚರತ್ವೇಕ ಇಂದ್ರಲೋಕಂ ತಥಾಪರಃ ।
ದಿವಿ ವಾಯುರಿತಿ ಖ್ಯಾತಸ್ತೃತೀಯೋಽಪಿ ಮಹಾಯಶಾಃ ॥ ೫ ॥

ಮಗು, 'ಮಾರುದ ಮಾರುದ' ಎನ್ನುತ್ತ ನೀನು ಸಂತೈಸಿದ್ದರಿಂದ 'ಮಾರುತ'-ರೆಂದೇ ವಿಖ್ಯಾತರಾಗಲಿ, ನನ್ನ ಈ ಮಕ್ಕಳು. ದಿವ್ಯ ರೂಪರಾದ ಈ ಮರುದ್ಗಣಗಳು ಏಳೂ ಕೂಡ, ಒಂದು ದ್ಯುಲೋಕದಲ್ಲಿ ಇನ್ನೊಂದು ಬ್ರಹ್ಮಲೋಕದಲ್ಲಿ ಮತ್ತೊಂದು ಮೂರನೇದು ಇಂದ್ರಲೋಕದಲ್ಲಿ ಆಳುತ್ತಿರಲಿ.

ಚತ್ವಾರಸ್ತು ಸುರಶ್ರೇಷ್ಠ ದಿಶೋ ವೈ ತವ ಶಾಸನಾತ್ ।
ಸಂಚರಿಷ್ಯಂತಿ ಭದ್ರಂ ತೇ ದೇವಭೂತಾ ಮಮಾತ್ಮಜಾಃ ॥
ತ್ವತ್ಕೃತೇನೈವ ನಾಮ್ನಾ ಚ ಮಾರುತಾ ಇತಿ ವಿಶ್ರುತಾಃ ॥ ೬ ॥

ಸುರಶ್ರೇಷ್ಠನೆ! ಇನ್ನು ನಾಲ್ಕು ಮರುದ್ಗಣಗಳು ನನ್ನ ಮಕ್ಕಳು ನಾಲ್ಕು ದಿಕ್ಕುಗಳಲ್ಲಿ ಲೋಕಪಾಲಕರಾಗಿ ಸಂಚರಿಸುತ್ತಿರಲಿ. ದಿತಿಯ ಮಕ್ಕಳಾದ್ದರಿಂದ ದೈತ್ಯರೇ ಆದರೂ ನಿನ್ನ ಅನುಗ್ರಹದಿಂದ ದೇವಭೂತರಾಗಲಿ. ಏಕೆಂದರೆ ನೀನೆ 'ಮಾರುತ'ರೆಂದು ಅವರಿಗೆ ನಾಮಕರಣ ಮಾಡಿರುವೆ ತಾನೆ!

ತಸ್ಯಾಸ್ತದ್ವಚನಂ ಶ್ರುತ್ವಾ ಸಹಸ್ರಾಕ್ಷಃ ಪುರಂದರಃ ।
ಉವಾಚ ಪ್ರಾಂಜಲಿರ್ವಾಕ್ಯಂ ದಿತಿಂ ಬಲನಿಷೂದನಃ ॥ ೭ ॥

ದಿತಿ ದೇವಿಯ ಈ ಮಾತನ್ನು ಕೇಳಿ ಬಲಾರಿ ಸಹಸ್ರಾಕ್ಷ ಪುರಂದರ ಇಂದ್ರನು ಕೈಮುಗಿದು ಅವಳಿಗೆ ಹೀಗೆ ನುಡಿದನು.

ಸರ್ವಮೇತದ್ಯಥೋಕ್ತಂ ತೇ ಭವಿಷ್ಯತಿ ನ ಸಂಶಯಃ ।
ವಿಚರಿಷ್ಯಂತಿ ಭದ್ರಂ ತೇ ದೇವರೂಪಾಸ್ತವಾತ್ಮಜಾಃ ॥ ೮ ॥

ನೀನು ಹೇಳಿದ್ದೆಲ್ಲವೂ ಹಾಗೇ ಆಗುತ್ತದೆ, ಸಂಶಯವಿಲ್ಲ. ನಿನಗೆ ಒಳ್ಳೆಯ-ದಾಗಲಿ, ನಿನ್ನ ಮಕ್ಕಳು ದೇವತೆಗಳಾಗಿ ಸಂಚರಿಸುವರು.

ಏವಂ ತೌ ನಿಶ್ಚಯಂ ಕೃತ್ವಾ ಮಾತಾಪುತ್ರೌ ತಪೋವನೇ ।
ಜಗ್ಮತುಸ್ತ್ರಿದಿವಂ ರಾಮ ಕೃತಾರ್ಥಾವಿತಿ ನಃ ಶ್ರುತಮ್ ॥ ೯ ॥

ಹೀಗೆ ಈ ತಪೋವನದಲ್ಲಿ ಆ ತಾಯಿ ಮಗ ಇಬ್ಬರೂ ಪರಸ್ಪರ ಮಾತುಕೊಟ್ಟು ಕೃತಾರ್ಥರಾಗಿ ಸ್ವರ್ಗಕ್ಕೆ ಹೋದರೆಂದು ಕಥೆಯನ್ನು ಕೇಳಿದ್ದೇವೆ, ರಾಮ!

ಏಷ ದೇಶಃ ಸ ಕಾಕುತ್ಸ್ಥ ಮಹೇಂದ್ರಾಧ್ಯುಷಿತಃ ಪುರಾ ।
ದಿತಿಂ ಯತ್ರ ತಪಃಸಿದ್ಧಾಮೇವಂ ಪರಿಚಚಾರ ಸಃ ॥ ೧೦ ॥

ರಾಮ! ಇದೇ ಪ್ರದೇಶ, ಹಿಂದೆ ಮಹೇಂದ್ರನು ವಾಸ ಮಾಡುತ್ತ ತಪಸ್ಸಿಗೆ ಸಿದ್ಧಳಾದ ದಿತಿಯ ಸೇವೆ ಮಾಡಿದ ಸ್ಥಳ.

ಇಕ್ಷ್ವಾಕೋಸ್ತು ನರವ್ಯಾಘ್ರ ಪುತ್ರಃ ಪರಮಧಾರ್ಮಿಕಃ ।
ಅಲಂಬುಸಾಯಾಮುತ್ಪನ್ನೋ ವಿಶಾಲ ಇತಿ ವಿಶ್ರುತಃ ॥ ೧೧ ॥

ರಾಮ! ವಿಶಾಲನ ಉತ್ಪತ್ತಿ ಕಥೆ ಹೀಗೆದೆ– ಇಕ್ಷ್ವಾಕುವಿಗೆ ವಿಶಾಲ ಎಂದು ಪ್ರಸಿದ್ಧನಾದ ಪರಮ ಧಾರ್ಮಿಕನಾದ ಪುತ್ರನು ಅಲಂಬುಸಾ ಎಂಬ ಅಪ್ಸರೆಯಲ್ಲಿ ಜನಿಸಿದ.

ತೇನ ಚಾಸೀದಿಹ ಸ್ಥಾನೇ ವಿಶಾಲೇತಿ ಪುರೀ ಕೃತಾ ।
ವಿಶಾಲಸ್ಯ ಸುತೋ ರಾಮ ಹೇಮಚಂದ್ರೋ ಮಹಾಬಲಃ ॥ ೧೨ ॥

ಆ ವಿಶಾಲನೇ ಈ ಪ್ರದೇಶದಲ್ಲಿ ವಿಶಾಲಾ ಎಂಬ ನಗರಿಯನ್ನು ನಿರ್ಮಿಸಿದ. ರಾಮ! ವಿಶಾಲನ ಮಗನೆ ಮಹಾಬಲನಾದ ಹೇಮಚಂದ್ರ.

ಸುಚಂದ್ರ ಇತಿ ವಿಖ್ಯಾತೋ ಹೇಮಚಂದ್ರಾದನಂತರಃ ।
ಸುಚಂದ್ರತನಯೋ ರಾಮ ಧೂಮ್ರಾಶ್ವ ಇತಿ ವಿಶ್ರುತಃ ॥ ೧೩ ॥

ಹೇಮಚಂದ್ರನ ಅನಂತರ ಅವನ ಮಗ ಸುಚಂದ್ರರಾಜನಾದ. ರಾಮ! ಸುಚಂದ್ರತನೆಯನು ಧೂಮ್ರಾಶ್ವ ಎಂದು ಪ್ರಸಿದ್ಧ.

ಧೂಮ್ರಾಶ್ವತನಯಶ್ಚಾಪಿ ಸೃಂಜಯಃ ಸಮಪದ್ಯತ ।
ಸೃಂಜಯಸ್ಯ ಸುತಃ ಶ್ರೀಮಾನ್ಸಹದೇವಃ ಪ್ರತಾಪವಾನ್ ॥ ೧೪ ॥

ಧೂಮ್ರಾಶ್ವನ ಮಗನಾಗಿ ಸೃಂಜಯ ಜನಿಸಿದ. ಸೃಂಜಯ ಸುತನು ಪ್ರತಾಪ-ಶಾಲಿಯಾದ ಶ್ರೀಮಾನ್ ಸಹದೇವ.

ಕುಶಾಶ್ವಃ ಸಹದೇವಸ್ಯ ಪುತ್ರಃ ಪರಮಧಾರ್ಮಿಕಃ ।
ಕುಶಾಶ್ವಸ್ಯ ಮಹಾತೇಜಾಃ ಸೋಮದತ್ತಃ ಪ್ರತಾಪವಾನ್ ॥
ಸೋಮದತ್ತಸ್ಯ ಪುತ್ರಸ್ತು ಕಾಕುತ್ಸ್ಥ ಇತಿ ವಿಶ್ರುತಃ ॥ ೧೫ ॥

ಕುಶಾಶ್ವನು ಸಹದೇವನ ಪುತ್ರ ; ಪರಮಧಾರ್ಮಿಕ. ಕುಶಾಶ್ವನಿಗೆ ಮಹಾತೇಜ ಪ್ರತಾಪಶಾಲಿ ಸೋಮದತ್ತನು ಪುತ್ರ. ಸೋಮದತ್ತನ ಪುತ್ರನು ಕಾಕುತಸ್ಥನೆಂದು ಪ್ರಸಿದ್ಧ.

ತಸ್ಯ ಪುತ್ರೋ ಮಹಾತೇಜಾಃ ಸಂಪ್ರತ್ಯೇಷ ಪುರೀಮಿಮಾಮ್ ।
ಆವಸತ್ಯಮರಪ್ರಖ್ಯಃ ಸುಮತಿರ್ನಾಮ ದುರ್ಜಯಃ ॥ ೧೬ ॥

ಕಾಕುಸ್ಥನ ಪುತ್ರನೇ ಈಗ ಈ ನಗರಿಯನ್ನು ಆಳುತ್ತಿರುವ ದೇವವರ್ಚನಾದ ದುರ್ಜಯನಾದ ಸುಮತಿ.

ಇಕ್ಷ್ವಾಕೋಸ್ತು ಪ್ರಸಾದೇನ ಸರ್ವೇ ವೈಶಾಲಕಾ ನೃಪಾಃ ।
ದೀರ್ಘಾಯುಷೋ ಮಹಾತ್ಮಾನೋ ವೀರ್ಯವಂತಃ ಸುಧಾರ್ಮಿಕಾಃ॥

ಇಕ್ಷ್ವಾಕುವಿನ ಅನುಗ್ರಹದಿಂದ ವಿಶಾಲಾ ನಗರಿಯ ಎಲ್ಲ ರಾಜರೂ ದೀರ್ಘಾಯುಗಳು, ಮಹಾತ್ಮರು ವೀರ್ಯವಂತರು ಬಹಳ ಧಾರ್ಮಿಕರು.

ಇಹಾದ್ಯ ರಜನೀಂ ರಾಮ ಸುಖಂ ವತ್ಸ್ಯಾಮಹೇ ವಯಮ್ ।
ಶ್ವಃ ಪ್ರಭಾತೇ ನರಶ್ರೇಷ್ಠ ಜನಕಂ ದ್ರಷ್ಟುಮರ್ಹಸಿ ॥ ೧೮ ॥

ರಾಮ! ನಾವು ಈ ರೀತಿ ಇಲ್ಲಿಯೆ ಸುಖವಾಗಿ ವಾಸ ಮಾಡೋಣ. ರಾಮ! ನಾಳೆ ಬೆಳಿಗ್ಗೆ ನೀನು ಜನಕರಾಜನನ್ನು ಭೆಟ್ಟಿ ಮಾಡು' ಎಂದರು ವಿಶ್ವಾಮಿತ್ರರು.

ಸುಮತಿಸ್ತು ಮಹಾತೇಜಾ ವಿಶ್ವಾಮಿತ್ರಮುಪಾಗತಮ್ ।
ಶ್ರುತ್ವಾ ನರವರಶ್ರೇಷ್ಠಃ ಪ್ರತ್ಯುದ್ಗಚ್ಛನ್ಮಹಾಯಶಾಃ ॥ ೧೯ ॥

ಮಹಾತೇಜನಾದ ಸುಮತಿಯು ಮಹಾಕೀರ್ತಿಶಾಲಿ ರಾಜಶ್ರೇಷ್ಠ. ಅವನು ವಿಶ್ವಾಮಿತ್ರರು ಬಂದುದನ್ನು ಕೇಳಿ ಅವರನ್ನು ಇದಿರುಗೊಂಡ.

ಪೂಜಾಂ ಚ ಪರಮಾಂ ಕೃತ್ವಾ ಸೋಪಾಧ್ಯಾಯಃ ಸಬಾಂಧವಃ ।
ಪ್ರಾಂಜಲಿಃ ಕುಶಲಂ ಪೃಷ್ಟ್ವಾ ವಿಶ್ವಾಮಿತ್ರಮಥಾಬ್ರವೀತ್ ॥ ೨೦ ॥

ಸುಮತಿ ರಾಜನು ಉಪಾಧ್ಯಾಯರಿಂದ ಬಂಧುಗಳಿಂದ ಕೂಡಿ ವಿಶ್ವಾಮಿತ್ರರಿಗೆ ಉತ್ತಮವಾದ ಸತ್ಕಾರ ಮಾಡಿ ಕೈಮುಗಿದು ಕುಶಲಪ್ರಶ್ನೆ ಮಾಡಿ ಹೇಳಿದನು.

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯಸ್ಯ ಮೇ ವಿಷಯಂ ಮುನಿಃ ।
ಸಂಪ್ರಾಪ್ತೋ ದರ್ಶನಂ ಚೈವ ನಾಸ್ತಿ ಧನ್ಯತರೋ ಮಯಾ ॥ ೨೧ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಸಪ್ತಚತ್ವಾರಿಂಶಃ ಸರ್ಗಃ ॥ ೪೭ ॥

'ಧನ್ಯನಾದೆ ನಾನು ಅನುಗೃಹೀತನಾದೆ, ನನ್ನ ರಾಜ್ಯಕ್ಕೆ ನೀವು ಬಂದಿರುವಿರಿ. ನಾನು ನಿಮ್ಮ ದರ್ಶನ ಪಡೆದೆ. ನನಗಿಂತ ಹೆಚ್ಚಿನ ಧನ್ಯ ನಿನ್ನೊಬ್ಬನಿಲ್ಲ' ಎಂದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ನಲವತ್ತೇಳನೆ ಸರ್ಗ ಮುಗಿಯಿತು.

ಅಷ್ಟಚತ್ವಾರಿಂಶಃ ಸರ್ಗಃ

ಪೃಷ್ಟ್ವಾ ತು ಕುಶಲಂ ತತ್ರ ಪರಸ್ಪರಸಮಾಗಮೇ ।
ಕಥಾಂತೇ ಸುಮತಿರ್ವಾಕ್ಯಂ ವ್ಯಾಜಹಾರ ಮಹಾಮುನಿಮ್ ॥ ೧ ॥

ಸುಮತಿ ರಾಜನು ವಿಶ್ವಾಮಿತ್ರನೂ ಪರಸ್ಪರ ಭೆಟ್ಟಿಯಾದಾಗ ರಾಜನು ವಿಶ್ವಾಮಿತ್ರರ ಕುಶಲ ಪ್ರಶ್ನೆ ಮಾಡಿ ಮಾತುಕತೆಯ ಕೊನೆಯಲ್ಲಿ ರಾಜ ಮಹಾ-ಮುನಿಯ ಬಳಿ ರಾಮಲಕ್ಷ್ಮಣರ ಬಗ್ಗೆ ಕೇಳಿದ.

ಇಮೌ ಕುಮಾರೌ ಭದ್ರಂ ತೇ ದೇವತುಲ್ಯಪರಾಕ್ರಮೌ ।
ಗಜಸಿಂಹಗತೀ ವೀರೌ ಶಾರ್ದೂಲವೃಷಭೋಪಮೌ ॥ ೨ ॥

ಮುನಿಯೆ! ನಿನಗೆ ಶುಭವಾಗಲಿ, ಈ ಇಬ್ಬರು ಕುಮಾರರು ದೇವತುಲ್ಯ ಪರಾಕ್ರಮಿಗಳು. ಮದ್ದಾನೆಯಂತೆ ಸಿಂಹದಂತೆ ಹೆಜ್ಜೆ ಇಡುವವರು ವೀರರು. ಹುಲಿ ವೃಷಭಗಳಂತೆ ಕಾಣುವರು.

ಪದ್ಮಪತ್ರವಿಶಾಲಾಕ್ಷೌ ಖಡ್ಗತೂಣೀಧನುರ್ಧರೌ ।
ಅಶ್ವಿನಾವಿವ ರೂಪೇಣ ಸಮುಪಸ್ಥಿತಯೌವನೌ ॥ ೩ ॥

ಕಮಲದಳದಂತೆ ಉದ್ದ ಕಣ್ಣಿನವರು. ಖಡ್ಗ ಬತ್ತಳಿಕೆ ಧನುಸ್ಸುಗಳನ್ನು ಹಿಡಿದ-ವರು ಅಶ್ವಿನಿ ಕುಮಾರರಂತೆ ಸ್ಫುರದ್ರೂಪಿಗಳು ಯೌವನಕ್ಕೆ ಕಾಲಿಟ್ಟವರು.

ಯದೃಚ್ಛಯೈವ ಗಾಂ ಪ್ರಾಪ್ತೌ ದೇವಲೋಕಾದಿವಾಮರೌ ।
ಕಥಂ ಪದ್ಭ್ಯಾಮಿಹ ಪ್ರಾಪ್ತೌ ಕಿಮರ್ಥಂ ಕಸ್ಯ ವಾ ಮುನೇ ॥ ೪ ॥

ಕೇವಲ ಅಕಸ್ಮಾತ್ ದೇವಲೋಕದಿಂದ ಭೂಮಿಗೆ ಇಳಿದು ಬಂದ ದೇವತೆಗಳಂತೇ ಇದ್ದಾರೆ. ಏಕೆ, ಹೇಗೆ, ಕಾಲ್ನಡೆಯಿಂದ ಇವರು ಇಲ್ಲಿಗೆ ಬಂದರು? ಮುನಿಯೆ! ಹೇಳು.

ಭೂಷಯಂತಾವಿಮಂ ದೇಶಂ ಚಂದ್ರಸೂರ್ಯಾವಿವಾಂಬರಮ್ ।
ಪರಸ್ಪರಸ್ಯ ಸದೃಶೌ ಪ್ರಮಾಣೇಂಗಿತಚೇಷ್ಟಿತೈಃ ॥ ೫ ॥

ಆಕಾಶಕ್ಕೆ ಚಂದ್ರ ಸೂರ್ಯರಂತೆ ಈ ನೆಲಕ್ಕೆ ಇವರಿಬ್ಬರು ಅಲಂಕಾರ ಪ್ರಾಯರು. ಮೈಯ ಎತ್ತರ ಬುದ್ಧಿಯ ಆಲೋಚನೆ ಅಂಗಾಂಗಗಳ ಚಲನೆಗಳಲ್ಲಿ ಅವರಿಗೆ ಅವರೇ ಪರಸ್ಪರ ಸದೃಶರು.

ಕಿಮರ್ಥಂ ಚ ನರಶ್ರೇಷ್ಠೌ ಸಂಪ್ರಾಪ್ತೌ ದುರ್ಗಮೇ ಪಥಿ ।
ವರಾಯುಧಧರೌ ವೀರೌ ಶ್ರೋತುಮಿಚ್ಛಾಮಿ ತತ್ತ್ವತಃ ॥ ೬ ॥

ಪುರುಷಶ್ರೇಷ್ಠರು ವೀರರು ಉತ್ತಮ ಆಯುಧ ಧರಿಸಿರುವವರು ಈ ದುರ್ಗಮವಾದ ಅರಣ್ಯಮಾರ್ಗದಲ್ಲಿ ಏಕೆ ನಡೆದು ಬಂದರು?

ತಸ್ಯ ತದ್ವಚನಂ ಶ್ರುತ್ವಾ ಯಥಾವೃತ್ತಂ ನ್ಯವೇದಯತ್ ।
ಸಿದ್ಧಾಶ್ರಮನಿವಾಸಂ ಚ ರಾಕ್ಷಸಾನಾಂ ವಧಂ ತಥಾ ॥ ೭ ॥

ಸುಮತಿರಾಜನ ಪ್ರಶ್ನೆಯನ್ನು ಕೇಳಿ ವಿಶ್ವಾಮಿತ್ರರು ಅವನಿಗೆ ಎಲ್ಲವನ್ನೂ ನಡೆದಂತೇ ಹೇಳಿದರು. ಸಿದ್ಧಾಶ್ರಮದಲ್ಲಿ ವಾಸವಾಗಿದ್ದು ಅವರು ರಾಕ್ಷಸರ ವಧೆ ಮಾಡಿದ್ದನ್ನೂ ಹೇಳಿದರು.

ವಿಶ್ವಾಮಿತ್ರವಚಃ ಶ್ರುತ್ವಾ ರಾಜಾ ಪರಮಹರ್ಷಿತಃ ।
ಅತಿಥೀ ಪರಮೌ ಪ್ರಾಪ್ತೌ ಪುತ್ರೌ ದಶರಥಸ್ಯ ತೌ ॥
ಪೂಜಯಾಮಾಸ ವಿಧಿವತ್ಸತ್ಕಾರಾರ್ಹೌ ಮಹಾಬಲೌ ॥ ೮ ॥

ವಿಶ್ವಾಮಿತ್ರರ ಮಾತನ್ನು ಕೇಳಿ ಸುಮತಿರಾಜನು ಬಲು ಹರ್ಷ ಪಟ್ಟು ದಶರಥ-ರಾಜನ ಪುತ್ರರು ಪರಮ ಅತಿಥಿಗಳಾಗಿ ಬಂದರೆಂದು ಮಹಾಬಲರಾದ ಸತ್ಕಾರಾರ್ಹರಾದ ಆ ಇಬ್ಬರಿಗೂ ವಿಧ್ಯುಕ್ತವಾಗಿ ಸತ್ಕಾರ ಮಾಡಿದ.

ತತಃ ಪರಮಸತ್ಕಾರಂ ಸುಮತೇಃ ಪ್ರಾಪ್ಯ ರಾಘವೌ ।
ಉಷ್ಯ ತತ್ರ ನಿಶಾಮೇಕಾಂ ಜಗ್ಮತುರ್ಮಿಥಿಲಾಂ ತತಃ ॥ ೯ ॥

ರಾಮಲಕ್ಷ್ಮಣರು ಸುಮತಿರಾಜನಿಂದ ಉತ್ತಮ ಸತ್ಕಾರವನ್ನು ಪಡೆದು ಅಲ್ಲಿ ಒಂದು ರಾತ್ರಿ ಉಳಿದು ಅಲ್ಲಿಂದ ಮಿಥಿಲೆಗೆ ಹೊರಟರು.

ತಾಂ ದೃಷ್ಟ್ವಾ ಮುನಯಃ ಸರ್ವೇ ಜನಕಸ್ಯ ಪುರೀಂ ಶುಭಾಮ್ ।
ಸಾಧುಸಾಧ್ವಿತಿ ಶಂಸಂತೋ ಮಿಥಿಲಾಂ ಸಮಪೂಜಯನ್ ॥ ೧೦ ॥

ದೂರದಿಂದ ಮಂಗಳಕರವಾದ ಜನಕನ ಮಿಥಿಲಾಪುರಿಯನ್ನು ಕಂಡು ಎಲ್ಲ ಮುನಿಗಳೂ ಭಲೆಭಲೇ ಎಂದು ಮಿಥಿಲೆಯನ್ನು ಹೊಗಳಿದರು.

ಮಿಥಿಲೋಪವನೇ ತತ್ರ ಆಶ್ರಮಂ ದೃಶ್ಯ ರಾಘವಃ ।
ಪುರಾಣಂ ನಿರ್ಜನಂ ರಮ್ಯಂ ಪಪ್ರಚ್ಛ ಮುನಿಪುಂಗವಮ್ ॥ ೧೧ ॥

ಮಿಥಿಲೆಯ ಉಪವನದ ಬಳಿಯಲ್ಲಿ ಒಂದು ಆಶ್ರಮವನ್ನು ಕಂಡು, ಹಳೆಯದೂ ನಿರ್ಜನವೂ ಆಗಿದ್ದರೂ ರಮ್ಯವಾಗಿರುವ ಆ ಆಶ್ರಮದ ಬಗ್ಗೆ ರಾಮನು ಮುನಿಶ್ರೇಷ್ಠರಾದ ವಿಶ್ವಾಮಿತ್ರರನ್ನು ಕೇಳಿದ.

ಶ್ರೀಮದಾಶ್ರಮಸಂಕಾಶಂ ಕಿಂನ್ವಿದಂ ಮುನಿವರ್ಜಿತಮ್ ।
ಶ್ರೋತುಮಿಚ್ಛಾಮಿ ಭಗವನ್ಕಸ್ಯಾಯಂ ಪೂರ್ವ ಆಶ್ರಮಃ ॥ ೧೨ ॥

'ಸಂಪದ್ಭರಿತವಾದ ಆಶ್ರಮದಂತಿದ್ದರೂ ಮುನಿಗಳು ಏಕೆ ಇದನ್ನು ಪರಿತ್ಯಜಿಸಿ-ದ್ದಾರೆ, ಪೂಜ್ಯರೇ! ಇದು ಯಾರ ಪೂರ್ವಕಾಲದ ಆಶ್ರಮ? ನಾನು ಕೇಳಲು ಬಯಸುತ್ತೇನೆ' ಎಂದು.

ತಚ್ಛ್ರುತ್ವಾ ರಾಘವೇಣೋಕ್ತಂ ವಾಕ್ಯಂ ವಾಕ್ಯವಿಶಾರದಃ ।
ಪ್ರತ್ಯುವಾಚ ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ ॥ ೧೩ ॥

ರಾಮ ಹೇಳಿದ ಮಾತನ್ನು ಕೇಳಿ ಮಾತುಗಾರ ವಿಶ್ವಾಮಿತ್ರರು ಮಹಾತೇಜರಾದ ಮಹಾಮುನಿಗಳು ಪ್ರತಿಯಾಗಿ ಹೇಳಿದರು.

ಹಂತ ತೇ ಕಥಯಿಷ್ಯಾಮಿ ಶೃಣು ತತ್ತ್ವೇನ ರಾಘವ ।
ಯಸ್ಯೈತದಾಶ್ರಮಪದಂ ಶಪ್ತಂ ಕೋಪಾನ್ಮಹಾತ್ಮನಾ ॥ ೧೪ ॥

ರಾಮ! ನಿಜ ಹೇಳುತ್ತೇನೆ ಕೇಳು, ಮಹಾತ್ಮನು ಕೋಪದಿಂದ ಶಪಿಸಿರುವ ಈ ಆಶ್ರಮ ಯಾರದೆಂದು.

ಗೌತಮಸ್ಯ ನರಶ್ರೇಷ್ಠ ಪೂರ್ವಮಾಸೀನ್ಮಹಾತ್ಮನಃ ।
ಆಶ್ರಮೋ ದಿವ್ಯಸಂಕಾಶಃ ಸುರೈರಪಿ ಸುಪೂಜಿತಃ ॥ ೧೫ ॥

ಪುರುಷೋತ್ತಮ! ಇದು ಹಿಂದೆ ಮಹಾತ್ಮ ಗೌತಮಮುನಿಯ ಆಶ್ರಮವಾಗಿತ್ತು. ದೇವತೆಗಳ ಆಶ್ರಮದಂತಿದ್ದು ದೇವತೆಗಳೂ ಹೊಗಳುವಂತಿತ್ತು .

ಸ ಚೇಹ ತಪ ಆತಿಷ್ಠದಹಲ್ಯಾಸಹಿತಃ ಪುರಾ ।
ವರ್ಷಪೂಗಾನನೇಕಾಂಶ್ಚ ರಾಜಪುತ್ರ ಮಹಾಯಶಃ ॥ ೧೬ ॥

ಗೌತಮಮುನಿ ಹಿಂದೆ ಇಲ್ಲಿ ಅಹಲ್ಯೆಯೊಂದಿಗೆ ಅನೇಕ ವರ್ಷಕಾಲ ತಪಸ್ಸು ಮಾಡುತ್ತಿದ್ದ ಹೇ ಮಹಾಯಶ! ರಾಜಕುಮಾರ!

ಕದಾಚಿದ್ದಿವಸೇ ರಾಮ ತತೋ ದೂರಂ ಗತೇ ಮುನೌ ।
ತಸ್ಯಾಂತರಂ ವಿದಿತ್ವಾ ತು ಸಹಸ್ರಾಕ್ಷಃ ಶಚೀಪತಿಃ ॥
ಮುನಿವೇಷಧರೋಽಹಲ್ಯಾಮಿದಂ ವಚನಮಬ್ರವೀತ್ ॥ ೧೭ ॥

ಒಂದು ದಿನ, ರಾಮ! ಮುನಿಯು ಸ್ನಾನಾಹ್ನಿಕಗಳಿಗೆಂದು ಆಶ್ರಮದಿಂದ ದೂರ ಹೋಗಿದ್ದಾಗ ಸರಿಯಾದ ಸಮಯ ಎಂದು ತಿಳಿದು ಸಹಸ್ರಾಕ್ಷ ಶಚೀಪತಿ ಅಲ್ಲಿಗೆ ಬಂದ! ಗೌತಮಮುನಿಯ ಆಕಾರವನ್ನೇ ತಳೆದು ಅಹಲ್ಯೆಗೆ ಹೇಳಿದ.

ಋತುಕಾಲಂ ಪ್ರತೀಕ್ಷಂತೇ ನಾರ್ಥಿನಃ ಸುಸಮಾಹಿತೇ ।
ಸಂಗಮಂ ತ್ವಹಮಿಚ್ಛಾಮಿ ತ್ವಯಾ ಸಹ ಸುಮಧ್ಯಮೇ ॥ ೧೮ ॥

'ಸುಂದರಳಾಗಿ ಬ್ರಹ್ಮ ನಿರ್ಮಿತಳಾದ ದಿವ್ಯಸ್ತ್ರೀಯೆ! ರತಿಕಾಮನೆಯಿಂದ ಸಂಗವನ್ನು ಬಯಸುವವರು ಸಂತತಿಗಾಗಿ ಶಾಸ್ತ್ರದಲ್ಲಿ ಹೇಳಿದ ಋತುಕಾಲವನ್ನು ನೋಡುವುದಿಲ್ಲ. ಅದರಿಂದ ನಿನ್ನೊಡನೆ ಈಗ ಸಂಗವನ್ನು ನಾನು ಬಯಸು-ತ್ತಿದ್ದೇನೆ!' ಎಂದು.

ಮುನಿವೇಷಂ ಸಹಸ್ರಾಕ್ಷಂ ವಿಜ್ಞಾಯ ರಘುನಂದನ ।
ಮತಿಂ ಚಕಾರ ದುರ್ಮೇಧಾ ದೇವರಾಜಕುತೂಹಲಾತ್ ॥ ೧೯ ॥

ರಾಮ! ಗೌತಮ ಮುನಿಯ ಆಕಾರ ತಳೆದು ಬಂದ ದೇವೇಂದ್ರನೀತನೆಂದು ತಿಳಿದು ಅಹಲ್ಯೆ 'ದೇವರಾಜನಿಗೆ ನನ್ನಲ್ಲಿ ಕುತೂಹಲವೇ'? ಎಂದು ಮೈಮರೆತು ದಿಗ್ಭ್ರಮೆಗೊಳಗಾಗಿ ಒಪ್ಪಿಗೆ ನೀಡಿದಳು.

ಅನಿರೀಕ್ಷಿತವಾಗಿ ಸಾಕ್ಷಾತ್ ದೇವೇಂದ್ರನೆ ಬಂದು ಬೇಡಿ ತನಗೆ ಸಂಗಸುಖ ನೀಡುತ್ತಿದ್ದಾನೆ! ಎಂದು ದಿಗ್ಭ್ರಮೆ ಉಂಟಾಯಿತು ಅಹಲ್ಯೆಗೆ, ಹೊರತು ಅವಳು ತಾನಾಗಿ ಅದನ್ನು ಬಯಸಿರಲಿಲ್ಲ. ಇದು ಬಲಾತ್ಕಾರವೆ. ಪತಿಗಿಂತ ಶ್ರೇಷ್ಠನಾದ ತತ್ವ ದೇವತೋತ್ತಮನಾದ ದೇವೇಂದ್ರನೊಡನೆ ಅವನಿಚ್ಛೆಯಂತೆ ಸಂಗ ಮಾಡಿದ್ದ ಅವಳಲ್ಲಿ ಏನೂ ತಪ್ಪೂ ಇರಲಿಲ್ಲ, ನಿರ್ಣಯದಲ್ಲಿ ಇದೇ ಅಭಿಪ್ರಾಯದಿಂದ,

ಅಥೋ ಅಹಲ್ಯಾಂ ಪತಿನಾಭಿ ಶಪ್ತಾಂ
ಪ್ರಧರ್ಷಣಾದಿಂದ್ರ ಕೃತಾಚ್ಛಿಲೀಕೃತಾಂ

'ಇಂದ್ರನು ನಡೆಸಿದ ಬಲಾತ್ಕಾರದಿಂದಾಗಿ ಅಹಲ್ಯೆಯು ಪತಿಯಿಂದ ಶಪ್ತಳಾಗಿ ಕಲ್ಲಾಗಿ ಮಾಡಲ್ಪಟ್ಟಿದ್ದಳು' ಎಂದು ಸ್ಪಷ್ಟ ಹೇಳಿದ್ದಾರೆ. ಅದರಿಂದ ವಾಲ್ಮೀಕಿಯ

ಮಾತಿನಲ್ಲಿ 'ದೇವರಾಜ ಕುತೂಹಲಾತ್' ಎಂದರೆ, ದೇವರಾಜನಲ್ಲಿ ಅಹಲ್ಯೆಗೆ ಕುತೂಹಲವಿತ್ತೆಂದು ಅರ್ಥವಲ್ಲ. ದೇವರಾಜನಿಗೇ ತನ್ನಲ್ಲಿ ಕುತೂಹಲವೆಂದು ಅಹಲ್ಯೆ ತಿಳಿದು ದುರ್ಮೋಧಳಾಗಿ ಅಂದರೆ ಮೈಮರೆತಾಗ ದಿಗ್‌ಭ್ರಮೆಗೊಂಡು ಬೇರೆ ಉಪಾಯವಿಲ್ಲದೇ ರತಿಕ್ರೀಡೆಗೆ ಒಪ್ಪಿಗೆ ನೀಡಿದಳು, 'ಮತಿಂ ಚಕಾರ' ಎಂದು ಅರ್ಥ ಗ್ರಹಿಸಬೇಕು, ಮುಂದೆ,

ಅಜ್ಞಾನಾದ್ಧರ್ಷಿತಾ ನಾಥ ತ್ವದ್ರೂಪೇಣ ದಿವೌಕಸಾ (ಉ.ಕಾಂಡ ೩೦.೪೧)

ಎಂದು ಸ್ಪಷ್ಟವಾಗಿ ತಾನು ಬಲಾತ್ಕಾರಕ್ಕೊಳಗಾಗಿದ್ದೆನೆಂದು ಅಹಲ್ಯೆಯೇ ಸ್ಪಷ್ಟ ಗೌತಮರಲ್ಲಿ ಹೇಳುತ್ತಾಳೆ. ಹಾಗಾದರೆ ಇಲ್ಲಿ ಮುಂದಿನ ಶ್ಲೋಕದಲ್ಲಿ ತಾನು ಕೃತಾರ್ಥಳಾದೆನೆನ್ನುವುದು ಹೇಗೆ? ನೋಡೋಣ, ಮುಂದೆ.

ಅಥಾಬ್ರವೀತ್ಸುರಶ್ರೇಷ್ಠಂ ಕೃತಾರ್ಥೇನಾಂತರಾತ್ಮನಾ ।
ಕೃತಾರ್ಥಾಸ್ಮಿ ಸುರಶ್ರೇಷ್ಠ ಗಚ್ಛ ಶೀಘ್ರಮಿತಃ ಪ್ರಭೋ ॥ ೨೦ ॥

ಆತ್ಮಾನಂ ಮಾಂ ಚ ದೇವೇಶ ಸರ್ವದಾ ರಕ್ಷ ಮಾನದ ।
ಇಂದ್ರಸ್ತು ಪ್ರಹಸನ್ವಾಕ್ಯಮಹಲ್ಯಾಮಿದಮಬ್ರವೀತ್ ॥
ಸುಶ್ರೋಣಿ ಪರಿತುಷ್ಟೋಽಸ್ಮಿ ಗಮಿಷ್ಯಾಮಿ ಯಥಾಗತಮ್ ॥ ೨೧ ॥

ಬಳಿಕ ಅಹಲ್ಯೆ ಸಂತುಷ್ಟವಾದ ಮನಸಿನಿಂದ 'ನಾನು ಕೃತಾರ್ಥಳಾಗಿದ್ದೇನೆ, ಸುರಶ್ರೇಷ್ಠನೆ, ಪ್ರಭು! ಬೇಗನೆ ಇಲ್ಲಿಂದ ಹೊರಟುಹೋಗು. ದೇವೇಶ! ನೀನು ನಿನ್ನನ್ನೂ ನನ್ನನ್ನೂ ಗೌತಮ ಮುನಿಯ ಕೋಪದಿಂದ ರಕ್ಷಿಸು,' ಎಂದಳು. ಇಂದ್ರನು ನಕ್ಕು ಅಹಲ್ಯೆಗೆ ಹೇಳಿದನು, 'ಸುಂದರಿ! ನಾನೂ ಸಂತುಷ್ಟನಾಗಿದ್ದೇನೆ, ಬಂದಂತೇ ಹಿಂದೆ ಹೋಗುತ್ತೇನೆ' ಎಂದ.

ಅಹಲ್ಯೆ ತಾನು ಬಯಸದೇ ಅನಿರೀಕ್ಷಿತವಾಗಿ ಬರುತ್ತಿದ್ದ ಭಾಗ್ಯವನ್ನು ದೇವೇಂದ್ರನೊಡನೆ ರತಿಕ್ರೀಡೆಯಿಂದ ಪಡೆದು ಕೃತಾರ್ಥಳಾದುದು ಸುಳ್ಳೇನಲ್ಲ. ಅದನ್ನೇ ಉತ್ತರಕಾಂಡದಲ್ಲಿ ಪತಿಯ ಮುಂದೆ ಹೇಳಿಕೊಂಡಿದ್ದಾಳೆ. ಆದರೂ ಸ್ತ್ರೀಗೆ ಸರ್ವಸ್ವವಾದ ಪಾತಿವ್ರತ್ಯ ನಾಶವಾಯಿತು? ಪತಿಶಾಪವೂ ತನ್ನ ಮೇಲೆ ಬಂದೊದಗಿತು! 'ಅರ್ಥ' ಶಬ್ದಕ್ಕೆ ನಿವೃತ್ತಿ, ನಾಶವೆಂದೂ ಅರ್ಥವಿದೆ. ಅದರಿಂದ 'ಅರ್ಥ' ತನ್ನ ಸರ್ವಸ್ವವಾದ ಪಾತಿವ್ರತ್ಯದ ನಾಶವನ್ನೇ ನಾನು ಮಾಡಿಕೊಂಡಂತಾಯಿತೆಂದು 'ಕೃತಾರ್ಥಾಸ್ಮಿ' ಎನ್ನುತ್ತಿದ್ದಾಳೆ. ಪಾತಿವ್ರತ್ಯನಾಶದೊಂದಿಗೆ, ಮುಂದೆ ಇಂದ್ರನು ಹೇಳುವ 'ದೇವಕಾರ್ಯ'ದಲ್ಲಿ ತಾನೂ ಸಹ ಭಾಗಿಯಾಗಿ ಪುಣ್ಯಮಾಡಿ 'ಕೃತಾರ್ಥ'ಳಾದೆನೆಂದೂ ಹೇಳುತ್ತಿದ್ದಾಳೆ.

ಏವಂ ಸಂಗಮ್ಯ ತು ತಯಾ ನಿಶ್ಚಕ್ರಾಮೋಟಜಾತ್ತತಃ ।
ಸ ಸಂಭ್ರಮಾತ್ ತ್ವರನ್ರಾಮ ಶಂಕಿತೋ ಗೌತಮಂ ಪ್ರತಿ ॥ ೨೨ ॥

ಹೀಗೆ ಅಹಲ್ಯೆಯ ಸಂಗ ಮಾಡಿ ದೇವೇಂದ್ರನು ಗೌತಮರ ಪರ್ಣಕುಟೀರ-ದಿಂದ ಹೊರಗೆ ಹೊರಟ. ಆಗಲೆ ಅಲ್ಲಿಗೆ ಬಂದಿದ್ದ ಗೌತಮರ ಮುಂದೆ ಬೇಕೆಂದೇ ನಿಜರೂಪದಲ್ಲಿ ಕಾಣಿಸಿಕೊಂಡು ಭಯಭೀತನಾಗಿ ದಿಗ್ಭ್ರಮೆಯಿಂದ ಶೀಘ್ರವಾಗಿ ನಡೆದ.

ಗೌತಮಂ ಸ ದದರ್ಶಾಥ ಪ್ರವಿಶಂತಂ ಮಹಾಮುನಿಮ್ ।
ದೇವದಾನವದುರ್ಧರ್ಷಂ ತಪೋಬಲಸಮನ್ವಿತಮ್ ॥ ೨೩ ॥

ಪರ್ಣಶಾಲೆಯಿಂದ ತಾನು ಹೊರಬರುತ್ತಿದ್ದಂತೆಯೇ ಒಳಗೆ ಬರುತ್ತಿದ್ದ ಗೌತಮ ಮಹಾಮುನಿಯನ್ನು ಇಂದ್ರ ನೋಡಿದ. ಆ ಮಹಾಮುನಿಯು ದೇವದಾನವರಿಗೆ ಯಾರಿಗೂ ಮಣಿಯದವನು! ಅಂಥ ಅಧಿಕ ತಪೋಬಲಯುಕ್ತನಾಗಿದ್ದ.

ತೀರ್ಥೋದಕಪರಿಕ್ಲಿನ್ನಂ ದೀಪ್ಯಮಾನಮಿವಾನಲಮ್ ।
ಗೃಹೀತಸಮಿಧಂ ತತ್ರ ಸಕುಶಂ ಮುನಿಪುಂಗವಮ್ ॥
ದೃಷ್ಟ್ವಾ ಸುರಪತಿಸ್ತ್ರಸ್ತೋ ವಿವರ್ಣವದನೋಽಭವತ್ ॥ ೨೪ ॥

ಗೌತಮ ಮುನಿಶ್ರೇಷ್ಠನು ಪವಿತ್ರ ತೀರ್ಥಸ್ನಾನದಿಂದ ಒದ್ದೆಯಾಗಿದ್ದ. ಬೆಂಕಿ-ಯಂತೆ ಹೊಳೆಯುತ್ತಿದ್ದ. ಸಮಿತ್ತು ದರ್ಭೆಗಳನ್ನು ಹಿಡಿದುಕೊಂಡು ಬರುತ್ತಿದ್ದ. ಅವನನ್ನು ನೋಡಿ ದೇವೇಂದ್ರನ ಮುಖ ಭಯದಿಂದ ಬಿಳಿಚಿಕೊಂಡಿತು.

ಅಥ ದೃಷ್ಟ್ವಾ ಸಹಸ್ರಾಕ್ಷಂ ಮುನಿವೇಷಧರಂ ಮುನಿಃ ।
ದುರ್ವೃತ್ತಂ ವೃತ್ತಸಂಪನ್ನೋ ರೋಷಾದ್ವಚನಮಬ್ರವೀತ್ ॥ ೨೫ ॥

ಮುನಿವೇಷಧಾರಿಯಾಗಿ ದುರ್ನಡತೆ ತೋರಿದ ಇಂದ್ರನನ್ನು ಸದಾಚಾರ ಸಂಪನ್ನನಾದ ಮುನಿ ಕಂಡು ರೋಷದಿಂದ ನುಡಿದ.

ಮಮ ರೂಪಂ ಸಮಾಸ್ಥಾಯ ಕೃತವಾನಸಿ ದುರ್ಮತೇ ।
ಅಕರ್ತವ್ಯಮಿದಂ ತಸ್ಮಾದ್ವಿಫಲಸ್ತ್ವಂ ಭವಿಷ್ಯಸಿ ॥ ೨೬ ॥

'ದುರ್ಮತಿಯೆ, ನನ್ನ ರೂಪವನ್ನು ಧರಿಸಿ ಅಕೃತ್ಯವನ್ನೆಸಗಿರುವೆ. ಅದರಿಂದ ನೀನು ನಿರ್ವೀರ್ಯನಾಗುವಿ.'

ಗೌತಮೇನೈವಮುಕ್ತಸ್ಯ ಸರೋಷೇಣ ಮಹಾತ್ಮನಾ ।
ಪೇತತುರ್ವೃಷಣೌ ಭೂಮೌ ಸಹಸ್ರಾಕ್ಷಸ್ಯ ತತ್ಕ್ಷಣಾತ್ ॥ ೨೭ ॥

ಮಹಾತ್ಮನಾದ ಗೌತಮನು ರೋಷದಿಂದ ಹೀಗೆ ಹೇಳಿದಾಗ ತತ್‌ಕ್ಷಣದಲ್ಲಿ ಇಂದ್ರನ ವೃಷಣಗಳು ನೆಲದಲ್ಲಿ ಬಿದ್ದುವು.

ತಥಾ ಶಪ್ತ್ವಾ ಸ ವೈ ಶಕ್ರಮಹಲ್ಯಾಮಪಿ ಶಪ್ತವಾನ್ ।
ಇಹ ವರ್ಷಸಹಸ್ರಾಣಿ ಬಹೂನಿ ತ್ವಂ ನಿವತ್ಸ್ಯಸಿ ॥ ೨೮ ॥

ಗೌತಮನು ಇಂದ್ರನನ್ನು ಹೀಗೆ ಶಪಿಸಿ ನಿರಪರಾಧಿನಿಯಾದ ಅಹಲ್ಯೆಗೂ ಶಾಪವಿತ್ತನು. 'ಇಲ್ಲಿ ಬಹು ಸಹಸ್ರ ವರ್ಷಕಾಲ ನೀನು ವಾಸ ಮಾಡುವಿ.'

ವಾಯುಭಕ್ಷಾ ನಿರಾಹಾರಾ ತಪ್ಯಂತೀ ಭಸ್ಮಶಾಯಿನೀ ।
ಅದೃಶ್ಯಾ ಸರ್ವಭೂತಾನಾಮಾಶ್ರಮೇಽಸ್ಮಿನ್ನಿವತ್ಸ್ಯಸಿ ॥ ೨೯ ॥

'ಗಾಳಿ ನುಂಗುತ್ತ ಬೇರೇನೂ ಆಹಾರವನ್ನು ಉಣದೆ ಬೂದಿಯ ಮೇಲೆ ಕಲ್ಲಾಗಿ ಬಿದ್ದು ಯಾವ ಜೀವಿಗಳಿಗೂ ಕಾಣದಂತೆ ತಪಸ್ಸು ಮಾಡುತ್ತ ಈ ಆಶ್ರಮದಲ್ಲಿ ವಾಸ ಮಾಡುವಿ.

ಯದಾ ಚೈತದ್ವನಂ ಘೋರಂ ರಾಮೋ ದಶರಥಾತ್ಮಜಃ ।
ಆಗಮಿಷ್ಯತಿ ದುರ್ಧರ್ಷಸ್ತದಾ ಪೂತಾ ಭವಿಷ್ಯಸಿ ॥ ೩೦ ॥

'ಯಾರಿಗೂ ಮಣಿಯದ ದಶರಥಸುತ ಶ್ರೀರಾಮನು ಯಾವಾಗ ಈ ಘೋರವಾದ ಅರಣ್ಯಕ್ಕೆ ಬರುವನೋ ಆಗ ನೀನು ಪಾಪರಹಿತಳಾಗುವಿ.

'ಪಾಪ' ಇಲ್ಲಿ ಅಹಲ್ಯೆಯ ಪ್ರಾರಬ್ಧ ಪಾಪಕರ್ಮ ವಿವಕ್ಷಿತ. ವ್ಯಭಿಚಾರವಲ್ಲ.

ತಸ್ಯಾತಿಥ್ಯೇನ ದುರ್ವೃತ್ತೇ ಲೋಭಮೋಹವಿವರ್ಜಿತಾ ।
ಮತ್ಸಕಾಶೇ ಮುದಾ ಯುಕ್ತಾ ಸ್ವಂ ವಪುರ್ಧಾರಯಿಷ್ಯಸಿ ॥ ೩೧ ॥

'ದುರ್ನಡತೆಯವಳೆ, ನೀನು ಲೋಭ ಮೋಹಗಳನ್ನು ತೊರೆದು ರಾಮನಿಗೆ ಅತಿಥಿಸತ್ಕಾರ ಮಾಡಿದಾಗಲೇ ನೀನು ನಿನ್ನ ನಿಜರೂಪ ಧರಿಸುವಿ, ನನ್ನ ಬಳಿಯಲ್ಲಿ ಸುಖವಾಗಿರುವಿ.

ಏವಮುಕ್ತ್ವಾ ಮಹಾತೇಜಾ ಗೌತಮೋ ದುಷ್ಟಚಾರಿಣೀಮ್ ।
ಇಮಮಾಶ್ರಮಮುತ್ಸೃಜ್ಯ ಸಿದ್ಧಚಾರಣಸೇವಿತೇ ॥

ಹಿಮವಚ್ಛಿಖರೇ ರಮ್ಯೇ ತಪಸ್ತೇಪೇ ಮಹಾತಪಾಃ ॥ ೩೨ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇऽಷ್ಟಚತ್ವಾರಿಂಶಃ ಸರ್ಗಃ ॥ ೪೮ ॥

ಮಹಾತೇಜ ಮಹಾತಪನಾದ ಗೌತಮನು ದುಷ್ಕರ್ಮ ಮಾಡಿದ ಸತಿಗೆ ಹೀಗೆ ಹೇಳಿ ಈ ಆಶ್ರಮವನ್ನು ತೊರೆದು ಹಿಮಾಲಯದ ಸಿದ್ಧಚಾರಣ ಸೇವಿತವಾದ ರಮ್ಯವಾದ ಶಿಖರದಲ್ಲಿ ತಪಗೈದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ನಲವತ್ತೆಂಟನೆ ಸರ್ಗ ಮುಗಿಯಿತು.

ಏಕೋನಪಂಚಾಶಃ ಸರ್ಗಃ

ಅಫಲಸ್ತು ತತಃ ಶಕ್ರೋ ದೇವಾನಗ್ನಿಪುರೋಧಸಃ ।
ಅಬ್ರವೀತ್ತ್ರಸ್ತವದನಃ ಸರ್ಷಿಸಂಘಾನ್ಸಚಾರಣಾನ್ ॥ ೧ ॥

ಬಳಿಕ ನಿರ್ವೀರ್ಯನಾದ ಇಂದ್ರನು ಅಗ್ನಿ ಮುಂತಾದ ದೇವತೆಗಳ ಋಷಿ ಸಮೂಹಗಳ ಚಾರಣರೆಲ್ಲರ ಮುಂದೆ ಭಯಗೊಂಡ ಮುಖದಿಂದ ನುಡಿದ.

ಕುರ್ವತಾ ತಪಸೋ ವಿಘ್ನಂ ಗೌತಮಸ್ಯ ಮಹಾತ್ಮನಃ ।
ಕ್ರೋಧಮುತ್ಪಾದ್ಯ ಹಿ ಮಯಾ ಸುರಕಾರ್ಯಮಿದಂ ಕೃತಮ್ ॥ ೨ ॥

ಮಹಾತ್ಮ ಗೌತಮನ ತಪಸ್ಸಿಗೆ ವಿಘ್ನಮಾಡಿ ಕೋಪ ಉಂಟು ಮಾಡಿ ಶಾಪ ಪಡೆಯುವ ಮೂಲಕ ಇದೊಂದು ದೇವಕಾರ್ಯವನ್ನು ಮಾಡಿರುವೆನು.

ಜೀವಿಗಳು ಪುಣ್ಯ ಸಂಪಾದನೆ ಮಾಡಲು ತತ್ವಾಭಿಮಾನಿ ದೇವತೆಗಳ ಅನುಗ್ರಹ ಪ್ರೇರಣೆಗಳು ಅವಶ್ಯ ಬೇಕು. ಯೋಗ್ಯತೆ ಮೀರಿದ ಪುಣ್ಯ ಮಾಡಿದ್ದರೆ ಅದನ್ನು ನಾಶ ಮಾಡಿಕೊಳ್ಳುವುದಕ್ಕೂ ದೇವತಾನುಗ್ರಹಬೇಕು. ಗೌತಮ ಮುನಿ ಯೋಗ್ಯತೆ ಮೀರಿ ಪುಣ್ಯ ಮಾಡಿದವನು. ದೇವೇಂದ್ರನು ಅಹಲ್ಯೆಯನ್ನು ಕೆಡಿಸುವ ಮೂಲಕ ಗೌತಮನಿಗೆ ಕೋಪ ಉಂಟುಮಾಡಿ 'ನಿರ್ವೀರ್ಯ'ನಾಗೆಂದು ಶಾಪ ಪಡೆದುದು ಅವನ ಅಧಿಕ ಪುಣ್ಯವನ್ನು ನಾಶ ಮಾಡುವುದಕ್ಕಾಗಿ. ಇದು ದೇವಕಾರ್ಯ. ಈ ಕಾರ್ಯದಿಂದ ಗೌತಮನು ಇಂದ್ರನಿಗೆ ಶಾಪ ನೀಡಿ ತನ್ನ ಅಧಿಕ ಪುಣ್ಯವನ್ನು ನಾಶ ಮಾಡಿಕೊಂಡಿದ್ದಾನೆ. ಆದರೆ ಈ ಶಾಪಕ್ಕೆ ಇಂದ್ರನು ಯೋಗ್ಯನಲ್ಲ. ಅವನು ಕುತೂಹಲದಿಂದ ಅಹಲ್ಯೆಯ ಸಂಗ ಮಾಡಲಿಲ್ಲ. ಅಹಲ್ಯೆಯೂ ಕುತೂಹಲದಿಂದ ಇಂದ್ರನ ಸಂಗ ಮಾಡಲಿಲ್ಲ. ಸ್ವೇಚ್ಛೆಯಿಂದಲೇ ಇಂದ್ರ ಶಾಪವನ್ನು ಹೊತ್ತುಕೊಂಡ. ಅದರಿಂದ ತನಗೆ ಬಂದ ಶಾಪವನ್ನು ಪಿತೃದೇವತೆಗಳು ಪರಿಹಾರ ಮಾಡಬೇಕೆಂದು ಇಂದ್ರ ಹೇಳುತ್ತಿದ್ದಾನೆ. ಅಹಲ್ಯೆಗೆ ಬಂದ ಶಾಪವನ್ನು ರಾಮನು ಪರಿಹಾರ ಮಾಡಲಿ ಎಂದು ಇಂದ್ರ ಬಯಸುತ್ತಾನೆ.

ಅಫಲೋಽಸ್ಮಿ ಕೃತಸ್ತೇನ ಕ್ರೋಧಾತ್ಸಾ ಚ ನಿರಾಕೃತಾ ।
ಶಾಪಮೋಕ್ಷೇಣ ಮಹತಾ ತಪೋಽಸ್ಯಾಪಹೃತಂ ಮಯಾ ॥ ೩ ॥

ಇಂದ್ರನು ದೇವತೆಗಳ ಮುಂದೆ ಹೇಳುತ್ತಾನೆ– 'ಗೌತಮಮುನಿ ಕೋಪದಿಂದ ನನಗೆ ಶಾಪ ನೀಡಿ ನನ್ನನ್ನು ನಿರ್ವೀರ್ಯನನ್ನಾಗಿ ಮಾಡಿದ್ದಾನೆ. ಕೋಪದಿಂದ

ಅಹಲ್ಯೆಗೂ ಶಾಪ ನೀಡಿ ಅವಳನ್ನು ತೊರೆದು ತಪಸ್ಸಿಗೆ ಹೋಗಿದ್ದಾನೆ. ನಾನು ಮಾಡಿದ್ದು ದೇವಕಾರ್ಯ. ಏಕೆಂದರೆ ನಾನು ಅವನಿಂದ ದೊಡ್ಡ ಶಾಪ ಪಡೆದು-ಕೊಂಡು ಆ ಮೂಲಕ ಅವನ ಅಧಿಕ ಪುಣ್ಯವನ್ನು ಅಪಹರಿಸಿದ್ದೇನೆ.

ಹಿರಿಯರಿಗೆ ಕಿರಿಯರು ಶಾಪಕೊಟ್ಟರೆ ಕಿರಿಯರು ಮಾಡಿದ ಪುಣ್ಯ ಆ ಹಿರಿಯರಿಗೇ ಹೋಗಿ ಸೇರುತ್ತದೆ. ಇದು ಹಿರಿಯರು ಕಿರಿಯರು ನೀಡಿದ ಆ ಶಾಪವನ್ನು ಸ್ವೀಕರಿಸಿದರೆ ಮಾತ್ರ ಸಾಧ್ಯ. ಹಿರಿಯರು ಆ ಶಾಪವನ್ನು ಸ್ವೀಕರಿಸ-ದಿರಬಹುದು. ಅಂಥ ಸಾಮರ್ಥ್ಯವಿದೆ, ಅವರಿಗೆ. ಇಂದ್ರನು ಮಾತ್ರ ಹಾಗೆ ಮಾಡದೇ ಶಾಪವನ್ನು ಸ್ವೀಕರಿಸಿದ, ಅದರಿಂದ ಮುನಿಯು ಮಾಡಿದ್ದ ಅಧಿಕ ಪುಣ್ಯವೆಲ್ಲವೂ ಇಂದ್ರನಿಗೇ ಬಂದು ಸೇರಿತು. ಅದಕ್ಕೆ ಅವನು ಯೋಗ್ಯ. ಆದರೆ ಆಗಲೇ ಆತ ನಿರ್ವೀರ್ಯನಾದ. ಈಗ ಈ ಶಾಪದಿಂದಾದ ಅನರ್ಥ ತನಗೆ ಪರಿಹಾರವಾಗಬೇಕಿದೆ.

ತಸ್ಮಾತ್ಸುರವರಾಃ ಸರ್ವೇ ಸರ್ಷಿಸಂಘಾಃ ಸಚಾರಣಾಃ ।
ಸುರಸಾಹ್ಯಕರಂ ಸರ್ವೇ ಸಫಲಂ ಕರ್ತುಮರ್ಹಥ ॥ ೪ ॥

'ಅದರಿಂದ ಎಲ್ಲ ದೇವೋತ್ತಮರೂ ಋಷಿ ಸಮೂಹಗಳೂ ಚಾರಣರೂ ಎಲ್ಲರೂ, ದೇವಕಾರ್ಯದಿಂದ ನಿಮಗೆಲ್ಲರಿಗೂ ಸಹಾಯ ಮಾಡಿರುವ ನನಗೆ, ಶಾಪದಿಂದಾದ ಅನರ್ಥ ಪರಿಹಾರ ಮಾಡಬೇಕು' ಎಂದು ಇಂದ್ರನು ದೇವತೆಗಳಿಗೆ ಹೇಳುತ್ತಾನೆ.

ಶತಕ್ರತೋರ್ವಚಃ ಶ್ರುತ್ವಾ ದೇವಾಃ ಸಾಗ್ನಿಪುರೋಗಮಾಃ ।
ಪಿತೃದೇವಾನುಪೇತ್ಯಾಹುಃ ಸರ್ವೇ ಸಹ ಮರುದ್ಗಣೈಃ ॥ ೫ ॥

ಇಂದ್ರನ ಮಾತನ್ನು ಕೇಳಿ ಅಗ್ನಿ ಮುಂತಾದ ದೇವತೆಗಳೂ ಮರುದ್‌ಗಣಗಳೂ ಎಲ್ಲರೂ ಪಿತೃದೇವತೆಗಳ ಬಳಿಗೆ ಹೋಗಿ ಹೇಳಿದರು.

ಪುರಾऽವಿಚಾರ್ಯ ಮೋಹೇನ ಮುನಿಪತ್ನೀಂ ಶತಕ್ರತುಃ ।
ಧರ್ಷಯಿತ್ವಾ ಮುನೇಃ ಶಾಪಾತ್ತತ್ರೈಷ ವಿಫಲೀಕೃತಃ ॥ ೬ ॥

'ಹಿಂದೆ ಇಂದ್ರನು ಮುನಿಶಾಪದಿಂದ ತನಗೆ ಕೇಡಾಗುವುದೆಂದು ತಿಳಿದೂಕೂಡ ವಿಚಾರ ಮಾಡದೆ, ಅಂದರೆ ವಿಚಾರದಿಂದ ಹಿಂಜರಿಯದೆ, ಮೋಹದಿಂದ, 'ದೇವರಾಜ ಕುತೂಹಲ'ದಿಂದ ಮುನಿಪತ್ನಿ ಅಹಲ್ಯೆಯನ್ನು ಬಲಾತ್ಕರಿಸಿ ಮುನಿಶಾಪದಿಂದ ತಾನು ನಿರ್ವೀರ್ಯನಾಗಿದ್ದಾನೆ.

ಇದಾನೀಂ ಕುಪ್ಯತೇ ದೇವಾನ್ ದೇವರಾಜಃ ಪುರಂದರಃ ।
ಅಯಂ ಮೇಷಃ ಸವೃಷಣಃ ಶಕ್ರೋ ಹ್ಯವೃಷಣಃ ಕೃತಃ ॥ ೭ ॥

ಈಗ ದೇವರಾಜ ಇಂದ್ರನು ದೇವತೆಗಳಲ್ಲಿ ಕೋಪಿಸಿಕೊಂಡಿದ್ದಾನೆ. ಏಕೆಂದರೆ, ಪಿತೃದೇವತೆಗಳ ವಾಹನವಾದ ಈ ಮೇಷಕ್ಕೆ ವೃಷಣಗಳಿವೆ. ಪಿತೃದೇವತೆಗಳಿಗೆ ಅದು ಇಷ್ಟವಲ್ಲ. ಅತ್ತ ಇಂದ್ರನಿಗೆ ವೃಷಣಗಳು ಇಷ್ಟವಾಗಿವೆ, ಆದರೆ ಶಾಪದಿಂದ ಅವು ಬಿದ್ದುಹೋಗಿವೆ.

ಪಿತೃದೇವತೆಗಳಿಗೆ ಮೇಷಬಲಿ ಕೊಡುವಾಗ ಅದರ ಬೇರೆ ಅಂಗಗಳನ್ನೇ ಆಹುತಿ ಕೊಡುವುದು ಶಾಸ್ತ್ರದಲ್ಲಿ ವಿಹಿತವಾಗಿದೆ. ವೃಷಣಗಳ ಆಹುತಿ ವಿಹಿತವಾಗಿಲ್ಲ. ಅದು ಅವರಿಗೆ ಇಷ್ಟವಲ್ಲ. ಆದರೂ ಈಗ, ಅವರ ವಾಹನವಾದ ಮೇಷಕ್ಕೆ ವೃಷಣಗಳಿವೆ. ಇದು ಸರಿಯಲ್ಲ. ಇಂದ್ರನಿಗೆ ವೃಷಣಗಳು ಇಷ್ಟವೇ ಆಗಿದ್ದರೂ ಅವು ಶಾಪದಿಂದ ನಾಶವಾಗಿವೆ ಇದೂ ಸರಿಯಲ್ಲ. ಇವೆರಡನ್ನೂ ಪಿತೃದೇವತೆಗಳು ಸರಿಪಡಿಸಬೇಕು ತಾನೆ? ಎಂದು ದೇವೇಂದ್ರನಿಗೆ ಕೋಪ.

ಮೇಷಸ್ಯ ವೃಷಣೌ ಗೃಹ್ಯ ಶಕ್ರಾಯಾಶು ಪ್ರಯಚ್ಛಥ ।
ಅಫಲಸ್ತು ಕೃತೋ ಮೇಷಃ ಪರಾಂ ತುಷ್ಟಿಂ ಪ್ರದಾಸ್ಯತಿ ॥ ೮ ॥

'ಪಿತೃದೇವತೆಗಳೇ! ನೀವು ನಿಮ್ಮ ವಾಹನವಾದ ಮೇಷದ ವೃಷಣಗಳನ್ನು ಕತ್ತರಿಸಿ ಇಂದ್ರನಿಗೆ ಜೋಡಿಸಿರಿ. 'ನಿಮ್ಮ ಮೇಷಕ್ಕೆ ಇದರಿಂದ ನಷ್ಟವೆ ತಾನೆ?' ಎಂದರೆ, ಇಲ್ಲ! ವೃಷಣರಹಿತವಾಗಿ ಆಹುತಿ ಮಾಡಲ್ಪಟ್ಟ ಮೇಷವು ಬಹಳ ತೃಪ್ತಿಯನ್ನೇ ನಿಮಗೆ ನೀಡುವುವು.

'ಮೇಷದ ವೃಷಣಗಳನ್ನು ಕತ್ತರಿಸಿ ತೆಗೆದರೆ ಮೇಷವು ನಿರ್ವೀರ್ಯ-ವಾಗುವುದಿಲ್ಲವೆ?' ಎಂದರೆ, ವೃಷಣಗಳನ್ನು ಬಿಟ್ಟು ಬೇರೆ ಅಂಗಗಳನ್ನು ಹೋಮಿಸುವುದರಿಂದಲೇ ಮೇಷವು ಪಿತೃದೇವತೆಗಳಿಗೆ ಹೆಚ್ಚು ತುಷ್ಟಿಕರವಾದ ಸೇವೆಯನ್ನು ಮಾಡಿ ಪಿತೃದೇವತೆಗಳ ಅನುಗ್ರಹ ಸಂಪಾದಿಸುವುದರಿಂದ ಮೇಷಕ್ಕೆ ನಷ್ಟವೇನಿಲ್ಲ, ಲಾಭವೆ.

ಭವತಾಂ ಹರ್ಷಣಾರ್ಥೇ ಚ ಯೇ ಚ ದಾಸ್ಯಂತಿ ಮಾನವಾಃ ।
ಅಕ್ಷಯಂ ಹಿ ಫಲಂ ತೇಷಾಂ ಯೂಯಂ ದಾಸ್ಯಥ ಪುಷ್ಕಲಮ್ ॥ ೯ ॥

'ನಿಮ್ಮ ತೃಪ್ತಿಗಾಗಿ ಯಾವ ಮಾನವರು 'ವೃಷಣ ರಹಿತವಾದ ಮೇಷ'ವನ್ನು

ಅಂದರೆ, ವೃಷಣಗಳನ್ನು ಬಿಟ್ಟು ಅದರ ಬೇರೆ ಅಂಗಗಳನ್ನು ಮಾತ್ರ ಆಹುತಿಯಾಗಿ ನೀಡುವರೋ ಅವರಿಗೇ ನೀವು ಅಕ್ಷಯವಾದ ಪುಷ್ಕಳವಾದ ಫಲವನ್ನು ನೀಡುವಿರಿ ತಾನೆ?'

ಅಗ್ನೇಸ್ತು ವಚನಂ ಶ್ರುತ್ವಾ ಪಿತೃದೇವಾಃ ಸಮಾಗತಾಃ ।
ಉತ್ಪಾಟ್ಯ ಮೇಷವೃಷಣೌ ಸಹಸ್ರಾಕ್ಷೇ ನ್ಯವೇಶಯನ್ ॥ ೧೦ ॥

ಅಗ್ನಿದೇವನು ಹೇಳಿದ ಈ ಮಾತನ್ನು ಕೇಳಿ ಅಲ್ಲಿಗೆ ಬಂದಿದ್ದ ಪಿತೃದೇವತೆಗಳು ಮೇಷದ ವೃಷಣಗಳನ್ನು ಕತ್ತರಿಸಿ ದೇವೇಂದ್ರನಿಗೆ ಜೋಡಿಸಿದರು.

ತದಾಪ್ರಭೃತಿ ಕಾಕುತ್ಸ್ಥ ಪಿತೃದೇವಾಃ ಸಮಾಗತಾಃ ।
ಅಫಲಾನ್‌ಭುಂಜತೇ ಮೇಷಾನ್ಫಲೈಸ್ತೇಷಾಮಯೋಜಯನ್ ॥ ೧೧ ॥

ರಾಮ! ಅಂದಿನಿಂದ ಯಜ್ಞಾಹುತಿ ಸ್ವೀಕರಿಸಲು ಬರುವ ಪಿತೃದೇವತೆಗಳು 'ಫಲ ರಹಿತ' ಅಂದರೆ, ವೃಷಣ ರಹಿತವಾದ ಮೇಷದ ಬೇರೆ ಅಂಗಗಳನ್ನೇ ಆಹುತಿಯಾಗಿ ಉಂಡು, ಯಾಗ ಮಾಡುವ ಯಜಮಾನರಿಗೆ ಯಜ್ಞಫಲವನ್ನು ನೀಡುತ್ತಿದ್ದಾರೆ.

ಇಂದ್ರಸ್ತು ಮೇಷವೃಷಣಸ್ತದಾಪ್ರಭೃತಿ ರಾಘವ ।
ಗೌತಮಸ್ಯ ಪ್ರಭಾವೇಣ ತಪಸಾಚ ಮಹಾತ್ಮನಃ ॥ ೧೨ ॥

ರಾಮ! ಅಂದಿನಿಂದ ಇಂದ್ರನು ಮಹಾತ್ಮನಾದ ಗೌತಮನ ತಪಸ್ಸಿನ ಪ್ರಭಾವ-ದಿಂದ 'ಮೇಷ ವೃಷಣ'ನೆನಿಸಿದ.

ತದಾಗಚ್ಛ ಮಹಾತೇಜ ಆಶ್ರಮಂ ಪುಣ್ಯಕರ್ಮಣಃ ।
ತಾರಯೈನಾಂ ಮಹಾಭಾಗಾಮಹಲ್ಯಾಂ ದೇವರೂಪಿಣೀಮ್ ॥ ೧೩ ॥

ಅದರಿಂದ ಮಹಾತೇಜನಾದ ರಾಮನೆ! ಪುಣ್ಯಕರ್ಮನಾದ ಗೌತಮನ ಆಶ್ರಮಕ್ಕೆ ಬಾ. ಮಹಾಭಾಗ್ಯವತಿ ದೇವರೂಪಿಣಿಯಾದ ಅಹಲ್ಯೆಯನ್ನು ಶಾಪ ಮುಕ್ತಳನ್ನಾಗಿ ಮಾಡು.

ವಿಶ್ವಾಮಿತ್ರವಚಃ ಶ್ರುತ್ವಾ ರಾಘವಃ ಸಹಲಕ್ಷ್ಮಣಃ ।
ವಿಶ್ವಾಮಿತ್ರಂ ಪುರಸ್ಕೃತ್ಯ ತಮಾಶ್ರಮಮಥಾವಿಶತ್ ॥ ೧೪ ॥

ವಿಶ್ವಾಮಿತ್ರರ ಮಾತನ್ನು ಕೇಳಿ ರಾಮನು ಲಕ್ಷ್ಮಣನೊಂದಿಗೆ ವಿಶ್ವಾಮಿತ್ರರನ್ನು ಮುಂದೆ ಮಾಡಿಕೊಂಡು ಆ ಆಶ್ರಮವನ್ನು ಪ್ರವೇಶಿಸಿದನು.

ದದರ್ಶ ಚ ಮಹಾಭಾಗಾಂ ತಪಸಾ ದ್ಯೋತಿತಪ್ರಭಾಮ್ ।
ಲೋಕೈರಪಿ ಸಮಾಗಮ್ಯ ದುರ್ನಿರೀಕ್ಷ್ಯಾಂ ಸುರಾಸುರೈಃ ॥ ೧೫ ॥

ಅಲ್ಲಿ ಸುರ ಅಸುರ ಲೋಕಗಳಿಗೂ ಕೂಡ ಬಂದು ಕಾಣಲಾಗದಂತೆ ಇದ್ದು, ತಪಸ್ಸಿನಿಂದ ಹೊಳೆವ ಪ್ರಭೆಯಿಂದ ಯುಕ್ತಳೇ ಆಗಿದ್ದ ಮಹಾಭಾಗ್ಯವತಿಯಾದ ಅಹಲ್ಯೆಯನ್ನು ರಾಮನು ಕಂಡನು.

ಪ್ರಯತ್ನಾನ್ನಿರ್ಮಿತಾಂ ಧಾತ್ರಾ ದಿವ್ಯಾಂ ಮಾಯಾಮಯೀಮಿವ ।
ಸ ತುಷಾರಾವೃತಾಂ ಸಾಭ್ರಾಂ ಪೂರ್ಣಚಂದ್ರಪ್ರಭಾಮಿವ ॥ ೧೬ ॥

ಬ್ರಹ್ಮದೇವನು ಪ್ರಯತ್ನದಿಂದ ಸೃಜಿಸಿದ ದಿವ್ಯ ಮಾಯಾಮಯಿಯಂತಿರುವ ಅಹಲ್ಯೆ ಅದೃಶ್ಯಳಾಗಿ ಅಲ್ಲಿ ಹಿಮದಿಂದ ಮೋಡದಿಂದ ಆವೃತವಾದ ಪೂರ್ಣ ಚಂದ್ರಪ್ರಭೆಯಂತಿದ್ದಳು.

ಧೂಮೇನಾಪಿ ಪರೀತಾಂಗೀಂ ದೀಪ್ತಾಮಗ್ನಿಶಿಖಾಮಿವ ।
ಮಧ್ಯೇऽಮ್ಬಸೋ ದುರಾಧರ್ಷಾಂ ದೀಪ್ತಾಂ ಸೂರ್ಯಪ್ರಭಾಮಿವ ॥

ಹೊಗೆಯಿಂದ ಕಾಣದಂತಾಗುವ ಹೊಳೆವ ಅಗ್ನಿ ಶಿಖೆಯಂತೆ ಅಧಷ್ಯಳಾಗಿದ್ದಳು. ಮೋಡಗಳ ನಡುವೆ ಅದೃಶ್ಯವಾಗಿರುವ ಹೊಳೆವ ಸೂರ್ಯಪ್ರಭೆಯಂತೆ ಅದೃಶ್ಯಳಾಗಿದ್ದಳು.

ಸಾ ಹಿ ಗೌತಮವಾಕ್ಯೇನ ದುರ್ನಿರೀಕ್ಷ್ಯಾ ಬಭೂವ ಹ ।
ತ್ರಯಾಣಾಮಪಿ ಲೋಕಾನಾಂ ಯಾವದ್ರಾಮಸ್ಯ ದರ್ಶನಮ್ ॥
ಶಾಪಸ್ಯಾಂತಮುಪಾಗಮ್ಯ ತೇಷಾಂ ದರ್ಶನಮಾಗತಾ ॥ ೧೮ ॥

ರಾಮನು ಆಶ್ರಮಕ್ಕೆ ಬರುವುದಕ್ಕೆ ಮೊದಲು ಗೌತಮಶಾಪದಿಂದ ಅಹಲ್ಯೆ, ರಾಮನು ಬಂದು ನೋಡುವ ವರೆಗೆ, ಮೂಲೋಕಕ್ಕೂ ಅದೃಶ್ಯಳಾಗಿದ್ದಳು. ರಾಮಾಗಮನದಿಂದ ಶಾಪ ಕಳೆದಾಗ ಎಲ್ಲರಿಗೂ ದೃಷ್ಟಿಗೋಚರಳಾದಳು.

ರಾಘವೌ ತು ತತಸ್ತಸ್ಯಾಃ ಪಾದೌ ಜಗೃಹತುಸ್ತದಾ ।
ಸ್ಮರಂತೀ ಗೌತಮವಚಃ ಪ್ರತಿಜಗ್ರಾಹ ಸಾ ಚ ತೌ ॥ ೧೯ ॥

ರಾಮಲಕ್ಷ್ಮಣರು ಅಹಲ್ಯೆಯ ಪಾದಸ್ಪರ್ಶ ಮಾಡಿದರು. ಅವಳೂ ಕೂಡ ಗೌತಮರ ಮಾತನ್ನು ನೆನೆದು ಅದರಂತೆ ಇಬ್ಬರನ್ನೂ ಸತ್ಕರಿಸಿದಳು.

ಪಾದ್ಯಮರ್ಘ್ಯಂ ತಥಾತಿಥ್ಯಂ ಚಕಾರ ಸುಸಮಾಹಿತಾ ।
ಪ್ರತಿಜಗ್ರಾಹ ಕಾಕುತ್ಸ್ಥೋ ವಿಧಿದೃಷ್ಟೇನ ಕರ್ಮಣಾ ॥ ೨೦ ॥

ಏಕಾಗ್ರಚಿತ್ತದಿಂದ ಪಾದ್ಯ ಅರ್ಘ್ಯ ಮುಂತಾದ ಎಲ್ಲ ಅತಿಥಿ ಸತ್ಕಾರಗಳನ್ನು ಅಹಲ್ಯೆ ವಿಧ್ಯುಕ್ತವಾಗಿ ನೀಡಿದಳು. ಶ್ರೀರಾಮ ಅವುಗಳನ್ನು ಸ್ವೀಕರಿಸಿದ.

ಪುಷ್ಪವೃಷ್ಟಿರ್ಮಹತ್ಯಾಸೀದ್ದೇವದುಂದುಭಿನಿಃಸ್ವನೈಃ ।
ಗಂಧರ್ವಾಪ್ಸರಸಾಂ ಚಾಪಿ ಮಹಾನಾಸೀತ್ಸಮಾಗಮಃ ॥ ೨೧ ॥

ಆಗ ದೇವದುಂದುಭಿ ಧ್ವನಿಗಳೊಂದಿಗೆ ದೊಡ್ಡ ಹೂ ಮಳೆ ಸುರಿಯಿತು. ಗಂಧರ್ವ ಅಪ್ಸರೆಯರ ಮಹಾ ಸಮ್ಮೇಳನವೂ ನಡೆಯಿತು.

ಸಾಧು ಸಾಧ್ವಿತಿ ದೇವಾಸ್ತಾಮಹಲ್ಯಾಂ ಸಮಪೂಜಯನ್ ।
ತಪೋಬಲವಿಶುದ್ಧಾಂಗೀಂ ಗೌತಮಸ್ಯ ವಶಾನುಗಾಮ್ ॥ ೨೨ ॥

ಭಲೆ ಭಲೆ ಎಂದು ದೇವತೆಗಳು ಅಹಲ್ಯೆಯನ್ನು ಹೊಗಳಿದರು. ಅವಳು ತಪೋಬಲದಿಂದ ಪವಿತ್ರವಾದ ಶರೀರಯುಕ್ತಳಾಗಿ ಗೌತಮರ ವಶವರ್ತಿಯಾದಳು.

ಗೌತಮೋಽಪಿ ಮಹಾತೇಜಾ ಅಹಲ್ಯಾಸಹಿತಃ ಸುಖೀ ।
ರಾಮಂ ಸಂಪೂಜ್ಯ ವಿಧಿವತ್ತಪಸ್ತೇಪೇ ಮಹಾತಪಾಃ ॥ ೨೩ ॥

ಮಹಾತೇಜನಾದ ಗೌತಮನೂ ಅಹಲ್ಯೆಯಿಂದೊಡಗೂಡಿ ಸುಖಿಯಾದನು. ಮಹಾತಪನಾದ ಅವನು ವಿಧ್ಯುಕ್ತವಾಗಿ ರಾಮನನ್ನು ಪೂಜಿಸಿ ತಪಸ್ಸು ಮಾಡಿದನು.

ರಾಮೋಽಪಿ ಪರಮಾಂ ಪೂಜಾಂ ಗೌತಮಸ್ಯ ಮಹಾಮುನೇಃ ।
ಸಕಾಶಾದ್ವಿಧಿವತ್ಪ್ರಾಪ್ಯ ಜಗಾಮ ಮಿಥಿಲಾಂ ತತಃ ॥ ೨೪ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಏಕೋನಪಂಚಾಶಃ ಸರ್ಗಃ ॥ ೪೯ ॥

ರಾಮನೂ ಮಹಾಮುನಿ ಗೌತಮನಿಂದ ವಿಧಿವತ್ತಾದ ಉತ್ತಮ ಪೂಜೆಯನ್ನು ಸ್ವೀಕರಿಸಿ ಅಲ್ಲಿಂದ ಮಿಥಿಲೆಯ ಕಡೆಗೆ ನಡೆದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ನಲವತ್ತೊಂಬತ್ತನೆ ಸರ್ಗ ಮುಗಿಯಿತು.

ಪಂಚಾಶಃ ಸರ್ಗಃ

ತತಃ ಪ್ರಾಗುತ್ತರಾಂ ಗತ್ವಾ ರಾಮಃ ಸೌಮಿತ್ರಿಣಾ ಸಹ ।
ವಿಶ್ವಾಮಿತ್ರಂ ಪುರಸ್ಕೃತ್ಯ ಯಜ್ಞವಾಟಮುಪಾಗಮತ್ ॥ ೧ ॥

ಅಲ್ಲಿಂದ ಈಶಾನ್ಯದಿಕ್ಕಿಗೆ ರಾಮನು ಲಕ್ಷ್ಮಣನೊಂದಿಗೆ ವಿಶ್ವಾಮಿತ್ರರನ್ನು ಮುಂದಿಟ್ಟುಕೊಂಡು ನಡೆದು ಜನಕರಾಜನ ಯಜ್ಞಭೂಮಿಯನ್ನು ಹೋಗಿ ಸೇರಿದ.

ರಾಮಸ್ತು ಮುನಿಶಾರ್ದೂಲಮುವಾಚ ಸಹಲಕ್ಷ್ಮಣಃ ।
ಸಾಧ್ವೀ ಯಜ್ಞಸಮೃದ್ಧಿರ್ಹಿ ಜನಕಸ್ಯ ಮಹಾತ್ಮನಃ ॥ ೨ ॥

ರಾಮನೂ ಲಕ್ಷ್ಮಣನೂ ವಿಶ್ವಾಮಿತ್ರರನ್ನು ಕೇಳಿಕೊಂಡರು– ಮಹಾತ್ಮ ಜನಕ-ರಾಜನ ಯಜ್ಞಸಾಮಗ್ರಿ ಚೆನ್ನಾಗಿದೆ.

ಬಹೂನೀಹ ಸಹಸ್ರಾಣಿ ನಾನಾದೇಶನಿವಾಸಿನಾಮ್ ।
ಬ್ರಾಹ್ಮಣಾನಾಂ ಮಹಾಭಾಗ ವೇದಾಧ್ಯಯನಶಾಲಿನಾಮ್ ॥ ೩ ॥

ಮಹಾಭಾಷ್ಯಶಾಲಿಯೆ! ವೇದಾಧ್ಯಯನ ಶಾಲಿಗಳಾಗಿರುವ ನಾನಾ ದೇಶವಾಸಿ ಬ್ರಾಹ್ಮಣರು ಬಹು ಸಹಸ್ರ ಸಂಖ್ಯೆಯಲ್ಲಿ ಇದ್ದಾರೆ.

ಋಷಿವಾಟಾಶ್ಚ ದೃಶ್ಯಂತೇ ಶಕಟೀಶತಸಂಕುಲಾಃ ।
ದೇಶೋ ವಿಧೀಯತಾಂ ಬ್ರಹ್ಮನ್ನತ್ರ ವತ್ಸ್ಯಾಮಹೇ ವಯಮ್ ॥ ೪ ॥

ಋಷಿಗಳ ಕೇರಿಗಳೂ ನೂರಾರು ಬಂಡಿಗಳಿಂದ ಯುಕ್ತವಾಗಿ ಕಂಡುಬರುತ್ತಿವೆ. ನಾವು ಎಲ್ಲಿ ವಸತಿ ಮಾಡೋಣ ಮುನಿಯೆ! ಆ ಸ್ಥಳವನ್ನು ಹೇಳಿರಿ.

ರಾಮಸ್ಯ ವಚನಂ ಶ್ರುತ್ವಾ ವಿಶ್ವಾಮಿತ್ರೋ ಮಹಾಮುನಿಃ ।
ನಿವೇಶಮಕರೋದ್ದೇಶೇ ವಿವಿಕ್ತೇ ಸಲಿಲಾನ್ವಿತೇ ॥ ೫ ॥

ರಾಮನ ಮಾತನ್ನು ಕೇಳಿ ಮಹಾಮುನಿ ವಿಶ್ವಾಮಿತ್ರರು ಹೆಚ್ಚು ಜನರಿಲ್ಲದ, ನೀರಿರುವ ಒಂದು ಸ್ಥಳದಲ್ಲಿ ವಸತಿ ಮಾಡಿದರು.

ವಿಶ್ವಾಮಿತ್ರಮನುಪ್ರಾಪ್ತಂ ಶ್ರುತ್ವಾ ಸ ನೃಪತಿಸ್ತದಾ ।
ಶತಾನಂದಂ ಪುರಸ್ಕೃತ್ಯ ಪುರೋಹಿತಮನಿಂದಿತಮ್ ॥

ಪ್ರತ್ಯುಜ್ಜಗಾಮ ಸಹಸಾ ವಿನಯೇನ ಸಮನ್ವಿತಃ ॥ ೬ ॥

ವಿಶ್ವಾಮಿತ್ರರು ಬಂದರೆಂದು ಕೇಳಿದೊಡನೆ ಜನಕರಾಜನು ಉತ್ತಮ ಪುರೋಹಿತರಾದ ಶತಾನಂದರನ್ನು ಮುಂದೆ ಮಾಡಿಕೊಂಡು ವಿನಯಯುಕ್ತನಾಗಿ ಇದಿರುಗೊಂಡನು.

ಋತ್ವಿಜೋಽಪಿ ಮಹಾತ್ಮಾನಸ್ತ್ವರ್ಘ್ಯಮಾದಾಯ ಸತ್ವರಮ್ ।
ವಿಶ್ವಾಮಿತ್ರಾಯ ಧರ್ಮೇಣ ದದುರ್ಮಂತ್ರಪುರಸ್ಕೃತಮ್ ॥ ೭ ॥

ಮಹಾತ್ಮರಾದ ಋತ್ವಿಜರೂ ಕೂಡ ಬೇಗನೆ ಅರ್ಘ್ಯವನ್ನು ತಂದು ವಿಧ್ಯುಕ್ತವಾಗಿ ಮಂತ್ರಪೂರ್ವಕವಾಗಿ ವಿಶ್ವಾಮಿತ್ರರಿಗೆ ನೀಡಿದರು.

ಪ್ರತಿಗೃಹ್ಯ ತು ತಾಂ ಪೂಜಾಂ ಜನಕಸ್ಯ ಮಹಾತ್ಮನಃ ।
ಪಪ್ರಚ್ಛ ಕುಶಲಂ ರಾಜ್ಞೋ ಯಜ್ಞಸ್ಯ ಚ ನಿರಾಮಯಮ್ ॥ ೮ ॥

ಮಹಾತ್ಮ ಜನಕ ಮಹಾರಾಜನು ನೀಡಿದ ಆ ಸತ್ಕಾರವನ್ನು ವಿಶ್ವಾಮಿತ್ರರು ಸ್ವೀಕರಿಸಿ ರಾಜನ ಕುಶಲವನ್ನೂ ಯಜ್ಞ ನಿರ್ವಿಘ್ನವಾಗಿ ಸಾಗುವುದನ್ನೂ ವಿಚಾರಿಸಿದರು.

ಸ ತಾಂಶ್ಚಾಪಿ ಮುನೀನ್‌ಪೃಷ್ಟ್ವಾ ಸೋಪಾಧ್ಯಾಯಪುರೋಧಸಃ ।
ಯಥಾನ್ಯಾಯಂ ತತಃ ಸರ್ವೈಃ ಸಮಾಗಚ್ಛತ್ಪ್ರಹೃಷ್ಟವತ್ ॥ ೯ ॥

ಬಳಿಕ ಉಪಾಧ್ಯಾಯರು ಪುರೋಹಿತನಾದ ಶತಾನಂದರು ಮತ್ತು ಬೇರೆ ಋತ್ವಿಜರಾದ ಮುನಿಗಳನ್ನೂ ಕುಶಲ ಪ್ರಶ್ನೆ ಮಾಡಿ ಅವರೆಲ್ಲರೊಡನೆ ಯಥಾಯೋಗ್ಯವಾಗಿ ಹರ್ಷದಿಂದ ಕೂಡಿಕೊಂಡರು ವಿಶ್ವಾಮಿತ್ರರು.

ಅಥ ರಾಜಾ ಮುನಿಶ್ರೇಷ್ಠಂ ಕೃತಾಂಜಲಿರಭಾಷತ ।
ಆಸನೇ ಭಗವನ್ನಾಸ್ತಾಂ ಸಹೈಭಿರ್ಮುನಿಸತ್ತಮೈಃ ॥ ೧೦ ॥

ಬಳಿಕ ಜನಕರಾಜನು ಕೈಮುಗಿದು ಮುನಿಶ್ರೇಷ್ಠರಾದ ವಿಶ್ವಾಮಿತ್ರರನ್ನು ಕೇಳಿಕೊಂಡ, ಪೂಜ್ಯರೆ, ಮುನಿಗಳೊಂದಿಗೆ ತಾವು ಆಸನವನ್ನು ಅಲಂಕರಿಸಿರಿ ಎಂದನು.

ಜನಕಸ್ಯ ವಚಃ ಶ್ರುತ್ವಾ ನಿಷಸಾದ ಮಹಾಮುನಿಃ ।
ಪುರೋಧಾ ಋತ್ವಿಜಶ್ಚೈವ ರಾಜಾ ಚ ಸಹ ಮಂತ್ರಿಭಿಃ ॥ ೧೧ ॥

ಜನಕನ ಮಾತನ್ನು ಕೇಳಿ ವಿಶ್ವಾಮಿತ್ರರು ಆಸನದಲ್ಲಿ ಕುಳಿತರು. ಪುರೋಹಿತನೂ ಋತ್ವಿಜರೂ ಹಾಗೇ ಮಂತ್ರಿಗಳೊಂದಿಗೆ ರಾಜನೂ ಆಸೀನರಾದರು.

ಆಸನೇಷು ಯಥಾನ್ಯಾಯಮುಪವಿಷ್ಟಾನ್ಸಮಂತತಃ ।
ದೃಷ್ಟ್ವಾ ಸ ನೃಪತಿಸ್ತತ್ರ ವಿಶ್ವಾಮಿತ್ರಮಥಾಬ್ರವೀತ್ ॥ ೧೨ ॥

ಆಸನಗಳಲ್ಲಿ ಯಥಾಯೋಗ್ಯವಾಗಿ ಕುಳಿತವರನ್ನು ಎಲ್ಲೆಡೆ ಸುತ್ತಲೂ ನೋಡಿ ರಾಜನು ವಿಶ್ವಾಮಿತ್ರರನ್ನು ಕೇಳಿದನು.

ಅದ್ಯ ಯಜ್ಞಸಮೃದ್ಧಿರ್ಮೇ ಸಫಲಾ ದೈವತೈಃ ಕೃತಾ ।
ಅದ್ಯ ಯಜ್ಞಫಲಂ ಪ್ರಾಪ್ತಂ ಭಗವದ್ದರ್ಶನಾನ್ಮಯಾ ॥ ೧೩ ॥

ಇಂದು ನನ್ನ ಯಜ್ಞಸಾಮಗ್ರಿಯನ್ನು ದೇವತೆಗಳು ಸಫಲ ಗೊಳಿಸಿದಂತಾ-ಯಿತು. ತಮ್ಮ ದರ್ಶನದಿಂದ ನನಗೆ ಯಜ್ಞಫಲ ಲಭಿಸಿದಂತಾಯಿತು.

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯಸ್ಯ ಮೇ ಮುನಿಪುಂಗವಃ ।
ಯಜ್ಞೋಪಸದನಂ ಬ್ರಹ್ಮನ್ಪ್ರಾಪ್ತೋಽಸಿ ಮುನಿಭಿಃ ಸಹ ॥ ೧೪ ॥

ನಾನು ಧನ್ಯನಾದೆ, ಅನುಗೃಹೀತನಾದೆ. ಏಕೆಂದರೆ, ಮುನಿಯೆ! ನೀವು ಮುನಿಗಳೊಂದಿಗೆ ಯಜ್ಞಸ್ಥಾನಕ್ಕೆ ಬಂದಿರುವಿರಿ.

ದ್ವಾದಶಾಹಂ ತು ಬ್ರಹ್ಮರ್ಷೇ ದೀಕ್ಷಾಮಾಹುರ್ಮನೀಷಿಣಃ ।
ತತೋ ಭಾಗಾರ್ಥಿನೋ ದೇವಾನ್ ದ್ರಷ್ಟುಮರ್ಹಸಿ ಕೌಶಿಕ ॥ ೧೫ ॥

ಬ್ರಹ್ಮರ್ಷಿಯೆ! ಹನ್ನೆರಡು ದಿನಗಳು ದೀಕ್ಷಾಕಾಲ ಉಳಿದಿವೆ ಎಂದು ಋತ್ವಿಜರು ಹೇಳುತ್ತಿದ್ದಾರೆ. ಬಳಿಕ, ವಿಶ್ವಾಮಿತ್ರರೆ, ಯಜ್ಞಭಾಗಾಪೇಕ್ಷಿಗಳಾದ ದೇವತೆಗಳನ್ನು ಸುತ್ಯಾಕಾಲದಲ್ಲಿ ನೀವು ದರ್ಶನ ಮಾಡಬಹುದು.

ಇತ್ಯುಕ್ತ್ವಾ ಮುನಿಶಾರ್ದೂಲಂ ಪ್ರಹೃಷ್ಟವದನಸ್ತದಾ ।
ಪುನಸ್ತಂ ಪರಿಪಪ್ರಚ್ಛ ಪ್ರಾಂಜಲಿಃ ಪ್ರಣತೋ ನೃಪಃ ॥ ೧೬ ॥

ಅರಳಿದ ಮುಖದಿಂದ ಮುನಿಶ್ರೇಷ್ಠ ವಿಶ್ವಾಮಿತ್ರರಿಗೆ ಹೀಗೆ ಹೇಳಿ ರಾಜನು ಕೈಮುಗಿದು ನಮಸ್ಕರಿಸಿ ಕೇಳಿದ.

ಇಮೌ ಕುಮಾರೌ ಭದ್ರಂ ತೇ ದೇವತುಲ್ಯಪರಾಕ್ರಮೌ ।
ಗಜಸಿಂಹಗತೀ ವೀರೌ ಶಾರ್ದೂಲವೃಷಭೋಪಮೌ ॥ ೧೭ ॥

ಈ ನಿಮಗೆ ಮಂಗಳವಾಗಲಿ. ಈ ಇಬ್ಬರು ಕುಮಾರರು ದೇವತುಲ್ಯ-ಪರಾಕ್ರಮಿಗಳು ಮದ್ದಾನೆಯಂತೆ ಸಿಂಹದಂತೆ ಹೆಜ್ಜೆ ಇಡುವವರು ವ್ಯಾಘ್ರವೃಷಭ-ಗಳಂತೆ ಕಾಣುವವರು.

ಪದ್ಮಪತ್ರವಿಶಾಲಾಕ್ಷೌ ಖಡ್ಗತೂಣೀಧನುರ್ಧರೌ ।
ಅಶ್ವಿನಾವಿವ ರೂಪೇಣ ಸಮುಪಸ್ಥಿತಯೌವನೌ ॥ ೧೮ ॥

ಕಮಲ ದಳಗಳಂತೆ ಉದ್ದ ಕಣ್ಣಿನವರು ಖಡ್ಗ ಬತ್ತಳಿಕೆ ಧನುಸ್ಸುಗಳನ್ನು ಹಿಡಿದಿರುವರು ಅಶ್ವಿನಿ ಕುಮಾರರಂತೆ ಸ್ಫುರದ್ರೂಪಿಗಳು ಯೌವನಕ್ಕೆ ಕಾಲಿಟ್ಟವರು.

ಯದೃಚ್ಛಯೈವ ಗಾಂ ಪ್ರಾಪ್ತೌ ದೇವಲೋಕಾದಿವಾಮರೌ ।
ಕಥಂ ಪದ್ಭ್ಯಾಮಿಹ ಪ್ರಾಪ್ತೌ ಕಿಮರ್ಥಂ ಕಸ್ಯ ವಾ ಮುನೇ ॥ ೧೯ ॥

ಕೇವಲ ಅಕಸ್ಮಾತ್ತಾಗಿ ದೇವಲೋಕದಿಂದ ಭೂಮಿಗೆ ಇಳಿದುಬಂದ ದೇವತೆ-ಗಳಂತೇ ಇರುವರು, ಏಕೆ ಮತ್ತು ಹೇಗೆ ಕಾಲ್ನಡೆಯಿಂದ ಇವರು ಇಲ್ಲಿ ಬಂದಿರುವರು?

ವರಾಯುಧಧರೌ ವೀರೌ ಕಸ್ಯ ಪುತ್ರೌ ಮಹಾಮುನೇ ।
ಭೂಷಯಂತಾವಿಮಂ ದೇಶಂ ಚಂದ್ರಸೂರ್ಯಾವಿವಾಂಬರಮ್ ॥೨೦॥

ವೀರರು ಉತ್ತಮ ಆಯುಧಗಳನ್ನು ಧರಿಸಿರುವರು. ಮಹಾಮುನಿಯೆ ಇವರು ಯಾರ ಪುತ್ರರು? ಆಕಾಶಕ್ಕೆ ಚಂದ್ರಸೂರ್ಯರಂತೆ ಈ ನೆಲಕ್ಕೆ ಇವರಿಬ್ಬರು ಅಲಂಕಾರ ಪ್ರಾಯರು.

ಪರಸ್ಪರಸ್ಯ ಸದೃಶೌ ಪ್ರಮಾಣೇಂಗಿತಚೇಷ್ಟಿತೈಃ ।
ಕಾಕಪಕ್ಷಧರೌ ವೀರೌ ಶ್ರೋತುಮಿಚ್ಛಾಮಿ ತತ್ತ್ವತಃ ॥ ೨೧ ॥

ಮೈಯ ಎತ್ತರ, ಬುದ್ಧಿಯ ಚುರುಕು ಅಂಗಾಂಗಗಳ ಚಲನೆಗಳಲ್ಲಿ ಅವರಿಗೆ ಅವರೇ ಪರಸ್ಪರ ಸದೃಶರು ಕಾಕಪಕ್ಷಗಳಂತೆ ಕೇಶವಿನ್ಯಾಸ ಉಳ್ಳವರು ಇಬ್ಬರು ವೀರರು ಯಾರೆಂದು ಯಥಾರ್ಥವಾಗಿ ತಿಳಿಯಲು ಇಚ್ಛಿಸುತ್ತೇನೆ.

ತಸ್ಯ ತದ್ವಚನಂ ಶ್ರುತ್ವಾ ಜನಕಸ್ಯ ಮಹಾತ್ಮನಃ ।
ನ್ಯವೇದಯನ್ಮಹಾತ್ಮಾನೌ ಪುತ್ರೌ ದಶರಥಸ್ಯ ತೌ ॥ ೨೨ ॥

ಜನಕರಾಜನ ಈ ಪ್ರಶ್ನೆಯನ್ನು ಕೇಳಿ ವಿಶ್ವಾಮಿತ್ರರು ಹೇಳಿದರು, ಇವರು ಮಹಾತ್ಮರು ದಶರಥನ ಪುತ್ರರು ಎಂದು.

ಸಿದ್ಧಾಶ್ರಮನಿವಾಸಂ ಚ ರಾಕ್ಷಸಾನಾಂ ವಧಂ ತಥಾ ।
ತತ್ರಾಗಮನಮವ್ಯಗ್ರಂ ವಿಶಾಲಾಯಾಶ್ಚ ದರ್ಶನಮ್ ॥ ೨೩ ॥

ಅವರು ಸಿದ್ಧಾಶ್ರಮದಲ್ಲಿ ವಾಸ ಮಾಡಿದ್ದು ರಾಕ್ಷಸರ ವಧೆ ಮಾಡಿದ್ದು, ಅಲ್ಲಿಗೆ ಏನೂ ಭಯವಿಲ್ಲದೆ ನಡೆದು ಬಂದುದು.

ಅಹಲ್ಯಾದರ್ಶನಂ ಚೈವ ಗೌತಮೇನ ಸಮಾಗಮಮ್ ।
ಮಹಾಧನುಷಿ ಜಿಜ್ಞಾಸಾಂ ಕರ್ತುಮಾಗಮನಂ ತಥಾ ॥ ೨೪ ॥

ಅಹಲ್ಯೆಯ ದರ್ಶನ ಮಾಡಿದ್ದು ಗೌತಮರೊಡನೆ ಅಹಲ್ಯೆಯ ಸಮಾಗಮ ಮಾಡಿಸಿದ್ದು, ಈಗ, ನಿಮ್ಮ ಮಹಾಧನುಸಿನ ಬಗ್ಗೆ ವಿಚಾರ ಮಾಡಲು ಬಂದಿರುವುದು.

ಏತತ್ಸರ್ವಂ ಮಹಾತೇಜಾ ಜನಕಾಯ ಮಹಾತ್ಮನೇ ।
ನಿವೇದ್ಯ ವಿರರಾಮಾಥ ವಿಶ್ವಾಮಿತ್ರೋ ಮಹಾಮುನಿಃ ॥ ೨೫ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಪಂಚಾಶಃ ಸರ್ಗಃ ॥ ೫೦ ॥

ಇದೆಲ್ಲವನ್ನೂ ಮಹಾತೇಜ ಮಹಾಮುನಿ ವಿಶ್ವಾಮಿತ್ರರು ಮಹಾತ್ಮನಾದ ಜನಕರಾಜನಿಗೆ ಹೇಳಿ ಸುಮ್ಮನಾದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಐವತ್ತನೇ ಸರ್ಗ ಮುಗಿಯಿತು.

ಏಕಪಂಚಾಶಃ ಸರ್ಗಃ

ತಸ್ಯ ತದ್ವಚನಂ ಶ್ರುತ್ವಾ ವಿಶ್ವಾಮಿತ್ರಸ್ಯ ಧೀಮತಃ ।
ಹೃಷ್ಟರೋಮಾ ಮಹಾತೇಜಾಃ ಶತಾನಂದೋ ಮಹಾತಪಾಃ ॥ ೧ ॥

ಧೀಮಂತ ವಿಶ್ವಾಮಿತ್ರರು ಆಡಿದ ಈ ಮಾತನ್ನು ಕೇಳಿ ಮಹಾತೇಜ ಮಹಾತಪರಾದ ಗೌತಮಪುತ್ರ ಶತಾನಂದರಿಗೆ ರೋಮಾಂಚವಾಯಿತು.

ಗೌತಮಸ್ಯ ಸುತೋ ಜ್ಯೇಷ್ಠಸ್ತಪಸಾ ದ್ಯೋತಿತಪ್ರಭಃ ।
ರಾಮಸಂದರ್ಶನಾದೇವ ಪರಂ ವಿಸ್ಮಯಮಾಗತಃ ॥ ೨ ॥

ಗೌತಮರ ಜ್ಯೇಷ್ಠಪುತ್ರ ಶತಾನಂದರು ತಪಸ್ಸಿನಿಂದ ಶರೀರ ಪ್ರಭೆಯನ್ನು ಬೆಳಗಿಸಿಕೊಂಡವರು. ರಾಮನ ದರ್ಶನ ಮಾತ್ರದಿಂದ ಪರಮ ವಿಸ್ಮಯವನ್ನು ಹೊಂದಿದ್ದರು.

ಸ ತತೋ ನಿಷಣ್ಣೌ ಸಂಪ್ರೇಕ್ಷ್ಯ ಸುಖಾಸೀನೌ ನೃಪಾತ್ಮಜೌ ।
ಶತಾನಂದೋ ಮುನಿಶ್ರೇಷ್ಠಂ ವಿಶ್ವಾಮಿತ್ರಮಥಾಬ್ರವೀತ್ ॥ ೩ ॥

ರಾಜಕುಮಾರ ರಾಮಲಕ್ಷ್ಮಣರು ಸುಖಾಸೀನರಾಗಿ ಕುಳಿತಿದ್ದುದನ್ನು ಚೆನ್ನಾಗಿ ನೋಡಿ ಶತಾನಂದರು ಮುನಿಶ್ರೇಷ್ಠ ವಿಶ್ವಾಮಿತ್ರರನ್ನು ಕೇಳಿದರು.

ಅಪಿ ತೇ ಮುನಿಶಾರ್ದೂಲ ಮಮ ಮಾತಾ ಯಶಸ್ವಿನೀ ।
ದರ್ಶಿತಾ ರಾಜಪುತ್ರ್ಯಾಯ ತಪೋ ದೀರ್ಘಮುಪಾಗತಾ ॥ ೪ ॥

ಮುನಿಶ್ರೇಷ್ಠ ವಿಶ್ವಾಮಿತ್ರರೆ, ಯಶಸ್ವಿನಿಯಾದ ನಮ್ಮ ಮಾತೆ ದೀರ್ಘ ತಪಸ್ಸಿನಲ್ಲಿದ್ದುದನ್ನು ರಾಜಪುತ್ರ ರಾಮನಿಗೆ ನೀವು ತೋರಿಸಿದಿರೇನು?

ಅಪಿ ರಾಮೇ ಮಹಾತೇಜೋ ಮಮ ಮಾತಾ ಯಶಸ್ವಿನೀ ।
ವನ್ಯೈರುಪಾಹರತ್ಪೂಜಾಂ ಪೂಜಾರ್ಹೇ ಸರ್ವದೇಹಿನಾಮ್ ॥ ೫ ॥

ಮಹಾತೇಜರಾದ ಮುನಿಯೇ! ನನ್ನ ಮಾತೆ ಯಶಸ್ವಿನಿ ಸರ್ವ ದೇಹಿಗಳಿಗೆ ಪೂಜಾರ್ಹನಾದ ರಾಮನಿಗೆ ವನ್ಯ ವಸ್ತುಗಳಿಂದ ಸತ್ಕಾರ ಮಾಡಿದಳೇನು?

ಅಪಿ ರಾಮಾಯ ಕಥಿತಂ ಯಥಾವೃತ್ತಂ ಪುರಾತನಮ್ ।
ಮಮ ಮಾತುರ್ಮಹಾತೇಜೋ ದೈವೇನ ದುರನುಷ್ಠಿತಮ್ ॥ ೬ ॥

ಮಹಾತೇಜರಾದ ಮುನಿಯೆ! ನನ್ನ ತಾಯಿಯ ವಿಷಯದಲ್ಲಿ ದೈವವು ಕೆಟ್ಟದಾಗಿ ನಡೆದುಕೊಂಡ ಪುರಾತನ ವೃತ್ತಾಂತವನ್ನು ನೀವು ಯಥಾವತ್ತಾಗಿ ರಾಮನಿಗೆ ಹೇಳಿದಿರೇನು?

ಅಪಿ ಕೌಶಿಕ ಭದ್ರಂ ತೇ ಗುರುಣಾ ಮಮ ಸಂಗತಾ ।
ಮಾತಾ ಮಮ ಮುನಿಶ್ರೇಷ್ಠ ರಾಮಸಂದರ್ಶನಾದಿತಃ ॥ ೭ ॥

ವಿಶ್ವಾಮಿತ್ರರೆ, ನಿಮಗೆ ಶುಭವಾಗಲಿ, ಮುನಿಶ್ರೇಷ್ಠರೆ, ರಾಮನ ದರ್ಶನ ಮತ್ತು ಅವನ ಸತ್ಕಾರಗಳಿಂದ ನನ್ನ ಮಾತೆ ನನ್ನ ಪಿತನೊಂದಿಗೆ ಸೇರಿದರೆ?

ಅಪಿ ಮೇ ಗುರುಣಾ ರಾಮಃ ಪೂಜಿತಃ ಕುಶಿಕಾತ್ಮಜ ।
ಇಹಾಗತೋ ಮಹಾತೇಜಾಃ ಪೂಜಾಂ ಪ್ರಾಪ್ತೋ ಮಹಾತ್ಮನಃ ॥ ೮ ॥

ವಿಶ್ವಾಮಿತ್ರರೆ, ನನ್ನ ಪಿತನಿಂದ ರಾಮನು ಸತ್ಕಾರವನ್ನು ಪಡೆದನೇನು? ನಮ್ಮಾಶ್ರಮದಲ್ಲಿಗೆ ಬಂದ ನಮ್ಮ ಪಿತನು ಮಹಾತ್ಮನಾದ ರಾಮನಿಂದ ಮಾತೆಯ ಸಮಾಗಮ ರೂಪವಾದ ಸತ್ಕಾರವನ್ನು ಪಡೆದನೇನು?

ಅಪಿ ಶಾಂತೇನ ಮನಸಾ ಗುರುರ್ಮೇ ಕುಶಿಕಾತ್ಮಜ ।
ಇಹಾಗತೇನ ರಾಮೇಣ ಪ್ರಯತೇನಾಭಿವಾದಿತಃ ॥ ೯ ॥

ಶಾಂತಮನಸಿನಿಂದ ನನ್ನ ಪಿತನು ನಮ್ಮಾಶ್ರಮಕ್ಕೆ ಬಂದ ರಾಮನಿಂದ ಮನಃ-ಪೂರ್ವಕವಾಗಿ ನಮಿಸಲ್ಪಟ್ಟನೇನು?

ತಚ್ಛ್ರುತ್ವಾ ವಚನಂ ತಸ್ಯ ವಿಶ್ವಾಮಿತ್ರೋ ಮಹಾಮುನಿಃ ।
ಪ್ರತ್ಯುವಾಚ ಶತಾನಂದಂ ವಾಕ್ಯಜ್ಞೋ ವಾಕ್ಯಕೋವಿದಮ್ ॥ ೧೦ ॥

ಶತಾನಂದರ ಈ ಮಾತನ್ನು ಕೇಳಿ ಮಾತು ಬಲ್ಲವರಾದ ಮಹಾಮುನಿ ವಿಶ್ವಾಮಿತ್ರರು ಮಾತಿನಮಲ್ಲರಾದ ಶತಾನಂದರಿಗೆ ಪ್ರತಿಯಾಗಿ ಹೇಳಿದರು.

ನಾತಿಕ್ರಾಂತಂ ಮುನಿಶ್ರೇಷ್ಠ ಯತ್ಕರ್ತವ್ಯಂ ಕೃತಂ ಮಯಾ ।
ಸಂಗತಾ ಮುನಿನಾ ಪತ್ನೀ ಭಾರ್ಗವೇಣೇವ ರೇಣುಕಾ ॥ ೧೧ ॥

ಮುನಿಶ್ರೇಷ್ಠರೆ, ನಾನು ಯಾವುದು ಕರ್ತವ್ಯವೋ ಅದನ್ನು ಮಾಡದೆ ಬಿಡಲಿಲ್ಲ, ಮಾಡಿದ್ದೇನೆ. ಪತ್ನಿ ಅಹಲ್ಯೆಯನ್ನು ಪತಿ ಗೌತಮರೊಡನೆ ಸೇರುವಂತೇ ಮಾಡಿದ್ದೇನೆ, ರೇಣುಕೆ ಜಮದಗ್ನಿಯೊಂದಿಗೆ ಹೇಗೋ ಹಾಗೆ.

ತಚ್ಛ್ರುತ್ವಾ ವಚನಂ ತಸ್ಯ ವಿಶ್ವಾಮಿತ್ರಸ್ಯ ಧೀಮತಃ ।
ಶತಾನಂದೋ ಮಹಾತೇಜಾ ರಾಮಂ ವಚನಮಬ್ರವೀತ್ ॥ ೧೨ ॥

ಧೀಮಂತ ವಿಶ್ವಾಮಿತ್ರರ ಮಾತನ್ನು ಕೇಳಿ ಮಹಾತೇಜರಾದ ಶತಾನಂದರು ರಾಮನಿಗೆ ಹೇಳಿದರು.

ಸ್ವಾಗತಂ ತೇ ನರಶ್ರೇಷ್ಠ ದಿಷ್ಟ್ಯಾ ಪ್ರಾಪ್ತೋಽಸಿ ರಾಘವ ।
ವಿಶ್ವಾಮಿತ್ರಂ ಪುರಸ್ಕೃತ್ಯ ಮಹರ್ಷಿಮಪರಾಜಿತಮ್ ॥ ೧೩ ॥

ಪುರುಷೋತ್ತಮ ರಾಮ! ನಿನಗೆ ಸ್ವಾಗತ ಎಂದೂ ಪರಾಜಯ ರಹಿತನಾದ ಮಹರ್ಷಿ ವಿಶ್ವಾಮಿತ್ರರನ್ನು ಮುಂದೆ ಮಾಡಿಕೊಂಡು ನೀವು ನಮ್ಮ ಅದೃಷ್ಟ-ವಶದಿಂದ ಇಲ್ಲಿಗೆ ಬಂದಿರುವೆ.

ಅಚಿಂತ್ಯಕರ್ಮಾ ತಪಸಾ ಬ್ರಹ್ಮರ್ಷಿರತುಲಪ್ರಭಃ ।
ವಿಶ್ವಾಮಿತ್ರೋ ಮಹಾತೇಜಾ ವೇತ್ತ್ಯೇನಂ ಪರಮಾಂ ಗತಿಮ್ ॥೧೪॥

ತಪೋಬಲದಿಂದ ಅಚಿಂತ್ಯ ಕರ್ಮ ಮಾಡುವವರು ಅತುಲ ಪ್ರಭೆ ಉಳ್ಳ ಬ್ರಹ್ಮರ್ಷಿಗಳು ಮಹಾತೇಜರಾದ ಈ ವಿಶ್ವಾಮಿತ್ರರು! ಇವರು ವಿಶ್ವಕ್ಕೆ ಮಿತ್ರರು ಪರಮ ಹಿತಕಾರಿಗಳೆಂದು ನೀ ತಿಳಿದೆ!

ನಾಸ್ತಿ ಧನ್ಯತರೋ ರಾಮ ತ್ವತ್ತೋಽನ್ಯೋ ಭುವಿ ಕಶ್ಚನ ।
ಗೋಪ್ತಾ ಕುಶಿಕಪುತ್ರಸ್ತೇ ಯೇನ ತಪ್ತಂ ಮಹತ್ತಪಃ ॥ ೧೫ ॥

ರಾಮ! ನಿನಗಿಂತ ಧನ್ಯ ನಿನ್ನೊಬ್ಬ ಭೂಮಿಯಲ್ಲಿ ಯಾರೂ ಇಲ್ಲ, ಏಕೆಂದರೆ, ಮಹಾ ತಪಸ್ಸು ಮಾಡಿರುವ ವಿಶ್ವಾಮಿತ್ರನು ನಿನಗೆ ರಕ್ಷಕನಾಗಿ ದೊರಕಿದ್ದಾನೆ!

ಯಾಗರಕ್ಷಣೆಯ ಮೂಲಕ ಮುನಿಗೆ ರಕ್ಷಕನಾಗಿ ಬಂದವನು ಶ್ರೀರಾಮ, ಹೊರತು ರಾಮನಿಗೆ ಮುನಿ ರಕ್ಷಕನಾಗಿ ಬರಲಿಲ್ಲ. ಅದರಿಂದ ಪುರುಷ ವ್ಯತ್ಯಾಸ-ವಿದು. 'ಉವಾಹ ಕೃಷ್ಣೋ ಭಗವಾನ್ ಶ್ರೀದಾಮನಂ ಪರಾಜಿತಃ' (ಭಾ.೧೦.೧೬. ೨೩) ಎಂಬಂತೆ. ವ್ಯತ್ಯಾಸ ಮಾಡಿದ್ದು ಲೋಕದೃಷ್ಟ್ಯನುಸಾರವಾಗಿ ಯುಕ್ತವಾಗಿದೆ.

ಶ್ರೂಯತಾಂ ಚಾಭಿಧಾಸ್ಯಾಮಿ ಕೌಶಿಕಸ್ಯ ಮಹಾತ್ಮನಃ ।
ಯಥಾಬಲಂ ಯಥಾವೃತ್ತಂ ತನ್ಮೇ ನಿಗದತಃ ಶೃಣು ॥ ೧೬ ॥

ಕೇಳು, ಮಹಾತ್ಮ ವಿಶ್ವಾಮಿತ್ರನ ಬಗ್ಗೆ ಹೇಳುತ್ತೇನೆ ಅವನ ಬಲವೇನು ಅವನ ಸಾಧನೆ ಏನು? ಅದನ್ನು ಹೇಳುವೆನು ಕೇಳು.

ರಾಜಾऽಭೂದೇಷ ಧರ್ಮಾತ್ಮಾ ದೀರ್ಘಕಾಲಮರಿಂದಮಃ ।
ಧರ್ಮಜ್ಞಃ ಕೃತವಿದ್ಯಶ್ಚ ಪ್ರಜಾನಾಂ ಚ ಹಿತೇ ರತಃ ॥ ೧೭ ॥

ಶತ್ರುನಾಶಕನೆ, ಈತನು ದೀರ್ಘಕಾಲ ಧರ್ಮಾತ್ಮ ಧರ್ಮಜ್ಞ. ವಿದ್ಯಾರ್ಜನ ಮಾಡಿದವ ಪ್ರಜೆಗಳ ಹಿತದಲ್ಲಿ ನಿರತನಾದ ರಾಜನಾಗಿದ್ದ.

ಪ್ರಜಾಪತಿಸುತಶ್ಚಾಸೀತ್ಕುಶೋ ನಾಮ ಮಹೀಪತಿಃ ।
ಕುಶಸ್ಯ ಪುತ್ರೋ ಬಲವಾನ್ಕುಶನಾಭಃ ಸುಧಾರ್ಮಿಕಃ ॥ ೧೮ ॥

ಬ್ರಹ್ಮದೇವನ ಪುತ್ರ ಕುಶನೆಂಬ ರಾಜನಿದ್ದ. ಕುಶನ ಪುತ್ರನು ಬಲಿಷ್ಠನಾದ ಒಳ್ಳೆಯ ಧಾರ್ಮಿಕನಾದ ಕುಶನಾಭ.

ಕುಶನಾಭಸುತಸ್ತ್ವಾಸೀದ್ಗಾಧಿರಿತ್ಯೇವ ವಿಶ್ರುತಃ ।
ಗಾಧೇಃ ಪುತ್ರೋ ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ॥ ೧೯ ॥

ಕುಶನಾಭನ ಪುತ್ರನು ಗಾಧಿ ಎಂದು ಪ್ರಸಿದ್ಧನಾಗಿದ್ದ. ಗಾಧಿಯ ಪುತ್ರನೆ ಮಹಾ ತೇಜನಾದ ಈ ಮಹಾಮುನಿ ವಿಶ್ವಾಮಿತ್ರ.

ವಿಶ್ವಾಮಿತ್ರೋ ಮಹಾತೇಜಾಃ ಪಾಲಯಾಮಾಸ ಮೇದಿನೀಮ್ ।
ಬಹುವರ್ಷಸಹಸ್ರಾಣಿ ರಾಜಾ ರಾಜ್ಯಮಕಾರಯತ್ ॥ ೨೦ ॥

ಮಹಾತೇಜನಾದ ವಿಶ್ವಾಮಿತ್ರನು ರಾಜನಾಗಿ ಬಹು ಸಹಸ್ರ ವರ್ಷಕಾಲ ರಾಜ್ಯಭಾರ ಮಾಡಿದ, ಭೂಮಿಯನ್ನು ರಕ್ಷಿಸಿದ.

ಕದಾಚಿತ್ತು ಮಹಾತೇಜಾ ಯೋಜಯಿತ್ವಾ ವರೂಥಿನೀಮ್ ।
ಅಕ್ಷೌಹಿಣೀಪರಿವೃತಃ ಪರಿಚಕ್ರಾಮ ಮೇದಿನೀಮ್ ॥ ೨೧ ॥

ಒಮ್ಮೆ ಮಹಾತೇಜನಾದ ಈತನು ಸೈನ್ಯವನ್ನು ಕೂಡಿಸಿ ಅಕ್ಷೌಹಿಣೀ ಪರಿವೃತ-ನಾಗಿ ಭೂಮಿ ಪ್ರದಕ್ಷಿಣೆಗೈದ.

ನಗರಾಣಿ ಚ ರಾಷ್ಟ್ರಾಣಿ ಸರಿತಶ್ಚ ತಥಾ ಗಿರೀನ್ ।
ಆಶ್ರಮಾನ್ಕ್ರಮಶೋ ರಾಮ ವಿಚರನ್ನಾಜಗಾಮ ಹ ॥ ೨೨ ॥

ವಸಿಷ್ಠಸ್ಯಾಶ್ರಮಪದಂ ನಾನಾವೃಕ್ಷಸಮಾಕುಲಮ್ ।
ನಾನಾಮೃಗಗಣಾಕೀರ್ಣಂ ಸಿದ್ಧಚಾರಣಸೇವಿತಮ್ ॥ ೨೩ ॥

ರಾಮ! ನಗರಗಳನ್ನು ರಾಜ್ಯಗಳನ್ನು ನದಿಗಳನ್ನು ಬೆಟ್ಟಗಳನ್ನು ಆಶ್ರಮಗಳನ್ನು ಕ್ರಮವಾಗಿ ಸುತ್ತಿ ವಸಿಷ್ಠರ ಆಶ್ರಮಕ್ಕೆ ಬಂದ. ನಾನಾ ವೃಕ್ಷಗಳಿಂದ ಆಶ್ರಮವು ತುಂಬಿತ್ತು . ನಾನಾ ಮೃಗ ಸಮೂಹಗಳಿಂದ ಕೂಡಿತ್ತು . ಸಿದ್ಧಚಾರಣರಿಂದ ಸೇವಿತವಾಗಿತ್ತು ಆ ಆಶ್ರಮ.

ದೇವದಾನವಗಂಧರ್ವೈಃ ಕಿನ್ನರೈರುಪಶೋಭಿತಮ್ ।
ಪ್ರಶಾಂತಹರಿಣಾಕೀರ್ಣಂ ದ್ವಿಜಸಂಘನಿಷೇವಿತಮ್ ॥ ೨೪ ॥

ದೇವದಾನವ ಗಂಧರ್ವ ಕಿನ್ನರರಿಂದ ಶೋಭಿಸಿತ್ತು. ಪ್ರಶಾಂತವಾಗಿತ್ತು ಜಿಂಕೆಗಳಿಂದ ತುಂಬಿತ್ತು ಪಕ್ಷಿಸಮೂಹಗಳಿಂದ ಸೇವಿತವಾಗಿತ್ತು ವಸಿಷ್ಠಾಶ್ರಮ.

ಬ್ರಹ್ಮರ್ಷಿಗಣಸಂಕೀರ್ಣಂ ದೇವರ್ಷಿಗಣಸೇವಿತಮ್ ।
ತಪಶ್ಚರಣಸಂಸಿದ್ಧೈರಗ್ನಿಕಲ್ಪೈರ್ಮಹಾತ್ಮಭಿಃ ॥ ೨೫ ॥

ಬ್ರಹ್ಮರ್ಷಿ ಸಮೂಹಗಳಿಂದ ತುಂಬಿತ್ತು ದೇವರ್ಷಿ ಸಮೂಹದಿಂದ ಸೇವಿತವಾಗಿತ್ತು . ತಪಶ್ಚರಣದಿಂದ ಸಿದ್ಧಿ ಪಡೆದ ಅಗ್ನಿ ಸಮರಾದ ಮಹಾತ್ಮರಿಂದ ಸೇವಿತವಾಗಿತ್ತು ವಸಿಷ್ಠಾಶ್ರಮ.

ಅಬ್ಭಕ್ಷೈರ್ವಾಯುಭಕ್ಷೈಶ್ಚ ಶೀರ್ಣಪರ್ಣಾಶನೈಸ್ತಥಾ ।
ಫಲಮೂಲಾಶನೈರ್ದಾಂತೈರ್ಜಿತರೋಷೈರ್ಜಿತೇಂದ್ರಿಯೈಃ ॥ ೨೬ ॥

ನೀರು ಮಾತ್ರ ಸೇವಿಸುವವರು ಕೆಲವರು, ಗಾಳಿಯನ್ನು ಮಾತ್ರ ಸೇವಿಸುವವರು ಕೆಲವರು, ಒಣಗಿ ಬಿದ್ದ ಎಲೆಗಳನ್ನು ಮಾತ್ರ ಉಣ್ಣುವವರು ಕೆಲವರು. ಇನ್ನು ಕೆಲವರು ಹಣ್ಣುಗಡ್ಡೆಗಳನ್ನು ಉಂಡು ಬದುಕುವವರು ಮನೋನಿಗ್ರಹ ರೋಷನಿಗ್ರಹ ಇಂದ್ರಿಯ ನಿಗ್ರಹಗಳನ್ನು ಮಾಡಿಕೊಂಡವರೆ ಎಲ್ಲರೂ. ಇವರು ವಸಿಷ್ಠಾಶ್ರಮ ವಾಸಿಗಳಾಗಿದ್ದರು.

ಋಷಿಭಿರ್ವಾಲಖಿಲ್ಯೈಶ್ಚ ಜಪಹೋಮಪರಾಯಣೈಃ ।
ಅನ್ಯೈಶ್ಚೈವಾನಸೈಶ್ಚೈವ ಸಮಂತಾದುಪಶೋಭಿತಮ್ ॥ ೨೭ ॥

ಬ್ರಹ್ಮನ ರೋಮಗಳಿಂದ ಜನಿಸಿದ ವಾಲಖಿಲ್ಯ ಋಷಿಗಳು ಕೆಲವರು. ಕೆಲವರು

ಬ್ರಹ್ಮನ ನಖಗಳಿಂದ ಜನಿಸಿದ ವೈಖಾನಸ ಮುನಿಗಳು ಜಪ ಹೋಮ ಪರಾಯಣರಾದ ಇಂಥಹ ಋಷಿಗಳಿಂದ ತುಂಬಿತ್ತು ವಸಿಷ್ಠಾಶ್ರಮ.

ವಸಿಷ್ಠಸ್ಯಾಶ್ರಮಪದಂ ಬ್ರಹ್ಮಲೋಕಮಿವಾಪರಮ್ ।
ದದರ್ಶ ಜಯತಾಂ ಶ್ರೇಷ್ಠೋ ವಿಶ್ವಾಮಿತ್ರೋ ಮಹಾಬಲಃ ॥ ೨೮ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಏಕಪಂಚಾಶಃ ಸರ್ಗಃ ॥ ೫೧ ॥

ಇಂಥ ಇನ್ನೊಂದು ಬ್ರಹ್ಮಲೋಕವೆ ಎಂಬಂತಿದ್ದ ವಸಿಷ್ಠಾಶ್ರಮವನ್ನು ಮಹಾಬಲಿ ಮಹಾವಿಜಯಶಾಲಿ ವಿಶ್ವಾಮಿತ್ರನು ಸಂದರ್ಶಿಸಿದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಐವತ್ತೊಂದನೆ ಸರ್ಗ ಮುಗಿಯಿತು.

ದ್ವಿಪಂಚಾಶಃ ಸರ್ಗಃ

ಸ ದೃಷ್ಟ್ವಾ ಪರಮಪ್ರೀತೋ ವಿಶ್ವಾಮಿತ್ರೋ ಮಹಾಬಲಃ ।
ಪ್ರಣತೋ ವಿನಯಾದ್ವೀರೋ ವಸಿಷ್ಠಂ ಜಪತಾಂ ವರಮ್ ॥ ೧ ॥

ಮಹಾಬಲಿ ವಿಶ್ವಾಮಿತ್ರನು ವಸಿಷ್ಠಾಶ್ರಮವನ್ನು ಕಂಡು ಬಹಳ ಸಂತುಷ್ಟನಾದ. ವೀರನಾದ ಆತ ಜಪ ಮಾಡುವವರಲ್ಲಿ ಉತ್ತಮರಾದ ವಸಿಷ್ಠರನ್ನು ವಿನಯದಿಂದ ನಮಿಸಿದ.

ಸ್ವಾಗತಂ ತವ ಚೇತ್ಯುಕ್ತೋ ವಸಿಷ್ಠೇನ ಮಹಾತ್ಮನಾ ।
ಆಸನಂ ಚಾಸ್ಯ ಭಗವಾನ್ವಸಿಷ್ಠೋ ವ್ಯಾದಿದೇಶ ಹ ॥ ೨ ॥

'ನಿನಗೆ ಸ್ವಾಗತ!' ಎಂದರು ಮಹಾತ್ಮ ವಸಿಷ್ಠರು. ಭಗವಾನ್ ವಸಿಷ್ಠರು ಆತನಿಗೆ ಆಸನವನ್ನಿತ್ತರು.

ಉಪವಿಷ್ಟಾಯ ಚ ತದಾ ವಿಶ್ವಾಮಿತ್ರಾಯ ಧೀಮತೇ ।
ಯಥಾನ್ಯಾಯಂ ಮುನಿವರಃ ಫಲಮೂಲಮುಪಾಹರತ್ ॥ ೩ ॥

ಧೀಮಂತ ವಿಶ್ವಾಮಿತ್ರ ಆಸೀನನಾದಾಗ ಮುನಿಶ್ರೇಷ್ಠರಾದ ವಸಿಷ್ಠರು ಯಥಾಯೋಗ್ಯವಾಗಿ ಹಣ್ಣುಗಡ್ಡೆಗಳನ್ನಿತ್ತರು.

ಪ್ರತಿಗೃಹ್ಯ ಚ ತಾಂ ಪೂಜಾಂ ವಸಿಷ್ಠಾದ್ರಾಜಸತ್ತಮಃ ।
ತಪೋಗ್ನಿಹೋತ್ರಶಿಷ್ಯೇಷು ಕುಶಲಂ ಪರ್ಯಪೃಚ್ಛತ ॥ ೪ ॥

ರಾಜಶ್ರೇಷ್ಠ ವಿಶ್ವಾಮಿತ್ರನು ವಸಿಷ್ಠರಿಂದ ಆ ಸತ್ಕಾರವನ್ನು ಸ್ವೀಕರಿಸಿದ ಬಳಿಕ ತಪಸ್ಸು ಅಗ್ನಿಹೋತ್ರ ಹೋಮ ಶಿಷ್ಯ ಪರಿವಾರ ವಿಷಯಗಳಲ್ಲಿ ವಸಿಷ್ಠರಿಗೆ ಕುಶಲ ಪ್ರಶ್ನೆ ಮಾಡಿದ.

ವಿಶ್ವಾಮಿತ್ರೋ ಮಹಾತೇಜಾ ವನಸ್ಪತಿಗಣೇ ತಥಾ ।
ಸರ್ವತ್ರ ಕುಶಲಂ ಚಾಹ ವಸಿಷ್ಠೋ ರಾಜಸತ್ತಮಮ್ ॥ ೫ ॥

ಆಶ್ರಮವೃಕ್ಷಗಳ ಬಗ್ಗೆಯೂ ಮಹಾತೇಜನಾದ ವಿಶ್ವಾಮಿತ್ರನು ಕುಶಲ ಪ್ರಶ್ನೆ ಮಾಡಿದ. ಸರ್ವತ್ರ ಕುಶಲವೇ ಎಂದರು ರಾಜಶ್ರೇಷ್ಠ ವಿಶ್ವಾಮಿತ್ರರಿಗೆ ವಸಿಷ್ಠರು.

ಸುಖೋಪವಿಷ್ಟಂ ರಾಜಾನಂ ವಿಶ್ವಾಮಿತ್ರಂ ಮಹಾತಪಾಃ ।
ಪಪ್ರಚ್ಛ ಜಪತಾಂ ಶ್ರೇಷ್ಠೋ ವಸಿಷ್ಠೋ ಬ್ರಹ್ಮಣಃ ಸುತಃ ॥ ೬ ॥

ರಾಜಾ ವಿಶ್ವಾಮಿತ್ರನು ಸುಖಾಸೀನನಾದಾಗ ಮಹಾ ತಪಸ್ವಿ ಜಪ ಮಾಡುವವ-ರಲ್ಲಿ ಶ್ರೇಷ್ಠರೂ ಆದ ಬ್ರಹ್ಮಸುತರಾದ ವಸಿಷ್ಠರು ಕೇಳಿದರು.

ಕಚ್ಚಿತ್ತೇ ಕುಶಲಂ ರಾಜನ್ಕಚ್ಚಿದ್ಧರ್ಮೇಣ ರಂಜಯನ್ ।
ಪ್ರಜಾಃ ಪಾಲಯಸೇ ವೀರ ರಾಜವೃತ್ತೇನ ಧಾರ್ಮಿಕ ॥ ೭ ॥

ರಾಜನೆ, ನಿನಗೆ ಕುಶಲವೆ? ವೀರನೆ, ಧಾರ್ಮಿಕನೆ, ಧರ್ಮದಿಂದ ಪ್ರಜೆಗಳಿಗೆ ಸುಖ ನೀಡುತ್ತ ರಾಜನೀತಿಯಿಂದ ಪಾಲಿಸುತ್ತಿರುವೆ ತಾನೆ?

ಕಚ್ಚಿತ್ತೇ ಸಂಭೃತಾ ಭೃತ್ಯಾಃ ಕಚ್ಚಿತ್ತಿಷ್ಠಂತಿ ಶಾಸನೇ ।
ಕಚ್ಚಿತ್ತೇ ವಿಜಿತಾಃ ಸರ್ವೇ ರಿಪವೋ ರಿಪುಸೂದನ ॥ ೮ ॥

ಭೃತ್ಯರನ್ನು ಪೋಷಿಸುತ್ತಿರುವೆ ತಾನೆ! ಅವರು ನಿನಗೆ ವಿಧೇಯರಾಗಿರುವರು ತಾನೆ? ಶತ್ರುನಾಶಕನೆ! ನೀನು ಎಲ್ಲ ಶತ್ರುರಾಜರನ್ನು ಗೆದ್ದಿರುವೆ ತಾನೆ!

ಕಚ್ಚಿದ್ಬಲೇಷು ಕೋಶೇಷು ಮಿತ್ರೇಷು ಚ ಪರಂತಪ ।
ಕುಶಲಂ ತೇ ನರವ್ಯಾಘ್ರ ಪುತ್ರಪೌತ್ರೇ ತವಾನಘ ॥ ೯ ॥

ಪುರುಷೋತ್ತಮನೆ, ಪಾಪರಹಿತನೆ, ಶತ್ರುನಾಶಕನೆ ನಿನಗೆ ಸೈನ್ಯ ಬೊಕ್ಕಸ ಮಿತ್ರ-ರಾಜರು ಪುತ್ರ ಪೌತ್ರರು ಇವರಲ್ಲಿ ಕುಶಲವೆ ತಾನೆ? ಎಂದು ವಸಿಷ್ಠರು ಕೇಳಿದರು.

ಸರ್ವತ್ರ ಕುಶಲಂ ರಾಜಾ ವಸಿಷ್ಠಂ ಪ್ರತ್ಯುದಾಹರತ್ ।
ವಿಶ್ವಾಮಿತ್ರೋ ಮಹಾತೇಜಾ ವಸಿಷ್ಠಂ ವಿನಯಾನ್ವಿತಃ ॥ ೧೦ ॥

'ಸರ್ವತ್ರ ಕುಶಲವೆ' ಎಂದು ಶ್ರೇಷ್ಠರಾದ ವಸಿಷ್ಠರಿಗೆ ಮಹಾತೇಜ ರಾಜಾ ವಿಶ್ವಾಮಿತ್ರನು ವಿನಯಾನ್ವಿತನಾಗಿ ನುಡಿದ.

ಕೃತ್ವೋಭೌ ಸುಚಿರಂ ಕಾಲಂ ಧರ್ಮಿಷ್ಠೌ ತಾಃ ಕಥಾಃ ಶುಭಾಃ ।
ಮುದಾ ಪರಮಯಾ ಯುಕ್ತೌ ಪ್ರೀಯೇತಾಂ ತೌ ಪರಸ್ಪರಮ್ ॥೧೧॥

ಧರ್ಮಿಷ್ಠರಾದ ಆ ಇಬ್ಬರೂ ಬಹು ಹೊತ್ತು ಬಹಳ ಸಂತೋಷದಿಂದ ಯುಕ್ತ-ರಾಗಿ ಪರಸ್ಪರ ಮಂಗಳಕರವಾದ ಸಂಭಾಷಣ ಮಾಡುತ್ತ ಆನಂದಿಸಿದರು.

ತತೋ ವಸಿಷ್ಠೋ ಭಗವಾನ್ಕಥಾಂತೇ ರಘುನಂದನ ।
ವಿಶ್ವಾಮಿತ್ರಮಿದಂ ವಾಕ್ಯಮುವಾಚ ಪ್ರಹಸನ್ನಿವ ॥ ೧೨ ॥

ಸಂಭಾಷಣ ಮುಗಿದಾಗ, ರಾಮ! ಭಗವಾನ್ ವಸಿಷ್ಠರು ನಗುತ್ತ ವಿಶ್ವಾಮಿತ್ರನಿಗೆ ಹೇಳಿದರು, ಈ ಮಾತನ್ನು.

ಆತಿಥ್ಯಂ ಕರ್ತುಮಿಚ್ಛಾಮಿ ಬಲಸ್ಯಾಸ್ಯ ಮಹಾಬಲ ।
ತವ ಚೈವಾಪ್ರಮೇಯಸ್ಯ ಯಥಾರ್ಹಂ ಸಂಪ್ರತೀಚ್ಛ ಮೇ ॥ ೧೩ ॥

ಮಹಾಬಲನೆ, ಅಪ್ರಮೇಯನಾದ ನಿನ್ನ ಈ ಸೈನ್ಯಕ್ಕೂ ಯಥಾ ಯೋಗ್ಯವಾದ ಆತಿಥ್ಯ ನೀಡಲು ನಾನು ಬಯಸುತ್ತೇನೆ. ನೀನು ಸ್ವೀಕರಿಸು.

ಸತ್ಕ್ರಿಯಾಂ ತು ಭವಾನೇತಾಂ ಪ್ರತೀಚ್ಛತು ಮಯೋದ್ಯತಾಮ್ ।
ರಾಜಾ ತ್ವಮತಿಥಿಶ್ರೇಷ್ಠಃ ಪೂಜನೀಯಃ ಪ್ರಯತ್ನತಃ ॥ ೧೪ ॥

ನಾನು ನೀಡುವ ಈ ಸತ್ಕಾರವನ್ನೂ ನೀನು ಸ್ವೀಕರಿಸು. ನೀನು ರಾಜ. ಅತಿಥಿಗಳಲ್ಲಿ ಶ್ರೇಷ್ಠ, ಪ್ರಯತ್ನದಿಂದ ಪೂಜ್ಯನಾಗಿರುವೆ ತಾನೆ?

ಏವಮುಕ್ತೋ ವಸಿಷ್ಠೇನ ವಿಶ್ವಾಮಿತ್ರೋ ಮಹಾಮತಿಃ ।
ಕೃತಮಿತ್ಯಬ್ರವೀದ್ರಾಜಾ ಪ್ರಿಯವಾಕ್ಯೇನ ಮೇ ತ್ವಯಾ ॥ ೧೫ ॥

ಹೀಗೆ ವಸಿಷ್ಠರು ಹೇಳಿದಾಗ ಮಹಾಮತಿ ರಾಜಾ ವಿಶ್ವಾಮಿತ್ರನು 'ನಿನ್ನಿಂದ ಪ್ರಿಯ ಸಂಭಾಷಣದಿಂದಲೇ ನನಗೆ ಸತ್ಕಾರ ಮಾಡಿದಂತಾಗಿದೆ' ಎಂದು ಹೇಳಿದ.

ಫಲಮೂಲೇನ ಭಗವನ್ವಿದ್ಯತೇ ಯತ್ತವಾಶ್ರಮೇ ।
ಪಾದ್ಯೇನಾಚಮನೀಯೇನ ಭಗವದ್ದರ್ಶನೇನ ಚ ॥ ೧೬ ॥

ಸರ್ವಥಾ ಚ ಮಹಾಪ್ರಾಜ್ಞ ಪೂಜಾರ್ಹೇಣ ಸುಪೂಜಿತಃ ।
ಗಮಿಷ್ಯಾಮಿ ನಮಸ್ತೇಸ್ತು ಮೈತ್ರೇಣೇಕ್ಷಸ್ವ ಚಕ್ಷುಷಾ ॥ ೧೭ ॥

ಹಣ್ಣುಗಡೆಗಳಿಂದಲೇ ಪೂಜ್ಯನೆ! ನಿನ್ನಾಶ್ರಮದಲ್ಲಿರುವ ವಸ್ತುವಿನಿಂದ, ಪಾದ್ಯದಿಂದ ಆಚಮನದಿಂದ ಪೂಜ್ಯನಾದ ನಿನ್ನ ದರ್ಶನದಿಂದ ನನಗೆ ಸತ್ಕಾರವಾಗಿ ಹೋಗಿದೆ. ಮಹಾಪ್ರಾಜ್ಞನೆ! ಪೂಜಾರ್ಹನಾದ ನಿನ್ನಿಂದ ನಾನು ಸರ್ವಥಾ ಬಹಳ ಪೂಜಿತನೇ ಆಗಿದ್ದೇನೆ. ಹೋಗುತ್ತೇನೆ, ನಿನಗಿದೋ ನಮಸ್ಕಾರ. ಮೈತ್ರಿಯಿಂದ ಯುಕ್ತವಾದ ಕಣ್ಣಿಂದ ನನ್ನನ್ನು ಈಕ್ಷಿಸು.

ಏವಂ ಬ್ರುವಂತಂ ರಾಜಾನಂ ವಸಿಷ್ಠಃ ಪುನರೇವ ಹಿ ।
ನ್ಯಮಂತ್ರಯತ ಧರ್ಮಾತ್ಮಾ ಪುನಃ ಪುನರುದಾರಧೀಃ ॥ ೧೮ ॥

ರಾಜನು ಹೀಗೆ ಹೇಳಿದರೂ ಅವನನ್ನು ಧರ್ಮಾತ್ಮ ಉದಾರ ಬುದ್ಧಿಯವರು ವಸಿಷ್ಠರು ಪುನಃ ಪುನಃ ಆತಿಥ್ಯಕ್ಕೆ ಆಮಂತ್ರಿಸಿದರು.

ಬಾಢಮಿತ್ಯೇವ ಗಾಧೇಯೋ ವಸಿಷ್ಠಂ ಪ್ರತ್ಯುವಾಚ ಹ ।
ಯಥಾ ಪ್ರಿಯಂ ಭಗವತಸ್ತಥಾಸ್ತು ಮುನಿಸತ್ತಮ ॥ ೧೯ ॥

'ಆಗಲಿ' ಎಂದೇ ಗಾಧಿಪುತ್ರ ವಿಶ್ವಾಮಿತ್ರನು ವಸಿಷ್ಠರಿಗೆ ಹೇಳಿದನು. 'ಮುನಿ-ಶ್ರೇಷ್ಠನೆ! ಪೂಜ್ಯನಾದ ನಿನಗೆ ಹೇಗೆ ಪ್ರಿಯವೆನಿಸುವುದೋ ಹಾಗೇ ಆಗಲಿ' ಎಂದ.

ಏವಮುಕ್ತೋ ಮಹಾತೇಜಾ ವಸಿಷ್ಠೋ ಜಪತಾಂ ವರಃ ।
ಆಜುಹಾವ ತತಃ ಪ್ರೀತಃ ಕಲ್ಮಾಷೀಂ ಧೂತಕಲ್ಮಷಃ ॥ ೨೦ ॥

ವಿಶ್ವಾಮಿತ್ರನು ಹೀಗೆ ಹೇಳಿದಾಗ ಜಪಿಸುವವರಲ್ಲಿ ಶ್ರೇಷ್ಠ, ಪಾಪರಹಿತ ಮಹಾತೇಜರಾದ ವಸಿಷ್ಠರು ಸುಪ್ರೀತರಾಗಿ ಚಿತ್ರವರ್ಣದ ಶಬಲಾ ಎಂಬ ಹೋಮ ಧೇನುವನ್ನು ಆಹ್ವಾನಿಸಿದರು.

ಏಹ್ಯೇಹಿ ಶಬಲೇ ಕ್ಷಿಪ್ರಂ ಶೃಣು ಚಾಪಿ ವಚೋ ಮಮ ।
ಸಬಲಸ್ಯಾಸ್ಯ ರಾಜರ್ಷೇಃ ಕರ್ತುಂ ವ್ಯವಸಿತೋಽಸ್ಮ್ಯಹಮ್ ।
ಭೋಜನೇನ ಮಹಾರ್ಹೇಣ ಸತ್ಕಾರಂ ಸಂವಿಧತ್ಸ್ವ ಮೇ ॥ ೨೧ ॥

'ಬಾ ಬಾ ಶಬಲೆಯೆ! ಬೇಗ ಬಾ, ನನ್ನ ಮಾತನ್ನು ಕೇಳು, ಈ ರಾಜರ್ಷಿಗೆ ಅವನ ಸೈನ್ಯದೊಂದಿಗೆ ಬಹುಮೂಲ್ಯವಾದ ಭೋಜನ ನೀಡಿ ಸತ್ಕಾರ ಮಾಡಲು ನಾನು ನಿಶ್ಚಯಿಸಿದ್ದೇನೆ. ಅದನ್ನು ನನಗೆ ಸಿದ್ಧ ಮಾಡಿಕೊಡು' ಎಂದರು.

ಯಸ್ಯ ಯಸ್ಯ ಯಥಾಕಾಮಂ ಷಡ್ರಸೇಷ್ವಭಿಪೂಜಿತಮ್ ।
ತತ್ಸರ್ವಂ ಕಾಮಧುಕ್ಕ್ಷಿಪ್ರಮಭಿವರ್ಷ ಕೃತೇ ಮಮ ॥ ೨೨ ॥

'ಯಾರ್ಯಾರಿಗೆ ಷಡ್ರಸಗಳಲ್ಲಿ ಯಾವುದು ಇಷ್ಟವೋ ಅವರ ಇಚ್ಛಾನುಸಾರ ಅದೆಲ್ಲವನ್ನೂ, ಹೇ ಕಾಮಧೇನುವೆ! ನನಗಾಗಿ ಬೇಗನೆ ಸಿದ್ಧ ಮಾಡಿ ಸುರಿಸು,' ಎಂದರು.

ರಸೇನಾನ್ನೇನ ಪಾನೇನ ಲೇಹ್ಯಚೋಷ್ಯೇಣ ಸಂಯುತಮ್ ।
ಅನ್ನಾನಾಂ ನಿಚಯಂ ಸರ್ವಂ ಸೃಜಸ್ವ ಶಬಲೇ ತ್ವರ ॥ ೨೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ದ್ವಿಪಂಚಾಶಃ ಸರ್ಗಃ ॥ ೫೨ ॥

ರಸಯುಕ್ತವಾದ ಅನ್ನಪಾನ ಲೇಹ್ಯ ಚೋಷ್ಯಗಳಿಂದ ಕೂಡಿದ ಅನ್ನಸಮೂಹ-ವೆಲ್ಲವನ್ನೂ, ಶಬಲೆಯೆ! ಸೃಜಿಸು, ತ್ವರೆ ಮಾಡು,' ಎಂದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಐವತ್ತೆರಡನೆ ಸರ್ಗ ಮುಗಿಯಿತು.

ತ್ರಿಪಂಚಾಶಃ ಸರ್ಗಃ

ಏವಮುಕ್ತಾ ವಸಿಷ್ಠೇನ ಶಬಲಾ ಶತ್ರುಸೂದನ ।
ವಿದಧೇ ಕಾಮಧುಕ್ಕಾಮಾನ್ಯಸ್ಯ ಯಸ್ಯ ಯಥೇಪ್ಸಿತಮ್ ॥ ೧ ॥

ಶತ್ರುನಾಶಕನಾದ ರಾಮನೆ! ವಸಿಷ್ಠರು ಹೀಗೆ ಹೇಳಿದೊಡನೆ ಕಾಮಧೇನುವಾದ ಶಬಲೆ ಗೋವು ಯಾರ್ಯಾರಿಗೆ ಯಾವುದು ಪ್ರಿಯವೋ ಆ ಎಲ್ಲ ಇಷ್ಟವಾದ ಅನ್ನವನ್ನು ಸೃಜಿಸಿದಳು.

ಇಕ್ಷೂನ್ಮಧೂಂಸ್ತಥಾ ಲಾಜಾನ್ಮೈರೇಯಾಂಶ್ಚ ವರಾಸವಾನ್ ।
ಪಾನಾನಿ ಚ ಮಹಾರ್ಹಾಣಿ ಭಕ್ಷ್ಯಾಂಶ್ಚೋಚ್ಚಾವಚಾಂಸ್ತಥಾ ॥ ೨ ॥

ಕಬ್ಬಿನ ರಸ ಜೇನು ಅರಳು ಮೈರೇಯವೆಂಬ ಮದ್ಯ ಶ್ರೇಷ್ಠ ಆಸವಗಳು ಬಹುಮೂಲ್ಯವಾದ ಪಾನೀಯಗಳು ದೊಡ್ಡ ಸಣ್ಣ ಭಕ್ಷ್ಯಗಳು ಸಿದ್ಧವಾದುವು.

ಉಷ್ಣಾಢ್ಯಸ್ಯೌದನಸ್ಯಾತ್ರ ರಾಶಯಃ ಪರ್ವತೋಪಮಾಃ ।
ಮೃಷ್ಟಾನ್ನಾನಿ ಚ ಸೂಪಾಶ್ಚ ದಧಿಕುಲ್ಯಾಸ್ತಥೈವ ಚ ॥ ೩ ॥

ಬೆಟ್ಟದಂಥ ಬಿಸಿ ಅನ್ನದ ರಾಶಿಗಳು, ಮೃಷ್ಟಾನ್ನ, ಸೂಪ, ಮೊಸರಿನ ಪ್ರವಾಹಗಳು ಸಿದ್ಧವಾದುವು.

ನಾನಾಸ್ವಾದುರಸಾನಾಂ ಚ ಷಾಡವಾನಾಂ ತಥೈವ ಚ ।
ಭಾಜನಾನಿ ಸುಪೂರ್ಣಾನಿ ಗೌಡಾನಿ ಚ ಸಹಸ್ರಶಃ ॥ ೪ ॥

ನಾನಾ ಸ್ವಾದುರಸಯುಕ್ತವಾದ ಷಾಡವ ಭಕ್ಷ್ಯಗಳು ಬೆಲ್ಲದ ಭಕ್ಷ್ಯಗಳು ಇವುಗಳಿಂದ ತುಂಬಿದ ಸಾವಿರಾರು ಪಾತ್ರೆಗಳು ಸಿದ್ಧವಾದುವು.

ಸರ್ವಮಾಸೀತ್ಸುಸಂತುಷ್ಟಂ ಹೃಷ್ಟಪುಷ್ಟಜನಾಯುತಮ್ ।
ವಿಶ್ವಾಮಿತ್ರಬಲಂ ರಾಮ ವಸಿಷ್ಠೇನಾಭಿತರ್ಪಿತಮ್ ॥ ೫ ॥

ರಾಮ! ವಿಶ್ವಾಮಿತ್ರನ ಎಲ್ಲ ಸೈನ್ಯವೂ ಬಲು ಸಂತುಷ್ಟವಾಯ್ತು. ಹೃಷ್ಟಪುಷ್ಟ ಜನರಿಂದ ಎಲ್ಲೆಡೆ ಯುಕ್ತವಾಯಿತು. ವಸಿಷ್ಠರಿಂದ ಸೈನ್ಯವು ಪೂರ್ಣತೃಪ್ತಿ ಹೊಂದಿತು.

ವಿಶ್ವಾಮಿತ್ರೋಽಪಿ ರಾಜರ್ಷಿರ್ಹೃಷ್ಟಃ ಪುಷ್ಟಸ್ತದಾಭವತ್ ।
ಸಾಂತಃಪುರವರೋ ರಾಜಾ ಸಬ್ರಾಹ್ಮಣಪುರೋಹಿತಃ ॥ ೬ ॥

ಸಾಮಾತ್ಯೋ ಮಂತ್ರಿಸಹಿತಃ ಸಭೃತ್ಯಃ ಪೂಜಿತಸ್ತದಾ ।
ಯುಕ್ತಃ ಪರಮಹರ್ಷೇಣ ವಸಿಷ್ಠಮಿದಮಬ್ರವೀತ್ ॥ ೭ ॥

ರಾಜರ್ಷಿ ವಿಶ್ವಾಮಿತ್ರನೂ ಹೃಷ್ಟನೂ ಪುಷ್ಟನೂ ಆದನು. ಅಂತಃಪುರದವರು, ಋತ್ವಿಜರು ಪುರೋಹಿತರು, ಎಲ್ಲ ಅಮಾತ್ಯರು ಮಂತ್ರಿಗಳು ಭೃತ್ಯರು ಇವರೆಲ್ಲ-ರೊಂದಿಗೆ ರಾಜಾ ವಿಶ್ವಾಮಿತ್ರನು ವಸಿಷ್ಠರಿಂದ ಸತ್ಕೃತನಾದನು. ಪರಮ ಹರ್ಷ-ಯುಕ್ತನಾದ ಆತ ವಸಿಷ್ಠರಿಗೆ ಹೇಳಿದನು.

ಪೂಜಿತೋಽಹಂ ತ್ವಯಾ ಬ್ರಹ್ಮನ್ಪೂಜಾರ್ಹೇಣ ಸುಸತ್ಕೃತಃ ।
ಶ್ರೂಯತಾಮಭಿಧಾಸ್ಯಾಮಿ ವಾಕ್ಯಂ ವಾಕ್ಯವಿಶಾರದ ॥
ಗವಾಂ ಶತಸಹಸ್ರೇಣ ದೀಯತಾಂ ಶಬಲಾ ಮಮ ॥ ೮ ॥

ಮುನಿಯೇ ಪೂಜಾರ್ಹನಾದ ನಿನ್ನಿಂದ ನಾನು ಪೂಜಿತನಾದೆ, ಚೆನ್ನಾಗಿ ಸತ್ಕೃತನಾದೆ. ಮಾತು ಬಲ್ಲ ಮುನಿಯೆ, ನಾನು ಒಂದು ಮಾತನ್ನು ಹೇಳುತ್ತೇನೆ, ಕೇಳು ಲಕ್ಷ ಗೋವುಗಳಿಗೆ ಬದಲಾಗಿ ನನಗೆ ಈ ಶಬಲಾ ಗೋವನ್ನು ನೀಡು.

ರತ್ನಂ ಹಿ ಭಗವನ್ನೇತದ್ರತ್ನಹಾರೀ ಚ ಪಾರ್ಥಿವಃ ।
ತಸ್ಮಾನ್ಮೇ ಶಬಲಾಂ ದೇಹಿ ಮಮೈಷಾ ಧರ್ಮತೋ ದ್ವಿಜ ॥ ೯ ॥

ಪೂಜ್ಯನೆ, ಇದು ಗೋರತ್ನ. ರಾಜ್ಯದಲ್ಲಿರುವ ಯಾವುದೇ ರತ್ನವು ರಾಜನಿಗೇ ಸೇರಬೇಕಾದುದು. ಅದರಿಂದ ನನಗೆ ಈ ಶಬಲೆ ಗೋವನ್ನು ನೀಡು. ಮುನಿಯೆ, ಇದು ನ್ಯಾಯವಾಗಿ ನನ್ನದು.

ಏವಮುಕ್ತಸ್ತು ಭಗವಾನ್ವಸಿಷ್ಠೋ ಮುನಿಸತ್ತಮಃ ।
ವಿಶ್ವಾಮಿತ್ರೇಣ ಧರ್ಮಾತ್ಮಾ ಪ್ರತ್ಯುವಾಚ ಮಹೀಪತಿಮ್ ॥ ೧೦ ॥

ವಿಶ್ವಾಮಿತ್ರನು ಹೀಗೆ ಹೇಳಿದಾಗ ಧರ್ಮಾತ್ಮ ಮುನಿಶ್ರೇಷ್ಠರಾದ ಭಗವಾನ್ ವಸಿಷ್ಠರು ರಾಜಾ ವಿಶ್ವಾಮಿತ್ರನಿಗೆ ಹೇಳಿದರು.

ನಾಹಂ ಶತಸಹಸ್ರೇಣ ನಾಪಿ ಕೋಟಿಶತೈರ್ಗವಾಮ್ ।
ರಾಜನ್ದಾಸ್ಯಾಮಿ ಶಬಲಾಂ ರಾಶಿಭೀ ರಜತಸ್ಯ ವಾ ॥ ೧೧ ॥

ರಾಜನೆ! ಲಕ್ಷ ಗೋವುಗಳಿಗೂ ಬದಲಾಗಿ ಶಬಲೆಯನ್ನು ನಾನು ನೀಡಲಾರೆ. ನೂರು ಕೋಟಿ ಗೋವುಗಳಿಗೂ ಬೆಳ್ಳಿಯ ರಾಶಿಗಳಿಗೂ ಬದಲಾಗಿ ಶಬಲೆಯನ್ನು ನೀಡಲಾರೆ.

ನ ಪರಿತ್ಯಾಗಮರ್ಹೇಯಂ ಮತ್ಸಕಾಶಾದರಿಂದಮ ।
ಶಾಶ್ವತೀ ಶಬಲಾ ಮಹ್ಯಂ ಕೀರ್ತಿರಾತ್ಮವತೋ ಯಥಾ ॥ ೧೨ ॥

ಶತ್ರುನಾಶಕನೆ! ನನ್ನಿಂದ ಪರಿತ್ಯಾಗಕ್ಕೆ ಇವಳು ಅರ್ಹಳಲ್ಲ. ಮನೋನಿಗ್ರಹ ಉಳ್ಳವನಿಗೆ ಕೀರ್ತಿ ಹೇಗೆ ಶಾಶ್ವತವೋ ಹಾಗೆ ನನಗೆ ಈ ಶಬಲೆ ಗೋವು ಶಾಶ್ವತವಾಗಿರುತ್ತದೆ.

ಅಸ್ಯಾಂ ಹವ್ಯಂ ಚ ಕವ್ಯಂ ಚ ಪ್ರಾಣಯಾತ್ರಾ ತಥೈವ ಚ ।
ಆಯತ್ತಮಗ್ನಿಹೋತ್ರಂ ಚ ಬಲಿಹೋರ್ಮಮಸ್ತಥೈವ ಚ ॥ ೧೩ ॥

ಸ್ವಾಹಾಕಾರವಷಟ್ಕಾರೌ ವಿದ್ಯಾಶ್ಚ ವಿವಿಧಾಸ್ತಥಾ ।
ಆಯತ್ತಮತ್ರ ರಾಜರ್ಷೇ ಸರ್ವಮೇತನ್ನ ಸಂಶಯಃ ॥ ೧೪ ॥

ನನಗೆ ಹವ್ಯಕವ್ಯ ಶರೀರಧಾರಣೆ ಅಗ್ನಿಹೋತ್ರ ಬಲಿ ಹೋಮ ಸ್ವಾಹಾಕಾರ ವಷಟ್‌ಕಾರ ವಿವಿಧ ವಿದ್ಯೆಗಳು ಇವು ಎಲ್ಲವೂ ಈ ಶಬಲೆ ಗೋವಿನ ಅಧೀನವೇ ಆಗಿವೆ. ರಾಜರ್ಷಿಯೆ ಇದರಲ್ಲಿ ಸಂಶಯವಿಲ್ಲ.

ಸರ್ವಸ್ವಮೇತತ್ಸತ್ಯೇನ ಮಮ ತುಷ್ಟಿಕರೀ ಸದಾ ।
ಕಾರಣೈರ್ಬಹುಭೀ ರಾಜನ್ನ ದಾಸ್ಯೇ ಶಬಲಾಂ ತವ ॥ ೧೫ ॥

ರಾಜನೆ! ಈ ಗೋವು ನನ್ನ ಸರ್ವಸ್ವ ನಿಜ ಹೇಳುತ್ತೇನೆ, ನನಗೆ ಸಂತೋಷವು ಇವಳಿಂದಲೆ. ಇವಳನ್ನು ನಾನು ನಿನಗೆ ಕೊಡಲಾರೆ. ನೀನೆಷ್ಟೇ ಕಾರಣಗಳನ್ನು ಹೇಳಿದರೂ ಪ್ರಯೋಜನವಿಲ್ಲ, ಅವು ವ್ಯರ್ಥವೆ.

ವಸಿಷ್ಠೇನೈವಮುಕ್ತಸ್ತು ವಿಶ್ವಾಮಿತ್ರೋಽಬ್ರವೀತ್ತತಃ ।
ಸಂರಬ್ಧತರಮತ್ಯರ್ಥಂ ವಾಕ್ಯಂ ವಾಕ್ಯವಿಶಾರದಃ ॥ ೧೬ ॥

ವಸಿಷ್ಠರು ಹೀಗೆ ಹೇಳಿದಾಗ ಮಾತುಬಲ್ಲ ವಿಶ್ವಾಮಿತ್ರನು ಇನ್ನೂ ಹೆಚ್ಚು ಆಗ್ರಹಪೂರ್ಣವಾದ ಮಾತನ್ನಾಡಿದ.

ಹೈರಣ್ಯಕಕ್ಷ್ಯಾಗ್ರೈವೇಯಾನ್ಸುವರ್ಣಾಂಕುಶಭೂಷಿತಾನ್ ।
ದದಾಮಿ ಕುಂಜರಾಣಾಂ ತೇ ಸಹಸ್ರಾಣಿ ಚತುರ್ದಶ ॥ ೧೭ ॥

ಬಂಗಾರದ ನಡುದಾರ ಕೊರಳಿನ ಹಾರಗಳಿಂದಲೂ ಬಂಗಾರದ ಅಂಕುಶಗಳಿಂದಲೂ ಭೂಷಿತವಾದ ಹದಿನಾಲ್ಕು ಸಾವಿರ ಆನೆಗಳನ್ನು ನೀಡುವೆನು.

ಹೈರಣ್ಯಾನಾಂ ರಥಾನಾಂ ತೇ ಶ್ವೇತಾಶ್ವಾನಾಂ ಚತುರ್ಯುಜಾಮ್ ।
ದದಾಮಿ ತೇ ಶತಾನ್ಯಷ್ಟೌ ಕಿಂಕಿಣೀಕವಿಭೂಷಿತಾನ್ ॥ ೧೮ ॥

ನಾಲ್ಕು ಬಿಳಿ ಕುದುರೆ ಕಟ್ಟಿದ ಕಿಂಕಿಣಿಗಳಿಂದ ಭೂಷಿತವಾದ ಎಂಟುನೂರು ಬಂಗಾರದ ರಥಗಳನ್ನು ನೀಡುವೆ.

ಹಯಾನಾಂ ದೇಶಜಾತಾನಾಂ ಕುಲಜಾನಾಂ ಮಹೌಜಸಾಮ್ ।
ಸಹಸ್ರಮೇಕಂ ದಶ ಚ ದದಾಮಿ ತವ ಸುವ್ರತ ॥ ೧೯ ॥

ಮಹಾಶಕ್ತಿ ಶಾಲಿಯಾದ ಒಳ್ಳೆಯ ದೇಶದಲ್ಲಿ ಕುಲದಲ್ಲಿ ಹುಟ್ಟಿದ ಒಂದು ಸಾವಿರದ ಮೇಲೆ ಹತ್ತು ಕುದುರೆಗಳನ್ನು ಮುನಿಯೆ! ನಿನಗೆ ನಾನು ಕೊಡುತ್ತೇನೆ.

ನಾನಾವರ್ಣವಿಭಕ್ತಾನಾಂ ವಯಃಸ್ಥಾನಾಂ ತಥೈವ ಚ ।
ದದಾಮ್ಯೇಕಾಂ ಗವಾಂ ಕೋಟಿಂ ಶಬಲಾ ದೀಯತಾಂ ಮಮ॥ ೨೦ ॥

ನಾನಾ ವರ್ಣಗಳ ನಡುವಯಸ್ಸಿನಲ್ಲಿರುವ ಒಂದು ಕೋಟಿ ಹಸುಗಳನ್ನು ನೀಡುವೆನು ಒಂದು ಶಬಲಾ ಗೋವನ್ನು ನನಗೆ ನೀಡು.

ಯಾವದಿಚ್ಛಸಿ ರತ್ನಂ ವಾ ಹಿರಣ್ಯಂ ವಾ ದ್ವಿಜೋತ್ತಮ ।
ತಾವದ್ದದಾಮಿ ತತ್ಸರ್ವಂ ಶಬಲಾ ದೀಯತಾಂ ಮಮ ॥ ೨೧ ॥

ಮುನಿಶ್ರೇಷ್ಠನೆ, ರತ್ನವನ್ನಾಗಲಿ ಬಂಗಾರವನ್ನಾಗಲಿ ಎಷ್ಟು ಬೇಕೆನ್ನುವಿಯೋ ಅದೆಲ್ಲವನ್ನೂ ನಿನಗೆ ನೀಡುವೆನು ಶಬಲಾ ಗೋವನ್ನು ನನಗೆ ನೀಡು.

ಏವಮುಕ್ತಸ್ತು ಭಗವಾನ್ವಿಶ್ವಾಮಿತ್ರೇಣ ಧೀಮತಾ ।
ನ ದಾಸ್ಯಾಮೀತಿ ಶಬಲಾಂ ಪ್ರಾಹ ರಾಜನ್ಕಥಂಚನ ॥ ೨೨ ॥

ಧೀಮಂತನಾದ ವಿಶ್ವಾಮಿತ್ರನು ಹೀಗೆ ಹೇಳಿದರೂ, ರಾಜನೆ! ಶಬಲಾ ಗೋವನ್ನು ಯಾವ ಕಾರಣಕ್ಕೂ ನಾನು ಕೊಡಲಾರೆ ಎಂದರು ಭಗವಾನ್ ವಸಿಷ್ಠರು.

ಏತದೇವ ಹಿ ಮೇ ರತ್ನಮೇತದೇವ ಹಿ ಮೇ ಧನಮ್ ।
ಏತದೇವ ಹಿ ಸರ್ವಸ್ವಮೇತದೇವ ಹಿ ಜೀವಿತಮ್ ॥ ೨೩ ॥

ಇದೇ ನನಗೆ ರತ್ನ, ಇದೇ ನನಗೆ ಧನ ಇದೇ ನನಗೆ ಸರ್ವಸ್ವ, ಇದೇ ನನ್ನ ಪ್ರಾಣ.

ದರ್ಶಶ್ಚ ಪೂರ್ಣಮಾಸಶ್ಚ ಯಜ್ಞಾಶ್ಚೈವಾಪ್ತದಕ್ಷಿಣಾಃ ।
ಏತದೇವ ಹಿ ಮೇ ರಾಜನ್ವಿವಿಧಾಶ್ಚ ಕ್ರಿಯಾಸ್ತಥಾ ॥ ೨೪ ॥

ದರ್ಶ, ಪೂರ್ಣಮಾಸ, ದಕ್ಷಿಣಾಯುಕ್ತವಾದ ಯಜ್ಞಗಳು, ನಾನಾ ವಿಧವಾದ ಎಲ್ಲ ಸತ್ಕರ್ಮಗಳೆಲ್ಲಕ್ಕೂ, ರಾಜನೇ! ಈ ಹಸುವೇ ನನಗೆ ಆಶ್ರಯ.

ಅದೋಮೂಲಾಃ ಕ್ರಿಯಾಃ ಸರ್ವಾ ಮಮ ರಾಜನ್ನ ಸಂಶಯಃ ।
ಬಹುನಾ ಕಿಂ ಪ್ರಲಾಪೇನ ನ ದಾಸ್ಯೇ ಕಾಮದೋಹಿನೀಮ್ ॥ ೨೫ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ತ್ರಿಪಂಚಾಶಃ ಸರ್ಗಃ ॥ ೫೩ ॥

ರಾಜನೆ, ನನ್ನ ಎಲ್ಲ ಸಾಧನೆಗಳಿಗೂ ಈ ಒಂದು ಹಸುವೇ ಮೂಲ. ಇದರಲ್ಲಿ ಸಂಶಯವಿಲ್ಲ. ಹೆಚ್ಚೇನು ಹೇಳಲಿ? ನಾನು ಕೊಡಲಾರೆ, ಕಾಮಧೇನುವನ್ನು!

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಐವತ್ತಮೂರನೆ ಸರ್ಗ ಮುಗಿಯಿತು.

ಚತುಃಪಂಚಾಶಃ ಸರ್ಗಃ

ಕಾಮಧೇನುಂ ವಸಿಷ್ಠೋಽಪಿ ಯದಾ ನ ತ್ಯಜತೇ ಮುನಿಃ ।
ತದಾಸ್ಯ ಶಬಲಾಂ ರಾಮ ವಿಶ್ವಾಮಿತ್ರೋಽನ್ವಕರ್ಷತ ॥ ೧ ॥

ಕಾಮದೇನುವನ್ನು ವಸಿಷ್ಠಮುನಿ ಬಿಟ್ಟುಕೊಡಲು ಒಪ್ಪದಿದ್ದಾಗ, ರಾಮ! ವಿಶ್ವಾಮಿತ್ರನು ತಾನೇ ಆ ಶಬಲೆ ಗೋವನ್ನು ಸೆಳೆದೊಯ್ಯಲು ತೊಡಗಿದ.

ನೀಯಮಾನಾ ತು ಶಬಲಾ ರಾಮ ರಾಜ್ಞಾ ಮಹಾತ್ಮನಾ ।
ದುಃಖಿತಾ ಚಿಂತಯಾಮಾಸ ರುದಂತೀ ಶೋಕಕರ್ಶಿತಾ ॥ ೨ ॥

ರಾಮ! ಮಹಾತ್ಮ ವಿಶ್ವಾಮಿತ್ರನು ಶಬಲೆಯನ್ನು ಒಯ್ಯಲು ತೊಡಗಿದಾಗ ಅವಳು ಶೋಕಪೀಡಿತಳಾಗಿ ಕಣ್ಣೀರಿಡುತ್ತ ದುಃಖದಿಂದ ಚಿಂತಿಸಿದಳು.

ಪರಿತ್ಯಕ್ತಾ ವಸಿಷ್ಠೇನ ಕಿಮಹಂ ಸುಮಹಾತ್ಮನಾ ।
ಯಾಽಹಂ ರಾಜಭಟೈರ್ದೀನಾ ಹ್ರಿಯೇಯಂ ಭೃಶದುಃಖಿತಾ ॥ ೩ ॥

ಬಲು ದುಃಖಿತಳಾಗಿ ದೀನಳಾಗಿರುವ ನನ್ನನ್ನು ರಾಜಭಟರು ಒಯ್ಯುತಾರೆ ಎಂದರೆ ಏನರ್ಥ? ಮಹಾತ್ಮರಾದ ವಸಿಷ್ಠರು ನನ್ನನ್ನು ಪರಿತ್ಯಾಗ ಮಾಡಿದರೆ?

ಕಿಂ ಮಯಾಽಪಕೃತಂ ತಸ್ಯ ಮಹರ್ಷೇರ್ಭಾವಿತಾತ್ಮನಃ ।
ಯನ್ಮಾಮನಾಗಸಂ ಭಕ್ತಾಮಿಷ್ಟಾಂ ತ್ಯಜತಿ ಧಾರ್ಮಿಕಃ ॥ ೪ ॥

ಆತ್ಮಬಳ ಉಳ್ಳ ಮಹರ್ಷಿಗೆ ನಾನೇನು ಅಪಕಾರ ಮಾಡಿದ್ದೇನೆ? ಧಾರ್ಮಿಕರಾದ ವಸಿಷ್ಠರು ಏನೂ ಅಪರಾಧ ಮಾಡದಿರುವ ಭಕ್ತಳಾದ ಇಷ್ಟಳೂ ಆದ ನನ್ನನ್ನೇಕೆ ಪರಿತ್ಯಜಿಸುತ್ತಾರೆ?

ಇತಿ ಸಾ ಚಿಂತಯಿತ್ವಾ ತು ವಿನಿಃಶ್ವಸ್ಯ ಪುನಃ ಪುನಃ ।
ನಿರ್ಧೂಯ ತಾಂಸ್ತದಾ ಭೃತ್ಯಾಂಶತಶಃ ಶತ್ರುಸೂದನ ॥
ಜಗಾಮಾನಿಲವೇಗೇನ ಪಾದಮೂಲಂ ಮಹಾತ್ಮನಃ ॥ ೫ ॥

ಹೀಗೆ ಚಿಂತಿಸುತ್ತ ಪುನಃ ಪುನಃ ನಿಟ್ಟುಸಿರಿಟ್ಟು, ಶತ್ರುನಾಶಕ ರಾಮನೆ! ಆ ಶಬಲೆ ಹಸು ಆ ನೂರಾರು ರಾಜಭೃತ್ಯರನ್ನು ನಾಶಗೈದು ವಾಯುವೇಗದಿಂದ ಮಹಾತ್ಮ ವಸಿಷ್ಠರ ಪಾದಮೂಲಕ್ಕೆ ಧಾವಿಸಿದಳು.

ಶಬಲಾ ಸಾ ರುದಂತೀ ಚ ಕ್ರೋಶಂತೀ ಚೇದಮಬ್ರವೀತ್ ।
ವಸಿಷ್ಠಸ್ಯಾಗ್ರತಃ ಸ್ಥಿತ್ವಾ ಮೇಘದುಂದುಭಿರಾವಿಣೀ ॥ ೬ ॥

ಶಬಲೆ ಹಸು ಕಣ್ಣೀರಿಡುತ್ತ ದುಃಖದಿಂದ ಕೂಗುತ್ತ ವಸಿಷ್ಠರ ಮುಂದೆ ನಿಂತು ಗುಡುಗಿನಂತೆ ನಗಾರಿಯಂತೆ ಗಂಭೀರಧ್ವನಿಯಿಂದ ನುಡಿದಳು.

ಭಗವನ್ಕಿಂ ಪರಿತ್ಯಕ್ತಾ ತ್ವಯಾಽಹಂ ಬ್ರಹ್ಮಣಃ ಸುತ ।
ಯಸ್ಮಾದ್ರಾಜಭೃತಾ ಮಾಂ ಹಿ ನಯಂತೇ ತ್ವತ್ಸಕಾಶತಃ ॥ ೭ ॥

ಪೂಜ್ಯ ಬ್ರಹ್ಮಪುತ್ರರೇ! ನೀವು ನನ್ನನ್ನು ಪರಿತ್ಯಜಿಸಿದಿರೇನು? ರಾಜಭಟರು ನನ್ನನ್ನು ನಿಮ್ಮಿಂದ ಆಚೆಗೆ ಏಕೆ ಸೆಳೆದೊಯ್ಯುತ್ತಿದ್ದಾರೆ?

ಏವಮುಕ್ತಸ್ತು ಬ್ರಹ್ಮರ್ಷಿರಿದಂ ವಚನಮಬ್ರವೀತ್ ।
ಶೋಕಸಂತಪ್ತಹೃದಯಾಂ ಸ್ವಸಾರಮಿವ ದುಃಖಿತಾಮ್ ॥ ೮ ॥

ಹಸು ಹೀಗೆ ಹೇಳಿದಾಗ ಬ್ರಹ್ಮರ್ಷಿ ವಸಿಷ್ಠರು, ಶೋಕದಿಂದ ಬೆಂದ ಹೃದಯ-ದವಳಾದ ದುಃಖಿತಳಾದ ತಂಗಿಯಂತಿರುವ ಹಸುವಿಗೆ ಹೇಳಿದರು.

ನ ತ್ವಾಂ ತ್ಯಜಾಮಿ ಶಬಲೇ ನಾಪಿ ಮೇಽಪಕೃತಂ ತ್ವಯಾ ।
ಏಷ ತ್ವಾಂ ನಯತೇ ರಾಜಾ ಬಲಾನ್ಮತ್ತೋ ಮಹಾಬಲಃ ॥ ೯ ॥

ಶಬಲೆ, ನಾನು ನಿನ್ನನ್ನು ಪರಿತ್ಯಾಗ ಮಾಡುತ್ತಿಲ್ಲ. ನೀನೂ ನನಗೇನೂ ಅಪಕಾರ ಗೈದಿಲ್ಲ. ಮಹಾಬಲನಾದ ರಾಜ ಬಲಾತ್ಕಾರದಿಂದ ನಿನ್ನನ್ನು ನನ್ನಿಂದ ಆಚೆಗೆ ಒಯ್ಯುತ್ತಿದ್ದಾನೆ.

ನ ಹಿ ತುಲ್ಯಂ ಬಲಂ ಮಹ್ಯಂ ರಾಜಾ ತ್ವದ್ಯ ವಿಶೇಷತಃ ।
ಬಲೀ ರಾಜಾ ಕ್ಷತ್ರಿಯಶ್ಚ ಪೃಥಿವ್ಯಾಃ ಪತಿರೇವ ಚ ॥ ೧೦ ॥

ನನ್ನ ಬಲ ಅವನ ಬಲಕ್ಕೆ ಸಮವಲ್ಲ. ಇಂದು ನನಗೆ ಆತ ಅತಿಥಿಯಾದ್ದರಿಂದ ಅವನನ್ನು ನಾನು ಶಾಪದಿಂದ ಸಾಯಿಸುವುದೂ ಯುಕ್ತವಲ್ಲ ಮತ್ತು ರಾಜನು ಸೈನ್ಯಬಲ ಉಳ್ಳವನು. ಯುದ್ಧದಲ್ಲಿ ಅವನನ್ನು ನಾವು ಗೆಲ್ಲಲಾರೆವು. ಅವನು ರಾಜನಾದ ಕ್ಷತ್ರಿಯನೆಂದಮೇಲೆ ಅವನನ್ನು ವದಿಸುವುದು ಮಹಾ ಪಾತಕವೂ ಆಗುವುದು.

ಗೋಬ್ರಾಹ್ಮಣರನ್ನು ಕಾಪಾಡಬೇಕಾಗಿರುವ ರಾಜನು ಅವರನ್ನು ಪೀಡಿಸು-ತ್ತಿದ್ದಾನೆ. ಇದು ಅವನ ಪ್ರಾರಬ್ಧ.

ಇಯಮಕ್ಷೌಹಿಣೀ ಪೂರ್ಣಾ ಸವಾಜಿರಥಸಂಕುಲಾ ।
ಹಸ್ತಿಧ್ವಜಸಮಾಕೀರ್ಣಾ ತೇನಾಸೌ ಬಲವತ್ತರಃ ॥ ೧೧ ॥

ಇವನ ಅಕ್ಷೌಹಿಣೀ ಸೈನ್ಯವು ಅಶ್ವರಥಗಳಿಂದ ತುಂಬಿದೆ. ಆನೆಗಳ ಮೇಲೆ ಹಾರಾಡುವ ಧ್ವಜಗಳಿಂದಲೂ ತುಂಬಿದೆ. ಪೂರ್ಣವಾದ ಸೈನ್ಯ ಇಲ್ಲಿ ಇರುವಾಗ ರಾಜಾ ವಿಶ್ವಾಮಿತ್ರನು ಅಧಿಕ ಬಲವುಳ್ಳವನೆ ಸರಿ.

ಏವಮುಕ್ತಾ ವಸಿಷ್ಠೇನ ಪ್ರತ್ಯುವಾಚ ವಿನೀತವತ್ ।
ವಚನಂ ವಚನಜ್ಞಾ ಸಾ ಬ್ರಹ್ಮರ್ಷಿಮತುಲಪ್ರಭಮ್ ॥ ೧೨ ॥

ವಸಿಷ್ಠರು ಹೀಗೆ ಹೇಳಿದಾಗ ಅತುಲ ತೇಜನಾದ ಆ ಬ್ರಹ್ಮರ್ಷಿಯ ಮುಂದೆ ಮಾತು ಬಲ್ಲವಳಾದ ಶಬಲೆ ವಿನಯದಿಂದ ಹೀಗೆ ನುಡಿದಳು.

ನ ಬಲಂ ಕ್ಷತ್ರಿಯಸ್ಯಾಹುರ್ಬ್ರಾಹ್ಮಣೋ ಬಲವತ್ತರಃ ।
ಬ್ರಹ್ಮನ್ಬ್ರಹ್ಮಬಲಂ ದಿವ್ಯಂ ಕ್ಷತ್ರಾತ್ತು ಬಲವತ್ತರಮ್ ॥ ೧೩ ॥

ಕ್ಷತ್ರಿಯನಿಗೇ ಬಲವೆಂದು ಬಲ್ಲವರು ಹೇಳುವುದಿಲ್ಲ. ಬ್ರಾಹ್ಮಣನಿಗೇ ಹೆಚ್ಚು ಬಲ. ಮುನಿಯೆ! ಬ್ರಾಹ್ಮಣನದು ದಿವ್ಯಬಲವಾದ್ದರಿಂದ ಕ್ಷತ್ರಿಯನಿಗಿಂತ ಹೆಚ್ಚೇ ಬ್ರಾಹ್ಮಣನ ಬಲ.

ಅಪ್ರಮೇಯಬಲಂ ತುಭ್ಯಂ ನ ತ್ವಯಾ ಬಲವತ್ತರಃ ।
ವಿಶ್ವಾಮಿತ್ರೋ ಮಹಾವೀರ್ಯಸ್ತೇಜಸ್ತವ ದುರಾಸದಮ್ ॥ ೧೪ ॥

ನಿಮ್ಮ ಬಲ ಅಪರಿಮಿತ. ನಿಮಗಿಂತ ಹೆಚ್ಚು ಬಲ ಯಾರಿಗೂ ಇಲ್ಲ. ವಿಶ್ವಾಮಿತ್ರ ಮಹಾಬಲನಾಗಿರಬಹುದು. ಆದರೂ ನಿಮ್ಮ ಬಲ ಯಾರಿಗೂ ಸಹಿಸಲಸಾಧ್ಯ.

ನಿಯುಂಕ್ಷ್ವ ಮಾಂ ಮಹಾತೇಜಸ್ತ್ವದ್ಬ್ರಹ್ಮಬಲಸಂಭೃತಾಮ್ ।
ತಸ್ಯ ದರ್ಪಬಲಂ ಯತ್ತನ್ನಾಶಯಾಮಿ ದುರಾತ್ಮನಃ ॥ ೧೫ ॥

ಅದರಿಂದ, ಮಹಾತೇಜ! ನಿಮ್ಮ ಬ್ರಹ್ಮಬಲದಿಂದ ಪುಷ್ಟಳಾಗಿರುವ ನನಗೆ ಆದೇಶ ನೀಡಿರಿ. ದುರಾತ್ಮ ವಿಶ್ವಾಮಿತ್ರನ ದರ್ಪವನ್ನೂ ಬಲವನ್ನೂ ನಾನು ನಾಶ ಮಾಡುವೆನು.

ಇತ್ಯುಕ್ತಸ್ತು ತಯಾ ರಾಮ ವಸಿಷ್ಠಸ್ತು ಮಹಾಯಶಾಃ ।
ಸೃಜಸ್ವೇತಿ ತದೋವಾಚ ಬಲಂ ಪರಬಲಾರುಜಮ್ ॥
ತಸ್ಯ ತದ್ವಚನಂ ಶ್ರುತ್ವಾ ಸುರಭಿಃ ಸಾಽಸೃಜತ್ತದಾ ॥ ೧೬ ॥

ಕಾಮಧೇನು ಹೀಗೆ ಹೇಳಿದಾಗ, ರಾಮ! ಮಹಾಯಶರಾದ ವಸಿಷ್ಠರು ಹೇಳಿದರು, 'ಶತ್ರುಸೈನ್ಯವನ್ನು ನಾಶ ಪಡಿಸಬಲ್ಲ ಸೈನ್ಯವನ್ನು ನೀನು ಸೃಜಿಸು' ಎಂದು. ಅವರ ಮಾತನ್ನು ಕೇಳಿ ಕಾಮಧೇನು ಸೈನ್ಯವನ್ನು ಸೃಜಿಸಿದಳು.

ತಸ್ಯಾ ಹುಂಭಾರವೋತ್ಸೃಷ್ಟಾಃ ಪಹ್ಲವಾಃ ಶತಶೋ ನೃಪ ।
ನಾಶಯಂತಿ ಬಲಂ ಸರ್ವಂ ವಿಶ್ವಾಮಿತ್ರಸ್ಯ ಪಶ್ಯತಃ ॥ ೧೭ ॥

ಕಾಮಧೇನುವಿನ ಹುಂಭಾ ಧ್ವನಿಗೆ, ರಾಜನೆ, ನೂರಾರು ಮ್ಲೇಚ್ಛಜಾತಿಯ ಸೈನ್ಯಗಳು ಉದ್ಭವಿಸಿ ವಿಶ್ವಾಮಿತ್ರನು ನೋಡುತ್ತಿದ್ದಂತೇ ಅವನ ಎಲ್ಲ ಸೈನ್ಯಗಳನ್ನೂ ನಾಶ ಪಡಿಸಿದುವು.

ಬಲಂ ಭಗ್ನಂ ತತೋ ದೃಷ್ಟ್ವಾ ರಥೇನಾಕ್ರಮ್ಯ ಕೌಶಿಕಃ ।
ಸ ರಾಜಾ ಪರಮಕ್ರುದ್ಧಃ ಕ್ರೋಧವಿಸ್ಫಾರಿತೇಕ್ಷಣಃ ॥
ಪಹ್ಲವಾನ್ನಾಶಯಾಮಾಸ ಶಸ್ತ್ರೈರುಚ್ಚಾವಚೈರಪಿ ॥ ೧೮ ॥

ತನ್ನ ಸೈನ್ಯ ನಾಶವಾದುದನ್ನು ಕಂಡು ವಿಶ್ವಾಮಿತ್ರನು ತಾನೇ ರಥವನ್ನೇರಿ ಪರಮ ಕ್ರೋಧದಿಂದ ಕಣ್ಣಿಂದ ಕಿಡಿ ಹಾರಿಸುತ್ತ ಆ ಪಲ್ಲವ ಸೈನ್ಯವನ್ನು ದೊಡ್ಡ ಸಣ್ಣ ಶಸ್ತ್ರಗಳಿಂದ ನಾಶ ಪಡಿಸಿದ.

ವಿಶ್ವಾಮಿತ್ರಾರ್ದಿತಾಂ ದೃಷ್ಟ್ವಾ ಪಹ್ಲವಾಂ ಶತಶಸ್ತದಾ ।
ಭೂಯ ಏವಾಸೃಜತ್ಕೋಪಾಚ್ಛಕಾನ್ ಯ ವನಮಿಶ್ರಿತಾನ್ ॥ ೧೯ ॥

ಪಲ್ಲವ ಸೈನ್ಯವು ವಿಶ್ವಾಮಿತ್ರನಿಂದ ನಾಶವಾದುದನ್ನು ಕಂಡು ಕಾಮಧೇನು ಪುನಃ ಕೋಪದಿಂದ ಶಕರ ಮತ್ತು ಯವನರ ಸೈನ್ಯವನ್ನು ಸೃಜಿಸಿದಳು.

ತೈರಾಸೀತ್ಸಂವೃತಾ ಭೂಮಿಃ ಶಕೈರ್ಯವನಮಿಶ್ರಿತೈಃ ।
ಪ್ರಭಾವದ್ಭಿರ್ಮಹಾವೀರ್ಯೈರ್ಹೇಮಕಿಂಜಲ್ಕಸನ್ನಿಭೈಃ ॥ ೨೦ ॥

ಈ ಶಕ–ಯವನ ಮಿಶ್ರಿತ ಸೈನ್ಯಗಳು ಮಹಾಶಕ್ತಿಶಾಲಿಗಳಾಗಿದ್ದು ಸಂಪಿಗೆ ಬಣ್ಣದ ಪ್ರಭೆಯಿಂದ ಹೊಳೆಯುತ್ತ ಭೂಮಿಯನ್ನು ಎಲ್ಲೆಡೆ ಆವರಿಸಿದವು.

ದೀರ್ಘಾಸಿಪಟ್ಟಿಶಧರೈರ್ಹೇಮವರ್ಣಾಂಬರಾವೃತೈಃ ।
ನಿರ್ದಗ್ಧಂ ತದ್ಬಲಂ ಸರ್ವಂ ಪ್ರದೀಪ್ತೈರಿವ ಪಾವಕೈಃ ॥ ೨೧ ॥

ದೀರ್ಘವಾದ ಖಡ್ಗ ಪಟ್ಟಿಶಗಳನ್ನು ಹಿಡಿದ, ಪೀತಾಂಬರ ಉಟ್ಟಿದ್ದ, ಜ್ವಲಿಸುವ ಬೆಂಕಿಯಂತೆ ಕಾಣುತ್ತಿದ್ದ ಆ ಸೈನ್ಯಗಳು ವಿಶ್ವಾಮಿತ್ರನ ಎಲ್ಲ ಸೈನ್ಯವನ್ನೂ ನಾಶ ಗೊಳಿಸಿದುವು.

ತತೋಽಸ್ತ್ರಾಣಿ ಮಹಾತೇಜಾ ವಿಶ್ವಾಮಿತ್ರೋ ಮುಮೋಚ ಹ ।
ತೈಸ್ತೇ ಯವನಕಾಂಭೋಜಾಃ ಪಹ್ಲವಾಶ್ಚಾಕುಲೀಕೃತಾಃ ॥ ೨೨ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಚತುಃಪಂಚಾಶಃ ಸರ್ಗಃ ॥ ೫೪ ॥

ಆಗ ಮಹಾತೇಜನಾದ ರಾಜಾ ವಿಶ್ವಾಮಿತ್ರನು ಮಂತ್ರಪೂರ್ವಕ ಅಸ್ತ್ರಗಳನ್ನು ಪ್ರಯೋಗಿಸಿದ. ಅದರಿಂದ ಕಾಮಧೇನು ಸೃಜಿಸಿದ್ದ ಯವನ ಕಾಂಭೋಜ ಪಲ್ಲವ ಸೈನ್ಯವೆಲ್ಲವೂ ನಾಶ ಹೊಂದಿದುವು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಐವತ್ತ ನಾಲ್ಕನೆ ಸರ್ಗ ಮುಗಿಯಿತು.

ಪಂಚಪಂಚಾಶಃ ಸರ್ಗಃ

ತತಸ್ತಾನಾಕುಲಾನ್ ದೃಷ್ಟ್ವಾ ವಿಶ್ವಾಮಿತ್ರಾಸ್ತ್ರಮೋಹಿತಾನ್ ।
ವಸಿಷ್ಠಶ್ಚೋದಯಾಮಾಸ ಕಾಮಧುಕ್‌ಸೃಜ ಯೋಗತಃ ॥ ೧ ॥

ವಿಶ್ವಾಮಿತ್ರನ ಅಸ್ತ್ರದಿಂದ ಶಬಲೆ ಸೃಜಿಸಿದ ಸೈನ್ಯವು ಮೋಹಪರವಶವಾಗಿ ನಾಶ ಹೊಂದಿದ್ದನ್ನು ಕಂಡು ವಸಿಷ್ಠರು ಶಬಲೆಗೆ ಪುನಃ ಆದೇಶಿಸಿದರು, ಹೇ ಕಾಮಧೇನುವೇ ಯೋಗಬಲದಿಂದ ಬೇರೆ ಸೈನ್ಯಗಳನ್ನು ಸೃಜಿಸು ಎಂದು.

ಕಾಮಧೇನು ಮುಂತಾದವರು ಕರ್ಮಜ ದೇವತೆಗಳಾಗಿರುವುದರಿಂದ ಅವರಿಗೆ ಹುಟ್ಟಿನಿಂದಲೇ ಯೋಗಬಲವಿದೆ. ಅದರಿಂದ ಯೋಗಬಲದಿಂದ ಸೈನ್ಯವನ್ನು ಸೃಜಿಸಲು ವಸಿಷ್ಠರು ಆದೇಶಿಸುತ್ತಾರೆ.

ತಸ್ಯಾ ಹುಂಭಾರವಾಜ್ಜಾತಾಃ ಕಾಂಭೋಜಾ ರವಿಸನ್ನಿಭಾಃ ।
ಊಧಸಸ್ತ್ವಥ ಸಂಜಾತಾಃ ಪಹ್ಲವಾಃ ಶಸ್ತ್ರಪಾಣಯಃ ॥ ೨ ॥

ಕಾಮಧೇನುವಿನ ಹುಂಭಾ ಧ್ವನಿಯಿಂದಲೇ ಯೋಗಬಲದಿಂದ ಸೂರ್ಯನಂತೆ ಬೆಳಗುವ ಕಾಂಭೋಜರೆಂಬ ಸೈನಿಕರು ಜನಿಸಿದರು. ಸ್ತನಗಳಿಂದ ಶಸ್ತ್ರಪಾಣಿಗಳಾದ ಪಹ್ಲವರೆಂಬ ಯೋಧರು ಜನಿಸಿದರು.

ಯೋನಿದೇಶಾಚ್ಚ ಯವನಾಃ ಶಕೃದ್ದೇಶಾಚ್ಛಕಾಸ್ತಥಾ ।
ರೋಮಕೂಪೇಷು ಚ ಮ್ಲೇಚ್ಛಾ ಹಾರೀತಾಃ ಸಕಿರಾತಕಾಃ ॥ ೩ ॥

ಯೋನಿಪ್ರದೇಶದಿಂದ ಯವನರು ಸೆಗಣಿ ಪ್ರದೇಶದಿಂದ ಶಕರು, ರೋಮ-ಕೂಪಗಳಿಂದ ಮ್ಲೇಚ್ಛರು ಹಾರೀತರು ಕಿರಾತಕರು ಜನಿಸಿದರು.

ತೈಸ್ತೈರ್ನಿಷೂದಿತಂ ಸರ್ವಂ ವಿಶ್ವಾಮಿತ್ರಸ್ಯ ತತ್ಕ್ಷಣಾತ್ ।
ಸಪದಾತಿಗಜಂ ಸಾಶ್ವಂ ಸರಥಂ ರಘುನಂದನ ॥ ೪ ॥

ರಾಮ! ಇವರೆಲ್ಲರೂ ವಿಶ್ವಾಮಿತ್ರನ ಗಜ ಅಶ್ವರಥ ಪದಾತಿ ಎಂದು ಚತುರಂಗ ಬಲವನ್ನೇ ನಾಶ ಮಾಡಿದರು.

ದೃಷ್ಟ್ವಾ ನಿಷೂದಿತಂ ಸೈನ್ಯಂ ವಸಿಷ್ಠೇನ ಮಹಾತ್ಮನಾ ।
ವಿಶ್ವಾಮಿತ್ರಸುತಾನಾಂ ತು ಶತಂ ನಾನಾವಿಧಾಯುಧಮ್ ॥ ೫ ॥

ಅಭ್ಯಧಾವತ್ಸುಸಂಕ್ರುದ್ಧಂ ವಸಿಷ್ಠಂ ಜಪತಾಂ ವರಮ್ ।
ಹುಂಕಾರೇಣೈವ ತಾನ್ಸರ್ವಾನ್‌ದದಾಹ ಭಗವಾನೃಷಿಃ ॥ ೬ ॥

ಮಹಾತ್ಮ ವಸಿಷ್ಠರು ಹೀಗೆ ವಿಶ್ವಾಮಿತ್ರನ ಎಲ್ಲ ಸೈನ್ಯವನ್ನೂ ನಾಶ ಪಡಿಸಿದಾಗ ಅದನ್ನು ಕಂಡು ವಿಶ್ವಾಮಿತ್ರನ ನೂರು ಮಂದಿ ಪುತ್ರರು ಕೋಪದಿಂದ ನಾನಾ-ವಿಧವಾದ ಆಯುಧವನ್ನು ಹಿಡಿದು ಜಪಿಸುವವರಲ್ಲಿ ಶ್ರೇಷ್ಠರಾದ ವಸಿಷ್ಠರ ಮೇಲೆ ಆಕ್ರಮಣ ಮಾಡಿದರು. ಭಗವಾನ್ ವಸಿಷ್ಠರು ಹುಂಕಾರದಿಂದಲೆ ಅವರೆಲ್ಲರನ್ನೂ ಸುಟ್ಟುಬಿಟ್ಟರು.

ತೇ ಸಾಶ್ವರಥಪಾದಾತಾ ವಸಿಷ್ಠೇನ ಮಹಾತ್ಮನಾ ।
ಭಸ್ಮೀಕೃತಾ ಮುಹೂರ್ತೇನ ವಿಶ್ವಾಮಿತ್ರಸುತಾಸ್ತದಾ ॥ ೭ ॥

ಒಂದು ಮುಹೂರ್ತದಲ್ಲಿ ಮಹಾತ್ಮ ವಸಿಷ್ಠರು ಆ ಅಶ್ವರಥ ಪದಾತಿಗಳನ್ನು ಮಾತ್ರವಲ್ಲದೆ ವಿಶ್ವಾಮಿತ್ರನ ಸುತರನ್ನೂ ಭಸ್ಮ ಮಾಡಿದರು.

ದೃಷ್ಟ್ವಾ ವಿನಾಶಿತಾನುತ್ಸಾನ್ಬಲಂ ಚ ಸುಮಹಾಯಶಾಃ ।
ಸವ್ರೀಡಶ್ಚಿಂತಯಾವಿಷ್ಟೋ ವಿಶ್ವಾಮಿತ್ರೋಽಭವತ್ತದಾ ॥ ೮ ॥

ತನ್ನ ಮಕ್ಕಳೂ ಸೈನ್ಯಗಳೂ ನಾಶ ಹೊಂದಿದಾಗ ಮಹಾಯಶನಾದ ವಿಶ್ವಾಮಿತ್ರನು ನಾಚಿದ. ಚಿಂತೆಯಿಂದಲೂ ಆವಿಷ್ಟನಾದ.

ಸಮುದ್ರ ಇವ ನಿರ್ವೇಗೋ ಭಗ್ನದಂಷ್ಟ್ರ ಇವೋರಗಃ ।
ಉಪರಕ್ತ ಇವಾದಿತ್ಯಃ ಸದ್ಯೋ ನಿಷ್ಪ್ರಭತಾಂ ಗತಃ ॥ ೯ ॥

ವೇಗರಹಿತವಾದ ಸಮುದ್ರದಂತೆ, ಹಲ್ಲು ಕಿತ್ತ ಹಾವಿನಂತೆ ಉಪರಾಗ ಗೊಂಡ ರವಿಯಂತೆ ಒಡನೆ ನಿಷ್ಪ್ರಭನಾದ.

ಹತಪುತ್ರಬಲೋ ದೀನೋ ಲೂನಪಕ್ಷ ಇವ ದ್ವಿಜಃ ।
ಹತದರ್ಪೋ ಹತೋತ್ಸಾಹೋ ನಿರ್ವೇದಂ ಸಮಪದ್ಯತ ॥ ೧೦ ॥

ಪುತ್ರರೂ ಸೈನ್ಯವೂ ನಾಶ ಹೊಂದಿದಾಗ ವಿಶ್ವಾಮಿತ್ರನು ದೀನನಾದ, ರೆಕ್ಕೆ ಕಡಿದ ಹಕ್ಕಿಯಂತೆ ದರ್ಪ ಉತ್ಸಾಹವೆಲ್ಲವನ್ನೂ ಕಳೆದುಕೊಂಡು ನಿರ್ವೇದ ಹೊಂದಿದ.

ಸ ಪುತ್ರಮೇಕಂ ರಾಜ್ಯಾಯ ಪಾಲಯೇತಿ ನಿಯುಜ್ಯ ಚ ।
ಪೃಥಿವೀಂ ಕ್ಷತ್ರಧರ್ಮೇಣ ವನಮೇವಾನ್ವಪದ್ಯತ ॥ ೧೧ ॥

'ಪೃಥಿವಿಯನ್ನು ಕ್ಷಾತ್ರಧರ್ಮದಿಂದ ಪಾಲಿಸು' ಎಂದು ಒಬ್ಬ ಪುತ್ರನನ್ನು ರಾಜ್ಯಪಾಲನೆಗೆ ನೇಮಿಸಿ ತಾನು ಕಾಡಿಗೆ ಹೋದ, ವಿಶ್ವಾಮಿತ್ರ.

ಸ ಗತ್ವಾ ಹಿಮವತ್ಪಾರ್ಶ್ವಂ ಕಿನ್ನರೋರಗಸೇವಿತಮ್ ।
ಮಹಾದೇವಪ್ರಸಾದಾರ್ಥಂ ತಪಸ್ತೇಪೇ ಮಹಾತಪಾಃ ॥ ೧೨ ॥

ಕಿನ್ನರ ನಾಗರು ಸೇವಿಸುವ ಹಿಮಾಲಯದ ತಪ್ಪಲಿಗೆ ಹೋಗಿ ಮಹಾತಪಸ್ವಿಯಾಗಿ ಮಹಾದೇವನ ಪ್ರಸಾದಕ್ಕಾಗಿ ತಪಗೈದ ವಿಶ್ವಾಮಿತ್ರ.

ಕೇನಚಿತ್ತ್ವಥ ಕಾಲೇನ ದೇವೇಶೋ ವೃಷಭಧ್ವಜಃ ।
ದರ್ಶಯಾಮಾಸ ವರದೋ ವಿಶ್ವಾಮಿತ್ರಂ ಮಹಾಬಲಮ್ ॥ ೧೩ ॥

ಕೆಲಕಾಲದ ಬಳಿಕ ದೇವೇಶನಾದ ವೃಷಭಧ್ವಜ ರುದ್ರದೇವನು ಮಹಾಬಲನಾದ ವಿಶ್ವಾಮಿತ್ರನಿಗೆ ವರದಾಯಕನಾಗಿ ಮೈದೋರಿದ.

ಕಿಮರ್ಥಂ ತಪ್ಯಸೇ ರಾಜನ್ಬ್ರೂಹಿ ಯತ್ತೇ ವಿವಕ್ಷಿತಮ್ ।
ವರದೋಸ್ಮಿ ವರೋ ಯಸ್ತೇ ಕಾಂಕ್ಷಿತಃ ಸೋಽಭಿಧೀಯತಾಮ್ ॥೧೪॥

ರಾಜನೇ! ಏಕೆ ತಪಸ್ಸು ಮಾಡುವೆ, ಹೇಳು, ಏನು ನಿನ್ನ ಅಪೇಕ್ಷೆ? ನಾನು ವರದಾಯಕನಾಗಿರುವೆನು. ನಿನಗೆ ಅಪೇಕ್ಷಿತವಾಗಿರುವ ವರವೇನು, ಅದನ್ನು ಹೇಳು' ಎಂದು.

ಏವಮುಕ್ತಸ್ತು ದೇವೇನ ವಿಶ್ವಾಮಿತ್ರೋ ಮಹಾತಪಾಃ ।
ಪ್ರಣಿಪತ್ಯ ಮಹಾದೇವಮಿದಂ ವಚನಮಬ್ರವೀತ್ ॥ ೧೫ ॥

ಮಹಾದೇವನು ಹೀಗೆ ಹೇಳಿದಾಗ ಮಹಾತಪನಾದ ವಿಶ್ವಾಮಿತ್ರನು ಮಹಾದೇವನಿಗೆ ಪ್ರಣಾಮ ಮಾಡಿ ಈ ಮಾತನ್ನು ನುಡಿದ.

ಯದಿ ತುಷ್ಟೋ ಮಹಾದೇವ ಧನುರ್ವೇದೋ ಮಮಾನಘ ।
ಸಾಂಗೋಪಾಂಗೋಪನಿಷದಃ ಸರಹಸ್ಯಃ ಪ್ರದೀಯತಾಮ್ ॥ ೧೬ ॥

ಮಹಾದೇವ! ನೀನು ನನಗೆ ತುಷ್ಟನಾಗಿರುವುದಾದರೆ, ಅನಘ ಪಾಪರಹಿತನೆ! ನೀನು ನನಗೆ ಎಲ್ಲ ಅಂಗ ಉಪಾಂಗ ಉಪನಿಷತ್ ರಹಸ್ಯಗಳೊಂದಿಗೆ ಧನುರ್ವೇದವನ್ನು ಅನುಗ್ರಹಿಸು.

ಯಾನಿ ದೇವೇಷು ಚಾಸ್ತ್ರಾಣಿ ದಾನವೇಷು ಮಹರ್ಷಿಷು ।
ಗಂಧರ್ವಯಕ್ಷರಕ್ಷಸ್ಸು ಪ್ರತಿಭಾಂತು ಮಮಾನಘ ॥ ೧೭ ॥

ದೇವ ದಾನವ ಮಹರ್ಷಿ ಗಂಧರ್ವ ಯಕ್ಷ ರಾಕ್ಷಸರಲ್ಲಿ ಏನು ಧನುರ್ವೇದೋಕ್ತವಾದ ಅಸ್ತ್ರಮಂತ್ರಗಳಿವೆಯೋ ಅವೆಲ್ಲವೂ ನನ್ನ ಬುದ್ಧಿಗೆ ಹೊಳೆಯಲಿ.

ತವ ಪ್ರಸಾದಾದ್ಭವತು ದೇವದೇವ ಮಮೇಪ್ಸಿತಮ್ ।
ಏವಮಸ್ತ್ವಿತಿ ದೇವೇಶೋ ವಾಕ್ಯಮುಕ್ತ್ವಾ ಗತಸ್ತದಾ ॥ ೧೮ ॥

ದೇವದೇವ, ನಿನ್ನ ಅನುಗ್ರಹದಿಂದ ನನ್ನ ಈ ಅಪೇಕ್ಷೆ ಕೈಗೂಡಲಿ ಎಂದು ವಿಶ್ವಾಮಿತ್ರನು ಕೇಳಿಕೊಂಡ., 'ಹಾಗೇ ಆಗಲಿ' ಎಂದು ದೇವೇಶ ಹರನು ವರ ನೀಡಿ ಅಂತರ್ಧಾನನಾದ.

ಪ್ರಾಪ್ಯ ಚಾಸ್ತ್ರಾಣಿ ರಾಜರ್ಷಿರ್ವಿಶ್ವಾಮಿತ್ರೋ ಮಹಾಬಲಃ ।
ಹರ್ಷೇಣ ಮಹತಾ ಯುಕ್ತೋ ದರ್ಪಪೂರ್ಣೋಽಭವತ್ತದಾ॥ ೧೯ ॥

ಮಹಾಬಲ ರಾಜರ್ಷಿ ವಿಶ್ವಾಮಿತ್ರನು ಶಿವನಿಂದ ಎಲ್ಲ ಅಸ್ತ್ರಗಳನ್ನು ಪಡೆದು ಮಹಾ ಹರ್ಷಯುಕ್ತನಾಗಿ ದರ್ಪದಿಂದ ತುಂಬಿದ.

ಏವರ್ಧಮಾನೋ ವೀರ್ಯೇಣ ಸಮುದ್ರ ಇವ ಪರ್ವಣಿ ।
ಹತಮೇವ ತದಾ ಮೇನೇ ವಸಿಷ್ಠಮೃಷಿಸತ್ತಮಮ್ ॥ ೨೦ ॥

ಸಮುದ್ರವು ಪರ್ವಕಾಲದಲ್ಲಿ ಉಕ್ಕುವಂತೆ ವಿಶ್ವಾಮಿತ್ರನು ಅಸ್ತ್ರಶಕ್ತಿಯಿಂದ ಉಬ್ಬಿ ಮಹರ್ಷಿ ವಸಿಷ್ಠರು ಇನ್ನು ಹತರೇ ಆದರೆಂದು ನಂಬಿದ.

ತತೋ ಗತ್ವಾಶ್ರಮಪದಂ ಮುಮೋಚಾಸ್ತ್ರಾಣಿ ಪಾರ್ಥಿವಃ ।
ಯೈಸ್ತತ್ತಪೋವನಂ ಸರ್ವಂ ನಿರ್ದಗ್ಧಂ ಚಾಸ್ತ್ರತೇಜಸಾ ॥ ೨೧ ॥

ಬಳಿಕ ವಸಿಷ್ಠರ ಆಶ್ರಮಪ್ರದೇಶಕ್ಕೆ ಹೋಗಿ ರಾಜಾ ವಿಶ್ವಾಮಿತ್ರನು ಅಸ್ತ್ರಗಳನ್ನು ಪ್ರಯೋಗ ಮಾಡಿದ. ಒಡನೆ ತಪೋವನವು ಪೂರ್ತಿ ಅಸ್ತ್ರತೇಜಸ್ಸಿನಿಂದ ಸುಟ್ಟುಹೋಯಿತು.

ಉದೀರ್ಯಮಾಣಮಸ್ತ್ರಂ ತದ್ವಿಶ್ವಾಮಿತ್ರಸ್ಯ ಧೀಮತಃ ।
ದೃಷ್ಟ್ವಾ ವಿಪ್ರದ್ರುತಾ ಭೀತಾ ಮುನಯಃ ಶತಶೋ ದಿಶಃ ॥ ೨೨ ॥

ಧೀಮಂತನಾದ ವಿಶ್ವಾಮಿತ್ರನು ಅಸ್ತ್ರಮಂತ್ರವನ್ನು ಹೇಳುತ್ತಿದ್ದುದನ್ನು ಕಂಡು ನೂರಾರು ಮುನಿಗಳು ಭೀತರಾಗಿ ದಿಕ್ಕಾಪಾಲಾಗಿ ಓಡಿ ಹೋದರು.

ವಸಿಷ್ಠಸ್ಯ ಚ ಯೇ ಶಿಷ್ಯಾಸ್ತಥೈವ ಮೃಗಪಕ್ಷಿಣಃ ।
ವಿದ್ರವಂತಿ ಭಯಾದ್ಭೀತಾ ನಾನಾದಿಗ್ಭ್ಯಃ ಸಹಸ್ರಶಃ ॥ ೨೩ ॥

ವಸಿಷ್ಠರ ಶಿಷ್ಯರು ಮಾತ್ರವಲ್ಲದೆ ತಪೋವನದಲ್ಲಿದ್ದ ಸಾವಿರಾರು ಮೃಗಪಕ್ಷಿಗಳೂ ಕೂಡ ಭಯಭೀತವಾಗಿ ನಾನಾ ದಿಕ್ಕುಗಳಿಗೆ ಪಲಾಯನ ಗೈದರು.

ವಸಿಷ್ಠಸ್ಯಾಶ್ರಮಪದಂ ಶೂನ್ಯಮಾಸೀನ್ಮಹಾತ್ಮನಃ ।
ಮುಹೂರ್ತಮಿವ ನಿಃಶಬ್ದಮಾಸೀದಿರಿಣಸನ್ನಿಭಮ್ ॥ ೨೪ ॥

ಒಂದು ಮುಹೂರ್ತದೊಳಗೇ ಮಹಾತ್ಮ ವಸಿಷ್ಠರ ಆಶ್ರಮ ಪ್ರದೇಶವು ಶೂನ್ಯ ನಿಃಶಬ್ದ ನಿರ್ಜನಾರಣ್ಯ ಸದೃಶವಾಯಿತು.

ವದತೋ ವೈ ವಸಿಷ್ಠಸ್ಯ ಮಾ ಭೈರಿತಿ ಮುಹುರ್ಮುಹುಃ ।
ನಾಶಯಾಮ್ಯದ್ಯ ಗಾಧೇಯಂ ನೀಹಾರಮಿವ ಭಾಸ್ಕರಃ ॥ ೨೫ ॥

ಸೂರ್ಯನು ಮಂಜನ್ನು ಕಳೆಯುವಂತೆ ನಾನು ಗಾಧಿ ಪುತ್ರ ವಿಶ್ವಾಮಿತ್ರನನ್ನು ನಾಶ ಮಾಡುತ್ತೇನೆ ಭಯ ಪಡದಿರಿ ಎಂದು ಮತ್ತೆ ಮತ್ತೆ ವಸಿಷ್ಠರು ಹೇಳುತ್ತಿದ್ದರೂ ಅದಕ್ಕೆ ಕಿವಿಗೊಡದೇ ಎಲ್ಲರೂ ಪಲಾಯನ ಗೈದರು.

ಏವಮುಕ್ತ್ವಾ ಮಹಾತೇಜಾ ವಸಿಷ್ಠೋ ಜಪತಾಂ ವರಃ ।
ವಿಶ್ವಾಮಿತ್ರಂ ತದಾ ವಾಕ್ಯಂ ಸರೋಷಮಿದಮಬ್ರವೀತ್ ॥ ೨೬ ॥

ಜಪ ಮಾಡುವವರಲ್ಲಿ ಉತ್ತಮರಾದ ಮಹಾತೇಜರಾದ ವಸಿಷ್ಠಮುನಿ ಹೀಗೆ ಹೇಳಿ ವಿಶ್ವಾಮಿತ್ರನಿಗೆ ಕೋಪದಿಂದ ಹೇಳಿದರು.

ಆಶ್ರಮಂ ಚಿರಸಂವೃದ್ಧಂ ಯದ್ವಿನಾಶಿತವಾನಸಿ ।
ದುರಾಚಾರೋಽಸಿ ತನ್ಮೂಢ ತಸ್ಮಾತ್ ತ್ವಂ ನ ಭವಿಷ್ಯಸಿ ॥ ೨೭ ॥

ಬಹುಕಾಲದಿಂದ ನಾನು ಬೆಳೆಸಿದ ಆಶ್ರಮವನ್ನು ನೀನು ನಾಶ ಮಾಡಿರುವೆ, ದುರಾಚಾರಿಯಾಗಿರುವೆ ಅದರಿಂದ ಮೂರ್ಖನೆ! ನೀನಿನ್ನು ಇಲ್ಲವಾಗುವೆ ಎಂದರು.

ಇತ್ಯುಕ್ತ್ವಾ ಪರಮಕ್ರುದ್ಧೋ ದಂಡಮುದ್ಯಮ್ಯ ಸತ್ವರಃ ।
ವಿಧೂಮಮಿವ ಕಾಲಾಗ್ನಿಂ ಯಮದಂಡಮಿವಾಪರಮ್ ॥ ೨೮ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಪಂಚಪಂಚಾಶಃ ಸರ್ಗಃ ॥ ೫೫ ॥

ಹೀಗೆ ಹೇಳಿ ಒಡನೆ ಪರಮ ಕುದ್ಧರಾದ ವಸಿಷ್ಠರು ದಂಡಕಾಷ್ಠವನ್ನು ಎತ್ತಿ-ಕೊಂಡು ಅಭಿಮಂತ್ರಿಸಿ ಧೂಮರಹಿತ ಕಾಲಾಗ್ನಿಯಂತೆ ಯಮದಂಡದಂತೆ ಮಾಡಿ ಪ್ರಯೋಗಿಸಿದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಐವತ್ತೈದನೆ ಸರ್ಗ ಮುಗಿಯಿತು.

ಷಟ್‌ಪಂಚಾಶಃ ಸರ್ಗಃ

ಏವಮುಕ್ತೋ ವಸಿಷ್ಠೇನ ವಿಶ್ವಾಮಿತ್ರೋ ಮಹಾಬಲಃ ।
ಆಗ್ನೇಯಮಸ್ತ್ರಮುತ್ಕ್ಷಿಪ್ಯ ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೧ ॥

ವಸಿಷ್ಠರು ಹೀಗೆ ಹೇಳಿದಾಗ ಮಹಾಬಲನಾದ ರಾಜಾ ವಿಶ್ವಾಮಿತ್ರನು ಆಗ್ನೇಯಾಸ್ತ್ರವನ್ನೆತ್ತಿ ಹಿಡಿದು 'ನಿಲ್ಲು ನಿಲ್ಲು' ಈ ಅಸ್ತ್ರಕ್ಕೆ ಆಹುತಿಯಾಗಲು ಸಿದ್ಧನಾಗು' ಎಂದ.

ಬ್ರಹ್ಮದಂಡಂ ಸಮುತ್ಕ್ಷಿಪ್ಯ ಕಾಲದಂಡಮಿವಾಪರಮ್ ।
ವಸಿಷ್ಠೋ ಭಗವಾನ್ಕ್ರೋಧಾದಿದಂ ವಚನಮಬ್ರವೀತ್ ॥ ೨ ॥

ಭಗವಾನ್ ವಸಿಷ್ಠರೂ ಕೋಪದಿಂದ ಇನ್ನೊಂದು ಯಮದಂಡ ದಂತಿರುವ ಬ್ರಹ್ಮದಂಡವನ್ನೆತ್ತಿ ಹಿಡಿದು ನುಡಿದರು.

ಕ್ಷತ್ರಬಂಧೋ ಸ್ಥಿತೋಸ್ಮ್ಯೇಷ ಯದ್ಬಲಂ ತದ್ವಿದರ್ಶಯ ।
ನಾಶಯಾಮ್ಯದ್ಯ ತೇ ದರ್ಪಂ ಶಸ್ತ್ರಸ್ಯ ತವ ಗಾಧಿಜ ॥ ೩ ॥

ದುಷ್ಟ ಕ್ಷತ್ರಿಯನೆ! ನಾನು, ನೋಡು, ನಿಂತಿದ್ದೇನೆ. ನನಗೇನೂ ಭಯವಿಲ್ಲ. ನಿನ್ನಲ್ಲಿ ಏನು ಬಲವಿದೆಯೋ ಅದನ್ನು ತೋರು ಗಾಧಿ ಪುತ್ರನೆ! ಶಸ್ತ್ರವಿದೆ ಎನ್ನುವ ನಿನ್ನ ದರ್ಪವನ್ನು ಅಹಂಕಾರವನ್ನು ನಾನೀಗಲೇ ಮುರಿಯುವೆನು.

ಕ್ವ ಚ ತೇ ಕ್ಷತ್ರಿಯಬಲಂ ಕ್ವ ಚ ಬ್ರಹ್ಮಬಲಂ ಮಹತ್ ।
ಪಶ್ಯ ಬ್ರಹ್ಮಬಲಂ ದಿವ್ಯಂ ಮಮ ಕ್ಷತ್ರಿಯಪಾಂಸನ ॥ ೪ ॥

ನಿನ್ನ ಬಲವೇನಿದ್ದರೂ ಅದು ಕ್ಷತ್ರಿಯನ ಬಲ. ಅಲ್ಪವಾದ ನಿನ್ನ ಕ್ಷತ್ರಿಯ ಬಲವೆಲ್ಲಿ? ಮಹತ್ತಾದ ನನ್ನ ಬ್ರಾಹ್ಮಣನ ಬಲವೆಲ್ಲಿ? ಕ್ಷತ್ರಿಯಾಧಮನೆ! ನೋಡು, ನನ್ನ ದಿವ್ಯವಾದ ಬ್ರಾಹ್ಮಣನ ಬಲವನ್ನು.

ತಸ್ಯಾಸ್ತ್ರಂ ಗಾಧಿಪುತ್ರಸ್ಯ ಘೋರಮಾಗ್ನೇಯಮುದ್ಯತಮ್ ।
ಬ್ರಹ್ಮದಂಡೇನ ತಚ್ಛಾಂತಮಗ್ನೇರ್ವೇಗ ಇವಾಂಭಸಾ ॥ ೫ ॥

ಗಾಧಿಪುತ್ರ ರಾಜಾ ವಿಶ್ವಾಮಿತ್ರನು ಪ್ರಯೋಗಿಸಿದ ಘೋರವಾದ ಆಗ್ನೇಯಾಸ್ತ್ರವು, ಅಗ್ನಿಜ್ವಾಲೆ ನೀರಿನಿಂದ ಆರಿಹೋಗುವಂತೆ, ಬ್ರಹ್ಮದಂಡದಿಂದ ಆರಿ ತಣ್ಣಗಾಯಿತು.

ವಾರುಣಂ ಚೈವ ರೌದ್ರಂ ಚ ಐಂದ್ರಂ ಪಾಶುಪತಂ ತಥಾ ।
ಐಷೀಕಂ ಚಾಪಿ ಚಿಕ್ಷೇಪ ಕುಪಿತೋ ಗಾಧಿನಂದನಃ ॥ ೬ ॥

ಗಾಧಿಪುತ್ರ ರಾಜಾ ವಿಶ್ವಾಮಿತ್ರನು ಬಳಿಕ ವಾರುಣ ರೌದ್ರ ಐಂದ್ರ ಪಾಶುಪತ ಐಷೀಕ, ಅಸ್ತ್ರಗಳನ್ನೂ ಪ್ರಯೋಗಿಸಿದ.

ಮಾನವಂ ಮೋಹನಂ ಚೈವ ಗಾಂಧರ್ವಂ ಸ್ವಾಪನಂ ತಥಾ ।
ಜೃಂಭಣಂ ಮಾದನಂ ಚೈವ ಸಂತಾಪನವಿಲಾಪನೇ ॥ ೭ ॥

ಶೋಷಣಂ ದಾರಣಂ ಚೈವ ವಜ್ರಮಸ್ತ್ರಂ ಸುದುರ್ಜಯಮ್ ।
ಬ್ರಹ್ಮಪಾಶಂ ಕಾಲಪಾಶಂ ವಾರುಣಂ ಪಾಶಮೇವ ಚ ॥ ೮ ॥

ಪೈನಾಕಾಸ್ತ್ರಂ ಚ ದಯಿತಂ ಶುಷ್ಕಾರ್ದ್ರೇ ಅಶನೀ ಉಭೇ ।
ದಂಡಾಸ್ತ್ರಮಥ ಪೈಶಾಚಂ ಕ್ರೌಂಚಮಸ್ತ್ರಂ ತಥೈವ ಚ ॥ ೯ ॥

ಧರ್ಮಚಕ್ರಂ ಕಾಲಚಕ್ರಂ ವಿಷ್ಣುಚಕ್ರಂ ತಥೈವ ಚ ।
ವಾಯವ್ಯಂ ಮಥನಂ ಚೈವ ಅಸ್ತ್ರಂ ಹಯಶಿರಸ್ತಥಾ ॥ ೧೦ ॥

ಶಕ್ತಿದ್ವಯಂ ಚ ಚಿಕ್ಷೇಪ ಕಂಕಾಲಂ ಮುಸಲಂ ತಥಾ ।
ವೈದ್ಯಾಧರಂ ಮಹಾಸ್ತ್ರಂ ಚ ಕಾಲಾಸ್ತ್ರಮಥ ದಾರುಣಮ್ ॥ ೧೧ ॥

ತ್ರಿಶೂಲಮಸ್ತ್ರಂ ಘೋರಂ ಚ ಕಾಪಾಲಮಥ ಕಂಕಣಮ್ ।
ಏತಾನ್ಯಸ್ತ್ರಾಣಿ ಚಿಕ್ಷೇಪ ಸರ್ವಾಣಿ ರಘುನಂದನ ॥
ವಸಿಷ್ಠೇ ಜಪತಾಂ ಶ್ರೇಷ್ಠೇ ತದದ್ಭುತಮಿವಾಭವತ್ ॥ ೧೨ ॥

ಮಾನವ ಮೋಹನ ಗಾಂಧರ್ವ ಸ್ವಾಪನ ಜೃಂಭಣ ಮಾದನ ಸಂತಾಪನ ವಿಲಾಪನ ಶೋಷಣ ದಾರಣ ಯಾರಿಂದಲೂ ಜಯಿಸಲಾಗದ ವಜ್ರಾಸ್ತ್ರ, ಬ್ರಹ್ಮಪಾಶ ಕಾಲಪಾಶ ವಾರುಣಪಾಶ ಪೈನಾಕಾಸ್ತ್ರ ಶುಷ್ಕ-ಅಶನಿ ಮತ್ತು ಆರ್ದ್ರ-ಅಶನಿಗಳು, ದಂಡಾಸ್ತ್ರ ಪೈಶಾಚ ಕ್ರೌಂಚಾಸ್ತ್ರ ಧರ್ಮಚಕ್ರ ಕಾಲಚಕ್ರ ವಿಷ್ಣುಚಕ್ರ ವಾಯವ್ಯ ಹಯಶಿರೋಸ್ತ್ರ ಕಂಕಾಲ ಶಕ್ತಿ ಮುಸಲಶಕ್ತಿಗಳು ವೈದ್ಯಾಧರ ಮಹಾಸ್ತ್ರ ದಾರುಣವಾದ ಕಾಲಾಸ್ತ್ರ ಘೋರವಾದ ತ್ರಿಶೂಲಾಸ್ತ್ರ ಕಾಪಾಲ ಕಂಕಣ, ಹೇ ರಾಮ! ರಾಜಾ ವಿಶ್ವಾಮಿತ್ರನು ಈ ಎಲ್ಲ ಅಸ್ತ್ರಗಳನ್ನು ಜಪ ಮಾಡುವವರಲ್ಲಿ ಶ್ರೇಷ್ಠರಾದ ವಸಿಷ್ಠರ ಮೇಲೆ ಪ್ರಯೋಗಿಸಿದ, ಅದು ಅದ್ಭುತವಾಗಿತ್ತು.

ತಾನಿ ಸರ್ವಾಣಿ ದಂಡೇನ ಗ್ರಸತೇ ಬ್ರಹ್ಮಣಃ ಸುತಃ ।
ತೇಷು ಶಾಂತೇಷು ಬ್ರಹ್ಮಾಸ್ತ್ರಂ ಕ್ಷಿಪ್ತವಾನ್ಗಾಧಿನಂದನಃ ॥ ೧೩ ॥

ಆ ಎಲ್ಲ ಅಸ್ತ್ರಗಳನ್ನೂ ಬ್ರಹ್ಮಪುತ್ರ ವಸಿಷ್ಠರು ಬ್ರಹ್ಮದಂಡದಿಂದಲೇ ನುಂಗಿದರು. ತನ್ನ ಅಸ್ತ್ರವೆಲ್ಲವೂ ತಣ್ಣಗಾದಾಗ ವಿಶ್ವಾಮಿತ್ರನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ.

ತದಸ್ತ್ರಮುದ್ಯತಂ ದೃಷ್ಟ್ವಾ ದೇವಾಃ ಸಾಗ್ನಿಪುರೋಗಮಾಃ ।
ದೇವರ್ಷಯಶ್ಚ ಸಂಭ್ರಾಂತಾ ಗಂಧರ್ವಾಃ ಸಮಹೋರಗಾಃ ॥
ತ್ರೈಲೋಕ್ಯಮಾಸೀತ್ಸಂತ್ರಸ್ತಂ ಬ್ರಹ್ಮಾಸ್ತ್ರೇ ಸಮುದೀರಿತೇ ॥ ೧೪ ॥

ಬ್ರಹ್ಮಾಸ್ತ್ರ ಹೊರಟಾಗ ಅಗ್ನಿ ಮುಂತಾದ ದೇವತೆಗಳು ಋಷಿಗಳೂ ಗಂಧರ್ವ ನಾಗರೂ ಎಲ್ಲರೂ ದಿಗ್ಭ್ರಮೆ ಹೊಂದಿದರು. ಬ್ರಹ್ಮಾಸ್ತ್ರವನ್ನು ವಿಶ್ವಾಮಿತ್ರನು ಪ್ರಯೋಗಿಸಿದಾಗ ಮೂಲೋಕವೂ ಭಯಭೀತವಾಯಿತು.

ತದಪ್ಯಸ್ತ್ರಂ ಮಹಾಘೋರಂ ಬ್ರಾಹ್ಮಂ ಬ್ರಾಹ್ಮೇಣ ತೇಜಸಾ ।
ವಸಿಷ್ಠೋ ಗ್ರಸತೇ ಸರ್ವಂ ಬ್ರಹ್ಮದಂಡೇನ ರಾಘವ ॥ ೧೫ ॥

ಮಹಾಘೋರವಾದ ಆ ಬ್ರಹ್ಮಾಸ್ತ್ರವನ್ನೂ ಕೂಡ ಹೇ ರಾಮ! ವಸಿಷ್ಠರು ಬ್ರಹ್ಮತೇಜಸ್ಸಿನಿಂದ ಬ್ರಹ್ಮದಂಡದಿಂದಲೇ ಪೂರ್ತಿಯಾಗಿ ನುಂಗಿದರು.

ಬ್ರಹ್ಮಾಸ್ತ್ರಂ ಗ್ರಸಮಾನಸ್ಯ ವಸಿಷ್ಠಸ್ಯ ಮಹಾತ್ಮನಃ ।
ತ್ರೈಲೋಕ್ಯಮೋಹನಂ ರೌದ್ರಂ ರೂಪಮಾಸೀತ್ಸುದಾರುಣಮ್॥ ೧೬ ॥

ಬ್ರಹ್ಮಾಸ್ತ್ರವನ್ನು ಮಹಾತ್ಮ ವಸಿಷ್ಠರು ನುಂಗುವಾಗ ಅವರ ರೂಪವು ಮೂಲೋಕವನ್ನು ದಿಗ್ಭ್ರಾಂತಗೊಳಿಸುವಂತೆ ರುದ್ರಭೀಕರವಾಗಿತ್ತು .

ರೋಮಕೂಪೇಷು ಸರ್ವೇಷು ವಸಿಷ್ಠಸ್ಯ ಮಹಾತ್ಮನಃ ।
ಮರೀಚ್ಯ ಇವ ನಿಷ್ಪೇತುರಗ್ನೇರ್ಧೂಮಾಕುಲಾರ್ಚಿಷಃ ॥ ೧೭ ॥

ಆಗ ಮಹಾತ್ಮ ವಸಿಷ್ಠರ ಎಲ್ಲ ರೋಮ ಕೂಪಗಳಲ್ಲಿ ಬೆಂಕಿಯ ಕಿಡಿಗಳು ಉದ್ಭವಿಸಿದುವು, ಬೆಂಕಿಯ ಜ್ವಾಲೆ ಹೊಗೆಯಿಂದ ಮುಚ್ಚಿ ಹೋದರೂ ಕಿಡಿಗಳು ಎದ್ದುಬರುವಂತೆ.

ಪ್ರಾಜ್ವಲದ್ಬ್ರಹ್ಮದಂಡಶ್ಚ ವಸಿಷ್ಠಸ್ಯ ಕರೋದ್ಯತಃ ।
ವಿಧೂಮ ಇವ ಕಾಲಾಗ್ನಿರ್ಯಮದಂಡ ಇವಾಪರಃ ॥ ೧೮ ॥

ವಸಿಷ್ಠರು ಕೈಯಿಂದೆತ್ತಿ ಹಿಡಿದ ಬ್ರಹ್ಮದಂಡವು ಹೊಗೆ ಇಲ್ಲದ ಕಾಲಾಗ್ನಿಯಂತೆ, ಇನ್ನೊಂದು ಯಮದಂಡದಂತೆ ಹೊತ್ತಿ ಉರಿಯಿತು.

ತತೋऽಸ್ತುವನ್ಮುನಿಗಣಾ ವಸಿಷ್ಠಂ ಜಪತಾಂ ವರಮ್ ।
ಅಮೋಘಂ ತೇ ಬಲಂ ಬ್ರಹ್ಮಂಸ್ತೇಜೋ ಧಾರಯ ತೇಜಸಾ ॥ ೧೯ ॥

ಮುನಿಗಳ ಸಮೂಹಗಳು ಜಪಿಸುವವರಲ್ಲಿ ಶ್ರೇಷ್ಠರಾದ ವಸಿಷ್ಠರನ್ನು ಪ್ರಶಂಸಿಸಿದರು, ಮುನಿಯೆ ನಿನ್ನ ಬಲ ಅಮೋಘವಾಗಿದೆ, ನಿನ್ನ ತೇಜಸ್ಸಿನಿಂದ ಬ್ರಹ್ಮಾಸ್ತ್ರತೇಜಸ್ಸನ್ನು ಉಪಶಮನ ಮಾಡು.

ನಿಗೃಹೀತಸ್ತ್ವಯಾ ಬ್ರಹ್ಮನ್ವಿಶ್ವಾಮಿತ್ರೋ ಮಹಾತಪಾಃ ।
ಪ್ರಸೀದ ಜಪತಾಂ ಶ್ರೇಷ್ಠ ಲೋಕಾಃ ಸಂತು ಗತವ್ಯಥಾಃ ॥ ೨೦ ॥

ಮುನಿಯೆ, ನೀನು ಮಹಾತಪನಾದ ವಿಶ್ವಾಮಿತ್ರನನ್ನು ನಿಗ್ರಹ ಮಾಡಿರುವೆ. ಜಪಿಸುವವರಲ್ಲಿ ಶ್ರೇಷ್ಠನೇ, ಪ್ರಸನ್ನನಾಗು, ಲೋಕಗಳ ವ್ಯಥೆ ದೂರಾಗಲಿ.

ಏವಮುಕ್ತೋ ಮಹಾತೇಜಾಃ ಶಮಂ ಚಕ್ರೇ ಮಹಾತಪಾಃ ।
ವಿಶ್ವಾಮಿತ್ರೋऽಪಿ ನಿಕೃತೋ ವಿನಿಶ್ವಸ್ಯೇದಮಬ್ರವೀತ್ ॥ ೨೧ ॥

ಮುನಿಗಳೆಲ್ಲರೂ ಹೀಗೆ ಹೇಳಿದಾಗ ಮಹಾತಪ, ಮಹಾತೇಜರಾದ ವಸಿಷ್ಠರು ಕೋಪಶಮನ ಮಾಡಿಕೊಂಡರು. ವಿಶ್ವಾಮಿತ್ರನೂ ಸೋತು ನಿಟ್ಟುಸಿರಿಟ್ಟು ಹೇಳಿದ.

ಧಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋಬಲಂ ಬಲಮ್ ।
ಏಕೇನ ಬ್ರಹ್ಮದಂಡೇನ ಸರ್ವಾಸ್ತ್ರಾಣಿ ಹತಾನಿ ಮೇ ॥ ೨೨ ॥

ಕ್ಷತ್ರಿಯ ಬಲಕ್ಕೆ ಧಿಕ್ಕಾರ, ಬ್ರಹ್ಮತೇಜದ ಬಲವೇ ನಿಜವಾಗಿ ಬಲ. ವಸಿಷ್ಠಮುನಿ ಒಂದು ಬ್ರಹ್ಮದಂಡದಿಂದಲೇ ನನ್ನ ಎಲ್ಲ ಅಸ್ತ್ರಗಳನ್ನೂ ನಾಶ ಪಡಿಸಿದರು!

ತದೇತತ್ಸಮವೇಕ್ಷ್ಯಾಹಂ ಪ್ರಸನ್ನೇಂದ್ರಿಯಮಾನಸಃ ।
ತಪೋ ಮಹತ್ಸಮಾಸ್ಥಾಸ್ಯೇ ಯದ್ಧ್ಯೆ ಬ್ರಹ್ಮತ್ವಕಾರಣಮ್ ॥ ೨೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಷಟ್‌ಪಂಚಾಶಃ ಸರ್ಗಃ ॥ ೫೬ ॥

ಇದನ್ನು ಚೆನ್ನಾಗಿ ಆಲೋಚಿಸಿ, ಇಂದ್ರಿಯ ಮನಸ್ಸುಗಳನ್ನು ನಿರ್ಮಲವಾಗಿ ಮಾಡಿಕೊಂಡು ಬ್ರಹ್ಮಬಲ ಸಂಪಾದನೆಗೆ ಮಹತ್ತಾದ ತಪಸ್ಸು ಮಾಡುವೆನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಐವತ್ತಾರನೆ ಸರ್ಗ ಮುಗಿಯಿತು.

ಸಪ್ತಪಂಚಾಶಃ ಸರ್ಗಃ

ತತಃ ಸಂತಪ್ತಹೃದಯಃ ಸ್ಮರನ್ನಿಗ್ರಹಮಾತ್ಮನಃ ।
ವಿನಿಃಶ್ವಸ್ಯ ವಿನಿಃಶ್ವಸ್ಯ ಕೃತವೈರೋ ಮಹಾತ್ಮನಾ ॥ ೧ ॥

ರಾಜಾ ವಿಶ್ವಾಮಿತ್ರನು ತನ್ನ ಪರಾಜಯವನ್ನು ಸದಾ ನೆನೆದು ಎದೆಯಲ್ಲಿ ನೊಂದು ನಿಟ್ಟುಸಿರಿಟ್ಟು ನಿಟ್ಟುಸಿರಿಟ್ಟು ಮಹಾತ್ಮ ವಸಿಷ್ಠರಲ್ಲಿ ವೈರ ಮಾಡಿದನು.

ಸ ದಕ್ಷಿಣಾಂ ದಿಶಂ ಗತ್ವಾ ಮಹಿಷ್ಯಾ ಸಹ ರಾಘವ ।
ತತಾಪ ಪರಮಂ ಘೋರಂ ವಿಶ್ವಾಮಿತ್ರೋ ಮಹತ್ತಪಃ ॥ ೨ ॥

ರಾಮ! ವಿಶ್ವಾಮಿತ್ರನು ಸಪತ್ನೀಕನಾಗಿ ದಕ್ಷಿಣ ದಿಕ್ಕಿಗೆ ಹೋಗಿ ಪರಮ ಘೋರವಾದ ತಪಸ್ಸನ್ನು ಮಾಡಿದ.

ಫಲಮೂಲಾಶನೋ ದಾಂತಶ್ಚಚಾರ ಸುಮಹತ್ತಪಃ ।
ಅಥಾಸ್ಯ ಜಜ್ಞಿರೇ ಪುತ್ರಾಃ ಸತ್ಯಧರ್ಮಪರಾಯಣಾಃ ॥
ಹವಿಷ್ಯಂದೋ ಮಧುಷ್ಯಂದೋ ದೃಢನೇತ್ರೋ ಮಹಾರಥಃ ॥ ೩ ॥

ಹಣ್ಣುಗಡ್ಡೆಗಳನ್ನೇ ಉಂಡು ಇಂದ್ರಿಯ ನಿಗ್ರಹ ಮಾಡಿಕೊಂಡು ಬಲು ದೊಡ್ಡ ತಪಸ್ಸು ಮಾಡಿದ, ವಿಶ್ವಾಮಿತ್ರ . ಆಗ ಅವನಿಗೆ ಸತ್ಯಧರ್ಮಪರಾಯಣರಾದ ನಾಲ್ಕು ಪುತ್ರರು ಜನಿಸಿದರು. ಹವಿಷ್ಯಂದ ಮಧುಷ್ಯಂದ ದೃಢನೇತ್ರ ಮತ್ತು ಮಹಾರಥ ಎಂದು.

ಪೂರ್ಣೇ ವರ್ಷಸಹಸ್ರೇ ತು ಬ್ರಹ್ಮಾ ಲೋಕಪಿತಾಮಹಃ ।
ಅಬ್ರವೀನ್ಮಧುರಂ ವಾಕ್ಯಂ ವಿಶ್ವಾಮಿತ್ರಂ ತಪೋಧನಮ್ ॥ ೪ ॥

ಒಂದು ಸಾವಿರ ವರ್ಷಗಳ ತಪಸ್ಸು ಪೂರ್ಣವಾದಾಗ ಲೋಕಪಿತಾಮಹರಾದ ಬ್ರಹ್ಮದೇವರು ತಪೋಧನನಾದ ವಿಶ್ವಾಮಿತ್ರ ರಾಜನಿಗೆ ಮಧುರವಾದ ಮಾತನ್ನಾಡಿದರು.

ಜಿತಾ ರಾಜರ್ಷಿಲೋಕಾಸ್ತೇ ತಪಸಾ ಕುಶಿಕಾತ್ಮಜ ।
ಅನೇನ ತಪಸಾ ತ್ವಾಂ ತು ರಾಜರ್ಷಿರಿತಿ ವಿದ್ಮಹೇ ॥ ೫ ॥

ಕುಶಿಕ ರಾಜಪುತ್ರನಾದ ವಿಶ್ವಾಮಿತ್ರನೆ! ನೀನು ಈಗ ತಪಸ್ಸಿನಿಂದ ರಾಜರ್ಷಿಗಳಿಗೆ

ಲಭ್ಯವಾಗುವ ಪುಣ್ಯಲೋಕಗಳನ್ನು ಸಂಪಾದಿಸಿರುವೆ. ಅದರಿಂದ ಈ ತಪಸ್ಸಿನಿಂದ ನಿನ್ನನ್ನು ರಾಜರ್ಷಿ ಎಂದು ತಿಳಿಯುತ್ತೇವೆ.

ಏವಮುಕ್ತ್ವಾ ಮಹಾತೇಜಾ ಜಗಾಮ ಸಹ ದೈವತೈಃ ।
ತ್ರಿವಿಷ್ಟಪಂ ಬ್ರಹ್ಮಲೋಕಂ ಲೋಕಾನಾಂ ಪರಮೇಶ್ವರಃ ॥ ೬ ॥

ಹೀಗೆ ಹೇಳಿ ಮಹಾತೇಜರಾದ ಲೋಕಗಳಿಗೆ ದೊಡ್ಡ ನಿಯಾಮಕರಾದ ಬ್ರಹ್ಮದೇವರು ದೇವತೆಗಳೊಂದಿಗೆ ಸ್ವರ್ಗಕ್ಕೂ ಬ್ರಹ್ಮಲೋಕಕ್ಕೂ ಹೋದರು. ದೇವತೆಗಳು ಸ್ವರ್ಗಕ್ಕೂ ಬ್ರಹ್ಮದೇವರು ಬ್ರಹ್ಮಲೋಕಕ್ಕೂ ಹೋದರು.

ವಿಶ್ವಾಮಿತ್ರೋಽಪಿ ತಚ್ಛ್ರುತ್ವಾ ಹ್ರಿಯಾ ಕಿಂಚಿದವಾಙ್ಮುಖಃ ।
ದುಃಖೇನ ಮಹತಾऽऽವಿಷ್ಟಃ ಸಮನ್ಯುರಿದಮಬ್ರವೀತ್ ॥ ೭ ॥

ವಿಶ್ವಾಮಿತ್ರನು ಬ್ರಹ್ಮದೇವರ ಈ ಮಾತನ್ನು ಕೇಳಿ ನಾಚಿ ಸ್ವಲ್ಪ ತಲೆ ತಗ್ಗಿಸಿ ಮಹಾದುಃಖದಿಂದ ಆವಿಷ್ಟನಾಗಿ ಕೋಪದಿಂದ ತನಗೆ ತಾನೇ ಹೇಳಿಕೊಂಡ.

ತಪಶ್ಚ ಸುಮಹತ್ತಪ್ತಂ ರಾಜರ್ಷಿರಿತಿ ಮಾಂ ವಿದುಃ ।
ದೇವಾಃ ಸರ್ಷಿಗಣಾಃ ಸರ್ವೇ ನಾಸ್ತಿ ಮನ್ಯೇ ತಪಃಫಲಮ್ ॥ ೮ ॥

ನಾನು ದೊಡ್ಡ ತಪಸ್ಸನ್ನೇ ಮಾಡಿದ್ದೇನೆ. ಹಾಗಿದ್ದರೂ ದೇವತೆಗಳೂ ಋಷಿ ಸಮೂಹಗಳೂ ಎಲ್ಲರೂ ನನ್ನನ್ನು ಕೇವಲ ರಾಜರ್ಷಿ ಎಂದೇ ತಿಳಿಯುತ್ತಾರೆ, ಎಂದರೆ ನನ್ನ ಈ ತಪಸ್ಸಿಗೆ ಬ್ರಾಹ್ಮಣತ್ವವು ಫಲವಾಗದು.

ಏವಂ ನಿಶ್ಚಿತ್ಯ ಮನಸಾ ಭೂಯ ಏವ ಮಹಾತಪಾಃ ।
ಕೋಪೇನ ಮಹತಾऽऽವಿಷ್ಟಸ್ತ್ರೈಲೋಕ್ಯಂ ವ್ಯಥಯನ್ನಿವ ॥
ತಪಶ್ಚಕಾರ ಕಾಕುತ್ಸ್ಥ ಪರಮಂ ಪರಮಾತ್ಮವಾನ್ ॥ ೯ ॥

ಹೀಗೆ ಮನಸ್ಸಿನಿಂದ ನಿಶ್ಚಯ ಮಾಡಿಕೊಂಡು ಮಸಾತಪನಾದ ಪರಮ ಮನೋನಿಗ್ರಹ ಉಳ್ಳವನಾದ ವಿಶ್ವಾಮಿತ್ರನು, ರಾಮ! ಮಹಾಕೋಪದಿಂದ ಆವಿಷ್ಟನಾಗಿ ಪುನಃ ಮೂಲೋಕವನ್ನು ಪೀಡಿಸುವಂಥ ದೊಡ್ಡ ತಪಸ್ಸನ್ನು ಮಾಡತೊಡಗಿದ.

ಏತಸ್ಮಿನ್ನೇವ ಕಾಲೇ ತು ಸತ್ಯವಾದೀ ಜಿತೇಂದ್ರಿಯಃ ।
ತ್ರಿಶಂಕುರಿತಿ ವಿಖ್ಯಾತ ಇಕ್ಷ್ವಾಕುಕುಲವರ್ಧನಃ ॥ ೧೦ ॥

ಇದೇ ಸಮಯದಲ್ಲಿ ಸತ್ಯವಾದಿಯೂ ಜಿತೇಂದ್ರಿಯನೂ ಆದ ತ್ರಿಶಂಕು ಎಂದು ಪ್ರಸಿದ್ಧನಾದ ರಾಜನು ಇಕ್ಷ್ವಾಕುಕುಲವರ್ಧನನಾಗಿದ್ದ.

ತಸ್ಯ ಬುದ್ಧಿಃ ಸಮುತ್ಪನ್ನಾ ಯಜೇಯಮಿತಿ ರಾಘವ ।
ಗಚ್ಛೇಯಂ ಸಶರೀರೇಣ ದೇವಾನಾಂ ಪರಮಾಂ ಗತಿಮ್ ॥ ೧೧ ॥

ರಾಮ! ಅವನಿಗೆ ಒಂದು ಆಸೆ ಉಂಟಾಯಿತು, ಯಾಗ ಮಾಡುವೆನು, ಯಾಗದಿಂದ ಸಶರೀರನಾಗಿ ದೇವತೆಗಳ ಮುಖ್ಯ ಆಶ್ರಯವಾದ ಸ್ವರ್ಗಲೋಕವನ್ನು ಹೊಂದುವೆನು ಎಂದು.

ಸ ವಸಿಷ್ಠಂ ಸಮಾಹೂಯ ಕಥಯಾಮಾಸ ಚಿಂತಿತಮ್ ।
ಅಶಕ್ಯಮಿತಿ ಚಾಪ್ಯುಕ್ತೋ ವಸಿಷ್ಠೇನ ಮಹಾತ್ಮನಾ ॥ ೧೨ ॥

ತ್ರಿಶಂಕುರಾಜನು ವಸಿಷ್ಠರನ್ನು ಕರೆಸಿಕೊಂಡು ತನ್ನ ಅಪೇಕ್ಷೆಯನ್ನು ಅವರಲ್ಲಿ ಹೇಳಿಕೊಂಡನು. ಮಹಾತ್ಮರಾದ ವಸಿಷ್ಠರು ಇದು ಅಶಕ್ಯ ಎಂದರು.

ಪ್ರತ್ಯಾಖ್ಯಾತೋ ವಸಿಷ್ಠೇನ ಸ ಯಯೌ ದಕ್ಷಿಣಾಂ ದಿಶಮ್ ।
ತತಸ್ತತ್ಕರ್ಮಸಿದ್ಧ್ಯರ್ಥಂ ಪುತ್ರಾಂಸ್ತಸ್ಯ ಗತೋ ನೃಪಃ ॥ ೧೩ ॥

ವಸಿಷ್ಠ ನಿರಾಕರಿಸಿದಾಗ ತ್ರಿಶಂಕು ರಾಜನು ದಕ್ಷಿಣದಿಕ್ಕಿಗೆ ಹೋಗಿ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳುವುದಕ್ಕೆ ವಸಿಷ್ಠ ಪುತ್ರರನ್ನು ಆಶ್ರಯಿಸಿದನು.

ವಾಸಿಷ್ಠಾ ದೀರ್ಘತಪಸಸ್ತಪೋ ಯತ್ರ ಹಿ ತೇಪಿರೇ ।
ತ್ರಿಶಂಕುಃ ಸುಮಹಾತೇಜಾಃ ಶತಂ ಪರಮಭಾಸ್ವರಮ್ ॥
ವಸಿಷ್ಠಪುತ್ರಾನ್ ದದೃಶೇ ತಪ್ಯಮಾನಾನ್ಯಶಸ್ವಿನಃ ॥ ೧೪ ॥

ವಸಿಷ್ಠ ಪುತ್ರರು ಅಲ್ಲಿ ದೀರ್ಘತಪಸ್ಸನ್ನು ಮಾಡುತ್ತಿದ್ದರು. ಯಶಸ್ವಿಗಳೂ ತಪೋನಿರತರೂ ಆಗಿದ್ದ ಉತ್ತಮವಾಗಿ ಬೆಳಗುತ್ತಿದ್ದ ನೂರು ವಸಿಷ್ಠ ಪುತ್ರರನ್ನು ಸುಮಹಾತೇಜನಾದ ತ್ರಿಶಂಕುರಾಜ ಭೆಟ್ಟಿ ಮಾಡಿದ.

ಸೋಽಭಿಗಮ್ಯ ಮಹಾತ್ಮಾನಃ ಸರ್ವಾನೇವ ಗುರೋಃ ಸುತಾನ್ ।
ಅಭಿವಾದ್ಯಾನುಪೂರ್ವ್ಯೇಣ ಹ್ರಿಯಾ ಕಿಂಚಿದವಾಙ್ಮುಖಃ ॥
ಅಬ್ರವೀತ್ಸುಮಹಾಭಾಗಾನ್ಸರ್ವಾನೇವ ಕೃತಾಂಜಲಿಃ ॥ ೧೫ ॥

ತ್ರಿಶಂಕು ರಾಜನು ಮಹಾತ್ಮರಾದ ಎಲ್ಲ ಗುರುಸುತರನ್ನೂ ಕ್ರಮವಾಗಿ ಭೆಟ್ಟಿ ಮಾಡಿ ಅಭಿವಾದನ ಮಾಡಿ ಮಹಾ ಭಾಗ್ಯಶಾಲಿಗಳಾದ ಅವರೆಲ್ಲರಿಗೂ ನಾಚಿಕೆಯಿಂದ ತಲೆ ತಗ್ಗಿಸಿ ಕೈಮುಗಿದು ನುಡಿದನು. ಅವರ ತಂದೆ ವಸಿಷ್ಠರು ಮೊದಲೇ ನಿರಾಕರಿಸಿದ್ದರೆಂದು ಅವನಿಗೆ ನಾಚಿಕೆ.

ಶರಣಂ ವಃ ಪ್ರಪದ್ಯೇಽಹಂ ಶರಣ್ಯಾನ್ ಶರಣಾಗತಃ ।
ಪ್ರತ್ಯಾಖ್ಯಾತೋಽಸ್ಮಿ ಭದ್ರಂ ವೋ ವಸಿಷ್ಠೇನ ಮಹಾತ್ಮನಾ ॥ ೧೬ ॥

ನಾನು ಶರಣಾಗತನಾಗಿ, ಆಶ್ರಯ ನೀಡಬಲ್ಲ ನಿಮ್ಮಲ್ಲಿ ಆಶ್ರಯವನ್ನು ಬೇಡುತ್ತೇನೆ, ಏಕೆಂದರೆ, ನಿಮಗೆ ಶುಭವಾಗಲಿ, ಮಹಾತ್ಮ ವಸಿಷ್ಠರು ನನ್ನ ಅಪೇಕ್ಷೆಯನ್ನು ನಿರಾಕರಿಸಿರುವರು.

ಯಷ್ಟುಕಾಮೋ ಮಹಾಯಜ್ಞಂ ತದನುಜ್ಞಾತುಮರ್ಹಥ ।
ಗುರುಪುತ್ರಾನಹಂ ಸರ್ವಾನ್ನಮಸ್ಕೃತ್ಯ ಪ್ರಸಾದಯೇ ॥ ೧೭ ॥

ನೀವು ನನಗೆ ಅನುಜ್ಞೆ ನೀಡಿರಿ. ಮಹಾಯಜ್ಞವನ್ನು ಮಾಡಲು ಬಯಸಿ ಗುರುಪುತ್ರರಾದ ನಿಮ್ಮೆಲ್ಲರನ್ನೂ ನಮಸ್ಕರಿಸಿ ಕೇಳಿಕೊಳ್ಳುತ್ತಿದ್ದೇನೆ.

ಶಿರಸಾ ಪ್ರಣತೋ ಯಾಚೇ ಬ್ರಾಹ್ಮಣಾಂಸ್ತಪಸಿ ಸ್ಥಿತಾನ್ ।
ತೇ ಮಾಂ ಭವಂತಃ ಸಿದ್ಧ್ಯರ್ಥಂ ಯಾಜಯಂತು ಸಮಾಹಿತಾಃ ॥
ಸಶರೀರೋ ಯಥಾಽಹಂ ಹಿ ದೇವಲೋಕಮವಾಪ್ನುಯಾಮ್॥ ೧೮ ॥

ತಪಸ್ಸಿನಲ್ಲಿ ನಿರತರಾದ ಬ್ರಾಹ್ಮಣರನ್ನು ನಿಮ್ಮನ್ನು ತಲೆ ಬಾಗಿ ನಮಿಸಿ ಯಾಚಿಸುತ್ತಿದ್ದೇನೆ. ಸಶರೀರನಾಗಿ ನಾನು ದೇವಲೋಕವನ್ನು ಹೊಂದುವಂತೆ ನನ್ನ ಇಷ್ಟ ಸಿದ್ಧಿಗಾಗಿ ಪೂಜ್ಯರಾದ ತಾವು ಮನಸ್ಸಿಟ್ಟು ನನ್ನಿಂದ ಯಾಗ ಮಾಡಿಸಿರಿ.

ಪ್ರತ್ಯಾಖ್ಯಾತೋ ವಸಿಷ್ಠೇನ ಗತಿಮನ್ಯಾಂ ತಪೋಧನಾಃ ।
ಗುರುಪುತ್ರಾನೃತೇ ಸರ್ವಾನ್ನಾಹಂ ಪಶ್ಯಾಮಿ ಕಂಚನ ॥ ೧೯ ॥

ತಪೋಧನರೆ, ಗುರು ವಸಿಷ್ಠರು ನಿರಾಕರಿಸಿರುವುದರಿಂದ ಗುರುಪುತ್ರರಾದ ನಿಮ್ಮೆಲ್ಲರನ್ನು ಹೊರತು ಇನ್ನು ಬೇರೆ ಯಾರೊಬ್ಬನನ್ನೂ ಇದಕ್ಕೆ ನಾನು ಕೇಳಿಕೊಳ್ಳುವುದಿಲ್ಲ.

ಇಕ್ಷ್ವಾಕೂಣಾಂ ಹಿ ಸರ್ವೇಷಾಂ ಪುರೋಧಾಃ ಪರಮಾ ಗತಿಃ ।

ಪುರೋಧಸಸ್ತು ವಿದ್ವಾಂಸಸ್ತಾರಯಂತಿ ಸದಾ ನೃಪಾನ್ ॥
ತಸ್ಮಾದನಂತರಂ ಸರ್ವೇ ಭವಂತೋ ದೈವತಂ ಮಮ ॥ ೨೦ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಸಪ್ತಪಂಚಾಶಃ ಸರ್ಗಃ ॥ ೫೭ ॥

ಇಕ್ಷ್ವಾಕುವಂಶದ ಎಲ್ಲ ರಾಜರಿಗೂ ವಸಿಷ್ಠರೇ ಪರಗತಿ ತೋರುವವರು. ಜ್ಞಾನಿಗಳಾದ ಪುರೋಹಿತರು ತಾನೆ ಸದಾ ರಾಜರಿಗೆ ಗತಿ ತೋರುವವರು? ಅದರಿಂದ ವಸಿಷ್ಠರು ನಿರಾಕರಿಸಿದ ಬಳಿಕ ಈಗ ನೀವೆಲ್ಲರೂ ನನಗೆ ದಾರಿತೋರಬೇಕು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಐವತ್ತೇಳನೆ ಸರ್ಗ ಮುಗಿಯಿತು.

ಅಷ್ಟಪಂಚಾಶಃ ಸರ್ಗಃ

ತತಸ್ತ್ರಿಶಂಕೋರ್ವಚನಂ ಶ್ರುತ್ವಾ ಕ್ರೋಧಸಮನ್ವಿತಮ್ ।
ಋಷಿಪುತ್ರಶತಂ ರಾಮ ರಾಜಾನಮಿದಮಬ್ರವೀತ್ ॥ ೧ ॥

ತ್ರಿಶಂಕು ಕೋಪದಿಂದ ಹೇಳಿದ ಮಾತನ್ನು ಕೇಳಿ ವಸಿಷ್ಠಪುತ್ರರು ನೂರು ಮಂದಿ, ರಾಮ! ರಾಜನನ್ನು ಕೇಳಿದರು.

ಪ್ರತ್ಯಾಖ್ಯಾತೋ ಹಿ ದುರ್ಬುದ್ಧೇ ಗುರುಣಾ ಸತ್ಯವಾದಿನಾ ।
ತಂ ಕಥಂ ಸಮತಿಕ್ರಮ್ಯ ಶಾಖಾಂತರಮುಪೇಯಿವಾನ್ ॥ ೨ ॥

ದುರ್ಬುದ್ಧಿಯವನೆ, ಸತ್ಯವಾದಿಯಾದ ಗುರು ವಸಿಷ್ಠರು ನಿರಾಕರಿಸಿದ್ದಾರೆ ತಾನೆ? ಅವರ ಮಾತನ್ನು ಉಲ್ಲಂಘಿಸಿ ಇನ್ನೊಬ್ಬ ಗುರುವನ್ನು ಸ್ವೀಕರಿಸುತ್ತಿರುವೆ? ಹೇಗೆ?

ಇಕ್ಷ್ವಾಕೂಣಾಂ ಹಿ ಸರ್ವೇಷಾಂ ಪುರೋಧಾಃ ಪರಮೋ ಗುರುಃ ।
ನ ಚಾತಿಕ್ರಮಿತುಂ ಶಕ್ಯಂ ವಚನಂ ಸತ್ಯವಾದಿನಃ ॥ ೩ ॥

ಇಕ್ಷ್ವಾಕು ವಂಶದವರಿಗೆಲ್ಲರಿಗೂ ಪರಮ ಗುರುವಾಗಿರುವ ವಸಿಷ್ಠರೆ ಪುರೋಹಿತರು. ಸತ್ಯವಾದಿಯಾದ ಅವರ ಮಾತನ್ನು ನೀನು ಉಲ್ಲಂಘಿಸಲಾಗದು.

ಅಶಕ್ಯಮಿತಿ ಚೋವಾಚ ವಸಿಷ್ಠೋ ಭಗವಾನೃಷಿಃ ।
ತಂ ವಯಂ ವೈ ಸಮಾಹರ್ತುಂ ಕ್ರತುಂ ಶಕ್ತಾಃ ಕಥಂ ತವ ॥ ೪ ॥

ಯಜ್ಞದಿಂದ ಸಶರೀರವಾಗಿ ಸ್ವರ್ಗಕ್ಕೆ ಹೋಗುವುದು ಅಶಕ್ಯ ಎಂದು ಭಗವಾನ್ ವಸಿಷ್ಠರು ಹೇಳಿದ ಮೇಲೆ, ಸಶರೀರ ಸ್ವರ್ಗಪ್ರಾಪ್ತಿ ಸಾಧನವಾಗಬಲ್ಲ ಯಾಗವನ್ನು ನಿನ್ನಿಂದ ಮಾಡಿಸಲು ನಾವು ಹೇಗೆ ಶಕ್ತರಾಗುತ್ತೇವೆ?

ಬಾಲಿಶಸ್ತ್ವಂ ನರಶ್ರೇಷ್ಠ ಗಮ್ಯತಾಂ ಸ್ವಪುರಂ ಪುನಃ ।
ಯಾಜನೇ ಭಗವಾನ್ ಶಕ್ತಸ್ತ್ರೈಲೋಕ್ಯಸ್ಯಾಪಿ ಪಾರ್ಥಿವ ॥
ಅವಮಾನಂ ಚ ತತ್ಕರ್ತುಂ ತಸ್ಯ ಶಕ್ಷ್ಯಾಮಹೇ ಕಥಮ್ ॥ ೫ ॥

ಪುರುಷೋತ್ತಮನೆ! ನೀನು ಮೂರ್ಖನಾಗಿರುವೆ. ಪುನಃ ನಿನ್ನ ನಗರಕ್ಕೇ ಹೋಗು. ರಾಜನೆ, ಮೂಲೋಕಕ್ಕೂ ಯಾಗ ಮಾಡಿಸಲು ಶಕ್ತರು ಭಗವಾನ್

ವಸಿಷ್ಠರೆ, ನಾವು ಮಾಡಿಸಬಲ್ಲೆವೆನ್ನುತ್ತ ಅವರನ್ನು ಅವಮಾನಿಸಲು ನಾವು ಹೇಗೆ ಶಕ್ತರಾಗುವೆವು?

ತೇಷಾಂ ತದ್ವಚನಂ ಶ್ರುತ್ವಾ ಕ್ರೋಧಪರ್ಯಾಕುಲಾಕ್ಷರಮ್ ।
ಸ ರಾಜಾ ಪುನರೇವೈತಾನಿದಂ ವಚನಮಬ್ರವೀತ್ ॥ ೬ ॥

ವಸಿಷ್ಠ ಪುತ್ರರು ಕೋಪದಿಂದ ಗದ್ಗದಗೊಂಡ ಕಂಠದಿಂದ ಹೇಳಿದ ಆ ಮಾತನ್ನು ಕೇಳಿ ಆ ರಾಜಾ ತ್ರಿಶಂಕು ಪುನಃ ಅವರಿಗೆ ಹೀಗೆ ನುಡಿದ.

ಪ್ರತ್ಯಾಖ್ಯಾತೋಸ್ಮಿ ಗುರುಣಾ ಗುರುಪುತ್ರೈಸ್ತಥೈವ ಚ ।
ಅನ್ಯಾಂ ಗತಿಂ ಗಮಿಷ್ಯಾಮಿ ಸ್ವಸ್ತಿ ವೋಽಸ್ತು ತಪೋಧನಾಃ ॥ ೭ ॥

ಗುರು ವಸಿಷ್ಠರು ನಿರಾಕರಿಸಿದರು. ಈಗ ನೀವೂ ಹಾಗೇ ನಿರಾಕರಿಸಿರುವಿರಿ. ಅದರಿಂದ ನಾನು ಬೇರೆ ಪುರೋಹಿತರನ್ನು ಅನ್ವೇಷಣೆ ಮಾಡುವೆನು. ತಪೋಧನರೆ! ನಿಮಗೆ ಒಳ್ಳೆಯದಾಗಲಿ!

ಋಷಿಪುತ್ರಾಸ್ತು ತಚ್ಛ್ರುತ್ವಾ ವಾಕ್ಯಂ ಘೋರಾಭಿಸಂಹಿತಮ್ ।
ಶೇಪುಃ ಪರಮಸಂಕ್ರುದ್ಧಾಶ್ಚಂಡಾಲತ್ವಂ ಗಮಿಷ್ಯಸಿ ॥
ಏವಮುಕ್ತ್ವಾ ಮಹಾತ್ಮಾನೋ ವಿವಿಶುಸ್ತೇ ಸ್ವಮಾಶ್ರಮಮ್ ॥ ೮ ॥

ಕುಲಗುರುವನ್ನು ಬಿಟ್ಟು ಬೇರೆ ಗುರುವನ್ನು ಪುರೋಹಿತನನಾಗಿ ಮಾಡಿದರೆ ಕುಲನಾಶವಾಗುವುದು. ಅದರಿಂದ ಬೇರೆ ಪುರೋಹಿತರನ್ನು ಹುಡುಕಿಕೊಳ್ಳುವ ಅಭಿಪ್ರಾಯವು ಘೋರವಾದುದು. ಅದನ್ನು ಕೇಳಿದ ವಸಿಷ್ಠ ಪುತ್ರರು ಪರಮ ಸಂಕ್ರುದ್ಧರಾಗಿ 'ನೀನು ಚಂಡಾಲನಾಗುವೆ' ಎಂದು ಶಪಿಸಿದರು. ಹೀಗೆ ಶಪಿಸಿ ಮಹಾತ್ಮರಾದ ಋಷಿಪುತ್ರರು ತಮ್ಮ ಆಶ್ರಮದೊಳಗೆ ಹೋದರು.

ತಚ್ಛ್ರುತ್ವಾ ಘೋರಸಂಕಾಶಮೃಷಿಪುತ್ರಸ್ಯ ಭಾಷಿತಮ್ ।
ಪ್ರಾವಿಶತ್ಸ್ವಪುರಂ ರಾಜಾ ಚಿಂತಯಾಮಾಸ ದುಃಖಿತಃ ॥ ॥ ೯ ॥

ಋಷಿಪುತ್ರನು ಆಡಿದ ಆ ಘೋರ ಶಾಪವಚನವನ್ನು ಕೇಳಿ ರಾಜಾ ತ್ರಿಶಂಕು ದುಃಖಿತನಾಗಿ ತನ್ನ ನಗರಕ್ಕೆ ಹಿಂತಿರುಗಿದನು.

ಅಥ ರಾತ್ರ್ಯಾಂ ವ್ಯತೀತಾಯಾಂ ರಾಜಾ ಚಂಡಾಲತಾಂ ಗತಃ ।
ನೀಲವಸ್ತ್ರಧರೋ ನೀಲಃ ಪರುಷೋ ಧ್ವಸ್ತಮೂರ್ಧಜಃ ॥

ಚಿತ್ಯಮಾಲ್ಯಾನುಲೇಪಶ್ಚ ಆಯಸಾಭರಣೋಽಭವತ್ ॥ ೧೦ ॥

ಆ ರಾತ್ರಿ ಕಳೆದಾಗ ರಾಜನು ಚಂಡಾಲನಾಗಿದ್ದ. ಕರಿಬಟ್ಟೆ ಉಟ್ಟು, ಶಿಖಾ ರಹಿತನಾಗಿ ಸ್ಮಶಾನದ ಮಾಲೆ ಬೂದಿಗಳನ್ನು ಧರಿಸಿದ ಕಬ್ಬಿಣದ ಆಭರಣ ತೊಟ್ಟ ಕರಿಬಣ್ಣದ ಒರಟು ಮೈಯ ಚಂಡಾಲನಾಗಿದ್ದ.

ತಂ ದೃಷ್ಟ್ವಾ ಮಂತ್ರಿಣಃ ಸರ್ವೇ ತ್ಯಜ್ಯ ಚಂಡಾಲರೂಪಿಣಮ್ ।
ಪ್ರಾದ್ರವನ್ಸಹಿತಾ ರಾಮ ಪೌರಾ ಯೇಽಸ್ಯಾನುಗಾಮಿನಃ ॥ ೧೧ ॥

ಚಂಡಾಲರೂಪದವನಾದ ರಾಜಾ ತ್ರಿಶಂಕುವನ್ನು ಮಂತ್ರಿಗಳೆಲ್ಲರೂ ಪರಿತ್ಯಜಿಸಿ, ರಾಮ! ದೂರ ಹೋದರು. ಅನುಚರರಾಗಿದ್ದ ಪೌರರೂ ಜೊತೆಗೇ ದೂರ ಹೋದರು.

ಏಕೋ ಹಿ ರಾಜಾ ಕಾಕುತ್ಸ್ಥ ಜಗಾಮ ಪರಮಾತ್ಮವಾನ್ ।
ದಹ್ಯಮಾನೋ ದಿವಾರಾತ್ರಂ ವಿಶ್ವಾಮಿತ್ರಂ ತಪೋಧನಮ್ ॥ ೧೨ ॥

ರಾಮ! ಏಕಾಂಗಿಯಾದ ರಾಜಾ ತ್ರಿಶಂಕು ಹಗಲು ರಾತ್ರಿ ದುಃಖದಿಂದ ಬೇಯುತ್ತ ಪರಮಧೈರ್ಯ ತಂದುಕೊಂಡು ತಪೋಧನನಾದ ವಿಶ್ವಾಮಿತ್ರನ ಬಳಿಗೆ ಬಂದ.

ವಿಶ್ವಾಮಿತ್ರಸ್ತು ತಂ ದೃಷ್ಟ್ವಾ ರಾಜಾನಂ ವಿಫಲೀಕೃತಮ್ ।
ಚಂಡಾಲರೂಪಿಣಂ ರಾಮ ಮುನಿಃ ಕಾರುಣ್ಯಮಾಗತಃ ॥ ೧೩ ॥

ರಾಮ! ವಿಶ್ವಾಮಿತ್ರನು ಮಾತ್ರ ರಾಜಾ ತ್ರಿಶಂಕು ಪುರೋಹಿತನನ್ನು ಪಡೆಯುವ ಯತ್ನದಲ್ಲಿ ವಿಫಲನಾದುದು ಮಾತ್ರವಲ್ಲದೆ ಚಂಡಾಲರೂಪವನ್ನೂ ಹೊಂದಿದ್ದನ್ನು ಕಂಡು ಅವನಲ್ಲಿ ಕರುಣೆ ತೋರಿದ.

ಕಾರುಣ್ಯಾತ್ಸ ಮಹಾತೇಜಾ ವಾಕ್ಯಂ ಪರಮಧಾರ್ಮಿಕಃ ।
ಇದಂ ಜಗಾದ ಭದ್ರಂ ತೇ ರಾಜಾನಂ ಘೋರರೂಪಿಣಮ್ ॥ ೧೪ ॥

ಪರಮ ಧಾರ್ಮಿಕನಾದ ಮಹಾ ತೇಜನಾದ ವಿಶ್ವಾಮಿತ್ರನು ಕರುಣೆಯಿಂದ, ರಾಮ! ನಿನಗೆ ಶುಭವಾಗಲಿ ಘೋರ ಚಂಡಾಲ ರೂಪಿಯಾದ ರಾಜಾ ತ್ರಿಶಂಕುವಿಗೆ ಹೀಗೆ ಹೇಳಿದ.

ಕಿಮಾಗಮನಕಾರ್ಯಂ ತೇ ರಾಜಪುತ್ರ ಮಹಾಬಲ ।
ಅಯೋಧ್ಯಾಧಿಪತೇ ವೀರ ಶಾಪಾಚ್ಚಂಡಾಲತಾಂ ಗತಃ ॥ ೧೫ ॥

ಅಯೋಧ್ಯಾಧಿಪತಿಯೆ, ವೀರ, ಮಹಾಬಲಿ ರಾಜಕುಮಾರ ತ್ರಿಶಂಕುವೆ! ನೀನು ಬಂದ ಉದ್ದೇಶವೇನು? ನೀನು ಶಾಪದಿಂದ ಚಂಡಾಲನಾದೆ ಏಕೆ?

ಅಥ ತದ್ವಾಕ್ಯಮಾಜ್ಞಾಯ ರಾಜಾ ಚಂಡಾಲತಾಂ ಗತಃ ।
ಅಬ್ರವೀತ್ಪ್ರಾಂಜಲಿರ್ವಾಕ್ಯಂ ವಾಕ್ಯಜ್ಞೋ ವಾಕ್ಯಕೋವಿದಮ್ ॥ ೧೬ ॥

ವಿಶ್ವಾಮಿತ್ರನ ಮಾತನ್ನು ಕೇಳಿ, ಮಾತುಬಲ್ಲ ಚಂಡಾಲನಾದ ರಾಜನು ಮಾತಿನಲ್ಲಿ ಕೋವಿದನಾದ ವಿಶ್ವಾಮಿತ್ರನಿಗೆ ಕೈಮುಗಿದು ನುಡಿದ.

ಪ್ರತ್ಯಾಖ್ಯಾತೋಸ್ಮಿ ಗುರುಣಾ ಗುರುಪುತ್ರೈಸ್ತಥೈವ ಚ ।
ಅನವಾಪ್ಯೈವ ತಂ ಕಾಮಂ ಮಯಾ ಪ್ರಾಪ್ತೋ ವಿಪರ್ಯಯಃ ॥೧೭॥

ನಾನು ಗುರು ವಸಿಷ್ಠನಿಂದಲೂ ಗುರುಪುತ್ರರಿಂದಲೂ ನಿರಾಕೃತನಾಗಿದ್ದೇನೆ. ಅವರಲ್ಲಿ ನನ್ನ ಅಭೀಷ್ಟವನ್ನು ಪಡೆಯದೆ ಅದಕ್ಕೆ ವಿರುದ್ಧವಾಗಿ ಶಾಪವನ್ನೆ ಪಡೆದೆ.

ಸಶರೀರೋ ದಿವಂ ಯಾಯಾಮಿತಿ ಮೇ ಸೌಮ್ಯ ದರ್ಶನಮ್ ।
ಮಯಾ ಚೇಷ್ಟಂ ಕ್ರತುಶತಂ ತಚ್ಚ ನಾವಾಪ್ಯತೇ ಫಲಮ್ ॥ ೧೮ ॥

ಸೌಮ್ಯನೆ! ನನ್ನ ಅಪೇಕ್ಷೆ ಸಶರೀರನಾಗಿ ಸ್ವರ್ಗವನ್ನು ಪಡೆಯಬೇಕೆಂದು ಅದಕ್ಕಾಗಿ ನಾನು ನೂರು ಯಜ್ಞ ಮಾಡಿದ್ದೇನೆ. ಸಶರೀರ ಸ್ವರ್ಗಪ್ರಾಪ್ತಿರೂಪ-ಫಲಮಾತ್ರ ಸಿಗಲಿಲ್ಲ.

ಇಲ್ಲಿ ಶತಕ್ರತು ಎಂದರೆ ಸರಿಯಾಗಿ ನೂರು ಯಜ್ಞವಲ್ಲ. ಅನೇಕ ಯಜ್ಞಗಳೆಂದರ್ಥ. ಸರಿಯಾಗಿ ನೂರು ಯಜ್ಞ ಮಾಡಿದವನು ಇಂದ್ರನೊಬ್ಬನೆ.

ಅನೃತಂ ನೋಕ್ತಪೂರ್ವಂ ಮೇ ನ ಚ ವಕ್ಷ್ಯೇ ಕದಾಚನ ।
ಕೃಚ್ಛ್ರೇಷ್ವಪಿ ಗತಃ ಸೌಮ್ಯ ಕ್ಷತ್ರಧರ್ಮೇಣ ತೇ ಶಪೇ ॥ ೧೯ ॥

ಅನೇಕ ಯಜ್ಞ ಮಾಡಿದವನೆಂದು ನಾನೇನೂ ಸುಳ್ಳು ಹೇಳುತ್ತಿಲ್ಲ. ಹಿಂದೆ ಎಂದೂ ನಾನು ಸುಳ್ಳಾಡಿಲ್ಲ, ಮುಂದೆಯೂ ಎಂದೂ ಎಂಥ ಆಪತ್ತಿನಲ್ಲೂ ಸುಳ್ಳಾಡಲಾರೆ, ಕ್ಷಾತ್ರಧರ್ಮಸಾಕ್ಷಿಯಾಗಿಯೆ ಇದನ್ನು ಹೇಳುತ್ತಿದ್ದೇನೆ.

ಯಜ್ಞೈರ್ಬಹುವಿಧೈರಿಷ್ಟಂ ಪ್ರಜಾ ಧರ್ಮೇಣ ಪಾಲಿತಾಃ ।
ಗುರವಶ್ಚ ಮಹಾತ್ಮಾನಃ ಶೀಲವೃತ್ತೇನ ತೋಷಿತಾಃ ॥ ೨೦ ॥

ನಾನು ನಾನಾವಿಧ ಯಜ್ಞಗಳನ್ನು ಮಾಡಿದ್ದೇನೆ. ಪ್ರಜೆಗಳನ್ನು ಧರ್ಮದಿಂದ ಪಾಲಿಸಿದ್ದೇನೆ. ಮಹಾತ್ಮರಾದ ಗುರುಗಳನ್ನು ನನ್ನ ಸ್ವಭಾವ ನಡತೆಗಳಿಂದ ಸಂತೋಷ ಪಡಿಸಿದ್ದೇನೆ.

ಧರ್ಮೇ ಪ್ರಯತಮಾನಸ್ಯ ಯಜ್ಞಂ ಚಾಹರ್ತುಮಿಚ್ಛತಃ ।
ಪರಿತೋಷಂ ನ ಗಚ್ಛಂತಿ ಗುರವೋ ಮುನಿಪುಂಗವ ॥ ೨೧ ॥

ಮುನಿಶ್ರೇಷ್ಠನೆ! ಧರ್ಮಾಚರಣೆಗೆ ಯತ್ನ ಮಾಡುತ್ತಿದ್ದೇನೆ. ಯಜ್ಞ ಮಾಡಲು ಬಯಸಿದ್ದೇನೆ. ಆದರೂ ಗುರುಗಳು ಸಂತೋಷ ಪಡುತ್ತಿಲ್ಲ.

ದೈವಮೇವ ಪರಂ ಮನ್ಯೇ ಪೌರುಷಂ ತು ನಿರರ್ಥಕಮ್ ।
ದೈವೇನಾಕ್ರಮ್ಯತೇ ಸರ್ವಂ ದೈವಂ ಹಿ ಪರಮಾ ಗತಿಃ ॥ ೨೨ ॥

ದೈವದ ಕೈಯೇ ಮೇಲಾಗುವುದೆಂದು ನಾನು ತಿಳಿಯುತ್ತೇನೆ. ಪೌರುಷವು ನಿರರ್ಥಕ. ದೈವವೇ ಎಲ್ಲ ಆಗುಹೋಗುಗಳನ್ನು ನಿಯಂತ್ರಣದಲ್ಲಿಟ್ಟುಕೊಳುತ್ತದೆ. ದೈವವೇ ಕೊನೆಯಲ್ಲಿ ಆಶ್ರಯವಾಗುತ್ತದೆ.

ತಸ್ಯ ಮೇ ಪರಮಾರ್ತಸ್ಯ ಪ್ರಸಾದಮಭಿಕಾಂಕ್ಷತಃ ।
ಕರ್ತುಮರ್ಹಸಿ ಭದ್ರಂ ತೇ ದೈವೋಪಹತಕರ್ಮಣಃ ॥ ೨೩ ॥

ನಾನೀಗ ಪರಮ ದುಃಖಿಯಾಗಿದ್ದೇನೆ, ನಿನ್ನ ಅನುಗ್ರಹಾಕಾಂಕ್ಷಿಯಾಗಿದ್ದೇನೆ. ನಿನಗೆ ಒಳ್ಳೆಯದಾಗಲಿ. ನನ್ನ ಯತ್ನವೆಲ್ಲವೂ ದೈವದಿಂದ ಹಾಳಾಗುತ್ತಿದೆ. ನೀನೇ ಅನುಗ್ರಹ ಮಾಡಬೇಕು.

ನಾನ್ಯಾಂ ಗತಿಂ ಗಮಿಷ್ಯಾಮಿ ನಾನ್ಯಃ ಶರಣಮಸ್ತಿ ಮೇ ।
ದೈವಂ ಪುರುಷಕಾರೇಣ ನಿವರ್ತಯಿತುಮರ್ಹಸಿ ॥ ೨೪ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇऽಷ್ಟಪಂಚಾಶಃ ಸರ್ಗಃ ॥ ೫೮ ॥

ಇನ್ನೊಬ್ಬರಾಶ್ರಯವನ್ನು ಬೇಡಲಾರೆ. ಇನ್ನೊಬ್ಬರ ಆಶ್ರಯ ನನಗಿಲ್ಲ. ನನ್ನ ದೈವವನ್ನು ನೀನೇ ನಿನ್ನ ಪ್ರಯತ್ನದಿಂದ ನಿವೃತ್ತಿ ಗೊಳಿಸಬೇಕು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಐವತ್ತೆಂಟನೆ ಸರ್ಗ ಮುಗಿಯಿತು.

ಏಕೋನಷಷ್ಟಿತಮಃ ಸರ್ಗಃ

ಉಕ್ತವಾಕ್ಯಂ ತು ರಾಜಾನಂ ಕೃಪಯಾ ಕುಶಿಕಾತ್ಮಜಃ ।
ಅಬ್ರವೀನ್ಮಧುರಂ ವಾಕ್ಯಂ ಸಾಕ್ಷಾಚ್ಚಂಡಾಲರೂಪಿಣಮ್ ॥ ೧ ॥

ರಾಜಾ ತ್ರಿಶಂಕು ಹೀಗೆ ಹೇಳಿದಾಗ ಸಾಕ್ಷಾತ್ ಚಂಡಾಲನಂತೇ ಕಾಣುತ್ತಿದ್ದ ಅವನಲ್ಲಿ ಕೃಪೆಯಿಂದ ರಾಜಾ ವಿಶ್ವಾಮಿತ್ರನು ಮಧುರವಾಗಿ ನುಡಿದ.

ಇಕ್ಷ್ವಾಕ ಸ್ವಾಗತಂ ವತ್ಸ ಜಾನಾಮಿ ತ್ವಾಂ ಸುಧಾರ್ಮಿಕಮ್ ।
ಶರಣಂ ತೇ ಭವಿಷ್ಯಾಮಿ ಮಾಭೈಷೀರ್ನೃಪಪುಂಗವ ॥ ೨ ॥

ಮಗು, ಇಕ್ಷ್ವಾಕು ವಂಶಜನಾದ ರಾಜಶ್ರೇಷ್ಠನೆ! ಭಯ ಪಡಬೇಡ, ನಿನಗೆ ಸ್ವಾಗತ, ನೀನು ಒಳ್ಳೆಯ ಧಾರ್ಮಿಕನೆಂದು ತಿಳಿಯುತ್ತೇನೆ. ನಿನಗೆ ಆಶ್ರಯ ನೀಡುತ್ತೇನೆ.

ವಸಿಷ್ಠರು ಹೇಳುವಂತೆ, ಸಶರೀರನಾಗಿ ಸ್ವರ್ಗವನ್ನು ಪಡೆಯುವುದು ನಿಷಿದ್ಧ. ಆದರೂ ತ್ರಿಶಂಕು ಮುಂತಾದ ರಾಜರು ಅಪರೋಕ್ಷ ಜ್ಞಾನಿಗಳು ಪ್ರಾರಬ್ಧಾನುಸಾರ ನಿಷಿದ್ಧ ಕಾಮನೆ ಮಾಡುತ್ತಾರೆ. ಅದು ಅವರಿಗೆ ಕರ್ಮಕ್ಷಯ ರೂಪಮೋಕ್ಷಕ್ಕೇ ಸಾಧನವಾಗುವುದರಿಂದ ಅವರಿಗೆ ಅದು ಧರ್ಮವೆ. ಅದರಿಂದ ವಿಶ್ವಾಮಿತ್ರನು ಅವನನ್ನು 'ಸುಧಾರ್ಮಿಕ' ಎನ್ನುತ್ತಾನೆ.

ವಸ್ತುತಃ ಅದು ತ್ರಿಶಂಕುವಿಗೆ ಪ್ರಾರಬ್ಧಾನುಸಾರವೂ ಬರಲಿಲ್ಲ. ಪ್ರಾರಬ್ಧಾನುಸಾರಿಯೇ ಆಗಿರುತ್ತಿದ್ದರೆ ಅದನ್ನೇ ವಿಶ್ವಾಮಿತ್ರ ಆತನಿಗೆ ದೊರಕಿಸುತ್ತಿದ್ದ. ಅದನ್ನು ದೊರಕಿಸದೆ ಪ್ರತ್ಯೇಕ ತ್ರಿಶಂಕು ಸ್ವರ್ಗವನ್ನೇ ಸೃಷ್ಟಿ ಮಾಡಿಕೊಟ್ಟ.

ಇದರಿಂದ ವಿಶ್ವಾಮಿತ್ರ ವಸಿಷ್ಠರಲ್ಲಿ ಕೇವಲ ದ್ವೇಷ ಸಾಧಿಸಿದಂತಾಯಿತು. ಇದು ವಿಶ್ವಾಮಿತ್ರನ ಪ್ರಾರಬ್ಧ. ಅದು ಸ್ವೋತ್ತಮದ್ರೋಹವಾಗದಿದ್ದುದರಿಂದ ಮೋಕ್ಷಾನಂದ ಹ್ರಾಸಕ್ಕೂ ಕಾರಣವಾಗಲಿಲ. ಹೀಗಾಗಿ ವಿಶ್ವಾಮಿತ್ರನು, ವಾಲ್ಮೀಕಿ ಅಡಿಗಡಿಗೆ ಸೇಳುವಂತೆ, 'ಮಹಾತೇಜ ಪರಮ ಧಾರ್ಮಿಕ'ನೆ.

ಇಲ್ಲದಿದ್ದರೆ, ಕ್ಷತ್ರಿಯನಾಗಿದ್ದು ಪೌರೋಹಿತ್ಯ ಮಾಡುವುದು, ವಸಿಷ್ಠರಂಥ ಪರಮ ವೈಷ್ಣವರಲ್ಲಿ ದ್ರೋಹ ಮಾಡುವುದು ಮುಂತಾದುದು ಬೇರೆ ಯಾರಿಗೂ ಸರ್ವಥಾ ಅರಗಿಸಿಕೊಳ್ಳಲಾಗದ ಮಹಾ ಪಾಪವೇ ಸರಿ. ಅಂತೂ ಬ್ರಾಹ್ಮಣ್ಯ ಸಂಪಾದಕವಾದ ತಪಸ್ಸಿಗೆ ಕ್ರೋಧ ಮಹಾವಿಘ್ನವಾಯಿತು.

ಅಹಮಾಮಂತ್ರಯೇ ಸರ್ವಾನ್ ಬಹ್ಮರ್ಷೀನ್ಪುಣ್ಯಕರ್ಮಣಃ ।
ಯಜ್ಞಸಾಹ್ಯಕರಾನ್ರಾಜಂಸ್ತತೋ ಯಕ್ಷ್ಯಸಿ ನಿರ್ವೃತಃ ॥ ೩ ॥

'ರಾಜನೆ, ಪುಣ್ಯಕರ್ಮಕಾರಿಗಳಾದ ಎಲ್ಲ ಬ್ರಹ್ಮರ್ಷಿಗಳನ್ನೂ ಯಜ್ಞದಲ್ಲಿ ಸಹಾಯ ಮಾಡಲು ನಾನು ಆಮಂತ್ರಿಸುತ್ತೇನೆ. ಆದರಿಂದ ನಿಶ್ಚಿಂತನಾಗಿ ಯಾಗ ಮಾಡು.

ಗುರುಶಾಪಕೃತಂ ರೂಪಂ ಯದಿದಂ ತ್ವಯಿ ವರ್ತತೇ ।
ಅನೇನ ಸಹ ರೂಪೇಣ ಸಶರೀರೋ ಗಮಿಷ್ಯಸಿ ॥ ೪ ॥

'ಗುರುಶಾಪದಿಂದ ನಿನಗೆ ಏನು ಈ ಚಂಡಾಲರೂಪ ಬಂದಿದೆಯೋ ಆ ರೂಪದಿಂದಲೇ ನೀನು ಸಶರೀರನಾಗಿ ಸ್ವರ್ಗಕ್ಕೆ ಹೋಗುವಿ.'

ಹಸ್ತಪ್ರಾಪ್ತಮಹಂ ಮನ್ಯೇ ಸ್ವರ್ಗಂ ತವ ನರಾಧಿಪ ।
ಯಸ್ತ್ವಂ ಕೌಶಿಕಮಾಗಮ್ಯ ಶರಣ್ಯಂ ಶರಣಾಗತಃ ॥ ೫ ॥

ರಾಜನೆ! ಸ್ವರ್ಗವು ನಿನ್ನ ಕೈಸೇರಿತೆಂದೇ ತಿಳಿಯುತ್ತೇನೆ. ಏಕೆಂದರೆ ಆಶ್ರಯ ನೀಡುವ ಈ ವಿಶ್ವಾಮಿತ್ರನ ಬಳಿಗೆ ಬಂದು ಶರಣಾಗತನಾಗಿರುವಿ.

ಏವಮುಕ್ತ್ವಾ ಮಹಾತೇಜಾಃ ಪುತ್ರಾನ್ಪರಮಧಾರ್ಮಿಕಾನ್ ।
ವ್ಯಾದಿದೇಶ ಮಹಾಪ್ರಾಜ್ಞಾನ್ಯಜ್ಞಸಂಭಾರಕಾರಣಾತ್ ॥
ಸರ್ವಾನ್ ಶಿಷ್ಯಾನ್ಸಮಾಹೂಯ ವಾಕ್ಯಮೇತದುವಾಚ ಹ ॥ ೬ ॥

ಮಹಾತೇಜನಾದ ವಿಶ್ವಾಮಿತ್ರನು ಪರಮಧಾರ್ಮಿಕರಾದ ಮಹಾಪ್ರಾಜ್ಞರೂ ಆದ ಎಲ್ಲ ಪುತ್ರರನ್ನೂ ಶಿಷ್ಯರನ್ನೂ ಕರೆದು ಯಜ್ಞಸಾಮಗ್ರಿಗಳ ಏರ್ಪಾಡು ಮಾಡುವುದಕ್ಕೆ ಆದೇಶ ನೀಡಿದ.

ಸರ್ವಾನೃಷಿಗಣಾನ್ವತ್ಸಾ ಆನಯಧ್ವಂ ಮಮಾಜ್ಞಯಾ ।
ಸಶಿಷ್ಯಸುಹೃದಶ್ಚೈವ ಸರ್ತ್ವಿಜಃ ಸುಬಹುಶ್ರುತಾನ್ ॥ ೭ ॥

ಮಕ್ಕಳೆ, ನನ್ನಾಜ್ಞೆಯಂತೆ ಬಹಳ ಅಧ್ಯಯನ ಮಾಡಿರುವ ಎಲ್ಲ ಋಷಿ ಸಮೂಹಗಳನ್ನೂ ಕೂಡ ತಮ್ಮ ತಮ್ಮ ಶಿಷ್ಯ ಬಂಧುಗಳೊಂದಿಗೆ ಋತ್ವಿಜರೊಂದಿಗೆ ಕರೆತನ್ನಿರಿ.

ಯದನ್ಯೋ ವಚನಂ ಬ್ರೂಯಾನ್ಮದ್ವಾಕ್ಯಬಲಚೋದಿತಃ ।
ತತ್ಸರ್ವಮಖಿಲೇನೋಕ್ತಂ ಮಮಾಖ್ಯೇಯಮನಾದೃತಮ್ ॥ ೮ ॥

ನನ್ನ ಆಹ್ವಾನವನ್ನು ಒಪ್ಪಿದವನಾಗಲಿ ಒಪ್ಪದಿರುವವನಾಗಲಿ ಹೇಳುವ ಎಲ್ಲ ಮಾತನ್ನು ಅದು ಆದರಿಸಿದ್ದೇ ಇರಲಿ ನಿಂದಿಸಿದ್ದೇ ಇರಲಿ ನನಗೆ ಪೂರ್ತಿಯಾಗಿ ಹೇಳಬೇಕು.

ತಸ್ಯ ತದ್ವಚನಂ ಶ್ರುತ್ವಾ ದಿಶೋ ಜಗ್ಮುಸ್ತದಾಜ್ಞಯಾ ।
ಆಜಗ್ಮುರಥ ದೇಶೇಭ್ಯಃ ಸರ್ವೇಭ್ಯೋ ಬ್ರಹ್ಮವಾದಿನಃ ॥ ೯ ॥

ತೇ ಚ ಶಿಷ್ಯಾಃ ಸಮಾಗಮ್ಯ ಮುನಿಂ ಜ್ವಲಿತತೇಜಸಮ್ ।
ಊಚುಶ್ಚ ವಚನಂ ಸರ್ವೇ ಸರ್ವೇಷಾಂ ಬ್ರಹ್ಮವಾದಿನಾಮ್ ॥ ೧೦ ॥

ವಿಶ್ವಾಮಿತ್ರನ ಮಾತನ್ನು ಕೇಳಿ ಶಿಷ್ಯರು ಪುತ್ರರು ಎಲ್ಲ ದಿಕ್ಕುಗಳಿಗೂ ಅವನಾಜ್ಞೆಯಂತೆ ಹೋದರು. ಬಳಿಕ ಎಲ್ಲ ದೇಶಗಳಿಂದ ಬ್ರಹ್ಮವಾದಿಗಳು ಹಿಂದಿರುಗಿ ಬಂದರು. ಅವರು ಜ್ವಲಿಸುವ ತೇಜಸ್ಸುಳ್ಳ ಮುನಿಯ ಬಳಿ ಬಂದು ಎಲ್ಲ ಬ್ರಹ್ಮವಾದಿಗಳಾಡಿದ ಮಾತುಗಳನ್ನು ಹೇಳಿದರು.

ಶ್ರುತ್ವಾ ತೇ ವಚನಂ ಸರ್ವೇ ಸಮಾಯಾಂತಿ ದ್ವಿಜಾತಯಃ ।
ಸರ್ವದೇಶೇಷು ಚಾಗಚ್ಛನ್ವರ್ಜಯಿತ್ವಾ ಮಹೋದಯಮ್ ॥ ೧೧ ॥

ನಿಮ್ಮಾಜ್ಞೆಯನ್ನು ಕೇಳಿ ಎಲ್ಲ ದೇಶಗಳಲ್ಲಿರುವ ಎಲ್ಲ ದ್ವಿಜರೂ ಕೂಡ ಬರುತ್ತಿದ್ದಾರೆ, ಮಹೋದಯನೆಂಬ ಒಬ್ಬ ದ್ವಿಜನು-ಮಾತ್ರ ಬರುತ್ತಿಲ್ಲ.

ವಾಸಿಷ್ಠಂ ತಚ್ಛತಂ ಸರ್ವಂ ಕ್ರೋಧಪರ್ಯಾಕುಲಾಕ್ಷರಮ್ ।
ಯದಾಹ ವಚನಂ ಸರ್ವಂ ಶೃಣು ತ್ವಂ ಮುನಿಪುಂಗವ ॥ ೧೨ ॥

ವಸಿಷ್ಠರ ನೂರು ಪುತ್ರರು ಎಲ್ಲರೂ ಕೋಪದಿಂದ ನಡುಗುವ ಕಂಠಧ್ವನಿಯಿಂದ ಏನು ಹೇಳಿದರೋ ಅದೆಲ್ಲವನ್ನೂ ಹೇ ಮುನಿಶ್ರೇಷ್ಠನೇ, ಹೇಳುವೆವು, ಕೇಳು.

ಕ್ಷತ್ರಿಯೋ ಯಾಜಕೋ ಯಸ್ಯ ಚಂಡಾಲಸ್ಯ ವಿಶೇಷತಃ ।
ಕಥಂ ಸದಸಿ ಭೋಕ್ತಾರೋ ಹವಿಸ್ತಸ್ಯ ಸುರರ್ಷಯಃ ॥ ೧೩ ॥

ಕ್ಷತ್ರಿಯನ ಪೌರೋಹಿತ್ಯದಲ್ಲಿ ವಿಶೇಷವಾಗಿ ತಾನು ಚಂಡಾಲನಾಗಿದ್ದು ಯಾಗ

ಮಾಡಿದರೆ ಅವನ ಸದಸ್ಸಿನಲ್ಲಿ ದೇವತೆಗಳು ಋಷಿಗಳು ಹವಿಸ್ಸನ್ನು ಹೇಗೆ ಉಣ್ಣುತ್ತಾರೆ?

ಬ್ರಾಹ್ಮಣಾ ವಾ ಮಹಾತ್ಮಾನೋ ಭುಕ್ತ್ವಾ ಚಂಡಾಲಭೋಜನಮ್ ।
ಕಥಂ ಸ್ವರ್ಗಂ ಗಮಿಷ್ಯಂತಿ ವಿಶ್ವಾಮಿತ್ರೇಣ ಪಾಲಿತಾಃ ॥ ೧೪ ॥

ವಿಶ್ವಾಮಿತ್ರನು ರಕ್ಷಿಸಿದ ಮಾತ್ರಕ್ಕೆ ಮಹಾತ್ಮರಾದ ಬ್ರಾಹ್ಮಣರಾದರೂ ಚಂಡಾಲನ ಅನ್ನವನ್ನು ಉಂಡು ಹೇಗೆ ಸ್ವರ್ಗಕ್ಕೆ ಹೋಗುತ್ತಾರೆ?

ಏತದ್ವಚನನೈಷ್ಠುರ್ಯಮೂಚುಃ ಸಂರಕ್ತಲೋಚನಾಃ ।
ವಾಸಿಷ್ಠಾ ಮುನಿಶಾರ್ದೂಲ ಸರ್ವೇತೇ ಸಮಹೋದಯಾಃ ॥ ೧೫ ॥

ಮುನಿಶ್ರೇಷ್ಠನೆ! ವಸಿಷ್ಠ ಪುತ್ರರೂ ಮಹೋದಯನೂ ಎಲ್ಲರೂ ಕೋಪದಿಂದ ಕೆಂಗಣ್ಣರಾಗಿ ಈ ನಿಷ್ಠುರವಾದ ಮಾತನ್ನಾಡಿದರು.

ತೇಷಾಂ ತದ್ವಚನಂ ಶ್ರುತ್ವಾ ಸರ್ವೇಷಾಂ ಮುನಿಪುಂಗವಃ ।
ಕ್ರೋಧಸಂರಕ್ತನಯನಃ ಸರೋಷಮಿದಮಬ್ರವೀತ್ ॥ ೧೬ ॥

ಮುನಿಶ್ರೇಷ್ಠ ವಿಶ್ವಾಮಿತ್ರನು ಅವರೆಲ್ಲರ ಈ ಮಾತನ್ನು ಕೇಳಿ ಕೋಪದಿಂದ ಕೆಂಗಣ್ಣನಾಗಿ ರೋಷದಿಂದ ಈ ಮಾತನ್ನು ನುಡಿದನು.

ಯೇ ದೂಷಯಂತ್ಯದುಷ್ಟಂ ಮಾಂ ತಪ ಉಗ್ರಂ ಸಮಾಸ್ಥಿತಮ್ ।
ಭಸ್ಮಭೂತಾ ದುರಾತ್ಮಾನೋ ಭವಿಷ್ಯಂತಿ ನ ಸಂಶಯಃ ॥ ೧೭ ॥

ಉಗ್ರವಾದ ತಪಸ್ಸನ್ನು ಮಾಡಿರುವ ನಿರ್ದುಷ್ಟನಾದ ನನ್ನನ್ನು ಯಾರು ದೂಷಣೆ ಮಾಡುತ್ತಾರೋ ಅವರು ದುರಾತ್ಮರು, ಭಸ್ಮವಾಗುತ್ತಾರೆ. ಇದರಲ್ಲಿ ಸಂಶಯವಿಲ್ಲ.

ಅದ್ಯ ತೇ ಕಾಲಪಾಶೇನ ನೀತಾ ವೈವಸ್ವತಕ್ಷಯಮ್ ।
ಸಪ್ತಜಾತಿಶತಾನ್ಯೇವ ಮೃತಪಾಃ ಸಂತು ಸರ್ವಶಃ ॥ ೧೮ ॥

ಅವರು ಇಂದೇ ಯಮಪಾಶದಿಂದ ಬದ್ಧರಾಗಿ ಯಮಪಟ್ಟಣಕ್ಕೆ ಹೋಗಲಿ. ಏಳು ನೂರು ಜನ್ಮ ಪಡೆಯಲಿ. ಹೆಣದ ಬಟ್ಟೆ ಉಡುವವರಾಗಲಿ.

ಶ್ವಮಾಂಸನಿಯತಾಹಾರಾ ಮುಷ್ಟಿಕಾ ನಾಮ ನಿರ್ಘೃಣಾಃ ।
ವಿಕೃತಾಶ್ಚ ವಿರೂಪಾಶ್ಚ ಲೋಕಾನನುಚರಂತ್ವಿಮಾನ್ ॥ ೧೯ ॥

ನಾಯಿ ಮಾಂಸವನ್ನೇ ಬಿಡದೆ ಉಣ್ಣುತ್ತಿರಲಿ ಕ್ರೂರಿಗಳಾಗಿ ದೊಂಬರಾಗಿ ಜನಿಸಲಿ. ವಿಕೃತವಾದ ಅಸಹ್ಯ ರೂಪದವರಾಗಿ ಈ ಲೋಕಗಳಲ್ಲಿ ಸಂಚರಿಸುತ್ತಿರಲಿ.

ಮಹೋದಯಶ್ಚ ದುರ್ಬುದ್ಧಿರ್ಮಾಮದೂಷ್ಯಂ ಹ್ಯದೂಷಯತ್ ।
ದೂಷಿತಃ ಸರ್ವಲೋಕೇಷು ನಿಷಾದತ್ವಂ ಗಮಿಷ್ಯತಿ ॥ ೨೦ ॥

ಮಹೋದಯನೂ ಕೂಡ ದುರ್ಬುದ್ಧಿಯವನು ತಪೋಬಲದಿಂದ ಎಲ್ಲ ಪಾಪಗಳನ್ನು ಜೀರ್ಣಿಸಿಕೊಂಡು ನಿರ್ದುಷ್ಟನಾದ ನನ್ನನ್ನು ದೂಷಿಸಿದ್ದಾನೆ. ಅವನು ಎಲ್ಲ ಲೋಕಗಳಲ್ಲಿ ದೂಷಣೆಗೊಳಗಾಗುವನು ಬೇಡರವನಾಗಿ ಜನಿಸುವನು.

ಪ್ರಾಣಾತಿಪಾತನಿರತೋ ನಿರನುಕ್ರೋಶತಾಂ ಗತಃ ।
ದೀರ್ಘಕಾಲಂ ಮಮ ಕ್ರೋಧಾರ್ದ್ದುರ್ಗತಿಂ ವರ್ತಯಿಷ್ಯತಿ ॥ ೨೧ ॥

ಪ್ರಾಣಿಗಳ ಪ್ರಾಣ ತೆಗೆಯುವ ನಿರ್ದಯನಾಗಿ ನನ್ನ ಕ್ರೋಧಕ್ಕೆ ಬಲಿಯಾಗಿ ಆ ಮಹೋದಯನು ದೀರ್ಘಕಾಲ ದುರ್ಗತಿಯನ್ನು ಹೊಂದುವನು.

ಈ ಬಗೆಯ ಶಾಪಗಳಿಂದ ಮಹೋದಯ ಮುಂತಾದ ಸಜ್ಜನರಿಗೇನೂ ಕೇಡಿಲ್ಲ. ಶಾಪ ಕೊಟ್ಟ ವಿಶ್ವಾಮಿತ್ರನಿಗೇ ಅವನು ಯೋಗ್ಯತೆ ಮೀರಿ ಮಾಡಿದ ಪುಣ್ಯಗಳು ನಾಶವಾಗುತ್ತವೆ. ಇದರಿಂದ ಅವನಿಗೂ ಕ್ಷೇಮವೇ ಆಗುತ್ತದೆ.

ಏತಾವದುಕ್ತ್ವಾ ವಚನಂ ವಿಶ್ವಾಮಿತ್ರೋ ಮಹಾತಪಾಃ ।
ವಿರರಾಮ ಮಹಾತೇಜಾ ಋಷಿಮಧ್ಯೇ ಮಹಾಮುನಿಃ ॥ ೨೨ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಏಕೋನಷಷ್ಟಿತಮಃ ಸರ್ಗಃ ॥ ೫೯ ॥

ಋಷಿಗಳ ಮಧ್ಯದಲ್ಲಿ ಇಷ್ಟು ಹೇಳಿ ಮಹಾತಪ ಮಹಾತೇಜ ಮಹಾಮುನಿ ವಿಶ್ವಾಮಿತ್ರನು ಸುಮ್ಮನಾದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಐವತ್ತೊಂಬತ್ತನೆ ಸರ್ಗ ಮುಗಿಯಿತು.

ಷಷ್ಟಿತಮಃ ಸರ್ಗಃ

ತಪೋಬಲಹತಾನ್ ಕೃತ್ವಾ ವಾಸಿಷ್ಠಾನ್ಸಮಹೋದಯಾನ್ ।
ಋಷಿಮಧ್ಯೇ ಮಹಾತೇಜಾ ವಿಶ್ವಾಮಿತ್ರೋಽಭ್ಯಭಾಷತ ॥ ೧ ॥

ತನ್ನ ತಪೋಬಲದಿಂದ ಮಹೋದಯ ಮುನಿಗೂ ವಸಿಷ್ಠ ಪುತ್ರರಿಗೂ ಶಾಪವಿತ್ತ ಬಳಿಕ ಮಹಾತೇಜನಾದ ವಿಶ್ವಾಮಿತ್ರನು ಋಷಿಗಳ ಮಧ್ಯದಲ್ಲಿ ನುಡಿದ.

ಅಯಮಿಕ್ಷ್ವಾಕುದಾಯಾದಸ್ತ್ರಿಶಂಕುರಿತಿ ವಿಶ್ರುತಃ ।
ಧರ್ಮಿಷ್ಠಶ್ಚ ವದಾನ್ಯಶ್ಚ ಮಾಂ ಚೈವ ಶರಣಂ ಗತಃ ॥
ತೇನಾನೇನ ಶರೀರೇಣ ದೇವಲೋಕಜಿಗೀಷಯಾ ॥ ೨ ॥

ಇವನು ಇಕ್ಷ್ವಾಕುವಂಶದವನು ತ್ರಿಶಂಕು ಎಂದು ಪ್ರಸಿದ್ಧನಾದ ರಾಜ. ಧರ್ಮಿಷ್ಠ, ಉದಾರಿ. ಅವನು ಈಗ ನನ್ನನ್ನು ಶರಣು ಹೊಂದಿದ್ದಾನೆ. ಏಕೆಂದರೆ ಈ ಪಾರ್ಥಿವ ಶರೀರದಿಂದಲೇ ದೇವಲೋಕವನ್ನು ತಾನು ಪಡೆಯಲು ಬಯಸಿದ್ದಾನೆ.

ಯಥಾಽಯಂ ಸ್ವಶರೀರೇಣ ಸ್ವರ್ಗಲೋಕಂ ಗಮಿಷ್ಯತಿ ।
ತಥಾ ಪ್ರವರ್ತ್ಯತಾಂ ಯಜ್ಞೋ ಭವದ್ಭಿಶ್ಚ ಮಯಾ ಸಹ ॥ ೩ ॥

ಅವನು ತನ್ನ ಈ ಶರೀರದಿಂದಲೇ ಸ್ವರ್ಗಲೋಕಕ್ಕೆ ಹೋಗಲು ಶಕ್ತನಾಗಬೇಕು ಹಾಗೇ ನೀವು ನನ್ನೊಂದಿಗೆ ಯಜ್ಞದಲ್ಲಿ ಪ್ರವೃತ್ತಿ ಮಾಡಿರಿ.

ವಿಶ್ವಾಮಿತ್ರವಚಃ ಶ್ರುತ್ವಾ ಸರ್ವ ಏವ ಮಹರ್ಷಯಃ ।
ಊಚುಃ ಸಮೇತ್ಯ ಸಹಿತಾ ಧರ್ಮಜ್ಞಾ ಧರ್ಮಸಂಹಿತಮ್ ॥ ೪ ॥

ವಿಶ್ವಾಮಿತ್ರನ ಮಾತನ್ನು ಕೇಳಿ ಧರ್ಮಜ್ಞರಾದ ಎಲ್ಲ ಮಹರ್ಷಿಗಳು ಒಂದಾಗಿ ಸೇರಿ ತಮಗೆ ತಾವೇ ಧರ್ಮಸಮ್ಮತವಾಗಿ ಹೇಳಿಕೊಂಡರು.

ಅಯಂ ಕುಶಿಕದಾಯಾದೋ ಮುನಿಃ ಪರಮಕೋಪನಃ ।
ಯದಾಹ ವಚನಂ ಸಮ್ಯಗೇತತ್ಕಾರ್ಯಂ ನ ಸಂಶಯಃ ॥ ೫ ॥

ಈ ವಿಶ್ವಾಮಿತ್ರನು ಬಹಳ ಕೋಪಿಷ್ಠ. ಅವನು ಏನು ಹೇಳುವನೋ ಅದನ್ನು ನಾವು ಮಾಡಬೇಕು, ಇದರಲ್ಲಿ ಸಂಶಯವಿಲ್ಲ.

ಅಗ್ನಿಕಲ್ಪೋ ಹಿ ಭಗವಾನ್ ಶಾಪಂ ದಾಸ್ಯತಿ ರೋಷಿತಃ ।
ತಸ್ಮಾತ್ಪ್ರವರ್ತ್ಯತಾಂ ಯಜ್ಞಃ ಸಶರೀರೋ ಯಥಾ ದಿವಮ್ ॥ ೬ ॥

ಗಚ್ಛೇದಿಕ್ಷ್ವಾಕುದಾಯಾದೋ ವಿಶ್ವಾಮಿತ್ರಸ್ಯ ತೇಜಸಾ ।
ತಥಾ ಪ್ರವರ್ತ್ಯತಾಂ ಯಜ್ಞಃ ಸರ್ವೇ ಸಮಧಿತಿಷ್ಠತ ॥ ೭ ॥

ಪೂಜ್ಯ ವಿಶ್ವಾಮಿತ್ರನು ಈತ ಅಗ್ನಿಯಂತೆ. ಅವನಿಗೆ ಕೋಪ ಬರಿಸಿದರೆ ಶಾಪ ನೀಡುತ್ತಾನೆ. ಅದರಿಂದ ನಾವು ಯಜ್ಞದಲ್ಲಿ ಪ್ರವೃತ್ತಿ ಮಾಡೋಣ. ತ್ರಿಶಂಕು ವಿಶ್ವಾಮಿತ್ರನ ತೇಜಸ್ಸಿನಿಂದ ಸಶರೀರನಾಗಿ ಸ್ವರ್ಗಕ್ಕೆ ಹೋಗುವಂತೆ ಯಜ್ಞ ಮಾಡೋಣ ಎಲ್ಲರೂ ಸಿದ್ಧರಾಗಿರಿ.

ಏವಮುಕ್ತ್ವಾ ಮಹರ್ಷಯಶ್ಚಕ್ರುಸ್ತಾಸ್ತಾಃ ಕ್ರಿಯಾಸ್ತದಾ ।
ಯಾಜಕಶ್ಚ ಮಹಾತೇಜಾ ವಿಶ್ವಾಮಿತ್ರೋಽಭವತ್ತತೌ ॥ ೮ ॥

ಹೀಗೆ ಹೇಳಿ ಮಹರ್ಷಿಗಳು ಋತ್ವಿಜರಾಗಿ ಆಯಾ ಋತ್ವಿಜರ ಕಾರ್ಯಗಳನ್ನು ನೆರವೇರಿಸಿದರು. ಪುರೋಹಿತನು ಅಧ್ವರ್ಯು ಈ ಯಜ್ಞದಲ್ಲಿ ಮಹಾತೇಜನಾದ ವಿಶ್ವಾಮಿತ್ರನೇ ಆದನು.

ಕ್ಷತ್ರಿಯನಾದ್ದರಿಂದ ಪೌರೋಹಿತ್ಯ ಮಾಡಲು ವಿಶ್ವಾಮಿತ್ರನಿಗೆ ಅಧಿಕಾರವಿಲ್ಲ. ಚಂಡಾಲನಾದ್ದರಿಂದ ತ್ರಿಶಂಕು ಯಜಮಾನನಾಗುವುದಕ್ಕೂ ಯೋಗ್ಯನಲ್ಲ. ಧರ್ಮಜ್ಞರಾದ ಋತ್ವಿಜರು ಇಂಥ ಯಜ್ಞವನ್ನು ಹೇಗೆ ನಡೆಸಿಕೊಡುತ್ತಿದ್ದಾರೆ ಎಂದರೆ ವಿಶ್ವಾಮಿತ್ರ ಮಹಾತಪ, ಪರಮ ಕೋಪನ, ಶಾಪ ಕೊಟ್ಟಾನೆಂದು ಹೆದರಿ ಆಪದ್ಧರ್ಮವಾಗಿ ಇಂಥ ಯಜ್ಞ ಮಾಡಲು ಒಪ್ಪಿದರು. ದೇವತೆಗಳು ಒಪ್ಪುವುದಿಲ್ಲ. ಅವರು ಹವಿಸ್ಸನ್ನು ಸ್ವೀಕರಿಸುವುದಿಲ್ಲ. ಇದು ಮುಂದೆ ಸ್ಪಷ್ಟವಿದೆ.

ಋತ್ವಿಜಶ್ಚಾನುಪೂರ್ವ್ಯೇಣ ಮಂತ್ರವನ್ಮಂತ್ರಕೋವಿದಾಃ ।
ಚಕ್ರುಃ ಸರ್ವಾಣಿ ಕರ್ಮಾಣಿ ಯಥಾಕಲ್ಪಂ ಯಥಾವಿಧಿ ॥ ೯ ॥

ಋತ್ವಿಜರೆಲ್ಲರೂ ಮಂತ್ರಕೋವಿದರು ಎಲ್ಲ ಯಜ್ಞಕ್ರಿಯೆಗಳನ್ನೂ ಯಥಾ-ಯೋಗ್ಯವಾಗಿ ವಿಧ್ಯುಕ್ತವಾಗಿ ಮಂತ್ರಪೂರ್ವಕವಾಗಿಯೇ ಕ್ರಮವಾಗಿ ನಡೆಸಿದರು.

ತತಃ ಕಾಲೇನ ಮಹತಾ ವಿಶ್ವಾಮಿತ್ರೋ ಮಹಾತಪಾಃ ।
ಚಕಾರಾವಾಹನಂ ತತ್ರ ಭಾಗಾರ್ಥಂ ಸರ್ವದೇವತಾಃ ॥

ನಾಭ್ಯಾಗಮಂಸ್ತದಾऽऽಹೂತಾ ಭಾಗಾರ್ಥಂ ಸರ್ವದೇವತಾಃ ॥ ೧೦ ॥

ಮಂತ್ರಗಳನ್ನು ಮತ್ತೆ ಮತ್ತೆ ಆವೃತ್ತಿ ಮಾಡುತ್ತ ಹೆಚ್ಚುಕಾಲ ತೆಗೆದುಕೊಂಡು ಮಹಾತಪನಾದ ವಿಶ್ವಾಮಿತ್ರನು ಎಲ್ಲ ದೇವತೆಗಳನ್ನೂ ಯಜ್ಞಭಾಗ ಸ್ವೀಕಾರಕ್ಕೆ ಆಹ್ವಾನಿಸಿದ. ಆದರೂ ಯಜ್ಞಭಾಗ ಸ್ವೀಕಾರಕ್ಕೆ, ಆಹೂತರಾದ ದೇವತೆಗಳು ಯಾರೂ ಬರಲಿಲ್ಲ.

ಋತ್ವಿಜರಿಗೆ ಯಜ್ಞ ಮಾಡುವುದು ಆಪದ್ಧರ್ಮವಾಗಿತ್ತು. ಪುರೋಹಿತನಿಗೂ ಯಜಮಾನನಿಗೂ ಅಂಥ ಆಪತ್ತು ಏನಿತ್ತು ? ಅದರಿಂದ ದೇವತೆಗಳು ಯಜ್ಞಭಾಗ ಸ್ವೀಕರಿಸಲು ಒಪ್ಪಲಿಲ್ಲ.

ತತಃ ಕ್ರೋಧಸಮಾವಿಷ್ಟೋ ವಿಶ್ವಾಮಿತ್ರೋ ಮಹಾಮುನಿಃ ।
ಸ್ರುವಮುದ್ಯಮ್ಯ ಸಕ್ರೋಧಸ್ತ್ರಿಶಂಕುಮಿದಮಬ್ರವೀತ್ ॥ ೧೧ ॥

ಆಗ ಮಹಾಮುನಿ ವಿಶ್ವಾಮಿತ್ರನು ಅಧ್ವರ್ಯುವಾದ್ದರಿಂದ ತನ್ನ ಕೈಯಲ್ಲಿದ್ದ ಸ್ರುವವನ್ನು ಕೋಪಾವೇಶದಿಂದ ಎತ್ತಿ ಬಿಸಾಕಿ ಕೋಪದಿಂದ ತ್ರಿಶಂಕುವಿಗೆ ನುಡಿದ.

ಪಶ್ಯ ಮೇ ತಪಸೋ ವೀರ್ಯಂ ಸಾರ್ಜಿತಸ್ಯ ನರೇಶ್ವರ ।
ಏಷ ತ್ವಾಂ ಸಶರೀರೇಣ ನಯಾಮಿ ಸ್ವರ್ಗಮೋಜಸಾ ॥
ದುಷ್ಪ್ರಾಪಂ ಸ್ವಶರೀರೇಣ ದಿವಂ ಗಚ್ಛ ನರಾಧಿಪ ॥ ೧೨ ॥

ರಾಜನೆ, ನಾನು ಗಳಿಸಿರುವ ತಪಃ ಪುಣ್ಯದ ಪ್ರಭಾವವನ್ನು ನೋಡು. ನಾನು ನಿನ್ನನ್ನು ನನ್ನ ಸ್ವಶಕ್ತಿಯಿಂದಲೆ ಸಶರೀರವಾಗಿ ಸ್ವರ್ಗಕ್ಕೆ ಒಯ್ಯುತ್ತೇನೆ. ನಿನ್ನ ಸ್ವಶರೀರದಿಂದಲೇ ದುಷ್ಪ್ರಾಪ್ಯವಾದ ಸ್ವರ್ಗಕ್ಕೆ, ರಾಜನೆ! ನೀನು ನಡೆ.

ಸಾರ್ಜಿತಂ ಕಿಂಚಿದಪ್ಯಸ್ತಿ ಮಯಾ ಹಿ ತಪಸಃ ಫಲಮ್ ।
ರಾಜನ್ಸ್ವತೇಜಸಾ ತಸ್ಯ ಸಶರೀರೋ ದಿವಂ ವ್ರಜ ॥ ೧೩ ॥

ನಾನು ಚೆನ್ನಾಗಿ ಗಳಿಸಿದ. ತಪಃ ಫಲ ಸ್ವಲ್ಪವಾದರೂ ನನ್ನಲ್ಲಿರುವುದಾದರೆ, ರಾಜನೆ, ಈ ಯಜ್ಞವೇಕೆ ನನ್ನ ಸ್ವಶಕ್ತಿಯಿಂದಲೇ ಸಶರೀರನಾಗಿ ನೀನು ಸ್ವರ್ಗಕ್ಕೆ ಹೋಗುವೆ.

ಉಕ್ತವಾಕ್ಯೇ ಮುನೌ ತಸ್ಮಿನ್ಸಶರೀರೋ ನರೇಶ್ವರಃ ।
ದಿವಂ ಜಗಾಮ ಕಾಕುತ್ಸ್ಥ ಮುನೀನಾಂ ಪಶ್ಯತಾಂ ತದಾ ॥ ೧೪ ॥

ವಿಶ್ವಾಮಿತ್ರಮುನಿ ಹೀಗೆ ಹೇಳಿದೊಡನೆ ರಾಜಾ ತ್ರಿಶಂಕು, ಹೇ ರಾಮ! ಮುನಿಗಳು ನೋಡುತ್ತಿದ್ದಂತೇ ಸ್ವರ್ಗಕ್ಕೆ ಹೋದ.

ದೇವಲೋಕಗತಂ ದೃಷ್ಟ್ವಾ ತ್ರಿಶಂಕುಂ ಪಾಕಶಾಸನಃ ।
ಸಹ ಸರ್ವೈಃ ಸುರಗಣೈರಿದಂ ವಚನಮಬ್ರವೀತ್ ॥ ೧೫ ॥

ದೇವಲೋಕಕ್ಕೆ ತ್ರಿಶಂಕು ಹೋಗಿ ಸೇರಿದ್ದನ್ನು ಕಂಡು, ಅಲ್ಲಿ ಎಲ್ಲ ದೇವ-ಸಮೂಹಗಳೊಂದಿಗೆ ದೇವೇಂದ್ರನು ಅವನಿಗೆ ನುಡಿದ.

ತ್ರಿಶಂಕೋ ಗಚ್ಛ ಭೂಯಸ್ತ್ವಂ ನಾಸಿ ಸ್ವರ್ಗಕೃತಾಲಯಃ ।
ಗುರುಶಾಪಹತೋ ಮೂಢ ಪತ ಭೂಮಿಮವಾಕ್ಶಿರಾಃ ॥ ೧೬ ॥

'ತ್ರಿಶಂಕು! ಹಿಂದಿರುಗಿ ಹೋಗು! ನೀನು ಯಾಗದಿಂದ ಸ್ವರ್ಗದಲ್ಲಿ ನ್ಯಾಯ-ವಾಗಿ ಮನೆ ಮಾಡಿಕೊಂಡವನಲ್ಲ. ಗುರು ವಸಿಷ್ಠ ಶಾಪಹತನಾದವನು ನೀನು, ಮೂರ್ಖನೆ! ತಲೆ ಕೆಳಗಾಗಿ ಭೂಮಿಗೆ ಬೀಳು!'

ಏವಮುಕ್ತೋ ಮಹೇಂದ್ರೇಣ ತ್ರಿಶಂಕುರಪತತ್ಭುವಃ ।
ವಿಕ್ರೋಶಮಾನಸ್ತ್ರಾಹೀತಿ ವಿಶ್ವಾಮಿತ್ರಂ ತಪೋಧನಮ್ ॥ ೧೭ ॥

ಮಹೇಂದ್ರನು ಹೀಗೆ ಹೇಳಿದೊಡನೆ ತ್ರಿಶಂಕು ತಪೋಧನನಾದ ವಿಶ್ವಾಮಿತ್ರನನ್ನು 'ಕಾಪಾಡು!' ಎಂದು ಕೂಗುತ್ತ ಪುನಃ ಭೂಮಿಗೇ ಬೀಳತೊಡಗಿದ.

ತಚ್ಛ್ರುತ್ವಾ ವಚನಂ ತಸ್ಯ ಕ್ರೋಶಮಾನಸ್ಯ ಕೌಶಿಕಃ ।
ಕ್ರೋಧಮಾಹಾರಯತ್ತೀವ್ರಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೧೮ ॥

ತ್ರಿಶಂಕುವಿನ ಕೂಗುವ ಧ್ವನಿ ಕೇಳಿ ವಿಶ್ವಾಮಿತ್ರನು ತೀವ್ರವಾಗಿ ಕೋಪಿಸಿಕೊಂಡ, 'ನಿಲ್ಲು ನಿಲ್ಲು' ಎಂದ.

ಋಷಿಮಧ್ಯೇ ಸ ತೇಜಸ್ವೀ ಪ್ರಜಾಪತಿರಿವಾಪರಃ ।
ಸೃಜನ್ದಕ್ಷಿಣಮಾರ್ಗಸ್ಥಾನ್ಸಪ್ತರ್ಷೀನಪರಾನ್ಪುನಃ ॥ ೧೯ ॥

ಋಷಿಗಳ ನಡುವೆ ಇನ್ನೊಬ್ಬ ಪ್ರಜಾಪತಿಯಂತೆ ಕುಳಿತ ವಿಶ್ವಾಮಿತ್ರನು ತ್ರಿಶಂಕು ಭೂಮಿಗೆ ಬೀಳುವ ಮಾರ್ಗದಲ್ಲಿ ದಕ್ಷಿಣ ಪಾರ್ಶ್ವದಲ್ಲಿ ಬೇರೆ ಸಪ್ತರ್ಷಿ ಮಂಡಲ-ವನ್ನು ಸೃಜಿಸಿದ.

ನಕ್ಷತ್ರಮಾಲಾಮಪರಾಮಸೃಜತ್ಕ್ರೋಧಮೂರ್ಚ್ಛಿತಃ ।
ದಕ್ಷಿಣಾಂ ದಿಶಮಾಸ್ಥಾಯ ಮುನಿಮಧ್ಯೇ ಮಹಾಯಶಾಃ ॥ ೨೦ ॥

ಮುನಿಗಳ ಮಧ್ಯದಲ್ಲಿ ಕುಳಿತೇ ಮಹಾಯಶನಾದ ವಿಶ್ವಾಮಿತ್ರನು ಕ್ರೋಧದಿಂದ ಮೈಮರೆತು, ಉತ್ತರದಿಕ್ಕಿನಲ್ಲಿ ಧ್ರುವನಕ್ಷತ್ರಕ್ಕೆ ಇಪ್ಪತ್ತೇಳು ನಕ್ಷತ್ರಗಳ ಮಾಲೆ ಇರುವಂತೆ, ತ್ರಿಶಂಕು ನಕ್ಷತ್ರಕ್ಕೂ ಹಾಗೇ ದಕ್ಷಿಣದಿಕ್ಕಿನಲ್ಲಿ ಬೇರೆ ನಕ್ಷತ್ರಮಾಲೆಯನ್ನು ಸೃಜಿಸಿದ.

ಸೃಷ್ಟ್ವಾ ನಕ್ಷತ್ರವಂಶಂ ಚ ಕ್ರೋಧೇನ ಕಲುಷೀಕೃತಃ ।
ಅನ್ಯಮಿಂದ್ರಂ ಕರಿಷ್ಯಾಮಿ ಲೋಕೋ ವಾ ಸ್ಯಾದನಿಂದ್ರಕಃ ॥
ದೈವತಾನ್ಯಪಿ ಸ ಕ್ರೋಧಾತ್ತ್ರಷ್ಟುಂ ಸಮುಪಚಕ್ರಮೇ ॥ ೨೧ ॥

ಕ್ರೋಧದಿಂದ ವ್ಯಗ್ರವಾದ ಮನಸ್ಸಿನಿಂದ ವಿಶ್ವಾಮಿತ್ರನು ನಕ್ಷತ್ರ ಮಾಲೆಯನ್ನು ಸೃಜಿಸಿ, ಧ್ರುವಮಂಡಲಕ್ಕೆ ಹೇಗೋ ಹಾಗೇ ತ್ರಿಶಂಕು ಮಂಡಲಕ್ಕೂ ಒಬ್ಬ ಬೇರೇ ಇಂದ್ರನನ್ನು ದೇವತೆಗಳೊಂದಿಗೆ ಸೃಜಿಸುತ್ತೇನೆ, ಅಥವಾ ಈ ತ್ರಿಶಂಕುವಿನ ಲೋಕಕ್ಕೆ ಬೇರೆ ಇಂದ್ರನಿಲ್ಲದೆ ಹೋಗಲಿ, ತ್ರಿಶಂಕುವೆ ಇಂದ್ರನಾಗಲಿ ಎನ್ನುತ್ತ ದೇವತೆಗಳನ್ನೂ ತ್ರಿಶಂಕುವಿನ ಸುತ್ತಲೂ ಸೃಜಿಸಲು ಆರಂಭಿಸಿದ, ವಿಶ್ವಾಮಿತ್ರ .

ತತಃ ಪರಮಸಂಭ್ರಾಂತಾಃ ಸರ್ಷಿಸಂಘಾಃ ಸುರಾಸುರಾಃ ।
ವಿಶ್ವಾಮಿತ್ರಂ ಮಹಾತ್ಮಾನಮೂಚುಃ ಸಾನುನಯಂ ವಚಃ ॥ ೨೨ ॥

ಆಗ ಸುರ ಅಸುರರೂ ಋಷಿ ಸಮೂಹಗಳೂ ಬಹಳ ದಿಗ್ಭ್ರಮೆಗೊಂಡು ಮಹಾತ್ಮ ವಿಶ್ವಾಮಿತ್ರನನ್ನು ಸಂತೈಸುತ್ತ ನುಡಿದರು.

ಅಯಂ ರಾಜಾ ಮಹಾಭಾಗ ಗುರುಶಾಪಪರಿಕ್ಷತಃ ।
ಸಶರೀರೋ ದಿವಂ ಯಾತುಂ ನಾರ್ಹತ್ಯೇವ ತಪೋಧನ ॥ ೨೩ ॥

'ಮಹಾಭಾಗ್ಯಶಾಲಿ ತಪೋಧನ! ಈ ರಾಜಾ ತ್ರಿಶಂಕು ಗುರುಗಳ ಶಾಪಕ್ಕೊಳ-ಗಾದವನು ಸಶರೀರನಾಗಿ ಸ್ವರ್ಗದಲ್ಲಿ ವಾಸ ಮಾಡಲು ಸರ್ವಥಾ ಅರ್ಹನಲ್ಲ.'

ತೇಷಾಂ ತದ್ವಚನಂ ಶ್ರುತ್ವಾ ದೇವಾನಾಂ ಮುನಿಪುಂಗವಃ ।
ಅಬ್ರವೀತ್ಸುಮಹದ್ವಾಕ್ಯಂ ಕೌಶಿಕಃ ಸರ್ವದೇವತಾಃ ॥ ೨೪ ॥

ಆ ದೇವತೆಗಳು ಹೇಳಿದ ಮಾತನ್ನು ಕೇಳಿ ಮುನಿಶ್ರೇಷ್ಠನಾದ ವಿಶ್ವಾಮಿತ್ರನು ಎಲ್ಲದೇವತೆಗಳಿಗೆ ಉತ್ತಮವಾದ ಮಾತನ್ನಾಡಿದ.

ಸಶರೀರಸ್ಯ ಭದ್ರಂ ವಸ್ತ್ರಿಶಂಕೋರಸ್ಯ ಭೂಪತೇಃ ।
ಆರೋಹಣಂ ಪ್ರತಿಜ್ಞಾಯ ನಾನೃತಂ ಕರ್ತುಮುತ್ಸಹೇ ॥ ೨೫ ॥

'ದೇವತೆಗಳೆ ನಿಮಗೆ ಮಂಗಳವಾಗಲಿ. ಸಶರೀರನಾಗಿ ಈ ತ್ರಿಶಂಕು ರಾಜನಿಗೆ ಸಶರೀರಸ್ವರ್ಗಪ್ರಾಪ್ತಿಯನ್ನು ನಾನು ವಾಗ್ದಾನ ಮಾಡಿದ ಬಳಿಕ ಈಗ ಅದನ್ನು ಸುಳ್ಳಾಗಿಸಲು ನಾನು ಸಿದ್ಧನಿಲ್ಲ.

ಸ್ವರ್ಗೋಽಸ್ತು ಸಶರೀರಸ್ಯ ತ್ರಿಶಂಕೋರಸ್ಯ ಶಾಶ್ವತಃ ।
ನಕ್ಷತ್ರಾಣಿ ಚ ಸರ್ವಾಣಿ ಮಾಮಕಾನಿ ಧ್ರುವಾಣ್ಯಥ ॥ ೨೬ ॥

'ಈಗ ಸಶರೀರನಾಗಿ ತ್ರಿಶಂಕು ನಿಂತಿರುವ ಪ್ರದೇಶವೇ ಅವನಿಗೆ ಶಾಶ್ವತವಾದ ಸ್ವರ್ಗವಾಗಲಿ. ನಾನು ಸೃಜಿಸಿರುವ ನಕ್ಷತ್ರಗಳೂ ಎಲ್ಲವೂ ಸ್ಥಿರವಾಗಿರಲಿ.

ಯಾವಲ್ಲೋಕಾ ಧರಿಷ್ಯಂತಿ ತಿಷ್ಠಂತ್ವೇತಾನಿ ಸರ್ವಶಃ ।
ಮತ್ಕೃತಾನಿ ಸುರಾಃ ಸರ್ವೇ ತದನುಜ್ಞಾತುಮರ್ಹಥ ॥
ಏವಮುಕ್ತಾಃ ಸುರಾಃ ಸರ್ವೇ ಪ್ರತ್ಯೂಚುರ್ಮುನಿಪುಂಗವಮ್॥ ೨೭ ॥

'ಲೋಕಗಳು ಇರುವಷ್ಟು ಕಾಲ ನಾನು ಸೃಜಿಸಿದ ಇವೂ ಕೂಡ ಸ್ಥಿರವಾಗಿರಲಿ. ಎಲ್ಲ ದೇವತೆಗಳೂ ನೀವು ಇದನ್ನು ಅನುಮೋದಿಸಿರಿ.' ಹೀಗೆ ವಿಶ್ವಾಮಿತ್ರನು ಹೇಳಿದಾಗ ಮುನಿಶ್ರೇಷ್ಠನಾದ ಆತನಿಗೆ ದೇವತೆಗಳೆಲ್ಲರೂ ಹೇಳಿದರು.

ಏವಂ ಭವತು ಭದ್ರಂ ತೇ ತಿಷ್ಠಂತ್ವೇತಾನಿ ಸರ್ವಶಃ ।
ಗಗನೇ ತಾನ್ಯನೇಕಾನಿ ವೈಶ್ವಾನರಪಥಾದ್ಬಹಿಃ ॥ ೨೮ ॥

ನಕ್ಷತ್ರಾಣಿ ಮುನಿಶ್ರೇಷ್ಠ ತೇಷು ಜ್ಯೋತಿಷ್ಷು ಜಾಜ್ವಲನ್ ।
ಅವಾಕ್ಶಿರಾಸ್ತ್ರಿಶಂಕುಶ್ಚ ತಿಷ್ಠತ್ವಮರಸನ್ನಿಭಃ ॥ ೨೯ ॥

ಹೀಗೇ ಆಗಲಿ, ನಿನಗೆ ಶುಭವಾಗಲಿ, ಗಗನದಲ್ಲಿ ಈ ನಿನ್ನ ಅನೇಕ ನಕ್ಷತ್ರಗಳು ಈಗಿರುವ ಜ್ಯೋತಿಶ್ಚಕ್ರಕ್ಕಿಂತ ಹೊರಗೆ ಇರಲಿ. ಮುನಿಶ್ರೇಷ್ಠನೆ, ಈ ನಕ್ಷತ್ರಗಳ ನಡುವೆ ಚೆನ್ನಾಗಿ ಜ್ವಲಿಸುತ್ತ ಅಮರರಂತೆ ಹೊಳೆಯುತ್ತ ತ್ರಿಶಂಕುರಾಜ ತಲೆಕೆಳಗಾಗಿ ಸ್ಥಿರವಾಗಿರಲಿ.

ಅನುಯಾಸ್ಯಂತಿ ಚೈತಾನಿ ಜ್ಯೋತೀಂಷಿ ನೃಪಸತ್ತಮಮ್ ।
ಕೃತಾರ್ಥಂ ಕೀರ್ತಿಮಂತಂ ಚ ಸ್ವರ್ಗಲೋಕಗತಂ ತಥಾ ॥ ೩೦ ॥

'ಕೃತಾರ್ಥನಾದ ಕೀರ್ತಿಶಾಲಿಯಾದ ರಾಜಾ ತ್ರಿಶಂಕುವನ್ನು, ಅವನು ಸ್ವರ್ಗ-ಲೋಕದಲ್ಲಿದ್ದರೆ ಹೇಗೋ ಹಾಗೆ ನಿನ್ನ ನಕ್ಷತ್ರಗಳು ಅನುಸರಿಸಿ ಗಗನದಲ್ಲಿ ಸಂಚರಿಸುತ್ತಿರಲಿ.'

ವಿಶ್ವಾಮಿತ್ರಸ್ತು ಧರ್ಮಾತ್ಮಾ ಸರ್ವದೇವೈರಭಿಷ್ಟುತಃ ।
ಋಷಿಭಿಶ್ಚ ಮಹಾತೇಜಾ ಬಾಢಮಿತ್ಯಾಹ ದೇವತಾಃ ॥ ೫೧ ॥

ಧರ್ಮಾತ್ಮನಾದ ಮಹಾತೇಜನಾದ ವಿಶ್ವಾಮಿತ್ರನು ಸರ್ವದೇವತೆಗಳಿಂದಲೂ ಋಷಿಗಳಿಂದಲೂ ಸ್ತುತಿಸಲ್ಪಡುತ್ತ 'ಹಾಗೇ ಆಗಲಿ' ಎಂದು ದೇವತೆಗಳಿಗೆ ಹೇಳಿದನು.

ತತೋ ದೇವಾ ಮಹಾತ್ಮಾನೋ ಮುನಯಶ್ಚ ತಪೋಧನಾಃ ।
ಜಗ್ಮುರ್ಯಥಾಗತಂ ಸರ್ವೇ ಯಜ್ಞಸ್ಯಾಂತೇ ನರೋತ್ತಮ ॥ ೫೨ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಷಷ್ಟಿತಮಃ ಸರ್ಗಃ ॥ ೬೦ ॥

ಮಹಾತ್ಮರಾದ ತಪೋಧನರಾದ ದೇವತೆಗಳೂ ಮುನಿಗಳೂ ಎಲ್ಲರೂ, ರಾಜನೆ! ಯಜ್ಞವು ಸುಖಾಂತವಾದಾಗ, ಬಂದಂತೇ ಹಿಂದೆ ಹೊರಟು ಹೋದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಅರವತ್ತನೇ ಸರ್ಗ ಮುಗಿಯಿತು.

ಏಕಷಷ್ಟಿತಮಃ ಸರ್ಗಃ

ವಿಶ್ವಾಮಿತ್ರೋ ಮಹಾತ್ಮಾऽಥ ಪ್ರಸ್ಥಿತಾನ್ಪ್ರೇಕ್ಷ್ಯ ತಾನೃಷೀನ್ ।
ಅಬ್ರವೀನ್ನರಶಾರ್ದೂಲಃ ಸರ್ವಾಂಸ್ತದ್ವನವಾಸಿನಃ ॥ ೧ ॥

ಮಹಾತ್ಮಾ ವಿಶ್ವಾಮಿತ್ರನು ಅಲ್ಲಿಂದ ಋಷಿಗಳೆಲ್ಲರೂ ಹೊರಟಿದ್ದನ್ನು ಕಂಡು ತನ್ನಾಶ್ರಮದಲ್ಲಿ ವಾಸ ಮಾಡಿದ ಆ ಋಷಿಗಳಿಗೆ ಪುರುಷೋತ್ತಮನಾದ ವಿಶ್ವಾಮಿತ್ರ ಹೇಳಿದ.

ಮಹಾನ್ವಿಘ್ನಃ ಪ್ರವೃತ್ತೋऽಯಂ ದಕ್ಷಿಣಾಮಾಸ್ಥಿತೋ ದಿಶಮ್ ।
ದಿಶಮನ್ಯಾಂ ಪ್ರಪತ್ಸ್ಯಾಮಸ್ತತ್ರ ತಪ್ಸ್ಯಾಮಹೇ ತಪಃ ॥ ೨ ॥

ಈ ದಕ್ಷಿಣದಿಕ್ಕು ಬ್ರಾಹ್ಮಣ್ಯಸಾಧಕವಾದ ತಪಸ್ಸಿಗೆ ಪ್ರಶಸ್ತವಲ್ಲ, ಇಲ್ಲಿ ನನ್ನ ಪುಣ್ಯವೆಲ್ಲ ಕ್ರೋಧರೂಪವಾದ ಮಹಾವಿಘ್ನದಿಂದ ನಾಶವಾಯಿತು ಬೇರೆ ದಿಕ್ಕಿಗೆ ಹೋಗೋಣ. ಅಲ್ಲಿ ತಪಸ್ಸು ಮಾಡೋಣ.

ಪಶ್ಚಿಮಾಯಾಂ ವಿಶಾಲಾಯಾಂ ಪುಷ್ಕರೇಷು ಮಹಾತ್ಮನಃ ।
ಸುಖಂ ತಪಶ್ಚರಿಷ್ಯಾಮೋ ವರಂ ತದ್ಧಿ ತಪೋವನಮ್ ॥ ೩ ॥

ಹೇ ಮಹಾತ್ಮರೇ! ನಾವು ವಿಶಾಲವಾದ ಪಶ್ಚಿಮದಿಕ್ಕಿನ ಪ್ರದೇಶದಲ್ಲಿ ಪುಷ್ಕರಕ್ಷೇತ್ರ ಸಮೀಪದಲ್ಲಿ ಸುಖವಾಗಿ ತಪಸ್ಸು ಮಾಡೋಣ ಅದು ಉತ್ತಮವಾದ ತಪೋವನ.

ಏವಮುಕ್ತ್ವಾ ಮಹಾತೇಜಾಃ ಪುಷ್ಕರೇಷು ಮಹಾಮುನಿಃ ।
ತಪ ಉಗ್ರಂ ದುರಾಧರ್ಷಂ ತೇಪೇ ಮೂಲಫಲಾಶನಃ ॥ ೪ ॥

ಹೀಗೆ ಹೇಳಿ ಮಹಾತೇಜನಾದ ಮಹಾಮುನಿ ವಿಶ್ವಾಮಿತ್ರನು ಹಣ್ಣು ಗಡ್ಡೆಗಳನ್ನು ಮಾತ್ರ ಉಣ್ಣುತ್ತ ಉಗ್ರವಾದ ಯಾರಿಗೂ ನಾಶ ಮಾಡಲಾಗದಂಥ ತಪಸ್ಸನ್ನು ಮಾಡಲು ತೊಡಗಿದ.

ಏತಸ್ಮಿನ್ನೇವ ಕಾಲೇ ತು ಅಯೋಧ್ಯಾಧಿಪತಿರ್ನೃಪಃ ।
ಅಂಬರೀಷ ಇತಿ ಖ್ಯಾತೋ ಯಷ್ಟುಂ ಸಮುಪಚಕ್ರಮೇ ॥ ೫ ॥

ಇದೇ ಸಮಯದಲ್ಲಿ ಅಯೋಧ್ಯಾಪತಿಯಾದ ಅಂಬರೀಷನೆಂದು ಪ್ರಸಿದ್ಧನಾದ ರಾಜನು ಯಜ್ಞ ಮಾಡಲು ತೊಡಗಿದನು.

ತಸ್ಯ ವೈ ಯಜಮಾನಸ್ಯ ಪಶುಮಿಂದ್ರೋ ಜಹಾರ ಹ ।
ಪ್ರನಷ್ಟೇ ತು ಪಶೌ ವಿಪ್ರೋ ರಾಜಾನಮಿದಮಬ್ರವೀತ್ ॥ ೬ ॥

ಯಜಮಾನನಾದ ಆ ರಾಜನ ಯಜ್ಞಪಶುವನ್ನು ಇಂದ್ರನು ಅಪಹಾರ ಮಾಡಿದ. ಪಶು ಕಾಣಿಸದಿದ್ದಾಗ ಪುರೋಹಿತನು ರಾಜನಿಗೆ ಹೇಳಿದ.

ಪಶುರದ್ಯ ಹತೋ ರಾಜನ್ನನಷ್ಟಸ್ತವ ದುರ್ನಯಾತ್ ।
ಅರಕ್ಷಿತಾರಂ ರಾಜಾನಂ ಘ್ನಂತಿ ದೋಷಾ ನರೇಶ್ವರ ॥ ೭ ॥

ರಾಜನೆ, ನಿನ್ನ ತಪ್ಪಿನಿಂದ ಯಜ್ಞಪಶು ಕಾಣೆಯಾಗಿದೆ. ರಾಜನು ರಕ್ಷಣೆ ಮಾಡ-ಬೇಕಾಗಿತ್ತು. ರಕ್ಷಣೆ ಮಾಡದ ರಾಜನಿಗೆ ಅವನ ದೋಷಗಳೇ ಮಾರಕವಾಗುತ್ತವೆ.

ಪ್ರಾಯಶ್ಚಿತ್ತಂ ಮಹದ್ಧ್ಯೇತನ್ನರಂ ವಾ ಪುರುಷರ್ಷಭ ।
ಆನಯಸ್ವ ಪಶುಂ ಶೀಘ್ರಂ ಯಾವತ್ಕರ್ಮ ಪ್ರವರ್ತತೇ ॥ ೮ ॥

ಇದಕ್ಕೆ ದೊಡ್ಡ ಪ್ರಾಯಶ್ಚಿತ್ತ ಮಾಡಬೇಕಾಗುತ್ತದೆ. ಅದರಿಂದ ಪುರುಷೋತ್ತ-ಮನೆ, ಒಂದು ನರಪಶುವನ್ನಾದರೂ ಕ್ರಯಕ್ಕೆ ಕೊಂಡು ಬೇಗನೆ ಕರೆತಾ. ಬಲಿಕರ್ಮ ಪ್ರಾರಂಭವಾಗುವುದರೊಳಗೆ ಅದು ಬರಬೇಕು.

ಉಪಾಧ್ಯಾಯವಚಃ ಶ್ರುತ್ವಾ ಸ ರಾಜಾ ಪುರುಷರ್ಷಭ ।
ಅನ್ವಿಯೇಷ ಮಹಾಬುದ್ಧಿಃ ಪಶುಂ ಗೋಭಿಃ ಸಹಸ್ರಶಃ ॥ ೯ ॥

ಪುರೋಹಿತನ ಮಾತನ್ನು ಕೇಳಿ, ಪುರುಷೋತ್ತಮನೆ, ಆ ರಾಜಾ ಅಂಬರೀಷನು ಸಾವಿರಾರು ಗೋವುಗಳನ್ನು ನೀಡಿದರೆ ಒಬ್ಬ ನರಪಶು ಸಿಕ್ಕೀತೆ ಎಂದು ಅನ್ವೇಷಣೆಗೆ ತೊಡಗಿದ.

ದೇಶಾನ್‌ಜನಪದಾಂಸ್ತಾಂಸ್ತಾನ್ನಗರಾಣಿ ವನಾನಿ ಚ ।
ಆಶ್ರಮಾಣಿ ಚ ಪುಣ್ಯಾನಿ ಮಾರ್ಗಮಾಣೋ ಮಹೀಪತಿಃ ॥ ೧೦ ॥

ರಾಮ! ಅಂಬರೀಷ ರಾಜನು ಎಲ್ಲ ದೇಶ ಗ್ರಾಮ ನಗರ ಅರಣ್ಯ ಪುಣ್ಯ ಆಶ್ರಮಗಳನ್ನೂ ಅರಸುತ್ತ ಹೋದನು.

ಸ ಪುತ್ರಸಹಿತಂ ತಾತ ಸಭಾರ್ಯಂ ರಘುನಂದನ ।
ಭೃಗುತುಂದೇ ಸಮಾಸೀನಮೃಚೀಕಂ ಸಂದದರ್ಶ ಹ ॥ ೧೧ ॥

ಭೃಗುತುಂದ ಎಂಬ ಪರ್ವತ ಶಿಖರದಲ್ಲಿ ಪತ್ನೀ ಪುತ್ರ ಸಮೇತರಾಗಿ ಕುಳಿತಿದ್ದ ಋಚೀಕ ಮುನಿಯನ್ನು ಹೇ ರಾಮ! ಅಂಬರೀಷನು ಕಂಡನು.

ತಮುವಾಚ ಮಹಾತೇಜಾಃ ಪ್ರಣಮ್ಯಾಭಿಪ್ರಸಾದ್ಯ ಚ ।
ಬ್ರಹ್ಮರ್ಷಿಂ ತಪಸಾ ದೀಪ್ತಂ ರಾಜರ್ಷಿರಮಿತಪ್ರಭಃ ॥
ಪೃಷ್ಟ್ವಾ ಸರ್ವತ್ರ ಕುಶಲಮೃಚೀಕಂ ತಮಿದಂ ವಚಃ ॥ ೧೨ ॥

ಅಮಿತಪ್ರಭನಾದ ಮಹಾತೇಜನಾದ ಅಂಬರೀಷ ರಾಜರ್ಷಿ ತಪಸ್ಸಿನಿಂದ ಜ್ವಲಿಸುತ್ತಿದ್ದ ಬ್ರಹ್ಮರ್ಷಿ ಋಚೀಕನನ್ನು ನಮಿಸಿ ಸತ್ಕರಿಸಿ ಸರ್ವತ್ರ ಕುಶಲವನ್ನು ಕೇಳಿ ಅವನಿಗೆ ನುಡಿದ.

ಗವಾಂ ಶತಸಹಸ್ರೇಣ ವಿಕ್ರೀಣೀಷೇ ಸುತಂ ಯದಿ ।
ಪಶೋರರ್ಥೇ ಮಹಾಭಾಗ ಕೃತಕೃತ್ಯೋಽಸ್ಮಿ ಭಾರ್ಗವ ॥ ೧೩ ॥

ಭೃಗುವಂಶದಲ್ಲಿ ಬಂದ ಮಹಾಭಾಗ್ಯಶಾಲಿ ಋಚೀಕನೆ ಲಕ್ಷ ಗೋವುಗಳಿಗೆ ನಿನ್ನ ಒಬ್ಬ ಮಗನನ್ನು ಯಜ್ಞಪಶುವಾಗಿ ನೀನು ನನಗೆ ಮಾರುವುದಾದರೆ ನಾನು ಕೃತಕೃತ್ಯನಾಗುವೆನು.

ಸರ್ವೇ ಪರಿಸೃತಾ ದೇಶಾ ಯಜ್ಞೀಯಂ ನ ಲಭೇ ಪಶುಮ್ ।
ದಾತುಮರ್ಹಸಿ ಮೂಲ್ಯೇನ ಸುತಮೇಕಮಿತೋ ಮಮ ॥ ೧೪ ॥

ನಾನು ಎಲ್ಲ ದೇಶಗಳನ್ನು ಸುತ್ತಿದ್ದೇನೆ. ನನ್ನ ಯಜ್ಞಪಶು ನನಗೆ ಸಿಗಲಿಲ್ಲ. ಅದರಿಂದ ನೀನು ನನಗೆ ಒಬ್ಬ ಮಗನನ್ನು ಬೆಲೆಗೆ ಕೊಡು.

ಏವಮುಕ್ತೋ ಮಹಾತೇಜಾ ಋಚೀಕಸ್ತ್ವಬ್ರವೀದ್ವಚಃ ।
ನಾಹಂ ಜ್ಯೇಷ್ಠಂ ನರಶ್ರೇಷ್ಠ ವಿಕ್ರೀಣೇಯಾಂ ಕಥಂಚನ ॥ ೧೫ ॥

ಹೀಗೆ ಅಂಬರೀಷ ರಾಜ ಹೇಳಿದಾಗ ಋಚೀಕಮುನಿ ಹೇಳಿದ, 'ಪುರುಷೋತ್ತಮನೆ! ನಾನು ಜ್ಯೇಷ್ಠಪುತ್ರನನ್ನು ಸರ್ವಥಾ ಮಾರಲಾರೆ.

ಋಚೀಕಸ್ಯ ವಚಃ ಶ್ರುತ್ವಾ ತೇಷಾಂ ಮಾತಾ ಮಹಾತ್ಮನಾಮ್ ।
ಉವಾಚ ನರಶಾರ್ದೂಲಮಂಬರೀಷಂ ತಪಸ್ವಿನೀ ॥ ೧೬ ॥

ಋಚೀಕನ ಮಾತನ್ನು ಕೇಳಿ ಆ ಮಹಾತ್ಮರಾದ ಮಕ್ಕಳ ತಪಸ್ವಿನಿ ತಾಯಿ ರಾಜಾ ಅಂಬರೀಷನಿಗೆ ಹೇಳಿದಳು.

ಅವಿಕ್ರೇಯಂ ಸುತಂ ಜ್ಯೇಷ್ಠಂ ಭಗವಾನಾಹ ಭಾರ್ಗವಃ ।
ಮಮಾಪಿ ದಯಿತಂ ವಿದ್ಧಿ ಕನಿಷ್ಠಂ ಶುನಕಂ ನೃಪ ॥
ತಸ್ಮಾತ್ಕನೀಯಸಂ ಪುತ್ರಂ ನ ದಾಸ್ಯೇ ತವ ಪಾರ್ಥಿವ ॥ ೧೭ ॥

ಪೂಜ್ಯ ಭೃಗುವಂಶಿಯಾದ ಋಚೀಕನು ಜ್ಯೇಷ್ಠಪುತ್ರನನ್ನು ಮಾರುವುದಿಲ್ಲ ಎನ್ನುತ್ತಿದ್ದಾನೆ. ರಾಜನೇ, ನನಗೂ ಕೂಡ ಕನಿಷ್ಠಪುತ್ರ ಶುನಕನು ಪ್ರಿಯನೆಂದು ತಿಳಿ. ರಾಜನೆ, ಅದರಿಂದ ನಾನು ಕನಿಷ್ಠಪುತ್ರನನ್ನು ನಾನೂ ಕೊಡಲಾರೆ.

ಪ್ರಾಯೇಣ ಹಿ ನರಶ್ರೇಷ್ಠ ಜ್ಯೇಷ್ಠಾಃ ಪಿತೃಷು ವಲ್ಲಭಾಃ ।
ಮಾತೃಣಾಂ ಚ ಕನೀಯಾಂಸಸ್ತಸ್ಮಾದ್ರಕ್ಷೇ ಕನೀಯಸಮ್ ॥ ೧೮ ॥

ರಾಜನೆ, ಸಾಮಾನ್ಯವಾಗಿ ಜ್ಯೇಷ್ಠಪುತ್ರನು ಪಿತೃಗಳಿಗೆ ಪ್ರಿಯನೆನಿಸಿರುತ್ತಾನೆ. ಮಾತೆಯರಿಗೆ ಕನಿಷ್ಠನು ಪ್ರಿಯನಿರುತ್ತಾನೆ. ಅದರಿಂದ ಕನಿಷ್ಠನನ್ನು ನಾನು ರಕ್ಷಿಸಿಕೊಳ್ಳುತ್ತೇನೆ.

ಉಕ್ತವಾಕ್ಯೇ ಮುನೌ ತಸ್ಮಿನ್ಮುನಿಪತ್ನ್ಯಾಂ ತಥೈವ ಚ ।
ಶುನಃಶೇಪಃ ಸ್ವಯಂ ರಾಮ ಮಧ್ಯಮೋ ವಾಕ್ಯಮಬ್ರವೀತ್ ॥ ೧೯ ॥

ಮುನಿ ತನ್ನ ಅಪೇಕ್ಷೆಯನ್ನು ಹಾಗೇ ಮುನಿಪತ್ನಿಯೂ ತನ್ನ ಅಪೇಕ್ಷೆಯನ್ನು ಹೇಳಿದಾಗ, ರಾಮ! ಮಧ್ಯಮನು ಶುನಃಶೇಪನು ತಾನೇ ತನ್ನ ಅಪೇಕ್ಷೆಯನ್ನು ಹೇಳಿದ.

ಪಿತಾ ಜ್ಯೇಷ್ಠಮವಿಕ್ರೇಯಂ ಮಾತಾ ಚಾಹ ಕನೀಯಸಮ್ ।
ವಿಕ್ರೀತಂ ಮಧ್ಯಮಂ ಮನ್ಯೇ ರಾಜನ್ಪುತ್ರಂ ನಯಸ್ವ ಮಾಮ್॥ ೨೦ ॥

ನಮ್ಮ ತಂದೆ ಜ್ಯೇಷ್ಠನನ್ನು ತಾಯಿ ಕನಿಷ್ಠನನ್ನೂ ಮಾರುವುದಿಲ್ಲವೆಂದು ಹೇಳಿದ್ದರಿಂದ ರಾಜನೆ! ಮಧ್ಯಮ ಪುತ್ರನನ್ನು ನಿನಗೆ ಮಾರಿದ್ದಾರೆ ಎಂದು ತಿಳಿಯುತ್ತೇನೆ. ಅದರಿಂದ ನೀನು ನನ್ನನ್ನು ಬಲಿಪಶುವಾಗಿ ಕೊಂಡೊಯ್ಯು .

ಅಥ ರಾಜಾ ಮಹಾನ್ಯಾಮ ವಾಕ್ಯಾಂತೇ ಬ್ರಹ್ಮವಾದಿನಃ ।
ಹಿರಣ್ಯಸ್ಯ ಸುವರ್ಣಸ್ಯ ಕೋಟೀಭೀ ರತ್ನರಾಶಿಭಿಃ ॥ ೨೧ ॥

ಗವಾಂ ಶತಸಹಸ್ರೇಣ ಶುನಃಶೇಪಂ ನರೇಶ್ವರಃ ।
ಗೃಹೀತ್ವಾ ಪರಮಪ್ರೀತೋ ಜಗಾಮ ರಘುನಂದನ ॥ ೨೨ ॥

ಬ್ರಹ್ಮವಾದಿಯಾದ ಋಚೀಕನು ಮಾತು ಮುಗಿಸಿದ ಬಳಿಕ, ರಾಮ! ಮಹಾರಾಜ ಅಂಬರೀಷನು ಕೋಟಿ ಬಂಗಾರ ಬೆಳ್ಳಿ ನಾಣ್ಯಗಳಿಂದಲೂ ರತ್ನರಾಶಿಗಳಿಂದಲೂ ಲಕ್ಷ ಗೋವುಗಳಿಂದಲೂ ಶುನಃಶೇಪನನ್ನು ಕೊಂಡುಕೊಂಡು ಬಹಳ ಸಂತುಷ್ಟನಾಗಿ ಹಿಂತಿರುಗಿದ.

ಅಂಬರೀಷಸ್ತು ರಾಜರ್ಷೀ ರಥಮಾರೋಪ್ಯ ಸತ್ವರಃ ।
ಶುನಃಶೇಪಂ ಮಹಾತೇಜಾ ಜಗಾಮಾಶು ಮಹಾಯಶಾಃ ॥ ೨೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಏಕಷಷ್ಟಿತಮಃ ಸರ್ಗಃ ॥ ೬೧ ॥

ಮಹಾತೇಜನಾದ ಮಹಾಯಶನಾದ ರಾಜರ್ಷಿ ಅಂಬರೀಷನು ತ್ವರೆಯಿಂದ ಶುನಃಶೇಪನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಬೇಗನೆ ಹಿಂತಿರುಗಿದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಅರವತ್ತೊಂದನೆ ಸರ್ಗ ಮುಗಿಯಿತು.

ದ್ವಿಷಷ್ಟಿತಮಃ ಸರ್ಗಃ

ಶುನಃಶೇಪಂ ನರಶ್ರೇಷ್ಠ ಗೃಹೀತ್ವಾ ತು ಮಹಾಯಶಾಃ ।
ವ್ಯಶ್ರಾಮ್ಯತ್ಪುಷ್ಕರೇ ರಾಜಾ ಮಧ್ಯಾಹ್ನೇ ರಘುನಂದನ ॥ ೧ ॥

ಪುರುಷೋತ್ತಮ ರಾಮ! ಮಹಾಯಶನಾದ ರಾಜಾ ಅಂಬರೀಷನು ಶುನಃ-ಶೇಪನನ್ನು ಕರೆದುಕೊಂಡು ಹಿಂತಿರುಗಿ ಬರುವಾಗ ದಾರಿಯಲ್ಲಿ ಮಧ್ಯಾಹ್ನ-ಕಾಲದಲ್ಲಿ ಪುಷ್ಕರಕ್ಷೇತ್ರ . ಸಮೀಪದಲ್ಲಿ ಒಂದು ಕಡೆ ವಿಶ್ರಾಂತಿಗಾಗಿ ಉಳಿದು-ಕೊಂಡ.

ತಸ್ಯ ವಿಶ್ರಮಮಾಣಸ್ಯ ಶುನಃಶೇಪೋ ಮಹಾಯಶಾಃ ।
ಪುಷ್ಕರಕ್ಷೇತ್ರಮಾಗಮ್ಯ ವಿಶ್ವಾಮಿತ್ರಂ ದದರ್ಶ ಹ ॥
ತಪ್ಯಂತಮೃಷಿಭಿಃ ಸಾರ್ಧಂ ಮಾತುಲಂ ಪರಮಾತುರಃ ॥ ೨ ॥

ರಾಜ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಶುನಃಶೇಪನು ಪುಷ್ಕರಕ್ಷೇತ್ರಕ್ಕೆ ಬಂದು ಅಲ್ಲಿ ಋಷಿಗಳೊಂದಿಗೆ ತಪಸ್ಸು ಮಾಡುತ್ತಿದ್ದ ಸೋದರಮಾವನಾದ ವಿಶ್ವಾಮಿತ್ರನನ್ನು ಬಹಳ ಆತುರದಿಂದ ಭೆಟ್ಟಿ ಮಾಡಿದ.

ವಿವರ್ಣವದನೋ ದೀನಸ್ತೃಷ್ಣಯಾ ಚ ಶ್ರಮೇಣ ಚ ।
ಪಪಾತಾಂಕೇ ಮುನೇರಾಶು ವಾಕ್ಯಂ ಚೇದಮುವಾಚ ಹ ॥ ೩ ॥

ಶುನಃಶೇಪನು ಶ್ರಮದಿಂದ ಆತುರನಾಗಿದ್ದ. ತೃಷೆಯಿಂದ ಮುಖ ಬಾಡಿತ್ತು. ಬಲಿಪಶುವಾಗುವೆನೆಂದು ದೈನ್ಯದಿಂದ ದುಃಖಿತನೂ ಆಗಿದ್ದ. ಸೋದರಮಾವನೆಂದು ಪ್ರೀತಿಯಿಂದ ವಿಶ್ವಾಮಿತ್ರನ ತೊಡೆಯ ಮೇಲೆ ಬಿದ್ದು ನುಡಿದ.

ಪೂರ್ವಜಾ ಭಗಿನೀ ..... ನಾಮ್ನಾ ಸತ್ಯವತೀ ।
ಋಚೀಕೇ ಪ್ರತಿಪಾದಿತಾ (೩೪.೭)

ಎಂದು ಹಿಂದೆ ಹೇಳಿದಂತೆ, ಶುನಃಶೇಪನ ಮಾತೆ ಸತ್ಯವತಿಯು ಋಚೀಕನ ಪತ್ನಿ ವಿಶ್ವಾಮಿತ್ರನ ಜ್ಯೇಷ್ಠ ಭಗಿನಿ. ಅವಳೇ ಕೌಶಿಕೀನದಿಯಾಗಿ ಹರಿದಳು.

ನ ಮೇಽಸ್ತಿ ಮಾತಾ ನ ಪಿತಾ ಜ್ಞಾತಯೋ ಬಾಂಧವಾಃ ಕುತಃ ।
ತ್ರಾತುಮರ್ಹಸಿ ಮಾಂ ಸೌಮ್ಯ ಧರ್ಮೇಣ ಮುನಿಪುಂಗವ ॥

ತ್ರಾತಾ ತ್ವಂ ಹಿ ಮುನಿಶ್ರೇಷ್ಠ ಸರ್ವೇಷಾಂ ತ್ವಂ ಹಿ ಭಾವನಃ ॥ ೪ ॥

ಹೇ ಸೌಮ್ಯ , ಸೋಮಯಾಗ ಮಾಡುವವನೆ! ಮುನಿಪುಂಗವನೆ! ಮುನಿ-ಶ್ರೇಷ್ಠನೆ! ನನಗೆ ಈಗ ಮಾತೆ ಮಾತೆಯಾಗಿಲ್ಲ ಪಿತನು ಪಿತನಾಗಿಲ್ಲ. ಜ್ಞಾತಿಗಳು ಬಾಂಧವರು ಯಾರೂ ಈಗ ಇಲ್ಲ. ಏಕೆಂದರೆ, ನಾನೀಗ ಈ ಅಂಬರೀಷ ರಾಜನ ಯಜ್ಞಪಶುವಾಗಿದ್ದೇನೆ. ನೀನೇ ನನ್ನನ್ನು ತಪಸ್ಸಿನ ಪುಣ್ಯದ ಪ್ರಭಾವದಿಂದ ಸಂರಕ್ಷಿಸಬೇಕಾಗಿದೆ. ಎಲ್ಲರಿಗೂ ಹಿತಕಾರಿ 'ವಿಶ್ವಸ್ಯ ಮಿತ್ರ' ವಿಶ್ವಾಮಿತ್ರ ನೀನು. ನೀನೇ ನನಗೆ ರಕ್ಷಕನಾಗಬೇಕು.

ರಾಜಾ ಚ ಕೃತಕಾರ್ಯಃ ಸ್ಯಾದಹಂ ದೀರ್ಘಾಯುರವ್ಯಯಃ ।
ಸ್ವರ್ಗಲೋಕಮುಪಾಶ್ನೀಯಾಂ ತಪಸ್ತಪ್ತ್ವಾ ಹ್ಯನುತ್ತಮಮ್ ॥ ೫ ॥

ರಾಜಾ ಅಂಬರೀಷನ ಯಜ್ಞವೂ ನೆರವೇರಬೇಕು. ನಾನೂ ದೀರ್ಘಾಯು ಮರಣರಹಿತನಾಗಬೇಕು. ಉತ್ತಮವಾದ ತಪಸ್ಸು ಮಾಡಿ ಸ್ವರ್ಗ ಪಡೆಯಬೇಕು. ತಪಃ ಪ್ರಭಾವದಿಂದ ನೀನೇ ಎರಡೂ ಕಾರ್ಯ ನೆರವೇರುವಂತೆ ಮಾಡಬೇಕು.

ಶುನಃಶೇಪನಿಗೆ ತಂದೆ ತಾಯಿಗಳಲ್ಲಿ ಏನೂ ಬೇಸರವಿಲ್ಲ. ಏಕೆಂದರೆ ನನ್ನನ್ನು ಮಾರಿಬಿಟ್ಟಿರುವುದರಿಂದ ಈಗ ತಂದೆ ತಾಯಿಗಳು ತಂದೆತಾಯಿಗಳಾಗಿ ಉಳಿದಿಲ್ಲ. ಮಾರಿದ್ದೂ ಕೂಡ ಕ್ರೌರ್ಯವಲ್ಲ. ಲೋಕಕಲ್ಯಾಣಕ್ಕಾಗಿ ರಾಜ ಯಜ್ಞ ಮಾಡುತ್ತಾನೆ. ಆ ಯಜ್ಞ ನೆರವೇರದಿದ್ದರೆ ಲೋಕಕ್ಕೇ ಕೇಡು. ಅದರಿಂದ ನನ್ನನ್ನು ಮಾರಿದ್ದಾರೆ, ಹೊರತು ಧನಲೋಭದಿಂದಲ್ಲ. ಇದೀಗ ಬಲಿಪಶು ನಾನು ಸಾಯಬಾರದು ಯಜ್ಞವೂ ನಿಂತು ಹೋಗಬಾರದು ನನಗೂ ರಾಜನಿಗೂ ಇಬ್ಬರಿಗೂ ಹಿತವಾಗಬೇಕು ಲೋಕಕಲ್ಯಾಣವಾಗಬೇಕು. ಹೀಗೆ ವಿಶ್ವಕ್ಕೇ ಹಿತ ಉಂಟುಮಾಡಬೇಕಾದರೆ, ವಿಶ್ವಕ್ಕೇ ಮಿತ್ರ ನೀನು. 'ವಿಶ್ವಮಿತ್ರ'ನಾದ್ದರಿಂದ 'ವಿಶ್ವಾಮಿತ್ರ' ಎಂದು ದೀರ್ಘ, ಹೊರತು ಅಮಿತ್ರನಾದ್ದರಿಂದಲ್ಲ. ಮಿತ್ರನಾದ್ದರಿಂದ ವಿಶ್ವಾಮಿತ್ರನೆನಿಸಿದವ ನನ್ನ ಪ್ರೀತಿಯ ಸೋದರ ಮಾವನೊಬ್ಬನೇ ಸಮರ್ಥ. ಅವನೇ ನನಗೆ ರಕ್ಷಕನಾಗಲಿ ಎನ್ನುತ್ತಾನೆ ಶುನಃಶೇಪ. ಯದ್ಯಪಿ ಮುಂದೆ ಶುನಃಶೇಪನನ್ನು ರಾಜ ಬಲಿ ಕೊಡುವುದಿಲ್ಲ. ಉತ್ಸರ್ಜನ ಮಾಡುತ್ತಾನೆ. ಯಜ್ಞ ನೆರವೇರುತ್ತದೆ. ಆದರೆ ಉತ್ಸರ್ಜನಾ ನಂತರ ಅವನಿಗೆ ಅವನ ಗುರು ಹಿರಿಯರೆಲ್ಲರ ಸಂಬಂಧ ಕಡಿದು ಹೋಗುತ್ತದೆ. ಗುರು ಜನಾಶೀರ್ವಾದ ತಪ್ಪಿದರೆ ಯಾವುದೇ ಧರ್ಮಸಾಧನೆಯಾಗದಿರುವ ಸಂಭವವಿದೆ. ಹಾಗಾಗಬಾರದು. ವಸ್ತುತಃ ಹಾಗೇ ಆಗಲಿಲ್ಲ. ಇದು ವಿಶ್ವಾಮಿತ್ರನು ಶುನಃಶೇಪನಿಗೆ

ಉಪದೇಶಿಸಿದ ಮಂತ್ರದ ಪ್ರಭಾವ. ಇಲ್ಲದಿದ್ದರೆ ಶುನಃಶೇಪ ಬದುಕಿ ಫಲವಿಲ್ಲ ಎಂದಾಗುತ್ತಿತ್ತು.

ತ್ವಂ ಮೇ ನಾಥೋ ಹ್ಯನಾಥಸ್ಯ ಭವ ಭವ್ಯೇನ ಚೇತಸಾ ।
ಪಿತೇವ ಪುತ್ರಂ ಧರ್ಮಾತ್ಮಂಸ್ತ್ರಾತುಮರ್ಹಸಿ ಕಿಲ್ಬಿಷಾತ್ ॥ ೬ ॥

ಧರ್ಮಾತ್ಮನೆ, ಅನಾಥನಾಗಿರುವ ನನಗೆ ಪ್ರಸನ್ನ ಹೃದಯದಿಂದ ನೀನು ರಕ್ಷಕನಾಗು. ತಂದೆ ಮಗನನ್ನು ಹೇಗೋ ಹಾಗೆ ನೀನು ನನ್ನನ್ನು ಈ ಆಪತ್ತಿನಿಂದ ಉದ್ಧರಿಸಿ ಕಾಪಾಡಬೇಕು.

ತಸ್ಯ ತದ್ವಚನಂ ಶ್ರುತ್ವಾ ವಿಶ್ವಾಮಿತ್ರೋ ಮಹಾತಪಾಃ ।
ಸಾಂತ್ವಯಿತ್ವಾ ಬಹುವಿಧಂ ಪುತ್ರಾನಿದಮುವಾಚ ಹ ॥ ೭ ॥

ಶುನಃಶೇಪನ ಈ ಮಾತನ್ನು ಕೇಳಿ ಮಹಾತಪನಾದ ವಿಶ್ವಾಮಿತ್ರನು ಅವನನ್ನು ಸಂತಯಿಸಿ ಪುತ್ರರಿಗೆ ಬಹುರೀತಿಯಿಂದ ಹೇಳಿ ಒಪ್ಪಿಸಲು ಯತ್ನಿಸಿದ.

ಯತ್ಕೃತೇ ಪಿತರಃ ಪುತ್ರಾನ್ ಜನಯಂತಿ ಶುಭಾರ್ಥಿನಃ ।
ಪರಲೋಕಹಿತಾರ್ಥಾಯ ತಸ್ಯ ಕಾಲೋಽಯಮಾಗತಃ ॥ ೮ ॥

'ಪುತ್ರ' ಎಂದರೆ 'ಪುತ್' ನರಕದಿಂದ 'ತ್ರ' ಪಾಲನ ಮಾಡುವವನು. ಬದುಕಿರುವಾಗ ಅವರ ಮಾತಿಗೆ ವಿಧೇಯರಾಗಿದ್ದು ಮರಣೋತ್ತರದಲ್ಲಿ ಪಿಂಡಪ್ರದಾನಾದಿ ಮಾಡುವುದರಿಂದ ಪರಲೋಕ ಹಿತಸಾಧನೆ ಮಾಡುವವನೆ 'ಪುತ್ರ' ಎನಿಸುತ್ತಾನೆ. ಯಾವ ಈ ಪರಲೋಕ ಹಿತಸಾಧನೆಗಾಗಿ ಪುತ್ರರನ್ನು ಶುಭಾರ್ಥಿಯಾದ ಪಿತನು ಹುಟ್ಟಿಸುವನೋ ಆ ಪರಲೋಕಹಿತಸಾಧನೆಗೆ ಯೋಗ್ಯವಾದ ಕಾಲ ಈಗ ನಿಮಗೆ ಬಂದೊದಗಿದೆ.

ಅಯಂ ಮುನಿಸುತೋ ಬಾಲೋ ಮತ್ತಃ ಶರಣಮಿಚ್ಛತಿ ।
ಅಸ್ಯ ಜೀವಿತಮಾತ್ರೇಣ ಪ್ರಿಯಂ ಕುರುತ ಪುತ್ರಕಾಃ ॥ ೯ ॥

ಈ ಬಾಲಕ ಶುನಃಶೇಪ ಋಚೀಕ ಮುನಿಯ ಪುತ್ರ. ನನ್ನಲ್ಲಿ ಆಶ್ರಯ ಪಡೆಯಲು ಇಚ್ಛಿಸುತ್ತಾನೆ. ನೀವು, ಮಕ್ಕಳೇ! ಈತನಿಗೆ ಜೀವದಾನ ಮಾಡಿ. ಪ್ರಿಯಕರರೆನಿಸಿರಿ.

ಸರ್ವೇ ಸುಕೃತಕರ್ಮಾಣಃ ಸರ್ವೇ ಧರ್ಮಪರಾಯಣಾಃ ।
ಪಶುಭೂತಾ ನರೇಂದ್ರಸ್ಯ ತೃಪ್ತಿಮಗ್ನೇಃ ಪ್ರಯಚ್ಛತ ॥ ೧೦ ॥

ನೀವೆಲ್ಲರೂ ಸುಕೃತವನ್ನೇ ಆಚರಿಸುವವರು ಎಲ್ಲರೂ ಧರ್ಮಪರಾಯಯರು. ಅದರಿಂದ ರಾಜನಿಗೆ ಯಜ್ಞದಲ್ಲಿ ಪಶುಗಳಾಗಿ ಅಗ್ನಿಗೆ ತೃಪ್ತಿ ಉಂಟುಮಾಡಿರಿ. ಅಗ್ನಿಗೆ ತೃಪ್ತಿ ಉಂಟು ಮಾಡುವುದೇ ಅತಿದೊಡ್ಡ ಪುಣ್ಯಕಾರ್ಯ. ಪವಿತ್ರವಾಗಿರುವ ಪಶುವೇ ಅಗ್ನಿಗೆ ತೃಪ್ತಿಕರ. ನೀವು ಸುಕೃತವನ್ನಾಚರಿಸುವವರು ಧರ್ಮ-ಪರಾಯಣರು, ಪವಿತ್ರ ಪಶುಗಳಾಗಬಲ್ಲಿರಿ.

ನಾಥವಾಂಶ್ಚ ಶುನಃಶೇಪೋ ಯಜ್ಞಶ್ಚಾವಿಘ್ನತೋ ಭವೇತ್ ।
ದೇವತಾಸ್ತರ್ಪಿತಾಶ್ಚ ಸ್ಯುರ್ಮಮ ಚಾಪಿ ಕೃತಂ ವಚಃ ॥ ೧೧ ॥

ಹೀಗೆ ಮಾಡಿದರೆ ಶುನಃಶೇಪನು ಯಜ್ಞಪಶುವಾಗದಿರುವುದರಿಂದ ಅವನಿಗೆ ತಂದೆ ತಾಯಿಗಳು ಹಿಂದಿನಂತೆ ತಂದೆತಾಯಿಗಳೇ ಆಗಿರುತ್ತಾರೆ. ಅವನು ಅನಾಥನಾಗುವುದಿಲ್ಲ. ಯಜ್ಞಕ್ಕೂ ನೀವು ಪಶುಗಳಾಗುವುದರಿಂದ ನಿರ್ವಿಘ್ನವಾಗಿ ಯಜ್ಞನೆರವೇರುವುದು. ದೇವತೆಗಳು ತೃಪ್ತಿ ಪಡುವರು. ಹೀಗೆ ಮಾಡಿದಾಗ ತಂದೆಯಾದ ನನ್ನ ಮಾತನ್ನೂ ನಡೆಸಿಕೊಟ್ಟಂತಾಗುವುದರಿಂದ ನಿಮಗೆ ಮಹಾಪುಣ್ಯವೇ ಲಭಿಸುವುದು.

ಮುನೇಸ್ತು ವಚನಂ ಶ್ರುತ್ವಾ ಮಧುಷ್ಯಂದಾದಯಃ ಸುತಾಃ ।
ಸಾಭಿಮಾನಂ ನರಶ್ರೇಷ್ಠ ಸಲೀಲಮಿದಮಬ್ರುವನ್ ॥ ೧೨ ॥

ವಿಶ್ವಾಮಿತ್ರಮುನಿಯ ಮಾತನ್ನು ಕೇಳಿ ಮಧುಷ್ಯಂದ ಮುಂತಾದ ಮಕ್ಕಳು, ರಾಮ! ಅಹಂಕಾರದಿಂದ ತಂದೆಯನ್ನೇ ಹಾಸ್ಯ ಮಾಡುತ್ತ ಹೇಳಿದರು.

ಕಥಮಾತ್ಮಸುತಾನ್ಹಿತ್ವಾ ತ್ರಾಯಸೇಽನ್ಯಸುತಂ ವಿಭೋ ।
ಅಕಾರ್ಯಮಿವ ಪಶ್ಯಾಮಃ ಶ್ವಮಾಂಸಮಿವ ಭೋಜನೇ ॥ ೧೩ ॥

ಪ್ರಭು! ಸ್ವಂತಮಕ್ಕಳನ್ನು ಬಿಟ್ಟು ಪರಕೀಯನ ಮಗನನ್ನು ಹೇಗೆ ರಕ್ಷಿಸಲು ಹೊರಟಿರುವೆ? ಪವಿತ್ರವಾದ ಅನ್ನ ಸಿಗುತ್ತಿರುವಾಗ ಅದನ್ನು ಬಿಟ್ಟು ನಾಯಿಮಾಂಸ ಉಣ್ಣುವಂತೆ ಇದು ಅಕೃತ್ಯವೆಂದು ನಾವು ಭಾವಿಸುತ್ತೇವೆ.

ತೇಷಾಂ ತದ್ವಚನಂ ಶ್ರುತ್ವಾ ಪುತ್ರಾಣಾಂ ಮುನಿಪುಂಗವಃ ।
ಕ್ರೋಧಸಂರಕ್ತನಯನೋ ವ್ಯಾಹರ್ತುಮುಪಚಕ್ರಮೇ ॥ ೧೪ ॥

ಮಕ್ಕಳು ಆಡಿದ ಈ ಮಾತನ್ನು ಕೇಳಿ ಮುನಿಪುಂಗವ ವಿಶ್ವಾಮಿತ್ರನು ಕೋಪದ ಕೆಂಗಣ್ಣಿಂದ ನೋಡುತ್ತ ಹೇಳಲು ತೊಡಗಿದ.

ನಿಃಸಾಧ್ವಸಮಿದಂ ಪ್ರೋಕ್ತಂ ಧರ್ಮಾದಪಿ ವಿಗರ್ಹಿತಮ್ ।
ಅತಿಕ್ರಮ್ಯ ತು ಮದ್ವಾಕ್ಯಂ ದಾರುಣಂ ರೋಮಹರ್ಷಣಮ್ ॥ ೧೫ ॥

ತಂದೆ ಎನ್ನುವ ಭಯವಿಲ್ಲದೆ, ತಂದೆಗೆ ವಿಧೇಯರಾಗಿರಬೇಕೆನ್ನುವ ಧರ್ಮ-ಪ್ರಜ್ಞೆಯೂ ಇಲ್ಲದೆ ನನ್ನ ಆಜ್ಞೆಯನ್ನು ಧಿಕ್ಕರಿಸಿ, ರೋಷದ ರೋಮಾಂಚನವನ್ನು ಹುಟ್ಟಿಸುವಂಥ ಘೋರವಾದ ಮಾತನ್ನು ನೀವು ಆಡಿರುವಿರಿ.

ಶ್ವಮಾಂಸಭೋಜಿನಃ ಸರ್ವೇ ವಾಸಿಷ್ಠಾ ಇವ ಜಾತಿಷು ।
ಪೂರ್ಣಂ ವರ್ಷಸಹಸ್ರಂ ತು ಪೃಥಿವ್ಯಾಮನುವತ್ಸ್ಯಥ ॥ ೧೬ ॥

ಅದರಿಂದ ವಸಿಷ್ಠ ಪುತ್ರರಂತೆ ಹೀನಜಾತಿಯಲ್ಲಿ ಜನಿಸಿ, ನಾಯಿ ಮಾಂಸ ತಿನ್ನುತ್ತ ಪೂರ್ಣ ಸಾವಿರ ವರ್ಷಕಾಲ ನೀವು ಎಲ್ಲರೂ ಭೂಮಿಯಲ್ಲಿ ವಾಸಿಸುತ್ತೀರಿ.

ಕೃತ್ವಾ ಶಾಪಸಮಾಯುಕ್ತಾನ್ಪುತ್ರಾನ್ಮುನಿವರಸ್ತಥಾ ।
ಶುನಃಶೇಪಮುವಾಚಾರ್ತಂ ಕೃತ್ವಾ ರಕ್ಷಾಂ ನಿರಾಮಯಮ್ ॥ ೧೭ ॥

ಮುನಿವರನು ಪುತ್ರರಿಗೆ ಹೀಗೆ ಶಾಪಕೊಟ್ಟು ದುಃಖಿಯಾದ ಶುನಃಶೇಪನಿಗೆ ಏನೂ ಭಯ ಉಂಟಾಗದಂತೆ ಅಭಿಮಂತ್ರಿತ ಭಸ್ಮ ಮುಂತಾದವುಗಳಿಂದ ರಕ್ಷೆ ಮಾಡಿ ಹೇಳಿದನು.

ಪವಿತ್ರಪಾಶೈರಾಸಕ್ತೋ ರಕ್ತಮಾಲ್ಯಾನುಲೇಪನಃ ।
ವೈಷ್ಣವಂ ಯೂಪಮಾಸಾದ್ಯ ವಾಗ್ಭಿರಗ್ನಿಮುದಾಹರ ॥
ಇಂದ್ರಾವಿಷ್ಣೂ ಸುರಶ್ರೇಷ್ಠೌ ಸ್ತುಹಿ ತ್ವಂ ಮುನಿಪುತ್ರಕ ॥ ॥ ೧೮ ॥

'ದರ್ಭೆಗಳ ಹಗ್ಗದಿಂದ ನಿನ್ನನ್ನು ಸುತ್ತಿ ಕೆಂಪು ಹೂಮಾಲೆ, ಗಂಧಲೇಪನ ಮಾಡಿ ವಿಷ್ಣು ದೇವತಾಕವಾದ ಯೂಪಕ್ಕೆ ಕಟ್ಟುತ್ತಾರೆ. ಆಗ ನೀನು ಯಾಗಾಗ್ನಿಯ ಮುಂದೆ ಇಂದ್ರ ಉಪೇಂದ್ರ ದೇವತಾಕವಾದ ಈ ಎರಡು ಸಾಮಮಂತ್ರಗಳನ್ನು ಹಾಡುತ್ತ ಸ್ತುತಿಸು.

ಇಮೇ ತು ಗಾಥೇ ದ್ವೇ ದಿವ್ಯೇ ಗಾಯೇಥಾ ಮುನಿಪುತ್ರಕ ।
ಅಂಬರೀಷಸ್ಯ ಯಜ್ಞೇಽಸ್ಮಿಂಸ್ತತಃ ಸಿದ್ಧಿಮವಾಪ್ಸ್ಯಸಿ ॥ ೧೯ ॥

ಈ ಎರಡು ದಿವ್ಯ ಮಂತ್ರಗಳನ್ನು ಹಾಡು. ಅಂಬರೀಷನ ಈ ಯಜ್ಞದಲ್ಲಿ ನೀನು ಹಾಡುವುದರಿಂದ ಸಿದ್ಧಿ ಪಡೆಯುವೆ.'

ಇಲ್ಲಿ ಶುನಃಶೇಪನು ರಾಜನ ಯಜ್ಞ ಪೂರೈಸುವುದೊಂದು, ತಾನು ಬದುಕಿ ಉಳಿಯುವುದಿನ್ನೊಂದು, ಹೀಗೆ ಎರಡು ಸಿದ್ಧಿಗಳನ್ನು ಹೇಳಿದಂತಿದೆ. ವಸ್ತುತಃ ಸಾಯದೆ ಬದುಕಿ ಉಳಿಯುವುದೇ ಸಿದ್ಧಿಯಲ್ಲ. ಸಾಯದಿದ್ದರೂ ತಂದೆ ತಾಯಿಗಳ ಗುರುಗಳ ಅನುಜ್ಞೆ ಇಲ್ಲದಂತಾದರೆ ಪಾರತ್ರಿಕ ಶ್ರೇಯಃಸಾಧನೆಗೆ ಅಧಿಕಾರ-ವಿಲ್ಲದಂತಾದೀತು. ಅದಾಗಬಾರದು. ಅಧಿಕಾರ ಸಿದ್ಧಿಯಾಗಬೇಕೆಂದೇ ಶುನಃಶೇಪ ಬೇಡಿದ್ದ. 'ಈ ಸಿದ್ಧಿ ನಿನಗೆ ಲಭಿಸುವುದು. ಅಂಬರೀಷನಿಗೆ ನೀನು ಕ್ರೀತ ಪುತ್ರ-ನೆನಿಸುವುದರಿಂದ ಅವನು ತಂದೆ. ಮಂತ್ರೋಪದೇಶ ನೀಡಿದ ನಾನು ಗುರು. ನಿನ್ನ ಪಾರಲೌಕಿಕ ಸಾಧನೆ ಅನಾಯಾಸ ಸಾಧ್ಯವಾಗುತ್ತದೆ' ಎಂದು ವಿಶ್ವಾಮಿತ್ರಮುನಿ ಹೇಳುತ್ತಿದ್ದಾರೆ.

ಸಾಯದೆ ಬದುಕಿ ಉಳಿಯುವುದೊಂದು ಇಲ್ಲಿ ಶುನಃಶೇಪನು ಬೇಡಿ ಪಡೆದ ಸಿದ್ಧಿ ಏನಲ್ಲ. ಪುರುಷ ಮೇಧದಲ್ಲಿ ಪುರುಷನನ್ನು ಕೊಂದು ಅಂಗಾಂಗಳನ್ನು ಕಿತ್ತು ತೆಗೆದು ಹೋಮಿಸುವುದು ಶಾಸ್ತ್ರದಲ್ಲಿ ಎಲ್ಲಿಯೂ ಹೇಳಿಲ್ಲ. ಸಂಪ್ರದಾಯ-ದಲ್ಲಿಯೂ ಬಂದಿಲ್ಲ. 'ಅಶ್ವಮೇಧದಂತೇ ಪುರುಷಮೇಧ' ಎಂದು ಸಾಮಾನ್ಯವಾಗಿ ಭ್ರಾಂತಿ, ಯಜ್ಞವನ್ನೇ ನಿಂದಿಸುವ ನಾಸ್ತಿಕರಿಗೆ ಸಹಜ. ವಸ್ತುತಃ ಪುರುಷ ಮೇಧದಲ್ಲಿ ನೂರತೊಂಬತ್ತೆಂಟು ಮಂದಿ ಪುರುಷರನ್ನು ಯೂಪಕ್ಕೆ ಕಟ್ಟಿ ಪ್ರೋಕ್ಷಣಾದಿ ಸಂಸ್ಕಾರ ಮಾಡಿ ಬಳಿಕ ಉತ್ಸರ್ಜನವನ್ನೇ ಮಾಡುವುದು ಶಾಸ್ತ್ರಗಳಲ್ಲಿ ಕಂಡಿದೆ. ಆ ಪುರುಷರಲ್ಲಿ ಪುರುಷ ಸೂಕ್ತದಿಂದ ಪರಮ ಪುರುಷ ನಾರಾಯಣನನ್ನು ಆವಾಹಿಸಿ ಯೂಪದಲ್ಲಿ ಕಟ್ಟುವ ಮೂಲಕ ವಿಷ್ಣುವಿಗೆ ಅವರನ್ನು ಒಪ್ಪಿಸಿ, ಬಳಿಕ ಉತ್ಸರ್ಜನ ಮಾಡಿ ಬೇರೇ ಪ್ರಾಣಿಯ ಬಲಿಯಿಂದ ಯಜ್ಞವನ್ನು ಪೂರೈಸುವುದು ಶಾಸ್ತ್ರವಿಹಿತವಾಗಿದೆ.

ಶುನಃಶೇಪನು ಇಲ್ಲಿ ತಾನು ಬದುಕಿ ಉಳಿಯಬೇಕೆಂದಿಷ್ಟೇ ಹೇಳದೆ 'ಅಹಂ ದೀರ್ಘಾಯುರವ್ಯಯಃ' 'ತಪಸ್ತಪ್ತ್ವಾ ಸ್ವರ್ಗ ಲೋಕ ಮುಪಾಶ್ನೀಯಾಂ' ಎಂದು ಪರಲೋಕ ಸಾಧನೆಯನ್ನೇ ಕೇಳಿ ಪಡೆಯುವುದು ಇದಕ್ಕೆ ಸಾಕ್ಷಿ.

ಇದರಿಂದ ಹಸುವನ್ನು ಕಸಾಯಿಖಾನೆಗೆ ಮಾರುವಂತೆ, ಮಗುವನ್ನು ಮುನಿ ಯಜ್ಞಪಶುವಾಗಿ ಕತ್ತರಿಸಲು ಮಾರುತ್ತಾನೆ, ಎಂಥ ಕ್ರೂರಿ! ಎಂದು ಮುಂತಾಗಿ ಟೀಕಿಸುವುದಕ್ಕೆ ಸರ್ವಥಾ ಅವಕಾಶವಿಲ್ಲ.

ಐತರೇಯ ಬ್ರಾಹ್ಮಣದಲ್ಲಿ, ಭಾಗವತದಲ್ಲಿ, ಹರಿಶ್ಚಂದ್ರನ ಯಾಗಕ್ಕೆ

ಅಜೀಗರ್ತಸುತನಾದ ಶುನಃಶೇಪನು ಬಲಿಪಶುವಾಗುತ್ತಾನೆ. ರಾಜಸೂಯ ಯಾಗದಲ್ಲಿ ಈ ಕಥೆಯನ್ನೇ ಹೋತೃ ರಾಜನ ಮುಂದೆ ಶಂಸನ ಮಾಡುತ್ತಾನೆ.

ವಾಲ್ಮೀಕಿ ಇಲ್ಲಿ ಅಂಬರೀಷ ಋಚೀಕ ಎಂದು ಹೆಸರುಗಳನ್ನು ಬದಲಾವಣೆ ಮಾಡಿದ್ದಾನೆ. ಇದೂ ಪುರಾಣಗಳಲ್ಲಿ ಬರುವ 'ವ್ಯತ್ಯಾಸ'ವೆ. ಅದರಿಂದ ವಿರೋಧವಿಲ್ಲ.

ಶುನಃಶೇಪೋ ಗೃಹೀತ್ವಾ ತೇ ದ್ವೇ ಗಾಥೇ ಸುಸಮಾಹಿತಃ ।
ತ್ವರಯಾ ರಾಜಸಿಂಹಂ ತಮಂಬರೀಷಮುವಾಚ ಹ ॥ ೨೦ ॥

ಶುನಃಶೇಪನು ಏಕಾಗ್ರತೆಯಿಂದ ಆ ಎರಡು ಮಂತ್ರಗಳನ್ನು ವಿಶ್ವಾಮಿತ್ರನಿಂದ ಉಪದೇಶ ಪಡೆದು ಬೇಗನೆ ರಾಜಶ್ರೇಷ್ಠನಾದ ಅಂಬರೀಷನ ಬಳಿಗೆ ಬಂದು ನುಡಿದ.

ರಾಜಸಿಂಹ ಮಹಾಸತ್ವ ಶೀಘ್ರಂ ಗಚ್ಛಾವಹೇ ಸದಃ ।
ನಿರ್ವರ್ತಯಸ್ವ ರಾಜೇಂದ್ರ ದೀಕ್ಷಾಂ ಚ ಸಮುಪಾವಿಶ ॥ ೨೧ ॥

ಮಹಾಬಲನಾದ ರಾಜಶ್ರೇಷ್ಠನೆ! ನಾವು ಶೀಘ್ರವಾಗಿ ಯಜ್ಞಶಾಲೆಗೆ ಹೋಗೋಣ. ರಾಜಶ್ರೇಷ್ಠನೆ! ದೀಕ್ಷಾ ಸ್ವೀಕಾರ ಮಾಡು, ಯಜ್ಞವನ್ನು ನಡೆಸು.

ತದಾಕ್ಯಮೃಷಿಪುತ್ರಸ್ಯ ಶ್ರುತ್ವಾ ಹರ್ಷಸಮುತ್ಸುಕಃ ।
ಜಗಾಮ ನೃಪತಿಃ ಶೀಘ್ರಂ ಯಜ್ಞವಾಟಮತಂದ್ರಿತಃ ॥ ೨೨ ॥

ಋಷಿಪುತ್ರ ಶುನಃಶೇಪನ ಆ ಮಾತನ್ನು ಕೇಳಿ ಹರ್ಷ ಉತ್ಸಾಹಗಳಿಂದ ರಾಜನು ತಡಮಾಡದೆ ಬೇಗನೆ ಯಜ್ಞಶಾಲೆಗೆ ಹೋಗಿ ಸೇರಿದ.

ಸದಸ್ಯಾನುಮತೇ ರಾಜಾ ಪವಿತ್ರಕೃತಲಕ್ಷಣಮ್ ।
ಪಶುಂ ರಕ್ತಾಂಬರಂ ಕೃತ್ವಾ ಯೂಪೇ ತಂ ಸಮಬಂಧಯತ್ ॥ ೨೩ ॥

ಋತ್ವಿಜರ ಅನುಮತಿಯಿಂದ ರಾಜನು ಪವಿತ್ರವಾದ ದರ್ಭೆಯ ಹಗ್ಗದಿಂದ ಸುತ್ತಿ ಕೆಂಪುಬಟ್ಟೆ ಉಡಿಸಿ ಯೂಪದಲ್ಲಿ ಶುನಃಶೇಪನನ್ನು ಕಟ್ಟಿದನು.

ಸ ಬದ್ಧೋ ವಾಗ್ಭಿರಗ್ಯ್ಭಿರಭಿತುಷ್ಟಾವ ವೈ ಸುರೌ ।
ಇಂದ್ರಮಿಂದ್ರಾನುಜಂ ಚೈವ ಯಥಾವನ್ಮುನಿಪುತ್ರಕಃ ॥ ೨೪ ॥

ಯೂಪದಲ್ಲಿ ಬದ್ಧನಾದ ಶುನಃಶೇಪನು ಉತ್ತಮವಾದ ಎರಡು ಮಂತ್ರಗಳಿಂದ ಇಂದ್ರ ಉಪೇಂದ್ರರನ್ನು ಯಥಾವತ್ತಾಗಿ ಸ್ತುತಿಸಿದ.

ತತಃ ಪ್ರೀತಃ ಸಹಸ್ರಾಕ್ಷೋ ರಹಸ್ಯಸ್ತುತಿತರ್ಪಿತಃ ।
ದೀರ್ಘಮಾಯುಸ್ತದಾ ಪ್ರಾದಾಚ್ಛುನಃಶೇಪಾಯ ರಾಘವ ॥ ೨೫ ॥

ರಹಸ್ಯಮಂತ್ರರೂಪವಾದ ಸ್ತುತಿಯಿಂದ ಸಂತೋಷಗೊಳಿಸಲ್ಪಟ್ಟ ಇಂದ್ರನು ಇಂದ್ರಾಂತರ್ಗತನಾದ ಉಪೇಂದ್ರನು ರಾಮ! ಶುನಃಶೇಪನಿಗೆ ದೀರ್ಘಾಯುಷ್ಯ-ವನ್ನು ಅನುಗ್ರಹಿಸಿದ.

ಸ ಚ ರಾಜಾ ನರಶ್ರೇಷ್ಠ ಯಜ್ಞಸ್ಯ ಚ ಸಮಾಪ್ತವಾನ್ ।
ಫಲಂ ಬಹುಗುಣಂ ರಾಮ ಸಹಸ್ರಾಕ್ಷಪ್ರಸಾದಜಮ್ ॥ ೨೬ ॥

ಪುರುಷೋತ್ತಮ! ರಾಜಾ ಅಂಬರೀಷನು ಯಜ್ಞವನ್ನು ಯಶಸ್ವಿಯಾಗಿ ಪೂರೈಸಿದ. ದೇವೇಂದ್ರನ ಅನುಗ್ರಹದಿಂದ ಬಹಳ ಅಧಿಕವಾಗಿ ಫಲವನ್ನೂ ಪಡೆದ.

ವಿಶ್ವಾಮಿತ್ರೋಽಪಿ ಧರ್ಮಾತ್ಮಾ ಭೂಯಸ್ತೇಪೇ ಮಹಾತಪಾಃ ।
ಪುಷ್ಕರೇಷು ನರಶ್ರೇಷ್ಠ ದಶವರ್ಷಶತಾನಿ ಚ ॥ ೨೭ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ದ್ವಿಷಷ್ಟಿತಮಃ ಸರ್ಗಃ ॥ ೬೨ ॥

ಧರ್ಮಾತ್ಮ ಮಹಾತಪನಾದ ವಿಶ್ವಾಮಿತ್ರನು ರಾಮ! ಪುಷ್ಕರಕ್ಷೇತ್ರದಲ್ಲಿ ಸಾವಿರ ವರ್ಷಕಾಲ ಪುನಃ ತಪಸ್ಸು ಮಾಡಿದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಅರವತ್ತೆರಡನೆ ಸರ್ಗ ಮುಗಿಯಿತು.

ತ್ರಿಷಷ್ಟಿತಮಃ ಸರ್ಗಃ

ಪೂರ್ಣೇ ವರ್ಷಸಹಸ್ರೇ ತು ವ್ರತಸ್ನಾತಂ ಮಹಾಮುನಿಮ್ ।
ಅಭ್ಯಾಗಚ್ಛನ್ಸುರಾಃ ಸರ್ವೇ ತಪಃಫಲಚಿಕೀರ್ಷವಃ ॥ ೧ ॥

ಸಾವಿರ ವರ್ಷಕಾಲ ನಡೆಸುವ ವ್ರತವನ್ನು ಮಹಾಮುನಿ ವಿಶ್ವಾಮಿತ್ರನು ಮಾಡಿಮುಗಿಸಿದಾಗ ತಪಸ್ಸಿನ ಫಲವನ್ನು ಕೊಡಲು ದೇವತೆಗಳೆಲ್ಲರೂ ಬಂದರು.

ಅಬ್ರವೀತ್ತುಮಹಾತೇಜಾ ಬ್ರಹ್ಮಾ ಸುರುಚಿರಂ ವಚಃ ।
ಋಷಿಸ್ತ್ವಮಸಿ ಭದ್ರಂ ತೇ ಸ್ವಾರ್ಜಿತೈಃ ಕರ್ಮಭಿಃ ಶುಭೈಃ ॥ ೨ ॥

ಮಹಾತೇಜರಾದ ಬ್ರಹ್ಮದೇವರು ಮನೋಜ್ಞವಾದ ಮಾತನ್ನಾಡಿದರು, 'ವಿಶ್ವಾಮಿತ್ರ! ನಿನಗೆ ಶುಭವಾಗಲಿ, ನೀನು ಸಂಪಾದಿಸಿದ ಪುಣ್ಯಕರ್ಮಗಳಿಂದ ನೀನೀಗ 'ಋಷಿ' ಎನಿಸಿರುವೆ' ಎಂದು.

ತಮೇವಮುಕ್ತ್ವಾ ದೇವೇಶಸ್ತ್ರಿದಿವಂ ಪುನರಭ್ಯಗಾತ್ ।
ವಿಶ್ವಾಮಿತ್ರೋ ಮಹಾತೇಜಾ ಭೂಯಸ್ತೇಪೇ ಮಹತ್ತಪಃ ॥ ೩ ॥

ದೇವೇಶ ಬ್ರಹ್ಮದೇವರು ವಿಶ್ವಾಮಿತ್ರನಿಗೆ ಹೀಗೆ ಹೇಳಿ ದೇವಲೋಕಕ್ಕೆ ಹಿಂತಿರುಗಿದರು. ವಿಶ್ವಾಮಿತ್ರನು ಮಹಾತೇಜ, ಪುನಃ ಮಹತ್ತಾದ ತಪಗೈದ. ತಾನಿನ್ನೂ ಕೇವಲ 'ಋಷಿ'ಯಾದೆನು, ಬ್ರಹ್ಮರ್ಷಿಯಾಗಿಲ್ಲ!

ತತಃ ಕಾಲೇನ ಮಹತಾ ಮೇನಕಾ ಪರಮಾಪ್ಸರಾಃ ।
ಪುಷ್ಕರೇಷು ನರಶ್ರೇಷ್ಠ ಸ್ನಾತುಂ ಸಮುಪಚಕ್ರಮೇ ॥ ೪ ॥

ಬಳಿಕ ಬಹುಕಾಲಾನಂತರ ಮೇನಕೆ ಎಂಬ ಉತ್ತಮ ಅಪ್ಸರೆ, ರಾಮ! ಪುಷ್ಕರಕ್ಷೇತ್ರದಲ್ಲಿ ಸ್ನಾನ ಮಾಡಲು ತೊಡಗಿದಳು.

ತಾಂ ದದರ್ಶ ಮಹಾತೇಜಾ ಮೇನಕಾಂ ಕುಶಿಕಾತ್ಮಜಃ ।
ರೂಪೇಣಾಪ್ರತಿಮಾಂ ತತ್ರ ವಿದ್ಯುತಂ ಜಲದೇ ಯಥಾ ॥
ದೃಷ್ಟ್ವಾ ಕಂದರ್ಪವಶಗೋ ಮುನಿಸ್ತಾಮಿದಮಬ್ರವೀತ್ ॥ ೫ ॥

ಮಹಾತೇಜ ಮುನಿ ವಿಶ್ವಾಮಿತ್ರನು ಮೋಡದ ನಡುವಿನ ಮಿಂಚಿನಂತೆ ರೂಪದಿಂದ ಅಪ್ರತಿಮಳಾಗಿದ್ದ ಆ ಮೇನಕೆಯನ್ನು ನೋಡಿದ. ನೋಡಿ ಕಾಮಪರವಶನಾಗಿ ಅವಳಿಗೆ ಹೇಳಿದ.

ಅಪ್ಸರಃ ಸ್ವಾಗತಂ ತೇಽಸ್ತು ವಸ ಚೇಹ ಮಮಾಶ್ರಮೇ ।
ಅನುಗೃಹ್ಣೀಷ್ವ ಭದ್ರಂ ತೇ ಮದನೇನ ಸುಮೋಹಿತಮ್ ॥ ೬ ॥

'ಅಪ್ಸರೆಯೆ! ನಿನಗೆ ಸ್ವಾಗತ. ನಿನಗೆ ಮಂಗಳವಾಗಲಿ. ನನ್ನ ಆಶ್ರಮದಲ್ಲಿ ವಾಸ ಮಾಡು. ಕಾಮಮೋಹಿತನಾಗಿರುವ ನನ್ನಲ್ಲಿ ಅನುಗ್ರಹ ಮಾಡು' ಎಂದು.

ಇತ್ಯುಕ್ತಾ ಸಾ ವರಾರೋಹಾ ತತ್ರ ವಾಸಮಥಾಕರೋತ್ ।
ತಪಸೋ ಹಿ ಮಹಾವಿಘ್ನೋ ವಿಶ್ವಾಮಿತ್ರಮುಪಾಗತಃ ॥ ೭ ॥

ವಿಶ್ವಾಮಿತ್ರನು ಹೀಗೆ ಹೇಳಿದಾಗ ಆ ಸುಂದರಿ ಅವನ ಆಶ್ರಮದಲ್ಲಿ ವಾಸ ಮಾಡಿದಳು. ಮತ್ತು ಭಾರತದಲ್ಲಿ ಹೇಳುವಂತೆ ಶಕುಂತಲೆಗೆ ಜನ್ಮವಿತ್ತಳು. ವಿಶ್ವಾಮಿತ್ರನಿಗೆ ದೊಡ್ಡ ತಪೋವಿಘ್ನ ಹೀಗೆ ಬಂದಿತು.

ತಸ್ಯಾಂ ವಸಂತ್ಯಾಂ ವರ್ಷಾಣಿ ಪಂಚ ಪಂಚ ಚ ರಾಘವ ।
ವಿಶ್ವಾಮಿತ್ರಾಶ್ರಮೇ ರಾಮ ಸುಖೇನ ವ್ಯತಿಚಕ್ರಮುಃ ॥ ೮ ॥

ರಾಮ! ಮೇನಕೆ ವಿಶ್ವಾಮಿತ್ರಾಶ್ರಮದಲ್ಲಿ ವಾಸ ಮಾಡುತ್ತಿದ್ದಂತೆ ಹತ್ತು ವರ್ಷಗಳು ಸುಖವಾಗಿ ಕಳೆದುವು.

ಮ.ಭಾ. ಪ್ರಕಾರ ಸಾವಿರ ವರ್ಷ ಕಳೆದುವು. ಇಲ್ಲಿ 'ಹತ್ತು' ಎಂದರೆ 'ಬಹಳ' ಎಂದರ್ಥ. ಅದರಿಂದ ಸರ್ವಜ್ಞರನ್ನು ನಾವು 'ದಶಪ್ರಮತಿ' ಎನ್ನುತ್ತೇವೆ.

ಅಥ ಕಾಲೇ ಗತೇ ತಸ್ಮಿನ್ವಿಶ್ವಾಮಿತ್ರೋ ಮಹಾಮುನಿಃ ।
ಸವ್ರೀಡ ಇವ ಸಂವೃತ್ತಶ್ಚಿಂತಾಶೋಕಪರಾಯಣಃ ॥ ೯ ॥

ಬಳಿಕ ಅಷ್ಟುಕಾಲ ಕಳೆಯಿತೆಂದು ಮಹಾಮುನಿ ವಿಶ್ವಾಮಿತ್ರನು ನಾಚಿದ. ಚಿಂತೆ ಶೋಕಗಳಿಂದ ಪರವಶನೂ ಆದ.

ಬುದ್ಧಿರ್ಮುನೇಃ ಸಮುತ್ಪನ್ನಾ ಸಾಮರ್ಷಾ ರಘುನಂದನ ।
ಸರ್ವಂ ಸುರಾಣಾಂ ಕರ್ಮೈತತ್ತಪೋಪಹರಣಂ ಮಹತ್ ॥ ೧೦ ॥

ರಾಮ! ವಿಶ್ವಾಮಿತ್ರಮುನಿಗೆ ಆಲೋಚನೆ ಹೊಳೆಯಿತು, ಕೋಪ ಬಂದಿತು. ಇದೆಲ್ಲವೂ ದೇವತೆಗಳ ಕೆಲಸ! ನನ್ನ ತಪಸ್ಸನ್ನು ಅಪಹರಿಸಲು ಮಹತ್ತಾದ ಈ ಕರ್ಮ ಮಾಡಿದರು.

ಅಹೋರಾತ್ರಾಪದೇಶೇನ ಗತಾಃ ಸಂವತ್ಸರಾ ದಶ ।
ಕಾಮಮೋಹಾಭಿಭೂತಸ್ಯ ವಿಘ್ನೋಽಯಂ ಪ್ರತ್ಯುಪಸ್ಥಿತಃ ॥ ೧೧ ॥

ಒಂದು ಹಗಲು-ರಾತ್ರಿಯಂತೆ ನನಗೆ ಹತ್ತು ವರ್ಷಗಳೇ ಕಳೆದುವು. ಕಾಮ ಮೋಹಗಳಿಗೆ ಪರವಶನಾಗಿದ್ದೆ. ತಪಸ್ಸಿಗೆ ವಿಘ್ನ ಬಂದಿತ್ತು.

ವಿನಿಃಶ್ವಸನ್ಮುನಿವರಃ ಪಶ್ಚಾತ್ತಾಪೇನ ದುಃಖಿತಃ ।
ಭೀತಾಮಪ್ಸರಸಂ ದೃಷ್ಟ್ವಾ ವೇಪಂತೀಂ ಪ್ರಾಂಜಲಿಂ ಸ್ಥಿತಾಮ್॥ ೧೨ ॥

ಮೇನಕಾಂ ಮಧುರೈರ್ವಾಕ್ಯೈರ್ವಿಸೃಜ್ಯ ಕುಶಿಕಾತ್ಮಜಃ ।
ಉತ್ತರಂ ಪರ್ವತಂ ರಾಮ ವಿಶ್ವಾಮಿತ್ರೋ ಜಗಾಮ ಹ ॥ ೧೩ ॥

ಮುನಿಶ್ರೇಷ್ಠ ವಿಶ್ವಾಮಿತ್ರನು ಪಶ್ಚಾತ್ತಾಪದಿಂದ ದುಃಖಿತನಾಗಿ ನಿಟ್ಟುಸಿರಿಟ್ಟ. ಹೆದರಿ ನಡುಗುತ್ತ ಕೈಮುಗಿದು ನಿಂತ ಅಪ್ಸರೆ ಮೇನಕೆಯನ್ನು ನೋಡಿ ಸವಿ ಮಾತುಗಳಿಂದಲೇ ಕಳಿಸಿ ವಿಶ್ವಾಮಿತ್ರನು, ರಾಮ! ಉತ್ತರದ ಹಿಮಾಲಯ ಪರ್ವತಕ್ಕೆ ಹೊರಟುಹೋದ.

ಸ ಕೃತ್ವಾ ನೈಷ್ಠಿಕೀಂ ಬುದ್ಧಿಂ ಜೇತುಕಾಮೋ ಮಹಾಯಶಾಃ ।
ಕೌಶಿಕೀತೀರಮಾಸಾದ್ಯ ತಪಸ್ತೇಪೇ ಸುದಾರುಣಮ್ ॥ ೧೪ ॥

ಕಾಮಕ್ರೋಧಗಳನ್ನು ಗೆಲ್ಲಲು ಬಯಸಿ ದೃಢನಿಶ್ಚಯ ಮಾಡಿಕೊಂಡು ಮಹಾಯಶನಾದ ವಿಶ್ವಾಮಿತ್ರನು ಕೌಶಿಕೀ ನದೀತೀರಕ್ಕೆ ಹೋಗಿ ಬಲುಘೋರವಾದ ತಪಸ್ಸನ್ನು ಮಾಡಿದ.

ತಸ್ಯ ವರ್ಷಸಹಸ್ರಂ ತು ಘೋರಂ ತಪ ಉಪಾಸತಃ ।
ಉತ್ತರೇ ಪರ್ವತೇ ರಾಮ ದೇವತಾನಾಮಭೂದ್ಭಯಮ್ ॥ ೧೫ ॥

ವಿಶ್ವಾಮಿತ್ರನು ಹಿಮಾಲಯ ಪರ್ವತದಲ್ಲಿ, ರಾಮ! ಸಾವಿರ ವರ್ಷ ಘೋರತಪಗೈದಾಗ ದೇವತೆಗಳಿಗೆ ಭಯ ಉಂಟಾಯಿತು.

ಅಮಂತ್ರಯನ್ಸಮಾಗಮ್ಯ ಸರ್ವೇ ಸರ್ಷಿಗಣಾಃ ಸುರಾಃ ।
ಮಹರ್ಷಿಶಬ್ದಂ ಲಭತಾಂ ಸಾಧ್ವಯಂ ಕುಶಿಕಾತ್ಮಜಃ ॥ ೧೬ ॥

ಎಲ್ಲ ದೇವತೆಗಳೂ ಋಷಿ ಸಮೂಹಗಳೂ ಜೊತೆ ಸೇರಿ ಮಂತ್ರಾಲೋಚನ

ಮಾಡಿದರು. ಈ ವಿಶ್ವಾಮಿತ್ರನು ಚೆನ್ನಾಗಿ 'ಮಹರ್ಷಿ' ಎಂಬ ಬಿರುದನ್ನು ಪಡೆಯಲಿ. ಅದಕ್ಕೆ ತೃಪ್ತಿ ಪಟ್ಟು ತಪಸ್ಸನ್ನು ನಿಲ್ಲಿಸಲಿ ಎಂದು.

ದೇವತಾನಾಂ ವಚಃ ಶ್ರುತ್ವಾ ಸರ್ವಲೋಕಪಿತಾಮಹಃ ।
ಅಬ್ರವೀನ್ಮಧುರಂ ವಾಕ್ಯಂ ವಿಶ್ವಾಮಿತ್ರಂ ತಪೋಧನಮ್ ॥ ೧೭ ॥

ದೇವತೆಗಳ ಮಾತನ್ನು ಕೇಳಿ ಸರ್ವಲೋಕ ಪಿತಾಮಹ ಬ್ರಹ್ಮದೇವರು ತಪೋಧನನಾದ ವಿಶ್ವಾಮಿತ್ರನಿಗೆ ಸವಿನುಡಿ ನುಡಿದರು.

ಮಹರ್ಷೇ ಸ್ವಾಗತಂ ವತ್ಸ ತಪಸೋಗ್ರೇಣ ತೋಷಿತಃ ।
ಮಹತ್ತ್ವಮೃಷಿಮುಖ್ಯತ್ವಂ ದದಾಮಿ ತವ ಕೌಶಿಕ ॥ ೧೮ ॥

'ಮಹರ್ಷಿಯೆ, ವಿಶ್ವಾಮಿತ್ರನೆ, ಮಗು! ನಿನ್ನನ್ನು 'ಮಹರ್ಷಿ' ಅಂದರೆ ಋಷಿಗಳಲ್ಲಿ ಉತ್ತಮ ಎಂದು ಕರೆಯುತ್ತೇನೆ. ನಿನಗೆ ಸ್ವಾಗತ, ಉಗ್ರ ತಪಸ್ಸಿನಿಂದ ನೀನು ನನ್ನನ್ನು ಸಂತೋಷ ಪಡಿಸಿರುವೆ.'

ಬ್ರಹ್ಮಣಃ ಸ ವಚಃ ಶ್ರುತ್ವಾ ಸರ್ವಲೋಕೇಶ್ವರಸ್ಯ ಹ ।
ನ ವಿಷಣ್ಣೋ ನ ಸಂತುಷ್ಟೋ ವಿಶ್ವಾಮಿತ್ರಸ್ತಪೋಧನಃ ॥ ೧೯ ॥

ಸರ್ವಲೋಕ ಸ್ವಾಮಿಯಾದ ಬ್ರಹ್ಮದೇವರ ಮಾತನ್ನು ಕೇಳಿ ತಪೋಧನನಾದ ವಿಶ್ವಾಮಿತ್ರನು ವಿಷಾದ ಪಡಲಿಲ್ಲ, ಸಂತೋಷವನ್ನೂ ಪಡಲಿಲ್ಲ.

ಪ್ರಾಂಜಲಿಃ ಪ್ರಣತೋ ಭೂತ್ವಾ ಸರ್ವಲೋಕಪಿತಾಮಹಮ್ ।
ಪ್ರತ್ಯುವಾಚ ತತೋ ವಾಚಂ ವಿಶ್ವಾಮಿತ್ರೋ ಮಹಾಮುನಿಃ ॥ ೨೦ ॥

ಮಹಾಮುನಿ ವಿಶ್ವಾಮಿತ್ರನು ಸರ್ವಲೋಕ ಪಿತಾಮಹನಾದ ಬ್ರಹ್ಮದೇವರನ್ನು ಕೈಮುಗಿದು ನಮಿಸಿ ಅವರ ಮಾತಿಗೆ ಪ್ರತಿಯಾಗಿ ನುಡಿದ.

ಮಹರ್ಷಿಶಬ್ದಮತುಲಂ ಸಾರ್ಜಿತೈಃ ಕರ್ಮಭಿಃ ಶುಭೈಃ ।
ಯದಿ ಮೇ ಭಗವಾನಾಹ ತತೋಽಹಂ ವಿಜಿತೇಂದ್ರಿಯಃ ॥ ೨೧ ॥

ನಾನು ಗಳಿಸಿದ ಶುಭಕರ್ಮಗಳಿಂದ ಪೂಜ್ಯರಾದ ತಾವು ನನ್ನನ್ನು 'ಮಹರ್ಷಿ' ಶಬ್ದದಿಂದ ಕರೆದಿರುವಿರಿ ಎಂದು ಮೇಲೆ ನಾನು ಜಿತೇಂದ್ರಿಯನೆಂದು ನೀವು ಒಪ್ಪಿರುವಿರ?

ತಮುವಾಚ ತತೋ ಬ್ರಹ್ಮಾ ನ ತಾವತ್ ತ್ವಂ ಜಿತೇಂದ್ರಿಯಃ ।
ಯತಸ್ವ ಮುನಿಶಾರ್ದೂಲ ಇತ್ಯುಕ್ತ್ವಾ ತ್ರಿದಿವಂ ಗತಃ ॥ ೨೨ ॥

ವಿಶ್ವಾಮಿತ್ರನಿಗೆ ಬ್ರಹ್ಮದೇವರು ಹೇಳಿದರು. 'ಅಷ್ಟರಿಂದಲೇ ನೀನು ಜಿತೇಂದ್ರಿಯ-ನಲ್ಲ, ಮುನಿಶ್ರೇಷ್ಠನೆ, ಇಂದ್ರಿಯ ಜಯ ಸಂಪಾದಿಸಲು ಇನ್ನೂ ಯತ್ನಿಸು.'

ವಿಪ್ರಸ್ಥಿತೇಷು ದೇವೇಷು ವಿಶ್ವಾಮಿತ್ರೋ ಮಹಾಮುನಿಃ ।
ಊರ್ಧ್ವಬಾಹುರ್ನಿರಾಲಂಬೋ ವಾಯುಭಕ್ಷಸ್ತಪಶ್ಚರನ್ ॥ ೨೩ ॥

ದೇವತೆಗಳು ಹೊರಟುಹೋದಬಳಿಕ ಮಹಾಮುನಿ ವಿಶ್ವಾಮಿತ್ರನು ನಿರಾಶ್ರಯ-ನಾಗಿ ಎರಡೂ ತೋಳುಗಳನ್ನು ಮೇಲೆತ್ತಿ ಗಾಳಿಯನ್ನು ಮಾತ್ರ ಸೇವಿಸುತ್ತ ತಪಸ್ಸು ಮಾಡಲು ತೊಡಗಿದ್ದ.

ಘರ್ಮೇ ಪಂಚತಪಾ ಭೂತ್ವಾ ವರ್ಷಾಸ್ವಾಕಾಶಸಂಶ್ರಯಃ ।
ಶಿಶಿರೇ ಸಲಿಲಸ್ಥಾಯೀ ರಾತ್ರ್ಯಹಾನಿ ತಪೋಧನಃ ॥
ಏವಂ ವರ್ಷಸಹಸ್ರಂ ಹಿ ತಪೋ ಘೋರಮುಪಾಗಮತ್ ॥ ೨೪ ॥

ಬೇಸಗೆಯಲ್ಲಿ ನಾಲ್ಕು ಕಡೆ ಸುತ್ತಲೂ ಬೆಂಕಿ ಹಾಕಿಕೊಂಡು ಐದನೆಯದಾದ ಊರ್ಧ್ವದಿಕ್ಕಿನ ಬಿಸಿಲಿಗೆ ಮೈ ಒಡ್ಡಿ ಪಂಚ ತಪ ಐದು ಬೇಗೆಗಳ ತಪಸ್ಸನ್ನು ವಿಶ್ವಾಮಿತ್ರ ಮಾಡಿದ. ಮಳೆಗಾಲದಲ್ಲಿ ಮಳೆಯಲ್ಲಿ ನೆನೆಯುತ್ತ ಛಳಿಗಾಲದಲ್ಲಿ ನೀರಿನಲ್ಲಿ ಕುತ್ತಿಗೆ ಮುಳುಗುವಷ್ಟು ನೀರಿನಲ್ಲಿ ನಿಂತು ತಪಸ್ಸು ಮಾಡಿದ. ತಪೋಧನ ವಿಶ್ವಾಮಿತ್ರನು ರಾತ್ರಿ ಹಗಲೆನ್ನದೆ ನಿರಂತರವಾಗಿ ಸಾವಿರ ವರ್ಷಕಾಲ ಘೋರ ತಪಸ್ಸು ಮಾಡಿದ.

ಋಚೀಕಮುನಿ ಗಾಧಿರಾಜನ ಮಗಳಾದ ಸತ್ಯವತಿಯನ್ನು ಮದುವೆಯಾಗಿ ಅವಳಲ್ಲಿ ಪುತ್ರಸಂತತಿ ಪಡೆಯಲು ಬಯಸಿದ. ಸತ್ಯವತಿಯ ತಾಯಿಗೂ ಗಂಡು ಮಕ್ಕಳಿರಲಿಲ್ಲ. ಅವಳೂ ಪುತ್ರಸಂತತಿಯನ್ನು ಬಯಸಿದಳು. ಋಚೀಕ ಮುನಿ ಎರಡು ಪಾತ್ರೆಗಳಲ್ಲಿ ಪವಿತ್ರವಾದ ಹವಿಸ್ಸನ್ನಿಟ್ಟು, ಒಂದರಲ್ಲಿ ಕ್ಷಾತ್ರತೇಜಸ್ಸನ್ನು ಮಂತ್ರದಿಂದ ತುಂಬಿಸಿ ಅತ್ತೆಗೆ ಕೊಟ್ಟ. ಇನ್ನೊಂದರಲ್ಲಿ ಬ್ರಹ್ಮತೇಜಸ್ಸನ್ನಿರಿಸಿ ಸತ್ಯವತಿಗೆ ಕೊಟ್ಟ. ಆದರೆ ಮುನಿ ಸ್ನಾನಕ್ಕೆ ಹೋಗಿದ್ದಾಗ ಇತ್ತ ತಾಯಿ ಮತ್ತು ಮಗಳು ಆ ಹವಿಸ್ಸುಗಳನ್ನು ಬದಲಾಯಿಸಿಕೊಂಡರು. ಅಳಿಯನು ಮಗಳಿಗೆಂದು ಕೊಡುವ ಹವಿಸ್ಸು ಶ್ರೇಷ್ಠವಾಗಿರುತ್ತದೆ ಎಂದು ತಾಯಿಯ ಭಾವನೆ. ಆದರೆ ಅದು

ತಪ್ಪಾಗಿತ್ತು. ಮುನಿ ಸತ್ಯವತಿಗೆ ಹೇಳಿದ. ಈಗ ನಿನ್ನ ಮಗ ಜಮದಗ್ನಿ ಕ್ಷತ್ರ ತೇಜದವನೂ ನಿನ್ನ ತಮ್ಮ ವಿಶ್ವಾಮಿತ್ರನು ಬ್ರಹ್ಮತೇಜದವನೂ ಆಗುತಾನೆ! 'ಅಯ್ಯೋ! ಹಾಗಾಗಬಾರದು' ಎಂದರೆ, ಮುನಿ ಹೇಳಿದ, ನಿನ್ನ ಮಗ ಜಮದಗ್ನಿ ಕ್ಷತ್ರಿಯನಾಗದಿದ್ದರೂ ಮೊಮ್ಮಗ ಪರಶುರಾಮ ಕ್ಷಾತ್ರತೇಜವನ್ನೇ ಮೆರೆಯುತ್ತಾನೆ. ತಮ್ಮನು ವಿಶ್ವಾಮಿತ್ರ ಹುಟ್ಟುವಾಗ ಕ್ಷತ್ರಿಯನೇ ಆದರೂ ಬಳಿಕ ಬ್ರಾಹ್ಮತೇಜವನ್ನು ವ್ಯಕ್ತ ಮಾಡಿಕೊಳ್ಳುತ್ತಾನೆ' ಎಂದ. ಅದರಂತೆ ಋಚೀಕಪುತ್ರ ಜಮದಗ್ನಿ ಕ್ಷತ್ರಿಯನಾಗದಿದ್ದರೂ ಮೊಮ್ಮಗ ಪರಶುರಾಮ ಕ್ಷಾತ್ರತೇಜವನ್ನೇ ಮೆರೆದಿದ್ದಾನೆ. ತಮ್ಮ ವಿಶ್ವಾಮಿತ್ರ ಕ್ಷತ್ರಿಯನಾಗಿ ಜನಿಸಿದರೂ ಬ್ರಹ್ಮರ್ಷಿಯಾಗಲು ತವಕಿಸಿದ, ಅವನ ತವಕವೇ ವಸಿಷ್ಠ ದ್ವೇಷರೂಪದಿಂದ ಪಂಚಾಗ್ನಿ ತಪಸ್ಸಿನಂಥ ಘೋರ ತಪದ ರೂಪದಿಂದ ಮೆರೆಯಿತು. ಅದರಿಂದಲೇ ವಸಿಷ್ಠರೂ ಸುಮ್ಮನೇ ಇದ್ದರು ಎಂದು ಭಾಗವತ ನವಮಸ್ಕಂಧದಲ್ಲಿದೆ.

ತಸ್ಮಿನ್ಸಂತಪ್ಯಮಾನೇ ತು ವಿಶ್ವಾಮಿತ್ರೇ ಮಹಾಮುನೌ ।
ಸಂಭ್ರಮಃ ಸುಮಹಾನಾಸೀತ್ಸುರಾಣಾಂ ವಾಸವಸ್ಯ ಚ ॥ ೨೫ ॥

ಮಹಾಮುನಿ ವಿಶ್ವಾಮಿತ್ರ ಹೀಗೆ ಘೋರತಪಸ್ಸು ಮಾಡುತ್ತಿದ್ದಾಗ ದೇವತೆಗಳಿಗೂ ದೇವೇಂದ್ರನಿಗೂ ಬಹಳ ಕಳವಳ ಉಂಟಾಯಿತು.

ರಂಭಾಮಪ್ಸರಸಂ ಶಕ್ರಃ ಸಹ ಸರ್ವೈರ್ಮರುದ್ಗಣೈಃ ।
ಉವಾಚಾತ್ಮಹಿತಂ ವಾಕ್ಯಮಹಿತಂ ಕೌಶಿಕಸ್ಯ ಚ ॥ ೨೬ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ತ್ರಿಷಷ್ಟಿತಮಃ ಸರ್ಗಃ ॥ ೬೩ ॥

ರಂಭೆ ಎಂಬ ಅಪ್ಸರೆಯನ್ನು ಇಂದ್ರನೂ ಎಲ್ಲ ದೇವತೆಗಳೂ ಕರೆದು ತಮಗೆ ಹಿತಕರವೂ ವಿಶ್ವಾಮಿತ್ರನಿಗೆ ಅಹಿತಕರವೂ ಆಗಿರುವ ದೇವಕಾರ್ಯವನ್ನು ಮಾಡಲು ಆದೇಶಿಸಿದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಅರವತ್ತಮೂರನೆ ಸರ್ಗ ಮುಗಿಯಿತು.

ಚತುಃಷಷ್ಟಿತಮಃ ಸರ್ಗಃ

ಸುರಕಾರ್ಯಮಿದಂ ರಂಭೇ ಕರ್ತವ್ಯಂ ಸುಮಹತ್ ತ್ವಯಾ ।
ಲೋಭನಂ ಕೌಶಿಕಸ್ಯೇಹ ಕಾಮಮೋಹಸಮನ್ವಿತಮ್ ॥ ೧ ॥

ರಂಭೆ! ಇದೊಂದು ಮಹತ್ವಪೂರ್ಣವಾದ ಸುರಕಾರ್ಯವನ್ನು ನೀನು ಮಾಡಬೇಕಾಗಿದೆ. ವಿಶ್ವಾಮಿತ್ರನಿಗೆ ಕಾಮಪರವಶತೆಯನ್ನುಂಟು ಮಾಡುವ ಮೂಲಕ ಪ್ರಲೋಭನೆ, ವಂಚನೆ ಮಾಡು.

'ಬೆಂಕಿ ಕೆದಕಿದರೆ ಜ್ವಲಿಸುತ್ತದೆ. ಹಾವು, ಕೆಣಕಿದರೆ ಹೆಡೆ ಅರಳಿಸುತ್ತದೆ. ವಿಘ್ನ ಮಾಡಿದಷ್ಟೂ ಮಹಾತ್ಮರ ಮಹಿಮೆ ಎದ್ದು ಕಾಣಿಸಿಕೊಳ್ಳುತ್ತದೆ' ಎಂದು ಕಾಳಿದಾಸ ಹೇಳುವಂತೆ, ವಿಶ್ವಾಮಿತ್ರರ ಬ್ರಾಹ್ಮತೇಜ ಪ್ರಜ್ವಲಿಸಲೆಂದೇ ದೇವತೆಗಳು ವಿಘ್ನ ಮಾಡುತ್ತಿದ್ದಾರೆ. ತಪಸ್ಸನ್ನು ನಿಲ್ಲಿಸಬೇಕೆಂದಲ್ಲ. ನಿಲ್ಲಿಸಬೇಕೆಂದಿದ್ದರೆ ತತ್ವಾಭಿಮಾನಿ-ಗಳು ಒಳಗೆ ತಪಸ್ಸು ಮಾಡಲು ಪ್ರೇರಿಸದಿದ್ದರೇ ಸಾಕು. ನಿಂತು ಹೋಗುತ್ತದೆ.

ತಥೋಕ್ತಾ ಸಾऽಪ್ಸರಾ ರಾಮ ಸಹಸ್ರಾಕ್ಷೇಣ ಧೀಮತಾ ।
ವ್ರೀಡಿತಾ ಪ್ರಾಂಜಲಿರ್ಭೂತ್ವಾ ಪ್ರತ್ಯುವಾಚ ಸುರೇಶ್ವರಮ್ ॥ ೨ ॥

ರಾಮ! ಧೀಮಂತನಾದ ಇಂದ್ರನು ಹೀಗೆ ಹೇಳಿದಾಗ ಆ ಅಪ್ಸರೆ ನಾಚಿ ಕೈಮುಗಿದು ನುಡಿದಳು.

ಅಯಂ ಸುರಪತೇ ಘೋರೋ ವಿಶ್ವಾಮಿತ್ರೋ ಮಹಾಮುನಿಃ ।
ಕ್ರೋಧಮುತ್ಸೃಜತೇ ಘೋರಂ ಮಯಿ ದೇವ ನ ಸಂಶಯಃ ॥ ೩ ॥

ದೇವರಾಜ! ಈ ವಿಶ್ವಾಮಿತ್ರ ಮಹಾಮುನಿ ಭಯಂಕರ. ದೇವ! ಅವನು ನನ್ನಲ್ಲಿ ಭಯಂಕರ ಕೋಪ ಮಾಡುತ್ತಾನೆ. ಸಂಶಯವಿಲ್ಲ.

ತತೋ ಹಿ ಮೇ ಭಯಂ ದೇವ ಪ್ರಸಾದಂ ಕರ್ತುಮರ್ಹಸಿ ।
ಏವಮುಕ್ತಸ್ತಯಾ ರಾಮ ರಂಭಯಾ ಭೀತಯಾ ತದಾ ॥ ೪ ॥

ತಾಮುವಾಚ ಸಹಸ್ರಾಕ್ಷೋ ವೇಪಮಾನಾಂ ಕೃತಾಂಜಲಿಮ್ ।
ಮಾ ಭೈಷಿ ರಂಭೇ ಭದ್ರಂ ತೇ ಕುರುಷ್ವ ಮಮ ಶಾಸನಮ್ ॥ ೫ ॥

ಅದರಿಂದ ದೇವ! ನನಗೆ ಭಯವಾಗುತ್ತಿದೆ, ನನ್ನಲ್ಲಿ ಅನುಗ್ರಹ ಮಾಡು'

ಎಂದು ರಂಭೆ ನಡುಗುತ್ತ ಕೈಮುಗಿದು ಹೇಳುವಾಗ 'ರಂಭೆ ಭಯಪಡಬೇಡ, ನಿನಗೆ ಒಳ್ಳೆಯದಾಗುವುದು, ನನ್ನಾದೇಶದಂತೆ ಕಾರ್ಯ ಮಾಡು.'

ಕೋಕಿಲೋ ಹೃದಯಗ್ರಾಹೀ ಮಾಧವೇ ರುಚಿರದ್ರುಮೇ ।
ಅಹಂ ಕಂದರ್ಪಸಹಿತಃ ಸ್ಥಾಸ್ಯಾಮಿ ತವ ಪಾರ್ಶ್ವತಃ ॥ ೬ ॥

ವಸಂತನ ಬಳಿ ಸುಂದರವಾದ ಮಾವಿನ ಮರದಲ್ಲಿ ನಾನು ಹೃದಯಗ್ರಾಹಿ ಧ್ವನಿ ಮಾಡುವ ಕೋಗಿಲೆಯಾಗಿ ಮನ್ಮಥನೊಂದಿಗೆ ನಿನ್ನ ಬಳಿಯೇ ನಿಂತಿರುತ್ತೇನೆ.

ತ್ವಂ ಹಿ ರೂಪಂ ಬಹುಗುಣಂ ಕೃತ್ವಾ ಪರಮಭಾಸ್ವರಮ್ ।
ತಮೃಷಿಂ ಕೌಶಿಕಂ ರಂಭೇ ಭೇದಯಸ್ವ ತಪಸ್ವಿನಮ್ ॥ ೭ ॥

ನೀನು ನಿನ್ನ ರೂಪವನ್ನು ಬಹು ಹೆಚ್ಚಾಗಿ ಸುಂದರವಾಗಿ ಹೊಳೆಯುವಂತೆ ಮಾಡಿಕೊಂಡು ತಪಸ್ವಿಯಾದ ಆ ವಿಶ್ವಾಮಿತ್ರ ಋಷಿಯನ್ನು ವಿಚಲಿತಗೊಳಿಸು.

ಸಾ ಶ್ರುತ್ವಾ ವಚನಂ ತಸ್ಯ ಕೃತ್ವಾ ರೂಪಮನುತ್ತಮಮ್ ।
ಲೋಭಯಾಮಾಸ ಲಲಿತಾ ವಿಶ್ವಾಮಿತ್ರಂ ಶುಚಿಸ್ಮಿತಾ ॥ ೮ ॥

ಸುಂದರಿಯಾದ ಆ ರಂಭೆ ಇಂದ್ರನ ಮಾತನ್ನು ಕೇಳಿ ಇನ್ನೂ ಹೆಚ್ಚು ಆಕರ್ಷಕ ಉತ್ತಮ ರೂಪ ಮಾಡಿಕೊಂಡು ನಗುಮೊಗದಿಂದ ವಿಶ್ವಾಮಿತ್ರನನ್ನು ತನ್ನ ಕಡೆಗೆ ಆಕರ್ಷಿಸಿದಳು.

ಕೋಕಿಲಸ್ಯ ತು ಶುಶ್ರಾವ ವಲ್ಗು ವ್ಯಾಹರತಃ ಸ್ವನಮ್ ।
ಸಂಪ್ರಹೃಷ್ಟೇನ ಮನಸಾ ತತ ಏನಾಮುದೈಕ್ಷತ ॥ ೯ ॥

ಮಧುರವಾಗಿ ಉಲಿವ ಕೋಗಿಲೆಯ ಧ್ವನಿ ಕೇಳಿ ಮನದಲ್ಲಿ ಹರ್ಷಗೊಂಡು ಮುನಿ ರಂಭೆಯನ್ನು ನೋಡಿದ.

ಅಥ ತಸ್ಯ ಚ ಶಬ್ದೇನ ಗೀತೇನಾಪ್ರತಿಮೇನ ಚ ।
ದರ್ಶನೇನ ಚ ರಂಭಾಯಾ ಮುನಿಃ ಸಂದೇಹಮಾಗತಃ ॥ ೧೦ ॥

ಕೋಗಿಲೆಯ ಧ್ವನಿಯಿಂದಲೂ ಅಪ್ರತಿಮವಾದ ಗೀತಧ್ವನಿಯಿಂದಲೂ ರಂಭೆಯ ದರ್ಶನದಿಂದಲೂ ಮುನಿ ಸಂದೇಹ ಪಟ್ಟ, ಈ ರಂಭೆ ದೈವಾತ್ ತಾನಾಗಿಯೆ ನನ್ನಾಶ್ರಮಕ್ಕೆ ಬಂದಳೋ ಅಥವಾ ದೇವೇಂದ್ರ ಕಳಿಸಿರುವನೋ? ಎಂದು.

ಸಹಸ್ರಾಕ್ಷಸ್ಯ ತತ್ಕರ್ಮ ವಿಜ್ಞಾಯ ಮುನಿಪುಂಗವಃ ।
ರಂಭಾಂ ಕ್ರೋಧಸಮಾವಿಷ್ಟಃ ಶಶಾಪ ಕುಶಿಕಾತ್ಮಜಃ ॥ ೧೧ ॥

ಯೋಗಬಲದಿಂದ ಇದು ಇಂದ್ರನು ಮಾಡಿದ ದುಷ್ಕರ್ಮ, ಅವನ ಪ್ರೇರಣೆಯಿಂದ ಇವಳು ನನ್ನ ತಪಸ್ಸನ್ನು ಕೆಡಿಸಲೆಂದೇ ಬಂದಿದ್ದಾಳೆ ಎಂದು ಕೋಪ ತಡೆಯಲಾರದೆ, ರಂಭೆಗೆ ಶಪಿಸಿದ ವಿಶ್ವಾಮಿತ್ರ .

ಯನ್ಮಾಂ ಲೋಭಯಸೇ ರಂಭೇ ಕಾಮಕ್ರೋಧಜಯೈಷಿಣಮ್ ।
ದಶವರ್ಷಸಹಸ್ರಾಣಿ ಶೈಲೀ ಸ್ಥಾಸ್ಯಸಿ ದುರ್ಭಗೇ ॥ ೧೨ ॥

'ಕಾಮಕ್ರೋಧಗಳ ಮೇಲೆ ಜಯ ಸಂಪಾದಿಸಲು ಹೊರಟ ನನ್ನನ್ನು, ರಂಭೆ! ನೀನು ವಂಚಿಸುತ್ತಿರುವೆ? ಕೆಟ್ಟ ಸಾಹಸ ಮಾಡುವವಳೆ! ಹತ್ತುಸಾವಿರ ವರ್ಷಕಾಲ ಕಲ್ಲಾಗಿ ಬಿದ್ದಿರು.'

ಬ್ರಾಹ್ಮಣಃ ಸುಮಹಾತೇಜಾಸ್ತಪೋಬಲಸಮನ್ವಿತಃ ।
ಉದ್ಧರಿಷ್ಯತಿ ರಂಭೇ ತ್ವಾಂ ಮತ್ಕ್ರೋಧಕಲುಷೀಕೃತಾಮ್ ॥ ೧೩ ॥

'ನನ್ನ ಕೋಪಕ್ಕೆ ಬಲಿಯಾದ ನಿನ್ನನ್ನು, ರಂಭೆ! ಒಬ್ಬ ಮಹಾತೇಜ, ತಪೋಬಲ–ಯುಕ್ತನಾದ ಬ್ರಾಹ್ಮಣನು ಶಾಪದಿಂದ ವಿಮುಕ್ತಗೊಳಿಸುತ್ತಾನೆ.'

ಈ ಬ್ರಾಹ್ಮಣನು ಯಾರು? ವಸಿಷ್ಠನೇ ಇರಬಹುದೆಂದು ವ್ಯಾಖ್ಯಾನಕಾರರ ಅಭಿಪ್ರಾಯವಿದೆ. ಆದರೆ ಸ್ಕಾಂದಪುರಾಣ ಬ್ರಹ್ಮಖಂಡ ಅಧ್ಯಾಯ ೩೯ 'ರಂಭಾ ಶಾಪವಿಮೋಕ್ಷಣ' ಎಂಬ ಅಧ್ಯಾಯದಲ್ಲಿ ಅಗಸ್ತ್ಯ ಶಿಷ್ಯನಾದ ಶ್ವೇತ ಎಂಬ ಮುನಿ ರಂಭೆಯ ಶಾಪವಿಮೋಚನೆ ಮಾಡಿದನೆಂದಿದೆ. ಅಂಗಾರಕಾ ಎಂಬ ರಾಕ್ಷಸಿ ಶ್ವೇತಮುನಿಯ ಆಶ್ರಮದಲ್ಲಿ ರಕ್ತ ಮೂತ್ರಾದಿಗಳನ್ನು ಚೆಲ್ಲಿ ನಾನಾ ಉಪದ್ರವ ಮಾಡಿದಾಗ ಮುನಿ ಕೋಪದಿಂದ ಅಲ್ಲಿಯೇ ಬಿದ್ದಿದ್ದ ಶಿಲೆಯನ್ನೆತ್ತಿಕೊಂಡು ವಾಯವ್ಯಾಸ್ತ್ರ ಮಂತ್ರಪೂರ್ವಕವಾಗಿ ರಾಕ್ಷಸಿಯ ಮೇಲೆ ಎಸೆದಾಗ, ದಕ್ಷಿಣ ಸಮುದ್ರತೀರದ ವರೆಗೆ ಹಾರಿ ಅವಳು ಕಪಿತೀರ್ಥದಲ್ಲಿ ಆ ಕಲ್ಲಿನೇಟಿನಿಂದ ಸತ್ತು ಬಿದ್ದಳು. ಕಲ್ಲೂ ಅಲ್ಲಿಯೇ ಬಿದ್ದಿತು. ಕಲ್ಲು ರಂಭೆ ಅಪ್ಸರೆಯಾದಳು. ರಾಕ್ಷಸಿಯೂ ಅಗಸ್ತ್ಯ ಶಾಪದಿಂದ ಮುಕ್ತಳಾಗಿ ಘೃತಾಚಿ ಎಂಬ ಅಪ್ಸರೆಯಾದಳು' ಎಂದು.

ಏವಮುಕ್ತ್ವಾ ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ ।
ಅಶಕ್ನುವನ್ಧಾರಯಿತುಂ ಕ್ರೋಧಂ ಸಂತಾಪಮಾಗತಃ ॥ ೧೪ ॥

ಮಹಾತೇಜ ಮಹಾಮುನಿ ವಿಶ್ವಾಮಿತ್ರನು ರಂಭೆಗೆ ಹೀಗೆ ಶಾಪವಿತ್ತು, ತಾನು ಕೋಪವನ್ನು ತಡೆಯಲಾರದವನಾದೆನೆಂದು ಪರಿತಪಿಸಿದ.

ತಸ್ಯ ಶಾಪೇನ ಮಹತಾ ರಂಭಾ ಶೈಲೀ ತದಾಭವತ್ ।
ವಚಃ ಶ್ರುತ್ವಾ ಚ ಕಂದರ್ಪೋ ಮಹರ್ಷೇಃ ಸ ಚ ನಿರ್ಗತಃ ॥ ೧೫ ॥

ವಿಶ್ವಾಮಿತ್ರನ ಮಹಾಶಾಪದಿಂದ ರಂಭೆ ಒಡನೆ ಕಲ್ಲಾದಳು, ಶಾಪವಚನವನ್ನು ಕೇಳಿದೊಡನೇ ಮನ್ಮಥನೂ ಅಲ್ಲಿಂದ ಹೊರಟುಹೋದ.

ಕೋಪೇನ ಸುಮಹಾತೇಜಾಸ್ತಪೋಪಹರಣೇ ಕೃತೇ ।
ಇಂದ್ರಿಯೈರಜಿತೈ ರಾಮ ನ ಲೇಭೇ ಶಾಂತಿಮಾತ್ಮನಃ ॥
ಬಭೂವಾಸ್ಯ ಮನಶ್ಚಿಂತಾ ತಪೋಪಹರಣೇ ಕೃತೇ ॥ ೧೬ ॥

ರಾಮ! ಮಹಾತೇಜನಾದ ವಿಶ್ವಾಮಿತ್ರನು ತನ್ನ ಕೋಪದಿಂದ ತನ್ನ ತಪಸ್ಸು ಹಾಳಾದಾಗ, ತಾನು ಇಂದ್ರಿಯ ನಿಗ್ರಹ ಸಂಪಾದಿಸಲಿಲ್ಲವೆಂದು ಮನಸಿಗೆ ಶಾಂತಿಯೇ ಅವನಿಗೆ ಇಲ್ಲವಾಯಿತು. ತಪಸ್ಸು ಹಾಳಾಯಿತೆಂದು ಮನಸಿನಲ್ಲಿ ಚಿಂತೆ ಉಂಟಾಯಿತು.

ನೈವ ಕ್ರೋಧಂ ಗಮಿಷ್ಯಾಮಿ ನ ಚ ವಕ್ಷ್ಯೇ ಕಥಂಚನ ।
ಅಥವಾ ನೋಚ್ಛ್ವಸಿಷ್ಯಾಮಿ ಸಂವತ್ಸರಶತಾನ್ಯಪಿ ॥ ೧೭ ॥

ನಾನಿನ್ನು ಸರ್ವಥಾ ಕೋಪ ಮಾಡಲಾರೆ. ಸರ್ವಥಾ ಮಾತನ್ನೇ ಆಡಲಾರೆ, ಅಥವಾ ನೂರಾರು ವರ್ಷ ಕಾಲವೂ ಉಸಿರಾಡಲಾರೆ.

ಅಹಂ ವಿಶೋಷಯಿಷ್ಯಾಮಿ ಹ್ಯಾತ್ಮಾನಂ ವಿಜಿತೇಂದ್ರಿಯಃ ।
ತಾವದ್ಯಾವದ್ಧಿ ಮೇ ಪ್ರಾಪ್ತಂ ಬ್ರಾಹ್ಮಣ್ಯಂ ತಪಸಾರ್ಜಿತಮ್ ॥ ೧೮ ॥

ಅನುಚ್ಛ್ವಸನ್ನಭುಂಜಾನಸ್ತಿಷ್ಠೇಯಂ ಶಾಶ್ವತೀಃ ಸಮಾಃ ।
ನ ಹಿ ಮೇ ತಪ್ಯಮಾನಸ್ಯ ಕ್ಷಯಂ ಯಾಸ್ಯಂತಿ ಮೂರ್ತಯಃ ॥ ೧೯ ॥

ಆತ್ಮಶೋಷಣೆ ಮಾಡಿಕೊಂಡು ಇಂದ್ರಿಯ ನಿಗ್ರಹವನ್ನು ಸಂಪಾದಿಸುವೆನು. ತಪಸ್ಸಿನಿಂದ ಸಂಪಾದಿಸಿದ ಬ್ರಾಹ್ಮಣ್ಯವು ನನಗೆ ಲಭಿಸುವ ವರೆಗೂ ಏನೂ ಉಣದೇ ಉಸಿರಾಡದೇ ಬಹು ವರ್ಷಗಳ ಕಾಲವೂ ಬದುಕಿರುತ್ತೇನೆ. ನಾನು ತಪಸ್ಸು ಮಾಡುವಾಗ ನನ್ನ ಅಂಗಾಂಗಗಳು ನಾಶವಾಗಲಾರವು.

ಏವಂ ವರ್ಷಸಹಸ್ರಸ್ಯ ದೀಕ್ಷಾಂ ಸ ಮುನಿಪುಂಗವಃ ।
ಚಕಾರಾಪ್ರತಿಮಾಂ ಲೋಕೇ ಪ್ರತಿಜ್ಞಾಂ ರಘುನಂದನ ॥ ೨೦ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಚತುಃಷಷ್ಟಿತಮಃ ಸರ್ಗಃ ॥ ೬೪ ॥

ಹೀಗೆ ಮುನಿಶ್ರೇಷ್ಠನಾದ ವಿಶ್ವಾಮಿತ್ರನು ಸಾವಿರ ವರ್ಷದ ಈ ದೀಕ್ಷೆಗಾಗಿ, ರಾಮ! ಲೋಕದಲ್ಲಿಯೇ ಅಪ್ರತಿಮವಾದ ಪ್ರತಿಜ್ಞೆಯನ್ನು ಮಾಡಿದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಅರವತ್ತನಾಲ್ಕನೆ ಸರ್ಗ ಮುಗಿಯಿತು.

ಪಂಚಷಷ್ಟಿತಮಃ ಸರ್ಗಃ

ಅಥ ಹೈಮವತೀಂ ರಾಮ ದಿಶಂ ತ್ಯಕ್ತ್ವಾ ಮಹಾಮುನಿಃ ।
ಪೂರ್ವಾಂ ದಿಶಮನುಪ್ರಾಪ್ಯ ತಪಸ್ತೇಪೇ ಸುದಾರುಣಮ್ ॥ ೧ ॥

ಬಳಿಕ, ರಾಮ! ಮಹಾಮುನಿ ವಿಶ್ವಾಮಿತ್ರನು ಹಿಮಾಲಯವಿರುವ ಉತ್ತರದ ದಿಕ್ಕನ್ನೂ ಬಿಟ್ಟು ಪೂರ್ವದಿಕ್ಕಿಗೆ ಬಂದು ಬಲು ಘೋರವಾದ ತಪಸ್ಸನ್ನು ಮಾಡಿದ.

ಮೌನಂ ವರ್ಷಸಹಸ್ರಸ್ಯ ಕೃತ್ವಾ ವ್ರತಮನುತ್ತಮಮ್ ।
ಚಕಾರಾಪ್ರತಿಮಂ ರಾಮ ತಪಃ ಪರಮದುಷ್ಕರಮ್ ॥ ೨ ॥

ಸಾವಿರ ವರ್ಷಗಳ ಉತ್ತಮವಾದ ಮೌನವ್ರತವನ್ನು ಕೈಗೊಂಡು ರಾಮ! ಪರಮದುಷ್ಕರವಾದ ಅಪ್ರತಿಮವಾದ ತಪಸ್ಸನ್ನು ಮಾಡಿದ.

ಪೂರ್ಣೇ ವರ್ಷಸಹಸ್ರೇ ತು ಕಾಷ್ಠಭೂತಂ ಮಹಾಮುನಿಮ್ ।
ವಿಘ್ನೈರ್ಬಹುಭಿರಾಧೂತಂ ಕ್ರೋಧೋ ನಾಂತರಮಾವಿಶತ್ ॥
ಸ ಕೃತ್ವಾ ನಿಶ್ಚಯಂ ರಾಮ ತಪ ಆತಿಷ್ಠದವ್ಯಯಮ್ ॥ ೩ ॥

ಸಾವಿರ ವರ್ಷ ಪೂರ್ಣವಾದರೂ ಇನ್ನೂ ಮಹಾಮುನಿ ವಿಶ್ವಾಮಿತ್ರನು ಕಟ್ಟಿಗೆಯಂತಾಗಿ ಹೋದನು ವಿಘ್ನಗಳು ಬಹಳ ಬಂದು ಅವನನ್ನು ವಿಚಲಿತ-ಗೊಳಿಸಿದರೂ ಕೋಪವು ಅವನ ಹೃದಯದೊಳಗೆ ಪ್ರವೇಶಿಸಲಿಲ್ಲ. ರಾಮ! ಅಂಥ ನಿಶ್ಚಯ ಮಾಡಿ ಅವ್ಯಯವಾದ ತಪಸ್ಸನ್ನು ನಡೆಸಿದ.

ತಸ್ಯ ವರ್ಷಸಹಸ್ರಸ್ಯ ವ್ರತೇ ಪೂರ್ಣೇ ಮಹಾವ್ರತಃ ।
ಭೋಕ್ತುಮಾರಬ್ಧವಾನನ್ನಂ ತಸ್ಮಿನ್ಕಾಲೇ ರಘೂತ್ತಮ ॥
ಇಂದ್ರೋ ದ್ವಿಜಾತಿರ್ಭೂತ್ವಾ ತಂ ಸಿದ್ಧಮನ್ನಮಯಾಚತ ॥ ೪ ॥

ಅವನ ಸಾವಿರ ವರ್ಷಗಳ ವ್ರತ ಪೂರ್ಣವಾದಾಗ ಮಹಾವ್ರತನಿಷ್ಠನಾದ ವಿಶ್ವಾಮಿತ್ರನು ಅನ್ನವನ್ನು ಉಣಲು ಉದ್ಯುಕ್ತನಾದ. ರಾಮ! ಆ ಕಾಲದಲ್ಲಿ ಇಂದ್ರನು ಬ್ರಾಹ್ಮಣನಾಗಿ ಬಂದು 'ಸಿದ್ಧವಾದ ಅನ್ನವನ್ನೇ ಪೂರ್ತಿಯಾಗಿ ನೀಡು' ಎಂದು ಬೇಡಿದ.

ತಸ್ಮೈ ದತ್ತ್ವಾ ತದಾ ಸಿದ್ಧಂ ಸರ್ವಂ ವಿಪ್ರಾಯ ನಿಶ್ಚಿತಃ ।
ನಿಃಶೇಷಿತೇಽನ್ನೇ ಭಗವಾನಭುಕ್ತ್ವೈವ ಮಹಾತಪಾಃ ॥ ೫ ॥

ನ ಕಿಂಚಿದವದದ್ವಿಪ್ರಂ ಮೌನವ್ರತಮಥಾಸ್ಥಿತಃ ।
ಅಥ ವರ್ಷಸಹಸ್ರಂ ವೈ ನೋಚ್ಛ್ವಸನ್ಮುನಿಪುಂಗವಃ ॥ ೬ ॥

ವಿಶ್ವಾಮಿತ್ರನು ಬ್ರಾಹ್ಮಣರೂಪದಿಂದ ಬಂದ ಇಂದ್ರನಿಗೆ ಏನೂ ಸಂದೇಹ ಮಾಡದೆ ಸಿದ್ಧವಾದ ಅನ್ನವನ್ನು ಪೂರ್ತಿಯಾಗಿ ನೀಡಿ, ಅನ್ನವೇನೂ ಉಳಿಯದಿದ್ದಾಗ ಭಗವಾನ್ ಮಹಾತಪ ವಿಶ್ವಾಮಿತ್ರನು ಭೋಜನವನ್ನು ಮಾಡದೆಯೇ ಮೌನವ್ರತವನ್ನು ಹಿಡಿದೇ ಇದ್ದ, ಹೊರತು ಬ್ರಾಹ್ಮಣನಿಗೆ ಏನೂ ಹೇಳಲಿಲ್ಲ. ಬಳಿಕ ಮುನಿಶ್ರೇಷ್ಠನು ಪುನಃ ಸಾವಿರ ವರ್ಷಕಾಲ ಉಸಿರಾಡಲಿಲ್ಲ.

'ಸಿದ್ಧವಾದ ಅನ್ನವನ್ನು ಪೂರ್ತಿಯಾಗಿ ಬ್ರಾಹ್ಮಣನಿಗೆ ದಾನ ಮಾಡಿದರೂ ಪುನಃ ತನಗಾಗಿ ಬೇರೆ ಅನ್ನಪಾಕ ಮಾಡಬಹುದಿತ್ತು ತಾನೆ? ಭೋಜನವನ್ನೇ ಮಾಡದಿರಲು ಏನು ಕಾರಣ?' ಎಂಬ ಪ್ರಶ್ನೆ ಇಲ್ಲಿ ಸರಿಯಲ್ಲ. ತಪಸ್ವಿಗಳು ಬೇಡಿ ತಂದ ಧಾನ್ಯವನ್ನು, 'ನಾಳೆಗೂ ಇರಲಿ' ಎಂದು ಸಂಗ್ರಹ ಮಾಡಿಡಬಾರದು. ಅದರಿಂದ ಧಾನ್ಯ ಸಂಗ್ರಹವಿಲ್ಲದ್ದರಿಂದ ಪುನಃ ಪಾಕವಿಲ್ಲ.

ತಸ್ಯಾನುಚ್ಛ್ವಸಮಾನಸ್ಯ ಮೂರ್ಧ್ನಿ ಧೂಮೋ ವ್ಯಜಾಯತ ।
ತ್ರೈಲೋಕ್ಯಂ ಯೇನ ಸಂಭ್ರಾಂತಮಾದೀಪಿತಮಿವಾಭವತ್ ॥ ೭ ॥

ವಿಶ್ವಾಮಿತ್ರನು ಉಸಿರಾಡದೆ ತಪಸ್ಸು ಮಾಡುವಾಗ ಅವನ ತಲೆಯಿಂದ ಹೊಗೆ ಕಾಣಿಸಿಕೊಂಡಿತು. ಮೂಲೋಕವೇ ಬೆಂಕಿಯಿಂದ ಸುಟ್ಟುಹೋಗುವುದೇನೋ! ಎಂದು ವ್ಯಾಕುಲಗೊಂಡಿತು.

ತತೋ ದೇವಾಃ ಸಗಂಧರ್ವಾಃ ಪನ್ನಗಾಸುರರಾಕ್ಷಸಾಃ ।
ಮೋಹಿತಾಸ್ತೇಜಸಾ ತಸ್ಯ ತಪಸಾ ಮಂದರಶ್ಮಯಃ ॥
ಕಶ್ಮಲೋಪಹತಾಃ ಸರ್ವೇ ಪಿತಾಮಹಮಥಾಬ್ರುವನ್ ॥ ೮ ॥

ಆಗ ದೇವತೆಗಳು ಗಂಧರ್ವರು ನಾಗ ಅಸುರ ರಾಕ್ಷಸರು ವಿಶ್ವಾಮಿತ್ರನ ತಪೋಜ್ವಾಲೆಯಿಂದ ದಿಗ್ಭ್ರಾಂತಿಗೊಳಗಾದರು. ತಪಸ್ಸಿನಿಂದ ನಿಸ್ತೇಜರಾದರು. ದುಃಖಿತಪ್ತರಾಗಿ ಎಲ್ಲರೂ ಪಿತಾಮಹ ಬ್ರಹ್ಮದೇವರ ಬಳಿ ಬಂದು ಹೇಳಿದರು.

ಬಹುಭಿಃ ಕಾರಣೈರ್ದೇವ ವಿಶ್ವಾಮಿತ್ರೋ ಮಹಾಮುನಿಃ ।
ಲೋಭಿತಃ ಕ್ರೋಧಿತಶ್ಚೈವ ತಪಸಾ ಚಾಭಿವರ್ಧತೇ ॥
ನ ಹ್ಯಸ್ಯ ವೃಜಿನಂ ಕಿಂಚಿದ್ದೃಶ್ಯತೇ ಸೂಕ್ಷ್ಮಮಪ್ಯಥ ॥ ೯ ॥

ದೇವ! ಮಹಾಮುನಿ ವಿಶ್ವಾಮಿತ್ರನನ್ನು ನಾವು ಬಹುಬಗೆಯಿಂದ ವಂಚಿಸಿದರೂ, ಕೋಪ ಬರಿಸಿದರೂ ಅವನು ಇನ್ನೂ ಹೆಚ್ಚೇ ತಪಸ್ಸು ಮಾಡುತ್ತಿದ್ದಾನೆ! ಅವನಲ್ಲಿ ಯಾವುದೇ ಕಾಮಕ್ರೋಧಾದಿ ದೋಷ ಸೂಕ್ಷ್ಮವಾಗಿ ಪರೀಕ್ಷಿಸಿದರೂ ಸಿಗುತ್ತಿಲ್ಲ.

ನ ದೀಯತೇ ಯದಿ ತ್ವಸ್ಯ ಮನಸಾ ಯದಭೀಪ್ಸಿತಮ್ ।
ವಿನಾಶಯತಿ ತ್ರೈಲೋಕ್ಯಂ ತಪಸಾ ಸಚರಾಚರಮ್ ॥ ೧೦ ॥

ಅವನು ಮನದಲ್ಲಿ ಬಯಸಿದ್ದನ್ನು ಅವನಿಗೆ ಕೊಡದಿದ್ದರೆ ಚರಾಚರ ಸಮೇತ ಮೂಲೋಕವನ್ನೇ ತಪೋಬಲದಿಂದ ನಾಶ ಮಾಡುವನು.

ವ್ಯಾಕುಲಾಶ್ಚ ದಿಶಃ ಸರ್ವಾ ನ ಚ ಕಿಂಚಿತ್ಪ್ರಕಾಶತೇ ।
ಸಾಗರಾಃ ಕ್ಷುಭಿತಾಃ ಸರ್ವೇ ವಿಶೀರ್ಯಂತೇ ಚ ಪರ್ವತಾಃ ॥ ೧೧ ॥

ದಿಕ್ಕುಗಳೆಲ್ಲವೂ ಮಂಕಾಗಿವೆ. ಯಾವುದೂ ಬೆಳಗುವುದಿಲ್ಲ. ಸಾಗರಗಳೆಲ್ಲವೂ ವಿಚಲಿತವಾಗಿವೆ. ಬೆಟ್ಟಗಳೆಲ್ಲವೂ ಶಿಥಿಲಗೊಂಡಿವೆ.

ಪ್ರಕಂಪತೇ ಚ ಪೃಥಿವೀ ವಾಯುರ್ವಾತಿ ಭೃಶಾಕುಲಃ ।
ಬ್ರಹ್ಮನ್ನ ಪ್ರತಿಜಾನೀಮೋ ನಾಸ್ತಿಕೋ ಜಾಯತೇ ಜನಃ ॥ ೧೨ ॥

ಭೂಮಿ ಕಂಪಿಸುತ್ತಿದೆ. ವಾಯು ಅಸ್ತವ್ಯಸ್ತವಾಗಿ ಬೀಸುತ್ತಿದೆ. ಬ್ರಹ್ಮದೇವ! ಇದಕ್ಕೇನು ಮದ್ದೆಂದು ನಮಗೆ ತೋಚುತ್ತಿಲ್ಲ. ಜನರು ನಾಸ್ತಿಕರಾಗುತ್ತಿದ್ದಾರೆ!

ಸಂಮೂಢಮಿವ ತ್ರೈಲೋಕ್ಯಂ ಸಂಪ್ರಕ್ಷುಭಿತಮಾನಸಮ್ ।
ಭಾಸ್ಕರೋ ನಿಷ್ಪ್ರಭಶ್ಚೈವ ಮಹರ್ಷೇಸ್ತಸ್ಯ ತೇಜಸಾ ॥ ೧೩ ॥

ಮೂಲೋಕದಲ್ಲಿಯೂ ಎಲ್ಲರ ಮನಸು ಮಂಕು ಕವಿದು ವ್ಯಾಕುಲಗೊಂಡಿದೆ. ಮಹರ್ಷಿಯ ತೇಜಸ್ಸಿನಿಂದ ಸೂರ್ಯನೂ ನಿಷ್ಪ್ರಭನಾಗಿದ್ದಾನೆ.

ಬುದ್ಧಿಂ ನ ಕುರುತೇ ಯಾವನ್ನಾಶೇ ದೇವ ಮಹಾಮುನಿಃ ।
ತಾವತ್ತ್ವಸಾದ್ಯೋ ಭಗವಾನಗ್ನಿರೂಪೋ ಮಹಾದ್ಯುತಿಃ ॥ ೧೪ ॥

ದೇವ! ಮಹಾಮುನಿ ವಿಶ್ವಾಮಿತ್ರನು ಲೋಕದ ವಿನಾಶಕ್ಕೆ ಮನಸ್ಸು ಮಾಡುವ ಮುನ್ನ ಮಹಾತೇಜನಾಗಿ ಭಗವಾನ್ ಅಗ್ನಿಯಂತಾಗಿರುವ ಆತನನ್ನು, ಅವನ ಅಭೀಷ್ಟವನ್ನು ಪೂರೈಸಿ, ಒಲಿಸಿಕೊಳ್ಳಬೇಕಾಗಿದೆ.

ಕಾಲಾಗ್ನಿನಾ ಯಥಾ ಪೂರ್ವಂ ತ್ರೈಲೋಕ್ಯಂ ದಹ್ಯತೇಽಖಿಲಮ್ ।
ದೇವರಾಜ್ಯಂ ಚಿಕೀರ್ಷೇತ ದೀಯತಾಮಸ್ಯ ಯನ್ಮತಮ್ ॥ ೧೫ ॥

ಹಿಂದೆ ಪ್ರಳಯಕಾಲದಲ್ಲಿ ಕಾಲಾಗ್ನಿಯಿಂದ ಮೂಲೋಕ ಸುಟ್ಟಂತೆ ಈತ-ನಿಂದಲೂ ಈಗ ಸುಟ್ಟುಹೋಗದಂತೆ ದೇವರಾಜ್ಯವನ್ನೂ ಈತ ಆಳಲು ಹೊರಡ-ದಂತೆ ಈತನು ಏನು ಬಯಸುವನೋ ಅದನ್ನು, ಬ್ರಹ್ಮರ್ಷಿತ್ವವನ್ನು ಕೊಟ್ಟುಬಿಡು,' ಎಂದರು.

ತತಃ ಸುರಗಣಾಃ ಸರ್ವೇ ಪಿತಾಮಹಪುರೋಗಮಾಃ ।
ವಿಶ್ವಾಮಿತ್ರಂ ಮಹಾತ್ಮಾನಂ ವಾಕ್ಯಂ ಮಧುರಮಬ್ರುವನ್ ॥
ಬ್ರಹ್ಮರ್ಷೇ ಸ್ವಾಗತಂ ತೇಽಸ್ತು ತಪಸಾ ಸ್ಮ ಸುತೋಷಿತಾಃ ॥ ೧೬ ॥

ಬಳಿಕ ಬ್ರಹ್ಮದೇವನನ್ನು ಮುಂದೆ ಮಾಡಿಕೊಂಡು ಎಲ್ಲ ದೇವತೆಗಳೂ ಮಹಾತ್ಮ ವಿಶ್ವಾಮಿತ್ರನಿಗೆ ನಯವಾಗಿ ನುಡಿದರು. ಬ್ರಹ್ಮರ್ಷಿಯೆ! ನಿನಗೆ ಸ್ವಾಗತ. ನಿನ್ನ ತಪಸ್ಸಿನಿಂದ ನಾವೆಲ್ಲರೂ ಸಂತುಷ್ಟರಾದೆವು.

ಬ್ರಾಹ್ಮಣ್ಯಂ ತಪಸೋಗ್ರೇಣ ಪ್ರಾಪ್ತವಾನಸಿ ಕೌಶಿಕ ।
ದೀರ್ಘಮಾಯುಶ್ಚ ತೇ ಬ್ರಹ್ಮನ್ದದಾಮಿ ಸಮರುದ್ಗಣಃ ॥
ಸ್ವಸ್ತಿ ಪ್ರಾಪ್ನುಹಿ ಭದ್ರಂ ತೇ ಗಚ್ಛ ಸೌಮ್ಯ ಯಥಾಸುಖಮ್ ॥ ೧೭ ॥

ವಿಶ್ವಾಮಿತ್ರ! ಉಗ್ರವಾದ ತಪಸ್ಸಿನಿಂದ ನೀನು ಬ್ರಾಹ್ಮಣ್ಯವನ್ನು ಪಡೆದಿರುವೆ. ಮುನಿಯೆ! ನಿನಗೆ ದೀರ್ಘಾಯುಷ್ಯವನ್ನು ನೀಡುವೆವು. ನಿನಗೆ ಮಂಗಳವಾಗಲಿ, ಸುಖಪಡು, ಸೋಮಪಾನಾರ್ಹನೆ, ಸುಖವಾಗಿ ತಪಸ್ಸನ್ನು ನಿಲ್ಲಿಸಿ ಹೊರಟು ಹೋಗು.'

ಪಿತಾಮಹವಚಃ ಶ್ರುತ್ವಾ ಸರ್ವೇಷಾಂ ಚ ದಿವೌಕಸಾಮ್ ।
ಕೃತ್ವಾ ಪ್ರಣಾಮಂ ಮುದಿತೋ ವ್ಯಾಜಹಾರ ಮಹಾಮುನಿಃ ॥ ೧೮ ॥

ಹೀಗೆ ಬ್ರಹ್ಮದೇವರ ಮತ್ತು ಎಲ್ಲ ದೇವತೆಗಳ ಮಾತನ್ನು ಕೇಳಿ ಮಹಾಮುನಿ ವಿಶ್ವಾಮಿತ್ರನು ಪ್ರಣಾಮ ಮಾಡಿ ಸಂತುಷ್ಟನಾದನು, ಮತ್ತೂ ಹೇಳಿದನು.

ಬ್ರಾಹ್ಮಣ್ಯಂ ಯದಿ ಮೇ ಪ್ರಾಪ್ತಂ ದೀರ್ಘಮಾಯುಸ್ತಥೈವ ಚ ।
ಓಂಕಾರಶ್ಚ ವಷಟ್‌ಕಾರೋ ವೇದಾಶ್ಚ ವರಯಂತು ಮಾಮ್ ॥ ೧೯ ॥

ನನಗೆ ಬ್ರಾಹ್ಮಣ್ಯವೂ ದೀರ್ಘಾಯುಷ್ಯವೂ ಪ್ರಾಪ್ತವಾಗಿರುವುದಾದರೆ ಓಂಕಾರ ವಷಟ್‌ಕಾರಾದಿ ವೇದಗಳು ನನಗೆ ಒಲಿದುಬಂದು ನನ್ನಲ್ಲಿ ನೆಲೆಸಲಿ.

ಕ್ಷತ್ರವೇದವಿದಾಂ ಶ್ರೇಷ್ಠೋ ಬ್ರಹ್ಮವೇದವಿದಾಮಪಿ ।
ಬ್ರಹ್ಮಪುತ್ರೋ ವಸಿಷ್ಠೋ ಮಾಮೇವಂ ವದತು ದೇವತಾಃ ॥
ಯದ್ಯಯಂ ಪರಮಃ ಕಾಮಃ ಕೃತೋ ಯಾಂತು ಸುರರ್ಷಭಾಃ ॥೨೦॥

ಧನುರ್ವೇದಜ್ಞರಲ್ಲಿಯೂ ಚತುರ್ವೇದಜ್ಞರಲ್ಲಿಯೂ ಶ್ರೇಷ್ಠನಾದ ವಸಿಷ್ಠನು, ಹೇ ದೇವತೆಗಳೇ! ನನ್ನನ್ನು 'ಬ್ರಹ್ಮರ್ಷಿ' ಎಂದು ಒಪ್ಪಿ ಹಾಗೆ ಹೇಳಲಿ. ದೇವೋತ್ತಮರೆ! ನನಗೆ ನನ್ನ ಈ ಮುಖ್ಯ ಅಪೇಕ್ಷೆ ಪೂರೈಸಿದರೆ, ನೀವು ಹೊರಟುಹೋಗಬಹುದು.

ತತಃ ಪ್ರಸಾದಿತೋ ದೇವೈರ್ವಸಿಷ್ಠೋ ಜಪತಾಂ ವರಃ ।
ಸಖ್ಯಂ ಚಕಾರ ಬ್ರಹ್ಮರ್ಷಿರೇವಮಸ್ತ್ವಿತಿ ಚಾಬ್ರವೀತ್ ॥ ೨೧ ॥

ಜಪಿಸುವವರಲ್ಲಿ ಶ್ರೇಷ್ಠರಾದ ವಸಿಷ್ಠರನ್ನು ದೇವತೆಗಳು ಒಪ್ಪಿಸಿದಾಗ ಬ್ರಹ್ಮರ್ಷಿ ವಸಿಷ್ಠರು 'ಹಾಗೇ ಆಗಲಿ' ಎಂದರು.

ಬ್ರಹ್ಮರ್ಷಿಸ್ತ್ವಂ ನ ಸಂದೇಹಃ ಸರ್ವಂ ಸಂಪತ್ಸ್ಯತೇ ತವ ।
ಇತ್ಯುಕ್ತ್ವಾ ದೇವತಾಶ್ಚಾಪಿ ಸರ್ವಾ ಜಗ್ಮುರ್ಯಥಾಗತಮ್ ॥ ೨೨ ॥

ನೀನು 'ಬ್ರಹ್ಮರ್ಷಿ'ಯಾಗಿರುವೆ ಇದರಲ್ಲಿ ಸಂಶಯವಿಲ್ಲ. ಬ್ರಾಹ್ಮಣರ ಪೌರೋಹಿತ್ಯಾದಿ ಅಧಿಕಾರವೂ ಎಲ್ಲವೂ ನಿನಗೆ ಬರುತ್ತದೆ, ಎಂದರು. ದೇವತೆಗಳೂ ಹೀಗೇ ಹೇಳಿ ಎಲ್ಲರೂ ಬಂದಂತೇ ಹಿಂದೆ ಹೋದರು.

ವಿಶ್ವಾಮಿತ್ರೋಽಪಿ ಧರ್ಮಾತ್ಮಾ ಲಬ್ಧ್ವಾ ಬ್ರಾಹ್ಮಣ್ಯಮುತ್ತಮಮ್ ।
ಪೂಜಯಾಮಾಸ ಬ್ರಹ್ಮರ್ಷಿಂ ವಸಿಷ್ಠಂ ಜಪತಾಂ ವರಮ್ ॥
ಕೃತಕಾಮೋ ಮಹೀಂ ಸರ್ವಾಂ ಚಚಾರ ತಪಸಿ ಸ್ಥಿತಃ ॥ ೨೩ ॥

ಅಂದಿನಿಂದ ಧರ್ಮಾತ್ಮರಾದ ವಿಶ್ವಾಮಿತ್ರರು ಉತ್ತಮವಾದ ಬ್ರಾಹ್ಮಣ್ಯವನ್ನು ಪಡೆದು, ಜಪಿಸುವವರಲ್ಲಿ ಉತ್ತಮರಾದ ಬ್ರಹ್ಮರ್ಷಿ ವಸಿಷ್ಠರನ್ನು ಆದರದಿಂದ ಕಾಣಲು ತೊಡಗಿದರು.

ದ್ವೇಷ ಅಸೂಯೆಗಳನ್ನು ಮರೆತು ಅಂದಿನಿಂದ ವಸಿಷ್ಠರನ್ನು ವಿಶ್ವಾಮಿತ್ರರು

ಪ್ರೀತ್ಯಾದರಗಳಿಂದ ಕಾಣಲು ತೊಡಗಿದರು. ಅಂದಿನವರೆಗೆ ಬಹಳ ದ್ವೇಷ ಮಾಡುತ್ತಿದ್ದವರು ವಿಶ್ವಾಮಿತ್ರರು. ವಸಿಷ್ಠರ ಆಶ್ರಮವನ್ನು ಸುಟ್ಟರು. ಸಾವಿರಾರು ಶಿಷ್ಯರನ್ನು ನಾಶ ಮಾಡಿದರು. ನೂರು ಗಂಡುಮಕ್ಕಳನ್ನು ಒಬ್ಬ ರಾಕ್ಷಸನಿಗೆ ಆಹಾರವಾಗಿ ಇತ್ತರು. ವಸಿಷ್ಠರನ್ನೇ ಕೊಲ್ಲಲೂ ಯತ್ನಿಸಿದರು. ಅದರಿಂದ ವಸಿಷ್ಠರು ಹತಾಶರಾಗಿ ಆತ್ಮಹತ್ಯೆಗೆ ಯತ್ನಿಸಿದರು. ಬೆಟ್ಟದ ಮೇಲಿಂದ ಜಿಗಿಯುವುದು ಸಮುದ್ರಕ್ಕೆ ಧುಮುಕುವುದು ಬೆಂಕಿಗೆ ಹಾರುವುದು ಎಲ್ಲ ಮಾಡಿದರು. ಯಾವುದೂ ಫಲಕಾರಿಯಾಗಲಿಲ್ಲ. ತಿರುಗಿ ಶೂನ್ಯವಾದ ಆಶ್ರಮದ ಕಡೆಗೆ ಹೆಜ್ಜೆ ಹಾಕಿದರು ದುಃಖದಿಂದ ಕಣ್ಣು ಮಂಜಾಗಿತ್ತು . ಹಿಂದಿನಿಂದ ಸೊಸೆ ಅದೃಶ್ಯಂತಿ ತುಂಬು ಗರ್ಭಿಣಿ ನಡೆದುಬಂದುದು ತಿಳಿಯಲಿಲ್ಲ. ಆದರೆ ಗರ್ಭದೊಳಗಿಂದ ಕ್ಷೀಣವಾಗಿ ವೇದಘೋಷ ಕೇಳಿಸಿತು. ಅದು ತನ್ನ ವಂಶದ ಕುಡಿಯಾದ ಪರಾಶರರೆಂದು ತಿಳಿದಾಗ ಮನಸಿಗೆ ತಂಪಾಯಿತು. ಇದೆಲ್ಲವೂ ವಸಿಷ್ಠರ ಪ್ರಾರಬ್ಧಕರ್ಮ!

ಹೀಗೆ ವಿಶ್ವಾಮಿತ್ರರು ಮಾಡಿದ ವಸಿಷ್ಠ ದ್ವೇಷಸಾಧನೆ ಅವರು ಕಂಡುಕೊಂಡ ವೇದಮಂತ್ರಗಳಲ್ಲಿಯೇ ಕಂಡುಬರುತ್ತದೆ! ಋಗ್ವೇದ (೩.೩.೨೩) 'ಪರಶುಂ ಚಿದ್ವಿತಪತಿ' ಕೊಡಲಿ ಏಟಿಗೆ ಮರವು ಕಡಿದುರುಳುವಂತೆ ಶತ್ರುವು ಸಾಯಲಿ' ಎಂದು ಮುಂತಾಗಿ ಮಂತ್ರಗಳು 'ಅಭಿಶಾಪ' 'ವಸಿಷ್ಠ ವಿದ್ವೇಷಿ' ಮಂತ್ರಗಳೆಂದು ಅನುಕ್ರಮಣಿಕೆಯಲ್ಲಿ ಉಕ್ತವಾಗಿವೆ. ವಾಸಿಷ್ಠ ಗೋತ್ರದವರು ಈ ಮಂತ್ರಗಳನ್ನು ಪಠಿಸುವುದಿಲ್ಲವಂತೆ.

ಬ್ರಹ್ಮರ್ಷಿಯಾದಾಗ ಸಹಜವಾಗಿ ಈ ದ್ವೇಷಾಸೂಯೆಗಳನ್ನು ತ್ಯಜಿಸಿ ವಸಿಷ್ಠರನ್ನು ಆದರಿಸಲು ತೊಡಗಿದರು. ಪ್ರೀತಿಯಿಂದ ಕಂಡರು, ವಿಶ್ವಾಮಿತ್ರರು. 'ವಸಿಷ್ಠರು ಮಹಾತ್ಮರು ಎಲ್ಲವನ್ನು ಕ್ಷಮಿಸಿ ತನ್ನಲ್ಲಿ ಪ್ರೀತಿ ಮಾಡಲೆಂದೂ' ದೇವತೆಗಳನ್ನು ಬೇಡಿದರು. ದೇವತೆಗಳು ವಸಿಷ್ಠರನ್ನು ಇದಕ್ಕೆ ಒಪ್ಪಿಸಿದರು. 'ನೀನು ಬ್ರಹ್ಮರ್ಷಿಯಾಗಿರುವೆ' ಎಂದು ಹೃತ್ಪೂರ್ವಕವಾಗಿ ವಸಿಷ್ಠರು ಹರಸಿದರು. ಅವರ ಅಪಾರ ಕ್ಷಮಾಗುಣಕ್ಕೆ ವಿಶ್ವಾಮಿತ್ರರ ಕ್ರೋಧ ತಲೆ ಬಾಗಿತು. ಹೀಗೆ ವಸಿಷ್ಠರ ಪ್ರೀತಿಯನ್ನು ಬಯಸಿಯೇ 'ವಸಿಷ್ಠೋ ಮಾಮೇವಂ ವದತು' ಎಂದು ವಿಶ್ವಾಮಿತ್ರರು ಹೇಳಿದರು ಹೊರತು ವಸಿಷ್ಠರನ್ನು ಅವಮಾನಿಸುವ ಉದ್ದೇಶದಿಂದಲ್ಲ. 'ಪೂಜಯಾಮಾಸ ಬ್ರಹ್ಮರ್ಷಿಂ ವಸಿಷ್ಠಂ' ಎನ್ನುತ್ತಾನೆ ವಾಲ್ಮೀಕಿ.

ಏವಂ ತ್ವನೇನ ಬ್ರಾಹ್ಮಣ್ಯಂ ಪ್ರಾಪ್ತಂ ರಾಮ ಮಹಾತ್ಮನಾ ।
ಏಷ ರಾಮ ಮುನಿಶ್ರೇಷ್ಠ ಏಷ ವಿಗ್ರಹವಾಂಸ್ತಪಃ ॥ ೨೪ ॥

ಶತಾನಂದರು ಹೇಳಿದರು, 'ರಾಮ! ಹೀಗೆ ಮಹಾತ್ಮ ವಿಶ್ವಾಮಿತ್ರರು ಬ್ರಾಹ್ಮಣ್ಯವನ್ನು ಪಡೆದುಕೊಂಡರು. ರಾಮ! ಇವರು ಮುನಿಶ್ರೇಷ್ಠರು, ಇವರು ತಪಸ್ಸೇ ಮೂರ್ತಿಮತ್ತಾಗಿರುವವರು.

ಏಷ ಧರ್ಮಪರೋ ನಿತ್ಯಂ ವೀರ್ಯಸ್ಯೈಷ ಪರಾಯಣಮ್ ।
ಏವಮುಕ್ತ್ವಾ ಮಹಾತೇಜಾ ವಿರರಾಮ ದ್ವಿಜೋತ್ತಮಃ ॥ ೨೫ ॥

ವಿಶ್ವಾಮಿತ್ರರು ಸದಾ ಧರ್ಮಪರರು. ವೀರ್ಯಕ್ಕೂ ಮುಖ್ಯ ಆಕರವೆನಿಸಿದವರು.' ಹೀಗೆ ಹೇಳಿ ಮಹಾತೇಜರಾದ ದ್ವಿಜೋತ್ತಮ ಶತಾನಂದರು ಸುಮ್ಮನಾದರು.

ಶತಾನಂದವಚಃ ಶ್ರುತ್ವಾ ರಾಮಲಕ್ಷ್ಮಣಸನ್ನಿಧೌ ।
ಜನಕಃ ಪ್ರಾಂಜಲಿರ್ವಾಕ್ಯಮುವಾಚ ಕುಶಿಕಾತ್ಮಜಮ್ ॥ ೨೬ ॥

ರಾಮಲಕ್ಷ್ಮಣರ ಮುಂದೆ ಶತಾನಂದರು ಹೇಳಿದ ಮಾತನ್ನು ಕೇಳಿ ಜನಕಮಹಾರಾಜನು ಕೈಮುಗಿದು ವಿಶ್ವಾಮಿತ್ರರಿಗೆ ಹೇಳಿದರು.

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯಸ್ಯ ಮೇ ಮುನಿಪುಂಗವ ।
ಯಜ್ಞಂ ಕಾಕುತ್ಸ್ಥಸಹಿತಃ ಪ್ರಾಪ್ತವಾನಸಿ ಧಾರ್ಮಿಕ ॥ ೨೭ ॥

ಮುನಿಪುಂಗವರೆ, ಧಾರ್ಮಿಕರೆ, ರಾಮಲಕ್ಷ್ಮಣ ಸಮೇತರಾಗಿ ನನ್ನ ಯಜ್ಞಕ್ಕೆ ನೀವು ಬಂದಿದ್ದರಿಂದ ನಾನು ಧನ್ಯನಾದೆ, ಅನುಗೃಹೀತನಾದೆ.

ಪಾವಿತೋಽಹಂ ತ್ವಯಾ ಬ್ರಹ್ಮನ್ದರ್ಶನೇನ ಮಹಾಮುನೇ ।
ವಿಶ್ವಾಮಿತ್ರ ಮಹಾಭಾಗ ಬ್ರಹ್ಮರ್ಷೀಣಾಂ ವರೋತ್ತಮ ॥
ಗುಣಾ ಬಹುವಿಧಾಃ ಪ್ರಾಪ್ತಾಸ್ತವ ಸಂದರ್ಶನಾನ್ಮಯಾ ॥ ೨೮ ॥

ಮಹಾಮುನಿಯೆ! ನೀನು ದರ್ಶನ ಕೊಟ್ಟು ನನ್ನನ್ನು ಪವಿತ್ರ ಗೊಳಿಸಿರುವೆ. ಬ್ರಹ್ಮರ್ಷಿಗಳಲ್ಲಿ ಅತ್ಯುತ್ತಮ ಮಹಾಭಾಗ್ಯಶಾಲಿ ವಿಶ್ವಾಮಿತ್ರನೆ! ನಿನ್ನ ಸಂದರ್ಶನದಿಂದ ನನಗೆ ಬಹುವಿಧವಾದ ಗುಣಗಳು ಪ್ರಾಪ್ತವಾದುವು.

ವಿಸ್ತರೇಣ ಚ ತೇ ಬ್ರಹ್ಮನ್ಕೀರ್ತ್ಯಮಾನಂ ಮಹತ್ತಪಃ ।
ಶ್ರುತಂ ಮಯಾ ಮಹಾತೇಜೋ ರಾಮೇಣ ಚ ಮಹಾತ್ಮನಾ ॥
ಸದಸ್ಯೈಃ ಪ್ರಾಪ್ಯ ಚ ಸದಃ ಶ್ರುತಾಸ್ತೇ ಬಹವೋ ಗುಣಾಃ ॥ ೨೯ ॥

ಮುನಿಯೆ! ಮಹಾತೇಜನೆ! ನಿನ್ನ ಮಹತ್ತಾದ ತಪಸ್ಸನ್ನು ಶತಾನಂದರು ವಿಸ್ತಾರವಾಗಿ ಹೇಳಿದ್ದನ್ನು ನಾನೂ ಮಹಾತ್ಮ ರಾಮನೂ ಯಜ್ಞಶಾಲೆಯಲ್ಲಿ ಕುಳಿತ ಸದಸ್ಯರೂ ಕೂಡ ಕೇಳಿದೆವು. ನಿನ್ನ ಬಹುಗುಣಗಳನ್ನು ಕೇಳಿ ತಿಳಿದೆವು.

ಅಪ್ರಮೇಯಂ ತಪಸ್ತುಭ್ಯಮಪ್ರಮೇಯಂ ಚ ತೇ ಬಲಮ್ ।
ಅಪ್ರಮೇಯಾ ಗುಣಾಶ್ಚೈವ ನಿತ್ಯಂ ತೇ ಕುಶಿಕಾತ್ಮಜ ॥
ಪಿತಾಮಹಸ್ಯ ಚ ಯಥಾ ಯಥಾ ಚೈವ ಹ್ಯುಮಾಪತೇಃ ॥ ೩೦ ॥

ನಿನ್ನ ತಪಸ್ಸು ಅಪರಿಮಿತ, ನಿನ್ನ ಬಲ ಅಪರಿಮಿತ. ವಿಶ್ವಾಮಿತ್ರ! ನಿನ್ನ ಗುಣಗಳು ಸದಾ ಅಪರಿಮಿತ. ಪಿತಾಮಹ ಬ್ರಹ್ಮನ ಗುಣಗಳಂತೆ, ಉಮಾಪತಿ ಶಂಕರನ ಗುಣಗಳಂತೆ.

ತೃಪ್ತಿರಾಶ್ಚರ್ಯಭೂತಾನಾಂ ಕಥಾನಾಂ ನಾಸ್ತಿ ಮೇ ವಿಭೋ ।
ಕರ್ಮಕಾಲೋ ಮುನಿಶ್ರೇಷ್ಠ ಲಂಬತೇ ರವಿಮಂಡಲಮ್ ॥ ೩೧ ॥

ಪ್ರಭು! ನಿನ್ನ ಆಶ್ಚರ್ಯಕರವಾದ ಕಥೆಗಳನ್ನು ಎಷ್ಟು ಕೇಳಿದರೂ ತೃಪ್ತಿ ಇಲ್ಲ. ಮುನಿಶ್ರೇಷ್ಠನೆ! ಇದೀಗ ಯಜ್ಞಕರ್ಮ ಮಾಡುವ ಕಾಲ. ಸೂರ್ಯಮಂಡಲ ಅಸ್ತವಾಗುತ್ತಿದೆ.

ಶ್ವಃ ಪ್ರಭಾತೇ ಮಹಾತೇಜೋ ದ್ರಷ್ಟುಮರ್ಹಸಿ ಮಾಂ ಪುನಃ ।
ರಾಮೇಣ ರಮಣೀಯೇನ ಲಕ್ಷ್ಮಣೇನ ಚ ಸಂಗತಃ ॥
ಸ್ವಾಗತಂ ಜಪತಾಂ ಶ್ರೇಷ್ಠ ಮಾಮನುಜ್ಞಾತುಮರ್ಹಸಿ ॥ ೩೨ ॥

ನಾಳೆ ಬೆಳಿಗ್ಗೆ, ರಮಣೀಯನಾದ ರಾಮನಿಂದಲೂ ಲಕ್ಷ್ಮಣನಿಂದಲೂ ಒಡಗೂಡಿ ನೀನು ನನ್ನನ್ನು ಪುನಃ ಕಾಣುವೆ. ಜಪಿಸುವವರಲ್ಲಿ ಶ್ರೇಷ್ಠನಾದ ಮಹಾತೇಜ ವಿಶ್ವಾಮಿತ್ರನೆ! ನಿನಗೆ ಸ್ವಾಗತ. ಈಗ ನನಗೆ ಯಜ್ಞಶಾಲೆಗೆ ಹಿಂತಿರುಗಲು ಅನುಜ್ಞೆ ನೀಡು.

ಏವಮುಕ್ತೋ ಮುನಿವರಃ ಪ್ರಶಸ್ಯ ಪುರುಷರ್ಷಭಮ್ ।
ವಿಸಸರ್ಜಾಶು ಜನಕಂ ಪ್ರೀತಂ ಪ್ರೀತಮನಾಸ್ತದಾ ॥ ೩೩ ॥

ಜನಕ ಹೀಗೆ ಹೇಳಿದಾಗ ಮುನಿವರ ವಿಶ್ವಾಮಿತ್ರನು ಸಂತುಷ್ಟ ಮನಸ್ಕನಾಗಿ ಸಂತುಷ್ಟನಾದ ಜನಕಮಹಾರಾಜನನ್ನು ಪ್ರಶಂಸೆ ಮಾಡಿ ಬೇಗನೆ ಕಳಿಸಿದ.

ಏವಮುಕ್ತ್ವಾ ಮುನಿಶ್ರೇಷ್ಠಂ ವೈದೇಹೋ ಮಿಥಿಲಾಧಿಪಃ ।
ಪ್ರದಕ್ಷಿಣಂ ಚಕಾರಾಶು ಸೋಪಾಧ್ಯಾಯಃ ಸಬಾಂಧವಃ ॥ ೩೪ ॥

ಹೀಗೆ ಹೇಳಿ ವಿದೇಹರಾಜ ಮಿಥಿಲೆಯ ಅಧಿಪತಿ ಜನಕನು ಉಪಾಧ್ಯಾಯರಿಂದ ಬಾಂಧವರಿಂದ ಸಹಿತನಾಗಿ ಮುನಿಶ್ರೇಷ್ಠನಿಗೆ ಪ್ರದಕ್ಷಿಣೆ ಮಾಡಿದ.

ವಿಶ್ವಾಮಿತ್ರೋಽಪಿ ಧರ್ಮಾತ್ಮಾ ಸರಾಮಃ ಸಹಲಕ್ಷ್ಮಣಃ ।
ಸ್ವವಾಟಮಭಿಚಕ್ರಾಮ ಪೂಜ್ಯಮಾನೋ ಮಹರ್ಷಿಭಿಃ ॥ ೩೫ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಪಂಚಷಷ್ಟಿತಮಃ ಸರ್ಗಃ ॥ ೬೫ ॥

ಧರ್ಮಾತ್ಮ ವಿಶ್ವಾಮಿತ್ರನೂ ರಾಮಲಕ್ಷ್ಮಣರಿಂದೊಡಗೂಡಿ ಮಹರ್ಷಿಗಳಿಂದ ಆದೃತನಾಗುತ್ತ ತನ್ನ ವಾಸಸ್ಥಾನವನ್ನು ಸೇರಿದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಅರವತ್ತೈದನೆ ಸರ್ಗ ಮುಗಿಯಿತು.

ಷಟ್‌ಷಷ್ಟಿತಮಃ ಸರ್ಗಃ

ತತಃ ಪ್ರಭಾತೇ ವಿಮಲೇ ಕೃತಕರ್ಮಾ ನರಾಧಿಪಃ ।
ವಿಶ್ವಾಮಿತ್ರಂ ಮಹಾತ್ಮಾನಮಾಜುಹಾವ ಸರಾಘವಮ್ ॥ ೧ ॥

ಬಳಿಕ ನಿರ್ಮಲವಾದ ಪ್ರಾತಃಕಾಲದಲ್ಲಿ ಜನಕ ಮಹಾರಾಜ ಆಹ್ನಿಕಗಳನ್ನು ಮುಗಿಸಿ ಮಹಾತ್ಮ ವಿಶ್ವಾಮಿತ್ರನನ್ನು ರಾಮಲಕ್ಷ್ಮಣರೊಂದಿಗೆ ಆಹ್ವಾನಿಸಿದ.

ತಮರ್ಚಯಿತ್ವಾ ಧರ್ಮಾತ್ಮಾ ಶಾಸ್ತ್ರದೃಷ್ಟೇನ ಕರ್ಮಣಾ ।
ರಾಘವೌ ಚ ಮಹಾತ್ಮಾನೌ ತದಾ ವಾಕ್ಯಮುವಾಚ ಹ ॥ ೨ ॥

ಧರ್ಮಾತ್ಮಜನಕನು ಶಾಸ್ತ್ರೋಕ್ತವಿಧಾನದಿಂದ ವಿಶ್ವಾಮಿತ್ರನನ್ನೂ ಮಹಾತ್ಮರಾದ ರಾಮಲಕ್ಷ್ಮಣರನ್ನೂ ಸತ್ಕರಿಸಿ ನುಡಿದ.

ಭಗವನ್ಸ್ವಾಗತಂ ತೇಽಸ್ತು ಕಿಂ ಕರೋಮಿ ತವಾನಘ ।
ಭವಾನಾಜ್ಞಾಪಯತು ಮಾಮಾಜ್ಞಾಪ್ಯೋ ಭವತಾ ಹ್ಯಹಮ್ ॥ ೩ ॥

ಪೂಜ್ಯನೆ, ನಿನಗೆ ಸ್ವಾಗತ! ದೋಷರಹಿತನೆ, ನಾನು ನಿನಗೆ ಏನು ಸೇವೆ ಮಾಡಲಿ? ಪೂಜ್ಯನು ಆಜ್ಞಾಪಿಸಬೇಕು. ಪೂಜ್ಯನಾದ ನಿನ್ನಿಂದ ಆಜ್ಞಾಪನಕ್ಕೆ ಅರ್ಹನಿರುವೆನು.

ಏವಮುಕ್ತಸ್ತು ಧರ್ಮಾತ್ಮಾ ಜನಕೇನ ಮಹಾತ್ಮನಾ ।
ಪ್ರತ್ಯುವಾಚ ಮುನಿರ್ವೀರಂ ವಾಕ್ಯಂ ವಾಕ್ಯವಿಶಾರದಃ ॥ ೪ ॥

ಮಹಾತ್ಮ ಜನಕ ಹೀಗೆ ಹೇಳಿದಾಗ ಧರ್ಮಾತ್ಮ, ಮಾತಿನಲ್ಲಿ ವಿಶಾರದನಾದ ಮುನಿ ವಿಶ್ವಾಮಿತ್ರನು ವೀರಜನಕನಿಗೆ ಪ್ರತಿಯಾಗಿ ನುಡಿದ.

ಪುತ್ರೌ ದಶರಥಸ್ಯೇಮೌ ಕ್ಷತ್ರಿಯೌ ಲೋಕವಿಶ್ರುತೌ ।
ದ್ರಷ್ಟುಕಾಮೌ ಧನುಃ ಶ್ರೇಷ್ಠಂ ಯದೇತತ್ ತ್ವಯಿ ತಿಷ್ಠತಿ ॥ ೫ ॥

ಏತದ್ದರ್ಶಯ ಭದ್ರಂ ತೇ ಕೃತಕಾಮೌ ನೃಪಾತ್ಮಜೌ ।
ದರ್ಶನಾದಸ್ಯ ಧನುಷೋ ಯಥೇಷ್ಟಂ ಪ್ರತಿಯಾಸ್ಯತಃ ॥ ೬ ॥

ದಶರಥ ಪುತ್ರರು ಲೋಕಪ್ರಸಿದ್ಧರು. ಕ್ಷತ್ರಿಯರು ಇವರು ಶ್ರೇಷ್ಠವಾದ ಧನುಸ್ಸನ್ನು ನೋಡಲು ಬಯಸಿದ್ದಾರೆ. ಈ ಧನುಸ್ಸನ್ನು, ನೀನು ನಿಂತಿರುವಾಗ

ನೋಡಲು ಬಯಸಿದ್ದಾರೆ. ನೀನೇ ಇವರಿಗೆ ತೋರಿಸು. ನಿನಗೆ ಶುಭವಾಗಲಿ. ರಾಜಕುಮಾರರು ಈ ಧನುಸ್ಸನ್ನು ಯಥೇಷ್ಟ ನೋಡಿದ ಬಳಿಕ ಹಿಂತಿರುಗುವರು.

ಏವಮುಕ್ತಸ್ತು ಜನಕಃ ಪ್ರತ್ಯುವಾಚ ಮಹಾಮುನಿಮ್ ।
ಶ್ರೂಯತಾಮಸ್ಯ ಧನುಷೋ ಯದರ್ಥಮಿಹ ತಿಷ್ಠತಿ ॥ ೭ ॥

ವಿಶ್ವಾಮಿತ್ರನು ಹೀಗೆ ಹೇಳಿದಾಗ, ಜನಕನು ಮಹಾಮುನಿಗೆ ಪ್ರತಿಯಾಗಿ ನುಡಿದನು. ಈ ಧನುಸ್ಸು ಇಲ್ಲಿ ಏಕೆ ಇದೆ ಎನ್ನುವುದನ್ನು ಹೇಳುತ್ತೇನೆ ಕೇಳು.

ದೇವರಾತ ಇತಿ ಖ್ಯಾತೋ ನಿಮೇಃ ಷಷ್ಠೋ ಮಹೀಪತಿಃ ।
ನ್ಯಾಸೋಽಯಂ ತಸ್ಯ ಭಗವನ್ಹಸ್ತೇ ದತ್ತೋ ಮಹಾತ್ಮನಃ ॥ ೮ ॥

ದೇವರಾತನೆಂದು ಪ್ರಸಿದ್ಧನಾದ ರಾಜನು ನಿಮಿರಾಜನಿಂದ ಆರನೆಯವನು ಪೂಜ್ಯನೆ! ಮಹಾತ್ಮನಾದ ಆತನ ಕೈಯಲ್ಲಿ ಈ ಧನುಸ್ಸು ನ್ಯಾಸವಾಗಿ ಇಡಲ್ಪಟ್ಟಿತ್ತು .

ದಕ್ಷಯಜ್ಞವಧೇ ಪೂರ್ವಂ ಧನುರಾಯಮ್ಯ ವೀರ್ಯವಾನ್ ।
ರುದ್ರಸ್ತು ತ್ರಿದಶಾನ್ ರೋಷಾತ್ಸಲೀಲಮಿದಮಬ್ರವೀತ್ ॥ ೯ ॥

ಹಿಂದೆ ದಕ್ಷಯಜ್ಞ ಭಂಗಕಾಲದಲ್ಲಿ ವೀರ್ಯಶಾಲಿಯಾದ ರುದ್ರನು ರೋಷದಿಂದ ಈ ಧನುಸ್ಸನ್ನು ಲೀಲೆಯಿಂದ ಹೆದೆ ಏರಿಸಿ ದೇವತೆಗಳಿಗೆ ಹೀಗೆ ನುಡಿದನು.

ಯಸ್ಮಾದ್ಭಾಗಾರ್ಥಿನೋ ಭಾಗಾನ್ನಾಕಲ್ಪಯತ ಮೇ ಸುರಾಃ ।
ವರಾಂಗಾನಿ ಮಹಾರ್ಹಾಣಿ ಧನುಷಾ ಶಾತಯಾಮಿ ವಃ ॥ ೧೦ ॥

ಯಜ್ಞಭಾಗಗಳನ್ನು ಬಯಸಿದ್ದ ನನಗೆ, ದೇವತೆಗಳೆ, ನೀವು ಭಾಗಗಳನ್ನು ಕೊಡಲಿಲ್ಲ. ನಿಮ್ಮ ಅಮೂಲ್ಯವಾದ ಶರೀರಾವಯವಗಳನ್ನು ಧನುಸ್ಸಿನಿಂದ ಕತ್ತರಿಸುವೆನು' ಎಂದನು.

ತತೋ ವಿಮನಸಃ ಸರ್ವೇ ದೇವಾ ವೈ ಮುನಿಪುಂಗವ ।
ಪ್ರಸಾದಯಂತಿ ದೇವೇಶಂ ತೇಷಾಂ ಪ್ರೀತೋಽಭವದ್ಭವಃ ॥ ೧೧ ॥

ಮುನಿಶ್ರೇಷ್ಠನೆ! ಆಗ ಎಲ್ಲ ದೇವತೆಗಳು ದೇವೇಶ ರುದ್ರನನ್ನು ಪ್ರಸನ್ನಗೊಳಿಸಿದರು. ಆಗ ಅವರಿಗೆ ರುದ್ರನು ಸಂತುಷ್ಟನಾದನು.

ಪ್ರೀತಿಯುಕ್ತಃ ಸ ಸರ್ವೇಷಾಂ ದದೌ ತೇಷಾಂ ಮಹಾತ್ಮನಾಮ್ ।

ತದೇತದ್ದೇವದೇವಸ್ಯ ಧನೂರತ್ನಂ ಮಹಾತ್ಮನಃ ॥
ನ್ಯಾಸಭೂತಂ ತದಾ ನ್ಯಸ್ತಮಸ್ಮಾಕಂ ಪೂರ್ವಕೇ ವಿಭೌ ॥ ೧೨ ॥

ಸಂತುಷ್ಟನಾದ ರುದ್ರನು ಮಹಾತ್ಮರಾದ ಆ ಎಲ್ಲ ದೇವತೆಗಳಿಗೆ ಧನುಸ್ಸನ್ನು ನೀಡಿದನು. ದೇವತೆಗಳಿಂದ ಮಹಾತ್ಮನಾದ ದೇವದೇವನ ಈ ಶ್ರೇಷ್ಠವಾದ ಧನುಸ್ಸು ನಮ್ಮ ಪೂರ್ವಜನಾದ ಪ್ರಭು ದೇವರಾತನಲ್ಲಿ ನ್ಯಾಸವಾಗಿರಿಸಲ್ಪಟ್ಟಿತು.

ಅಥ ಮೇ ಕೃಷತಃ ಕ್ಷೇತ್ರಂ ಲಾಂಗಲಾದುತ್ಥಿತಾ ಮಯಾ ।
ಕ್ಷೇತ್ರಂ ಶೋಧಯತಾ ಲಬ್ಧಾ ನಾಮ್ನಾ ಸೀತೇತಿ ವಿಶ್ರುತಾ ॥ ೧೩ ॥

'ಬಳಿಕ ನಾನು ಯಜ್ಞಭೂಮಿಯನ್ನು ನೇಗಿಲಿನಿಂದ ಉಳುವಾಗ ನೇಗಿಲ ಸಾಲಿನಿಂದ ಕನ್ಯೆ ಉದ್ಭವಿಸಿದಳು. ಕ್ಷೇತ್ರಶೋಧನ ಮಾಡುತ್ತಿದ್ದ ನನಗೆ ಕನ್ಯೆ ದೊರಕಿದಳು. ಅವಳು 'ಸೀತಾ'ನಾಮದಿಂದ ಪ್ರಸಿದ್ಧಳಾಗಿರುವಳು.

ಭೂತಲಾದುತ್ಥಿತಾ ಸಾ ತು ವ್ಯವರ್ಧತ ಮಮಾತ್ಮಜಾ ।
ವೀರ್ಯಶುಲ್ಕೇತಿ ಮೇ ಕನ್ಯಾ ಸ್ಥಾಪಿತೇಯಮಯೋನಿಜಾ ॥ ೧೪ ॥

'ಭೂಮಿಯಿಂದ ಉದ್ಭವಿಸಿದ ಅಯೋನಿಜೆಯಾದ ಆ ಕನ್ಯೆ ನನ್ನ ಮಗಳಾಗಿ ಬೆಳೆದಳು. ಅವಳು 'ವೀರ್ಯಶುಲ್ಕಾ' ಅಂದರೆ ಶಿವಧನುಸ್ಸನ್ನೆತ್ತಿ ಹೆದೆಯೇರಿಸುವ ವೀರ್ಯ ಪರಾಕ್ರಮ ತೋರುವುದೇ ಕನ್ಯಾರ್ಥಿಗಳು ನೀಡುವ ಕನ್ಯಾಶುಲ್ಕ' ಎಂದು ನಿಗದಿಪಡಿಸಿ, 'ಶುಲ್ಕ ನೀಡಿದವನಿಗೇ ಕನ್ಯಾದಾನ' ಎಂದು, ನನ್ನ ಈ ಕನ್ಯೆ ನನ್ನಿಂದ 'ಸ್ಥಾಪಿತ'ಳಾಗಿರುವಳು. 'ಶುಲ್ಕ ನೀಡದವನಿಗೆ ಕನ್ಯೆಯನ್ನು ನೀಡಲಾರೆ' ಎನ್ನುತ್ತ ನನ್ನಲ್ಲಿಯೆ ಕನ್ಯೆಯನ್ನು ಇರಿಸಿಕೊಂಡಿರುವೆನು.'

ಶಿವಧನುಸ್ಸು ಜನಕನಿಗೆ ಹೇಗೆ ಬಂದಿತ್ತು ? ಎಂದರೆ, ಪೂರ್ವಜನಾದ ದೇವರಾತ-ನಿಂದಲೇ ಪರಂಪರೆಯಾಗಿ ಬಂದಿತ್ತೆನ್ನಲಾಗದು. ಬಂದರೂ ನ್ಯಾಸವಾಗಿ ಬಂದಿತ್ತು ಹೊರತು ಶಿವನು ಜನಕನಿಗೆ ಕೊಟ್ಟಿರಲಿಲ್ಲ. ಜನಕನ ತಪಸ್ಸಿಗೆ ಮೆಚ್ಚಿ ಶಿವನು ಜನಕನಿಗೆ ಕೊಟ್ಟನೆನ್ನಬೇಕು. ಅಯೋಧ್ಯಾಕಾಂಡದಲ್ಲಿ, ಮಹಾಯಜ್ಞೇ ತದಾ ತಸ್ಯ ವರುಣೇನ ಮಹಾತ್ಮನಾ ದತ್ತಂ ಧನುರ್ವರಂ ಪ್ರೀತ್ಯಾ (ಅಯೋ.೧೧೮. ೩೯) 'ವರುಣ' ಕೊಟ್ಟನೆಂದರೆ, ಭಕ್ತರಿಂದ ವರಿಸಲ್ಪಡುವ ಶಿವನು ಕೊಟ್ಟನೆಂದೇ ಹೇಳಬೇಕು.

ತಪೋ ಮಯಾ ಚೀರ್ಣಮುಮಾ ಪತೇಃ ಪುರಾ.....
ಸ ಮೇ ದದೌ ದಿವ್ಯಮಿದಂ ಧನುಸ್ತದಾ

ಎಂದು ನಿರ್ಣಯ (೪.೧೭)ದಲ್ಲಿ ಜನಕನಿಗೆ ಶಿವನು ಧನುಸ್ಸನ್ನು ನೀಡಿದ-ನೆಂದಿದ್ದಾರೆ. ಅದರಿಂದ ನ್ಯಾಸವಾಗಿ ಬಂದಿದ್ದ ಶಿವಧನುಸ್ಸು ಮೊದಲಿಂದಲೂ ಜನಕನ ಬಳಿಯೇ ಇದ್ದರೂ ನ್ಯಾಸವಾಗಿಯೇ ಇತ್ತು. ಅವನು ಅದನ್ನು ತನ್ನ ಕಾರ್ಯಸಾಧನೆಗೆ ಉಪಯೋಗಿಸಿಕೊಳ್ಳುವಂತಿರಲಿಲ್ಲ. ಕನ್ಯಾರ್ಥಿಗಳ ವೀರ್ಯ-ಪರೀಕ್ಷೆಯನ್ನು ಜನಕನು ಸ್ವತಃ ಶಿವಧನುಸ್ಸಿನ ಮೂಲಕ ನಡೆಸಲು ಮೊದಲು ಸಮರ್ಥನಿರಲಿಲ್ಲ, ಏಕೆ? ದೇವತೆಗಳಿಂದಲೂ ಅಲುಗಿಸಲಾಗದ ಆ ಧನುವನ್ನು ಜನಕನು ಶಿವನ ವರದಿಂದಲೇ ಐದು ಸಾವಿರ ಮಂದಿ ಸೇವಕರಿಂದ ಎಳೆದು ಸ್ವಯಂವರ ಮಂಟಪಕ್ಕೆ ತರಿಸಿದ್ದಾನೆ ತಾನೆ?

ಭೂತಲಾದುತ್ಥಿತಾಂ ತಾಂ ತು ವರ್ಧಮಾನಾಂ ಮಮಾತ್ಮಜಾಮ್ ।
ವರಯಾಮಾಸುರಾಗಮ್ಯ ರಾಜಾನೋ ಮುನಿಪುಂಗವ ॥ ೧೫ ॥

ಭೂತಲದಿಂದ ಎದ್ದುಬಂದು ಬೆಳೆದು ದೊಡ್ಡವಳಾಗುತ್ತಲೆ, ಮುನಿಪುಂಗವನೆ! ರಾಜರು ಬಂದು ಕನ್ಯೆಯನ್ನು ಕೇಳಲು ತೊಡಗಿದರು.

ತೇಷಾಂ ವರಯತಾಂ ಕನ್ಯಾಂ ಸರ್ವೇಷಾಂ ಪೃಥಿವೀಕ್ಷಿತಾಮ್ ।
ವೀರ್ಯಶುಲ್ಕೇತಿ ಭಗವನ್ನ ದದಾಮಿ ಸುತಾಮಹಮ್ ॥ ೧೬ ॥

ಅವರು ಕೇಳಿದರೂ ವೀರ್ಯಶುಲ್ಕ ನೀಡಿರೆನ್ನುತ್ತ ಪೂಜ್ಯರೇ! ಯಾವ ರಾಜರಿಗೂ ಮಗಳನ್ನು ನಾನು ಕೊಡಲಿಲ್ಲ.

ತತಃ ಸರ್ವೇ ನೃಪತಯಃ ಸಮೇತ್ಯ ಮುನಿಪುಂಗವ ।
ಮಿಥಿಲಾಮಭ್ಯುಪಾಗಮ್ಯ ವೀರ್ಯಜಿಜ್ಞಾಸವಸ್ತದಾ ॥ ೧೭ ॥

ಮುನಿಶ್ರೇಷ್ಠನೆ! ಬಳಿಕ ಎಲ್ಲ ರಾಜರೂ ಸೇರಿ ಮಿಥಿಲೆಗೆ ಬಂದು ಧನುಸ್ಸಿನ ಶಕ್ತಿಯನ್ನು ಪರೀಕ್ಷಿಸಲು ಬಯಸಿದರು.

ತೇಷಾಂ ಜಿಜ್ಞಾಸಮಾನಾನಾಂ ಶೈವಂ ಧನುರುಪಾಹೃತಂ ।
ನ ಶೇಕುರ್ಗ್ರಹಣೇ ತಸ್ಯ ಧನುಷಸ್ತೋಲನೇಽಪಿವಾ ॥ ೧೮ ॥

ಧನುಸ್ಸಿನ ಶಕ್ತಿಯನ್ನು ತಿಳಿಯಲು ಬಯಸಿದ ಆ ರಾಜರ ಮುಂದೆ ಶಿವಧನುಸ್ಸನ್ನು ನಾನು ತಂದಿರಿಸಿದೆ. ಆದರೆ ಅವರು ಯಾರೂ ಕೂಡ ಧನುಸ್ಸನ್ನು ಎತ್ತಿ ಹಿಡಿದುಕೊಳ್ಳುವುದಾಗಲಿ ತೂಗಾಡಿಸುವುದಾಗಲಿ ಏನೂ ಮಾಡಲು ಶಕ್ತರಾಗದೆ ಹೋದರು.

ತೇಷಾಂ ವೀರ್ಯವತಾಂ ವೀರ್ಯಮಲ್ಪಂ ಜ್ಞಾತ್ವಾ ಮಹಾಮುನೇ ।
ಪ್ರತ್ಯಾಖ್ಯಾತಾ ನೃಪತಯಸ್ತನ್ನಿಬೋಧ ತಪೋಧನ ॥ ೧೯ ॥

ಮಹಾಮುನಿಯೆ! ತಪೋಧನ! ವೀರ್ಯವಂತರೆನಿಸಿದ್ದ ಆ ಎಲ್ಲ ರಾಜರ ವೀರ್ಯವೂ ಅಲ್ಪವಾಗಿರುವುದನ್ನು ಕಂಡು ನಾನು ಕನ್ಯೆಯನ್ನು ಕೊಡಲು ನಿರಾಕರಿಸಿದೆ. ಅನಂತರ ಏನಾಯಿತೆಂಬುದನ್ನು ಹೇಳುವೆನು ಕೇಳು.

ತತಃ ಪರಮಕೋಪೇನ ರಾಜಾನೋ ಮುನಿಪುಂಗವ ।
ನ್ಯರುಂಧನ್ಮಿಥಿಲಾಂ ಸರ್ವೇ ವೀರ್ಯಸಂದೇಹಮಾಗತಾಃ ॥ ೨೦ ॥

ಮುನಿಶ್ರೇಷ್ಠನೇ! ಬಲಹೀನರೆನಿಸಿಕೊಂಡಿದ್ದರಿಂದ ಎಲ್ಲ ರಾಜರೂ ಬಲು ಕೋಪದಿಂದ ಮಿಥಿಲೆಯನ್ನು ಆಕ್ರಮಿಸಿದರು.

ಆತ್ಮಾನಮವಧೂತಂ ತೇ ವಿಜ್ಞಾಯ ನೃಪಪುಂಗವಾಃ ।
ರೋಷೇಣ ಮಹತಾವಿಷ್ಟಾಃ ಪೀಡಯನ್ಮಿಥಿಲಾಂ ಪುರೀಮ್ ॥ ೨೧ ॥

ಇದು ತಮಗೆ ಮಾಡಿದ ಅವಮಾನವೆಂದು ಸಿಟ್ಟಾಗಿ ಮಹಾಕೋಪದಿಂದ ಆವಿಷ್ಟರಾಗಿ ರಾಜಶ್ರೇಷ್ಠರು ಮಿಥಿಲಾಪುರಿಯನ್ನು ನಾಶ ಮಾಡಲು ತೊಡಗಿದರು.

ತತಃ ಸಂವತ್ಸರೇ ಪೂರ್ಣೇ ಕ್ಷಯಂ ಯಾತಾನಿ ಸರ್ವಶಃ ।
ಸಾಧನಾನಿ ಮುನಿಶ್ರೇಷ್ಠ ತತೋಽಹಂ ಭೃಶದುಃಖಿತಃ ॥ ೨೨ ॥

ಒಂದು ವರ್ಷ ಪೂರ್ತಿ ಪರರಾಜರ ದಾಳಿಯಿಂದ ಮುನಿಶ್ರೇಷ್ಠನೆ, ನನ್ನ ಸೈನ್ಯ ಬೊಕ್ಕಸ ಮುಂತಾದ ಸಾಧನವೆಲ್ಲವೂ ಪೂರ್ತಿ ಕ್ಷೀಣವಾಯಿತು. ಆಗ ನಾನು ಬಲು ದುಃಖಿತನಾದೆ.

ತತೋ ದೇವಗಣಾನ್ಸರ್ವಾಂಸ್ತಪಸಾಹಂ ಪ್ರಸಾದಯಮ್ ।
ದದುಶ್ಚ ಪರಮಪ್ರೀತಾಶ್ಚತುರಂಗಬಲಂ ಸುರಾಃ ॥ ೨೩ ॥

ಆಗ ತಪಸ್ಸಿನಿಂದ ಎಲ್ಲ ದೇವತೆಗಳನ್ನೂ ಒಲಿಸಿಕೊಂಡೆ. ದೇವತೆಗಳು ನನಗೆ ಬಲು ಸುಪ್ರೀತರಾಗಿ ಚತುರಂಗ ಬಲವನ್ನು ನೀಡಿದರು.

ತತೋ ಭಗ್ನಾ ನೃಪತಯೋ ಹನ್ಯಮಾನಾ ದಿಶೋ ಯಯುಃ ।
ಅವೀರ್ಯಾ ವೀರ್ಯಸಂದಿಗ್ಧಾಃ ಸಾಮಾತ್ಯಾಃ ಪಾಪಕರ್ಮಣಃ ॥೨೪॥

ಆಗ ಆ ಸೈನ್ಯಗಳಿಂದ ಹೊಡೆಸಿಕೊಂಡು ಪಾಪಕರ್ಮರಾದ ರಾಜರು ಅಮಾತ್ಯ-ರೊಂದಿಗೆ ಸೋತು, ತಾವು ವಸ್ತುತಃ ಬಲಹೀನರು, ಅಲ್ಪಬಲರೆಂದು ತಿಳಿದು ದಿಕ್ಕುಗಳಿಗೆ ಪಲಾಯನಗೈದರು.

ತದೇತನ್ಮುನಿಶಾರ್ದೂಲ ಧನುಃ ಪರಮಭಾಸ್ವರಮ್ ।
ರಾಮಲಕ್ಷ್ಮಣಯೋಶ್ಚಾಪಿ ದರ್ಶಯಿಷ್ಯಾಮಿ ಸುವ್ರತ ॥ ೨೫ ॥

ಮುನಿಶ್ರೇಷ್ಠನೆ! ಅದೇ ಆ ಬಹಳ ತೇಜದಿಂದ ಹೊಳೆವ ಶಿವಧನಸ್ಸು. ಒಳ್ಳೆಯ ವ್ರತನಿಷ್ಠನೆ! ಈ ಧನುಸ್ಸನ್ನು ರಾಮಲಕ್ಷ್ಮಣರಿಗೂ ತೋರಿಸುವೆನು.

ಯದ್ಯಸ್ಯ ಧನುಷೋ ರಾಮಃ ಕುರ್ಯಾದಾರೋಪಣಂ ಮುನೇ ।
ಸುತಾಮಯೋನಿಜಾಂ ಸೀತಾಂ ದದ್ಯಾಂ ದಾಶರಥೇರಹಮ್ ॥ ೨೬ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಷಟ್‌ಷಷ್ಟಿತಮಃ ಸರ್ಗಃ ॥ ೬೬ ॥

ಮುನಿಯೆ! ರಾಮನು ಈ ಧನುಸ್ಸಿಗೆ ಹೆದೆ ಏರಿಸಿದನೆಂದರೆ ದಾಶರಥಿ ರಾಮನಿಗೆ ನನ್ನ ಮಗಳಾದ ಅಯೋನಿಜೆಯಾದ ಸೀತೆಯನ್ನು ಕೊಡುವೆನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಅರವತ್ತಾರನೆ ಸರ್ಗ ಮುಗಿಯಿತು.

ಸಪ್ತಷಷ್ಟಿತಮಃ ಸರ್ಗಃ

ಜನಕಸ್ಯ ವಚಃ ಶ್ರುತ್ವಾ ವಿಶ್ವಾಮಿತ್ರೋ ಮಹಾಮುನಿಃ ।
ಧನುರ್ದರ್ಶಯ ರಾಮಾಯ ಇತಿ ಹೋವಾಚ ಪಾರ್ಥಿವಮ್ ॥ ೧ ॥

ಜನಕನ ಮಾತನ್ನು ಕೇಳಿ ಮಹಾಮುನಿ ವಿಶ್ವಾಮಿತ್ರನು ರಾಜನಿಗೆ 'ರಾಮನಿಗೆ ಧನುಸ್ಸನ್ನು ತೋರಿಸು' ಎಂದನು.

ತತಃ ಸ ರಾಜಾ ಜನಕಃ ಸಾಮಂತಾನ್ವ್ಯಾದಿದೇಶ ಹ ।
ಧನುರಾನೀಯತಾಂ ದಿವ್ಯಂ ಗಂಧಮಾಲ್ಯವಿಭೂಷಿತಮ್ ॥ ೨ ॥

ಆಗ ಜನಕರಾಜನು ಸಾಮಂತರಿಗೆ 'ಗಂಧ ಮಾಲ್ಯಗಳಿಂದ ಅಲಂಕೃತವಾದ ದಿವ್ಯವಾದ ಧನುಸ್ಸನ್ನು ತರಿಸಿರಿ' ಎಂದನು.

ಜನಕೇನ ಸಮಾದಿಷ್ಟಾಃ ಸಚಿವಾಃ ಪ್ರಾವಿಶನ್ಪುರೀಮ್ ।
ತದ್ಧನುಃ ಪುರತಃ ಕೃತ್ವಾ ನಿರ್ಜಗ್ಮುಃ ಪಾರ್ಥಿವಾಜ್ಞಯಾ ॥ ೩ ॥

ಜನಕನಾದೇಶದಂತೆ ಸಚಿವರು ಯಾಗಶಾಲೆಯನ್ನು ಪ್ರವೇಶಿಸಿದರು. ಆ ಧನುಸ್ಸನ್ನು ಮುಂದೆ ಮಾಡಿಕೊಂಡು ರಾಜಾಜ್ಞೆಯಂತೆ ಹೊರಗೆ ಬಂದರು.

ನೃಣಾಂ ಶತಾನಿ ಪಂಚಾಶದ್ವ್ಯಾಯತಾನಾಂ ಮಹಾತ್ಮನಾಮ್ ।
ಮಂಜೂಷಾಮಷ್ಟಚಕ್ರಾಂ ತಾಂ ಸಮೂಹುಸ್ತೇ ಕಥಂಚನ ॥ ೪ ॥

ಐದು ಸಾವಿರ ದೃಢ ದೀರ್ಘಕಾಯರಾದ ಮಹಾಪ್ರಯತ್ನಶಾಲಿ ಜನರು ಕಷ್ಟದಿಂದ ಎಂಟು ಚಕ್ರ ಉಳ್ಳ ಧನುಸ್ಸನ್ನಿಟ್ಟಿದ್ದ ಕಬ್ಬಿಣದ ಪೆಟ್ಟಿಗೆಯನ್ನು ಎಳೆದುತಂದರು.

ತಾಮಾದಾಯ ತು ಮಂಜೂಷಾಮಾಯಸೀಂ ಯತ್ರ ತದ್ಧನುಃ ।
ಸುರೋಪಮಂ ತೇ ಜನಕಮೂಚುರ್ನೃಪತಿಮಂತ್ರಿಣಃ ॥ ೫ ॥

ಆ ಧನುಸ್ಸನ್ನಿಟ್ಟಿದ್ದ ಕಬ್ಬಿಣದ ಪೆಟ್ಟಿಗೆಯನ್ನು ತಂದು ರಾಜಭಟರು ದೇವೋಪಮನಾದ ಜನಕನಿಗೆ ಹೇಳಿದರು.

ಇದಂ ಧನುರ್ವರಂ ರಾಜನ್ಪೂಜಿತಂ ಸರ್ವರಾಜಭಿಃ ।
ಮಿಥಿಲಾಧಿಪ ರಾಜೇಂದ್ರ ದರ್ಶನೀಯಂ ಯದೀಚ್ಛಸಿ ॥ ೬ ॥

ಆಗ ಆ ಸೈನ್ಯಗಳಿಂದ ಹೊಡೆಸಿಕೊಂಡು ಪಾಪಕರ್ಮರಾದ ರಾಜರು ಅಮಾತ್ಯ-ರೊಂದಿಗೆ ಸೋತು, ತಾವು ವಸ್ತುತಃ ಬಲಹೀನರು, ಅಲ್ಪಬಲರೆಂದು ತಿಳಿದು ದಿಕ್ಕುಗಳಿಗೆ ಪಲಾಯನಗೈದರು.

ತದೇತನ್ಮುನಿಶಾರ್ದೂಲ ಧನುಃ ಪರಮಭಾಸ್ವರಮ್ ।
ರಾಮಲಕ್ಷ್ಮಣಯೋಶ್ಚಾಪಿ ದರ್ಶಯಿಷ್ಯಾಮಿ ಸುವ್ರತ ॥ ೨೫ ॥

ಮುನಿಶ್ರೇಷ್ಠನೆ! ಅದೇ ಆ ಬಹಳ ತೇಜದಿಂದ ಹೊಳೆವ ಶಿವಧನಸ್ಸು. ಒಳ್ಳೆಯ ವ್ರತನಿಷ್ಠನೆ! ಈ ಧನುಸ್ಸನ್ನು ರಾಮಲಕ್ಷ್ಮಣರಿಗೂ ತೋರಿಸುವೆನು.

ಯದ್ಯಸ್ಯ ಧನುಷೋ ರಾಮಃ ಕುರ್ಯಾದಾರೋಪಣಂ ಮುನೇ ।
ಸುತಾಮಯೋನಿಜಾಂ ಸೀತಾಂ ದದ್ಯಾಂ ದಾಶರಥೇರಹಮ್ ॥ ೨೬ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಷಟ್‌ಷಷ್ಟಿತಮಃ ಸರ್ಗಃ ॥ ೬೬ ॥

ಮುನಿಯೆ! ರಾಮನು ಈ ಧನುಸ್ಸಿಗೆ ಹೆದೆ ಏರಿಸಿದನೆಂದರೆ ದಾಶರಥಿ ರಾಮನಿಗೆ ನನ್ನ ಮಗಳಾದ ಅಯೋನಿಜೆಯಾದ ಸೀತೆಯನ್ನು ಕೊಡುವೆನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಅರವತ್ತಾರನೆ ಸರ್ಗ ಮುಗಿಯಿತು.

ಸಪ್ತಷಷ್ಟಿತಮಃ ಸರ್ಗಃ

ಜನಕಸ್ಯ ವಚಃ ಶ್ರುತ್ವಾ ವಿಶ್ವಾಮಿತ್ರೋ ಮಹಾಮುನಿಃ ।
ಧನುರ್ದರ್ಶಯ ರಾಮಾಯ ಇತಿ ಹೋವಾಚ ಪಾರ್ಥಿವಮ್ ॥ ೧ ॥

ಜನಕನ ಮಾತನ್ನು ಕೇಳಿ ಮಹಾಮುನಿ ವಿಶ್ವಾಮಿತ್ರನು ರಾಜನಿಗೆ 'ರಾಮನಿಗೆ ಧನುಸ್ಸನ್ನು ತೋರಿಸು' ಎಂದನು.

ತತಃ ಸ ರಾಜಾ ಜನಕಃ ಸಾಮಂತಾನ್ವ್ಯಾದಿದೇಶ ಹ ।
ಧನುರಾನೀಯತಾಂ ದಿವ್ಯಂ ಗಂಧಮಾಲ್ಯವಿಭೂಷಿತಮ್ ॥ ೨ ॥

ಆಗ ಜನಕರಾಜನು ಸಾಮಂತರಿಗೆ 'ಗಂಧ ಮಾಲ್ಯಗಳಿಂದ ಅಲಂಕೃತವಾದ ದಿವ್ಯವಾದ ಧನುಸ್ಸನ್ನು ತರಿಸಿರಿ' ಎಂದನು.

ಜನಕೇನ ಸಮಾದಿಷ್ಟಾಃ ಸಚಿವಾಃ ಪ್ರಾವಿಶನ್ಪುರೀಮ್ ।
ತದ್ಧನುಃ ಪುರತಃ ಕೃತ್ವಾ ನಿರ್ಜಗ್ಮುಃ ಪಾರ್ಥಿವಾಜ್ಞಯಾ ॥ ೩ ॥

ಜನಕನಾದೇಶದಂತೆ ಸಚಿವರು ಯಾಗಶಾಲೆಯನ್ನು ಪ್ರವೇಶಿಸಿದರು. ಆ ಧನುಸ್ಸನ್ನು ಮುಂದೆ ಮಾಡಿಕೊಂಡು ರಾಜಾಜ್ಞೆಯಂತೆ ಹೊರಗೆ ಬಂದರು.

ನೃಣಾಂ ಶತಾನಿ ಪಂಚಾಶದ್ವ್ಯಾಯತಾನಾಂ ಮಹಾತ್ಮನಾಮ್ ।
ಮಂಜೂಷಾಮಷ್ಟಚಕ್ರಾಂ ತಾಂ ಸಮೂಹುಸ್ತೇ ಕಥಂಚನ ॥ ೪ ॥

ಐದು ಸಾವಿರ ದೃಢ ದೀರ್ಘಕಾಯರಾದ ಮಹಾಪ್ರಯತ್ನಶಾಲಿ ಜನರು ಕಷ್ಟದಿಂದ ಎಂಟು ಚಕ್ರ ಉಳ್ಳ ಧನುಸ್ಸನ್ನಿಟ್ಟಿದ್ದ ಕಬ್ಬಿಣದ ಪೆಟ್ಟಿಗೆಯನ್ನು ಎಳೆದುತಂದರು.

ತಾಮಾದಾಯ ತು ಮಂಜೂಷಾಮಾಯಸೀಂ ಯತ್ರ ತದ್ಧನುಃ ।
ಸುರೋಪಮಂ ತೇ ಜನಕಮೂಚುರ್ನೃಪತಿಮಂತ್ರಿಣಃ ॥ ೫ ॥

ಆ ಧನುಸ್ಸನ್ನಿಟ್ಟಿದ್ದ ಕಬ್ಬಿಣದ ಪೆಟ್ಟಿಗೆಯನ್ನು ತಂದು ರಾಜಭಟರು ದೇವೋಪಮನಾದ ಜನಕನಿಗೆ ಹೇಳಿದರು.

ಇದಂ ಧನುರ್ವರಂ ರಾಜನ್ಪೂಜಿತಂ ಸರ್ವರಾಜಭಿಃ ।
ಮಿಥಿಲಾಧಿಪ ರಾಜೇಂದ್ರ ದರ್ಶನೀಯಂ ಯದೀಚ್ಛಸಿ ॥ ೬ ॥

ರಾಜನೆ! ಇದೇ ಸರ್ವರಾಜರಿಂದ ಪೂಜಿತವಾದ ಶ್ರೇಷ್ಠಧನುಸ್ಸು. ಮಿಥಿಲಾದಿಪ ರಾಜೇಂದ್ರ ಜನಕನೆ! ನೀನು ನೋಡಲು ಬಯಸುವಿಯಾದರೆ ಇದು ನೋಡ-ಬೇಕಾದುದು.

ತೇಷಾಂ ನೃಪೋ ವಚಃ ಶ್ರುತ್ವಾ ಕೃತಾಂಜಲಿರಭಾಷತ ।
ವಿಶ್ವಾಮಿತ್ರಂ ಮಹಾತ್ಮಾನಂ ತೌ ಚೋಭೌ ರಾಮಲಕ್ಷ್ಮಣೌ ॥ ೭ ॥

ರಾಜಭಟರ ಮಾತನ್ನು ಕೇಳಿ ರಾಜಾ ಜನಕನು ಮಹಾತ್ಮ ವಿಶ್ವಾಮಿತ್ರನಿಗೂ ಆ ಇಬ್ಬರು ರಾಮಲಕ್ಷ್ಮಣರಿಗೂ ಕೈಮುಗಿದು ಹೇಳಿದನು.

ಇದಂ ಧನುರ್ವರಂ ಬ್ರಹ್ಮನ್ ಜನಕೈರಭಿಪೂಜಿತಮ್ ।
ರಾಜಭಿಶ್ಚ ಮಹಾವೀರ್ಯೈರಶಕ್ತೈಃ ಪೂರಿತುಂ ಪುರಾ ॥ ೮ ॥

ಮುನಿಯೆ, ಇದೇ ಶಿವಧನಸ್ಸು, ದೇವರಾತನಿಂದ ತೊಡಗಿ ಜನಕವಂಶದ ರಾಜರು ಎಲ್ಲರೂ ಹಿಂದೆ ಇದನ್ನು ಪೂಜಿಸಿದರು. ಹೆದೆಯೇರಿಸಲು ಅಶಕ್ತರಾದ ಮಹಾವೀರ್ಯಶಾಲಿ ರಾಜರೂ ಪೂಜಿಸಿದರು.

ನೈತತ್ಸುರಗಣಾಃ ಸರ್ವೇ ನಾಸುರಾ ನ ಚ ರಾಕ್ಷಸಾಃ ।
ಗಂಧರ್ವಯಕ್ಷಪ್ರವರಾಃ ಸಕಿನ್ನರಮಹೋರಗಾಃ ॥ ೯ ॥

ಇದನ್ನು ದೇವತೆಗಳು ಯಾರೂ ಹೆದೆಯೇರಿಸಲು ಶಕ್ತರಾಗಲಿಲ್ಲ. ಅಸುರರು ರಾಕ್ಷಸರೂ ಗಂಧರ್ವ ಯಕ್ಷಶ್ರೇಷ್ಠರು ಕಿನ್ನರ ಮಹಾ ನಾಗರೂ ಎತ್ತಲೂ ಸಮರ್ಥರಾಗಲಿಲ್ಲ.

ಕ್ವ ಗತಿರ್ಮಾನುಷಾಣಾಂ ಚ ಧನುಷೋಽಸ್ಯ ಪ್ರಪೂರಣೇ ।
ಆರೋಪಣೇ ಸಮಾಯೋಗೇ ವೇಪನೇ ತೋಲನೇಽಪಿ ವಾ ॥ ೧೦ ॥

ಈ ಧನುಸ್ಸನ್ನು ಎತ್ತುವಲ್ಲಿ ಹೆದೆಯನ್ನು ಬಿಲ್ಲಿನ ತುದಿಗೆ ಸೇರಿಸುವಲ್ಲಿ ಬಾಣ ಹೂಡುವಲ್ಲಿ ಅಥವಾ ಅಲುಗಾಡಿಸುವಲ್ಲಿ ಎತ್ತಿ ತೂಗುವಲ್ಲಿಯಾದರೂ ಮನುಷ್ಯರಿಗೆ ಸಾಮರ್ಥ್ಯವೆಲ್ಲಿಯದು?

ತದೇತದ್ಧನುಷಾಂ ಶ್ರೇಷ್ಠಮಾನೀತಂ ಮುನಿಪುಂಗವ ।
ದರ್ಶಯೈತನ್ಮಹಾಭಾಗ ಅನಯೋ ರಾಜಪುತ್ರಯೋಃ ॥ ೧೧ ॥

ಮುನಿಶ್ರೇಷ್ಠನೆ! ಇದೇ ಆ ಶ್ರೇಷ್ಠ ಧನುಸ್ಸು. ಮಹಾಭಾಗ್ಯಶಾಲಿಯೆ! ಇದನ್ನು ಈ ರಾಜಕುಮಾರರಿಗೆ ತೋರಿಸು' ಎಂದನು ಜನಕ ಮಹಾರಾಜ.

ವಿಶ್ವಾಮಿತ್ರಸ್ತು ಧರ್ಮಾತ್ಮಾ ಶ್ರುತ್ವಾ ಜನಕಭಾಷಿತಮ್ ।
ವತ್ಸ ರಾಮ ಧನುಃ ಪಶ್ಯ ಇತಿ ರಾಘವಮಬ್ರವೀತ್ ॥ ೧೨ ॥

ಜನಕನಾಡಿದ ಮಾತನ್ನು ಕೇಳಿ ಧರ್ಮಾತ್ಮ ವಿಶ್ವಾಮಿತ್ರನು 'ಮಗು, ರಾಮ! ಧನುಸ್ಸನ್ನು ನೋಡು' ಎಂದು ರಾಮನಿಗೆ ಹೇಳಿದನು.

ಬ್ರಹ್ಮರ್ಷೇರ್ವಚನಾದ್ರಾಮೋ ಯತ್ರ ತಿಷ್ಠತಿ ತದ್ಧನುಃ ।
ಮಂಜೂಷಾಂ ತಾಮಪಾವೃತ್ಯ ದೃಷ್ಟ್ವಾ ಧನುರಥಾಬ್ರವೀತ್ ॥ ೧೩ ॥

ಬ್ರಹ್ಮರ್ಷಿ ವಿಶ್ವಾಮಿತ್ರನ ಮಾತಿನಂತೆ ರಾಮನು ಆ ಧನುಸ್ಸನ್ನಿಟ್ಟಿರುವ ಪೆಟ್ಟಿಗೆ-ಯನ್ನು ತೆರೆದು ಧನುಸ್ಸನ್ನು ಕಂಡು ಹೇಳಿದನು.

ಇದಂ ಧನುರ್ವರಂ ಬ್ರಹ್ಮನ್ಸ್ಪೃಶಾಮೀಹ ಪಾಣಿನಾ ।
ಯತ್ನವಾಂಶ್ಚ ಭವಿಷ್ಯಾಮಿ ತೋಲನೇ ಪೂರಣೇऽಪಿ ವಾ ॥
ಬಾಢಮಿತ್ಯೇವ ತಂ ರಾಜಾ ಮುನಿಶ್ಚ ಸಮಭಾಷತ ॥ ೧೪ ॥

'ಮುನಿಯೆ, ಈ ಶ್ರೇಷ್ಠಧನುಸ್ಸನ್ನು ನಾನು ಕೈಯಿಂದ ಸ್ಪರ್ಶಿಸಲೆ? ಅಥವಾ ಎತ್ತಿ ತೂಗಾಡಿಸಲೂ ಹೆದೆಯೇರಿಸಲೂ ಯತ್ನಿಸಲೆ?' ಎಂದನು. 'ಅವಶ್ಯ ಹಾಗೇ ಮಾಡು' ಎಂದು ರಾಜನೂ ಹೇಳಿದ, ಮುನಿಯೂ ಹೇಳಿದ.

ಲೀಲಯಾ ಸ ಧನುರ್ಮಧ್ಯೇ ಜಗ್ರಾಹ ವಚನಾನ್ಮುನೇಃ ।
ಪಶ್ಯತಾಂ ನೃಸಹಸ್ರಾಣಾಂ ಬಹೂನಾಂ ರಘುನಂದನಃ ॥
ಆರೋಪಯತ್ಸ ಧರ್ಮಾತ್ಮಾ ಸಲೀಲಮಿವ ತದ್ಧನುಃ ॥ ೧೫ ॥

ಮುನಿಯ ಮಾತಿನಂತೆ ರಾಮ ಬಹು ಸಹಸ್ರ ಜನರು ನೋಡುತ್ತಿದ್ದಂತೆ ಕಾಲ್ಬೆರಳಿಂದ ಧನುಸ್ಸಿನ ಮಧ್ಯವನ್ನೆತ್ತಿ ಲೀಲಾಜಾಲವಾಗಿ ಕೈಯಿಂದ ಹಿಡಿದನು. ಧರ್ಮಾತ್ಮ ರಾಮನು ಆ ಧನುಸ್ಸಿಗೆ ಲೀಲಾಜಾಲವಾಗಿ ಹೆದೆಯನ್ನು ಏರಿಸಿದನು.

ಆರೋಪಯಿತ್ವಾ ಧರ್ಮಾತ್ಮಾ ಪೂರಯಾಮಾಸ ತದ್ಧನುಃ ।
ತದ್ಬಭಂಜ ಧನುರ್ಮಧ್ಯೇ ನರಶ್ರೇಷ್ಠೋ ಮಹಾಯಶಾಃ ॥ ೧೬ ॥

ಧರ್ಮಾತ್ಮ ರಾಮನು ಹೆದೆಯೇರಿಸಿ ಕಿವಿವರೆಗೂ ಸೆಳೆದನು. ಮತ್ತು ಮಹಾಯಶನಾದ ಪುರುಷೋತ್ತಮ ಶ್ರೀರಾಮನು ಆಗಲೆ ಆ ಧನುಸ್ಸನ್ನು ನಡುವಿನಲ್ಲೇ ಮುರಿದನು.

ತಸ್ಯ ಶಬ್ದೋ ಮಹಾನಾಸೀನ್ನಿರ್ಘಾತಸಮನಿಃಸ್ವನಃ ।
ಭೂಮಿಕಂಪಶ್ಚ ಸುಮಹಾನ್ಪರ್ವತಸ್ಯೇವ ದೀರ್ಯತಃ ॥ ೧೭ ॥

ಧನುಸ್ಸನ್ನು ಮುರಿದ ಶಬ್ದವು ಸಿಡಿಲಿನ ಧ್ವನಿಯಂತೆ ಮಹತ್ತಾಗಿತ್ತು. ದೊಡ್ಡ ಭೂಕಂಪವೂ ಉಂಟಾಯಿತು. ಬೆಟ್ಟವು ಒಡೆದಂತೇ ಶಬ್ದ ಉಂಟಾಯಿತು.

ನಿಪೇತುಶ್ಚ ನರಾಃ ಸರ್ವೇ ತೇನ ಶಬ್ದೇನ ಮೋಹಿತಾಃ ।
ವರ್ಜಯಿತ್ವಾ ಮುನಿವರಂ ರಾಜಾನಂ ತೌ ಚ ರಾಘವೌ ॥ ೧೮ ॥

ಜನರೆಲ್ಲರೂ ಆ ಶಬ್ದ ಕೇಳಿ ದಿಗ್ಭ್ರಾಂತರಾಗಿ ನೆಲದ ಮೇಲೊರಗಿದರು. ಸ್ಥಿರವಾಗಿ ನಿಂತವರು, ವಿಶ್ವಾಮಿತ್ರ, ಜನಕ, ರಾಮ, ಲಕ್ಷ್ಮಣರು ಮಾತ್ರ.

ಪ್ರತ್ಯಾಶಸ್ತೇ ಜನೇ ತಸ್ಮಿನ್ರಾಜಾ ವಿಗತಸಾಧ್ವಸಃ ।
ಉವಾಚ ಪ್ರಾಂಜಲಿರ್ವಾಕ್ಯಂ ವಾಕ್ಯಜ್ಞೋ ಮುನಿಪುಂಗವಮ್॥ ೧೯ ॥

ಜನರು ಚೇತರಿಸಿಕೊಂಡಾಗ ನಿರ್ಭಯನಾದ ಮಾತುಗಾರ ರಾಜಾ ಜನಕನು ಮುನಿಶ್ರೇಷ್ಠನಿಗೆ ಕೈಮುಗಿದು ಹೇಳಿದ.

ಭಗವನ್ ದೃಷ್ಟವೀರ್ಯೋ ಮೇ ರಾಮೋ ದಶರಥಾತ್ಮಜಃ ।
ಅತ್ಯದ್ಭುತಮಚಿಂತ್ಯಂ ಚ ನ ತರ್ಕಿತಮಿದಂ ಮಯಾ ॥ ೨೦ ॥

ಪೂಜ್ಯನೆ, ದಶರಥಪುತ್ರ ರಾಮನ ಸಾಮರ್ಥ್ಯವನ್ನು ನಾನು ಕಂಡೆ. ಅತ್ಯದ್ಭುತ ಅಚಿಂತ್ಯ ಇದು. ಇದನ್ನು ನಾನು ಊಹಿಸಿರಲಿಲ್ಲ.

ಜನಕಾನಾಂ ಕುಲೇ ಕೀರ್ತಿಮಾಹರಿಷ್ಯತಿ ಮೇ ಸುತಾ ।
ಸೀತಾ ಭರ್ತಾರಮಾಸಾದ್ಯ ರಾಮಂ ದಶರಥಾತ್ಮಜಮ್ ॥ ೨೧ ॥

ನನ್ನ ಮಗಳು ಸೀತೆ ದಶರಥಪುತ್ರನಾದ ರಾಮನನ್ನು ಪತಿಯಾಗಿ ಪಡೆದು ಜನಕರ ಕುಲಕ್ಕೆ ಕೀರ್ತಿಯನ್ನು ತಂದುಕೊಡುವಳು.

ಮಮ ಸತ್ಯಾ ಪ್ರತಿಜ್ಞಾ ಚ ವೀರ್ಯಶುಲ್ಕೇತಿ ಕೌಶಿಕ ।
ಸೀತಾ ಪ್ರಾಣೈರ್ಬಹುಮತಾ ದೇಯಾ ರಾಮಾಯ ಮೇ ಸುತಾ ॥೨೨॥

ವಿಶ್ವಾಮಿತ್ರನೆ! ವೀರ್ಯಶುಲ್ಕಕ್ಕೇ ಪ್ರಾಪ್ಯಳು ನನ್ನ ಮಗಳು ಎಂಬ ನನ್ನ ಪ್ರತಿಜ್ಞೆ. ಇದು ಸತ್ಯವಾಯಿತು. ನನಗೆ ಪ್ರಾಣಕ್ಕಿಂತ ಮಿಗಿಲಾಗಿರುವ ಮಗಳು ಸೀತೆಯನ್ನು ರಾಮನಿಗೆ ನಾನು ಕೊಡಬೇಕು.

ಭವತೋಽನುಮತೇ ಬ್ರಹ್ಮನ್ ಶೀಘ್ರಂ ಗಚ್ಛಂತು ಮಂತ್ರಿಣಃ ।
ಮಮ ಕೌಶಿಕ ಭದ್ರಂ ತೇ ಅಯೋಧ್ಯಾಂ ತ್ವರಿತಾ ರಥೈಃ ॥ ೨೩ ॥

ಮುನಿಯೆ! ನಿನ್ನ ಅನುಮತಿಯಿಂದ ನನ್ನ ಮಂತ್ರಿಗಳು ಬೇಗನೆ ತ್ವರೆ ಮಾಡಿ ರಥಗಳಿಂದ ಅಯೋಧ್ಯೆಗೆ ಹೋಗಲಿ, ವಿಶ್ವಾಮಿತ್ರ! ನಿನಗೆ ಶುಭವಾಗಲಿ.

ರಾಜಾನಂ ಪ್ರಶ್ರಿತೈರ್ವಾಕ್ಯೈರಾನಯಂತು ಪುರಂ ಮಮ ।
ಪ್ರದಾನಂ ವೀರ್ಯಶುಲ್ಕಾಯಾಃ ಕಥಯಂತು ಚ ಸರ್ವಶಃ ॥ ೨೪ ॥

ರಾಜಾ ದಶರಥನಿಗೆ ನನ್ನ ಮಂತ್ರಿಗಳು ವೀರ್ಯ ಶುಲ್ಕದಿಂದ ಸೀತೆಯನ್ನು ರಾಮನಿಗೆ ಕೊಡುವುದಾಗಿ ಎಲ್ಲವನ್ನೂ ಹೇಳಲಿ. ವಿನಮ್ರವಾಗಿ ಹೇಳಿ ಅವನನ್ನು ನನ್ನ ಪಟ್ಟಣಕ್ಕೆ ಕರೆತರಲಿ.

ಮುನಿಗುಪ್ತೌ ಚ ಕಾಕುತ್ಸ್ಥೌ ಕಥಯಂತು ನೃಪಾಯ ವೈ ।
ಪ್ರೀಯಮಾಣಂ ತು ರಾಜಾನಮಾನಯಂತು ಸುಶೀಘ್ರಗಾಃ ॥ ೨೫ ॥

ವಿಶ್ವಾಮಿತ್ರಮುನಿಯಿಂದ ರಾಮಲಕ್ಷ್ಮಣರು ಸುರಕ್ಷಿತರಾಗಿರುವುದನ್ನು ರಾಜಾ ದಶರಥನಿಗೆ ಹೇಳಲಿ. ಅದನ್ನು ಕೇಳಿ ಸಂತುಷ್ಟನಾಗುವ ರಾಜನನ್ನು ಶೀಘ್ರ-ಗಾಮಿಗಳಾದ ನನ್ನ ಮಂತ್ರಿಗಳು ಕರೆತರಲಿ.

ಕೌಶಿಕಶ್ಚ ತಥೇತ್ಯಾಹ ರಾಜಾ ಚಾಭಾಷ್ಯ ಮಂತ್ರಿಣಃ ।
ಅಯೋಧ್ಯಾಂ ಪ್ರೇಷಯಾಮಾಸ ಧರ್ಮಾತ್ಮಾ ಕೃತಶಾಸನಾನ್ ॥
ಯಥಾವೃತ್ತಂ ಸಮಾಖ್ಯಾತುಮಾನೇತುಂ ಚ ನೃಪಂ ತದಾ ॥ ೨೬ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಸಪ್ತಷಷ್ಟಿತಮಃ ಸರ್ಗಃ ॥ ೬೭ ॥

ವಿಶ್ವಾಮಿತ್ರನು 'ಹಾಗೇ ಆಗಲಿ' ಎಂದು ನುಡಿದನು. ಧರ್ಮಾತ್ಮನಾದ ಜನಕ ರಾಜನು ಮಂತ್ರಿಗಳಿಗೆ ಆಜ್ಞೆ ಮಾಡಿ, ಸಮಾಚಾರವನ್ನು ಯಥಾವತ್ತಾಗಿ ಹೇಳಿ ರಾಜಾ ದಶರಥನನ್ನು ಕರೆತರಲು ಕಳಿಸಿದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಅರರವತ್ತೇಳನೆ ಸರ್ಗ ಮುಗಿಯಿತು.

ಅಷ್ಟಷಷ್ಟಿತಮಃ ಸರ್ಗಃ

ಜನಕೇನ ಸಮಾದಿಷ್ಟಾ ದೂತಾಸ್ತೇ ಕ್ಲಾಂತವಾಹನಾಃ ।
ತ್ರಿರಾತ್ರಮುಷಿತಾ ಮಾರ್ಗೇ ತೇऽಯೋಧ್ಯಾಂ ಪ್ರಾವಿಶನ್ಪುರೀಮ್ ॥೧

ಜನಕನು ಕಳಿಸಿದ ದೂತರು ಕುದುರೆಗಳ ಶ್ರಮ ಪರಿಹಾರಕ್ಕಾಗಿ ಮೂರು ರಾತ್ರಿಮಾರ್ಗದಲ್ಲಿ ವಾಸ ಮಾಡಿ ಅಯೋಧ್ಯೆಯನ್ನು ಪ್ರವೇಶಿಸಿದರು.

ರಾಜ್ಞೋ ಭವನಮಾಸಾದ್ಯ ದ್ವಾರಸ್ಥಾನಿದಮಬ್ರುವನ್ ।
ಶೀಘ್ರಂ ನಿವೇದ್ಯತಾಂ ರಾಜ್ಞೇ ದೂತಾನ್ನೋ ಜನಕಸ್ಯ ಚ ॥ ೨ ॥

ದೂತರು ರಾಜಾದಶರಥನ ಅರಮನೆಗೆ ಬಂದು ದ್ವಾರಪಾಲಕರಿಗೆ ಹೇಳಿದರು, ಜನಕರಾಜನ ದೂತರು ನಾವು ಬಂದಿರುವುದಾಗಿ ಶೀಘ್ರವಾಗಿ ರಾಜನಿಗೆ ನಿವೇದನ ಮಾಡಿರಿ' ಎಂದರು.

ಇತ್ಯುಕ್ತಾ ದ್ವಾರಪಾಲಾಸ್ತೇ ರಾಘವಾಯ ನ್ಯವೇದಯನ್ ।
ತೇ ರಾಜವಚನಾಚ್ಛೀಘ್ರಂ ದ್ವಾಸ್ಥಾ ದೂತಾನ್ಬಭಾಷಿರೇ ॥
ದ್ರುತಂ ಗಚ್ಛಂತು ದೂತಾ ವೈ ರಾಜವೇಶ್ಮ ಮಹಾದ್ಯುತಿ ॥ ೩ ॥

ಜನಕನ ದೂತರು ಹೀಗೆ-ಹೇಳಿದಾಗ ಅದನ್ನು ದ್ವಾರಪಾಲರು ದಶರಥನಿಗೆ ತಿಳಿಸಿದರು. ರಾಜಾಜ್ಞೆಯಂತೆ ದ್ವಾರಪಾಲಕರು ದೂತರಿಗೆ ಹೇಳಿದರು, 'ದೂತರೆ, ಬಹಳ ಶೋಭಿಸುವ ಅರಮನೆಗೆ ಬೇಗನೆ ಹೋಗಿರಿ' ಎಂದು.

ತೇ ರಾಜವಚನಾದ್ದೂತಾ ರಾಜವೇಶ್ಮ ಪ್ರವೇಶಿತಾಃ ।
ದದೃಶುರ್ದೇವಸಂಕಾಶಂ ವೃದ್ಧಂ ದಶರಥಂ ನೃಪಮ್ ॥ ೪ ॥

ರಾಜಾಜ್ಞೆಯಂತೆ ದೂತರು ಅರಮನೆಯನ್ನು ಪ್ರವೇಶಿಸಿ ದೇವನಂತೆ ಪ್ರಕಾಶಿಸುವ ವೃದ್ಧನಾದ ದಶರಥ ರಾಜನನ್ನು ಕಂಡರು.

ಬದ್ಧಾಂಜಲಿಪುಟಾಃ ಸರ್ವೇ ದೂತಾ ವಿಗತಸಾಧ್ವಸಾಃ ।
ರಾಜಾನಂ ಪ್ರಯತಾ ವಾಕ್ಯಮಬ್ರುವನ್ಮಧುರಾಕ್ಷರಮ್ ॥ ೫ ॥

ದೂತರೆಲ್ಲರೂ ಕೈಮುಗಿದು ನಿರ್ಭೀತರಾಗಿ ಭಕ್ತಿಯಿಂದ ಮಧುರವಾಗಿ ನುಡಿದರು.

ಮೈಥಿಲೋ ಜನಕೋ ರಾಜಾ ಸಾಗ್ನಿಹೋತ್ರಪುರಸ್ಕೃತಃ ।
ಕುಶಲಂ ಚಾವ್ಯಯಂ ಚೈವ ಸೋಪಾಧ್ಯಾಯಪುರೋಹಿತಮ್ ॥ ೬ ॥

ಮುಹುರ್ಮುಹುರ್ಮಧುರಯಾ ಸ್ನೇಹಸಂಯುಕ್ತಯಾ ಗಿರಾ ।
ಜನಕಸ್ತ್ವಾಂ ಮಹಾರಾಜ ಪೃಚ್ಛತೇ ಸಪುರಃಸರಮ್ ॥ ೭ ॥

ಮಿಥಿಲೆಯ ರಾಜ ಜನಕನು ಅಗ್ನಿಹೋತ್ರ ನಿರತನಾಗಿದ್ದು, ಮಹಾರಾಜ! ನಿನ್ನ ಹಾಗೂ ನಿನ್ನ ಉಪಾಧ್ಯಾಯರ, ಪುರೋಹಿತರ, ಭೃತ್ಯರೆಲ್ಲರ ಕುಶಲವನ್ನೂ ಸ್ಥಿರವಾದ ಸಂಪತ್ತನ್ನೂ ಸ್ನೇಹಪೂರ್ಣ ಮಧುರ ವಚನಗಳಿಂದ ಪುನಃ ಪುನಃ ವಿಚಾರಿಸುತ್ತಿದ್ದಾನೆ.

ಪೃಷ್ಟ್ವಾ ಕುಶಲಮವ್ಯಗ್ರಂ ವೈದೇಹೋ ಮಿಥಿಲಾಧಿಪಃ ।
ಕೌಶಿಕಾನುಮತೇ ವಾಕ್ಯಂ ಭವಂತಮಿದಮಬ್ರವೀತ್ ॥ ೮ ॥

ಮಿಥಿಲಾಧಿಪನಾದ ವಿದೇಹ ರಾಜನು ವಿಶ್ವಾಮಿತ್ರರ ಅನುಜ್ಞೆಯಿಂದ ಹೃತ್ಪೂರ್ವಕವಾಗಿ ಕುಶಲ ಪ್ರಶ್ನೆ ಮಾಡಿ ನಿನಗೆ ಹೀಗೆ ಹೇಳಿ ಕಳಿಸಿರುವನು.

ಪೂರ್ವಂ ಪ್ರತಿಜ್ಞಾ ವಿದಿತಾ ವೀರ್ಯಶುಲ್ಕಾ ಮಮಾತ್ಮಜಾ ।
ರಾಜಾನಶ್ಚ ಕೃತಾಮರ್ಷಾ ನಿರ್ವೀರ್ಯಾ ವಿಮುಖೀಕೃತಾಃ ॥ ೯ ॥

'ಅವನು ಹೇಳುತ್ತಿದ್ದಾನೆ, 'ನಾನು ಹಿಂದೆ ಪ್ರತಿಜ್ಞೆ ಮಾಡಿದ್ದೆ, ವೀರ್ಯಶುಲ್ಕಕ್ಕೇ ನಾನು ನನ್ನ ಮಗಳನ್ನು ಮದುವೆ ಮಾಡಿಕೊಡುವೆನೆಂದು. ವೀರ್ಯರಹಿತರಾದ ರಾಜರನ್ನು ನಿರಾಕರಿಸಿ ಅವರಿಗೆ ಕೋಪ ಬರಿಸಿದ್ದೇನೆ.

ಸೇಯಂ ಮಮ ಸುತಾ ರಾಜನ್ವಿಶ್ವಾಮಿತ್ರಪುರಃಸರೈಃ ।
ಯದೃಚ್ಛಯಾऽऽಗತೈರ್ವೀರೈರ್ನಿರ್ಜಿತಾ ತವ ಪುತ್ರಕೈಃ ॥ ೧೦ ॥

ರಾಜನೆ, ಈ ನನ್ನ ಮಗಳನ್ನು, ವಿಶ್ವಾಮಿತ್ರರನ್ನು ಮುಂದೆ ಮಾಡಿಕೊಂಡು ದೈವೇಚ್ಛೆಯಿಂದ ನನ್ನಲ್ಲಿಗೆ ಬಂದ ನಿನ್ನ ವೀರಪುತ್ರರು, ಗೆದ್ದುಕೊಂಡಿರುವರು.

ತಚ್ಚ ರಾಜನ್ ಧನುರ್ದಿವ್ಯಂ ಮಧ್ಯೇ ಭಗ್ನಂ ಮಹಾತ್ಮನಾ ।
ರಾಮೇಣ ಹಿ ಮಹಾರಾಜ ಮಹತ್ಯಾಂ ಜನಸಂಸದಿ ॥ ೧೧ ॥

ನಾನು ಪಣವಾಗಿ ಇಟ್ಟಿದ್ದ ದಿವ್ಯವಾದ ಶಿವ ಧನುಸ್ಸನ್ನು, ಮಹಾರಾಜ, ಮಹಾತ್ಮನಾದ ರಾಮನು ಮಹಾಜನ ಸಮಕ್ಷಮದಲ್ಲಿ, ಮಧ್ಯದಲ್ಲಿ ಮುರಿದಿದ್ದಾನೆ.

ಅಸ್ಮೈ ದೇಯಾ ಮಯಾ ಸೀತಾ ವೀರ್ಯಶುಲ್ಕಾ ಮಹಾತ್ಮನೇ ।
ಪ್ರತಿಜ್ಞಾಂ ತರ್ತುಮಿಚ್ಛಾಮಿ ತದನುಜ್ಞಾತುಮರ್ಹಸಿ ॥ ೧೨ ॥

ಮಹಾತ್ಮನಾದ ಈ ರಾಮನಿಗೇ ವೀರ್ಯಶುಲ್ಕ ಮಾತ್ರ ಲಭ್ಯಳಾದ ಸೀತೆಯನ್ನು ನಾನು ಕೊಡಬೇಕಾಗಿದೆ. ಕೊಟ್ಟು ನನ್ನ ಪ್ರತಿಜ್ಞೆಯನ್ನು ನೆರವೇರಿಸಿಕೊಳ್ಳಲು ನಾನು ಬಯಸುತ್ತೇನೆ. ಅದಕ್ಕೆ ನೀನು ಅನುಜ್ಞೆ ನೀಡು.

ಸೋಪಾಧ್ಯಾಯೋ ಮಹಾರಾಜ ಪುರೋಹಿತಪುರಃಸರಃ ।
ಶೀಘ್ರಮಾಗಚ್ಛ ಭದ್ರಂ ತೇ ದ್ರಷ್ಟುಮರ್ಹಸಿ ರಾಘವೌ ॥ ೧೩ ॥

ನಿನಗೆ ಶುಭವಾಗಲಿ, ಮಹಾರಾಜ! ನೀನು ಉಪಾಧ್ಯಾಯರೊಂದಿಗೆ ಪುರೋಹಿತನನ್ನು ಮುಂದೆ ಮಾಡಿಕೊಂಡು ಬೇಗನೆ ಬಂದುಬಿಡು, ರಾಮ-ಲಕ್ಷ್ಮಣರನ್ನು ಕಾಣು.

ಪ್ರೀತಿಂ ಚ ಮಮ ರಾಜೇಂದ್ರ ನಿರ್ವರ್ತಯಿತುಮರ್ಹಸಿ ।
ಪುತ್ರಯೋರುಭಯೋರೇವ ಪ್ರೀತಿಂ ತ್ವಮಪಿ ಲಪ್ಸ್ಯಸೇ ॥ ೧೪ ॥

ರಾಜ ಶ್ರೇಷ್ಠನೆ ನನಗೆ ಸಂತೋಷವನ್ನು ಉಂಟುಮಾಡು. ಇಬ್ಬರು ಪುತ್ರರಿಗೂ ವಿವಾಹವನ್ನು ನಡೆಸುವ ಆನಂದವನ್ನು ನೀನೂ ಅನುಭವಿಸು.

ಏವಂ ವಿದೇಹಾಧಿಪತಿರ್ಮಧುರಂ ವಾಕ್ಯಮಬ್ರವೀತ್ ।
ವಿಶ್ವಾಮಿತ್ರಾಭ್ಯನುಜ್ಞಾತಃ ಶತಾನಂದಮತೇ ಸ್ಥಿತಃ ॥
ಇತ್ಯುಕ್ತ್ವಾ ವಿರತಾ ದೂತಾ ರಾಜಗೌರವಶಂಕಿತಾಃ ॥ ೧೫ ॥

ರಾಜನೆ, ಹೀಗೆ ವಿದೇಹರಾಜನು ವಿಶ್ವಾಮಿತ್ರರಿಂದ ಅನುಜ್ಞೆ ಪಡೆದು ಶತಾನಂದರ ಅಭಿಪ್ರಾಯದಂತೆ ನಿನಗೆ ಮಧುರವಾದ ಮಾತನ್ನು ಹೇಳಿ ಕಳಿಸಿದ್ದಾನೆ.' ಹೀಗೆ ಹೇಳಿ, ರಾಜಗೌರವಕ್ಕೆ ಧಕ್ಕೆ ಬಂದೀತೆಂದು ಶಂಕೆಯಿಂದ ದೂತರು ಸುಮ್ಮನಾದರು.

ದೂತವಾಕ್ಯಂ ತು ತಚ್ಛ್ರುತ್ವಾ ರಾಜಾ ಪರಮಹರ್ಷಿತಃ ।
ವಸಿಷ್ಠಂ ವಾಮದೇವಂ ಚ ಮಂತ್ರಿಣೋಽನ್ಯಾಂಶ್ಚ ಸೋಬ್ರವೀತ್॥ ೧೬

ದೂತರು ಹೇಳಿದ ಮಾತನ್ನು ಕೇಳಿ ರಾಜಾ ದಶರಥನು ಪರಮಾನಂದಭರಿತನಾಗಿ ವಸಿಷ್ಠ ವಾಮದೇವ ಮತ್ತು ಬೇರೆ ಮಂತ್ರಿಗಳಿಗೆ ಹೇಳಿದನು.

ಗುಪ್ತಃ ಕುಶಿಕಪುತ್ರೇಣ ಕೌಸಲ್ಯಾನಂದವರ್ಧನಃ ।
ಲಕ್ಷ್ಮಣೇನ ಸಹ ಭ್ರಾತ್ರಾ ವಿದೇಹೇಷು ವಸತ್ಯಸೌ ॥ ೧೭ ॥

ಕೌಸಲ್ಯಾನಂದ ವರ್ಧನನಾದ ರಾಮನು ಅನುಜನಾದ ಲಕ್ಷ್ಮಣನೊಂದಿಗೆ ವಿಶ್ವಾಮಿತ್ರರಿಂದ ರಕ್ಷಿತನಾಗಿ ವಿದೇಹರಾಜ್ಯದಲ್ಲಿರುವನು.

ದೃಷ್ಟವೀರ್ಯಸ್ತು ಕಾಕುತ್ಸ್ಥೋ ಜನಕೇನ ಮಹಾತ್ಮನಾ ।
ಸಂಪ್ರದಾನಂ ಸುತಾಯಾಸ್ತು ರಾಘವೇ ಕರ್ತುಮಿಚ್ಛತಿ ॥ ೧೮ ॥

ಮಹಾತ್ಮ ಜನಕನು ರಾಮನ ವೀರ್ಯಪರಾಕ್ರಮವನ್ನು ಪ್ರತ್ಯಕ್ಷ ಕಂಡು ರಾಮನಿಗೆ ಮಗಳನ್ನು ಮದುವೆ ಮಾಡಿಕೊಡಲು ಇಚ್ಛಿಸುತ್ತಿದ್ದಾನೆ.

ಯದಿ ವೋ ರೋಚತೇ ವೃತ್ತಂ ಜನಕಸ್ಯ ಮಹಾತ್ಮನಃ ।
ಪುರೀಂ ಗಚ್ಛಾಮಹೇ ಶೀಘ್ರಂ ಮಾಭೂತ್ಕಾಲಸ್ಯ ಪರ್ಯಯಃ॥ ೧೯ ॥

ಈ ಸಮಾಚಾರ ನಿಮಗೆ ಇಷ್ಟವಾಗಿರುವುದಾದರೆ ಮಹಾತ್ಮ ಜನಕನ ಪಟ್ಟಣಕ್ಕೆ ಬೇಗನೆ ಹೋಗೋಣ. ಕಾಲ ಮೀರಬಾರದು.

ಮಂತ್ರಿಣೋ ಬಾಢಮಿತ್ಯಾಹುಃ ಸಹ ಸರ್ವೈರ್ಮಹರ್ಷಿಭಿಃ ।
ಸುಪ್ರೀತಶ್ಚಾಬ್ರವೀದ್ರಾಜಾ ಶ್ವೋ ಯಾತ್ರೇತಿ ಸ ಮಂತ್ರಿಣಃ ॥ ೨೦ ॥

ಮಂತ್ರಿಗಳು ಮತ್ತು ಎಲ್ಲ ಮಹರ್ಷಿಗಳೂ 'ಅವಶ್ಯ ಹೋಗೋಣ' ಎಂದರು. ರಾಜಾ ದಶರಥನು ಬಲು ಸಂತುಷ್ಟನಾಗಿ 'ನಾಳೆಯೆ ಪ್ರಯಾಣ ಮಾಡೋಣ' ಎಂದು ಮಂತ್ರಿಗಳಿಗೆ ಹೇಳಿದನು.

ಮಂತ್ರಿಣಸ್ತಾಂ ನರೇಂದ್ರಸ್ಯ ರಾತ್ರಿಂ ಪರಮಸತ್ಕೃತಾಃ ।
ಊಷುಸ್ತೇ ಮುದಿತಾಃ ಸರ್ವೇ ಗುಣೈಃ ಸರ್ವೈಃ ಸಮನ್ವಿತಾಃ ॥ ೨೧ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇऽಷ್ಟಷಷ್ಟಿತಮಃ ಸರ್ಗಃ ॥ ೬೮ ॥

ಜನಕರಾಜನ ಮಂತ್ರಿಗಳು ಎಲ್ಲರೂ ಆ ರಾತ್ರಿಯಲ್ಲಿ ಉತ್ತಮ ಸತ್ಕಾರ ಪಡೆದು ಸಂತುಷ್ಟರಾಗಿ ಒಳ್ಳೆಯ ಅತಿಥಿ ಸತ್ಕಾರಯುಕ್ತರಾಗಿ ವಾಸ ಮಾಡಿದರು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಅರವತ್ತೆಂಟನೆ ಸರ್ಗ ಮುಗಿಯಿತು.

ಏಕೋನಸಪ್ತತಿತಮಃ ಸರ್ಗಃ

ತತೋ ರಾತ್ರ್ಯಾಂ ವ್ಯತೀತಾಯಾಂ ಸೋಪಾಧ್ಯಾಯಃ ಸಬಾಂಧವಃ ।
ರಾಜಾ ದಶರಥೋ ಹೃಷ್ಟಃ ಸುಮಂತ್ರಮಿದಮಬ್ರವೀತ್ ॥ ೧ ॥

ಆ ರಾತ್ರಿ ಕಳೆದೊಡನೆ ಉಪಾಧ್ಯಾಯರಿಂದಲೂ ಬಾಂಧವರಿಂದಲೂ ಯುಕ್ತ-ನಾದ ರಾಜಾ ದಶರಥನು ಹೃಷ್ಟನಾಗಿ ಸುಮಂತ್ರನಿಗೆ ಹೇಳಿದ.

ಅದ್ಯ ಸರ್ವೇ ಧನಾಧ್ಯಕ್ಷಾ ಧನಮಾದಾಯ ಪುಷ್ಕಲಮ್ ।
ವ್ರಜಂತ್ವಗ್ರೇ ಸುವಿಹಿತಾ ನಾನಾರತ್ನಸಮನ್ವಿತಾಃ ॥ ೨ ॥

ಇಂದು ಕೋಶರಕ್ಷಣಾಧಿಕಾರಿಗಳೆಲ್ಲರೂ ನಾನಾ ರತ್ನಯುಕ್ತರಾಗಿ ಬಹು ಧನವನ್ನು ತೆಗೆದು ಕೊಂಡು ಸುರಕ್ಷಿತರಾಗಿ ಮುಂದಿನಿಂದ ಪ್ರಯಾಣ ಮಾಡಲಿ.

ಚತುರಂಗಂ ಬಲಂ ಚಾಪಿ ಶೀಘ್ರಂ ನಿರ್ಯಾತು ಸರ್ವಶಃ ।
ಮಮಾಜ್ಞಾಸಮಕಾಲಂ ಚ ಯಾನಯುಗ್ಯಮನುತ್ತಮಮ್ ॥ ೩ ॥

ಚತುರಂಗ ಸೈನ್ಯವೂ ವಾಹನಗಳೂ ಕುದುರೆಗಳೂ ಎಲ್ಲವೂ ನನ್ನಾಜ್ಞೆ ಬಂದೊಡನೆ ಶೀಘ್ರವಾಗಿ ಹೊರಡಲಿ.

ವಸಿಷ್ಠೋ ವಾಮದೇವಶ್ಚ ಜಾಬಾಲಿರಥ ಕಾಶ್ಯಪಃ ।
ಮಾರ್ಕಂಡೇಯಃ ಸುದೀರ್ಘಾಯುರ್ಮಹರ್ಷಿಃ ಕಾತ್ಯಾಯನಸ್ತಥಾ ॥ ೪ ॥

ಏತೇ ದ್ವಿಜಾಃ ಪ್ರಯಾಂತ್ವಗ್ರೇ ಸ್ಯಂದನಂ ಯೋಜಯಸ್ವ ಮೇ ।
ಯಥಾ ಕಾಲಾತ್ಯಯೋ ನ ಸ್ಯಾದ್ದೂತಾ ಹಿ ತ್ವರಯಂತಿ ಮಾಮ್ ॥೫॥

ವಸಿಷ್ಠ ವಾಮದೇವ ಜಾಬಾಲಿ ಕಾಶ್ಯಪ ದೀರ್ಘಾಯು ಮಾರ್ಕಂಡೇಯ ಮತ್ತು ಕಾತ್ಯಾಯನ ಋಷಿ. ಈ ಎಲ್ಲ ದ್ವಿಜರೂ ಮುಂದಿನಿಂದ ಪ್ರಯಾಣ ಹೊರಡಲಿ. ನನಗೆ ರಥವನ್ನು ಸಜ್ಜುಗೊಳಿಸು. ಕಾಲ ಮೀರಿ ಹೋಗಬಾರದು. ಜನಕನ ದೂತರು ನನಗೆ ಅವಸರ ಪಡಿಸುತ್ತಿದ್ದಾರೆ.

ಇತ್ಯುಕ್ತ್ವಾ ಸ ಮಹಾತೇಜಾ ರಾಜಾ ದಶರಥೋ ರಥಮ್ ।
ಆರುರೋಹ ಯಥಾ ಭಾನುರ್ಭಗವಾನ್ರಘುನಂದನಃ ॥ ೬ ॥

ಹೀಗೆ ಹೇಳಿ ಮಹಾತೇಜನಾದ ರಘುವಂಶೀಯ ರಾಜನಾದ ದಶರಥನು ಭಗವಾನ್ ಸೂರ್ಯನಂತೆ ರಥವನ್ನೇರಿದ.

ವಚನಾತ್ತು ನರೇಂದ್ರಸ್ಯ ಸಾ ಸೇನಾ ಚತುರಂಗಿಣೀ ।
ರಾಜಾನಮೃಷಿಭಿಃ ಸಾರ್ಧಂ ವ್ರಜಂತಂ ಪೃಷ್ಠತೋಽನ್ವಗಾತ್ ॥ ೭ ॥

ರಾಜಾಜ್ಞೆಯಂತೆ ಚತುರಂಗ ಸೈನ್ಯವು, ಋಷಿಗಳೊಂದಿಗೆ ಪ್ರಯಾಣ ಮಾಡುವಾಗ ರಾಜನನ್ನು ಹಿಂಬಾಲಿಸಿತು.

ಗತ್ವಾ ಚತುರಹಂ ಮಾರ್ಗಂ ವಿದೇಹಾನಭ್ಯುಪೇಯಿವಾನ್ ।
ರಾಜಾ ತು ಜನಕಃ ಶ್ರೀಮಾಂಶ್ಚ್ರುತ್ವಾ ಪೂಜಾಮಕಲ್ಪಯತ್ ॥ ೮ ॥

ನಾಲ್ಕು ದಿನ ಪ್ರಯಾಣ ಮಾಡಿ ದಶರಥನು ವಿದೇಹರಾಜ್ಯವನ್ನು ತಲುಪಿದನು. ಶ್ರೀಮಾನ್ ರಾಜಾ ಜನಕನು ಈ ವಾರ್ತೆಯನ್ನು ಕೇಳಿ ದಶರಥನ ಸತ್ಕಾರವನ್ನು ಏರ್ಪಡಿಸಿದನು.

ತತೋ ರಾಜಾನಮಾಸಾದ್ಯ ವೃದ್ಧಂ ದಶರಥಂ ನೃಪಮ್ ।
ಜನಕೋ ಮುದಿತೋ ರಾಜಾ ಹರ್ಷಂ ಚ ಪರಮಂ ಯಯೌ ॥
ಉವಾಚ ಚ ನರಶ್ರೇಷ್ಠೋ ನರಶ್ರೇಷ್ಠಂ ಮುದಾನ್ವಿತಃ ॥ ೯ ॥

ವೃದ್ಧನಾದ ರಾಜಾ ದಶರಥನನ್ನು ಇದಿರುಗೊಂಡು ರಾಜಾ ಜನಕನು ಪರಮಾನಂದಭರಿತನಾದನು. ಪರಮ ಹರ್ಷ ಪಟ್ಟನು. ಜನಕರಾಜನು ದಶರಥ ರಾಜನಿಗೆ ಆನಂದಭರಿತನಾಗಿ ನುಡಿದನು.

ಸ್ವಾಗತಂ ತೇ ಮಹಾರಾಜ ದಿಷ್ಟ್ಯಾ ಪ್ರಾಪ್ತೋಽಸಿ ರಾಘವ ।
ಪುತ್ರಯೋರುಭಯೋಃ ಪ್ರೀತಿಂ ಲಪ್ಸ್ಯಸೇ ವೀರ್ಯನಿರ್ಜಿತಾಮ್ ॥

ಮಹಾರಾಜ ದಶರಥ! ನಿನಗೆ ಸ್ವಾಗತ. ರಘುವಂಶದ ರಾಜನೆ, ಭಾಗ್ಯವಶಾತ್ ನೀನು ನಮ್ಮಲ್ಲಿಗೆ ಬಂದಿರುವೆ. ವೀರ್ಯದಿಂದ ಇಬ್ಬರು ಪುತ್ರರು ಗೆದ್ದುಕೊಂಡ ಸಂತೋಷವನ್ನು ನೀನು ಪಡೆಯಲಿರುವೆ.

ದಿಷ್ಟ್ಯಾ ಪ್ರಾಪ್ತೋ ಮಹಾತೇಜಾ ವಸಿಷ್ಠೋ ಭಗವಾನೃಷಿಃ ।
ಸಹ ಸರ್ವೈರ್ದ್ವಿಜಶ್ರೇಷ್ಠೈರ್ದೇವೈರಿವ ಶತಕ್ರತುಃ ॥ ೧೧ ॥

ನಮ್ಮ ಭಾಗ್ಯವಶದಿಂದ ಮಹಾತೇಜನಾದ ಭಗವಾನ್ ವಸಿಷ್ಠಋಷಿ ಬಂದಿದ್ದಾರೆ. ಎಲ್ಲ ದೇವತೆಗಳೊಂದಿಗೆ ಎಲ್ಲ ಮುನಿಗಳೊಂದಿಗೆ ದೇವೇಂದ್ರ ಬಂದಂತಾಯಿತು.

ದಿಷ್ಟ್ಯಾ ಮೇ ನಿರ್ಜಿತಾ ವಿಘ್ನಾ ದಿಷ್ಟ್ಯಾ ಮೇ ಪೂಜಿತಂ ಕುಲಮ್ ।
ರಾಘವೈಃ ಸಹ ಸಂಬಂಧಾದ್ವೀರ್ಯಶ್ರೇಷ್ಠೈರ್ಮಹಾತ್ಮಭಿಃ ॥ ೧೨ ॥

ಭಾಗ್ಯವಶದಿಂದ ವಿಘ್ನನಿವಾರಣೆಯಾಯಿತು. ನನ್ನ ಕುಲ ಪ್ರಶಂಸಾರ್ಹ-ವೆನಿಸಿತು. ಏಕೆಂದರೆ ವೀರ್ಯದಲ್ಲಿ ಶ್ರೇಷ್ಠರಾದ ಮಹಾತ್ಮರಾದ ರಘುವಂಶ-ದವರೊಂದಿಗೆ ಸಂಬಂಧ ಉಂಟಾಯಿತು.

ಶ್ವಃ ಪ್ರಭಾತೇ ನರೇಂದ್ರೇಂದ್ರ ನಿರ್ವರ್ತಯಿತುಮರ್ಹಸಿ ।
ಯಜ್ಞಸ್ಯಾಂತೇ ನರಶ್ರೇಷ್ಠ ವಿವಾಹಮೃಷಿಸಂಮತಮ್ ॥ ೧೩ ॥

ನಾಳೆ ಬೆಳಿಗ್ಗೆ ಯಜ್ಞದ ಕೊನೆಯಲ್ಲಿ ಋಷಿ ಸಂಮತವಾದ ಈ ವಿವಾಹವನ್ನು ನೀನು ನಡೆಸು.

ತಸ್ಯ ತದ್ವಚನಂ ಶ್ರುತ್ವಾ ಋಷಿಮಧ್ಯೇ ನರಾಧಿಪಃ ।
ವಾಕ್ಯಂ ವಾಕ್ಯವಿದಾಂ ಶ್ರೇಷ್ಠಃ ಪ್ರತ್ಯುವಾಚ ಮಹೀಪತಿಮ್ ॥ ೧೪ ॥

ಜನಕರಾಜನ ಮಾತನ್ನು ಕೇಳಿ ಅವನಿಗೆ ಮಾತುಬಲ್ಲವರಲ್ಲಿ ಶ್ರೇಷ್ಠನಾದ ರಾಜಾ ದಶರಥನು ಋಷಿಗಳ ಮಧ್ಯದಲ್ಲಿ ಈ ಮಾತನ್ನು ಹೇಳಿದ.

ಪ್ರತಿಗ್ರಹೋ ದಾತೃವಶಃ ಶ್ರುತಮೇತನ್ಮಯಾ ಪುರಾ ।
ಯಥಾ ವಕ್ಷ್ಯಸಿ ಧರ್ಮಜ್ಞ ತತ್ಕರಿಷ್ಯಾಮಹೇ ವಯಮ್ ॥ ೧೫ ॥

ಕೊಳ್ಳುವುದು ಕೊಡುವವನ ಅಧೀನ ಎಂದು ನಾನೆಂದೋ ಕೇಳಿದ್ದೇನೆ. ಧರ್ಮಜ್ಞನೆ, ನೀನು ಕೊಡುವವನು ಹೇಗೆ ಹೇಳುವೆಯೋ ಹಾಗೆ ನಾವು ನಡೆದುಕೊಳ್ಳುವೆನು.

ಧರ್ಮಿಷ್ಠಂ ಚ ಯಶಸ್ಯಂ ಚ ವಚನಂ ಸತ್ಯವಾದಿನಃ ।
ಶ್ರುತ್ವಾ ವಿದೇಹಾಧಿಪತಿಃ ಪರಂ ವಿಸ್ಮಯಮಾಗತಃ ॥ ೧೬ ॥

ಸತ್ಯವಾದಿಯಾದ ದಶರಥನು ಹೇಳಿದ ಧರ್ಮ ಸಮ್ಮತವಾದ ಯಶಸ್ಕರವೂ ಆದ ಈ ಮಾತನ್ನು ಕೇಳಿ ವಿದೇಹ ರಾಜನು ಬಹಳ ವಿಸ್ಮಯಪಟ್ಟ.

ಕೊಡುವವನು ದಾನ ಕೊಟ್ಟರೆ ತಾನೆ, ಕೊಳ್ಳುವವನು ಅದನ್ನು ಕೊಳ್ಳುತ್ತಾನೆ? ಅದರಿಂದ ಕೊಡುವವನು ಯಾವ ಫಲದ ಉದ್ದೇಶದಿಂದ ಕೊಡುವನೋ ಆ ಫಲ ಅವನಿಗೆ ದೊರಕುವಂತೆ ಕೊಳ್ಳುವವನು ದೇವರಲ್ಲಿ ಪ್ರಾರ್ಥಿಸಬೇಕು. ಇದು ಕೊಳ್ಳುವವನ ಧರ್ಮ. ಸತ್ಯವಾದಿ ದಶರಥ ಸತ್ಯವಾದ ಈ ಮಾತನ್ನು ಆಡಿದ್ದಾನೆ. ಆದರೆ ಜನಕನಿಗೆ ದಶರಥನು ಹೇಳಿದ ಈ ಮಾತು ಪ್ರಕೃತದಲ್ಲಿ ಬಲು ವಿಸ್ಮಯಕರ. ಅದು ಅವನ ವಿನಯವನ್ನು ತೋರಿಸುತ್ತದೆ. ರಾಮನು ಅದ್ಭುತವಾದ ವೀರ್ಯ ಪರಾಕ್ರಮದಿಂದ ಗೆದ್ದುಕೊಂಡಿರುವ ಜನಕನ ಕನ್ಯೆಯನ್ನು ಜನಕನು 'ದಾನ ಮಾಡುತ್ತಿದ್ದಾನೆ' ಎನ್ನುತ್ತಾನೆ ದಶರಥ! ಪರಾಕ್ರಮದಿಂದ ತಾನೆ ಗೆದ್ದುಕೊಂಡಿದ್ದೇನೆ ಎನ್ನುವ ಅಹಂಕಾರ ಸ್ವಲ್ಪವೂ ಅವನಲಿಲ್ಲ! ಮದುವೆಯಲ್ಲಿ ಗಂಡಿನ ಕಡೆಯವನು, ವಿನಯ ತೋರುತ್ತಾನೆ.

ತತಃ ಸರ್ವೇ ಮುನಿಗಣಾಃ ಪರಸ್ಪರಸಮಾಗಮೇ ।
ಹರ್ಷೇಣ ಮಹತಾ ಯುಕ್ತಾಸ್ತಾಂ ನಿಶಾಮವಸನ್ಸುಖಮ್ ॥ ೧೭ ॥

ಬಳಿಕ ಎಲ್ಲ ಮುನಿಗಳೂ ಪರಸ್ಪರ ಸಮಾಗಮದಲ್ಲಿ ಅತ್ಯಂತ ಹರ್ಷಯುಕ್ತರಾಗಿ ಆ ರಾತ್ರಿಯೆಲ್ಲ ಸುಖವಾಗಿ ವಾಸ ಮಾಡಿದರು.

ಅಥ ರಾಮೋ ಮಹಾತೇಜಾ ಲಕ್ಷ್ಮಣೇನ ಸಮಂ ಯಯೌ ।
ವಿಶ್ವಾಮಿತ್ರಂ ಪುರಸ್ಕೃತ್ಯ ಪಿತುಃ ಪಾದಾವುಪಸ್ಪೃಶನ್ ॥ ೧೮ ॥

ಮಹಾತೇಜನಾದ ರಾಮನು ಲಕ್ಷ್ಮಣನೊಂದಿಗೆ ವಿಶ್ವಾಮಿತ್ರರನ್ನು ಮುಂದೆ ಮಾಡಿಕೊಂಡು ತಂದೆಯ ಪಾದಾಭಿವಂದನ ಮಾಡಿದನು.

ರಾಜಾ ಚ ರಾಘವೌ ಪುತ್ರೌ ನಿಶಾಮ್ಯ ಪರಿಹರ್ಷಿತಃ ।
ಉವಾಸ ಪರಮಪ್ರೀತೋ ಜನಕೇನಾಭಿಪೂಜಿತಃ ॥ ೧೯ ॥

ರಾಜಾ ದಶರಥ ಮಕ್ಕಳನ್ನು ಕಂಡು ಹರ್ಷಭರಿತನಾಗಿ ಪರಮ ಸಂತೋಷದಿಂದ, ಜನಕನಿಂದ ಸತ್ಕೃತನಾಗಿ ಆ ರಾತ್ರಿಯಲ್ಲಿ ಸುಖವಾಗಿ ವಾಸ ಮಾಡಿದ.

ಜನಕೋಽಪಿ ಮಹಾತೇಜಾಃ ಕ್ರಿಯಾಂ ಧರ್ಮೇಣ ತತ್ತ್ವವಿತ್ ।
ಯಜ್ಞಸ್ಯ ಚ ಸುತಾಭ್ಯಾಂ ಚ ಕೃತ್ವಾ ರಾತ್ರಿಮುವಾಸ ಹ ॥ ೨೦ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಏಕೋನಸಪ್ತತಿತಮಃ ಸರ್ಗಃ ॥ ೬೯ ॥

ತತ್ವಜ್ಞಾನಿ ಮಹಾತೇಜನಾದ ಜನಕನೂ ಕೂಡ ಧರ್ಮದಿಂದ ಯಜ್ಞಕ್ರಿಯೆ-ಯನ್ನು ಮಾಡಿ ಮುಗಿಸಿ ಮಕ್ಕಳಿಂದೊಡಗೂಡಿ ರಾತ್ರಿಯಲ್ಲಿ ಸುಖವಾಗಿ ವಾಸ ಮಾಡಿದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಅರವತ್ತೊಂಬತ್ತನೆ ಸರ್ಗ ಮುಗಿಯಿತು.

ಸಪ್ತತಿತಮಃ ಸರ್ಗಃ

ತತಃ ಪ್ರಭಾತೇ ಜನಕಃ ಕೃತಕರ್ಮಾ ಮಹರ್ಷಿಭಿಃ ।
ಉವಾಚ ವಾಕ್ಯಂ ವಾಕ್ಯಜ್ಞಃ ಶತಾನಂದಂ ಪುರೋಹಿತಮ್ ॥ ೧ ॥

ಬಳಿಕ ಪ್ರಾತಃಕಾಲದಲ್ಲಿ ಮಹರ್ಷಿಗಳಿಂದ ಯಜ್ಞಕಾರ್ಯಗಳನ್ನು ನೆರವೇರಿಸಿ ಮಾತು ಬಲ್ಲ ಜನಕರಾಜನು ಪುರೋಹಿತ ಶತಾನಂದರಿಗೆ ಹೇಳಿದನು.

ಭ್ರಾತಾ ಮಮ ಮಹಾತೇಜಾ ಯವೀಯಾನತಿಧಾರ್ಮಿಕಃ ।
ಕುಶಧ್ವಜ ಇತಿ ಖ್ಯಾತಃ ಪುರೀಮಧ್ಯವಸಚ್ಛುಭಾಮ್ ॥ ೨ ॥

ಮಹಾತೇಜನೂ ಅತ್ಯಂತ ಧಾರ್ಮಿಕನೂ ಆದ ಕುಶಧ್ವಜನೆಂದು ಪ್ರಸಿದ್ಧನಾದ ನನ್ನ ತಮ್ಮನು ಭವ್ಯವಾದ ಸಾಂಕಾಶ್ಯ ನಗರದಲ್ಲಿ ವಾಸ ಮಾಡುತ್ತಿದ್ದಾನೆ.

ವಾರ್ಯಾಮಲಕಪರ್ಯಂತಾಂ ಪಿಬನ್ನಿಕ್ಷುಮತೀಂ ನದೀಮ್ ।
ಸಾಂಕಾಶ್ಯಾಂ ಪುಣ್ಯಸಂಕಾಶಾಂ ವಿಮಾನಮಿವ ಪುಷ್ಪಕಮ್ ॥ ೩ ॥

ಆ ನಗರದ ಹೊರವಲಯದಲ್ಲಿ ನೀರುನೆಲ್ಲಿಯ ಕಾಡು ಬೆಳೆದಿದೆ. ನಗರದ ಸುತ್ತಲೂ ಇಕ್ಷುಮತಿ ನದಿ ಹರಿಯುತ್ತಿದೆ. ಅದರ ನೀರನ್ನು ಸೇವಿಸುತ್ತ ಪುಣ್ಯ ಲಭ್ಯವಾದ ಸ್ವರ್ಗಕ್ಕೆ ಸಮಾನವಾಗಿರುವ ಪುಷ್ಪಕವಿಮಾನದಂತಿರುವ ಸಾಂಕಾಶ್ಯ ನಗರದಲ್ಲಿ ಕುಶಧ್ವಜನು ವಾಸವಾಗಿದ್ದಾನೆ.

ತಮಹಂ ದ್ರಷ್ಟುಮಿಚ್ಛಾಮಿ ಯಜ್ಞಗೋಪ್ತಾ ಸ ಮೇ ಮತಃ ।
ಪ್ರೀತಿಂ ಸೋಽಪಿ ಮಹಾತೇಜಾ ಇಮಾಂ ಭೋಕ್ತಾ ಮಯಾ ಸಹ॥೪॥

ಅವನನ್ನು ನೋಡಲು ಬಯಸುತ್ತೇನೆ. ಅವನೇ ನನ್ನ ಎಲ್ಲ ಯಜ್ಞಗಳಿಗೆ ರಕ್ಷಕ-ನಾಗಿರಬೇಕೆಂದು ಬಯಸುತ್ತೇನೆ. ಮಹಾತೇಜನಾದ ಅವನು ಕೂಡ ಸೀತಾಕಲ್ಯಾಣ ಮಹೋತ್ಸವವನ್ನು ನನ್ನೊಂದಿಗೇ ಅನುಭವಿಸಬೇಕು.

ಏವಮುಕ್ತೇ ತು ವಚನೇ ಶತಾನಂದಸ್ಯ ಸನ್ನಿಧೌ ।
ಆಗತಾಃ ಕೇಚಿದವ್ಯಗ್ರಾ ಜನಕಸ್ತಾನ್ ಸಮಾದಿಶತ್ ॥ ೫ ॥

ಶತಾನಂದನ ಬಳಿಯಲ್ಲಿ ಜನಕನು ಹೀಗೆ ಹೇಳಿದಾಗ ಕೆಲವರು ಕಾರ್ಯದಕ್ಷ-ರಾದ ಮಂತ್ರಿಗಳು ಬಂದರು. ಅವರಿಗೆ ಜನಕನು ಆದೇಶ ನೀಡಿದರು.

ಶಾಸನಾತ್ತು ನರೇಂದ್ರಸ್ಯ ಪ್ರಯಯುಃ ಶೀಘ್ರವಾಜಿಭಿಃ ।
ಸಮಾನೇತುಂ ನರವ್ಯಾಘ್ರಂ ವಿಷ್ಣುಮಿಂದ್ರಾಜ್ಞಯಾ ಯಥಾ ॥ ೬ ॥

ರಾಜಾಜ್ಞೆಯಂತೆ ಅವರು ವೇಗದ ಕುದುರೆಗಳನ್ನು ಏರಿ ಕುಶಧ್ವಜ ರಾಜನನ್ನು ಕರೆತರಲು ಹೊರಟರು. ಇಂದ್ರನಾಜ್ಞೆಯಂತೆ ತಮ್ಮನಾದ ಉಪೇಂದ್ರನನ್ನು ಕರೆತರಲು ಇಂದ್ರನ ಮಂತ್ರಿಗಳು ಹೊರಟಂತೆ.

ಸಾಂಕಾಶ್ಯಾಂ ತೇ ಸಮಾಗತ್ಯ ದದೃಶುಶ್ಚ ಕುಶಧ್ವಜಮ್ ।
ನ್ಯವೇದಯನ್ಯಥಾವೃತ್ತಂ ಜನಕಸ್ಯ ಚ ಚಿಂತಿತಮ್ ॥ ೭ ॥

ಜನಕನ ಮಂತ್ರಿಗಳು ಸಾಂಕಾಶ್ಯ ನಗರಕ್ಕೆ ಬಂದು ಕುಶಧ್ವಜನನ್ನು ಕಂಡರು. ಜನಕನ ಅಪೇಕ್ಷೆಯನ್ನು ಯಥಾವತ್ತಾಗಿ ಅವನಲ್ಲಿ ನಿವೇದಿಸಿಕೊಂಡರು.

ತದ್‌ವೃತ್ತಂ ನೃಪತಿಃ ಶ್ರುತ್ವಾ ದೂತಶ್ರೇಷ್ಠೈರ್ಮಹಾಬಲೈಃ ।
ಆಜ್ಞಯಾऽಥ ನರೇಂದ್ರಸ್ಯ ಆಜಗಾಮ ಕುಶಧ್ವಜಃ ।
ಸ ದದರ್ಶ ಮಹಾತ್ಮಾನಂ ಜನಕಂ ಧರ್ಮವತ್ಸಲಮ್ ॥ ೮ ॥

ಮಹಾಬಲರಾದ ದೂತಶ್ರೇಷ್ಠರಾದ ಜನಕನ ಮಂತ್ರಿಗಳ ಮುಖದಿಂದ ಕೇಳಿದೊಡನೆ ಕುಶಧ್ವಜನು ಜನಕನ ಆಜ್ಞೆಯಂತೆ ಮಿಥಿಲೆಗೆ ಬಂದನು. ಧರ್ಮ-ವತ್ಸಲನಾದ ಮಹಾತ್ಮನಾದ ಜನಕನನ್ನು ಕಂಡನು.

ಸೋऽಭಿವಾದ್ಯ ಶತಾನಂದಂ ರಾಜಾನಂ ಚಾಪಿ ಧಾರ್ಮಿಕಮ್ ।
ರಾಜಾರ್ಹಂ ಪರಮಂ ದಿವ್ಯಮಾಸನಂ ಚಾಧ್ಯರೋಹತ ॥ ೯ ॥

ಕುಶಧ್ವಜನು ಶತಾನಂದನನ್ನೂ ಧಾರ್ಮಿಕನಾದ ಜನಕರಾಜನನ್ನೂ ಅಭಿವಾದನ ಮಾಡಿ ರಾಜಾರ್ಹವಾದ ಉತ್ತಮ ದಿವ್ಯಾಸನದಲ್ಲಿ ಆಸೀನನಾದನು.

ಉಪವಿಷ್ಟಾವುಭೌ ತೌ ತು ಭ್ರಾತರಾವತಿತೇಜಸೌ ।
ಪ್ರೇಷಯಾಮಾಸತುರ್ವೀರೌ ಮಂತ್ರಿಶ್ರೇಷ್ಠಂ ಸುದಾಮನಮ್॥ ೧೦ ॥

ವೀರರಾದ ಅತಿ ತೇಜಸ್ವಿಗಳಾದ ಇಬ್ಬರು ಸೋದರರು ಜನಕ ಮತ್ತು ಕುಶಧ್ವಜರು ಶ್ರೇಷ್ಠಮಂತ್ರಿಯಾದ ಸುದಾಮನನ್ನು ದಶರಥನ ಶಿಬಿರಕ್ಕೆ ಕಳಿಸಿದರು.

ಗಚ್ಛ ಮಂತ್ರಿಪತೇ ಶೀಘ್ರಮೈಕ್ಷ್ವಾಕಮಮಿತಪ್ರಭಮ್ ।
ಆತ್ಮಜೈಃ ಸಹ ದುರ್ಧರ್ಷಮಾನಯಸ್ವ ಸಮಂತ್ರಿಣಮ್ ॥ ೧೧ ॥

'ಮಂತ್ರಿಶ್ರೇಷ್ಠನೆ, ಹೋಗು. ಅಮಿತ ಪ್ರಭನಾದ ಶತ್ರುಗಳಿಗೆ ಮಣಿಯದ ದಶರಥ ರಾಜನನ್ನು ಮಕ್ಕಳೊಂದಿಗೆ ಮತ್ತು ಮಂತ್ರಿಗಳೊಂದಿಗೆ ಶೀಘ್ರವಾಗಿ ಕರೆತಾ.'

ತಿಪಕಾರ್ಯಾಂ ಸ ಗತ್ವಾ ತು ರಘೂಣಾಂ ಕುಲವರ್ಧನಮ್ ।
ದದರ್ಶ ಶಿರಸಾ ಚೈನಮಭಿವಾದ್ಯೇದಮಬ್ರವೀತ್ ॥ ೧೨ ॥

ಮಂತ್ರಿ ಸುದಾಮನನು ಶಿಬಿರಕ್ಕೆ ಹೋಗಿ ರಘುಕುಲ ದೀಪಕನಾದ ದಶರಥನನ್ನು ಕಂಡನು ಮತ್ತು ತಲೆಬಾಗಿ ನಮಿಸಿ ನುಡಿದನು.

ಅಯೋಧ್ಯಾಧಿಪತೇ ವೀರ ವೈದೇಹೋ ಮಿಥಿಲಾಧಿಪಃ ।
ಸ ತ್ವಾಂ ದ್ರಷ್ಟುಂ ವ್ಯವಸಿತಃ ಸೋಪಾಧ್ಯಾಯಪುರೋಹಿತಮ್ ॥ ೧೩ ॥

ವೀರ ಅಯೋಧ್ಯಾಧಿಪತಿಯೆ, ಮಿಥಿಲಾಧಿಪನಾದ ವಿದೇಹರಾಜನು ನಿನ್ನನ್ನು ಉಪಾಧ್ಯಾಯ ಪುರೋಹಿತರೊಂದಿಗೆ ಕಾಣಲು ಬಯಸಿದ್ದಾನೆ.

ಮಂತ್ರಿಶ್ರೇಷ್ಠವಚಃ ಶ್ರುತ್ವಾ ರಾಜಾ ಸರ್ಷಿಗಣಸ್ತದಾ ।
ಸಬಂಧುರಗಮತ್ತತ್ರ ಜನಕೋ ಯತ್ರ ವರ್ತತೇ ॥ ೧೪ ॥

ಮಂತ್ರಿಶ್ರೇಷ್ಠ ಸುದಾಮನನ ಮಾತನ್ನು ಕೇಳಿ ರಾಜಾ ದಶರಥನು ಋಷಿ ಸಮೂಹನೊಂದಿಗೆ ಮತ್ತು ಬಂಧುಗಳೊಂದಿಗೆ ಜನಕರಾಜನಿದ್ದಲ್ಲಿಗೆ ನಡೆದನು.

ಸ ರಾಜಾ ಮಂತ್ರಿಸಹಿತಃ ಸೋಪಾಧ್ಯಾಯಃ ಸಬಾಂಧವಃ ।
ವಾಕ್ಯಂ ವಾಕ್ಯವಿದಾಂ ಶ್ರೇಷ್ಠೋ ವೈದೇಹಮಿದಮಬ್ರವೀತ್ ॥ ೧೫ ॥

ದಶರಥ ರಾಜನು ಮಂತ್ರಿ ಉಪಾಧ್ಯಾಯ ಬಾಂಧವರೊಂದಿಗೆ ಹೋಗಿ ಕುಳಿತನು. ಮಾತುಬಲ್ಲವರಲ್ಲಿ ಶ್ರೇಷ್ಠನಾದ ರಾಜನು ವಿದೇಹ ರಾಜನಿಗೆ ಹೇಳಿದನು.

ವಿದಿತಂ ತೇ ಮಹಾರಾಜ ಇಕ್ಷ್ವಾಕುಕುಲದೈವತಮ್ ।
ವಕ್ತಾ ಸರ್ವೇಷು ಕೃತ್ಯೇಷು ವಸಿಷ್ಠೋ ಭಗವಾನ್ ಋಷಿಃ ॥ ೧೬ ॥

ಮಹಾರಾಜ, ನಿನಗೆ ಇದು ತಿಳಿದೇ ಇದೆ, ಇಕ್ಷ್ವಾಕುಕುಲಕ್ಕೆ ದೇವತೆಯಂತೆ ಪೂಜ್ಯನು ಎಲ್ಲ ರಾಜಕೃತ್ಯಗಳಿಗೂ ಆದೇಶ ನೀಡುವವನು ಭಗವಾನ್ ವಸಿಷ್ಠ ಋಷಿ ಎಂದು.

ವಿಶ್ವಾಮಿತ್ರಾಭ್ಯನುಜ್ಞಾತಃ ಸಹ ಸರ್ವೈರ್ಮಹರ್ಷಿಭಿಃ ।
ಏಷ ವಕ್ಷ್ಯತಿ ಧರ್ಮಾತ್ಮಾ ವಸಿಷ್ಠೋ ಮೇ ಯಥಾಕ್ರಮಮ್ ॥ ೧೭ ॥

ಎಲ್ಲ ಮಹರ್ಷಿಗಳೊಂದಿಗೆ ಕುಳಿತಿರುವ ಧರ್ಮಾತ್ಮನಾದ ವಸಿಷ್ಠನು, ವಿಶ್ವಾಮಿತ್ರನ ಅನುಮತಿಯಿಂದ ನನ್ನ ವಂಶದ ಪೂರ್ವಜನ ಪರಿಚಯವನ್ನು ಕ್ರಮವಾಗಿ ಹೇಳುವನು.

ಏವಮುಕ್ತ್ವಾ ನರಶ್ರೇಷ್ಠೋ ರಾಜ್ಞಾಂ ಮಧ್ಯೇ ಮಹಾತ್ಮನಾಮ್ ।
ತೂಷ್ಣೀಂಭೂತೇ ದಶರಥೇ ವಸಿಷ್ಠೋ ಭಗವಾನೃಷಿಃ ।
ಉವಾಚ ವಾಕ್ಯಂ ವಾಕ್ಯಜ್ಞೋ ವೈದೇಹಂ ಸಪುರೋಧಸಮ್ ॥ ೧೮ ॥

ಮಹಾತ್ಮರಾದ ರಾಜರ ಮಧ್ಯದಲ್ಲಿ ಪುರುಷೋತ್ತಮನಾದ ದಶರಥನು ಹೀಗೆ ಹೇಳಿ ಸುಮ್ಮನಾದಾಗ, ಮಾತುಬಲ್ಲ ಭಗವಾನ್ ವಸಿಷ್ಠ ಋಷಿಯು, ಪುರೋಹಿತ ಶತಾನಂದರೊಂದಿಗೆ ಕುಳಿತ ಜನಕರಾಜನಿಗೆ ಹೇಳಿದರು.

ಅವ್ಯಕ್ತಪ್ರಭವೋ ಬ್ರಹ್ಮಾ ಶಾಶ್ವತೋ ನಿತ್ಯ ಅವ್ಯಯಃ ।
ತಸ್ಮಾನ್ಮರೀಚಿಃ ಸಂಜಜ್ಞೇ ಮರೀಚೇಃ ಕಾಶ್ಯಪಃ ಸುತಃ ॥ ೧೯ ॥

'ಅ-ವ್ಯಕ್ತ-ಪ್ರಭವ' 'ಅ' ನಾಮಕನಾದ ಪದ್ಮನಾಭನ ನಾಭಿಯಿಂದ ಉದ್ಭೂತ-ನಾದ ಬ್ರಹ್ಮನು ಶಾಶ್ವತ ನಿತ್ಯ ಅವ್ಯಯನಾಗಿರುವನು. ಅವನಿಂದ ಮರೀಚಿ ಮುನಿ ಜನಿಸಿದನು. ಅವನ ಮಗನು ಕಾಶ್ಯಪಮುನಿ.

ವಿವಸ್ವಾನ್ಕಾಶ್ಯಪಾಜ್ಜಜ್ಞೇ ಮನುರ್ವೈವಸ್ವತಃ ಸುತಃ ।
ಮನುಃ ಪ್ರಜಾಪತಿಃ ಪೂರ್ವಮಿಕ್ಷ್ವಾಕುಸ್ತು ಮನೋಃ ಸುತಃ ॥ ೨೦ ॥

ಕಾಶ್ಯಪನಿಂದ ವಿವಸ್ವಾನ್ ನಾಮಕ ಸೂರ್ಯನು ಜನಿಸಿದನು. ಅವನ ಸುತನು ವೈವಸ್ವತ ಮನು. ಮೊದಲಿಗೆ 'ಪ್ರಜಾಪತಿ' ರಾಜನಾದವನು ವೈವಸ್ವತ ಮನು. ಮನುವಿನ ಸುತನು ಇಕ್ಷ್ವಾಕು.

ತಮಿಕ್ಷ್ವಾಕುಮಯೋಧ್ಯಾಯಾಂ ರಾಜಾನಂ ವಿದ್ಧಿ ಪೂರ್ವಕಮ್ ।
ಇಕ್ಷ್ವಾಕೋಸ್ತು ಸುತಃ ಶ್ರೀಮಾನ್ಕುಕ್ಷಿರಿತ್ಯೇವ ವಿಶ್ರುತಃ ॥ ೨೧ ॥

ಆ ಇಕ್ಷ್ವಾಕುವನ್ನು ಅಯೋಧ್ಯೆಯ ಮೊದಲನೆ ರಾಜನೆಂದು ತಿಳಿ. ಇಕ್ಷ್ವಾಕು-ವಿನ ಸುತನು ಕುಕ್ಷಿ ಎಂದು ಪ್ರಸಿದ್ಧನಾಗಿರುವನು.

ಕುಕ್ಷೇರಥಾತ್ಮಜಃ ಶ್ರೀಮಾನ್ವಿಕುಕ್ಷಿರುದಪದ್ಯತ ।
ವಿಕುಕ್ಷೇಸ್ತು ಮಹಾತೇಜಾ ಬಾಣಃ ಪುತ್ರಃ ಪ್ರತಾಪವಾನ್ ॥ ೨೨ ॥

ಕುಕ್ಷಿಯಿಂದ ಶ್ರೀಮಾನ್ ವಿಕುಕ್ಷಿ ಎಂಬ ಮಗನು ಜನಿಸಿದ. ವಿಕುಕ್ಷಿಯಿಂದ ಮಹಾತೇಜ ಪ್ರತಾಪಶಾಲಿ ಬಾಣನು ಪುತ್ರನಾಗಿ ಜನಿಸಿದ.

ಬಾಣಸ್ಯ ತು ಮಹಾತೇಜಾ ಅನರಣ್ಯಃ ಪ್ರತಾಪವಾನ್ ।
ಅನರಣ್ಯಾತ್ಪೃಥುರ್ಜಜ್ಞೇ ತ್ರಿಶಂಕುಸ್ತು ಪೃಥೋಃ ಸುತಃ ॥ ೨೩ ॥

ಬಾಣನ ಪುತ್ರನು ಮಹಾತೇಜ ಪ್ರತಾಪಶಾಲಿ ಅನರಣ್ಯ . ಅನರಣ್ಯನಿಂದ ಪೃಥು ಜನಿಸಿದ. ಪೃಥುವಿನ ಸುತನು ತ್ರಿಶಂಕು.

ತ್ರಿಶಂಕೋರಭವತ್ಪುತ್ರೋ ಧುಂಧುಮಾರೋ ಮಹಾಯಶಾಃ ।
ಧುಂಧುಮಾರಾನ್ಮಹಾತೇಜಾ ಯುವನಾಶ್ವೋ ವ್ಯಜಾಯತ ॥
ಯುವನಾಶ್ವಸುತಸ್ತ್ವಾಸೀನ್ಮಾಂಧಾತಾ ಪೃಥಿವೀಪತಿಃ ॥ ೨೪ ॥

ತ್ರಿಶಂಕುವಿನಿಂದ ಮಹಾಯಶನಾದ ಧುಂಧುಮಾರನೆಂಬ ಪುತ್ರನು ಜನಿಸಿದ. ಧುಂಧುಮಾರನಿಂದ ಮಹಾತೇಜನಾದ ಯುವನಾಶ್ವನು ಜನಿಸಿದ. ಯುವನಾಶ್ವನ ಸುತನು ಮಾಂಧಾತರಾಜನಾಗಿದ್ದ.

ಮಾಂಧಾತುಸ್ತು ಸುತಃ ಶ್ರೀಮಾನುಸಂಧಿರುದಪದ್ಯತ ।
ಸುಸಂಧೇರಪಿ ಪುತ್ರೌ ದ್ವೌ ಧ್ರುವಸಂಧಿಃ ಪ್ರಸೇನಜಿತ್ ॥ ೨೫ ॥

ಮಾಂಧಾತನಿಂದ ಶ್ರೀಮಾನ್ ಸುಸಂಧಿ ಎಂಬ ಮಗನು ಜನಿಸಿದ. ಸುಸಂಧಿಗೆ ಇಬ್ಬರು ಪುತ್ರರು, ಧ್ರುವಸಂಧಿ ಮತ್ತು ಪ್ರಸೇನಜಿತ್ ಎಂದು.

ಯಶಸ್ವೀ ಧ್ರುವಸಂಧೇಸ್ತು ಭರತೋ ನಾಮ ನಾಮತಃ ।
ಭರತಾತ್ತು ಮಹಾತೇಜಾ ಅಸಿತೋ ನಾಮ ಜಾತವಾನ್ ॥ ೨೬ ॥

ಧ್ರುವಸಂಧಿಯಿಂದ ಭರತ ಎಂಬ ಹೆಸರಿನ ಯಶಸ್ವಿ ಪುತ್ರನು ಜನಿಸಿದ. ಭರತನಿಂದ ಅಸಿತ ಎಂಬ ಪುತ್ರನು ಜನಿಸಿದ.

ಯಸ್ಯೈತೇ ಪ್ರತಿರಾಜಾನ ಉದಪದ್ಯಂತ ಶತ್ರವಃ ।
ಹೈಹಯಾಸ್ತಾಲಜಂಘಾಶ್ಚ ಶೂರಾಶ್ಚ ಶಶಿಬಿಂದವಃ ॥
ತಾಂಸ್ತು ಸ ಪ್ರತಿಯುಧ್ಯನ್ವೈ ಯುದ್ಧೇ ರಾಜಾ ಪ್ರವಾಸಿತಃ ॥ ೨೭ ॥

ಅಸಿತರಾಜನಿಗೆ ಪ್ರತಿರಾಜರು ಶತ್ರುಗಳಾಗಿ ಉತ್ಪನ್ನರಾದರು, ಹೈಹಯರು, ತಾಲಜಂಘರು, ಮತ್ತು ಶೂರರಾದ ಶಶಿಬಿಂದುಗಳು ಎಂದು. ಅವರೊಂದಿಗೆ ಪ್ರತಿಯುದ್ಧ ಮಾಡುತ್ತ ರಾಜನು ರಾಜ್ಯಭ್ರಷ್ಟನಾಗಿ ಕಾಡು ಪಾಲಾದ.

ಹಿಮವಂತಮುಪಾಗಮ್ಯ ಭೃಗುಪ್ರಸ್ರವಣೇऽವಸತ್ ।
ಅಸಿತೋऽಲ್ಪಬಲೋ ರಾಜಾ ಮಂತ್ರಿಭಿಃ ಸಹಿತಸ್ತದಾ ॥ ೨೮ ॥

ಅಸಿತನು ಅಲ್ಪಬಲ. ಮಂತ್ರಿಗಳೊಂದಿಗೆ ಹಿಮಾಲಯಕ್ಕೆ ಹೋಗಿ ಭೃಗು ತುಂದದಲ್ಲಿ ವಾಸ ಮಾಡಿದ.

ದ್ವೇ ಚಾಸ್ಯ ಭಾರ್ಯೇ ಗರ್ಭಿಣ್ಯೌ ಬಭೂವತುರಿತಿ ಶ್ರುತಮ್ ।
ಏಕಾ ಗರ್ಭವಿನಾಶಾಯ ಸಪತ್ನ್ಯೈ ಸಗರಂ ದದೌ ॥ ೨೯ ॥

ಅಸಿತನಿಗೆ ಇಬ್ಬರು ಹೆಂಡಂದಿರು ಇಬ್ಬರೂ ಗರ್ಭಿಣಿಯರಾಗಿದ್ದರೆಂದು ಕೇಳಿದ್ದೇವೆ. ಅವರಲ್ಲಿ ಒಬ್ಬಳು ಸವತಿಯಾದ ಕಾಲಿಂದಿಯ ಗರ್ಭನಾಶಕ್ಕಾಗಿ ವಿಷಯುಕ್ತವಾದ ಭಕ್ಷ್ಯವನ್ನು ತಿನ್ನಿಸಿದಳು.

ತತಃ ಶೈಲವರಂ ರಮ್ಯಂ ಬಭೂವಾಭಿರತೋ ಮುನಿಃ ।
ಭಾರ್ಗವಶ್ಚ್ಯವನೋ ನಾಮ ಹಿಮವಂತಮುಪಾಶ್ರಿತಃ ॥ ೩೦ ॥

ಆ ಕಾಲದಲ್ಲಿ ಹಿಮಾಲಯದ ಭೃಗುತುಂದ ಶಿಖರದಲ್ಲಿ, ಭೃಗುವಂಶದಲ್ಲಿ ಬಂದ ಚ್ಯವನಮುನಿಯು ನಮ್ಮ ವಂಶಿಕರ ವಾಸಸ್ಥಾನವೆಂದು ಅಭಿಮಾನದಿಂದ ವಾಸ ಮಾಡುತ್ತಿದ್ದ.

ತತ್ಪತ್ನೀಕಾ ತು ಮಹಾಭಾಗಾ ಭಾರ್ಗವಂ ದೇವವರ್ಚಸಮ್ ।
ವವಂದೇ ಪದ್ಮಪತ್ರಾಕ್ಷೀ ಕಾಂಕ್ಷಂತೀ ಸುತಮಾತ್ಮನಃ ॥ ೩೧ ॥

ಅಸಿತ ಪತ್ನಿಯರಲ್ಲಿ ಒಬ್ಬಳು ಕಮಲನಯನೆ, ಮಹಾಭಾಗ್ಯವತಿ ಕಾಲಿಂದಿಯು ದೇವವರ್ಚಸ್ವಿಯಾದ ಭಾರ್ಗವ ಚ್ಯವನ ಮುನಿಯನ್ನು, ತನಗೆ ಗಂಡು ಮಗುವೇ ಆಗಬೇಕೆಂದು ಬಯಸಿ, ವಂದಿಸಿದಳು.

ತಮೃಷಿಂ ಸಾಭ್ಯುಪಾಗಮ್ಯ ಕಾಲಿಂದೀ ಚಾಭ್ಯವಾದಯತ್ ।
ಸ ತಾಮಭ್ಯವದದ್ವಿಪ್ರಃ ಪುತ್ರೇಪ್ಸುಂ ಪುತ್ರಜನ್ಮನಿ ॥ ೩೨ ॥

ಆ ಮುನಿಯನ್ನು ಕಾಲಿಂದಿ ಸೇವಿಸಿ ನಮಿಸಿದಳು. ಗಂಡುಮಗುವೇ

ಆಗಬೇಕೆಂದು ಬಯಸಿದ್ದ ಅವಳಿಗೆ ಮುನಿ, ಗಂಡುಮಗುವಿನ ಜನನವೇ ಆಗುವುದು ಎಂದನು.

ತವ ಕುಕ್ಷೌ ಮಹಾಭಾಗೇ ಸುಪುತ್ರಃ ಸುಮಹಾಬಲಃ ।
ಮಹಾವೀರ್ಯೋ ಮಹಾತೇಜಾ ಅಚಿರಾತ್ಸಂಜನಿಷ್ಯತಿ ॥
ಗರೇಣ ಸಹಿತಃ ಶ್ರೀಮಾನ್ಮಾ ಶುಚಃ ಕಮಲೇಕ್ಷಣೇ ॥ ೩೩ ॥

ಮಹಾಭಾಗ್ಯಶಾಲಿನಿಯೆ, ನಿನ್ನ ಹೊಟ್ಟೆಯಲ್ಲಿ ಮಹಾಬಲಶಾಲಿಯಾದ ಮಹಾವೀರ್ಯನೂ ಮಹಾತೇಜನೂ ಆದ ಸುಪುತ್ರನೇ ಬೇಗನೆ ಜನಿಸುತ್ತಾನೆ, ಕಮಲದಂತೆ ಕಣ್ಣಿನವಳೆ, ಶೋಕಿಸಬೇಡ, 'ಗರ'ದಿಂದ, ವಿಷದಿಂದ ಯುಕ್ತನಾಗಿಯೆ, 'ಸಗರ'ನಾಗಿಯೇ 'ಶ್ರೀಮಾನ್' ಕಾಂತಿಯುಕ್ತನಾಗಿ ಪುತ್ರನು ಜನಿಸುತ್ತಾನೆ ಎಂದನು ಚ್ಯವನ ಮುನಿ.

ಏವಮುಕ್ತಾ ಮಹಾಭಾಗ ಅಸಿತೇ ಸ್ವರ್ಗತೇ ಸತಿ ।
ನಿಧಾಯ ಚೇತೋ ನೃಪತೌ ವಿದ್ಯುಲ್ಲೇಖೇವ ಸುಪ್ರಭಾ ॥ ೩೪ ॥

ವಸಿಷ್ಠರು ಹೇಳಿದರು, ಮಹಾಭಾಗ್ಯಶಾಲಿ ಜನಕರಾಜನೆ, ಬಳಿಕ ಅಸಿತರಾಜನು ಸ್ವರ್ಗಸ್ಥನಾದ. ಕಾಲಿಂದೀ ದೇವಿ ಮಿಂಚಿನ ಬಳ್ಳಿಯಂತೆ ಹೊಳೆಯುತ್ತ, ಸ್ವರ್ಗಸ್ಥ-ನಾದ ಅಸಿತರಾಜನನ್ನೇ ನೆನೆದಳು.

ಚ್ಯವನಂ ತು ನಮಸ್ಕೃತ್ಯ ರಾಜಪುತ್ರೀ ಪತಿವ್ರತಾ ।
ಪತಿಶೋಕಾತುರಾ ತಸ್ಮಾತ್ಪುತ್ರಂ ದೇವೀ ವ್ಯಜಾಯತ ॥ ೩೫ ॥

ಪರಿವ್ರತೆಯಾದ ರಾಜಕುಮಾರಿ ಕಾಲಿಂದಿದೇವಿಯು ಪತಿಶೋಕಾತುರಳಾಗಿ ಚ್ಯವನ ಮುನಿಯನ್ನು ನಮಿಸಿ ಪುತ್ರನಿಗೆ ಜನ್ಮವಿತ್ತಳು.

ಸಪತ್ನ್ಯಾ ತು ಗರಸ್ತಸ್ಯೈ ದತ್ತೋ ಗರ್ಭಜಿಘಾಂಸಯಾ ।
ಸಹ ತೇನ ಗರೇಣೈವ ಜಾತಃ ಸ ಸಗರೋಽಭವತ್ ॥ ೩೬ ॥

ಹೀಗೆ ಸವತಿಯು ಗರ್ಭನಾಶಕ್ಕಾಗಿ ವಿಷವನ್ನು ಕೊಟ್ಟರೂ ಆ ವಿಷದಿಂದ ಯುಕ್ತನಾಗಿಯೇ ಜನಿಸಿದ್ದರಿಂದ ಸಗರನು 'ಸಗರ'ನೆನಿಸಿದನು.

ಸಗರಸ್ಯಾಸಮಂಜಸ್ತು ಅಸಮಂಜಾತ್ತಥಾಂಶುಮಾನ್ ।
ದಿಲೀಪೋಽಂಶುಮತಃ ಪುತ್ರೋ ದಿಲೀಪಸ್ಯ ಭಗೀರಥಃ ॥

ಭಗೀರಥಾತ್ಕಕುತ್ಸ್ಥಶ್ಚ ಕಕುತ್ಸ್ಥಸ್ಯ ರಘುಃ ಸುತಃ ॥ ೩೭ ॥

ಸಗರನ ಪುತ್ರನು ಅಸಂಮಜ. ಅಸಮಂಜನಿಂದ ಅಂಶುಮಾನ್ ಜನಿಸಿದ. ಅಂಶುಮಂತನ ಪುತ್ರನು ದಿಲೀಪ. ದಿಲೀಪನ ಪುತ್ರ ಭಗೀರಥ. ಭಗೀರಥನಿಂದ ಕಕುಸ್ಥ ಜನಿಸಿದ. ಕಕುಸ್ಥನ ಪುತ್ರನು ರಘು.

ರಘೋಸ್ತು ಪುತ್ರಸ್ತೇಜಸ್ವೀ ಪ್ರವೃದ್ಧಃ ಪುರುಷಾದಕಃ ।
ಕಲ್ಮಾಷಪಾದೋ ಹ್ಯಭವತ್ತಸ್ಮಾಜ್ಜಾತಶ್ಚ ಶಂಖಣಃ ॥ ೩೮ ॥

ರಘುವಿನ ಪುತ್ರನು ತೇಜಸ್ವಿ, ಮೊದಲಿಗೆ 'ಪ್ರವೃದ್ಧ' ಎನಿಸಿದ್ದ. ಬಳಿಕ ವಸಿಷ್ಠ ಶಾಪದಿಂದ 'ಪುರುಷಾದಕ,' ನರಭಕ್ಷಕ ರಾಕ್ಷಸನಾದ. ವಸಿಷ್ಠರಿಗೆ ಶಾಪ ಕೊಡಲು ಎತ್ತಿಕೊಂಡ ನೀರನ್ನು ಪತ್ನಿಯ ಪ್ರಾರ್ಥನೆಯಂತೆ ತನ್ನ ಪಾದಗಳಿಗೇ ಎರೆದು-ಕೊಂಡಿದ್ದರಿಂದ 'ಕಲ್ಮಾಷಪಾದ'ನೆನಿಸಿದ. ಅವನಿಂದ ಶಂಖಣನು ಜನಿಸಿದ.

ಸುದರ್ಶನಃ ಶಂಖಣಸ್ಯ ಅಗ್ನಿವರ್ಣಃ ಸುದರ್ಶನಾತ್ ।
ಶೀಘ್ರಗಸ್ತ್ವಗ್ನಿವರ್ಣಸ್ಯ ಶೀಘ್ರಗಸ್ಯ ಮರುಃ ಸುತಃ ॥
ಮರೋಃ ಪ್ರಶುಶ್ರುಕಸ್ತ್ವಾಸೀದಂಬರೀಷಃ ಪ್ರಶುಶ್ರುಕಾತ್ ॥ ೩೯ ॥

ಶಂಖಣನ ಪುತ್ರ ಸುದರ್ಶನ. ಸುದರ್ಶನನಿಂದ ಅಗ್ನಿವರ್ಣ ಜನಿಸಿದ. ಅಗ್ನಿ-ವರ್ಣನ ಪುತ್ರನು ಶೀಘ್ರಗ. ಶೀಘ್ರಗನ ಪುತ್ರ ಮರು. ಮರುವಿನ ಪುತ್ರನು ಪ್ರಶುಶ್ರುಕ. ಪ್ರಶುಶ್ರುಕನಿಂದ ಅಂಬರೀಷನು ಜನಿಸಿದ.

ಅಂಬರೀಷಸ್ಯ ಪುತ್ರೋಽಭೂನ್ನಹುಷಃ ಪೃಥಿವೀಪತಿಃ ।
ನಹುಷಸ್ಯ ಯಯಾತಿಶ್ಚ ನಾಭಾಗಸ್ತು ಯಯಾತಿಜಃ ॥ ೪೦ ॥

ಅಂಬರೀಷನ ಪುತ್ರನು ರಾಜಾ ನಹುಷ. ನಹುಷನ ಪುತ್ರನು ಯಯಾತಿ. ಯಯಾತಿ ಪುತ್ರನು ನಾಭಾಗ. ಚಂದ್ರವಂಶದ ನಹುಷ ಯಯಾತಿಗಳಿಗಿಂತ ಇವರು ಬೇರೆ ಎಂದು ತಿಳಿಯಬೇಕು.

ನಾಭಾಗಸ್ಯ ಬಭೂವಾಜೋ ಅಜಾದ್ದಶರಥೋಽಭವತ್ ।
ಅಸ್ಮಾದ್ದಶರಥಾಜ್ಜಾತೌ ಭ್ರಾತರೌ ರಾಮಲಕ್ಷ್ಮಣೌ ॥ ೪೧ ॥

ನಾಭಾಗನ ಪುತ್ರನು ಅಜ. ಅಜನಿಂದ ದಶರಥನು ಜನಿಸಿದ್ದಾನೆ. ಈ ದಶರಥನಿಂದ ರಾಮ ಲಕ್ಷ್ಮಣರು ಜನಿಸಿದ್ದಾರೆ.

ಆದಿವಂಶವಿಶುದ್ಧಾನಾಂ ರಾಜ್ಞಾಂ ಪರಮಧರ್ಮಿಣಾಮ್ ।
ಇಕ್ಷ್ವಾಕುಕುಲಜಾತಾನಾಂ ವೀರಾಣಾಂ ಸತ್ಯವಾದಿನಾಮ್ ॥ ೪೨ ॥

ರಾಮಲಕ್ಷ್ಮಣಯೋರರ್ಥೇ ತ್ವತ್ಸುತೇ ವರಯೇ ನೃಪ ।
ಸದೃಶಾಭ್ಯಾಂ ನರಶ್ರೇಷ್ಠ ಸದೃಶೇ ದಾತುಮರ್ಹಸಿ ॥ ೪೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಸಪ್ತತಿತಮಃ ಸರ್ಗಃ ॥ ೭೦ ॥

ಆದಿಯಿಂದ ಬ್ರಹ್ಮದೇವನಿಂದಾರಂಭಿಸಿ ಶುದ್ಧವಾದ ವಂಶದಲ್ಲಿ ಬಂದಿರುವ ಪರಮ ಧಾರ್ಮಿಕರೂ ಸತ್ಯವಾದಿಗಳೂ ಆಗಿರುವ ಇಕ್ಷ್ವಾಕು ಕುಲ ಸಂಜಾತರಾದ ವೀರರಾಜರ ಸಂಬಂಧಿಗಳು ಈ ರಾಮಲಕ್ಷ್ಮಣರು, ಜನಕ ಮಹಾರಾಜ! ಇವರಿಗಾಗಿ ನಾನು ನಿನ್ನ ಮಕ್ಕಳನ್ನು ವರಣ ಮಾಡುತ್ತೇನೆ. ರಾಜನೆ, ಅನುರೂಪರಾದ ಇಬ್ಬರು ವರರಿಗೆ ಅನುರೂಪರಾದ ಇಬ್ಬರು ಕನ್ಯೆಯರನ್ನು ನೀಡು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಎಪ್ಪತ್ತನೇ ಸರ್ಗ ಮುಗಿಯಿತು.

ಏಕಸಪ್ತತಿತಮಃ ಸರ್ಗಃ

ಏವಂ ಬ್ರುವಾಣಂ ಜನಕಃ ಪ್ರತ್ಯುವಾಚ ಕೃತಾಂಜಲಿಃ ।
ಶ್ರೋತುಮರ್ಹಸಿ ಭದ್ರಂ ತೇ ಕುಲಂ ನಃ ಪರಿಕೀರ್ತಿತಮ್ ॥ ೧ ॥

ಹೀಗೆ ವಸಿಷ್ಠರು ಹೇಳಿದಾಗ ಜನಕರಾಜನು ಕೈಮುಗಿದು ಪ್ರತಿಯಾಗಿ ಹೇಳಿದ. 'ಮುನಿಶ್ರೇಷ್ಠನೆ, ನಮ್ಮ ಕುಲಶುದ್ಧಿಯನ್ನು ಹೇಳುತ್ತೇನೆ, ಕೇಳು, ನಿನಗೆ ಶುಭವಾಗಲಿ.

ಪ್ರದಾನೇ ಹಿ ಮುನಿಶ್ರೇಷ್ಠ ಕುಲಂ ನಿರವಶೇಷತಃ ।
ವಕ್ತವ್ಯಂ ಕುಲಜಾತೇನ ತನ್ನಿಬೋಧ ಮಹಾಮುನೇ ॥ ೨ ॥

ಮುನಿಶ್ರೇಷ್ಠನೆ! ಸತ್ಕುಲಜಾತನಾದ ನಾನು ಕನ್ಯಾದಾನ ಕಾಲದಲ್ಲಿ ನನ್ನ ಕುಲದ ಬಗ್ಗೆ ಪೂರ್ತಿಯಾಗಿ ಹೇಳಬೇಕು. ಮಹಾಮುನಿಯೆ, ಅದನ್ನು ಕೇಳು.

ರಾಜಾಭೂತ್ ತ್ರಿಷು ಲೋಕೇಷು ವಿಶ್ರುತಃ ಸ್ವೇನ ಕರ್ಮಣಾ ।
ನಿಮಿಃ ಪರಮಧರ್ಮಾತ್ಮಾ ಸರ್ವಸತ್ವವತಾಂ ವರಃ ॥ ೩ ॥

ತನ್ನ ಉದಾತ್ತಕರ್ಮದಿಂದ ಲೋಕಪ್ರಸಿದ್ಧನಾದ ನಿಮಿ ಎಂಬ ರಾಜನಿದ್ದ. ಅವನು ಪರಮ ಧರ್ಮಾತ್ಮ. ಎಲ್ಲ ಬಲಿಷ್ಠರಲ್ಲಿ ಶ್ರೇಷ್ಠನಾಗಿದ್ದ.

ತಸ್ಯ ಪುತ್ರೋ ಮಿಥಿರ್ನಾಮ ಮಿಥಿಲಾ ಯೇನ ನಿರ್ಮಿತಾ ।
ಪ್ರಥಮೋ ಜನಕೋ ನಾಮ ಜನಕಾದಪ್ಯುದಾವಸುಃ ॥ ೪ ॥

ಅವನ ಪುತ್ರನು ಮಿಥಿ. ಅವನಿಂದ ಮಿಥಿಲಾನಗರಿ ನಿರ್ಮಿತವಾಯಿತು. ಮತ್ತು ಅವನೇ ಮೊದಲಿನ ಜನಕ. ಅವನಿಂದಾರಂಭಿಸಿ ಮುಂದೆ ನಾವೆಲ್ಲರೂ ಜನಕರಾಜರೆನಿಸಿದೆವು. ಆ ಜನಕನಿಂದ ಉದಾವಸು ಜನಿಸಿದ.

ಉದಾವಸೋಸ್ತು ಧರ್ಮಾತ್ಮಾ ಜಾತೋ ವೈ ನಂದಿವರ್ಧನಃ ।
ನಂದಿವರ್ಧನಪುತ್ರಸ್ತು ಸುಕೇತುರ್ನಾಮ ನಾಮತಃ ॥ ೫ ॥

ಉದಾವಸುವಿನಿಂದ ಧರ್ಮಾತ್ಮನಾದ ನಂದಿವರ್ಧನನು ಜನಿಸಿದ. ನಂದಿವರ್ಧನನ ಪುತ್ರನು ಸುಕೇತು ಎಂದು ಪ್ರಸಿದ್ಧನಾಗಿದ್ದ.

ಸುಕೇತೋರಪಿ ಧರ್ಮಾತ್ಮಾ ದೇವರಾತೋ ಮಹಾಬಲಃ ।
ದೇವರಾತಸ್ಯ ರಾಜರ್ಷೇರ್ಬೃಹದ್ರಥ ಇತಿ ಸ್ಮೃತಃ ॥ ೬ ॥

ಸುಕೇತುವಿನಿಂದ ಧರ್ಮಾತ್ಮ ಮಹಾಬಲನಾದ ದೇವರಾತನು ಜನಿಸಿದ. ದೇವರಾತ ರಾಜರ್ಷಿಯ ಪುತ್ರನು ಬೃಹದ್ರಥನೆಂದು ಪ್ರಸಿದ್ಧನಾಗಿದ್ದ.

ಬೃಹದ್ರಥಸ್ಯ ಶೂರೋಽಭೂನ್ಮಹಾವೀರಃ ಪ್ರತಾಪವಾನ್ ।
ಮಹಾವೀರಸ್ಯ ಧೃತಿಮಾನ್ಸುಧೃತಿಃ ಸತ್ಯವಿಕ್ರಮಃ ॥ ೭ ॥

ಬೃಹದ್ರಥನ ಪುತ್ರನು ಶೂರನಾದ ಪ್ರತಾಪಶಾಲಿಯಾದ ಮಹಾವೀರ. ಮಹಾವೀರನ ಪುತ್ರನು ಧೈರ್ಯಶಾಲಿ ಸತ್ಯಪರಾಕ್ರಮಿಯಾದ ಸುಧೃತಿ.

ಸುಧೃತೇರಪಿ ಧರ್ಮಾತ್ಮಾ ಧೃಷ್ಟಕೇತುಃ ಸುಧಾರ್ಮಿಕಃ ।
ಧೃಷ್ಟಕೇತೋಸ್ತು ರಾಜರ್ಷೇರ್ಹರ್ಯಶ್ವ ಇತಿ ವಿಶ್ರುತಃ ॥ ೮ ॥

ಸುಧೃತಿಯ ಪುತ್ರನು ಧರ್ಮಾತ್ಮ ಸುಧಾರ್ಮಿಕನಾದ ಧೃಷ್ಟಕೇತು. ಧೃಷ್ಟಕೇತು ರಾಜರ್ಷಿಯ ಪುತ್ರನು ಹರ್ಯಶ್ವ ಎಂದು ಪ್ರಸಿದ್ಧನಾಗಿದ್ದ.

ಹರ್ಯಶ್ವಸ್ಯ ಮರುಃ ಪುತ್ರೋ ಮರೋಃ ಪುತ್ರಃ ಪ್ರತಿಂಧಕಃ ।
ಪ್ರತಿಂಧಕಸ್ಯ ಧರ್ಮಾತ್ಮಾ ರಾಜಾ ಕೀರ್ತಿರಥಃ ಸುತಃ ॥ ೯ ॥

ಹರ್ಯಶ್ವನ ಪುತ್ರನು ಮರು. ಮರುವಿನ ಪುತ್ರನು ಪ್ರತಿಂಧಕ. ಪ್ರತಿಂಧಕನ ಪುತ್ರನು ಧರ್ಮಾತ್ಮನಾದ ರಾಜಾ ಕೀರ್ತಿರಥ.

ಪುತ್ರಃ ಕೀರ್ತಿರಥಸ್ಯಾಪಿ ದೇವಮೀಢ ಇತಿ ಸ್ಮೃತಃ ।
ದೇವಮೀಢಸ್ಯ ವಿಬುಧೋ ವಿಬುಧಸ್ಯ ಮಹೀಧ್ರಕಃ ॥ ೧೦ ॥

ಕೀರ್ತಿರಥನ ಪುತ್ರನು ದೇವಮೀಢನೆಂದು ಪ್ರಸಿದ್ಧನಾಗಿದ್ದ. ದೇವಮೀಢನ ಪುತ್ರನು ವಿಬುಧ. ವಿಬುಧನ ಪುತ್ರನು ಮಹೀಧ್ರಕ.

ಮಹೀಧ್ರಕಸುತೋ ರಾಜಾ ಕೀರ್ತಿರಾತೋ ಮಹಾಬಲಃ ।
ಕೀರ್ತಿರಾತಸ್ಯ ರಾಜರ್ಷೇರ್ಮಹಾರೋಮಾ ವ್ಯಜಾಯತ ॥ ೧೧ ॥

ಮಹೀಧ್ರಕನ ಪುತ್ರನು ಮಹಾಬಲಿಯಾದ ರಾಜಾ ಕೀರ್ತಿರಾತ. ಕೀರ್ತಿರಾತ ರಾಜರ್ಷಿಗೆ ಪುತ್ರನಾಗಿ ಮಹಾರೋಮನು ಜನಿಸಿದ.

ಏಕಸಪ್ತತಿತಮಃ ಸರ್ಗಃ

ಏವಂ ಬ್ರುವಾಣಂ ಜನಕಃ ಪ್ರತ್ಯುವಾಚ ಕೃತಾಂಜಲಿಃ ।
ಶ್ರೋತುಮರ್ಹಸಿ ಭದ್ರಂ ತೇ ಕುಲಂ ನಃ ಪರಿಕೀರ್ತಿತಮ್ ॥ ೧ ॥

ಹೀಗೆ ವಸಿಷ್ಠರು ಹೇಳಿದಾಗ ಜನಕರಾಜನು ಕೈಮುಗಿದು ಪ್ರತಿಯಾಗಿ ಹೇಳಿದ. 'ಮುನಿಶ್ರೇಷ್ಠನೆ, ನಮ್ಮ ಕುಲಶುದ್ಧಿಯನ್ನು ಹೇಳುತ್ತೇನೆ, ಕೇಳು, ನಿನಗೆ ಶುಭವಾಗಲಿ.

ಪ್ರದಾನೇ ಹಿ ಮುನಿಶ್ರೇಷ್ಠ ಕುಲಂ ನಿರವಶೇಷತಃ ।
ವಕ್ತವ್ಯಂ ಕುಲಜಾತೇನ ತನ್ನಿಬೋಧ ಮಹಾಮುನೇ ॥ ೨ ॥

ಮುನಿಶ್ರೇಷ್ಠನೆ! ಸತ್ಕುಲಜಾತನಾದ ನಾನು ಕನ್ಯಾದಾನ ಕಾಲದಲ್ಲಿ ನನ್ನ ಕುಲದ ಬಗ್ಗೆ ಪೂರ್ತಿಯಾಗಿ ಹೇಳಬೇಕು. ಮಹಾಮುನಿಯೆ, ಅದನ್ನು ಕೇಳು.

ರಾಜಾಭೂತ್ ತ್ರಿಷು ಲೋಕೇಷು ವಿಶ್ರುತಃ ಸ್ವೇನ ಕರ್ಮಣಾ ।
ನಿಮಿಃ ಪರಮಧರ್ಮಾತ್ಮಾ ಸರ್ವಸತ್ವವತಾಂ ವರಃ ॥ ೩ ॥

ತನ್ನ ಉದಾತ್ತಕರ್ಮದಿಂದ ಲೋಕಪ್ರಸಿದ್ಧನಾದ ನಿಮಿ ಎಂಬ ರಾಜನಿದ್ದ. ಅವನು ಪರಮ ಧರ್ಮಾತ್ಮ. ಎಲ್ಲ ಬಲಿಷ್ಠರಲ್ಲಿ ಶ್ರೇಷ್ಠನಾಗಿದ್ದ.

ತಸ್ಯ ಪುತ್ರೋ ಮಿಥಿರ್ನಾಮ ಮಿಥಿಲಾ ಯೇನ ನಿರ್ಮಿತಾ ।
ಪ್ರಥಮೋ ಜನಕೋ ನಾಮ ಜನಕಾದಪ್ಯುದಾವಸುಃ ॥ ೪ ॥

ಅವನ ಪುತ್ರನು ಮಿಥಿ. ಅವನಿಂದ ಮಿಥಿಲಾನಗರಿ ನಿರ್ಮಿತವಾಯಿತು. ಮತ್ತು ಅವನೇ ಮೊದಲಿನ ಜನಕ. ಅವನಿಂದಾರಂಭಿಸಿ ಮುಂದೆ ನಾವೆಲ್ಲರೂ ಜನಕರಾಜರೆನಿಸಿದೆವು. ಆ ಜನಕನಿಂದ ಉದಾವಸು ಜನಿಸಿದ.

ಉದಾವಸೋಸ್ತು ಧರ್ಮಾತ್ಮಾ ಜಾತೋ ವೈ ನಂದಿವರ್ಧನಃ ।
ನಂದಿವರ್ಧನಪುತ್ರಸ್ತು ಸುಕೇತುರ್ನಾಮ ನಾಮತಃ ॥ ೫ ॥

ಉದಾವಸುವಿನಿಂದ ಧರ್ಮಾತ್ಮನಾದ ನಂದಿವರ್ಧನನು ಜನಿಸಿದ. ನಂದಿವರ್ಧನನ ಪುತ್ರನು ಸುಕೇತು ಎಂದು ಪ್ರಸಿದ್ಧನಾಗಿದ್ದ.

ಸುಕೇತೋರಪಿ ಧರ್ಮಾತ್ಮಾ ದೇವರಾತೋ ಮಹಾಬಲಃ ।
ದೇವರಾತಸ್ಯ ರಾಜರ್ಷೇರ್ಬೃಹದ್ರಥ ಇತಿ ಸ್ಮೃತಃ ॥ ೬ ॥

ಸುಕೇತುವಿನಿಂದ ಧರ್ಮಾತ್ಮ ಮಹಾಬಲನಾದ ದೇವರಾತನು ಜನಿಸಿದ. ದೇವರಾತ ರಾಜರ್ಷಿಯ ಪುತ್ರನು ಬೃಹದ್ರಥನೆಂದು ಪ್ರಸಿದ್ಧನಾಗಿದ್ದ.

ಬೃಹದ್ರಥಸ್ಯ ಶೂರೋऽಭೂನ್ಮಹಾವೀರಃ ಪ್ರತಾಪವಾನ್ ।
ಮಹಾವೀರಸ್ಯ ಧೃತಿಮಾನ್ಸುಧೃತಿಃ ಸತ್ಯವಿಕ್ರಮಃ ॥ ೭ ॥

ಬೃಹದ್ರಥನ ಪುತ್ರನು ಶೂರನಾದ ಪ್ರತಾಪಶಾಲಿಯಾದ ಮಹಾವೀರ. ಮಹಾವೀರನ ಪುತ್ರನು ಧೈರ್ಯಶಾಲಿ ಸತ್ಯಪರಾಕ್ರಮಿಯಾದ ಸುಧೃತಿ.

ಸುಧೃತೇರಪಿ ಧರ್ಮಾತ್ಮಾ ಧೃಷ್ಟಕೇತುಃ ಸುಧಾರ್ಮಿಕಃ ।
ಧೃಷ್ಟಕೇತೋಸ್ತು ರಾಜರ್ಷೇರ್ಹರ್ಯಶ್ವ ಇತಿ ವಿಶ್ರುತಃ ॥ ೮ ॥

ಸುಧೃತಿಯ ಪುತ್ರನು ಧರ್ಮಾತ್ಮ ಸುಧಾರ್ಮಿಕನಾದ ಧೃಷ್ಟಕೇತು. ಧೃಷ್ಟಕೇತು ರಾಜರ್ಷಿಯ ಪುತ್ರನು ಹರ್ಯಶ್ವ ಎಂದು ಪ್ರಸಿದ್ಧನಾಗಿದ್ದ.

ಹರ್ಯಶ್ವಸ್ಯ ಮರುಃ ಪುತ್ರೋ ಮರೋಃ ಪುತ್ರಃ ಪ್ರತಿಂಧಕಃ ।
ಪ್ರತಿಂಧಕಸ್ಯ ಧರ್ಮಾತ್ಮಾ ರಾಜಾ ಕೀರ್ತಿರಥಃ ಸುತಃ ॥ ೯ ॥

ಹರ್ಯಶ್ವನ ಪುತ್ರನು ಮರು. ಮರುವಿನ ಪುತ್ರನು ಪ್ರತಿಂಧಕ. ಪ್ರತಿಂಧಕನ ಪುತ್ರನು ಧರ್ಮಾತ್ಮನಾದ ರಾಜಾ ಕೀರ್ತಿರಥ.

ಪುತ್ರಃ ಕೀರ್ತಿರಥಸ್ಯಾಪಿ ದೇವಮೀಢ ಇತಿ ಸ್ಮೃತಃ ।
ದೇವಮೀಢಸ್ಯ ವಿಬುಧೋ ವಿಬುಧಸ್ಯ ಮಹೀಧ್ರಕಃ ॥ ೧೦ ॥

ಕೀರ್ತಿರಥನ ಪುತ್ರನು ದೇವಮೀಢನೆಂದು ಪ್ರಸಿದ್ಧನಾಗಿದ್ದ. ದೇವಮೀಢನ ಪುತ್ರನು ವಿಬುಧ. ವಿಬುಧನ ಪುತ್ರನು ಮಹೀಧ್ರಕ.

ಮಹೀಧ್ರಕಸುತೋ ರಾಜಾ ಕೀರ್ತಿರಾತೋ ಮಹಾಬಲಃ ।
ಕೀರ್ತಿರಾತಸ್ಯ ರಾಜರ್ಷೇರ್ಮಹಾರೋಮಾ ವ್ಯಜಾಯತ ॥ ೧೧ ॥

ಮಹೀಧ್ರಕನ ಪುತ್ರನು ಮಹಾಬಲಿಯಾದ ರಾಜಾ ಕೀರ್ತಿರಾತ. ಕೀರ್ತಿರಾತ ರಾಜರ್ಷಿಗೆ ಪುತ್ರನಾಗಿ ಮಹಾರೋಮನು ಜನಿಸಿದ.

ಮಹಾರೋಮ್ಣಸ್ತು ಧರ್ಮಾತ್ಮಾ ಸ್ವರ್ಣರೋಮಾ ವ್ಯಜಾಯತ ।
ಸ್ವರ್ಣರೋಮ್ಣಸ್ತು ರಾಜರ್ಷೇರ್ಹ್ರಸ್ವರೋಮಾ ವ್ಯಜಾಯತ ॥ ೧೨ ॥

ಮಹಾರೋಮನಿಗೆ ಪುತ್ರನಾಗಿ ಧರ್ಮಾತ್ಮ ಸ್ವರ್ಣರೋಮನು ಜನಿಸಿದ. ಸ್ವರ್ಣರೋಮ ರಾಜರ್ಷಿಗೆ ಪುತ್ರನಾಗಿ ಹ್ರಸ್ವರೋಮನು ಜನಿಸಿದ.

ತಸ್ಯ ಪುತ್ರದ್ವಯಂ ಜಜ್ಞೇ ಧರ್ಮಜ್ಞಸ್ಯ ಮಹಾತ್ಮನಃ ।
ಜ್ಯೇಷ್ಠೋಽಹಮನುಜೋ ಭ್ರಾತಾ ಮಮ ವೀರಃ ಕುಶಧ್ವಜಃ ॥ ೧೩ ॥

ಧರ್ಮಜ್ಞನಾದ ಮಹಾತ್ಮ ಹ್ರಸ್ವರೋಮನಿಗೆ ಇಬ್ಬರು ಪುತ್ರರು ಜನಿಸಿದರು. ಅವರಲ್ಲಿ ಜ್ಯೇಷ್ಠನು ನಾನು. ನನ್ನ ಅನುಜ ಭ್ರಾತನು ವೀರನಾದ ಕುಶಧ್ವಜ.

ಮಾಂ ತು ಜ್ಯೇಷ್ಠಂ ಪಿತಾ ರಾಜ್ಯೇ ಸೋಽಭಿಷಿಚ್ಯ ನರಾಧಿಪಃ ।
ಕುಶಧ್ವಜಂ ಸಮಾವೇಶ್ಯ ಭಾರಂ ಮಯಿ ವನಂ ಗತಃ ॥ ೧೪ ॥

ನಮ್ಮ ಪಿತನು ಜ್ಯೇಷ್ಠನಾದ ನನ್ನನ್ನು ರಾಜ್ಯದಲ್ಲಿ ಅಭಿಷೇಕ ಮಾಡಿ, ರಾಜ್ಯ-ಭಾರವನ್ನೂ ಕುಶಧ್ವಜನ ರಕ್ಷಣೆಯ ಹೊಣೆಯನ್ನೂ ನನ್ನಲ್ಲಿ ಇರಿಸಿ ವಾನಪ್ರಸ್ಥವನ್ನು ಕೈಕೊಂಡನು.

ವೃದ್ಧೇ ಪಿತರಿ ಸ್ವರ್ಯಾತೇ ಧರ್ಮೇಣ ಧುರಮಾವಹಮ್ ।
ಭ್ರಾತರಂ ದೇವಸಂಕಾಶಂ ಸ್ನೇಹಾತ್ಪಶ್ಯನ್ಕುಶಧ್ವಜಮ್ ॥ ೧೫ ॥

ವೃದ್ಧನಾದ ಪಿತನು ಸ್ವರ್ಗಸ್ಥನಾದಾಗಿನಿಂದ ಧರ್ಮದಿಂದ ರಾಜ್ಯಭಾರ ಮಾಡುತ್ತ ದೇವತಾಪುರುಷನಂತಿರುವ ಈ ಅನುಜ ಕುಶಧ್ವಜನನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದೇನೆ.

ಕಸ್ಯಚಿತ್ ತ್ವಥ ಕಾಲಸ್ಯ ಸಾಂಕಾಶ್ಯಾದಾಗಮತ್ಪುರಾತ್ ।
ಸುಧನ್ವಾ ವೀರ್ಯವಾನ್ರಾಜಾ ಮಿಥಿಲಾಮವರೋಧಕಃ ॥ ೧೬ ॥

ಸ್ವಲ್ಪ ಕಾಲಾನಂತರ ಸಾಂಕಾಶ್ಯಪುರದಿಂದ ಸುಧನ್ವನೆಂಬ ವೀರ್ಯಶಾಲಿ ರಾಜನು ಮಿಥಿಲೆಯನ್ನು ವಶಪಡಿಸಿಕೊಳ್ಳಲು ಬಂದನು.

ಸ ಚ ಮೇ ಪ್ರೇಷಯಾಮಾಸ ಶೈವಂ ಧನುರನುತ್ತಮಮ್ ।
ಸೀತಾ ಕನ್ಯಾ ಚ ಪದ್ಮಾಕ್ಷೀ ಮಹ್ಯಂ ವೈ ದೀಯತಾಮಿತಿ ॥ ೧೭ ॥

ಅವನು ನನಗೆ ಹೇಳಿಕಳಿಸಿದ, 'ಉತ್ತಮವಾದ ಶಿವಧನುಸ್ಸನ್ನೂ ಕಮಲಾಕ್ಷಿಯಾದ ಕನ್ಯೆಸೀತೆಯನ್ನೂ ನನಗೆ ಕೊಡು' ಎಂದು.

ತಸ್ಯಾಪ್ರದಾನಾದ್ಬ್ರಹ್ಮರ್ಷೇ ಯುದ್ಧಮಾಸೀನ್ಮಯಾ ಸಹ ।
ಸ ಹತೋಽಭಿಮುಖೋ ರಾಜಾ ಸುಧನ್ವಾ ತು ಮಯಾ ರಣೇ॥ ೧೮ ॥

ನಾನು ಕೊಡದಿದ್ದರಿಂದ, ಬ್ರಹ್ಮರ್ಷಿಯೆ, ನನಗೂ ಅವನಿಗೂ ಯುದ್ಧ ನಡೆಯಿತು. ಯುದ್ಧದಲ್ಲಿ ನನ್ನನ್ನಿದಿರಿಸಿನಿಂತ ರಾಜಾ ಸುಧನ್ವನು ನನ್ನಿಂದ ಹತನಾದ.

ನಿಹತ್ಯ ತಂ ಮುನಿಶ್ರೇಷ್ಠ ಸುಧನ್ವಾನಂ ನರಾಧಿಪಮ್ ।
ಸಾಂಕಾಶ್ಯೇ ಭ್ರಾತರಂ ವೀರಮಭ್ಯಷಿಂಚಂ ಕುಶಧ್ವಜಮ್ ॥ ೧೯ ॥

ಮುನಿಶ್ರೇಷ್ಠನೆ! ರಾಜಾ ಸುಧನ್ವನನ್ನು ನಾನು ಕೊಂದು ಸಾಂಕಾಶ್ಯ ನಗರದಲ್ಲಿ ನನ್ನ ವೀರ ಅನುಜನಾದ ಕುಶಧ್ವಜನಿಗೆ ಅಭಿಷೇಕ ಮಾಡಿದೆ.

ಕನೀಯಾನೇಷ ಮೇ ಭ್ರಾತಾ ಅಹಂ ಜ್ಯೇಷ್ಠೋ ಮಹಾಮುನೇ ।
ದದಾಮಿ ಪರಮಪ್ರೀತೋ ವಧ್ವೌ ತೇ ಮುನಿಪುಂಗವ ॥
ಸೀತಾಂ ರಾಮಾಯ ಭದ್ರಂ ತೇ ಊರ್ಮಿಲಾಂ ಲಕ್ಷ್ಮಣಾಯ ಚ॥೨೦॥

ನನ್ನ ಅನುಜನಿನ್ನೂ ಸಣ್ಣವನು. ನಾನು ಜ್ಯೇಷ್ಠನು ಮಹಾಮುನಿಯೆ, ನಾನೇ ಇಬ್ಬರು ಕನ್ಯೆಯರನ್ನು ಪರಮ ಸಂತೋಷದಿಂದ ಕೊಡುತ್ತೇನೆ. ಮುನಿಶ್ರೇಷ್ಠನೆ! ನಿನಗೆ ಶುಭವಾಗಲಿ. ಸೀತೆಯನ್ನು ರಾಮನಿಗೂ ಊರ್ಮಿಳೆಯನ್ನು ಲಕ್ಷ್ಮಣನಿಗೂ ಕೊಡುತ್ತೇನೆ.

ವೀರ್ಯಶುಲ್ಕಾಂ ಮಮ ಸುತಾಂ ಸೀತಾಂ ಸುರಸುತೋಪಮಾಮ್ ।
ದ್ವಿತೀಯಾಮೂರ್ಮಿಲಾಂ ಚೈವ ತ್ರಿರ್ವದಾಮಿ ನ ಸಂಶಯಃ ॥ ೨೧ ॥

ವೀರ್ಯಶುಲ್ಕಕ್ಕೆ ಲಭ್ಯಳಾಗುವ ದೇವಕನ್ಯೆಯಂತಿರುವ ನನ್ನ ಮಗಳಾದ ಸೀತೆಯನ್ನೂ ಇನ್ನೊಬ್ಬಳು ಕನ್ಯೆಯಾದ ಊರ್ಮಿಳೆಯನ್ನೂ ಕೊಡುವೆನೆಂದು ಮೂರು ಬಾರಿ ಹೇಳುತ್ತೇನೆ, ಇದರಲ್ಲಿ ಸಂಶಯವಿಲ್ಲ.

ರಾಮಲಕ್ಷ್ಮಣಯೋ ರಾಜನ್ಗೋದಾನಂ ಕಾರಯಸ್ವ ಹ ।
ಪಿತೃಕಾರ್ಯಂ ಚ ಭದ್ರಂ ತೇ ತತೋ ವೈವಾಹಿಕಂ ಕುರು ॥ ೨೨ ॥

ರಾಮಲಕ್ಷ್ಮಣರಿಗೆ, ರಾಜನೆ! ನಿನಗೆ ಶುಭವಾಗಲಿ, ಸಮಾವರ್ತನವನ್ನೂ ಬಳಿಕ ವಿವಾಹೋಚಿತವಾದ ನಾಂದೀಮುಖಶ್ರಾದ್ಧವನ್ನೂ ಮಾಡಿಸು.

ಮಘಾ ಹ್ಯದ್ಯ ಮಹಾಬಾಹೋ ತೃತೀಯೇ ದಿವಸೇ ವಿಭೋ ।
ಫಲ್ಗುನ್ಯಾಮುತ್ತರೇ ರಾಜಂಸ್ತಸ್ಮಿನ್ವೈವಾಹಿಕಂ ಕುರು ॥
ರಾಮಲಕ್ಷ್ಮಣಯೋ ರಾಜನ್ ದಾನಂ ಕಾರ್ಯಂ ಸುಖೋದಯಮ್ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ ಬಾಲಕಾಂಡೇ ಏಕಸಪ್ತತಿತಮಃ ಸರ್ಗಃ ॥ ೭೧ ॥

ಮಹಾಬಾಹುವೆ! ರಾಜನೆ! ಇಂದು ಮಘಾನಕ್ಷತ್ರವಿದೆ. ಇನ್ನು ಮೂರನೆ ದಿನ ಉತ್ತರ ನಕ್ಷತ್ರದಲ್ಲಿ ವಿವಾಹಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಮಾಡು ರಾಜನೆ! ರಾಮಲಕ್ಷ್ಮಣರಿಗೆ ಮುಂದೆ ಸುಖಕ್ಕೆ ಕಾರಣವಾಗುವ ದಾನಗಳನ್ನು ನೀಡು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಎಪ್ಪತ್ತೊಂದನೆ ಸರ್ಗ ಮುಗಿಯಿತು.

ದ್ವಿಸಪ್ತತಿತಮಃ ಸರ್ಗಃ

ತಮುಕ್ತವಂತಂ ವೈದೇಹಂ ವಿಶ್ವಾಮಿತ್ರೋ ಮಹಾಮುನಿಃ ।
ಉವಾಚ ವಚನಂ ವೀರಂ ವಸಿಷ್ಠಸಹಿತೋ ನೃಪಮ್ ॥ ೧ ॥

ಹೀಗೆ ಹೇಳಿದ ವೀರ ವಿದೇಹರಾಜನಿಗೆ ವಸಿಷ್ಠ ವಿಶ್ವಾಮಿತ್ರರು ಹೇಳಿದರು.

ಅಚಿಂತ್ಯಾನ್ಯಪ್ರಮೇಯಾನಿ ಕುಲಾನಿ ನರಪುಂಗವ ।
ಇಕ್ಷ್ವಾಕೂಣಾಂ ವಿದೇಹಾನಾಂ ನೈಷಾಂ ತುಲ್ಯೋಽಸ್ತಿ ಕಶ್ಚನ ॥ ೨ ॥

ರಾಜನೆ, ಇಕ್ಷ್ವಾಕುರಾಜನ ಮತ್ತು ವಿದೇಹರಾಜರ ಕುಲಗಳು ಅಚಿಂತ್ಯ, ಅಪ್ರಮೇಯವಾಗಿವೆ. ಇವರಿಗೆ ಸಮರೇ ಇಲ್ಲ.

ಸದೃಶೋ ಧರ್ಮಸಂಬಂಧಃ ಸದೃಶೋ ರೂಪಸಂಪದಾ ।
ರಾಮಲಕ್ಷ್ಮಣಯೋ ರಾಜನ್ಸೀತಾ ಚೋರ್ಮಿಲಯಾ ಸಹ ॥
ವಕ್ತವ್ಯಂ ಚ ನರಶ್ರೇಷ್ಠ ಶ್ರೂಯತಾಂ ವಚನಂ ಮಮ ॥ ೩ ॥

ನಿಮ್ಮ ವಿವಾಹ ಸಂಬಂಧ ಅನುರೂಪವಾಗಿದೆ. ಮತ್ತು, ರಾಜನೆ, ರಾಮ-ಲಕ್ಷ್ಮಣರಿಗೆ ಸೀತಾ ಊರ್ಮಿಳೆಯರೊಡನೆ ವಿವಾಹವೂ ರೂಪಸಂಪತ್ತಿನಿಂದಲೂ ಅನುರೂಪವಾಗಿದೆ. ಇನ್ನು ಈ ವಿಷಯದಲ್ಲಿ ರಾಜನೆ! ನನ್ನ ಸಲಹೆಯನ್ನೂ ಕೇಳು.

ಭ್ರಾತಾ ಯವೀಯಾನ್ ಧರ್ಮಜ್ಞ ಏಷ ರಾಜಾ ಕುಶಧ್ವಜಃ ।
ಅಸ್ಯ ಧರ್ಮಾತ್ಮನೋ ರಾಜನ್ರೂಪೇಣಾಪ್ರತಿಮಂ ಭುವಿ ॥
ಸುತಾದ್ವಯಂ ನರಶ್ರೇಷ್ಠ ಪತ್ನ್ಯರ್ಥಂ ವರಯಾಮಹೇ ॥ ೪ ॥

ಭರತಸ್ಯ ಕುಮಾರಸ್ಯ ಶತ್ರುಘ್ನಸ್ಯ ಚ ಧೀಮತಃ ।
ವರಯಾಮಃ ಸುತೇ ರಾಜಂಸ್ತಯೋರರ್ಥೇ ಮಹಾತ್ಮನೋಃ ॥ ೫ ॥

ನಿನ್ನ ತಮ್ಮ ಈತ ರಾಜಾ ಕುಶಧ್ವಜನೂ ಧರ್ಮಜ್ಞ. ರಾಜನೆ, ಧರ್ಮಾತ್ಮನಾದ ಈತನ ಕನ್ಯೆಯರಿಬ್ಬರೂ ಭೂಮಿಯಲ್ಲಿ ಅಪ್ರತಿಮ ರೂಪ ಉಳ್ಳವರು. ಅವರನ್ನೂ ನಾವು ಧೀಮಂತನಾದ ಕುಮಾರ ಭರತನಿಗೂ ಶತ್ರುಘ್ನನಿಗೂ ದಾಂಪತ್ಯಕ್ಕಾಗಿ ವರಣ ಮಾಡುತ್ತೇವೆ. ಮಹಾತ್ಮರಾದ ಇಬ್ಬರಿಗೂ ಅವನ ಸುತೆಯರು ಪತ್ನಿಯರಾಗಲೆಂದು ವರಿಸುತ್ತೇವೆ.

ಪುತ್ರಾ ದಶರಥಸ್ಯೇಮೇ ರೂಪಯೌವನಶಾಲಿನಃ ।
ಲೋಕಪಾಲೋಪಮಾಃ ಸರ್ವೇ ದೇವತುಲ್ಯಪರಾಕ್ರಮಾಃ ॥ ೬ ॥

ದಶರಥನ ಪುತ್ರರು ಇವರು ನಾಲ್ವರು ಎಲ್ಲರೂ ರೂಪಯೌವನಶಾಲಿಗಳು, ಲೋಕಪಾಲರಂತಿರುವರು ದೇವತುಲ್ಯ ಪರಾಕ್ರಮಿಗಳು.

ಉಭಯೋರಪಿ ರಾಜೇಂದ್ರ ಸಂಬಂಧೇನಾನುಬಧ್ಯತಾಮ್ ।
ಇಕ್ಷ್ವಾಕೋಃ ಕುಲಮವ್ಯಗ್ರಂ ಭವತಃ ಪುಣ್ಯಕರ್ಮಣಃ ॥ ೭ ॥

ರಾಜಶ್ರೇಷ್ಠನೆ! ಪುಣ್ಯಕರ್ಮಕರನಾದ ನಿನ್ನ ಇಕ್ಷ್ವಾಕುಕುಲವು ನಿಮ್ಮಿಬ್ಬರ ವಿವಾಹ ಸಂಬಂಧದಿಂದ ಬೆಸೆದುಕೊಳ್ಳಲಿ. ಇದರ ಬಗ್ಗೆ ಏನೂ ಚಿಂತೆ ಬೇಡ.

ವಿಶ್ವಾಮಿತ್ರವಚಃ ಶ್ರುತ್ವಾ ವಸಿಷ್ಠಸ್ಯ ಮತೇ ತದಾ ।
ಜನಕಃ ಪ್ರಾಂಜಲಿರ್ವಾಕ್ಯಮುವಾಚ ಮುನಿಪುಂಗವೌ ॥ ೮ ॥

ವಸಿಷ್ಠನ ಸಮ್ಮತಿಯಿಂದ ವಿಶ್ವಾಮಿತ್ರನು ಹೇಳಿದ ಮಾತನ್ನು ಕೇಳಿ ಜನಕನು ಇಬ್ಬರು ಮುನಿಶ್ರೇಷ್ಠರಿಗೂ ಕೈಮುಗಿದು ಹೇಳಿದನು.

ಕುಲಂ ಧನ್ಯಮಿದಂ ಮನ್ಯೇ ಯೇಷಾಂ ನೋ ಮುನಿಪುಂಗವೌ ।
ಸದೃಶಂ ಕುಲಸಂಬಂಧಂ ಯದಾಜ್ಞಾಪಯಥಃ ಸ್ವಯಮ್ ॥ ೯ ॥

ಕುಲವು ಧನ್ಯವಾಯಿತೆಂದು ತಿಳಿಯುತ್ತೇನೆ. ಏಕೆಂದರೆ ಮುನಿಶ್ರೇಷ್ಠರಾದ ನೀವಿಬ್ಬರು ಸ್ವಯಂ ನಮಗೆ ಅನುರೂಪವಾದ ಕುಲ ಸಂಬಂಧವನ್ನು ಆಜ್ಞಾಪಿಸು-ತ್ತಿರುವಿರಿ.

ಏವಂ ಭವತು ಭದ್ರಂ ವಃ ಕುಶಧ್ವಜಸುತೇ ಇಮೇ ।
ಪತ್ನ್ಯೌ ಭಜೇತಾಂ ಸಹಿತೌ ಶತ್ರುಘ್ನಭರತಾವುಭೌ ॥ ೧೦ ॥

ನಿಮಗೆ ಶುಭವಾಗಲಿ. ಕುಶಧ್ವಜನ ಕನ್ಯೆಯರು ಇಬ್ಬರೂ ಕೂಡ ಜೊತೆಯಾಗಿ ಭರತ ಶತ್ರುಘ್ನರಿಗೆ ಇಬ್ಬರಿಗೆ ಪತ್ನಿಯರಾಗಿ ಸೇವೆ ಮಾಡಲಿ.

ಏಕಾಹ್ನಾ ರಾಜಪುತ್ರೀಣಾಂ ಚತಸ್ರಾಣಾಂ ಮಹಾಮುನೇ ।
ಪಾಣೀನ್ ಗೃಹ್ಣಂತು ಚತ್ವಾರೋ ರಾಜಪುತ್ರಾ ಮಹಾಬಲಾಃ ॥ ೧೧ ॥

ಮಹಾಮುನಿಯೆ! ಒಂದೇ ದಿನದಲ್ಲಿ ಮಹಾಬಲರಾದ ರಾಜಕುಮಾರರು ನಾಲ್ವರು ನಾಲ್ಕು ರಾಜಕುಮಾರಿಯರ ಪಾಣಿಗ್ರಹಣ ಮಾಡಲಿ.

ಉತ್ತರೇ ದಿವಸೇ ಬ್ರಹ್ಮನ್ಫಲ್ಗುನೀಭ್ಯಾಂ ಮನೀಷಿಣಃ ।
ವೈವಾಹಿಕಂ ಪ್ರಶಂಸಂತಿ ಭಗೋ ಯತ್ರ ಪ್ರಜಾಪತಿಃ ॥ ೧೨ ॥

ಮುನಿಯೆ, ಉತ್ತರ ಫಲ್ಗುನೀ ನಕ್ಷತ್ರದ ದಿವಸದಲ್ಲಿ ಭಗಪ್ರಜಾಪತಿ ದೇವತೆ-ಯಾಗಿರುವುದರಿಂದ ಪ್ರಶಸ್ತವಾಗಿದೆ. ಅಂದು ವಿವಾಹ ಮಾಡುವುದನ್ನು ಬಲ್ಲವರು ಪ್ರಶಂಸಿಸುತ್ತಾರೆ.

ಏವಮುಕ್ತ್ವಾ ವಚಃ ಸೌಮ್ಯಂ ಪ್ರತ್ಯುತ್ಥಾಯ ಕೃತಾಂಜಲಿಃ ।
ಉಭೌ ಮುನಿವರೌ ರಾಜಾ ಜನಕೋ ವಾಕ್ಯಮಬ್ರವೀತ್ ॥
ಪರೋ ಧರ್ಮಃ ಕೃತೋ ಮಹ್ಯಂ ಶಿಷ್ಯೋಽಸ್ಮಿ ಭವತೋಃ ಸದಾ ॥೧೩

ಹೀಗೆ ಸೌಮ್ಯವಾದ ಮಾತನ್ನು ಹೇಳಿ ಎದ್ದುನಿಂತು ಕೈಮುಗಿದು ಇಬ್ಬರು ಮುನಿಶ್ರೇಷ್ಠರಿಗೆ ಹೇಳಿದನು, ನನಗೆ ಉತ್ತಮವಾದ ಧರ್ಮಕಾರ್ಯವನ್ನು ಉಪದೇಶಿಸಿರುವಿರಿ. ನಾನು ನಿಮ್ಮಿಬ್ಬರಿಗೂ ಸದಾ ಶಿಷ್ಯನಾಗಿರುತ್ತೇನೆ.

ಇಮಾನ್ಯಾಸನಮುಖ್ಯಾನಿ ಆಸಾತಾಂ ಮುನಿಪುಂಗವೌ ।
ಯಥಾ ದಶರಥಸ್ಯೇಯಂ ತಥಾಽಯೋಧ್ಯಾ ಪುರೀ ಮಮ ॥
ಪ್ರಭುತ್ವೇ ನಾಸ್ತಿ ಸಂದೇಹೋ ಯಥಾರ್ಹಂ ಕರ್ತುಮರ್ಹಥ ॥ ೧೪ ॥

ದಶರಥ ನಾನು ಕುಶಧ್ವಜ ಈ ಮೂವರ ಮೂರು ಸಿಂಹಾಸನಗಳಲ್ಲಿಯೂ ನೀವಿಬ್ಬರೂ ಆಸೀನರಾಗಬಹುದು. ಈ ಮಿಥಿಲೆ ದಶರಥನಿಗೂ ಹೇಗೆ ಸೇರು-ವುದೋ ಹಾಗೆ ಅಯೋಧ್ಯೆಯೂ ನನಗೂ ಸೇರಿರುತ್ತದೆ. ಪರಸ್ಪರ ಪ್ರಭುತ್ವ-ವಿಷಯದಲ್ಲಿ ಸಂದೇಹಕ್ಕೆ ಎಡೆ ಇಲ್ಲ, ಯಥಾಯೋಗ್ಯವಾಗಿ ನೀವು ಅವುಗಳನ್ನು ಆಳಬಹುದು.

ತಥಾ ಬ್ರುವತಿ ವೈದೇಹೇ ಜನಕೇ ರಘುನಂದನಃ ।
ರಾಜಾ ದಶರಥೋ ಹೃಷ್ಟಃ ಪ್ರತ್ಯುವಾಚ ಮಹೀಪತಿಮ್ ॥ ೧೫ ॥

ಹೀಗೆ ವಿದೇಹರಾಜ ಜನಕನು ಹೇಳಿದಾಗ ರಘುನಂದನ ರಾಜಾ ದಶರಥನೂ ಹರ್ಷದಿಂದ ಜನಕರಾಜನಿಗೆ ಹೇಳಿದ.

ಯುವಾಮಸಂಖ್ಯೇಯಗುಣೌ ಭ್ರಾತರೌ ಮಿಥಿಲೇಶ್ವರೌ ।
ಋಷಯೋ ರಾಜಸಂಘಾಶ್ಚ ಭವದ್ಭ್ಯಾಮಭಿಪೂಜಿತಾಃ ॥ ೧೬ ॥

ಮಿಥಿಲೆಯ ಅಧಿಪತಿಗಳಾದ ಜನಕ ಕುಶಧ್ವಜರು ಇಬ್ಬರು ಸೋದರರೆ! ನೀವು ಅಸಂಖ್ಯ ಗುಣಶಾಲಿಗಳು ಋಷಿಗಳೂ ರಾಜಸಮೂಹಗಳೂ ನಿಮ್ಮಿಬ್ಬರಿಂದ ಬಹಳ ಸತ್ಕೃತರಾಗಿದ್ದಾರೆ.

ಸ್ವಸ್ತಿ ಪ್ರಾಪ್ನುಹಿ ಭದ್ರಂ ತೇ ಗಮಿಷ್ಯಾಮಿ ಸ್ವಮಾಲಯಮ್ ।
ಶ್ರಾದ್ಧಕರ್ಮಾಣಿ ಸರ್ವಾಣಿ ವಿಧಾಸ್ಯಾಮೀತಿ ಚಾಬ್ರವೀತ್ ॥ ೧೭ ॥

ಜನಕರಾಜನೆ, ನಿನಗೆ ಶುಭವಾಗಲಿ, ಶುಭವಾಗಲಿ ನಾನು ನನ್ನ ಶಿಬಿರಕ್ಕೆ ಹೋಗುವೆನು. ನಾಂದೀಶ್ರಾದ್ಧ ಕರ್ಮಗಳನ್ನು ಎಲ್ಲವನ್ನೂ ಮಾಡುವೆನು ಎಂದು ದಶರಥನು ಹೇಳಿದನು.

ತಮಾಪೃಷ್ಟ್ವಾ ನರಪತಿಂ ರಾಜಾ ದಶರಥಸ್ತದಾ ।
ಮುನೀಂದ್ರೌ ತೌ ಪುರಸ್ಕೃತ್ಯ ಜಗಾಮಾಶು ಮಹಾಯಶಾಃ ॥ ೧೮ ॥

ಮಹಾಯಶ ರಾಜಾ ದಶರಥನು ಜನಕರಾಜನ ಅನುಮತಿ ಕೇಳಿ ಮುನಿ-ಶ್ರೇಷ್ಠರಿಬ್ಬರನ್ನು ಮುಂದೆ ಮಾಡಿಕೊಂಡು ಬೇಗನೆ ಶಿಬಿರಕ್ಕೆ ನಡೆದನು.

ಸ ಗತ್ವಾ ನಿಲಯಂ ರಾಜಾ ಶ್ರಾದ್ಧಂ ಕೃತ್ವಾ ವಿಧಾನತಃ ।
ಪ್ರಭಾತೇ ಕಾಲ್ಯಮುತ್ಥಾಯ ಚಕ್ರೇ ಗೋದಾನಮುತ್ತಮಮ್ ॥ ೧೯ ॥

ಶಿಬಿರಕ್ಕೆ ಹೋಗಿ ದಶರಥರಾಜನು ವಿಧ್ಯುಕ್ತವಾಗಿ ನಾಂದೀಶ್ರಾದ್ಧ ಮಾಡಿ ಮರುದಿನ ಬೆಳಿಗ್ಗೆ ಎದ್ದು ಪ್ರಾತಃಕಾಲದಲ್ಲಿ ಮಾಡಬೇಕಾಗಿರುವ ಸಮಾವರ್ತನ-ವನ್ನೂ ನಡೆಸಿದನು.

ಗವಾಂ ಶತಸಹಸ್ರಾಣಿ ಬ್ರಾಹ್ಮಣೇಭ್ಯೋ ನರಾಧಿಪಃ ।
ಏಕೈಕಶೋ ದದೌ ರಾಜಾ ಪುತ್ರಾನುದ್ದಿಶ್ಯ ಧರ್ಮತಃ ॥ ೨೦ ॥

ರಾಜಾ ದಶರಥನು ಎಂದಿನಂತೆ ನಾಲ್ವರೂ ಪುತ್ರರಲ್ಲಿ ಒಬ್ಬೊಬ್ಬನನ್ನು ಉದ್ದೇಶಿಸಿ ಬ್ರಾಹ್ಮಣರಿಗೆ ಲಕ್ಷ ಗೋದಾನಗಳನ್ನೂ ಮಾಡಿದ.

ಸುವರ್ಣಶೃಂಗಾಃ ಸಂಪನ್ನಾಃ ಸವತ್ಸಾಃ ಕಾಂಸ್ಯದೋಹನಾಃ ।
ಗವಾಂ ಶತಸಹಸ್ರಾಣಿ ಚತ್ವಾರಿ ಪುರುಷರ್ಷಭಃ ॥ ೨೧ ॥

ಸಮಾವರ್ತನ ಪೂರ್ವಾಂಗವಾಗಿ ಬಂಗಾರದ ಕೊಂಬುಳ್ಳ ನಾಲ್ಕು ಲಕ್ಷ

ಗೋವುಗಳನ್ನೂ ಕರುಗಳೊಂದಿಗೆ ಹಾಲು ಕರೆವ ಕಂಚಿನ ಪಾತ್ರೆಗಳೊಂದಿಗೆ ದಾನ ಮಾಡಿದ, ದಶರಥರಾಜ.

ವಿತ್ತಮನ್ಯಚ್ಚ ಸುಬಹು ದ್ವಿಜೇಭ್ಯೋ ರಘುನಂದನಃ ।
ದದೌ ಗೋದಾನಮುದ್ದಿಶ್ಯ ಪುತ್ರಾಣಾಂ ಪುತ್ರವತ್ಸಲಃ ॥ ೨೨ ॥

ಪುತ್ರ ವತ್ಸಲನಾದ ದಶರಥನು ಪುತ್ರರ ಸಮಾವರ್ತನದ ಅಂಗವಾಗಿ ಬ್ರಾಹ್ಮಣರಿಗೆ ಬಹು ಧನವನ್ನೂ ದಾನ ಮಾಡಿದ.

ಸ ಸುತೈಃ ಕೃತಗೋದಾನೈರ್ವೃತಸ್ತು ನೃಪತಿಸ್ತದಾ ।
ಲೋಕಪಾಲೈರಿವಾಭಾತಿ ವೃತಃ ಸೌಮ್ಯಃ ಪ್ರಜಾಪತಿಃ ॥ ೨೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ದ್ವಿಸಪ್ತತಿತಮಃ ಸರ್ಗಃ ॥ ೭೨ ॥

ಸಮಾವರ್ತನ ಮಾಡಿದ ಪುತ್ರರಿಂದೊಡಗೂಡಿ ದಶರಥರಾಜನು ಲೋಕ-ಪಾಲಕರಿಂದೊಡಗೂಡಿದ ಸೌಮ್ಯನಾದ ಬ್ರಹ್ಮದೇವನಂತೆ ಕಂಗೊಳಿಸಿದ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಎಪ್ಪತ್ತೆರಡನೆ ಸರ್ಗ ಮುಗಿಯಿತು.

ತ್ರಿಸಪ್ತತಿತಮಃ ಸರ್ಗಃ

ಯಸ್ಮಿಂಸ್ತು ದಿವಸೇ ರಾಜಾ ಚಕ್ರೇ ಗೋದಾನಮುತ್ತಮಮ್ ।
ತಸ್ಮಿಂಸ್ತು ದಿವಸೇ ಶೂರೋ ಯುಧಾಜಿತ್ಸಮುಪೇಯಿವಾನ್ ॥ ೧ ॥

ರಾಜಾ ದಶರಥನು ಪುತ್ರರಿಗೆ ಸಮಾವರ್ತನ ನಡೆಸಿದ ದಿನವೇ ಶೂರನಾದ ಭರತನ ಸೋದರಮಾವ ಯುಧಾಜಿತನು ಬಂದ.

ಪುತ್ರಃ ಕೇಕಯರಾಜಸ್ಯ ಸಾಕ್ಷಾದ್ಭರತಮಾತುಲಃ ।
ದೃಷ್ಟ್ವಾ ಪೃಷ್ಟ್ವಾ ಚ ಕುಶಲಂ ರಾಜಾನಮಿದಮಬ್ರವೀತ್ ॥ ೨ ॥

ಕೇಕಯ ರಾಜನ ಪುತ್ರ ಭರತನಿಗೆ ಸಾಕ್ಷಾತ್ ಸೋದರಮಾವನಾದ ಯುಧಾಜಿತನು ರಾಜಾ ದಶರಥನನ್ನು ಕಂಡು ಕುಶಲ ಪ್ರಶ್ನೆಗೈದು ಹೇಳಿದನು.

ಕೇಕಯಾಧಿಪತೀ ರಾಜಾ ಸ್ನೇಹಾತ್ಕುಶಲಮಬ್ರವೀತ್ ।
ಯೇಷಾಂ ಕುಶಲಕಾಮೋಽಸಿ ತೇಷಾಂ ಸಂಪ್ರತ್ಯನಾಮಯಮ್ ॥ ೩ ॥

ಕೇಕಯಾಧಿಪತಿಯಾದ ರಾಜನು ನಿನಗೆ ತನ್ನ ಕುಶಲವನ್ನು ಹೇಳಿದ್ದಾನೆ. ನಮ್ಮ ಕುಶಲವನ್ನು ಕೇಳಲು ಬಯಸುವ ನಿನಗೆ ನಮ್ಮ ಕುಶಲವನ್ನು ಹೇಳುವೆವು.

ಸ್ವಸ್ರೀಯಂ ಮಮ ರಾಜೇಂದ್ರ ದ್ರಷ್ಟುಕಾಮೋ ಮಹೀಪತಿಃ ।
ತದರ್ಥಮುಪಯಾತೋಽಹಮಯೋಧ್ಯಾಂ ರಘುನಂದನ ॥ ೪ ॥

ರಾಜಶ್ರೇಷ್ಠನೆ! ನನ್ನ ತಂಗಿ ಮಗನಾದ ಭರತನನ್ನು ಕಾಣಲು ರಾಜನು ಬಯಸಿದ್ದಾನೆ.

ಅವನನ್ನು ಕರೆದೊಯ್ಯಲು ನಾನು ಅಯೋಧ್ಯೆಗೆ ಬಂದಿದ್ದೆ.

ಶ್ರುತ್ವಾ ತ್ವಹಮಯೋಧ್ಯಾಯಾಂ ವಿವಾಹಾರ್ಥಂ ತವಾತ್ಮಜಾನ್ ।
ಮಿಥಿಲಾಮುಪಯಾತಾಂಸ್ತು ತ್ವಯಾ ಸಹ ಮಹೀಪತೇ ॥
ತ್ವರಯಾಭ್ಯುಪಯಾತೋಽಹಂ ದ್ರಷ್ಟುಕಾಮಃ ಸ್ವಸುಃ ಸುತಮ್ ॥ ೫ ॥

ಅಯೋಧ್ಯೆಯಲ್ಲಿ ನಾನು ನಿನ್ನ ಮಕ್ಕಳು ವಿವಾಹಕ್ಕಾಗಿ ನಿನ್ನೊಂದಿಗೆ ಮಿಥಿಲೆಗೆ ಬಂದಿದ್ದನ್ನು ಕೇಳಿ, ಭರತನನ್ನು ಕಾಣಲೆಂದು ನಾನು ತ್ವರೆಯಿಂದ ಇಲ್ಲಿಗೆ ಬಂದಿದ್ದೇನೆ.

ಅಥ ರಾಜಾ ದಶರಥಃ ಪ್ರಿಯಾತಿಥಿಮುಪಸ್ಥಿತಮ್ ।
ದೃಷ್ಟ್ವಾ ಪರಮಸತ್ಕಾರೈಃ ಪೂಜನಾರ್ಹಮಪೂಜಯತ್ ॥ ೬ ॥

ಪ್ರಿಯ ಅತಿಥಿಯಾಗಿ ಬಂದ, ಸತ್ಕಾರಯೋಗ್ಯನಾದ ಯುಧಾಜಿತನನ್ನು ಉತ್ತಮ ಸತ್ಕಾರದಿಂದ ಸತ್ಕರಿಸಿದ, ರಾಜಾ ದಶರಥ.

ತತಸ್ತಾಮುಷಿತೋ ರಾತ್ರಿಂ ಸಹ ಪುತ್ರೈರ್ಮಹಾತ್ಮಭಿಃ ।
ಪ್ರಭಾತೇ ಪುನರುತ್ಥಾಯ ಕೃತ್ವಾ ಕರ್ಮಾಣಿ ಕರ್ಮವಿತ್ ॥
ಋಷೀಂಸ್ತದಾ ಪುರಸ್ಕೃತ್ಯ ಯಜ್ಞವಾಟಮುಪಾಗಮತ್ ॥ ೭ ॥

ರಾಜಾ ದಶರಥನು ಆ ರಾತ್ರಿ ಮಹಾತ್ಮರಾದ ಪುತ್ರರೊಂದಿಗೆ ಶಿಬಿರದಲ್ಲಿ ಕಳೆದು, ಬೆಳಿಗ್ಗೆ ಪುನಃ ಎದ್ದು ಕರ್ಮಜ್ಞನು ಆಹ್ನಿಕ ಕರ್ಮಗಳನ್ನು ತೀರಿಸಿ ಋಷಿಗಳನ್ನು ಮುಂದಿಟ್ಟುಕೊಂಡು ಜನಕನ ಯಾಗಶಾಲೆಗೆ ಬಂದನು.

ಯುಕ್ತೇ ಮುಹೂರ್ತೇ ವಿಜಯೇ ಸರ್ವಾಭರಣಭೂಷಿತೈಃ ।
ಭ್ರಾತೃಭಿಃ ಸಹಿತೋ ರಾಮಃ ಕೃತಕೌತುಕಮಂಗಲಃ ॥
ವಸಿಷ್ಠಂ ಪುರತಃ ಕೃತ್ವಾ ಮಹರ್ಷೀನಪರಾನಪಿ ॥ ೮ ॥

ಪಿತುಃ ಸಮೀಪಮಾಶ್ರಿತ್ಯ ತಸ್ಥೌ ಭ್ರಾತೃಭಿರಾವೃತಃ ।
ವಸಿಷ್ಠೋ ಭಗವಾನೇತ್ಯ ವೈದೇಹಮಿದಮಬ್ರವೀತ್ ॥ ೯ ॥

ವಿಜಯಪ್ರದವಾದ ಯೋಗ್ಯ ಮುಹೂರ್ತದಲ್ಲಿ ರಾಮನು ಸರ್ವಾಭರಣ ಭೂಷಿತರಾದ ಸೋದರರೊಂದಿಗೆ ವಿವಾಹಸೂತ್ರ ಬಂಧನ ಮಾಡಿಕೊಂಡು ವಸಿಷ್ಠರನ್ನೂ ಬೇರೆ ಋಷಿಗಳನ್ನೂ ಮುಂದೆ ಮಾಡಿಕೊಂಡು ತಂದೆಯ ಬಳಿಗೆ ಬಂದು ಸೋದರರೊಂದಿಗೆ ಕುಳಿತನು. ಭಗವಾನ್ ವಸಿಷ್ಠನು ಜನಕನಿಗೆ ಹೇಳಿದನು.

ರಾಜಾ ದಶರಥೋ ರಾಜನ್ಕೃತಕೌತುಕಮಂಗಲೈಃ ।
ಪುತ್ರೈರ್ನರವರಶ್ರೇಷ್ಠ ದಾತಾರಮಭಿಕಾಂಕ್ಷತೇ ॥ ೧೦ ॥

‘ರಾಜಶ್ರೇಷ್ಠನೆ, ರಾಜಾ ದಶರಥನು ವಿವಾಹ ಸೂತ್ರಬಂಧನ ಮಾಡಿಕೊಂಡಿರುವ ಪುತ್ರರೊಂದಿಗೆ ಬಾಗಿಲಿಗೆ ಬಂದು ಕನ್ಯಾದಾತನಿಗೆ ಕಾದಿದ್ದಾನೆ.

ದಾತೃಪ್ರತಿಗ್ರಹೀತೃಭ್ಯಾಂ ಸರ್ವಾರ್ಥಾಃ ಪ್ರಭವಂತಿ ಹಿ ।
ಸ್ವಧರ್ಮಂ ಪ್ರತಿಪದ್ಯಸ್ವ ಕೃತ್ವಾ ವೈವಾಹ್ಯಮುತ್ತಮಮ್ ॥ ೧೧ ॥

ದಾತೃ ಪ್ರತಿಗ್ರಹೀತೃಗಳು ಕೂಡಿದರೇ ಎಲ್ಲ ಕಾರ್ಯಗಳು ನಡೆಯುತ್ತವೆ.ತಾನೆ? ವಿವಾಹಕ್ಕೆ ಸಂಬಂಧಿಸಿ ನೀನು ಮಾಡಬೇಕಾಗಿರುವ ಕರ್ತವ್ಯಗಳನ್ನು ಮಾಡಿ ಮುಗಿಸಿ ನಮ್ಮನ್ನು ವಿವಾಹ ವೇದಿಕೆಗೆ ಬರಮಾಡಿಕೊಳ್ಳು.

ಇತ್ಯುಕ್ತಃ ಪರಮೋದಾರೋ ವಸಿಷ್ಠೇನ ಮಹಾತ್ಮನಾ ।
ಪ್ರತ್ಯುವಾಚ ಮಹಾತೇಜಾ ವಾಕ್ಯಂ ಪರಮಧರ್ಮವಿತ್ ॥ ೧೨ ॥

ಮಹಾತ್ಮ ವಸಿಷ್ಠನು ಹೀಗೆ ಹೇಳಿದಾಗ ಪರಮ ಉದಾರಿ, ಮಹಾತೇಜ, ಪರಮ ಧರ್ಮಜ್ಞನಾದ ಜನಕನು ನುಡಿದ.

ಕಃ ಸ್ಥಿತಃ ಪ್ರತಿಹಾರೋ ಮೇ ಕಸ್ಯಾಜ್ಞಾಂ ಸಂಪ್ರತೀಕ್ಷ್ಯತೇ ।
ಸ್ವಗೃಹೇ ಕೋ ವಿಚಾರೋಽಸ್ತಿ ಯಥಾ ರಾಜ್ಯಮಿದಂ ತವ ॥ ೧೩ ॥

ಬಾಗಿಲಲ್ಲಿ ನನ್ನ ದ್ವಾರಪಾಲನು ಯಾರು ನಿಂತಿದ್ದಾನೆ? ನೀವು ಪ್ರವೇಶಕ್ಕೆ ಯಾರ ಆಜ್ಞೆಗೆ ಕಾಯುತ್ತೀರಿ? ತಮ್ಮ ಸ್ವಂತ ಮನೆಯಲ್ಲಿ ಓಡಾಡಲು ನೀವು ಏನು ವಿಚಾರ ಮಾಡಬೇಕಿದೆ? ಈ ರಾಜ್ಯ ನಿನ್ನದೇ ಆಗಿದೆ!

ಕೃತಕೌತುಕಸರ್ವಸ್ವಾ ವೇದಿಮೂಲಮುಪಾಗತಾಃ ।
ಮಮ ಕನ್ಯಾ ಮುನಿಶ್ರೇಷ್ಠ ದೀಪ್ತಾ ವಹ್ನೇರಿವಾರ್ಚಿಷಃ ॥ ೧೪ ॥

ಮತ್ತು , ಮುನಿಶ್ರೇಷ್ಠನೆ! ನನ್ನ ಕನ್ಯೆಯರು ವಿವಾಹಕ್ಕೆ ಸಂಬಂಧಿಸಿದ ಮಂಗಳ-ಕಾರ್ಯಗಳನ್ನೆಲ್ಲ ಮಾಡಿ, ಹೊಳೆಯುವ ಅಗ್ನಿಶಿಖೆಗಳಂತೆ ವಿವಾಹ ವೇದಿಕೆಯ ಬಳಿಗೇ ಬಂದಿದ್ದಾರೆ.

ಸಜ್ಜೋಽಹಂ ತತ್ತ್ವತೀಕ್ಷ್ಣೋಽಸ್ಮಿ ವೇದ್ಯಾಮಸ್ಯಾಂ ಪ್ರತಿಷ್ಠಿತಃ ।
ಅವಿಘ್ನಂ ಕ್ರಿಯತಾಂ ಸರ್ವಂ ಕಿಮರ್ಥಂ ಹಿ ವಿಲಂಬ್ಯತೇ ॥ ೧೫ ॥

ನಾನು ಸಿದ್ಧನಾಗಿ ವೇದಿಕೆಯಲ್ಲಿ ಕುಳಿತು ತಮ್ಮ ಆಗಮನಕ್ಕೆ ಕಾದಿದ್ದೇನೆ. ತಡಮಾಡದೇ ಎಲ್ಲ ಕಾರ್ಯಗಳನ್ನು ನಡೆಸಿರಿ. ಏಕೆ ತಡ ಮಾಡುವಿರಿ?

ತದ್ವಾಕ್ಯಂ ಜನಕೇನೋಕ್ತಂ ಶ್ರುತ್ವಾ ದಶರಥಸ್ತದಾ ।
ಪ್ರವೇಶಯಾಮಾಸ ಸುತಾನ್ಸರ್ವಾನೃಷಿಗಣಾನಪಿ ॥ ೧೬ ॥

ಜನಕನು ಹೇಳಿದ ಈ ಮಾತನ್ನು ಕೇಳಿ ದಶರಥನು ಪುತ್ರರನ್ನೂ ಎಲ್ಲ ಋಷಿಗಳನ್ನೂ ಒಳಗೆ ಕಳಿಸಿದನು.

ಅಥ ರಾಜಾ ದಶರಥಃ ಪುತ್ರೈಃ ಸ್ತ್ರೀಭಿಶ್ಚ ಸಂವೃತಃ ।
ಸರ್ವಾನೃಷೀನ್ಪುರಸ್ಕೃತ್ಯ ಪ್ರವಿವೇಶ ಮಹಾದ್ಯುತಿಃ ॥ ೧೭ ॥

ಮಹಾಪ್ರಕಾಶ ಉಳ್ಳ ರಾಜಾ ದಶರಥನು ಪುತ್ರರಿಂದಲೂ ರಾಣಿಯರಿಂದಲೂ ಕೂಡಿ ಎಲ್ಲ ಋಷಿಗಳನ್ನು ಮುಂದೆ ಮಾಡಿಕೊಂಡು ವಿವಾಹ ಮಂಡಪವನ್ನು ಪ್ರವೇಶಿಸಿದ.

ಪ್ರವೇಶ್ಯಮಾನಂ ರಾಜಾನಂ ವಸಿಷ್ಠಂ ಗಾಧಿನಃ ಸುತಮ್ ।
ಸರ್ವಾನ್ ನೃಪವರಾನ್ವಿಪ್ರಾನ್ ಜನಕೋ ಧರ್ಮವತ್ಸಲಃ ॥ ೧೮ ॥

ವಸ್ತ್ರೈರಾಭರಣೈಶ್ಚೈವ ಗಂಧಪುಷ್ಪೈಶ್ಚ ಸಾಕ್ಷತೈಃ ।
ಪೂಜಾಯಾಮಾಸ ವಿಧಿವದ್ಯಥಾಯೋಗ್ಯಂ ಯಥಾಕ್ರಮಮ್ ॥ ೧೯ ॥

ದಶರಥರಾಜ, ವಸಿಷ್ಠ, ವಿಶ್ವಾಮಿತ್ರ ಮತ್ತು ಎಲ್ಲ ರಾಜರು ಋಷಿಗಳು ಪ್ರವೇಶಿಸು– ತ್ತಿದ್ದಂತೆ ಧರ್ಮವತ್ಸಲನಾದ ಜನಕನು ಅವರೆಲ್ಲರನ್ನೂ ವಸ್ತ್ರ ಆಭರಣಗಂಧ ಪುಷ್ಪ ಅಕ್ಷತೆಗಳಿಂದ ವಿಧಿವತ್ತಾಗಿ ಯಥಾಯೋಗ್ಯವಾಗಿ ಕ್ರಮವಾಗಿ ಸತ್ಕರಿಸಿದ.

ತತೋ ರಾಜಾ ವಿದೇಹಾನಾಂ ವಸಿಷ್ಠಮಿದಮಬ್ರವೀತ್ ।
ಕಾರಯಸ್ವ ಋಷೇ ಸರ್ವಮೃಷಿಭಿಃ ಸಹ ಧಾರ್ಮಿಕ ॥
ರಾಮಸ್ಯ ಲೋಕರಾಮಸ್ಯ ಕ್ರಿಯಾಂ ವೈವಾಹಿಕೀಂ ಪ್ರಭೋ ॥ ೨೦ ॥

ಬಳಿಕ ವಿದೇಹರಾಜನು ವಸಿಷ್ಠನಿಗೆ ಹೇಳಿದನು 'ಧಾರ್ಮಿಕನೆ! ಋಷಿಯೆ, ಋಷಿಗಳೊಂದಿಗೆ, ಲೋಕಕ್ಕೆ ಆನಂದ ನೀಡುವ ರಾಮನಿಗೆ ವಿವಾಹಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನು ಮಾಡಿಸು, ಪ್ರಭು! ಎಂದು.

ತಥೇತ್ಯುಕ್ತ್ವಾ ತು ಜನಕಂ ವಸಿಷ್ಠೋ ಭಗವಾನೃಷಿಃ ।
ವಿಶ್ವಾಮಿತ್ರಂ ಪುರಸ್ಕೃತ್ಯ ಶತಾನಂದಂ ಚ ಧಾರ್ಮಿಕಮ್ ॥ ೨೧ ॥

ಪ್ರಪಾಮಧ್ಯೇ ತು ವಿಧಿವದ್ವೇದಿಂ ಕೃತ್ವಾ ಮಹಾತಪಾಃ ।
ಅಲಂಚಕಾರ ತಾಂ ವೇದಿಂ ಗಂಧಪುಷ್ಪೈಃ ಸಮಂತತಃ ॥ ೨೨ ॥

ಮಹಾತಪ ಭಗವಾನ್ ವಸಿಷ್ಠ ಋಷಿಯು 'ಹಾಗೇ ಆಗಲಿ' ಎಂದು ಜನಕನಿಗೆ ಹೇಳಿ ಧಾರ್ಮಿಕನಾದ ವಿಶ್ವಾಮಿತ್ರನನ್ನೂ ಶತಾನಂದನನ್ನೂ ಮುಂದೆ ಮಾಡಿಕೊಂಡು

ಅರವಟ್ಟಿಗೆಯಂತೆ ಸುಖಕರವಾದ ವಿವಾಹಮಂಟಪದಲ್ಲಿ ವಿಧ್ಯುಕ್ತವಾಗಿ ವಿವಾಹವೇದಿಯನ್ನು ಮಾಡಿ ಆ ವೇದಿಯನ್ನು ಗಂಧಪುಷ್ಪಗಳಿಂದ ಸುತ್ತಲೂ ಅಲಂಕರಿಸಿದನು.

ಸುವರ್ಣಪಾಲಿಕಾಭಿಶ್ಚ ಚಿತ್ರಕುಂಭೈಶ್ಚ ಸಾಂಕುರೈಃ ।
ಅಂಕುರಾರ್ಘ್ಯೈಃ ಶರಾವೈಶ್ಚ ಧೂಪಪಾತ್ರೈಃ ಸಧೂಪಕೈಃ ॥ ೨೩ ॥

ಶಂಖಿಪಾತ್ರೈಃ ಸ್ರುವೈಃ ಸ್ರುಗ್ಭಿಃ ಪಾತ್ರೈರರ್ಘ್ಯಾಭಿಪೂರಿತೈಃ ।
ಲಾಜಪೂರ್ಣೈಶ್ಚ ಪಾತ್ರೀಭಿರಕ್ಷತೈರಭಿಸಂಸ್ಕೃತೈಃ ॥ ೨೪ ॥

ದರ್ಭೈಃ ಸಮೈಃ ಸಮಾಸ್ತೀರ್ಯ ವಿಧಿವನ್ಮಂತ್ರಪೂರ್ವಕಮ್ ।
ಅಗ್ನಿಮಾಧಾಯ ವೇದ್ಯಾಂ ತು ವಿಧಿಮಂತ್ರಪುರಸ್ಕೃತಮ್ ॥
ಜುಹಾವಾಗ್ನೌ ಮಹಾತೇಜಾ ವಸಿಷ್ಠೋ ಭಗವಾನೃಷಿಃ ॥ ೨೫ ॥

ಬಂಗಾರದ ಪಾತ್ರೆ ಅಂಕುರಯುಕ್ತವಾದ ಸುಂದರ ಸುವರ್ಣಕಲಶ ಅಂಕುರಯುಕ್ತವಾದ ಮಣ್ಣಿನ ಪಾತ್ರೆ ಧೂಪಯುಕ್ತ ಧೂಪಪಾತ್ರೆ ಸುಗಂಧ-ದ್ರವ್ಯಪಾತ್ರೆ ಸ್ರುವ ಸ್ರುಕ್ ಅರ್ಘ್ಯಾದಿ ಪೂರಿತವಾದ ಪಾತ್ರೆ ಲಾಜಪೂರ್ಣಪಾತ್ರೆ ಸುಸಂಸ್ಕೃತವಾದ ಅಕ್ಷತೆಕಾಳು ಸಮಪ್ರಮಾಣದ ದರ್ಭೆ ಇವೆಲ್ಲ ಸಾಧನಗಳಿಂದ ಮಂತ್ರಪೂರ್ವಕವಾಗಿ ವಿಧ್ಯುಕ್ತವಾಗಿ ಮಂಡಪವನ್ನು ಅಲಂಕರಿಸಿ ವಿಧಿಮಂತ್ರ ಪುರಃಸರವಾಗಿ ವೇದಿಯಲ್ಲಿ ಅಗ್ನಿ ಆಧಾನಮಾಡಿ ಮಹಾತೇಜ ಭಗವಾನ್ ವಸಿಷ್ಠ ಋಷಿ ಅಗ್ನಿಯಲ್ಲಿ ಆಭ್ಯುದಯಿಕ ಹೋಮವನ್ನು ಮಾಡಿದರು.

ತತಃ ಸೀತಾಂ ಸಮಾನೀಯ ಸರ್ವಾಭರಣಭೂಷಿತಾಮ್ ।
ವಿದ್ಯುತ್ಪ್ರಭಾಂ ವಿಶಾಲಾಕ್ಷೀಂ ಸ್ನಿಗ್ಧಕುಂಚಿತಮೂರ್ಧಜಾಮ್ ॥ ೨೬ ॥

ಹಂಸಾಂಕಿತೇನ ಕ್ಷೌಮೇಣ ಕಿಂಚಿತ್ಪೀತೇನ ಸಂವೃತಾಮ್ ।
ವಾಸಿತೇನೋತ್ತರೀಯೇಣ ಸುರಕ್ತೇನ ಸುಸಂವೃತಾಮ್ ॥ ॥ ೨೭ ॥

ಸಮಕ್ಷಮಗ್ನೇಃ ಸಂಸ್ಥಾಪ್ಯ ರಾಘವಾಭಿಮುಖೇ ತದಾ ।
ಅಬ್ರವೀಜ್ಜನಕೋ ರಾಜಾ ಕೌಸಲ್ಯಾನಂದವರ್ಧನಮ್ ॥ ೨೮ ॥

ಸರ್ವಾಭರಣ ಭೂಷಿತೆ, ಮಿಂಚಿನಂತೆ ಹೊಳೆವವಳು ವಿಶಾಲಾಕ್ಷಿ ನಯವಾದ ಕುರುಳು ಕೂದಲುಳ್ಳವಳು ಹಂಸಚಿತ್ರಯುಕ್ತವಾದ ನಸು ಹಳದಿ ರೇಶಿಮೆ ಸೀರೆ ಉಟ್ಟವಳು, ಸುಗಂಧಯುಕ್ತವಾದ ಕೆಂಪು ಉತ್ತರೀಯ ಧರಿಸಿದವಳು, ಇಂಥ

ಸೀತೆಯನ್ನು ರಾಮನಿಗೆ ಇದಿರಾಗಿ ಅಗ್ನಿಯ ಸಮಕ್ಷಮದಲ್ಲಿ ಕೂಡಿಸಿ ರಾಜಾ ಜನಕನು ರಾಮನಿಗೆ ಹೇಳಿದನು.

ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ ।
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ॥ ೨೯ ॥

ಇವಳು ನನ್ನ ಸುತೆ ಸೀತೆ, ನಿನಗೆ ಸಹಧರ್ಮಿಣಿಯಾಗುವವಳು, ಇವಳನ್ನು ಸ್ವೀಕರಿಸು. ನಿನಗೆ ಶುಭವಾಗಲಿ. ಪಾಣಿಯಿಂದ ಇವಳ ಪಾಣಿಗ್ರಹಣ ಮಾಡು.

ಪತಿವ್ರತಾ ಮಹಾಭಾಗಾ ಛಾಯೇವಾನುಗತಾ ಸದಾ ।
ಇತ್ಯುಕ್ತ್ವಾ ಪ್ರಾಕ್ಷಿಪದ್ರಾಜಾ ಮಂತ್ರಪೂತಂ ಜಲಂ ತದಾ ॥ ೩೦ ॥

ಇವಳು ಮಹಾಭಾಗ್ಯವತಿ ಪತಿವ್ರತೆಯಾಗಿದ್ದು ಸದಾ ನೆರಳಿನಂತೆ ನಿನ್ನನ್ನು ಹಿಂಬಾಲಿಸುವಳು. ಹೀಗೆ ಹೇಳಿ ಜನಕ ಮಹಾರಾಜನು ರಾಮನ ಕೈಯಲ್ಲಿ ಮಂತ್ರಪೂತವಾದ ಜಲಧಾರೆ ಎರೆದನು.

ಸಾಧು ಸಾಧ್ವಿತಿ ದೇವಾನಾಮೃಷೀಣಾಂ ವದತಾಂ ತದಾ ।
ದೇವದುಂದುಭಿನಿರ್ಘೋಷಃ ಪುಷ್ಪವರ್ಷೋ ಮಹಾನಭೂತ್॥ ೩೧ ॥

ಭಲೆ ಭಲೆ ಎಂದು ದೇವತೆಗಳೂ ಋಷಿಗಳೂ ಪ್ರಶಂಸಿಸುತ್ತಿದ್ದಂತೇ ದೇವ ದುಂದುಭಿನಾದವೂ ದ್ದೊ ಹೂಮಳೆಯೂ ಉಂಟಾಯಿತು.

ಏವಂ ದತ್ತ್ವಾ ತದಾ ಸೀತಾಂ ಮಂತ್ರೋದಕಪುರಸ್ಕೃತಾಮ್ ।
ಅಬ್ರವೀಜ್ಜನಕೋ ರಾಜಾ ಹರ್ಷೇಣಾಭಿಪರಿಪ್ಲುತಃ ॥ ೩೨ ॥

ಲಕ್ಷ್ಮಣಾಗಚ್ಛ ಭದ್ರಂ ತೇ ಊರ್ಮಿಲಾಮುದ್ಯತಾಂ ಮಯಾ ।
ಪ್ರತೀಚ್ಛ ಪಾಣಿಂ ಗೃಹ್ಣೀಷ್ವ ಮಾ ಭೂತ್ಕಾಲಸ್ಯ ಪರ್ಯಯಃ ॥ ೩೩ ॥

ಹೀಗೆ ಶ್ರೀರಾಮನಿಗೆ ಸೀತೆಯನ್ನು ಮಂತ್ರ ಉದಕ ಪೂರ್ವಕವಾಗಿ ದಾನ ಮಾಡಿ ರಾಜಾ ಜನಕನು ಹರ್ಷಭರಿತನಾಗಿ ಲಕ್ಷ್ಮಣನಿಗೂ ಹೇಳಿದ– ಲಕ್ಷ್ಮಣ, ಬಾ, ನಿನಗೆ ಶುಭವಾಗಲಿ. ನಿನಗೆ ಕೊಡಲೆಂದು ನಾನು ನಿಶ್ಚಯಿಸಿದ್ದ ಊರ್ಮಿಲೆಯ ಪಾಣಿಗ್ರಹಣ ಮಾಡು. ಕಾಲ ವಿಲಂಬವಾಗುವುದು ಬೇಡ.

ತಮೇವಮುಕ್ತ್ವಾ ಜನಕೋ ಭರತಂ ಚಾಭ್ಯಭಾಷತ ।
ಗೃಹಾಣ ಪಾಣಿಂ ಮಾಂಡವ್ಯಾಃ ಪಾಣಿನಾ ರಘುನಂದನ ॥ ೩೪ ॥

ಲಕ್ಷ್ಮಣನಿಗೆ ಹೀಗೆ ಹೇಳಿ ಜನಕನು ಭರತನಿಗೂ ಹೇಳಿದ, ಭರತನೆ! ಮಾಂಡವಿಯ ಪಾಣಿಯನ್ನು ಪಾಣಿಯಿಂದ ಗ್ರಹಣ ಮಾಡು.

ಜನಕನು ಇಷ್ಟು ಹೇಳಿದ ಬಳಿಕ ಕುಶಧ್ವಜನು ಮಾಂಡವಿಯನ್ನು ಭರತನಿಗೆ ಮಂತ್ರ ಉದಕ ಪೂರ್ವಕವಾಗಿ ದಾನ ಮಾಡಿದನೆಂದು ಇಟ್ಟುಕೊಳ್ಳಬೇಕು. ಜನಕನು ಅನುಜ್ಞೆ ಮಾತ್ರ ನೀಡಿದ್ದಾನೆ.

ಶತ್ರುಘ್ನಂ ಚಾಪಿ ಧರ್ಮಾತ್ಮಾ ಅಬ್ರವೀಜ್ಜನಕೇಶ್ವರಃ ।
ಶ್ರುತಕೀರ್ತ್ಯಾ ಮಹಾಬಾಹೋ ಪಾಣಿಂ ಗೃಹ್ಣೀಷ್ವ ಪಾಣಿನಾ ॥ ೩೫ ॥

ಧರ್ಮಾತ್ಮನಾದ ಜನಕರಾಜನು ಶತ್ರುಘ್ನನಿಗೂ ಹೇಳಿದ, ಮಹಾಬಾಹುವೆ! ಶ್ರುತಕೀರ್ತಿಯ ಪಾಣಿಯನ್ನು ಪಾಣಿಯಿಂದ ಗ್ರಹಣ ಮಾಡು, ಎಂದು.

ಬಳಿಕ ಕುಶಧ್ವಜನು ಶ್ರುತಕೀರ್ತಿಯನ್ನು ಮಂತ್ರೋದಕ ಪೂರ್ವಕವಾಗಿ ಶತ್ರುಘ್ನನಿಗೆ ನೀಡಿದನು.

ಜ್ಯೇಷ್ಠನಾದ ಭರತನಿಗಿಂತ ಮೊದಲು ಲಕ್ಷ್ಮಣನು ಹೇಗೆ ಪಾಣಿಗ್ರಹಣ ಮಾಡಿದ? ಇದು ಪರಿವೇದನರೂಪವಾದ ಮಹಾದೋಷವಾಗುವುದಿಲ್ಲವೆ? ಎಂದರೆ, ಲಕ್ಷ್ಮಣನಿಗೆ ಭರತನು ಜ್ಯೇಷ್ಠನಾದರೂ ಮಲತಾಯಿಯ ಮಗನಾದ್ದರಿಂದ ದೋಷವಿಲ್ಲ.

ಸರ್ವೇ ಭವಂತಃ ಸೌಮ್ಯಾಶ್ಚ ಸರ್ವೇ ಸುಚರಿತವ್ರತಾಃ ।
ಪತ್ನೀಭಿಃ ಸಂತು ಕಾಕುತ್ಸ್ಥಾ ಮಾ ಭೂತ್ಕಾಲಸ್ಯ ಪರ್ಯಯಃ ॥ ೩೬ ॥

'ನೀವು ನಾಲ್ವರೂ ಸೋಮ ಪಾನಾರ್ಹರು, ವ್ರತನಿಷ್ಠರು, ಪತ್ನಿಯರಿಂದ ಯುಕ್ತರಾಗಿರಿ. ಕಾಲವಿಲಂಬವಾಗುವುದು ಬೇಡ.'

ಜನಕಸ್ಯ ವಚಃ ಶ್ರುತ್ವಾ ಪಾಣೀನ್ಪಾಣಿಭಿರಸ್ಪೃಶನ್ ।
ಚತ್ವಾರಸ್ತೇ ಚತಸೃಣಾಂ ವಸಿಷ್ಠಸ್ಯ ಮತೇ ಸ್ಥಿತಾಃ ॥ ೩೭ ॥

ಅಗ್ನಿಂ ಪ್ರದಕ್ಷಿಣೀಕೃತ್ಯ ವೇದಿಂ ರಾಜಾನಮೇವ ಚ ।
ಋಷೀಂಶ್ಚೈವ ಮಹಾತ್ಮಾನಃ ಸಭಾರ್ಯಾ ರಘುಸತ್ತಮಾಃ ॥
ಯಥೋಕ್ತೇನ ತದಾ ಚಕ್ರುರ್ವಿವಾಹಂ ವಿಧಿಪೂರ್ವಕಮ್ ॥ ೩೮ ॥

ಜನಕನ ಈ ಮಾತನ್ನು ಕೇಳಿ ನಾಲ್ವರೂ ನಾಲ್ಕು ಕನ್ಯೆಯರ ಪಾಣಿಗ್ರಹಣ ಮಾಡಿದರು.

ಇಲ್ಲಿ ಒಂದೇ ವೇದಿಕೆಯಲ್ಲಿ ಒಂದೇ ಅಗ್ನಿಯಲ್ಲಿ ವಸಿಷ್ಠರು ಆಭ್ಯುದಯಿಕ ಹೋಮವನ್ನು ಮಾಡಿದ್ದಾರೆ. ಅದರಿಂದ ವಸಿಷ್ಠರ ಅನುಜ್ಞೆ ಪಡೆದು ನಾಲ್ವರೂ ತಮ್ಮ ತಮ್ಮ ಭಾರ್ಯೆಯರ ಕೈಸಿಡಿದು ಆ ಅಗ್ನಿಗೇ ಪ್ರದಕ್ಷಿಣೆ ಮಾಡಿದ್ದಾರೆ. ಬಳಿಕ ವಿವಾಹ ವೇದಿಗೂ ರಾಜಾ ಜನಕನಿಗೂ ಋಷಿಗಳಿಗೂ ಮಹಾತ್ಮರಾದ ನಾಲ್ವರೂ ಸಪತ್ನೀಕರಾಗಿ ಪ್ರದಕ್ಷಿಣೆ ಮಾಡಿದರು. ಬಳಿಕ ಅವರು ಶಾಸ್ತ್ರೋಕ್ತಪ್ರಕಾರದಿಂದ ಕಲ್ಪಸೂತ್ರವಿಧಿಪೂರ್ವಕವಾಗಿ ವಿವಾಹಕರ್ಮವನ್ನು ಅಂದರೆ ಪ್ರತ್ಯೇಕವಾಗಿ ಅಗ್ನಿಪ್ರತಿಷ್ಠೆಗಳನ್ನು ಮಾಡಿ ವಿವಾಹ ಹೋಮ ಮಾಡಿದರು. ಔಪಾಸನಾಗ್ನಿ ಸಂಪಾದನ ಮಾಡಿದರು.

ಕಾಕುತ್ಸ್ಥೈಶ್ಚ ಗೃಹೀತೇಷು ಲಲಿತೇಷು ಚ ಪಾಣಿಷು ।
ಪುಷ್ಪವೃಷ್ಟಿರ್ಮಹತ್ಯಾಸೀದಂತರಿಕ್ಷಾತ್ಸುಭಾಸ್ವರಾ ॥
ದಿವ್ಯದುಂದುಭಿನಿರ್ಘೋಷೈರ್ಗೀತವಾದಿತ್ರನಿಃಸ್ವನೈಃ ॥ ೩೯ ॥

ನನೃತುಶ್ಚಾಪ್ಸರಃಸಂಘಾ ಗಂಧರ್ವಾಶ್ಚ ಜಗುಃ ಕಲಮ್ ।
ವಿವಾಹೇ ರಘುಮುಖ್ಯಾನಾಂ ತದದ್ಭುತಮದೃಶ್ಯತ ॥ ೪೦ ॥

ನಾಲ್ವರು ದಶರಥಪುತ್ರರು ಹೀಗೆ ನಾಲ್ವರು ಕನ್ಯೆಯರ ಪಾಣಿಗ್ರಹಣ ಮಾಡಿದಾಗ ಅಂತರಿಕ್ಷದಿಂದ ಬಹಳ ಹೊಳೆಯುವ ದೊಡ್ಡ ಹೂಮಳೆ ಸುರಿಯಿತು. ದಿವ್ಯ ದುಂದುಭಿಘೋಷದೊಂದಿಗೆ ಗೀತವಾದ್ಯಗಳ ಧ್ವನಿಗಳೊಂದಿಗೆ ಅಪ್ಸರೆಯರ ಸಮೂಹನೃತ್ಯಗಳೂ ಗಂಧರ್ವರ ಮಧುರ ಗಾನಗಳೂ ನಡೆದುವು. ರಘುವಂಶ ಮುಖ್ಯರಾದ ರಾಮಾದಿಗಳ ವಿವಾಹದಲ್ಲಿ ಇಂಥ ಅದ್ಭುತಗಳು ಕಂಡು ಬಂದುವು.

ಈದೃಶೇ ವರ್ತಮಾನೇ ತು ತೂರ್ಯೋದ್ಘುಷ್ಟನಿನಾದಿತೇ ।
ತ್ರಿರಗ್ನಿಂ ತೇ ಪರಿಕ್ರಮ್ಯ ಊಹುರ್ಭಾರ್ಯಾ ಮಹೌಜಸಃ ॥ ೪೧ ॥

ಇಂಥ ಅದ್ಭುತಗಳು ಕಂಡುಬರುವಾಗಲೇ ವಾದ್ಯಘೋಷಧ್ವನಿ ಕೇಳಿ-ಬರುತ್ತಿದ್ದಂತೆಯೇ ಮಹಾಬಲಶಾಲಿಗಳಾದ ನಾಲ್ವರು ರಾಜಕುಮಾರರು ತಮ್ಮ ತಮ್ಮ ಅಗ್ನಿಗಳಿಗೆ ಪ್ರದಕ್ಷಿಣೆ ಮಾಡಿ ವಿವಾಹ ಮಾಡಿಕೊಂಡರು.

ಅಥೋಪಕಾರ್ಯಾಂ ಜಗ್ಮುಸ್ತೇ ಸಭಾರ್ಯಾ ರಘುನಂದನಾಃ ।
ರಾಜಾಪ್ಯನುಯಯೌ ಪಶ್ಯನ್ಸರ್ಷಿಸಂಘಃ ಸಬಾಂಧವಃ ॥ ೪೨ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ತ್ರಿಸಪ್ತತಿತಮಃ ಸರ್ಗಃ ॥ ೭೩ ॥

ಬಳಿಕ ರಘುನಂದನರು ನಾಲ್ವರೂ ಸಪತ್ನೀಕರಾಗಿ ಶಿಬಿರದ ಕಡೆಗೆ ನಡೆದರು. ರಾಜಾ ದಶರಥನು ಅವರನ್ನು ನೋಡುತ್ತ ಋಷಿಸಮೂಹಗಳೊಂದಿಗೆ ಬಾಂಧವರೊಂದಿಗೆ ಹಿಂಬಾಲಿಸಿ ನಡೆದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ರಾಮಾಯಣ ಕಥಾಸಂಕ್ಷೇಪ ಎಂಬ ಎಪ್ಪತ್ತಮೂರನೆ ಸರ್ಗ ಮುಗಿಯಿತು.

ಚತುಃಸಪ್ತತಿತಮಃ ಸರ್ಗಃ

ಅಥ ರಾತ್ರ್ಯಾಂ ವ್ಯತೀತಾಯಾಂ ವಿಶ್ವಾಮಿತ್ರೋ ಮಹಾಮುನಿಃ ।
ಆಪೃಷ್ಟ್ವಾ ತೌ ಚ ರಾಜಾನೌ ಜಗಾಮೋತ್ತರಪರ್ವತಮ್ ॥
ಆಶೀರ್ಭಿಃ ಪೂರಯಿತ್ವಾ ಚ ಕುಮಾರಾಂಶ್ಚ ಸರಾಘವಾನ್ ॥ ೧ ॥

ಅಂದುರಾತ್ರಿ ಕಳೆದ ಬಳಿಕ ಮಹಾಮುನಿ ವಿಶ್ವಾಮಿತ್ರರು ದಶರಥ ಜನಕರಿಬ್ಬರಿಗೆ ಹೋಗಿ ಬರುವೆನೆಂದು ಹೇಳಿ, ರಾಮಾದಿಗಳಿಗೂ ಆಶೀರ್ವದಿಸಿ ಹಿಮಾಲಯ ಪರ್ವತಕ್ಕೆ ಹೊರಟುಹೋದರು.

ವಿಶ್ವಾಮಿತ್ರೇ ಗತೇ ರಾಜಾ ವೈದೇಹಂ ಮಿಥಿಲಾಧಿಪಮ್ ।
ಆಪೃಷ್ಟ್ವಾಥ ಜಗಾಮಾಶು ರಾಜಾ ದಶರಥಃ ಪುರೀಮ್ ॥ ೨ ॥

ವಿಶ್ವಾಮಿತ್ರರು ಹೋದ ಬಳಿಕ ರಾಜಾ ದಶರಥನೂ ಮಿಥಿಲಾಧಿಪ ವಿದೇಹ-ರಾಜನಿಗೆ ಹೋಗಿ ಬರುವುದಾಗಿ ಹೇಳಿ ಬೇಗನೆ ಅಯೋಧ್ಯೆಗೆ ಹೊರಟನು.

ಗಚ್ಛಂತಂ ತಂ ತು ರಾಜಾನಮನ್ವಗಚ್ಛನ್ನರಾಧಿಪಃ ।
ಅಥ ರಾಜಾ ವಿದೇಹಾನಾಂ ದದೌ ಕನ್ಯಾಧನಂ ಬಹು ॥ ೩ ॥

ದಶರಥ ಹೊರಟಾಗ ಅವನನ್ನು ಬೀಳ್ಕೊಡಲು ಸ್ವಲ್ಪದೂರ ಜನಕನು ಹಿಂಬಾ-ಲಿಸಿದನು. ಬಹು ಕನ್ಯಾಧನವನ್ನೂ ಕೊಟ್ಟನು.

ಗವಾಂ ಶತಸಹಸ್ರಾಣಿ ಬಹೂನಿ ಮಿಥಿಲೇಶ್ವರಃ ।
ಕಂಬಲಾನಾಂ ಚ ಮುಖ್ಯಾನಾಂ ಕ್ಷೌಮಕೋಟ್ಯಂಬರಾಣಿ ಚ ॥ ೪ ॥

ಬಹು ಲಕ್ಷಗೋವುಗಳನ್ನು ಉತ್ತಮ ಕಂಬಳಿಗಳನ್ನು ರೇಶಿಮೆ ವಸ್ತ್ರಗಳನ್ನು ಬೇರೆ ಕೋಟಿ ವಸ್ತ್ರಗಳನ್ನೂ ಕೊಟ್ಟನು.

ಹಸ್ತ್ಯಶ್ವರಥಪಾದಾತಂ ದಿವ್ಯರೂಪಂ ಸ್ವಲಂಕೃತಮ್ ।
ದದೌ ಕನ್ಯಾಪಿತಾ ತಾಸಾಂ ದಾಸೀದಾಸಮನುತ್ತಮಮ್ ॥ ೫ ॥

ಗಜ ಅಶ್ವರಥ ಪದಾತಿ ಸೈನ್ಯಗಳನ್ನೂ ಅಲಂಕೃತವಾದ ದಿವ್ಯರೂಪ ಉಳ್ಳ ದಾಸದಾಸೀ ಸಮೂಹಗಳನ್ನೂ ಕನ್ಯಾಪಿತ ಜನಕನು ಕೊಟ್ಟನು.

ಹಿರಣ್ಯಸ್ಯ ಸುವರ್ಣಸ್ಯ ಮುಕ್ತಾನಾಂ ವಿದ್ರುಮಸ್ಯ ಚ ।
ದದೌ ಪರಮಸಂಹೃಷ್ಟಃ ಕನ್ಯಾಧನಮನುತ್ತಮಮ್ ॥ ೬ ॥

ಬೆಳ್ಳಿ ಬಂಗಾರ ಮುತ್ತು ಹವಳ ಮುಂತಾದ ಉತ್ತಮವಾದ ಕನ್ಯಾಧನವನ್ನೂ ಪರಮ ಸಂತೋಷದಿಂದ ಜನಕನು ನೀಡಿದನು.

ದತ್ತ್ವಾ ಬಹುಧನಂ ರಾಜಾ ಸಮನುಜ್ಞಾಪ್ಯ ಪಾರ್ಥಿವಮ್ ।
ಪ್ರವಿವೇಶ ಸ್ವನಿಲಯಂ ಮಿಥಿಲಾಂ ಮಿಥಿಲೇಶ್ವರಃ ॥ ೭ ॥

ಜನಕರಾಜನು ದಶರಥನಿಗೆ ಬಹುಧನವನ್ನು ನೀಡಿ ಅವನ ಅನುಜ್ಞೆ ಪಡೆದು ಮಿಥಿಲೆಯಲ್ಲಿ ತನ್ನ ಅರಮನೆಯನ್ನು ಪ್ರವೇಶಿಸಿದನು.

ರಾಜಾऽಪ್ಯಯೋಧ್ಯಾಧಿಪತಿಃ ಸಹ ಪುತ್ರೈರ್ಮಹಾತ್ಮಭಿಃ ।
ಋಷೀನ್ಸರ್ವಾನ್ಪುರಸ್ಕೃತ್ಯ ಜಗಾಮ ಸಬಲಾನುಗಃ ॥ ೮ ॥

ಅಯೋಧ್ಯಾಧಿಪತಿ ದಶರಥರಾಜನು ಮಹಾತ್ಮರಾದ ತನ್ನ ಪುತ್ರರೊಂದಿಗೆ ಸೈನ್ಯ ಮತ್ತು ಭೃತ್ಯರೊಂದಿಗೆ ಎಲ್ಲ ಋಷಿಗಳನ್ನೂ ಮುಂದೆ ಮಾಡಿಕೊಂಡು ಪ್ರಯಾಣ ಮಾಡಿದನು.

ಗಚ್ಛಂತಂ ತಂ ನರವ್ಯಾಘ್ರಂ ಸರ್ಷಿಸಂಘಂ ಸರಾಘವಮ್ ।
ಘೋರಾಃ ಸ್ಮ ಪಕ್ಷಿಣೋ ವಾಚೋ ವ್ಯಾಹರಂತಿ ತತಸ್ತತಃ ॥ ೯ ॥

ರಾಜಕುಮಾರರೊಂದಿಗೆ ಋಷಿಸಮೂಹದೊಂದಿಗೆ ದಶರಥರಾಜನು ಪ್ರಯಾಣ ಮಾಡುತ್ತಿದ್ದಾಗ ಅಲ್ಲಲ್ಲಿ ಭಯಂಕರ ಕರ್ಕಶವಾಗಿ ಪಕ್ಷಿಗಳು ಕೂಗಿದುವು. ಇದು ಅಶುಭಸೂಚನೆ.

ಭೌಮಾಶ್ಚೈವ ಮೃಗಾಃ ಸರ್ವೇ ಗಚ್ಛಂತಿ ಸ್ಮ ಪ್ರದಕ್ಷಿಣಮ್ ।
ತಾನ್ದೃಷ್ಟ್ವಾ ರಾಜಶಾರ್ದೂಲೋ ವಸಿಷ್ಠಂ ಪರ್ಯಪೃಚ್ಛತ ॥ ೧೦ ॥

ನೆಲದ ಮೇಲಿನ ಮೃಗಗಳೆಲ್ಲವೂ ಪ್ರದಕ್ಷಿಣೆಯಾಗಿ ಸಂಚರಿಸಿದುವು. ಇದು ಶುಭ ಸೂಚನೆ. ಈ ಶುಭ ಮತ್ತು ಅಶುಭ ಸೂಚನೆಗಳ ಬಗ್ಗೆ ದಶರಥನು ವಸಿಷ್ಠರಲ್ಲಿ ಕೇಳಿಕೊಂಡನು.

ಅಸೌಮ್ಯಾಃ ಪಕ್ಷಿಣೋ ಘೋರಾ ಮೃಗಾಶ್ಚಾಪಿ ಪ್ರದಕ್ಷಿಣಾಃ ।
ಕಿಮಿದಂ ಹೃದಯೋತ್ಕಂಪಿ ಮನೋ ಮಮ ವಿಷೀದತಿ ॥ ೧೧ ॥

ಭಯಂಕರ ಪಕ್ಷಿಗಳು ಭಯಂಕರ ಶಬ್ದ ಮಾಡುತ್ತಿವೆ ಮೃಗಗಳು ಪ್ರದಕ್ಷಿಣೆ-ಯಾಗಿ ಸಂಚರಿಸುತ್ತಿವೆ ಎದೆ ಡವಡವ ಹೊಡೆದುಕೊಳ್ಳುವಂತೆ ಮಾಡುವ ಈ ನಿಮಿತ್ತಗಳು ಏನನ್ನೂ ಸೂಚಿಸುತ್ತವೆ? ನನ್ನ ಮನ ಕಳವಳಗೊಳ್ಳುತ್ತಿದೆ.

ರಾಜ್ಞೋ ದಶರಥಸ್ಯೈತಚ್ಛ್ರುತ್ವಾ ವಾಕ್ಯಂ ಮಹಾನೃಷಿಃ ।
ಉವಾಚ ಮಧುರಾಂ ವಾಣೀಂ ಶ್ರೂಯತಾಮಸ್ಯ ಯತ್ಫಲಮ್ ॥೧೨॥

ದಶರಥರಾಜನ ಈ ಮಾತನ್ನು ಕೇಳಿ ವಸಿಷ್ಠ ಮಹರ್ಷಿ ಮಧುರವಾದ ಈ ಮಾತನ್ನು ಹೇಳಿದರು. ಇದರ ಫಲವೇನೆಂದು ಹೇಳುವೆನು ಕೇಳು.

ಉಪಸ್ಥಿತಂ ಭಯಂ ಘೋರಂ ದಿವ್ಯಂ ಪಕ್ಷಿಮುಖಾಚ್ಚ್ಯುತಮ್ ।
ಮೃಗಾಃ ಪ್ರಶಮಯಂತ್ಯೇತೇ ಸಂತಾಪಸ್ತ್ಯಜ್ಯತಾಮಯಮ್ ॥ ೧೩ ॥

ಅಂತರಿಕ್ಷದಲ್ಲಿ ಪಕ್ಷಿ ಮುಖದಿಂದ ಬಂದ ಶಬ್ದವು 'ಘೋರ ಭಯ ಸನ್ನಿಹಿತ-ವಾಗಿದೆ' ಎನ್ನುತ್ತಿದೆ. ಈ ಮೃಗಗಳು ಪ್ರದಕ್ಷಿಣೆ ಬರುವುದರಿಂದ ಭಯ ಪರಿಹಾರ-ವನ್ನು ಸೂಚಿಸುತ್ತದೆ. ಮನಸ್ಸಿನ ಕಳವಳವನ್ನು ಬಿಟ್ಟುಬಿಡು.

ತೇಷಾಂ ಸಂವದತಾಂ ತತ್ರ ವಾಯುಃ ಪ್ರಾದುರ್ಬಭೂವ ಹ ।
ಕಂಪಯನ್ ಪೃಥಿವೀಂ ಸರ್ವಾಂ ಪಾತಯಂಶ್ಚ ದ್ರುಮಾನ್ ಶುಭಾನ್॥

ದಶರಥ ಮುಂತಾದವರು ಹೀಗೆ ಪರಸ್ಪರ ಮಾತನಾಡಿಕೊಳ್ಳುತ್ತಿದ್ದಾಗ ಅಕಸ್ಮಾತ್ ಬಿರುಗಾಳಿ ಬೀಸಿತು. ಅದು ಇಡಿ ಭೂಮಿಯನ್ನು ನಡುಗಿಸಿತು. ಶುಭಕರವಾದ ಮರಗಳನ್ನು ಬೀಳಿಸಿತು.

ತಮಸಾ ಸಂವೃತಃ ಸೂರ್ಯಃ ಸರ್ವಾ ನ ಪ್ರಬಭುರ್ದಿಶಃ ।
ಭಸ್ಮನಾ ಚಾವೃತಂ ಸರ್ವಂ ಸಂಮೂಢಮಿವ ತದ್ಬಲಮ್ ॥ ೧೫ ॥

ಸೂರ್ಯನನ್ನು ಕತ್ತಲು ಕವಿಯಿತು! ದಿಕ್ಕುಗಳೆಲ್ಲವೂ ಮಂಕಾದುವು. ಸೈನ್ಯ-ವೆಲ್ಲವೂ ಬೂದಿಮುಚ್ಚಿದ ಕೆಂಡದಂತೆ ಮಸುಕಾಯಿತು.

ವಸಿಷ್ಠಶ್ಚರ್ಷಯಶ್ಚಾನ್ಯೇ ರಾಜಾ ಚ ಸಸುತಸ್ತದಾ ।
ಸಸಂಜ್ಞಾ ಇವ ತತ್ರಾಸನ್ಸರ್ವಮನ್ಯದ್ವಿಚೇತನಮ್ ॥ ೧೬ ॥

ವಸಿಷ್ಠರು, ಬೇರೆ ಋಷಿಗಳು ದಶರಥರಾಜ, ಮತ್ತು ರಾಜಕುಮಾರರು ಮಾತ್ರ ಎಚ್ಚರವಿದ್ದರು. ಉಳಿದವರೆಲ್ಲರೂ ಎಚ್ಚರ ತಪ್ಪಿದ್ದರು.

ವಸಿಷ್ಠರು ಹೇಳಿದಂತೆ ಇದು ಘೋರಭಯಂಕರ ಬಿರುಗಾಳಿ ಕತ್ತಲುಗಳ ರೂಪದಿಂದ ಲೋಕವ್ಯಾಪಿಯಾದ ಅತುಲ ಮಹಾಸುರನ ಆಗಮನ. ಲೋಕಮಯ ಲೋಕವ್ಯಾಪಿಯಾದ ತನ್ನ ಸ್ವರೂಪವನ್ನು ತೋರಿಕೊಂಡಿದ್ದಾನೆ. ಋಷಿಗಳ ದೇವತೆಗಳ ಮೇಲೆ ಅವನ ಆಟ ನಡೆಯುವುದಿಲ್ಲ ಎಂಬುದನ್ನು ವಸಿಷ್ಠಾದಿ ಮುನಿಗಳ ದಶರಥಾದಿ ದೇವಾಂಶ ಸಂಭೂತರು ಎಚ್ಚರ ತಪ್ಪದೇ ಇರುವುದು ತೋರಿಸುತ್ತಿದೆ. ವಸಿಷ್ಠರು ಹೇಳಿದಂತೆ ಭಯಪರಿಹಾರವಾಗುತ್ತದೆ ಎಂಬುದನ್ನು ಪರಶುರಾಮಾಗಮನವೇ ತಿಳಿಸುತ್ತದೆ.

ತಸ್ಮಿಂಸ್ತಮಸಿ ಘೋರೇ ತು ಭಸ್ಮಚ್ಛನ್ನೇವ ಸಾ ಚಮೂಃ ।
ದದರ್ಶ ಭೀಮಸಂಕಾಶಂ ಜಟಾಮಂಡಲಧಾರಿಣಮ್ ॥ ೧೭ ॥

ಭಾರ್ಗವಂ ಜಾಮದಗ್ನ್ಯಂ ತಂ ರಾಜಾ ರಾಜವಿಮರ್ದಿನಮ್ ।
ಕೈಲಾಸಮಿವ ದುರ್ಧರ್ಷಂ ಕಾಲಾಗ್ನಿಮಿವ ದುಃಸಹಮ್ ॥ ೧೮ ॥

ಜ್ವಲಂತಮಿವ ತೇಜೋಭಿರ್ದುರ್ನಿರೀಕ್ಷ್ಯಂ ಪೃಥಗ್ಜನೈಃ ।
ಸ್ಕಂಧೇ ಚಾಸಾದ್ಯ ಪರಶುಂ ಧನುರ್ವಿದ್ಯುದ್ಗಣೋಪಮಮ್ ॥
ಪ್ರಗೃಹ್ಯ ಶರಮುಖ್ಯಂ ಚ ತ್ರಿಪುರಘ್ನಂ ಯಥಾ ಶಿವಮ್ ॥ ೧೯ ॥

ಆ ಅಸುರ ಸ್ವಭಾವದ ಘೋರ ತಮಸಿನಲ್ಲಿ ದಿವ್ಯವಾದ ರಾಜನ ಸೈನ್ಯ ಬೂದಿ ಮುಚ್ಚಿದ ಕೆಂಡದಂತೆ ಕಂಡಿತು. ಆಗಲೇ ರಾಜಾ ದಶರಥನು ದುಷ್ಟರಾಜರ ಮರ್ದನ ಮಾಡುವ, ಜಟಾಜೂಟ ಧರಿಸಿ ಅಸುರರಿಗೆ ಘೋರವಾಗಿ ಕಾಣುವ ಭೃಗುವಂಶ ತಿಲಕ ಜಮದಗ್ನಿ ಪುತ್ರ ಪರಶುರಾಮನನ್ನು 'ಕಂಡನು' ಕೈಲಾಸ ಪರ್ವತದಂತೆ ಯಾರಿಂದಲೂ ಮಣಿಸಲಾಗದವನು. ಕಾಲಾಗ್ನಿಯಂತೆ ಆಕ್ರಮಿಸ-ಲಾಗದವನು ತೇಜಸ್ಸಿನಿಂದ ಜ್ವಲಿಸುವಂತೆ ಕಾಣುವವನು ಅಸುರೀಸ್ವಭಾವದ ಅಜ್ಞ ಜನರಿಗೆ ಕಣ್ಣೆತ್ತಿ ನೋಡಲೂ ಆಗದವನು ಪರಶುರಾಮ.

ಹೆಗಲಮೇಲೆ ಪರಶು ಧನುಸ್ಸುಗಳನ್ನೂ ಹೊತ್ತು ಮಿಂಚಿನ ರಾಶಿಯಂಥ ಉಗ್ರವಾದ ಬಾಣಗಳನ್ನೂ ಹಿಡಿದು ತ್ರಿಪುರ ಸಂಹಾರಕ್ಕೆ ಹೊರಟ ಶಿವನಂತಿರುವನು.

ತಂ ದೃಷ್ಟ್ವಾ ಭೀಮಸಂಕಾಶಂ ಜ್ವಲಂತಮಿವ ಪಾವಕಮ್ ।
ವಸಿಷ್ಠಪ್ರಮುಖಾ ವಿಪ್ರಾ ಜಪಹೋಮಪರಾಯಣಾಃ ॥ ೨೦ ॥

ಸಂಗತಾ ಮುನಯಃ ಸರ್ವೇ ಸಂಜಜಲ್ಪುರಥೋ ಮಿಥಃ ।
ಕಚ್ಚಿತ್ಪಿತೃವಧಾಮರ್ಷೀ ಕ್ಷತ್ರಂ ನೋತ್ಸಾದಯಿಷ್ಯತಿ ॥ ೨೧ ॥

ಭಯಂಕರನಾಗಿ ಕಾಣುವ ಉರಿವ ಬೆಂಕಿಯಂತಿರುವ ಅಗ್ನ್ಯಂತರ್ಗತ ಪರಶು-ರಾಮನನ್ನು ನೋಡುತ್ತ ಜಪ ಹೋಮ ಪರಾಯಣರಾದ ವಸಿಷ್ಠಾದಿ ಮುನಿ-ಗಳೆಲ್ಲರೂ ಜೊತೆಗೂಡಿ ಪರಸ್ಪರ ಮಾತನಾಡಿಕೊಂಡರು. 'ಪಿತೃವಧದಿಂದ ಕುಪಿತನಾದ ಈ ಪರಶುರಾಮ ಈಗ ಕ್ಷತ್ರಿಯ ಕುಲನಾಶಕ್ಕೆ ಹೊರಟಿಲ್ಲ ತಾನೆ?' ಎಂದು.

ಪೂರ್ವಂ ಕ್ಷತ್ರವಧಂ ಕೃತ್ವಾ ಗತಮನ್ಯುರ್ಗತಜ್ವರಃ ।
ಕ್ಷತ್ರಸ್ಯೋತ್ಸಾದನಂ ಭೂಯೋ ನ ಖಿಲ್ವಸ್ಯ ಚಿಕೀರ್ಷಿತಮ್ ॥ ೨೨ ॥

ಹಿಂದೆಯೆ ಕ್ಷತ್ರಿಯ ಕುಲಸಂಹಾರ ಮಾಡಿ ಕೋಪ ಶಾಂತ ಮಾಡಿಕೊಂಡಿದ್ದಾನೆ. ಈಗ ಅವನಲ್ಲಿ ಕೋಪವಿಲ್ಲ. ಕ್ಷತ್ರಿಯಕುಲವನ್ನು ಪುನಃ ನಾಶ ಮಾಡುವ ಉದ್ದೇಶ ಅವನಿಗೆ ಇಲ್ಲ. ಲೋಕವ್ಯಾಪ್ತನಾದ ಅತುಲ ಮಹಾಸುರನನ್ನು ತನ್ನದೇ ಆದ ದಾಶರಥಿ ರಾಮ ರೂಪದಿಂದ ನಾಶ ಮಾಡುವುದಕ್ಕೇ ಬಂದಿದ್ದಾನೆ!

ಏವಮುಕ್ತ್ವಾರ್ಘ್ಯಮಾದಾಯ ಭಾರ್ಗವಂ ಭೀಮದರ್ಶನಮ್ ।
ಋಷಯೋ ರಾಮ ರಾಮೇತಿ ವಚೋ ಮಧುರಮಬ್ರುವನ್ ॥ ೨೩ ॥

ಹೀಗೆ ಹೇಳಿಕೊಳ್ಳುತ್ತ ಶತ್ರುಭೀಕರನಾಗಿ ಕಾಣುವ ಭಾರ್ಗವ ರಾಮನಿಗೆ ಅರ್ಘ್ಯವನ್ನು ತಂದಿತ್ತು ಋಷಿಗಳು 'ರಾಮ! ರಾಮ!' ಎಂದು ಮಧುರವಾದ ಅಕ್ಷರಗಳಿಂದ ಸ್ತುತಿಸಿದರು.

ಪ್ರತಿಗೃಹ್ಯ ತು ತಾಂ ಪೂಜಾಮೃಷಿದತ್ತಾಂ ಪ್ರತಾಪವಾನ್ ।
ರಾಮಂ ದಾಶರಥಿಂ ರಾಮೋ ಜಾಮದಗ್ನ್ಯೋಽಭ್ಯಭಾಷತ ॥ ೨೪ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಚತುಃಸಪ್ತತಿತಮಃ ಸರ್ಗಃ ॥ ೭೪ ॥

ಪ್ರತಾಪಶಾಲಿ ಪರಶುರಾಮನು ಋಷಿಗಳು ತಂದಿತ್ತ ಅರ್ಘ್ಯಸತ್ಕಾರವನ್ನು ಸ್ವೀಕರಿಸಿ ದಾಶರಥಿ ರಾಮನಿಗೆ ನುಡಿದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಎಪ್ಪತ್ತನಾಲ್ಕನೆ ಸರ್ಗ ಮುಗಿಯಿತು.

ಪಂಚಸಪ್ತತಿತಮಃ ಸರ್ಗಃ

ರಾಮ ದಾಶರಥೇ ರಾಮ ವೀರ್ಯಂ ತೇ ಶ್ರೂಯತೇಽದ್ಭುತಮ್ ।
ಧನುಷೋ ಭೇದನಂ ಚೈವ ನಿಖಿಲೇನ ಮಯಾ ಶ್ರುತಮ್ ॥ ೧ ॥

ರಾಮ! ದಶರಥ ಪುತ್ರ ರಾಮ! ನಿನ್ನ ಅದ್ಭುತ ಪರಾಕ್ರಮವನ್ನು ನಾನು ಕೇಳಿದ್ದೇನೆ. ನೀನು ಶಿವಧನುಸ್ಸನ್ನು ಮುರಿದ ವೃತ್ತಾಂತವನ್ನು ಪೂರ್ತಿಯಾಗಿ ನಾನು ಕೇಳಿದ್ದೇನೆ.

ತದದ್ಭುತಮಚಿಂತ್ಯಂ ಚ ಭೇದನಂ ಧನುಷಸ್ತ್ವಯಾ ।
ತಚ್ಛ್ರುತ್ವಾಹಮನುಪ್ರಾಪ್ತೋ ಧನುರ್ಗೃಹ್ಯಾಪರಂ ಶುಭಮ್ ॥ ೨ ॥

ನೀನು ಧನುಸ್ಸನ್ನು ಮುರಿದುದು ಅದ್ಭುತ, ಅಚಿಂತ್ಯ. ಅದನ್ನು ಕೇಳಿ ಇನ್ನೊಂದು ಮಂಗಳಕರವಾದ ಧನುಸ್ಸನ್ನು ನಿನಗಾಗಿ ಹಿಡಿದುಕೊಂಡು ಬಂದಿದ್ದೇನೆ.

ತದಿದಂ ಘೋರಸಂಕಾಶಂ ಚಾಮದಗ್ನ್ಯಂ ಮಹದ್ಧನುಃ ।
ಪೂರಯಸ್ವ ಶರೇಣೈವ ಸ್ವಬಲಂ ದರ್ಶಯಸ್ವ ಚ ॥ ೩ ॥

ಈ ದೊಡ್ಡ ಧನುಸ್ಸು ಶತ್ರುಭಯಂಕರವಾಗಿ ಕಾಣುತ್ತದೆ. ನಮ್ಮ ತಂದೆ ಜಮದಗ್ನಿಯಿಂದ ನನಗೆ ಇದು ಬಂದಿದೆ. ಇದಕ್ಕೆ ಹೆದೆಯೇರಿಸಿ ಬಾಣ ಹೂಡಿ ನಿನ್ನ ಬಲವನ್ನು ತೋರು.

ತದಹಂ ತೇ ಬಲಂ ದೃಷ್ಟ್ವಾ ಧನುಷೋಽಸ್ಯಾಪಿ ಪೂರಣೇ ।
ದ್ವಂದ್ವಯುದ್ಧಂ ಪ್ರದಾಸ್ಯಾಮಿ ವೀರ್ಯಶ್ಲಾಘ್ಯಸ್ಯ ರಾಘವ ॥ ೪ ॥

ಈ ಧನುಸ್ಸನ್ನು ಕೂಡ ನೀನು ಹೆದೆ ಏರಿಸಿದೆ ಎಂದರೆ ನಿನ್ನ ಬಲವನ್ನು ನೋಡಿ ಬಲದಿಂದ ಶ್ಲಾಘ್ಯನೆನಿಸಿರುವ ನಿಗೆ ಉಚಿತ ಸತ್ಕಾರವಾಗಿರುವ ದ್ವಂದ್ವಯುದ್ಧವನ್ನು ನೀಡುವೆನು.

ಭೀತೋ ಯದಿ ಧನುಸ್ತ್ಯಕ್ತ್ವಾ ನಿರ್ಜಿತೋಽಸ್ಮೀತಿ ವಾ ವದ ।
ತಸ್ಯ ತದ್ವಚನಂ ಶ್ರುತ್ವಾ ರಾಜಾ ದಶರಥಸ್ತದಾ ॥
ವಿಷಣ್ಣವದನೋ ದೀನಃ ಪ್ರಾಂಜಲಿರ್ವಾಕ್ಯಮಬ್ರವೀತ್ ॥ ೫ ॥

'ನಿನಗೆ ಭಯವಿದ್ದರೆ ಧನುಸ್ಸನ್ನು ಬಿಟ್ಟು ಸೋತೆನೆಂದಾದರೂ ಹೇಳು.'

ಪರಶುರಾಮನ ಈ ಮಾತನ್ನು ಕೇಳಿ ರಾಜಾ ದಶರಥನಿಗೆ ಭಯವಾಯಿತು. ಭಯದಿಂದ ವಿಷಣ್ಣ ವದನನಾಗಿ ಕೈಮುಗಿದು ಹೇಳಿದನು.

ಕ್ಷತ್ರರೋಷಾತ್ಪಶಾಂತಸ್ತ್ವಂ ಬ್ರಾಹ್ಮಣಶ್ಚ ಮಹಾಯಶಾಃ ।
ಬಾಲಾನಾಂ ಮಮ ಪುತ್ರಾಣಾಮಭಯಂ ದಾತುಮರ್ಹಸಿ ॥ ೬ ॥

'ಕ್ಷತ್ರಿಯರ ಮೇಲಿನ ಕೋಪವನ್ನು ಬಿಟ್ಟು ಬಲು ಶಾಂತನಾಗಿರುವ ಮಹಾ-ಯಶನಾದ ಬ್ರಾಹ್ಮಣನು ನೀನು, ಬಾಲಕರಾದ ನನ್ನ ಪುತ್ರರಿಗೆ ಅಭಯವನ್ನು ನೀಡು.

ಭಾರ್ಗವಾಣಾಂ ಕುಲೇ ಜಾತಃ ಸ್ವಾಧ್ಯಾಯವ್ರತಶಾಲಿನಾಮ್ ।
ಸಹಸ್ರಾಕ್ಷೇ ಪ್ರತಿಜ್ಞಾಯ ಶಸ್ತ್ರಂ ಪ್ರಕ್ಷಿಪ್ತವಾನಸಿ ॥ ೭ ॥

'ವೇದಾಧ್ಯಯನ ನಿಯಮವನ್ನು ಪಾಲಿಸುವ ಭೃಗುಮುನಿ ವಂಶದಲ್ಲಿ ಜನಿಸಿದ ಬ್ರಾಹ್ಮಣನು ನೀನು. ದೇವೇಂದ್ರನ ಮುಂದೆ ಇನ್ನುಮುಂದೆ ಶಸ್ತ್ರವನ್ನು ಎತ್ತುವುದಿಲ್ಲ ಎಂದು ಪ್ರತಿಜ್ಞೆ ಮಾಡಿ ಶಸ್ತ್ರವನ್ನು ದೂರಕ್ಕೆ ಎಸೆದವನು.

ಸ ತ್ವಂ ಧರ್ಮಪರೋ ಭೂತ್ವಾ ಕಾಶ್ಯಪಾಯ ವಸುಂಧರಾಮ್ ।
ದತ್ತ್ವಾ ವನಮುಪಾಗಮ್ಯ ಮಹೇಂದ್ರಕೃತಕೇತನಃ ॥ ೮ ॥

'ಬ್ರಾಹ್ಮಣ ಧರ್ಮಪರನಾಗಿ ಕಾಶ್ಯಪನಿಗೆ ಭೂಮಿದಾನ ಮಾಡಿ ವನವಾಸವನ್ನು ಕೈಗೊಂಡು ಮಹೇಂದ್ರ ಪರ್ವತದಲ್ಲಿ ವಾಸ ಮಾಡುತ್ತಿರುವವನು ನೀನು.

ಮಮ ಸರ್ವವಿನಾಶಾಯ ಸಂಪ್ರಾಪ್ತಸ್ತ್ವಂ ಮಹಾಮುನೇ ।
ನ ಚೈಕಸ್ಮಿನ್ಹತೇ ರಾಮೇ ಸರ್ವೇ ಜೀವಾಮಹೇ ವಯಮ್ ॥ ೯ ॥

'ಮಹಾಮುನಿಯೆ, ನೀನು ಈಗ ನನ್ನ ಸರ್ವವಿನಾಶ ಮಾಡುವುದಕ್ಕಾಗಿ ಬಂದಿರುವೆಯ? ಒಬ್ಬ ರಾಮನನ್ನು ನೀನು ಕೊಂದೆಯಾದರೆ ನಾವು ಯಾರೂ ಬದುಕಿರುವುದಿಲ್ಲ.

ಬ್ರುವತ್ಯೇವಂ ದಶರಥೇ ಜಾಮದಗ್ನ್ಯಃ ಪ್ರತಾಪವಾನ್ ।
ಅನಾದೃತ್ಯೈವ ತದ್ವಾಕ್ಯಂ ರಾಮಮೇವಾಭ್ಯಭಾಷತ ॥ ೧೦ ॥

ದಶರಥನು ಹೀಗೆ ಹೇಳಿದಾಗ ಪ್ರತಾಪಶಾಲಿ ಪರಶುರಾಮನು ಅವನ ಮಾತನ್ನು ಕಡೆಗಣಿಸಿ ರಾಮನಿಗೇ ಹೇಳಲು ತೊಡಗಿದ.

ಇಮೇ ದ್ವೇ ಧನುಷೀ ಶ್ರೇಷ್ಠೇ ದಿವ್ಯೇ ಲೋಕಾಭಿಪೂಜಿತೇ ।
ದೃಢೇ ಬಲವತೀ ಮುಖ್ಯೇ ಸುಕೃತೇ ವಿಶ್ವಕರ್ಮಣಾ ॥ ೧೧ ॥

ಇವೆರಡು ಧನುಸ್ಸುಗಳು ಸರ್ವಲೋಕಗಳಿಂದ ಪೂಜಿತವಾಗಿವೆ. ಶ್ರೇಷ್ಠವಾದ ದಿವ್ಯ ಧನುಸ್ಸುಗಳು ವಿಶ್ವಕರ್ಮ ನಿರ್ಮಿತವಾಗಿದ್ದು ಚೆನ್ನಾಗಿ ತಯಾರಾಗಿರುವಂಥವು ದೃಢ, ಬಲಿಷ್ಠವಾಗಿದ್ದು ಧನುಸ್ಸುಗಳಲ್ಲೆಲ್ಲ ಮುಖ್ಯವಾಗಿವೆ.

ಅತಿಸೃಷ್ಟಂ ಸುರೈರೇಕಂ ತ್ರ್ಯಂಬಕಾಯ ಯುಯುತ್ಸವೇ ।
ತ್ರಿಪುರಘ್ನಂ ನರಶ್ರೇಷ್ಠ ಭಗ್ನಂ ಕಾಕುತ್ಸ್ಥ ಯತ್ತ್ವಯಾ ॥
ಇದಂ ದ್ವಿತೀಯಂ ದುರ್ಧರ್ಷಂ ವಿಷ್ಣೋರ್ದತ್ತಂ ಸುರೋತ್ತಮೈಃ॥೧೨॥

ತ್ರಿಪುರಾಸುರರೊಂದಿಗೆ ಯುದ್ಧಕ್ಕೆ ಹೊರಟ ಶಿವನಿಗೆ ಒಂದನ್ನು ದೇವತೆಗಳು ಕೊಟ್ಟರು. ತ್ರಿಪುರರನ್ನು ನಾಶ ಪಡಿಸಿದ ಆ ಧನುಸ್ಸನ್ನು ರಾಮ! ನೀನು ಮುರಿದಿರುವೆ. ಈ ಧನುಸು ಎರಡನೆಯದು ಇದನ್ನು ವಿಷ್ಣುವಿಗೆ ದೇವತೆಗಳು ಕೊಟ್ಟರು. ಇದು ಯಾರಿಗೂ ಮಣಿಸಲಾಗದುದು.

ತದಿದಂ ವೈಷ್ಣವಂ ರಾಮ ಧನುಃ ಪರಮಭಾಸ್ವರಮ್ ।
ಸಮಾನಸಾರಂ ಕಾಕುತ್ಸ್ಥ ರೌದ್ರೇಣ ಧನುಷಾ ತ್ವಿದಮ್ ॥ ೧೩ ॥

ಇದು, ರಾಮ! ವೈಷ್ಣವಧನುಸ್ಸು ಪರಮ ತೇಜಸ್ಸುಳ್ಳದ್ದು. ಶಿವಧನುಸ್ಸಿಗೆ ಸಮಾನವಾಗಿ ದೃಢತೆ ಉಳ್ಳದ್ದು.

ತದಾ ತು ದೇವತಾಃ ಸರ್ವಾಃ ಪೃಚ್ಛಂತಿ ಸ್ಮ ಪಿತಾಮಹಮ್ ।
ಶಿತಿಕಂಠಸ್ಯ ವಿಷ್ಣೋಶ್ಚ ಬಲಾಬಲನಿರೀಕ್ಷಯಾ ॥ ೧೪ ॥

ದೇವತೆಗಳು ಬ್ರಹ್ಮದೇವನಲ್ಲಿ ಕೇಳಿದರು 'ಈ ಧನುಸ್ಸುಗಳಲ್ಲಿ ಯಾವುದು ಮೇಲು?' ಎಂದು. ಶಿವ ವಿಷ್ಣುಗಳ ಬಲ ಅಬಲಗಳನ್ನು ಲೋಕಕ್ಕೆ ತಿಳಿಸಲು ಇಚ್ಛಿಸಿದರು.

ಅಭಿಪ್ರಾಯಂ ತು ವಿಜ್ಞಾಯ ದೇವತಾನಾಂ ಪಿತಾಮಹಃ ।
ವಿರೋಧಂ ಜನಯಾಮಾಸ ತಯೋಃ ಸತ್ಯವತಾಂ ವರಃ ॥ ೧೫ ॥

ದೇವತೆಗಳ ಅಭಿಪ್ರಾಯವನ್ನು ತಿಳಿದು ಸತ್ಯಸಂಕಲ್ಪನಾದ ಬ್ರಹ್ಮನು ಲೋಕದ ಮುಂದೆ ಶಿವ ವಿಷ್ಣು ಇವರಿಗೆ ಸ್ಪರ್ಧೆಯನ್ನು ಏರ್ಪಡಿಸಿದನು.

ವಿರೋಧೇ ಚ ಮಹದ್ಯುದ್ಧಮಭವದ್ರೋಮಹರ್ಷಣಮ್ ।
ಶಿತಿಕಂಠಸ್ಯ ವಿಷ್ಣೋಶ್ಚ ಪರಸ್ಪರಜಿಗೀಷಿಣೋಃ ॥ ೧೬ ॥

ಸ್ಪರ್ಧೆಯಲ್ಲಿ ಪರಸ್ಪರ ಗೆಲ್ಲುವ ಬಯಕೆಯಿಂದ ಶಿವನಿಗೂ ವಿಷ್ಣುವಿಗೂ ರೋಮಾಂಚಕರವಾದ ದೊಡ್ಡ ಯುದ್ಧ ನಡೆಯಿತು.

ತದಾ ತು ಜೃಂಭಿತಂ ಶೈವಂ ಧನುರ್ಭೀಮಪರಾಕ್ರಮಮ್ ।
ಹುಂಕಾರೇಣ ಮಹಾದೇವಸ್ತಂಭಿತೋಽಥ ತ್ರಿಲೋಚನಃ ॥ ೧೭ ॥

ಭಯಂಕರ ಬಲ ಉಳ್ಳ ಶಿವಧನುಸ್ಸು ಆಗ ಶಿಥಿಲವಾಯಿತು. ವಿಷ್ಣುವಿನ ಹುಂಕಾರದಿಂದ ಮುಕ್ಕಣ್ಣನೂ ಸ್ತಂಭಿತನಾದ.

ದೇವೈಸ್ತದಾ ಸಮಾಗಮ್ಯ ಸರ್ಷಿಸಂಘೈಃ ಸಚಾರಣೈಃ ।
ಯಾಚಿತೌ ಪ್ರಶಮಂ ತತ್ರ ಜಗ್ಮತುಸ್ತೌ ಸುರೋತ್ತಮೌ ॥ ೧೮ ॥

ಅದರಿಂದ ದೇವತೆಗಳು ಋಷಿಗಳು ಚಾರಣರು ಬಂದು ಯುದ್ಧವಿರಾಮವನ್ನು ಯಾಚಿಸಿದರು. ದೇವಶ್ರೇಷ್ಠರು ಇಬ್ಬರೂ ಶಾಂತರಾದರು.

ಜೃಂಭಿತಂ ತದ್ಧನುರ್ದೃಷ್ಟ್ವಾ ಶೈವಂ ವಿಷ್ಣುಪರಾಕ್ರಮೈಃ ।
ಅಧಿಕಂ ಮೇನಿರೇ ವಿಷ್ಣುಂ ದೇವಾಃ ಸರ್ಷಿಗಣಾಸ್ತದಾ ॥ ೧೯ ॥

ವಿಷ್ಣುಪರಾಕ್ರಮದಿಂದ ಶಿವಧನುಸ್ಸು ಶಿಥಿಲವಾದ್ದರಿಂದ, ದೇವತೆಗಳೂ ಋಷಿಗಳೂ ವಿಷ್ಣುವನ್ನು ಹೆಚ್ಚು ಬಲಿಷ್ಠನೆಂದು ಲೋಕಕ್ಕೆ ತಿಳಿಸಿದರು.

ಪೂಜಯಿತ್ವಾ ತತೋ ವಿಷ್ಣುಮಾಮಂತ್ರ್ಯ ಚ ಪಿನಾಕಿನಮ್ ।
ಬ್ರಹ್ಮೇಂದ್ರಾದೀನ್ಪುರಸ್ಕೃತ್ಯ ನಾಕಪೃಷ್ಠಂ ಯಯುಸ್ತದಾ ॥ ೨೦ ॥

ವಿಷ್ಣುವನ್ನು ದೇವತೆಗಳು ಪೂಜಿಸಿದರು. ಶಿವನ ಅನುಮತಿ ಪಡೆದು ಬ್ರಹ್ಮ ಇಂದ್ರಾದಿಗಳನ್ನು ಮುಂದೆ ಮಾಡಿಕೊಂಡು ಸ್ವರ್ಗಕ್ಕೆ ತೆರಳಿದರು.

ಧನೂ ರುದ್ರಸ್ತು ಸಂಕ್ರುದ್ಧೋ ವಿದೇಹೇಷು ಮಹಾಯಶಾಃ ।
ದೇವರಾತಸ್ಯ ರಾಜರ್ಷೇರ್ದದೌ ಹಸ್ತೇ ಸಸಾಯಕಮ್ ॥ ೨೧ ॥

ರುದ್ರನು ಕೋಪದಿಂದ ವಿದೇಹರಾಜ್ಯದಲ್ಲಿದ್ದ ರಾಜರ್ಷಿ ದೇವರಾತನ ಕೈಯಲ್ಲಿ ಧನುಸ್ಸನ್ನು ಬಾಣದೊಂದಿಗೆ ನ್ಯಾಸವಾಗಿ ಕೊಟ್ಟನು.

ತದ್ಧನುರ್ದೇವರಾತೋಽಪಿ ಶಿರಸಾ ಗೃಹ್ಯ ಪೂಜಯತ್ ।
ಭಗ್ನಂ ತನ್ಮನುಜಶ್ರೇಷ್ಠ ತ್ವಯಾ ಪೈನಾಕಮುತ್ತಮಮ್ ॥ ೨೨ ॥

ಆ ಧನುಸ್ಸನ್ನು ದೇವರಾತನು ತಲೆ ಮೇಲಿರಿಸಿಕೊಂಡು ಪೂಜಿಸಿದನು. ಈ ಉತ್ತಮವಾದ ಶಿವಧನುಸ್ಸನ್ನು ರಾಮ! ನೀನೀಗ ಮುರಿದಿರುವೆ.

ಇದಂ ಚ ವೈಷ್ಣವಂ ರಾಮ ಧನುಃ ಪರಪುರಂಜಯಮ್ ।
ಋಚೀಕೇ ಭಾರ್ಗವೇ ಪ್ರಾದಾದ್ವಿಷ್ಣುಃ ಸನ್ಯಾಸಮುತ್ತಮಮ್ ॥ ೨೩ ॥

ಇದೀಗ ವೈಷ್ಣವ ಧನುಸ್ಸು ಶತ್ರುಗಳ ಪಟ್ಟಣವನ್ನು ಭೇದಿಸುವಂಥದ್ದು. ಉತ್ತಮವಾದ ಈ ಧನುಸ್ಸನ್ನು ಭೃಗುಕುಲದ ಋಚೀಕಮುನಿಯಲ್ಲಿ ವಿಷ್ಣು ನ್ಯಾಸವಾಗಿ ಇರಿಸಿದನು.

ಋಚೀಕಸ್ತು ಮಹಾತೇಜಾಃ ಪುತ್ರಸ್ಯಾಪ್ರತಿಕರ್ಮಣಃ ।
ಪಿತುರ್ಮಮ ದದೌ ದಿವ್ಯಂ ಜಮದಗ್ನೇರ್ಮಹಾತ್ಮನಃ ॥ ೨೪ ॥

ಮಹಾತೇಜನಾದ ಋಚೀಕನು, 'ಅ-ಪ್ರತಿಕರ್ಮ,' ಅಂದರೆ ತನ್ನ ಮೇಲೆ ಕೈ ಮಾಡುವವರಲ್ಲಿಯೂ ಶಾಪಾದಿ ಪ್ರತಿಕ್ರಿಯೆ ಮಾಡದವನು; ಮಹಾತ್ಮ ಪುತ್ರ ಜಮದಗ್ನಿ, ನನ್ನ ತಂದೆ, ಅವನಿಗೆ ದಿವ್ಯವಾದ ಈ ಧನುಸ್ಸನ್ನು ನೀಡಿದನು.

ನ್ಯಸ್ತಶಸ್ತ್ರೇ ಪಿತರಿ ಮೇ ತಪೋಬಲಸಮನ್ವಿತೇ ।
ಅರ್ಜುನೋ ವಿದಧೇ ಮೃತ್ಯುಂ ಪ್ರಾಕೃತಾಂ ಬುದ್ಧಿಮಾಸ್ಥಿತಃ ॥ ೨೫ ॥

ಶಸ್ತ್ರನ್ಯಾಸ ಮಾಡಿದವನು, ಯಾರಮೇಲೂ ಶಸ್ತ್ರವನ್ನೆತ್ತದಿರುವವನು, ತಪೋಬಲಯುಕ್ತನಾದ ನನ್ನ ತಂದೆ. ಅವನನ್ನು 'ಪ್ರಾಕೃತ' ಅಜ್ಞಮಾನವನೆಂದು ತಿಳಿದು ಕಾರ್ತವೀರ್ಯಾರ್ಜುನನು ವಧಿಸಿದನು.

ವಧಮಪ್ರತಿರೂಪಂ ತು ಪಿತುಃ ಶ್ರುತ್ವಾ ಸುದಾರುಣಮ್ ।
ಅಮರ್ಷೋ ಮೇ ಮಹಾನಾಸೀತ್ಸರ್ವಲೋಕಭಯಪ್ರದಃ ॥ ೨೬ ॥

ಈ ರೀತಿಯ ದಾರುಣವಧೆ ನನ್ನ ತಂದೆಗೆ ತಕ್ಕುದಲ್ಲವೆಂದು ಅಸಹನೆಯಿಂದ ಸರ್ವಕ್ಷತ್ರಿಯ ಕುಲನಾಶ ಮಾಡುವ ಕೋಪ ನನ್ನಲ್ಲಿ ಉಂಟಾಯಿತು.

ಅಶಕ್ನುವನ್ನ ತಂ ಕ್ರೋಧಂ ಧನುರ್ಗೃಹ್ಯ ಪರಂ ಶುಭಮ್ ।
ಕ್ಷತ್ರಮುತ್ಸಾದಯನ್ರೋಷಾಜ್ಜಾತಂ ಜಾತಮನೇಕಶಃ ॥ ೨೭ ॥

ಈ ಕೋಪವನ್ನು ತಡೆದುಕೊಳ್ಳಲಾರದೆ ನಾನು ಬೇರೆ ಉತ್ತಮವಾದ ಶುಭಕರವಾದ ಧನುಸ್ಸನ್ನು ಎತ್ತಿಕೊಂಡು ಕೋಪದಿಂದ ಹುಟ್ಟಿದ ಕ್ಷತ್ರಿಯರನ್ನೆಲ್ಲ ನಾಶ ಪಡಿಸಿದೆನು.

'ಅಶಕ್ನುವನ್' 'ಕೋಪ ಸಹನೆ ಮಾಡಿಕೊಳ್ಳಲು ಶಕ್ತಿ ಇಲ್ಲದೆ' ಎಂದುದು ಅಶಕ್ತಿ ನಟನೆ ಮಾಡಿದೆನೆಂಬ ಅಭಿಪ್ರಾಯದಿಂದ. ವಸ್ತುತಃ ಅಶಕ್ತಿ ಇತ್ತೆಂದಲ್ಲ. ಹಿಂದೆ ಋಚೀಕ ಮುನಿಯು ಎರಡು ಪಾತ್ರೆಗಳಲ್ಲಿ ಬ್ರಹ್ಮತೇಜ ಕ್ಷಾತ್ರತೇಜಗಳುಳ್ಳ ಎರಡು ಹವಿಸ್ಸುಗಳನ್ನು ಮಂತ್ರಪೂರ್ವಕ ತುಂಬಿಸಿಟ್ಟು ಸ್ನಾನಾಹ್ನೀಕಗಳಿಗಾಗಿ ಹೋಗಿದ್ದಾಗ ಪತ್ನಿ ಕ್ಷಾತ್ರತೇಜದ ಹವಿಸ್ಸನ್ನೂ ಅತ್ತೆ ಬ್ರಹ್ಮತೇಜಸ್ಸಿನ ಹವಿಸ್ಸನ್ನೂ ಉಂಡರು. ಅದರ ಫಲವಾಗಿ ಅತ್ತೆಗೆ ಬ್ರಹ್ಮತೇಜದ ಹವಿಸ್ಸನ್ನು ಉಂಡಿದ್ದರಿಂದ ಬ್ರಹ್ಮತೇಜೋ-ಯುಕ್ತನಾದ ಕ್ಷತ್ರಿಯ ಪುತ್ರ ವಿಶ್ವಾಮಿತ್ರನು ಹುಟ್ಟಿದನು. ಪತ್ನಿಗೆ ಕ್ಷತ್ರತೇಜೋ-ಯುಕ್ತನಾದ ಬ್ರಾಹ್ಮಣ ಜಮದಗ್ನಿ ಮಗನಾಗಿ ಹುಟ್ಟಿದನು. 'ಮಗನಲ್ಲಿ ಕ್ಷಾತ್ರತೇಜಸ್ಸು ಸುಪ್ತವಾಗಿಯೇ ಇರುತ್ತದೆ, ಮೊಮ್ಮಗನಲ್ಲಿ ಅದು ವ್ಯಕ್ತವಾಗುತ್ತದೆ' ಎಂದು ಋಚೀಕಮುನಿ ಪತ್ನಿಗೆ ವರ ನೀಡಿದ್ದಾನೆ. ಅದರಿಂದ ಜಮದಗ್ನಿಯಲ್ಲಿ ಕ್ಷಾತ್ರತೇಜಸ್ಸು ವ್ಯಕ್ತವಾಗದಿದ್ದರಿಂದ ಅವನು ಶಸ್ತ್ರಸನ್ಯಾಸ ಮಾಡಿ ಕಾರ್ತವೀರ್ಯ-ನಿಂದ ಹತನಾದ. ಮೊಮ್ಮಗ ಪರಶುರಾಮನಲ್ಲಿ ಆ ಕ್ಷಾತ್ರತೇಜ ವ್ಯಕ್ತವಾದ್ದರಿಂದ ಕ್ಷತ್ರಿಯ ಸ್ವಭಾವವಾದ 'ಅಮರ್ಷ'ವೇ ಪ್ರಜ್ವಲಿಸಿತು–

ಅಮರ್ಷೋ ಮೇ ಮಹಾನಾಸೀತ್ ಸರ್ವಲೋಕ ಭಯಂಕರಃ

ಎಂದು ಪರಶುರಾಮ ಹೇಳಿದ್ದು ಈ ಅಭಿಪ್ರಾಯದಿಂದ.

ಪೃಥಿವೀಂ ಚಾಖಿಲಾಂ ಪ್ರಾಪ್ಯ ಕಾಶ್ಯಪಾಯ ಮಹಾತ್ಮನೇ ।
ಯಜ್ಞಸ್ಯಾಂತೇ ತದಾ ರಾಮ ದಕ್ಷಿಣಾಂ ಪುಣ್ಯಕರ್ಮಣೇ ॥ ೨೮ ॥

ದುಷ್ಟಕ್ಷತ್ರಿಯರೇ ಭೂಮಿಯಲ್ಲಿ ತುಂಬಿದ್ದ ಆ ಕಾಲದಲ್ಲಿ ಎಲ್ಲ ಕ್ಷತ್ರಿಯರನ್ನೂ ವಧಿಸಿ ಇಡೀ ಭೂಮಿಯನ್ನು ವಶ ಪಡಿಸಿಕೊಂಡು ತಾನು ಬ್ರಾಹ್ಮಣನಾದ್ದರಿಂದ ಅದನ್ನು ಆಳಲಿಲ್ಲ. ಯಜ್ಞದ ಕೊನೆಯಲ್ಲಿ ಕಾಶ್ಯಪಮುನಿಗೆ ದಕ್ಷಿಣೆಯಾಗಿ ಕೊಟ್ಟೆ. ಏಕೆಂದರೆ ಅವನು ಪುಣ್ಯಕರ್ಮ ಮಾಡುವವನು.

ದತ್ತ್ವಾ ಮಹೇಂದ್ರನಿಲಯಸ್ತಪೋಬಲಸಮನ್ವಿತಃ ।
ಸ್ಥಿತೋಽಸ್ಮಿ ತಸ್ಮಿಂಸ್ತಪ್ಯನ್ವೈ ಸುಸುಖಂ ಸುರಸೇವಿತೇ ॥ ೨೯ ॥

ಕಾಶ್ಯಪಮುನಿಗೆ ಭೂಮಿದಾನ ಮಾಡಿದ್ದರಿಂದ ಭೂಮಿಯಲ್ಲಿ ನಾನು ಒಂದು ದಿನವೂ ವಾಸ ಮಾಡುವುದಿಲ್ಲ. ಭೂಧರನಾದ ಮಹೇಂದ್ರ ಪರ್ವತರಾಜನಲ್ಲಿ ತಪೋಬಲಯುಕ್ತನಾಗಿ ತಪಸ್ಸು ಮಾಡುತ್ತಲೇ ಸುಖವಾಗಿದ್ದೇನೆ.

ಅದ್ಯ ತೂತ್ತಮವೀರ್ಯೇಣ ತ್ವಯಾ ರಾಮ ಮಹಾಬಲ ।
ಶ್ರುತವಾನ್‌ಧನುಷೋ ಭೇದಂ ವಿಸ್ಮಿತಾನಾಂ ನಭಸ್ತಲೇ ॥
ಭಾಷತಾಂ ದೇವಸಂಘಾನಾಂ ತತೋಽಹಂ ದ್ರುತಮಾಗತಃ ॥ ೩೦ ॥

ಈಗ ಮಹಾಬಲ ರಾಮನೆ! ಉತ್ತಮ ವೀರ್ಯ ಉಳ್ಳ ನೀನು ಶಿವಧನುರ್ಭಂಗ ಮಾಡಿದ್ದನ್ನು ದೇವತೆಗಳು ನೋಡಿ ಆಶ್ಚರ್ಯ ಪಟ್ಟು ಅಂತರಿಕ್ಷದಲ್ಲಿ ಪರಸ್ಪರ ಮಾತನಾಡಿಕೊಳ್ಳುತ್ತಿರುವುದನ್ನು ನಾನು ಕೇಳಿ ಬಂದಿದ್ದೇನೆ.

ತದಿದಂ ವೈಷ್ಣವಂ ರಾಮ ಪಿತೃಪೈತಾಮಹಂ ಮಹತ್ ।
ಕ್ಷತ್ರಧರ್ಮಂ ಪುರಸ್ಕೃತ್ಯ ಗೃಹ್ಣೀಷ್ವ ಧನುರುತ್ತಮಮ್ ॥ ೩೧ ॥

ರಾಮ, ಈ ಉತ್ತಮ ಧನುಸ್ಸು ನನಗೆ ಪಿತೃಪಿತಾಮಹ ಕ್ರಮದಿಂದ ಬಂದಿರುವ ಮಹತ್ತಾದ ವೈಷ್ಣವ ಧನುಸ್ಸು. ನೀನು ವೀರಕ್ಷತ್ರಿಯ. ಕ್ಷತ್ರಿಯ ಧರ್ಮವನ್ನು ಪುರಸ್ಕರಿಸಿ ಈ ಧನುವನ್ನು ತೆಗೆದುಕೊಳ್ಳು.

ಯೋಜಯಸ್ವ ಧನುಃಶ್ರೇಷ್ಠೇ ಶರಂ ಪರಪುರಂಜಯಮ್ ।
ಯದಿ ಶಕ್ನೋಷಿ ಕಾಕುತ್ಸ್ಥ ದ್ವಂದ್ವಂ ದಾಸ್ಯಾಮಿ ತೇ ತತಃ ॥ ೩೨ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಪಂಚಸಪ್ತತಿತಮಃ ಸರ್ಗಃ ॥ ೭೫ ॥

ಶ್ರೇಷ್ಠಧನುಸ್ಸಿನಲ್ಲಿ ಶತ್ರುಪಟ್ಟಣ ಭೇದಕಾರಿಯಾದ ಬಾಣವನ್ನು ಹೂಡು. ರಾಮ! ನೀನು ಶಕ್ತನಾಗುವಿಯಾದರೆ ನಿನಗೆ ಕ್ಷತ್ರಿಯೋಚಿತವಾದ ಸತ್ಕಾರರೂಪದಲ್ಲಿ ದ್ವಂದ್ವಯುದ್ಧ ನೀಡುತ್ತೇನೆ. ನೀನು ಸ್ವಭಾವತಃ ಕ್ಷತ್ರಿಯ. ನಾನು ಬ್ರಾಹ್ಮಣನಾದರೂ ಕ್ಷಾತ್ರತೇಜೋಯುಕ್ತನೇ ಆಗಿದ್ದೇನೆ.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಎಪ್ಪತ್ತೈದನೆ ಸರ್ಗ ಮುಗಿಯಿತು.

ಷಟ್‌ಸಪ್ತತಿತಮಃ ಸರ್ಗಃ

ಶ್ರುತ್ವಾ ತಜ್ಜಾಮದಗ್ನ್ಯಸ್ಯ ವಾಕ್ಯಂ ದಾಶರಥಿಸ್ತದಾ ।
ಗೌರವಾದ್ಯಂತ್ರಿತಕಥಃ ಪಿತೂ ರಾಮಮಥಾಬ್ರವೀತ್ ॥ ೧ ॥

ಪರಶುರಾಮನ ಮಾತನ್ನು ಕೇಳಿ ದಾಹರಥಿ ರಾಮನು ತಂದೆ ದಶರಥನ ಮುಂದೆ ಪರಶುರಾಮನಿಗೆ ದರ್ಪದ ಮಾತನ್ನಾಡದೆ ತನ್ನ ಮಾತನ್ನು ನಿಯಂತ್ರಿಸಿಕೊಂಡು ಪರಶುರಾಮನಿಗೆ ತಕ್ಕ ಉತ್ತರ ಕೊಡುತ್ತಾನೆ.

ಶ್ರುತವಾನಸ್ಮಿ ಯತ್ಕರ್ಮ ಕೃತವಾನಸಿ ಭಾರ್ಗವ ।
ಅನುರುಧ್ಯಾಮಹೇ ಬ್ರಹ್ಮನ್ನಿತುರಾನೃಣ್ಯಮಾಸ್ಥಿತಃ ॥ ೨ ॥

ಪಿತೃಋಣ ಪರಿಹಾರಕ್ಕಾಗಿ ನೀನೇನು ಕ್ಷತ್ರಕುಲ ಸಂಹಾರ ಮಾಡಿರುವೆಯೋ ಅದನ್ನು ನಾನು ಕೇಳಿರುವೆನು. ಅದನ್ನು ನಾನು ಒಪ್ಪುತ್ತೇನೆ.

ವೀರ್ಯಹೀನಮಿವಾಶಕ್ತಂ ಕ್ಷತ್ರಧರ್ಮೇಣ ಭಾರ್ಗವ ।
ಅವಜಾನಾಸಿ ಮೇ ತೇಜಃ ಪಶ್ಯ ಮೇಽದ್ಯ ಪರಾಕ್ರಮಮ್ ॥ ೩ ॥

ಭಾರ್ಗವರಾಮ! ಕ್ಷತ್ರಧರ್ಮ ಯುಕ್ತನಾಗಿರುವ ನನ್ನನ್ನು ವೀರ್ಯಹೀನ ಅಶಕ್ತನೆಂಬಂತೆ ಕಂಡು ನನ್ನ ಪರಾಕ್ರಮವನ್ನು ಅವಮಾನಿಸುತ್ತಿರುವೆ, ನೋಡು ನನ್ನ ಪರಾಕ್ರಮವನ್ನು

'ಭೀತೋ ಯದಿ ಧನುಸ್ಯಕ್ತಾ ನಿರ್ಜಿತೋಽಸ್ಮೀತಿ ವಾ ವದ'

'ನಿನಗೆ ಭಯವಾಗುತ್ತಿದ್ದರೆ ಧನುಸ್ಸನ್ನು ಬಿಟ್ಟು 'ನಾನು ಸೋತೆ' ಎಂದಾದರೂ ಹೇಳು' – ಎಂದು ಪರಶುರಾಮ ಹೇಳಿದ್ದನ್ನು ನಾನು ಸಹಿಸುವುದಿಲ್ಲ ಎನ್ನುತ್ತಾನೆ ದಾಶರಥಿ ರಾಮ.

ಇತ್ಯುಕ್ತ್ವಾ ರಾಘವಃ ಕ್ರುದ್ಧೋ ಭಾರ್ಗವಸ್ಯ ಶರಾಸನಮ್ ।
ಶರಂ ಚ ಪ್ರತಿಜಗ್ರಾಹ ಹಸ್ತಾಲ್ಲಘುಪರಾಕ್ರಮಃ ॥ ೪ ॥

ಹೀಗೆ ಹೇಳಿ ದಾಶರಥಿ ರಾಮ ಕ್ರುದ್ಧನಾಗಿ ಭಾರ್ಗವ ರಾಮನ ಕೈಯಿಂದ ಧನುಸ್ಸನ್ನು ಬಾಣವನ್ನು ಲಘುಪರಾಕ್ರಮದಿಂದ ಕಿತ್ತುಕೊಂಡ.

ಆರೋಪ್ಯ ಸ ಧನೂ ರಾಮಃ ಶರಂ ಸಜ್ಯಂ ಚಕಾರ ಹ ।
ಜಾಮದಗ್ನ್ಯಂ ತತೋ ರಾಮಂ ರಾಮಃ ಕ್ರುದ್ಧೋಽಬ್ರವೀದ್ವಚಃ॥ ೫ ॥

ದಾಶರಥಿರಾಮನು ಧನುಸ್ಸಿಗೆ ಹೆದೆಯೇರಿಸಿ ಬಾಣವನ್ನು ಹೂಡಿದ. ಕೋಪದಿಂದ ಭಾರ್ಗವರಾಮನಿಗೆ ನುಡಿದ.

ಬ್ರಾಹ್ಮಣೋಽಸೀತಿ ಪೂಜ್ಯೋ ಮೇ ವಿಶ್ವಾಮಿತ್ರಕೃತೇನ ಚ ।
ತಸ್ಮಾಚ್ಚಕ್ತೋ ನ ತೇ ರಾಮ ಮೋಕ್ತುಂ ಪ್ರಾಣಹರಂ ಶರಮ್ ॥ ೬ ॥

ನೀನು ಬ್ರಾಹ್ಮಣನಾದ್ದರಿಂದ ಪೂಜ್ಯನಾಗಿರುವೆ. ನಮ್ಮ ಗುರು ವಿಶ್ವಾಮಿತ್ರನ ಭಗಿನಿ ಸತ್ಯವತಿಗೆ ಮೊಮ್ಮಗನಾದ್ದರಿಂದಲೂ ಪೂಜ್ಯನಾಗಿರುವೆ. ಅದರಿಂದ ನಾನು ನಿನ್ನ ಪ್ರಾಣ ತೆಗೆಯುವಂಥ ಬಾಣವನ್ನೆಸೆಯಲಾರೆ.

ಇಮಾಂ ಪಾದಗತಿಂ ರಾಮ ತಪೋಬಲಸಮಾರ್ಜಿತಾನ್ ।
ಲೋಕಾನಪ್ರತಿಮಾನ್ವಾ ತೇ ಹನಿಷ್ಯಾಮಿ ಯದಿಚ್ಛಸಿ ॥ ೭ ॥

ಈ ನಿನ್ನ ಕಾಲುಗಳ ಇಹಲೋಕ ಗಮನಶಕ್ತಿಯನ್ನು ಕಳೆಯಲೆ? ಅಥವಾ ತಪೋಬಲದಿಂದ ಸಂಪಾದಿಸುವ ನಿನ್ನ ಅಪ್ರತಿಮವಾದ ಪರಲೋಕವನ್ನು ಇಲ್ಲದಂತೆ ಮಾಡಲೆ? ಇವೆರಡರೊಳಗೆ ಏನು ಬಯಸುವೆ?

ಇಲ್ಲಿ 'ಅಪ್ರತಿಮಲೋಕ' ಎಂಬ ಶಬ್ದದಲ್ಲಿ ಒಂದು ಇತಿಹಾಸ ಅಡಗಿದೆ–

'ತಸ್ಯ ನಾಭಿ ಪ್ರದೇಶೇ ತು ತಪಃ ಕೃತ್ವಾ ಸುದಾರುಣಂ
ತಿಷ್ಠತ್ಯೇವ ಸದಾ ದೈತ್ಯಸ್ತಂ ಜ್ಞಾತ್ವಾ ರಾಘವೋ ಬಲೀ
ತಂ ತು ಭಸ್ಮೀಚಕಾರಾಥ ಕಿಂ ಕರ್ತವ್ಯಂ ಮಯಾ ಪ್ರಭೋ'

'ಪರಶುರಾಮನ ನಾಭಿ ಪ್ರದೇಶದಲ್ಲಿ 'ಅತುಲ' ನಾಮಕ ದೈತ್ಯ ಕುಳಿತು ತಪಸ್ಸು ಮಾಡುತ್ತಿದ್ದ. ಇದನ್ನು ತಿಳಿದು ದಾಶರಥಿ ರಾಮ ಆ ದೈತ್ಯನನ್ನು ಬಾಣದಿಂದ ಸುಟ್ಟುಬಿಟ್ಟ' ಎಂದು ಪದ್ಮಪುರಾಣದಲ್ಲಿದೆ. ಈ 'ಅತುಲ'ನನ್ನೇ ವಾಲ್ಮೀಕಿ 'ಅಪ್ರತಿಮ' ಶಬ್ದದಿಂದ ಹೇಳುತ್ತಿದ್ದಾನೆ. ಅತುಲನು ತಪಸ್ಸಿನಿಂದ ಸಂಪಾದಿಸಿದ ಲೋಕವೇ 'ಅಪ್ರತಿಮ'ಲೋಕ. ರಾಮಬಾಣ ಪರಶುರಾಮನ ಪ್ರಾಣಹರಣ ಮಾಡದೆ ಅವನ ನಾಭಿಯಲ್ಲಿ ಕುಳಿತ ಅಪ್ರತಿಮವಾದ ಅಪ್ರತಿಮನ ಲೋಕವನ್ನು ಸುಟ್ಟು ಇನ್ನಿಲ್ಲದಂತೆ ಮಾಡಿಬಿಟ್ಟಿದೆ.

ನ ಹ್ಯಯಂ ವೈಷ್ಣವೋ ದಿವ್ಯಃ ಶರಃ ಪರಪುರಂಜಯಃ ।
ಮೋಘಃ ಪತತಿ ವೀರ್ಯೇಣ ಬಲದರ್ಪವಿನಾಶನಃ ॥ ೮ ॥

ವೀರ್ಯದಿಂದ ಶತ್ರುಗಳ ಬಲದರ್ಪವಿನಾಶ ಮಾಡುವ ಈ ನನ್ನ ದಿವ್ಯ ವೈಷ್ಣವ

ಬಾಣವು ಪರರ ಪಟ್ಟಣವನ್ನು ಅಥವ ಶರೀರವನ್ನು ಪ್ರಾಣವನ್ನು ಸುಟ್ಟೀತು ಹೊರತು, ವ್ಯರ್ಥವಾಗಿ ಎಲ್ಲಿಯೂ ಬೀಳಲಾರದು. ಅದರಿಂದ ವೈಷ್ಣವ ಧನುಸ್ಸನ್ನು ಹಿಡಿದು ವಿಷ್ಣುಸ್ವರೂಪನೆಂದೆನಿಸಿದ, ಮತ್ತು ಬ್ರಾಹ್ಮಣನೂ ಆಗಿರುವ ನಿನ್ನ ವಧೆಗಾಗಿ ಈ ರಾಮನು ಬಾಣಪ್ರಯೋಗ ಮಾಡಲಾರ. ರಾಮಬಾಣವನ್ನು ರಾಮನೆ ವ್ಯರ್ಥ ಮಾಡಲಾರ. ನಿನ್ನ ನಾಭಿಯಲ್ಲಿರುವ ಅತುಲ ದೈತ್ಯನ ಶರೀರವನ್ನೂ ಅವನು ಸಂಪಾದಿಸುವ ಲೋಕವನ್ನೂ ಬಾಣವು ನಾಶ ಮಾಡುವುದು. ಲೋಕವನ್ನು ನಾಶ ಮಾಡುವುದೆಂದರೆ, ಅವನು ಈಗಾಗಲೇ 'ತಪಸ್ಸಿ'ನಿಂದ ಬ್ರಹ್ಮನ ವರ ಪಡೆದು ಸಕಲ 'ಲೋಕ'ಗಳನ್ನು ಸಂಪಾದಿಸಿ ಅವುಗಳಲ್ಲೆಲ್ಲ ಅನೇಕ ರೂಪಗಳಿಂದ ವ್ಯಾಪಿಸಿದ್ದಾನೆ. 'ತಪ' ಎಂದೂ 'ಲೋಕ'ವೆಂದೂ ಬಿರುದನ್ನೇ ಸಂಪಾದಿಸಿದ್ದಾನೆ. ಇದೀಗ ಅವನ ತಪಸ್ಸನ್ನು, ಅಂದರೆ ತಪಸ್ಸಿನ ಪುಣ್ಯವನ್ನು ಮತ್ತು ಲೋಕಗಳಲ್ಲಿ ವ್ಯಾಪಿಸಿದ ತನ್ನ ಭಯಂಕರ ಬಿರುಗಾಳಿ ಕತ್ತಲುಗಳ ರೂಪಗಳನ್ನೂ ಒಂದೇ ಬಾಣದಿಂದ ನಾಶ ಮಾಡುವೆನೆನ್ನುತ್ತಾನೆ ಶ್ರೀರಾಮ. ಇದುವೇ ವಸಿಷ್ಠರು ಹೇಳಿದ್ದ 'ಭಯ-ಪರಿಹಾರಗಳು.'

ಇತಿ ಬ್ರುವತಿ ಕಾಕುತ್ಸ್ಥೇ ಭಾರ್ಗವಂ ಪ್ರತಿ ರೋಷಿತೇ ।
ವರಾಯುಧಧರಂ ರಾಮಂ ದ್ರಷ್ಟುಂ ಸರ್ಷಿಗಣಾಃ ಸುರಾಃ ॥
ಪಿತಾಮಹಂ ಪುರಸ್ಕೃತ್ಯ ಸಮೇತಾಸ್ತತ್ರ ಸಂಘಶಃ ॥ ೯ ॥

ಕುಪಿತನಾದ ದಾಶರಥಿ ರಾಮ ಪರಶುರಾಮನಿಗೆ ಹೀಗೆ ಹೇಳಿದಾಗ ಶ್ರೇಷ್ಠವಾದ ವೈಷ್ಣವ ಧನುರ್ಧಾರಿಯಾದ ರಾಮನನ್ನು ಕಾಣಲು ದೇವತೆಗಳು ಬ್ರಹ್ಮದೇವರನ್ನು ಮುಂದೆ ಮಾಡಿಕೊಂಡು ಗುಂಪುಗುಂಪಾಗಿ ಅಂತರಿಕ್ಷದಲ್ಲಿ ನೆರೆದರು.

ಗಂಧರ್ವಾಪ್ಸರಸಶ್ಚೈವ ಸಿದ್ಧಚಾರಣಕಿಂನರಾಃ ।
ಯಕ್ಷರಾಕ್ಷಸನಾಗಾಶ್ಚ ತದ್ದ್ರಷ್ಟುಂ ಮಹದದ್ಭುತಮ್ ॥ ೧೦ ॥

ಗಂಧರ್ವರು ಅಪ್ಸರೆಯರು ಸಿದ್ಧರು ಚಾರಣರು ಕಿಂನರರು ಯಕ್ಷರು ರಾಕ್ಷಸರು ನಾಗರು ಗುಂಪಾಗಿ ಈ ಮಹಾ ಅದ್ಭುತವನ್ನು ಕಾಣಲು ಬಂದು ನೆರೆದರು.

ಜಡೀಕೃತೇ ತದಾ ಲೋಕೇ ರಾಮೇ ವರಧನುರ್ಧರೇ ।
ನಿರ್ವೀರ್ಯೋ ಜಾಮದಗ್ನ್ಯೋಽಸೌ ರಾಮೋ ರಾಮಮುದೈಕ್ಷತ ॥೧೧

ದಾಶರಥಿ ರಾಮ ಪರಶುರಾಮನ ಕೈಯಿಂದ ವೈಷ್ಣವಧನುಸ್ಸನ್ನು ಕಿತ್ತುಕೊಂಡಾಗ ಲೋಕವು ಜಡವಾಯಿತು. ನಿರ್ವೀರ್ಯನಾಗಿ ಪರಶುರಾಮ ದಾಶರಥಿ ರಾಮನನ್ನು

ನೋಡಿದ. 'ನಿರ್ವೀಯನಾಗಿ' ಎಂದರೆ ನಿರ್ವೀರ್ಯನಂತೆ ಅತುಲ ದೈತ್ಯನಿಗೆ ತೋರಿಕೊಂಡು' ಎಂದರ್ಥ. ಪರಶುರಾಮ ಕ್ಷತ್ರಿಯಾಂತಕ, ಕ್ಷತ್ರಿಯ ಬಾಲಕನಿಗೆ ಸೋತನೆಂದರೆ ನಂಬಲಾಗದು. ಆಶ್ಚರ್ಯದಿಂದ ಲೋಕಮಾತ್ರ ಸ್ತಂಭಿತವಾಯಿತು. ಜಡವಾಯಿತು. ಇತ್ತ ಇಬ್ಬರು ರಾಮರೂ ಒಬ್ಬರನ್ನೊಬ್ಬರು ಆಶ್ಚರ್ಯದಿಂದ ನೋಡಿ ಆನಂದಿಸುತ್ತಿದ್ದಾರೆ.

ಪರಶುರಾಮ ಸೋತಂತೆ ನಟಿಸಿದ್ದೇಕೆ ಎಂದರೆ ಬ್ರಹ್ಮನಿಂದ ಅತುಲದೈತ್ಯನು ವರ ಪಡೆದಿದ್ದ. ಯಾವಾಗ ಹರಿ ಪರಾಜಯ ಹೊಂದುವನೋ ಆಗಲೇ ನೀನು ಸಾಯುವಿ' ಎಂದು. 'ಹರಿಗೆ ಎಂದೂ ಪರಾಜಯವಿಲ್ಲ, ನನಗೆ ಮರಣವಿಲ್ಲ' ಎಂದುಕೊಂಡಿದ್ದ ಅತುಲ ದೈತ್ಯ. ಅದರಿಂದಲೇ ಚೆನ್ನಾಗಿ ಆಲೋಚಿಸಿ ಶಿವನ ವರಬಲದಿಂದ ವಿಷ್ಣುವಿನ ಉದರದಲ್ಲಿ ನಾಭಿಪ್ರದೇಶದಲ್ಲಿ ಕುಳಿತು ತಪಗೈದು ತಪೋಬಲದಿಂದ ಲೋಕವನ್ನೆಲ್ಲ ವಶಪಡಿಸಿಕೊಂಡು ವ್ಯಾಪಿಸಿದವನು ಅತುಲ ದೈತ್ಯ.

ಶ್ರೀರಾಮ ಪರಶುರಾಮನ ಉದರಕ್ಕೇ ಗುರಿ ಇಟ್ಟು ಬಾಣಪ್ರಯೋಗ ಮಾಡುತ್ತಾನೆ. ಪರಶುರಾಮ ಒಡನೆ 'ನಾನು ರಾಮನಿಗೆ ಸೋತಿದ್ದೇನೆ. ಅವನು ಈಗ ನನ್ನ ಮೇಲೆ ಬಾಣ ಪ್ರಯೋಗ ಮಾಡುತ್ತಿದ್ದಾನೆ. ಅದು ನಿಶ್ಚಿತವಾಗಿ ನಿನ್ನನ್ನು ಕೊಲ್ಲುತ್ತದೆ ತಪ್ಪಿಸಿಕೊಂಡು ಬೇಗನೆ ಹೊರಗೆ ಬಾ' ಎನ್ನುತ್ತಾನೆ. ಇದನ್ನು ಕೇಳಿ ಅಸುರನು ಹೊರಗೆ ಓಡಿ ಬರುತ್ತಾನೆ! ಹೊರಗೇ ಆ ಬಾಣಕ್ಕೆ ನೇರವಾಗಿ ಸಿಲುಕಿ ಸುಟ್ಟು ಹೋಗುತ್ತಾನೆ. ಹೀಗೆ ಅಸುರನಿಗೆ ಹರಿ ಸೋತನೆಂದು ಭ್ರಮೆ ಹುಟ್ಟಿಸು-ವುದಕ್ಕಾಗಿಯೇ ಸೋತಂತೆ ನಟಿಸಿದ್ದಾನೆ ಪರಶುರಾಮ.

ತೇಜೋಭಿಹತವೀರ್ಯತ್ವಾಜ್ಜಾಮದಗ್ನ್ಯೇ ಜಡೀಕೃತಃ ।
ರಾಮಂ ಕಮಲಪತ್ರಾಕ್ಷಂ ಮಂದಂ ಮಂದಮುವಾಚ ಹ ॥ ೧೨ ॥

ರಾಮಬಾಣದ ತೇಜದಿಂದ ಹೊಡೆಸಿಕೊಂಡು ನಿರ್ವೀರ್ಯನಾದ್ದರಿಂದಲೇ ಪರಶುರಾಮ ಸ್ತಂಭಿತನಾದನೆ? ಜಡೀಕೃತನಾದನೆ? ಇಲ್ಲ. ಕೇವಲ ನಟನೆ ಮಾಡಿದ-ನೆಂದು ಇಲ್ಲಿ ಕಾಕುಧ್ವನಿ ಇಟ್ಟುಕೊಳ್ಳಬೇಕು. ಕಾಕು ಆಕ್ಷೇಪವಿದು.

ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣ ಸುಖದಾಃ ?

ಎಂದು ಕಾಕುವಿನಿಂದ ಆಕ್ಷೇಪವಿಟ್ಟುಕೊಳ್ಳುವುದು ಭಗವದ್ಗೀತೆ (೨.೧೪)ಯಲ್ಲಿ ಕಂಡಿದೆ.

ಅದರಿಂದ ಕಮಲದಳ ನಯನನಾದ ಶ್ರೀರಾಮನನ್ನು ಅನುನಯ ಮಾಡುವವನಂತೆ ಮೆತ್ತಗೆ ಹೇಳುತ್ತಾನೆ ಪರಶುರಾಮ!

ಕಾಶ್ಯಪಾಯ ಮಯಾ ದತ್ತಾ ಯದಾ ಪೂರ್ವಂ ವಸುಂಧರಾ ।
ವಿಷಯೇ ಮೇ ನ ವಸ್ತವ್ಯಮಿತಿ ಮಾಂ ಕಾಶ್ಯಪೋಽಬ್ರವೀತ್ ॥ ೧೩ ॥

ಕಾಶ್ಯಪನಿಗೆ ನಾನು ಹಿಂದೆ ಭೂಮಿಯನ್ನು ದಾನ ಮಾಡಿದಾಗ 'ಇನ್ನುಮುಂದೆ ನೀನು ನನ್ನ ರಾಜ್ಯದಲ್ಲಿ ವಾಸ ಮಾಡುವಂತಿಲ್ಲ' ಎಂದು ಕಾಶ್ಯಪನು ನನಗೆ ಹೇಳಿದನು.

ಸೋಽಹಂ ಗುರುವಚಃ ಕುರ್ವನ್ಪೃಥಿವ್ಯಾಂ ನ ವಸೇ ನಿಶಾಮ್ ।
ಕೃತಾ ಪ್ರತಿಜ್ಞಾ ಕಾಕುತ್ಸ್ಥ ಕೃತಾ ಭೂಃ ಕಾಶ್ಯಪಸ್ಯ ಹಿ ॥ ೧೪ ॥

ಗುರುವಾದ ಕಾಶ್ಯಪ ಮುನಿಯ ಮಾತಿನಂತೆ ನಡೆಯುವವನು ನಾನು ಭೂಮಿಯಲ್ಲಿ ಒಂದು ರಾತ್ರಿಯೂ ವಾಸ ಮಾಡಲಾರೆ' ಎಂದು ಗುರುವಿಗೆ ಮಾತುಕೊಟ್ಟಿದ್ದೇನೆ. ಏಕೆಂದರೆ ಭೂಮಿಯನ್ನು ನಾನೆ ಕಾಶ್ಯಪನ ವಶ ಮಾಡಿದ್ದೇನೆ.

ತದಿಮಾಂ ತ್ವಂ ಗತಿಂ ವೀರ ಹಂತುಂ ನಾರ್ಹಸಿ ರಾಘವ ।
ಮನೋಜವಂ ಗಮಿಷ್ಯಾಮಿ ಮಹೇಂದ್ರಂ ಪರ್ವತೋತ್ತಮಮ್ ॥ ೧೫

ಅದರಿಂದ ರಾಮ, ನೀನು ನನ್ನ ಕಾಲುಗಳ ಗಮನಶಕ್ತಿಯನ್ನು ಕಳೆಯಲಾರೆ. ಮನೋವೇಗದಿಂದ ಮಹೇಂದ್ರ ಪರ್ವತಕ್ಕೆ ಹೋಗೇ ಹೋಗುವೆನು.

ಲೋಕಾಸ್ತ್ವಪ್ರತಿಮಾ ರಾಮ ನಿರ್ಜಿತಾಸ್ತಪಸಾ ಮಯಾ ।
ಜಹಿ ತಾಞ್ಶರಮುಖ್ಯೇನ ಮಾ ಭೂತ್ಕಾಲಸ್ಯ ಪರ್ಯಯಃ ॥ ೧೬ ॥

ರಾಮ! ಅತುಲನ ಅತುಲವಾದ ಲೋಕವ್ಯಾಪ್ತ ರೂಪಗಳನ್ನು 'ಸರ್ವೇಶ್ವರನಾದ ನಾನು ತಪಸ್ಸಿನಿಂದ ಗೆದ್ದುಕೊಂಡಿದ್ದೇನೆ,' ಅವನಲ್ಲ! ಆ ಅತುಲನ ಲೋಕಗಳನ್ನು ಉತ್ತಮವಾದ ಬಾಣದಿಂದ ನೀನೀಗ ನಾಶ ಪಡಿಸು. ಕಾಲ ವಿಲಂಬ ಬೇಡ.

ಅಕ್ಷಯಂ ಮಧುಹಂತಾರಂ ಜಾನಾಮಿ ತ್ವಾಂ ಸುರೋತ್ತಮಮ್ ।
ಧನುಷೋಽಸ್ಯ ಪರಾಮರ್ಶಾತ್ಸ್ವಸ್ತಿ ತೇಽಸ್ತು ಪರಂತಪ ॥ ೧೭ ॥

ಕ್ಷಯರಹಿತನಾದ ಸುರೋತ್ತಮ ಮಧುಸೂದನನ ಅವತಾರ ನೀನೆಂದು ಈ ವೈಷ್ಣವ ಧನುಸಿನ ಗ್ರಹಣದಿಂದ ಲೋಕಕ್ಕೆ ಸಾಬೀತು ಪಡಿಸಿದ್ದೇನೆ. ನಿನಗೆ ಶುಭವಾಗಲಿ 'ಜಾನಾಮಿ' ಅಂತರ್ಗೀತ ಣಿಜಂತ ಶಬ್ದ. 'ತಿಳಿಸಿದ್ದೇನೆ ಲೋಕಕ್ಕೆ' ಎಂದರ್ಥ.

ಏತೇ ಸುರಗಣಾಃ ಸರ್ವೇ ನಿರೀಕ್ಷಂತೇ ಸಮಾಗತಾಃ ।
ತ್ವಾಮಪ್ರತಿಮಕರ್ಮಾಣಮಪ್ರತಿದ್ವಂದ್ವಮಾಹವೇ ॥ ೧೮ ॥

ಅದರಿಂದ ಈಗ ಈ ಎಲ್ಲ ದೇವತೆಗಳು ಬಂದು ನೆರೆದವರು ನೀನು ಅಪ್ರತಿಮಕರ್ಮ ಮಾಡುವವನು ಯುದ್ಧದಲ್ಲಿ ಪ್ರತಿದ್ವಂದ್ವಿ ಇಲ್ಲದವನೆಂಬುದನ್ನು ಸ್ಪಷ್ಟವಾಗಿ ನೋಡಿ ತಿಳಿಯುತ್ತಾರೆ.

ನ ಚೇಯಂ ಮಮ ಕಾಕುತ್ಸ್ಥ ವ್ರೀಡಾ ಭವಿತುಮರ್ಹತಿ ।
ತ್ವಯಾ ತ್ರೈಲೋಕ್ಯನಾಥೇನ ಯದಹಂ ವಿಮುಖೀಕೃತಃ ॥ ೧೯ ॥

ನನಗೆ, ರಾಮ, ನೀನು ನನ್ನನ್ನು ಪರಾಜಯಗೊಳಿಸಿದೆ ಎಂದು ಲಜ್ಜೆ ಉಂಟಾಗುವುದಿಲ್ಲ. ಏಕೆಂದರೆ ನೀನು ಬೇರೆ ಅಲ್ಲ ನಾನು ಬೇರೆ ಅಲ್ಲ ನೀನು ಮೂಲೋಕದೊಡೆಯನಾದ ಹರಿಯೆ. ನಾನೂ ಹರಿಯೆ ಎಂಬುದು ವೈಷ್ಣವ ಧನುರ್ಧಾರಣದಿಂದಲೇ ಸಿದ್ಧವಾಯಿತು ಎಂದ ಮೇಲೆ ನಾವಿಬ್ಬರು ಒಬ್ಬರಿನ್ನೊಬ್ಬರನ್ನು ಪರಾಜಯ ಗೊಳಿಸುವುದುಂಟೆ? ಪರಾಜಯ ನಟನೆ ಮಾಡಿದ್ದೇನೆ, ಅದಕ್ಕೆ ಏಕೆ ಲಜ್ಜೆ ಪಡಬೇಕು?

ಶರಮಪ್ರತಿಮಂ ರಾಮ ಮೋಕ್ತುಮರ್ಹಸಿ ಸುವ್ರತ ।
ಶರಮೋಕ್ಷೇ ಗಮಿಷ್ಯಾಮಿ ಮಹೇಂದ್ರಂ ಪರ್ವತೋತ್ತಮಮ್॥ ೨೦ ॥

ಅದರಿಂದ ರಾಮ, ನೀನು ಅಪ್ರತಿಮವಾದ ರಾಮಬಾಣವನ್ನು ಪ್ರಯೋಗಿಸು ಅತುಲನ ಅಪ್ರತಿಮ ಲೋಕಗಳನ್ನು ನಾಶ ಮಾಡು. ಆಗ ನಾನು ಇಲ್ಲಿಗೆ ಬಂದ ಉದ್ದೇಶ ನೆರವೇರುವುದರಿಂದ ಮಹೇಂದ್ರಪರ್ವತಕ್ಕೆ ಹಿಂದಿರುಗುತ್ತೇನೆ.

ತಥಾ ಬ್ರುವತಿ ರಾಮೇ ತು ಜಾಮದಗ್ನ್ಯೇ ಪ್ರತಾಪವಾನ್ ।
ರಾಮೋ ದಾಶರಥಿಃ ಶ್ರೀಮಾಂಶ್ಚಿಕ್ಷೇಪ ಶರಮುತ್ತಮಮ್ ॥ ೨೧ ॥

ಹೀಗೆ ಪ್ರತಾಪಶಾಲಿಯಾದ ಪರಶುರಾಮ ಹೇಳಿದಾಗ ಶ್ರೀರಾಮನು ಉತ್ತಮವಾದ ಬಾಣವನ್ನು ಪರಶುರಾಮನ ಉದರದಲ್ಲಿದ್ದ ಅತುಲಾಸುರನಿಗೆ ಗುರಿ ಇಟ್ಟು ಪ್ರಯೋಗಿಸಿದನು.

ಸ ಹತಾನ್ ದೃಶ್ಯ ರಾಮೇಣ ಸ್ವಾಂಲ್ಲೋಕಾಂಸ್ತಪಸಾರ್ಜಿತಾನ್ ।
ಜಾಮದಗ್ನ್ಯೋ ಜಗಾಮಾಶು ಮಹೇಂದ್ರಂ ಪರ್ವತೋತ್ತಮಮ್ ॥

ಅತುಲನು ಪ್ರಾಣಭೀತಿಯಿಂದ ಹೊರಗೆ ಬರುತ್ತಿದ್ದಂತೆ ನೇರವಾಗಿ ಬಾಣಕ್ಕೆ ಸಿಲುಕಿ ತಪಸ್ಸಿನಿಂದ ಸಂಪಾದಿಸಿದ ಲೋಕವ್ಯಾಪ್ತವಾದ ಬಿರುಗಾಳಿ ಕತ್ತಲು ರೂಪದ ಎಲ್ಲ ರೂಪಗಳೊಂದಿಗೆ ತಾನು ಹತನಾದ. ಇದನ್ನು ನೋಡಿ ಪರಶುರಾಮನು ತೃಪ್ತಿಯಿಂದ ಮಹೇಂದ್ರ ಪರ್ವತಕ್ಕೆ ಹೊರಟನು.

ತತೋ ವಿತಿಮಿರಾಃ ಸರ್ವಾ ದಿಶಶ್ಚೋಪದಿಶಸ್ತಥಾ ।
ಸುರಾಃ ಸರ್ಷಿಗಣಾ ರಾಮಂ ಪ್ರಶಶಂಸುರುದಾಯುಧಮ್ ॥ ೨೩ ॥

ಆಗ ಎಲ್ಲ ದಿಕ್ಕು ವಿದಿಕ್ಕುಗಳೂ ಬಿರುಗಾಳಿ ಮತ್ತು ಕತ್ತಲಿನಿಂದ ಮುಕ್ತವಾದುವು. ಕತ್ತಲಿನ ರೂಪದಿಂದ ಆವರಿಸಿದ್ದ ಅತುಲ ಮಹಾಸುರ ನಾಶವಾದನೆಂದು ಕೋದಂಡ ರಾಮನನ್ನು ದೇವತೆಗಳೂ ಋಷಿಗಳೂ ಸ್ತುತಿಸಿದರು.

ರಾಮಂ ದಾಶರಥಿಂ ರಾಮೋ ಜಾಮದಗ್ನ್ಯಃ ಪ್ರಶಸ್ಯ ಚ ।
ತತಃ ಪ್ರದಕ್ಷಿಣಂ ಕೃತ್ವಾ ಜಗಾಮಾತ್ಮಗತಿಂ ಪ್ರಭುಃ ॥ ೨೪ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಬಾಲಕಾಂಡೇ ಷಟ್‌ಸಪ್ತತಿತಮಃ ಸರ್ಗಃ ॥ ೭೬ ॥

ದಾಶರಥಿ ರಾಮನನ್ನು ಪ್ರಭು ಜಾಮದಗ್ನ್ಯರಾಮನು ಪ್ರಶಂಸೆ ಮಾಡಿ ಪ್ರದಕ್ಷಿಣೆಯಾಗಿ ನಡೆದು ತನ್ನ ಸ್ಥಾನವನ್ನು ಸೇರಿದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಎಪ್ಪತ್ತಾರನೆ ಸರ್ಗ ಮುಗಿಯಿತು.

'ಜಡೀಕೃತೇ ತದಾಲೋಕೇ ರಾಮೇ ವರ ಧನುರ್ಧರೇ' (ಶ್ಲೋ.೧೧) ಎಂಬಲ್ಲಿ ತಿಲಕ ವ್ಯಾಖ್ಯಾನವು 'ಲೋಕೇ ಜಡೀಕೃತೇ' ಎಂಬುದನ್ನು ಭಾರ್ಗವೇ ಜಡೀಕೃತೇ' ಎಂದು, 'ರಾಮೇ ವರಧನುರ್ಧರೇ ಸತಿ' ಎಂಬುದನ್ನು ಅಧಿಕರಣ ಸಪ್ತಮಿ ಎಂದು 'ತದಾ ಲೋಕೇ' ಎಂಬುದನ್ನು 'ತದಾ ಆಲೋಕೇ' ಎಂದು ಬಲಾತ್ಕಾರವಾಗಿ ಯೋಜನ ಮಾಡಿ 'ಆಲೋಕ' ಬೆಳಕು ಎಂಬುದನ್ನು ವೈಷ್ಣವ ತೇಜಸ್ಸೆಂದಿಟ್ಟು-ಕೊಂಡು, ಪರಶುರಾಮನ ವೈಷ್ಣವ ತೇಜಸ್ಸು ಶ್ರೀರಾಮನಲ್ಲಿ ಬಂದು ಸೇರಿದ್ದರಿಂದ ಪರಶುರಾಮ ನಿಸ್ತೇಜ ನಿರ್ವೀರ್ಯನಾದನೆಂದು ಪಾದ್ಮಪುರಾಣದ ಆಧಾರವನ್ನು ತೋರಿಸಿದ್ದಾರೆ. ತಾ.ನಿರ್ಣಯದಲ್ಲಿ (೪.೬೧) ರಾಮನಿಗಿಂತ ಭಿನ್ನನಂತಿದ್ದ ಪರಶುರಾಮ ಎಲ್ಲರೆದುರಿಗೆ ಐಕ್ಯ ಹೊಂದಿದ, ತಿರುಗಿಬೇರೆಯಾಗಿ ಹೋದ ಎಂದು ಪುರಾಣದ ನಿಜವಾದ ಅಭಿಪ್ರಾಯವನ್ನು ತೋರಿಸಿದ್ದಾರೆ.

ಸಪ್ತಸಪ್ತತಿತಮಃ ಸರ್ಗಃ

ಗತೇ ರಾಮೇ ಪ್ರಶಾಂತಾತ್ಮಾ ರಾಮೋ ದಾಶರಥಿರ್ಧನುಃ ।
ವರುಣಾಯಾಪ್ರಮೇಯಾಯ ದದೌ ಹಸ್ತೇ ಸಸಾಯಕಮ್ ॥ ೧ ॥

ಪರಶುರಾಮನು ಹೊರಟು ಹೋದಾಗ ಪ್ರಶಾಂತಾತ್ಮನಾದ ದಾಶರಥಿ ರಾಮನು ಅಪ್ರಮೇಯನಾದ ವರುಣನ ಕೈಯಲ್ಲಿ ವೈಷ್ಣವ ಧನುರ್ಬಾಣಗಳನ್ನು ನೀಡಿದನು.

ಈ ಧನುಸ್ಸನ್ನೇ ಮುಂದೆ ಇಂದ್ರನು ಅಗಸ್ತ್ಯನ ಮೂಲಕ ರಾಮನಿಗೆ ತಲುಪಿಸುತ್ತಾನೆ. (ಅರಣ್ಯಕಾಂಡ ೨.೩೭)

ಅಭಿವಾದ್ಯ ತತೋ ರಾಮೋ ವಸಿಷ್ಠಪ್ರಮುಖಾನೃಷೀನ್ ।
ಪಿತರಂ ವಿಹ್ವಲಂ ದೃಷ್ಟ್ವಾ ಪ್ರೋವಾಚ ರಘುನಂದನಃ ॥ ೨ ॥

ಶ್ರೀರಾಮನು ಬಳಿಕ ವಸಿಷ್ಠ ಮುಂತಾದ ಋಷಿಗಳಿಗೆ ಅಭಿವಾದನ ಮಾಡಿ ತಂದೆ ದಶರಥನಿನ್ನೂ ವಿಹ್ವಲನಾಗಿರುವುದನ್ನು ಕಂಡು ಹೇಳಿದನು.

ಜಾಮದಗ್ನ್ಯೇ ಗತೋ ರಾಮಃ ಪ್ರಯಾತು ಚತುರಂಗಿಣೀ ।
ಅಯೋಧ್ಯಾಭಿಮುಖೀ ಸೇನಾ ತ್ವಯಾ ನಾಥೇನ ಪಾಲಿತಾ ॥ ೩ ॥

ಪರಶುರಾಮ ಹೊರಟುಹೋಗಿದ್ದಾನೆ. ಚತುರಂಗ ಸೈನ್ಯವು ನಿನ್ನ ರಕ್ಷಣೆಯಲ್ಲಿ ಅಯೋಧ್ಯೆಯ ಕಡೆಗೆ ಪ್ರಯಾಣ ಮಾಡಲಿ.

ಸಂದಿಶಸ್ವ ಮಹಾರಾಜ ಸೇನಾಂ ತ್ವಚ್ಛಾಸನೇ ಸ್ಥಿತಾಮ್ ।
ಶಾಸನಂ ಕಾಂಕ್ಷತೇ ಸೇನಾ ಚಾತಕಾಲಿರ್ಜಲಂ ಯಥಾ ॥ ೪ ॥

ಮಹಾರಾಜ ನಿನ್ನಾಜ್ಞೆಗೆ ವಿಧೇಯವಾಗಿರುವ ಸೈನ್ಯವನ್ನು ಅಯೋಧ್ಯೆಗೆ ಕಳಿಸು. ಚಾತಕ ಪಕ್ಷಿಗಳು ಮಳೆ ನೀರನ್ನು ಇದಿರುನೋಡುವಂತೆ ಸೈನ್ಯವು ನಿನ್ನಾಜ್ಞೆಗೇ ಕಾಯುತ್ತಿದೆ.

ರಾಮಸ್ಯ ವಚನಂ ಶ್ರುತ್ವಾ ರಾಜಾ ದಶರಥಃ ಸುತಮ್ ।
ಬಾಹುಭ್ಯಾಂ ಸಂಪರಿಷ್ವಜ್ಯ ಮೂರ್ಧ್ನಿ ಚಾಘ್ರಾಯ ರಾಘವಮ್ ॥೫॥

ಗತೋ ರಾಮ ಇತಿ ಶ್ರುತ್ವಾ ಹೃಷ್ಟಃ ಪ್ರಮುದಿತೋ ನೃಪಃ ।

ಪುನರ್ಜಾತಂ ತದಾ ಮೇನೇ ಪುತ್ರಮಾತ್ಮಾನಮೇವ ಚ ॥
ಚೋದಯಾಮಾಸ ತಾಂ ಸೇನಾಂ ಜಗಾಮಾಶು ತತಃ ಪುರೀಮ್ ॥ ೬ ॥

ರಾಮನ ಮಾತನ್ನು ಕೇಳಿ ರಾಜಾ ದಶರಥನು ಮಗನನ್ನು ಎರಡು ತೋಳು-ಗಳಿಂದ ಆಲಿಂಗಿಸಿ ನೆತ್ತಿಯಲ್ಲಿ ಆಘ್ರಾಣನ ಗೈದನು. ಪರಶುರಾಮ ಹೊರಟು ಹೋದನೆಂಬುದನ್ನು ಕೇಳಿಯೆ ಹೃಷ್ಟನಾದ ಆನಂದಿತನಾದ ರಾಜನು ಪುತ್ರ ರಾಮನೂ ತಾನೂ ಪುನರ್ಜನ್ಮ ಪಡೆದಂತಾಯಿತೆಂದು ಬಗೆದನು. ಸೇನೆಗೆ ಅಯೋಧ್ಯೆಗೆ ಹೋಗಲು ಆದೇಶವನ್ನೂ ನೀಡಿದನು.

ಪತಾಕಾಧ್ವಜಿನೀಂ ರಮ್ಯಾಂ ತೂರ್ಯೋದ್ಘುಷ್ಟನಿನಾದಿತಾಮ್ ।
ಸಿಕ್ತರಾಜಪಥಾಂ ರಮ್ಯಾಂ ಪ್ರಕೀರ್ಣಕುಸುಮೋತ್ಕರಾಮ್ ॥ ೭ ॥

ಪತಾಕೆ ಧ್ವಜಗಳಿಂದ ಯುಕ್ತವಾಗಿ ರಮ್ಯವಾದ ವಾದ್ಯಘೋಷ ನಿನಾದದಿಂದ ತುಂಬಿದ ರಾಜಮಾರ್ಗವೆಲ್ಲ ನೀರು ಸಿಂಪಡಿಸಿ ಹೂರಾಶಿಗಳನ್ನು ಚೆಲ್ಲಿ ರಮ್ಯವಾಗಿ ಕಾಣುವ ಅಯೋಧ್ಯೆಯನ್ನು ಹೋಗಿ ಸೇರಿದನು.

ರಾಜಪ್ರವೇಶಸುಮುಖೈಃ ಪೌರೈರ್ಮಂಗಲವಾದಿಭಿಃ ।
ಸಂಪೂರ್ಣಾಂ ಪ್ರಾವಿಶದ್ರಾಜಾ ಜನೌಘೈಃ ಸಮಲಂಕೃತಾಮ್ ॥ ೮ ॥

ರಾಜನು ಪುರಪ್ರವೇಶ ಮಾಡುವನೆಂದು ಸಂತೋಷದಿಂದ ಮುಖವರಳಿಸಿ-ಕೊಂಡು ಮಂಗಲ ಗೀತಗಳನ್ನು ಹಾಡುವ ಪೌರಜನ ಸಮೂಹಗಳಿಂದ ಪೂರ್ತಿ ತುಂಬಿದ ಅಯೋಧ್ಯೆಯನ್ನು ರಾಜನು ಪ್ರವೇಶಿಸಿದನು.

ಪೌರೈಃ ಪ್ರತ್ಯುದ್ಗತೋ ದೂರಂ ದ್ವಿಜೈಶ್ಚ ಪುರವಾಸಿಭಿಃ ।
ಪುತ್ರೈರನುಗತಃ ಶ್ರೀಮಾನ್ ಶ್ರೀಮದ್ಭಿಶ್ಚ ಮಹಾಯಶಾಃ ॥ ೯ ॥

ಪ್ರವಿವೇಶ ಗೃಹಂ ರಾಜಾ ಹಿಮವತ್ಸದೃಶಂ ಪುನಃ ।
ನನಂದ ಸ್ವಜನೈ ರಾಜಾ ಗೃಹೇ ಕಾಮೈಃ ಸುಪೂಜಿತಃ ॥ ೧೦ ॥

ರಾಜನನ್ನು ಪೌರರೂ ಬ್ರಾಹ್ಮಣರೂ ಇದಿರು ಗೊಂಡರು. ಮಹಾಯಶನಾದ ಶ್ರೀಮಾನ್ ರಾಜನು ಶ್ರೀಮಾನ್ ಪುತ್ರರಿಂದೊಡಗೂಡಿ ಹಿಮಾಲಯ ಸದೃಶವಾದ ತನ್ನ ಅರಮನೆಯನ್ನು ಪುನಃ ಪ್ರವೇಶಿಸಿದನು. ಅರಮನೆಯಲ್ಲಿ ಅಭೀಷ್ಟವಾದ ವಸ್ತುಗಳಿಂದ ಸತ್ಕೃತನಾಗಿ ಬಂಧುಜನರೊಂದಿಗೆ ಆನಂದಿಸಿದ.

ಕೌಸಲ್ಯಾ ಚ ಸುಮಿತ್ರಾ ಚ ಕೈಕೇಯೀ ಚ ಸುಮಧ್ಯಮಾ ।
ವಧೂಪ್ರತಿಗ್ರಹೇ ಯುಕ್ತಾ ಯಾಶ್ಚಾನ್ಯಾ ರಾಜಯೋಷಿತಃ ॥ ೧೧ ॥

ಕೌಸಲ್ಯೆ ಸುಮಿತ್ರೆ ಕೈಕೇಯಿಯರೂ ಬೇರೆ ರಾಣಿ ವಾಸದವರೂ ಸೊಸೆಯಂದಿರನ್ನು ಮನೆ ತುಂಬಿಸಿಕೊಳ್ಳುವುದರಲ್ಲಿ ನಿರತರಾದರು.

ತತಃ ಸೀತಾಂ ಮಹಾಭಾಗಾಮೂರ್ಮಿಲಾಂ ಚ ಯಶಸ್ವಿನೀಮ್ ।
ಕುಶಧ್ವಜಸುತೇ ಚೋಭೇ ಜಗೃಹುರ್ನೃಪಪತ್ನಯಃ ॥ ೧೨ ॥

ರಾಜ ಪತ್ನಿಯರು ಮಹಾಭಾಗ್ಯವತಿ ಸೀತೆಯನ್ನೂ ಯಶಸ್ವಿನಿಯಾದ ಊರ್ಮಿಳೆಯನ್ನೂ ಕುಶಧ್ವಜ ಪುತ್ರಿಯರಾದ ಮಾಂಡವಿ ಶ್ರುತಕೀರ್ತಿಯರನ್ನೂ ಮನೆ ತುಂಬಿಸಿಕೊಂಡರು.

ಮಂಗಲಾಲಾಪನೈರ್ಹೋಮೈಃ ಶೋಭಿತಾಃ ಕ್ಷೌಮವಾಸಸಃ ।
ದೇವತಾಯತನಾನ್ಯಾಶು ಸರ್ವಾಸ್ತಾಃ ಪ್ರತ್ಯಪೂಜಯನ್ ॥ ೧೩ ॥

ಮಂಗಲಾಶೀರ್ವಾದಗಳಿಂದಲೂ ಗೃಹಪ್ರವೇಶನೀಯ ಹೋಮಗಳಿಂದಲೂ ಶೋಭಿತರಾದ ಸೊಸೆಯಂದಿರಿಂದ ಮನೆ ದೇವರಿಗೂ ಊರ ದೇವರಿಗೂ ನಮಸ್ಕಾರ ಮಾಡಿಸಿದರು.

ಅಭಿವಾದ್ಯಾಭಿವಾದ್ಯಾಂಶ್ಚ ಸರ್ವಾ ರಾಜಸುತಾಸ್ತದಾ ।
ಸ್ವಂ ಸ್ವಂ ಗೃಹಮಥಾಸಾದ್ಯ ಕುಬೇರಭವನೋಪಮಮ್ ॥ ೧೪ ॥

ಗೋಭಿರ್ಧನೈಶ್ಚ ಧಾನ್ಯೈಶ್ಚ ತರ್ಪಯಿತ್ವಾ ದ್ವಿಜೋತ್ತಮಾನ್ ।
ರೇಮಿರೇ ಮುದಿತಾಃ ಸರ್ವಾ ಭರ್ತೃಭಿಃ ಸಹಿತಾ ರಹಃ ॥ ೧೫ ॥

ಎಲ್ಲ ರಾಜಕುಮಾರಿಯರೂ ನಮಸ್ಕಾರಯೋಗ್ಯರಿಗೆ ನಮಸ್ಕಾರ ಮಾಡಿ ಕುಬೇರಭವನ ಸಮಾನವಾದ ತಮ್ಮ ತಮ್ಮ ಅಂತಃಪುರಗಳನ್ನು ಪ್ರವೇಶಿಸಿ ಬ್ರಾಹ್ಮಣೋತ್ತಮರಿಗೆ ಗೋಧನಧಾನ್ಯಗಳನ್ನಿತ್ತು ತೃಪ್ತಿಪಡಿಸಿ ಆನಂದಿತರಾಗಿ ಪತಿಗಳೊಂದಿಗೆ ಏಕಾಂತದಲ್ಲಿ ಸುಖಿಸಿದರು.

ಕುಮಾರಾಶ್ಚ ಮಹಾತ್ಮಾನೋ ವೀರ್ಯೇಣಾಪ್ರತಿಮಾ ಭುವಿ ।
ಕೃತದಾರಾಃ ಕೃತಾಸ್ತ್ರಾಶ್ಚ ಸಧನಾಃ ಸಸುಹೃಜ್ಜನಾಃ ॥ ೧೬ ॥

ಶುಶ್ರೂಷಮಾಣಾಃ ಪಿತರಂ ವರ್ತಯಂತಿ ನರರ್ಷಭಾಃ ।
ಕಾಲೇ ಕಾಲೇ ತು ನೀತಿಜ್ಞಾಸ್ತೋಷಯಂತೋ ಗುರುಂ ಗುಣೈಃ ॥ ೧೭॥

ಮಹಾತ್ಮರಾದ ವೀರ್ಯದಲ್ಲಿ ಭೂಮಿಯಲ್ಲಿ ಅಪ್ರತಿಮರಾದ ಕುಮಾರರು ಪತ್ನೀಯುಕ್ತರಾಗಿ ಅಸ್ತ್ರಜ್ಞರಾಗಿ ಧನ ಸಂಪನ್ನರಾಗಿ ಬಂಧುಜನ ಸಮೇತರಾಗಿ ತಂದೆಯ ಸೇವೆ ಮಾಡುತ್ತ ಅವನಾಜ್ಞೆಯಂತೆ ನಡೆದರು.

ಕಸ್ಯಚಿತ್ತ್ವಥ ಕಾಲಸ್ಯ ರಾಜಾ ದಶರಥಃ ಸುತಮ್ ।
ಭರತಂ ಕೈಕಯೀಪುತ್ರಮಬ್ರವೀದ್ರಘುನಂದನಃ ॥ ೧೮ ॥

ಕೆಲ ಕಾಲಾನಂತರ ದಶರಥನು ಕೈಕಯೀಪುತ್ರನಾದ ಭರತನಿಗೆ ಹೇಳಿದನು.

ಅಯಂ ಕೇಕಯರಾಜಸ್ಯ ಪುತ್ರೋ ವಸತಿ ಪುತ್ರಕ ।
ತ್ವಾಂ ನೇತುಮಾಗತೋ ವೀರ ಯುಧಾಜಿನ್ಮಾತುಲಸ್ತವ ॥ ೧೯ ॥

ಕೇಕಯ ರಾಜಪುತ್ರ ನಿನ್ನ ಸೋದರಮಾವ ಯುಧಾಜಿತನು ನಿನ್ನನ್ನು ಕರೆದೊಯ್ಯಲು ಬಂದು ಈಗ ಇಲ್ಲಿ ವಾಸ ಮಾಡುತ್ತಿದ್ದಾನೆ.

ಪ್ರಾರ್ಥಿತಸ್ತೇನ ಧರ್ಮಜ್ಞ ಮಿಥಿಲಾಯಾಮಹಂ ತಥಾ ।
ಋಷಿಮಧ್ಯೇ ತು ತಸ್ಯ ತ್ವಂ ಪ್ರೀತಿಂ ಕರ್ತುಮಿಹಾರ್ಹಸಿ ॥ ೨೦ ॥

ಧರ್ಮಜ್ಞ ಭರತನೇ! ಮಿಥಿಲೆಯಲ್ಲಿಯೇ ಋಷಿಗಳ ಮಧ್ಯದಲ್ಲಿ ಅವನು ನನ್ನನ್ನು ಪ್ರಾರ್ಥಿಸಿದ್ದನು. ನೀನು ಅವನ ಅಪೇಕ್ಷೆಯನ್ನು ಪೂರೈಸು.

ಶ್ರುತ್ವಾ ದಶರಥಸ್ಯೈತದ್ಭರತಃ ಕೈಕಯೀಸುತಃ ।
ಅಭಿವಾದ್ಯ ಗುರುಂ ರಾಮಂ ಪರಿಷ್ವಜ್ಯ ಚ ಲಕ್ಷ್ಮಣಮ್ ।
ಗಮನಾಯಾಭಿಚಕ್ರಾಮ ಶತ್ರುಘ್ನಸಹಿತಸ್ತದಾ ॥ ೨೧ ॥

ಕೈಕಯೀ ಸುತನಾದ ಭರತನು ದಶರಥನಾಜ್ಞೆಯನ್ನು ಕೇಳಿ ಹಿರಿಯನಾದ ರಾಮನಿಗೆ ಅಭಿವಾದನ ಮಾಡಿ ಲಕ್ಷ್ಮಣನನ್ನು ಆಲಿಂಗಿಸಿ ಶತ್ರುಘ್ನನೊಂದಿಗೆ ಪ್ರಯಾಣಕ್ಕೆ ಹೊರಟನು.

ಆಪೃಚ್ಛ್ಯ ಪಿತರಂ ಶೂರೋ ರಾಮಂ ಚಾಕ್ಲಿಷ್ಟಕಾರಿಣಮ್ ।
ಮಾತೃಶ್ಚಾಪಿ ನರಶ್ರೇಷ್ಠಃ ಶತ್ರುಘ್ನಸಹಿತೋ ಯಯೌ ॥ ೨೨ ॥

ಶೂರನರೋತ್ತಮ ಭರತನು ತಂದೆಗೆ ಮತ್ತು ರಾಮನಿಗೆ ಮಾತೆಯರಿಗೆ ಹೋಗಿ ಬರುವೆನೆಂದು ಹೇಳಿ ಅನುಮತಿ ಪಡೆದು ಶತ್ರುಘ್ನಸಹಿತನಾಗಿ ಹೊರಟನು.

ಯುಧಾಜಿತ್ಪ್ರಾಪ್ಯ ಭರತಂ ಸಶತ್ರುಘ್ನಂ ಪ್ರಹರ್ಷಿತಃ ।
ಸ್ವಪುರಂ ಪ್ರಾವಿಶದ್ವೀರಃ ಪಿತಾ ತಸ್ಯ ತುತೋಷ ಹ ॥ ೨೩ ॥

ವೀರ ಯುಧಾಜಿತನು ಭರತನನ್ನೂ ಶತ್ರುಘ್ನನನ್ನೂ ಕರೆದುಕೊಂಡು ತನ್ನ ಪಟ್ಟಣವನ್ನು ಪ್ರವೇಶಿಸಿದನು. ಅವನ ತಂದೆ ಸಂತೋಷ ಪಟ್ಟನು.

ಗತೇ ಚ ಭರತೇ ರಾಮೋ ಲಕ್ಷ್ಮಣಶ್ಚ ಮಹಾಬಲಃ ।
ಪಿತರಂ ದೇವಸಂಕಾಶಂ ಪೂಜಯಾಮಾಸತುಸ್ತದಾ ॥ ೨೪ ॥

ಭರತನು ಹೋದಬಳಿಕ ಮಹಾಬಲ ರಾಮನೂ ಲಕ್ಷ್ಮಣನೂ ಪಿತನನ್ನು ದೇವನಂತೆ ಆರಾಧಿಸಿದರು.

ಪಿತುರಾಜ್ಞಾಂ ಪುರಸ್ಕೃತ್ಯ ಪೌರಕಾರ್ಯಾಣಿ ಸರ್ವಶಃ ।
ಚಕಾರ ರಾಮೋ ಧರ್ಮಾತ್ಮಾ ಪ್ರಿಯಾಣಿ ಚ ಹಿತಾನಿ ಚ ॥ ೨೫ ॥

ಪಿತನಾಜ್ಞೆಯನ್ನು ಪುರಸ್ಕರಿಸಿ ಪೌರಕಾರ್ಯಗಳೆಲ್ಲವನ್ನೂ ಪ್ರಿಯವಾದ ಹಿತಕರವಾದ ಬೇರೆ ಕಾರ್ಯಗಳೆಲ್ಲವನ್ನೂ ಧರ್ಮಾತ್ಮ ರಾಮನು ಮಾಡಿದ.

ಮಾತೃಭ್ಯೋ ಮಾತೃಕಾರ್ಯಾಣಿ ಕೃತ್ವಾ ಪರಮಯಂತ್ರಿತಃ ।
ಗುರೂಣಾಂ ಗುರುಕಾರ್ಯಾಣಿ ಕಾಲೇ ಕಾಲೇಽನ್ವವೈಕ್ಷತ ॥ ೨೬ ॥

ತಾಯಂದಿರಿಗೂ ತಾಯಂದಿರ ಕಾರ್ಯಗಳನ್ನು, ಗುರುಗಳಿಗೂ ಗುರುಗಳ ಕಾರ್ಯಗಳನ್ನೂ, ಕಾಲಕಾಲಕ್ಕೆ ವಿನಯಪೂರ್ವಕವಾಗಿ ಮಾಡಿಕೊಟ್ಟು ಸೇವಿಸಿದ ಶ್ರೀರಾಮ.

ಏವಂ ದಶರಥಃ ಪ್ರೀತೋ ಬ್ರಾಹ್ಮಣಾ ನೈಗಮಾಸ್ತದಾ ।
ರಾಮಸ್ಯ ಶೀಲವೃತ್ತೇನ ಸರ್ವೇ ವಿಷಯವಾಸಿನಃ ॥ ೨೭ ॥

ಹೀಗೆ ದಶರಥನೂ ಸಂತುಷ್ಟನಾದ, ಬ್ರಾಹ್ಮಣರೂ ವರ್ತಕರೂ ಎಲ್ಲ ದೇಶ-ವಾಸಿಗಳೂ ರಾಮನ ಶೀಲ ನಡತೆಗಳನ್ನು ಮೆಚ್ಚಿಕೊಂಡರು.

ತೇಷಾಮತಿಯಶಾ ಲೋಕೇ ರಾಮಃ ಸತ್ಯಪರಾಕ್ರಮಃ ।
ಸ್ವಯಂಭೂರಿವ ಭೂತಾನಾಂ ಬಭೂವ ಗುಣವತ್ತರಃ ॥ ೨೮ ॥

ಬ್ರಾಹ್ಮಣರು ವರ್ತಕರು ಮುಂತಾದವರೆಲ್ಲರ ನಡುವೆ, ಲೋಕದಲ್ಲಿ ಅತ್ಯಂತ ಯಶಸ್ವಿಯಾಗಿ ಸತ್ಯಪರಾಕ್ರಮನಾಗಿ ಎಲ್ಲ ಗುಣಗಳಲ್ಲಿ ಶ್ರೇಷ್ಠನಾಗಿ ಜೀವರ ನಡುವೆ ಜೀವೋತ್ತಮ ಬ್ರಹ್ಮನಂತೆ ರಾಮನೇ ಗೌರವಾದರಗಳಿಗೆ ಪಾತ್ರನಾದ.

ರಾಮಸ್ತು ಸೀತಯಾ ಸಾರ್ಧಂ ವಿಜಹಾರ ಬಹೂನೃತೂನ್ ।
ಮನಸ್ವೀ ತದ್ಗತ ಮನಾಸ್ತಸ್ಯಾ ಹೃದಿ ಸಮರ್ಪಿತಃ ॥ ೨೯ ॥

ರಾಮನು ಸೀತೆಯೊಂದಿಗೆ ಹನ್ನೆರಡು ವರ್ಷಕಾಲ ವಿಹಾರ ಮಾಡಿದ. ಅವನಿಗೆ ಇವಳಲ್ಲಿ ಇವಳಿಗೆ ಅವನಲ್ಲಿ ಮನಸ್ಸು ಸದಾ ಅನುರಕ್ತವಾಗಿತ್ತು.

ಪ್ರಿಯಾ ತು ಸೀತಾ ರಾಮಸ್ಯ ದಾರಾಃ ಪಿತೃಕೃತಾ ಇತಿ ।
ಗುಣಾದ್ರೂಪಗುಣಾಚ್ಚಾಪಿ ಪ್ರೀತಿರ್ಭೂಯೋಽಭ್ಯವರ್ಧತ ॥
ಹೃದಯಂ ಚೈವ ಜಾನಾತಿ ಪ್ರೀತಿಯೋಗಿ ಪರಸ್ಪರಮ್ ॥ ೩೦ ॥

ರಾಮನಿಗೆ ಸೀತೆಯಲ್ಲಿ, ಅವಳು ಪಿತನು ವಿವಾಹ ಮಾಡಿಕೊಟ್ಟ ಪತ್ನಿ ಎಂದು ಪ್ರೀತಿ. ಗುಣದಿಂದಲೂ ರೂಪ ಗುಣದಿಂದಲೂ ಪ್ರೀತಿ ಹೆಚ್ಚಿತ್ತು. ಪರಸ್ಪರ ಪ್ರೀತಿಯುಕ್ತವಾದ ಅವರ ಹೃದಯವು ಪರಸ್ಪರ ತಿಳಿದುಕೊಳ್ಳುತ್ತಿತ್ತು.

ತಸ್ಯಾಶ್ಚ ಭರ್ತಾ ದ್ವಿಗುಣಂ ಹೃದಯೇ ಪರಿವರ್ತತೇ ।
ಅಂತರ್ಜಾತಮಪಿ ವ್ಯಕ್ತಮಾಖ್ಯಾತಿ ಹೃದಯಂ ಹೃದಾ ॥ ೩೧ ॥

ಸೀತೆಯ ಹೃದಯದಲ್ಲಿ ರಾಮನು ಎರಡು ಪಟ್ಟು ಹೆಚ್ಚಾಗಿ ಮೆರೆಯುತ್ತಾನೆ. ಅಂತರಂಗದ ಭಾವನೆಗಳನ್ನು ವ್ಯಕ್ತವಾಗಿ ಹೃದಯವೆ ವ್ಯಕ್ತವಾಗಿ ತಿಳಿಯುತ್ತದೆ.

ತಸ್ಯ ಭೂಯೋ ವಿಶೇಷೇಣ ಮೈಥಿಲೀ ಜನಕಾತ್ಮಜಾ ।
ದೇವತಾಭಿಃ ಸಮಾ ರೂಪೇ ಸೀತಾ ಶ್ರೀರಿವ ರೂಪಿಣೀ ॥ ೩೨ ॥

ರಾಮನಿಗೆ ಹಾಗೇ ಸೀತೆಯೂ ಇನ್ನೂ ಹೆಚ್ಚು ಪ್ರಿಯೆಯಾದಳು. ರೂಪದಲ್ಲಿ ದೇವತೆಗಳಿಗೆ ಸಮಾನಳು ಸೀತೆ. ಸಾಕ್ಷಾತ್ ಲಕ್ಷ್ಮಿಯಂತೆ ರೂಪ ಉಳ್ಳವಳು.

ತಯಾ ಸ ರಾಜರ್ಷಿಸುತೋಽಭಿರಾಮಯಾ
ಸಮೇಯಿವಾನುತ್ತಮರಾಜಕನ್ಯಯಾ ।
ಅತೀವ ರಾಮಃ ಶುಶುಭೇಽತಿಕಾಮಯಾ
ವಿಭುಃ ಶ್ರಿಯಾ ವಿಷ್ಣುರಿವಾಮರೇಶ್ವರಃ ॥ ೩೩ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ
ಆದಿಕಾವ್ಯೇ ಚತುರ್ವಿಂಶತ್ಸಹಸ್ರಿಕಾಯಾಂ
ಸಂಹಿತಾಯಾಂ ಶ್ರೀಬಾಲಕಾಂಡೇ ಸಪ್ತಸಪ್ತತಿತಮಃ ಸರ್ಗಃ ॥ ೭೭ ॥

ರಾಜರ್ಷಿ ದಶರಥಸುತನಾದ ವಿಭು ಶ್ರೀರಾಮನು ಬಹಳ ಪ್ರಿಯೆಯಾದ ಉತ್ತಮ ರಾಜಕುಮಾರಿಯಾದ ಸೀತೆಯೊಂದಿಗೆ ಕೂಡಿ, ಲಕ್ಷ್ಮಿಯೊಂದಿಗೆ ಕೂಡಿದ ದೇವೇಶನಾದ ವಿಷ್ಣುವಿನಂತೆ ಅತ್ಯಂತ ಶೋಭಾಯಮಾನವಾಗಿ ಮೆರೆದನು.

ಇಲ್ಲಿಗೆ ವಾಲ್ಮೀಕಿಮುನಿಪ್ರಣೀತವಾದ ಆದಿಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ
ರಾಮಾಯಣ ಕಥಾಸಂಕ್ಷೇಪ ಎಂಬ ಎಪ್ಪತ್ತೇಳನೆ ಸರ್ಗ ಮುಗಿಯಿತು.

॥ ಇತಿ ಶ್ರೀಮದ್ರಾಮಾಯಣೇ ಬಾಲಕಾಂಡಂ ಸಂಪೂರ್ಣಮ್ ॥ ೧ ॥

ರಾಮಾಯಣದ ಏಳು ಕಾಂಡಗಳಲ್ಲಿ ಬಾಲಕಾಂಡ ಮೊದಲನೇ ಕಾಂಡ. ಇದು ರಾಮಾಯಣದ ಮೊದಲ ಮೆಟ್ಟಿಲು. ಸಾಧಕನಿಗೆ ಮೊದಲ ಸಂದೇಶ. ಮೊದಲು ಮನಸ್ಸು ಬಾಲಕರಂತಿರಲಿ. ಬಾಲಕರ ಮನಸ್ಸು ನಿರ್ವಿಕಾರ. ಸ್ವಚ್ಛ. ರಾಗದ್ವೇಷಗಳಿಲ್ಲ. ಬಾಲಕರು ಅಹಂ ಇಲ್ಲದವರು. ಜ್ಞಾನ-ಮಾನ ಏನಿದ್ದರೂ, ಅಧಿಕಾರ-ಸಂಪತ್ತಿನಿಂದ ಧನಿಗಳಾದರೂ ಮನಸ್ಸು ಬಾಲಕನಂತಿರಲಿ. ಒಳ-ಹೊರ ಒಂದಾಗಿರಲಿ. ರಾಮನ ಜೀವನದಲ್ಲಿ ಬಾಲಕನ ಆದರ್ಶಗಳಿವೆ.

ಯಜ್ಞದ ರಕ್ಷಣೆಗೆ ರಾಮ ತೆರಳಿದ. ಒಡೆದ ಮನ ಕೂಡಿಸಿದ. ಅಹಲ್ಯೆ-ಗೌತಮರನ್ನು ಮತ್ತೆ ಒಂದು ಮಾಡಿದ. ಅದರ ಫಲವೆಂಬಂತೆ ಸೀತೆಯನ್ನು ಮದುವೆಯಾದ.

ವಿಷ್ಣು ರಾಮ. ಸೀತೆ ಮಹಾಲಕ್ಷ್ಮೀ. ವೇದವು ರಾಮಾಯಣ. ಪ್ರಾಣದೇವ ಹನುಮ. ಶೇಷ ಲಕ್ಷ್ಮಣ. ಇಂದ್ರ ವಾಲಿ. ಸೂರ್ಯ ಸುಗ್ರೀವ. ದೇವ-ದೇವತೆಗಳೆಲ್ಲ ಭುವಿಯಲ್ಲಿ ಬಾಲಕರಾದ ಬಗೆ ಬಾಲಕಾಂಡ. ಅವತಾರ, ಬಾಲ್ಯ, ಮದುವೆಯ ವಾರ್ತೆ. ಇಲ್ಲಿಯ ಹೂರಣ. ಪಿತೃಸ್ನೇಹ, ಭ್ರಾತೃಸ್ನೇಹ, ಋಷಿಭಕ್ತಿಯ, ಯಜ್ಞಪ್ರೀತಿಯ ಬಾಲಕಾಂಡವಿದು.